॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ವನಪರ್ವ

ಭಾಗ-೭

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ತೇಷಗಿರಿ ಆಚಾರ್ಯ,

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಅಕ್ಕಿಮುಹೂರ್ತದ ಶುಭಸಂದರ್ಭದಲ್ಲಿ(20.01.2017) ದಂದು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ವನಪರ್ವ
ಭಾಗ-೭

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-53-8

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	VIII + 644 = 652
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಶ್ರೀ ಎಂ. ಶರತ್ ಚಂದ್ರ ಮತ್ತು ಶ್ರೀಮತಿ ನಾಗಲತಾ
ಮುದ್ರಕರು	-	ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್, ಮೈಸೂರು. ✆ : 7899779255
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೭

ವನಪರ್ವ (ಭಾಗ-೨)

ಅಧ್ಯಾಯ ಸಂಖ್ಯೆ		ಪುಟ ಸಂ.
75.	ಅರ್ಜುನವಿರಹಿತ ಕಾಮ್ಯಕವನದಲ್ಲಿ ವಾಸಮಾಡಲು ಭೀಮಾದಿಗಳಿಂದ ತಮ್ಮ ಆಸಂತೋಷ ಕಥನ	1
76.	ಕಾಮ್ಯಕವನಕ್ಕೆ ನಾರದರ ಆಗಮನ	7
77.	ಭೀಷ್ಮರನ್ನು ಕುರಿತು ಪುಲಸ್ತ್ಯರಿಂದ ಪುಷ್ಕರಾದಿ ತೀರ್ಥಮಾಹಾತ್ಮ್ಯವರ್ಣನೆ	12
78.	ಪುಲಸ್ತ್ಯರಿಂದ ಭೀಷ್ಮರನ್ನು ಕುರಿತು ಕುರುಕ್ಷೇತ್ರಾದಿ ನಾನಾತೀರ್ಥಗಳ ವರ್ಣನೆ	37
79.	ಪುಲಸ್ತ್ಯರಿಂದ ಭೀಷ್ಮರನ್ನು ಕುರಿತು ನಾನಾ ತೀರ್ಥಮಹಿಮೆಯ ವರ್ಣನೆ	76
80.	ಭೀಷ್ಮರಿಗೆ ಪುಲಸ್ತ್ಯರು ಹೇಳಿದ ತೀರ್ಥಕ್ಷೇತ್ರಮಹಿಮಾ ವರ್ಣನೆಯನ್ನು ಯುಧಿಷ್ಠಿರನಿಗೆ ಹೇಳಿ ನಾರದರ ಪ್ರಯಾಣ	107
81.	ಅರ್ಜುನನಿಲ್ಲದೆ ಕಾಮ್ಯಕವನದಲ್ಲಿ ಇರಲು ತಮ್ಮ ಬೇಸರವನ್ನು ಸೂಚಿಸಿ ಬೇರೆವಾಸಸ್ಥಾನವನ್ನು ಸೂಚಿಸುವಂತೆ ಧೌಮ್ಯರಿಗೆ ಯುಧಿಷ್ಠಿರನ ಪ್ರಾರ್ಥನೆ	131
82.	ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ಪೂರ್ವದಿಕ್ಕಿನ ತೀರ್ಥಗಳ ವರ್ಣನೆ	135
83.	ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ದಕ್ಷಿಣದಿಕ್ಕಿನ ನಾನಾ ತೀರ್ಥಗಳ ವರ್ಣನೆ	141
84.	ಯುಧಿಷ್ಠಿರನನ್ನು ಕುರಿತು ಪಶ್ಚಿಮದಿಕ್ಕಿನ ಕ್ಷೇತ್ರಗಳ ವರ್ಣನೆ	146
85.	ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ಉತ್ತರದಿಕ್ಕಿನ ತೀರ್ಥಕ್ಷೇತ್ರಗಳ ವರ್ಣನೆ	149
86.	ಇಂದ್ರನ ವಚನದಂತೆ ಲೋಮಶರಿಂದ ಯುಧಿಷ್ಠಿರನಿಗೆ ಅರ್ಜುನನ ವೃತ್ತಾಂತ ಕಥನ	155
87.	ಲೋಮಶರ ವಚನದಂತೆ ಪರಿವಾರವನ್ನು ಅಲ್ಲೀಕರಿಸಿ ಯುಧಿಷ್ಠಿರನ ತೀರ್ಥಯಾತ್ರಾಗಮನ ಪ್ರಯತ್ನ	160
88.	ಯುಧಿಷ್ಠಿರನಿಂದ ಲೋಮಶಾದಿ ಋಷಿಗಳ ಜೊತೆಯಲ್ಲಿ ತೀರ್ಥಯಾತ್ರೆಯ ಉಪಕ್ರಮ	166

89. ಲೋಮಶರಿಂದ ಯುಧಿಷ್ಠಿರನನ್ನು ಕುರಿತು ಧರ್ಮಾಧರ್ಮಗಳ
ವಿರುದ್ಧ ಫಲಗಳ ನಿರೂಪಣೆ 172

90. ಬ್ರಹ್ಮಸರತೀರದಲ್ಲಿ ಶಮಠ ಋಷಿಗಳಿಂದ ಯುಧಿಷ್ಠಿರಾದಿಗಳಿಗೆ
ಗಯನ ಯಜ್ಞಗಳ ವರ್ಣನೆ 177

91. ಲೋಮಶರಿಂದ ಯುಧಿಷ್ಠಿರನಿಗೆ ಅಗಸ್ತ್ಯರ ಚರಿತೆಯ ಕಥನ.
ಇಲ್ವಲ ವಾತಾಪಿಗಳ ನಡತೆ ಮತ್ತು ಲೋಪಾಮುದ್ರೆಯ ಜನನ 183

92. ಲೋಪಾಮುದ್ರೆಯ ವಿವಾಹ ಮತ್ತು ಧರ್ಮಾಚರಣೆ 189

93. ಧನವನ್ನು ಯಾಚಿಸಲು ಶುತರ್ವಾದಿರಾಜರ ಬಳಿಗೆ ಅಗಸ್ತ್ಯರ ಗಮನ 195

94. ಅಗಸ್ತ್ಯರಿಂದ ವಾತಾಪಿಯ ವಿನಾಶ 200

95. ದಧೀಚಿ ಋಷಿಗಳ ಅಸ್ಥಿಯಿಂದ ವಜ್ರವನ್ನು ನಿರ್ಮಾಣ ಮಾಡಿ
ವೃತ್ರಾಸುರನನ್ನು ಕುರಿತು ಇಂದ್ರನ ಅಭಿಗಮನ 208

96. ವೃತ್ರವಧೆ. ಉಳಿದ ದೈತ್ಯರಿಂದ ಸಮುದ್ರದಲ್ಲಿ ಅಡಗಿ ದುರ್ಮಂತ್ರಣ 213

97. ಕಾಲಕೇಯರಿಂದ ಉಪದ್ರುತವಾದ ಲೋಕಗಳನ್ನು ನೋಡಿ
ದೇವತೆಗಳಿಂದ ವಿಷ್ಣುವಿನಲ್ಲಿ ಶರಣಾಗತಿ 219

98. ವಿಷ್ಣುವನ್ನು ಮುಂದೆ ಮಾಡಿಕೊಂಡು ದೇವತೆಗಳಿಂದ ಬ್ರಹ್ಮಸಮೀಪ ಗಮನ.
ಬ್ರಹ್ಮದೇವರ ವಚನದಂತೆ ದೇವತೆಗಳಿಂದ ಅಗಸ್ತ್ಯರ ಸ್ತುತಿ 224

99. ಅಗಸ್ತ್ಯರಿಂದ ವಿಂಧ್ಯಪರ್ವತದ ಸ್ತಂಭನ. ಅಗಸ್ತ್ಯರ
ಜೊತೆಯಲ್ಲಿ ದೇವತೆಗಳಿಂದ ಸಮುದ್ರ ಗಮನ. 230

100. ಅಗಸ್ತ್ಯರಿಂದ ಸಮುದ್ರಶೋಷಣ. ದೇವತೆಗಳಿಂದ ಕಾಲೇಯರ ಹನನ.
ಸಮುದ್ರ ಜಲವು ಅಗಸ್ತ್ಯರಿಂದ ಜೀರ್ಣವಾಗಲು ದೇವತೆಗಳಿಂದ
ಬ್ರಹ್ಮಸಮೀಪ ಗಮನ 235

101. ಬ್ರಹ್ಮದೇವರಿಂದ ದೇವತೆಗಳಿಗೆ ಆಶ್ವಾಸನೆ. ಸಗರ ಕಥೆ.
ಅರವತ್ತುಸಾವಿರ ಪುತ್ರರ ಜನನ 240

102. ಸಗರನ ಅಶ್ವಮೇಧಯಾಗ. ಅಶ್ವದ ಅದರ್ಶನ. ಸಗರ ಪುತ್ರರಿಂದ
ಕಪಿಲಾಶ್ರಮದಲ್ಲಿ ಅಶ್ವದರ್ಶನ 245

103. ನಾರದರಿಂದ ಸಗರನಿಗೆ ಪುತ್ರನಾಶವಾರ್ತೆ ..... ಅಂಶುಮಂತನಿಂದ
ಯಜ್ಞಾಶ್ವವನ್ನು ತಂದು ಯಜ್ಞಸಮಾಪ್ತಿ. ಭಗೀರಥನ ಜನನ 251

104. ಹಿಮಾಲಯದಲ್ಲಿ ಭಗೀರಥನ ತಪಸ್ಸು. ಗಂಗೆಯ ಮತ್ತು ಶಿವನ ಅನುಗ್ರಹ 260

105. ಗಂಗೆಯಿಂದ ಸಗರಪುತ್ರರ ಅಸ್ಥಿಗಳ ಪ್ಲಾವನ ಮತ್ತು ಸಮುದ್ರ ಪೂರಣ 265

106. ಯುಧಿಷ್ಠಿರನ ತೀರ್ಥಯಾತ್ರೆ. ನಂದಾ-ಪರಮನಂದಾ ನದಿಗಳು
ಋಷಭಕೂಟ ಪರ್ವತದಲ್ಲಿ ಋಷಭ ಋಷಿಯ ಮಹಿಮೆ 270

107. ಯುಧಿಷ್ಠಿರನಿಂದ ವಿಭಾಂಡಕಾಶ್ರಮ ಪ್ರಾಪ್ತಿ. ಋಷ್ಯಶೃಂಗ ಕಥಾ 274

108. ರೋಮಪಾದ ನಿರ್ದೇಶದಂತೆ ವರಾಂಗನೆಯರಿಂದ ಋಶ್ಯಶೃಂಗರ ಪ್ರಲೋಭನ 282

109. ಋಶ್ಯಶೃಂಗರಿಂದ ತಂದೆಗೆ ವಾರಾಂಗನೆಯ ವಿಲಾಸ ಕಥನ 289

110. ವೇಶ್ಯೆಯರಿಂದ ಋಶ್ಯಶೃಂಗರನ್ನು ಕರೆದುಕೊಂಡು ಅಂಗದೇಶಕ್ಕೆ ಗಮನ.
ಅಂಗರಾಜ್ಯದಲ್ಲಿ ವೃಷ್ಟಿ. ಶಾಂತಾ ವಿವಾಹ. ವಿಭಾಂಡಕರ ಕೋಪಶಾಂತಿ.
ಶಾಂತೆಯ ತಪಸ್ಸು ಮತ್ತು ಪಾತಿವ್ರತ್ಯ 295

111. ಲೋಮಶರಿಂದ ಗಂಗಾಸಾಗರ ಸಂಗಮಾದಿ ತೀರ್ಥಮಹಿಮೆಗಳ ವರ್ಣನೆ 303

112. ಅಕೃತವ್ರಣನಿಂದ ಯುಧಿಷ್ಠಿರನಿಗೆ ಪರಶುರಾಮ ಚರಿತ್ರೆಯ ಕಥನ 309

113. ಪರಶುರಾಮ ಕಥೆ. ಜಮದಗ್ನಿಯ ವಧೆ 316

114. ರಾಮನ ವಿಲಾಪ. ಕ್ಷತ್ರಿಯ ವಧೆ. ಋಚೀಕರ ವಚನದಂತೆ ಕ್ಷತ್ರಿಯ
ವಧೆಯಿಂದ ನಿವೃತ್ತಿ. ಯಾಗದಲ್ಲಿ ಸರ್ವಸ್ವದಾನ ಮತ್ತು ತಪಶ್ಚರ್ಯಾ 322

115. ತೀರ್ಥಯಾತ್ರಾಕ್ರಮದಿಂದ ಪ್ರಭಾಸಕ್ಕೆ ಬಂದ ಪಾಂಡವರಿಗೆ
ಕೃಷ್ಣಬಲರಾಮರಿಂದ ಸತ್ಕಾರ. 326

116. ಬಲರಾಮನಿಂದ ಕೃಷ್ಣನೆದುರಿನಲ್ಲಿ ಪಾಂಡವರನ್ನು ಕುರಿತು ಶೋಕ 333

117. ಸಾತ್ಯಕಿಯ ವೀರ ವಚನಗಳು. ಯುಧಿಷ್ಠಿರನಿಂದ ಅವನ ಸಮಾಧಾನ.
ವೃಷ್ಣಿಗಳನ್ನು ಪೂಜಿಸಿ ಪಾಂಡವರಿಂದ ಬೀಳ್ಕೊಡುಗೆ 340

118. ಪಯೋಷ್ಣಿಯಲ್ಲಿ ಗಯನು ಮಾಡಿದ ಯಾಗದ ವರ್ಣನೆ.
ಚ್ಯವನ ಕಥಾ ಪ್ರಸಕ್ತಿ. 350

119. ಸುಕನ್ಯೆಯ ಅಪರಾಧ ಮತ್ತು ಚ್ಯವನರ ಜೊತೆಯಲ್ಲಿ ವಿವಾಹ 356

120. ಅಶ್ವಿನಿಗಳಿಂದ ಚ್ಯವನರಿಗೆ ವಯೋರೂಪದಾನ. ಅವರಿಗೆ
ಸೋಮಪಾನವನ್ನು ಮಾಡಿಸಲು ಚ್ಯವನರ ಪ್ರತಿಜ್ಞೆ 362

121. ಶರ್ಯಾತಿಯ ಯಾಗದಲ್ಲಿ ಇಂದ್ರನ ಬಾಹುಸ್ತಂಭನ. ಕೃತ್ಯಾಸೃಷ್ಟಿ.
ಚ್ಯವನರ ಅನುಗ್ರಹ ಮತ್ತು ಆರ್ಚೀಕಪರ್ವತದ ಮಹಿಮೆ 367

122. ಲೋಮಶರಿಂದ ಮಾಂಧಾತೃ ಚರಿತ್ರ ಕಥನ 378

123. ಸೋಮಕ ಕಥಾ. ಋತ್ವಿಕ್ ವಚನದಂತೆ ಒಬ್ಬ ಪುತ್ರನನ್ನು ಹೋಮ
ಮಾಡಿ ನೂರು ಪುತ್ರರನ್ನು ಪಡೆಯುವ ಆಸೆ 388

124. ಸೋಮಕನಿಗೆ ಪುತ್ರಶತ ಪ್ರಾಪ್ತಿ. ಪುರೋಹಿತರ ಜೊತೆಯಲ್ಲಿ
ನರಕವನ್ನು ಅನುಭವಿಸಿ ಸ್ವರ್ಗಗಮನ 392

125. ಲೋಮಶರಿಂದ ಯುಧಿಷ್ಠಿರನಿಗೆ ನಾನಾ ತೀರ್ಥಗಳ ಮಹಿಮೆಗಳ ವರ್ಣನೆ 397

126. ಲೋಮಶರಿಂದ ನಾನಾ ತೀರ್ಥಕ್ಷೇತ್ರಗಳ ಮಹಿಮೆಯ ವರ್ಣನೆ.
ಶಿಬಿಯ ಕಥೋಪಾಖ್ಯಾನ ಪ್ರಾರಂಭ. 402

127. ಶ್ಯೇನ ಕಪೋತೋಪಾಖ್ಯಾನ 407

128. ಅಷ್ಟಾವಕ್ರೋಪಾಖ್ಯಾನ 415

129. ಅಷ್ಟಾವಕ್ರ ಮತ್ತು ದ್ವಾರಪಾಲರ ಸಂವಾದ. ಅಷ್ಟಾವಕ್ರರಿಗೆ
ರಾಜಸಭೆಯನ್ನು ಪ್ರವೇಶಿಸಲು ಅನುಮತಿ. 421

130. ಅಷ್ಟಾವಕ್ರ ವಂದಿ ಸಂವಾದ ಮತ್ತು ವಂದಿಯ ಪರಾಜಯ 432

131. ನೀರಿನಲ್ಲಿ ಮುಳುಗಿಸಲ್ಪಟ್ಟ ಎಲ್ಲಾ ವಿಪ್ರರ ಸಮುತ್ಥಾನ; ತನ್ನ ತಂದೆ ಮತ್ತು
ಸೋದರ ಮಾವನ ಜೊತೆಯಲ್ಲಿ ಅಷ್ಟಾವಕ್ರರಿಂದ ತಮ್ಮ ಆಶ್ರಮಕ್ಕೆ ಗಮನ 441

132. ಕರ್ದಮಿಲಾದಿ ತೀರ್ಥಗಳ ಮಹಾತ್ಮೆ. ರೈಭ್ಯ ಯವಕ್ರೀತರ ಕಥೆ.
ಯವಕ್ರೀತನ ದುರಾಗ್ರಹ ಮತ್ತು ಬಾಲದಿಯ ಉಪಾಖ್ಯಾನ 447

133. ರೈಭ್ಯಾಶ್ರಮದಲ್ಲಿ ಯವಕ್ರೀತನಿಂದ ಪರಾವಸುವಿನ ಪತ್ನಿಗೆ ಅವಮಾನ.
ರೈಭ್ಯರಿಂದ ಪಿಶಾಚ ಮತ್ತು ರಾಕ್ಷಸರ ಸೃಷ್ಟಿ ಮತ್ತು ರಾಕ್ಷಸರಿಂದ ಯವಕ್ರೀತನ ವಧೆ. 460

134. ಪುತ್ರಶೋಕದಿಂದ ಭರದ್ವಾಜರ ವಿಲಾಪ. ರೈಭ್ಯರಿಗೆ ಶಾಪದಾನ
ಮತ್ತು ಮೃತದೇಹ ದಹನಪೂರ್ವಕವಾಗಿ ಅಗ್ನಿಪ್ರವೇಶ 465

135. ರೈಭ್ಯಶಿಷ್ಯನಾದ ಬೃಹದ್ಯುಮ್ನನ ಯಾಗಕ್ಕೆ ಅರ್ವಾವಸು ಮತ್ತು ಪರಾವಸುಗಳ
ಗಮನ. ರಾತ್ರಿಯ ಕಾಲದಲ್ಲಿ ಅಜ್ಞಾನದಿಂದ ಪರಾವಸುವಿನಿಂದ ರೈಭ್ಯರ ವಧೆ.
ದೇವತಾನುಗ್ರಹದಿಂದ ರೈಭ್ಯ, ಭರದ್ವಾಜ ಮತ್ತು ಯವಕ್ರೀತರ ಉಜ್ಜೀವನ 470

136. ಲೋಮಶರ ಆದೇಶದಂತೆ ಯುಧಿಷ್ಠಿರಾದಿಗಳ ಕೈಲಾಸಾದಿ ಗಿರಿ ಪ್ರವೇಶ.
ಲೋಮಶರಿಂದ ಆ ಕ್ಷೇತ್ರಗಳ ದುರ್ಗಮತ್ವ ಕಥನ. 479

137. ಅಶಕ್ತರಾದ ದ್ರೌಪದ್ಯಾದಿಗಳನ್ನು ತಾನು ಎತ್ತಿಕೊಂಡು ಹೋಗುವುದಾಗಿ
ಭೀಮಸೇನನ ಉತ್ಸಾಹದ ಆಶ್ವಾಸನೆ. ಸುಬಾಹುರಾಜನಿಂದ ಯುಧಿಷ್ಠರಾದಿಗಳ
ಸತ್ಕಾರ. ಹೆಚ್ಚಿನ ಪರಿವಾರವನ್ನು ಹಿಂದೆ ಬಿಟ್ಟು ಗಂಧಮಾದನ ಮತ್ತು
ಹಿಮಾಲಯವನ್ನು ಕುರಿತು ಪಾಂಡವರ ಪ್ರಯಾಣ 484

138. ಅರ್ಜುನನನ್ನು ಕಾಣದೆ ಪರಿತಪಿಸುವ ಯುಧಿಷ್ಠಿರನ ಜೊತೆಯಲ್ಲಿ ಪಾಂಡವರ
ಪ್ರಯಾಣ. ಗಂಧಮಾದನ ಪರ್ವತವನ್ನು ಪ್ರವೇಶಿಸಲು ನಿರ್ಧಾರ 491

139. ಪಾಂಡವರಿಂದ ಗಂಗೆಯ ವಂದನ. ಲೋಮಶರಿಂದ
ನರಕಾಸುರವಧೆಯ ಮತ್ತು ವರಾಹಾವತಾರದ ಕಥನ 497

140. ಗಂಧಮಾದನ ಪರ್ವತಕ್ಕೆ ಹೊರಟ ಪಾಂಡವರಿಗೆ ಮಾರ್ಗಮಧ್ಯದಲ್ಲಿ ಮಳೆ.
ಮಳೆಯು ನಿಂತ ನಂತರ ಪುನಃ ಅವರ ಪ್ರಯಾಣ 511

141. ಗಂಧಮಾದನಪರ್ವತಮಾರ್ಗದಲ್ಲಿ ಸುಕುಮಾರಿಯಾದ ದ್ರೌಪದಿಯ
ಪತನ. ಪಾಂಡವರಿಂದ ಆಶ್ವಾಸನ. ಧರ್ಮರಾಜನ ವಿಲಾಪ ಮತ್ತು
ಭೀಮಸೇನನ ಪ್ರೋತ್ಸಾಹನ. 517

142. ಭೀಮಸೇನನು ಸ್ಮರಣೆಮಾಡಿದ ತಕ್ಷಣ ಘಟೋತ್ಕಚನ ಆಗಮನ.
ಅವನಿಂದ ಮತ್ತು ರಾಕ್ಷಸರಿಂದ ದ್ರೌಪದಿಯ ಮತ್ತು ವಿಪ್ರರ ವಹನ.
ನರನಾರಾಯಣಾಶ್ರಮ ಪ್ರಾಪ್ತಿ 524

143. ಭೀಮನ ಸಮೀಪದಲ್ಲಿ ದ್ರೌಪದಿಯ ಮುಂದೆ ವಾಯುವಿನಿಂದ
ಬೀಳಿಸಲ್ಪಟ್ಟ ಸೌಗಂಧಿಕ ಪುಷ್ಪದ ದರ್ಶನ. ಇನ್ನೂ ಅನೇಕ ಪುಷ್ಪಗಳನ್ನು
ತರುವಂತೆ ಅವಳ ಪ್ರಾರ್ಥನೆ. ಅಲ್ಲಿಂದ ಹೊರಟ ಭೀಮಸೇನನಿಗೆ
ಕದಳೀ ವನದಲ್ಲಿ ಹನುಮಂತನ ದರ್ಶನ ಮತ್ತು ಅವರ ಸಂವಾದ 536

144. ಹನುಮಂತನಿಂದ ತನ್ನ ಅಶಕ್ತಿಕಥನದ ವಿಡಂಬನೆ. ಹನುಮಂತನ
ಮತ್ತು ಭೀಮಸೇನನ ಸಂವಾದ 559

145. ಹನುಮಂತನಿಂದ ಅವಶಿಷ್ಟ ರಾಮಚರಿತೆಯ ಕಥನ 567

146. ಭೀಮಸೇನನಿಂದ ಹನುಮಂತನ ಸಮುದ್ರಲಂಘನ ರೂಪದ ಪ್ರದರ್ಶನದ ಪ್ರಾರ್ಥನೆ. ಹನುಮಂತನಿಂದ ಯುಗಧರ್ಮಗಳ ಉಪದೇಶ 571

147. ಭೀಮಸೇನನೆದುರಿಗೆ ಹನುಮಂತನ ಸಮುದ್ರಲಂಘನ ಮಾಡಿದ ರೂಪದ ಆವಿಷ್ಕಾರ ಮತ್ತು ಚಾತುರ್ವರ್ಣ್ಯ ಧರ್ಮೋಪದೇಶ 580

148. ಹನುಮಂತನಿಂದ ಪೂರ್ವರೂಪವನ್ನು ಉಪಸಂಹಾರ ಮಾಡಿ ಭೀಮಸೇನನ ಆಲಿಂಗನ ಮತ್ತು ವರದಾನ. ಭೀಮಸೇನನ ಸೌಗಂಧಿಕ ಸರೋವರ ದರ್ಶನ 592

149. ಸೌಗಂಧಿಕ ಸರೋವರವನ್ನು ಪ್ರವೇಶಿಸಲಿರುವ ಭೀಮಸೇನನಿಗೆ ಕಾವಲುಗಾರರ ಪ್ರಶ್ನೆ 601

150. ಭೀಮನಿಂದ ಸೌಗಂಧಿಕ ಸರೋವರ ಪ್ರವೇಶ. ರಾಕ್ಷಸರ ವಿರೋಧ ಮತ್ತು ಯುದ್ಧ. ಕುಬೇರನಿಂದ ಭೀಮಸೇನನ ಕಾರ್ಯದ ಅನುಮೋದನೆ 605

151. ಅಪಶಕುನಗಳನ್ನು ನೋಡಿದ ಧರ್ಮರಾಜನ ದ್ರೌಪದಿಯ ಮಾತಿನಂತೆ ಭೀಮಸೇನನ ಅನ್ವೇಷಣ. ಸೌಗಂಧಿಕ ವನಕ್ಕೆ ಬಂದು ಅವನ ಸಾಂತ್ವನ. ಅಲ್ಲಿಯೇ ಸ್ವಲ್ಪ ಸಮಯ ಎಲ್ಲರ ವಿಹಾರ 615

152. ಗಂಧಮಾದನ ಪರ್ವತದಿಂದ ಉತ್ತರದಿಕ್ಕಿಗೆ ಹೋಗಲು ಧರ್ಮರಾಜನ ಪ್ರಯತ್ನ. ಆಕಾಶವಾಣಿಯಿಂದ ನಿಷೇಧ ಮತ್ತು ಪುನಃ ನರನಾರಾಯಣಾಶ್ರಮಕ್ಕೆ ಪ್ರತಿನಿವೃತ್ತಿ 622

153. ಬ್ರಾಹ್ಮಣ ವೇಷದಿಂದ ಪಾಂಡವರಿದ್ದಲ್ಲಿ ಜಟಾಸುರನ ಪ್ರವೇಶ. ವಂಚನೆಯಿಂದ ಪಾಂಡವ, ಮತ್ತು ದ್ರೌಪದಿಯ ಹರಣ. ಮಾರ್ಗಮಧ್ಯದಲ್ಲಿ ಭೀಮಸೇನನಿಂದ ಅವನ ವಧೆ 627

—0—

ಎಪ್ಪತ್ತೈದನೆಯ ಅಧ್ಯಾಯ

(ಅರ್ಜುನವಿರಹಿತ ಕಾಮ್ಯಕವನದಲ್ಲಿ ವಾಸಮಾಡಲು
ಭೀಮಾದಿಗಳಿಂದ ತಮ್ಮ ಅಸಂತೋಷ ಕಥನ.)

ಜನಮೇಜಯಃ

ಭಗವಾನ್ ಕಾಮ್ಯಕಾತ್ ಪಾರ್ಥೇ ಗತೇ ಮೇ ಪ್ರಪಿತಾಮಹೇ ।
ಕಿಮಕುರ್ವಂತ ಪಾರ್ಥಾಸ್ತೇ ತಮೃತೇ ಸವ್ಯಸಾಚಿನಮ್ ॥೧॥

ಪೂಜ್ಯರೇ, ನಮ್ಮ ಮುತ್ತಜ್ಜನಾದ ಅರ್ಜುನನು ಕಾಮ್ಯಕವನದಿಂದ ಹೋಗುತ್ತಿರಲು ಆ ಅರ್ಜುನನಿಲ್ಲದೆ ಪಾಂಡವರು ಏನು ಮಾಡಿದರು?

ಸ ಹಿ ತೇಷಾಂ ಮಹೇಷ್ವಾಸೋ ಧೃತಿರಾಸೀದನೀಕಜಿತ್ ।
ಆದಿತ್ಯಾನಾಂ ಯಥಾ ವಿಷ್ಣುಸ್ತಥೈವ ಪ್ರತಿಭಾತಿ ಮೇ ॥೨॥

ಮಹಾಧರ್ನುಧಾರಿಯಾದ ಶತ್ರುಸೈನ್ಯವನ್ನು ಗೆಲ್ಲುವವನೂ ಆದ ಅವನು ಆದಿತ್ಯರಿಗೆ ವಿಷ್ಣುವಿನಂತೆ ಅವರಿಗೆ ಧೈರ್ಯಸ್ಥಾನವಾಗಿದ್ದನು ಎಂದು ನನಗೆ ತೋರುತ್ತದೆ.

ತೇನೇಂದ್ರಸಮವೀರ್ಯೇಣ ಸಂಗ್ರಾಮೇಷ್ವನಿವರ್ತಿನಾ ।
ವಿನಾಭೂತಾಃ ಕಥಂ ಪಾರ್ಥಾಃ ಕಥಮಾಸನ್ ಪಿತಾಮಹಾಃ ॥೩॥

ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಸಂಗ್ರಾಮಗಳಿಂದ ಎಂದೂ ಹಿಮ್ಮೆಟ್ಟದ ಅವನಿಂದ ರಹಿತರಾಗಿ ನನ್ನ ಪಿತಾಮಹರಾದ (ಪಾರ್ಥರು) ಪಾಂಡವರು ಕಾಡಿನಲ್ಲಿ ಹೇಗೆ ವಾಸಮಾಡಿದರು?

ವೈಶಂಪಾಯನಃ

ಗತೇ ತು ಕಾಮ್ಯಕಾತ್ ತಾತ ಪಾಂಡವೇ ಸವ್ಯಸಾಚಿನಿ ।
ಬಭೂವುಃ ಕೌರವೇಯಾಸ್ತೇ ದುಃಖಶೋಕಪರಾಯಣಾಃ ॥೪॥

ಪ್ರೀತಿಪಾತ್ರನೇ, ಪಾಂಡುಪುತ್ರನಾದ ಅರ್ಜುನನು ಕಾಮ್ಯಕವನದಿಂದ ಹೋಗುತ್ತಿರಲು ಕೌರವವಂಶದಲ್ಲಿ ಜನಿಸಿದ ಅವರೆಲ್ಲರೂ ದುಃಖಶೋಕಪರಾಯಣರಾದರು.

ಆಕ್ಷಿಪ್ತಸೂತ್ರಾ ಮಣಯಃ ಛಿನ್ನಪಕ್ಷಾ ಇವಾಂಡಜಾಃ ।
ಅಪ್ರೀತಮನಸಃ ಸರ್ವೇ ಬಭೂವುಸ್ತತ್ರ ಪಾಂಡವಾಃ ॥೫॥

ಸೂತ್ರದಿಂದ ತೆಗೆದ ಮಣಿಗಳಂತೆ ರೆಕ್ಕೆಗಳನ್ನು ಕತ್ತರಿಸಿದ ಹಕ್ಕಿಗಳಂತೆ ಪಾಂಡವರೆಲ್ಲರೂ ಅಲ್ಲಿ ಅಸಂತುಷ್ಟಮನಸ್ಸುಳ್ಳವರಾದರು.

ವನಂ ಚ ತದಭೂತ್ ತೇನ ಹೀನಮಕ್ಲಿಷ್ಟಕರ್ಮಣಾ ।
ಕುಬೇರೇಣ ಯಥಾ ಹೀನಂ ವನಂ ಚೈತ್ರರಥಂ ತಥಾ ॥೬॥

ಅನಾಯಾಸವಾಗಿ ಎಲ್ಲವನ್ನೂ ಸಾಧಿಸುವ ಅರ್ಜುನನಿಲ್ಲದೆ ಆ ವನವು ಕುಬೇರನಿಲ್ಲದ ಚೈತ್ರರಥವನದಂತಾಯಿತು.

ತಮೃತೇ ತೇ ನರವ್ಯಾಘ್ರಾಃ ಪಾಂಡವಾ ಜನಮೇಜಯ ।
ಮುದಮಪ್ರಾಪ್ನುವಂತಸ್ತೇ ಕಾಮ್ಯಕೇ ನ್ಯವಸಂಸ್ತದಾ ॥೭॥

ಎಲೈ ಜನಮೇಜಯನೇ, ಅರ್ಜುನನಿಲ್ಲದೆ ನರವ್ಯಾಘ್ರರಾದ ಪಾಂಡವರು ಸುಖವನ್ನು ಹೊಂದದೆ ಆಗ ಕಾಮ್ಯಕವನದಲ್ಲಿ ವಾಸವನ್ನು ಮಾಡಿದರು.

ಬ್ರಾಹ್ಮಣಾರ್ಥೇ ಪರಾಕ್ರಾಂತಾಃ ಶುದ್ಧೈರ್ಬಾಣೈರ್ಮಹಾರಥಾಃ ।
ನಿಘ್ನಂತೋ ಭರತಶ್ರೇಷ್ಠಾ ಮೇಧ್ಯಾನ್ ಬಹುವಿಧಾನ್ ಮೃಗಾನ್ ॥೮॥

ನಿತ್ಯಂ ಹಿ ಪುರುಷವ್ಯಾಘ್ರಾ ವನ್ಯಾಹಾರಮರಿಂದಮಾಃ ।
ವಿನಿಹತ್ಯ ಸಮಾಹೃತ್ಯ ಬ್ರಾಹ್ಮಣೇಭ್ಯೋ ನ್ಯವೇದಯನ್ ॥೯॥

ಮಹಾರಥರಾದ ಭರತಶ್ರೇಷ್ಠರಾದ ಅವರು ಬ್ರಾಹ್ಮಣರಿಗೋಸ್ಕರ ತಮ್ಮ ಪರಾಕ್ರಮವನ್ನು ತೋರಿಸಿ ಸ್ವೀಕಾರಾರ್ಹವಾದ ಅನೇಕ ವಿಧವಾದ ಮೃಗಗಳನ್ನು ಸಂಹಾರಮಾಡುತ್ತಾ ಅವುಗಳನ್ನು ತೆಗೆದುಹೊಂಡು ಬಂದು ಅರಿಂದಮರೂ ಪುರುಷವ್ಯಾಘ್ರರೂ ಆದ ಅವರು ಯಾವಾಗಲೂ ಬ್ರಾಹ್ಮಣರಿಗೆ ಆ ವನದಲ್ಲಿದೊರಕುವ ಆಹಾರವನ್ನು ಕೊಡುತ್ತಿದ್ದರು.

ಏವಂ ತೇ ನ್ಯವಸಂಸ್ತತ್ರ ಸೋತ್ಕಂಠಾಃ ಪುರುಷರ್ಷಭಾಃ ।
ವಿಷಣ್ಣವದನಾಸ್ತತ್ರ ಗತೇ ರಾಜನ್ ಧನಂಜಯೇ ॥೧೦॥

ಎಲೈ ರಾಜನೇ, ಅರ್ಜುನನು ಹೋದಮೇಲೆ ಪುರುಷರ್ಷಭರಾದ ಅವರು ವಿಷಣ್ಣವದನರಾಗಿ ಅರ್ಜುನನನ್ನು ನೋಡುವ ತೀವ್ರವಾದ ಬಯಕೆಯಿಂದ ಅಲ್ಲಿ ವಾಸಮಾಡಿದರು.

ಆಥೈನಂ ಪ್ರೋಷಿತಂ ವೀರಂ ಪಾಂಚಾಲೀ ಮಧ್ಯಮಂ ಪತಿಮ್ ।
ಸ್ಮರಂತೀ ಪಾಂಡವಶ್ರೇಷ್ಠಮಿದಂ ವಚನಮಬ್ರವೀತ್ ॥೧೧॥

ಆಗ ಪಾಂಚಾಲಿಯು ಕಾಮ್ಯಕವನ್ನು ಬಿಟ್ಟು ಪ್ರಯಾಣಮಾಡಿದ ಪಾಂಡವಶ್ರೇಷ್ಠನಾದ ವೀರನಾದ ತನ್ನ ಮಧ್ಯಮಪತಿಯನ್ನು ಸ್ಮರಿಸುತ್ತಾ ಮಾತನಾಡಿದಳು.

ಯೋಽರ್ಜುನೇನಾರ್ಜುನಸ್ತುಲ್ಯೋ ದ್ವಿಬಾಹುರ್ಬಹುಬಾಹುನಾ।
ತಮೃತೇ ಪಾಂಡವಶ್ರೇಷ್ಠಂ ವನಂ ನ ಪ್ರತಿಭಾತಿ ಮೇ ॥೧೨॥

ಎರಡು ಬಾಹುಗಳುಳ್ಳ ಯಾವ ಅರ್ಜುನನು ಅನೇಕ ಬಾಹುಗಳುಳ್ಳ ಕಾರ್ತವೀರ್ಯಾರ್ಜುನನಿಗೆ ಸಮನಾಗಿದ್ದಾನೆಯೋ ಅಂತಹ ಪಾಂಡವಶ್ರೇಷ್ಠನಿಲ್ಲದ ಈ ವನವು ನನಗೆ ರುಚಿಸುವುದಿಲ್ಲ.

ಶೂನ್ಯಮಿವ ಪ್ರಪಶ್ಯಾಮಿ ತತ್ರ ತತ್ರ ಮಹೀಮಿಮಾಮ್ ।
ಬಹ್ವಾಶ್ಚರ್ಯಮಿದಂ ಚಾಪಿ ವನಂ ಕುಸುಮಿತದ್ರುಮಮ್ ॥೧೩॥

ಅನೇಕಾಶ್ಚರ್ಯಗಳಿಂದ ಕೂಡಿದ ಪುಷ್ಪಿತವೃಕ್ಷಗಳಿಂದ ಕೂಡಿದ್ದರೂ ಈ ವನಭೂಮಿಯು ನನಗೆ ಶೂನ್ಯವಾಗಿ ಕಾಣುತ್ತಿದೆ.

ನ ತಥಾ ರಮಣೀಯಂ ವೈ ತಮೃತೇ ಸವ್ಯಸಾಚಿನಮ್ ।
ನೀಲಾಂಬುದಸಮಪ್ರಖ್ಯಂ ಮತ್ತಮಾತಂಗವಿಕ್ರಮಮ್ ।
ತಮೃತೇ ಪುಂಡರೀಕಾಕ್ಷಂ ಕಾಮ್ಯಕಂ ನಾತಿಭಾತಿ ಮೇ ॥೧೪॥

ನೀಲಮೇಘಶ್ಯಾಮನೂ ಮದಗಜವಿಕ್ರಮವುಳ್ಳವನೂ ಪುಂಡರೀಕಾಕ್ಷನೂ ಆದ ಆ ಸವ್ಯಸಾಚಿ ಇಲ್ಲದೆ ಈ ಕಾಮ್ಯಕವನವು ನನಗೆ ರಮಣೀಯವಾಗಿ ಕಾಣುತ್ತಿಲ್ಲ.

ಯಸ್ಯ ವಾ ಧನುಷೋ ಘೋಷಃ ಶ್ರೂಯತೇ ಚಾಶನಿಸ್ವನಃ ।
ನ ಲಭೇ ಶರ್ಮ ತಂ ರಾಜನ್ ಸ್ಮರಂತೀ ಸವ್ಯಸಾಚಿನಮ್ ॥೧೫॥

ಎಲೈ ರಾಜನೇ, ಯಾವನ ಧನುರ್ಘೋಷವು ಸಿಡಿಲಿನ ಧ್ವನಿಯಂತೆ ಕೇಳಿಬರುತ್ತದೆಯೋ ಅಂತಹ ಸವ್ಯಸಾಚಿಯನ್ನು ಸ್ಮರಿಸುತ್ತಾ ನಾನು ದುಃಖಪಡುತ್ತಿದ್ದೇನೆ.

ವೈಶಂಪಾಯನಃ

ತಥಾ ಲಾಲಪ್ಯಮಾನಾಂ ತಾಂ ನಿಶಾಮ್ಯ ಪರವೀರಹಾ ।
ಭೀಮಸೇನೋ ಮಹಾರಾಜ ದ್ರೌಪದೀಮಿದಮಬ್ರವೀತ್ ॥೧೬॥

ಎಲೈ ಮಹಾರಾಜನೇ, ಪರವೀರಘಾತಕನಾದ ಭೀಮಸೇನನು ಹಾಗೆ ವಿಲಾಪವನ್ನು ಮಾಡುತ್ತಿರುವ ದ್ರೌಪದಿಯನ್ನು ನೋಡಿ ಅವಳನ್ನು ಕುರಿತು ಹೀಗೆ ಮಾತನಾಡಿದನು.

ಮಮ ಪ್ರೀತಿಕರಂ ಮನ್ಯೇ ಯದ್ಬ್ರವೀಷಿ ಸುಮಧ್ಯಮೇ ।
ತನ್ಮೇ ಪ್ರೀಣಾತಿ ಹೃದಯಮಮೃತಪ್ರಾಶನೋಪಮಮ್ ॥೧೭॥

ಎಲೌ ಸುಮಧ್ಯಮೆಯೇ ನಿನ್ನ ಮಾತುಗಳು ನನಗೆ ಸಂತೋಷವನನ್ನು ಉಂಟುಮಾಡುತ್ತಿವೆ. ಆ ಮಾತುಗಳು ನನಗೆ ಅಮೃತವನ್ನು ಪಾನಮಾಡಿದಷ್ಟು ಸಂತೋಷವನ್ನು ಕೊಡುತ್ತವೆ.

ಯಸ್ಯ ದೀರ್ಘೌ ಸಮೌ ಪೀನೌ ಭುಜೌ ಪರಿಘಸನ್ನಿಭೌ ।
ಮೌರ್ವೀಕೃತಕಿಣೌ ವೃತ್ತೌ ಖಡ್ಗಾಯುಧಗದಾಧರೌ ॥೧೮॥

ನಿಷ್ಟಂಗದಕೃತಾಪೀಡೌ ಪಂಚಶೀರ್ಷಾವಿವೋರಗೌ ।
ತಮೃತೇ ಪುರುಷವ್ಯಾಘ್ರಂ ನಷ್ಟಸೂರ್ಯನಿಭಂ ವನಮ್ ॥೧೯॥

ಯಾವ ಅರ್ಜುನನ ಬಾಹುಗಳು ದೀರ್ಘವಾದ ಸಮಾನವಾದ ಪುಷ್ಟವಾದ ಒನಕೆಗಳನ್ನು ಹೋಲುವ, ಹೆದೆಯಿಂದ ಜಡ್ಡುಗಟ್ಟಿದ, ವರ್ತುಲಗಳಾಗಿ ಖಡ್ಗ ಆಯುಧ ಮತ್ತು ಗದೆಗಳನ್ನು ಹಿಡಿಯುವ ಸುವರ್ಣಮಯವಾದ ಅಂಗದಗಳಿಂದ ಅಲಂಕೃತವಾದ ಐದುಹೆಡೆಯನ್ನು ಹೊಂದಿದ ಸರ್ಪಗಳನ್ನು ಹೋಲುವ, ಬಾಹುಗಳೋ ಅಂತಹ ಪುರುಷವ್ಯಾಘ್ರನೇ ಇಲ್ಲದೆ ಈ ವನವು ಸೂರ್ಯನಿಲ್ಲದ ಜಗತ್ತಿನಂತೆ ಆಗಿದೆ.

ಯಮಾಶ್ರಿತ್ಯ ಮಹಾಬಾಹುಂ ಪಾಂಚಾಲಾಃ ಕುರವಸ್ತಥಾ ।
ಶೂರಾಣಾಮಪಿ ಯತ್ತಾನಾಂ ಪೃತನಾಸು ನ ಬಿಭ್ಯತಿ ॥೨೦॥

ಯಸ್ಯ ಬಾಹೂ ಸಮಾಶ್ರಿತ್ಯ ವಯಂ ಸರ್ವೇ ಮಹಾತ್ಮನಃ ।
ಮನ್ಯಾಮಹೇ ಜಿತಾನಾಜೌ ಪರಾನ್ ಪ್ರಾಪ್ತಾಂ ಚ ಮೇದಿನೀಮ್ ॥

ತಮೃತೇ ಫಲ್ಗುನಂ ವೀರಂ ನ ಲಭೇ ಕಾಮ್ಯಕೇ ರತಿಮ್ ।
ಶೂನ್ಯಾಮಿವ ಚ ಪಶ್ಯಾಮಿ ತತ್ರ ತತ್ರ ಮಹೀಮಿಮಾಮ್ ॥೨೨॥

ಯಾವ ಮಹಾಬಾಹುವಾದ ಅರ್ಜುನನನ್ನು ಆಶ್ರಯಿಸಿ ಪಾಂಚಾಲರು ಮತ್ತು ಕುರುಗಳು ಶೂರರು ಇರುವ ಸೈನ್ಯಕ್ಕೆ ಹೆದರುವುದಿಲ್ಲವೋ, ಯಾವ ಮಹಾತ್ಮನಾದ ಅವನ ಬಾಹುಬಲವನ್ನು ಆಶ್ರಯಿಸಿ ನಾವೆಲ್ಲರೂ ಶತ್ರುಗಳಾದ ಕೌರವರು ಯುದ್ಧದಲ್ಲಿ ಸೋತಿದ್ದಾರೆ ಮತ್ತು ನಾವು ಭೂಮಿಯನ್ನು ಪುನಃ ಪಡೆದಿದ್ದೇವೆ ಎಂದು ಭಾವಿಸಿದ್ದೇವೆಯೋ, ಅಂತಹ ಅರ್ಜುನನಿಲ್ಲದೆ ಕಾಮ್ಯಕವನದಲ್ಲಿ ನನಗೆ ಯಾವ ಸಂತೋಷವೂ ಉಂಟಾಗುವುದಿಲ್ಲ. ಈ ಭೂಮಿಯು ಅಲ್ಲಲ್ಲಿ ನನಗೆ ಶೂನ್ಯವಾಗಿ ಕಾಣುತ್ತಿದೆ.

ತತೋಽಬ್ರವೀತ್ ಸಾಶ್ರುಕಂಠೋ ನಕುಲಃ ಪಾಂಡುನಂದನಃ ।
ಯ ಉದೀಚೀಂ ದಿಶಂ ಗತ್ವಾ ಯುಧಿ ಜಿತ್ವಾ ಮಹಾಬಲಾನ್ ।
ಗಂಧರ್ವಮುಖ್ಯಾನ್ ಶತಶೋ ಹಯಾನ್‌ಲೇಭೇ ಸ ವಾಸವಿಃ ॥೨೩॥

ರಾಜ್ಞೋ ತಿತ್ತಿರಿಕಲ್ಮಾಷಾನ್ ಶ್ರೀಮತೋಽನಿಲರಂಹಸಃ ।
ಪ್ರಾದಾದ್ ಭ್ರಾತ್ರೇ ಪ್ರಿಯಃ ಪ್ರೇಮ್ಣಾ ರಾಜಸೂಯೇ ಮಹಾಕ್ರತೌ॥೨೪॥

ತಮ್ಯತೇ ಭೀಮಧನ್ವಾನಂ ಭೀಮಾದವರಜಂ ವನೇ ।
ಕಾಮಯೇ ಕಾಮ್ಯಕೇ ವಾಸಂ ನೇದಾನೀಮಮರೋಪಮ ॥೨೫॥

ಆನಂತರ ಕಣ್ಣುಗಳಲ್ಲಿ ನೀರುತುಂಬಿದ ಪಾಂಡುನಂದನನಾದ ನಕುಲನು ಹೇಳಿದನು. ಎಲೈ ದೇವಸದೃಶನಾದವನೇ, ಯಾವ ಅರ್ಜುನನು ಉತ್ತರದಿಕ್ಕಿಗೆ ಹೋಗಿ, ಮಹಾಬಲರಾದ ಗಂಧರ್ವಶ್ರೇಷ್ಠರನ್ನು ಗೆದ್ದು ನೂರಾರು ಸಂಖ್ಯೆಯಲ್ಲಿ ತಿತ್ತಿರಿ ಕಲ್ಮಾಷ ಬಣ್ಣವುಳ್ಳ ವಾಯುವೇಗವುಳ್ಳ ಅಶ್ವಗಳನ್ನು ಪಡೆದು, ತನ್ನ ಅಣ್ಣನಾದ ಧರ್ಮರಾಜನಿಗೆ ರಾಜಸೂಯಮಹಾಯಾಗದಲ್ಲಿ ಪ್ರೀತಿಪಾತ್ರನಾದ ಅವನು ಪ್ರೀತಿಯಿಂದ ತಂದೊಪ್ಪಿಸಿದನೋ, ಅಂತಹ ಉಗ್ರವಾದ ಧನುಸ್ಸನ್ನುಳ್ಳ ಭೀಮನ ತಮ್ಮನಾದ ಅರ್ಜುನನಿಲ್ಲದೆ ಈಗ ಕಾಮ್ಯಕವನದಲ್ಲಿ ನಾನು ವಾಸವನ್ನು ಬಯಸುವುದಿಲ್ಲ.

ಸಹದೇವಃ

ಯೋ ಧನಾನಿ ಚ ಕನ್ಯಾಶ್ಚ ಯುಧಿ ಜಿತ್ವಾ ಮಹಾರಥಾನ್ ।
ಶತಶೋ ಘಾತಯಿತ್ವಾರೀನ್ ಪೃತನಾಮಧ್ಯಗಸ್ತದಾ ॥೨೬॥

ಯಃ ಸಮೇತಾನ್ ಮೃಧೇ ಜಿತ್ವಾ ಯಾದವಾನಮಿತದ್ಯುತಿಃ ।
ಏಕಃ ಸುಭದ್ರಾಮಾಜಹ್ರೇ ವಾಸುದೇವಸ್ಯ ಸಮ್ಮತೇ ॥೨೭॥

ಯೇನಾರ್ಧರಾಜ್ಯಮಾಹೃತ್ಯ ದ್ರುಪದಸ್ಯ ಮಹಾತ್ಮನಃ ।
ಆಚಾರ್ಯದಕ್ಷಿಣಾ ದತ್ತಾ ಗುರೋರ್ದ್ರೋಣಸ್ಯ ಭಾರತ ॥೨೮॥

ತಸ್ಯ ಜಿಷ್ಣೋರ್ಬ್ಯಸೀಂ ದೃಷ್ಟ್ವಾ ಶೂನ್ಯಮುಪನಿವೇಶನೇ ।
ಹೃದಯಂ ಮೇ ಮಹಾರಾಜ ನ ಶಾಮ್ಯತಿ ಕದಾಚನ ॥೨೯॥

ಯಾವನು ಯುದ್ಧದಲ್ಲಿ ಶತ್ರುಸೈನ್ಯದ ಮಧ್ಯದಲ್ಲಿದ್ದವನಾಗಿ ಮಹಾರಥರಾದ ಶತ್ರುಗಳನ್ನು ನೂರಾರು ಸಂಖ್ಯೆಯಲ್ಲಿ ಸಂಹಾರಮಾಡಿ ಸಂಪತ್ತನ್ನು ಮತ್ತು ಕನ್ಯೆಯರನ್ನು ಗೆದ್ದನೋ, ಯಾವ ಅಮಿತದ್ಯುತಿಯಾದ ಅವನು ಒಟ್ಟಾಗಿಬಂದ ಯಾದವರನ್ನು ಯುದ್ಧದಲ್ಲಿ ಸೋಲಿಸಿ ಕೃಷ್ಣನ ಸಮ್ಮತಿಯಿಂದ ಸುಭದ್ರೆಯನ್ನು ತಂದನೋ, ಎಲೈ

ಭಾರತನೇ ಯಾವನು ಮಹಾತ್ಮನಾದ ದ್ರುಪದನ ಅರ್ಧರಾಜ್ಯವನ್ನು ತೆಗೆದುಕೊಂಡು ಗುರುಗಳಾದ ದ್ರೋಣರಿಗೆ ಆಚಾರ್ಯದಕ್ಷಿಣೆಯಾಗಿ ಕೊಟ್ಟನೋ, ಅಂತಹ ಅರ್ಜುನನ ಶೂನ್ಯವಾದ ಆಸನವನ್ನು ನೋಡಿ ಎಲೈ ಮಹಾರಾಜನೇ ನನ್ನ ಹೃದಯಕ್ಕೆ ಸಮಾಧಾನವೇ ಉಂಟಾಗುವುದಿಲ್ಲ.

ವನಾದಸ್ಮಾದ್ ವಿವಾಸಂ ತು ರೋಚಯೇಽಹಮರಿಂದಮ ।
ನ ಹಿ ನಸ್ತಮೃತೇ ವೀರಂ ರಮಣೀಯಮಿದಂ ವನಮ್ ॥೬೦॥

ಎಲೈ ಅರಿಂದಮನೇ ಅವನಿಲ್ಲದೆ ನಮಗೆ ಈ ವನವು ರಮಣೀಯವಾಗಿ ತೋರುವುದಿಲ್ಲ. ಈ ವನದಿಂದ ನಾವು ಹೊರಡಬೇಕೆಂದು ನಾನು ಇಷ್ಟಪಡುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ವಿಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತಾರನೆಯ ಅಧ್ಯಾಯ

(ಕಾಮ್ಯಕವನಕ್ಕೆ ನಾರದರ ಆಗಮನ.)

ವೈಶಂಪಾಯನಃ

ಧನಂಜಯೋತ್ಸುಕಾಸ್ತೇ ತು ವನೇ ತಸ್ಮಿನ್ ಮಹಾರಥಾಃ ।
ನ್ಯವಸಂತ ಮಹಾಭಾಗಾ ದ್ರೌಪದ್ಯಾ ಸಹ ಕೃಷ್ಣಯಾ ॥೧॥

ಮಹಾನುಭಾವರೂ ಮಹಾರಥರೂ ಆದ ಪಾಂಡವರು ಆ ಕಾಡಿನಲ್ಲಿ ಅರ್ಜುನನನ್ನು ನೋಡುವ ಉತ್ಸುಕತೆಯುಳ್ಳವರಾಗಿ ದ್ರೌಪದಿಯ ಜೊತೆಯಲ್ಲಿ ವಾಸಮಾಡಿದರು.

ಅಥಾಪಶ್ಯನ್ ಮಹಾತ್ಮಾನಂ ದೇವರ್ಷಿಂ ತತ್ರ ನಾರದಮ್ ।
ದೀಪ್ಯಮಾನಂ ಶ್ರಿಯಾ ಬ್ರಾಹ್ಮ್ಯಾ ಸೂರ್ಯಾಗ್ನಿಸಮತೇಜಸಮ್ ॥೨॥

ಆಗ ಅವರು ಅಲ್ಲಿ ಮಹಾತ್ಮರಾದ ದೇವರ್ಷಿಗಳಾದ ಸೂರ್ಯಾಗ್ನಿಗಳಿಗೆ ಸಮಾನವಾದ ಕಾಂತಿಯನ್ನು ಹೊಂದಿದ ತಮ್ಮ ಬ್ರಹ್ಮಜ್ಞಾನತೇಜಸ್ಸಿನಿಂದ ಬೆಳಗುವ ನಾರದರನ್ನುನೋಡಿದರು.

ದ್ವಿಜೈಃ ಪರಿವೃತಃ ಶ್ರೀಮಾನ್ ಭ್ರಾತೃಭಿಃ ಕುರುನಂದನ ।
ವಿಬಭಾವತಿದೀಪ್ತೌಜಾ ದೇವೈರಿವ ಶತಕ್ರತುಃ ॥೩॥

ಎಲೈ ಕುರುನಂದನನೇ ತಮ್ಮಂದಿರಿಂದಲೂ ಮತ್ತು ಬ್ರಾಹ್ಮಣರಿಂದಲೂ ಸುತ್ತುವರಿಯಲ್ಪಟ್ಟ ಧರ್ಮರಾಜನು ಮಹಾಪರಾಕ್ರಮಶಾಲಿಯಾಗಿ ದೇವತೆಗಳಿಂದ ಸುತ್ತುವರಿಯಲ್ಪಟ್ಟ ಇಂದ್ರನಂತೆ ಕಂಗೊಳಿಸಿದನು.

ಯಥಾ ಚ ವೇದಾನ್ ಸಾವಿತ್ರೀ ಯಾಜ್ಞಸೇನೀ ತಥಾ ಸತೀ ।
ನ ಜಹೌ ಧರ್ಮತಃ ಪಾರ್ಥಾನ್ ಮೇರುಮರ್ಕಪ್ರಭಾ ಯಥಾ ॥೪॥

ಗಾಯತ್ರಿಯು ಎಂದೂ ವೇದವನ್ನು ಹೇಗೆ ಪರಿತ್ಯಜಿಸುವುದಿಲ್ಲವೋ ಸೂರ್ಯಪ್ರಭೆಯು ಹೇಗೆ ಮೇರುಪರ್ವತವನ್ನು ತ್ಯಜಿಸುವುದಿಲ್ಲವೋ ಹಾಗೆ ಸಾಧ್ವಿಯೂ ಧರ್ಮನಿಷ್ಠಳೂ ಆದ ದ್ರೌಪದಿಯು ಪಾಂಡವರನ್ನು ಎಂದೂ ತ್ಯಜಿಸಲಿಲ್ಲ.

ಅರ್ಘ್ಯಂ ಪಾದ್ಯಮಥಾನೀಯ ತ್ವಭ್ಯವಾದಯದಚ್ಯುತಃ ।
ನಾರದಸ್ತು ಮಹಾತೇಜಾಃ ಸ್ವಸ್ತ್ಯ ಸ್ತಿ ತ್ವಭ್ಯಭಾಷತ ॥೫॥

ಪ್ರತಿಗೃಹ್ಯ ಚ ತಾಂ ಪೂಜಾಂ ನಾರದೋ ಭಗವಾನೃಷಿಃ ।
ಆಶ್ವಾಸಯದ್ ಧರ್ಮಸುತಂ ಯುಕ್ತರೂಪಮಿವಾನಘ ॥೬॥

ಎಲೈ ಅನಘನೇ ತನ್ನ ಗುಣಗಳಿಂದ ಚ್ಯುತನಾಗದ ಧರ್ಮರಾಜನು ಅವರಿಗೆ ಅರ್ಘ್ಯಪಾದ್ಯಗಳನ್ನು ನೀಡಿ ನಮಸ್ಕಾರವನ್ನು ಮಾಡಿದನು. ಮಹಾತೇಜಸ್ವಿಗಳಾದ ನಾರದರಾದರೋ ಮಂಗಳವಾಗಲಿ ಎಂದು ಆಶೀರ್ವಾದ ಮಾಡಿದರು. ಪೂಜ್ಯರಾದ ನಾರದಮಹರ್ಷಿಗಳು ಧರ್ಮರಾಜನು ಸಲ್ಲಿಸಿದ ಆ ಪೂಜೆಯನ್ನು ಸ್ವೀಕರಿಸಿ ಆ ಸಂದರ್ಭಕ್ಕೆ ಯೋಗ್ಯವಾದ ಮಾತುಗಳನ್ನು ಆಡಿ ಧರ್ಮರಾಜನನ್ನು ಸಮಾಧಾನಗೊಳಿಸಿದರು.

ಉವಾಚ ಚ ಮಹಾಪ್ರಾಜ್ಞಂ ಧರ್ಮರಾಜಂ ಯುಧಿಷ್ಠಿರಮ್ ।
ಬ್ರೂಹಿ ಧರ್ಮಭೃತಾಂ ಶ್ರೇಷ್ಠ ಕೇನಾರ್ಥಃ ಕಂ ದದಾಮಿ ತೇ ॥೭॥

ಮಹಾಪ್ರಾಜ್ಞನೂ ಧರ್ಮರಾಜನೂ ಆದ ಯುಧಿಷ್ಠಿರನನ್ನು ಕುರಿತು ನಾರದರು ಧರ್ಮಿಷ್ಠರಲ್ಲಿ ಶ್ರೇಷ್ಠನೇ, ನಿನಗೆ ಏನು ಆಗಬೇಕಾಗಿದೆ? ನಾನು ನಿನಗೆ ಏನು ಕೊಡಲಿ ಎಂದು ಹೇಳು ಎಂದು ಹೇಳಿದರು.

ಅಥ ಧರ್ಮಸುತೋ ರಾಜಾ ಪ್ರಣಮ್ಯ ಭ್ರಾತೃಭಿಃಸಹ ।
ಉವಾಚ ಪ್ರಾಂಜಲಿರ್ವಾಕ್ಯಂ ನಾರದಂ ದೇವಸಮ್ಮಿತಮ್ ॥೮॥

ಆನಂತರ ಧರ್ಮರಾಜನು ತನ್ನ ತಮ್ಮಂದಿರ ಜೊತೆಯಲ್ಲಿ ದೇವತೆಗಳಿಗೆ ಸಮಾನರಾದ ಆ ನಾರದರಿಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಈ ಮಾತುಗಳನ್ನು ಆಡಿದನು.

ತ್ವಯಿ ತುಷ್ಟೇ ಮಹಾಭಾಗ ಸರ್ವಲೋಕಾಭಿಪೂಜಿತೇ ।
ಕೃತಮಿತ್ಯೇವ ಮನ್ಯೇಽಹಂ ಪ್ರಸಾದಾತ್ ತವ ಸುವ್ರತ ॥೯॥

ಎಲೈ ಮಹಾನುಭಾವರೇ, ಸುವ್ರತರೇ, ಸರ್ವಲೋಕಪೂಜಿತರಾದ ತಾವು ಸಂತುಷ್ಟರಾದರೆ ತಮ್ಮ ಅನುಗ್ರಹದಿಂದ ನಾನು ಎಲ್ಲವನ್ನೂ ಪಡೆದಿದ್ದೇನೆ ಎಂದು ಭಾವಿಸುತ್ತೇನೆ.

ಯದಿ ತ್ವಹಮನುಗ್ರಾಹ್ಯೋ ಭ್ರಾತೃಭಿಃ ಸಹಿತೋಽನಘ ।
ಸಂದೇಹಂ ಮೇ ಮುನಿಶ್ರೇಷ್ಠ ಹೃದಿಸ್ಥಂ ಛೇತ್ತುಮರ್ಹಸಿ ॥೧೦॥

ಎಲೈ ಮುನಿಶ್ರೇಷ್ಠರೇ, ಪರಿಶುದ್ಧರಾದವರೇ ನೀವು ನನ್ನನ್ನು ಮತ್ತು ನನ್ನ ತಮ್ಮಂದಿರನ್ನು ಅನುಗ್ರಹಿಸುವುದಾದರೆ ನನ್ನ ಮನಸ್ಸಿನಲ್ಲಿರುವ ಒಂದು ಸಂಶಯವನ್ನು ಪರಿಹರಿಸಬೇಕು.

ಪ್ರದಕ್ಷಿಣಾಂ ಯಃ ಪೃಥಿವೀಂ ಕುರುತೇ ತೀರ್ಥತತ್ಪರಃ ।
ಕಂ ಫಲಂ ತಸ್ಯ ಕಾರ್ತ್ಸ್ನ್ಯೇನ ತ್ವಂ ಬ್ರಹ್ಮನ್ ವಕ್ತುಮರ್ಹಸಿ ॥೧೧॥

ಎಲೈ ಬ್ರಾಹ್ಮಣರೇ, ಯಾವನು ತೀರ್ಥಗಳಲ್ಲಿ ಸ್ನಾನಮಾಡುತ್ತಾ ಸಮಗ್ರವಾದ ಪೃಥಿವಿಯನ್ನು ಪ್ರದಕ್ಷಿಣೆಮಾಡುತ್ತಾನೆಯೋ ಅವನಿಗೆ ಏನು ಫಲವೆಂದು ತಾವು ಸಂಪೂರ್ಣವಾಗಿ ಹೇಳಬೇಕು.

ನಾರದಃ

ಶೃಣು ರಾಜನ್ನವಹಿತೋ ಯಥಾ ಭೀಷ್ಮೇಣ ಧೀಮತಾ ।
ಪುಲಸ್ತ್ಯಸ್ಯ ಸಕಾಶಾದ್ ವೈ ಸರ್ವಮೇತದುಪಶ್ರುತಮ್ ॥೧೨॥

ಎಲೈ ರಾಜನೇ ಹಿಂದೆ ಮೇಧಾವಿಯಾದ ಭೀಷ್ಮರು ಪುಲಸ್ತ್ಯರಿಂದ ಕೇಳಿದ ಈ ಎಲ್ಲ ವಿಷಯಗಳನ್ನೂ ನಾನು ಹೇಳುವೆನು ಸಾವಧಾನವಾಗಿ ಕೇಳು.

ಪುರಾ ಭಾಗೀರಥೀತೀರೇ ಭೀಷ್ಮೋ ಧರ್ಮಭೃತಾಂ ವರಃ ।
ಪಿತೃ ಂ ವ್ರತಂ ಸಮಾಸ್ಥಾಯ ನ್ಯವಸನ್ಮುನಿವತ್ ತದಾ ॥೧೩॥

ಹಿಂದೆ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಭೀಷ್ಮನು ಭಾಗೀರಥೀತೀರದಲ್ಲಿ ಪಿತೃಶ್ರಾದ್ಧವನ್ನು ಮಾಡುತ್ತಾ ಋಷಿಯಂತೆ ವಾಸಿಸಿದನು.

ಶುಭೇ ದೇಶೇ ಮಹಾರಾಜ ಪುಣ್ಯೇ ದೇವರ್ಷಿಸೇವಿತೇ ।
ಗಂಗಾದ್ವಾರೇ ಮಹಾತೇಜಾ ದೇವಗಂಧರ್ವಸೇವಿತೇ ॥೧೪॥

ಸ ಪಿತೄಂಸ್ತರ್ಪಯಾಮಾಸ ದೇವಾಂಶ್ಚ ಪರಮದ್ಯುತಿಃ ।
ಋಷೀಂಶ್ಚ ತೋಷಯಾಮಾಸ ವಿಧಿದೃಷ್ಟೇನ ಕರ್ಮಣಾ ॥೧೫॥

ಎಲೈ ಮಹಾರಾಜನೇ, ಮಹಾತೇಜಸ್ವಿಯಾದ ಭೀಷ್ಮನು ದೇವರ್ಷಿಗಳಿಂದಲೂ ಮತ್ತು ದೇವಗಂಧರ್ವರಿಂದಲೂ ಸೇವಿತವಾದ ಹರಿದ್ವಾರದ ಒಂದು ಶುಭಪ್ರದೇಶದಲ್ಲಿ ವಾಸಿಸಿ ಪರಮಕಾಂತಿಯುಕ್ತನಾದ ಅವನು ಪಿತೃಗಳನ್ನು ಮತ್ತು ದೇವತೆಗಳನ್ನು ತೃಪ್ತಿಪಡಿಸಿದನು. ಶಾಸ್ತ್ರವಿಹಿತ ಕರ್ಮಗಳಿಂದ ಋಷಿಗಳನ್ನು ಸಂತೋಷಪಡಿಸಿದನು.

ಕಸ್ಯಚಿತ್ತ್ವಥ ಕಾಲಸ್ಯ ಜಪನ್ನೇವ ಮಹಾತಪಾಃ ।
ದದರ್ಶಾದ್ಭುತಸಂಕಾಶಂ ಪುಲಸ್ತ್ಯಮೃಷಿಸತ್ತಮಮ್ ॥೧೬॥

ಮಹಾತಪಸ್ವಿಯಾದ ಅವನು ಸ್ವಲ್ಪಸಮಯದವರೆಗೆ ಜಪವನ್ನು ಮಾಡುತ್ತಿರುವಾಗಲೇ ಅದ್ಭುತಪ್ರಕಾಶವುಳ್ಳ ಋಷಿಶ್ರೇಷ್ಠರಾದ ಪುಲಸ್ತ್ಯರನ್ನು ನೋಡಿದನು.

ಸ ತಂ ದೃಷ್ಟ್ವೋಗ್ರತಪಸಂ ದೀಪ್ಯಮಾನಮಿವ ಶ್ರಿಯಾ ।
ಪ್ರಹರ್ಷಮತುಲಂ ಲೇಭೇ ವಿಸ್ಮಯಂ ಚ ಪರಂ ಯಯೌ ॥೧೭॥

ಆ ಪುಲಸ್ತ್ಯರು ಉಗ್ರವಾದ ತಪಸ್ಸಿನಲ್ಲಿನಿರತನಾದ ಕಾಂತಿಯಿಂದ ಬೆಳಗುತ್ತಿರುವ ಭೀಷ್ಮನನ್ನು ನೋಡಿ ಅಸದೃಶವಾದ ಸಂತೋಷವನ್ನು ಮತ್ತು ಪರಮ ವಿಸ್ಮಯವನ್ನು ಹೊಂದಿದರು.

ಉಪಸ್ಥಿತಂ ಮಹಾಭಾಗಂ ಪೂಜಯಾಮಾಸ ಭಾರತ ।
ಭೀಷ್ಮೋ ಧರ್ಮಭೃತಾಂ ಶ್ರೇಷ್ಠೋ ವಿಧಿದೃಷ್ಟೇನ ಕರ್ಮಣಾ ॥೧೮॥

ಎಲೈ ಭಾರತನೇ, ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಭೀಷ್ಮನು ಆಗಮಿಸಿದ ಮಹಾನುಭಾವರಾದ ಆ ಋಷಿಗಳನ್ನು ವಿಧ್ಯುಕ್ತವಾದ ಕರ್ಮಗಳಿಂದ ಪೂಜಿಸಿದನು.

ಶಿರಸಾ ಚಾರ್ಘ್ಯಮಾದಾಯ ಶುಚಿಃ ಪ್ರಯತಮಾನಸಃ ।
ನಾಮ ಸಂಕೀರ್ತಯಾಮಾಸ ತಸ್ಮಿನ್ ಬ್ರಹ್ಮರ್ಷಿಸತ್ತಮೇ ॥೧೯॥

ಜಿತಮನಸ್ಕನೂ ಮತ್ತು ಶುಚಿಯೂ ಆದ ಭೀಷ್ಮನು ಆ ಬ್ರಹ್ಮರ್ಷಿಶ್ರೇಷ್ಠರಿಗೆ ಅರ್ಘ್ಯವನ್ನು ಕೊಟ್ಟು ಶಿರಸಾ ನಮಸ್ಕಾರವನ್ನು ಮಾಡಿ ತನ್ನ ಹೆಸರನ್ನು ಹೇಳಿದನು.

ಭೀಷ್ಮೋಽಹಮಸ್ಮಿ ಭದ್ರಂ ತೇ ದಾಸೋಽಸ್ಮಿ ತವ ಸುವ್ರತ ।
ತವ ಸಂದರ್ಶನಾದೇವ ಮುಕ್ತೋಽಹಂ ಸರ್ವಕಿಲ್ಬಿಷೈಃ ॥೨೦॥

ಸುವ್ರತರೇ, ತಮಗೆ ಮಂಗಳವಾಗಲಿ. ನಾನು ಭೀಷ್ಮ ತಮ್ಮ ದಾಸನಾದವನು. ಕೇವಲ ನಿಮ್ಮ ಸಂದರ್ಶನದಿಂದಲೇ ನನ್ನ ಎಲ್ಲ ಪಾಪಗಳೂ ನಾಶಹೊಂದಿವೆ.

ಏವಮುಕ್ತ್ವಾ ಮಹಾರಾಜ ಭೀಷ್ಮೋ ಧರ್ಮಭೃತಾಂ ವರಃ।
ವಾಗ್ಯತಃ ಪ್ರಾಂಜಲಿರ್ಭೂತ್ವಾ ತೂಷ್ಣೀಮಾಸೀದ್ ಯುಧಿಷ್ಠಿರ ॥೨೧॥

ಎಲೈ ಯುಧಿಷ್ಠಿರನೇ, ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಭೀಷ್ಮನು ಹೀಗೆ ಮತನಾಡಿ ಅನಂತರ ಮಾತನ್ನು ನಿಯಂತ್ರಿಸಿ ಕೈಗಳನ್ನು ಮುಗಿದು ಅವರ ಎದುರಿನಲ್ಲಿ ಮೌನವಾಗಿ ನಿಂತನು.

ತಂ ದೃಷ್ಟ್ವಾ ನಿಯಮೇನಾಥ ಸ್ವಾಧ್ಯಾಯಾಮ್ನಾಯಕರ್ಶಿತಮ್ ।
ಭೀಷ್ಮಂ ಕುರುಕುಲಶ್ರೇಷ್ಠಂ ಮುನಿಃ ಪ್ರೀತಮನಾಽಭವತ್ ॥೨೨॥

ವ್ರತನಿಯಮಗಳಿಂದಲೂ ವೇದಾಧ್ಯಯನಗಳಿಂದಲೂ ದಣಿದ ಕುರುಕುಲಶ್ರೇಷ್ಠನಾದ ಭೀಷ್ಮನನ್ನು ನೋಡಿ ಆ ಋಷಿಗಳು ಮನಸ್ಸಿನಲ್ಲಿ ಬಹಳ ಸಂತೋಷವನ್ನು ಪಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೇಳನೆಯ ಅಧ್ಯಾಯ

(ಭೀಷ್ಮರನ್ನು ಕುರಿತು ಪುಲಸ್ತ್ಯರಿಂದ ಪುಷ್ಕರಾದಿ ತೀರ್ಥಮಾಹಾತ್ಮ್ಯವರ್ಣನೆ.)

ಪುಲಸ್ತ್ಯಃ

ಅನೇನ ತವ ಧರ್ಮಜ್ಞ ಪ್ರಶ್ರಯೇಣ ದಮೇನ ಚ ।
ಸತ್ಯೇನ ಚ ಮಹಾಭಾಗ ಪರಿತುಷ್ಟೋಽಸ್ಮಿ ಸರ್ವಶಃ ॥೧॥

ಎಲೈ ಧರ್ಮಜ್ಞನೇ, ಮಹಾನುಭಾವನೇ, ಈ ನಿನ್ನ ವಿನಯ ಮತ್ತು ಇಂದ್ರಿಯನಿಗ್ರಹ ಮತ್ತು ಸತ್ಯದಿಂದ ನಾನು ಪೂರ್ಣವಾಗಿ ಸಂತುಷ್ಟನಾಗಿದ್ದೇನೆ.

ಯಸ್ಯೇದೃಶಸ್ತೇ ಧರ್ಮೋಽಯಂ ಪಿತೃಭಕ್ತ್ಯಾಶ್ರಿತೋಽನಘ ।
ತೇನ ಪಶ್ಯಸಿ ಮಾಂ ಪುತ್ರ ಪ್ರೀತಿಶ್ಚ ಪರಮಾ ತ್ವಯಿ ॥೨॥

ಎಲೈ ಪರಿಶುದ್ಧನಾದವನೇ, ಪಿತೃಭಕ್ತಿಯಲ್ಲಿ ನಿರತನಾಗಿ ಹೀಗೆ ಧರ್ಮವನ್ನು ಆಚರಿಸುತ್ತಿರುವುದರಿಂದಲೇ ನೀನು ನನ್ನನ್ನು ನೋಡುತ್ತಿರುವಿ. ಪುತ್ರನೇ ನನಗೆ ನಿನ್ನಲ್ಲಿ ಬಹಳ ಪ್ರೀತಿಯಿದೆ.

ಅಮೋಘದರ್ಶೀ ಭೀಷ್ಮಾಹಂ ಬ್ರೂಹಿ ಕಿಂ ಕರವಾಣಿ ತೇ ।
ಯದ್ ವಕ್ಷ್ಯಸಿ ಕುರುಶ್ರೇಷ್ಠ ತಸ್ಯ ದಾತಾಸ್ಮಿ ತೇऽನಘ ॥೩॥

ಎಲೈ ಭೀಷ್ಮನೇ, ನಾನು ಅಮೋಘದರ್ಶಿಯಾದವನು. ನಿನಗೆ ಏನು ಮಾಡಲಿ ಎಂದು ಹೇಳು. ಎಲೈ ಕುರುಶ್ರೇಷ್ಠನೇ ಎಲೈ ಪರಿಶುದ್ಧನಾದವನೇ ನೀನು ಕೇಳಿದುದನ್ನು ನಾನು ಕೊಡುವೆನು.

ಭೀಷ್ಮಃ

ಪ್ರೀತೇ ತ್ವಯಿ ಮಹಾಭಾಗ ಸರ್ವಲೋಕಾಭಿಪೂಜಿತೇ ।
ಕೃತಮಿತ್ಯೇವ ಮನ್ಯೇऽಹಂ ಯದಹಂ ದೃಷ್ಟವಾನ್ ಪ್ರಭುಮ್ ॥೪॥

ಎಲೈ ಮಹಾನುಭಾವರೇ ಸರ್ವಲೋಕಪೂಜಿತರಾದ ನೀವು ಪ್ರಸನ್ನರಾದರೆ ನಾನು ಎಲ್ಲವನ್ನೂ ಪಡೆದಿದ್ದೇನೆ ಎಂದು ತಿಳಿಯುತ್ತೇನೆ. ನಿಮ್ಮ ದರ್ಶನವೇ ಒಂದು ದೊಡ್ಡ ಭಾಗ್ಯ.

ಯದಿ ತ್ವಹಮನುಗ್ರಾಹ್ಯಸ್ತವ ಧರ್ಮಭೃತಾಂ ವರ ।
ವಕ್ಷ್ಯಾಮಿ ಹೃತ್ಸ್ಥಂ ಸಂದೇಹಂ ತನ್ಮೇ ತ್ವಂ ವಕ್ತುಮರ್ಹಸಿ ॥೫॥

ಧರ್ಮಿಷ್ಠರಲ್ಲಿ ಶ್ರೇಷ್ಠರಾದವರೆ ನನ್ನಮೇಲೆ ಅನುಗ್ರಹವನ್ನು ಮಾಡುವುದಿದ್ದರೆ ನನ್ನ ಮನಸ್ಸಿನಲ್ಲಿರುವ ಒಂದು ಸಂಶಯವನ್ನು ಹೇಳುತ್ತೇನೆ. ತಾವು ಅದನ್ನು ಪರಿಹರಿಸಬೇಕು.

ಅಸ್ತಿ ಮೇ ಭಗವನ್ ಕಶ್ಚಿತ್ ತೀರ್ಥಾನಿ ಪ್ರತಿ ಸಂಶಯಃ ।
ತಮಹಂ ಶ್ರೋತುಮಿಚ್ಛಾಮಿ ಪೃಥಕ್ ಸಂಕೀರ್ತಿತಂ ತ್ವಯಾ ॥೬॥

ಪೂಜ್ಯರೇ, ನನಗೆ ತೀರ್ಥಗಳ ಬಗ್ಗೆ (ತೀರ್ಥಕ್ಷೇತ್ರಗಳ ಬಗ್ಗೆ) ಒಂದು ಸಂಶಯವಿದೆ. ತಾವು ಅದನ್ನು ಪ್ರತ್ಯೇಕವಾಗಿ ಹೇಳಬೇಕೆಂದು ಕೇಳಲು ನಾನು ಬಯಸುತ್ತೇನೆ.

ಪ್ರದಕ್ಷಿಣಂ ಯಃ ಪೃಥಿವೀಂ ಕರೋತ್ಯಮಿತವಿಕ್ರಮಃ ।
ಕಿಂ ಫಲಂ ತಸ್ಯ ವಿಪ್ರರ್ಷೇ ತನ್ಮೇ ಬ್ರೂಹಿ ತಪೋಧನ ॥೭॥

ಎಲೈ ತಪೋಧನರೇ, ಅಮಿತಪರಾಕ್ರಮಿಯಾದ ಯಾವನು ಭೂಮಿಯನ್ನು ಪ್ರದಕ್ಷಿಣೆಮಾಡುತ್ತಾನೆಯೋ ಎಲೈ ಬ್ರಹ್ಮರ್ಷಿಗಳೇ, ಅವನಿಗೆ ಏನು ಫಲವೆಂದು ನನಗೆ ಹೇಳಿ.

ಪುಲಸ್ತ್ಯಃ

ಹಂತ ತೇ ಕಥಯಿಷ್ಯಾಮಿ ಯದೃಷೀಣಾಂ ಪರಾಯಣಮ್ ।
ತದೇಕಾಗ್ರಮನಾಸ್ತಾತ ಶೃಣು ತೀರ್ಥೇಷು ಯತ್ ಫಲಮ್ ॥೮॥

ಪ್ರೀತಿಪಾತ್ರನೇ, ಋಷಿಗಳಿಗೆ ಬಹಳ ಪ್ರಿಯವಾದ ಈ ವಿಷಯವನ್ನು ಹೇಳುವೆನು. ತೀರ್ಥಸ್ನಾನಗಳಿಂದ ಉಂಟಾಗುವ ಫಲವನ್ನು ಹೇಳುವೆನು. ಪ್ರೀತಿಪಾತ್ರನೇ ಏಕಾಗ್ರವಾದ ಮನಸ್ಸಿನಿಂದ ಕೇಳು.

ಯಸ್ಯ ಹಸ್ತೌ ಚ ಪಾದೌ ಚ ಮನಶ್ಚೈವ ಸುಸಂಯತಮ್ ।
ವಿದ್ಯಾ ತಪಶ್ಚ ಕೀರ್ತಿಶ್ಚ ಸ ತೀರ್ಥಫಲಮಶ್ನುತೇ ॥೯॥

ಯಾವನಿಗೆ ಹಸ್ತಗಳು ಪಾದಗಳು ಮತ್ತು ಮನಸ್ಸು ನಿಯಂತ್ರಿತವಾಗಿರುತ್ತವೆಯೋ ಮತ್ತು ಯಾವನು ವಿದ್ಯೆಯನ್ನು ತಪಸ್ಸನ್ನು ಕೀರ್ತಿಯನ್ನು ಸಂಪಾದಿಸಿರುತ್ತಾನೆಯೋ ಅವನು ತೀರ್ಥಫಲವನ್ನು ಪಡೆಯುತ್ತಾನೆ.

ಪ್ರತಿಗ್ರಹಾದಪಾವೃತ್ತಃ ಸಂತುಷ್ಟೋ ಯೇನ ಕೇನ ಚತ್ ।
ಅಹಂಕಾರನಿವೃತ್ತಶ್ಚ ಸ ತೀರ್ಥಫಲಮಶ್ನುತೇ ॥೧೦॥

ಯಾರಿಂದಲೂ ದಾನವನ್ನು ಸ್ವೀಕರಿಸಿದೆ ದೈವಲಬ್ಧವಾದುದರಿಂದ ಸಂತುಷ್ಟನಾಗಿ ನಿರಹಂಕಾರಿಯಾದವನು ತೀರ್ಥದ ಫಲವನ್ನು ಪಡೆಯುತ್ತಾನೆ.

ಅಕಲ್ಕಕೋ ನಿರಾರಂಭೋ ಲಘ್ವಾಹಾರೋ ಜಿತೇಂದ್ರಿಯಃ ।
ವಿಮುಕ್ತಃ ಸರ್ವಪಾಪೇಭ್ಯಃ ಸ ತೀರ್ಥಫಲಮಶ್ನುತೇ ॥೧೧॥

ಯಾವನು ಶ್ರಮಪರಿಹಾರಕ್ಕಾಗಿ ಔಷಧಿಯನ್ನಾಗಲೀ ಅಥವಾ ರಸಾಯನವನ್ನಾಗಲೀ ತೆಗೆದುಕೊಳ್ಳದೆ ತೀರ್ಥಯಾತ್ರೆಯ ಸಮಯದಲ್ಲಿ ಯಾವ ಉದ್ಯೋಗವನ್ನೂ ಮಾಡದೆ ಲಘುವಾದ ಆಹಾರವನ್ನು ಸೇವಿಸಿ ಜಿತೇಂದ್ರಿಯನಾಗಿ

ಎಲ್ಲಾ ಪಾಪಾಚರಣೆಗಳಿಂದ ದೂರವಿರುತ್ತಾನೆಯೋ ಅವನಿಗೆ ತೀರ್ಥಫಲವು ಲಭಿಸುತ್ತದೆ.

ಅಕ್ರೋಧನಶ್ಚ ರಾಜೇಂದ್ರ ಸತ್ಯಶೀಲೋ ದೃಢವ್ರತಃ ।
ಆತ್ಮೋಪಮಶ್ಚ ಭೂತೇಷು ಸ ತೀರ್ಥಫಲಮಶ್ನುತೇ ॥೧೨॥

ಎಲೈ ರಾಜೇಂದ್ರನೇ, ಯಾವನು ಕ್ರೋಧವನ್ನು ಬಿಟ್ಟು ಸತ್ಯಶೀಲನಾಗಿ ಒಳ್ಳೆಯ ವ್ರತವನ್ನು ಧರಿಸಿ ಇತರ ಪ್ರಾಣಿಗಳನ್ನು ತನ್ನಂತೆ ನೋಡುತ್ತಾನೆಯೋ ಅವನು ತೀರ್ಥಫಲವನ್ನು ಪಡೆಯುತ್ತಾನೆ.

ಋಷಿಭಿಃ ಕೃತವಃ ಪ್ರೋಕ್ತಾ ವೇದೇಷ್ವೇವ ಯಥಾಕ್ರಮಮ್।
ಫಲಂ ಚೈವ ಯಥಾತತ್ತ್ವಂ ಪ್ರೇತ್ಯ ಚೇಹ ಚ ಸರ್ವಶಃ ॥೧೩॥

ಋಷಿಗಳು ವೇದದಲ್ಲಿ ಕ್ರಮಪೂರ್ವಕವಾದ ಅನೇಕ ಯಾಗ ಯಜ್ಞಗಳನ್ನು ಹೇಳಿದ್ದಾರೆ. ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಅದರಿಂದ ಉಂಟಾಗುವ ಎಲ್ಲರೀತಿಯ ಫಲಗಳನ್ನು ಯಥಾರ್ಥವಾಗಿ ತಿಳಿಸಿದ್ದಾರೆ.

ನ ತೇ ಶಕ್ಯಾ ದರಿದ್ರೇಣ ಯಜ್ಞಾಃ ಪ್ರಾಪ್ತುಂ ಮಹೀಪತೇ ।
ಬಹೂಪಕರಣಾ ಯಜ್ಞಾ ನಾನಾಸಂಭಾರವಿಸ್ತರಾಃ ॥೧೪॥

ಪ್ರಾಪ್ಯಂತೇ ಪಾರ್ಥಿವೈರೇತೈಃ ಸಮೃದ್ಧೈರ್ವಾ ನರೈಃ ಕ್ವಚಿತ್ ।
ನಾರ್ಥ್ಯಾನೋಪಕರಣೈರೇಕಾತ್ಮಭರಸಂಹತೈಃ ॥೧೫॥

ಎಲೈ ರಾಜನೇ, ಆ ಯಜ್ಞಗಳು ಅನೇಕ ಉಪಕರಣಗಳನ್ನು ಅಪೇಕ್ಷಿಸುತ್ತವೆ. ಮತ್ತು ಅನೇಕ ಪದಾರ್ಥಗಳ ಸಿದ್ಧತೆಯನ್ನು ಅಪೇಕ್ಷಿಸುತ್ತವೆ, ದರಿದ್ರನಾದವನು ಅಂತಹ ಯಜ್ಞವನ್ನು ಮಾಡಲು ಸಾಧ್ಯವಿಲ್ಲ. ಆ ಯಜ್ಞಗಳು ಶ್ರೀಮಂತರಾದ ಮನುಷ್ಯರಿಂದಾಗಲೀ ಅಥವಾ ರಾಜರಿಂದಲಾಗಲೀ ಮಾಡಲ್ಪಡುತ್ತವೆ. ಧನದಿಂದಲೂ ಉಪಕರಣಗಳಿಂದಲೂ ಮತ್ತು ಬೇರೆ ಜನರ ಸಹಾಯದಿಂದಲೂ ಕೂಡಿಕೊಳ್ಳದವರು ಮತ್ತು ಏಕಾಕಿಗಳಾದವರು ಅಂತಹ ಯಜ್ಞಗಳನ್ನು ಆಚರಿಸಲು ಸಾಧ್ಯವಿಲ್ಲ.

ಯೋ ದರಿದ್ರೈರಪಿ ವಿಧಿಃ ಶಕ್ಯಃ ಪ್ರಾಪ್ತುಂ ನರೇಶ್ವರ ।
ತುಲ್ಯೋ ಯಜ್ಞಫಲೈಃ ಪುಣ್ಯೈಃ ತಂ ನಿಬೋಧ ಯುಧಾಂವರ ॥೧೬॥

ಎಲೈ ರಾಜನೇ, ಎಲೈ ಯೋಧರಲ್ಲಿ ಶ್ರೇಷ್ಠನೇ, ಯಾವ ವಿಧಿಯನ್ನು ದರಿದ್ರರಾದವರೂ ಆಚರಿಸಬಹುದೋ ಮತ್ತು ಏನನ್ನು ಆಚರಿಸಿದರೆ ಉಂಟಾಗುವ ಫಲವು ಯಜ್ಞಗಳ ಫಲಕ್ಕೆ ಸಮವಾಗಿರುತ್ತದೆಯೋ ಅವುಗಳನ್ನು ಹೇಳುತ್ತೇನೆ ತಿಳಿದುಕೋ.

ಋಷೀಣಾಂ ಪರಮಂ ಗುಹ್ಯಮಿದಂ ಭರತಸತ್ತಮ ।
ತೀರ್ಥಾಭಿಗಮನಂ ಪುಣ್ಯಂ ಯಜ್ಞೈರಪಿ ವಿಶಿಷ್ಯತೇ ॥೧೭॥

ಅನುಪೋಷ್ಯ ತ್ರಿರಾತ್ರಾಣಿ ತೀರ್ಥಾನ್ಯನವಗಾಹ್ಯ ಚ ।
ಅದತ್ತ್ವಾ ಕಾಂಚನಂ ಗಾಶ್ಚ ದರಿದ್ರೋ ನಾಮ ಜಾಯತೇ ॥೧೮॥

ಎಲೈ ಭರತಸತ್ತಮನೇ, ಇದು ಋಷಿಗಳು ತಿಳಿದಿರುವ ಪರಮರಹಸ್ಯ. ತೀರ್ಥಯಾತ್ರೆಯನ್ನು ಮಾಡುವುದರಿಂದ ಬರುವ ಪುಣ್ಯವು ಯಜ್ಞದಿಂದ ಉಂಟಾಗುವ ಪುಣ್ಯವನ್ನು ಮೀರಿರುತ್ತದೆ. ದಶಮಿ ಏಕಾದಶಿ ದ್ವಾದಶಿ ಈ ಮೂರುರಾತ್ರಿಗಳಲ್ಲಿ ಉಪವಾಸವನ್ನು ಮಾಡದೆ ತೀರ್ಥಗಳಲ್ಲಿ ಸ್ನಾನವನ್ನುಮಾಡದೆ ಗೋದಾನವನ್ನು ಮಾಡದೆ ಮತ್ತು ಹಿರಣ್ಯದಾನವನ್ನು ಮಾಡದೆ ಜನರು ದರಿದ್ರರಾಗಿ ಹುಟ್ಟುತ್ತಾರೆ.

ಅಗ್ನಿಷ್ಟೋಮಾದಿಭಿರ್ಯಜ್ಞೈರಿಷ್ಟ್ವಾ ವಿಪುಲದಕ್ಷಿಣೈಃ ।
ನ ತತ್ಫಲಮವಾಪ್ನೋತಿ ತೀರ್ಥಾಭಿಗಮನೇನ ಯತ್ ॥೧೯॥

ತೀರ್ಥದಲ್ಲಿ ಸ್ನಾನಮಾಡುವುದರಿಂದ ಯಾವ ಫಲವು ಉಂಟಾಗುತ್ತದೆಯೋ ಆ ಫಲವು ಬಹಳ ದಕ್ಷಿಣೆಗಳನ್ನು ಕೊಟ್ಟುಮಾಡಿದ ಅಗ್ನಿಷ್ಟೋಮಾದಿ ಯಜ್ಞಗಳಿಂದಲೂ ಆಗುವುದಿಲ್ಲ.

ತ್ರಿಲೋಕದೇವದೇವಸ್ಯ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಪುಷ್ಕರಂ ನಾಮ ವಿಖ್ಯಾತಂ ಮಹಾಭಾಗಃ ಸಮಾವಿಶೇತ್ ॥೨೦॥

ಮೂರುಲೋಕಗಳಿಲ್ಲಯೂ ಶ್ರುತವಾದ ಮೂರು ಲೋಕಗಳ ದೇವದೇವನಾದ ವಿಷ್ಣುವಿನ ಪುಷ್ಕರವೆಂಬ ಪ್ರಸಿದ್ಧವಾದ ಸರೋವರವಿದೆ. ಪುಣ್ಯಶಾಲಿಯಾದವನು ಅಲ್ಲಿ ಸ್ನಾನವನ್ನು ಮಾಡಬೇಕು.

ದಶಕೋಟಿಸಹಸ್ರಾಣಿ ತೀರ್ಥಾನಾಂ ವೈ ಮಹೀಪತೇ ।
ಸಾನ್ನಿಧ್ಯಂ ಪುಷ್ಕರೇ ಯೇಷಾಂ ತ್ರಿಸಂಧ್ಯಂ ಕುರುನಂದನ ॥೨೧॥

ಎಲೈ ಕುರುನಂದನನೇ ಎಲೈ ರಾಜನೇ ಮೂರುಸಂಧ್ಯೆಗಳಲ್ಲಿಯೂ ಆ ಪುಷ್ಕರಕ್ಷೇತ್ರದಲ್ಲಿ ಹತ್ತು ಕೋಟಿ ಸಹಸ್ರತೀರ್ಥಗಳ ಸನ್ನಿಧಾನವಿರುತ್ತದೆ.

ಆದಿತ್ಯಾ ವಸವೋ ರುದ್ರಾಃ ಸಾಧ್ಯಾಶ್ಚ ಸಮರುದ್ಗಣಾಃ ।
ಗಂಧರ್ವಾಪ್ಸರಸಶ್ಚೈವ ನಿತ್ಯಂ ಸನ್ನಿಹಿತಾ ವಿಭೋ ॥೨೨॥

ಎಲೈ ವಿಭುವೇ ಆದಿತ್ಯರು ವಸುಗಳು ರುದ್ರರು ಮರುದ್ಗಣದಿಂದ ಕೂಡಿದ ಸಾಧ್ಯರು ಗಂಧರ್ವರು ಮತ್ತು ಅಪ್ಸರೆಯರು ಅಲ್ಲಿನಿತ್ಯವೂ ಸನ್ನಿಹಿತರಾಗಿರುತ್ತಾರೆ.

ಯತ್ರ ದೇವಾಸ್ತಪಸ್ತಪ್ತ್ವಾ ದೈತ್ಯಾ ಬ್ರಹ್ಮರ್ಷಯಸ್ತಥಾ ।
ದಿವ್ಯಯೋಗಾ ಮಹಾರಾಜ ಪುಣ್ಯೇನ ಮಹತಾऽನ್ವಿತಾಃ ।
ತಪೋವಿಶೇಷೈರ್ಬಹುಭಿಃ ಸ್ಥಾನಾನ್ಯಾಪುರ್ಮಹೌಜಸಃ ॥೨೩॥

ಎಲೈ ಮಹಾರಾಜನೇ, ಅಲ್ಲಿದೇವತೆಗಳು ದೈತ್ಯರು ಬ್ರಹ್ಮರ್ಷಿಗಳು ತಪಸ್ಸನ್ನುಮಾಡಿ ಬಹಳ ಪುಣ್ಯವನ್ನು ಸಂಪಾದಿಸಿ ದಿವ್ಯಯೋಗವನ್ನು ಪಡೆದು ವಿಶೇಷವಾದ ಅನೇಕ ತಪಸ್ಸಿನಿಂದ ಆ ಮಹಾಸಾಮರ್ಥ್ಯಶಾಲಿಗಳಾದ ಅವರು ಶ್ರೇಷ್ಠವಾದ ಸ್ಥಾನಗಳನ್ನು ಪಡೆದರು.

ಮನಸಾऽಪ್ಯಭಿಕಾಮಸ್ಯ ಪುಷ್ಕರಾಣಿ ಮನಸ್ವಿನಃ ।
ಪೂಯಂತೇ ಸರ್ವಪಾಪಾನಿ ನಾಕಪೃಷ್ಠೇ ಚ ಪೂಜ್ಯತೇ ॥೨೪॥

ಯಾವ ಧೀರನಾದ ಪುರುಷನು ಮನಸ್ಸಿನಲ್ಲಾದರೂ ಸಹ ಮೂರು ಪುಷ್ಕರಗಳನ್ನು ಸ್ಮರಿಸುತ್ತಾನೆಯೋ ಅವನ ಪಾಪಗಳೆಲ್ಲವೂ ನಾಶಹೊಂದುತ್ತವೆ. ಅವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಯೋ ದರಿದ್ರೈರಪಿ ವಿಧಿಃ ಶಕ್ಯಃ ಪ್ರಾಪ್ತುಂ ನರೇಶ್ವರ ।
ತುಲ್ಯೋ ಯಜ್ಞಫಲೈಃ ಪುಣ್ಯೈಃ ತಂ ನಿಬೋಧ ಯುಧಾಂವರ ॥೧೬॥

ಎಲೈ ರಾಜನೇ, ಎಲೈ ಯೋಧರಲ್ಲಿ ಶ್ರೇಷ್ಠನೇ, ಯಾವ ವಿಧಿಯನ್ನು ದರಿದ್ರರಾದವರೂ ಆಚರಿಸಬಹುದೋ ಮತ್ತು ಏನನ್ನು ಆಚರಿಸಿದರೆ ಉಂಟಾಗುವ ಫಲವು ಯಜ್ಞಗಳ ಫಲಕ್ಕೆ ಸಮವಾಗಿರುತ್ತದೆಯೋ ಅವುಗಳನ್ನು ಹೇಳುತ್ತೇನೆ ತಿಳಿದುಕೋ.

ಋಷೀಣಾಂ ಪರಮಂ ಗುಹ್ಯಮಿದಂ ಭರತಸತ್ತಮ ।
ತೀರ್ಥಾಭಿಗಮನಂ ಪುಣ್ಯಂ ಯಜ್ಞೈರಪಿ ವಿಶಿಷ್ಯತೇ ॥೧೭॥

ಅನುಪೋಷ್ಯ ತ್ರಿರಾತ್ರಾಣಿ ತೀರ್ಥಾನ್ಯನವಗಾಹ್ಯ ಚ ।
ಅದತ್ತ್ವಾ ಕಾಂಚನಂ ಗಾಶ್ಚ ದರಿದ್ರೋ ನಾಮ ಜಾಯತೇ ॥೧೮॥

ಎಲೈ ಭರತಸತ್ತಮನೇ, ಇದು ಋಷಿಗಳು ತಿಳಿದಿರುವ ಪರಮರಹಸ್ಯ. ತೀರ್ಥಯಾತ್ರೆಯನ್ನು ಮಾಡುವುದರಿಂದ ಬರುವ ಪುಣ್ಯವು ಯಜ್ಞದಿಂದ ಉಂಟಾಗುವ ಪುಣ್ಯವನ್ನು ಮೀರಿರುತ್ತದೆ. ದಶಮಿ ಏಕಾದಶಿ ದ್ವಾದಶಿ ಈ ಮೂರುರಾತ್ರಿಗಳಲ್ಲಿ ಉಪವಾಸವನ್ನು ಮಾಡದೆ ತೀರ್ಥಗಳಲ್ಲಿ ಸ್ನಾನವನ್ನುಮಾಡದೆ ಗೋದಾನವನ್ನು ಮಾಡದೆ ಮತ್ತು ಹಿರಣ್ಯದಾನವನ್ನು ಮಾಡದೆ ಜನರು ದರಿದ್ರರಾಗಿ ಹುಟ್ಟುತ್ತಾರೆ.

ಅಗ್ನಿಷ್ಟೋಮಾದಿಭಿರ್ಯಜ್ಞೈರಿಷ್ಟ್ವಾ ವಿಪುಲದಕ್ಷಿಣೈಃ ।
ನ ತತ್ಫಲಮವಾಪ್ನೋತಿ ತೀರ್ಥಾಭಿಗಮನೇನ ಯತ್ ॥೧೯॥

ತೀರ್ಥದಲ್ಲಿ ಸ್ನಾನಮಾಡುವುದರಿಂದ ಯಾವ ಫಲವು ಉಂಟಾಗುತ್ತದೆಯೋ ಆ ಫಲವು ಬಹಳ ದಕ್ಷಿಣೆಗಳನ್ನು ಕೊಟ್ಟುಮಾಡಿದ ಅಗ್ನಿಷ್ಟೋಮಾದಿ ಯಜ್ಞಗಳಿಂದಲೂ ಆಗುವುದಿಲ್ಲ.

ತ್ರಿಲೋಕದೇವದೇವಸ್ಯ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಪುಷ್ಕರಂ ನಾಮ ವಿಖ್ಯಾತಂ ಮಹಾಭಾಗಃ ಸಮಾವಿಶೇತ್ ॥೨೦॥

ಮೂರುಲೋಕಗಳಿಲ್ಲಯೂ ಶ್ರುತವಾದ ಮೂರು ಲೋಕಗಳ ದೇವದೇವನಾದ ವಿಷ್ಣುವಿನ ಪುಷ್ಕರವೆಂಬ ಪ್ರಸಿದ್ಧವಾದ ಸರೋವರವಿದೆ. ಪುಣ್ಯಶಾಲಿಯಾದವನು ಅಲ್ಲಿ ಸ್ನಾನವನ್ನು ಮಾಡಬೇಕು.

ದಶಕೋಟಿಸಹಸ್ರಾಣಿ ತೀರ್ಥಾನಾಂ ವೈ ಮಹೀಪತೇ ।
ಸಾನ್ನಿಧ್ಯಂ ಪುಷ್ಕರೇ ಯೇಷಾಂ ತ್ರಿಸಂಧ್ಯಂ ಕುರುನಂದನ ॥೨೧॥

ಎಲೈ ಕುರುನಂದನನೇ ಎಲೈ ರಾಜನೇ ಮೂರುಸಂಧ್ಯೆಗಳಲ್ಲಿಯೂ ಆ ಪುಷ್ಕರಕ್ಷೇತ್ರದಲ್ಲಿ ಹತ್ತು ಕೋಟಿ ಸಹಸ್ರತೀರ್ಥಗಳ ಸನ್ನಿಧಾನವಿರುತ್ತದೆ.

ಆದಿತ್ಯಾ ವಸವೋ ರುದ್ರಾಃ ಸಾಧ್ಯಾಶ್ಚ ಸಮರುದ್ಗಣಾಃ ।
ಗಂಧರ್ವಾಪ್ಸರಸಶ್ಚೈವ ನಿತ್ಯಂ ಸನ್ನಿಹಿತಾ ವಿಭೋ ॥೨೨॥

ಎಲೈ ವಿಭುವೇ ಆದಿತ್ಯರು ವಸುಗಳು ರುದ್ರರು ಮರುದ್ಗಣದಿಂದ ಕೂಡಿದ ಸಾಧ್ಯರು ಗಂಧರ್ವರು ಮತ್ತು ಅಪ್ಸರೆಯರು ಅಲ್ಲಿ ನಿತ್ಯವೂ ಸನ್ನಿಹಿತರಾಗಿರುತ್ತಾರೆ.

ಯತ್ರ ದೇವಾಸ್ತಪಸ್ತಪ್ತ್ವಾ ದೈತ್ಯಾ ಬ್ರಹ್ಮರ್ಷಯಸ್ತಥಾ ।
ದಿವ್ಯಯೋಗಾ ಮಹಾರಾಜ ಪುಣ್ಯೇನ ಮಹತಾऽನ್ವಿತಾಃ ।
ತಪೋವಿಶೇಷೈರ್ಬಹುಭಿಃ ಸ್ಥಾನಾನ್ಯಾಪುರ್ಮಹೌಜಸಃ ॥೨೩॥

ಎಲೈ ಮಹಾರಾಜನೇ, ಅಲ್ಲಿ ದೇವತೆಗಳು ದೈತ್ಯರು ಬ್ರಹ್ಮರ್ಷಿಗಳು ತಪಸ್ಸನ್ನುಮಾಡಿ ಬಹಳ ಪುಣ್ಯವನ್ನು ಸಂಪಾದಿಸಿ ದಿವ್ಯಯೋಗವನ್ನು ಪಡೆದು ವಿಶೇಷವಾದ ಅನೇಕ ತಪಸ್ಸಿನಿಂದ ಆ ಮಹಾಸಾಮರ್ಥ್ಯಶಾಲಿಗಳಾದ ಅವರು ಶ್ರೇಷ್ಠವಾದ ಸ್ಥಾನಗಳನ್ನು ಪಡೆದರು.

ಮನಸಾऽಪ್ಯಭಿಕಾಮಸ್ಯ ಪುಷ್ಕರಾಣಿ ಮನಸ್ವಿನಃ ।
ಪೂಯಂತೇ ಸರ್ವಪಾಪಾನಿ ನಾಕಪೃಷ್ಠೇ ಚ ಪೂಜ್ಯತೇ ॥೨೪॥

ಯಾವ ಧೀರನಾದ ಪುರುಷನು ಮನಸ್ಸಿನಲ್ಲಾದರೂ ಸಹ ಮೂರು ಪುಷ್ಕರಗಳನ್ನು ಸ್ಮರಿಸುತ್ತಾನೆಯೋ ಅವನ ಪಾಪಗಳೆಲ್ಲವೂ ನಾಶಹೊಂದುತ್ತವೆ. ಅವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತಸ್ಮಿಂಸ್ತೀರ್ಥೇ ಮಹಾಭಾಗ ನಿತ್ಯಮೇವ ಪಿತಾಮಹಃ ।
ಉವಾಸ ಪರಮಪ್ರೀತೋ ದೇವದಾನವಸೇವಿತಃ ॥೨೫॥

ಎಲೈ ಮಹಾನುಭಾವನೇ, ಆ ತೀರ್ಥದಲ್ಲಿ ದೇವತೆಗಳಿಂದಲೂ ದಾನವರಿಂದಲೂ ಪೂಜಿತನಾದ ಪಿತಾಮಹನಾದ ಬ್ರಹ್ಮನು ಬಹಳ ಸಂತೋಷದಿಂದ ನಿತ್ಯವೂ ವಾಸಮಾಡುತ್ತಾನೆ.

ಪುಷ್ಕರೇಷು ಮಹಾಭಾಗ ದೇವಾಃ ಸರ್ಷಿಗಣಾಃ ಪುರಾ ।
ಸಿದ್ಧಿಂ ಸುಮಹತೀಂ ಪ್ರಾಪ್ತಾಃ ಪುಣ್ಯೇನ ಮಹತಾऽನ್ವಿತಾಃ ॥೨೬॥

ಎಲೈ ಮಹಾನುಭಾವನೇ, ಹಿಂದೆ ದೇವತೆಗಳು ಮತ್ತು ಋಷಿಗಣಗಳು ಪುಷ್ಕರದಲ್ಲಿ ಸ್ನಾನವನ್ನು ಮಾಡಿ ಮಹಾಪುಣ್ಯವನ್ನು ಗಳಿಸಿದವರಾಗಿ ದೊಡ್ಡ ಸಿದ್ಧಿಯನ್ನು ಪಡೆದರು.

ತತ್ರಾಭಿಷೇಕಂ ಯಃ ಕುರ್ಯಾತ್ ಪಿತೃದೇವಾರ್ಚನೇ ರತಃ ।
ಸೋऽಶ್ವಮೇಧಮವಾಪ್ನೋತಿ ಬ್ರಹ್ಮಲೋಕೇ ಚ ಪೂಜ್ಯತೇ ॥೨೭॥

ಅಲ್ಲಿ ಯಾವ ಪುರುಷನು ಸ್ನಾನವನ್ನು ಮಾಡಿ ಪಿತೃದೇವತಾರ್ಚನೆಯನ್ನು ಮಾಡುತ್ತಾನೆಯೋ ಅವನಿಗೆ ಅಶ್ವಮೇಧ ಯಾಗದ ಫಲವುಂಟಾಗಿ ಅವನು ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಅಪ್ಯೇಕಂ ಭೋಜಯೇದ್ ವಿಪ್ರಂ ಪುಷ್ಕರಾರಣ್ಯಮಾಶ್ರಿತಃ ।
ತೇನಾಸೌ ಕರ್ಮಣಾ ಭೀಷ್ಮ ಪ್ರೇತ್ಯ ಚೇಹ ಚ ಮೋದತೇ ॥೨೮॥

ಪುಷ್ಕರಾರಣ್ಯಕ್ಷೇತ್ರದಲ್ಲಿ ಒಬ್ಬ ಬ್ರಾಹ್ಮಣನಿಗಾದರೂ ಭೋಜನವನ್ನು ಮಾಡಿಸಬೇಕು. ಎಲೈ ಭೀಷ್ಮನೇ, ಆ ಕರ್ಮದಿಂದ ಅವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ಶಾಕೈರ್ಮೂಲೈಃ ಫಲೈರ್ವಾऽಪಿ ಯೇನ ವರ್ತಯತೇ ಸ್ವಯಮ್ ।
ತದ್ದೈ ದದ್ಯಾದ್ ಬ್ರಾಹ್ಮಣಾಯ ಶ್ರದ್ಧಾವಾನನಸೂಯಕಃ ।
ತೇನೈವ ಪ್ರಾಪ್ನುಯಾತ್ ಪ್ರಾಜ್ಞೋ ಹಯಮೇಧಫಲಂ ನರಃ ॥೨೯॥

ಗೆಡ್ಡೆಯನ್ನಾಗಲೀ ಗೆಣಸುಗಳನ್ನಾಗಲೀ ಅಥವಾ ಫಲಗಳನ್ನಾಗಲೀ ತಾನು ಏನನ್ನು ಉಪಜೀವಿಸುತ್ತಾನೋ ಅದನ್ನೇ ಬ್ರಾಹ್ಮಣರಿಗೆ ಶ್ರದ್ಧೆಯಿಂದ ಕೊಡಬೇಕು. ಅದರಿಂದ ಆ ಪ್ರಾಜ್ಞನಾದ ಪುರುಷನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾ ರಾಜಸತ್ತಮ ।
ನ ಯೋನಿಂ ವ್ರಜಂತ್ಯೇತೇ ಸ್ನಾತಾಸ್ತೀರ್ಥೇಷು ಭಾರತ ॥೩೦॥

ಎಲೈ ರಾಜಶ್ರೇಷ್ಠನೇ, ಬ್ರಾಹ್ಮಣನಾಗಲೀ ಅಥವಾ ಕ್ಷತ್ರಿಯನಾಗಲೀ ಅಥವಾ ವೈಶ್ಯನಾಗಲೀ ಅಥವಾ ಶೂದ್ರನಾಗಲೀ ಯಾವನು ಪುಷ್ಕರತೀರ್ಥಗಳಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನಿಗೆ ದುಷ್ಪಯೋನಿಗಳು ಉಂಟಾಗುವುದಿಲ್ಲ. .

ಕಾರ್ತಿಕ್ಯಾಂ ತು ವಿಶೇಷೇಣ ಯೋಽಭಿಗಚ್ಛತಿ ಪುಷ್ಕರಮ್ ।
ಫಲಂ ತತ್ಕಾಕ್ಷಯಂ ತಸ್ಯ ಲಭತೇ ಭರತರ್ಷಭ ॥೩೧॥

ಎಲೈ ಭರತಶ್ರೇಷ್ಠನೇ, ಯಾವನು ಕಾರ್ತಿಕಮಾಸ ಅಮಾವಾಸ್ಯೆಯಂದು ಪುಷ್ಕರಕ್ಕೆ ಹೋಗಿ ಸ್ನಾನಮಾಡುವನೋ ಅವನು ಅಕ್ಷಯ ಫಲವನ್ನು ಪಡೆಯುವನು.

ಸಾಯಂಪ್ರಾತಃ ಸ್ಮರೇದ್ಯಸ್ತು ಪುಷ್ಕರಾಣಿ ಕೃತಾಂಜಲಿಃ ।
ಉಪಸ್ಪೃಷ್ಟಂ ಭವೇತ್ ತೇನ ಸರ್ವತೀರ್ಥೇಷು ಭಾರತ ।
ಪ್ರಾಪ್ನುಯಾಚ್ಚ ನರೋ ಲೋಕಾನ್ ಬ್ರಹ್ಮಣಃ ಸದನೇಽಕ್ಷಯಾನ್ ॥೩೨॥

ಎಲೈ ಭಾರತನೇ, ಯಾವನು ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ಕೈಗಳನ್ನು ಜೋಡಿಸಿ ಪುಷ್ಕರಗಳನ್ನು ಸ್ಮರಿಸಿ ತಾನು ಇದ್ದಲ್ಲಿಯೇ ಸ್ನಾನವನ್ನು ಮಾಡುತ್ತಾನೆಯೋ ಅವನಿಗೆ ಸರ್ವತೀರ್ಥಗಳಲ್ಲಿ ಸ್ನಾನಮಾಡಿದ ಫಲವು ದೊರೆಯುತ್ತದೆ. ಅವನು ಬ್ರಹ್ಮದೇವರ ಲೋಕದಲ್ಲಿ ಅಕ್ಷಯ ಸ್ಥಾನಗಳನ್ನು ಪಡೆಯುತ್ತಾನೆ.

ಜನ್ಮಪ್ರಭೃತಿ ಯತ್ ಪಾಪಂ ಸ್ತ್ರಿಯೋ ವಾ ಪುರುಷಸ್ಯ ವಾ ।
ಪುಷ್ಕರೇ ಸ್ನಾತಮಾತ್ರಸ್ಯ ತದಶೇಷಂ ಪ್ರಣಶ್ಯತಿ ॥೩೩॥

ಯಾವ ಪುರುಷನಾಗಲೀ ಅಥವಾ ಸ್ತ್ರೀಯೇ ಆಗಲಿ ಹುಟ್ಟಿದಾಗಿನಿಂದಲೂ ಮಾಡಿದ ಪಾಪಗಳು ಪುಷ್ಕರಕ್ಷೇತ್ರದಲ್ಲಿ ಕೇವಲ ಸ್ನಾನವನ್ನು ಮಾಡುವುದರಿಂದ ನಿಶ್ಶೇಷವಾಗಿ ನಾಶವನ್ನು ಹೊಂದುತ್ತವೆ.

ಯಥಾ ಸುರಾಣಾಂ ಸರ್ವೇಷಾಮಾದಿಸ್ತು ಮಧುಸೂದನಃ ।
ತಥೈವ ಪುಷ್ಕರಂ ರಾಜನ್ ತೀರ್ಥಾನಾಮಾದಿರುಚ್ಯತೇ ॥೩೪॥

ಎಲೈ ರಾಜನೇ ಹೇಗೆ ಎಲ್ಲ ದೇವತೆಗಳಿಗೂ ಮಧುಸೂದನನೇ ಮೂಲವೋ ಹಾಗೆ ಎಲ್ಲತೀರ್ಥಗಳಿಗೂ ಪುಷ್ಕರವೇ ಮೂಲವೆಂದು ಹೇಳಲ್ಪಡುತ್ತದೆ.

ಉಷ್ಯ ದ್ವಾದಶವರ್ಷಾಣಿ ಪುಷ್ಕರೇ ನಿಯತಃ ಶುಚಿಃ ।
ಕ್ರತೂನ್ ಸರ್ವಾನವಾಪ್ನೋತಿ ಬ್ರಹ್ಮಲೋಕಂ ಚ ಗಚ್ಛತಿ ॥೩೫॥

ಯಾವನು ಪುಷ್ಕರಕ್ಷೇತ್ರದಲ್ಲಿ ಮನೋವಾಕ್‌ನಿಯಮಗಳಿಂದ ಶುಚಿಯಾಗಿ ಹನ್ನೆರಡುವರ್ಷಗಳ ಕಾಲ ವಾಸಮಾಡುತ್ತಾನೆಯೋ ಅವನು ಎಲ್ಲಾ ಯಾಗಗಳ ಫಲವನ್ನು ಪಡೆಯುತ್ತಾನೆ. ಮತ್ತು ಕೊನೆಯಲ್ಲಿ ಬ್ರಹ್ಮಲೋಕವನ್ನು ಪಡೆಯುತ್ತಾನೆ.

ಯಸ್ತು ವರ್ಷಶತಂ ಪೂರ್ಣಮಗ್ನಿಹೋತ್ರಮುಪಾಸತೇ ।
ಕಾರ್ತಿಕೀಂ ವಾ ವಸೇದೇಕಾಂ ಪುಷ್ಕರೇ ಸಮಮೇವ ತತ್ ॥೩೬॥

ಮತ್ತು ಯಾವನು ಒಂದು ನೂರು ವರ್ಷಕಾಲ ಪೂರ್ಣವಾಗಿ ಅಗ್ನಿಹೋತ್ರಾದಿಗಳನ್ನು ಮಾಡುತ್ತಾನೆಯೋ ಮತ್ತು ಯಾವನು ಕಾರ್ತಿಕಮಾಸದ ಒಂದು ರಾತ್ರಿ ಪುಷ್ಕರದಲ್ಲಿ ಕಳೆಯುತ್ತಾನೆಯೋ ಅವರಿಬ್ಬರ ಪುಣ್ಯವೂ ಸಮಾನವಾದುದು.

ದುಷ್ಕರಂ ಪುಷ್ಕರೇ ಗಂತುಂ ದುಷ್ಕರಂ ಪುಷ್ಕರೇ ತಪಃ ।
ದುಷ್ಕರಂ ಪುಷ್ಕರೇ ದಾನಂ ವಸ್ತುಂ ಚೈವ ಸುದುಷ್ಕರಮ್ ॥೩೭॥

ಪುಷ್ಕರಕ್ಕೆ ಪ್ರಯಾಣಮಾಡುವುದು ಕಷ್ಟಸಾಧ್ಯ. ಪುಷ್ಕರದಲ್ಲಿ ತಪಸ್ಸನ್ನು ಆಚರಿಸುವುದು ಕಷ್ಟಸಾಧ್ಯ. ಪುಷ್ಕರದಲ್ಲಿ ದಾನವನ್ನು ಮಾಡುವುದು ಕಷ್ಟಸಾಧ್ಯ. ಆದರೆ ಪುಷ್ಕರದಲ್ಲಿ ವಾಸವನ್ನುಮಾಡುವುದು ಎಲ್ಲವುಗಳಿಗಿಂತ ಅಸಾಧ್ಯವಾದುದು.

ಉಷ್ಯ ದ್ವಾದಶರಾತ್ರಂ ತು ನಿಯತೋ ನಿಯತಾಶನಃ ।
ಪ್ರದಕ್ಷಿಣಮುಪಾವೃತ್ತೋ ಜಂಬೂಮಾರ್ಗಂ ಸಮಾವಿಶೇತ್ ॥೩೮॥

ಅಧಿಕಾರಿಯಾದ ಸಜ್ಜನನು ಪುಷ್ಕರದಲ್ಲಿ ನಿಯಮಬದ್ಧನಾಗಿ ಮತ್ತು ಯುಕ್ತ ಆಹಾರವುಳ್ಳವನಾಗಿ ಹನ್ನೆರಡುರಾತ್ರಿಗಳು ವಾಸಮಾಡಿ ಅಲ್ಲಿಂದ ಜಂಬೂಮಾರ್ಗಕ್ಕೆ ಹೋಗಬೇಕು.

ಜಂಬೂಮಾರ್ಗಂ ಸಮಾಸಾದ್ಯ ದೇವರ್ಷಿಪಿತೃಸೇವಿತಮ್ ।
ಅಶ್ವಮೇಧಮವಾಪ್ನೋತಿ ವಿಷ್ಣುಲೋಕಂ ಚ ಗಚ್ಛತಿ ॥೩೯॥

ದೇವತೆಗಳು ಋಷಿಗಳು ಪಿತೃಗಳಿಂದ ಸೇವಿತವಾದ ಜಂಬೂಮಾರ್ಗಕ್ಕೆ ಯಾವನು ಹೋಗುತ್ತಾನೆಯೋ ಅವನಿಗೆ ಅಶ್ವಮೇಧ ಫಲವುಂಟಾಗುತ್ತದೆ. ಮತ್ತು ಅವನು ಕೊನೆಯಲ್ಲಿ ವಿಷ್ಣುಲೋಕವನ್ನೇ ಸೇರುತ್ತಾನೆ.

ತತ್ರೋಷ್ಯ ರಜನೀಃ ಪಂಚ ಷಷ್ಠಕಾಲಕ್ಷಮೀ ನರಃ ।
ನ ದುರ್ಗತಿಮವಾಪ್ನೋತಿ ಸ್ವರ್ಗಲೋಕೇ ಚ ಪೂಜ್ಯತೇ ॥೪೦॥

ಯಾವ ಮನುಷ್ಯನು ಹಗಲಿನ ಕೊನೆಯ ಒಂದು ಭಾಗದಲ್ಲಿ ಆಹಾರವನ್ನು ಸೇವಿಸುತ್ತಾ ಅಲ್ಲಿ ಐದು ರಾತ್ರಿಗಳನ್ನು ಕಳೆಯುತ್ತಾನೆಯೋ ಅವನು ದುರ್ಗತಿಯನ್ನು ಹೊಂದುವುದಿಲ್ಲ. ಅವನು ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ.

ಜಂಬೂಮಾರ್ಗಾದುಪಾವೃತ್ತೋ ಗಚ್ಛೇತ್ ತಂಡುಲಿಕಾಶ್ರಮಮ್ ।
ನ ದುರ್ಗತಿಮವಾಪ್ನೋತಿ ಬ್ರಹ್ಮಲೋಕೇ ಚ ಪೂಜ್ಯತೇ ॥೪೧॥

ಜಂಜೂಮಾರ್ಗದಿಂದ ತಿರುಗಿ ತಂಡುಲಿಕಾ ಆಶ್ರಮಕ್ಕೆ ಬರಬೇಕು ಯಾವನು ತಂಡುಲಿಕಾಶ್ರಮದ ಯಾತ್ರೆಯನ್ನು ಮಾಡುತ್ತಾನೆಯೋ ಅವನಿಗೆ ದುರ್ಗತಿಯು ಉಂಟಾಗುವುದಿಲ್ಲ. ಮತ್ತು ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಆಗಸ್ತ್ಯಂ ಸರ ಆಸಾದ್ಯ ಪಿತೃದೇವಾರ್ಚನೇ ರತಃ ।
ತ್ರಿರಾತ್ರೋಪೋಷಿತೋ ರಾಜನ್ನಗ್ನಿಷ್ಟೋಮಫಲಂ ಲಭೇತ್ ॥೪೨॥

ಎಲೈ ರಾಜನೇ, ಅಗಸ್ತ್ಯ ಸರೋವರಕ್ಕೆ ಹೋಗಿ ಪಿತೃದೇವತಾರ್ಚನೆಯನ್ನು ಮಾಡಿ ಮೂರು ರಾತ್ರಿಕಾಲ ಉಪವಾಸವನ್ನು ಮಾಡುವ ನರನು ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ಶಾಕವೃತ್ತಿಃ ಫಲೈರ್ವಾऽಪಿ ಕೌಬೇರಂ ವಿಂದತೇ ಪದಮ್ ।
ಕಣ್ವಾಶ್ರಮಂ ತತೋ ಗಚ್ಛೇತ್ ಶ್ರೀಜುಷ್ಟಂ ಲೋಕವಿಶ್ರುತಮ್ ॥೪೩॥

ಕಾಯಿಪಲ್ಯವನ್ನು ಅಥವಾ ಹಣ್ಣುಗಳನ್ನು ಭಕ್ಷಣೆಮಾಡಿ ಪುಷ್ಕರದಲ್ಲಿ ವಾಸಿಸುವವನು ಕುಬೇರನ ಸ್ಥಾನವನ್ನು ಪಡೆಯುತ್ತಾನೆ. ಅನಂತರ ಲಕ್ಷ್ಮೀದೇವಿಯ ಸನ್ನಿಧಾನಕ್ಕೆ ಪಾತ್ರವಾಗಿರುವ (ಕಾಂತಿಯುಕ್ತವಾದ) ಲೋಕವಿಶ್ರುತವಾದ ಕಣ್ವಾಶ್ರಮಕ್ಕೆ ಅಲ್ಲಿಂದ ಹೋಗಬೇಕು.

ಧರ್ಮಾರಣ್ಯಂ ಮಹತ್ಪುಣ್ಯಮಾಸಾದ್ಯ ಭರತರ್ಷಭ ।
ಯತ್ರ ಪ್ರವಿಷ್ಟಮಾತ್ರೋಽಸೌ ಪಾಪೇಭ್ಯೋ ವಿಪ್ರಮುಚ್ಯತೇ ।
ಸರ್ವಕಾಮಸಮೃದ್ಧಃ ಸ್ಯಾದ್ ಯಜ್ಞಸ್ಯ ಫಲಮಶ್ನುತೇ ॥೪೪॥

ಎಲೈ ಭರತರ್ಷಭನೇ, ಧರ್ಮಾರಣ್ಯವನ್ನು ಕೇವಲ ಪ್ರವೇಶಮಾಡುವುದರಿಂದಲೇ ಮನುಷ್ಯನು ಪಾಪಗಳಿಂದ ನಿರ್ಮುಕ್ತನಾಗಿ ಬಹಳ ಪುಣ್ಯವನ್ನು ಸಂಪಾದಿಸಿ ಎಲ್ಲ ಕಾಮಗಳಿಂದಲೂ ಸಮೃದ್ಧನಾಗುತ್ತಾನೆ. ಅವನಿಗೆ ಯಜ್ಞದ ಫಲವು ಉಂಟಾಗುತ್ತದೆ.

ಪ್ರದಕ್ಷಿಣಂ ತತಃ ಕೃತ್ವಾ ಯಯಾತಿಪತನಂ ವ್ರಜೇತ್ ।
ಹಯಮೇಧಸ್ಯ ಯಜ್ಞಸ್ಯ ಫಲಮಾಪ್ನೋತಿ ಮಾನವಃ ॥೪೫॥

ಅಲ್ಲಿಂದ ಪ್ರದಕ್ಷಿಣಾಕಾರವಾಗಿ ಯಯಾತಿಪತನವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಗೆ ಹೋಗುವ ಮನುಷ್ಯನಿಗೆ ಅಶ್ವಮೇಧಯಾಗದ ಫಲವು ಉಂಟಾಗುತ್ತದೆ.

ಮಹಾಕಾಲಂ ತತೋ ಗಚ್ಛೇತ್ ನಿಯತೋ ನಿಯತಾಶನಃ ।
ಕೋಟಿತೀರ್ಥಮುಪಸ್ಪೃಶ್ಯ ಹಯಮೇಧಫಲಂ ಲಭೇತ್ ॥೪೬॥

ಅಲ್ಲಿಂದ ನಿಯಮಬದ್ಧನಾಗಿ ಮತ್ತು ಅಲ್ಪ ಆಹಾರವನ್ನು ಸೇವಿಸಿ ಕೋಟಿತೀರ್ಥದಲ್ಲಿ ಸ್ನಾನಮಾಡಿ ಮಹಾಕಾಲಕ್ಷೇತ್ರಕ್ಕೆ ಹೋದ ನರನಿಗೆ ಅಶ್ವಮೇಧಯಾಗದ ಫಲವು ಉಂಟಾಗುತ್ತದೆ.

ತತೋ ಗಚ್ಛೇತ ಧರ್ಮಜ್ಞಃ ಸ್ಥಾಕೋಸ್ಯೇರ್ಥಮುಮಾಪತೇಃ ।
ನಾಮ್ನಾ ರುದ್ರವಟಂ ನಾಮ ತ್ರಿಷು ಲೋಕೇಷು ವಿಶ್ರುತಮ್ ॥೪೭॥

ತತ್ರಾಭಿಗಮ್ಯ ಚೇಶಾನಂ ಗೋಸಹಸ್ರಫಲಂ ಲಭೇತ್ ।
ಮಹಾದೇವಪ್ರಸಾದಾಚ್ಚ ಗಾಣಪತ್ಯಮವಾಪ್ನುಯಾತ್ ॥೪೮॥

ಸಮೃದ್ಧಮಸಪತ್ನಂ ಚ ಶ್ರಿಯಾ ಯುಕ್ತಂ ನರೋತ್ತಮಃ ।
ರಾಜ್ಞಾಂ ಚೈವಾಧಿಪತ್ಯಂ ಹಿ ತತ್ರ ಗತ್ವಾ ಸಮಾಪ್ನುಯಾತ್ ॥೪೯॥

ಧರ್ಮಜ್ಞನಾದ ಪುರುಷನು ಅಲ್ಲಿಂದ ಉಮಾಪತಿಯಾದ ಸ್ಥಾಣುವಿನ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ರುದ್ರವಟವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಗೆ ಹೋಗಿ ಈಶ್ವರನನ್ನು ಸ್ತೋತ್ರಮಾಡಿದರೆ ಗೋಸಹಸ್ರದ (ದಾನದ) ಫಲವು ಉಂಟಾಗುತ್ತದೆ. ರುದ್ರದೇವರ ಅನುಗ್ರಹದಿಂದ ರುದ್ರದೇವರ ಗಣದ ಆಧಿಪತ್ಯವು ದೊರೆಯುತ್ತದೆ. ಅಲ್ಲಿಗೆ ಹೋಗುವ ಶ್ರೇಷ್ಠನಾದ ನರನು ಸಮೃದ್ಧವಾದ ಶತ್ರುರಹಿತವಾದ ಸಂಪತ್ತಿನಿಂದ ಕೂಡಿದ ರಾಜರುಗಳ ಆಧಿಪತ್ಯವನ್ನು ಹೊಂದುವನು.

ನರ್ಮದಾಮಥ ಸಂಪ್ರಾಪ್ಯ ನಿಯತೋ ನಿಯತಾಶನಃ ।
ತರ್ಪಯಿತ್ವಾ ಪಿತೄ ನ್ ದೇವಾನಗ್ನಿಷ್ಟೋಮಫಲಂ ಲಭೇತ್ ॥೫೦॥

ಅನಂತರ ಅಲ್ಲಿಂದ ನಿಯಮಬದ್ಧನಾಗಿ ಯುಕ್ತಾಹಾರವನ್ನು ಸೇವಿಸಿ ನರ್ಮದಾ ನದಿಗೆ ಬಂದು ಪಿತೃಗಳಿಗೂ ಮತ್ತು ದೇವತೆಗಳಿಗೂ ತರ್ಪಣವನ್ನು ನೀಡಿದರೆ ಅಗ್ನಿಷ್ಟೋಮಫಲವು ಉಂಟಾಗುತ್ತದೆ.

ದಕ್ಷಿಣಂ ಸಿಂಧುಮಾಸಾದ್ಯ ಬ್ರಹ್ಮಚಾರೀ ಜಿತೇಂದ್ರಿಯಃ ।
ಅಗ್ನಿಷ್ಟೋಮಮವಾಪ್ನೋತಿ ವಿಮಾನಂ ಚಾಧಿರೋಹತಿ ॥೫೧॥

ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾಗಿದ್ದು ದಕ್ಷಿಣಸಿಂಧುನದಿಯ ಯಾತ್ರೆಯನ್ನು ಮಾಡಿದರೆ ಅಗ್ನಿಷ್ಟೋಮಫಲವನ್ನು ಹೊಂದಿ ಅನಂತರ ವಿಮಾನವನ್ನು ಏರುತ್ತಾನೆ.

ಚರ್ಮಣ್ವತೀಂ ಸಮಾಸಾದ್ಯ ನಿಯತೋ ನಿಯತಾಶನಃ ।
ರಂತಿದೇವಾಭ್ಯನುಜ್ಞಾತಃ ಅಗ್ನಿಷ್ಟೋಮಫಲಂ ಲಭೇತ್ ॥೫೨॥

ನಿಯಮವುಳ್ಳವನು ನಿಯತಆಹಾರವನ್ನು ಸೇವಿಸಿ ಚರ್ಮಣ್ವತೀ ಯಾತ್ರೆಯನ್ನು ಮಾಡಿದರೆ ರಂತಿದೇವನ ಅನುಗ್ರಹಕ್ಕೆ ಪಾತ್ರನಾಗಿ ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಹಿಮವತ್ಸುತಮರ್ಬುದಮ್ ।
ಪೃಥಿವ್ಯಾಂ ಯತ್ರ ವೈ ಛಿದ್ರಂ ಪೂರ್ವಮಾಸೀದ್ ಯುಧಿಷ್ಠಿರ ॥೫೩॥

ರಾಜೇಂದ್ರನೇ, ಅನಂತರ ಅಲ್ಲಿಂದ ಹಿಮಾಲಯದ ಸುತನಾದ ಅರ್ಬುದ ಪರ್ವತಕ್ಕೆ ಹೋಗಬೇಕು. ಯುಧಿಷ್ಠಿರನೇ ಹಿಂದೆ ಅಲ್ಲಿ ಭೂಮಿಯಲ್ಲಿ (ಅಧೋಲೋಕಗಳಿಗೆ ಹೋಗುವ) ಒಂದು ದೊಡ್ಡ ಬಿಲವಿದ್ದಿತು.

ತತ್ರಾಶ್ರಮೋ ವಸಿಷ್ಠಸ್ಯ ತ್ರಿಷು ಲೋಕೇಷು ವಿಶ್ರುತಃ ।
ತತ್ರೋಷ್ಯ ರಜನೀಮೇಕಾಂ ಗೋಸಹಸ್ರಫಲಂ ಲಭೇತ್ ॥೫೪॥

ಅಲ್ಲಿ ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದ ವಸಿಷ್ಠರ ಆಶ್ರಮವಿದೆ. ಅಲ್ಲಿ ಒಂದು ರಾತ್ರಿತಂಗಿದರೆ ಗೋಸಹಸ್ರದಾನದ ಫಲವು ಉಂಟಾಗುತ್ತದೆ.

ಪಿಂಗತೀರ್ಥಮುಪಸ್ಪೃಶ್ಯ ಬ್ರಹ್ಮಚಾರೀ ಜಿತೇಂದ್ರಿಯಃ ।
ಕಪಿಲಾನಾಂ ನರಶ್ರೇಷ್ಠ ಶತಸ್ಯ ಫಲಮಶ್ನುತೇ ॥೫೫॥

ಎಲೈ ನರಶ್ರೇಷ್ಠನೇ, ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾಗಿ ಪಿಂಗತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ನೂರು ಕಪಿಲಗೋದಾನವನ್ನು ಮಾಡಿದ ಪುಣ್ಯವುಂಟಾಗುತ್ತದೆ.

ತತೋ ಗಚ್ಛೇತ ರಾಜೇಂದ್ರ ಪ್ರಭಾಸಂ ಲೋಕವಿಶ್ರುತಮ್ ।
ತೀರ್ಥಂ ದೇವಗಣೈಃ ಪೂಜ್ಯಮ್ ಋಷಿಭಿಶ್ಚ ನಿಷೇವಿತಮ್ ॥೫೬॥

ಎಲೈ ರಾಜೇಂದ್ರನೇ, ಅಲ್ಲಿಂದ ಲೋಕವಿಶ್ರುತವಾದ ಪ್ರಭಾಸಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ದೇವಗಣಗಳಿಂದ ಪೂಜಿತವಾದ ಮತ್ತು ಋಷಿಗಳಿಂದ ಸೇವಿತವಾದ ತೀರ್ಥವಿದೆ.

ತತ್ರ ಸನ್ನಿಹಿತೋ ನಿತ್ಯಂ ಸ್ವಯಮೇವ ಹುತಾಶನಃ ।
ದೇವತಾನಾಂ ಮುಖಂ ವೀರ ಜ್ವಲನೋऽನಿಲಸಾರಥಿಃ ॥೫೭॥

ತಸ್ಮಿಂಸ್ತೀರ್ಥವರೇ ಸ್ನಾತ್ವಾ ಶುಚಿಃ ಪ್ರಯತಮಾನಸಃ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಂ ಪ್ರಾಪ್ನೋತಿ ಮಾನವಃ ॥೫೮॥

ಎಲೈ ವೀರನೇ, ಅಲ್ಲಿ ದೇವಮುಖನೆಂದು ಕರೆಸಿಕೊಳ್ಳಲ್ಪಡುವ ವಾಯುಸಾರಥಿಯಾದ ಅಗ್ನಿದೇವನು ನಿತ್ಯವೂ ಸನ್ನಿಹಿತನಾಗಿದ್ದಾನೆ. ಯಾವ ಮಾನವನು ಶುಚಿಯಾಗಿ ಮನೋನಿಗ್ರಹವುಳ್ಳವನಾಗಿ ಆ ಶ್ರೇಷ್ಠವಾದ ತೀರ್ಥದಲ್ಲಿ

ಸ್ನಾನಮಾಡುತ್ತಾನೆಯೋ ಅವನು ಅಗ್ನಿಷ್ಟೋಮ ಮತ್ತು ಅತಿರಾತ್ರಯಾಗಗಳ ಫಲವನ್ನು ಪಡೆಯುತ್ತಾನೆ.

ತತೋ ಗತ್ವಾ ಸರಸ್ವತ್ಯಾಃ ಸಾಗರಸ್ಯ ಚ ಸಂಗಮೇ ।
ಗೋಸಹಸ್ರಫಲಂ ಪ್ರಾಪ್ಯ ಸ್ವರ್ಗಲೋಕೇ ಮಹೀಯತೇ ।
ದೀಪ್ಯಮಾನೋಽಗ್ನಿವನ್ನಿತ್ಯಂ ಪ್ರಭಯಾ ಭರತರ್ಷಭ ॥೫೯॥

ಅಲ್ಲಿಂದ ಸರಸ್ವತೀ ಸಾಗರ ಸಂಗಮಕ್ಕೆ ಹೋಗಿ ಸ್ನಾನವನ್ನು ಮಾಡುವವನು ಸಹಸ್ರಗೋದಾನಗಳನ್ನು ಮಾಡಿದ ಪುಣ್ಯವನ್ನು ಹೊಂದಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಎಲೈ ಭರತಶ್ರೇಷ್ಠನೇ ಅವನು ಅಲ್ಲಿ ತನ್ನ ಕಾಂತಿಯಿಂದ ನಿತ್ಯವೂ ಅಗ್ನಿಯಂತೆ ಬೆಳಗುತ್ತಾನೆ.

ತತ್ರ ಸ್ನಾತ್ವಾऽಪಿ ರಾಜೇಂದ್ರ ವಿಮಲಾರ್ಕಸಮದ್ಯುತಿಃ ।
ತ್ರಿರಾತ್ರಮುಷಿತಸ್ತತ್ರ ತರ್ಪಯನ್ ಪಿತೃದೇವತಾಃ ।
ಪ್ರಭಾಸತೇ ಯಥಾ ಸೋಮೋ ವಾಜಿಮೇಧಂ ಚ ವಿಂದತಿ ॥೬೦॥

ಎಲೈ ರಾಜೇಂದ್ರನೇ, ಅಲ್ಲಿಸ್ನಾನವನ್ನು ಮಾಡಿದವನು ಪರಿಶುದ್ಧವಾದ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದುತ್ತಾನೆ. ಅಲ್ಲಿ ಮೂರು ರಾತ್ರಿಗಳು ವಾಸಮಾಡಿ ಪಿತೃದೇವತೆಗಳಿಗೆ ತರ್ಪಣವನ್ನು ನೀಡಿದರೆ ಚಂದ್ರನಂತೆ ಕಾಂತಿಯುಕ್ತನಾಗುತ್ತಾನೆ. ಮತ್ತು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.

ವಿಷ್ಣೋರ್ದುರ್ವಾಸಸಾ ಯತ್ರ ವರೋ ದತ್ತೋ ಯುಧಿಷ್ಠಿರ ।
ವರದಾನೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೬೧॥

ಯುಧಿಷ್ಠಿರನೇ, ವಿಷ್ಣುವಿಗೆ ದುರ್ವಾಸರು ವರವನ್ನು ಕೊಟ್ಟ ವರದಾನ ಎಂಬ ಕ್ಷೇತ್ರದಲ್ಲಿ ಸ್ನಾನವನ್ನು ಮಾಡಿದ ಮಾನವನು ಸಹಸ್ರಗೋದಾನವನ್ನು ಮಾಡಿದ ಫಲವನ್ನು ಪಡೆಯುತ್ತಾನೆ.

ತತೋ ದ್ವಾರವತೀಂ ಗಚ್ಛೇನ್ನಿಯತೋ ನಿಯತಾಶನಃ ।
ಪಿಂಡಾರಕೇ ನರಃ ಸ್ನಾತ್ವಾ ಲಭೇದ್ ಬಹುಸುವರ್ಣಕಮ್ ॥೬೨॥

ಅನಂತರ ಅಲ್ಲಿಂದ ನಿಯಮಬದ್ಧನೂ ಮತ್ತು ನಿಯತಆಹಾರನೂ ಆಗಿ ದ್ವಾರವತಿಗೆ ಹೋಗಬೇಕು. ಪಿಂಡಾರಕದಲ್ಲಿ ಸ್ನಾನವನ್ನು ಮಾಡುವ ನರನು ಬಹಳ ಸಂಪತ್ತನ್ನು ಪಡೆಯುತ್ತಾನೆ.

ತಸ್ಮಿಂಸ್ತೀರ್ಥೇ ಮಹಾರಾಜ ಪದ್ಮಲಕ್ಷಣಲಕ್ಷಿತಾಃ ।
ಅದ್ಯಾಪಿ ಮುದ್ರಾ ದೃಶ್ಯಂತೇ ತದದ್ಭುತಮರಿಂದಮ ॥೬೩॥

ಎಲೈ ಮಹಾರಾಜನೇ, ಎಲೈ ಅರಿಂದಮನೇ, ಆ ತೀರ್ಥದಲ್ಲಿ ಈಗಲೂ ಕೂಡ ಪದ್ಮದ ಚಿಹ್ನೆಯಿಂದ ಚಿಹ್ನಿತವಾದ ಮುದ್ರೆಗಳು ಕಾಣುತ್ತವೆ. ಇದು ಅದ್ಭುತವಾದುದು.

ತ್ರಿಶೂಲಾಂಕಾನಿ ಪದ್ಮಾನಿ ದೃಶ್ಯಂತೇ ಕುರುನಂದನ ।
ಮಹಾದೇವಸ್ಯ ಸಾನ್ನಿಧ್ಯಂ ತತ್ರೈವ ಭರತರ್ಷಭ ॥೬೪॥

ಎಲೈ ಕುರುನಂದನನೇ, ಎಲೈ ಭರತರ್ಷಭನೇ, ಅಲ್ಲಿ ಪದ್ಮಗಳಲ್ಲಿ ತ್ರಿಶೂಲದ ಚಿಹ್ನೆಯು ಕಂಡುಬರುತ್ತದೆ. ಅಲ್ಲಿ ನಿತ್ಯವೂ ಮಹಾದೇವನ ಸನ್ನಿಧಾನವಿದೆ.

ಸಾಗರಸ್ಯ ಚ ಸಿಂಧೋಶ್ಚ ಸಂಗಮಂ ಪ್ರಾಪ್ಯ ಭಾರತ ।
ತೀರ್ಥೇ ಸಲಿಲರಾಜಸ್ಯ ಸ್ನಾತ್ವಾ ಪ್ರಯತಮಾನಸಃ ॥೬೫॥

ತರ್ಪಯಿತ್ವಾ ಪಿತೄನ್ ದೇವಾನ್ ಋಷೀಂಶ್ಚ ಭರತರ್ಷಭ ।
ಪ್ರಾಪ್ನೋತಿ ವಾರುಣಂ ಲೋಕಂ ದೀಪ್ಯಮಾನಂ ಸ್ವತೇಜಸಾ ॥೬೬॥

ಎಲೈ ಭಾರತನೇ, ಭರತರ್ಷಭನೇ, ಸಾಗರಸಿಂಧುಸಂಗಮಕ್ಕೆ ಹೋಗಿ ಅಲ್ಲಿ ಜಿತಮನಸ್ಕನಾಗಿ ವರುಣತೀರ್ಥದಲ್ಲಿ ಸ್ನಾನಮಾಡಿ ದೇವತೆಗಳಿಗೂ ಮತ್ತು ಪಿತೃಗಳಿಗೂ ಮತ್ತು ಋಷಿಗಳಿಗೂ ತರ್ಪಣವನ್ನು ನೀಡುವ ಮನುಷ್ಯನು ತನ್ನ ಪ್ರಭೆಯಿಂದ ಬೆಳಗುತ್ತಿರುವ ವರುಣಲೋಕವನ್ನು ಹೊಂದುತ್ತಾನೆ.

ಶಂಕುಕರ್ಣೇಶ್ವರಂ ದೇವಮರ್ಚಯಿತ್ವಾ ಯುಧಿಷ್ಠಿರ ।
ಅಶ್ವಮೇಧಾದ್ ದಶಗುಣಂ ಪ್ರವದಂತಿ ಮನೀಷಿಣಃ ॥೬೭॥

ಎಲೈ ಯುಧಿಷ್ಠಿರನೇ, ಶಂಕುಕರ್ಣನ ಕ್ಷೇತ್ರಕ್ಕೆ ಹೋಗಿ ಶಂಕುಕರ್ಣೇಶ್ವರನನ್ನು ಪೂಜಿಸುವ ಮಾನವನು ಅಶ್ವಮೇಧಯಾಗದ ಹತ್ತು ಪಟ್ಟು ಫಲವನ್ನು ಪಡೆಯುವನೆಂದು ಜ್ಞಾನಿಗಳು ಹೇಳುತ್ತಾರೆ.

ಪ್ರದಕ್ಷಿಣಮುಪಾವೃತ್ಯ ಗಚ್ಛೇತ ಭರತರ್ಷಭ ।
ತೀರ್ಥಂ ಕುರುಕುಲಶ್ರೇಷ್ಠ ತ್ರಿಷು ಲೋಕೇಷು ವಿಶ್ರುತಮ್ ।
ದ್ರಮಿತಿ ನಾಮ್ನಾ ವಿಖ್ಯಾತಂ ಸರ್ವಪಾಪಪ್ರಮೋಚನಮ್ ॥೬೮॥

ಎಲೈ ಭರತಶ್ರೇಷ್ಠನೇ, ಎಲೈ ಕುರುಕುಲಶ್ರೇಷ್ಠನೇ, ಅಲ್ಲಿಂದ ಪ್ರದಕ್ಷಿಣಾಕಾರವಾಗಿ ಹೊರಟು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ಸರ್ವಪಾಪ ಪ್ರಕಾಶಕವಾದ ದ್ರಮಿ ಎಂಬ ತೀರ್ಥಕ್ಕೆ ಹೋಗಬೇಕು.

ಯತ್ರ ಬ್ರಹ್ಮಾದಯೋ ದೇವಾ ಉಪಾಸಂತೇ ಮಹೇಶ್ವರಮ್ ।
ತತ್ರ ಸ್ನಾತ್ವಾರ್ಚಯಿತ್ವಾ ಚ ರುದ್ರಂ ದೇವಗಣೈರ್ವೃತಮ್ ॥೬೯॥

ಜನ್ಮಪ್ರಭೃತಿ ಪಾಪಾನಿ ಕೃತಾನಿ ನುದತೇ ನರಃ ।
ದ್ರಮೀ ಚಾತ್ರ ನರಶ್ರೇಷ್ಠ ಸರ್ವದೇವೈರಭಿಷ್ಟುತಾ ।
ತತ್ರ ಸ್ನಾತ್ವಾ ನರವ್ಯಾಘ್ರ ಹಯಮೇಧಮವಾಪ್ನುಯಾತ್ ॥೭೦॥

ಅಲ್ಲಿ ಬ್ರಹ್ಮಾದಿದೇವತೆಗಳು ಮಹೇಶ್ವರನನ್ನು ಉಪಾಸನೆಮಾಡುತ್ತಾರೆ. ಅಲ್ಲಿ ಸ್ನಾನವನ್ನು ಮಾಡಿ ದೇವಗಣಗಳಿಂದ ಕೂಡಿದ ರುದ್ರನ ಪೂಜೆಯನ್ನು ಮಾಡುವ ನರನು ಜನ್ಮಾರಂಭದಿಂದ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುತ್ತಾನೆ. ಎಲೈ ನರವ್ಯಾಘ್ರನೇ ಈ ದ್ರಮೀತೀರ್ಥವು ಎಲ್ಲದೇವತೆಗಳಿಂದಲೂ ಸ್ತೋತ್ರಮಾಡಲ್ಪಟ್ಟಿದೆ. ಅಲ್ಲಿಸ್ನಾನವನ್ನು ಮಾಡುವ ನರನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.

ಜಿತ್ವಾ ಯತ್ರ ಮಹಾಪ್ರಾಜ್ಞ ವಿಷ್ಣುನಾ ಪ್ರಭವಿಷ್ಣುನಾ ।
ಪುರಾ ಶೌಚಂ ಕೃತಂ ರಾಜನ್ ಹತ್ವಾ ದೈವತಕಂಟಕಾನ್ ॥೭೧॥

ಎಲೈ ಮಹಾಪ್ರಾಜ್ಞನೇ, ಎಲೈ ರಾಜನೇ, ಸರ್ವಸಮರ್ಥನಾದ ವಿಷ್ಣುವು ಹಿಂದೆ ದೇವಶತ್ರುಗಳಾದ ದೈತ್ಯರನ್ನು ಕೊಂದು ಅಲ್ಲಿ ಶುಚಿರ್ಭೂತನಾದನು.

ತತೋ ಗಚ್ಛೇತ ರಾಜೇಂದ್ರ ವಸೋರ್ಧಾರಾಮಭಿಷ್ಟುತಾಮ್ ।
ಗಮನಾದೇವ ತಸ್ಯಾಂ ಹಿ ಹಯಮೇಧಮವಾಪ್ನುಯಾತ್ ॥೭೨॥

ಎಲೈ ರಾಜೇಂದ್ರನೇ, ಅಲ್ಲಿಂದ ಪ್ರಸಿದ್ಧವಾದ ವಸುಧಾರಾ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಗೆ ಹೋಗುವುದರಿಂದಲೇ ಅಶ್ವಮೇಧಯಾಗದ ಫಲವು ಉಂಟಾಗುತ್ತದೆ.

ಸ್ನಾತ್ವಾ ಕುರುಕುಲಶ್ರೇಷ್ಠ ಪ್ರಯತಾತ್ಮಾ ತು ಮಾನವಃ ।
ತರ್ಪ್ಯ ದೇವಾನ್ ಪಿತೄಂಶ್ಚೈವ ವಿಷ್ಣುಲೋಕೇ ಮಹೀಯತೇ ॥೭೩॥

ಎಲೈ ಕುರುಕುಲಶ್ರೇಷ್ಠನೇ, ಯಾವ ಮನುಷ್ಯನು ಅಲ್ಲಿ ಜಿತಮನಸ್ಕನಾಗಿ ಹೋಗಿ ಸ್ನಾನಮಾಡಿ ದೇವತೆಗಳಿಗೂ ಮತ್ತು ಪಿತೃಗಳಿಗೂ ತರ್ಪಣವನ್ನು ಕೊಡುತ್ತಾನೆಯೋ ಅವನು ವಿಷ್ಣುಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತೀರ್ಥೇ ಚಾತ್ರ ಸರಃ ಪುಣ್ಯಂ ವಸೂನಾಂ ಭರತರ್ಷಭ ।
ತತ್ರ ಸ್ನಾತ್ವಾ ಚ ಪೀತ್ವಾ ಚ ವಸೂನಾಂ ಸಮ್ಮತೋ ಭವೇತ್ ॥೭೪॥

ಅಲ್ಲಿ ವಸುಗಳ ಒಂದು ಪವಿತ್ರವಾದ ಸರೋವರವಿದೆ. ಅಲ್ಲಿ ಸ್ನಾನವನ್ನು ಮಾಡಿ ಆ ಜಲಪಾನವನ್ನು ಮಾಡುವವನು ವಸುಗಳಿಗೆ ಸಮ್ಮತನಾಗುತ್ತಾನೆ.

ಸಿಂಧೂತ್ತಮಮಿತಿ ಖ್ಯಾತಂ ಸರ್ವಪಾಪಪ್ರಣಾಶನಮ್ ।
ತತ್ರ ಸ್ನಾತ್ವಾ ನರಶ್ರೇಷ್ಠ ಲಭೇದ್ಬಹುಸುವರ್ಣಕಮ್ ॥೭೫॥

ಅಲ್ಲಿಯೇ ಸರ್ವಪಾಪಪರಿಹಾರಕವಾದ ಸಿಂಧೂತ್ತಮ ಎಂಬ ಪ್ರಖ್ಯಾತವಾದ ತೀರ್ಥವಿದೆ. ಎಲೈ ನರಶ್ರೇಷ್ಠನೇ, ಅಲ್ಲಿ ಸ್ನಾನಮಾಡುವ ಮಾನವನು ಬಹಳ ಸಂಪತ್ತನ್ನು ಹೊಂದುತ್ತಾನೆ.

ಬ್ರಹ್ಮತುಂಗಂ ಸಮಾಸಾದ್ಯ ಶುಚಿಃ ಪ್ರಯತಮಾನಸಃ ।
ಬ್ರಹ್ಮಲೋಕಮವಾಪ್ನೋತಿ ಸುಕೃತೀ ವಿಜರೋ ನರಃ ॥೭೬॥

ಶುಚಿತ್ವಮತ್ತು ಮನೋನಿಗ್ರಹವುಳ್ಳ ಯಾವ ಮನುಷ್ಯನು ಬ್ರಹ್ಮತುಂಗಯಾತ್ರೆಯನ್ನು ಮಾಡುತ್ತಾನೆಯೋ ಅವನು ಪುಣ್ಯಶಾಲಿಯಾಗಿ ಜರಾರಹಿತನಾಗಿ ಬ್ರಹ್ಮಲೋಕವನ್ನು ಪಡೆಯುತ್ತಾನೆ.

ಕುಮಾರಿಕಾಣಾಂ ಶಕ್ರಸ್ಯ ತೀರ್ಥಂ ಸಿದ್ಧನಿಷೇವಿತಮ್ ।
ತತ್ರ ಸ್ನಾತ್ವಾ ನರಃ ಕ್ಷಿಪ್ರಂ ಸ್ವರ್ಗಲೋಕಮವಾಪ್ನುಯಾತ್ ॥೭೭॥

ರೇಣುಕಾಯಾಶ್ಚ ತತ್ರೈವ ತೀರ್ಥಂ ದೇವರ್ಷಿಸೇವಿತಮ್ ।
ತತ್ರ ಸ್ನಾತ್ವಾ ಭವೇದ್ ವಿಪ್ರೋ ನಿರ್ಮಲಶ್ಚಂದ್ರಮಾ ಯಥಾ ॥೭೮॥

ಇಂದ್ರನ ಸನ್ನಿಧಾನವಿರುವ ಸಿದ್ಧಸೇವಿತವಾದ ಕೌಮಾರಿಕಾತೀರ್ಥದಲ್ಲಿ ಸ್ನಾನವನ್ನು ಮಾಡುವ ನರನು ಶೀಘ್ರವಾಗಿ ಸ್ವರ್ಗಲೋಕವನ್ನು ಪಡೆಯುತ್ತಾನೆ. ಅಲ್ಲಿಯೇ ದೇವತೆಗಳಿಂದ ಮತ್ತು ಋಷಿಗಳಿಂದ ಸೇವಿತವಾದ ರೇಣುಕಾತೀರ್ಥವಿದೆ. ಅಲ್ಲಿ ಸ್ನಾನವನ್ನು ಮಾಡುವ ಬ್ರಾಹ್ಮಣನು ಚಂದ್ರನಂತೆ ನಿರ್ಮಲನಾಗುತ್ತಾನೆ.

ಅಥ ಪಂಚನದಂ ಗತ್ವಾ ನಿಯತೋ ನಿಯತಾಶನಃ ।
ಪಂಚ ಯಜ್ಞಾನವಾಪ್ನೋತಿ ಕ್ರಮಶೋ ಯೇಽನುಕೀರ್ತಿತಾಃ ॥೭೯॥

ಅಲ್ಲಿಂದ ನಿಯಮಬದ್ಧನೂ ನಿಯತಾಹಾರವುಳ್ಳವನೂ ಆಗಿ ಪಂಚನದ ಕ್ಷೇತ್ರದಲ್ಲಿ ಕ್ರಮವಾಗಿ ಹೋಗುವ ಮಾನವನು ಶಾಸ್ತ್ರಗಳಲ್ಲಿ ಹೇಳಿದ ಪಂಚಯಜ್ಞಗಳ ಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ಭೀಮಾಯಾಃ ಸ್ಥಾನಮುತ್ತಮಮ್ ।
ತತ್ರ ಸ್ನಾತ್ವಾ ನ ಯೋನ್ಯಾಂ ವೈ ಭವೇದ್ ಭರತಸತ್ತಮ ॥೮೦॥

ದೇವ್ಯಾಃ ಪುತ್ರೋ ಭವೇದ್ರಾಜನ್ ತಪ್ತಕುಂಡಲಭೂಷಣಃ ।
ಗವಾಂ ಶತಸಹಸ್ರಸ್ಯ ಫಲಂ ಚೈವಾಪ್ನುಯಾನ್ನಹತ್ ॥೮೧॥

ಎಲೈ ಧರ್ಮಜ್ಞನೇ, ಅಲ್ಲಿಂದ ಭೀಮಾನದಿಯ ಶ್ರೇಷ್ಠವಾದ ಸ್ಥಾನಕ್ಕೆ ಹೋಗಬೇಕು. ಎಲೈ ಭರತಸತ್ತಮನೇ, ಅಲ್ಲಿ ಸ್ನಾನವನ್ನು ಮಾಡುವವನು ಪುನಃ (ಭೂಮಿಯಲ್ಲಿ) ಜನ್ಮವನ್ನು ಪಡೆಯುವುದಿಲ್ಲ. ಎಲೈ ರಾಜನೇ ಅವನು ತಪ್ತಕುಂಡಲಧಾರಿಯಾಗಿ ದೇವತೆಗಳ ಉದರದಲ್ಲಿ ಜನಿಸುತ್ತಾನೆ ಮತ್ತು ಒಂದು ಲಕ್ಷ ಗೋದಾನದ ಶ್ರೇಷ್ಠವಾದ ಫಲವನ್ನು ಪಡೆಯುತ್ತಾನೆ.

ಗಿರಿಮುಂಜಂ ಸಮಾಸಾದ್ಯ ತ್ರಿಷು ಲೋಕೇಷು ವಿಶ್ರುತಮ್ ।
ಪಿತಾಮಹಂ ನಮಸ್ಕೃತ್ಯ ಗೋಸಹಸ್ರಫಲಂ ಲಭೇತ್ ॥೮೨॥

ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದ ಗಿರಿಮುಂಜ ಎಂಬ ಕ್ಷೇತ್ರಕ್ಕೆ ಹೋಗಿ ಬ್ರಹ್ಮದೇವರಿಗೆ ನಮಸ್ಕಾರವನ್ನು ಮಾಡುವ ಮನುಷ್ಯನು ಸಹಸ್ರಗೋದಾನದ ಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ವಿಮಲಂ ತೀರ್ಥಮುತ್ತಮಮ್ ।
ಅದ್ಯಾಪಿ ಯತ್ರ ದೃಶ್ಯಂತೇ ಮತ್ಸ್ಯಾಃ ಸೌವರ್ಣರಾಜತಾಃ ॥೮೩॥

ಎಲೈ ಧರ್ಮಜ್ಞನೇ, ಅಲ್ಲಿಂದ ಶ್ರೇಷ್ಠವಾದ ವಿಮಲತೀರ್ಥಕ್ಕೆ ಹೋಗಬೇಕು. ಅಲ್ಲಿ ಈಗಲೂ ಸುವರ್ಣಮಯವಾದ ಮತ್ತು ರಜತಮಯವಾದ ಮತ್ಸ್ಯಗಳು ಕಾಣುತ್ತವೆ.

ತತ್ರ ಸ್ನಾತ್ವಾ ನರಶ್ರೇಷ್ಠ ವಾಜಪೇಯಮವಾಪ್ನುಯಾತ್ ।
ಸರ್ವಪಾಪವಿಶುದ್ಧಾತ್ಮಾ ಗಚ್ಛೇಚ್ಚ ಪರಮಾಂ ಗತಿಮ್ ॥೮೪॥

ಎಲೈ ನರಶ್ರೇಷ್ಠನೇ, ಅಲ್ಲಿಸ್ನಾನವನ್ನು ಮಾಡಿದರೆ ವಾಜಪೇಯಯಾಗದ ಫಲವು ಉಂಟಾಗುತ್ತದೆ. ಮತ್ತು ಅವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ತತೋ ಗಚ್ಛೇತ ವಿಮಲಾಂ ತ್ರಿಷು ಲೋಕೇಷು ವಿಶ್ರುತಾಮ್ ।
ಪಶ್ಚಿಮಾಯಾಂ ತು ಸಂಧ್ಯಾಯಾಮುಪಸ್ಪೃಶ್ಯ ಯಥಾವಿಧಿ ॥೮೫॥

ಚರುಂ ನರೇಂದ್ರ ಸಪ್ತಾರ್ಚೇರ್ಯಥಾಶಕ್ತಿ ನಿವೇದಯೇತ್ ।
ಪಿತೃಣಾಮಕ್ಷಯಂ ದಾನಂ ಪ್ರವದಂತಿ ಮನೀಷಿಣಃ ॥೮೬॥

ಎಲೈ ರಾಜೇಂದ್ರನೇ, ಅಲ್ಲಿಂದ ಮೂರು ಲೋಕಗಳಲ್ಲಿ ಪ್ರಖ್ಯಾತವಾದ ವಿಮಲಾನದಿಗೆ ಹೋಗಬೇಕು. (ಮಲಾಪಹಾರಿಣೀ ನದಿ) ಸಾಯಂಕಾಲದ ವೇಳೆಯಲ್ಲಿ ಅಲ್ಲಿವಿಧಿಪೂರ್ವಕವಾಗಿ ಸ್ನಾನವನ್ನು ಮಾಡಿ ಯಥಾಶಕ್ತಿ ಚರು ಹೋಮವನ್ನುಮಾಡಬೇಕು. ಅಲ್ಲಿ ಪಿತೃಗಳಿಗೆ ಮಾಡಿದ ದಾನವು ಅಕ್ಷಯವಾಗುವುದೆಂದು ಜ್ಞಾನಿಗಳು ಹೇಳುತ್ತಾರೆ.

ಋಷಯಃ ಪಿತರೋ ದೇವಾ ಗಂಧರ್ವಾಪ್ಸರಸಾಂ ಗಣಾಃ ।
ಗುಹ್ಯಕಾ ಕಿನ್ನರಾ ಯಕ್ಷಾಃ ಸಿದ್ಧಾ ವಿದ್ಯಾಧರಾಸ್ತಥಾ ॥೮೭॥

ರಾಕ್ಷಸಾ ದಿತಿಜಾ ರುದ್ರಾ ಬ್ರಹ್ಮಾ ಚ ಮನುಜಾಧಿಪ ।
ನಿಯತಾಂ ಪರಮಾಂ ದೀಕ್ಷಾಮಾಸ್ಥಾಯಾಬ್ದಸಹಸ್ರಕೀಮ್ ॥೮೮॥

ವಿಷ್ಣೋಃ ಪ್ರಸಾದನಂ ಕುರ್ವಂಶ್ಚರುಂ ಚ ಶ್ರಪಯಂಸ್ತಥಾ ।
ಸಪ್ತಭಿಃ ಸಪ್ತಭಿರ್ಮಂತ್ರೈಸ್ತುಷ್ಟುವುಃ ಕೇಶಿಸೂದನಮ್ ॥೮೯॥

ಎಲೈ ಮನುಜಾಧಿಪನೇ, ಋಷಿಗಳು ದೇವತೆಗಳು ಗಂಧರ್ವರು ಮತ್ತು ಅಪ್ಸರಗಣಗಳು ಗುಹ್ಯಕರು ಕಿನ್ನರರು ಯಕ್ಷರು ಸಿದ್ಧರು ವಿದ್ಯಾಧರರು ರಾಕ್ಷಸರು ದಿತಿಜರು ರುದ್ರರು ಬ್ರಹ್ಮದೇವರು ಇವರೆಲ್ಲರೂ ಒಂದು ಸಹಸ್ರ ವರ್ಷಗಳಕಾಲ ಶ್ರೇಷ್ಠವಾದ ದೀಕ್ಷೆಯನ್ನು ಹೊಂದಿ ವಿಷ್ಣುವಿನ ಸ್ತೋತ್ರವನ್ನುಮಾಡಿ ಪ್ರಸಾದವನ್ನು ಬಯಸಿ ಚರುವನ್ನು ಸಿದ್ಧಪಡಿಸಿ ಕೇಶಿಸೂದನನಾದ ಹರಿಯನ್ನು ಏಳುಏಳು ಮಂತ್ರಗಳಿಂದ ಸ್ತೋತ್ರಮಾಡಿದರು.

ದದಾವಪ್ಪಗುಣೈಶ್ವರ್ಯಂ ತೇಷಾಂ ತುಷ್ಟಸ್ತು ಕೇಶವಃ ।
ಯಥಾಭಿಲಷಿತಾನನ್ಯಾನ್ ಕಾಮಾನ್ ದತ್ತ್ವಾ ಮಹೀಪತೇಃ ॥೯೦॥

ತತ್ರೈವಾಂತರ್ದಧೇ ದೇವೋ ವಿದ್ಯುದಭ್ರೇಷು ವೈ ಯಥಾ ।
ನಾಮ್ನಾ ಸಪ್ತಋಚಸ್ತೇನ ಖ್ಯಾತೋ ಭರತಸತ್ತಮ ॥೯೧॥

ಗವಾಂ ಶತಸಹಸ್ರೇಣ ರಾಜಸೂಯಶತೇನ ಚ ।
ಅಶ್ವಮೇಧಸಹಸ್ರೇಣ ಶ್ರೇಯಾನ್ ಸಪ್ತಋಚೇಶ್ವರಃ ॥೯೨॥

ಕೇಶವನು ಅವರಿಗೆ ಸಂತುಷ್ಟನಾಗಿ ಅಷ್ಟೈಶ್ವರ್ಯವನ್ನೂ ಅವರಿಗೆ ಅಭೀಷ್ಟವಾದ ಬೇರೆವರಗಳನ್ನೂ ಕೊಟ್ಟುಮೋಡಗಳಲ್ಲಿ ಮಿಂಚುಮಾಯವಾಗುವಂತೆ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಎಲೈ ಭರತಶ್ರೇಷ್ಠನೇ, ಆ ಕಾರಣದಿಂದ ಆ ಕ್ಷೇತ್ರವು ಸಪ್ತಋಚ ಎಂದು ಪ್ರಸಿದ್ಧವಾಗಿದೆ. ಆ ಕ್ಷೇತ್ರದಲ್ಲಿಮಾಡಿದ ಒಂದು ಚರುಹೋಮವು ಒಂದು ಲಕ್ಷ ಗೋದಾನಗಳಿಗಿಂತಲೂ ನೂರು ರಾಜಸೂಯಯಾಗಗಳಿಗಿಂತಲೂ ಮತ್ತು ಸಹಸ್ರ ಅಶ್ವಮೇಧ ಯಾಗಗಳಿಗಿಂತಲೂ ಶ್ರೇಷ್ಠವಾದುದು.

ತತೋ ನಿವೃತ್ತೋ ರಾಜೇಂದ್ರ ಭದ್ರಾಪದಮಥಾವಿಶೇತ್ ।
ಅರ್ಚಯಿತ್ವಾ ಮಹಾದೇವಮಶ್ವಮೇಧಫಲಂ ಲಭೇತ್ ॥೯೩॥

ಮಣಿಮಂತಂ ಸಮಾಸಾದ್ಯ ಬ್ರಹ್ಮಚಾರೀ ಸಮಾಹಿತಃ ।
ಏಕರಾತ್ರೋಷಿತೋ ರಾಜನ್ನಗ್ನಿಷ್ಟೋಮಫಲಂ ಲಭೇತ್ ॥೯೪॥

ರಾಜೇಂದ್ರನೇ, ಅಲ್ಲಿಂದ ಹಿಂದಿರುಗಿ ಭದ್ರಾಪದವೆಂಬ ಕ್ಷೇತ್ರಕ್ಕೆ ಬಂದು ಅಲ್ಲಿ ಮಹಾದೇವನನ್ನು ಅರ್ಚಿಸಿದರೆ ಅಶ್ವಮೇಧ ಫಲವುಂಟಾಗುತ್ತದೆ. ಎಲೈ ರಾಜನೇ ಬ್ರಹ್ಮಚರ್ಯದಿಂದಲೂ ಮನಸ್ಸುಮಾದಾನದಿಂದಲೂ ಕೂಡಿದವನಾಗಿ ಮಣಿಮಾನ್ ಎಂಬ ಕ್ಷೇತ್ರಕ್ಕೆ ಬಂದು ಅಲ್ಲಿ ಒಂದು ರಾತ್ರಿವಾಸವನ್ನು ಮಾಡಿದರೆ ಅಗ್ನಿಷ್ಟೋಮಫಲವುಂಟಾಗುತ್ತದೆ.

ಅಥ ಗಚ್ಛೇತ ರಾಜೇಂದ್ರ ದೇವಿಕಾಂ ಲೋಕವಿಶ್ರುತಾಮ್ ।
ಪ್ರಸೂತಿರ್ಯತ್ರ ವಿಪ್ರಾಣಾಂ ಶ್ರೂಯತೇ ಭರತರ್ಷಭ ॥೯೫॥

ತ್ರಿಶೂಲಪಾಣೇಃ ಸ್ಥಾನಂ ಚ ತ್ರಿಷು ಲೋಕೇಷು ವಿಶ್ರುತಮ್ ।
ದೇವಿಕಾಯಾಂ ನರಃ ಸ್ನಾತ್ವಾ ಅಥಾಭ್ಯರ್ಚ್ಯ ಮಹೇಶ್ವರಮ್ ॥೯೬॥

ಯಥಾಶಕ್ತಿ ಚರುಂ ತತ್ರ ನಿವೇದ್ಯ ಭರತರ್ಷಭ ।
ಸರ್ವಕಾಮಸಮೃದ್ಧಸ್ಯ ಯಜ್ಞಸ್ಯ ಲಭತೇ ಫಲಮ್ ॥೯೭॥

ಎಲೈ ರಾಜೇಂದ್ರನೇ, ಎಲೈ ಭರತರ್ಷಭನೇ, ಅಲ್ಲಿಂದ ಲೋಕವಿಖ್ಯಾತವಾದ ದೇವಿಕಾ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಬ್ರಾಹ್ಮಣರ ಉತ್ಪತ್ತಿಯು ಕೇಳಿಬರುತ್ತದೆ. ಅದು ಮೂರು ಲೋಕಗಳಲ್ಲಿಯೂ ವಿಖ್ಯಾತವಾದ ತ್ರಿಶೂಲಪಾಣಿಯಾದ ರುದ್ರನ ಸ್ಥಾನ. ದೇವಿಕಾತೀರ್ಥದಲ್ಲಿ ಸ್ನಾನವನ್ನುಮಾಡಿ ಮಹೇಶ್ವರನನ್ನು ಪೂಜಿಸಿ ಯಥಾಶಕ್ತಿ ಚರುವನ್ನು ನೈವೇದ್ಯಮಾಡಿದ ನರನು ಸರ್ವಕಾಮ ಸಮೃದ್ಧವಾದ ಯಜ್ಞದ ಫಲವನ್ನು ಪಡೆಯುತ್ತಾನೆ.

ಕಾಮಾಖ್ಯಂ ತತ್ರ ರುದ್ರಸ್ಯ ತೀರ್ಥಂ ದೇವರ್ಷಿಸೇವಿತಮ್ ।
ತತ್ರ ಸ್ನಾತ್ವಾ ನರಃ ಕ್ಷಿಪ್ರಂ ಸಿದ್ಧಿಂ ಪ್ರಾಪ್ನೋತಿ ಭಾರತ ॥೯೮॥

ಎಲೈ ಭಾರತನೇ, ಅಲ್ಲಿ ದೇವತೆಗಳಿಂದಲೂ ಮತ್ತು ಋಷಿಗಳಿಂದಲೂ ಸೇವಿತವಾದ ಕಾಮತೀರ್ಥವೆಂಬ ರುದ್ರನ ಸರೋವರವಿದೆ. ಅಲ್ಲಿ ಸ್ನಾನವನ್ನು ಮಾಡುವ ನರನು ಬೇಗ ಸಿದ್ಧಿಯನ್ನು ಪಡೆಯುತ್ತಾನೆ.

ಯಜನಂ ಯಾಜನಂ ಗತ್ವಾ ತಥೈವ ಬ್ರಹ್ಮವಾಲುಕಾಮ್ ।
ಪುಷ್ಪನ್ಯಾಸಮುಪಸ್ಪೃಶ್ಯ ನೈನಃ ಕ್ಷ್ವೇಮರಣಂ ತರೇತ್ ॥೯೯॥

ಯಜನಯಾಜನ ಮತ್ತು ಬ್ರಹ್ಮವಾಲುಕ (ಪೃಥೂದಕ) ಕ್ಷೇತ್ರಗಳಿಗೆ ಯಾತ್ರೆಗಳನ್ನುಮಾಡುವ ಮನುಷ್ಯನು ಪುನಃ ಮರಣವನ್ನುಂಟುಮಾಡುವ ಪಾಪದಿಂದ ವಿಮುಕ್ತನಾಗುತ್ತಾನೆ. (ಪಾಪದಿಂದ ನಿವೃತ್ತನಾಗುವುದರಿಂದ ಪುರ್ನಜನ್ಮವೂ ಇಲ್ಲ ಪುನರ್ಮರಣವೂ ಇಲ್ಲ.)

ಅರ್ಧಯೋಜನವಿಸ್ತಾರಾ ಪಂಚಯೋಜನಮಾಯತಾ ।
ಏತಾಂ ಹಿ ದೇವಿಕಾಮಾಹುಃ ಪುಣ್ಯಾಂ ದೇವರ್ಷಿಸೇವಿತಾಮ್ ॥೧೦೦॥

ಅರ್ಧಯೋಜನ ಅಗಲ ಮತ್ತು ಐದು ಯೋಜನ ಉದ್ದವಿರುವ ಈ ತೀರ್ಥವನ್ನು ದೇವರ್ಷಿಸೇವಿತವಾದ ಪವಿತ್ರವಾದ ದೇವಿಕಾತೀರ್ಥವೆಂದು ಹೇಳುತ್ತಾರೆ.

ತತೋ ಗಚ್ಛೇತ ಧರ್ಮಜ್ಞ ದೀರ್ಘಸತ್ರಂ ಯಥಾಶ್ರುತಮ್ ।
ಯತ್ರ ಬ್ರಹ್ಮಾದಯೋ ದೇವಾಃ ಸಿದ್ಧಾಶ್ಚ ಪರಮರ್ಷಯಃ ।
ದೀರ್ಘಸತ್ರಮುಪಾಸಂತೇ ದೀಕ್ಷಿತಾ ನಿಯತವ್ರತಾಃ ॥೧೦೧॥

ಎಲೈ ಧರ್ಮಜ್ಞನೇ, ಅಲ್ಲಿಂದ ದೀರ್ಘಸತ್ರಕ್ಷೇತ್ರಕ್ಕೆ ಹೋಗಬೇಕು. ಆ ಹೆಸರೇ ತಿಳಿಸುವಂತೆ ಅಲ್ಲಿ ಬ್ರಹ್ಮಾದಿದೇವತೆಗಳು ಸಿದ್ಧರು ಪರಮ ಋಷಿಗಳು ನಿಯತವ್ರತರಾಗಿ ದೀಕ್ಷಿತರಾಗಿ ದೀರ್ಘಸತ್ರವನ್ನು ನಡೆಸಿದರು.

ಗಮನಾದೇವ ರಾಜೇಂದ್ರ ದೀರ್ಘಸತ್ರಮರಿಂದಮ ।
ರಾಜಸೂಯಾಶ್ವಮೇಧಾಭ್ಯಾಂ ಫಲಂ ಪ್ರಾಪ್ನೋತಿ ಮಾನವಃ ॥೧೦೨॥

ಎಲೈ ರಾಜೇಂದ್ರನೇ, ಎಲೈ ಅರಿಂದಮನೇ, ದೀರ್ಘಸತ್ರಕ್ಕೆ ಹೋಗುವ ಮಾತ್ರದಿಂದಲೇ ಮನುಷ್ಯನಿಗೆ ರಾಜಸೂಯ ಅಶ್ವಮೇಧಯಾಗಗಳ ಫಲವು ದೊರಕುತ್ತದೆ.

ತತೋ ವಿನಶನಂ ಗಚ್ಛೇನ್ನಿಯತೋ ನಿಯತಾಶನಃ ।
ಗಚ್ಛತ್ಯಂತರ್ಹಿತಾ ಯತ್ರ ಮೇರುಪೃಷ್ಠೇ ಸರಸ್ವತೀ ॥೧೦೩॥

ಅಲ್ಲಿಂದ ನಿಯತಬದ್ಧನೂ ನಿಯತಾಹಾರನೂ ಆಗಿ ವಿನಶನಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಮೇರುಪೃಷ್ಠದಲ್ಲಿ ಸರಸ್ವತಿಯು ಅಂತರ್ಹಿತಳಾಗಿ ಹರಿಯುತ್ತಾಳೆ.

ಚಮಸೇ ಚ ಶಿವೋದ್ಭೇದೇ ನಾಗೋದ್ಭೇದೇ ಚ ದೃಶ್ಯತೇ ।
ತತ್ರ ಸ್ನಾತ್ವಾ ನರವ್ಯಾಘ್ರ ದ್ಯೋತತೇ ಶಶಿವತ್ ಸದಾ ॥೧೦೪॥

ಎಲೈ ನರವ್ಯಾಘ್ರನೇ ಆ ಸರಸ್ವತಿಯು ಚಮಸಕ್ಷೇತ್ರದಲ್ಲಿಯೂ ಶಿವೋದ್ಭೇದಕ್ಷೇತ್ರದಲ್ಲಿಯೂ ನಾಗೋದ್ಭೇದ ಕ್ಷೇತ್ರದಲ್ಲಿಯೂ ಪುನಃ ಕಾಣಿಸಿಕೊಳ್ಳುತ್ತಾಳೆ. ಅಲ್ಲಿ ಸ್ನಾನವನ್ನು ಮಾಡಿದ ಮನುಷ್ಯನು ಚಂದ್ರನಂತೆ ಯಾವಾಗಲೂ ಕಾಂತಿಯುಕ್ತನಾಗುತ್ತಾನೆ.

ಗೋಸಹಸ್ರಫಲಂ ಚೈವ ಪ್ರಾಪ್ನುಯಾದ್ ಭರತರ್ಷಭ ।
ನಾಗೋದ್ಭೇದೇ ನರಃ ಸ್ನಾತ್ವಾ ನಾಗಲೋಕಮವಾಪ್ನುಯಾತ್ ।
ಶಿವೋದ್ಭೇದೇ ನರಸ್ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೧೦೫॥

ಎಲೈ ಭರತರ್ಷಭನೇ, ನಾಗೋದ್ಭೇದದಲ್ಲಿ ಸ್ನಾನವನ್ನುಮಾಡುವ ಮನುಷ್ಯನು ಗೋಸಹಸ್ರದ ಫಲವನ್ನುಪಡೆದು ನಾಗಲೋಕಕ್ಕೆ ಹೋಗುತ್ತಾನೆ. ಶಿವೋದ್ಭೇದದಲ್ಲಿ ಸ್ನಾನವನ್ನುಮಾಡುವ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ.

ಶತಹ್ರದಂ ಚ ರಾಜೇಂದ್ರ ತೀರ್ಥಮಾಸಾದ್ಯ ದುರ್ಲಭಮ್ ।
ಶತರೂಪಪ್ರತಿಚ್ಛನ್ನಾಃ ಪುಷ್ಕರಾ ಯತ್ರ ಭಾರತ ॥೧೦೬॥

ಸರಸ್ವತ್ಯಾಂ ಮಹಾರಾಜ ಅನುಸಂವತ್ಸರಂ ಹಿ ತೇ ।
ಸ್ನಾಯಂತೇ ಭರತಶ್ರೇಷ್ಠ ವೃತ್ತಾಂ ವೈ ಕಾರ್ತ್ತಿಕೀಂ ತದಾ ॥೧೦೭॥

ಕುಮಾರಕೋಟಿಮಾಸಾದ್ಯ ನಿಯತಃ ಕುರುನಂದನ ।
ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ।
ಗವಾಂ ಮೇಧಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೧೦೮॥

ಎಲೈ ರಾಜೇಂದ್ರನೇ, ಎಲೈ ಮಹಾರಾಜನೇ, ಎಲೈ ಕುರುನಂದನನೇ, ಯಾರು ಎಲ್ಲಿ ಸರಸ್ವತಿನದಿಯಲ್ಲಿ ಸುವರ್ಣವರ್ಣೋಪೇತವಾದ ಕಮಲಗಳು ಶೋಭಿಸುತ್ತವೆಯೋ ಅಂತಹ ಶತಹ್ರದ ತೀರ್ಥಕ್ಕೆ ಹೋಗಿ ಪ್ರತಿವರ್ಷವೂ ಕಾರ್ತಿಕಮಾಸದಲ್ಲಿ ಸ್ನಾನವನ್ನು ಮಾಡುತ್ತಾರೆಯೋ ಹಾಗೆಯೇ ಯಾರು ನಿಯತರಾಗಿ ಕುಮಾರಕೋಟಿ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿ ಪಿತೃಗಳಿಗೂ ಮತ್ತು ದೇವತೆಗಳಿಗೂ ತರ್ಪಣವನ್ನು ಕೊಡುತ್ತಾರೆಯೋ ಅವರು ಗೋಮೇಧಯಾಗದ ಫಲವನ್ನು ಪಡೆಯುತ್ತಾರೆ ಮತ್ತು ತಮ್ಮ ಕುಲವನ್ನು ಉದ್ಧರಿಸುತ್ತಾರೆ.

ತತೋ ಗಚ್ಛೇತ ರಾಜೇಂದ್ರ ರುದ್ರಕೋಟಂ ಸಮಾಹಿತಃ ।
ಪುರಾ ಯತ್ರ ಮಹಾರಾಜ ಮುನಿಕೋಟಃ ಸಮಾಗತಾಃ ।
ಪ್ರಹರ್ಷೇಣ ಚ ಸಂವಿಷ್ಟಾ ರುದ್ರದರ್ಶನಕಾಂಕ್ಷಯಾ ॥೧೦೯॥

ಎಲೈ ರಾಜೇಂದ್ರನೇ, ಅಲ್ಲಿಂದ ಸಮಾಧಾನವುಳ್ಳ ಮನಸ್ಸಿನಿಂದ ರುದ್ರಕೋಟಿಗೆ ಹೋಗಬೇಕು. ಎಲೈ ಮಹಾರಾಜನೇ, ಅಲ್ಲಿ ಹಿಂದೆ ಒಂದು ಕೋಟಮುನಿಗಳು ರುದ್ರನನ್ನು ನೋಡುವ ಆಸೆಯಿಂದ ಬಂದು ಸಂತೋಷದಿಂದ ಕುಳಿತಿದ್ದರು.

ಅಹಂಪೂರ್ವಮಹಂಪೂರ್ವಂ ದ್ರಕ್ಷ್ಯಾಮಿ ವೃಷಭಧ್ವಜಮ್ ।
ಏವಂ ಸಂಪ್ರಸ್ಥಿತಾ ರಾಜನ್ ಋಷಯಃ ಕಿಲ ಭಾರತ ॥೧೧೦॥

ತತೋ ಯೋಗೇಶ್ವರೇಣಾಪಿ ಯೋಗಮಾಸ್ಥಾಯ ಭೂಪತೇ ।
ತೇಷಾಂ ಮನ್ಯುಪ್ರಣಾಶಾರ್ಥಮೃಷೀಣಾಂ ಭಾವಿತಾತ್ಮನಾಮ್ ॥೧೧೧॥

ಸೃಷ್ಟಾ ಕೋಟೀಸ್ತು ರುದ್ರಾಣಾಮೃಷೀಣಾಮಗ್ರತಃ ಸ್ಥಿತಾಃ ।
ಮಯಾ ಪೂರ್ವತರಂ ದೃಷ್ಟ ಇತಿ ತೇ ಮೇನಿರೇ ಪೃಥಕ್ ॥೧೧೨॥

ಎಲೈ ರಾಜನೇ, ಎಲೈ ಭಾರತನೇ, ನಾನು ರುದ್ರನನ್ನು ಮೊದಲು ನೋಡುವೆನು ನಾನು ರುದ್ರನನ್ನು ಮೊದಲು ನೋಡುವೆನು ಎನ್ನುತ್ತಾ ಎಲ್ಲ ಋಷಿಗಳೂ ಅಲ್ಲಿಗೆ ಹೊರಟುಬಂದಿದ್ದರು. ಆಗ ಯೋಗೇಶ್ವರನಾದ ರುದ್ರನೂ ಕೂಡ ಆ ಭಕ್ತಿಪೂತವಾದ ಮನಸ್ಸುಳ್ಳ ಅವರಿಗೆ ಕೋಪವುಂಟಾಗದಂತೆ ಮಾಡಲು ಒಂದು ಕೋಟಿರೂಪಗಳನ್ನು ತೆಗೆದುಕೊಂಡು ಆ ಋಷಿಗಳ ಎದುರಿಗೆ ನಿಂತನು. ಪ್ರತಿಯೊಬ್ಬ ಋಷಿಯೂ ನಾನೇ ರುದ್ರನನ್ನು ಮೊದಲು ನೋಡಿದೆ ಎಂದು ತಿಳಿದನು.

ತೇಷಾಂ ತುಷ್ಟೋ ಮಹಾದೇವೋ ಋಷೀಣಾಂ ಭಾವಿತಾತ್ಮನಾಮ್ ।
ಭಕ್ಯಾ ಪರಮಯಾ ತೇಷಾಂ ವರಂ ರಾಜನ್ ಪ್ರದಿಷ್ಟವಾನ್ ।
ಅದ್ಯಪ್ರಭೃತಿ ಯುಷ್ಮಾಕಂ ಧರ್ಮವೃದ್ಧಿರ್ಭವಿಷ್ಯತಿ ॥೧೧೩॥

ಎಲೈ ರಾಜನೇ, ಆ ಶುದ್ಧಮನಸ್ಸಿನ ಋಷಿಗಳಿಗೆ ಅವರ ಶ್ರೇಷ್ಠವಾದ ಭಕ್ತಿಯಿಂದ ಪ್ರಸನ್ನನಾದ ರುದ್ರನು ಇಂದಿನಿಂದ ನಿಮಗೆ ಯಾವಾಗಲೂ ಧರ್ಮವೃದ್ಧಿಯಾಗುವುದು ಎಂದು ವರವನ್ನು ಕೊಟ್ಟನು.

ತತ್ರ ಸ್ನಾತ್ವಾ ನರವ್ಯಾಘ್ರ ರುದ್ರಕೋಟ್ಯಾಂ ನರಃ ಶುಚಿಃ ।
ಅಶ್ವಮೇಧಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೧೧೪॥

ಎಲೈ ನರವ್ಯಾಘ್ರನೇ, ಯಾವ ಮಾನವನು ಶುಚಿಯಾಗಿ ರುದ್ರಕೋಟಿಯಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಸಂಗಮಂ ಲೋಕವಿಶ್ರುತಮ್ ।
ಸರಸ್ವತ್ಯಾಂ ಮಹಾರಾಜ ಉಪಾಸಂತೇ ಜನಾರ್ದನಮ್ ॥೧೧೫॥

ಯತ್ರ ಬ್ರಹ್ಮಾದಯೋ ದೇವಾ ಋಷಯಃ ಸಿದ್ಧಚಾರಣಾಃ ।
ಅಭಿಗಚ್ಛಂತಿ ರಾಜೇಂದ್ರ ಚೈತ್ರಶುಕ್ಲಚತುರ್ದಶೀಮ್ ॥೧೧೬॥

ತತ್ರ ಸ್ನಾತ್ವಾ ನರವ್ಯಾಘ್ರ ವಿಂದೇದ್ ಬಹುಸುವರ್ಣಕಮ್ ।
ಸರ್ವಪಾಪವಿಶುದ್ಧಾತ್ಮಾ ಬ್ರಹ್ಮಲೋಕಂ ಸ ಗಚ್ಛತಿ ॥೧೧೭॥

ಎಲೈ ರಾಜೇಂದ್ರನೇ, ಅಲ್ಲಿಂದ ಲೋಕವಿಖ್ಯಾತವಾದ ಸರಸ್ವತೀ ಸಂಗಮ ಕ್ಷೇತ್ರಕ್ಕೆ ಹೋಗಬೇಕು. ಎಲೈ ಮಹಾರಾಜನೇ ಅಲ್ಲಿ ಬ್ರಹ್ಮಾದಿದೇವತೆಗಳು ಋಷಿಗಳು ಮತ್ತು ಸಿದ್ಧಚಾರಣರು ಚೈತ್ರಶುದ್ಧ ಚತುರ್ದಶಿಯಂದು ಬಂದು ಜನಾರ್ದನನನ್ನು ಉಪಾಸನೆಮಾಡುತ್ತಾರೆ. ಎಲೈ ನರವ್ಯಾಘ್ರನೇ ಅಲ್ಲಿ ಸ್ನಾನಮಾಡಿದ ಮಾನವನು ಸುವರ್ಣಮಯವಾದ ಮಹಾ ಸಂಪತ್ತನ್ನು ಪಡೆಯುವನು. ಸರ್ವಪಾಪಗಳಿಂದ ವಿನಿರ್ಮುಕ್ತನಾಗಿ ಬ್ರಹ್ಮಲೋಕವನ್ನು ಪಡೆಯುವನು.

ಋಷೀಣಾಂ ಯತ್ರ ಸತ್ರಾಣಿ ಸಮವಾಪ್ನೋತಿ ಮಾನವಃ ।
ತತ್ರಾವಸಾನಮಾಸಾದ್ಯ ಗೋಸಹಸ್ರಫಲಂ ಲಭೇತ್ ॥೧೧೮॥

ಋಷಿಗಳು ಎಲ್ಲಿ ಸತ್ರಯಾಗವನ್ನು ಸಮಾಪ್ತಿಮಾಡಿದ್ದರೋ ಅಂತಹ ಸತ್ರಾವಸಾನವೆಂಬ ಕ್ಷೇತ್ರಕ್ಕೆ ನರನು ಬಂದು ಒಂದು ಸಹಸ್ರ ಗೋದಾನದ ಫಲವನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೆಂಟನೆಯ ಅಧ್ಯಾಯ

(ಪುಲಸ್ತ್ಯರಿಂದ ಭೀಷ್ಮರನ್ನು ಕುರಿತು ಕುರುಕ್ಷೇತ್ರಾದಿ ನಾನಾತೀರ್ಥಗಳ ವರ್ಣನೆ.)

ಪುಲಸ್ತ್ಯಃ

ತತೋ ಗಚ್ಛೇತ ರಾಜೇಂದ್ರ ಕುರುಕ್ಷೇತ್ರಮಭಿಷ್ಟುತಮ್ ।
ಪಾಪೇಭ್ಯೋ ವಿಪ್ರಮುಚ್ಯಂತೇ ತದ್ಗತಾಃ ಸರ್ವಜಂತವಃ ॥೧॥

ರಾಜೇಂದ್ರನೇ, ಅಲ್ಲಿಂದ ಬಹಳ ಪ್ರಶಂಸಿಲ್ಪಡುವ ಕುರುಕ್ಷೇತ್ರಕ್ಕೆ ಹೋಗಬೇಕು. ಕುರುಕ್ಷೇತ್ರದಲ್ಲಿ ಇರುವ ಎಲ್ಲ ಪ್ರಾಣಿಗಳೂ ಪಾಪಗಳಿಂದ ನಿರ್ಮುಕ್ತವಾಗುತ್ತವೆ.

ಕುರುಕ್ಷೇತ್ರಂ ಗಮಿಷ್ಯಾಮಿ ಕುರುಕ್ಷೇತ್ರೇ ವಸಾಮ್ಯಹಮ್ ।
ಯ ಏವಂ ಸತತಂ ಬ್ರೂಯಾತ್ ಸೋಽಪಿ ಪಾಪೈಃ ಪ್ರಮುಚ್ಯತೇ ॥

ಯಾವನು ನಾನು ಕುರುಕ್ಷೇತ್ರಕ್ಕೆ ಹೋಗುವೆನು ಕುರುಕ್ಷೇತ್ರದಲ್ಲಿ ವಾಸಮಾಡುವೆನು ಎಂದು ಈ ರೀತಿಯಾಗಿ ಸತತವಾಗಿ ಹೇಳುತ್ತಾನೋ ಅವನೂ ಸಹ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಪಾಂಸವೋಽಪಿ ಕುರುಕ್ಷೇತ್ರಾದ್ ವಾಯುನಾ ಸಮುದೀರಿತಾಃ ।
ಅಪಿ ದುಷ್ಕೃತಕರ್ಮಾಣಂ ನಯಂತಿ ಪರಮಾಂ ಗತಿಮ್ ॥೩॥

ಕುರುಕ್ಷೇತ್ರದಿಂದ ಎಬ್ಬಿಸಿ ವಾಯುವುತಂದ ಧೂಳಿನಕಣಗಳು ಸಹ ದುಷ್ಕರ್ಮವನ್ನು ಮಾಡಿದವನಿಗೆ ಶ್ರೇಷ್ಠವಾದ ಗತಿಯನ್ನು ಕೊಡುತ್ತವೆ.

ದಕ್ಷಿಣೇನ ಸರಸ್ವತ್ಯಾಂ ದೃಷದ್ವತ್ಯುತ್ತರೇಣ ಚ ।
ಯೇ ವಸಂತಿ ಕುರುಕ್ಷೇತ್ರೇ ತೇ ವಸಂತಿ ತ್ರಿವಿಷ್ಟಪೇ ॥೪॥

ಯಾರು ಸರಸ್ವತೀನದಿಯ ದಕ್ಷಿಣದಲ್ಲಿ ಮತ್ತು ದೃಷದ್ವತೀನದಿಯ ಉತ್ತರದಲ್ಲಿ ಇರುವ ಕುರುಕ್ಷೇತ್ರದಲ್ಲಿ ವಾಸಮಾಡುತ್ತಾರೋ ಅವರು ಸ್ವರ್ಗದಲ್ಲಿಯೇ ವಾಸಮಾಡುತ್ತಾರೆ.

ತತ್ರ ಮಾಸಂ ವಸೇದ್ಧೀರಃ ಸರಸ್ವತ್ಯಾಂ ಯುಧಾಂವರ ।
ಯತ್ರ ಬ್ರಹ್ಮಾದಯೋ ದೇವಾ ಋಷಯಃ ಸಿದ್ಧಚಾರಣಾಃ ॥೫॥

ಗಂಧರ್ವಾಪ್ಸರಸೋ ಯಕ್ಷಾಃ ಪನ್ನಗಾಶ್ಚ ಮಹೀಪತೇ ।
ಬ್ರಹ್ಮಕ್ಷೇತ್ರಂ ಮಹಾಪುಣ್ಯಮಭಿಗಚ್ಛಂತಿ ಭಾರತ ॥೬॥

ಎಲೈ ಯುದ್ಧಮಾಡುವವರಲ್ಲಿ ಶ್ರೇಷ್ಠನೇ, ಮಹೀಪತಿಯೇ, ಭಾರತನೇ, ಸರಸ್ವತೀನದಿಯ ಬಳಿ ಧೀರನಾದವನು ಒಂದು ತಿಂಗಳು ವಾಸವನ್ನು ಮಾಡಬೇಕು. ಆ ಮಹಾಪುಣ್ಯಪ್ರದವಾದ ಬ್ರಹ್ಮಕ್ಷೇತ್ರವೆಂದು ಕರೆಯಲ್ಪಡುವ ಸ್ಥಾನಕ್ಕೆ ಬ್ರಹ್ಮಾದಿದೇವತೆಗಳು ಋಷಿಗಳು ಸಿದ್ಧಚಾರಣರು ಗಂಧರ್ವರು ಅಪ್ಸರೆಯರು ಯಕ್ಷರು ಮತ್ತು ಸರ್ಪಗಳು ಬರುತ್ತಾರೆ.

ಮನಸಾಽಪ್ಯಭಿಕಾಮಸ್ಯ ಕುರುಕ್ಷೇತ್ರಂ ಯುಧಾಂವರ ।
ಪಾಪಾನಿ ವಿಪ್ರಣಶ್ಯಂತಿ ಸ್ವರ್ಗಲೋಕಂ ಚ ಗಚ್ಛತಿ ॥೭॥

ಯೋಧರಲ್ಲಿ ಶ್ರೇಷ್ಠನಾದವನೇ, ಕುರುಕ್ಷೇತ್ರವನ್ನು ಮನಸ್ಸಿನಲ್ಲಿಯೇ ಆಸೆಪಟ್ಟರೂ ಸಹ ಅವನ ಪಾಪಗಳು ನಾಶವಾಗುತ್ತವೆ. ಮತ್ತು ಅವನು ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಗತ್ವಾ ಹಿ ಶ್ರದ್ಧಯಾ ಯುಕ್ತಃ ಕುರುಕ್ಷೇತ್ರಂ ಕುರೂದ್ವಹ ।
ರಾಜಸೂಯಾಶ್ವಮೇಧಾಭ್ಯಾಂ ಫಲಂ ಪ್ರಾಪ್ನೋತಿ ಮಾನವಃ ॥೮॥

ಎಲೈ ಕುರೂದ್ವಹನೇ, ಯಾವ ಮಾನವನು ಶ್ರದ್ಧೆಯಿಂದಲೇ ಕುರುಕ್ಷೇತ್ರಕ್ಕೆ ಹೋಗುತ್ತಾನೋ ಅವನಿಗೆ ರಾಜಸೂಯಾಶ್ವಮೇಧಯಾಗಗಳ ಫಲವು ಉಂಟಾಗುತ್ತದೆ.

ತತಶ್ಚ ಮಂದುಕಂ ರಾಜನ್ ದ್ವಾರಪಾಲಂ ಮಹಾಬಲಮ್ ।
ಯಕ್ಷಂ ಸಮಭಿವಾದ್ಯೈವ ಗೋಸಹಸ್ರಫಲಂ ಲಭೇತ್ ॥೯॥

ಎಲೈ ರಾಜನೇ, ಅಲ್ಲಿಂದ ಮಂದುಕಕ್ಷೇತ್ರಕ್ಕೆ ಹೋಗಿ ಅಲ್ಲಿ ಮಹಾಬಲನಾದ ಯಕ್ಷನನ್ನು ನಮಸ್ಕರಿಸಿದರೆ ಸಹಸ್ರಗೋದಾನದ ಫಲವು ಉಂಟಾಗುತ್ತದೆ.

ತತೋ ಗಚ್ಛೇತ ಧರ್ಮಜ್ಞ ವಿಷ್ಣೋಃ ಸ್ಥಾನಮನುತ್ತಮಮ್ ।
ಸತತಂ ನಾಮ ಧರ್ಮಜ್ಞ ಯತ್ರ ಸನ್ನಿಹಿತೋ ಹರಿಃ ॥೧೦॥

ಎಲೈ ಧರ್ಮಜ್ಞನೇ, ಅಲ್ಲಿಂದ ವಿಷ್ಣುವಿನ ಶ್ರೇಷ್ಠಸ್ಥಾನವಾದ ಸತತ ಎಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಹರಿಯ ಸನ್ನಿಧಾನವಿದೆ.

ತತ್ರ ಸ್ನಾತ್ವಾऽರ್ಚಯಿತ್ವಾ ಚ ತ್ರಿಲೋಕಪ್ರಭವಂ ಹರಿಮ್ ।
ಅಶ್ವಮೇಧಮವಾಪ್ನೋತಿ ವಿಷ್ಣುಲೋಕಂ ಸ ಗಚ್ಛತಿ ॥೧೧॥

ಅಲ್ಲಿ ಸ್ನಾನವನ್ನು ಮಾಡಿ ತ್ರಿಲೋಕಸೃಷ್ಟಿಕರ್ತನಾದ ಹರಿಯನ್ನು ಪೂಜಿಸಿದವನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಅವನು ವಿಷ್ಣುಲೋಕವನ್ನು ಹೊಂದುತ್ತಾನೆ.

ತತಃ ಪರಿಪ್ಲವಂ ಗಚ್ಛೇತ್ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಮಾಪ್ನೋತಿ ಮಾನವಃ ।
ಪೃಥಿವ್ಯಾಸ್ತೀರ್ಥಮಾಸಾದ್ಯ ಗೋಸಹಸ್ರಮವಾಪ್ನುಯಾತ್ ॥೧೨॥

ಅನಂತರ ಮೂರುಲೋಕದಲ್ಲಿಯೂ ಪ್ರಸಿದ್ಧವಾದ ಪರಿಪ್ಲವತೀರ್ಥಕ್ಕೆ ಹೋಗಬೇಕು. ಅಲ್ಲಿ ಮನುಷ್ಯನು ಅಗ್ನಿಷ್ಟೋಮ ಮತ್ತು ಅತಿರಾತ್ರಯಾಗಗಳ ಫಲವನ್ನು ಹೊಂದುತ್ತಾನೆ. ಪೃಥಿವೀತೀರ್ಥಕ್ಕೆ ಹೋದ ಮಾನವನು ಸಹಸ್ರಗೋದಾನದ ಫಲವನ್ನು ಹೊಂದುತ್ತಾನೆ.

ತತಃ ಶಾಲೂಕಿನೀಂ ಗತ್ವಾ ತೀರ್ಥಸೇವೀ ನರಾಧಿಪ ।
ದಶಾಶ್ವಮೇಧೇ ಸ್ನಾತ್ವಾ ಚ ತದೇವ ಲಭತೇ ಫಲಮ್ ॥೧೩॥

ಎಲೈ ರಾಜನೇ, ತೀರ್ಥಯಾತ್ರೆಯನ್ನು ಮಾಡುವ ಮನುಷ್ಯನು ಅಲ್ಲಿಂದ ಶಾಲೂಕಿನೀನದಿಗೆ ಹೋಗಿ ದಶಾಶ್ವಮೇಧಘಟ್ಟದಲ್ಲಿ ಸ್ನಾನವನ್ನು ಮಾಡಿದರೆ ಅದೇ ದಶಾಶ್ವಮೇಧಗಳ ಫಲವನ್ನು ಪಡೆಯುತ್ತಾನೆ.

ಸರ್ಪದರ್ವೀಂ ಸಮಾಸಾದ್ಯ ನಾಗಾನಾಂ ತೀರ್ಥಮುತ್ತಮಮ್ ।
ಅಗ್ನಿಷ್ಟೋಮಮವಾಪ್ನೋತಿ ನಾಗಲೋಕಂ ಚ ಗಚ್ಛತಿ ॥೧೪॥

ನಾಗಗಳ ತೀರ್ಥವಾದ ಸರ್ಪದರ್ವೀತೀರ್ಥಕ್ಕೆ ಹೋದವನು ಅಗ್ನಿಷ್ಟೋಮಫಲವನ್ನು ಹೊಂದಿ ನಾಗಲೋಕವನ್ನು ಪಡೆಯುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ದ್ವಾರಪಾಲಮರಂದುಕಮ್ ।
ತತ್ರೋಷ್ಯ ರಜನೀಮೇಕಾಂ ಗೋಸಹಸ್ರಫಲಂ ಲಭೇತ್ ॥೧೫॥

ಎಲೈ ಧರ್ಮಜ್ಞನೇ, ಅಲ್ಲಿಂದ ಅರಂದುಕವೆಂಬ ದ್ವಾರಪಾಲಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಒಂದು ರಾತ್ರಿಯಿದ್ದರೆ ಸಹಸ್ರಗೋದಾನದ ಫಲವು ಉಂಟಾಗುತ್ತದೆ.

ತತಃ ಪಂಚವಟಂ ಗತ್ವಾ ನಿಯತೋ ನಿಯತಾಶನಃ ।
ಕೋಟಿತೀರ್ಥಮುಪಸ್ಪೃಶ್ಯ ಹಯಮೇಧಫಲಂ ಲಭೇತ್ ।
ಅಶ್ವಿನೋಸ್ತೀರ್ಥಮಾಸಾದ್ಯ ರೂಪವಾನಭಿಜಾಯತೇ ॥೧೬॥

ನಿಯಮಬದ್ಧನಾಗಿ ನಿಯತಆಹಾರವುಳ್ಳವನಾಗಿ ಅಲ್ಲಿಂದ ಪಂಚವಟಕ್ಕೆ ಹೋಗಿ ಕೋಟಿತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ಅಶ್ವಮೇಧಯಾಗದ ಫಲವು ಉಂಟಾಗುತ್ತದೆ. ಅಶ್ವಿನೀತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ಮನುಷ್ಯನು ರೂಪಸಂಪನ್ನನಾಗುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ವಾರಾಹಂ ತೀರ್ಥಮುತ್ತಮಮ್ ।
ವಿಷ್ಣುರ್ವಾರಾಹರೂಪೇಣ ಪೂರ್ವಂ ಯತ್ರ ಸ್ಥಿತೋ ವಿಭುಃ ।
ತತ್ರ ಸ್ನಾತ್ವಾ ನರವ್ಯಾಘ್ರ ಅಗ್ನಿಷ್ಟೋಮಫಲಂ ಲಭೇತ್ ॥೧೭॥

ಎಲೈ ಧರ್ಮಜ್ಞನೇ, ಅಲ್ಲಿಂದ ಶ್ರೇಷ್ಠವಾದ ವರಾಹತೀರ್ಥಕ್ಕೆ ಹೋಗಬೇಕು. ಅಲ್ಲಿ ವಿಭುವಾದ ವಿಷ್ಣುವು ಹಿಂದೆ ವರಾಹರೂಪವನ್ನು ಧರಿಸಿ ವಾಸಿಸಿದ್ದನು. ನರವ್ಯಾಘ್ರನೇ ಅಲ್ಲಿ ಸ್ನಾನವನ್ನು ಮಾಡಿದರೆ ಅಗ್ನಿಷ್ಟೋಮಯಾಗದ ಫಲವು ಉಂಟಾಗುತ್ತದೆ.

ತತೋ ಜಯಂತ್ಯಾಂ ರಾಜೇಂದ್ರ ಸೋಮತೀರ್ಥಂ ಸಮಾವಿಶೇತ್ ।
ಸ್ನಾತ್ವಾ ಫಲಮವಾಪ್ನೋತಿ ರಾಜಸೂಯಸ್ಯ ಮಾನವಃ ।
ಏಕಹಂಸೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೧೮॥

ಎಲೈ ರಾಜೇಂದ್ರನೇ, ಅಲ್ಲಿಂದ ಜಯಂತಿಯಲ್ಲಿ (ಜಯಂತಿ ನದಿಯಲ್ಲಿ) ಇರುವ ಸೋಮತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನವನ್ನು ಮಾಡುವ ಮನುಷ್ಯನು ರಾಜಸೂಯಯಾಗದ ಫಲವನ್ನು ಹೊಂದುತ್ತಾನೆ. ಏಕಹಂಸತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ಮನುಷ್ಯನಿಗೆ ಸಹಸ್ರಗೋದಾನದ ಫಲವು ಉಂಟಾಗುತ್ತದೆ.

ಕೃತಶೌಚಂ ಸಮಾಸಾದ್ಯ ತೀರ್ಥಸೇವೀ ಕುರೂದ್ವಹ ।
ಪೌಂಡರೀಕಮವಾಪ್ನೋತಿ ಕೃತಶೌಚೋ ಭವೇನ್ನರಃ ॥೧೯॥

ಎಲೈ ಕುರೂದ್ವಹನೇ, ತೀರ್ಥಯಾತ್ರೆಯನ್ನು ಮಾಡುವ ಮಾನವನು ಕೃತಶೌಚಕ್ಷೇತ್ರಕ್ಕೆ ಹೋದರೆ ಪುಂಡರೀಕಯಾಗಫಲವನ್ನು ಹೊಂದುತ್ತಾನೆ. ತಾನೂ ಶುಚಿಯಾಗುತ್ತಾನೆ.

ತತೋ ಮುಂಜವಟಂ ನಾಮ ಮಹಾದೇವಸ್ಯ ಧೀಮತಃ ।
ತತ್ರೋಷ್ಯ ರಜನೀಮೇಕಾಂ ಗಾಣಪತ್ಯಮವಾಪ್ನುಯಾತ್ ॥೨೦॥

ಅಲ್ಲಿಂದ ಮೇಧಾವಿಯಾದ ಮಹಾದೇವನ ಕ್ಷೇತ್ರವಾದ ಮುಂಜವಟ ಎಂಬಲ್ಲಿಗೆ ಹೋಗಿ ಅಲ್ಲಿ ಒಂದು ರಾತ್ರಿವಾಸಿಸಿದರೆ ಈಶ್ವರನ ಗಣಗಳ ಒಡೆತನವನ್ನು ಹೊಂದುತ್ತಾನೆ.

ತತ್ರೈವ ಚ ಮಹಾರಾಜ ಯಕ್ಷ್ಮೀ ಲೋಕಪರಿಶ್ರುತಾ ।
ತಾಂ ಚಾಭಿಗಮ್ಯ ರಾಜೇಂದ್ರ ಪುಣ್ಯಲೋಕಾನವಾಪ್ನುಯಾತ್ ॥೨೧॥

ಕುರುಕ್ಷೇತ್ರಸ್ಯ ತದ್ ದ್ವಾರಂ ವಿಶ್ರುತಂ ಭರತರ್ಷಭ ।

ಮಹಾರಾಜನೇ, ಅಲ್ಲಿಯೇ ಲೋಕಪ್ರಸಿದ್ಧಳಾದ ಒಬ್ಬಯಕ್ಷಿಯಿದ್ದಾಳೆ. ರಾಜೇಂದ್ರನೇ, ಅವಳದರ್ಶನದಿಂದ ಪುಣ್ಯಲೋಕಗಳನ್ನು ಹೊಂದುತ್ತಾನೆ. ಭರತಶ್ರೇಷ್ಠನೇ, ಮುಂಜವಟವು ಕುರುಕ್ಷೇತ್ರದ ದ್ವಾರವೆಂದು ಪ್ರಸಿದ್ಧವಾಗಿದೆ.

ಪ್ರದಕ್ಷಿಣಮುಪಾವೃತ್ಯ ತೀರ್ಥಸೇವೀ ಸಮಾಹಿತಃ ॥೨೨॥

ಸಮ್ಮಿತೇ ಪುಷ್ಕರಾಣಾಂ ಚ ಸ್ನಾತ್ವಾರ್ಚ್ಯ ಪಿತೃದೇವತಾಃ ।
ಜಾಮದಗ್ನ್ಯೇನ ರಾಮೇಣ ಆಹೃತಾಃ ಸುಮಹಾತ್ಮನಾ ॥೨೩॥

ಕೃತಕೃತ್ಯೋ ಭವೇದ್ ರಾಜನ್ನಶ್ವಮೇಧಂ ಚ ವಿಂದತಿ ।
ತತೋ ರಾಮಹ್ರದಾನ್ ಗಚ್ಛೇತ್ ತೀರ್ಥಸೇವೀ ನರಾಧಿಪ ॥೨೪॥

ತತ್ರ ರಾಮೇಣ ರಾಜೇಂದ್ರ ತಪಸಾ ದೀಪ್ತತೇಜಸಾ ।
ಕ್ಷತ್ರಮುತ್ಸಾದ್ಯ ವೀರ್ಯೇಣ ಹ್ರದಾಃ ಪಂಚ ನಿವೇಶಿತಾಃ ।
ಪೂರಯಿತ್ವಾ ನರವ್ಯಾಘ್ರ ರುಧಿರೇಣೇತಿ ನಃ ಶ್ರುತಿಃ ॥೨೫॥

ತೀರ್ಥಯಾತ್ರೆಯನ್ನು ಮಾಡುವವನು ಅಲ್ಲಿಂದ ಪ್ರದಕ್ಷಿಣಾಕಾರವಾಗಿ ಬಂದು ಮನಸ್ಸಮಾಧಾನದಿಂದ ಕೂಡಿದವನಾಗಿ ಪುಷ್ಕರಗಳಿಗೆ ಸಮಾನವಾದ ಮಹಾತ್ಮನಾದ ಜಮದಗ್ನಿಪುತ್ರನಾದ ಪರಶುರಾಮನಿಂದ ಕೃತವಾದ ತೀರ್ಥದಲ್ಲಿ ಸ್ನಾನವನ್ನುಮಾಡಿ ಪಿತೃದೇವತೆಗಳನ್ನು ಅರ್ಚಿಸಿದರೆ ಕೃತಕೃತ್ಯನಾಗುತ್ತಾನೆ. ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ಎಲೈ ರಾಜನೇ ಅಲ್ಲಿಂದ ತೀರ್ಥಸೇವಿಯಾದ ಮಾನವನು ರಾಮಹ್ರದಗಳಿಗೆ (ಪರಶುರಾಮ ಸರೋವರಗಳಿಗೆ) ಹೋಗಬೇಕು. ಎಲೈ ರಾಜೇಂದ್ರನೇ, ಅಲ್ಲಿ ಮಹಾಪರಾಕ್ರಮದಿಂದಲೂ ತಪಸ್ಸಿನಿಂದಲೂ ಯುಕ್ತನಾಗಿದ್ದ ಪರಶುರಾಮನು ತನ್ನ ವೀರ್ಯದಿಂದ ಕ್ಷತ್ರಿಯ ಕುಲವನ್ನು ಸಂಹರಿಸಿ ಐದುಸರೋವರಗಳನ್ನುಮಾಡಿ ಅವುಗಳನ್ನು ಕ್ಷತ್ರಿಯರಕ್ತದಿಂದ ತುಂಬಿದನೆಂದು ನಾವು ಕೇಳಿದ್ದೇವೆ.

ಪಿತರಸ್ತರ್ಪಿತಾಃ ಸರ್ವೇ ತಥೈವ ಚ ಪಿತಾಮಹಾಃ ।
ತತಸ್ತೇ ಪಿತರಃ ಪ್ರೀತಾ ರಾಮಮೂಚುರ್ಮಹೀಪತೇ ॥೨೬॥

ಆ ರಕ್ತದಿಂದ ಪರಶುರಾಮನು ತನ್ನ ಎಲ್ಲಾ ಪಿತೃಗಳಿಗೂ ಮತ್ತು ಪಿತಾಮಹರಿಗೂ ತರ್ಪಣವನ್ನು ಕೊಟ್ಟನು. ಎಲೈ ರಾಜನೇ ಸಂತುಷ್ಟರಾದ ಆ ಪಿತೃಗಳು ಆಗ ಪರಶುರಾಮನನ್ನು ಕುರಿತು ಹೇಳಿದರು.

ರಾಮ ರಾಮ ಮಹಾಭಾಗ ಪ್ರೀತಾಃ ಸ್ಮ ತವ ಭಾರ್ಗವ ।
ಅನಯಾ ಪಿತೃಭಕ್ತ್ಯಾ ಚ ವಿಕ್ರಮೇಣ ಚ ತೇ ವಿಭೋ ।
ವರಂ ವೃಣೀಷ್ವ ಭದ್ರಂ ತೇ ಯದೀಚ್ಛಸಿ ಮಹಾದ್ಯುತೇ ॥೨೭॥

ಎಲೈ ಭಾರ್ಗವನಾದ ಮಹಾನುಭಾವನಾದ ಪರಶುರಾಮನೇ, ನಿನ್ನ ಈ ಪಿತೃಭಕ್ತಿಯಿಂದಲೂ ಮತ್ತು ನಿನ್ನ ಪರಾಕ್ರಮದಿಂದಲೂ ನಾವು ನಿನಗೆ ಸಂತುಷ್ಟರಾಗಿದ್ದೇವೆ. ವಿಭುವೇ, ನಿನಗೆ ಮಂಗಳವಾಗಲಿ. ಮಹಾಕಾಂತಿಯುಕ್ತನಾದವನೇ, ನಿನಗೆ ಬೇಕಾದ ವರವನ್ನು ಕೇಳು.

ಏವಮುಕ್ತಸ್ತು ರಾಜೇಂದ್ರ ರಾಮಃ ಪ್ರಹರತಾಂ ವರಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಪಿತೄನ್ ಸ್ವಾನ್ ಗಗನೇ ಸ್ಥಿತಾನ್ ॥

ರಾಜೇಂದ್ರನೇ, ತನ್ನ ಪಿತೃಗಳಿಂದ ಹೀಗೆ ಹೇಳಲ್ಪಟ್ಟ ಪ್ರಹಾರವನ್ನು ಮಾಡುವವರಲ್ಲಿ ಶ್ರೇಷ್ಠನಾದ ಪರಶುರಾಮನು ಕೈಗಳನ್ನು ಮುಗಿದು ಗಗನದಲ್ಲಿರುವ ತನ್ನ ಪಿತೃಗಳನ್ನು ಕುರಿತು ಮಾತನಾಡಿದನು.

ಭವಂತೋ ಯದಿ ಮೇ ಪ್ರೀತಾ ಯದ್ಯನುಗ್ರಾಹ್ಯತಾ ಮಯಿ ।
ಪಿತೃಪ್ರಸಾದಾದಿಚ್ಛೇಯಂ ತಪಸಾಪ್ಯಾಯನಂ ಪುನಃ ॥೨೯॥

ನೀವು ನನಗೆ ಪ್ರಸನ್ನರಾಗಿದ್ದರೆ ನನಗೆ ಅನುಗ್ರಹಮಾಡುವ ಅಭಿಪ್ರಾಯವನ್ನು ಹೊಂದಿದ್ದರೆ ಪಿತೃಗಳಾದ ನಿಮ್ಮ ಅನುಗ್ರಹದಿಂದ ನಾನು ಪುನಃ ನನ್ನ ತಪಸ್ಸಿನ ವೃದ್ಧಿಯನ್ನೇ ಬಯಸುತ್ತೇನೆ.

ಯಚ್ಚ ರೋಷಾಭಿಭೂತೇನ ಕ್ಷತ್ರಮುತ್ಸಾದಿತಂ ಮಯಾ ।
ತತಸ್ತು ಪಾಪಾನ್ಮುಚ್ಯೇಯಂ ಯುಷ್ಮಾಕಂ ತೇಜಸಾ ಹ್ಯಹಮ್ ।
ಹ್ರದಾಶ್ಚ ತೀರ್ಥಭೂತಾ ಮೇ ಭವೇಯುರ್ಭುವಿ ವಿಶ್ರುತಾಃ ॥೩೦॥

ನಾನು ರೋಷಕ್ಕೆ ವಶನಾಗಿ ಕ್ಷತ್ರಿಯಕುಲವನ್ನು ಸಂಹರಿಸಿದೆ. ನಿಮ್ಮ ತಪೋಬಲದಿಂದ (ತೇಜಸ್ಸಿನಿಂದ)ನಾನು ಆ ಪಾಪದಿಂದ ಮುಕ್ತನಾಗಬೇಕು. ನಾನು ನಿರ್ಮಿಸಿದ ಈ ಸರೋವರಗಳು ಭೂಮಿಯಲ್ಲಿ ಪ್ರಖ್ಯಾತವಾದ ತೀರ್ಥಗಳಾಗಬೇಕು.

ತೇ ತಚ್ಛ್ರುತ್ವಾ ಶುಭಂ ವಾಕ್ಯಂ ರಾಮಸ್ಯ ಪಿತರಸ್ತದಾ ।
ಪ್ರತ್ಯೂಚುಃ ಪರಮಪ್ರೀತಾ ರಾಮಂ ಹರ್ಷಸಮನ್ವಿತಾಃ ॥೩೧॥

ಆಗ ಪರಶುರಾಮನ ಪಿತೃಗಳು ರಾಮನ ಆ ಶುಭವಾಕ್ಯವನ್ನು ಕೇಳಿ ಬಹಳ ಸಂತೋಷಗೊಂಡವರಾಗಿ ಪರಶುರಾಮನನ್ನು ಕುರಿತು ಹರ್ಷದಿಂದ ಮಾತನಾಡಿದರು.

ತಪಸ್ತೇ ವರ್ಧತಾಂ ಭೂಯಃ ಪಿತೃಭಕ್ತ್ಯಾ ವಿಶೇಷತಃ ।
ಯಚ್ಚ ರೋಷಾಭಿಭೂತೇನ ಕ್ಷತ್ರಮುತ್ಸಾದಿತಂ ತ್ವಯಾ ॥೩೨॥

ತತಶ್ಚ ಪಾಪಾನ್ಮುಕ್ತಸ್ತ್ವಂ ನಿಹತಾಸ್ತೇ ಸ್ವಕರ್ಮಭಿಃ ।
ಹ್ರದಾಶ್ಚ ತವ ತೀರ್ಥತ್ವಂ ಗಮಿಷ್ಯಂತಿ ನ ಸಂಶಯಃ ॥೩೩॥

ನಿನ್ನ ತಪಸ್ಸು ಪುನಃ ವೃದ್ಧಿಯನ್ನು ಹೊಂದಲಿ. ವಿಶೇಷವಾದ ಪಿತೃಭಕ್ತಿಯಿಂದ ನೀನು ರೋಷಕ್ಕೆ ವಶನಾಗಿ ಕ್ಷತ್ರಿಯರನ್ನು ಸಂಹಾರಮಾಡಿದ ಪಾಪದಿಂದ ನೀನು ಮುಕ್ತನಾಗಿದ್ದೀಯೆ. ಆ ಕ್ಷತ್ರಿಯರು ತಮ್ಮ ಕರ್ಮಗಳಿಂದಲೇ ಮೃತರಾಗಿದ್ದಾರೆ. ನೀನು ನಿರ್ಮಿಸಿದ ಸರೋವರಗಳು ನಿಸ್ಸಂಶಯವಾಗಿ ಪವಿತ್ರವಾದ ತೀರ್ಥಗಳಾಗುವವು.

ಹ್ರದೇಷ್ವೇತೇಷು ಯಃ ಸ್ನಾತ್ವಾ ಪಿತೄನ್ ಸಂತರ್ಪಯಿಷ್ಯತಿ ।
ಪಿತರಸ್ತತ್ರ ವೈ ಪ್ರೀತಾ ದಾಸ್ಯಂತಿ ಭುವಿ ದುರ್ಲಭಮ್ ।
ಸಮೀಪ್ಸಿತಂ ಮನಃಕಾಮಂ ಸ್ವರ್ಗಲೋಕಂ ಚ ಶಾಶ್ವತಮ್ ॥೩೪॥

ಯಾವ ಮನುಷ್ಯನು ಈ ಸರೋವರಗಳಲ್ಲಿ ಸ್ನಾನಮಾಡಿ ತನ್ನ ಪಿತೃಗಳಿಗೆ ತರ್ಪಣವನ್ನು ಕೊಡುವನೋ ಅವನಿಗೆ ಅವನ ಪಿತೃಗಳು ಪ್ರಸನ್ನರಾಗಿ ಅವನಿಗೆ ಇಷ್ಟವಾದ ದುರ್ಲಭವಾದ ಮನೋಭೀಷ್ಟವನ್ನು ಕೊಡುವರು ಮತ್ತು ಅವನು ಶಾಶ್ವತವಾದ ಸ್ವರ್ಗಲೋಕವನ್ನು ಪಡೆಯುವನು.

ಏವಂ ದತ್ತ್ವಾ ವರಾನ್ ರಾಜನ್ ರಾಮಸ್ಯ ಪಿತರಸ್ತದಾ ।
ಆಮಂತ್ರ್ಯ ಭಾರ್ಗವಂ ಪ್ರೀತ್ಯಾ ತತ್ಕೈವಾಂತರ್ದಧುಸ್ತದಾ ॥೩೫॥

ಎಲೈ ರಾಜನೇ, ಆ ಪಿತೃಗಳು ಪರಶುರಾಮನಿಗೆ ಹೀಗೆ ವರಗಳನ್ನು ಕೊಟ್ಟು ಅವನ ಅನುಜ್ಞೆಯನ್ನು ಪಡೆದು ಅಲ್ಲಿಯೇ ಅದೃಶ್ಯರಾದರು.

ಏವಂ ರಾಮಹ್ರದಾಃ ಪುಣ್ಯಾ ಭಾರ್ಗವಸ್ಯ ಮಹಾತ್ಮನಃ ।
ಸ್ನಾತ್ವಾ ಹ್ರದೇಷು ರಾಮಸ್ಯ ಬ್ರಹ್ಮಚಾರೀ ಶುಚಿವ್ರತಃ ।
ರಾಮಮಭ್ಯರ್ಚ್ಯ ರಾಜೇಂದ್ರ ಲಭೇದ್ ಬಹುಸುವರ್ಣಕಮ್ ॥೩೬॥

ಹೀಗೆ ಮಹಾತ್ಮನಾದ ಭಾರ್ಗವರಾಮನು ನಿರ್ಮಿಸಿದ ಆ ಸರೋವರಗಳು ಪವಿತ್ರವಾದವುಗಳು. ಬ್ರಹ್ಮಚಾರಿಯೂ ಶುಚಿವ್ರತನೂ ಆದ ಮನುಷ್ಯನು ರಾಮ ಹ್ರದಗಳಲ್ಲಿ ಸ್ನಾನವನ್ನುಮಾಡಿ ಪರಶುರಾಮನನ್ನು ಪೂಜಿಸಿದರೆ ಎಲೈ ರಾಜೇಂದ್ರನೇ, ಸುವರ್ಣಸಹಿತವಾದ ಬಹುಸಂಪತ್ತನ್ನು ಪಡೆಯುವನು.

ವಂಶಮೂಲಕಮಾಸಾದ್ಯ ತೀರ್ಥಸೇವೀ ಕುರೂದ್ವಹ ।
ಸ್ವವಂಶಮುದ್ಧರೇದ್ ರಾಜನ್ ಸ್ನಾತ್ವಾ ವೈ ವಂಶಮೂಲಕೇ ॥೩೭॥

ಎಲೈ ಕುರೂದ್ವಹನೇ, ತೀರ್ಥಸೇವಿಯಾದ ಮಾನವನು ವಂಶಮೂಲಕ್ಷೇತ್ರಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿದರೆ ತನ್ನ ವಂಶವನ್ನು ಉದ್ಧರಿಸುತ್ತಾನೆ.

ಕಾಯಶೋಧನಮಾಸಾದ್ಯ ತೀರ್ಥಂ ಭರತಸತ್ತಮ ।
ಶರೀರಶುದ್ಧಿಮಾಪ್ನೋತಿ ಸ್ನಾತ್ವಾ ತಸ್ಮಿನ್ ನ ಸಂಶಯಃ ।
ಶುದ್ಧದೇಹಶ್ಚ ಸಂಯಾತಿ ಶುಭಾನ್ ಲೋಕಾನನುತ್ತಮಾನ್ ॥೩೮॥

ಎಲೈ ಭರತಶ್ರೇಷ್ಠನೇ, ಕಾಯಶೋಧನತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನುಮಾಡುವವನು ನಿಸ್ಸಂಶಯವಾಗಿ ಶರೀರಶುದ್ಧಿಯನ್ನು ಪಡೆಯುತ್ತಾನೆ. ಶರೀರಶುದ್ಧಿಯನ್ನು ಪಡೆದು ಅವನು ಶುಭವಾದ ಮತ್ತು ಶ್ರೇಷ್ಠವಾದ ಲೋಕಗಳನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಲೋಕಾ ಯತ್ರೋದ್ಧೃತಾಃ ಪೂರ್ವಂ ವಿಷ್ಣುನಾ ಪ್ರಭವಿಷ್ಣುನಾ ॥೫೯॥

ಲೋಕೋದ್ಧಾರಂ ಸಮಾಸಾದ್ಯ ತೀರ್ಥಸೇವೀ ಕುರೂದ್ವಹ ।
ಸ್ನಾತ್ವಾ ತೀರ್ಥವರೇ ರಾಜನ್‌ಲೋಕಾನುದ್ಧರತೇ ಸ್ವಕಾನ್ ॥೬೦॥

ಎಲೈ ರಾಜೇಂದ್ರನೇ, ಅನಂತರ ಎಲ್ಲಿ ಮಹಾಸಮರ್ಥನಾದ ವಿಷ್ಣುವು ಲೋಕಗಳನ್ನು ಮೇಲಕ್ಕೆ ಎತ್ತಿದನೋ ಅಂತಹ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ಲೋಕೋದ್ಧಾರತೀರ್ಥಕ್ಕೆ ಹೋಗಬೇಕು. ಎಲೈ ಕುರೂದ್ವಹನೇ, ತೀರ್ಥಸೇವಿಯಾದವನು ಲೋಕೋದ್ಧಾರ ಕ್ಷೇತ್ರಕ್ಕೆ ಹೋಗಿ ಆ ಶ್ರೇಷ್ಠವಾದ ತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ತನ್ನ ಜನರನ್ನು ಉದ್ಧರಿಸುತ್ತಾನೆ.

ಶ್ರೀತೀರ್ಥಂ ಚ ಸಮಾಸಾದ್ಯ ವಿಂದತೇ ಶ್ರಿಯಮುತ್ತಮಾಮ್ ।
ಕಾಪಿಲಂ ತೀರ್ಥಮಾಸಾದ್ಯ ಬ್ರಹ್ಮಚಾರೀ ಸಮಾಹಿತಃ ॥೬೧॥

ತತ್ರ ಸ್ನಾತ್ವಾರ್ಚಯಿತ್ವಾ ತು ದೇವತಾಶ್ಚ ಪಿತೄಂಸ್ತದಾ ।
ಕಪಿಲಾನಾಂ ಸಹಸ್ರಸ್ಯ ಫಲಂ ವಿಂದತಿ ಮಾನವಃ ॥೬೨॥

ಶ್ರೀತೀರ್ಥದಲ್ಲಿ ಸ್ನಾನವನ್ನುಮಾಡಿದ ಮನುಷ್ಯನು ಉತ್ತಮವಾದ ಸಂಪತ್ತನ್ನು ಪಡೆಯುತ್ತಾನೆ. ಬ್ರಹ್ಮಚಾರಿಯಾಗಿ ಸಮಾಧಾನವುಳ್ಳ ಮನಸ್ಸಿನಿಂದ ಕೂಡಿ ಕಪಿಲತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನುಮಾಡಿ ದೇವತೆಗಳನ್ನು ಮತ್ತು ಪಿತೃಗಳನ್ನು ಪೂಜಿಸುವ ಮಾನವನು ಸಹಸ್ರಕಪಿಲ ಗೋದಾನದ ಫಲವನ್ನು ಹೊಂದುತ್ತಾನೆ.

ಸೂರ್ಯತೀರ್ಥಂ ಸಮಾಸಾದ್ಯ ಸ್ನಾತ್ವಾ ನಿಯತಮಾನಸಃ ।
ಅರ್ಚಯಿತ್ವಾ ಪಿತೄ ನ್ ದೇವಾನ್ ಉಪವಾಸಪರಾಯಣಃ ।
ಅಗ್ನಿಷ್ಟೋಮಮವಾಪ್ನೋತಿ ಸೂರ್ಯಲೋಕಂ ಚ ವಿಂದತಿ ॥೬೩॥

ಮಾನವನು ಜಿತಮನಸ್ಕನಾಗಿ ಸೂರ್ಯತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿ ಉಪವಾಸಪರನಾಗಿ ಪಿತೃಗಳನ್ನು ಮತ್ತು ದೇವತೆಗಳನ್ನು ಅರ್ಚಿಸಿದರೆ ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ. ಮತ್ತು ಸೂರ್ಯಲೋಕವನ್ನು ಹೊಂದುತ್ತಾನೆ.

ಗವಾಂ ಭವನಮಾಸಾದ್ಯ ತೀರ್ಥಸೇವೀ ಯಥಾಕ್ರಮಮ್ ।
ತತ್ರಾಭಿಷೇಕಂ ಕುರ್ವಾಣೋ ಗೋಸಹಸ್ರಫಲಂ ಲಭೇತ್ ॥೪೪॥

ತೀರ್ಥಸೇವಿಯಾದ ಮನುಷ್ಯನು ಕ್ರಮವಾಗಿ ಗೋಭವನಕ್ಷೇತ್ರಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿದರೆ ಸಹಸ್ರಗೋದಾನದ ಫಲವನ್ನು ಪಡೆಯುತ್ತಾನೆ.

ಶಂಖಿನೀಂ ತತ ಆಸಾದ್ಯ ತೀರ್ಥಸೇವೀ ಕುರೂದ್ವಹ ।
ದೇವ್ಯಾಸ್ತೀರ್ಥೇ ನರಃ ಸ್ನಾತ್ವಾ ಲಭತೇ ರೂಪಮುತ್ತಮಮ್ ॥೪೫॥

ಎಲೈ ಕುರೂದ್ವಹನೇ, ತೀರ್ಥಸೇವಿಯಾದ ನರನು ಅಲ್ಲಿಂದ ಶಂಖಿನೀತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿದರೆ ದೇವಿಯ ಅನುಗ್ರಹದಿಂದ ಉತ್ತಮವಾದ ರೂಪವನ್ನು ಪಡೆಯುತ್ತಾನೆ.

ತತೋ ಗಚ್ಛೇತ ರಾಜೇಂದ್ರ ದ್ವಾರಪಾಲಮರುಂತುಕಮ್ ।
ತಸ್ಯ ತೀರ್ಥಂ ಸಮಾಸಾದ್ಯ ಯಕ್ಷೇಂದ್ರಸ್ಯ ಮಹಾತ್ಮನಃ ।
ಯತ್ರ ಸ್ನಾತ್ವಾ ನರೋ ರಾಜನ್ನಗ್ನಿಷ್ಟೋಮಫಲಂ ಲಭೇತ್ ॥೪೬॥

ಎಲೈ ರಾಜೇಂದ್ರನೇ, ಅರುಂತುಕ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಹೋಗಿ ಮಹಾತ್ಮನಾದ ಯಕ್ಷಪತಿಯ ತೀರ್ಥದಲ್ಲಿ ಸ್ನಾನವನ್ನು ಮಾಡುವ ನರನು ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಬ್ರಹ್ಮಾವರ್ತಂ ನರಾಧಿಪ ।
ಬ್ರಹ್ಮಾವರ್ತೇ ನರಃ ಸ್ನಾತ್ವಾ ಬ್ರಹ್ಮಲೋಕಮವಾಪ್ನುಯಾತ್ ॥೪೭॥

ಎಲೈ ರಾಜೇಂದ್ರನೇ, ಅಲ್ಲಿಂದ ಬ್ರಹ್ಮಾವರ್ತಕ್ಷೇತ್ರಕ್ಕೆ ಹೋಗಬೇಕು. ಬ್ರಹ್ಮಾವರ್ತಕ್ಷೇತ್ರದಲ್ಲಿ ಸ್ನಾನವನ್ನು ಮಾಡಿದ ಮನುಷ್ಯನು ಬ್ರಹ್ಮಲೋಕವನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಸುತೀರ್ಥಕಮನುತ್ತಮಮ್ ।
ತತ್ರ ಸನ್ನಿಹಿತಾ ರಾಜನ್ ಪಿತರೋ ದೈವತೈಃ ಸಹ ॥೪೮॥

ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ।
ಅಶ್ವಮೇಧಮವಾಪ್ನೋತಿ ಪಿತೃಲೋಕಂ ಚ ಗಚ್ಛತಿ ॥೪೯॥

ಎಲೈ ರಾಜೇಂದ್ರನೇ, ಅಲ್ಲಿಂದ ಶ್ರೇಷ್ಠವಾದ ಸುತೀರ್ಥಕವೆಂಬ ತೀರ್ಥಕ್ಕೆ ಹೋಗಬೇಕು. ರಾಜನೇ, ಅಲ್ಲಿ ದೇವತೆಗಳ ಜೊತೆಯಲ್ಲಿ ಪಿತೃಗಳು ಸನ್ನಿಹಿತರಾಗಿರುತ್ತಾರೆ. ಅಲ್ಲಿ ಸ್ನಾನವನ್ನು ಮಾಡಿ ಪಿತೃದೇವತೆಗಳ ಅರ್ಚನೆಯಲ್ಲಿ ರತನಾದವನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಮತ್ತು ಪಿತೃಲೋಕವನ್ನು ಹೊಂದುತ್ತಾನೆ.

ತತೋಽಂಬವಶ್ಯಂ ಧರ್ಮಜ್ಞ ಸಮಾಸಾದ್ಯ ಯಥಾಕ್ರಮಮ್ ।
ಕೌಶೇಶ್ವರಸ್ಯ ತೀರ್ಥೇಷು ಸ್ನಾತ್ವಾ ಭರತಸತ್ತಮ ।
ಸರ್ವವ್ಯಾಧಿವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ॥೫೦॥

ಧರ್ಮಜ್ಞನೇ, ಅನಂತರ ಕ್ರಮವಾಗಿ ಕೌಶೇಶ್ವರತೀರ್ಥವಾದ ಅಂಬವಶ್ಯತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿದರೆ ಎಲೈ ಭರತಸತ್ತಮನೇ ಎಲ್ಲಾ ವ್ಯಾಧಿಗಳಿಂದಲೂ ನಿರ್ಮುಕ್ತನಾಗಿ ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಮಾತೃತೀರ್ಥಂ ಚ ತತ್ರೈವ ಯತ್ರ ಸ್ನಾತಸ್ಯ ಭಾರತ ।
ಪ್ರಜಾ ವಿವರ್ಧತೇ ರಾಜನ್ನನಂತಾಂ ಚಾಶ್ನುತೇ ಶ್ರಿಯಮ್ ॥೫೧॥

ಎಲೈ ಭಾರತನೇ, ಅಲ್ಲಿಯೇ ಮಾತೃತೀರ್ಥವು ಇದೆ. ಎಲೈ ರಾಜನೇ ಅಲ್ಲಿ ಸ್ನಾನವನ್ನು ಮಾಡಿದರೆ ಪ್ರಜೆಗಳು ಅಭವೃದ್ಧಿಯನ್ನು ಹೊಂದುತ್ತಾರೆ. ಮತ್ತು ಅನಂತವಾದ ಸಂಪತ್ತು ಉಂಟಾಗುತ್ತದೆ.

ತತಃ ಶೀತವನಂ ಗಚ್ಛೇತ್ ನಿಯತೋ ನಿಯತಾಶನಃ ।
ತೀರ್ಥಂ ತತ್ರ ಮಹಾರಾಜ ಮಹದನ್ಯತ್ರ ದುರ್ಲಭಮ್ ॥೫೨॥

ಪುನಾತಿ ದರ್ಶನಾದೇತದ್ ದಂಡೇನೈಕಂ ನರಾಧಿಪ ।
ಕೇಶಾನಭ್ಯುಕ್ಷ್ಯ ವೈ ತಸ್ಮಿನ್ ಪೂತೋ ಭವತಿ ಭಾರತ ॥೫೩॥

ಅಲ್ಲಿಂದ ನಿಯಮಬದ್ಧನಾಗಿ ನಿಯತ ಆಹಾರನಾಗಿ ಶೀತವನಕ್ಕೆ ಹೋಗಬೇಕು. ಮಹಾರಾಜನೇ, ಅಂತಹ ತೀರ್ಥವು ಇನ್ನೊಂದು ಕಡೆಯಲ್ಲಿ ದುರ್ಲಭವಾದುದು.

ನರಾಧಿಪನೇ, ಈ ತೀರ್ಥವು ಕೇವಲ ದರ್ಶನದಿಂದಲೇ ಅಥವಾ ಒಂದು ದಂಡಪ್ರಮಾಣಾಮದಿಂದಲೇ ಪವಿತ್ರೀಕರಿಸುತ್ತದೆ. ಎಲೈ ಭಾರತನೇ ಅಲ್ಲಿ ಶಿರಃಸ್ನಾನವನ್ನು ಮಾಡಿದ ಮನುಷ್ಯನು ಪವಿತ್ರನಾಗುತ್ತಾನೆ.

ತೀರ್ಥಂ ತತ್ರ ಮಹಾರಾಜ ಶ್ವಾನಲೋಮಾಪಹಂ ಸ್ಮೃತಮ್ ।
ಯತ್ರ ವಿಪ್ರಾ ನರವ್ಯಾಘ್ರ ವಿದ್ವಾಂಸಸ್ತೀರ್ಥತತ್ಪರಾಃ ।
ಗತಿಂ ಗಚ್ಛಂತಿ ಪರಮಾಂ ಸ್ನಾತ್ವಾ ಭರತಸತ್ತಮ ॥೫೪॥

ಎಲೈ ಮಹಾರಾಜನೇ, ಅಲ್ಲಿಯೇ ಶ್ವಾನಲೋಮಾಪಹವೆಂಬ ತೀರ್ಥವೂ ಇದೆ. ಎಲೈ ಭರತಸತ್ತಮನೇ, ನರ ವ್ಯಾಘ್ರನೇ, ತೀರ್ಥಸೇವಿಗಳಾದ ವಿದ್ವಾಂಸರಾದ ಬ್ರಾಹ್ಮಣರು ಅಲ್ಲಿ ಸ್ನಾನವನ್ನು ಮಾಡಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ಶ್ವಾನಲೋಮಾಪನಯನೇ ತೀರ್ಥೇ ಭರತಸತ್ತಮ ।
ಪ್ರಾಣಾಯಾಮೈರ್ನಿಭಾಯಾಂತಿ ಶ್ವಾನಲೋಮಾನ್ ದ್ವಿಜೋತ್ತಮಾಃ।
ಪೂತಾತ್ಮಾನಶ್ಚ ರಾಜೇಂದ್ರ ಪ್ರಯಾಂತಿ ಪರಮಾಂ ಗತಿಮ್ ॥೫೫॥

ಎಲೈ ಭರತಸತ್ತಮನೇ, ಶ್ವಾನಲೋಮಾಪಹತೀರ್ಥದಲ್ಲಿ ಸ್ನಾನವನ್ನು ಮಾಡಿದ ಬ್ರಾಹ್ಮಣಶ್ರೇಷ್ಠರು ಆ ತೀರ್ಥದ ಮಹಿಮೆಯಿಂದ ಪ್ರಾಣಾಯಾಮಗಳಿಂದ ವಿಶೇಷಕಾಂತಿಯನ್ನು ಹೊಂದುತ್ತಾರೆ. ರಾಜೇಂದ್ರನೇ ಮತ್ತು ಪವಿತ್ರರಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ದಶಾಶ್ವಮೇಧಿಕಂ ಚೈವ ತಸ್ಮಿಂಸ್ತೀರ್ಥೇ ಮಹೀಪತೇ ।
ತತ್ರ ಸ್ನಾತ್ವಾ ನರವ್ಯಾಘ್ರ ಗಚ್ಛೇತ ಪರಮಾಂ ಗತಿಮ್ ॥೫೬॥

ಎಲೈ ರಾಜನೇ, ಅಲ್ಲಿಯೇ ಸಮೀಪದಲ್ಲಿ ದಶಾಶ್ವಮೇಧಿಕವೆಂಬ ತೀರ್ಥವು ಇದೆ. ನರವ್ಯಾಘ್ರನೇ, ಅಲ್ಲಿ ಸ್ನಾನಮಾಡಿದ ಮನುಷ್ಯನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಮಾನುಷಂ ಲೋಕವಿಶ್ರುತಮ್ ।
ಯತ್ರ ಕೃಷ್ಣಮೃಗಾ ರಾಜನ್ ವ್ಯಾಧೇನ ಪರಿಪೀಡಿತಾಃ ।
ವಗಾಹ್ಯ ತಸ್ಮಿನ್ ಸರಸಿ ಮಾನುಷತ್ವಮುಪಾಗತಾಃ ॥೫೭॥

ರಾಜೇಂದ್ರನೇ, ಅಲ್ಲಿಂದ ಲೋಕವಿಶ್ರುತವಾದ ಮಾನುಷತೀರ್ಥಕ್ಕೆ ಹೋಗಬೇಕು. ರಾಜನೇ, ಅಲ್ಲಿ ವ್ಯಾಧನ ಬಾಣಗಳಿಂದ ಪೀಡಿತವಾದ ಕೃಷ್ಣಮೃಗಗಳು ಆ ಸರೋವರದಲ್ಲಿ ಸ್ನಾನವನ್ನು ಮಾಡಿ ಮಾನುಷತ್ವವನ್ನು ಪಡೆದವು.

ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಬ್ರಹ್ಮಚಾರೀ ಜಿತೇಂದ್ರಿಯಃ ।
ಸರ್ವಪಾಪವಿಶುದ್ಧಾತ್ಮಾ ಸ್ವರ್ಗಲೋಕೇ ಮಹೀಯತೇ ॥೫೮॥

ಬ್ರಹ್ಮಚಾರಿಯೂ ಜಿತೇಂದ್ರಿಯನೂ ಆಗಿ ಆ ತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಸರ್ವಪಾಪಗಳಿಂದ ವಿನಿರ್ಮುಕ್ತನಾಗಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಮಾನುಷ್ಯ ತು ಪೂರ್ವೇಣ ಕ್ರೋಶಮಾತ್ರೇಮಹೀಪತೇ ।
ಆಗತಾ ನಾಮ ವಿಖ್ಯಾತಾ ನದೀ ಸಿದ್ಧನಿಷೇವಿತಾ ॥೫೯॥

ಎಲೈ ಮಹಾರಾಜನೇ, ಮಾನುಷತೀರ್ಥಕ್ಕೆ ಪೂರ್ವದಲ್ಲಿ ಒಂದು ಕ್ರೋಶದೂರದಲ್ಲಿ ಆಗತಾ ಎಂಬ ಸಿದ್ಧರಿಂದ ಸೇವಿತವಾದ ಪ್ರಸಿದ್ಧವಾದ ನದಿಯಿದೆ.

ಶ್ಯಾಮಾಕಭೋಜನಂ ತತ್ರ ಯಃ ಪ್ರಯಚ್ಛತಿ ಮಾನವಃ ।
ದೇವಾನ್ ಪಿತೄನ್ ಸಮುದ್ದಿಶ್ಯ ತಸ್ಯ ಧರ್ಮಫಲಂ ಮಹತ್ ।
ಏಕಸ್ಮಿನ್ ಭೋಜಿತೇ ಏಪ್ರೇ ಕೋಟಿರ್ಭವತಿ ಭೋಜಿತಃ ॥೬೦॥

ಅಲ್ಲಿಯಾವನು ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಶ್ಯಾಮಾಕಭೋಜನವನ್ನು (ಸಾವೆ ಅಕ್ಕಿಯ ಭೋಜನವನ್ನು) ನಿವೇದಿಸುತ್ತಾನೆಯೋ ಅವನಿಗೆ ಬಹಳ ಧರ್ಮಫಲವು ಉಂಟಾಗುತ್ತದೆ. ಒಬ್ಬ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದರೆ ಕೋಟಿಬ್ರಾಹ್ಮಣರಿಗೆ ಮಾಡಿಸಿದಂತಾಗುತ್ತದೆ.

ತತ್ರ ಸ್ನಾತ್ವಾऽರ್ಚಯಿತ್ವಾ ಚ ಪಿತೄನ್ ಸ್ನಾನ್ ದೈವತಾನಿ ಚ ।
ಉಷಿತ್ವಾ ರಜನೀಮೇಕಾಮ್ ಅಗ್ನಿಷ್ಟೋಮಫಲಂ ಲಭೇತ್ ॥೬೧॥

ಅಲ್ಲಿ ಸ್ನಾನವನ್ನು ಮಾಡಿ ಒಂದು ರಾತ್ರಿಯಿದ್ದು ತನ್ನ ಪಿತೃಗಳನ್ನು ಮತ್ತು ದೇವತೆಗಳನ್ನು ಪೂಜಿಸುವ ಮನುಷ್ಯನು ಅಗ್ನಿಷ್ಟೋಮಫಲವನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಬ್ರಹ್ಮಣಃ ಸ್ಥಾನಮುತ್ತಮಮ್ ।
ಬ್ರಹ್ಮೋದುಂಬರಮಿತ್ಯೇವ ಪ್ರಕಾಶಂ ಭರತರ್ಷಭ ॥೬೨॥

ಎಲೈ ರಾಜೇಂದ್ರನೇ, ಭರತರ್ಷಭನೇ, ಅಲ್ಲಿಂದ ಬ್ರಹ್ಮನ ಕ್ಷೇತ್ರವಾದ ಬ್ರಹ್ಮೋದುಂಬರವೆಂದು ಪ್ರಸಿದ್ಧವಾದ ಪವಿತ್ರತೀರ್ಥಕ್ಕೆ ಹೋಗಬೇಕು.

ತತ್ರ ಸಪ್ತರ್ಷಿಕುಂಡೇಷು ಸ್ನಾತಸ್ಯ ಕುರುಪುಂಗವ ।
ಕೇದಾರೇ ಚೈವ ರಾಜೇಂದ್ರ ಕಪಿಷ್ಠಲಮಹಾಮುನೇಃ ॥೬೩॥

ಬ್ರಹ್ಮಾಣಮಧಿಗತ್ವಾ ಚ ಶುಚಿಃ ಪ್ರಯತಮಾನಸಃ ।
ಸರ್ವಪಾಪವಿಶುದ್ಧಾತ್ಮಾ ಗಚ್ಛೇತ ಪರಮಾಂ ಗತಿಮ್ ॥೬೪॥

ರಾಜೇಂದ್ರನೇ, ಕುರುಪುಂಗವನೇ, ಅಲ್ಲಿ ಸಪ್ತರ್ಷಿಕುಂಡಗಳಲ್ಲಿ ಮತ್ತು ಕಪಿಷ್ಠಲಮಹರ್ಷಿಗಳ ಸರೋವರಗಳಲ್ಲಿ ಶುಚಿಯಾಗಿ ಜಿತಮನಸ್ಕನಾಗಿ ಸ್ನಾನಮಾಡಿದವನು ಬ್ರಹ್ಮಜ್ಞಾನವನ್ನು ಹೊಂದಿ ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಶ್ರೇಷ್ಠವಾದಗತಿಯನ್ನು ಹೊಂದುತ್ತಾನೆ.

ಕಪಿಷ್ಠಲಸ್ಯ ಕೇದಾರಂ ಸಮಾಸಾದ್ಯ ಸುದುರ್ಲಭಮ್ ।
ಅಂತರ್ಧಾನಮವಾಪ್ನೋತಿ ತಪಸಾ ದಗ್ಧಕಿಲ್ಬಿಷಃ ।
ತತೋ ಗಚ್ಛೇತ ರಾಜೇಂದ್ರ ಶಂಕರಂ ಲೋಕವಿಶ್ರುತಮ್ ॥೬೫॥

ಕೃಷ್ಣಪಕ್ಷೇ ಚತುರ್ದಶ್ಯಾಮ್ ಅಭಿಗಮ್ಯ ವೃಷಧ್ವಜಮ್ ।
ಲಭೇತ ಸರ್ವಕಾಮಾನ್ ಹಿ ಸ್ವರ್ಗಲೋಕಂ ಚ ಗಚ್ಛತಿ ॥೬೬॥

ಕೇದಾರವನ್ನು ತಲುಪಿಬಹಳ ದುರ್ಲಭವಾದ ಕಪಿಷ್ಠಲ ಋಷಿಗಳ ಸರೋವರದಲ್ಲಿ ಸ್ನಾನವನ್ನುಮಾಡಿದವನು ತಪಸ್ಸಿನಿಂದ ತನ್ನ ಎಲ್ಲಾ ಪಾಪಗಳನ್ನು ಕಳೆದುಕೊಂಡು ಅಂತರ್ಧಾನ ಶಕ್ತಿಯನ್ನು ಪಡೆಯುತ್ತಾನೆ. ರಾಜೇಂದ್ರನೇ, ಅಲ್ಲಿಂದ ಲೋಕಪ್ರಸಿದ್ಧವಾದ ಶಂಕರತೀರ್ಥಕ್ಕೆ ಹೋಗಬೇಕು. ಕೃಷ್ಣಪಕ್ಷದ ಚತುರ್ದಶಿಯಂದು ಆ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಎಲ್ಲಾ ಕಾಮಗಳನ್ನೂ ಪಡೆಯುತ್ತಾನೆ ಮತ್ತು ಸ್ವರ್ಗಲೋಕವನ್ನು ಹೊಂದುತ್ತಾನೆ.

ತಿಸ್ರಃ ಕೋಟ್ಯಶ್ಚ ತೀರ್ಥಾನಾಂ ಶಂಕರೇ ಕುರುನಂದನ ।
ರುದ್ರಕೋಟಿಸ್ತಥಾ ಕೂಪೇ ಹ್ರದೇಷು ಚ ಮಹೀಪತೇ ।
ಇಡಾಸ್ಪದಂ ಚ ತತ್ತೈವ ತೀರ್ಥಂ ಭರತಸತ್ತಮ ॥೬೭॥

ಎಲೈ ಕುರುನಂದನನೇ, ಶಂಕರತೀರ್ಥದಲ್ಲಿ ಮೂರುಕೋಟಿ ತೀರ್ಥಗಳಿವೆ. ಎಲೈ ರಾಜನೇ, ಅಲ್ಲಿಯೇ ಕೂಪ ಮತ್ತು ಹ್ರದಗಳಲ್ಲಿ ಒಂದು ಕೋಟಿ ರುದ್ರರೂಪಗಳಿವೆ. ಭರತಸತ್ತಮನೇ, ಇಡಾ ಎಂಬ ತೀರ್ಥವು ಅಲ್ಲಿಯೇ ಇದೆ.

ತತ್ರ ಸ್ನಾತ್ವಾऽರ್ಚಯಿತ್ವಾ ಚ ಪಿತೄನ್ ದೇವಾಂಶ್ಚ ಭಾರತ ।
ನ ದುರ್ಗತಿಮವಾಪ್ನೋತಿ ವಾಜಪೇಯಂ ಚ ವಿಂದತಿ ॥೬೮॥

ಎಲೈ ಭಾರತನೇ, ಅಲ್ಲಿ ಸ್ನಾನವನ್ನು ಮಾಡಿ ಪಿತೃಗಳನ್ನು ಮತ್ತು ದೇವತೆಗಳನ್ನು ಪೂಜಿಸುವವನು ದುರ್ಗತಿಯನ್ನು ಹೊಂದುವುದಿಲ್ಲ. ಮತ್ತು ವಾಜಪೇಯಯಾಗದ ಫಲವನ್ನು ಪಡೆಯುತ್ತಾನೆ.

ಕಿಂದಾನೇ ಚ ನರಃ ಸ್ನಾತ್ವಾ ಕಿಂಜಪ್ಯೇ ಚ ಮಹೀಪತೇ ।
ಅಪ್ರಮೇಯಮವಾಪ್ನೋತಿ ದಾನಂ ಜಪ್ಯಂ ಚ ಭಾರತ ॥೬೯॥

ಎಲೈ ರಾಜನೇ, ಕಿಂದಾನತೀರ್ಥದಲ್ಲಿಯೂ ಕಿಂಜಪ್ಯತೀರ್ಥದಲ್ಲಿಯೂ ಸ್ನಾನವನ್ನುಮಾಡುವ ಮನುಷ್ಯನು ಅಪರಿಮಿತವಾದ ದಾನವನ್ನು ಮತ್ತು ಜಪವನ್ನು ಮಾಡುವವನಾಗುತ್ತಾನೆ.

ಕಲಶ್ಯಾಂ ಚಾಪ್ಲುಪಸ್ಪೃಶ್ಯ ಶ್ರದ್ದಧಾನೋ ಜಿತೇಂದ್ರಿಯಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೭೦॥

ಕಲಶೀತೀರ್ಥದಲ್ಲಿ ಸ್ನಾನವನ್ನುಮಾಡುವ ಶ್ರದ್ಧಾಯುಕ್ತನಾದ ಜಿತೇಂದ್ರಿಯನು ಅಗ್ನಿಷ್ಟೋಮಯಾಗದ ಫಲವನ್ನು ಪಡೆಯುತ್ತಾನೆ.

ಶಂಕರಸ್ಯ ತು ಪೂರ್ವೇಣ ನಾರದಸ್ಯ ಮಹಾತ್ಮನಃ ।
ತೀರ್ಥಂ ಕುರುವರಶ್ರೇಷ್ಠ ಅನಾಜನ್ಮೇತಿ ವಿಶ್ರುತಮ್ ॥೭೧॥

ತತ್ರ ತೀರ್ಥೇ ನರಸ್ನಾತ್ವಾ ಪ್ರಾಣಾಂಶ್ಚೋತ್ಸೃಜ್ಯ ಭಾರತ ।
ನಾರದೇನಾಭ್ಯನುಜ್ಞಾತೋ ಲೋಕಾನ್ ಪ್ರಾಪ್ನೋತಿ ದುರ್ಲಭಾನ್॥

ಎಲೈ ಕುರುಶ್ರೇಷ್ಠನೇ, ಶಂಕರತೀರ್ಥದ ಪೂರ್ವಭಾಗದಲ್ಲಿ ಮಹಾತ್ಮರಾದ ನಾರದರ ತೀರ್ಥವಾದ ಅನಾಜನ್ಮವೆಂಬ ಪ್ರಸಿದ್ಧತೀರ್ಥವಿದೆ. ಎಲೈ ಭಾರತನೇ, ಆ ತೀರ್ಥದಲ್ಲಿ ಸ್ನಾನವನ್ನು ಮಾಡಿ ಪ್ರಾಣಗಳನ್ನು ತ್ಯಜಿಸುವ ಮನುಷ್ಯನು ನಾರದರ ಅನುಗ್ರಹವನ್ನು ಪಡೆದು ದುರ್ಲಭವಾದ ಲೋಕಗಳನ್ನು ಹೊಂದುತ್ತಾನೆ.

ಶುಕ್ಲಪಕ್ಷೇ ದಶಮ್ಯಾಂ ತು ಪುಂಡರೀಕಂ ಸಮಾವಿಶೇತ್ ।
ತತ್ರ ಸ್ನಾತ್ವಾ ನರೋ ರಾಜನ್ ಪೌಂಡರೀಕಫಲಂ ಲಭೇತ್ ॥೭೩॥

ಎಲೈ ರಾಜನೇ, ಶುಕ್ಲಪಕ್ಷದ ದಶಮಿಯಂದು ಪುಂಡರೀಕತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನಮಾಡಿದ ಮನುಷ್ಯನು ಪುಂಡರೀಕಯಾಗದ ಫಲವನ್ನು ಹೊಂದುತ್ತಾನೆ.

ತತಃ ತ್ರಿವಿಷ್ಟಪಂ ಗಚ್ಛೇತ್ ತ್ರಿಷು ಲೋಕೇಷು ವಿಶ್ರುತಮ್ ।
ತತ್ರ ವೈತರಣೀ ಪುಣ್ಯಾ ನದೀ ಪಾಪಪ್ರಣಾಶಿನೀ ॥೭೪॥

ತತ್ರ ದೇವಾಃ ಸದಾ ರಾಜನ್ ಫಲಜೀವನಮಾಶ್ರಿತಾಃ ।
ತಪಶ್ಚರಂತಿ ವಿಪುಲಂ ಬಹುವರ್ಷಸಹಸ್ರಕಮ್ ॥೭೫॥

ಅನಂತರ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ತ್ರಿವಿಷ್ಟಪತೀರ್ಥಕ್ಕೆ ಹೋಗಬೇಕು. ಅಲ್ಲಿ ಪಾಪಪರಿಹಾರಕವಾದ ಪುಣ್ಯದಾಯಕವಾದ ವೈತರಣೀ ನದಿಯಿದೆ. ಅಲ್ಲಿ ಸ್ನಾನವನ್ನು ಮಾಡಿ ವೃಷಧ್ವಜನೂ ಶೂಲಪಾಣಿಯೂ ಆದ ಶಂಕರನನ್ನು ಪೂಜಿಸುವವನು ಸರ್ವಪಾಪಗಳಿಂದಲೂ ಶುದ್ಧನಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. ರಾಜೇಂದ್ರನೇ, ಅಲ್ಲಿಂದ ಶ್ರೇಷ್ಠವಾದ ಫಲಜೀವನತೀರ್ಥಕ್ಕೆ ಹೋಗಬೇಕು. ಎಲೈ ರಾಜನೇ, ಅಲ್ಲಿ ದೇವತೆಗಳು ಯಾವಾಗಲೂ ಫಲದಿಂದಲೇ ಜೀವನವನ್ನು ಮಾಡುವವರಾಗಿ ಅನೇಕ ಸಹಸ್ರ ವರ್ಷಗಳವರೆಗೆ ವಿಪುಲವಾದ ತಪಸ್ಸನ್ನು ಆಚರಿಸುತ್ತಾರೆ.

ದೃಷದ್ವತ್ಯಾಂ ನರಃ ಸ್ನಾತ್ವಾ ತರ್ಪಯಿತ್ವಾ ಚ ದೇವತಾಃ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಂ ವಿಂದತಿ ಭಾರತ ॥೭೬॥

ದೃಷದ್ವತೀ ನದಿಯಲ್ಲಿ ಸ್ನಾನವನ್ನುಮಾಡಿ ದೇವತೆಗಳಿಗೆ ತರ್ಪಣವನ್ನು ಕೊಟ್ಟ ಮನುಷ್ಯನು ಅಗ್ನಿಷ್ಟೋಮ ಅತಿರಾತ್ರಯಜ್ಞಗಳ ಫಲವನ್ನು ಪಡೆಯುತ್ತಾನೆ.

ತೀರ್ಥೇ ಚ ಸರ್ವದೇವಾನಾಂ ಸ್ನಾತ್ವಾ ಭರತಸತ್ತಮ ।
ಗೋಸಹಸ್ರಸ್ಯ ರಾಜೇಂದ್ರ ಫಲಂ ಏಂದತಿ ಮಾನವಃ ॥೭೭॥

ಎಲೈ ಭರತಸತ್ತಮನೇ, ರಾಜೇಂದ್ರನೇ, ಸರ್ವದೇವ ತೀರ್ಥದಲ್ಲಿ ಸ್ನಾನವನ್ನು ಮಾಡಿದ ಮಾನವನು ಸಹಸ್ರ ಗೋದಾನಗಳ ಫಲವನ್ನು ಪಡೆಯುತ್ತಾನೆ.

ಪಾಣಿಖಾತೇ ನರಃ ಸ್ನಾತ್ವಾ ತರ್ಪಯಿತ್ವಾ ಚ ದೇವತಾಃ ।
ತತ್ರ ಸ್ನಾತ್ವಾ ನರೋ ರಾಜನ್ ಸರ್ವಯಜ್ಞಫಲಂ ಲಭೇತ್ ॥೭೮॥

ಎಲೈ ರಾಜನೇ, ಪಾಣಿಖಾತತೀರ್ಥದಲ್ಲಿ ಸ್ನಾನವನ್ನು ಮಾಡಿ ದೇವತೆಗಳನ್ನು ಪೂಜಿಸುವ ನರನು ಎಲ್ಲಾ ಯಜ್ಞಗಳಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ಮಿಶ್ರಕಂ ತೀರ್ಥಮುತ್ತಮಮ್ ।
ಯತ್ರ ತೀರ್ಥಾನಿ ಸರ್ವಾಣಿ ಮಿಶ್ರಿತಾನಿ ಮಹಾತ್ಮನಾ ॥೭೯॥

ವ್ಯಾಸೇನ ನರಶಾರ್ದೂಲ ದ್ವಿಜಾರ್ಥಮಿತಿ ನಃ ಶ್ರುತಮ್ ।
ಸರ್ವತೀರ್ಥೇಷು ಸ ಸ್ನಾತಿ ಮಿಶ್ರಕೇ ಸ್ನಾತಿ ಯೋ ನರಃ ॥೮೦॥

ಎಲೈ ಧರ್ಮಜ್ಞನೇ, ಅಲ್ಲಿಂದ ಶ್ರೇಷ್ಠವಾದ ಮಿಶ್ರಕತೀರ್ಥಕ್ಕೆ ಹೋಗಬೇಕು. ಎಲೈ ನರಶಾರ್ದೂಲನೇ, ಅಲ್ಲಿ ದಧೀಚ ಋಷಿಗಳ ಸಲುವಾಗಿ ಮಹಾತ್ಮರಾದ ವೇದವ್ಯಾಸರು ಎಲ್ಲತೀರ್ಥಗಳನ್ನು ಮಿಶ್ರಮಾಡಿದರೆಂದು ನಾವು ಕೇಳಿದ್ದೇವೆ. ಯಾವ ಮನುಷ್ಯನು ಮಿಶ್ರಕತೀರ್ಥದಲ್ಲಿ ಸ್ನಾನಮಾಡುತ್ತಾನೆಯೋ ಅವನಿಗೆ ಸರ್ವತೀರ್ಥಗಳಲ್ಲಿಸ್ನಾನಮಾಡಿದ ಫಲವು ಉಂಟಾಗುತ್ತದೆ.

ತತೋ ವ್ಯಾಸವನಂ ಗಚ್ಛೇತ್ ನಿಯತೋ ನಿಯತಾಶನಃ ।
ಮನೋಜವೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೮೧॥

ಅಲ್ಲಿಂದ ಮನುಷ್ಯನು ನಿಯತ ಆಹಾರನಾಗಿ ನಿಯಮಬದ್ಧನಾಗಿ ವ್ಯಾಸವನಕ್ಕೆ ಹೋಗಿ ಮನೋಜನತೀರ್ಥದಲ್ಲಿಸ್ನಾನವನ್ನು ಮಾಡಿದರೆ ಸಹಸ್ರಗೋದಾನದ ಫಲವನ್ನು ಪಡೆಯುವನು.

ಗತ್ವಾ ಮಧುಮತೀಂ ಚೈವ ದೇವ್ಯಾಸ್ತೀರ್ಥೇ ನರಃ ಶುಚಿಃ ।
ತತ್ರ ಸ್ನಾತ್ವಾರ್ಚಯಿತ್ವಾ ಚ ಪಿತೄನ್ ದೇವಾಂಶ್ಚ ಪೂರುಷಃ ।
ಸ ದೇವ್ಯಾ ಸಮನುಜ್ಞಾತೋ ಗೋಸಹಸ್ರಫಲಂ ಲಭೇತ್ ॥೮೨॥

ಮಧುಮತಿ ಎಂಬ ಸ್ಥಳಕ್ಕೆ ಹೋಗಿ ಅಲ್ಲಿ ದೇವಿಯ ತೀರ್ಥದಲ್ಲಿ ಸ್ನಾನವನ್ನುಮಾಡಿ ಶುಚಿಯಾದ ನರನು ದೇವತೆಗಳನ್ನು ಮತ್ತು ಪಿತೃಗಳನ್ನು ಪೂಜಿಸಿ ದೇವಿಯ ಅನುಗ್ರಹಕ್ಕೆ ಪಾತ್ರನಾಗಿ ಸಹಸ್ರಗೋದಾನದ ಫಲವನ್ನು ಪಡೆಯುವನು.

ಕೌಶಿಕ್ಯಾಃ ಸಂಗಮೇ ಯಸ್ತು ದೃಷದ್ವತ್ಯಾಶ್ಚ ಭಾರತ ।
ಸ್ನಾತಿ ವೈ ನಿಯತಾಹಾರಃ ಸರ್ವಪಾಪೈಃ ಪ್ರಮುಚ್ಯತೇ ॥೮೩॥

ಎಲೈ ಭಾರತನೇ, ಯಾವನು ನಿಯತ ಆಹಾರನಾಗಿ ಕೌಶಿಕೀ ಮತ್ತು ದೃಷದ್ವತೀ ನದಿಗಳ ಸಂಗಮದಲ್ಲಿ ಸ್ನಾನವನ್ನುಮಾಡುತ್ತಾನೆಯೋ ಅವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ತತೋ ವ್ಯಾಸಸ್ಥಲೀ ನಾಮ ಯತ್ರ ವ್ಯಾಸೇನ ಧೀಮತಾ ।
ಪುತ್ರಶೋಕಾಭಿತಪ್ತೇನ ದೇಹತ್ಯಾಗಾರ್ಥನಿಶ್ಚಯಃ ॥೮೪॥

ಕೃತೋ ದೇವೈಶ್ಚ ರಾಜೇಂದ್ರ ಪುನರುತ್ಥಾಪಿತಸ್ತದಾ ।
ಅಭಿಗಮ್ಯ ಸ್ಥಲೀಂ ತತ್ರ ಗೋಸಹಸ್ರಫಲಂ ಲಭೇತ್ ॥೮೫॥

ಎಲೈ ರಾಜೇಂದ್ರನೇ, ಅಲ್ಲಿಂದ ವ್ಯಾಸಸ್ಥಲೀ ಎಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಮೇಧಾವಿಗಳಾದ ವ್ಯಾಸರು ಪುತ್ರಶೋಕದಿಂದ ಬಳಲಿ ದೇಹವನ್ನು ತ್ಯಾಗಮಾಡಲು ನಿಶ್ಚಯಿಸಿ ಪುನಃ ದೇವತೆಗಳಿಂದ ಎಬ್ಬಿಸಲ್ಪಟ್ಟರು. ಆ ಕ್ಷೇತ್ರಕ್ಕೆ ಹೋದರೆ ಸಹಸ್ರಗೋದಾನಗಳ ಫಲವುಂಟಾಗುತ್ತದೆ.

ಕಿಂದತ್ತಂ ಕೂಪಮಾಸಾದ್ಯ ತಿಲಪ್ರಸ್ಥಂ ಪ್ರದಾಯ ಚ ।
ಗಚ್ಛೇತ್ ಪಾರಮಿಕಾಂ ಸಿದ್ಧಿಮ್ ಋಣೈರ್ಮುಕ್ತಃ ಕುರುದ್ವಹ ॥೮೬॥

ಎಲೈ ಕುರೂದ್ವಹನೇ, ಕಿಂದತ್ತವೆಂಬ ಕೂಪಕ್ಕೆ ಹೋಗಿ ಒಂದು ಹಿಡಿ ಎಳ್ಳನ್ನು ದಾನಮಾಡಿದರೆ ಆ ಮನುಷ್ಯನು ಋಣಮುಕ್ತನಾಗಿ ಶ್ರೇಷ್ಠವಾದ ಸಿದ್ಧಿಯನ್ನು ಪಡೆಯುತ್ತಾನೆ.

ಅಹಶ್ಚ ಸುದಿನಂ ಚೈವ ದ್ವೇ ತೀರ್ಥೇ ಚ ಸುದುರ್ಲಭೇ ।
ತಯೋಃ ಸ್ನಾತ್ವಾ ನರವ್ಯಾಘ್ರ ಸೂರ್ಯಲೋಕಮವಾಪ್ನುಯಾತ್ ।
ವ್ಯಂಗಧೂಮಂ ತತೋ ಗಚ್ಛೇತ್ ತ್ರಿಷು ಲೋಕೇಷು ವಿಶ್ರುತಮ್ ॥

ತತ್ರ ಗಂಗಾಹ್ರದೇ ಸ್ನಾತ್ವಾ ಹ್ಯರ್ಚಯಿತ್ವಾ ಚ ಭಾರತ ।
ಶೂಲಪಾಣಿಂ ಮಹಾದೇವಮಶ್ವಮೇಧಫಲಂ ಲಭೇತ್ ॥೮೮॥

ಅಹಸ್ತೀರ್ಥ ಮತ್ತು ಸುದಿನತೀರ್ಥ ಎಂಬ ಎರಡುತೀರ್ಥಗಳು ಬಹಳ ದುರ್ಲಭವಾದವು. ಎಲೈ ನರವ್ಯಾಘ್ರನೇ, ಅವುಗಳಲ್ಲಿ ಸ್ನಾನವನ್ನು ಮಾಡಿದವನು ಸೂರ್ಯಲೋಕಕ್ಕೆ ಹೋಗುತ್ತಾನೆ. ಆಲ್ಲಿಂದ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ವ್ಯಂಗಧೂಮವೆಂಬ ಸ್ಥಳಕ್ಕೆ ಹೋಗಬೇಕು. ಎಲೈ ಭಾರತನೇ, ಅಲ್ಲಿ ಗಂಗಾಹ್ರದ ಎಂಬ ಮಡುವಿನಲ್ಲಿ ಸ್ನಾನಮಾಡಿ ಶೂಲಪಾಣಿಯಾದ ಮಹಾದೇವನನ್ನು ಅರ್ಚಿಸಿದರೆ ಅಶ್ವಮೇಧ- ಫಲವುಂಟಾಗುತ್ತದೆ.

ದೇವತೀರ್ಥೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ।
ಅಥ ವಾಮನಕಂ ಗಚ್ಛೇತ್ ತ್ರಿಷು ಲೋಕೇಷು ವಿಶ್ರುತಮ್ ॥೮೯॥

ದೇವತೀರ್ಥದಲ್ಲಿಸ್ನಾನಮಾಡಿದ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ. ಅನಂತರ ಮೂರುಲೋಕಗಳಲ್ಲಿ ಪ್ರಖ್ಯಾತವಾದ ವಾಮನತೀರ್ಥಕ್ಕೆ ಹೋಗಬೇಕು.

ತತ್ರ ವಿಷ್ಣುಪದೇ ಸ್ನಾತ್ವಾ ಅರ್ಚಯಿತ್ವಾ ಚ ವಾಮನಮ್ ।
ಸರ್ವಪಾಪವಿಶುದ್ಧಾತ್ಮಾ ವಿಷ್ಣುಲೋಕಮವಾಪ್ನುಯಾತ್ ॥೯೦॥

ಅಲ್ಲಿ ವಿಷ್ಣುಪದತೀರ್ಥದಲ್ಲಿ ಸ್ನಾನವನ್ನು ಮಾಡಿ ವಾಮನನನ್ನು ಅರ್ಚಿಸಿದರೆ ಸರ್ವಪಾಪಗಳಿಂದಲೂ ನಿರ್ಮುಕ್ತನಾಗಿ ವಿಷ್ಣುಲೋಕವನ್ನು ಪಡೆಯುವನು.

ಅಮರಾಣಾಂ ಹ್ರದೇ ಸ್ನಾತ್ವಾ ಅಮರೇಷು ನರಾಧಿಪ ।
ಅಮರಾಣಾಂ ಪ್ರಸಾದೇನ ಸ್ವರ್ಗಲೋಕೇ ಮಹೀಯತೇ ॥೯೧॥

ಎಲೈ ರಾಜನೇ, ಅಮರಕ್ಷೇತ್ರಕ್ಕೆ ಹೋಗಿ ಅಮರಹ್ರದದಲ್ಲಿ ಸ್ನಾನವನ್ನು ಮಾಡಿದರೆ ದೇವತೆಗಳ ಅನುಗ್ರಹದಿಂದ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಶಾಲಿಹೋತ್ರಸ್ಯ ರಾಜೇಂದ್ರ ಶಾಲಿಶೂರ್ಪೇ ಯಥಾವಿಧಿ ।
ಸ್ನಾತ್ವಾ ನರವರಶ್ರೇಷ್ಠ ಗೋಸಹಸ್ರಫಲಂ ಲಭೇತ್ ।
ಕುಲಂಪುನೇ ನರಃ ಸ್ನಾತ್ವಾ ಪುನಾತಿ ಸ್ವಕುಲಂ ನರಃ ॥೯೨॥

ರಾಜೇಂದ್ರನೇ, ಶಾಲಿಹೋತ್ರ ಋಷಿಗೆ ಸಂಬಂಧಿಸಿದ ಶಾಲಿಶೂರ್ಪತೀರ್ಥದಲ್ಲಿ ವಿಧಿವತ್ತಾಗಿ ಸ್ನಾನಮಾಡಿದ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ. ರಾಜಶ್ರೇಷ್ಠನೇ, ಕುಲಂಪುನತೀರ್ಥದಲ್ಲಿ ಸ್ನಾನಮಾಡಿದ ನರನು ತನ್ನ ಕುಲವನ್ನು ಪವಿತ್ರಗೊಳಿಸುತ್ತಾನೆ.

ಪವನಸ್ಯ ಹ್ರದಂ ಗತ್ವಾ ಮರುತಾಂ ತೀರ್ಥಮುತ್ತಮಮ್ ।
ತತ್ರ ಸ್ನಾತ್ವಾ ನರವ್ಯಾಘ್ರ ವಾಯುಲೋಕೇ ಮಹೀಯತೇ ॥೯೩॥

ಎಲೈ ನರವ್ಯಾಘ್ರನೇ, ಮರುತ್‌ಗಳ ಶ್ರೇಷ್ಠತೀರ್ಥವಾದ ಪವನಹ್ರದದಲ್ಲಿ ಸ್ನಾನಮಾಡಿದ ನರನು ವಾಯುಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಶ್ರೀಕುಂಜಂ ಚ ಸರಸ್ವತ್ಯಾಃ ತೀರ್ಥಂ ಭರತಸತ್ತಮ ।
ತತ್ರ ಸ್ನಾತ್ವಾ ನರೋ ರಾಜನ್ನಗ್ನಿಷ್ಟೋಮಮವಾಪ್ನುಯಾತ್ ॥೯೪॥

ಎಲೈ ಭರತಸತ್ತಮನೇ, ಶ್ರೀಕುಂಜವೆಂಬುದು ಸರಸ್ವತಿಯತೀರ್ಥ. ರಾಜನೇ ಅಲ್ಲಿಸ್ನಾನಮಾಡಿದ ನರನು ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ತತೋ ನೈಮಿಶಕುಂಜಂ ತು ಸಮಾಸಾದ್ಯ ಯಥಾಕ್ರಮಮ್ ।
ಋಷಯಃ ಕಿಲ ರಾಜೇಂದ್ರ ನೈಮಿಶೀಯಾಸ್ತಪೋಧನಾಃ ।
ತೀರ್ಥಯಾತ್ರಾಂ ಪುರಸ್ಕೃತ್ಯ ಕುರುಕ್ಷೇತ್ರಂ ಗತಾಃ ಪುರಾ ॥೯೫॥

ತತಃ ಕುಂಜಃ ಸರಸ್ವತ್ಯಾಃ ಕೃತೋ ಭರತಸತ್ತಮ ।
ಋಷೀಣಾಮವಕಾಶಃ ಸ್ಯಾದ್ ಯಥಾ ತುಷ್ಟಿಕರೋ ಭವೇತ್ ॥೯೬॥

ಅಲ್ಲಿಂದ ಕ್ರಮವಾಗಿ ನೈಮಿಶಕುಂಜಕ್ಕೆ ಹೋಗಬೇಕು. ರಾಜೇಂದ್ರನೇ ಹಿಂದೆ ನೈಮಿಶಾರಣ್ಯವಾಸಿಗಳಾದ ತಪೋಧನರಾದ ಋಷಿಗಳು ಕುರುಕ್ಷೇತ್ರವನ್ನು ಉದ್ದೇಶಿಸಿ ತೀರ್ಥಯಾತ್ರೆಯನ್ನು ಮಾಡಲು ಬಯಸಿದರು. ಎಲೈ ಭರತಸತ್ತಮನೇ, ಆಗ ಎಲ್ಲ

ಋಷಿಗಳಿಗೂ ಅವಕಾಶವಾಗುವಂತೆ ಮತ್ತು ಸಂತೋಷವಾಗುವಂತೆ ಈ ಸರಸ್ವತೀ ಕುಂಜವು ನಿರ್ಮಿಸಲ್ಪಟ್ಟಿತು.

ತಸ್ಮಿನ್ ಕುಂಜೇ ನರಃ ಸ್ನಾತ್ವಾ ಅಗ್ನಿಷ್ಟೋಮಫಲಂ ಲಭೇತ್ ।
ಕನ್ಯಾತೀರ್ಥೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೯೭॥

ಆ ಕುಂಜದಲ್ಲಿ ಸ್ನಾನಮಾಡಿದ ನರನು ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ. ಕನ್ಯಾತೀರ್ಥದಲ್ಲಿ ಸ್ನಾನಮಾಡಿದ ನರನು ಗೋಸಹಸ್ರ ಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇನ್ನರವ್ಯಾಘ್ರ ಬ್ರಹ್ಮಣಸ್ತೀರ್ಥಮುತ್ತಮಮ್ ।
ತತ್ರ ವರ್ಣಾಂತರಃ ಸ್ನಾತ್ವಾ ಬ್ರಾಹ್ಮಣ್ಯಂ ಲಭತೇ ನರಃ ।
ಬ್ರಾಹ್ಮಣಸ್ತು ವಿಶುದ್ಧಾತ್ಮಾ ಗಚ್ಛೇತ ಪರಮಾಂ ಗತಿಮ್ ॥೯೮॥

ನರವ್ಯಾಘ್ರನೇ, ಅಲ್ಲಿಂದ ಶ್ರೇಷ್ಠವಾದ ಬ್ರಹ್ಮತೀರ್ಥಕ್ಕೆ ಹೋಗಬೇಕು. ಬೇರೆವರ್ಣಕ್ಕೆ ಸೇರಿದವನು ಅಲ್ಲಿ ಸ್ನಾನವನ್ನು ಮಾಡಿದರೆ ಬ್ರಾಹ್ಮಣ್ಯವನ್ನು ಪಡೆಯುತ್ತಾನೆ. ಬ್ರಾಹ್ಮಣನಾದವನು ಅಲ್ಲಿ ಸ್ನಾನವನ್ನು ಮಾಡಿದರೆ ಮನಃಶುದ್ಧಿಯನ್ನು ಹೊಂದಿ ಶ್ರೇಷ್ಠವಾದ ಗತಿಯನ್ನು ಪಡೆಯುತ್ತಾನೆ.

ತತೋ ಗಚ್ಛೇನ್ನರವ್ಯಾಘ್ರ ಸೋಮತೀರ್ಥಮನುತ್ತಮಮ್ ।
ತತ್ರ ಸ್ನಾತ್ವಾ ನರೋ ರಾಜನ್ ಸೋಮಲೋಕಮವಾಪ್ನುಯಾತ್ ॥

ಎಲೈ ನರವ್ಯಾಘ್ರನೇ, ಅಲ್ಲಿಂದ ಶ್ರೇಷ್ಠವಾದ ಸೋಮತೀರ್ಥಕ್ಕೆ ಹೋಗಬೇಕು. ಎಲೈ ರಾಜನೇ, ಅಲ್ಲಿ ಸ್ನಾನಮಾಡಿದ ನರನು ಸೋಮಲೋಕವನ್ನು ಪಡೆಯುತ್ತಾನೆ.

ಸಪ್ತಸಾರಸ್ವತಂ ತೀರ್ಥಂ ತತೋ ಗಚ್ಛೇನ್ನರಾಧಿಪ ।
ಯತ್ರ ಮಂಕಣಕಃ ಸಿದ್ಧೋ ಮಹರ್ಷಿರ್ಲೋಕವಿಶ್ರುತಃ ॥೧೦೦॥

ಎಲೈ ರಾಜನೇ, ಅಲ್ಲಿಂದ ಸಪ್ತಸಾರಸ್ವತತೀರ್ಥಕ್ಕೆ ಹೋಗಬೇಕು ಅಲ್ಲಿ ಲೋಕವಿಖ್ಯಾತರಾದ ಮಂಕಣಕ ಮಹರ್ಷಿಗಳು ಸಿದ್ಧಿಯನ್ನು ಪಡೆದರು.

ಪುರಾ ಮಂಕಣಕೋ ರಾಜನ್ ಕುಪಾಗ್ರೇಣೇತಿ ನಃ ಶ್ರುತಮ್।
ಕ್ಷತಃ ಕಿಲ ಕರೇ ರಾಜನ್ ತಸ್ಯ ಪಾಕರಸೋಽಸ್ರವತ್ ॥೧೦೧॥

ಸ ವೈ ಶಾಕರಸಂ ದೃಷ್ಟ್ವಾ ಹರ್ಷಾವಿಷ್ಟೋ ಮಹಾತಪಾಃ ।
ಪ್ರನೃತ್ತಃ ಕಿಲ ವಿಪರ್ಷಿರ್ವಿಸ್ಮಯೋತ್ಫುಲ್ಲಲೋಚನಃ ॥೧೦೨॥

ಎಲೈ ರಾಜನೇ, ಹಿಂದೆ ಮಂಕಣಕ ಋಷಿಗಳ ಹಸ್ತಕ್ಕೆ ಒಂದು ದರ್ಭೆಯ ತುದಿಯು ಚುಚ್ಚಿಕೊಂಡಿತು. ಎಲೈ ರಾಜನೇ ಅವರ ಹಸ್ತದಿಂದ ಶಾಕರಸವು ಸುರಿಯಲು ಪ್ರಾರಂಭಿಸಿತು. ಮಹಾತಪಸ್ವಿಗಳಾದ ಬ್ರಹ್ಮರ್ಷಿಗಳಾದ ಅವರು ಆಶಾಕರಸವನ್ನು ನೋಡಿ ಹರ್ಷಾವಿಷ್ಟರಾಗಿ ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವರಾಗಿ ನೃತ್ಯವನ್ನುಮಾಡಲು ಪ್ರಾರಂಭಿಸಿದರು.

ತತಸ್ತಸ್ಮಿನ್ ಪ್ರನೃತ್ತೇ ತು ಸ್ಥಾವರಂ ಜಂಗಮಂ ಚ ಯತ್ ।
ಪ್ರನೃತ್ತಮುಭಯಂ ವೀರ ತೇಜಸಾ ತಸ್ಯ ಮೋಹಿತಮ್ ॥೧೦೩॥

ಅವರು ನೃತ್ಯವನ್ನು ಮಾಡುತ್ತಿರಲು ಎಲೈ ವೀರನೇ, ಅಲ್ಲಿದ್ದ ಸ್ಥಾವರ ಜಂಗಮಗಳೆಲ್ಲವೂ ಅವರ ಪ್ರಭಾವದಿಂದ ಮೋಹಿತವಾಗಿ ತಾವೂ ನೃತ್ಯವನ್ನು ಮಾಡಿದರು.

ಬ್ರಹ್ಮಾದಿಭಃ ಸುರೈ ರಾಜನ್ ಋಷಿಭಿಶ್ಚ ತಪೋಧನೈಃ ।
ವಿಜ್ಞಪ್ತೋ ವೈ ಮಹಾದೇವ ಋಷೇರರ್ಥೇ ನರಾಧಿಪ ।
ಯಥಾ ನ ನೃತ್ಯತೇ ದೇವ ತಥಾ ತ್ವಂ ಕರ್ತುಮರ್ಹಸಿ ॥೧೦೪॥

ಆಗ ಬ್ರಹ್ಮಾದಿದೇವತೆಗಳೂ ತಪೋಧನರಾದ ಋಷಿಗಳೂ ಮಹಾದೇವನನ್ನು ಸಮೀಪಿಸಿ ದೇವನೇ ಈ ಋಷಿಯು ನೃತ್ಯವನ್ನು ನಿಲ್ಲಿಸುವಂತೆ ನೀನು ಮಾಡಬೇಕು ಎಂದು ವಿಜ್ಞಾಪಿಸಿದರು.

ತತಃ ಪ್ರನೃತ್ತಮಾಸಾದ್ಯ ಹರ್ಷಾವಿಷ್ಟೇನ ಚೇತಸಾ ।
ಸುರಾಣಾಂ ಹಿತಕಾಮಾರ್ಥಮೃಷಿಂ ದೇವೋಽಭ್ಯಭಾಷತ ॥೧೦೫॥

ಆಗ ದೇವತೆಗಳಿಗೆ ಹಿತವನ್ನುಮಾಡುವ ದೃಷ್ಟಿಯಿಂದ ರುದ್ರದೇವರು ಸಂತೋಷದಿಂದ ಕೂಡಿದ ಮನಸ್ಸಿನಿಂದ ನೃತ್ಯವನ್ನು ಮಾಡುತ್ತಿದ್ದ ಆ ಋಷಿಯ ಬಳಿಗೆ ಬಂದು ಅವರನ್ನು ಕುರಿತು ಮಾತನಾಡಿದರು.

ಭೋಭೋ ಮಹರ್ಷೇ ಧರ್ಮಜ್ಞ ಕಿಮರ್ಥಂ ನೃತ್ಯತೇ ಭವಾನ್ ।
ಹರ್ಷಸ್ಥಾನಂ ಕಿಮರ್ಥಂ ವಾ ತವಾದ್ಯ ಮುನಿಪುಂಗವ ॥೧೦೬॥

ಎಲೈ ಮಹರ್ಷಿಯೇ, ಧರ್ಮಜ್ಞನೇ, ನೀನು ಏತಕ್ಕೆ ನೃತ್ಯವನ್ನು ಮಾಡುತ್ತಿದ್ದೀಯೆ? ಎಲೈ ಮುನಿಪುಂಗವನೇ, ಈ ದಿನ ನಿನ್ನ ಸಂತೋಷಕ್ಕೆ ಕಾರಣವಾದ ಅಂತಹ ವಿಷಯವೇನು? (ಎಂದು ಕೇಳಿದರು)

ಕಿಂ ನ ಪಶ್ಯಸಿ ಮೇ ದೇವ ಕರಾಚ್ಛಾಕರಸಂ ಸ್ರುತಮ್ ।
ಯಂ ದೃಷ್ಟ್ವಾಽಹಂ ಪ್ರನೃತ್ತೋ ವೈ ಹರ್ಷೇಣ ಮಹತಾಽನ್ವಿತಃ ॥

ಎಲೈ ಮಹದೇವನೇ, ನನ್ನ ಹಸ್ತದಿಂದ ಶಾಕರಸವು ಸುರಿಯುತ್ತಿರುವುದು ನಿನಗೆ ಕಾಣಿಸುವುದಿಲ್ಲದೇ? ಅದನ್ನು ನೋಡಿ ನಾನು ಬಹಳ ಸಂತೋಷದಿಂದ ನೃತ್ಯವನ್ನುಮಾಡುತ್ತಿದ್ದೇನೆ.

ತಂ ಪ್ರಹಸ್ಯಾಬ್ರವೀದ್ ದೇವೋ ಮುನಿಂ ರಾಗೇಣ ಮೋಹಿತಮ್ ।
ಅಹಂ ವೈ ವಿಸ್ಮಯಂ ವಿಪ್ರ ನ ಗಚ್ಛಾಮೀತಿ ಪಶ್ಯ ಮಾಮ್ ॥೧೦೮॥

ಏವಮುಕ್ತೋ ನರಶ್ರೇಷ್ಠ ಮಹಾದೇವೇನ ವೈ ತದಾ ।
ಅಂಗುಷ್ಠಾಗ್ರೇಣ ರಾಜೇಂದ್ರ ಸ್ತಾಂಗುಷ್ಠಸ್ತಾಡಿತೋಽಭವತ್ ॥೧೦೯॥

ಆಗ ಮಹಾದೇವರು ನಕ್ಕು ಆ ರಾಗದಿಂದ ಮೋಹಿತರಾದ ಋಷಿಗಳನ್ನು ಕುರಿತು ಎಲೈ ಬ್ರಾಹ್ಮಣನೇ, ನನಗೆ ಅದರಲ್ಲಿಯಾವ ವಿಸ್ಮಯವೂ ಕಾಣುತ್ತಿಲ್ಲ. ನನ್ನನ್ನುನೋಡು ಎಂದು ಹೇಳಿ ಮಹಾದೇವರು ತಮ್ಮ ಅಂಗುಷ್ಠದ ತುದಿಯಿಂದ ಋಷಿಗಳ ಅಂಗುಷ್ಠವನ್ನು ತಾಡನೆಮಾಡಿದರು.

ತತೋ ಭಸ್ಮ ಕ್ಷತಾದ್ರಾಜನ್ ನಿರ್ಗತಂ ಹಿಮಸನ್ನಿಭಮ್ ।
ತದ್ದೃಷ್ಟ್ವಾ ವ್ರೀಡಿತೋ ರಾಜನ್ ಸ ಮುನಿಃ ಪಾದಯೋರ್ಗತಃ ॥

ಎಲೈ ರಾಜೇಂದ್ರನೇ, ಆಗ ಹಿಮದಂತಹ ಶುಭ್ರವಾದ ಭಸ್ಮವು ಆ ಗಾಯದಿಂದ ಹೊರಹೊಮ್ಮಿತು. ಅದನ್ನು ನೋಡಿ ನಾಚಿಕೆಗೊಂಡ ಆ ಋಷಿಗಳು ರುದ್ರದೇವರ ಪಾದಗಳಿಗೆ ನಮಸ್ಕರಿಸಿದರು.

ನಾನ್ಯಂ ದೇವಮಹಂ ಮನ್ಯೇ ರುದ್ರಾತ್ ಪರತರಂ ಮಹತ್ ।
ಸುರಾಸುರಸ್ಯ ಜಗತೋ ಗತಿಸ್ತ್ವಮಸಿ ಶೂಲಧೃತ್ ॥೧೧೧॥

ನಾನು ರುದ್ರನಿಗಿಂತ ಉತ್ತಮನಾದ ಯಾವ ದೇವತೆಯನ್ನೂ ಕಾಣುವುದಿಲ್ಲ. ಎಲೈ ಶೂಲಧಾರಿಯೇ, ಸುರಾಸುರ ಜಗತ್ತಿಗೆ ನೀನೇ ಗತಿಯಾದವನು.

ತ್ವಯಾ ಸೃಷ್ಟಮಿದಂ ಸರ್ವಂ ತ್ರೈಲೋಕ್ಯಂ ಸಚರಾಚರಮ್ ।
ತ್ವಾಮೇವ ಭಗವನ್ ಸರ್ವೇ ಪ್ರವಿಶಂತ್ಯಕುತೋಭಯಾಃ ।
ದೇವೈರಪಿ ನ ಶಕ್ಯಸ್ತ್ವಂ ಪರಿಜ್ಞಾತುಂ ಕುತೋ ಮಯಾ ॥೧೧೨॥

ಭಗವಂತನೇ, ನೀನೇ ಚರಾಚರಾತ್ಮಕವಾದ ಈ ಮೂರುಲೋಕಗಳನ್ನೆಲ್ಲಾ ಸೃಷ್ಟಿಮಾಡಿದವನು. ಪ್ರಳಯದಲ್ಲಿ ಎಲ್ಲರೂ ನಿರ್ಭಯರಾಗಿ ನಿನ್ನನ್ನೇ ಪ್ರವೇಶಿಸುತ್ತಾರೆ. ದೇವತೆಗಳೂ ನಿನ್ನ ಸ್ವರೂಪವನ್ನು ತಿಳಿಯಲಾರರು. ಇನ್ನು ನಾನು ಹೇಗೆ ತಿಳಿಯಲು ಸಾಧ್ಯ ?

ತ್ವಯಿ ಸರ್ವೇ ಸ್ಮ ದೃಶ್ಯಂತೇ ಸುರಾ ಬ್ರಹ್ಮಾದಯೋಽನಘ ।
ಸರ್ವಸ್ತ್ವಮಸಿ ಲೋಕಾನಾಂ ಕರ್ತಾ ಕಾರಯಿತಾ ಚ ಹ ।
ತತ್ತ್ವಪ್ರಸಾದಾತ್ ಸುರಾಃ ಸರ್ವೇ ನಿವಸಂತ್ಯಕುತೋಭಯಾಃ ॥೧೧೩॥

ಎಲೈ ಪರಿಶುದ್ಧನಾದವನೇ, ನಿನ್ನಲ್ಲಿ ಬ್ರಹ್ಮನೇ ಮೊದಲಾದ ಸಕಲದೇವತೆಗಳು ಕಾಣುತ್ತಿದ್ದಾರೆ. ನೀನು ಸರ್ವನೇ ಆಗಿದ್ದೀಯೆ. ನೀನು ಲೋಕಗಳನ್ನು ಸೃಷ್ಟಿಮಾಡುವವನೂ ಎಲ್ಲಜೀವರಿಂದ ಅವರವರ ಕಾರ್ಯಗಳನ್ನು ಮಾಡಿಸುವವನೂ ಆಗಿದ್ದೀಯೆ. ನಿನ್ನ ಅನುಗ್ರಹದಿಂದಲೇ ಎಲ್ಲ ದೇವತೆಗಳೂ ನಿರ್ಭಯವಾಗಿ ವಾಸಮಾಡುತ್ತಾರೆ.

ಏವಂ ಸ್ತುತ್ವಾ ಮಹಾದೇವಮ್ ಋಷಿಃ ಸ ಪ್ರಣತೋಽಭವತ್ ।
ತತ್ತ್ವಪ್ರಸಾದನ್ಮಹಾದೇವ ತಪೋ ಮೇ ನ ಕ್ಷಯೇತ ವೈ ।
ತತೋ ದೇವಃ ಪ್ರಹೃಷ್ಟಾತ್ಮಾ ಬ್ರಹ್ಮರ್ಷಿಮಿದಮಬ್ರವೀತ್ ॥೧೧೪॥

ಹೀಗೆ ಸ್ತೋತ್ರಮಾಡಿ ಆ ಋಷಿಗಳು, 'ಎಲೈ ಮಹಾದೇವನೇ, ನಿನ್ನ ಅನುಗ್ರಹದಿಂದ ನನ್ನ ತಪಸ್ಸಿಗೆ ಕ್ಷಯವುಂಟಾಗದಿರಲಿ' ಎಂದು ಹೇಳಿ ಪ್ರಣಾಮವನ್ನು ಮಾಡಿದರು. ಆಗ ಪ್ರಸನ್ನರಾದ ಮಹಾದೇವರು ಆ ಬ್ರಹ್ಮರ್ಷಿಗಳನ್ನು ಕುರಿತು ಹೀಗೆ ಹೇಳಿದರು.

ತಪಸ್ತೇ ವರ್ಧತಾಂ ವಿಪ್ರ ಮತ್ಪ್ರಸಾದಾತ್ ಸಹಸ್ರಧಾ ।
ಆಶ್ರಮೇ ಚೇಹ ವತ್ಸ್ಯಾಮಿ ತ್ವಯಾ ಸಹ ಮಹಾಮುನೇ ॥೧೧೫॥

ಎಲೈ ಬ್ರಾಹ್ಮಣರೇ, ನನ್ನ ಅನುಗ್ರಹದಿಂದ ನಿಮ್ಮ ತಪಸ್ಸು ಸಾವಿರಪಟ್ಟುಹೆಚ್ಚಲಿ. ಮಹಾಮುನಿಯೇ. ಈ ಆಶ್ರಮದಲ್ಲಿ ನಿಮ್ಮ ಜೊತೆಯಲ್ಲಿ ನಾನು ವಾಸಮಾಡುವೆನು.

ಸಪ್ತಸಾರಸ್ವತೇ ಸ್ನಾತ್ವಾ ಯೋ ಮಾಮರ್ಚಯಿತಾ ದ್ವಿಜಃ ।
ನ ತಸ್ಯ ದುರ್ಲಭಂ ಕಿಂಚಿದಿಹ ಲೋಕೇ ಪರತ್ರ ಚ ॥೧೧೬॥

ಯಾವ ದ್ವಿಜನು ಸಪ್ತಸಾರಸ್ವತತೀರ್ಥದಲ್ಲಿ ಸ್ನಾನವನ್ನುಮಾಡಿ ನನ್ನನ್ನು ಆರ್ಚಿಸುವನೋ ಅವನಿಗೆ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ದುರ್ಲಭವಾದುದು ಯಾವುದೂ ಇಲ್ಲ.

ಸಾರಸ್ವತಂ ಚ ತೇ ಲೋಕಂ ಗಮಿಷ್ಯಂತಿ ನ ಸಂಶಯಃ ।
ವಿವಮುಕ್ತ್ವಾ ಮಹಾದೇವಃ ತತ್ರೈವಾಂತರಧೀಯತ ॥೧೧೭॥

ಅಂತಹವರು ಸಾರಸ್ವತ ಲೋಕಕ್ಕೆ ಹೋಗುವರು ಎಂಬ ವಿಷಯದಲ್ಲಿ ಸಂಶಯವಿಲ್ಲ. ಹೀಗೆ ಹೇಳಿ ಮಹಾದೇವರು ಅಲ್ಲಿಯೇ ಅದೃಶ್ಯರಾದರು.

ತತಸ್ತೈ ಶನಸಂ ಗಚ್ಛೇತ್ ತ್ರಿಷು ಲೋಕೇಷು ವಿಶ್ರುತಮ್ ।
ಯತ್ರ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ॥೧೧೮॥

ಕಾರ್ತಿಕೇಯಶ್ಚ ಭಗವಾನ್ ತ್ರಿಸಂಧ್ಯಂ ಕಿಲ ಭಾರತ ।
ಸಾನ್ನಿಧ್ಯಮಕರೋನ್ನಿತ್ಯಂ ಭಾರ್ಗವಪ್ರಿಯಕಾಮ್ಯಯಾ ॥೧೧೯॥

ಎಲೈ ಭಾರತನೇ, ಅನಂತರ ಅಲ್ಲಿಂದ ಮೂರುಲೋಕಗಳಲ್ಲಿ ಪ್ರಖ್ಯಾತವಾದ ಶುಕ್ರತೀರ್ಥಕ್ಕೆ ಹೋಗಬೇಕು. ಅಲ್ಲಿ ಶುಕ್ರಾಚಾರ್ಯರಿಗೆ ಹಿತವನ್ನು ಮಾಡುವ

ಅಭಿಪ್ರಾಯದಿಂದ ಬ್ರಹ್ಮಾದಿದೇವತೆಗಳೂ ತಪೋಧನರಾದ ಋಷಿಗಳೂ ಪೂಜ್ಯನಾದ ಕಾರ್ತಿಕೇಯನೂ ನಿತ್ಯವೂ ಮೂರು ಸಂಧ್ಯಕಾಲಗಳಲ್ಲಿಯೂ ಸನ್ನಿಹಿತರಾಗಿರುತ್ತಾರೆ.

ಕಪಾಲಮೋಚನಂ ತೀರ್ಥಂ ಸರ್ವಪಾಪಪ್ರಮೋಚನಮ್ ।
ತತ್ರ ಸ್ನಾತ್ವಾ ನರವ್ಯಾಘ್ರ ಸರ್ವಪಾಪೈಃ ಪ್ರಮುಚ್ಯತೇ ॥೧೨೦॥

ಕಪಾಲಮೋಚನವೆಂಬ ತೀರ್ಥವು ಸರ್ವಪಾಪ ಪರಿಹಾರಕವಾದುದು. ನರವ್ಯಾಘ್ರನೇ, ಅಲ್ಲಿ ಸ್ನಾನವನ್ನು ಮಾಡಿದವನು ಎಲ್ಲ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಅಗ್ನಿತೀರ್ಥಂ ತತೋ ಗಚ್ಛೇತ್ ತತ್ರ ಸ್ನಾತ್ವಾ ನರರ್ಷಭ ।
ಅಗ್ನಿಲೋಕಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೧೨೧॥

ನರರ್ಷಭನೇ, ಅಲ್ಲಿಂದ ಅಗ್ನಿತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದ ನರನು ಅಗ್ನಿಲೋಕವನ್ನು ಹೊಂದುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ವಿಶ್ವಾಮಿತ್ರಸ್ಯ ತತ್ಕೈವ ತೀರ್ಥಂ ಭರತಸತ್ತಮ ।
ತತ್ರ ಸ್ನಾತ್ವಾ ನರವ್ಯಾಘ್ರ ಬ್ರಾಹ್ಮಣ್ಯಮಭಜಾಯತೇ ॥೧೨೨॥

ಎಲೈ ಭರತಸತ್ತಮನೇ, ಅಲ್ಲಿಯೇ ವಿಶ್ವಾಮಿತ್ರತೀರ್ಥವಿದೆ. ಎಲೈ ನರವ್ಯಾಘ್ರನೇ, ಅಲ್ಲಿ ಸ್ನಾನವನ್ನು ಮಾಡಿದ ನರನು ಮುಂದೆ ಬ್ರಾಹ್ಮಣಯೋನಿಯಲ್ಲಿ ಜನಿಸುತ್ತಾನೆ.

ಬ್ರಹ್ಮಯೋನಿಂ ಸಮಾಸಾದ್ಯ ಶುಚಿಃ ಪ್ರಯತಮಾನಸಃ ।
ತತ್ರ ಸ್ನಾತ್ವಾ ನರವ್ಯಾಘ್ರ ಬ್ರಹ್ಮಲೋಕೇ ಮಹೀಯತೇ ॥೧೨೩॥

ನರವ್ಯಾಘ್ರನೇ, ಶುಚಿಯಾಗಿ ಮನೋಜಯವನ್ನು ಹೊಂದಿ ಬ್ರಹ್ಮಯೋನಿತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದ ನರನು ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತತೋ ಗಚ್ಛೇತ ರಾಜೇಂದ್ರ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಪೃಥೂದಕಮಿತಿ ಖ್ಯಾತಂ ಕಾರ್ತಿಕೇಯಸ್ಯ ಧೀಮತಃ ।
ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ॥೧೨೪॥

ಅಜ್ಞಾನಾತ್‌ಜ್ಞಾನತೋ ವಾಽಪಿ ಸ್ತ್ರಿಯಾ ವಾ ಪುರುಷೇಣ ವಾ ।
ಯತ್ ಕಿಂಚಿದಶುಭಂ ಕರ್ಮ ಕೃತಂ ಮಾನುಷಬುದ್ಧಿನಾ ॥೧೨೫॥

ತತ್ ಸರ್ವಂ ನಶ್ಯತೇ ತತ್ರ ಸ್ನಾತಮಾತ್ರಸ್ಯ ಭಾರತ ।
ಅಶ್ವಮೇಧಫಲಂ ಚಾಪಿ ಸ್ವರ್ಗಲೋಕಂ ಚ ಗಚ್ಛತಿ ॥೧೨೬॥

ಎಲೈ ರಾಜೇಂದ್ರನೇ, ಅನಂತರ ಮೂರು ಲೋಕದಲ್ಲಿಯೂ ವಿಖ್ಯಾತವಾದ ಪೃಥೂದಕವೆಂಬ ಮೇಧಾವಿಯಾದ ಷಣ್ಮುಖಿನ ತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನವನ್ನು ಮಾಡಿ ಪಿತೃದೇವತಾರ್ಚನೆಯನ್ನು ಮಾಡಿದ ಪುರುಷನಾಗಲೀ ಸ್ತ್ರೀಯಾಗಲೀ ಜ್ಞಾನದಿಂದಲಾಗಲೀ ಅಥವಾ ಅಜ್ಞಾನದಿಂದಲಾಗಲೀ ಮನುಷ್ಯಬುದ್ಧಿಯಿಂದ ಯಾವ ಪಾಪವನ್ನು ಮಾಡಿದ್ದರೂ ಅವೆಲ್ಲವೂ ಅಲ್ಲಿ ಕೇವಲ ಸ್ನಾನದಿಂದ ನಾಶವನ್ನು ಹೊಂದುತ್ತವೆ. ಎಲೈ ಭಾರತನೇ, ಅವನು ಅಶ್ವಮೇಧಫಲವನ್ನು ಪಡೆದು ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಪುಣ್ಯಮಾಹುಃ ಕುರುಕ್ಷೇತ್ರಂ ಕುರುಕ್ಷೇತ್ರಾತ್ ಸರಸ್ವತೀಮ್ ।
ಸರಸ್ವತ್ಯಾಶ್ಚ ತೀರ್ಥಾನಿ ತೀರ್ಥೇಭ್ಯಶ್ಚ ಪೃಥೂದಕಮ್ ॥೧೨೭॥

ಕುರುಕ್ಷೇತ್ರವನ್ನು ಪವಿತ್ರವೆಂದು ಹೇಳುತ್ತಾರೆ. ಕುರುಕ್ಷೇತ್ರಕ್ಕಿಂತಲೂ ಸರಸ್ವತಿಯು ಪವಿತ್ರವಾದುದು. ಸರಸ್ವತಿಗಿಂತಲೂ ತೀರ್ಥಗಳು ಪವಿತ್ರವಾದವು. ತೀರ್ಥಗಳಿಗಿಂತಲೂ ಪೃಥೂದಕವು ಪವಿತ್ರವಾದುದು.

ಪೃಥೂದಕೇ ಜಪ್ಯಪರೋ ನೈನಃ ಶ್ವೋಮರಣಂ ತರೇತ್ ।
ಗೀತಂ ಸನತ್ಕುಮಾರೇಣ ವ್ಯಾಸೇನ ಚ ಮಹಾತ್ಮನಾ ।
ವೇದೇ ಚ ನಿಯತಂ ರಾಜನ್ನಭಿಗಚ್ಛೇತ್ ಪೃಥೂದಕಮ್ ॥೧೨೮॥

ಪೃಥೂದಕದಲ್ಲಿ ಜಪಶೀಲನಾದ ಮನುಷ್ಯನು ಪುನರ್ಜನ್ಮವನ್ನು ಮತ್ತು ಪುನರ್ಮರಣವನ್ನು ಹೊಂದಿಸುವ ಪಾಪಗಳನ್ನು ದಾಟುತ್ತಾನೆ. ರಾಜನೇ, ಪೃಥೂದಕದ ಮಹಿಮೆಯು ಸನತ್ಕುಮಾರರಿಂದಲೂ ಮಹಾತ್ಮರಾದ ವ್ಯಾಸರಿಂದಲೂ ಮತ್ತು ವೇದಗಳಲ್ಲಿಯೂ ಹೇಳಲ್ಪಟ್ಟಿದೆ. ಆದ್ದರಿಂದ ಖಂಡಿತವಾಗಿ ಪೃಥೂದಕಕ್ಕೆ ಹೋಗಬೇಕು.

ಪೃಥೂದಕಾತ್ ಪುಣ್ಯತರಂ ನಾನ್ಯತ್ ತೀರ್ಥಂ ನರೋತ್ತಮ ।
ವಿತನ್ಯೇಧ್ಯಂ ಪವಿತ್ರಂ ಚ ಪಾವನಂ ಚ ನ ಸಂಶಯಃ ॥೧೨೯॥

ಎಲೈ ನರೋತ್ತಮನೇ, ಪೃಥೂದಕಕ್ಕಿಂತ ಅಧಿಕಪುಣ್ಯತೀರ್ಥವು ಇನ್ನೊಂದಿಲ್ಲ. ಇದು ಸೇವನೀಯವಾದುದು ಸ್ವತಃ ಪವಿತ್ರವಾದುದು ಮತ್ತು ಪವಿತ್ರೀಕರಿಸುವ ಶಕ್ತಿಯುಳ್ಳದುದು ಎಂಬ ವಿಷಯದಲ್ಲಿ ಸಂಶಯವಿಲ್ಲ.

ತತ್ರ ಸ್ನಾತ್ವಾ ದಿವಂ ಯಾಂತಿ ಅಪಿ ಪಾಪಕೃತೋ ಜನಾಃ ।
ಪೃಥೂದಕೇ ನರಶ್ರೇಷ್ಠ ಪ್ರಾಹುರೇವಂ ಮನೀಷಿಣಃ ॥೧೩೦॥

ನರಶ್ರೇಷ್ಠನೇ, ಪಾಪಿಗಳಾದ ಮನುಷ್ಯರೂ ಪೃಥೂದಕದಲ್ಲಿ ಸ್ನಾನಮಾಡಿದರೆ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಜ್ಞಾನಿಗಳು ಹೇಳುತ್ತಾರೆ.

ಮಧುಸ್ರವಂ ಚ ತತ್ರೈವ ತೀರ್ಥಂ ಭರತಸತ್ತಮ ।
ತತ್ರ ಸ್ನಾತ್ವಾ ನರೋ ರಾಜನ್ ಗೋಸಹಸ್ರಫಲಂ ಲಭೇತ್ ॥೧೩೧॥

ಭರತಸತ್ತಮನೇ, ಅಲ್ಲಿಯೇ ಮಧುಸ್ರವವೆಂಬ ತೀರ್ಥವಿದೆ. ರಾಜನೇ, ಅಲ್ಲಿ ಸ್ನಾನಮಾಡುವ ಮನುಷ್ಯನು ಗೋಸಹಸ್ರಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇನ್ನರಶ್ರೇಷ್ಠ ದೇವ್ಯಾಸ್ತೀರ್ಥಮನುತ್ತಮಮ್ ।
ಸರಸ್ವತ್ಯಾರುಣಾಯಾಶ್ಚ ಸಂಗಮೇ ಲೋಕವಿಶ್ರುತೇ ॥೧೩೨॥

ತ್ರಿರಾತ್ರೋಪೋಷಿತಃ ಸ್ನಾತ್ವಾ ಮುಚ್ಯತೇ ಬ್ರಹ್ಮಹತ್ಯಯಾ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಂ ವಿಂದತಿ ಮಾನವಃ ।
ಆಸಪ್ತಮಂ ಕುಲಂ ಚೈವ ಪುನಾತಿ ಭರತರ್ಷಭ ॥೧೩೩॥

ನರಶ್ರೇಷ್ಠನೇ, ಅಲ್ಲಿಂದ ಸರಸ್ವತೀ ಮತ್ತು ಅರುಣಾ ನದಿಗಳ ಸಂಗಮದಲ್ಲಿರುವ ಲೋಕವಿಶ್ರುತವಾದ ದೇವೀತೀರ್ಥಕ್ಕೆ ಹೋಗಬೇಕು. ಅಲ್ಲಿ ಮೂರುರಾತ್ರಿ ಉಪವಾಸವನ್ನು ಮಾಡಿ ಸ್ನಾನವನ್ನು ಮಾಡುವವನು ಬ್ರಹ್ಮಹತ್ಯೆಯಿಂದಲೂ ನಿರ್ಮುಕ್ತನಾಗುತ್ತಾನೆ. ಅಗ್ನಿಷ್ಟೋಮ ಅತಿರಾತ್ರಯಾಗಗಳ ಫಲವನ್ನು ಪಡೆಯುತ್ತಾನೆ. ಮತ್ತು ಎಲೈ ಭರತರ್ಷಭನೇ ಏಳು ತಲೆಗಳವರೆಗೆ ತನ್ನ ಕುಲವನ್ನು ಪವಿತ್ರೀಕರಿಸುತ್ತಾನೆ.

ಅತೀವ ತೀರ್ಣಂ ತತ್ಕೈವ ತೀರ್ಥಂ ಕುರುಕುಲೋದ್ವಹ ।
ವಿಪ್ರಾಣಾಮನುಕಂಪಾರ್ಥಂ ಶಾರ್ಙ್ಗಿಣಾ ನಿರ್ಮಿತಂ ಪುರಾ ॥೧೩೪॥

ಎಲೈ ಕುರುಕುಲೋದ್ವಹನೇ ಅಲ್ಲಿಯೇ ಅತಿತೀರ್ಣವೆಂಬ ತೀರ್ಥವಿದೆ. ಅದು ಬ್ರಾಹ್ಮಣರ ಮೇಲಿನ ಅನುಕಂಪದಿಂದ ಶಾರ್ಙ್ಗಧಾರಿಯಾದ ವಿಷ್ಣುವು ಹಿಂದೆ ನಿರ್ಮಿಸಿದ ತೀರ್ಥ.

ವ್ರತೋಪನಯನಾಭ್ಯಾಂ ವಾऽಪ್ಯುಪವಾಸೇನ ವಾ ದ್ವಿಜಃ ।
ಕ್ರಿಯಾಮಂತ್ರೈಶ್ಚ ಸಂಯುಕ್ತೋ ಬ್ರಾಹ್ಮಣಃ ಸ್ಯಾನ್ನ ಸಂಶಯಃ ॥೧೩೫॥

ಯಾವ ದ್ವಿಜನು ಅಲ್ಲಿ ಸ್ನಾನವನ್ನು ಮಾಡಿ ವ್ರತ ಉಪನಯನ ಉಪವಾಸ ಮತ್ತು ಮಂತ್ರಗಳ ಜಪಗಳನ್ನು ಮಾಡುತ್ತಾನೆಯೊ ಅವನು ಬ್ರಾಹ್ಮಣನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಕ್ರಿಯಾಮಂತ್ರವಿಹೀನೋऽಪಿ ತತ್ರ ಸ್ನಾತ್ವಾ ನರರ್ಷಭ ।
ಚೀರ್ಣವ್ರತೋ ಭವೇದ್ ವಿಪ್ರೋ ದೃಷ್ಟಮೇತತ್ ಪುರಾತನೇ ।
ಸಮುದ್ರಾಶ್ಚಾಪಿ ಚತ್ವಾರಃ ಶಾರ್ಙ್ಗಿಣಾऽತ್ರ ಸಮಾಹಿತಾಃ ॥೧೩೬॥

ಎಲೈ ನರರ್ಷಭನೇ, ಕ್ರಿಯಾಹೀನನಾದವನು ಮತ್ತು ಮಂತ್ರ ಹೀನನಾದವನು ಸಹ ಅಲ್ಲಿ ಸ್ನಾನವನ್ನು ಮಾಡಿ ಎಲ್ಲ ವ್ರತಗಳನ್ನು ಮಾಡಿದ ಫಲವನ್ನು ಪಡೆಯುತ್ತಾನೆ. ಇದು ಹಿಂದಿನಿಂದಲೂ ನೋಡಲ್ಪಟ್ಟಿದೆ. ಶಾರ್ಙ್ಗಧರನಾದ ವಿಷ್ಣುವು ಇಲ್ಲಿ ನಾಲ್ಕು ಸಮುದ್ರಗಳ ಸನ್ನಿಧಾನವನ್ನು ಉಂಟುಮಾಡಿದ್ದಾನೆ.

ಯತ್ರ ಸ್ನಾತ್ವಾ ನರವ್ಯಾಘ್ರ ನ ದುರ್ಗತಿಮವಾಪ್ನುಯಾತ್ ।
ಫಲಾನಿ ಗೋಸಹಸ್ರಾಣಾಂ ಚತುರ್ಣಾಂ ವಿಂದತೇ ಚ ಸಃ ॥೧೩೭॥

ಅಲ್ಲಿ ಸ್ನಾನವನ್ನು ಮಾಡಿದವನಿಗೆ ದುರ್ಗತಿಯಾಗುವುದಿಲ್ಲ. ಮತ್ತು ನಾಲ್ಕು ಸಹಸ್ರ ಗೋದಾನವನ್ನು ಮಾಡಿದ ಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ರಾಜೇಂದ್ರ ತೀರ್ಥಂ ತತ್ಸರಸಿ ಪ್ರಕಮ್ ।
ಸಾಹಸ್ರಿಕಂ ಚ ತತ್ಕೈವ ದ್ವೇ ತೀರ್ಥೇ ಲೋಕಪೂಜಿತೇ ॥೧೩೮॥

ಉಭಯೋರ್ಹಿ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ।
ದಾನಂ ಚಾಪ್ಯುಪವಾಸೋ ವಾ ಸಹಸ್ರಗುಣಿತಂ ಭವೇತ್ ॥೧೫೯॥

ರಾಜೇಂದ್ರನೇ, ಅಲ್ಲಿಯ ಶತಸಹಸ್ರಿಕ ಮತ್ತು ಸಾಹಸ್ರಿಕ ಎಂಬ ಲೋಕವಿಶ್ರುತವಾದ ಎರಡು ತೀರ್ಥಗಳಿವೆ. ಅಲ್ಲಿಗೆ ಹೋಗಬೇಕು. ಆ ಎರಡು ತೀರ್ಥಗಳಲ್ಲಿ ಸ್ನಾನಮಾಡಿದ ನರನು ಗೋಸಹಸ್ರ ಫಲವನ್ನು ಪಡೆಯುತ್ತಾನೆ. ಅಲ್ಲಿ ದಾನವಾಗಲೀ ಅಥವಾ ಉಪವಾಸವಾಗಲೀ ಸಾವಿರಪಟ್ಟು ಹೆಚ್ಚು ಫಲದಾಯಕವಾಗುತ್ತದೆ.

ತತೋ ಗಚ್ಛೇತ ರಾಜೇಂದ್ರ ರೇಣುಕಾತೀರ್ಥಮುತ್ತಮಮ್ ।
ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ।
ಸರ್ವಪಾಪವಿಶುದ್ಧಾತ್ಮಾ ಅಗ್ನಿಷ್ಟೋಮಫಲಂ ಲಭೇತ್ ॥೧೪೦॥

ರಾಜೇಂದ್ರನೇ, ಅಲ್ಲಿಂದ ಶ್ರೇಷ್ಠವಾದ ರೇಣುಕಾತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನವನ್ನು ಮಾಡಿ ಪಿತೃದೇವತಾರ್ಚನೆಯಲ್ಲಿ ನಿರತನಾದವನು ಸರ್ವಪಾಪಗಳಿಂದ ಮುಕ್ತನಾಗಿ ಅಗ್ನಿಷ್ಟೋಮಫಲವನ್ನು ಹೊಂದುವನು.

ತತ್ರ ಬ್ರಹ್ಮಾ ಸ್ವಯಂ ನಿತ್ಯಂ ದೇವೈಃ ಸಹ ಮಹೀಪತೇ ।
ಆಯಾಸ್ಯತೇ ಕುರುಶ್ರೇಷ್ಠ ನಾರಾಯಣಪುರೋಗಮೈಃ ॥೧೪೧॥

ಕುರುಶ್ರೇಷ್ಠನೇ, ಆ ರೇಣುಕಾತೀರ್ಥಕ್ಕೆ ನಿತ್ಯವೂ ನಾರಾಯಣನೇ ಮೊದಲಾದ ಎಲ್ಲ ದೇವತೆಗಳ ಜೊತೆಯಲ್ಲಿ ಬ್ರಹ್ಮದೇವರು ಬರುತ್ತಾರೆ.

ಸಾನ್ನಿಧ್ಯಂ ಚೈವ ರಾಜೇಂದ್ರ ರುದ್ರಪತ್ನ್ಯಾಃ ಕುರೂದ್ವಹ ।
ಅರ್ಚಯಿತ್ವಾ ನದೀಂ ದೇವೀಂ ನ ದುರ್ಗತಿಮವಾಪ್ನುಯಾತ್ ॥೧೪೨॥

ಎಲೈ ರಾಜೇಂದ್ರನೇ, ಅಲ್ಲಿ ಪಾರ್ವತಿದೇವಿಯ ಸಾನ್ನಿಧ್ಯವಿದೆ. ಕುರೂದ್ವಹನೇ, ಆ ನದಿಯನ್ನು ಮತ್ತು ಪಾರ್ವತಿಯನ್ನು ಅರ್ಚಿಸಿದವನು ದುರ್ಗತಿಯನ್ನು ಹೊಂದುವುದಿಲ್ಲ.

ವಿಮೋಚನಮುಪಸ್ಪೃಶ್ಯ ಜಿತಮನ್ಯುರ್ಜಿತೇಂದ್ರಿಯಃ ।
ಪುಣ್ಯೇನ ಮಹತಾ ಯುಕ್ತಃ ಸತಾಂ ಲೋಕೇ ಮಹೀಯತೇ ।
ಪ್ರತಿಗ್ರಹಕೃತೈ ರ್ದೋಷೈಃ ಸರ್ವೈಃ ಸ ಪರಿಮುಚ್ಯತೇ ॥೧೪೩॥

ಜಿತಕ್ರೋಧನಾಗಿ ಜಿತೇಂದ್ರಿಯನಾಗಿ ಯಾವ ಮನುಷ್ಯನು ವಿಮೋಚನತೀರ್ಥದಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನು ಮಹಾಪುಣ್ಯದಿಂದ ಕೂಡಿದವನಾಗಿ ಸಜ್ಜನರ ಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಪ್ರತಿಗ್ರಹದಿಂದ ಉಂಟಾದ ಎಲ್ಲ ದೋಷಗಳಿಂದಲೂ ಪೂರ್ಣನಾಗಿ ಮುಕ್ತನಾಗುತ್ತಾನೆ.

ತತಃ ಪಂಚವಟಂ ಗತ್ವಾ ಬ್ರಹ್ಮಚಾರೀ ಜಿತೇಂದ್ರಿಯಃ ।
ಯತ್ರ ಯೋಗೇಶ್ವರಃ ಸ್ಥಾಣುಃ ಸ್ವಯಮೇವ ವೃಷಧ್ವಜಃ ॥೧೪೪॥

ತಮರ್ಚಯಿತ್ವಾ ದೇವೇಶಂ ಗಮನಾದೇವ ಸಿದ್ಧ್ಯತಿ ।
ಔಜಸಂ ಚಾರುಣಂ ತೀರ್ಥಂ ಸ್ನಾತ್ವಾ ದೀಪ್ಯತಿ ತೇಜಸಾ ॥೧೪೫॥

ಅನಂತರ ಬ್ರಹ್ಮಚಾರಿಯೂ ಜಿತೇಂದ್ರಿಯನೂ ಆಗಿ ಪಂಚವಟತೀರ್ಥಕ್ಕೆ ಹೋಗಬೇಕು. ಅಲ್ಲಿ ಯೋಗೇಶ್ವರನಾದ ವೃಷಭಧ್ವಜನಾದ ಸ್ಥಾಣುವಾದ ಶಂಕರನು ತಾನೇ ಸನ್ನಿಹಿತನಾಗಿದ್ದಾನೆ. ದೇವೇಶನಾದ ಅವನನ್ನು ಅರ್ಚಿಸಿದರೆ ಪಂಚವಟಕ್ಕೆ ಹೋಗುವಮಾತ್ರದಿಂದಲೇ ಸಿದ್ಧಿಯಾಗುತ್ತದೆ. ಔಜಸ ಮತ್ತು ಅರುಣತೀರ್ಥಗಳಲ್ಲಿ ಸ್ನಾನಮಾಡಿದವನು ಕಾಂತಿಯಿಂದ ಬೆಳಗುತ್ತಾನೆ.

ಯತ್ರ ಬ್ರಹ್ಮಾದಿಭಿರ್ದೈವೈಃ ಋಷಿಭಿಶ್ಚ ತಪೋಧನೈಃ ।
ಸೇನಾಪತ್ಯೇನ ದೇವಾನಾಮಭಿಷಿಕ್ತೋ ಗುಹಃ ಪುರಾ ॥೧೪೬॥

ಅಲ್ಲಿ (ಔಜಸ ಅರುಣತೀರ್ಥಗಳಲ್ಲಿ) ಬ್ರಹ್ಮಾದಿದೇವತೆಗಳೂ ತಪೋಧನರಾದ ಋಷಿಗಳೂ ಸೇರಿ ಹಿಂದೆ ಷಣ್ಮುಖನಿಗೆ ದೇವತೆಗಳ ಸೇನಾನಾಯಕನೆಂದು ಅಭಿಷೇಕಮಾಡಿದರು.

ಔಜಸಸ್ಯ ತು ಪೂರ್ವೇಣ ಕುರುತೀರ್ಥಂ ಕುರೂದ್ವಹ ।
ಕುರುತೀರ್ಥೇ ನರಃ ಸ್ನಾತ್ವಾ ಬ್ರಹ್ಮಚಾರೀ ಜಿತೇಂದ್ರಿಯಃ ।
ಸರ್ವಪಾಪವಿಶುದ್ಧಾತ್ಮಾ ಕುರುಲೋಕಂ ಪ್ರಪದ್ಯತೇ ॥೧೪೭॥

ಕುರೂದ್ವಹನೇ, ಔಸಜತೀರ್ಥದ ಪೂರ್ವಭಾಗದಲ್ಲಿ ಕುರುತೀರ್ಥವಿದೆ. ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾಗಿ ಕುರುತೀರ್ಥದಲ್ಲಿ ಸ್ನಾನವನ್ನುಮಾಡಿದ ನರನು ಸರ್ವಪಾಪಗಳಿಂದ ನಿರ್ಮುಕ್ತನಾಗಿ ಕುರುಲೋಕವನ್ನು ಹೊಂದುತ್ತಾನೆ.

ಸ್ವರ್ಗದ್ವಾರಂ ತತೋ ಗಚ್ಛೇನ್ನಿಯತೋ ನಿಯತಾಶನಃ ।
ಸ್ವರ್ಗಲೋಕಮವಾಪ್ನೋತಿ ಬ್ರಹ್ಮಲೋಕಂ ಚ ಗಚ್ಛತಿ ॥೧೪೮॥

ಅಲ್ಲಿಂದ ನಿಯಮ ಬದ್ಧನಾಗಿ ಮತ್ತು ನಿಯತ ಆಹಾರನಾಗಿ ಸ್ವರ್ಗದ್ವಾರಕ್ಕೆ ಹೋಗಬೇಕು. ಅಂತಹ ಮನುಷ್ಯನು ಸ್ವರ್ಗಲೋಕವನ್ನು ಪಡೆಯುತ್ತಾನೆ. ಮತ್ತು ಬ್ರಹ್ಮಲೋಕಕ್ಕೂ ಹೋಗುತ್ತಾನೆ.

ತತೋ ಗಚ್ಛೇತ ನರಕಂ ತೀರ್ಥಸೇವೀ ಕುರೂದ್ವಹ ।
ತತ್ರ ಸ್ನಾತ್ವಾ ನರವ್ಯಾಘ್ರ ನ ದುರ್ಗತಿಮವಾಪ್ನುಯಾತ್ ॥೧೪೯॥

ಎಲೈ ಕುರೂದ್ವಹನೇ, ಅಲ್ಲಿಂದ ನರಕತೀರ್ಥಕ್ಕೆ ತೀರ್ಥಯಾತ್ರೆ ಮಾಡುವವನು ಹೋಗಬೇಕು. ನರವ್ಯಾಘ್ರನೇ, ಅಲ್ಲಿ ಸ್ನಾನವನ್ನು ಮಾಡಿದರೆ ದುರ್ಗತಿಯುಂಟಾಗುವುದಿಲ್ಲ.

ತತ್ರೈವ ಚ ಮಹಾರಾಜ ವಿಶ್ವೇಶ್ವರಮುಮಾಪತಿಮ್ ।
ಅಭಿಗಮ್ಯ ಮಹಾದೇವಂ ಮುಚ್ಯತೇ ಸರ್ವಕಿಲ್ಬಿಷೈಃ ॥೧೫೦॥

ನಾರಾಯಣಂ ಚಾಭಿಗಮ್ಯ ಪದ್ಮನಾಭಮರಿಂದಮ ।
ಶೋಭಮಾನೋ ಮಹಾರಾಜ ವಿಷ್ಣುಲೋಕಂ ಪ್ರಪದ್ಯತೇ ॥೧೫೧॥

ಎಲೈ ಮಹಾರಾಜನೇ, ಅಲ್ಲಿಯೇ ವಿಶ್ವೇಶ್ವರನಾದ ಉಮಾಪತಿಯಾದ ಮಹಾದೇವನನ್ನು ಸಮೀಪಿಸಿ ಅರ್ಚಿಸುವ ನರನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ. ಮಹಾರಾಜನೇ, ಅಲ್ಲಿಯೇ ನಾರಾಯಣನನ್ನು ಪದ್ಮನಾಭನನ್ನು ತಲುಪಿ ಅರ್ಚಿಸುವವನು ಶೋಭಮಾನನಾಗಿ ವಿಷ್ಣುಲೋಕವನ್ನು ಪಡೆಯುತ್ತಾನೆ.

ತೀರ್ಥೇಷು ಸರ್ವದೇವಾನಾಂ ಸ್ನಾತಃ ಸ ಪುರುಷರ್ಷಭ ।
ಸರ್ವದುಃಖೈಃ ಪರಿತ್ಯಕ್ತೋ ದ್ಯೋತತೇ ಶಶಿವನ್ನರಃ ॥೧೫೨॥

ಎಲೈ ಪುರುಷರ್ಷಭನೇ, ಸರ್ವದೇವತೀರ್ಥದಲ್ಲಿ ಸ್ನಾನವನ್ನು ಮಾಡಿದ ನರನು ಸರ್ವದುಃಖಗಳನ್ನು ಪರಿಹಾರಮಾಡಿಕೊಂಡು ಚಂದ್ರನಂತೆ ಕಂಗೊಳಿಸುತ್ತಾನೆ.

ತತಃ ಸ್ಥಿಪುರಂ ಗಚ್ಛೇತ್ ತೀರ್ಥಸೇವೀ ನರಾಧಿಪ ।
ಪ್ರದಕ್ಷಿಣಮುಪಾವೃತ್ಯ ಗೋಸಹಸ್ರಫಲಂ ಲಭೇತ್ ॥೧೫೩॥

ಎಲೈ ನರಾಧಿಪನೇ, ತೀರ್ಥಸೇವಿಯಾದ ನರನು ಅಲ್ಲಿಂದ ಸ್ಥಿಪುರಕ್ಕೆ ಹೋಗಬೇಕು. ಸ್ಥಿಪುರವನ್ನು ಪ್ರದಕ್ಷಿಣೆಮಾಡುವುದರಿಂದ ಗೋಸಹಸ್ರ ಫಲವು ಉಂಟಾಗುತ್ತದೆ.

ಪಾವನಂ ತೀರ್ಥಮಾಸಾದ್ಯ ತರ್ಪಯೇತ್ ಪಿತೃದೇವತಾಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಭಾರತ ॥೧೫೪॥

ಎಲೈ ಭಾರತನೇ, ಪಾವನತೀರ್ಥಕ್ಕೆ ಹೋಗಿ ಪಿತೃದೇವತೆಗಳಿಗೆ ತರ್ಪಣವನ್ನು ಕೊಡಬೇಕು. ಅದರಿಂದ ಅಗ್ನಿಷ್ಟೋಮಫಲವುಂಟಾಗುತ್ತದೆ.

ಗಂಗಾಹ್ರದಶ್ಚ ತತ್ರೈವ ಕೂಪಶ್ಚ ಭರತರ್ಷಭ ।
ತಿಸ್ರಃ ಕೋಟ್ಯಶ್ಚ ತೀರ್ಥಾನಾಂ ತಸ್ಮಿನ್ ಕೂಪೇ ಮಹೀಪತೇ ।
ತತ್ರ ಸ್ನಾತ್ವಾ ನರೋ ರಾಜನ್ ಸ್ವರ್ಗಲೋಕಂ ಪ್ರಪದ್ಯತೇ ॥೧೫೫॥

ಎಲೈ ಭರತರ್ಷಭನೇ, ಅಲ್ಲಿಯೇ ಗಂಗಾಹ್ರದವೆಂಬ ಕೂಪವಿದೆ. ಎಲೈ ರಾಜನೇ, ಆ ಕೂಪದಲ್ಲಿ ಮೂರು ಕೋಟಿ ತೀರ್ಥಗಳ ಸನ್ನಿಧಾನವಿದೆ. ಎಲೈ ರಾಜನೇ, ಅಲ್ಲಿ ಸ್ನಾನಮಾಡಿದ ಮನುಷ್ಯನು ಸ್ವರ್ಗಲೋಕವನ್ನು ಪಡೆಯುತ್ತಾನೆ.

ಆಪಗಾಯಾಂ ನರಃ ಸ್ನಾತ್ವಾ ಅರ್ಚಯಿತ್ವಾ ಮಹೇಶ್ವರಮ್ ।
ಗಾಣಪತ್ಯಮವಾಪ್ನೋತಿ ಕುಲಂ ಚೋದ್ಧರತೇ ಸ್ವಕಮ್ ॥೧೫೬॥

ಆಪಗಾತೀರ್ಥದಲ್ಲಿ ಸ್ನಾನವನ್ನುಮಾಡಿ ಮಹೇಶ್ವರನನ್ನು ಅರ್ಚಿಸುವ ಮನುಷ್ಯನು ಈಶ್ವರನ ಗಣಾಧಿಪತ್ಯವನ್ನು ಪಡೆಯುತ್ತಾನೆ ಮತ್ತು ತನ್ನ ಕುಲವನ್ನು ಉದ್ಧಾರಮಾಡುತ್ತಾನೆ.

ತತಃ ಸ್ಥಾಣುವನಂ ಗಚ್ಛೇತ್ ತ್ರಿಷು ಲೋಕೇಷು ವಿಶ್ರುತಮ್ ।
ತತ್ರ ಸ್ನಾತ್ವಾ ಽಽಸ್ಥಿತೋ ರಾತ್ರಿಂ ರುದ್ರಲೋಕಮವಾಪ್ನುಯಾತ್ ॥೧೫೭॥

ಅಲ್ಲಿಂದ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದ ಸ್ಥಾಣುವನಕ್ಕೆ ಹೋಗಬೇಕು. ಅಲ್ಲಿ ಸ್ನಾನವನ್ನು ಮಾಡಿ ಒಂದು ರಾತ್ರಿವಾಸವನ್ನು ಮಾಡುವವನು ರುದ್ರಲೋಕವನ್ನು ಪಡೆಯುತ್ತಾನೆ.

ಬದರೀಪತ್ತನಂ ಗಚ್ಛೇದ್ ವಸಿಷ್ಠಸ್ಯಾಶ್ರಮಂ ಗತಃ ।
ಬದರೀಂ ಭಕ್ಷಯೇತ್ ತತ್ರ ತ್ರಿರಾತ್ರೋಪೋಷಿತೋ ನರಃ ॥೧೫೮॥

ಬದರಿಪಟ್ಟಣಕ್ಕೆ ಹೋಗಿ ಅಲ್ಲಿ ವಸಿಷ್ಠಾಶ್ರಮಕ್ಕೆ ಹೋಗಬೇಕು. ಅಲ್ಲಿ ಮೂರು ರಾತ್ರಿಗಳು ಉಪವಾಸವನ್ನು ಮಾಡಿ ಬದರಿಫಲವನ್ನು ಭಕ್ಷಿಸಬೇಕು.

ಸಮ್ಯಗ್‌ದ್ವಾದಶವರ್ಷಾಣಿ ಬದರಾದಸ್ಯ ಯತ್ ಫಲಮ್ ।
ತ್ರಿರಾತ್ರೋಪೋಷಿತಸ್ಯೈವ ಭವೇತ್ತುಲ್ಯಂ ನರಾಧಿಪ ॥೧೫೯॥

ಎಲೈ ನರಾಧಿಪನೇ, ಹಾಗೆ ಮಾಡಿದರೆ ಹನ್ನೆರಡುವರ್ಷಗಳ ಕಾಲ ಕೇವಲ ಬದರಿಫಲದ ಭಕ್ಷಣದಿಂದ ಬರುವ ಫಲವು ಮೂರುರಾತ್ರಿ ಉಪವಾಸವನ್ನು ಮಾಡುವವನಿಗೂ ಉಂಟಾಗುತ್ತದೆ.

ಇಂದ್ರತೀರ್ಥಂ ಸಮಾಸಾದ್ಯ ತೀರ್ಥಸೇವೀ ನರಾಧಿಪ ।
ಅಹೋರಾತ್ರೋಪವಾಸೇನ ಶಕ್ರಲೋಕೇ ಮಹೀಯತೇ ॥೧೬೦॥

ಎಲೈ ನರಾಧಿಪನೇ, ತೀರ್ಥಸೇವಿಯಾದ ಮನುಷ್ಯನು ಇಂದ್ರತೀರ್ಥಕ್ಕೆ ಹೋಗಿ ಒಂದು ಹಗಲು ಮತ್ತು ರಾತ್ರಿ ಉಪವಾಸವನ್ನು ಮಾಡುವುದರಿಂದ ಇಂದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಏಕರಾತ್ರಂ ಸಮಾಸಾದ್ಯ ಏಕರಾತ್ರೋಷಿತೋ ನರಃ ।
ನಿಯತಃ ಸತ್ಯವಾದೀ ಚ ಬ್ರಹ್ಮಲೋಕೇ ಮಹೀಯತೇ ॥೧೬೧॥

ಏಕರಾತ್ರತೀರ್ಥಕ್ಕೆ ಹೋಗಿ ಒಂದುರಾತ್ರಿಯ ಕಾಲ ನಿಯಮಬದ್ಧನಾಗಿ ವಾಸಮಾಡುವ ಸತ್ಯವಾದಿಯಾದ ಪುರುಷನು ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ಆದಿತ್ಯಸ್ಯಾಶ್ರಮಂ ಗತ್ವಾ ತೇಜೋರಾಶೇರ್ಮಹಾತ್ಮನಃ ॥೧೬೨॥

ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಸ್ಥಾನಂ ಮಹದವಾಪ್ನುಯಾತ್ ।
ಆದಿತ್ಯಲೋಕಂ ವ್ರಜತಿ ಕುಲಂ ಚೈವ ಸಮುದ್ಧರೇತ್ ॥೧೬೩॥

ಎಲೈ ಧರ್ಮಜ್ಞನೇ, ಆನಂತರ ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದ ತೇಜೋರಾಶಿಯಾದ ಮಹಾನುಭಾವನಾದ ಆದಿತ್ಯನ ಆಶ್ರಮಕ್ಕೆ ಹೋಗಿ ಅಲ್ಲಿ ಆದಿತ್ಯತೀರ್ಥದಲ್ಲಿ ಸ್ನಾನವನ್ನು ಮಾಡಿದ ಮನುಷ್ಯನು ಶ್ರೇಷ್ಠವಾದ ಸ್ಥಾನವನ್ನು ಪಡೆಯುತ್ತಾನೆ ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ ಮತ್ತು ಸೂರ್ಯಲೋಕಕ್ಕೆ ಹೋಗುತ್ತಾನೆ.

ಸೋಮತೀರ್ಥಂ ನರೋ ಗತ್ವಾ ತೀರ್ಥಸೇವೀ ಕುರೂದ್ವಹ ।
ಸೋಮಲೋಕಮವಾಪ್ನೋತಿ ಸ ವೈ ನಾಸ್ಯತ್ರ ಸಂಶಯಃ ॥೧೬೪॥

ಎಲೈ ಕುರೂದ್ವಹನೇ, ತೀರ್ಥಸೇವಿಯಾದ ನರನು ಸೋಮತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡಿದರೆ ಸೋಮಲೋಕವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ತತೋ ಗಚ್ಛೇತ ಧರ್ಮಜ್ಞ ದಧೀಚಸ್ಯ ಮಹಾತ್ಮನಃ ।
ತೀರ್ಥಂ ಪುಣ್ಯತಮಂ ರಾಜನ್ ಪವಿತ್ರಂ ಪಾಪನಾಶನಮ್ ॥೧೬೫॥

ಯತ್ರ ಸಾರಸ್ವತೋ ರಾಜನ್ ಸೋಽಂಗಿರಾಸ್ತಪಸೋ ನಿಧಿಃ ।
ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ವಾಜಪೇಯಫಲಂ ಲಭೇತ್ ।
ಸಾರಸ್ವತೀಂ ಗತಿಂ ಚೈವ ಲಭತೇ ನಾತ್ರ ಸಂಶಯಃ ॥೧೬೬॥

ಎಲೈ ಧರ್ಮಜ್ಞನೇ, ಅಲ್ಲಿಂದ ಮಹಾತ್ಮರಾದ ದಧೀಚಿ ಋಷಿಗಳ ಪವಿತ್ರವಾದ ಪುಣ್ಯಪ್ರದವಾದ ಮತ್ತು ಪಾಪನಾಶಕವಾದ ತೀರ್ಥಕ್ಕೆ ಹೋಗಬೇಕು. ಎಲೈ ರಾಜನೇ, ಅಲ್ಲಿ ಸರಸ್ವತೀತೀರನಿವಾಸಿಗಳಾದ ತಪೋನಿಧಿಗಳಾದ ಆಂಗಿರಸರು ಇರುತ್ತಾರೆ. ಆ ತೀರ್ಥದಲ್ಲಿ ಸ್ನಾನವನ್ನು ಮಾಡಿದ ನರನು ವಾಜಪೇಯಯಾಗದ ಫಲವನ್ನು ಹೊಂದಿ ಸಾರಸ್ವತ ಲೋಕವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ತತಃ ಕನ್ಯಾಶ್ರಮಂ ಗಚ್ಛೇನ್ ನಿಯತೋ ನಿಯತಾಶನಃ ।
ತ್ರಿರಾತ್ರಮುಷಿತೋ ರಾಜನ್ನುಪವಾಸಪರಾಯಣಃ ॥೧೬೭॥

ಲಭೇತ್ ಕನ್ಯಾಶತಂ ದಿವ್ಯಂ ಬ್ರಹ್ಮಲೋಕಂ ಚ ಗಚ್ಛತಿ ।
ತತೋ ಗಚ್ಛೇತ ಧರ್ಮಜ್ಞ ತೀರ್ಥಂ ಸನ್ನಿಹತೀಮಪಿ ॥೧೬೮॥

ತತ್ರ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ।
ಮಾಸಿಮಾಸಿ ಸಮೇಷ್ಯಂತಿ ಪುಣ್ಯೇನ ಮಹತಾऽನ್ವಿತಾಃ ॥೧೬೯॥

ಅಲ್ಲಿಂದ ನಿಯಮಬದ್ಧನಾಗಿ ನಿಯತ ಆಹಾರನಾಗಿ ಕನ್ಯಾಶ್ರಮಕ್ಕೆ ಹೋಗಿ ಮೂರುರಾತ್ರಿ ವಾಸವನ್ನು ಮಾಡಿ ಉಪವಾಸಪರಾಯಣನಾದ ನರನು ಶ್ರೇಷ್ಠವಾದ ನೂರು ಕನ್ಯೆಯರನ್ನು ಪಡೆಯುತ್ತಾನೆ. ದಿವ್ಯವಾದ ಬ್ರಹ್ಮಲೋಕವನ್ನು ಹೊಂದುತ್ತಾನೆ. ಎಲೈ ಧರ್ಮಜ್ಞನೇ, ಅಲ್ಲಿಂದ ಸನ್ನಿಹತೀ ತೀರ್ಥಕ್ಕೆ ಹೋಗಬೇಕು. ಅಲ್ಲಿ ಪ್ರತಿತಿಂಗಳೂ ಬ್ರಹ್ಮಾದಿದೇವತೆಗಳು ಮತ್ತು ತಪೋಧನರಾದ ಮಹಾಪುಣ್ಯಶಾಲಿಗಳಾದ ಋಷಿಗಳು ಬಂದು ಸೇರುತ್ತಾರೆ.

ಸನ್ನಿಹತ್ಯಾಮುಪಸ್ಪೃಶ್ಯ ರಾಹುಗ್ರಸ್ತೇ ದಿವಾಕರೇ ।
ಅಶ್ವಮೇಧಶತಸ್ಯಾಗ್ರ್ಯಂ ಫಲಂ ಪ್ರಾಪ್ನೋತಿ ಮಾನವಃ ॥೧೭೦॥

ಯಾರು ರಾಹುಗ್ರಸ್ತ ಸೂರ್ಯಗ್ರಹಣ ಸಮಯದಲ್ಲಿ ಸನ್ನಿಹತೀತೀರ್ಥದಲ್ಲಿ ಸ್ನಾನವನ್ನು ಮಾಡುತ್ತಾರೆಯೋ ಅಂತಹವರು ನೂರು ಅಶ್ವಮೇಧಗಳಿಗಿಂತ ಹೆಚ್ಚಿನ ಫಲವನ್ನು ಪಡೆಯುತ್ತಾರೆ.

ಪೃಥಿವ್ಯಾಂ ಯಾನಿ ತೀರ್ಥಾನಿ ಅಂತರಿಕ್ಷಚರಾಣಿ ಚ ।
ನದ್ಯೋ ನದಾಸ್ತಟಾಕಾನಿ ಸರ್ವಪ್ರಸ್ರವಣಾಣಿ ಚ ॥೧೭೧॥

ಉದಪಾನಾಶ್ಚ ವಪ್ರಾಶ್ಚ ಪುಣ್ಯಾನ್ಯಾಯತನಾನಿ ಚ ।
ಮಾಸಿ ಮಾಸಿ ಸಮಾಯಾಂತಿ ಸನ್ನಿಹತ್ಯಾಂ ನ ಸಂಶಯಃ ॥೧೭೨॥

ಭೂಮಿಯಲ್ಲಿ ಯಾವಯಾವ ತೀರ್ಥಗಳು ಇವೆಯೋ ಯಾವಯಾವ ನದಿಗಳು ನದಗಳು ತಟಾಕಗಳು ಮತ್ತು ಝರಿಗಳು ಇವೆಯೋ ಮತ್ತು ಅಂತರಿಕ್ಷದಲ್ಲಿ ಹರಿಯುವ

ಯಾವ ನದಿಗಳು ಇವೆಯೋ ಮತ್ತು ಎಷ್ಟು ಸರೋವರಗಳು ಕೋಟೆಗಳು ಪುಣ್ಯಸ್ಥಾನಗಳು ಇವೆಯೋ ಅವುಗಳೆಲ್ಲವೂ (ಅವುಗಳ ಅಭಿಮಾನಿ ದೇವತೆಗಳೆಲ್ಲರೂ) ಪ್ರತಿಮಾಸದಲ್ಲಿಯೂ ಸನ್ನಿಹತೀರ್ಥದಲ್ಲಿ ಸೇರುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಯತ್ ಕಿಂಚಿದ್ದುಷ್ಕೃತಂ ಕರ್ಮ ಸ್ತ್ರಿಯೋ ವಾ ಪುರುಷಸ್ಯ ವಾ ।
ಸ್ನಾತಮಾತ್ರಸ್ಯ ತತ್ ಸರ್ವಂ ನಶ್ಯತೇ ನಾತ್ರ ಸಂಶಯಃ ।
ಪದ್ಮವರ್ಣೇನ ಯಾನೇನ ಬ್ರಹ್ಮಲೋಕಂ ಸ ಗಚ್ಛತಿ ॥೧೭೩॥

ಪುರುಷನಾಗಲೀ ಸ್ತ್ರೀಯಾಗಲೀ ಯಾವ ದುಷ್ಕರ್ಮವನ್ನು ಮಾಡಿದ್ದರೂ ಇಲ್ಲಿ ಕೇವಲ ಸ್ನಾನವನ್ನು ಮಾಡುವುದರಿಂದ ಅವೆಲ್ಲವೂ ನಿಸ್ಸಂಶಯವಾಗಿ ನಾಶವನ್ನು ಹೊಂದುತ್ತವೆ. ಮತ್ತು ಅವನು ಪದ್ಮವರ್ಣದ ಯಾನದಿಂದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ಅಭಿವಾದ್ಯ ತತೋ ಯಕ್ಷಂ ದ್ವಾರಪಾಲಮರುಂದುಕಮ್ ।
ಕೋಟಿತೀರ್ಥಮುಪಸ್ಪೃಶ್ಯ ಲಭೇದ್ಬಹು ಸುವರ್ಣಕಮ್ ॥೧೭೪॥

ಅಲ್ಲಿಂದ ದ್ವಾರಪಾಲನಾದ ಅರುಂದುಕಯಕ್ಷನನ್ನು ನಮಸ್ಕರಿಸಿ ಕೋಟಿತೀರ್ಥದಲ್ಲಿ ಸ್ನಾನವನ್ನು ಮಾಡಿದರೆ ಬಹುಸುವರ್ಣಮಯವಾದ ಸಂಪತ್ತು ಉಂಟಾಗುತ್ತದೆ.

ಗಂಗಾಹ್ರದಶ್ಚ ತತ್ರೈವ ತೀರ್ಥಂ ಭರತಸತ್ತಮ ।
ತತ್ರ ಸ್ನಾತಸ್ತು ಧರ್ಮಜ್ಞ ಬ್ರಹ್ಮಚಾರೀ ಸಮಾಹಿತಃ ।
ರಾಜಸೂಯಾಶ್ವಮೇಧಾಭ್ಯಾಂ ಫಲಂ ವಿಂದತಿ ಶಾಶ್ವತಮ್ ॥೧೭೫॥

ಎಲೈ ಭರತಸತ್ತಮನೇ, ಗಂಗಾಹ್ರದವೆಂಬ ತೀರ್ಥವೂ ಅಲ್ಲಿಯೇ ಇದೆ. ಎಲೈ ಧರ್ಮಜ್ಞನೇ, ಬ್ರಹ್ಮಚಾರಿಯಾಗಿ ಮನಸ್ಸಮಾಧಾನದಿಂದ ಕೂಡಿ ಅಲ್ಲಿ ಸ್ನಾನಮಾಡಿದ ಮನುಷ್ಯನು ರಾಜಸೂಯ ಅಶ್ವಮೇಧಯಾಗಗಳ ಫಲವನ್ನು ಶಾಶ್ವತವಾಗಿ ಪಡೆಯುತ್ತಾನೆ.

ಪೃಥಿವ್ಯಾಂ ನೈಮಿಶಂ ಪುಣ್ಯಮಂತರಿಕ್ಷೇ ಚ ಪುಷ್ಕರಮ್ ।
ತ್ರಯಾಣಾಮಪಿ ಲೋಕಾನಾಂ ಕುರುಕ್ಷೇತ್ರಂ ವಿಶಿಷ್ಯತೇ ॥೧೭೬॥

ಪೃಥಿವಿಯಲ್ಲಿ ನೈಮಿಶಾರಣ್ಯವು ಸ್ತೋತ್ರಮಾಡಲ್ಪಡುತ್ತದೆ. ದೇವರ್ಷಿಗಳಿಂದ ನಿಬಿಡವಾದ ಅಂತರಿಕ್ಷಲೋಕದಲ್ಲಿ ಪವಿತ್ರವಾದ ಪುಷ್ಕರವೂ ಸ್ತೋತ್ರಮಾಡಲ್ಪಡುತ್ತದೆ. ಕುರುಕ್ಷೇತ್ರವು ಮಾತ್ರ ಮೂರು ಲೋಕಗಳಲ್ಲಿಯೂ ಸ್ತೋತ್ರಮಾಡಲ್ಪಡುತ್ತದೆ.

ಪಾಂಸವೋಽಪಿ ಕುರುಕ್ಷೇತ್ರೇ ವಾಯುನಾ ಸಮುದೀರಿತಾಃ ।
ಅಪಿ ದುಷ್ಕೃತಕರ್ಮಾಣಂ ನಯಂತಿ ಪರಮಾಂ ಗತಿಮ್ ॥೧೭೭॥

ಕುರುಕ್ಷೇತ್ರದಿಂದ ವಾಯುವು ಹಾರಿಸಿಕೊಂಡುಬಂದ ಧೂಳಿನ ಕಣಗಳೂ ಸಹ ದುಷ್ಕರ್ಮಮಾಡಿದ ಮನುಷ್ಯನನ್ನು ಶ್ರೇಷ್ಠಗತಿಗೆ ಕರೆದುಕೊಂಡು ಹೋಗುತ್ತವೆ.

ದಕ್ಷಿಣೇನ ಸರಸ್ವತ್ಯಾ ಉತ್ತರೇಣ ದೃಷದ್ವತೀಮ್ ।
ಯೇ ವಸಂತಿ ಕುರುಕ್ಷೇತ್ರೇ ತೇ ವಸಂತಿ ತ್ರಿವಿಷ್ಟಪೇ ॥೧೭೮॥

ಸರಸ್ವತೀ ನದಿಯ ದಕ್ಷಿಣದಲ್ಲಿಮತ್ತು ದೃಷದ್ವತೀ ನದಿಯ ಉತ್ತರದಲ್ಲಿ ಇರುವ ಕುರುಕ್ಷೇತ್ರದಲ್ಲಿ ಯಾರು ವಾಸವನ್ನು ಮಾಡುತ್ತಾರೆಯೋ ಅವರು ಸ್ವರ್ಗದಲ್ಲಿ ವಾಸಮಾಡುತ್ತಾರೆ.

ಕುರುಕ್ಷೇತ್ರಂ ಗಮಿಷ್ಯಾಮಿ ಕುರುಕ್ಷೇತ್ರೇ ವಸಾಮ್ಯಹಮ್ ।
ಅಪ್ಯೇಕಾಂ ವಾಚಮುತ್ಸೃಜ್ಯ ಸರ್ವಪಾಪೈಃ ಪ್ರಮುಚ್ಯತೇ ॥೧೭೯॥

ಕುರುಕ್ಷೇತ್ರಕ್ಕೆ ಹೋಗುತ್ತೇನೆ ಕುರುಕ್ಷೇತ್ರದಲ್ಲಿಯೇ ವಾಸಮಾಡುತ್ತೇನೆ ಎಂದು ಒಂದುಬಾರಿ ಹೇಳಿದರೂ ಎಲ್ಲಾ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಬ್ರಾಹ್ಮೀ ವೇದಿಃ ಕುರುಕ್ಷೇತ್ರಂ ಬ್ರಹ್ಮರ್ಷಿಗಣಸೇವಿತಮ್ ।
ಸದಾ ವಸಂತಿ ಯೇ ರಾಜನ್ ನ ತೇ ಶೋಚ್ಯಾಃ ಕಥಂಚನ ॥೧೮೦॥

ಕುರುಕ್ಷೇತ್ರವೆಂಬುದು ಬ್ರಹ್ಮದೇವರ ವೇದಿ. ಅದು ಬ್ರಹ್ಮರ್ಷಿಗಣಸೇವಿತವಾಗಿದೆ. ರಾಜನೇ, ಅಲ್ಲಿ ಯಾರು ಯಾವಾಗಲೂ ವಾಸಮಾಡುತ್ತಾರೆಯೊ ಅವರು ಯಾವ ರೀತಿಯಲ್ಲಿಯೂ ಶೋಚ್ಯರಲ್ಲ.

ಅರಂದುಕಾರುಂದುಕಯೋರ್ಯದಂತರಂ
ರಾಮಹ್ರದಾನಾಂ ಚ ಮರುಂದುಕಸ್ಯ ।
ಏತತ್ ಕುರುಕ್ಷೇತ್ರಸಮಂತಪಂಚಕಂ
ಪಿತಾಮಹಸ್ಯೋತ್ತರವೇದಿರುಚ್ಯತೇ ॥೧೮೧॥

ಅರಂದುಕ ಅರುಂದುಕ ಮರುಂದುಕ ಮತ್ತು ಪರುಶುರಾಮ ಸರೋವರಗಳು ಇವುಗಳ ಮಧ್ಯದಲ್ಲಿರುವ ಕುರುಕ್ಷೇತ್ರ ಮತ್ತು ಸಮಂತ ಪಂಚಕವು ಬ್ರಹ್ಮದೇವರ ಉತ್ತರ ವೇದಿ ಎಂದು ಕರೆಯಲ್ಪಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೊಂಬತ್ತನೆಯ ಅಧ್ಯಾಯ

(ಪುಲಸ್ತ್ಯರಿಂದ ಭೀಷ್ಮರನ್ನು ಕುರಿತು ನಾನಾ ತೀರ್ಥಮಹಿಮೆಯ ವರ್ಣನೆ.)

ಪುಲಸ್ತ್ಯಃ

ತತೋ ಗಚ್ಛೇನ್ಮಹಾಪ್ರಾಜ್ಞ ಧರ್ಮತೀರ್ಥಮನುತ್ತಮಮ್ ।
ಯತ್ರ ಸ್ನಾತ್ವಾ ನರೋ ರಾಜನ್ ಧರ್ಮಶೀಲಃ ಸಮಾಹಿತಃ ।
ಆಸಪ್ತಮಂ ಕುಲಂ ಚೈವ ಪುನೀತೇ ನಾತ್ರ ಸಂಶಯಃ ॥೧॥

ಎಲೈ ಮಹಾಪ್ರಾಜ್ಞನೇ, ಅನಂತರ ಶ್ರೇಷ್ಠವಾದ ಧರ್ಮತೀರ್ಥಕ್ಕೆ ಹೋಗಬೇಕು ಎಲೈ ರಾಜನೇ, ಧರ್ಮಶೀಲನಾಗಿ ಸಮಾಧಿಯುಕ್ತನಾಗಿ ಅಲ್ಲಿ ಸ್ನಾನಮಾಡಿದ ಮನುಷ್ಯನು ಏಳು ತಲೆಗಳವರೆಗೆ ತನ್ನ ಕುಲವನ್ನು ಪವಿತ್ರಗೊಳಿಸುತ್ತಾನೆ. ಇದರಲ್ಲಿ ಸಂಶಯವಿಲ್ಲ.

ತತೋ ಗಚ್ಛೇತ ಧರ್ಮಜ್ಞ ತಾರಾಪತನಮುತ್ತಮಮ್ ।
ಅಗ್ನಿಷ್ಟೋಮಮವಾಪ್ನೋತಿ ಮುನಿಲೋಕಂ ಚ ಗಚ್ಛತಿ ॥೨॥

ಎಲೈ ಧರ್ಮಜ್ಞನೇ, ಅಲ್ಲಿಂದ ಶ್ರೇಷ್ಠವಾದ ತಾರಾಪತನಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಗೆ ಹೋಗುವವನು ಅಗ್ನಿಷ್ಟೋಮಫಲವನ್ನು ಪಡೆದು ಮುನಿಲೋಕಕ್ಕೆ ಹೋಗುತ್ತಾನೆ.

ಸೌಗಂಧಿಕವನಂ ರಾಜನ್ ತತೋ ಗಚ್ಛೇತ ಮಾನವಃ ।
ಯತ್ರ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ॥೩॥

ಸಿದ್ಧಚಾರಣಗಂಧರ್ವಕಿನ್ನರಾಃ ಸಮಹೋರಗಾಃ ।
ತದ್ವನಂ ಪ್ರವಿಶನ್ನೇವ ಸರ್ವಪಾಪೈಃ ಪ್ರಮುಚ್ಯತೇ ॥೪॥

ಎಲೈ ರಾಜನೇ ಅಲ್ಲಿಂದ ತೀರ್ಥಸೇವಿಯಾದ ನರನು ಸೌಗಂಧಿಕವನಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿದೇವತೆಗಳು ತಪೋಧನರಾದ ಋಷಿಗಳು ಸಿದ್ಧಚಾರಣಗಂಧರ್ವ ಕಿನ್ನರರು ಮಹೋರಗಗಳು ಸದಾ ಸನ್ನಿಹಿತರಾಗಿರುತ್ತಾರೆ. ಆ ವನವನ್ನು ಪ್ರವೇಶಮಾಡುವುದರಿಂದಲೇ ಮನುಷ್ಯನು ಎಲ್ಲ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ತತಶ್ಚಾಪಿ ಸರಿಚ್ಛ್ರೇಷ್ಠಾ ನದೀನಾಮುತ್ತಮಾ ನದೀ ।
ಪ್ಲಕ್ಷಾ ದೇವೀ ಸ್ರುತಾ ಪೂರ್ವಂ ಮಹಾಪುಣ್ಯಾ ಸರಸ್ವತೀ ॥೫॥

ತತ್ರಾಭಿಷೇಕಂ ಕುರ್ವೀತ ವಲ್ಮೀಕಾನ್ನಿಃಸೃತೇ ಜಲೇ ।
ಅರ್ಚಯಿತ್ವಾ ಪಿತೄನ್ ದೇವಾನ್ ಅಶ್ವಮೇಧಫಲಂ ಲಭೇತ್ ॥೬॥

ಅಲ್ಲಿಂದ ಮುಂದಕ್ಕೆ ನದಿಗಳಲ್ಲಿ ಉತ್ತಮವಾದ ಒಳ್ಳೆಯ ಜಲದಿಂದ ಕೂಡಿದ ಮಹಾಪುಣ್ಯಪ್ರದವಾದ ಪ್ಲಕ್ಷಾನದಿಯು ಹರಿಯುತ್ತದೆ. ವಲ್ಮೀಕದಿಂದ ಹೊರಹೊಮ್ಮುತ್ತಿರುವ ಆ ಜಲದಲ್ಲಿಸ್ನಾನವನ್ನುಮಾಡಿ ಪಿತೃಗಳನ್ನು ಮತ್ತು ದೇವತೆಗಳನ್ನು ಅರ್ಚಿಸಿದರೆ ಅಶ್ವಮೇಧ ಫಲ ಉಂಟಾಗುತ್ತದೆ.

ಈಶಾನಾಧ್ಯುಷಿತಂ ನಾಮ ತತ್ರ ತೀರ್ಥಂ ಸುದುರ್ಲಭಮ್ ।
ಷಟ್ಸು ಶಮ್ಯನಿಪಾತೇಷು ವಲ್ಮೀಕಾದಿತಿ ನಿಶ್ಚಯಃ ॥೭॥

ಕಪಿಲಾನಾಂ ಸಹಸ್ರಂ ಚ ವಾಜಿಮೇಧಂ ಚ ವಿಂದತಿ ।
ತತ್ರ ಸ್ನಾತ್ವಾ ನರವ್ಯಾಘ್ರ ದೃಷ್ಟಮೇತತ್ ಪುರಾತನೈಃ ॥೮॥

ಆ ವಲ್ಮೀಕದಿಂದ ಆರು ಶಮ್ಯಾಪ್ರಾಸಗಳ ದೂರದಲ್ಲಿ ಸುದುರ್ಲಭವಾದ ರುದ್ರದೇವರಿಂದ ಅಧಿಷ್ಠಿತವಾದ ಈಶಾನಾಧ್ಯುಷಿತ ಎಂಬ ತೀರ್ಥವಿದೆ. ಎಲೈ ನರವ್ಯಾಘ್ರನೇ, ಅಲ್ಲಿ ಸ್ನಾನಮಾಡುವ ಮನುಷ್ಯನು ಸಹಸ್ರಕಪಿಲ ಗೋದಾನದ ಫಲವನ್ನು ಮತ್ತು ಅಶ್ವಮೇಧಫಲವನ್ನು ನಿಸ್ಸಂಶಯವಾಗಿ ಪಡೆಯುತ್ತಾನೆ. ಇದು ಪ್ರಾಚೀನರು ತಿಳಿದಿರುವ ವಿಷಯ.

ಸುಗಂಧಾನ್ ಶಾತಕುಂಭಾಂಶ್ಚ ಪಂಚಯಜ್ಞಾಂಶ್ಚ ಭಾರತ ।
ಅಭಿಗಮ್ಯ ನರಶ್ರೇಷ್ಠ ಸ್ವರ್ಗಲೋಕೇ ಮಹೀಯತೇ ॥೯॥

ಎಲೈ ಭಾರತನೇ, ಸುಗಂಧ ಶಾತಕುಂಭ ಮತ್ತು ಪಂಚಯಜ್ಞ ಕ್ಷೇತ್ರಗಳಿಗೆ ಹೋಗುವ ನರನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತ್ರಿಶೂಲಖಾತಂ ತತ್ರೈವ ತೀರ್ಥಮಾಸಾದ್ಯ ಭಾರತ ।
ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ।
ಗಾಣಪತ್ಯಂ ಚ ಲಭತೇ ದೇಹಂ ತ್ಯಕ್ತ್ವಾ ನ ಸಂಶಯಃ ॥೧೦॥

ಎಲೈ ಭಾರತನೇ, ಅಲ್ಲಿಯೇ ತ್ರಿಶೂಲಖಾತವೆಂಬ ತೀರ್ಥವಿದೆ. ಅಲ್ಲಿಗೆ ಹೋಗಿ ಸ್ನಾನವನ್ನು ಮಾಡಿ ಪಿತೃದೇವತೆಗಳನ್ನು ಅರ್ಚಿಸುವ ನರನು ದೇಹತ್ಯಾಗವನ್ನು ಮಾಡಿದ ಮೇಲೆ ಗಣಾಧಿಪತ್ಯವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ತತೋ ಗಚ್ಛೇತ ರಾಜೇಂದ್ರ ದೇವ್ಯಾಃ ಸ್ಥಾನಂ ಸುದುರ್ಲಭಮ್ ।
ಶಾಕಂಭರೀತಿ ವಿಖ್ಯಾತಂ ತ್ರಿಷು ಲೋಕೇಷು ಭಾರತ ॥೧೧॥

ಎಲೈ ರಾಜೇಂದ್ರನೇ, ಅಲ್ಲಿಂದ ಗೌರಿಯ ಸ್ಥಾನವಾದ ಸುದುರ್ಲಭವಾದ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದ ಶಾಕಂಭರೀ ಎಂಬ ಕ್ಷೇತ್ರಕ್ಕೆ ಹೋಗಬೇಕು.

ದಿವ್ಯಂ ವರ್ಷಸಹಸ್ರಂ ತು ಶಾಕೇನ ಭರತರ್ಷಭ ।
ಆಹಾರಂ ಸಾ ಕೃತವತೀ ಮಾಸಿಮಾಸಿ ನರಾಧಿಪ ॥೧೨॥

ಎಲೈ ಭರತಶ್ರೇಷ್ಠನೇ, ಎಲೈ ರಾಜನೇ, ಅಲ್ಲಿ ದೇವಿಯು ಒಂದು ತಿಂಗಳಿಗೆ ಒಂದು ಬಾರಿಯಂತೆ ಶಾಕವನ್ನು ಮಾತ್ರ ಸೇವಿಸಿ ದಿವ್ಯಸಹಸ್ರವರ್ಷಗಳ ಕಾಲ ತಪಸ್ಸನ್ನು ಮಾಡಿದಳು.

ಋಷಯೋऽಭ್ಯಾಗತಾಸ್ತತ್ರ ದೇವ್ಯಾ ಭಕ್ತಾಸ್ತಪೋಧನಾಃ ।
ಅತಿಥ್ಯಂ ಚ ಕೃತಂ ತೇಷಾಂ ಶಾಕೇನ ಕಿಲ ತರ್ಪಿತಮ್ ।
ತತಃಶಾಕಂಭರೀತ್ಯೇವ ನಾಮ ತಸ್ಯಾಃ ಪ್ರತಿಷ್ಠಿತಮ್ ॥೧೩॥

ದೇವಿಯ ಭಕ್ತರಾದ ತಪೋಧನರಾದ ಋಷಿಗಳು ಅಲ್ಲಿಗೆ ಬಂದರು ದೇವಿಯು ಅವರಿಗೆ ಶಾಕದಿಂದಲೇ ಅತಿಥ್ಯವನ್ನು ಮಾಡಿ ಸಂತೋಷಪಡಿಸಿದಳು ಆದ್ದರಿಂದ ಆ ಕ್ಷೇತ್ರಕ್ಕೆ ಶಾಕಂಭರೀ ಎಂಬ ನಾಮವೇ ಪ್ರತಿಷ್ಠಿತವಾಗಿದೆ.

ಶಾಕಂಭರೀಂ ಸಮಾಸಾದ್ಯ ಬ್ರಹ್ಮಚಾರೀ ಸಮಾಹಿತಃ ।
ತ್ರಿರಾತ್ರಮುಷಿತಃ ಶಾಕಂ ಭಕ್ಷಯೇನ್ನಿಯತಃ ಶುಚಿಃ ॥೧೪॥

ಶಾಕಾಹಾರಸ್ಯ ಯತ್ಪುಣ್ಯಂ ವರ್ಷೈರ್ದ್ವಾದಶಭಿಃ ಫಲಮ್ ।
ತತ್ ಫಲಂ ತಸ್ಯ ಭವತಿ ದೇವ್ಯಾಶ್ಚಂಧೇನ ಭಾರತ ॥೧೫॥

ಎಲೈ ಭಾರತನೇ, ಶಾಕಂಭರೀ ಕ್ಷೇತ್ರಕ್ಕೆ ಹೋಗಿ ಬ್ರಹ್ಮಚಾರಿಯಾಗಿ ಸಮಾಹಿತಮನಸ್ಕನಾಗಿ ಮೂರುರಾತ್ರಿವಾಸವನ್ನು ಮಾಡಿ ಕೇವಲ ಶಾಕವನ್ನು ಮಾತ್ರ ಆಹಾರವಾಗಿ ಸ್ವೀಕರಿಸಿದರೆ ಅಂತಹ ನಿಯಮಬದ್ಧನಾದ ಶುಚಿಯಾದ ನರನು ಹನ್ನೆರಡುವರ್ಷಗಳ ಕಾಲ ಚೆನ್ನಾಗಿ ಶಾಕವ್ರತವನ್ನು ಮಾಡಿದ ಫಲವನ್ನು ದೇವಿಯ ಅನುಗ್ರಹದಿಂದ ಪಡೆಯುತ್ತಾನೆ.

ತತೋ ಗಚ್ಛೇತ್ ಸುವರ್ಣಾಕ್ಷಂ ತ್ರಿಷು ಲೋಕೇಷು ವಿಶ್ರುತಮ್ ।
ತತ್ರ ವಿಷ್ಣುಃ ಪ್ರಸಾದಾರ್ಥಂ ರುದ್ರಮಾರಾಧಯತ್ ಪುರಾ ॥೧೬॥

ವರಾಂಶ್ಚ ಸುಬಹೂನ್‌ಲೇಭೇ ದೈವತೇಷು ಸುದುರ್ಲಭಾನ್ ।
ಉಕ್ತಶ್ಚ ತ್ರಿಪುರಘ್ನೇನ ಪರಿತುಷ್ಟೇನ ಭಾರತ ॥೧೭॥

ಅಪಿ ಚಾನ್ಯೈಃ ಪ್ರಿಯತಮೋ ಲೋಕೇ ಕೃಷ್ಣ ಭವಿಷ್ಯಸಿ ।
ತ್ವನ್ಮುಖಂ ಚ ಜಗತ್ ಸರ್ವಂ ಭವಿಷ್ಯತಿ ನ ಸಂಶಯಃ ॥೧೮॥

ಆನಂತರ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ಸುವರ್ಣಾಕ್ಷಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ವಿಷ್ಣುವು ರುದ್ರನನ್ನು ಸಂತೋಷಪಡಿಸಲು ಹಿಂದೆ ಅವನನ್ನು

ಆರಾಧಿಸಿದನು ಮತ್ತು ಅವನಿಂದ ದೇವತೆಗಳಿಗೂ ದುರ್ಲಭವಾದ ಅನೇಕ ವರಗಳನ್ನು ಪಡೆದನು. ಎಲೈ ಭಾರತನೇ, ರುದ್ರನು ಪರಿತುಷ್ಟನಾಗಿ ಅವನನ್ನು ಕುರಿತು, 'ಕೃಷ್ಣನೇ ನೀನು ನನಗ ಎಲ್ಲರಿಗಿಂತಲೂ ಹೆಚ್ಚು ಪ್ರಿಯತಮನಾಗಿದ್ದೀಯೆ. ಜಗತ್ತೆಲ್ಲವೂ ನಿನ್ನನ್ನೇ ಪ್ರಧಾನವಾಗಿ ಹೊಂದಿರುತ್ತದೆ. ಇದರಲ್ಲಿ ಸಂಶಯವಿಲ್ಲ' ಎಂದು ಹೇಳಿದನು.

ತತ್ರಾಭಿಗಮ್ಯ ರಾಜೇಂದ್ರ ಪೂಜಯಿತ್ವಾ ವೃಷಧ್ವಜಮ್ ।
ಅಶ್ವಮೇಧಮವಾಪ್ನೋತಿ ಗಾಣಪತ್ಯಂ ಚ ವಿಂದತಿ ॥೧೯॥

ಧೂಮಾವತೀಂ ತತೋ ಗಚ್ಛೇತ್ ತ್ರಿರಾತ್ರೋಪೋಷಿತೋ ನರಃ ।
ಮನಸಾ ಪ್ರಾರ್ಥಿತಾನ್ ಕಾಮಾನ್‌ಲಭತೇ ನಾತ್ರ ಸಂಶಯಃ ॥೨೦॥

ಎಲೈ ರಾಜೇಂದ್ರನೇ, ಅಲ್ಲಿಹೋಗಿ ವೃಷಧ್ವಜನಾದ ಈಶ್ವರನನ್ನು ಪೂಜಿಸುವವನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಮತ್ತು ಗಣಾಧಿಪತ್ಯವನ್ನು ಪಡೆಯುತ್ತಾನೆ. ಅಲ್ಲಿಂದ ನರನು ಧೂಮಾವತಿ ಕ್ಷೇತ್ರಕ್ಕೆ ಹೋಗಿ ಮೂರು ರಾತ್ರಿಗಳು ಉಪವಾಸವನ್ನು ಮಾಡಬೇಕು. ಅವನು ತನ್ನ ಮನಸ್ಸಿನಲ್ಲಿ ಪ್ರಾರ್ಥಿಸಿದ ಎಲ್ಲ ವಸ್ತುಗಳನ್ನೂ ಪಡೆಯುತ್ತಾನೆ ಇದರಲ್ಲಿ ಸಂಶಯವಿಲ್ಲ.

ದೇವ್ಯಾಸ್ತದ್ ದಕ್ಷಿಣಾರ್ಧೇ ತು ರಥಾವರ್ತೋ ನರೋತ್ತಮ ।
ತತ್ರಾರೋಹೇನ ಧರ್ಮಜ್ಞ ಶ್ರದ್ದಧಾನೋ ಜಿತೇಂದ್ರಿಯಃ ।
ಮಹಾದೇವಪ್ರಸಾದಾಚ್ಚ ಗಚ್ಛೇತ ಪರಮಾಂ ಗತಿಮ್ ॥೨೧॥

ಧೂಮಾವತಿದೇವಿಯ ದಕ್ಷಿಣಭಾಗದಲ್ಲಿ ರಥಾವರ್ತವೆಂಬ ಎತ್ತರದ ಪ್ರದೇಶವಿದೆ. ಎಲೈ ಧರ್ಮಜ್ಞನೇ, ಎಲೈ ನರಶ್ರೇಷ್ಠನೇ, ಶ್ರದ್ಧೆಯಿಂದ ಕೂಡಿದವನೂ ಜಿತೇಂದ್ರಿಯನೂ ಆದ ಮಾನವನು ಅದನ್ನು ಹತ್ತಿದರೆ ರುದ್ರದೇವರ ಅನುಗ್ರಹದಿಂದ ಶ್ರೇಷ್ಠಗತಿಯನ್ನು ಹೊಂದುವನು.

ಪ್ರದಕ್ಷಿಣಮಪಾವೃತ್ಯ ತತೋ ಗಚ್ಛೇತ ಭಾರತ ।
ಧಾರಾಂ ನಾಮ ಮಹಾಪ್ರಾಜ್ಞ ಸರ್ವಪಾಪಪ್ರಣಾಶಿನೀಮ್ ।
ತತ್ರ ಸ್ನಾತ್ವಾ ನರವ್ಯಾಘ್ರ ನ ಶೋಚತಿ ನರೋ ಭುವಿ ॥೨೨॥

ಎಲೈ ಭಾರತನೇ, ಪ್ರದಕ್ಷಿಣಾಕಾರದಲ್ಲಿ ಹಿಂದಿರುಗಿ ಬಂದು ಅಲ್ಲಿ ಸರ್ವಪಾಪಪರಿಹಾರಕವಾದ ಧಾರಾತೀರ್ಥಕ್ಕೆ ಹೋಗಬೇಕು. ಎಲೈ ಮಹಾಪ್ರಾಜ್ಞನೇ, ನರವ್ಯಾಘ್ರನೇ, ಅಲ್ಲಿ ಸ್ನಾನವನ್ನು ಮಾಡಿದ ನರನು ಭೂಮಿಯಲ್ಲಿ ದುಃಖಕ್ಕೆ ಒಳಗಾಗುವುದಿಲ್ಲ.

ತತೋ ಗಚ್ಛೇತ ಧರ್ಮಜ್ಞ ನಮಸೃತ್ಯ ಮಹಾಗಿರಿಮ್ ।
ಆಶೀತಿಯೋಜನಶತಂ ಪುಷ್ಕರಾತ್ ಸ್ವರ್ಗಮುಚ್ಯತೇ ॥೨೩॥

ಆಶೀತಿಂ ಧರ್ಮಪೃಷ್ಠಾತ್ತು ಪ್ರವದಂತಿ ಮನೀಷಿಣಃ ।
ಷಷ್ಟಿಂ ಪ್ರಯಾಗಾದ್ರಾಜೇಂದ್ರ ಕುರುಕ್ಷೇತ್ರಾತ್ ತು ದ್ವಾದಶ ॥೨೪॥

ಎಲೈ ಧರ್ಮಜ್ಞನೇ, ಅಲ್ಲಿಂದ ಸ್ವರ್ಗಗಿರಿ ಎಂಬ ದೊಡ್ಡ ಪರ್ವತಕ್ಕೆ ನಮಸ್ಕಾರವನ್ನು ಮಾಡಿ ಹೋಗಬೇಕು. ಪುಷ್ಕರದಿಂದ ಸ್ವರ್ಗಗಿರಿಯು ಎಂಟುನೂರು ಯೋಜನಗಳ ದೂರವಿದೆ. ಜ್ಞಾನಿಗಳಾದವರು ಧರ್ಮಪೃಷ್ಠದಿಂದ ಎಂಬತ್ತು ಯೋಜನದೂರದಲ್ಲಿ ಸ್ವರ್ಗಗಿರಿಯಿದೆ ಎಂದು ಹೇಳುತ್ತಾರೆ. ಎಲೈ ರಾಜೇಂದ್ರನೇ, ಪ್ರಯಾಗದಿಂದ ಆರವತ್ತು ಯೋಜನ ದೂರವೆಂತಲೂ ಕುರುಕ್ಷೇತ್ರದಿಂದ ಹನ್ನೆರಡು ಯೋಜನದೂರವೆಂತಲೂ ಹೇಳುತ್ತಾರೆ.

ಸಂಯುಕ್ತಮೇವ ರಾಜೇಂದ್ರ ಗಂಗಾದ್ವಾರಂ ತ್ರಿವಿಷ್ಟಪಮ್ ।
ಸ್ವರ್ಗದ್ವಾರೇಣ ತತ್ತುಲ್ಯಂ ಗಂಗಾದ್ವಾರಂ ನ ಸಂಶಯಃ ॥೨೫॥

ಎಲೈ ರಾಜೇಂದ್ರನೇ, ಗಂಗಾದ್ವಾರವು ಮತ್ತು ಸ್ವರ್ಗವು ಹೊಂದಿಕೊಂಡೇ ಇವೆ. ಗಂಗಾದ್ವಾರವು ಸ್ವರ್ಗದ್ವಾರಕ್ಕೆ ಸಮವಾಗಿರುತ್ತದೆ. ಇದರಲ್ಲಿ ಸಂಶಯವಿಲ್ಲ.

ತತ್ರಾಭಿಷೇಕಂ ಕುರ್ವೀತ ಕೋಟಿತೀರ್ಥೇ ಸಮಾಹಿತಃ ।
ಪೌಂಡರೀಕಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೨೬॥

ಅಲ್ಲಿ ಕೋಟಿತೀರ್ಥದಲ್ಲಿ ಸಮಾಧಿಯಿಂದ ಸ್ನಾನಮಾಡಿದವನು ಪುಂಡರೀಕಯಾಗದ ಫಲವನ್ನು ಪಡೆಯುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ಸಪ್ತಗಂಗೇ ತ್ರಿಗಂಗೇ ಚ ಚಕ್ರಾವರ್ತೇ ಚ ತರ್ಪಯೇತ್ ।
ದೇವಾನ್ ಪಿತೃಂಶ್ಚ ವಿಧಿವತ್ ಪುಣ್ಯೇ ಲೋಕೇ ಮಹೀಯತೇ ॥೨೭॥

ಸಪ್ತಗಂಗ ತ್ರಿಗಂಗ ಮತ್ತು ಚಕ್ರಾವರ್ತತೀರ್ಥಗಳಲ್ಲಿ ದೇವತೆಗಳಿಗೂ ಮತ್ತು ಋಷಿಗಳಿಗೂ ವಿಧಿವತ್ತಾಗಿ ತರ್ಪಣವನ್ನು ನೀಡಿದರೆ ಪುಣ್ಯಲೋಕದಲ್ಲಿ ಪೂಜಿತನಾಗುತ್ತಾನೆ.

ತತಃ ಕನಖಲೇ ಸ್ನಾತ್ವಾ ತ್ರಿರಾತ್ರೋಪೋಷಿತೋ ನರಃ ।
ಅಶ್ವಮೇಧಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೨೮॥

ಅನಂತರ ಕನಖಲಕ್ಷೇತ್ರಕ್ಕೆ ಹೋಗಿ ಗಂಗೆಯಲ್ಲಿ ಸ್ನಾನವನ್ನು ಮಾಡಿ ಮೂರುರಾತ್ರಿ ಉಪವಾಸವನ್ನು ಮಾಡಿದ ಮನುಷ್ಯನು ಅಶ್ವಮೇಧ ಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗಲೋಕವನ್ನು ಹೊಂದುತ್ತಾನೆ.

ಕಪಿಲಾವಟಂ ಚ ಗಚ್ಛೇತ ತೀರ್ಥಸೇವೀ ನರಾಧಿಪ ।
ಕಪಿಲಾನಾಂ ಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥೨೯॥

ಎಲೈ ನರಾಧಿಪನೇ, ತೀರ್ಥಸೇವಿಯಾದ ಮನುಷ್ಯನು ಕಪಿಲಾವಟಕ್ಕೆ ಹೋಗಬೇಕು. ಅಲ್ಲಿಸ್ನಾನವನ್ನುಮಾಡಿದರೆ ಸಹಸ್ರಕಪಿಲಗೋವುಗಳ ದಾನದ ಫಲವು ಉಂಟಾಗುತ್ತದೆ.

ತತೋ ಗಚ್ಛೇತ ರಾಜೇಂದ್ರ ಶಂತನೋಸ್ತೀರ್ಥಮುತ್ತಮಮ್ ।
ತತ್ರ ಸ್ನಾತ್ವಾ ನರವ್ಯಾಘ್ರ ನ ದುರ್ಗತಿಮವಾಪ್ನುಯಾತ್ ॥೩೦॥

ಎಲೈ ರಾಜೇಂದ್ರನೇ, ಅಲ್ಲಿಂದ ಶ್ರೇಷ್ಠವಾದ ಶಂತನುತೀರ್ಥಕ್ಕೆ ಹೋಗಬೇಕು. ಎಲೈ ನರವ್ಯಾಘ್ರನೇ, ಅಲ್ಲಿಸ್ನಾನವನ್ನು ಮಾಡಿದವನಿಗೆ ದುರ್ಗತಿಯುಂಟಾಗುವುದಿಲ್ಲ.

ಗಂಗಾಯಮುನಯೋಶ್ಚೈವ ಸ್ನಾತಿ ಯಃ ಸಂಗಮೇ ನರಃ ।
ದಶಾಶ್ವಮೇಧಾನಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೩೧॥

ಯಾವ ಮನುಷ್ಯನು ಗಂಗಾಯಮುನಾಸಂಗಮದಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನು ಹತ್ತು ಅಶ್ವಮೇಧ ಯಾಗಗಳ ಫಲವನ್ನು ಹೊಂದಿ ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಸುಗಂಧಂ ಲೋಕವಿಶ್ರುತಮ್ ।
ಸರ್ವಪಾಪವಿಶುದ್ಧಾತ್ಮಾ ಬ್ರಹ್ಮಲೋಕೇ ಮಹೀಯತೇ ॥೩೨॥

ಎಲೈ ರಾಜೇಂದ್ರನೇ, ಅಲ್ಲಿಂದ ಲೋಕಪ್ರಖ್ಯಾತವಾದ ಸುಗಂಧಕ್ಷೇತ್ರಕ್ಕೆ ಹೋಗಬೇಕು. ಹಾಗೆ ಮಾಡುವ ಮನುಷ್ಯನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ರುದ್ರಾವರ್ತಂ ತತೋ ಗಚ್ಛೇತ್ ತೀರ್ಥಸೇವೀ ನರಾಧಿಪ ।
ತತ್ರ ಸ್ನಾತ್ವಾ ನರೋ ರಾಜನ್ ಸ್ವರ್ಗಲೋಕೇ ಮಹೀಯತೇ ॥೩೩॥

ಎಲೈ ನರಾಧಿಪನೇ, ತೀರ್ಥಸೇವಿಯಾದ ಮಾನವನು ಅಲ್ಲಿಂದ ರುದ್ರಾವರ್ತಕ್ಷೇತ್ರಕ್ಕೆ ಹೋಗಬೇಕು. ರಾಜನೇ, ಅಲ್ಲಿ ಸ್ನಾನವನ್ನು ಮಾಡುವ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಗಂಗಾಯಾಶ್ಚ ನರಶ್ರೇಷ್ಠ ಸರಸ್ವತ್ಯಾಶ್ಚ ಸಂಗಮೇ ।
ಸ್ನಾತ್ವಾऽಶ್ವಮೇಧಂ ಪ್ರಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೩೪॥

ಎಲೈ ನರಶ್ರೇಷ್ಠನೇ, ಗಂಗಾಸರಸ್ವತೀಸಂಗಮದಲ್ಲಿ ಸ್ನಾನವನ್ನುಮಾಡುವ ಮನುಷ್ಯನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗಲೋಕಕ್ಕೂ ಹೋಗುತ್ತಾನೆ.

ಭದ್ರಕರ್ಣೇಶ್ವರಂ ಗತ್ವಾ ದೇವಮರ್ಚ್ಯ ಯಥಾವಿಧಿ ।
ನ ದುರ್ಗತಿಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೩೫॥

ಭದ್ರಕರ್ಣೇಶ್ವರಕ್ಷೇತ್ರಕ್ಕೆ ಹೋಗಿ ಅಲ್ಲಿ ರುದ್ರದೇವರನ್ನು ಶಾಸ್ತ್ರೋಕ್ತವಿಧಾನದಿಂದ ಪೂಜಿಸುವವನು ದುರ್ಗತಿಯನ್ನು ಹೊಂದುವುದಿಲ್ಲ. ಮತ್ತು ಶರೀರವನ್ನು ತ್ಯಾಗಮಾಡಿದ ಮೇಲೆ ಸ್ವರ್ಗಲೋಕವನ್ನು ಸೇರುತ್ತಾನೆ.

ತತಃ ಕುಬ್ಜಾಮ್ರಕಂ ಗಚ್ಛೇತ್ ತೀರ್ಥಸೇವೀ ಯಥಾಕ್ರಮಮ್ ।
ಗೋಸಹಸ್ರಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೩೬॥

ಅನಂತರ ತೀರ್ಥಸೇವಿಯಾದ ಮನುಷ್ಯನು ಕ್ರಮವಾಗಿ ಕುಬ್ಜಾಮ್ರಕ್ಷೇತ್ರಕ್ಕೆ ಹೋಗಬೇಕು. ಅದರಿಂದ ಅವನು ಸಹಸ್ರಗೋದಾನದ ಫಲವನ್ನು ಪಡೆದು ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಆರುಂಧತೀವಟಂ ಗಚ್ಛೇತ್ ತೀರ್ಥಸೇವೀ ನರಾಧಿಪ ।
ಸಾಮುದ್ರಕಮುಪಸ್ಪೃಶ್ಯ ಬ್ರಹ್ಮಚಾರೀ ಸಮಾಹಿತಃ ॥೩೭॥

ಅಶ್ವಮೇಧಮವಾಪ್ನೋತಿ ತ್ರಿರಾತ್ರೋಪೋಷಿತೋ ನರಃ ।
ಗೋಸಹಸ್ರಫಲಂ ವಿಂದೇತ್ ಕುಲಂ ಚೈವ ಸಮುದ್ಧರೇತ್ ॥೩೮॥

ಎಲೈ ರಾಜನೇ, ತೀರ್ಥಸೇವಿಯಾದ ಮಾನವನು ಅಲ್ಲಿಂದ ಅರುಂಧತೀವಟಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಚಾರಿಯಾದವನು ಮತ್ತು ಸಮಾಹಿತನಾದವನು ಸಮುದ್ರಜಲವನ್ನು ಮುಟ್ಟಿದ ತಕ್ಷಣವೇ ಅಶ್ವಮೇಧಫಲವನ್ನು ಪಡೆಯುತ್ತಾನೆ. ಮೂರುದಿವಸಗಳ ಕಾಲ ಅಲ್ಲಿ ಉಪವಾಸ ಮಾಡಿದ ನರನಾದರೋ ಸಹಸ್ರಗೋದಾನ ಫಲವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುತ್ತಾನೆ.

ಬ್ರಹ್ಮಾವರ್ತಂ ತತೋ ಗಚ್ಛೇದ್ ಬ್ರಹ್ಮಚಾರೀ ಸಮಾಹಿತಃ ।
ಅಶ್ವಮೇಧಮವಾಪ್ನೋತಿ ಸೋಮಲೋಕಂ ಚ ಗಚ್ಛತಿ ॥೩೯॥

ಅನಂತರ ಮಾನವನು ಬ್ರಹ್ಮಚಾರಿಯಾಗಿ ಸಮಾಧಾನದಿಂದ ಕೂಡಿ ಬ್ರಹ್ಮಾವರ್ತಕ್ಷೇತ್ರಕ್ಕೆ ಹೋಗಬೇಕು. ಅವನು ಅಶ್ವಮೇಧಯಾಗದ ಫಲವನ್ನು ಪಡೆದು ಚಂದ್ರಲೋಕಕ್ಕೆ ಹೋಗುತ್ತಾನೆ.

ಯಮುನಾಪ್ರಭವಂ ಗತ್ವಾ ಸಮುಪಸ್ಪೃಶ್ಯ ಯಾಮುನಮ್ ।
ಅಶ್ವಮೇಧಫಲಂ ಲಬ್ಧ್ವಾ ಸ್ವರ್ಗಲೋಕೇ ಮಹೀಯತೇ ॥೪೦॥

ಎಲೈ ರಾಜನೇ, ಯಮುನೆಯ ಉದ್ಭವಸ್ಥಾನಕ್ಕೆ ಹೋಗಿ ಆಗತಾನೆ ಉದ್ಭವಿಸಿದ ಯಮುನೆಯ ನೀರಿನಲ್ಲಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಹೊಂದಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ದರ್ವೀಸಂಕ್ರಮಣಂ ಪ್ರಾಪ್ಯ ತೀರ್ಥಂ ತ್ರೈಲೋಕ್ಯಪೂಜಿತಮ್ ।
ಅಶ್ವಮೇಧಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೪೧॥

ತೈಲೋಕ್ಯಪೂಜಿತವಾದ ದರ್ವಿಸಂಕ್ರಮಣತೀರ್ಥಕ್ಕೆ ಹೋದವನು ಅಶ್ವಮೇಧಯಾಗದ ಫಲವನ್ನು ಪಡೆದು ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಸಿಂಧೋಶ್ಚ ಪ್ರಭವಂ ಗತ್ವಾ ಸಿದ್ಧಗಂಧರ್ವಸೇವಿತಮ್ ।
ತತ್ರೋಷಿತ್ವಾ ನಿಶಾಃ ಪಂಚ ವಿಂದೇದ್ ಬಹುಸುವರ್ಣಕಮ್ ॥೪೨॥

ಸಿದ್ಧಗಂಧರ್ವರಿಂದ ಸೇವಿತವಾದ ಸಿಂಧುವಿನ ಉದ್ಭವಸ್ಥಾನಕ್ಕೆ ಹೋಗಿ ಅಲ್ಲಿ ಐದು ರಾತ್ರಿಗಳು ವಾಸವನ್ನು ಮಾಡಿದರೆ ಪ್ರಭೂತವಾದ ಸುವರ್ಣವನ್ನು ಪಡೆಯುತ್ತಾನೆ.

ಅಥ ವೇದಿಂ ಸಮಾಸಾದ್ಯ ನರಃ ಪರಮದುರ್ಗಮಮ್ ।
ಅಶ್ವಮೇಧಮವಾಪ್ನೋತಿ ಗಚ್ಛೇಚ್ಚೌಶನಸೀಂ ಗತಿಮ್ ॥೪೩॥

ಅನಂತರ ವೇದಿ ಎಂಬ ಪರಮದುರ್ಗಮವಾದ ಕ್ಷೇತ್ರವನ್ನು ತಲುಪಿದ ನರನು ಅಶ್ವಮೇಧಫಲವನ್ನು ಪಡೆಯುತ್ತಾನೆ ಮತ್ತು ಶುಕ್ರಲೋಕಪ್ರಾಪ್ತಿಯನ್ನೂ ಹೊಂದುತ್ತಾನೆ.

ಋಷಿಕುಲ್ಯಾಂ ಸಮಾಸಾದ್ಯ ವಾಸಿಷ್ಠಂ ಚೈವ ಭಾರತ ।
ವಾಸಿಷ್ಠೀಂ ಸಮಭಿಕ್ರಮ್ಯ ಸರ್ವೇ ವರ್ಣಾ ದ್ವಿಜಾತಯಃ ॥೪೪॥

ಎಲೈ ಭಾರತನೇ, ವಸಿಷ್ಠರಿಗೆ ಸಂಬಂಧಿಸಿದ ಋಷಿ ಕುಲ್ಯೆಯೆಂದು ಪ್ರಸಿದ್ಧವಾದ ವಾಸಿಷ್ಠೀ ಎಂದೇ ಕರೆಯಲ್ಪಡುವ ಒಂದು ಸರೋವರವನ್ನು ತಲುಪಿದ ಎಲ್ಲ ವರ್ಣದವರು ದ್ವಿಜರಾಗಿಬಿಡುತ್ತಾರೆ.

ನರಃ ಸ್ನಾತ್ಯೃಷಿಕುಲ್ಯಾಯಾಮ್ ಋಷಿಲೋಕಂ ಪ್ರಪದ್ಯತೇ ।
ಯದಿ ತತ್ರ ವಸೇನ್ಮಾಸಂ ಶಾಕಾಹಾರೋ ನರಾಧಿಪ ॥೪೫॥

ಋಷಿಕುಲ್ಯೆವೆಂದು ಕರೆಯಲ್ಪಡುವ ಆ ವಾಸಿಷ್ಠತೀರ್ಥದಲ್ಲಿ ಸ್ನಾನಮಾಡುವ ನರನು ಅಲ್ಲಿ ಒಂದು ತಿಂಗಳು ಶಾಕಾಹಾರನಾಗಿ ವಾಸಮಾಡಿದರೆ ಋಷಿಲೋಕವನ್ನು ಪಡೆಯುತ್ತಾನೆ.

ಭೃಗುತುಂದಂ ಸಮಾಸಾದ್ಯ ವಾಜಿಮೇಧಫಲಂ ಲಭೇತ್ ।
ಗತ್ವಾ ವೀರಪ್ರಮೋಕ್ಷಂ ಚ ಸರ್ವಪಾಪೈಃ ಪ್ರಮುಚ್ಯತೇ ॥೪೬॥

ಭೃಗುತುಂದ (ಭೃಗುತುಂಗ) ಕ್ಷೇತ್ರಕ್ಕೆ ಹೋದರೆ ಅಶ್ವಮೇಧಫಲವುಂಟಾಗುತ್ತದೆ. ವೀರಪ್ರಮೋದಕ್ಷೇತ್ರಕ್ಕೆ ಹೋದರೆ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಕೃತ್ತಿಕಾಮಘಯೋರ್ಜ್ಜೆವ ತೀರ್ಥಮಾಸಾದ್ಯ ಭಾರತ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಮಾಪ್ನೋತಿ ಪುಣ್ಯಕಮ್ ॥೪೭॥

ಎಲೈ ಭಾರತನೇ, ಕೃತ್ತಿಕಾತೀರ್ಥ ಮತ್ತು ಮಘತೀರ್ಥಕ್ಕೆ ಹೋದ ಮನುಷ್ಯನು ಅಗ್ನಿಷ್ಟೋಮ ಮತ್ತು ಅತಿರಾತ್ರ ಯಾಗಗಳಿಗೆ ಸಮಾನವಾದ ಪುಣ್ಯಫಲವನ್ನು ಹೊಂದುತ್ತಾನೆ.

ತತಃ ಸಂಧ್ಯಾಂ ಸಮಾಸಾದ್ಯ ವಿದ್ಯಾತೀರ್ಥಮನುತ್ತಮಮ್ ।
ಉಪಸ್ಪೃಶ್ಯ ಚ ವಿದ್ಯಾನಾಂ ಸರ್ವಾಸಾಂ ಪಾರಗೋ ಭವೇತ್ ॥೪೮॥

ಅನಂತರ ಸಂಧ್ಯಾತೀರ್ಥವೆಂದು ಕರೆಯಲ್ಪಡುವ ಶ್ರೇಷ್ಠವಾದ ವಿದ್ಯಾತೀರ್ಥಕ್ಕೆ ಹೋಗಿ ಆ ನೀರನ್ನು ಸೇವಿಸುವುದರಿಂದ ಎಲ್ಲ ವಿದ್ಯೆಯಗಳಲ್ಲಿ ಪಾರಂಗತನಾಗುತ್ತಾನೆ.

ಮಹಾಶ್ರಮೇ ವಸೇದ್ರಾತ್ರಿಂ ಸರ್ವಪಾಪಪ್ರಮೋಚನೇ ।
ಏಕಕಾಲಂ ನಿರಾಹಾರೋ ಲೋಕಾನ್ ಪ್ರಾಪ್ನೋತಿ ಪುಷ್ಕಲಾನ್ ॥೪೯॥

ಸರ್ವಪಾಪನಾಶಕವಾದ ಮಹಾಶ್ರಮದಲ್ಲಿ ದಿವಸಕ್ಕೆ ಒಂದು ಹೊತ್ತು ಉಪವಾಸವನ್ನು ಮಾಡುತ್ತಾ ರಾತ್ರಿಯನ್ನು ಕಳೆದರೆ ಪುಷ್ಕಲವಾದ ಲೋಕಗಳನ್ನು ಹೊಂದುತ್ತಾನೆ.

ಷಷ್ಠಕಾಲೋಪವಾಸೇನ ಮಾಸಮುಷ್ಯ ಮಹಾಲಯೇ ।
ಸರ್ವಪಾಪವಿಶುದ್ಧಾತ್ಮಾ ವಿಂದೇದ್ ಬಹುಸುವರ್ಣಕಮ್ ॥೫೦॥

ಅಲ್ಲಿ ಮಹಾಲಯದಲ್ಲಿ ಹಗಲಿನ ಕೊನೆಯ ಆರನೆಯ ಭಾಗದವರೆಗೂ ಉಪವಾಸವಿದ್ದು ಒಂದು ತಿಂಗಳ ಕಾಲ ದೇವರ ಆರಾಧನೆಯನ್ನು ಮಾಡುವವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಸುವರ್ಣಾದಿ ಬಹುಸಂಪತ್ತನ್ನು ಪಡೆಯುತ್ತಾನೆ.

ಅಥ ವೇತಸಿಕಂ ಗತ್ವಾ ಪಿತಾಮಹನಿಷೇವಿತಮ್ ।
ಅಶ್ವಮೇಧಮವಾಪ್ನೋತಿ ಗಚ್ಛೇಚ್ಚೋರ್ಧ್ವನಸೀಂ ಗತಿಮ್ ॥೫೧॥

ಅನಂತರ ಬ್ರಹ್ಮದೇವರ ಸನ್ನಿಧಾನಕ್ಕೆ ಪಾತ್ರವಾದ ವೇತಸಿಕ ಕ್ಷೇತ್ರಕ್ಕೆ ಹೋದರೆ ಅಶ್ವಮೇಧಫಲವನ್ನು ಪಡೆಯುತ್ತಾನೆ. ಶುಕ್ರಾಚಾರ್ಯರ ಅದೃಶ್ಯಗತಿಯು ಅವನಿಗೆ ಲಭಿಸುತ್ತದೆ.

ಅಥ ಸುಂದರಕಾತೀರ್ಥಂ ಪ್ರಾಪ್ಯ ಸಿದ್ಧರ್ಷಿಸೇವಿತಮ್ ।
ರೂಪಸ್ಯ ಭಾಗೀ ಭವತಿ ದೃಷ್ಟಮೇತತ್ ಪುರಾತನೈಃ ॥೫೨॥

ತತೋ ವೈ ಬ್ರಾಹ್ಮಣಂ ಗಚ್ಛೇತ್ ಬ್ರಹ್ಮಚಾರೀ ಜಿತೇಂದ್ರಿಯಃ ।
ಪದ್ಮವರ್ಣೇನ ಯಾನೇನ ಬ್ರಹ್ಮಲೋಕಂ ಪ್ರಪದ್ಯತೇ ॥೫೩॥

ಅಲ್ಲಿಂದ ಸಿದ್ಧರ್ಷಿಸೇವಿತವಾದ ಸುಂದರತೀರ್ಥಕ್ಕೆ ಹೋಗುವ ಮನುಷ್ಯನು ಒಳ್ಳೆಯ ರೂಪವನ್ನು ಹೊಂದುತ್ತಾನೆ. ಇದನ್ನು ಪ್ರಾಚೀನರು ನೋಡಿದ್ದಾರೆ. ಅಲ್ಲಿಂದ ಮಾನವನು ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾಗಿ ಬ್ರಹ್ಮಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಂದ ಮುಂದೆ ಅವನು (ಶರೀರತ್ಯಾಗವನ್ನು ಮಾಡಿದ ಮೇಲೆ) ಪದ್ಮವರ್ಣದ ವಿಮಾನದಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ತತಶ್ಚ ನೈಮಿಶಂ ಗಚ್ಛೇತ್ ಪುಣ್ಯಂ ಸಿದ್ಧನಿಷೇವಿತಮ್ ।
ತತ್ರ ನಿತ್ಯಂ ನಿವಸತಿ ಬ್ರಹ್ಮಾ ದೇವಗಣೈರ್ವೃತಃ ॥೫೪॥

ಅಲ್ಲಿಂದ ಸಿದ್ಧಗಣಸೇವಿತವಾದ ಪವಿತ್ರವಾದ ನೈಮಿಶಕ್ಷೇತ್ರಕ್ಕೆ ಹೋಗಬೇಕು. ಬ್ರಹ್ಮದೇವರು ದೇವತಾಗಣದಿಂದ ಯುಕ್ತರಾಗಿ ಅಲ್ಲಿಯೇ ಯಾವಾಗಲೂ ವಾಸವನ್ನು ಮಾಡುತ್ತಾರೆ.

ನೈಮಿಶಂ ಪ್ರಾರ್ಥಯಾನಸ್ಯ ಪಾಪಸ್ಯಾರ್ಧಂ ಪ್ರಣಶ್ಯತಿ ।
ಪ್ರವಿಷ್ಟಮಾತ್ರಸ್ತು ನರಃ ಸರ್ವಪಾಪೈಃ ಪ್ರಮುಚ್ಯತೇ ॥೫೫॥

ನೈಮಿಶಕ್ಕೆ ಹೋಗಬೇಕೆಂದು ಮನಸ್ಸಿನಲ್ಲಿ ಪ್ರಾರ್ಥಿಸಿದರೂ ಅರ್ಧಪಾಪವು ನಾಶವನ್ನು ಹೊಂದುತ್ತದೆ. ನೈಮಿಶವನ್ನು ಪ್ರವೇಶಮಾಡಿದರಂತೂ ಮನುಷ್ಯನಿಗೆ ಎಲ್ಲ ಪಾಪಗಳೂ ನಾಶವನ್ನು ಹೊಂದುತ್ತವೆ.

ತತ್ರ ಮಾಸಂ ವಸೇದ್ವೀರೋ ನೈಮಿಶೇ ತೀರ್ಥತತ್ಪರಃ ।
ಪೃಥಿವ್ಯಾಂ ಯಾನಿ ತೀರ್ಥಾನಿ ನೈಮಿಶೇ ತಾನಿ ಭಾರತ ॥೫೬॥

ಎಲೈ ಭಾರತನೇ, ತೀರ್ಥಶ್ರದ್ಧೆಯುಳ್ಳ ಮನುಷ್ಯನು ನೈಮಿಶಾರಣ್ಯದಲ್ಲಿ ಧೀರನಾಗಿ ಒಂದು ತಿಂಗಳಕಾಲ ವಾಸವನ್ನು ಮಾಡಬೇಕು. ಎಲೈ ಭಾರತನೇ, ಭೂಮಿಯಲ್ಲಿ ಎಷ್ಟು ತೀರ್ಥಗಳು ಇವೆಯೋ ಅವೆಲ್ಲವೂ ನೈಮಿಶಾರಣ್ಯದಲ್ಲಿವೆ.

ಅಭಿಷೇಕಕೃತಸ್ತತ್ರ ನಿಯತೋ ನಿಯತಾಶನಃ ।
ಗವಾಂ ಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ।
ಪುನಾತ್ಯಾಸಪ್ತಮಂ ಚೈವ ಕುಲಂ ಭರತಸತ್ತಮ ॥೫೭॥

ನಿಯಮವನ್ನು ಅನುಸರಿಸುವವನಾಗಿ ಆಹಾರನಿಯಮದಿಂದ ಕೂಡಿ ಯಾರು ಅಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಆ ಮನುಷ್ಯನು ಗೋಮೇಧಯಜ್ಞದ ಫಲವನ್ನು ಪಡೆಯುತ್ತಾನೆ. ಮತ್ತು ಎಲೈ ಭರತಸತ್ತಮನೇ ಏಳು ತಲೆಗಳವರೆಗೆ ತನ್ನ ಕುಲವನ್ನು ಪವಿತ್ರೀಕರಿಸುತ್ತಾನೆ.

ಯಸ್ತ್ಯಜೇನ್ನೈಮಿಶೇ ಪ್ರಾಣಾನ್ ಉಪವಾಸಪರಾಯಣಃ ।
ಸ ಮೋದೇತ್ ಸರ್ವಲೋಕಸ್ಯ ವಿವಮಾಹುರ್ಮನೀಷಿಣಃ ॥೫೮॥

ಯಾವನು ಉಪವಾಸ ಪರಾಯಣನಾಗಿ ನೈಮಿಶಾರಣ್ಯದಲ್ಲಿ ದೇಹತ್ಯಾಗವನ್ನು ಮಾಡುತ್ತಾನೆಯೋ ಅವನು ಎಲ್ಲ ಲೋಕಗಳಲ್ಲಿಯೂ ಇದ್ದು ಸುಖವನ್ನು ಅನುಭವಿಸುತ್ತಾನೆಂದು ಜ್ಞಾನಿಗಳು ಹೇಳುತ್ತಾರೆ.

ಪೃಥಿವ್ಯಾಂ ನೈಮಿಶಂ ಪುಣ್ಯಮಂತರಿಕ್ಷೇತು ಪುಷ್ಕರಮ್ ।
ತ್ರಯಾಣಾಮಪಿ ಲೋಕಾನಾಂ ಕುರುಕ್ಷೇತ್ರಂ ವಿಶಿಷ್ಯತೇ ।
ನಿತ್ಯಂ ಪುಣ್ಯಂ ಚ ಮೇಧ್ಯಂ ಚ ನೈಮಿಶಂ ಕುರುಸತ್ತಮ ॥೫೯॥

ಭೂಮಿಯಲ್ಲಿ ನೈಮಿಶಾರಣ್ಯವು ಪವಿತ್ರವೆಂದು ಹೇಳಲ್ಪಡುತ್ತದೆ. ಅಂತರಿಕ್ಷದಲ್ಲಿ ದೇವರ್ಷಿಮೊದಲಾದವರು ಪುಷ್ಕರಕ್ಷೇತ್ರವನ್ನು ಪ್ರಶಂಸಿಸುತ್ತಾರೆ. ಮೂರು ಲೋಕಗಳಲ್ಲಿ ಕುರುಕ್ಷೇತ್ರವು ಎಲ್ಲದಕ್ಕಿಂತ ಶ್ರೇಷ್ಠವಾಗಿದೆ. ಎಲೈ ಕುರುಸತ್ತಮನೇ, ನೈಮಿಶಾರಣ್ಯವು ಯಾವಾಗಲೂ ಪುಣ್ಯಪ್ರದವೂ ಮತ್ತು ಪವಿತ್ರವಾದುದೂ ಆಗಿದೆ.

ಗಂಗೋದ್ಭೇದಂ ಸಮಾಸಾದ್ಯ ತ್ರಿರಾತ್ರೋಪೋಷಿತೋ ನರಃ ।
ವಾಜಪೇಯಮವಾಪ್ನೋತಿ ಬ್ರಹ್ಮಭೂತಶ್ಚ ಜಾಯತೇ ॥೬೦॥

ಯಾವ ಮನುಷ್ಯನು ಗಂಗೋತ್ತತ್ತಿ ಸ್ಥಾನಕ್ಕೆ ಹೋಗಿ (ಗಂಗೋತ್ರಿ) ಮೂರುರಾತ್ರಿಗಳು ಉಪವಾಸವನ್ನು ಮಾಡುತ್ತಾನೆಯೋ ಅವನು ವಾಜಪೇಯಯಾಗದ ಫಲವನ್ನು ಪಡೆಯುತ್ತಾನೆ. ಮತ್ತು ಮುಂದಿನ ಜನ್ಮದಲ್ಲಿ ಬ್ರಹ್ಮನಾಗಿಯೇ ಅವತರಿಸುತ್ತಾನೆ. (ಬ್ರಹ್ಮನಲ್ಲಿ ಇರುವವನೇ ಆಗಿ ಹುಟ್ಟುತ್ತಾನೆ.)

ಸರಸ್ವತೀಂ ಸಮಾಸಾದ್ಯ ತರ್ಪಯೇತ್ ಪಿತೃದೇವತಾಃ ।
ಸಾರಸ್ವತೇಷು ಲೋಕೇಷು ಮೋದತೇ ನಾತ್ರ ಸಂಶಯಃ ॥೬೧॥

ಸರಸ್ವತಿನದಿಯನ್ನು ತಲುಪಿ ಪಿತೃದೇವತೆಗಳಿಗೆ ತರ್ಪಣವನ್ನು ಕೊಡುವವನು ಸಾರಸ್ವತಲೋಕಗಳಲ್ಲಿ ಸಂತೋಷಡುತ್ತಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ತತಶ್ಚ ಬಾಹುದಾಂ ಗಚ್ಛೇದ್ ಬ್ರಹ್ಮಚಾರೀ ಸಮಾಹಿತಃ ।
ದೇವಸತ್ರಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೬೨॥

ಆನಂತರ ಬ್ರಹ್ಮಚಾರಿಯಾ ಸಮಾಧಾನಯುಕ್ತನೂ ಆದ ನರನು ಬಾಹುದಾ ನದಿಗೆ ಹೋಗಬೇಕು. ಅಲ್ಲಿ ದೇವಸತ್ರಯಾಗದ ಫಲವನ್ನು ಹೊಂದುತ್ತಾನೆ.

ತತಶ್ಚೀರವತೀಂ ಗಚ್ಛೇತ್ ಪುಣ್ಯಾಂ ಪುಣ್ಯತಮೈರ್ವೃತಾಮ್ ।
ಪಿತೃದೇವಾರ್ಚನಪರೋ ವಾಜಿಮೇಧಮವಾಪ್ನುಯಾತ್ ॥೬೩॥

ಅಲ್ಲಿಂದ ಪವಿತ್ರವಾದ ಪುಣ್ಯಜನರಿಂದ ಆವೃತವಾದ ಚೀರವತೀ ನದಿಗೆ ಹೋಗಬೇಕು. ನದಿಯಲ್ಲಿ ಪಿತೃದೇವತಾರ್ಚನೆಯನ್ನು ಮಾಡುವವನು ಅಶ್ವಮೇಧಫಲವನ್ನು ಹೊಂದುತ್ತಾನೆ.

ವಿಮಲಾಶೋಕಮಾಸಾದ್ಯ ವಿರಾಜತಿ ಯಥಾ ಶಶೀ ।
ತತ್ರೋಷಿತ್ವಾ ನಿಶಾಮೇಕಾಂ ಸ್ವರ್ಗಲೋಕೇ ಮಹೀಯತೇ ॥೬೪॥

ವಿಮಲಾಶೋಕತೀರ್ಥವನ್ನು ಸೇರಿದವನು ಚಂದ್ರನಂತೆ ಬೆಳಗುತ್ತಾನೆ. ಅಲ್ಲಿ ಒಂದುರಾತ್ರಿ ವಾಸವನ್ನು ಮಾಡಿದರೆ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಗೋಪ್ರತಾರಂ ತತೋ ಗಚ್ಛೇತ್ ಸರಯ್ವಾಸ್ತೀರ್ಥಮುತ್ತಮಮ್ ।
ಯತ್ರ ರಾಮೋ ಗತಃ ಸ್ವರ್ಗಂ ಸಭೃತ್ಯಬಲವಾಹನಃ ॥೬೫॥

ದೇಹಂ ತ್ಯಕ್ತ್ವಾ ದಿವಂ ಯಾತಃ ತಸ್ಯ ತೀರ್ಥಸ್ಯ ತೇಜಸಾ ।
ರಾಮಸ್ಯ ಚ ಪ್ರಸಾದೇನ ವ್ಯವಸಾಯಾಚ್ಚ ಚಾನಘ ॥೬೬॥

ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಗೋಪ್ರತಾರೇ ನರಾಧಿಪ ।
ಸರ್ವಪಾಪವಿಶುದ್ಧಾತ್ಮಾ ಸ್ವರ್ಗಲೋಕೇ ಮಹೀಯತೇ ॥೬೭॥

ಅಲ್ಲಿಂದ ಸರಯೂನದಿಯಲ್ಲಿರುವ ಗೋಪ್ರತಾರವೆಂಬ ಶ್ರೇಷ್ಠವಾದ ತೀರ್ಥಕ್ಕೆ ಹೋಗಬೇಕು. ಅಲ್ಲಿ ರಾಮನು ಆ ತೀರ್ಥದ ಮಹಿಮೆಯಿಂದ ತನ್ನ ಭೃತ್ಯಬಲವಾಹನ ಸಹಿತನಾಗಿ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಹೋದನು. ಎಲೈ ಪರಿಶುದ್ಧನಾದವನೇ ಆ ತೀರ್ಥದಲ್ಲಿ ಸ್ನಾನಮಾಡಿದ ನರನು ರಾಮನ ಅನುಗ್ರಹದಿಂದಲೂ ಮತ್ತು ತನ್ನ ಆಚರಣೆಯಿಂದಲೂ ಸರ್ವಪಾಪಗಳಿಂದ ನಿರ್ಮುಕ್ತನಾಗಿ ಸ್ವರ್ಗಲೋಕದಲ್ಲಿ ವಾಸಿಸುತ್ತಾನೆ.

ರಾಮತೀರ್ಥೇ ನರಃ ಸ್ನಾತ್ವಾ ಗೋಮತ್ಯಾಂ ಕುರುನಂದನ ।
ಅಶ್ವಮೇಧಮವಾಪ್ನೋತಿ ಪುನಾತಿ ಚ ಕುಲಂ ನರಃ ॥೬೮॥

ಎಲೈ ಕುರುನಂದನನೇ, ಗೋಮತಿಯಲ್ಲಿರಾಮತೀರ್ಥದಲ್ಲಿ ಸ್ನಾನವನ್ನುಮಾಡಿದ ನರನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ಮತ್ತು ತನ್ನ ಕುಲವನ್ನು ಪಾವನಮಾಡುತ್ತಾನೆ.

ಶತಸಾಹಸ್ರಕಂ ತತ್ರ ತೀರ್ಥಂ ಭರತಸತ್ತಮ ।
ತತ್ರೋಪಸ್ಪರ್ಶನಂ ಕೃತ್ವಾ ನಿಯತೋ ನಿಯತಾಶನಃ ॥೬೯॥

ಗೋಸಹಸ್ರಫಲಂ ಪುಣ್ಯಂ ಪ್ರಾಪ್ನೋತಿ ಭರತರ್ಷಭ ।
ತತೋ ಗಚ್ಛೇತ ರಾಜೇಂದ್ರ ಭೃತ್ಯಸ್ಥಾನಮನುತ್ತಮಮ್ ॥೭೦॥

ಎಲೈ ಭರತಶ್ರೇಷ್ಠನೇ, ಅಲ್ಲಿಯೇ ಶತಸಾಹಸ್ರಕವೆಂಬ ತೀರ್ಥವಿದೆ. ನಿಯಮಬದ್ಧನಾಗಿ ನಿಯತ ಆಹಾರನಾಗಿ ಅಲ್ಲಿ ಸ್ನಾನವನ್ನು ಮಾಡುವವನು ಸಹಸ್ರಗೋದಾನಫಲವಾದ ಪುಣ್ಯವನ್ನು ಪಡೆಯುತ್ತಾನೆ. ಎಲೈ ಭರತರ್ಷಭನಾದ ರಾಜೇಂದ್ರನೇ, ಅಲ್ಲಿಂದ ಭೃತ್ಯಸ್ಥಾನವೆಂಬ ಶ್ರೇಷ್ಠವಾದ ತೀರ್ಥಕ್ಕೆ ಹೋಗಬೇಕು.

ಕೋಟಿತೀರ್ಥೇ ನರಃ ಸ್ನಾತ್ವಾ ಅರ್ಚಯಿತ್ವಾ ಗುಹಂ ನೃಪ ।
ಗೋಸಹಸ್ರಫಲಂ ವಿದ್ಯಾತ್ ತೇಜಸ್ವೀ ಚ ಭವೇನ್ನರಃ ॥೭೧॥

ಅಲ್ಲಿ ಕೋಟಿತೀರ್ಥದಲ್ಲಿ ಸ್ನಾನಮಾಡಿ ಗುಹನನ್ನು ಪೂಜಿಸುವ ನರನು ಗೋಸಹಸ್ರಫಲವನ್ನು ಹೊಂದುತ್ತಾನೆ. ತೇಜಸ್ವಿಯೂ ಆಗುತ್ತಾನೆ.

ಮಾರ್ಕಂಡೇಯಸ್ಯ ರಾಜೇಂದ್ರ ತೀರ್ಥಮಾಸಾದ್ಯ ದುರ್ಲಭಮ್ ।
ಗೋಮತೀಗಂಗಯೋಶ್ಚೈವ ಸಂಗಮೇ ಲೋಕವಿಶ್ರುತೇ ।
ಅಗ್ನಿಷ್ಟೋಮಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೭೨॥

ಎಲೈ ರಾಜೇಂದ್ರನೇ, ಗೋಮತಿಗಂಗಾನದಿಗಳ ಲೋಕವಿಶ್ರುತವಾದ ಸಂಗಮದಲ್ಲಿ ದುರ್ಲಭವಾದ ಮಾರ್ಕಂಡೇಯ ತೀರ್ಥವನ್ನು ಸೇವಿಸಿದರೆ ಅಗ್ನಿಷ್ಟೋಮಫಲವನ್ನು ಹೊಂದುತ್ತಾನೆ. ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ವಾರಾಣಸೀಂ ಗತ್ವಾ ಅರ್ಚಯಿತ್ವಾ ವೃಷಧ್ವಜಮ್ ।
ಕಪಿಲಾನಾಂ ಹ್ರದೇ ಸ್ನಾತ್ವಾ ರಾಜಸೂಯಫಲಂ ಲಭೇತ್ ॥೭೩॥

ಅನಂತರ ವಾರಾಣಸಿಗೆ ಹೋಗಿ ಶಂಕರನನ್ನು ಪೂಜಿಸಿ ಕಪಿಲಹ್ರದದಲ್ಲಿ ಸ್ನಾನವನ್ನುಮಾಡಿದರೆ ರಾಜಸೂಯ ಫಲವು ಲಭಿಸುತ್ತದೆ.

ವಾರಾಣಸ್ಯಾಂ ವಿಶೇಷೇಣ ಯತ್ರ ವಿಶ್ವೇಶ್ವರಃ ಶಿವಃ ।
ದೇವ್ಯಾ ಸಹ ಮಹಾದೇವೋ ಗಂಗಾಂ ಸಮವಗಾಹತೇ ॥೭೪॥

ವಾರಾಣಸಿಯಲ್ಲಿ ವಿಶ್ವೇಶ್ವರನಾದ ಮಹಾದೇವನಾದ ಶಿವನು ವಿಶೇಷವಾಗಿ ಪಾರ್ವತಿಯ ಜೊತೆಯಲ್ಲಿ ಗಂಗೆಯಲ್ಲಿ ಸ್ನಾನವನ್ನು ಮಾಡುತ್ತಾನೆ.

ತತ್ರ ಮಾಸಂ ವಸೇದ್ಧೀರೋ ಬ್ರಹ್ಮಚಾರೀ ಸಮಾಹಿತಃ ।
ಯಾವಜ್ಜೀವಕೃತಂ ಪಾಪಂ ಮಾಸೇನೈಕೇನ ಶುದ್ಧ್ಯತಿ ॥೭೫॥

ತತೋ ಗಯಾಂ ಸಮಾಸಾದ್ಯ ಬ್ರಹ್ಮಚಾರೀ ಜಿತೇಂದ್ರಿಯಃ ।
ಅಶ್ವಮೇಧಮವಾಪ್ನೋತಿ ಗಮನಾದೇವ ಭಾರತ ॥೭೬॥

ಧೀರನಾದವನೂ ಬ್ರಹ್ಮಚಾರಿಯೂ ಶಾಂತಮನಸ್ಸಿನಿಂದ ಅಲ್ಲಿ ಒಂದುತಿಂಗಳು ವಾಸಿಸಿದರೆ ಒಂದು ಜನ್ಮದಲ್ಲಿ ಮಾಡಿದ ಪಾಪವು ಒಂದೇ ತಿಂಗಳಿನಲ್ಲಿ ಪರಿಹಾರವಾಗುತ್ತವೆ. ಎಲೈ ಭಾರತನೇ, ಆನಂತರ ಬ್ರಹ್ಮಚಾರಿಯೂ ಜಿತೇಂದ್ರಿಯನೂ ಆಗಿ ಗಯಾ ಕ್ಷೇತ್ರವನ್ನು ತಲುಪಿದರೆ ಕೇವಲ ಅಲ್ಲಿಗೆ ಹೋಗುವುದರಿಂದಲೇ ಅಶ್ವಮೇಧ ಫಲವನ್ನು ಪಡೆಯುತ್ತಾನೆ.

ಯತ್ರಾಕ್ಷಯವಟೋ ನಾಮ ತ್ರಿಷು ಲೋಕೇಷು ವಿಶ್ರುತಃ ।
ತತ್ರ ದತ್ತಂ ಪಿತೃಣಾಂ ತು ಅಕ್ಷಯ್ಯಮುಪಪದ್ಯತೇ ॥೭೭॥

ಅಲ್ಲಿ ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ಅಕ್ಷಯವಟವಿದೆ. ಅಲ್ಲಿ ಪಿತೃಗಳಿಗೆಕೊಟ್ಟ ದಾನವು ಅಕ್ಷಯವಾಗುತ್ತದೆ.

ಮಹಾನದ್ಯಾಮುಪಸ್ಪೃಶ್ಯ ತರ್ಪಯೇತ್ ಪಿತೃದೇವತಾಃ ।
ಅಕ್ಷಯಾನ್ ಪ್ರಾಪ್ನುಯಾಲ್ಲೋಕಾನ್ ಕುಲಂ ಚೈವ ಸಮುದ್ಧರೇತ್ ॥

ಮಹಾನದಿಯಲ್ಲಿ ಸ್ನಾನವನ್ನುಮಾಡಿ ಪಿತೃದೇವತೆಗಳನ್ನು ಅರ್ಚಿಸಬೇಕು. ಅಂತಹವನು ಅಕ್ಷಯ ಲೋಕಗಳನ್ನು ಹೊಂದಿ ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಬ್ರಹ್ಮಸರೋ ಗಚ್ಛೇದ್ ಬ್ರಹ್ಮಾರಕ್ಷೋಪಶೋಭಿತಮ್ ।
ಪೌಂಡರೀಕಮವಾಪ್ನೋತಿ ಪ್ರಭಾತಾಮೇವ ಶರ್ವರೀಮ್ ॥೭೯॥

ಅಲ್ಲಿಂದ ಬ್ರಹ್ಮಾರಣ್ಯದ ಮಧ್ಯೆ ಇರುವ ಬ್ರಹ್ಮಸರೋವರಕ್ಕೆ ಹೋಗಬೇಕು. ಅಲ್ಲಿ ಒಂದು ರಾತ್ರಿ ಕಳೆಯುವಷ್ಟರಲ್ಲಿ ಪುಂಡರೀಕಯಾಗದ ಫಲವು ಉಂಟಾಗುತ್ತದೆ.

ತಸ್ಮಿನ್ ಸರಸಿ ರಾಜೇಂದ್ರ ಬ್ರಹ್ಮಣೋ ಯೂಪ ಉದ್ಧೃತಃ ।
ಯೂಪಂ ಪ್ರದಕ್ಷಿಣೀಕೃತ್ಯ ವಾಜಪೇಯಫಲಂ ಲಭೇತ್ ॥೮೦॥

ಎಲೈ ರಾಜೇಂದ್ರನೇ, ಆ ಸರೋವರದಲ್ಲಿ ಬ್ರಹ್ಮದೇವರ ಯೂಪವು ಇಡಲ್ಪಟ್ಟಿದೆ. ಆ ಯೂಪವನ್ನು ಪ್ರದಕ್ಷಿಣೆ ಮಾಡಿದರೆ ವಾಜಪೇಯಫಲವು ದೊರಕುತ್ತದೆ.

ತತೋ ಗಚ್ಛೇತ ರಾಜೇಂದ್ರ ಧೇನುಕಂ ಲೋಕವಿಶ್ರುತಮ್ ।
ಏಕರಾತ್ರೋಷಿತೋ ರಾಜನ್ ಪ್ರಯಚ್ಛೇತ್ ತಿಲಧೇನುಕಾಮ್ ॥೮೧॥

ಸರ್ವಪಾಪವಿಶುದ್ಧಾತ್ಮಾ ಸೋಮಲೋಕಂ ವ್ರಜೇದ್ ಧ್ರುವಮ್।
ತತ್ರ ಚಿಹ್ನಂ ಮಹದ್ರಾಜನ್ನದ್ಯಾಪಿ ಹಿ ನ ಸಂಶಯಃ ॥೮೨॥

ಕಪಿಲಾ ಸಹ ವತ್ಸೇನ ಪರ್ವತೇ ವಿಚರತ್ಯುತ ।
ಸವತ್ಸಾಯಾಃ ಪದಾನಿ ಸ್ಮ ದೃಶ್ಯಂತೇಽದ್ಯಾಪಿ ತತ್ರ ವೈ ॥೮೩॥

ರಾಜೇಂದ್ರನೇ, ಆಲ್ಲಿಂದ ಲೋಕವಿಶ್ರುತವಾದ ಧೇನುಕ ತೀರ್ಥಕ್ಕೆ ಹೋಗಿ ಒಂದುರಾತ್ರಿ ಇದ್ದು ಕಪಿಲಧೇನುವನ್ನು ದಾನಕೊಡಬೇಕು. ಅಂತಹವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಖಂಡಿತವಾಗಿಯೂ ಚಂದ್ರಲೋಕಕ್ಕೆ ಹೋಗುತ್ತಾನೆ. ರಾಜನೇ, ಆಲ್ಲಿ ಈಗಲೂ ಆ ವಿಶೇಷ ಚಿಹ್ನೆಗಳಿವೆ. ಒಂದು ಕಪಿಲಧೇನುವು ತನ್ನ ಕರುವಿನ ಜೊತೆಯಲ್ಲಿ ಆ ಪರ್ವತದಲ್ಲಿ ತಿರುಗಾಡುತ್ತದೆ. ಆ ಗೋವಿನ ಮತ್ತು ಕರುವಿನ ಹೆಜ್ಜೆಯ ಗುರುತುಗಳು ಈಗಲೂ ಆಲ್ಲಿ ಕಾಣುತ್ತವೆ.

ತೇಷೂಪಸ್ಪೃಶ್ಯ ರಾಜೇಂದ್ರ ಪದೇಷು ಕುರುನಂದನ ।
ಯತ್ ಕಿಂಚಿದಶುಭಂ ಪುಂಸಃ ಪ್ರಣಶ್ಯತಿ ಭಾರತ ॥೮೪॥

ಎಲೈ ರಾಜೇಂದ್ರನೇ, ಕುರುನಂದನನೇ, ಆ ಪಾದಚಿಹ್ನೆಗಳ ನೀರನ್ನು ಸ್ಪರ್ಶಮಾಡಿದರೆ ಮನುಷ್ಯನಿಗಿದ್ದ ಅಶುಭಗಳೆಲ್ಲವೂ ನಾಶವನ್ನು ಹೊಂದುತ್ತದೆ.

ತತೋ ಗೃಧ್ರವಟಂ ಗಚ್ಛೇತ್ ಸ್ಥಾನಂ ದೇವಸ್ಯ ಧೀಮತಃ ।
ಸ್ನಾಯೀತ ಭಸ್ಮನಾ ತತ್ರ ಅಭಿವಾದ್ಯ ವೃಷಧ್ವಜಮ್ ॥೮೫॥

ಅಲ್ಲಿಂದ ಮೇಧಾವಿಯಾದ ಮಹಾದೇವನ ಸ್ಥಾನವಾದ ರುದ್ರವಟಕ್ಕೆ ಹೋಗಬೇಕು. ಅಲ್ಲಿ ವೃಷಧ್ವಜನಿಗೆ ನಮಸ್ಕರಿಸಿ ಭಸ್ಮಸ್ನಾನವನ್ನು ಮಾಡಬೇಕು.

ಬ್ರಾಹ್ಮಣೇನ ವ್ರತಂ ಚೀರ್ಣಂ ಭವೇದ್ ದ್ವಾದಶವಾರ್ಷಿಕಮ್ ।
ಇತರೇಷಾಂ ತು ವರ್ಣಾನಾಂ ಸರ್ವಪಾಪಂ ಪ್ರಣಶ್ಯತಿ ॥೮೬॥

ಹಾಗೆ ಮಾಡಿದರೆ ಬ್ರಾಹ್ಮಣನಿಗೆ ಹನ್ನೆರಡುವರ್ಷವ್ರತವನ್ನು ಮಾಡಿದ ಫಲವು ದೊರೆಯುತ್ತದೆ. ಉಳಿದ ವರ್ಣದವರಿಗೆ ಎಲ್ಲ ಪಾಪಗಳೂ ನಾಶವನ್ನು ಹೊಂದುತವೆ.

ಉದಯಂ ತಂ ತತೋ ಗಚ್ಛೇತ್ ಪರ್ವತಂ ಗೀತನಾದಿತಮ್ ।
ಸಾವಿತ್ರ್ಯಾಸ್ತು ಪದಂ ತತ್ರ ದೃಶ್ಯತೇ ಭರತರ್ಷಭ ॥೮೭॥

ಎಲೈ ಭರತರ್ಷಭನೇ, ಅನಂತರ ಗೀತಶಬ್ದದಿಂದ ಕೂಡಿದ ಉದಯ ಪರ್ವತಕ್ಕೆ ಹೋಗಬೇಕು. ಅಲ್ಲಿ ಸಾವಿತ್ರಿಯ ಹೆಜ್ಜೆಗಳು ಕಾಣುತ್ತವೆ.

ತತ್ರ ಸಂಧ್ಯಾಮುಪಾಸೀತ ಬ್ರಾಹ್ಮಣಃ ಸಂಶಿತವ್ರತಃ ।
ಉಪಾಸಿತಾ ಭವೇತ್ ಸಂಧ್ಯಾ ತೇನ ದ್ವಾದಶವಾರ್ಷಿಕೀ ॥೮೮॥

ಅಲ್ಲಿ ವ್ರತಧಾರಿಯಾದ ಬ್ರಾಹ್ಮಣನು ಒಂದು ಬಾರಿ ಸಂಧ್ಯಾವಂದನೆಯನ್ನು ಮಾಡಿದರೆ ಹನ್ನೆರಡುವರ್ಷಗಳ ಕಾಲ ಸಂಧ್ಯಾವಂದನೆಯ ಫಲವು ದೊರೆಯುತ್ತದೆ.

ಯೋನಿದ್ವಾರಂ ಚ ತತ್ರೈವ ವಿಶ್ರುತಂ ಭರತರ್ಷಭ ।
ತತ್ರಾಭಿಗಮ್ಯ ಮುಚ್ಯೇತ ಪುರುಷೋ ಯೋನಿಸಂಸರಾತ್ ॥೮೯॥

ಎಲೈ ಭರತರ್ಷಭನೇ, ಅಲ್ಲಿಯೇ ಯೋನಿದ್ವಾರವೆಂಬ ಪ್ರಖ್ಯಾತವಾದ ತೀರ್ಥವಿದೆ. ಅಲ್ಲಿಗೆ ಹೋಗಿ ಸ್ನಾನವನ್ನು ಮಾಡುವ ಪುರುಷನು ಯೋನಿಗಳ ಸಂಚಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಕೃಷ್ಣಶುಕ್ಲಚತುರ್ದಶ್ಯಾಂ ಗಂಗಾಯಾಂ ಯೋ ವಸೇನ್ನರಃ ।
ಪುನಾತ್ಯಾಸಪ್ತಮಂ ಚೈವ ಕುಲಂ ನಾಸ್ಯತ್ರ ಸಂಶಯಃ ॥೯೦॥

ಯಾವ ಮನುಷ್ಯನು ಶುಕ್ಲಪಕ್ಷದ ಮತ್ತು ಕೃಷ್ಣಪಕ್ಷದ ಚತುರ್ದಶಿಯಂದು ಗಂಗಾನದಿಯ ದಡದಲ್ಲಿ ವಾಸಮಾಡುತ್ತಾನೋ ಅವನು ಏಳು ತಲೆಗಳವರೆಗೆ ತನ್ನ ಕುಲವನ್ನು ಉದ್ಧರಿಸುತ್ತಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್।
ಗೌರೀಂ ವಾ ವರಯೇತ್ ಕನ್ಯಾಂ ನೀಲಂ ವಾ ವೃಷಮುತ್ಸೃಜೇತ್ ॥

ಒಬ್ಬನಾದರೂ ಗಯಾಯಾತ್ರೆಯನ್ನುಮಾಡಬಹುದು ಚಕ್ಕಕನ್ಯೆಯನ್ನು ವಿವಾಹವಾಗಬಹುದು ಅಥವಾ ನೀಲವೃಷೋತ್ಸರ್ಗವನ್ನುಮಾಡಬಹುದು ಎಂದು ಅನೇಕ ಗಂಡು ಮಕ್ಕಳನ್ನು ಅಪೇಕ್ಷಿಸಬೇಕು.

ತತಃ ಫಲ್ಗುಂ ವ್ರಜೇದ್ರಾಜನ್ ತೀರ್ಥಸೇವೀ ನರಾಧಿಪ ।
ಅಶ್ವಮೇಧಮವಾಪ್ನೋತಿ ಸಿದ್ಧಿಂ ಚ ಮಹತೀಂ ವ್ರಜೇತ್ ॥೯೨॥

ಎಲೈ ರಾಜೇಂದ್ರನೇ, ಅಲ್ಲಿಂದ ತೀರ್ಥಸೇವಿಯಾದ ಮನುಷ್ಯನು ಫಲ್ಗುನದಿಗೆ ಹೋಗಬೇಕು. ಅಲ್ಲಿ ಅಶ್ವಮೇಧ ಫಲವನ್ನು ಮತ್ತು ದೊಡ್ಡ ಸಿದ್ಧಿಯನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಧರ್ಮಪೃಷ್ಠಂ ಸಮಾಹಿತಃ ।
ಯತ್ರ ಧರ್ಮೋ ಮಹಾರಾಜ ನಿತ್ಯಮಾಸ್ತೇ ಯುಧಿಷ್ಠಿರ ॥೯೩॥

ಎಲೈ ರಾಜೇಂದ್ರನೇ, ಮಹಾರಾಜನೇ, ಯುದ್ಧದಲ್ಲಿ ಸ್ಥಿರನಾದ ಭೀಷ್ಮನೇ, ಅಲ್ಲಿಂದ ಸಮಾಧಾನಯುಕ್ತನಾಗಿ ಧರ್ಮಪೃಷ್ಠಕ್ಕೆ ಹೋಗಬೇಕು. ಅಲ್ಲಿ ಯಮಧರ್ಮನು ನಿತ್ಯವೂ ಸನ್ನಿಹಿತನಾಗಿದ್ದಾನೆ.

ತತೋ ಗಚ್ಛೇತ ರಾಜೇಂದ್ರ ಬ್ರಹ್ಮಣಸ್ತೀರ್ಥಮುತ್ತಮಮ್ ।
ತತ್ರಾರ್ಚಯಿತ್ವಾ ರಾಜೇಂದ್ರ ಬ್ರಹ್ಮಾಣಮಮಿತೌಜಸಮ್।
ರಾಜಸೂಯಾಶ್ವಮೇಧಾಭ್ಯಾಂ ಫಲಂ ಪ್ರಾಪ್ನೋತಿ ಮಾನವಃ ॥೯೪॥

ರಾಜೇಂದ್ರನೇ, ಅನಂತರ ಶ್ರೇಷ್ಠವಾದ ಬ್ರಹ್ಮತೀರ್ಥಕ್ಕೆ ಹೋಗಬೇಕು. ರಾಜೇಂದ್ರನೇ ಅಲ್ಲಿ ಅಮಿತಸಾಮರ್ಥ್ಯವುಳ್ಳ ಬ್ರಹ್ಮದೇವರನ್ನು ಪೂಜಿಸಿ ರಾಜಸೂಯಾಶ್ವಮೇಧ ಯಾಗಗಳ ಫಲವನ್ನು ಹೊಂದುತ್ತಾನೆ.

ತತೋ ರಾಜಗೃಹಂ ಗಚ್ಛೇತ್ ತೀರ್ಥಸೇವೀ ನರಾಧಿಪ ।
ಉಪಸ್ಪೃಶ್ಯ ತಪೋದೇಷು ಕಕ್ಷೀವಾನಿವ ಮೋದತೇ ॥೯೫॥

ಎಲೈ ನರಾಧಿಪನೇ, ತೀರ್ಥಸೇವಿಯಾದವನು ಅಲ್ಲಿಂದ ರಾಜಗೃಹಕ್ಕೆ ಹೋಗಿ ಅಲ್ಲಿಯ ತಪೋದತೀರ್ಥಗಳಲ್ಲಿ ಸ್ನಾನವನ್ನುಮಾಡಿದರೆ ಕಕ್ಷೀವಂತ ಋಷಿಯಂತೆ ಸಂತೋಷಪಡುತ್ತಾನೆ.

ಯಕ್ಷಿಣ್ಯಾ ನೈತ್ಯಕಂ ತತ್ರ ಪ್ರಾಶ್ನೀತ ಪುರುಷಃ ಶುಚಿಃ ।
ಯಕ್ಷಿಣ್ಯಾಸ್ತು ಪ್ರಸಾದೇನ ಮುಚ್ಯತೇ ಭ್ರೂಣಹತ್ಯಯಾ ॥೯೬॥

ಅಲ್ಲಿ ಪುರುಷನು ಶುಚಿಯಾಗಿ ಯಕ್ಷಿಣಿಯ ಪ್ರಸಾದವನ್ನು ಸ್ವೀಕರಿಸಬೇಕು. ಯಕ್ಷಿಣಿಯ ಪ್ರಸಾದವನ್ನು ಸ್ವೀಕರಿಸಿದರೆ ಭ್ರೂಣಹತ್ಯೆಯಿಂದ ಮುಕ್ತನಾಗುತ್ತಾನೆ.

ಮಣಿನಾಗಂ ತತೋ ಗತ್ವಾ ಗೋಸಹಸ್ರಫಲಂ ಲಭೇತ್ ।
ನೈತ್ಯಕಂ ಭುಂಜತೇ ಯಸ್ತು ಮಣಿನಾಗಸ್ಯ ಮಾನವಃ ।
ದಷ್ಟಸ್ಯಾಶೀವಿಷೇಣಾಶು ನ ತಸ್ಯ ಕ್ರಮತೇ ವಿಷಮ್ ॥೯೭॥

ಅಲ್ಲಿಂದ ಮಣಿನಾಗ ಕ್ಷೇತ್ರಕ್ಕೆ ಹೋದರೆ ಸಹಸ್ರಗೋದಾನಫಲವು ಉಂಟಾಗುತ್ತದೆ. ಯಾವ ಮಾನವನು ಮಣಿನಾಗನ ಪ್ರಸಾದವನ್ನು ಭುಂಜಿಸುತ್ತಾನೆಯೋ ಅವನನ್ನು ಸರ್ಪವು ಕಡಿದರೂ ಅವನಿಗೆ ವಿಷವು ಏರುವುದಿಲ್ಲ.

ತತ್ರೋಷ್ಯ ರಜನೀಮೇಕಾಂ ಸರ್ವಪಾಪೈಃ ಪ್ರಮುಚ್ಯತೇ ।
ತತೋ ಗಚ್ಛೇತ ಬ್ರಹ್ಮರ್ಷೇಃ ಗೌತಮಸ್ಯಾಶ್ರಮಂ ನರಃ ॥೯೮॥

ಅಲ್ಲಿ ಒಂದು ರಾತ್ರಿವಾಸವನ್ನು ಮಾಡಿದರೆ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಅಲ್ಲಿಂದ ತೀರ್ಥಸೇವಿಯಾದ ನರನು ಬ್ರಹ್ಮರ್ಷಿಗಳಾದ ಗೌತಮರ ಆಶ್ರಮಕ್ಕೆ ಹೋಗಬೇಕು.

ಅಹಲ್ಯಾಯಾ ಹ್ರದೇ ಸ್ನಾತ್ವಾ ಗಚ್ಛೇತ ಪರಮಾಂ ಗತಿಮ್ ।
ಅಭಿಗಮ್ಯ ಶ್ರಿಯಂ ರಾಜನ್ ವಿಂದತೇ ಶ್ರಿಯಮುತ್ತಮಾಮ್ ॥೯೯॥

ತತ್ರೋದಪಾನಂ ಧರ್ಮಜ್ಞ ತ್ರಿಷು ಲೋಕೇಷು ವಿಶ್ರುತಮ್ ।
ತತ್ರಾಭಿಷೇಕಂ ಕೃತ್ವಾ ತು ವಾಜಿಮೇಧಮವಾಪ್ನುಯಾತ್ ॥೧೦೦॥

ಅಹಲ್ಯಾಹ್ರದದಲ್ಲಿ ಸ್ನಾನವನ್ನು ಮಾಡಿದರೆ ಶ್ರೇಷ್ಠವಾದ ಗತಿಯು ದೊರೆಯುತ್ತದೆ. ಎಲೈ ರಾಜನೇ ಅಲ್ಲಿ ಶ್ರೀತೀರ್ಥದಲ್ಲಿ ಸ್ನಾನವನ್ನುಮಾಡಿದರೆ ಉತ್ತಮವಾದ ಸಂಪತ್ತನ್ನು ಪಡೆಯುತ್ತಾನೆ. ಎಲೈ ಧರ್ಮಜ್ಞನೇ ಅಲ್ಲಿ ಮೂರು ಲೋಕದಲ್ಲಿಯೂ ಪ್ರಸಿದ್ಧವಾದ ಒಂದು ತಟಾಕವಿದೆ. ಅಲ್ಲಿ ಸ್ನಾನವನ್ನು ಮಾಡುವವನು ಅಶ್ವಮೇಧ ಫಲವನ್ನು ಹೊಂದುತ್ತಾನೆ.

ಜನಕಸ್ಯ ತು ರಾಜರ್ಷೇಃ ಕೂಪಸ್ತ್ರಿದಶಪೂಜಿತಃ ।
ತತ್ರಾಭಿಷೇಕಂ ಕೃತ್ವಾ ತು ವಿಷ್ಣುಲೋಕಮವಾಪ್ನುಯಾತ್ ॥೧೦೧॥

ರಾಜರ್ಷಿಯಾದ ಜನಕನ ಕೂಪವು ದೇವತೆಗಳಿಂದಲೂ ಪೂಜಿಸಲ್ಪಡುತ್ತದೆ. ಅಲ್ಲಿ ಸ್ನಾನವನ್ನು ಮಾಡಿದವನು ವಿಷ್ಣುಲೋಕವನ್ನು ಹೊಂದುತ್ತಾನೆ.

ತತೋ ವಿನಶನಂ ಗಚ್ಛೇತ್ ಸರ್ವಪಾಪಪ್ರಮೋಚನಮ್ ।
ವಾಜಪೇಯಮವಾಪ್ನೋತಿ ಸೋಮಲೋಕಂ ಚ ಗಚ್ಛತಿ ॥೧೦೨॥

ಅಲ್ಲಿಂದ ಸರ್ವಪಾಪನಾಶಕವಾದ ವಿನಶನಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ವಾಜಪೇಯಫಲವು ಉಂಟಾಗುತ್ತದೆ. ಮತ್ತು ಚಂದ್ರಲೋಕದ ಪ್ರಾಪ್ತಿಯು ಉಂಟಾಗುತ್ತದೆ.

ಗಂಡಕೀಯಂ ತತೋ ಗಚ್ಛೇತ್ ಸರ್ವತೀರ್ಥಜಲೋದ್ಭವಮ್ ।
ವಾಜಪೇಯಮವಾಪ್ನೋತಿ ಸೂರ್ಯಲೋಕಂ ಚ ಗಚ್ಛತಿ ॥೧೦೩॥

ಅನಂತರ ಸರ್ವತೀರ್ಥಗಳ ಉಗಮಸ್ಥಾನವಾದ ಗಂಡಕೀತೀರ್ಥಕ್ಕೆ ಹೋಗಬೇಕು. ಅಂತಹ ಮನುಷ್ಯನು ವಾಜಪೇಯಫಲವನ್ನು ಪಡೆದು ಸೂರ್ಯಲೋಕಕ್ಕೆ ಹೋಗುತ್ತಾನೆ.

ತತೋ ವಿಪಾಶಾಂ ಧರ್ಮಜ್ಞ ಸಮಾವಿಶ್ಯ ತಪೋಧನ ।
ಗುಹ್ಯಕೇಷು ಮಹಾರಾಜ ಮೋದತೇ ನಾತ್ರ ಸಂಶಯಃ ॥೧೦೪॥

ಎಲೈ ಧರ್ಮಜ್ಞನೇ, ತಪೋಧನನೇ, ಅನಂತರ ವಿಪಾಶಾ ನದಿಗೆ ಹೋಗಿ ಸ್ನಾನವನ್ನು ಮಾಡುವವನು ಗುಹ್ಯಕರಲ್ಲಿ ಒಬ್ಬನಾಗಿ ಸಂತೋಷಪಡುತ್ತಾನೆ. ಮಹಾರಾಜನೇ ಇದರಲ್ಲಿ ಸಂಶಯವಿಲ್ಲ.

ಅಥ ಕಿಂಪುರಮಾಸಾದ್ಯ ನದಂ ಸಿದ್ಧನಿಷೇವಿತಮ್ ।
ಪೌಂಡರೀಕಮವಾಪ್ನೋತಿ ಸೂರ್ಯಲೋಕಂ ಚ ಗಚ್ಛತಿ ॥೧೦೫॥

ಅಲ್ಲಿಂದ ಮುಂದೆ ಸಿದ್ಧನಿಷೇವಿತವಾದ ಕಿಂಪುರವೆಂಬ ನದವನ್ನು ಸೇವಿಸುವವನು ಪುಂಡರೀಕಯಾಗದ ಫಲವನ್ನು ಹೊಂದುತ್ತಾನೆ. ಮತ್ತು ಸೂರ್ಯಲೋಕಕ್ಕೆ ಹೋಗುತ್ತಾನೆ.

ತತೋ ವಿಶಲ್ಯಮಾಸಾದ್ಯ ನದಂ ತ್ರೈಲೋಕ್ಯವಿಶ್ರುತಮ್ ।
ಅಗ್ನಿಷ್ಟೋಮಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೧೦೬॥

ಅಲ್ಲಿಂದ ಮೂರು ಲೋಕದಲ್ಲಿಯೂ ಪ್ರಖ್ಯಾತವಾದ ವಿಶಲ್ಯವೆಂಬ ನದಕ್ಕೆ ಹೋಗಿ ಸೇವಿಸುವವನು ಅಗ್ನಿಷ್ಟೋಮ ಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗಲೋಕಕ್ಕೂ ಹೋಗುತ್ತಾನೆ.

ಅಥ ಮಾಹೇಶ್ವರೀಂ ಧಾರಾಂ ಸಮಾಸಾದ್ಯ ನರಾಧಿಪ ।
ಅಶ್ವಮೇಧಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೧೦೭॥

ಎಲೈ ನರಾಧಿಪನೇ, ಅನಂತರ ಮಹೇಶ್ವರೀ ಧಾರೆಯನ್ನು ತಲುಪಿದವನು ಅಶ್ವಮೇಧ ಫಲವನ್ನು ಹೊಂದುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ದಿವೌಕಸಾಂ ಪುಷ್ಕರಿಣೀಂ ಸಮಾಸಾದ್ಯ ನರಃ ಶುಚಿಃ ।
ನ ದುರ್ಗತಿಮವಾಪ್ನೋತಿ ವಾಜಿಮೇಧಫಲಂ ಲಭೇತ್ ॥೧೦೮॥

ಶುಚಿಯಾದ ನರನು ದೇವಪುಷ್ಕರಿಣಿಯನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡಿದರೆ ದುರ್ಗತಿಯನ್ನು ಹೊಂದುವುದಿಲ್ಲ. ಅಶ್ವಮೇಧಫಲವನ್ನು ಪಡೆಯುತ್ತಾನೆ.

ಮಾಹೇಶ್ವರಪದಂ ಗಚ್ಛೇದ್ ಬ್ರಹ್ಮಚಾರೀ ಸಮಾಹಿತಃ ।
ಮಾಹೇಶ್ವರಪದೇ ಸ್ನಾತ್ವಾ ವಾಜಿಮೇಧಫಲಂ ಲಭೇತ್ ।
ತತ್ರ ಕೋಟಿಸ್ತು ತೀರ್ಥಾನಾಂ ವಿಶ್ರುತಾ ಭರತರ್ಷಭ ॥೧೦೯॥

ಬ್ರಹ್ಮಚಾರಿಯೂ ಸಮಾಹಿತನೂ ಆದ ಪುರುಷನು ಮಾಹೇಶ್ವರಪದಕ್ಕೆ ಹೋಗಬೇಕು. ಮಾಹೇಶ್ವರಪದದಲ್ಲಿ ಸ್ನಾನಮಾಡಿದರೆ ಅಶ್ವಮೇಧಫಲವು ಉಂಟಾಗುತ್ತದೆ. ಭರತರ್ಷಭನೇ, ಅಲ್ಲಿ ಒಂದು ಕೋಟಿ ತೀರ್ಥಗಳು ಪ್ರಖ್ಯಾತವಾಗಿವೆ.

ಕೂರ್ಮರೂಪೇಣಾಸುರೇಣ ರಜನ್ಯಾಂ ವೈ ದುರಾತ್ಮನಾ ।
ಹ್ರಿಯಮಾಣಾ ಮಹೀ ಪೂರ್ವಮುದ್ಧೃತಾ ಪ್ರಭವಿಷ್ಣುನಾ ॥೧೧೦॥

ಎಲೈ ರಾಜೇಂದ್ರನೇ, ದುರಾತ್ಮನಾದ ಅಸುರನು ರಾತ್ರಿಯ ವೇಳೆಯಲ್ಲಿ ಮಂದರಗಿರಿರೂಪವಾದ ಭೂಮಿಯನ್ನು ಕದ್ದೊಯ್ಯುತ್ತಿರುವಾಗ ಮಹಾತ್ಮನಾದ ಸಮರ್ಥನಾದ ಕೂರ್ಮರೂಪಿಯಾದ ವಿಷ್ಣುವು ಆ ಪರ್ವತವನ್ನು ಉದ್ಧರಿಸಿದನು.

ತತ್ರಾಭಿಷೇಕಂ ಕುರ್ವಾಣಃ ತೀರ್ಥಕೋಟ್ಯಾಂ ಯುಧಿಷ್ಠಿರ ।
ಪೌಂಡರೀಕಮವಾಪ್ನೋತಿ ವಿಷ್ಣುಲೋಕಂ ಚ ಗಚ್ಛತಿ ॥೧೧೧॥

ಯುದ್ಧದಲ್ಲಿ ಸ್ಥಿರನಾದ ಎಲೈ ಭೀಷ್ಮನೇ, ಆ ತೀರ್ಥಕೋಟಿಯಲ್ಲಿ ಸ್ನಾನವನ್ನುಮಾಡುವ ಪುರುಷನು ಪುಂಡರೀಕಯಾಗದ ಫಲವನ್ನು ಪಡೆಯುತ್ತಾನೆ. ಮತ್ತು ವಿಷ್ಣುಲೋಕವನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಸ್ಥಾನಂ ನಾರಾಯಣಸ್ಯ ವೈ ।
ಸದಾ ಸನ್ನಿಹಿತೋ ಯತ್ರ ವಿಷ್ಣುರ್ವಸತಿ ಭಾರತ ॥೧೧೨॥

ಸಾಲಗ್ರಾಮ ಇತಿ ಖ್ಯಾತೋ ವಿಷ್ಣೋರದ್ಭುತಕರ್ಮಣಃ ।
ಅಭಿಗಮ್ಯ ತ್ರಿಲೋಕೇಶಂ ವರದಂ ವಿಷ್ಣುಮವ್ಯಯಮ್ ।
ಅಶ್ವಮೇಧಮವಾಪ್ನೋತಿ ವಿಷ್ಣುಲೋಕಂ ಚ ಗಚ್ಛತಿ ॥೧೧೩॥

ರಾಜೇಂದ್ರನೇ, ಅನಂತರ ವಿಷ್ಣುವು ನಿತ್ಯವೂ ಸನ್ನಿಹಿತನಾದ ನಾರಾಯಣನ ಕ್ಷೇತ್ರವಾದ ಸಾಲಗ್ರಾಮಕ್ಕೆ ಹೋಗಬೇಕು. ಎಲೈ ಭಾರತನೇ, ಅದ್ಭುತಕಾರ್ಯವುಳ್ಳ ವಿಷ್ಣುವಿನ ಪ್ರಖ್ಯಾತವಾದ ಆ ಕ್ಷೇತ್ರಕ್ಕೆ ಹೋಗಿ ಅವ್ಯಯನಾದ ವರಪ್ರದನಾದ ಸರ್ವಲೋಕೇಶನಾದ ವಿಷ್ಣುವನ್ನು ಪೂಜಿಸುವವನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ಮತ್ತು ವಿಷ್ಣುಲೋಕವನ್ನು ಪಡೆಯುತ್ತಾನೆ.

ತತ್ರೋದಪಾನಂ ಧರ್ಮಜ್ಞ ಸರ್ವಪಾಪಪ್ರಮೋಚನಮ್ ।
ಸಮುದ್ರಾಸ್ತತ್ರ ಚತ್ವಾರಃ ಕೂಪೇ ಸನ್ನಿಹಿತಾಃ ಸದಾ ।
ತತ್ರೋಪಸ್ಪೃಶ್ಯ ರಾಜೇಂದ್ರ ನ ದುರ್ಗತಿಮವಾಪ್ನುಯಾತ್ ॥೧೧೪॥

ಎಲೈ ಧರ್ಮಜ್ಞನೇ, ಅಲ್ಲಿಸರ್ವಪಾಪಪರಿಹಾರಕವಾದ ಒಂದು ಕೂಪವಿದೆ. ಆ ಕೂಪದಲ್ಲಿ ನಾಲ್ಕುಸಮುದ್ರಗಳು ಯಾವಾಗಲೂ ಸನ್ನಿಹಿತವಾಗಿರುತ್ತವೆ. ರಾಜೇಂದ್ರನೇ, ಅಲ್ಲಿಸ್ನಾನವನ್ನು ಮಾಡುವವನು ದುರ್ಗತಿಯನ್ನು ಹೊಂದುವುದಿಲ್ಲ.

ಭರತಸ್ಯಾಶ್ರಮಂ ಗಚ್ಛೇತ್ ಸರ್ವಪಾಪಪ್ರಮೋಚನಮ್ ।
ಅಭಿಗಮ್ಯ ತ್ರಿಲೋಕೇಶಂ ವರದಂ ವಿಷ್ಣುಮವ್ಯಯಮ್ ।
ವಿರಾಜತಿ ಯಥಾ ಸೋಮ ಋಣೈರ್ಮುಕ್ತೋ ಯುಧಿಷ್ಠಿರ ॥೧೧೫॥

ಯುಧಿಷ್ಠಿರನಾದ ಎಲೈ ಭೀಷ್ಮನೇ, ಸರ್ವಪಾಪಪರಿಹಾರಕವಾದ ಭರತನ ಆಶ್ರಮಕ್ಕೆ ಹೋಗಬೇಕು. ಅಲ್ಲಿ ತ್ರಿಲೋಕ ಪ್ರಭುವಾದ ವರಪ್ರದನಾದ ಅವ್ಯಯನಾದ ವಿಷ್ಣುವನ್ನು ಪೂಜಿಸುವವನು ಋಣಮುಕ್ತನಾಗಿ ಚಂದ್ರನಂತೆ ಪ್ರಕಾಶಿಸುತ್ತಾನೆ.

ಜಾತಿಸ್ಮರಮುಪಸ್ಪೃಶ್ಯ ಶುಚಿಃ ಪ್ರಯತಮಾನಸಃ ।
ಜಾತಿಸ್ಮರತ್ವಮಾಪ್ನೋತಿ ಸ್ನಾತ್ವಾ ತತ್ರ ನ ಸಂಶಯಃ ॥೧೧೬॥

ಶುಚಿಯಾದ ಮತ್ತು ಮನೋನಿಗ್ರಹವುಳ್ಳ ತೀರ್ಥಸೇವಿಯು ಜಾತಿಸ್ಮರ ತೀರ್ಥದಲ್ಲಿ ಸ್ನಾನವನ್ನು ಮಾಡಿ ಪೂರ್ವಜನ್ಮಸ್ಮರಣೆಯನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವಿಲ್ಲ.

ವಟೇಶ್ವರಪುರಂ ಗಚ್ಛೇದರ್ಚಯಿತ್ವಾ ತು ಕೇಶವಮ್ ।
ಈಪ್ಸಿತಾನ್‌ಲಭತೇ ಕಾಮಾನ್ ಉಪವಾಸಾನ್ನ ಸಂಶಯಃ ॥೧೧೭॥

ವಟೇಶ್ವರಪುರಕ್ಕೆ ಹೋಗಿ ಉಪವಾಸವನ್ನು ಮಾಡಿ ಕೇಶವನನ್ನು ಅರ್ಚಿಸುವವನು ತನಗೆ ಅಭೀಷ್ಟವಾದ ಎಲ್ಲ ಕಾಮಗಳನ್ನೂ ನಿಸ್ಸಂಶಯವಾಗಿ ಪಡೆಯುತ್ತಾನೆ.

ತತಸ್ತು ವಾಮನಂ ಗತ್ವಾ ಸರ್ವಪಾಪಪ್ರಮೋಚನಮ್ ।
ಅಭಿಗಮ್ಯ ಹರಿಂ ದೇವಂ ನ ದುರ್ಗತಿಮವಾಪ್ನುಯಾತ್ ॥೧೧೮॥

ಅನಂತರ ಸರ್ವಪಾಪಪರಿಹಾರಕವಾದ ವಾಮನಕ್ಷೇತ್ರಕ್ಕೆ ಹೋಗಿ ದೇವನಾದ ಹರಿಯನ್ನು ಅರ್ಚಿಸುವವನು ದುರ್ಗತಿಯನ್ನು ಹೊಂದುವುದಿಲ್ಲ.

ಕೌಶಿಕೀಮಭಿಸೇವೇತ ಮಹಾಪಾಪಪ್ರಣಾಶಿನೀಮ್ ।
ರಾಜಸೂಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೧೧೯॥

ಮಹಾಪಾಪವನ್ನು ಪರಿಹರಿಸುವ ಕೌಶಿಕೀನದಿಯನ್ನು ಸೇವಿಸಿದ ಮಾನವನು ರಾಜಸೂಯಯಾಗದ ಫಲವನ್ನು ಪಡೆಯುತ್ತಾನೆ.

ತತೋ ಗಚ್ಛೇತ ಧರ್ಮಜ್ಞ ಚಂಪಕಾರಣ್ಯಮುತ್ತಮಮ್ ।
ತತ್ರೋಷ್ಯ ರಜನೀಮೇಕಾಂ ಗೋಸಹಸ್ರಫಲಂ ಲಭೇತ್ ॥೧೨೦॥

ಎಲೈ ಧರ್ಮಜ್ಞನೇ, ಶ್ರೇಷ್ಠವಾದ ಚಂಪಾರಣ್ಯಕ್ಕೆ ಹೋಗಬೇಕು. ಅಲ್ಲಿ ಒಂದು ರಾತ್ರಿ ವಾಸವನ್ನುಮಾಡಿದರೆ ಗೋಸಹಸ್ರಫಲವು ದೊರೆಯುತ್ತದೆ.

ಅಥ ಜ್ಯೇಷ್ಠಿಲಮಾಸಾದ್ಯ ತೀರ್ಥಂ ಭರತಸತ್ತಮ ।
ಉಪೋಷ್ಯ ರಜನೀಮೇಕಾಂ ಗೋಸಹಸ್ರಫಲಂ ಲಭೇತ್ ॥೧೨೧॥

ಭರತಶ್ರೇಷ್ಠನೇ, ಅನಂತರ ಜ್ಯೇಷ್ಠಿಲತೀರ್ಥಕ್ಕೆ ಹೋಗಿ ಒಂದು ರಾತ್ರಿ ಉಪವಾಸವನ್ನು ಮಾಡಿದರೆ ಗೋಹಸ್ರ ಫಲವು ದೊರೆಯುತ್ತದೆ.

ತತ್ರ ವಿಶ್ವೇಶ್ವರಂ ದೃಷ್ಟ್ವಾ ದೇವ್ಯಾ ಸಹ ಮಹಾದ್ಯುತಿಮ್ ।
ಮಿತ್ರಾವರುಣಯೋರ್ಲೋಕಾನ್ ಆಪ್ನೋತಿ ಭರತರ್ಷಭ ॥೧೨೨॥

ಎಲೈ ಭರತರ್ಷಭನೇ, ಅಲ್ಲಿ ಪಾರ್ವತೀಸಹಿತನಾದ ಮಹಾತೇಜಸ್ವಿಯಾದ ವಿಶ್ವೇಶ್ವರನ ದರ್ಶನವನ್ನು ಮಾಡಿದರೆ ಮಿತ್ರಾವರುಣರ ಲೋಕದ ಪ್ರಾಪ್ತಿಯಾಗುತ್ತದೆ.

ಕನ್ಯಾಸಂವೇದ್ಯಮಾಸಾದ್ಯ ನಿಯತೋ ನಿಯತಾಶನಃ ।
ಮನೋಃ ಪ್ರಜಾಪತೇರ್ಲೋಕಾನ್ ಆಪ್ನೋತಿ ಭರತರ್ಷಭ ॥೧೨೩॥

ಕನ್ಯಾಯಾಂ ಯೇ ಪ್ರಯಚ್ಛಂತಿ ಪಾನಮನ್ನಂ ಚ ಭಾರತ ।
ತದಕ್ಷಯ್ಯಮಿತಿ ಪ್ರಾಹುಃ ಋಷಯಃ ಸಂಶಿತವ್ರತಾಃ ।
ತ್ರಿರಾತ್ರೋಪೋಷಿತಸ್ತತ್ರ ಅಗ್ನಿಷ್ಟೋಮಮವಾಪ್ನುಯಾತ್ ॥೧೨೪॥

ಎಲೈ ಭರತರ್ಷಭನೇ, ನಿಯಮಬದ್ಧನಾಗಿ ನಿಯತಆಹಾರನಾಗಿ ಕನ್ಯಾ ಸಂವೇದ್ಯಕ್ಕೆ ಹೋಗಿ ಸೇವಿಸುವವನು ಪ್ರಜಾಪತಿಯಾದ ಮನುವಿನ ಲೋಕವನ್ನು ಪಡೆಯುತ್ತಾನೆ. ಎಲೈ ಭಾರತನೇ, ಯಾರು ಕನ್ಯಾತೀರ್ಥದಲ್ಲಿ ಅನ್ನಪಾನಗಳ ದಾನಮಾಡುತ್ತಾರೋ ಅವರು ಅಕ್ಷಯ ಫಲವುಳ್ಳವರಾಗುತ್ತಾರೆಂದು ಶ್ರೇಷ್ಠವ್ರತವನ್ನು ಧರಿಸಿದ ಋಷಿಗಳು ಹೇಳುತ್ತಾರೆ. ಅಲ್ಲಿ ಮೂರು ರಾತ್ರಿಗಳು ಉಪವಾಸಗಳನ್ನು ಮಾಡಿದರೆ ಅಗ್ನಿಷ್ಟೋಮಫಲ ಉಂಟಾಗುತ್ತದೆ.

ನಿಶ್ಚೀರಾಂ ತು ಸಮಾಸಾದ್ಯ ತ್ರಿಷು ಲೋಕೇಷು ವಿಶ್ರುತಾಮ್ ।
ಅಶ್ವಮೇಧಮವಾಪ್ನೋತಿ ವಿಷ್ಣುಲೋಕಂ ಚ ಗಚ್ಛತಿ ॥೧೨೫॥

ಯೇ ತು ದಾನಂ ಪ್ರಯಚ್ಛಂತಿ ನಿಶ್ಚೀರಾಸಂಗಮೇ ನರಾಃ ।
ತೇ ಯಾಂತಿ ನರಶಾರ್ದೂಲ ಬ್ರಹ್ಮಲೋಕಂ ನ ಸಂಶಯಃ ॥೧೨೬॥

ಮೂರುಲೋಕಗಳಲ್ಲಿ ಪ್ರಖ್ಯಾತವಾದ ನಿಶ್ಚೀರಾನದಿಗೆ ಹೋದರೆ ಅಶ್ವಮೇಧಫಲವುಂಟಾಗುತ್ತದೆ. ಮತ್ತು ವಿಷ್ಣುಲೋಕವನ್ನು ಪಡೆಯುತ್ತಾನೆ. ಎಲೈ ನರಶಾರ್ದೂಲನೇ, ಯಾವ ಮನುಷ್ಯರು ನಿಶ್ಚೀರಾನದಿಯ ಸಂಗಮದಲ್ಲಿ ದಾನವನ್ನು ಕೊಡುತ್ತಾರೆಯೋ ಅವರು ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

ತತ್ರಾಶ್ರಮೋ ವಸಿಷ್ಠಸ್ಯ ತ್ರಿಷು ಲೋಕೇಷು ವಿಶ್ರುತಃ ।
ತತ್ರಾಭಿಷೇಕಂ ಕುರ್ವಾಣೋ ವಾಜಪೇಯಮವಾಪ್ನುಯಾತ್ ॥೧೨೭॥

ಅಲ್ಲಿ ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ವಸಿಷ್ಠರ ಆಶ್ರಮವಿದೆ. ಅಲ್ಲಿ ಸ್ನಾನವನ್ನು ಮಾಡುವವನು ವಾಜಪೇಯ ಫಲವನ್ನು ಪಡೆಯುತ್ತಾನೆ.

ದೇವಕೂಟಂ ಸಮಾಸಾದ್ಯ ಬ್ರಹ್ಮರ್ಷಿಗಣಸೇವಿತಮ್ ।
ಅಶ್ವಮೇಧಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೧೨೮॥

ಬ್ರಹ್ಮರ್ಷಿಗಣಗಳಿಂದ ಸೇವಿತವಾದ ದೇವಕೂಟಪರ್ವತವನ್ನು ಸೇರಿದವನು ಅಶ್ವಮೇಧ ಫಲವನ್ನು ಪಡೆಯುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಕೌಶಿಕಸ್ಯ ಮುನೇರ್ಹ್ರದಮ್ ।
ಯತ್ರ ಸಿದ್ಧಿಂ ಪರಾಂ ಪ್ರಾಪ್ತೋ ವಿಶ್ವಾಮಿತ್ರೋ ಮಹಾತಪಾಃ ॥೧೨೯॥

ಎಲೈ ರಾಜೇಂದ್ರನೇ, ಅನಂತರ ಎಲ್ಲಿ ಮಹಾತಪಸ್ವಿಗಳಾದ ವಿಶ್ವಾಮಿತ್ರರು ಶ್ರೇಷ್ಠವಾದ ಸಿದ್ಧಿಯನ್ನು ಪಡೆದರೋ ಅಂತಹ ಕೌಶಿಕತೀರ್ಥಕ್ಕೆ ಹೋಗಬೇಕು.

ತತ್ರ ಮಾಸಂ ವಸೇದ್ವೀರಃ ಕೌಶಿಕ್ಯಾಂ ಭರತರ್ಷಭ ।
ಅಶ್ವಮೇಧೇನ ಯತ್ ಪುಣ್ಯಂ ತನ್ಮಾಸೇನಾಧಿಗಚ್ಛತಿ ॥೧೩೦॥

ಎಲೈ ಭರತರ್ಷಭನೇ, ಆ ಕೌಶಿಕತೀರ್ಥದಲ್ಲಿ ಒಂದು ತಿಂಗಳು ವಾಸಮಾಡುವ ಧೀರನು ಅಶ್ವಮೇಧಯಾಗದಿಂದ ಉಂಟಾಗುವ ಪುಣ್ಯವನ್ನು ಒಂದು ತಿಂಗಳಿನಲ್ಲಿಯೇ ಸಂಪಾದಿಸುತ್ತಾನೆ.

ಸರ್ವತೀರ್ಥವರೇ ಚೈವ ಯೋ ವಸೇತ ಮಹಾಹ್ರದೇ ।
ನ ದುರ್ಗತಿಮವಾಪ್ನೋತಿ ವಿಂದೇದ್ಬಹು ಸುವರ್ಣಕಮ್ ॥೧೩೧॥

ಸರ್ವತೀರ್ಥಗಳಲ್ಲಿ ಶ್ರೇಷ್ಠವಾದ ಮಹಾಹ್ರದತೀರ್ಥದಲ್ಲಿ ಯಾವನು ವಾಸಿಸುತ್ತಾನೆಯೋ ಅವನು ದುರ್ಗತಿಯನ್ನು ಹೊಂದುವುದಿಲ್ಲ. ಬಹಳ ಸುವರ್ಣವನ್ನು ಪಡೆಯುತ್ತಾನೆ.

ಕುಮಾರಮಭಿಗತ್ವಾ ಚ ವೀರಾಶ್ರಮನಿವಾಸಿನಮ್ ।
ಅಶ್ವಮೇಧಮವಾಪ್ನೋತಿ ನರೋ ನಾಸ್ತ್ಯತ್ರ ಸಂಶಯಃ ॥೧೩೨॥

ವೀರಾಶ್ರಮನಿವಾಸಿಯಾದ ಷಣ್ಮುಖನನ್ನು ಸಮೀಪಿಸಿದ ನರನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಅಗ್ನಿಧಾರಾಂ ಸಮಾಸಾದ್ಯ ತ್ರಿಷು ಲೋಕೇಷು ವಿಶ್ರುತಾಮ್ ।
ಅಗ್ನಿಷ್ಟೋಮಮವಾಪ್ನೋತಿ ನ ಚ ಸ್ವರ್ಗಾನ್ನಿವರ್ತತೇ ॥೧೩೩॥

ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದ ಅಗ್ನಿಧಾರಾ ತೀರ್ಥಕ್ಕೆ ಹೋದವನು ಅಗ್ನಿಷ್ಟೋಮ ಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗದಿಂದ ಹಿಂದಿರುಗುವುದಿಲ್ಲ.

ಪಿತಾಮಹಸರೋ ಗತ್ವಾ ಶೈಲರಾಜಪ್ರತಿಷ್ಠಿತಮ್ ।
ತತ್ರಾಭಿಷೇಕಂ ಕುರ್ವಾಣ ಅಗ್ನಿಷ್ಟೋಮಮವಾಪ್ನುಯಾತ್ ॥೧೩೪॥

ಆಲ್ಲಿಶೈಲರಾಜನ ಮೇಲಿರುವ ಪಿತಾಮಹಸರೋವರ (ಬ್ರಹ್ಮಸರೋವರ)ವನ್ನು ತಲುಪಿ ಅಲ್ಲಿಸ್ನಾನವನ್ನು ಮಾಡುವವನು ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ಪಿತಾಮಹಸ್ಯ ಸರಸಃ ಪ್ರಸೂತಾ ಲೋಕಪಾವನೀ ।
ಕುಮಾರಧಾರಾ ತತ್ರೈವ ತ್ರಿಷು ಲೋಕೇಷು ವಿಶ್ರುತಾ ॥೧೩೫॥

ಆ ಬ್ರಹ್ಮಸರೋವರದಿಂದ ಹುಟ್ಟಿದ ಲೋಕಪಾವನೆಯಾದ ಅಲ್ಲಿಯೇ ಹರಿಯುವ ಕುಮಾರಧಾರಾನದಿಯು ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿದೆ.

ಯತ್ರ ಸ್ನಾತ್ವಾ ಕೃತಾರ್ಥೋಽಸ್ಮೀತ್ಯಾತ್ಮಾನಮವಗಚ್ಛತಿ ।
ಷಷ್ಠಕಾಲೋಪವಾಸೇನ ಮುಚ್ಯತೇ ಬ್ರಹ್ಮಹತ್ಯಯಾ ॥೧೩೬॥

ಅಲ್ಲಿ ಸ್ನಾನವನ್ನು ಮಾಡಿದ ಮನುಷ್ಯನು ತನ್ನನ್ನು ಧನ್ಯನೆಂದು ಭಾವಿಸುತ್ತಾನೆ. ಅಲ್ಲಿದಿನದ ಆರನೆಯ ಕಾಲದವರೆಗೆ ಉಪವಾಸಮಾಡುವುದರಿಂದ ಬ್ರಹ್ಮಹತ್ಯೆಯಿಂದ ನಿರ್ಮುಕ್ತನಾಗುತ್ತಾನೆ.

ಶಿಖರಂ ವೈ ಮಹಾದೇವ್ಯಾ ಗೌರ್ಯಾಸ್ತ್ರೈಲೋಕ್ಯವಿಶ್ರುತಮ್ ।
ಸಮಾರುಹ್ಯ ನರಶ್ರೇಷ್ಠ ಸ್ತನಕುಂಡೇಷು ಸಂವಿಶೇತ್ ॥೧೩೭॥

ಎಲೈ ನರಶ್ರೇಷ್ಠನೇ ಮಹಾದೇವಿಯಾದ ಗೌರಿಯ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದ ಶಿಖರವನ್ನು ಏರಿ ಅಲ್ಲಿಸ್ತನ ಕುಂಡಗಳಲ್ಲಿವಾಸಿಸಬೇಕು.

ತತ್ರಾಭಿಷೇಕಂ ಕುರ್ವಾಣಃ ಪಿತೃದೇವಾರ್ಚನೇ ರತಃ ।
ಹಯಮೇಧಮವಾಪ್ನೋತಿ ಶಕ್ರಲೋಕಂ ಚ ಗಚ್ಛತಿ ॥೧೩೮॥

ಅಲ್ಲಿ ಸ್ನಾನವನ್ನುಮಾಡಿ ಪಿತೃದೇವಾರ್ಚನೆಯನ್ನು ಮಾಡಿದ ನರನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಮತ್ತು ಇಂದ್ರಲೋಕಕ್ಕೆ ಹೋಗುತ್ತಾನೆ.

ತಾಮ್ರಾರುಣಂ ಸಮಾಸಾದ್ಯ ಬ್ರಹ್ಮಚಾರೀ ಸಮಾಹಿತಃ ।
ಅಶ್ವಮೇಧಮವಾಪ್ನೋತಿ ಶಕ್ರಲೋಕಂ ಚ ಗಚ್ಛತಿ ॥೧೩೯॥

ಬ್ರಹ್ಮಚಾರಿಯೂ ಸಮಾಹಿತನೂ ಆದ ತೀರ್ಥಸೇವಿಯು ತಾಮ್ರಾರುಣತೀರ್ಥವನ್ನು ಸೇವಿಸಿದರೆ ಅಶ್ವಮೇಧ ಫಲವನ್ನು ಪಡೆಯುತ್ತಾನೆ ಮತ್ತು ಇಂದ್ರಲೋಕಕ್ಕೆ ಹೋಗುತ್ತಾನೆ.

ನಂದಿನ್ಯಾಂ ಚ ಸಮಾಸಾದ್ಯ ಕೂಪಂ ತ್ರಿದಶಸೇವಿತಮ್ ।
ನರಮೇಧಸ್ಯ ಯತ್ ಪುಣ್ಯಂ ತತ್ರಾಪ್ನೋತಿ ಕುರೂದ್ವಹ ॥೧೪೦॥

ಎಲೈ ಕುರೂದ್ವಹನೇ ನಂದಿನೀ ನದಿಯ ಬಳಿ ಇರುವ ದೇವತೆಗಳಿಂದ ಸೇವಿಸಲ್ಪಟ್ಟ ಕೂಪವನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡುವವನು ನರಮೇಧಯಾಗದ ಪುಣ್ಯವನ್ನು ಪಡೆಯುತ್ತಾನೆ.

ಕಾಲಂಕ್ಯಃ ಸಂಗಮೇ ಸ್ನಾತ್ವಾ ಕೌಶಿಕ್ಯರುಣಯೋಸ್ತಥಾ ।
ತ್ರಿರಾತ್ರೋಪೋಷಿತೋ ವಿದ್ವಾನ್ ಸರ್ವಪಾಪೈಃ ಪ್ರಮುಚ್ಯತೇ ॥೧೪೧॥

ಕಾಲಂಕೀ ಸಂಗಮದಲ್ಲಿ ಹಾಗೆಯೇ ಕೌಶಿಕೀ ಮತ್ತು ಅರುಣಾ ಸಂಗಮದಲ್ಲಿ ಸ್ನಾನವನ್ನು ಮಾಡಿ ಮೂರು ರಾತ್ರಿಗಳು ಉಪವಾಸವನ್ನು ಮಾಡುವ ವಿದ್ವಾಂಸನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಉರ್ವಶೀತೀರ್ಥಮಾಸಾದ್ಯ ತತಃ ಸೋಮಾಶ್ರಮಂ ವ್ರಜೇತ್ ।
ಕುಂಭಕರ್ಣಾಶ್ರಮೇ ಗತ್ವಾ ಪೂಜ್ಯತೇ ದಿವಿ ಮಾನವಃ ॥೧೪೨॥

ಅಲ್ಲಿಂದ ಉರ್ವಶೀತೀರ್ಥವನ್ನು ತಲುಪಿ ಅಲ್ಲಿಂದ ಸೋಮಾಶ್ರಮಕ್ಕೆ ಹೋಗಬೇಕು. ಅಲ್ಲಿಂದ ಕುಂಭಕರ್ಣಾಶ್ರಮಕ್ಕೆ ಹೋಗುವ ಮಾನವನು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಸ್ನಾತ್ವಾ ಕೋಲಮುಖೇ ಪುಣ್ಯೇ ಬ್ರಹ್ಮಚಾರೀ ಸಮಾಹಿತಃ ।
ಜಾತಿಸ್ಮರತ್ವಂ ಪ್ರಾಪ್ನೋತಿ ದೃಷ್ಟಮೇತತ್ ಪುರಾತನಮ್ ॥೧೪೩॥

ಪವಿತ್ರವಾದ ಕೋಲಮುಖತೀರ್ಥದಲ್ಲಿ ಸ್ನಾನವನ್ನು ಮಾಡುವ ಬ್ರಹ್ಮಚಾರಿಯೂ ಸಮಾಹಿತನೂ ಆದ ಮಾನವನು ಪೂರ್ವಜನ್ಮದ ಸ್ಮರಣೆಯನ್ನು ಪಡೆಯುತ್ತಾನೆ. ಇದು ಹಿಂದಿನಿಂದಲೂ ದೃಷ್ಟವಾಗಿದೆ.

ಭೃಗುತುಂದಂ ಸಮಾಸಾದ್ಯ ವಿಪಾಪ್ಮಾ ಭವತಿ ದ್ವಿಜಃ ।
ಸರ್ವಪಾಪವಿಶುದ್ಧಾತ್ಮಾ ಬ್ರಹ್ಮಲೋಕಂ ಚ ಗಚ್ಛತಿ ॥೧೪೪॥

ಭೃಂಗತುಂದಕ್ಕೆ ಹೋದ ದ್ವಿಜನು ಪಾಪರಹಿತನಾಗುತ್ತಾನೆ. ಸರ್ವಪಾಪವಿನಿರ್ಮುಕ್ತನಾಗಿ ಬ್ರಹ್ಮಲೋಕವನ್ನು ಪಡೆಯುತ್ತಾನೆ.

ಸಕೃನ್ನದ್ಯಾಂ ಸಮಾಸಾದ್ಯ ಪೂತಾತ್ಮಾ ಭವತಿ ದ್ವಿಜಃ ।
ಸರ್ವಪಾಪವಿಶುದ್ಧಾತ್ಮಾ ಶಕ್ರಲೋಕಂ ಚ ಗಚ್ಛತಿ ॥೧೪೫॥

ಸಕೃನ್ನದ್ಯಾ ನದಿಯಲ್ಲಿ ಸ್ನಾನವನ್ನು ಮಾಡಿದ ದ್ವಿಜನು ಪವಿತ್ರನಾಗುತ್ತಾನೆ. ಸರ್ವಪಾಪವಿನಿರ್ಮುಕ್ತನಾಗಿ ಇಂದ್ರಲೋಕಕ್ಕೆ ಹೋಗುತ್ತಾನೆ.

ಋಷಭದ್ವೀಪಮಾಸಾದ್ಯ ಮೇಧ್ಯಂ ಕ್ರೌಂಚನಿಷೂದನಮ್ ।
ಸರಸ್ವತ್ಯಾಮುಪಸ್ಪೃಶ್ಯ ವಿಮಾನಸ್ಥೋ ವಿರಾಜತೇ ॥೧೪೬॥

ತೀರ್ಥಸೇವಿಯಾದವನು ಋಷಭದ್ವೀಪವನ್ನು ಮತ್ತು ಪವಿತ್ರವಾದ ಕ್ರೌಂಚನಿಷೂದನದ್ವೀಪವನ್ನು ತಲುಪಿ ಅಲ್ಲಿಯ ನದಿಯಲ್ಲಿ ಸ್ನಾನವನ್ನು ಮಾಡಿದರೆ ವಿಮಾನಸ್ಥನಾಗಿ ಶೋಭಿಸುತ್ತಾನೆ.

ಔದ್ದಾಲಕಂ ಸಮಾಸಾದ್ಯ ತೀರ್ಥಂ ಮುನಿನಿಷೇವಿತಮ್ ।
ತತ್ರಾಭಿಷೇಕಂ ಕುರ್ವೀತ ಸರ್ವಪಾಪೈಃ ಪ್ರಮುಚ್ಯತೇ ॥೧೪೭॥

ಋಷಿಗಳಿಂದ ಸೇವಿತವಾದ ಔದ್ದಾಲಕತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನವನ್ನುಮಾಡುವವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಧರ್ಮತೀರ್ಥಂ ಸಮಾಸಾದ್ಯ ಪುಣ್ಯಂ ಬ್ರಹ್ಮನಿಷೇವಿತಮ್ ।
ವಾಜಪೇಯಮವಾಪ್ನೋತಿ ನರೋ ನಾಸ್ಯತ್ರ ಸಂಶಯಃ ॥೧೪೮॥

ಬ್ರಹ್ಮಸನ್ನಿಧಾನವಿರುವ ಪವಿತ್ರವಾದ ಧರ್ಮತೀರ್ಥವನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡುವ ನರನು ವಾಜಪೇಯಫಲವನ್ನು ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಅಥ ಪಂಪಾಂ ಸಮಾಸಾದ್ಯ ಭಾಗೀರಥ್ಯಾಂ ಕೃತೋದಕಃ ।
ದಂಡಕಾನಭಿಗತ್ಯೈವ ಗೋಸಹಸ್ರಫಲಂ ಲಭೇತ್ ॥೧೪೯॥

ಅನಂತರ ಪಂಪಾದೇಶಕ್ಕೆ ಹೋಗಿ ಅಲ್ಲಿನ ಭಾಗೀರಥಿಯಲ್ಲಿ ಪಿತೃದೇವತೆಗಳಿಗೆ ಉತ್ತರಕ್ರಿಯೆಗಳನ್ನು ಮಾಡಿ ದಂಡಕಾರಣ್ಯಕ್ಕೆ ಹೋಗುವ ತೀರ್ಥಸೇವಿಯು ಗೋಸಹಸ್ರಫಲವನ್ನು ಪಡೆಯುತ್ತಾನೆ.

ತತೋ ಲಏಲಿಕಾಂ ಗಚ್ಛೇತ್ ಪುಣ್ಯಾಂ ಪುಣ್ಯೋಪಸೇವಿತಾಮ್ ।
ವಾಜಪೇಯಮವಾಪ್ನೋತಿ ವಿಮಾನಸ್ಥೋ ವಿರಾಜತೇ ॥೧೫೦॥

ಅಲ್ಲಿಂದ ಪವಿತ್ರವಾದ ಮತ್ತು ಪರಿಶುದ್ಧರಾದ ಜನರಿಂದ ಸೇವಿತವಾದ ಲಏಲಿಕಾಕ್ಷೇತ್ರಕ್ಕೆ ಹೋಗುವವನು ವಾಜಪೇಯಫಲವನ್ನು ಪಡೆಯುತ್ತಾನೆ. ಮತ್ತು ವಿಮಾನದಲ್ಲಿ ವಿರಾಜಿಸಿತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಶಿತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತನೆಯ ಅಧ್ಯಾಯ

(ಭೀಷ್ಮರಿಗೆ ಪುಲಸ್ತ್ಯರು ಹೇಳಿದ ತೀರ್ಥಕ್ಷೇತ್ರಮಹಿಮಾ ವರ್ಣನೆಯನ್ನು ಯುಧಿಷ್ಠಿರನಿಗೆ ಹೇಳಿ ನಾರದರ ಪ್ರಯಾಣ.)

ಪುಲಸ್ತ್ಯಃ

ಅಥ ಸಂಧ್ಯಾಂ ಸಮಾಸಾದ್ಯ ಸಂವೇದ್ಯಂ ತೀರ್ಥಮುತ್ತಮಮ್ ।
ಉಪಸ್ಪೃಶ್ಯ ನರೋ ವಿದ್ವಾನ್ ಭವೇನ್ನಾಸ್ಯತ್ರ ಸಂಶಯಃ ॥೧॥

ಅನಂತರ ಶ್ರೇಷ್ಠವಾದ ಸಂಧ್ಯಾತೀರ್ಥವನ್ನು ಸಮೀಪಿಸಿ ಸ್ನಾನವನ್ನು ಮಾಡಿದ ನರನು ವಿದ್ವಾಂಸನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ರಾಮಸ್ಯ ಚ ಪ್ರಸಾದೇನ ತೀರ್ಥಂ ರಾಜನ್ ಕೃತಂ ಪುರಾ ।
ತಲ್ಲೌಹಿತ್ಯಂ ಸಮಾಸಾದ್ಯ ವಿಂದ್ಯಾದ್ಬಹು ಸುವರ್ಣಕಮ್ ॥೨॥

ಎಲೈ ರಾಜನೇ, ಪರಶುರಾಮನ ಪ್ರಸಾದದಿಂದ ಹಿಂದೆ ಲೌಹಿತ್ಯ ತೀರ್ಥವು ರಚಿಸಲ್ಪಟ್ಟಿತು. ಅಲ್ಲಿ ಸ್ನಾನವನ್ನು ಮಾಡುವ ಮಾನವನು ಬಹಳ ಸುವರ್ಣವನ್ನು ಪಡೆಯುತ್ತಾನೆ.

ಕರತೋಯಂ ಸಮಾಸಾದ್ಯ ತ್ರಿರಾತ್ರೋಪೋಷಿತೋ ನರಃ ।
ಅಶ್ವಮೇಧಮವಾಪ್ನೋತಿ ಪಿತಾಮಹಕೃತೋ ವಿಧಿಃ ॥೩॥

ಕರತೋಯ ನದಿಯನ್ನು ಸಮೀಪಿಸಿ ಮೂರುರಾತ್ರಿಯಲ್ಲಿ ಉಪವಾಸವನ್ನು ಮಾಡುವ ನರನು ಅಶ್ವಮೇಧ ಫಲವನ್ನು ಪಡೆಯುತ್ತಾನೆ. ಇದು ಬ್ರಹ್ಮದೇವರು ಮಾಡಿದ ವಿಧಿ.

ಗಂಗಾಯಾಸ್ತ್ವಥ ರಾಜೇಂದ್ರ ಸಾಗರಸ್ಯ ಚ ಸಂಗಮೇ ।
ಅಶ್ವಮೇಧಂ ದಶಗುಣಂ ಪ್ರವದಂತಿ ಮನೀಷಿಣಃ ॥೪॥

ರಾಜೇಂದ್ರನೇ, ಇನ್ನು ಗಂಗಾಸಾಗರಸಂಗಮದಲ್ಲಿ ಮಾಡಿದ ಸ್ನಾನಕ್ಕೆ ಅಶ್ವಮೇಧದ ಹತ್ತು ಪಟ್ಟು ಫಲವೆಂದು ಜ್ಞಾನಿಗಳು ಹೇಳುತ್ತಾರೆ.

ಗಂಗಾಯಾಸ್ತ್ವಪರಂ ತೀರಂ ಪ್ರಾಪ್ಯ ಯಃ ಸ್ನಾತಿ ಭಾರತ ।
ತ್ರಿರಾತ್ರಮುಷಿತೋ ರಾಜನ್ ಸರ್ವಾನ್ ಕಾಮಾನವಾಪ್ನುಯಾತ್ ॥೫॥

ಎಲೈ ಭಾರತನೇ, ಯಾವನು ಗಂಗಾನದಿಯ ಆಚೆಯ ದಡಕ್ಕೆ ಹೋಗಿ ಸ್ನಾನವನ್ನು ಮಾಡಿ ಮೂರುರಾತ್ರಿ ವಾಸವನ್ನು ಮಾಡುವನೋ ಅವನು ಎಲ್ಲಾ ಅಭೀಷ್ಟಗಳನ್ನು ಪಡೆಯುತ್ತಾನೆ.

ತತೋ ವೈತರಣೀಂ ಗಚ್ಛೇನ್ನದೀಂ ಪಾಪಪ್ರಮೋಚನೀಮ್ ।
ವಿರಜಂ ತೀರ್ಥಮಾಸಾದ್ಯ ವಿರಾಜತಿ ಯಥಾ ಶಶೀ ॥೬॥

ಪ್ರಭವೇಚ್ಚ ಕುಲೇ ಪುಣ್ಯೇ ಸರ್ವಪಾಪಂ ವ್ಯಪೋಹತಿ ।
ಗೋಸಹಸ್ರಫಲಂ ಲಬ್ಧ್ವಾ ಪುನಾತಿ ಚ ಕುಲಂ ನರಃ ॥೭॥

ಶೋಣಸ್ಯ ಜ್ಯೋತಿರಥ್ಯಾಶ್ಚ ಸಂಗಮೇ ನಿವಸನ್ ಶುಚಿಃ ।
ತರ್ಪಯಿತ್ವಾ ಪಿತೄನ್ ದೇವಾನ್ ಅಗ್ನಿಷ್ಟೋಮಫಲಂ ಲಭೇತ್ ॥೮॥

ಅಲ್ಲಿಂದ ಪಾಪಪರಿಹಾರಕವಾದ ವೈತರಣಿ ನದಿಗೆ ಹೋಗಬೇಕು. ಅಲ್ಲಿ ವಿರಜಾತೀರ್ಥದಲ್ಲಿ ಸ್ನಾನವನ್ನು ಮಾಡಿದವನು ಚಂದ್ರನಂತೆ ವಿರಾಜಿಸುತ್ತಾನೆ. ಪುಣ್ಯವಾದ ಕುಲದಲ್ಲಿ ನಾಯಕನಾಗುತ್ತಾನೆ. ಸರ್ವಪಾಪಗಳಿಂದ ಮುಕ್ತನಾಗುತ್ತಾನೆ.

ಗೋಸಹಸ್ರಫಲವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುತ್ತಾನೆ. ಶೋಣ ಮತ್ತು ಜ್ಯೋತಿರಥೀ ನದಿಗಳ ಸಂಗಮದಲ್ಲಿ ವಾಸಿಸುವ ಶುದ್ಧನಾದ ತೀರ್ಥಸೇವಿಯು ಪಿತೃಗಳನ್ನು ಮತ್ತು ದೇವತೆಗಳನ್ನು ಆರಾಧಿಸಿ ಅಗ್ನಿಷ್ಟೋಮಫಲವನ್ನು ಪಡೆಯುತ್ತಾನೆ.

ಶೋಣಸ್ಯ ನರ್ಮದಾಯಾಶ್ಚ ಪ್ರಭವೇ ಕುರುನಂದನ ।
ವಂಶಗುಲ್ಮ ಉಪಸ್ಪೃಶ್ಯ ವಾಜಿಮೇಧಫಲಂ ಲಭೇತ್ ॥೯॥

ಎಲೈ ಕುರುನಂದನನೇ, ಶೋಣ ಮತ್ತು ನರ್ಮದಾ ನದಿಗಳ ಉದ್ಭವಸ್ಥಾನವಾದ ವಂಶಗುಲ್ಮದಲ್ಲಿ ಸ್ನಾನವನ್ನು ಮಾಡಿದರೆ ವಾಜಿಮೇಧಫಲವು ದೊರೆಯುತ್ತದೆ.

ಋಷಭಂ ತೀರ್ಥಮಾಸಾದ್ಯ ಕೋಸಲಾಯಾಂ ನರಾಧಿಪ ।
ವಾಜಪೇಯಮವಾಪ್ನೋತಿ ತ್ರಿರಾತ್ರೋಪೋಷಿತೋ ನರಃ ।
ಗೋಸಹಸ್ರಫಲಂ ವಿಂದ್ಯಾತ್ ಕುಲಂ ಚೈವ ಸಮುದ್ಧರೇತ್ ॥೧೦॥

ಎಲೈ ನರಾಧಿಪನೇ, ಕೋಸಲದೇಶದಲ್ಲಿ ಋಷಭತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡಿದರೆ ವಾಜಪೇಯ ಫಲವನ್ನು ಪಡೆಯುತ್ತಾನೆ. ಅಲ್ಲಿ ಮೂರು ರಾತ್ರಿ ಉಪವಾಸವನ್ನು ಮಾಡಿದ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ಕೋಸಲಾಂ ತು ಸಮಾಸಾದ್ಯ ಕಲತೀರ್ಥಮುಪಸ್ಪೃಶೇತ್ ।
ವೃಷಭೈಕಾದಶಫಲಂ ಲಭತೇ ನಾತ್ರ ಸಂಶಯಃ ॥೧೧॥

ಕೋಸಲದೇಶಕ್ಕೆ ಹೋಗಿ ಕಲತೀರ್ಥದಲ್ಲಿ ಸ್ನಾನವನ್ನು ಮಾಡಬೇಕು. ಹಾಗೆ ಮಾಡುವವನು ಹನ್ನೊಂದು ವೃಷೋತ್ಸರ್ಗವನ್ನು ಮಾಡಿದ ಫಲವನ್ನು ಪಡೆಯುತ್ತಾನೆ.

ಪುಷ್ಪವತ್ಯಾಮುಪಸ್ಪೃಶ್ಯ ತ್ರಿರಾತ್ರೋಪೋಷಿತೋ ನರಃ ।
ಗೋಸಹಸ್ರಫಲಂ ವಿಂದೇತ್ ಕುಲಂ ಚೈವ ಸಮುದ್ಧರೇತ್ ॥೧೨॥

ಪುಷ್ಪವತಿಯಲ್ಲಿ ಸ್ನಾನವನ್ನು ಮಾಡಿ ಮೂರು ರಾತ್ರಿ ಉಪವಾಸಮಾಡಿದ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಬದರಿಕಾತೀರ್ಥೇ ಸ್ನಾತ್ವಾ ಪ್ರಯತಮಾನಸಃ ।
ದೀರ್ಘಮಾಯುಷ್ಕಮಾಪ್ನೋತಿ ತ್ರಿರಾತ್ರೋಪೋಷಿತೋ ನರಃ ॥೧೩॥

ಅನಂತರ ಜಿತಮನಸ್ಕನಾಗಿ ಬದರಿತೀರ್ಥದಲ್ಲಿ ಸ್ನಾನವನ್ನು ಮಾಡಿ ಮೂರು ರಾತ್ರಿ ಉಪವಾಸವನ್ನು ಮಾಡಿದ ನರನು ದೀರ್ಘಾಯುಷ್ಯವನ್ನು ಪಡೆಯುತ್ತಾನೆ.

ತತೋ ಮಹೇಂದ್ರಮಾಸಾದ್ಯ ಜಾಮದಗ್ನ್ಯನಿಷೇವಿತಮ್ ।
ರಾಮತೀರ್ಥೇ ನರಃ ಸ್ನಾತ್ವಾ ವಾಜಿಮೇಧಫಲಂ ಲಭೇತ್ ॥೧೪॥

ಪರಶುರಾಮನಿಂದ ವಾಸಿಸಲ್ಪಡುವ ಮಹೇಂದ್ರಪರ್ವತಕ್ಕೆ ಹೋಗಿ ರಾಮತೀರ್ಥದಲ್ಲಿ ಸ್ನಾನವನ್ನು ಮಾಡುವ ನರನು ಅಶ್ವಮೇಧಫಲವನ್ನು ಪಡೆಯುತ್ತಾನೆ.

ಮತಂಗಸ್ಯ ತು ಕೇದಾರಃ ತತ್ರೈವ ಕುರುನಂದನ ।
ತತ್ರ ಸ್ನಾತ್ವಾ ನರೋ ರಾಜನ್ ಗೋಸಹಸ್ರಫಲಂ ಲಭೇತ್ ॥೧೫॥

ಎಲೈ ಕುರುನಂದನನೇ, ಅಲ್ಲಿಯೇ ಮತಂಗ ಋಷಿಗಳ ಸರೋವರವಿದೆ. ರಾಜನೇ ಅಲ್ಲಿ ಸ್ನಾನವನ್ನು ಮಾಡುವ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ.

ಶ್ರೀಪರ್ವತಂ ಸಮಾಸಾದ್ಯ ನದೀತೀರ್ಥ ಉಪಸ್ಪೃಶೇತ್ ।
ಅಶ್ವಮೇಧಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೧೬॥

ಶ್ರೀಶೈಲಕ್ಕೆ ಹೋಗಿ ನದೀತೀರ್ಥದಲ್ಲಿ ಸ್ನಾನವನ್ನುಮಾಡಬೇಕು. ಅಂತಹ ನರನು ಅಶ್ವಮೇಧ ಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗ ಲೋಕಕ್ಕೆ ಹೋಗುತ್ತಾನೆ.

ಶ್ರೀಪರ್ವತೇ ಮಹಾದೇವೋ ದೇವ್ಯಾ ಸಹ ಮಹಾದ್ಯುತಿಃ ।
ವಸತೇ ಪರಮಪ್ರೀತೋ ಬ್ರಹ್ಮಾ ಚ ತ್ರಿದಶೈರ್ವೃತಃ ॥೧೭॥

ತತ್ರ ದೇವಹ್ರದೇ ಸ್ನಾತ್ವಾ ಶುಚಿಃ ಪ್ರಯತಮಾನಸಃ ।
ಅಶ್ವಮೇಧಮವಾಪ್ನೋತಿ ಪರಾಂ ಸಿದ್ಧಿಂ ಚ ಗಚ್ಛತಿ ॥೧೮॥

ಶ್ರೀಶೈಲದಲ್ಲಿ ಮಹಾದ್ಯುತಿಯಾದ ಮಹಾದೇವನು ಪಾರ್ವತಿಯ ಜೊತೆಯಲ್ಲಿ ಪರಮ ಸಂತೋಷದಿಂದ ವಾಸಿಸುತ್ತಾನೆ. ದೇವತೆಗಳಿಂದ ಕೂಡಿದ ಬ್ರಹ್ಮದೇವರು ಸಹ ವಾಸಿಸುತ್ತಾರೆ. ಅಲ್ಲಿ ಶುಚಿಯಾಗಿ ಮನೋನಿಗ್ರಹವನ್ನು ಹೊಂದಿ ದೇವಹ್ರದದಲ್ಲಿ

ಸ್ನಾನವನ್ನು ಮಾಡುವ ನರನು ಅಶ್ವಮೇಧಫಲವನ್ನು ಪಡೆಯುತ್ತಾನೆ. ಮತ್ತು ಶ್ರೇಷ್ಠವಾದ ಸಿದ್ಧಿಯನ್ನು ಪಡೆಯುತ್ತಾನೆ.

ಋಷಭಂ ಪರ್ವತಂ ಗತ್ವಾ ಪೌಂಡ್ರೇಷು ಸುರಪೂಜಿತಮ್ ।
ವಾಜಪೇಯಮವಾಪ್ನೋತಿ ನಾಕಪೃಷ್ಠೇ ಚ ಮೋದತೇ ॥೧೯॥

ತತ್ರ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ।
ಸಿದ್ಧಚಾರಣಗಂಧರ್ವಾ ಋಷಿಸಂಘಾಪ್ಸರೋಗಣಾಃ ॥೨೦॥

ಈಶಾನಂ ತತ್ರ ಚಾಭ್ಯರ್ಚ್ಯ ತ್ರಿರಾತ್ರೋಪೋಷಿತೋ ನರಃ ।
ದಶಾಶ್ವಮೇಧಾನಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೨೧॥

ಪೌಂಡ್ರದೇಶದಲ್ಲಿ ದೇವತೆಗಳಿಂದ ಪೂಜಿತವಾದ ವೃಷಭಪರ್ವತಕ್ಕೆ ಹೋದರೆ ವಾಜಪೇಯಫಲ ಉಂಟಾಗುತ್ತದೆ. ಮತ್ತು ಆ ತೀರ್ಥಸೇವಿಯು ಸ್ವರ್ಗಲೋಕದಲ್ಲಿ ಮೋದಿಸುತ್ತಾನೆ. ಅಲ್ಲಿ ಬ್ರಹ್ಮಾದಿದೇವತೆಗಳು ತಪೋಧನರಾದ ಋಷಿಗಳು ಸಿದ್ಧಚಾರಣ ಗಂಧರ್ವರು ಋಷಿಸಂಘಗಳು ಮತ್ತು ಅಪ್ಸರೋಗಣಗಳು ಇವೆ. ಅಲ್ಲಿ ಮೂರು ರಾತ್ರಿ ಉಪವಾಸವನ್ನು ಮಾಡಿ ಈಶ್ವರನನ್ನು ಪೂಜಿಸುವ ನರನು ಹತ್ತು ಅಶ್ವಮೇಧಯಾಗಗಳ ಫಲವನ್ನು ಹೊಂದುತ್ತಾನೆ. ಮತ್ತು ತನ್ನ ಕುಲವನ್ನು ಉದ್ಧರಿಸುತ್ತಾನೆ.

ತತೋ ಗಚ್ಛೇತ ಕಾವೇರೀಂ ವೃತಾಮಪ್ಸರಸಾಂ ಗಣೈಃ ।
ತತ್ರ ಸ್ನಾತ್ವಾ ನರೋ ರಾಜನ್ ಗೋಸಹಸ್ರಫಲಂ ಲಭೇತ್ ॥೨೨॥

ರಾಜನೇ, ಅಲ್ಲಿಂದ ಅಪ್ಸರೆಯರ ಸಮೂಹದಿಂದ ಕೂಡಿದ ಕಾವೇರಿ ನದಿಗೆ ಹೋಗಬೇಕು. ಅಲ್ಲಿ ಸ್ನಾನವನ್ನು ಮಾಡಿದರೆ ಗೋಸಹಸ್ರಫಲವುಂಟಾಗುತ್ತದೆ.

ಕಾವೇರ್ಯಾಃ ಸಂಗಮೇ ಚೈವ ಸ್ನಾತ್ವಾ ದಶಗುಣೋ ಭವೇತ್ ।
ಸೇತುತೀರ್ಥಂ ಸಮಾಸಾದ್ಯ ಬ್ರಹ್ಮಹತ್ಯಾಂ ವ್ಯಪೋಹತಿ ॥೨೩॥

ಕಾವೇರಿ ಸಮುದ್ರಸಂಗಮದಲ್ಲಿ ಸ್ನಾನವನ್ನು ಮಾಡಿದರೆ ಅದಕ್ಕಿಂತ ಹತ್ತು ಪಟ್ಟು ಹೆಚ್ಚಿನ ಫಲವು ಉಂಟಾಗುತ್ತದೆ. ಸೇತುತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡುವವನು ಬ್ರಹ್ಮಹತ್ಯೆಯನ್ನು ಪರಿಹರಿಸಿಕೊಳ್ಳುತ್ತಾನೆ.

ತತಸ್ತೀರೇ ಸಮುದ್ರಸ್ಯ ಕನ್ಯಾತೀರ್ಥಮುಪಸ್ಪೃಶೇತ್ ।
ತತ್ರೋಪಸ್ಪೃಶ್ಯ ರಾಜೇಂದ್ರ ಸರ್ವಪಾಪೈಃ ಪ್ರಮುಚ್ಯತೇ ॥೨೪॥

ಅಲ್ಲಿಂದ ಮುಂದೆ ಸಮುದ್ರತೀರದಲ್ಲಿ ಕನ್ಯಾ(ಕುಮಾರೀ)ತೀರ್ಥವಿದೆ. ಅಲ್ಲಿ ಸ್ನಾನವನ್ನು ಮಾಡಬೇಕು. ಎಲೈ ರಾಜೇಂದ್ರನೇ, ಅಲ್ಲಿ ಸ್ನಾನವನ್ನು ಮಾಡುವವನು ಎಲ್ಲ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಅಥ ಗೋಕರ್ಣಮಾಸಾದ್ಯ ತ್ರಿಷು ಲೋಕೇಷು ವಿಶ್ರುತಮ್ ।
ಸಮುದ್ರಮಧ್ಯೇ ರಾಜೇಂದ್ರ ಸರ್ವಲೋಕನಮಸ್ಕೃತಮ್ ॥೨೫॥

ತತ್ರ ಬ್ರಹ್ಮಾದಯೋ ದೇವಾ ಋಷಯಶ್ಚ ತಪೋಧನಾಃ ।
ಭೂತಯಕ್ಷಪಿಶಾಚಾಶ್ಚ ಕಿನ್ನರಾಃ ಸಮಹೋರಗಾಃ ॥೨೬॥

ಸಿದ್ಧಚಾರಣಗಂಧರ್ವಮಾನುಷಾಃ ಪನ್ನಗಾಸ್ತಥಾ ।
ಸರಿತಃ ಸಾಗರಾಃ ಶೈಲಾ ಉಪಾಸಂತ ಉಮಾಪತಿಮ್ ॥೨೭॥

ಎಲೈ ರಾಜೇಂದ್ರನೇ, ಅಲ್ಲಿಂದ ಮೂರು ಲೋಕಗಳಲ್ಲಿ ಪ್ರಸಿದ್ಧವಾದ ಎಲ್ಲ ಜನರಿಂದಲೂ ನಮಸ್ಕೃತವಾದ ಸಮುದ್ರಮಧ್ಯದಲ್ಲಿರುವ ಗೋಕರ್ಣಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿದೇವತೆಗಳು ತಪೋಧನರಾದ ಋಷಿಗಳು ಭೂತಯಕ್ಷಪಿಶಾಚಿಗಳು ಕಿನ್ನರರು ಮತ್ತು ಮಹೋರಗಗಳು ಸಿದ್ಧಚಾರಣಗಂಧರ್ವರು ಮನುಷ್ಯರು ಸರ್ಪಗಳು ನದಿಗಳು ಸಾಗರಗಳು ಮತ್ತು ಪರ್ವತಗಳು ಉಮಾಪತಿಯನ್ನು ಉಪಾಸನೆಮಾಡುತ್ತಾರೆ.

ತತ್ರೇಶಾನಂ ಸಮಭ್ಯರ್ಚ್ಯ ತ್ರಿರಾತ್ರೋಪೋಷಿತೋ ನರಃ ।
ದಶಾಶ್ವಮೇಧಾನಾಪ್ನೋತಿ ಗಾಣಪತ್ಯಂ ಚ ವಿಂದತಿ ।
ಉಷ್ಯ ದ್ವಾದಶರಾತ್ರಂ ತು ಕೃತಾತ್ಮಾ ಭವತಿ ಪ್ರಭೋ ॥೨೮॥

ಅಲ್ಲಿ ಈಶ್ವರನನ್ನು ಪೂಜಿಸಿ ಮೂರು ರಾತ್ರಿ ಉಪವಾಸವನ್ನು ಮಾಡುವ ನರನು ಹತ್ತು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ಮತ್ತು ಗಣಾಧಿಪತ್ಯವನ್ನು ಪಡೆಯುತ್ತಾನೆ. ಪ್ರಭುವೇ ಹನ್ನೆರಡು ರಾತ್ರಿವಾಸವನ್ನು ಮಾಡುವವನು ಕೃತಾರ್ಥನಾಗುತ್ತಾನೆ.

ತತ ಏವ ಚ ಗಾಯತ್ರ್ಯಾಃ ಸ್ಥಾನಂ ತ್ರೈಲೋಕ್ಯವಿಶ್ರುತಮ್ ।
ನಿದರ್ಶನಂ ಚ ಪ್ರತ್ಯಕ್ಷಂ ಬ್ರಾಹ್ಮಣಾನಾಂ ನರಾಧಿಪ ॥೨೯॥

ಗಾಯತ್ರೀಂ ಪಠತೇ ಯತ್ರ ಯೋನಿಸಂಕರಸಂಭವಃ ।
ಗಾಥಾ ವಾ ಗೀತಿಕಾ ವಾಪಿ ತಸ್ಯ ಸಂಪದ್ಯತೇ ನೃಪ ॥೩೦॥

ಅಲ್ಲಿಯೇ ಮೂರುಲೋಕಗಳಲ್ಲಿ ಪ್ರಸಿದ್ಧವಾದ ಗಾಯತ್ರೀ ಸ್ಥಾನವಿದೆ. ಅಲ್ಲಿ ಮೂರು ರಾತ್ರಿ ಉಪವಾಸವನ್ನುಮಾಡುವವನು ಗೋಸಹಸ್ರಫಲವನ್ನು ಪಡೆಯುತ್ತಾನೆ. ಎಲೈ ನರಾಧಿಪನೇ, ಈ ಫಲವು ಬ್ರಾಹ್ಮಣರಿಗೆ ಪ್ರತ್ಯಕ್ಷನಿದರ್ಶನವಾಗಿದೆ. ಯೋನಿಸಂಕರದಿಂದ ಜನ್ಮವನ್ನು ಪಡೆದವನು ಗಾಯತ್ರಿಯನ್ನಾಗಲೀ ಯಾವುದೇ ಗಾಥೆಯನ್ನಾಗಲಿ ಅಥವಾ ಗೀತೆಯನ್ನಾಗಲಿ ಪಠನವನ್ನು ಮಾಡಿದರೂ ಅವನಿಗೆ ಅಲ್ಲಿ ಅದರ ಸಿದ್ಧಿಯುಂಟಾಗುತ್ತದೆ.

ಸಂವರ್ತಸ್ಯ ತು ವಿಪ್ರರ್ಷೇರ್ವಾಪೀಮಾಸಾದ್ಯ ದುರ್ಲಭಾಮ್ ।
ರೂಪಸ್ಯ ಭಾಗೀ ಭವತಿ ಸುಭಗಶ್ಚೈವ ಜಾಯತೇ ॥೩೧॥

ತತೋ ವೇಣ್ಣಾಂ ಸಮಾಸಾದ್ಯ ತರ್ಪಯೇತ್ ಪಿತೃದೇವತಾಃ ।
ಮಯೂರಹಂಸಸಂಯುಕ್ತಂ ವಿಮಾನಮಧಿರೋಹತಿ ॥೩೨॥

ವಿಪ್ರರ್ಷಿಯಾದ ಸಂವರ್ತನ ದುರ್ಲಭವಾದ ವಾಪಿಯನ್ನು ಸೇರಿ ಸ್ನಾನವನ್ನು ಮಾಡುವವನು ಒಳ್ಳೆಯ ರೂಪವನ್ನು ಮತ್ತು ಸೌಂದರ್ಯವನ್ನು ಹೊಂದುತ್ತಾನೆ. ಅಲ್ಲಿಂದ ಮುಂದೆ ವೇಣ್ಣಾನದಿಗೆ ತಲುಪಿ ಯಾವನು ಪಿತೃದೇವತೆಗಳನ್ನು ಆರಾಧಿಸುತ್ತಾನೆಯೋ ಅವನು ಮಯೂರ ಮತ್ತು ಹಂಸಯುಕ್ತವಾದ ವಿಮಾನವನ್ನು ಏರುತ್ತಾನೆ.

ತತೋ ಗೋದಾವರೀಂ ಪ್ರಾಪ್ಯ ನದೀಂ ಸಿದ್ಧನಿಷೇವಿತಾಮ್ ।
ಆವಾಪ್ಯ ಗೋಮೇಧಫಲಂ ವಾಸುಕೇರ್ಲೋಕಮಾಪ್ನುಯಾತ್ ॥೩೩॥

ಆನಂತರ ಸಿದ್ಧಸೇವಿತವಾದ ಗೋದಾವರೀ ನದಿಯನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡುವವನು ಗೋಮೇಧಯಾಗದ ಫಲವನ್ನು ಪಡೆದು ವಾಸುಕಿಲೋಕವನ್ನು ಹೊಂದುತ್ತಾನೆ.

ವೇಣ್ಣಾಯಾಃ ಸಂಗಮೇ ಸ್ನಾತ್ವಾ ವಾಜಿಮೇಧಫಲಂ ಲಭೇತ್ ।
ವರದಾಸಂಗಮೇ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೩೪॥

ಬ್ರಹ್ಮಸ್ಥಾನಂ ಸಮಾಸಾದ್ಯ ತ್ರಿರಾತ್ರೋಪೋಷಿತೋ ನರಃ ।
ಗೋಸಹಸ್ರಫಲಂ ಗಚ್ಛೇತ್ ಸ್ವರ್ಗಲೋಕಂ ಚ ಗಚ್ಛತಿ ॥೩೫॥

ವೇಣ್ಣಾನದಿಯ ಸಂಗಮದಲ್ಲಿ ಸ್ನಾನವನ್ನು ಮಾಡಿದರೆ ಅಶ್ವಮೇಧಫಲವು ದೊರೆಯುತ್ತದೆ. ವರದಾ ಸಂಗಮದಲ್ಲಿ ಸ್ನಾನವನ್ನು ಮಾಡಿದರೆ ಗೋಸಹಸ್ರಫಲವು ದೊರೆಯುತ್ತದೆ. ಬ್ರಹ್ಮಸ್ಥಾನವನ್ನು ಸೇರಿ ಅಲ್ಲಿ ಮೂರು ರಾತ್ರಿ ಉಪವಾಸವನ್ನು ಮಾಡುವ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ. ಮತ್ತು ಸ್ವರ್ಗಲೋಕವನ್ನು ಪಡೆಯುತ್ತಾನೆ.

ಕುಶಪ್ಲವನಮಾಸಾದ್ಯ ಬ್ರಹ್ಮಚಾರೀ ಸಮಾಹಿತಃ ।
ತ್ರಿರಾತ್ರಮುಷಿತಃ ಸ್ನಾತ್ವಾ ಹಯಮೇಧಫಲಂ ಲಭೇತ್ ॥೩೬॥

ಯಾವ ಮನುಷ್ಯನು ಬ್ರಹ್ಮಚಾರಿಯಾಗಿ ಸಮಾಹಿತನಾಗಿ ಕುಶಪ್ಲವನತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡಿ ಮೂರು ರಾತ್ರಿಗಳು ವಾಸಿಸುತ್ತಾನೆಯೋ ಅವನು ಅಶ್ವಮೇಧ ಫಲವನ್ನು ಪಡೆಯುತ್ತಾನೆ.

ತತೋ ದೇವಹ್ರದೇ ಸ್ನಾತ್ವಾ ಕೃಷ್ಣವೇಣ್ಣಾಜಲೋದ್ಭವೇ ।
ಪಿತಾಮಹಹ್ರದೇ ಚೈವ ತಥಾ ಕನ್ಯಾಹ್ರದೇ ನೃಪ ॥೩೭॥

ಯತ್ರ ಕ್ರತುಶತೈರಿಷ್ಟ್ವಾ ದೇವರಾಜೋ ದಿವಂ ಗತಃ ।
ಅಗ್ನಿಷ್ಟೋಮಶತಂ ಏಂದೇದ್ ಗಮನಾದೇವ ಭಾರತ ॥೩೮॥

ಅಲ್ಲಿಂದ ಮುಂದೆ ಕೃಷ್ಣವೇಣ್ಣಾ ಜಲದಲ್ಲಿ ಉದ್ಭವಿಸಿದ ದೇವಹ್ರದದಲ್ಲಿ ಮತ್ತು ಬ್ರಹ್ಮಹ್ರದದಲ್ಲಿ ಮತ್ತು ಕನ್ಯಾಹ್ರದದಲ್ಲಿಯೂ ಸ್ನಾನ ಮಾಡಬೇಕು. ಎಲ್ಲಿ ದೇವರಾಜನು ನೂರು ಯಾಗಗಳನ್ನುಮಾಡಿ ಸ್ವರ್ಗವನ್ನು ಪಡೆದನೋ ಅಂತಹ ಕನ್ಯಾಹ್ರದವನ್ನು ತಲುಪುವುದರಿಂದಲೇ ಮಾನವನಿಗೆ ನೂರು ಅಗ್ನಿಷ್ಟೋಮಫಲವು ದೊರೆಯುತ್ತದೆ.

ಸರ್ವದೇವಹ್ರದೇ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ।
ಜಾತಿಮಾತ್ರಹ್ರದೇ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ।
ಜಾತಿಸ್ಮರತ್ವಂ ಲಭತೇ ಸುಭಗಶ್ಚೈವ ಜಾಯತೇ ॥೩೯॥

ಸರ್ವದೇವಹ್ರದದಲ್ಲಿ ಸ್ನಾನವನ್ನು ಮಾಡಿದರೆ ಗೋಸಹಸ್ರಫಲವು ದೊರೆಯುತ್ತದೆ. ಜಾತಿಮಾತ್ರಹ್ರದದಲ್ಲಿ ಸ್ನಾನವನ್ನು ಮಾಡಿದರೂ ಗೋಸಹಸ್ರಫಲವು ದೊರೆಯುತ್ತದೆ. ಅಲ್ಲದೆ ಪೂರ್ವಜನ್ಮದ ಸ್ಮರಣೆಯೂ ಉಂಟಾಗುತ್ತದೆ. ಮತ್ತು ಸೌಂದರ್ಯವನ್ನು ಪಡೆಯುತ್ತಾನೆ.

ತತಃ ಶೂರ್ಪಾಕರಂ ಗಚ್ಛೇತ್ ಜಾಮದಗ್ನ್ಯನಿಷೇವಿತಮ್ ।
ರಾಮತೀರ್ಥೇ ನರಃ ಸ್ನಾತ್ವಾ ವಿಂದೇದ್ಬಹು ಸುವರ್ಣಕಮ್ ॥೪೦॥

ಅಲ್ಲಿಂದ ಪರಶುರಾಮನಿಂದ ಸೇವಿತವಾದ ಶೂರ್ಪಾಕರ ಕ್ಷೇತ್ರಕ್ಕೆ ಹೋಗಿ ರಾಮತೀರ್ಥದಲ್ಲಿ ಸ್ನಾನವನ್ನುಮಾಡಿದ ನರನು ಬಹಳ ಸುವರ್ಣವನ್ನು ಪಡೆಯುತ್ತಾನೆ.

ಸಪ್ತಗೋದಾವರೇ ಸ್ನಾತ್ವಾ ನಿಯತೋ ನಿಯತಾಶನಃ ।
ಮಹತ್ ಪುಣ್ಯಮವಾಪ್ನೋತಿ ದೇವಲೋಕಂ ಚ ಗಚ್ಛತಿ ॥೪೧॥

ನಿಯಮವುಳ್ಳವನೂ ನಿಯತಾಹಾರನೂ ಆದ ತೀರ್ಥಸೇವಿಯು ಸಪ್ತಗೋದಾವರದಲ್ಲಿ ಸ್ನಾನವನ್ನುಮಾಡಿದರೆ ಬಹಳ ಪುಣ್ಯವನ್ನು ಗಳಿಸುತ್ತಾನೆ. ಮತ್ತು ದೇವಲೋಕಕ್ಕೆ ಹೋಗುತ್ತಾನೆ.

ತತೋ ದೇವಪಥಂ ಗಚ್ಛೇತ್ ನಿಯತೋ ನಿಯತಾಶನಃ ।
ದೇವಸತ್ರಸ್ಯ ಯತ್ ಪುಣ್ಯಂ ತದವಾಪ್ನೋತಿ ಮಾನವಃ ॥೪೨॥

ನಿಯತನೂ ನಿಯತಾಶನನೂ ಆದ ಮಾನವನು ಅಲ್ಲಿಂದ ಮುಂದೆ ದೇವಸತ್ರಕ್ಕೆ ಹೋಗಬೇಕು. ಅಲ್ಲಿ ಸ್ನಾನವನ್ನುಮಾಡುವ ಮನುಷ್ಯನು ದೇವಸತ್ರಕ್ಕೆ ಸಮಾನವಾದ ಪುಣ್ಯವನ್ನು ಪಡೆಯುತ್ತಾನೆ.

ತತೋऽವಾಪ್ಯ ಮಹಾಪುಣ್ಯಾಂ ಪಯೋಷ್ಣೀಂ ಸರಿತಾಂ ವರಾಮ್ ।
ಪಿತೃದೇವಾರ್ಚನಪರೋ ಗೋಸಹಸ್ರಫಲಂ ಲಭೇತ್ ॥೪೩॥

ಅಲ್ಲಿಂದ ಮುಂದೆ ಬಂದು ನದಿಗಳಲ್ಲಿ ಶ್ರೇಷ್ಠವಾದ ಮಹಾಪುಣ್ಯಪ್ರದವಾದ ಪಯೋಷ್ಣೀನದಿಯನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡಿ ಪಿತೃದೇವಾರ್ಚನಾಪರನಾದ ಮನುಷ್ಯನು ಗೋಸಹಸ್ರಫಲವನ್ನು ಪಡೆಯುತ್ತಾನೆ.

ದಂಡಕಾರಣ್ಯಮಾಸಾದ್ಯ ಮಹಾರಾಜ ಉಪಸ್ಪೃಶೇತ್ ।
ಗೋಸಹಸ್ರಫಲಂ ತತ್ರ ಸ್ನಾತಮಾತ್ರಸ್ಯ ಭಾರತ ॥೪೪॥

ಎಲೈ ಮಹಾರಾಜನೇ ದಂಡಕಾರಣ್ಯವನ್ನು ತಲುಪಿ ಅಲ್ಲಿ ಸ್ನಾನವನ್ನು ಮಾಡಬೇಕು. ಭಾರತನೇ, ಅಲ್ಲಿ ಕೇವಲ ಸ್ನಾನವನ್ನು ಮಾಡುವುದರಿಂದ ಗೋಸಹಸ್ರಫಲವುಂಟಾಗುತ್ತದೆ.

ಶರಭಂಗಾಶ್ರಮಂ ಗತ್ವಾ ವಿಂದೇದ್ ಬಹು ಸುವರ್ಣಕಮ್ ॥೪೫॥

ಶರಭಂಗಾಶ್ರಮಕ್ಕೆ ಹೋದ ತೀರ್ಥಸೇವಿಯು ಬಹಳ ಸುವರ್ಣವನ್ನು ಪಡೆಯುತ್ತಾನೆ.

ತುಂಗಕಾರಣ್ಯಮಾಸಾದ್ಯ ಬ್ರಹ್ಮಚಾರೀ ಜಿತೇಂದ್ರಿಯಃ ।
ವೇದಾನಧ್ಯಾಪಯತ್ ತತ್ರ ಋಷಿಃ ಸಾರಸ್ವತಃ ಪುರಾ ॥೪೬॥

ತತ್ರ ವೇದಾನ್ ಪ್ರನಷ್ಟಾಂಸ್ತು ಮುನೇರಂಗಿರಸಃ ಸುತಃ ।
ಉಪವಿಷ್ಟೋ ಮಹರ್ಷಿರ್ಕಾಮುತ್ತರೀಯೇಷು ಭಾರತ ॥೪೭॥

ಓಂಕಾರೇಣ ಯಥಾನ್ಯಾಯಂ ಸಮ್ಯಗುಚ್ಚಾರಿತೇನ ಚ ।
ಯೇನ ಯತ್ ಪೂರ್ವಮಧ್ಯಸ್ತಂ ತಸ್ಯ ಸರ್ವಮುಪಸ್ಥಿತಮ್ ॥೪೮॥

ಹಿಂದೆ ಸರಸ್ವತೀತೀರದ ಋಷಿಯೊಬ್ಬನು ಬ್ರಹ್ಮಚಾರಿಯೂ ಜಿತೇಂದ್ರಿಯನೂ ಆಗಿ ತುಂಗಕಾರಣ್ಯವನ್ನು ಸೇರಿ ವೇದಧ್ಯಾಯನವನ್ನು ಮಾಡಿಸಿದನು. ಎಲೈ ಭಾರತನೇ ಅಲ್ಲಿ ಆಂಗೀರಸ ಸುತನು (ಬೃಹಸ್ಪತಿಯು) ಋಷಿಗಳ ಉತ್ತರೀಯದಲ್ಲಿ ಕುಳಿತು ತನಗೆ ನಷ್ಟವಾದ ವೇದಗಳನ್ನು ಪುನಃ ಕಲಿತನು. ಓಂಕಾರದ ಜೊತೆಯಲ್ಲಿ ಎಲ್ಲಾ ವೇದಗಳನ್ನು ಸರಿಯಾಗಿ ಉಚ್ಚಾರಮಾಡುವುದನ್ನು ಕೇಳಿದ ತಕ್ಷಣವೇ ಅವನಿಗೆ ತಾನು ಹಿಂದೆ ಅಧ್ಯಯನ ಮಾಡಿದ ವೇದಗಳೆಲ್ಲವೂ ಸ್ಮರಣೆಗೆ ಬಂದವು.

ಋಷಯಸ್ತತ್ರ ದೇವಾಶ್ಚ ವರುಣೋऽಗ್ನಿಃ ಪ್ರಜಾಪತಿಃ ।
ತಥಾ ನಾರಾಯಣೋ ದೇವೋ ಮಹಾದೇವಸ್ತಥೈವ ಚ ॥೪೯॥

ಪಿತಾಮಹಶ್ಚ ಭಗವಾನ್ ದೇವೈಃ ಸಹ ಮಹಾದ್ಯುತಿಃ ।
ಭೃಗುಂ ನಿವೇದಯಾಮಾಸ ಯಾಜನಾರ್ಥೇ ಮಹಾದ್ಯುತಿಮ್ ॥೫೦॥

ತತಃ ಸ ಚಕ್ರೇ ಭಗವಾನ್ ಋಷೀಣಾಂ ವಿಧಿವತ್ ತದಾ ।
ಸರ್ವೇಷಾಂ ಪುನರಾಧಾನಂ ವಿಧಿದೃಷ್ಟೇನ ಕರ್ಮಣಾ ॥೫೧॥

ಅಲ್ಲಿ ಋಷಿಗಳು ವರುಣ ಅಗ್ನಿ ಪ್ರಜಾಪತಿ ಮೊದಲಾದ ದೇವತೆಗಳು ನಾರಾಯಣನು ಹಾಗೆಯೇ ಮಹದೇವರು ಪೂಜ್ಯನಾದ ದೇವತೆಗಳಿಂದ ಒಡಗೂಡಿದ ಮಹಾದ್ಯುತಿಯುಳ್ಳ ಪೂಜ್ಯನಾದ ಪಿತಾಮಹನಾದ ಬ್ರಹ್ಮನು ಎಲ್ಲರೂ ಮಹಾದ್ಯುತಿಯನ್ನು ಹೊಂದಿದ್ದ ಭೃಗು ಋಷಿಗಳಿಗೆ ಯಾಗವನ್ನು ಮಾಡಿಸುವಂತೆ ನಿವೇದಿಸಿದರು. ಆಗ ಪೂಜ್ಯರಾದ ಭೃಗು ಋಷಿಗಳು ಎಲ್ಲಾ ಋಷಿಗಳಿಗೆ ವಿಧ್ಯುಕ್ತರೀತಿಯಿಂದ ಪುನಃ ಆಧಾನವನ್ನು ಮಾಡಿಸಿದರು.

ಆಜ್ಯಭಾಗೇನ ವೈ ತತ್ರ ತರ್ಪಿತಾಸ್ತು ಯಥಾವಿಧಿ ।
ದೇವಾಸ್ತ್ರಿಭುವನಂ ಯಾತಾ ಋಷಯಶ್ಚ ಯಥಾಸುಖಮ್ ॥೫೨॥

ಅಲ್ಲಿ ವಿಧಿಪೂರ್ವಕವಾಗಿ ಸಮರ್ಪಿಸಿದ ಆಜ್ಯಭಾಗಗಳಿಂದ ತೃಪ್ತರಾದ ದೇವತೆಗಳು ಸ್ವರ್ಗಲೋಕಕ್ಕೆ ಹೋದರು ಋಷಿಗಳು ತಮ್ಮತಮ್ಮ ಸ್ಥಾನಗಳಿಗೆ ಹೋದರು.

ತದರಣ್ಯಂ ಪ್ರವಿಷ್ಟಸ್ಯ ತುಂಗಕಂ ರಾಜಸತ್ತಮ ।
ಪಾಪಂ ಪ್ರಣಶ್ಯತೇ ಸರ್ವಂ ಸ್ತ್ರಿಯೋ ವಾ ಪುರುಷಸ್ಯ ವಾ ॥೫೩॥

ಎಲೈ ರಾಜಶ್ರೇಷ್ಠನೇ, ಆ ತುಂಗಕಾರಣ್ಯವನ್ನು ಪ್ರವೇಶಮಾಡಿದ ಸ್ತ್ರೀಯರಿಗಾಗಲೀ ಅಥವಾ ಪುರುಷರಿಗಾಗಲೀ ಎಲ್ಲ ಪಾಪವೂ ನಾಶವನ್ನು ಹೊಂದುತ್ತದೆ.

ತತ್ರ ಮಾಸಂ ವಸೇದ್ವೀರೋ ನಿಯತೋ ನಿಯತಾಶನಃ ।
ಬ್ರಹ್ಮಲೋಕಂ ವ್ರಜೇದ್ರಾಜನ್ ಕುಲಂ ಚೈವ ಸಮುದ್ಧರೇತ್ ॥೫೪॥

ಎಲೈ ರಾಜನೇ, ಅಲ್ಲಿ ನಿಯಮಬದ್ಧನೂ ನಿಯತ ಆಹಾರವುಳ್ಳವನೂ ಆಗಿ ಧೀರನಾಗಿ ಒಂದುತಿಂಗಳು ಕಾಲ ವಾಸವನ್ನು ಮಾಡಿದರೆ ಅವನು ಬ್ರಹ್ಮಲೋಕಕ್ಕೆ ಹೋಗುತ್ತಾನೆ. ಮತ್ತು ಕುಲವನ್ನು ಉದ್ಧರಿಸುತ್ತಾನೆ.

ಮೇಧಾವಿಕಂ ಸಮಾಸಾದ್ಯ ಪಿತೄ ನ್ ದೇವಾಂಶ್ಚ ತರ್ಪಯೇತ್ ।
ಅಗ್ನಿಷ್ಟೋಮಮವಾಪ್ನೋತಿ ಸೃತಿಂ ಮೇಧಾಂ ಚ ವಿಂದತಿ ॥೫೫॥

ತತಃ ಕಾಳಂಜರಂ ಗತ್ವಾ ಪರ್ವತಂ ಲೋಕವಿಶ್ರುತಮ್ ।
ತತ್ರ ದೇವಹ್ರದೇ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೫೬॥

ಮೇಧಾವಿಕತೀರ್ಥಕ್ಕೆ ಹೋಗಿ ಪಿತೃಗಳಿಗೂ ಮತ್ತು ದೇವತೆಗಳಿಗೂ ತರ್ಪಣವನ್ನು ನೀಡಿದರೆ ಅಗ್ನಿಷ್ಟೋಮ ಫಲವನ್ನು ಪಡೆಯುತ್ತಾನೆ. ಸೃತಿಶಕ್ತಿಯನ್ನು ಮೇಧಾಶಕ್ತಿಯನ್ನು ಪಡೆಯುತ್ತಾನೆ. ಲೋಕವಿಶ್ರುತವಾದ ಕಾಳಂಜರ ಪರ್ವತಕ್ಕೆ ಹೋಗಿ ಸ್ನಾನವನ್ನುಮಾಡಿದರೆ ಗೋಸಹಸ್ರಫಲವು ದೊರೆಯುತ್ತದೆ.

ಯೋಽಽತ್ಮಾನಂ ಸಾಧಯೇತ್ ತತ್ರ ಗಿರೌ ಕಾರಂಜರೇ ನೃಪ ।
ಸ್ವರ್ಗಲೋಕೇ ಸ ಪೂಜ್ಯೇತ ನರೋ ನಾಸ್ತ್ಯತ್ರ ಸಂಶಯಃ ॥೫೭॥

ಎಲೈ ರಾಜನೇ, ಯಾವನು ಕಾರಂಜರಗಿರಿಗೆ ಹೋಗಿ ತನ್ನ ಸಾಧನೆಯನ್ನು ಮಾಡುತ್ತಾನೆಯೋ ಅಂತಹ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ ಇದರಲ್ಲಿಸಂಶಯವಿಲ್ಲ.

ತತೋ ಗಿರಿವರಶ್ರೇಷ್ಠೇ ಚಿತ್ರಕೂಟೇ ವಿಶಾಂಪತೇ ।
ಮಂದಾಕಿನೀಂ ಸಮಾಸಾದ್ಯ ನದೀಂ ಪಾಪಪ್ರಮೋಚನೀಮ್ ॥೫೮॥

ತತ್ರಾಭಿಷೇಕಂ ಕುರ್ವಾಣಃ ಪಿತೃದೇವಾರ್ಚನೇ ರತಃ ।
ಅಗ್ನಿಷ್ಟೋಮಮವಾಪ್ನೋತಿ ಗತಿಂ ಚ ಪರಮಾಂ ವ್ರಜೇತ್ ॥೫೯॥

ಎಲೈ ರಾಜನೇ, ಅನಂತರ ಪರ್ವತಗಳಲ್ಲಿ ಶ್ರೇಷ್ಠವಾದ ಚಿತ್ರಕೂಟಪರ್ವತಕ್ಕೆ ಹೋಗಿ ಪಾಪವಿಮೋಚನೆಯಾದ ಮಂದಾಕಿನಿ ನದಿಯಲ್ಲಿ ಸ್ನಾನವನ್ನು ಮಾಡಿ ಪಿತೃದೇವಾರ್ಚನೆಯನ್ನು ಮಾಡುವುದರಲ್ಲಿರತನಾದವನು ಅಗ್ನಿಷ್ಟೋಮ ಫಲವನ್ನು ಪಡೆಯುತ್ತಾನೆ. ಮತ್ತು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ತತೋ ಗಚ್ಛೇತ ರಾಜೇಂದ್ರ ಭರ್ತೃಸ್ಥಾನಮನುತ್ತಮಮ್ ।
ಯತ್ರ ದೇವೋ ಮಹಾದೇವೋ ನಿತ್ಯಂ ಸನ್ನಿಹಿತೋ ನೃಪ ॥೬೦॥

ಪುಮಾಂಸ್ತತ್ರ ನರಶ್ರೇಷ್ಠ ದರ್ಶನಾದೇವ ಸಿಧ್ಯತಿ ।
ಕೋಟಿತೀರ್ಥೇ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ॥೬೧॥

ಎಲೈ ರಾಜೇಂದ್ರನೇ, ಅಲ್ಲಿಂದ ಶ್ರೇಷ್ಠವಾದ ಭರ್ತೃಸ್ಥಾನಕ್ಕೆ ಹೋಗಬೇಕು. ಎಲೈ ರಾಜನೇ, ಅಲ್ಲಿ ಮಹಾದೇವನು ನಿತ್ಯವೂ ಸನ್ನಿಹಿತನಾಗಿದ್ದಾನೆ. ನರಶ್ರೇಷ್ಠನೇ ಭರ್ತೃಸ್ಥಾನದ ದರ್ಶನದಿಂದಲೇ ಮನುಷ್ಯನು ಸಿದ್ಧಿಯನ್ನು ಪಡೆಯುತ್ತಾನೆ. ಕೋಟಿತೀರ್ಥದಲ್ಲಿ ಸ್ನಾನವನ್ನು ಮಾಡಿದ ನರನು ಗೋಸಹಸ್ರಫಲವನ್ನು ಪಡೆಯುತ್ತಾನೆ.

ಪ್ರದಕ್ಷಿಣಮುಪಾವೃತ್ಯ ಜ್ಯೇಷ್ಠಸ್ಥಾನಂ ವ್ರಜೇನ್ನಪ ।
ಅಭಿಗಮ್ಯ ಮಹಾದೇವಂ ವಿರಾಜತಿ ಯಥಾ ಶಶೀ ॥೬೨॥

ಎಲೈ ರಾಜನೇ, ಅಲ್ಲಿಂದ ಪ್ರದಕ್ಷಿಣಾಕಾರವಾಗಿ ಬಂದು ಜ್ಯೇಷ್ಠಸ್ಥಾನವನ್ನು ತಲುಪಿ ಮಹಾದೇವನ ಸಮೀಪಕ್ಕೆ ಬರುವವನು ಚಂದ್ರನಂತೆ ಪ್ರಕಾಶಿಸುತ್ತಾನೆ.

ತತ್ರ ಕೂಪೇ ಮಹಾರಾಜ ವಿಶ್ರುತಾ ಭರತರ್ಷಭ ।
ಸಮುದ್ರಾಸ್ತತ್ರ ಚತ್ವಾರೋ ನಿವಸಂತಿ ಯುಧಿಷ್ಠಿರ ॥೬೩॥

ಎಲೈ ಭರತರ್ಷಭನೇ, ಯುದ್ಧದಲ್ಲಿ ಸ್ಥಿರನಾದವನೇ ಮಹಾರಾಜನೇ, ಅಲ್ಲಿ ಪ್ರಖ್ಯಾತವಾದ ನಾಲ್ಕು ಸಮುದ್ರಗಳು ಕೂಪದಲ್ಲಿ ಸನ್ನಿಹಿತವಾಗಿವೆ.

ತತ್ರೋಪಸ್ಪೃಶ್ಯ ರಾಜೇಂದ್ರ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ನಿಯತಾತ್ಮಾ ನರಃ ಪೂತೋ ಗಚ್ಛೇತ ಪರಮಾಂ ಗತಿಮ್ ॥೬೪॥

ರಾಜೇಂದ್ರನೇ, ಅಲ್ಲಿ ಸ್ನಾನವನ್ನು ಮಾಡಿ ನಿಯತನಾಗಿ ಪ್ರದಕ್ಷಿಣೆಯನ್ನು ಮಾಡುವ ನರನು ಪವಿತ್ರನಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ತತೋ ಗಚ್ಛೇತ್ ಕುರುಶ್ರೇಷ್ಠ ಶೃಂಗಿಬೇರಪುರಂ ಮಹತ್ ।
ತತ್ರ ತೀರ್ಥೋ ಮಹಾರಾಜ ರಾಮೋ ದಾಶರಥಿಃ ಪುರಾ ॥೬೫॥

ಎಲೈ ಕುರುಶ್ರೇಷ್ಠನೇ, ಅಲ್ಲಿಂದ ಶ್ರೇಷ್ಠವಾದ ಶೃಂಗಿಬೇರಪುರಕ್ಕೆ ಹೋಗಬೇಕು. ಮಹಾರಾಜನೇ, ಅದು ಹಿಂದೆ ದಾಶರಥಿರಾಮನು ಗಂಗೆಯನ್ನು ದಾಟಿದ ಸ್ಥಳ.

ಗಂಗಾಯಾಂ ತು ನರಃ ಸ್ನಾತ್ವಾ ಬ್ರಹ್ಮಚಾರೀ ಸಮಾಹಿತಃ ।
ವಿಧೂತಪಾಪ್ಮಾ ಭವತಿ ವಾಜಪೇಯಂ ಚ ವಿಂದತಿ ॥೬೬॥

ಬ್ರಹ್ಮಚಾರಿಯಾಗಿ ಸಮಾಹಿತನಾಗಿ ಗಂಗೆಯಲ್ಲಿ ಸ್ನಾನವನ್ನುಮಾಡಿದ ನರನು ಪಾಪರಹಿತನಾಗಿ ವಾಜಪೇಯಯಾಗದ ಫಲವನ್ನು ಪಡೆಯುತ್ತಾನೆ.

ಅಭಿಗಮ್ಯ ಮಹಾದೇವಮಭ್ಯರ್ಚ್ಯ ಚ ನರಾಧಿಪ ।
ಪ್ರದಕ್ಷಿಣಮುಪಾವೃತ್ಯ ಗಾಣಪತ್ಯಮವಾಪ್ನುಯಾತ್ ॥೬೭॥

ಎಲೈ ನರಾಧಿಪನೇ, ಅಲ್ಲಿ ಮಹಾದೇವನನ್ನು ಅರ್ಚಿಸಿ ಪ್ರದಕ್ಷಿಣೆಯನ್ನು ಮಾಡುವವನು ಗಣಾಧಿಪತ್ಯವನ್ನು ಪಡೆಯುವನು.

ತತೋ ಗಚ್ಛೇತ ರಾಜೇಂದ್ರ ಪ್ರಯಾಗಮೃಷಿಭಿಃ ಸ್ತುತಮ್ ।
ಯತ್ರ ಬ್ರಹ್ಮಾದಯೋ ದೇವಾ ದಿಶಶ್ಚ ಸದಿಗೀಶ್ವರಾಃ ॥೬೮॥

ಲೋಕಪಾಲಾಶ್ಚ ಸಾಧ್ಯಾಶ್ಚ ಪಿತರೋ ಲೋಕಸಮ್ಮತಾಃ ।
ಸನತ್ಕುಮಾರಪ್ರಮುಖಾಃ ತಥೈವ ಪರಮರ್ಷಯಃ ॥೬೯॥

ಅಂಗಿರಃಪ್ರಮುಖಾಶ್ಚೈವ ತಥಾ ಬ್ರಹ್ಮರ್ಷಯೋಽಪರೇ ।
ತಥಾ ನಾಗಾಃ ಸುಪರ್ಣಾಶ್ಚ ಸಿದ್ಧಾಶ್ಚ ಪರಮರ್ಷಯಃ ॥೭೦॥

ಸರಿತಃ ಸಾಗರಾಶ್ಚೈವ ಗಂಧರ್ವಾಪ್ಸರಸಸ್ತಥಾ ।
ಹರಿಶ್ಚ ಭಗವಾನಾಸ್ತೇ ಪ್ರಜಾಪತಿಪುರಸ್ಕೃತಃ ॥೭೧॥

ರಾಜೇಂದ್ರನೇ ಅಲ್ಲಿಂದ ಋಷಿಗಳಿಂದ ಪ್ರಶಂಸಿಸಲ್ಪಡುವ ಪ್ರಯಾಗಕ್ಕೆ ಹೋಗಬೇಕು. ಅಲ್ಲಿಬ್ರಹ್ಮಾದಿದೇವತೆಗಳು ದಿಕ್ಕುಗಳು ದಿಕ್‌ಪಾಲಕರು ಲೋಕಪಾಲಕರು ಪಿತೃಗಳು ಸಾಧ್ಯರು ಲೋಕಸಮ್ಮತರಾದ ಸನತ್ಕುಮಾರ ಮೊದಲಾದ ಯೋಗಿಗಳು ಆದರಂತೆ ಪರಮ ಋಷಿಗಳು ಅಂಗಿರ ಮೊದಲಾದ ಬ್ರಹ್ಮರ್ಷಿಗಳು ಮತ್ತು ಉಳಿದ ನಾಗಗಳು ಸುಪರ್ಣರು ಸಿದ್ಧರು ನದಿಗಳು ಸಾಗರಗಳು ಗಂಧರ್ವರು ಅಪ್ಸರೆಯರು ಮತ್ತು ಭಗವಂತನಾದ ಹರಿಯು ಪ್ರಜಾಪತಿಗಳನ್ನು ಮುಂದೆಮಾಡಿಕೊಂಡು ಅಲ್ಲಿ ಇರುತ್ತಾರೆ.

ತ್ರೀಣಿ ಚಾಪ್ಯಗ್ನಿಕುಂಡಾನಿ ಯೇಷಾಂ ಮಧ್ಯೇ ಚ ಜಾಹ್ನವೀ ।
ಪ್ರಯಾಗಾದಭಿನಿಷ್ಕ್ರಾಂತಾ ಸರ್ವತೀರ್ಥಪುರಸ್ಕೃತಾ ॥೭೨॥

ಪ್ರಯಾಗದಲ್ಲಿ ಮೂರು ಅಗ್ನಿಕುಂಡಗಳಿವೆ ಅವುಗಳ ಮಧ್ಯದಿಂದ ಸರ್ವತೀರ್ಥಗಳಿಗಿಂತ ಶ್ರೇಷ್ಠವಾದ ಜಾಹ್ನವಿಯು ಪ್ರಯಾಗದಿಂದ ಹೊರಬಂದಿದ್ದಾಳೆ.

ತಪನಸ್ಯ ಸುತಾ ದೇವೀ ತ್ರಿಷು ಲೋಕೇಷು ವಿಶ್ರುತಾ ।
ಗಂಗಾ ಯಮುನಯಾ ಸಾರ್ಧಂ ಸಂಗತಾ ಲೋಕವಿಶ್ರುತಾ ॥೭೩॥

ಸೂರ್ಯನ ಮಗಳಾದ ಮೂರುಲೋಕದಲ್ಲಿ ವಿಶ್ರುತಳಾದ ಯಾವ ಯಮುನೆ ಇದ್ದಾಳೋ ಅವಳ ಜೊತೆಯಲ್ಲಿ ಲೋಕವಿಶ್ರುತಳಾದ ಗಂಗೆಯು ಅಲ್ಲಿ ಸಂಗತಳಾಗಿದ್ದಾಳೆ.

ಗಂಗಾಯಮುನಯೋರ್ಮಧ್ಯಂ ಪೃಥಿವ್ಯಾ ಜಘನಂ ಸ್ಮೃತಮ್ ।
ಪ್ರಯಾಗಂ ಜಘನಸ್ಯಾಂತಮುಪಸ್ಥಂ ಮುನಯೋ ವಿದುಃ ॥೭೪॥

ಗಂಗಾಯಮುನೆಯರ ಮಧ್ಯಪ್ರದೇಶವು ಭೂಮಿಯ ಜಘನವೆಂದು ಹೇಳಲ್ಪಡುತ್ತದೆ. ಪ್ರಯಾಗವನ್ನು ಜಘನದ ತುದಿಯಲ್ಲಿರುವ ಉಪಸ್ಥವೆಂದು ಋಷಿಗಳು ತಿಳಿಯುತ್ತಾರೆ.

ಪ್ರಯಾಗಂ ಸಪ್ರತಿಷ್ಠಾನಂ ಕಂಬಲಾಶ್ವತರೌ ತಥಾ ।
ತೀರ್ಥಂ ಭೋಗವತೀ ಚೈವ ನದೀ ಪ್ರೋಕ್ತಾ ಪ್ರಜಾಪತೇಃ ॥೭೫॥

ಪ್ರತಿಷ್ಠಾನನಗರದಿಂದ ಕೂಡಿದ ಪ್ರಯಾಗ ಕಂಬಲ ಅಶ್ವತರ ತೀರ್ಥಗಳು ಮತ್ತು ಭೋಗವತಿತೀರ್ಥಗಳು ಮತ್ತು ನದಿ ಇಪ್ಪು ಸೇರಿ ಪ್ರಜಾಪತಿಯ ವೇದಿ ಎಂದು ಹೇಳಲ್ಪಡುತ್ತದೆ.

ತತ್ರ ದೇವಾಶ್ಚ ಯಜ್ಞಾಶ್ಚ ಮೂರ್ತಿಮಂತೋ ಯುಧಾಂ ವರ ।
ಪ್ರಜಾಪತಿಮುಪಾಸಂತೇ ಋಷಯಶ್ಚ ಮಹಾವ್ರತಾಃ ।
ಯಜಂತೇ ಕ್ರತುಭಿರ್ದೇವಾಃ ತಥಾ ಶಕ್ರಪುರೋಗಮಾಃ ॥೭೬॥

ಎಲೈ ಯುದ್ಧಮಾಡುವವಲ್ಲಿ ಶ್ರೇಷ್ಠನಾದವನೇ, ಅಲ್ಲಿ ದೇವತೆಗಳೂ ಶರೀರವನ್ನು ಧರಿಸಿದ ಯಜ್ಞಗಳೂ ಮಹಾವ್ರತರಾದ ಋಷಿಗಳೂ ಪ್ರಜಾಪತಿಯನ್ನು ಉಪಾಸನೆಮಾಡುತ್ತಾರೆ. ಹಾಗೆಯೇ ಇಂದ್ರನೇ ಮೊದಲಾದ ದೇವತೆಗಳು ಯಜ್ಞಗಳನ್ನು ಆಚರಿಸುತ್ತಾರೆ.

ತತಃ ಪುಣ್ಯತರಂ ನಾಸ್ತಿ ತ್ರಿಷು ಲೋಕೇಷು ಭಾರತ ।
ಪ್ರಯಾಗೇ ಸರ್ವತೀರ್ಥಾನಿ ಸಂಭವಂತ್ಯಧಿಕಂ ಪ್ರಭೋ ॥೭೭॥

ಎಲೈ ಭಾರತನೇ, ಪ್ರಯಾಗಕ್ಕಿಂತ ಪವಿತ್ರವಾದ ಕ್ಷೇತ್ರವು ಮೂರು ಲೋಕಗಳಲ್ಲಿ ಯಾವುದೂ ಇಲ್ಲ. ಪ್ರಭುವೇ ಪ್ರಯಾಗದಲ್ಲಿ ಸರ್ವತೀರ್ಥಗಳು ವಿಶೇಷವಾಗಿ ಸನ್ನಿಹತವಾಗಿರುತ್ತವೆ.

ಶ್ರವಣಾಚ್ಚ ಪ್ರಯಾಗಸ್ಯ ನಾಮಸಂಕೀರ್ತನಾದಪಿ ।
ಮೃತ್ತಿಕಾಲಂಭನಾಚ್ಚಾಪಿ ನರಃ ಪಾಪಾತ್ ಪ್ರಮುಚ್ಯತೇ ॥೭೮॥

ಪ್ರಯಾಗವೆಂಬ ಹೆಸರನ್ನು ಶ್ರವಣಮಾಡಿದರೂ ಅಥವಾ ಕೀರ್ತನೆಮಾಡಿದರೂ ಅಥವಾ ಪ್ರಯಾಗದ ಮೃತ್ತಿಕೆಯನ್ನು ಲೇಪಿಸಿಕೊಂಡರೂ ಮನುಷ್ಯನು ಪಾಪಗಳಿಂದ ವಿಮುಕ್ತನಾಗುತ್ತಾನೆ.

ತತ್ರಾಭಿಷೇಕಂ ಯಃ ಕುರ್ಯಾತ್ ಪ್ರಯಾಗೇ ಸಂಶಿತವ್ರತಃ ।
ಪುಣ್ಯಂ ಫಲಮವಾಪ್ನೋತಿ ರಾಜಸೂಯಾಶ್ವಮೇಧಯೋಃ ॥೭೯॥

ಒಳ್ಳೆಯ ವ್ರತವನ್ನು ಧರಿಸಿದ ಯಾವನು ಪ್ರಯಾಗದಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನು ರಾಜಸೂಯಾಶ್ವಮೇಧಗಳ ಪುಣ್ಯಫಲವನ್ನು ಪಡೆಯುತ್ತಾನೆ.

ಏಷಾ ಯಜನಭೂಮಿರ್ಹಿ ದೇವಾನಾಮಪಿ ಸತ್ಕೃತಾ ।
ಅತ್ರ ದತ್ತಂ ಸುಸೂಕ್ಷ್ಮಂ ಚ ಮಹದ್ ಭವತಿ ಭಾರತ ॥೮೦॥

ಇದು ದೇವತೆಗಳಿಂದ ಸಮ್ಮಾನಿಸಲ್ಪಟ್ಟ ಯಜ್ಞಭೂಮಿ. ಎಲೈ ಭಾರತನೇ ಇಲ್ಲಿ ದಾನಮಾಡಿದ ಅಲ್ಪವೂ ಸಹ ಬಹಳ ದೊಡ್ಡದಾಗುತ್ತದೆ.

ನ ವೇದವಚನಾತ್ತಾತ ನ ಲೋಕವಚನಾದಪಿ ।
ಮತಿರುತ್ಕ್ರಮಣೀಯಾ ತೇ ಪ್ರಯಾಗಗಮನಂ ಪ್ರತಿ ॥೮೧॥

ಎಲೈ ಪ್ರೀತಿಪಾತ್ರನೇ, ಯಾವುದೇ ವೇದವಾಕ್ಯದಿಂದ ಅಥವಾ ಯಾವುದೇ ಲೋಕವಾಕ್ಯದಿಂದ ಪ್ರಭಾವಿತನಾಗಿ ಪ್ರಯಾಗಕ್ಕೆ ಹೋಗಬೇಕೆಂಬ ನಿನ್ನ ಬುದ್ಧಿಯನ್ನು ಕಳೆದುಕೊಳ್ಳಬಾರದು.

ದಶತೀರ್ಥಸಹಸ್ರಾಣಿ ಷಷ್ಟಿಕೋಟ್ಯಸ್ತಥಾऽಪರಾಃ ।
ಯೇಷಾಂ ಸಾನ್ನಿಧ್ಯಮತ್ರೈವ ವರ್ಣಿತಂ ಕುರುನಂದನ ॥೮೨॥

ಎಲೈ ಕುರುನಂದನನೇ, ಈ ಪ್ರಯಾಗದಲ್ಲಿ ಹತ್ತು ಸಹಸ್ರತೀರ್ಥಗಳು ಹಾಗೆಯೇ ಬೇರೆ ಅರವತ್ತುಕೋಟಿ ತೀರ್ಥಗಳು ಸನ್ನಿಹಿತವಾಗಿರುತ್ತವೆಯೆಂದು ಹೇಳಲ್ಪಟ್ಟಿದೆ.

ಚಾತುರ್ವೇದ್ಯೇ ಚ ಯತ್ ಪುಣ್ಯಂ ಸತ್ಯವಾದಿಷು ಚೈವ ಯತ್ ।
ಸ್ನಾತ ಏವ ತದಾಪ್ನೋತಿ ಗಂಗಾಯಮುನಸಂಗಮೇ ॥೮೩॥

ಚತುರ್ವೇದವನ್ನು ಅಧ್ಯಯನ ಮಾಡುವವನಿಗೆ ಯಾವ ಪುಣ್ಯವೋ ಸತ್ಯವಚನನಾದವನಿಗೆ ಯಾವ ಪುಣ್ಯವೋ ಅಂತಹ ಪುಣ್ಯವು ಗಂಗಾಯಮುನಾ ಸಂಗಮದಲ್ಲಿ ಕೇವಲ ಸ್ನಾನವನ್ನು ಮಾಡುವುದರಿಂದ ಉಂಟಾಗುತ್ತದೆ.

ತತ್ರ ಭೋಗವತೀ ನಾಮ ವಾಸುಕೇಸ್ತೀರ್ಥಮುತ್ತಮಮ್ ।
ತತ್ರಾಭಿಷೇಕಂ ಯಃ ಕುರ್ಯಾತ್ ಸೋऽಶ್ವಮೇಧಫಲಂ ಲಭೇತ್ ॥

ಅಲ್ಲಿ ಭೋಗವತಿಯೆಂಬ ವಾಸುಕಿಯ ಶ್ರೇಷ್ಠವಾದ ತೀರ್ಥವಿಗೆ ಅಲ್ಲಿ ಸ್ನಾನವನ್ನು ಮಾಡುವವನು ಅಶ್ವಮೇಧ ಫಲವನ್ನು ಪಡೆಯುತ್ತಾನೆ.

ತತ್ರ ಹಂಸಪ್ರಪತನಂ ತೀರ್ಥಂ ತ್ರೈಲೋಕ್ಯವಿಶ್ರುತಮ್ ।
ದಶಾಶ್ವಮೇಧಿಕಂ ಚೈವ ಗಂಗಾಯಾಂ ಕುರುನಂದನ ॥೮೫॥

ಎಲೈ ಕುರುನಂದನನೇ , ಅಲ್ಲಿ ಮೂರುಲೋಕದಲ್ಲಿಯೂ ಪ್ರಸಿದ್ಧವಾದ ಹಂಸ ಪ್ರಪತನವೆಂಬ ತೀರ್ಥವೂ ಮತ್ತು ಗಂಗೆಯಲ್ಲಿ ದಶಾಶ್ವಮೇಧಿಕವೆಂಬ ತೀರ್ಥವೂ ಇವೆ.

ಯತ್ರ ಗಂಗಾ ಮಹಾರಾಜ ಸ ದೇಶಸ್ತತ್ ತಪೋವನಮ್ ।
ಸಿದ್ಧಿಕ್ಷೇತ್ರಂ ಚ ತಜ್ಜ್ಞೇಯಂ ಗಂಗಾತೀರಸಮಾಶ್ರಿತಮ್ ॥೮೬॥

ಎಲೈ ಮಹಾರಾಜನೇ, ಎಲ್ಲಿ ಗಂಗೆಯಿದೆಯೋ ಅದೇ ಪವಿತ್ರವಾದ ದೇಶ. ಅದೇ ತಪೋವನ. ಗಂಗಾತೀರ ಸಂಬದ್ಧವಾದ ದೇಶವನ್ನು ಸಿದ್ಧಿಕ್ಷೇತ್ರವೆಂದು ತಿಳಿಯಬೇಕು.

ಇದಂ ಸತ್ಯಂ ದ್ವಿಜಾತೀನಾಂ ಸಾಧೂನಾಮಾತ್ಮನಶ್ಚ ಯತ್ ।
ಸುಹೃದಾಂ ಚ ಸಮೇತಾನಾಂ ಶಿಷ್ಯಸ್ಯಾನುಗತಸ್ಯ ಚ ॥೮೭॥

ಈ ತೀರ್ಥಕ್ಷೇತ್ರಮಹಿಮೆಯು ಬ್ರಾಹ್ಮಣರಿಗೂ ಸಜ್ಜನರಿಗೂ ನಿನಗೂ ಇಲ್ಲಿ ಸೇರಿರುವ ಎಲ್ಲಾ ಹಿತೈಷಿಗಳಿಗೂ ಶಿಷ್ಯರಿಗೂ ಮತ್ತು ಅನುಯಾಯಿಗಳಿಗೂ ಪರಮಮಂಗಳವಾದುದು.

ಇದಂ ಧರ್ಮ್ಯಮಿದಂ ಪುಣ್ಯಮ್ ಇದಂ ಮೇಧ್ಯಮಿದಂ ಸುಖಮ್ ।
ಇದಂ ಸ್ವರ್ಗ್ಯಮಿದಂ ರಮ್ಯಂ ಇದಂ ಪಾವನಮುತ್ತಮಮ್ ॥೮೮॥

ಇದು ಧರ್ಮಸಾಧನವಾದುದು. ಪುಣ್ಯಪ್ರದವಾದುದು. ಸ್ವೀಕಾರಾರ್ಹವಾದುದು. ಸುಖಪ್ರದವಾದುದು. ಇದು ಸ್ವರ್ಗಪ್ರದವಾದುದು ಮನೋಹರವಾದುದು ಪವಿತ್ರವಾದುದು ಮತ್ತು ಶ್ರೇಷ್ಠವಾದುದು.

ಮಹರ್ಷೀಣಾಮಿದಂ ಪುಣ್ಯಂ ಸರ್ವಪಾಪಪ್ರಮೋಚನಮ್ ।
ಅಧೀತ್ಯ ದ್ವಿಜಮಧ್ಯೇ ಚ ನಿರ್ಮಲತ್ವಮವಾಪ್ನುಯಾತ್ ॥೮೯॥

ಇದು ಮಹರ್ಷಿಗಳಿಗೂ ಪುಣ್ಯಪ್ರದವಾದುದು. ಸಮಸ್ತಪಾಪಗಳ ಪರಿಹಾರಕವಾದುದು. ಬ್ರಾಹ್ಮಣರ ಮಧ್ಯದಲ್ಲಿ ಈ ಮಹಿಮೆಗಳ ಅಧ್ಯಯನವನ್ನು ಮಾಡುವವನು ತನ್ನ ದೋಷಗಳನ್ನು ನಾಶಮಾಡುತ್ತಾನೆ.

ಯಶ್ಚೇದಂ ಶೃಣುಯಾನ್ನಿತ್ಯಂ ತೀರ್ಥಪುಣ್ಯಂ ಸದಾ ಶುಚಿಃ ।
ಜಾತೀಶ್ಚ ಬಹ್ವೀಃ ಸ್ಮರತೇ ನಾಕಪೃಷ್ಠೇ ಚ ಮೋದತೇ ॥೯೦॥

ಯಾವನು ಶುಚಿರ್ಭೂತನಾಗಿ ಈ ತೀರ್ಥಕ್ಷೇತ್ರಗಳನ್ನು ಮತ್ತು ಅವುಗಳಿಂದ ಉಂಟಾಗುವ ಪುಣ್ಯಗಳನ್ನು ನಿತ್ಯವೂ ಶ್ರವಣಮಾಡುವನೋ ಅವನಿಗೆ ಹಿಂದಿನ ಅನೇಕ ಜನ್ಮಗಳ ಸ್ಮರಣೆ ಉಂಟಾಗುತ್ತದ. ಅನಂತರ ಸ್ವರ್ಗದಲ್ಲಿ ಸುಖಪಡುತ್ತಾನೆ.

ಅನ್ಯಾನ್ಯಪಿ ಚ ತೀರ್ಥಾನಿ ಕೀರ್ತಿತಾನ್ಯಗಮಾನಿ ಚ ।
ಮನಸಾ ತಾನಿ ಗಚ್ಛೇತ ಸರ್ವತೀರ್ಥನಿಷೇವಯಾ ॥೯೦॥

ಇನ್ನು ಹೋಗಲು ಅಸಾಧ್ಯವಾದ ತೀರ್ಥಗಳು ಹೇಳಲ್ಪಡುತ್ತವೆ. ಎಲ್ಲ ತೀರ್ಥಗಳನ್ನು ಸೇವಿಸಲು ಇಚ್ಛಿಸುವ ಮನುಷ್ಯನು ಅವುಗಳಿಗೆ ಮನಸ್ಸಿನಿಂದಲೇ ಸೇವಿಸಬೇಕು.

ಏತಾನಿ ವಸುಭಿಃ ಸಾಧ್ಯೈರಾದಿತ್ಯೈರ್ಮರುದಶ್ವಿಭಿಃ ।
ಋಷಿಭಿರ್ದೇವಕಲ್ಪೈಶ್ಚ ಸ್ನಾತಾನಿ ಸುಕೃತೈಷಿಭಿಃ ॥೯೨॥

ನಾನು ಹೇಳಿದ ಈ ತೀರ್ಥಗಳಲ್ಲಿ ಪುಣ್ಯವನ್ನು ಬಯಸುವ ವಸುಗಳು ಸಾಧ್ಯರು ಆದಿತ್ಯರು ಮರುತ್‌ಗಳು ಅಶ್ವಿನಿಗಳು ದೇವಸದೃಶರಾದ ಋಷಿಗಳು ಸ್ನಾನವನ್ನು ಮಾಡಿದ್ದಾರೆ.

ಏವಂ ತ್ವಮಪಿ ಕೌರವ್ಯ ವಿಧಿನಾಽನೇನ ಸುವ್ರತ ।
ವ್ರಜ ತೀರ್ಥಾನಿ ನಿಯತಃ ಪುಣ್ಯಂ ಪುಣ್ಯೇನ ವರ್ಧತೇ ॥೯೩॥

ಎಲೈ ಸುವ್ರತನಾದ ಕುರುಕುಲೋತ್ಪನ್ನನಾದ ಭೀಷ್ಮನೇ, ನೀನು ಸಹ ಈ ಪ್ರಕಾರದಿಂದ ನಿಯಮವನ್ನು ಧರಿಸಿ ತೀರ್ಥಯಾತ್ರೆಯನ್ನು ಮಾಡು. ಪುಣ್ಯವು ಪುಣ್ಯದಿಂದ ಹೆಚ್ಚುತ್ತದೆ.

ಭಾಷಿತೈಃ ಕಾರಣೈಃ ಪೂರ್ವಮಾಸ್ತಿಕ್ಯಾಚ್ಚ್ರುತಿದರ್ಶನಾತ್ ।
ಪ್ರಾಪ್ಯಂತೇ ತಾನಿ ತೀರ್ಥಾನಿ ಸದ್ಭಿಸ್ತತ್ತಾರ್ಥದರ್ಶಿಭಿಃ ।
ಸದ್ಭಿಃ ಶಾಸ್ತ್ರಾರ್ಥತತ್ತಜ್ಞೈಃ ಬ್ರಾಹ್ಮಣೈಃ ಸಹ ಗಮ್ಯತಾಮ್ ॥೯೪॥

ನಾನು ಹಿಂದೆ ಹೇಳಿದ ಕಾರಣಗಳಿಂದ ಆಸ್ತಿಕ್ಯ ಬುದ್ಧಿಯಿಂದಲೂ ಶ್ರುತಿಗಳ ಬಲದಿಂದಲೂ ತತ್ತಾರ್ಥದರ್ಶಿಗಳಿಂದ ಆ ತೀರ್ಥಗಳು ಸೇವಿಸಲ್ಪಡುತ್ತವೆ. ಶಾಸ್ತ್ರಾರ್ಥತತ್ತವನ್ನು ತಿಳಿದ ಶ್ರೇಷ್ಠ ಬ್ರಾಹ್ಮಣರ ಜೊತೆಯಲ್ಲಿ ತೀರ್ಥಯಾತ್ರೆಯನ್ನು ಮಾಡು.

ನಾವ್ರತೋ ನಾಕೃತಾತ್ಮಾ ಚ ನಾಶುಚಿರ್ನ ಚ ತಸ್ಕರಃ ।
ಸ್ನಾತಿ ತೀರ್ಥೇಷು ಕೌರವ್ಯ ನ ಚ ವಕ್ರಮತಿರ್ನರಃ ॥೯೫॥

ಎಲೈ ಕೌರವ್ಯನೇ, ವ್ರತವನ್ನು ಧರಿಸದವನು ಮನಸ್ಸನ್ನು ನಿಯಂತ್ರಿಸದವನು ಅಶುಚಿಯಾದವನು ತಸ್ಕರನಾದವನು ಮತ್ತು ವಕ್ರಬುದ್ಧಿಯುಳ್ಳನರನು ತೀರ್ಥಗಳಲ್ಲಿ ಸ್ನಾನಮಾಡುವುದಿಲ್ಲ.

ತ್ವಯಾ ತು ಸತ್ಯವೃತ್ತೇನ ನಿತ್ಯಂ ಧರ್ಮಾರ್ಥದರ್ಶಿನಾ ।
ಪಿತರಸ್ತಾರಿತಾಃ ಸರ್ವೇ ಸರ್ವೇ ಚ ಪ್ರಪಿತಾಮಹಾಃ ॥೯೬॥

ನಿತ್ಯವೂ ಧರ್ಮಾರ್ಥದರ್ಶಿಯಾದ ನೀನು ನಿನ್ನ ಸತ್ಯವಾದ ನಡತೆಯಿಂದ ಎಲ್ಲಾ ಪಿತೃಗಳನ್ನು ಎಲ್ಲಾ ಪಿತಾಮಹರನ್ನು ಮತ್ತು ಪ್ರಪಿತಾಮಹರನ್ನು ದಾಟಿಸಿದ್ದೀಯೆ.

ಪಿತಾಮಹಪುರೋಗಾಶ್ಚ ದೇವಾಃ ಸರ್ಷಿಗಣಾ ನೃಪ ।
ತವ ಧರ್ಮೇಣ ಧರ್ಮಜ್ಞ ನಿತ್ಯಮೇವಾಭಿತೋಷಿತಾಃ ॥೯೭॥

ಎಲೈ ಧರ್ಮಜ್ಞನೇ, ಎಲೈ ರಾಜನೇ, ನಿನ್ನ ಧರ್ಮಾಚರಣೆಯಿಂದ ಬ್ರಹ್ಮದೇವರೇ ಮೊದಲಾದ ದೇವತೆಗಳು ಮತ್ತು ಋಷಿಗಣಗಳು ನಿನ್ನ ಮೇಲೆ ಬಹಳ ಸಂತೋಷಗೊಂಡಿದ್ದಾರೆ.

ಅವಾಪ್ಸ್ಯಸಿ ಚ ಲೋಕಾಂಸ್ತ್ವಂ ವಸೂನಾಂ ವಾಸವೋಪಮ ।
ಕೀರ್ತಿಂ ಚ ಮಹತೀಂ ಭೀಷ್ಮ ಪ್ರಾಪ್ಸ್ಯಸೇ ಭುವಿ ಶಾಶ್ವತೀಮ್ ॥೯೮॥

ಎಲೈ ಇಂದ್ರನಿಗೆ ಸದೃಶನಾದವನೇ, ಈ ತೀರ್ಥಯಾತ್ರೆಯನ್ನು ಮಾಡಿ ನೀನು ವಸುಲೋಕವನ್ನು ಪಡೆಯುತ್ತೀಯೇ. ಮತ್ತು ಎಲೈ ಭೀಷ್ಮನೇ, ಭೂಮಿಯಲ್ಲಿ ಶಾಶ್ವತವಾದ ಅಪಾರವಾದ ಕೀರ್ತಿಯನ್ನು ಪಡೆಯುವಿ.

ನಾರದಃ

ಏವಮುಕ್ತ್ವಾಭ್ಯನುಜ್ಞಾತಃ ಪುಲಸ್ತ್ಯೋ ಭಗವಾನೃಷಿಃ ।
ಪ್ರೀತಃ ಪ್ರೀತೇನ ಮನಸಾ ತತ್ರೈವಾಂತರಧೀಯತ ॥೯೯॥

ಹೀಗೆ ಹೇಳಿ ಭೀಷ್ಮರ ಅನುಮತಿಯನ್ನು ಪಡೆದು ಪೂಜ್ಯರಾದ ಪುಲಸ್ತ್ಯಋಷಿಗಳು ಸಂತೋಷಗೊಂಡು ಸಂತುಷ್ಟವಾದ ಮನಸ್ಸಿನಿಂದ ಅಲ್ಲಿಯೇ ಅದೃಶ್ಯರಾದರು.

ಭೀಷ್ಮಸ್ತು ಕುರುಶಾರ್ದೂಲ ಶಾಸ್ತ್ರತತ್ತ್ವಾರ್ಥದರ್ಶನಾತ್ ।
ಪುಲಸ್ತ್ಯವಚನಾಚ್ಚೈವ ಪೃಥಿವೀಮನುಚಕ್ರಮೇ ॥೧೦೦॥

ಕುರುಶಾರ್ದೂಲನಾದ ಎಲೈ ಧರ್ಮರಾಜನೇ, ಭೀಷ್ಮರಾದರೋ ಶಾಸ್ತ್ರತತ್ತ್ವಾರ್ಥವನ್ನು ತಿಳಿದವರಾಗಿ ಅದರ ಬಲದಿಂದಲೂ ಮತ್ತು ಪುಲಸ್ತ್ಯರ ವಚನ ಬಲದಿಂದಲೂ ಭೂಮಿಯಲ್ಲಿ ತೀರ್ಥಯಾತ್ರೆಯನ್ನು ಮಾಡಿದರು.

ಅನೇನ ವಿಧಿನಾ ಯಸ್ತು ಪೃಥಿವೀಂ ಸಂಚರಿಷ್ಯತಿ ।
ಅಶ್ವಮೇಧಶತಸ್ಯಾಗ್ರಂ ಫಲಂ ಪ್ರೇತ್ಯ ಸ ಭೋಕ್ಷ್ಯತೇ ॥೧೦೧॥

ಈ ಕ್ರಮದಿಂದ ಯಾವನು ತೀರ್ಥಯಾತ್ರೆಯನ್ನು ಮಾಡುವನೋ ಅವನು ನೂರು ಅಶ್ವಮೇಧಯಾಗಗಳಿಗಿಂತ ಹೆಚ್ಚಿನ ಪುಣ್ಯಗಳನ್ನು ಪಡೆದು ಮರಣಾನಂತರದಲ್ಲಿ ಸುಖವನ್ನು ಅನುಭವಿಸುತ್ತಾನೆ.

ಅತಶ್ಚಾಪ್ಯಧಿಕಂ ಪಾರ್ಥ ಪ್ರಾಪ್ಸ್ಯಸೇ ಧರ್ಮಮುತ್ತಮಮ್ ।
ಭೀಷ್ಮಃ ಕುರೂಣಾಂ ಪ್ರವರೋ ಯಥಾ ಪೂರ್ವಮವಾಪ್ತವಾನ್ ।
ಋಷೀನ್ ನೇತಾಸಿ ಯಸ್ಮಾತ್ ತ್ವಮತಶ್ಚಾಪ್ಯಧಿಕಂ ಫಲಮ್ ॥೧೦೨॥

ಎಲೈ ಪಾರ್ಥನೇ, ಕುರುಶ್ರೇಷ್ಠನಾದ ಭೀಷ್ಮನು ಎಂತಹ ಪುಣ್ಯವನ್ನು ಹಿಂದೆ ಪಡೆದನೋ ಅದಕ್ಕಿಂತ ಎಂಟುಪಟ್ಟು ಅಧಿಕವಾದ ಶ್ರೇಷ್ಠವಾದ ಪುಣ್ಯವನ್ನು ನೀನು ಪಡೆಯುವಿ. ನೀನು ಜೊತೆಯಲ್ಲಿ ಋಷಿಗಳನ್ನು ಕರೆದುಕೊಂಡು ಹೋಗುವುದರಿಂದ ನಿನ್ನ ಪುಣ್ಯವು ಎಂಟುಪಟ್ಟು ಅಧಿಕವಾಗಿರುತ್ತದೆ.

ರಕ್ಷೋಗಣವಿಕೀರ್ಣಾನಿ ತೀರ್ಥಾನ್ಯೇತಾನಿ ಭಾರತ ।
ಅಗಮ್ಯಾನಿ ಮುನುಷ್ಯೇಂದ್ರೈಃ ತ್ವಾಮೃತೇ ಕುರುನಂದನ ॥೧೦೩॥

ಎಲೈ ಕುರುನಂದನನೇ, ಎಲೈ ಭಾರತನೇ, ಈ ತೀರ್ಥಗಳೆಲ್ಲವೂ ರಾಕ್ಷಸರಿಂದ ತುಂಬಿರುತ್ತವೆ. ನಿನ್ನನ್ನು ಬಿಟ್ಟು ಶ್ರೇಷ್ಠರಾದ ಮನುಷ್ಯರೂ ಕೂಡ ಈ ತೀರ್ಥಗಳಿಗೆ ಹೋಗಲಾರರು.

ಇದಂ ದೇವರ್ಷಿಚರಿತಂ ಸರ್ವತೀರ್ಥಾನುಸಂಚಿತಮ್ ।
ಯಃ ಪಠೇತ್ ಕಾಲ್ಯಮುತ್ಥಾಯ ಸರ್ವಪಾಪೈಃ ಪ್ರಮುಚ್ಯತೇ ॥೧೦೪॥

ಎಲ್ಲತೀರ್ಥಗಳಿಗೆ ಸಂಬಂಧಿಸಿದ ಈ ದೇವರ್ಷಿಚರಿತೆಯನ್ನು ಪ್ರಾತಃಕಾಲದಲ್ಲಿ ಎದ್ದು ಯಾವನು ಪಠಿಸುತ್ತಾನೆಯೋ ಅವನು ಎಲ್ಲಾ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಋಷಿಮುಖ್ಯಾಃ ಸದಾ ಯತ್ರ ವಾಲ್ಮೀಕಿಸ್ತ್ವಥ ಕಾಶ್ಯಪಃ ।
ಆತ್ರೇಯಸ್ತ್ವಥ ಕೌಂಡಿನ್ಯೋ ವಿಶ್ವಾಮಿತ್ರೋಽಥ ಗೌತಮಃ ॥೧೦೫॥

ಅಸಿತೋ ದೇವಲಶ್ಚೈವ ಮಾರ್ಕಂಡೇಯೋಽಥ ಗಾಲವಃ ।
ವಸಿಷ್ಠಶ್ಚ ಮಹಾತೇಜಾ ಮುನಿರೌದ್ದಾಲಕಸ್ತಥಾ ॥೧೦೬॥

ಶೌನಕಃ ಸಹ ಪುತ್ರೇಣ ವ್ಯಾಸಶ್ಚ ಜಪತಾಂ ವರಃ ।
ಭಾರದ್ವಾಜೋ ಮುನಿಶ್ರೇಷ್ಠೋ ದುರ್ವಾಸಾಶ್ಚ ಮಹಾತಪಾಃ ॥೧೦೭॥

ಏತೇ ಋಷಿವರಾಃ ಸರ್ವೇ ತತ್ತ್ವಜ್ಞಾಸ್ತಪೋಧನಾಃ ।
ಏಭಿಃ ಸಹ ಮಹಾರಾಜ ತೀರ್ಥಾನ್ಯೇತಾನ್ಯನುವ್ರಜ ॥೧೦೮॥

ಈ ಎಲ್ಲ ಋಷಿಶ್ರೇಷ್ಠರು ಮತ್ತು ವಾಲ್ಮೀಕಿ ಕಾಶ್ಯಪ ಆತ್ರೇಯ ಕೌಂಡಿನ್ಯ ವಿಶ್ವಾಮಿತ್ರ ಗೌತಮ ಅಸಿತ ದೇವಲ ಮಾರ್ಕಂಡೇಯ ಗಾಲವ ಮಹಾತೇಜಸ್ವಿಯಾದ ವಸಿಷ್ಠ ಔದ್ದಾಲಕ ಋಷಿ ಶೌನಕ ಪುತ್ರಸಹಿತರಾದ ತಪೋನಿಧಿಗಳಾದ ಜಪನಿಧಿಗಳಾದ ವ್ಯಾಸರು ಮುನಿಶ್ರೇಷ್ಠರಾದ ಭಾರದ್ವಾಜ ಮಹಾತಪಸ್ವಿಗಳಾದ ದೂರ್ವಾಸ ಈ ಎಲ್ಲ ತಪೋಧನರಾದ ಋಷಿಶ್ರೇಷ್ಠರು ನಿನ್ನನ್ನು ನಿರೀಕ್ಷಿಸುತ್ತಿದ್ದಾರೆ. ಮಹಾರಾಜನೇ ಇವರ ಜೊತೆಯಲ್ಲಿ ನೀನು ಈ ತೀರ್ಥಗಳಿಗೆ ಹೋಗು.

ಏಷ ವೈ ಲೋಮಶೋ ನಾಮ ದೇವರ್ಷಿರಮಿತದ್ಯುತಿಃ ।
ಸಮೇಷ್ಯತಿ ಮಹಾರಾಜ ತೇನ ಸಾರ್ಧಮನುವ್ರಜ ॥೧೦೯॥

ಎಲೈ ಮಹಾರಾಜನೇ, ಮಹಾಕಾಂತಿಯುಳ್ಳ ದೇವರ್ಷಿಗಳಾದ ಈ ಲೋಮಶ ಋಷಿಗಳು ಸದ್ಯದಲ್ಲಿಯೇ ನಿನ್ನ ಬಳಿಗೆ ಬರುತ್ತಾರೆ. ಅವರ ಜೊತೆಯಲ್ಲಿ ತೀರ್ಥಯಾತ್ರೆಯನ್ನು ಮಾಡು.

ಮಯಾ ಚ ಸಹ ಧರ್ಮಜ್ಞ ತೀರ್ಥಾನ್ಯೇತಾನ್ಯನುವ್ರಜ ।
ಪ್ರಾಪ್ಸ್ಯಸೇ ಮಹತೀಂ ಸಿದ್ಧಿಂ ಯಥಾ ರಾಜಾ ಮಹಾಭಿಷಕ್ ॥೧೧೦॥

ಯಥಾ ಯಯಾತಿರ್ಧರ್ಮಾತ್ಮಾ ಯಥಾ ರಾಜಾ ಪುರೂರವಾಃ ।
ತಥಾ ತ್ವಂ ಕುರುಶಾರ್ದೂಲ ಸ್ವೇನ ಧರ್ಮೇಣ ಶೋಭಸೇ ॥೧೧೧॥

ಎಲೈ ಧರ್ಮಜ್ಞನೇ, ಈ ತೀರ್ಥಯಾತ್ರೆಯನ್ನುಮಾಡು. ಮಹಾಭಿಷಕ್ ರಾಜನು ಪಡೆದಂತೆ ದೊಡ್ಡ ಸಿದ್ಧಿಯನ್ನು ಪಡೆಯುವಿ. ಎಲೈ ಕುರುಶಾರ್ದೂಲನೇ, ಧರ್ಮಾತ್ಮನಾದ ಯಯಾತಿಯಂತೆ ಪುರೂರವರಾಜನಂತೆ ನೀನು ನಿನ್ನ ಧರ್ಮದಿಂದ ಶೋಭಿಸುತ್ತೀಯೆ.

ಯಥಾ ಭಗೀರಥೋ ರಾಜಾ ಯಥಾ ರಾಮಶ್ಚ ವಿಶ್ರುತಃ ।
ತಥಾ ತ್ವಂ ಸರ್ವರಾಜಭ್ಯೋ ಭ್ರಾಜಸೇ ರಶ್ಮಿಮಾನಿವ ॥೧೧೨॥

ಭಗೀರಥರಾಜನಂತೆ ಪ್ರಖ್ಯಾತನಾದ ರಾಮನಂತೆ ನೀನು ಎಲ್ಲರಾಜರ ಮೇಲೆ ಸೂರ್ಯನಂತೆ ಶೋಭಿಸುತ್ತೀಯೆ.

ಯಥಾ ಮನುರ್ಯಥೇಕ್ಷ್ವಾಕುರ್ಯಥಾ ಪೂರುರ್ಮಹಾಯಶಾಃ।
ಯಥಾ ವೈನ್ಯೋ ಮಹಾತೇಜಾಃ ತಥಾ ತ್ವಮಪಿ ವಿಶ್ರುತಃ ॥೧೧೩॥

ಮನುವಿನಂತೆ ಇಕ್ಷ್ವಾಕುವಿನಂತೆ ಮಹಾಕೀರ್ತಿಶಾಲಿಯಾದ ಪೂರುವಿನಂತೆ ಮಹಾತೇಜಸ್ವಿಯಾದ ಪೃಥುಚಕ್ರವರ್ತಿಯಂತೆ ನೀನೂ ಸಹ ಪ್ರಖ್ಯಾತನಾಗುತ್ತೀಯೆ.

ಯಥಾ ಚ ವೃತ್ರಹಾ ಸರ್ವಾನ್ ಸಪತ್ನಾನದಹತ್ ಪುರಾ ।
ತಥಾ ಶತ್ರುಕ್ಷಯಂ ಕೃತ್ವಾ ಪ್ರಜಾಸ್ತ್ವಂ ಪಾಲಯಿಷ್ಯಸಿ ॥೧೧೪॥

ಹೇಗೆ ಹಿಂದೆ ಇಂದ್ರನು ಎಲ್ಲಾ ಶತ್ರುಗಳನ್ನೂ ದಹಿಸಿದನೋ ಅದರಂತೆ ನೀನೂ ಸಹ ಶತ್ರುಗಳನ್ನು ನಾಶಮಾಡಿ ಪ್ರಜೆಗಳನ್ನು ಪಾಲಿಸುವಿ.

ಸ್ವಧರ್ಮವಿಜಿತಾಮುರ್ವೀಂ ಪ್ರಾಪ್ಯ ರಾಜೀವಲೋಚನ ।
ಖ್ಯಾತಿಂ ಪ್ರಾಪ್ಸ್ಯಸಿ ಧರ್ಮೇಣ ಕಾರ್ತವೀರ್ಯಾರ್ಜುನೋ ಯಥಾ ॥

ಎಲೈ ರಾಜೀವಲೋಚನನೇ, ನೀನು ಧರ್ಮದಿಂದಲೇ ಭೂಮಿಯನ್ನು ಗೆದ್ದು ಅದನ್ನು ಪಡೆದು ಕಾರ್ತವೀರ್ಯಾರ್ಜುನನಂತೆ ನಿನ್ನ ಧರ್ಮದ ನಿಮಿತ್ತದಿಂದಲೇ ಕೀರ್ತಿಯನ್ನು ಹೊಂದುವಿ.

ವೈಶಂಪಾಯನಃ

ಏವಮಾಶ್ವಾಸ್ಯ ರಾಜಾನಂ ನಾರದೋ ಭಗವಾನೃಷಿಃ ।
ಅನುಜ್ಞಾಪ್ಯ ಮಹಾರಾಜ ತತ್ರೈವಾಂತರಧೀಯತ ॥೧೧೬॥

ಎಲೈ ಜನಮೇಜಯ ಮಹಾರಾಜನೇ, ಪೂಜ್ಯರಾದ ನಾರದರು ಧರ್ಮರಾಜನನ್ನು ಹೀಗೆ ಸಮಾಧಾನಪಡಿಸಿ ಅವನ ಅನುಮತಿಯನ್ನು ಪಡೆದು ಅಲ್ಲಿಯೇ ಅದೃಶ್ಯರಾದರು.

ಯುಧಿಷ್ಠಿರೋಽಪಿ ಧರ್ಮಾತ್ಮಾ ತಮೇವಾರ್ಥಮಚಿಂತಯತ್ ।
ತೀರ್ಥಯಾತ್ರಾಶ್ರಯಂ ಪುಣ್ಯಮ್ ಋಷೀಣಾಂ ಪ್ರತ್ಯವೇದಯತ್ ॥

ಧರ್ಮಾತ್ಮನಾದ ಯುಧಿಷ್ಠಿರನಾದರೂ ಅದೇ ಅರ್ಥವನ್ನು ಚಿಂತಿಸುತ್ತಾ ಸುತ್ತಲೂ ಇದ್ದ ಋಷಿಗಳಿಗೆ ತೀರ್ಥಯಾತ್ರೆಯಿಂದ ಉಂಟಾಗುವ ಪುಣ್ಯವನ್ನು ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಶಿತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೊಂದನೆಯ ಅಧ್ಯಾಯ

(ಅರ್ಜುನನಿಲ್ಲದೆ ಕಾಮ್ಯಕವನದಲ್ಲಿ ಇರಲು ತಮ್ಮ ಬೇಸರವನ್ನು ಸೂಚಿಸಿ ಬೇರೆವಾಸಸ್ಥಾನವನ್ನು ಸೂಚಿಸುವಂತೆ ಧೌಮ್ಯರಿಗೆ ಯುಧಿಷ್ಠಿರನ ಪ್ರಾರ್ಥನೆ.)

ವೈಶಂಪಾಯನಃ

ಭ್ರಾತೄಣಾಂ ಮತಮಾಜ್ಞಾಯ ನಾರದಸ್ಯ ಚ ಧೀಮತಃ ।
ಪಿತಾಮಹಸಮಂ ಧೌಮ್ಯಂ ಪ್ರಾಹ ರಾಜಾ ಯುಧಿಷ್ಠಿರಃ ॥೧॥

ರಾಜನಾದ ಯುಧಿಷ್ಠಿರನು ತನ್ನ ತಮ್ಮಂದಿರ ಅಭಿಪ್ರಾಯವನ್ನು ಮತ್ತು ಮೇಧಾವಿಗಳಾದ ನಾರದರ ಅಭಿಪ್ರಾಯವನ್ನು ತಿಳಿದು ಪಿತಾಮಹ ಸಮರಾದ ಧೌಮ್ಯರನ್ನು ಕುರಿತು ಮಾತನಾಡಿದನು.

ಮಯಾ ಸ ಪುರುಷವ್ಯಾಘ್ರೋ ಜಿಷ್ಣುಃ ಸತ್ಯಪರಾಕ್ರಮಃ ।
ಅಸ್ತ್ರಹೇತೋರ್ಮಹಾಬಾಹುರಮಿತಾತ್ಮಾ ಪ್ರವಾಸಿತಃ ॥೨॥

ನಾನು ಸತ್ಯಪರಾಕ್ರಮನಾದ ಮಹಾಬಾಹುವಾದ ಅಮಿತಾತ್ಮನಾದ ಪುರುಷವ್ಯಾಘ್ರನಾದ ಅರ್ಜುನನನ್ನು ಅಸ್ತ್ರವನ್ನು ಸಂಪಾದಿಸುವ ಸಲುವಾಗಿ ಕಳುಹಿಸಿದ್ದೇನೆ.

ಸ ಹಿ ವೀರೋಽನುರಕ್ತಶ್ಚ ಸಮರ್ಥಶ್ಚ ತಪೋಧನಃ ।
ಕೃತೀ ಚ ಭೃಶಮತ್ಯರ್ಥಂ ವಾಸುದೇವ ಇವ ಪ್ರಭುಃ ॥೩॥

ಅವನಾದರೂ ಪ್ರಭುವಾದ ವಾಸುದೇವನಂತೆ ವೀರನೂ ನಮ್ಮಲ್ಲಿ ಪ್ರೀತಿಯುಕ್ತನೂ ಸಮರ್ಥನೂ ತಪಸ್ವಿಯೂ ಮತ್ತು ಅತ್ಯಂತ ನಿಪುಣನೂ ಆಗಿದ್ದಾನೆ.

ಅಹಂ ಹ್ಯೇತಾವುಭೌ ಬ್ರಹ್ಮನ್ ಕೃಷ್ಣಾವರಿನಿಷೂದನೌ ।
ಅಭಿಜಾನಾಮಿ ವಿಕ್ರಾಂತೌ ತಥಾ ವ್ಯಾಸಃ ಪರಂತಪೌ ॥೪॥

ತ್ರಿಯುಗಂ ಪುಂಡರೀಕಾಕ್ಷೌ ವಾಸುದೇವಧನಂಜಯೌ ।
ನಾರದೋಽಪಿ ತಥಾ ವೇದ ಯೋಽಪ್ಯಶಂಸತ್ ಸದಾ ಮಮ ॥೫॥

ಎಲೈ ಬ್ರಾಹ್ಮಣರೇ, ನಾನೂ ಮತ್ತು ಹಾಗೆಯೇ ವ್ಯಾಸರೂ ಸಹ ಪರಂತಪರಾದ ವಿಕ್ರಮಶಾಲಿಗಳಾದ ಶತ್ರು ಸಂಹಾರಕರಾದ ಈ ಇಬ್ಬರು ಕೃಷ್ಣರಾದ ವಾಸುದೇವ ಮತ್ತು ಧನಂಜಯರನ್ನು ಮೂರು ಯುಗಗಳಲ್ಲಿ ಅವತರಿಸುವ ಪುಂಡರೀಕಾಕ್ಷರೆಂದು ತಿಳಿದಿದ್ದೇನೆ. ನಾರದರೂ ಹಾಗೆಯೇ ತಿಳಿದಿದ್ದಾರೆ. ಅವರು ನನಗೆ ಯಾವಾಗಲೂ ಹೀಗೆ ಹೇಳುತ್ತಿದ್ದಾರೆ.

ತಥಾऽಹಮಭಿಜಾನಾಮಿ ನರನಾರಾಯಣಾವೃಷೀ ।
ಶಕ್ತೋऽಯಮಿತ್ಯತೋ ಮತ್ವಾ ಮಯಾ ಸಂಪ್ರೇಷಿತೋऽರ್ಜುನಃ ॥೬॥

ಆದರಂತೆ ನಾನು ಇವರಿಬ್ಬರು ನರನಾರಾಯಣ ಋಷಿಗಳು ಎಂದು ತಿಳಿದಿದ್ದೇನೆ. ಇವನು ಸಮರ್ಥನಾಗಿದ್ದಾನೆ ಎಂಬ ಕಾರಣದಿಂದಲೇ ನಾನು ಅರ್ಜುನನ್ನು ಕಳುಹಿಸಿದೆ.

ಇಂದ್ರಾದನವಮಃ ಶಕ್ರಂ ಸುರಸೂನುಃ ಸುರಾಧಿಪಮ್ ।
ದ್ರಷ್ಟುಮಸ್ತ್ರಾಣಿ ಚಾದಾತುಮಿಂದ್ರಾದಿತಿ ವಿವಾಸಿತಃ ॥೭॥

ಇಂದ್ರನಿಗಿಂತ ಕಡಿಮೆಯಿಲ್ಲದ ದೇವಪುತ್ರನಾದ ಅರ್ಜುನನು ದೇವರಾಜನಾದ ಇಂದ್ರನನ್ನು ನೋಡಲು ಮತ್ತು ಅವನಿಂದ ಅಸ್ತ್ರಗಳನ್ನು ಸ್ವೀಕರಿಸಲು ಸಮರ್ಥನಾಗಿದ್ದಾನೆ ಎಂದು ತಿಳಿದು ನಾನು ಅವನನ್ನು ಕಳುಹಿಸಿದೆ.

ಭೀಷ್ಮದ್ರೋಣಾವತಿರಥೌ ಕೃಪೋ ದ್ರೌಣಿಶ್ಚ ದುರ್ಜಯಃ ।
ಧೃತರಾಷ್ಟ್ರಸ್ಯ ಪುತ್ರೇಣ ಧೃತಾ ಯುಧಿ ಮಹಾಬಲಾಃ ॥೮॥

ಯುದ್ಧದಲ್ಲಿ ಮಹಾಬಲರಾದ ಅತಿರಥರಾದ ಭೀಷ್ಮದ್ರೋಣರನ್ನು ಕೃಪರನ್ನು ದುರ್ಜಯರಾದ ಅಶ್ವತ್ಥಾಮರನ್ನು ದುರ್ಯೋಧನನು ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೆ.

ಸರ್ವೇ ವೇದವಿದಃ ಶೂರಾಃ ಸರ್ವೇऽಸ್ತ್ರಕುಶಲಾ ರಣೇ ।
ಯೋದ್ಧುಕಾಮಾಶ್ಚ ಪಾರ್ಥೇನ ಸತತಂ ವೈ ಮಹಾರಥಾಃ ॥೯॥

ಎಲ್ಲರೂ ವೇದವೇತ್ತರು ಶೂರರು ಯುದ್ಧದಲ್ಲಿ ಅಸ್ತ್ರಕುಶಲರು ಎಲ್ಲರೂ ಮಹಾರಥರೆಂದು ಪ್ರಸಿದ್ಧರಾದವರು. ಎಲ್ಲರೂ ದಣಿವನ್ನು ಮೀರಿದವರು. ಆ ಮಹಾರಥರೆಲ್ಲರೂ ಪಾರ್ಥನ ಜೊತೆಯಲ್ಲಿ ಯುದ್ಧವನ್ನು ಮಾಡಲು ಸತತವಾಗಿ ಬಯಸುವವರು.

ಯೋಽಸ್ತ್ರವೇಗಾನಿಲಬಲಃ ಶರಾರ್ಚಿಸ್ತೃಲನಿಃಸ್ವನಃ ।
ರಜೋಧೂಮ್ರೋಽಸ್ತ್ರಸಂಪಾತೋ ಧಾರ್ತರಾಷ್ಟ್ರಾನಿಲೋದ್ಧತಃ ॥೧೦॥

ನಿಸೃಷ್ಟ ಇವ ಕಾಲೇನ ಯುಗಾಂತಜ್ವಲನೋ ಮಹಾನ್ ।
ಮಮ ಸೈನ್ಯಮಯಂ ಕಕ್ಷಂ ಪ್ರಧಕ್ಷ್ಯತಿ ಮಹಾಬಲಃ ॥೧೧॥

ಅಸ್ತ್ರವೇಗವೆಂಬ ವಾಯುಬಲವುಳ್ಳ, ಬಾಣಗಳೆಂಬ ಕಿಡಿಗಳುಳ್ಳ, ತಲಸ್ವನಗಳಿಂದ ಕೂಡಿದ, ಧೂಳಿನ ಧೂಮದಿಂದ ಕೂಡಿದ, ದುರ್ಯೋಧನಾನಿಲದಿಂದ ಪ್ರೇರಿಸಲ್ಪಟ್ಟ, ಕಾಲನಾಮಕ ಪರಮಾತ್ಮನಿಂದಲೂ ಪ್ರೇರಿಸಲ್ಪಟ್ಟ, ಯಾವ ಅಸ್ತ್ರ ಸಂಪಾತವು ಪ್ರಳಯಕಾಲದ ಮಹಾಗ್ನಿಯಂತೆ ಮಹಾಬಲವುಳ್ಳದ್ದಾಗಿ ನನ್ನ ಸೈನ್ಯವೆಂಬ ಹುಲ್ಲುಗಾವಲನ್ನು ಸುಡುವುದೋ,

ತಂ ಸ ಕೃಷ್ಣಾನಿಲೋದ್ಧೂತೋ ದಿವ್ಯಾಸ್ತ್ರಜಲದೋ ಮಹಾನ್ ।
ಶ್ವೇತವಾಜಿಬಲಾಕಾಭೃದ್ ಗಾಂಡೀವೇಂದ್ರಾಯುಧೋಜ್ಜ್ವಲಃ ॥೧೨॥

ಸತತಂ ಶರಧಾರಾಭಿಃ ಪ್ರದೀಪ್ತಂ ಕರ್ಣಪಾವಕಮ್ ।
ಉದೀರ್ಣೋಽರ್ಜುನಮೇಘೋಽಯಂ ಶಮಯಿಷ್ಯತಿ ಸಂಯುಗೇ ॥

ಅಂತಹ ಅಗ್ನಿಯನ್ನು ಕೃಷ್ಣನೆಂಬ ವಾಯುವಿನಿಂದ ಪ್ರೇರಿಸಲ್ಪಟ್ಟ ದಿವ್ಯಾಸ್ತ್ರಗಳೆಂಬ ಮಹಾಮೋಡಗಳು ಶ್ವೇತಾಶ್ವಗಳೆಂಬ ಬಲಾಕಪಕ್ಷಿಗಳಿಂದ ಕೂಡಿದ ಗಾಂಡೀವವೆಂಬ ಇಂದ್ರಧನುಸ್ಸಿನಿಂದ ಪ್ರಕಾಶಿಸುವ ಪ್ರದೀಪ್ತವಾದ ಕರ್ಣನೆಂಬ ಆ ಅಗ್ನಿಯನ್ನು ಈ ಅಭಿವೃದ್ಧವಾದ ಅರ್ಜುನಮೇಘವು ಸತತವಾದ ತನ್ನ ಶರಧಾರೆಯಿಂದ ಯುದ್ಧದಲ್ಲಿ ಶಾಂತಗೊಳಿಸುವುದು.

ಸ ಸಾಕ್ಷಾದೇವ ಸರ್ವಾಣಿ ಶಕ್ರಾತ್ ಪರಪುರಂಜಯಃ ।
ದಿವ್ಯಾನ್ಯಸ್ತ್ರಾಣಿ ಬೀಭತ್ಸುರ್ಯಥಾವತ್ ಪ್ರತಿಪದ್ಯತೇ ॥೧೪॥

ಪರಪುರಂಜಯನಾದ ಆ ಅರ್ಜುನನು ಇಂದ್ರನಿಂದ ಎಲ್ಲ ದಿವ್ಯಾಸ್ತ್ರಗಳನ್ನು ಸಾಕ್ಷಾತ್ತಾಗಿಯೇ ಪಡೆಯುತ್ತಾನೆ.

ಅಲಂ ಸ ತೇಷಾಂ ಸರ್ವೇಷಾಮಿತಿ ಮೇ ಧೀಯತೇ ಮತಿಃ ।
ನಾಸ್ತಿ ತ್ವತಿಕ್ರಿಯಾ ತಸ್ಯ ರಣೇಽರೀಣಾಂ ಪ್ರತಿಕ್ರಿಯಾ ॥೧೫॥

ಅವರೆಲ್ಲರನ್ನೂ ಎದುರಿಸಲು ಅರ್ಜುನನೊಬ್ಬನೇ ಸಮರ್ಥನೆಂದು ನನ್ನ ಅಭಿಪ್ರಾಯ. ಯುದ್ಧದಲ್ಲಿ ಶತ್ರುಗಳ ಯಾವ ಪ್ರತಿಕ್ರಿಯೆಯೂ ಅರ್ಜುನನ ಕೌಶಲವನ್ನು ಮೀರುವುದಿಲ್ಲ.

ತೇ ವಯಂ ಪಾಂಡವಂ ಸರ್ವೇ ಗೃಹೀತಾಸ್ತ್ರಂ ಧನಂಜಯಮ್।
ದ್ರಷ್ಟಾರೋ ನ ಹಿ ಬೀಭತ್ಸುರ್ಭಾರಮುದ್ಯಮ್ಯ ಸೀದತಿ ॥೧೬॥

ಅಂತಹ ನಾವೆಲ್ಲರೂ ಅಸ್ತ್ರಗಳನ್ನು ಸಂಪಾದಿಸಿದ ಪಾಂಡುಪುತ್ರನಾದ ಧನಂಜಯನನ್ನು ನೋಡಲು ಕಾತರರಾಗಿದ್ದೆವೆ. ಅರ್ಜುನನು ಭಾರವು ಒದಗಿದಾಗ ವಿಷಾದವನ್ನು ಪಡುವವನಲ್ಲ.

ವಯಂ ತು ತಮೃತೇ ವೀರಂ ವನೇಽಸ್ಮಿನ್ ದ್ವಿಪದಾಂ ವರಮ್ ।
ಅವಧಾನಂ ನ ಗಚ್ಛಾಮಃ ಕಾಮ್ಯಕೇ ಸಹ ಕೃಷ್ಣಯಾ ॥೧೭॥

ನಾವಾದರೋ ನರಶ್ರೇಷ್ಠನಾದ ವೀರನಾದ ಅರ್ಜುನನಿಲ್ಲದೆ ಈ ಕಾಮ್ಯಕವನದಲ್ಲಿ ದ್ರೌಪದಿಯನ್ನೂ ಸೇರಿಸಿ ಮನಸ್ಸಿಗೆ ಸಮಾಧಾನವನ್ನೇ ಪಡೆಯುತ್ತಿಲ್ಲ.

ಭವಾನನ್ಯದ್ವನಂ ಸಾಧು ಬಹ್ವನ್ನಂ ಜಲವಚ್ಚುಚಿ ।
ಆಖ್ಯಾತು ರಮಣೀಯಂ ಚ ಸೇವಿತಂ ಪುಣ್ಯಕರ್ಮಭಿಃ ॥೧೮॥

ತಾವು ಬಹಳ ಅನ್ನ ಮತ್ತು ನೀರುಗಳಿರುವ ಪವಿತ್ರವಾದ ಪುಣ್ಯಕರ್ಮವುಳ್ಳ ಸಜ್ಜನರಿಂದ ಸೇವಿತವಾದ ಇನ್ನೊಂದು ರಮಣೀಯವಾದ ವನವನ್ನು ಹೇಳಬೇಕು.

ಯತ್ರ ಕಂಚಿದ್ವಯಂ ಕಾಲಂ ವಸಂತಃ ಸತ್ಯವಿಕ್ರಮಮ್ ।
ಪ್ರತೀಕ್ಷಾಮೋಽರ್ಜುನಂ ವೀರಂ ವಪ್ತುಕಾಮ ಇವಾಂಬುದಮ್ ॥೧೯॥

ಬೀಜವನ್ನು ಬಿತ್ತುವವನು ಮಳೆಯನ್ನು ನಿರೀಕ್ಷಿಸುವಂತೆ ನಾವು ಸತ್ಯವಿಕ್ರಮನಾದ ವೀರನಾದ ಅರ್ಜುನನನ್ನು ನಿರೀಕ್ಷಿಸುತ್ತಾ ಅಲ್ಲಿ ಸ್ವಲ್ಪ ಸಮಯ ವಾಸಮಾಡುತ್ತೇವೆ.

ವಿವಿಧಾನಾಶ್ರಮಾನ್ ಕಾಂಶ್ಚಿದ್ ದ್ವಿಜಾತಿಭ್ಯಃ ಪರಿಶ್ರಿತಾನ್ ।
ಸರಾಂಸಿ ಸರಿತಶ್ಚೈವ ರಮಣೀಯಾಂಶ್ಚ ಪರ್ವತಾನ್ ॥೨೦॥

ಆಚಕ್ಷ್ವ ನ ಹಿ ಮೇ ಬ್ರಹ್ಮನ್ ರೋಚತೇ ತಮೃತೇಽರ್ಜುನಮ್ ।
ವನೇಽಸ್ಮಿನ್ ಕಾಮ್ಯಕೇ ವಾಸೋ ಗಚ್ಛಾಮೋಽನ್ಯಾಂ ದಿಶಂ ಪ್ರತಿ ॥೨೧॥

ಎಲೈ ಬ್ರಾಹ್ಮಣರೇ, ಬ್ರಾಹ್ಮಣರಿಂದ ಆಶ್ರಿತವಾದ ಕೆಲವು ಬೇರೆಬೇರೆ ಆಶ್ರಮಗಳನ್ನು ಸರೋವರಗಳನ್ನು ನದಿಗಳನ್ನು ರಮಣೀಯವಾದ ಪರ್ವತಗಳನ್ನು ತಿಳಿಸಿ. ಅರ್ಜುನನಿಲ್ಲದೆ ಈ ಕಾಮ್ಯಕವನದಲ್ಲಿ ವಾಸವು ನಮಗೆ ಇಷ್ಟವಾಗುತ್ತಿಲ್ಲ. ಬೇರೆ ದಿಕ್ಕಿಗೆ ಹೋಗೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾಶಿತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೆರಡನೆಯ ಅಧ್ಯಾಯ

(ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ಪೂರ್ವದಿಕ್ಕಿನ ತೀರ್ಥಗಳ ವರ್ಣನೆ.)

ವೈಶಂಪಾಯನಃ

ತಾನ್ ಸರ್ವಾನುತ್ಸುಕಾನ್ ದೃಷ್ಟ್ವಾ ಪಾಂಡವಾನ್ ದೀನಚೇತಸಃ ।
ಆಶ್ವಾಸಯಂಸ್ತತೋ ಧೌಮ್ಯೋ ಬೃಹಸ್ಪತಿಸಮೋಽಬ್ರವೀತ್ ॥೧॥

ಅರ್ಜುನನನ್ನು ನೋಡಲು ಉತ್ಸುಕರಾಗಿ ದೀನಮನಸ್ಕರಾದ ಆ ಪಾಂಡವರನ್ನು ನೋಡಿ ಬೃಹಸ್ಪತಿಸಮಾನರಾದ ಧೌಮ್ಯರು ಅವರನ್ನು ಸಮಾಧಾನಪಡಿಸುತ್ತಾ ಮಾತನಾಡಿದರು.

ಬ್ರಾಹ್ಮಣಾನುಮತಾನ್ ಪುಣ್ಯಾನ್ ಆಶ್ರಮಾನ್ ಭರತರ್ಷಭ ।
ಅಥ ತೀರ್ಥಾನಿ ಶೈಲಾಂಶ್ಚ ಶೃಣು ಮೇ ವದತೋ ನೃಪ ॥೨॥

ಎಲೈ ಭರತರ್ಷಭನೇ, ಎಲೈ ರಾಜನೇ, ಬ್ರಾಹ್ಮಣರಿಗೆ ಸಮ್ಮತವಾದ ಪುಣ್ಯಾಶ್ರಮಗಳನ್ನು ತೀರ್ಥಗಳನ್ನು ಮತ್ತು ಪರ್ವತಗಳನ್ನು ಹೇಳುತ್ತೇನೆ. ಅದನ್ನು ಕೇಳು.

ಪೂರ್ವಂ ಪ್ರಾಚೀಂ ದಿಶಂ ಗಚ್ಛೇದ್ ಬ್ರಹ್ಮರ್ಷಿಗಣಸೇವಿತಾಮ್।
ರಮ್ಯಾಂ ತೇ ಕೀರ್ತಯಿಷ್ಯಾಮಿ ಯುಧಿಷ್ಠಿರ ಯಥಾಶ್ರುತಿ ॥೩॥

ಮೊದಲು ಬ್ರಹ್ಮರ್ಷಿಗಣಸೇವಿತವಾದ ಪೂರ್ವದಿಕ್ಕಿಗೆ ಹೋಗಬೇಕು. ಯುಧಿಷ್ಠಿರನೇ ನನ್ನ ಸ್ಮರಣೆಯಿದ್ದಪ್ಪು ನಿನಗೆ ಆ ಸುಂದರವಾದ ಪೂರ್ವದಿಕ್ಕನ್ನು ತಿಳಿಸುವೆನು.

ತಸ್ಯಾಂ ದೇವರ್ಷಿಜುಷ್ಟಾಯಾಂ ನೈಮಿಶಂ ನಾಮ ಭಾರತ ।
ಯತ್ರ ತೀರ್ಥಾನಿ ದೇವಾನಾಂ ಸುಪುಣ್ಯಾನಿ ಪೃಥಕ್‌ಪೃಥಕ್ ॥೪॥

ಎಲೈ ಭಾರತನೇ, ಅಲ್ಲಿ ದೇವರ್ಷಿಗಳಿಂದ ಸೇವಿತವಾದ ನೈಮಿಶಾರಣ್ಯವಿದೆ. ಅಲ್ಲಿ ದೇವತೆಗಳ ಪವಿತ್ರವಾದ ಬೇರೆಬೇರೆ ತೀರ್ಥಗಳಿವೆ.

ಯತ್ರ ಸಾ ಗೋಮತೀ ನಾಮ ಪುಣ್ಯಾ ದೇವರ್ಷಿಸೇವಿತಾ ।
ಯಜ್ಞಭೂಮಿಶ್ಚ ದೇವಾನಾಂ ಶಾಮಿತ್ರಂ ಚ ವಿವಸ್ವತಃ ॥೫॥

ಅಲ್ಲಿ ದೇವರ್ಷಿಗಳಿಂದ ಸೇವಿತವಾದ ಪವಿತ್ರವಾದ ಗೋಮತಿಯಿದೆ. ದೇವತೆಗಳ ಯಜ್ಞಭೂಮಿ ಇದೆ. ಸೂರ್ಯನು ಅಲ್ಲಿ ಶಾಂತನಾಗಿರುತ್ತಾನೆ.

ಯಸ್ಯಾಂ ಗಿರಿವರಃ ಪುಣ್ಯೋ ಗಯೋ ರಾಜರ್ಷಿಸೇವಿತಃ ।
ಶಿವಂ ಬ್ರಹ್ಮಸರೋ ಯತ್ರ ಸೇವಿತಂ ತ್ರಿದಶರ್ಷಿಭಿಃ ॥೬॥

ಅಲ್ಲಿ ಪವಿತ್ರವಾದ ರಾಜರ್ಷಿಗಳಿಂದ ಸೇವಿತವಾದ ಗಯವೆಂಬ ಶ್ರೇಷ್ಠವಾದ ಪರ್ವತವಿದೆ. ಅಲ್ಲಿ ದೇವಋಷಿಗಳಿಂದ ಸೇವಿತವಾದ ಮಂಗಳವಾದ ಬ್ರಹ್ಮಸರೋವರವಿದೆ.

ಯದರ್ಥೇ ಪುರುಷವ್ಯಾಘ್ರ ಕೀರ್ತಯಂತಿ ಪುರಾತನಾಃ ।
ವಿಷ್ಣವ್ಯಾ ಬಹವಃ ಪುತ್ರಾ ಯದಿ ಕಶ್ಚಿದ್ ಗಯಾಂ ವ್ರಜೇತ್ ॥೭॥

ಎಲೈ ಪುರುಷವ್ಯಾಘ್ರನೇ, ಆ ಗಯಾಕ್ಷೇತ್ರದ ಸಲುವಾಗಿಯೇ ಪ್ರಾಚೀನರು ಒಬ್ಬ ಮಗನಾದರೂ ಗಯಾಯಾತ್ರೆಯನ್ನು ಮಾಡಬಹುದೆಂಬ ಕಾರಣದಿಂದ ಅನೇಕ ಮಕ್ಕಳನ್ನು ಬಯಸಬೇಕು ಎಂದು ಹೇಳುತ್ತಾರೆ.

ಮಹಾನದೀ ಚ ತತ್ರೈವ ತಥಾ ಹಯಶಿರೋ ನೃಪ ।
ಯತ್ರಾಸೌ ಕೀರ್ತ್ಯತೇ ವಿಪ್ರೈರಕ್ಷಯ್ಯಕರಣೋ ವಟಃ ॥೮॥

ಎಲೈ ರಾಜನೇ, ಅಲ್ಲಿ ಮಹಾನದಿಯೂ ಮತ್ತು ಹಯಶಿರವೂ ಇವೆ. ಅಕ್ಷಯಫಲವನ್ನು ಉಂಟುಮಾಡುವುದೆಂದು ಬ್ರಾಹ್ಮಣರು ಹೇಳುವ ವಟವೃಕ್ಷವೂ ಅಲ್ಲಿದೆ.

ಯತ್ರ ದತ್ತಂ ಪಿತೃಭ್ಯೋಽನ್ನಮಕ್ಷಯ್ಯಂ ಭವತಿ ಪ್ರಭೋ ।
ಸಾ ಚ ಪುಣ್ಯಜಲಾ ತತ್ರ ಫಲ್ಗುನಾಮಾ ಮಹಾನದೀ ॥೯॥

ಪಿತೃಗಳಿಗೆ ಕೊಡಲ್ಪಟ್ಟ ಅಲ್ಲಿಯ ಅನ್ನವು ಅಕ್ಷಯವಾಗುತ್ತದೆ. ಆ ಫಲ್ಗುವೆಂಬ ಮಹಾನದಿಯೂ ಸಹ ಪವಿತ್ರವಾದ ಜಲವುಳ್ಳದ್ದಾಗಿದೆ.

ಬಹುಮೂಲಫಲಾ ಚೈವ ಕೌಶಿಕೀ ಭರತರ್ಷಭ ।
ವಿಶ್ವಾಮಿತ್ರೋಽಭ್ಯಗಾದ್ಯತ್ರ ಬ್ರಾಹ್ಮಣತ್ವಂ ತಪೋಧನಃ ॥೧೦॥

ಎಲೈ ಭರತರ್ಷಭನೇ, ಬಹುಮೂಲಫಲಗಳಿರುವ ಕೌಶಿಕೀನದಿಯು ಅಲ್ಲಿದೆ. ಅಲ್ಲಿ ತಪೋಧನರಾದ ವಿಶ್ವಾಮಿತ್ರರು ಬ್ರಾಹ್ಮಣ್ಯವನ್ನು ಪಡೆದರು.

ಗಂಗಾ ಯತ್ರ ನದೀ ಪುಣ್ಯಾ ಯಸ್ಯಾಸ್ತೀರೇ ಭಗೀರಥಃ ।
ಆಯಜತ್ ತಾತ ಬಹುಭಿಃ ಕ್ರತುಭಿರ್ಭೂರಿದಕ್ಷಿಣೈಃ ॥೧೧॥

ಪ್ರೀತಿಪಾತ್ರನೇ, ಅಲ್ಲಿ ಪವಿತ್ರವಾದ ಗಂಗಾನದಿಯು ಇದೆ. ಅದರ ತೀರದಲ್ಲಿ ಭಗೀರಥನು ಬಹಳ ದಕ್ಷಿಣೆಗಳಿಂದ ಕೂಡಿದ ಅನೇಕ ಯಾಗಗಳನ್ನು ಮಾಡಿದನು.

ಪಾಂಚಾಲೇಷು ಚ ಕೌರವ್ಯ ಕಥಯಂತ್ಯುತ್ಪಲಾವತಮ್ ।
ವಿಶ್ವಾಮಿತ್ರೋಽಯಜದ್ಯತ್ರ ಶಕ್ರೇಣ ಸಹ ಕೌಶಿಕಃ ॥೧೨॥

ಎಲೈ ಕೌರವ್ಯನೇ, ಪಾಂಚಾಲದೇಶದಲ್ಲಿ ಉತ್ಪಲಾವತವೆಂಬ ಪ್ರದೇಶವನ್ನು ಎಲ್ಲರೂ ಹೇಳುತ್ತಾರೆ. ಅಲ್ಲಿ ಕೌಶಿಕನಾದ ವಿಶ್ವಾಮಿತ್ರರು ಇಂದ್ರನ ಜೊತೆಯಲ್ಲಿ ಯಾಗವನ್ನು ಮಾಡಿದರು.

ತತ್ರಾನುವಂಶಂ ಭಗವಾನ್ ಜಾಮದಗ್ನ್ಯಸ್ತಥಾ ಜಗೌ ।
ವಿಶ್ವಾಮಿತ್ರಸ್ಯ ತಾಂ ದೃಷ್ಟ್ವಾ ವಿಭೂತಿಮತಿಮಾನುಷೀಮ್ ॥೧೩॥

ವಿಶ್ವಾಮಿತ್ರರ ಅತಿಮಾನುಷವಾದ ಆ ಸಾಮರ್ಥ್ಯವನ್ನು ನೋಡಿ ಪೂಜ್ಯರಾದ ಪರಶುರಾಮರು ಅಲ್ಲಿ ಅವರ ಅನುವಂಶವನ್ನು ಕೀರ್ತಿಸಿದರು.

ಕನ್ಯಾಕುಬ್ಜೇऽಪಿಬತ್ ಸೋಮಮಿಂದ್ರೇಣ ಸಹ ಕೌಶಿಕಃ ।
ತತಃ ಕ್ಷತ್ರಾದಪಾಕ್ರಾಮದ್ ಬ್ರಾಹ್ಮಣೋऽಸ್ಮೀತಿ ಚಾಬ್ರವೀತ್ ॥೧೪॥

ಪವಿತ್ರಮೃಷಿಭಿರ್ಜುಷ್ಟಂ ಪುಣ್ಯಂ ಪಾವನಮುತ್ತಮಮ್ ।
ಗಂಗಾಯಮುನಯೋರ್ವೀರ ಸಂಗಮಂ ಲೋಕವಿಶ್ರುತಮ್ ॥೧೫॥

ಕನ್ಯಾಕುಬ್ಜದಲ್ಲಿ ವಿಶ್ವಾಮಿತ್ರರು ಇಂದ್ರನಜೊತೆಯಲ್ಲಿ ಸೋಮಪಾನವನ್ನುಮಾಡಿ ಕ್ಷತ್ರಿಯತ್ವವನ್ನು ತೊರೆದು ಬ್ರಾಹ್ಮಣನಾಗಿದ್ದೇನೆ ಎಂದು ಹೇಳುತ್ತಾ ಹೊರಗೆ ಬಂದರು. ಎಲೈ ವೀರನೇ, ಗಂಗಾಯಮುನಾಸಂಗಮವು ಪವಿತ್ರವಾದುದು. ಋಷಿಗಳಿಂದ ಸೇವಿತವಾದುದು. ಪುಣ್ಯಪ್ರದವಾದುದು ಶ್ರೇಷ್ಠವಾದುದು ಮತ್ತು ಲೋಕದಲ್ಲಿ ಪ್ರಖ್ಯಾತವಾದುದು.

ಯತ್ರಾಯಜತ ಭೂತಾತ್ಮಾ ಪೂರ್ವಮೇವ ಪಿತಾಮಹಃ ।
ಪ್ರಯಾಗಮಿತಿ ವಿಖ್ಯಾತಂ ತಸ್ಮಾತ್ ಭರತಸತ್ತಮ ॥೧೬॥

ಭರತಸತ್ತಮನೇ, ಅಲ್ಲಿ ಸರ್ವಜೀವಸ್ವಾಮಿಯಾದ ಬ್ರಹ್ಮದೇವರು ಮೊದಲೇ ಯಾಗವನ್ನು ಮಾಡಿದರು. ಆ ಕಾರಣದಿಂದ ಆದೇಶವು ಪ್ರಯಾಗವೆಂದು ಪ್ರಖ್ಯಾತವಾಗಿದೆ.

ಅಗಸ್ತ್ಯಸ್ಯ ಚ ರಾಜೇಂದ್ರ ತತ್ರಾಶ್ರಮಪದಂ ಮಹತ್ ।
ಹಿರಣ್ಯಬಿಂದುಃ ಕಥಿತೋ ಗಿರೌ ಕಾಳಾಂಜರೇ ನೃಪ ॥೧೭॥

ರಾಜೇಂದ್ರನೇ, ಅಲ್ಲಿ ಅಗಸ್ತ್ಯರ ಶ್ರೇಷ್ಠವಾದ ಆಶ್ರಮಸ್ಥಾನವಿದೆ. ಎಲೈ ರಾಜನೇ ಅಲ್ಲಿ ಕಾಳಾಂಜರ ಪರ್ವತವಿದೆ. ಅಲ್ಲಿ ಹಿರಣ್ಯಬಿಂದು ಎಂಬ ರಾಜರ್ಷಿಗಳು ಇದ್ದಾರೆ.

ಅತ್ಯನ್ಯಃ ಪರ್ವತೋ ರಾಜನ್ ಪುಣ್ಯೋ ಗಿರಿವರಃ ಶುಭಃ ।
ಮಹೇಂದ್ರೋ ನಾಮ ಕೌರವ್ಯ ಭಾರ್ಗವಸ್ಯ ಮಹಾತ್ಮನಃ ॥೧೮॥

ಎಲೈ ರಾಜನೇ, ಅಲ್ಲಿ ಎಲ್ಲ ಪರ್ವತಗಳನ್ನು ಮೀರಿಸಿದ ಶ್ರೇಷ್ಠವಾದ ಪುಣ್ಯಪ್ರದವಾದ ಪವಿತ್ರವಾದ ಮಹಾತ್ಮರಾದ ಪರಶುರಾಮದೇವರ ವಾಸಸ್ಥಾನವಾದ ಮಹೇಂದ್ರ ಪರ್ವತವಿದೆ.

ಅಯಜತ್ ತತ್ರ ಕೌಂತೇಯ ಪೂರ್ವಮೇವ ಪಿತಾಮಹಃ ।
ಯತ್ರ ಭಾಗೀರಥೀ ಗಂಗಾ ಸದಸ್ಯಾಸೀದ್ ಯುಧಿಷ್ಠಿರ ॥೧೯॥

ಕೌಂತೇಯನೇ, ಬ್ರಹ್ಮದೇವರು ಅಲ್ಲಿಮೊದಲೇ ಒಂದು ಯಜ್ಞವನ್ನು ಮಾಡಿದರು. ಯುಧಿಷ್ಠಿರನೇ, ಆಗ ಭಾಗೀರಥಿಯಾದ ಗಂಗೆಯು ಅಲ್ಲಿ ಸದಸ್ಸಿನಲ್ಲಿ ಸನ್ನಿಹಿತಳಾಗಿದ್ದಳು.

ಯತ್ರ ಸಾ ಬ್ರಹ್ಮಶಾಲೇತಿ ಪುಣ್ಯಾ ಖ್ಯಾತಾ ವಿಶಾಂಪತೇ ।
ಧೂತಪಾಪ್ಮಭಿರಾಕೀರ್ಣಾ ಪುಣ್ಯಂ ತಸ್ಯಾಶ್ಚ ದರ್ಶನಮ್ ॥೨೦॥

ರಾಜನೇ, ಅಲ್ಲಿ ಬ್ರಹ್ಮಶಾಲೆಯೆಂಬ ಪವಿತ್ರಸ್ಥಳವಿದೆ. ಪಾಪರಹಿತರಾದ ಸಜ್ಜನರಿಂದ ಸಹಿತವಾದ ಅದರ ದರ್ಶನವೂ ಸಹ ಪುಣ್ಯಪ್ರದವಾದುದು.

ಪವಿತ್ರೋ ಮಂಗಲೀಯಶ್ಚ ಖ್ಯಾತೋ ಲೋಕೇ ಸನಾತನಃ ।
ಕೇದಾರಶ್ಚ ಮತಂಗಸ್ಯ ಮಹಾನಾಶ್ರಮ ಉತ್ತಮಃ ॥೨೧॥

ಪವಿತ್ರವೂ ಮಂಗಳವೂ ಲೋಕದಲ್ಲಿ ಪ್ರಖ್ಯಾತವೂ ಪುರಾತನವೂ ಆದ ಶ್ರೇಷ್ಠವಾದ ಮತಂಗಋಷಿಗಳ ಸರೋವರವು ಮತ್ತು ದೊಡ್ಡ ಆಶ್ರಮವು ಅಲ್ಲಿದೆ.

ಕುಂಡೋದಃ ಪರ್ವತೋ ರಮ್ಯೋ ಬಹುಮೂಲಫಲೋದಕಃ ।
ನೈಷಧಸ್ಯರ್ಷಿತೋ ಯತ್ರ ಜಲಂ ಶರ್ಮ ಚ ಲಬ್ಧವಾನ್ ॥೨೨॥

ಬಹುಮೂಲಫಲಜಲಗಳಿಂದ ಸುಂದರವಾದ ಕುಂಡೋದವೆಂಬ ಪರ್ವತವು ಅಲ್ಲಿದೆ. ಬಾಯಾರಿದ ನಳನು ಅಲ್ಲಿನೀರನ್ನು ಕುಡಿದು ಸಮಾಧಾನವನ್ನು ಹೊಂದಿದನು.

ಯತ್ರ ದೇವವನಂ ರಮ್ಯಂ ತಾಪಸೈರುಪಶೋಭಿತಮ್ ।
ಬಾಹುಲಾ ಚ ನದೀ ಯತ್ರ ನಂದಾ ಚ ಗಿರಿಮೂರ್ಧನಿ ॥೨೩॥

ಅಲ್ಲಿತಪಸ್ವಿಗಳಿಂದ ಶೋಭಿತವಾದ ರಮ್ಯವಾದ ದೇವವನವಿದೆ. ಆ ಪರ್ವತದ ಮೇಲ್‌ಭಾಗದಲ್ಲಿ ಬಾಹುಲಾ ಎಂಬ ನದಿಯೂ ಮತ್ತು ನಂದಾ ಎಂಬ ನದಿಯೂ ಹುಟ್ಟುತ್ತವೆ.

ತೀರ್ಥಾನಿ ಸರಿತಃ ಶೈಲಾಃ ಪುಣ್ಯಾನ್ಯಾಯತನಾನಿ ಚ ।
ಪ್ರಾಚ್ಯಾಂ ದಿಶಿ ಮಹಾರಾಜ ಕೀರ್ತಿತಾನಿ ಮಯಾ ತವ ॥೨೪॥

ಎಲೈ ಮಹಾರಾಜನೇ, ಪೂರ್ವದಿಕ್ಕಿನಲ್ಲಿರುವ ತೀರ್ಥಗಳನ್ನು ನದಿಗಳನ್ನು ಪರ್ವತಗಳನ್ನು ಪವಿತ್ರವಾದ ಆಶ್ರಮಗಳನ್ನು ನಾನು ನಿನಗೆ ಹೇಳಿದ್ದೇನೆ.

ತಿಸೃಷ್ವನ್ಯಾನಿ ರಾಜೇಂದ್ರ ದಿಕ್ಷು ತೀರ್ಥಾನಿ ಮೇ ಶೃಣು ।
ಸರಿತಃ ಪರ್ವತಾಂಶ್ಚೈವ ಪುಣ್ಯಾನ್ಯಾಯತನಾನಿ ಚ ॥೨೫॥

ರಾಜೇಂದ್ರನೇ, ಇನ್ನು ಉಳಿದ ಮೂರು ದಿಕ್ಕುಗಳಲ್ಲಿರುವ ತೀರ್ಥಗಳನ್ನು ನದಿಗಳನ್ನು ಪರ್ವತಗಳನ್ನು ಮತ್ತು ಪವಿತ್ರವಾದ ಆಶ್ರಮಗಳನ್ನು ಹೇಳುತ್ತೇನೆ. ಅವುಗಳನ್ನು ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವ್ಯಶೀತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಆಷ್ಟಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೂರನೆಯ ಅಧ್ಯಾಯ

(ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ದಕ್ಷಿಣದಿಕ್ಕಿನ ನಾನಾ ತೀರ್ಥಗಳ ವರ್ಣನೆ.)

ಧೌಮ್ಯಃ

ದಕ್ಷಿಣಸ್ಯಾಂ ತು ಪುಣ್ಯಾನಿ ಶೃಣು ತೀರ್ಥಾನಿ ಭಾರತ ।
ವಿಸ್ತರೇಣ ಯಥಾಬುದ್ಧಿ ಕೀರ್ತ್ಯಮಾನಾನಿ ಪಾಂಡವ ॥೧॥

ಎಲೈ ಭಾರತನೇ, ಪಾಂಡುಪುತ್ರನೇ, ದಕ್ಷಿಣದಲ್ಲಿರುವ ಪುಣ್ಯತೀರ್ಥಗಳನ್ನು ನನ್ನ ಬುದ್ಧಿಗೆ ತೋರುವಷ್ಟು ವಿಸ್ತಾರವಾಗಿ ಹೇಳುತ್ತೇನೆ ಅದನ್ನು ಕೇಳು.

ಯಸ್ಯಾಮಾಖ್ಯಾಯತೇ ಪುಣ್ಯಾ ದಿಶಿ ಗೋದಾವರೀ ನದೀ ।
ಬಹ್ವಾದಾಮಾ ಬಹುಜಲಾ ತಾಪಸಾಚರಿತಾ ಶುಭಾ ॥೨॥

ವೇಣ್ಣಾ ಭೀಮರಥೀ ಚೋಭೇ ನದ್ಯೌ ಪಾಪಭಯಾಪಹೇ ।
ಮೃಗದ್ವಿಜಸಮಾಕೀರ್ಣೇ ತಾಪಸಾಲಯಭೂಷಿತೇ ॥೩॥

ಆ ದಿಕ್ಕಿನಲ್ಲಿ ಅನೇಕ ಆಶ್ರಮಗಳಿಂದ ಕೂಡಿರುವ ತಾಪಸಸಂಚಾರಗಳಿಂದ ಕೂಡಿರುವ ಬಹಳ ಜಲವನ್ನು ಹೊಂದಿದ ಶುಭವಾದ ಪುಣ್ಯಪ್ರದವಾದ ಗೋದಾವರಿನದಿ ಇದೆ. ಪಕ್ಷಿಗಳು ಮತ್ತು ಮೃಗಗಳಿಂದ ನಿಬಿಡವಾದ ಮತ್ತು ತಾಪಸಾಲಯದಿಂದ ಭೂಷಿತವಾದ ಪಾಪವನ್ನು ಮತ್ತು ಭಯವನ್ನು ಪರಿಹರಿಸುವ ವೇಣ್ಣಾಮತ್ತು ಭೀಮರಥಿ ಎಂಬ ಎರಡು ನದಿಗಳಿವೆ.

ರಾಜರ್ಷೇಸ್ತತ್ರ ಚ ಸರಿತ್ ನೃಗಸ್ಯ ಭರತರ್ಷಭ ।
ರಮ್ಯತೀರ್ಥಾ ಬಹುಜಲಾ ತಾಪಸಾಚರಿತಾ ಶುಭಾ ॥೪॥

ಭರತರ್ಷಭನೇ, ಅಲ್ಲಿ ರಾಜರ್ಷಿಯಾದ ನೃಗನ ನದಿಯಿದೆ. ಅದು ಮನೋಹರವಾದ ತೀರ್ಥಗಳಿಂದ ಕೂಡಿ ಬಹಳ ಜಲವುಳ್ಳದ್ದಾಗಿ ತಾಪಸರಿಂದ ಸಂಚರಿಸಲ್ಪಟ್ಟು ಶುಭವಾಗಿದೆ.

ಅಪಿ ಚಾತ್ರ ಮಹಾಯೋಗೀ ಮಾರ್ಕಂಡೇಯೋ ಮಹಾತಪಾಃ ।
ಅನುವಂಶ್ಯಾಂ ಜಗೌ ಗಾಥಾಂ ನೃಗಸ್ಯ ವಸುಧಾಧಿಪ ॥೫॥

ನೃಗಸ್ಯ ಯಜಮಾನಸ್ಯ ಪ್ರತ್ಯಕ್ಷಮಿತಿ ನಃ ಶ್ರುತಮ್ ।
ಅಮಾದ್ಯದಿಂದ್ರಸ್ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ॥೬॥

ಅಲ್ಲಿ ಮಹಾಯೋಗಿಗಳಾದ ಮಹಾತಪಸ್ವಿಗಳಾದ ಮಾರ್ಕಂಡೇಯರು ನೃಗನು ಯಾಗವನ್ನು ಮಾಡುವಾಗ ಅವನ ಎದುರಿಗೆ ಅವನ ವಂಶದ ಗೀತೆಯನ್ನು ಹಾಡಿದರೆಂದು ನಾವು ಕೇಳಿದ್ದೇವೆ. ಎಲೈ ವಸುಧಾಧಿಪನೇ ನೃಗನಯಾಗದಲ್ಲಿ ಇಂದ್ರನು ಸೋಮಪಾನದಿಂದಲೂ ಬ್ರಾಹ್ಮಣರು ದಕ್ಷಿಣೆಗಳಿಂದಲೂ ಸಂತೋಷಪಟ್ಟರು.

ಮಾತರಸ್ಯ ವನಂ ಪುಣ್ಯಂ ಬಹುಮೂಲಫಲಂ ಶಿವಮ್ ।
ಯೂಪಶ್ಚ ಭರತಶ್ರೇಷ್ಠ ವರುಣಸ್ರೋತಸೇ ಗಿರೌ ॥೭॥

ಎಲೈ ಭರತಶ್ರೇಷ್ಠನೇ, ಅಲ್ಲಿ ಬಹುಮೂಲಫಲಗಳಿರುವ ಮಂಗಳವಾದ ಮತ್ತು ಪುಣ್ಯಪ್ರದವಾದ ಮಾತರ ಋಷಿಗಳ ತಪೋವನವಿದೆ. ವರುಣ ಸ್ರೋತಸ್ ಎಂಬ ಪರ್ವತದಲ್ಲಿ ಒಂದು ಯೂಪವೂ ಇದೆ.

ಪ್ರವೇಣ್ಯುತ್ತರಪಾರ್ಶ್ವೇ ತು ಪುಣ್ಯೇ ಕಣ್ವಾಶ್ರಮೇ ತಥಾ ।
ತಾಪಸಾನಾಮರಣ್ಯಾನಿ ಕೀರ್ತಿತಾನಿ ಯಥಾಶ್ರುತಿ ॥೮॥

ಪ್ರವೇಣಿಯ ಉತ್ತರಭಾಗದಲ್ಲಿ ಮತ್ತು ಪವಿತ್ರವಾದ ಕಣ್ವಾಶ್ರಮದಬಳಿ ನಾನು ಕೇಳಿದಂತೆ ಅನೇಕ ತಪೋವನಗಳು ಹೇಳಲ್ಪಡುತ್ತವೆ.

ವೇದೀ ಶೂರ್ಪಾರಕೇ ತಾತ ಜಮದಗ್ನೇರ್ಮಹಾತ್ಮನಃ ।
ರಮ್ಯಾ ಪಾಷಾಣತೀರ್ಥಾ ಚ ಪುರಶ್ಚಂದ್ರಾ ಚ ಭಾರತ ॥೯॥

ಎಲೈ ಪ್ರೀತಿಪಾತ್ರನಾದ ಭಾರತನೇ, ಶೂರ್ಪಾರಕದಲ್ಲಿ ಮಹಾತ್ಮರಾದ ಜಮದಗ್ನಿಗಳ ಯಜ್ಞವೇದಿಯಿದೆ. ಅಲ್ಲಿ ಮನೋಹರವಾದ ಪಾಷಾಣತೀರ್ಥ ಮತ್ತು ಪುರಶ್ಚಂದ್ರವೆಂಬ ತೀರ್ಥಗಳಿವೆ.

ಅಶೋಕತೀರ್ಥಂ ಮತ್ಸ್ಯೇಷು ಕೌಂತೇಯ ಬಹುಲಾಶ್ರಮಮ್ ।
ಅಗಸ್ತ್ಯತೀರ್ಥಂ ಪಾಂಡ್ಯೇಷು ವಾರುಣಂ ಚ ಯುಧಿಷ್ಠಿರ ॥೧೦॥

ಕೌಂತೇಯನೇ ಅನೇಕ ಆಶ್ರಮಗಳಿರುವ ಅಶೋಕತೀರ್ಥವು ಎಲ್ಲಿದೆ. ಪಾಂಡ್ಯದೇಶದಲ್ಲಿ ವರುಣನಿಂದ ಅಧಿಷ್ಠಿತವಾದ ಅಗಸ್ತ್ಯತೀರ್ಥವಿದೆ.

ಕುಮಾರ್ಯಃ ಕಥಿತಾಃ ಪುಣ್ಯಾಃ ಪುಣ್ಯೇಷು ಭರತರ್ಷಭ ।
ತಾಮ್ರಪರ್ಣೀಂ ತು ಕೌಂತೇಯ ಕೀರ್ತಯಿಷ್ಯಾಮಿ ತಾಂ ಶೃಣು ॥೧೧॥

ಭರತರ್ಷಭನೇ, ಪುಣ್ಯವಾದ ದಕ್ಷಿಣದೇಶದಲ್ಲಿ ಪುಣ್ಯಪ್ರದವಾದ ಕುಮಾರೀತೀರ್ಥಗಳನ್ನು ಹೇಳಿದ್ದೇನೆ. ಕೌಂತೇಯನೇ ತಾಮ್ರಪರ್ಣಿಯನ್ನು ಕುರಿತು ಹೇಳುತ್ತೇನೆ ಅದನ್ನು ಕೇಳು.

ಯತ್ರ ದೇವೈಸ್ತಪಸ್ತಪ್ತಂ ಮಹದಿಚ್ಛದ್ಭಿರಾಶ್ರಮೇ ।
ಗೋಕರ್ಣಮಿತಿ ವಿಖ್ಯಾತಂ ತ್ರಿಷು ಲೋಕೇಷು ಭಾರತ ॥೧೨॥

ಶೀತತೋಯೋ ಬಹುಜಲಃ ಪುಣ್ಯಸ್ತಾತ ಶಿವಶ್ಚ ಸಃ ।
ಹ್ರದಃ ಪರಮದುಷ್ಪ್ರಾಪೋ ಮಾನವೈರಕೃತಾತ್ಮಭಿಃ ॥೧೩॥

ಎಲೈ ಭಾರತನೇ, ದೇವತೆಗಳು ಸಹ ಮಹತ್ವವನ್ನು ಬಯಸಿ ತಪಸ್ಸನ್ನು ಮಾಡಿದ ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ಗೋಕರ್ಣವೆಂಬ ತೀರ್ಥವಿದೆ. ಶೀತಲವಾದ ಬಹುವಾದ ನೀರಿನಿಂದ ಕೂಡಿದ್ದು ಅದು ಮಂಗಳವೂ ಪುಣ್ಯಪ್ರದವೂ ಆಗಿದೆ. ಪ್ರೀತಿಪಾತ್ರನೇ ಪುಣ್ಯವನ್ನು ಮಾಡದಿದ್ದ ಮಾನವರು ಆ ಸರೋವರಕ್ಕೆ ಹೋಗಲು ಸಾಧ್ಯವಿಲ್ಲ.

ತತ್ರೈವ ತೃಣಸೋಮಾಗ್ನೇಃ ಸಂಪನ್ನಃ ಫಲಮೂಲವಾನ್ ।
ಆಶ್ರಮೋಽಗಸ್ತ್ಯಶಿಷ್ಯಸ್ಯ ಪುಣ್ಯೋ ದೇವಸಹೇ ಗಿರೌ ॥೧೪॥

ಅಲ್ಲಿಯೇ ದೇವಸಹಪರ್ವತದಲ್ಲಿ ಅಗಸ್ತ್ಯರ ಶಿಷ್ಯರಾದ ತೃಣಸೋಮಾಗ್ನಿ ಋಷಿಗಳ ಫಲಮೂಲಸಂಪತ್ತಿನಿಂದ ತುಂಬಿದ ಆಶ್ರಮವಿದೆ.

ವೈಡೂರ್ಯಪರ್ವತಸ್ತತ್ರ ಶ್ರೀಮಾನ್ ಮಣಿಮಯಃ ಶುಭಃ ।
ಅಗಸ್ತ್ಯಸ್ಯಾಶ್ರಮಶ್ಚೈವ ಬಹುಮೂಲಫಲೋದಕಃ ॥೧೫॥

ಅಲ್ಲಿಯೇ ಸಂಪದ್ಯುಕ್ತವಾದ ಶುಭವಾದ ಮಣಿಮಯವಾದ ವೈಡೂರ್ಯಪರ್ವತವಿದೆ. ಬಹುಮೂಲ ಉದಕಗಳನ್ನು ಹೊಂದಿರುವ ಅಗಸ್ತ್ಯರ ಆಶ್ರಮವು ಅಲ್ಲಿದೆ.

ಸುರಾಷ್ಟ್ರೇಷ್ವಪಿ ವಕ್ಷ್ಯಾಮಿ ಪುಣ್ಯಾನ್ಯಾಯತನಾನಿ ತೇ ।
ಆಶ್ರಮಾನ್ ಸರಿತಃ ಶೈಲಾನ್ ಸರಾಂಸಿ ಚ ನರಾಧಿಪ ॥೧೬॥

ಎಲೈ ನರಾಧಿಪನೇ, ಸುರಾಷ್ಟ್ರದೇಶದಲ್ಲಿರುವ ಪವಿತ್ರವಾದ ವಾಸಸ್ಥಾನಗಳನ್ನು ಆಶ್ರಮಗಳನ್ನು ನದಿಗಳನ್ನು ಪರ್ವತಗಳನ್ನು ಮತ್ತು ಸರೋವರಗಳನ್ನು ಹೇಳುತ್ತೇನೆ.

ತಮಸೋ ಮಜ್ಜನಂ ವಿಪ್ರಾಃ ತತ್ರಾಪಿ ಕಥಯಂತ್ಯುತ ।
ಪ್ರಭಾಸಂ ಚೋದಧೇಸ್ತೀರ್ಥಂ ತ್ರಿದಶಾನಾಂ ಯುಧಿಷ್ಠಿರ ॥೧೭॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣರು ಅಲ್ಲಿಯೂ ಅಜ್ಞಾನದ ನಾಶವನ್ನು ಹೇಳುತ್ತಾರೆ. ದೇವತೆಗಳಿಂದ ಸೇವಿತವಾದ ಪ್ರಭಾಸತೀರ್ಥವು ಸಮುದ್ರದ ಸಮೀಪದಲ್ಲಿದೆ.

ತತ್ರ ಪಿಂಡಾರಕಂ ನಾಮ ತಾಪಸಾಚರಿತಂ ಶಿವಮ್ ।
ಉಜ್ಜಯಂತಶ್ಚ ಶಿಖರೀ ಕ್ಷಿಪ್ರಂ ಸಿದ್ಧಿಕರೋ ಮಹಾನ್ ॥೧೮॥

ಅಲ್ಲಿ ತಪಸ್ವಿಗಳಿಂದ ಕೂಡಿದ ಮಂಗಳವಾದ ಪಿಂಡಾರಕವೆಂಬ ಕ್ಷೇತ್ರವೂ ಬೇಗ ಸಿದ್ಧಿಯನ್ನು ಉಂಟುಮಾಡುವ ಶ್ರೇಷ್ಠವಾದ ಉಜ್ಜಯಂತ ಪರ್ವತವೂ ಇವೆ.

ತತ್ರ ದೇವರ್ಷಿವರ್ಯೇಣ ನಾರದೇನಾನುಕೀರ್ತಿತಃ ।
ಪುರಾಣಃ ಶ್ರೂಯತೇ ಶ್ಲೋಕಃ ತಂ ನಿಬೋಧ ಯುಧಿಷ್ಠಿರ ॥೧೯॥

ಎಲೈ ಯುಧಿಷ್ಠಿರನೇ, ದೇವರ್ಷಿಶ್ರೇಷ್ಠರಾದ ನಾರದರು ಆ ಪರ್ವತದ ವಿಷಯದಲ್ಲಿ ಹೇಳಿದ ಪ್ರಾಚೀನವಾದ ಒಂದು ಶ್ಲೋಕವಿದೆ ಅದನ್ನು ಕೇಳು.

ಪುಣ್ಯೇ ಗಿರೌ ಸುರಾಷ್ಟ್ರೇಷು ಮೃಗಪಕ್ಷಿನಿಷೇವಿತೇ ।
ಉಜ್ಜಯಂತೇ ಸ್ಮ ತಪ್ತಾಂಗೋ ನಾಕಪೃಷ್ಠೇ ಮಹೀಯತೇ ॥೨೦॥

ಮೃಗಪಕ್ಷಿಗಳಿಂದ ಸೇವಿತವಾದ ಸುರಾಷ್ಟ್ರದೇಶದ ಪುಣ್ಯಪರ್ವತವಾದ ಉಜ್ಜಯಂತ ಪರ್ವತದಲ್ಲಿ ತಪಸ್ಸನ್ನು ಮಾಡಿದವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಪುಣ್ಯಾ ದ್ವಾರವತೀ ತತ್ರ ಯತ್ರಾಸ್ತೇ ಮಧುಸೂದನಃ ।
ಸಾಕ್ಷಾದ್ದೇವಃ ಪುರಾಣೋಽಸೌ ಸ ಹಿ ಧರ್ಮಃ ಸನಾತನಃ ॥೨೧॥

ಅಲ್ಲಿ ಮಧುಸೂದನನು ಇರುವ ಪವಿತ್ರವಾದ ದ್ವಾರವತಿಯು ಇದೆ. ಅವನೇ ಪುರಾತನನಾದ ಸಾಕ್ಷಾತ್ ದೇವದೇವನು. ಅವನೇ ವೇದ ಪ್ರತಿಪಾದ್ಯನಾದ ಸನಾತನ ಧರ್ಮರೂಪನಾದವನು.

ಯೇ ಚ ವೇದವಿದೋ ವಿಪ್ರಾ ಯೇ ಚಾಧ್ಯಾತ್ಮವಿದೋ ಜನಾಃ ।
ತೇ ವದಂತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಮ್ ॥೨೨॥

ವೇದವನ್ನು ತಿಳಿದ ವಿಪ್ರರು ಮತ್ತು ಅಧ್ಯಾತ್ಮವಿದ್ಯೆಯನ್ನು ಬಲ್ಲ ಜನರು ಮಹಾತ್ಮನಾದ ಕೃಷ್ಣನನ್ನು ಸನಾತನಧರ್ಮವೆಂದು ಹೇಳುತ್ತಾರೆ.

ಪವಿತ್ರಾಣಾಂ ಹಿ ಗೋವಿಂದಃ ಪವಿತ್ರಂ ಪರಮುಚ್ಯತೇ ।
ಪುಣ್ಯಾನಾಮಪಿ ಪುಣ್ಯೋಽಸೌ ಮಂಗಲಾನಾಂ ಚ ಮಂಗಲಮ್॥೨೩॥

ಆ ಗೋವಿಂದನು ಪವಿತ್ರವಾದ ವಸ್ತುಗಳಿಗಿಂತ ಇನ್ನೂ ಪವಿತ್ರನಾದವನು ಎಂದು ಹೇಳಲ್ಪಡುತ್ತಾನೆ. ಅವನು ಪುಣ್ಯವಸ್ತುಗಳಿಗೆ ಪುಣ್ಯಪ್ರದನು ಮತ್ತು ಮಂಗಳವಸ್ತುಗಳಿಗೆ ಮಾಂಗಲ್ಯಪ್ರದನು.

ತ್ರೈಲೋಕ್ಯಂ ಪುಂಡರೀಕಾಕ್ಷೋ ದೇವದೇವಃ ಸನಾತನಃ ।
ಅವ್ಯಯಾತ್ಮಾ ಮಹಾತ್ಮಾ ಚ ಕ್ಷೇತ್ರಕೃತ್ ಪರಮೇಶ್ವರಃ ॥೨೪॥

ಪುಂಡರೀಕಾಕ್ಷನೂ ದೇವದೇವನೂ ಸನಾತನನೂ ಅವ್ಯಯ- ಸ್ವರೂಪನೂ ಮಹಾತ್ಮನೂ ತ್ರೈಲೋಕ್ಯಸೃಷ್ಟಿಕರ್ತನೂ ಪರಮೇಶ್ವರನೂ ಅಚಿಂತ್ಯೈಶ್ವರ್ಯಸಂಪನ್ನನೂ ಆದ ಮಧುಸೂದನರೂಪನಾದ ಹರಿಯು ಅಲ್ಲಿಯೇ ಇರುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರ್ಯಶೀತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ನಾಲ್ಕನೆಯ ಅಧ್ಯಾಯ

(ಯುಧಿಷ್ಠಿರನನ್ನು ಕುರಿತು ಪಶ್ಚಿಮದಿಕ್ಕಿನ ಕ್ಷೇತ್ರಗಳ ವರ್ಣನೆ.)

ಧೌಮ್ಯಃ

ಅವಂತೀಷು ಪ್ರತೀಚ್ಯಾಂ ವೈ ಕೀರ್ತಯಿಷ್ಯಾಮಿ ತೇ ದಿಶಿ ।
ಯಾನಿ ಯತ್ರ ಪವಿತ್ರಾಣಿ ಪುಣ್ಯಾನ್ಯಾಯತನಾನಿ ಚ ॥೧॥

ಪಶ್ಚಿಮ ದಿಕ್ಕಿನಲ್ಲಿ ಅವಂತಿದೇಶದಲ್ಲಿರುವ ಪವಿತ್ರವಾದ ಮತ್ತು ಪುಣ್ಯಪ್ರದವಾದ ಸ್ಥಳಗಳನ್ನು ಹೇಳುತ್ತೇನೆ.

ಪ್ರಿಯಂಗ್ವಾಮ್ರವಣೋಪೇತಾ ವಾನೀರವನಮಾಲಿನೀ ।
ಪ್ರತ್ಯಕ್ಸ್ರೋತಾ ನದೀ ಪುಣ್ಯಾ ನರ್ಮದಾ ತತ್ರ ಭಾರತ ॥೨॥

ಎಲೈ ಭಾರತನೇ, ಅಲ್ಲಿ ಪ್ರಿಯಂಗು ಆಮ್ರ ಇವುಗಳ ವನದಿಂದ ಕೂಡಿದ ಸುತ್ತಲೂ ಬೆತ್ತದವನಗಳಿರುವ ಪಶ್ಚಿಮಾಭಿಮುಖವಾಗಿ ಹರಿಯುವ ಪುಣ್ಯಪ್ರದವಾದ ನರ್ಮದಾ ನದಿಯಿದೆ.

ನಿಕೇತಃ ಶ್ರೂಯತೇ ಪುಣ್ಯೋ ಯತ್ರ ವಿಶ್ರವಸೋ ಮುನೇಃ ।
ಜಜ್ಞೇ ಧನಪತಿರ್ಯತ್ರ ಕುಬೇರೋ ನರವಾಹನಃ ॥೩॥

ಅಲ್ಲಿ ವಿಶ್ರವಸ್ ಮುನಿಗಳ ಪವಿತ್ರವಾದ ಆಶ್ರಮವಿದೆ. ಧನವತಿಯಾದ ನರವಾಹನನಾದ ಕುಬೇರನು ಅಲ್ಲಿ ಜನಿಸಿದನು.

ವೈಡೂರ್ಯಶಿಖರೋ ನಾಮ ಪುಣ್ಯೋ ಗಿರಿವರಃ ಶುಭಃ ।
ದಿವ್ಯಪುಷ್ಪಫಲಾಸ್ತತ್ರ ಪಾದಪಾ ಹರಿತಚ್ಛದಾಃ ॥೪॥

ಅಲ್ಲಿ ವೈಡೂರ್ಯಶಿಖರವೆಂಬ ಪವಿತ್ರವಾದ ಮತ್ತು ಶ್ರೇಷ್ಠವಾದ ಪರ್ವತವಿದೆ. ಅದರಲ್ಲಿರುವ ಮರಗಳು ಹಸಿರು ಎಲೆಗಳಿಂದಲೂ ದಿವ್ಯವಾದ ಪುಷ್ಪಫಲಗಳಿಂದಲೂ ಕೂಡಿರುತ್ತವೆ.

ತಸ್ಯ ಶೈಲಸ್ಯ ಶಿಖರೇ ಸರಸ್ತಸ್ಯ ಚ ಧೀಮತಃ ।
ಪ್ರಫುಲ್ಲನಲಿನಂ ರಾಜನ್ ದೇವಗಂಧರ್ವಸೇವಿತಮ್ ॥೫॥

ಎಲೈ ರಾಜನೇ, ಆ ಪರ್ವತದ ಶಿಖರದಲ್ಲಿ ಮೇಧಾವಿಯಾದ ಕುಬೇರನ ಸರೋವರವಿದೆ. ಅರಳಿದ ಕಮಲಗಳಿಂದ ಕೂಡಿದ ಅದು ದೇವಗಂಧರ್ವಸೇವಿತವಾಗಿದೆ.

ಬಹ್ವಾಶ್ಚರ್ಯಂ ಮಹಾರಾಜ ದೃಶ್ಯತೇ ತತ್ರ ಪರ್ವತೇ ।
ಪುಣ್ಯೇ ಸ್ವರ್ಗೋಪಮೇ ದಿವ್ಯೇ ನಿತ್ಯಂ ದೇವರ್ಷಿಸೇವಿತೇ ॥೬॥

ಎಲೈ ಮಹಾರಾಜನೇ, ದೇವರ್ಷಿಸೇವಿತವಾದ ಸ್ವರ್ಗಸದೃಶವಾದ ದಿವ್ಯವಾದ ಮತ್ತು ಪುಣ್ಯಪ್ರದವಾದ ಆ ಪರ್ವತದಲ್ಲಿ ನಿತ್ಯವೂ ಅನೇಕಾಶ್ಚರ್ಯಗಳು ಕಂಡುಬರುತ್ತವೆ.

ಹ್ರಾದಿನೀ ಪುಣ್ಯತೀರ್ಥಾ ಚ ರಾಜರ್ಷೇಸ್ತತ್ರ ವೈ ಸರಿತ್ ।
ವಿಶ್ವಾಮಿತ್ರೇಣ ತಪಸಾ ನಿರ್ಮಿತಾ ಸರ್ವಪಾವನೀ ॥೭॥

ಅಲ್ಲಿ ರಾಜರ್ಷಿಯಾದ ಗಾಧಿಗೆ ವಿಶ್ವಾಮಿತ್ರರು ತಮ್ಮ ತಪಸ್ಸಿನಿಂದ ನಿರ್ಮಿಸಿದಂತಹ ಸರ್ವಪಾವನೆಯಾದ ಪುಣ್ಯಜನೋಪೇತವಾದ ಹ್ರಾದಿನೀ ಎಂಬ ನದಿಯಿದೆ.

ಯಸ್ಯಾಸ್ತೀರೇ ಸತಾಂ ಮಧ್ಯೇ ಯಯಾತಿರ್ನಹುಷಾತ್ಮಜಃ ।
ಪಪಾತ ಸ ಪುನರ್ಲೋಕಾನ್‌ಲೇಭೇ ಧರ್ಮಾನ್ ಸುಶಾಶ್ವತಾನ್ ॥

ನಹುಷಪುತ್ರನಾದ ಯಯಾತಿಯು ಆ ನದಿಯ ತೀರದಲ್ಲಿ ಸಜ್ಜನರ ಮಧ್ಯದಲ್ಲಿ ಬಿದ್ದು ಪುನಃ ಶಾಶ್ವತವಾದ ಧರ್ಮಗಳನ್ನು ಮತ್ತು ಶುಭವಾದ ಲೋಕಗಳನ್ನು ಹೊಂದಿದನು.

ತತ್ರ ಪುಣ್ಯೋ ಹ್ರದಸ್ತಾತ ಮೈನಾಕಶ್ಚೈವ ಪರ್ವತಃ ।
ಬಹುಮೂಲಫಲೋ ವೀರ ತ್ವಸಿತೋ ನಾಮ ಪರ್ವತಃ ॥೯॥

ಎಲೈ ವೀರನೇ, ಅಲ್ಲಿ ಪುಣ್ಯಸರೋವರವೂ ಮೈನಾಕಪರ್ವತವೂ ಬಹುಮೂಲಫಲಗಳಿರುವ ಅಸಿತವೆಂಬ ಪರ್ವತವೂ ಇದೆ.

ಆಶ್ರಮಃ ಕಕ್ಷಸೇನಸ್ಯ ಪುಣ್ಯಸ್ತತ್ರ ಯುಧಿಷ್ಠಿರ ।
ಚ್ಯವನಸ್ಯಾಶ್ರಮಶ್ಚೈವ ಖ್ಯಾತಃ ಸರ್ವತ್ರ ಪಾಂಡವ ।
ತತ್ರಾಲ್ಪೇನೈವ ಸಿದ್ಧ್ಯಂತಿ ಮಾನವಾಸ್ತಪಸಾ ವಿಭೋ ॥೧೦॥

ಎಲೈ ಯುಧಿಷ್ಠಿರನೇ, ಅಲ್ಲಿ ಕಕ್ಷಸೇನನ ಪವಿತ್ರವಾದ ಆಶ್ರಮವಿದೆ. ಎಲೈ ಪಾಂಡವನೇ, ಸರ್ವತ್ರ ಪ್ರಸಿದ್ಧವಾದ ಚ್ಯವನರ ಆಶ್ರಮವು ಅಲ್ಲಿಯೇ ಇದೆ. ಎಲೈ ವಿಭುವೇ ಅಲ್ಲಿ ಮಾನವರು ಅಲ್ಪತಪಸ್ಸಿನಿಂದಲೇ ಸಿದ್ಧಿಯನ್ನು ಪಡೆಯುತ್ತಾರೆ.

ಜಂಬೂಮಾರ್ಗೋ ಮಹಾರಾಜ ಋಷೀಣಾಂ ಭಾವಿತಾತ್ಮನಾಮ್ ।
ಆಶ್ರಮಃ ಶ್ರಾವ್ಯತೇ ಶ್ರೇಷ್ಠೋ ಮೃಗದ್ವಿಜಗಣಾಯುತಃ ॥೧೧॥

ಎಲೈ ಮಹಾರಾಜನೇ, ಮೃಗಪಕ್ಷಿಗಳ ಸಮೂಹದಿಂದ ಕೂಡಿದ ಶ್ರೇಷ್ಠವಾದ ಜಿತಮನಸ್ಕರಾದ ಋಷಿಗಳ ಜಂಬೂಮಾರ್ಗವೆಂಬ ಆಶ್ರಮವು ಅಲ್ಲಿ ಕೇಳಿ ಬರುತ್ತದೆ.

ಜಂಬೂಮಾರ್ಗೋ ಮಹಾರಾಜ ಸತತಂ ತಾಪಸೈರ್ಯುತಃ ।
ಕೇತುಮಾಲಾ ಚ ಮೇಧ್ಯಾ ಚ ಗಂಗಾರಣ್ಯಂ ಚ ಭೂಮಿಪ ।
ಖ್ಯಾತಂ ಚ ಸೈಂಧವಾರಣ್ಯಂ ಪುಣ್ಯಂ ದ್ವಿಜನಿಷೇವಿತಮ್ ॥೧೨॥

ಮಹಾರಾಜನೇ, ಜಂಬೂಮಾರ್ಗ ಮಹಾಶ್ರಮವು ಯಾವಾಗಲೂ ತಪಸ್ವಿಗಳಿಂದ ಕೂಡಿರುತ್ತದೆ. ಎಲೈ ಭೂಮಿಪಾಲನೇ, ಅಲ್ಲಿ ಬ್ರಾಹ್ಮಣರಿಂದ ಸೇವಿತವಾದ ಪವಿತ್ರವಾದ ಕೇತುಮಾಲಾ ಮತ್ತು ಮೇಧ್ಯಾ ನದಿಗಳು ಮತ್ತು ಪ್ರಸಿದ್ಧವಾದ ಗಂಗಾರಣ್ಯ ಮತ್ತು ಸೈಂಧವಾರಣ್ಯಗಳು ಇವೆ.

ಪಿತಾಮಹಸರಃ ಪುಣ್ಯಂ ಪುಷ್ಕರಂ ನಾಮ ಭಾರತ ।
ವೈಖಾನಸಾನಾಂ ಸಿದ್ಧಾನಾಮ್ ಋಷೀಣಾಮಾಶ್ರಮಃ ಪ್ರಿಯಃ ॥೧೩॥

ಎಲೈ ಭಾರತನೇ, ಅಲ್ಲಿ ಬ್ರಹ್ಮದೇವರ ಸರೋವರವಾದ ಪವಿತ್ರವಾದ ಪುಷ್ಕರಕ್ಷೇತ್ರವಿದೆ. ವೈಖಾನಸರಿಗೆ ಸಿದ್ಧರಿಗೆ ಮತ್ತು ಋಷಿಗಳಿಗೆ ಪ್ರಿಯವಾದ ಆಶ್ರಮವು ಅಲ್ಲಿದೆ.

ಅಪ್ಯತ್ರ ಸಂಸ್ತವಾರ್ಥಾಯ ಪ್ರಜಾಪತಿರಥೋ ಜಗೌ ।
ಪುಷ್ಕರೇಷು ನರಶ್ರೇಷ್ಠ ಗಾಥಾಂ ಸುಕೃತಿನಾಂ ಶೃಣು ॥೧೪॥

ಎಲೈ ನರಶ್ರೇಷ್ಠನೇ, ಅದನ್ನು ಸ್ತೋತ್ರಮಾಡುವುದಕ್ಕೋಸ್ಕರ ಪ್ರಜಾಪತಿಗಳಾದ ಬ್ರಹ್ಮದೇವರು ಒಂದು ಗಾಥೆಯನ್ನು ಹಾಡಿದ್ದಾರೆ. ಅದನ್ನು ಕೇಳು.

ಮನಸಾಪ್ಯಭಿಕಾಮಸ್ಯ ಪುಷ್ಕರಾಣಿ ಮನಸ್ವಿನಃ ।
ಪಾಪಾನಿ ವಿಪ್ರಣಶ್ಯಂತಿ ನಾಕಪೃಷ್ಠೇ ಚ ಮೋದತೇ ॥೧೫॥

ಯಾವ ಧೀರನು ಮನಸ್ಸಿನಿಂದಲಾದರೂ ಪುಷ್ಕರಗಳಿಗೆ ಹೋಗಲು ಬಯಸುತ್ತಾನೆಯೋ ಅವನ ಪಾಪಗಳು ನಾಶವನ್ನು ಹೊಂದುತ್ತವೆ. ಅವನು ಸ್ವರ್ಗಲೋಕದಲ್ಲಿ ಸಂತೋಷಪಡುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರಶೀತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೈದನೆಯ ಅಧ್ಯಾಯ

ಧೌಮ್ಯರಿಂದ ಯುಧಿಷ್ಠಿರನನ್ನು ಕುರಿತು ಉತ್ತರದಿಕ್ಕಿನ ತೀರ್ಥಕ್ಷೇತ್ರಗಳ ವರ್ಣನೆ.

ಧೌಮ್ಯಃ

ಉದೀಚ್ಯಾಂ ರಾಜಶಾರ್ದೂಲ ದಿಶಿ ತೀರ್ಥಾನಿ ಯಾನಿ ವೈ ।
ತಾನಿ ತೇ ಕೀರ್ತಯಿಷ್ಯಾಮಿ ಪುಣ್ಯಾನ್ಯಾಯತನಾನಿ ಚ ॥೧॥

ಧೌಮ್ಯರು– ಎಲೈ ರಾಜಶಾರ್ದೂಲನೇ, ಉತ್ತರದಿಕ್ಕಿನಲ್ಲಿರುವ ತೀರ್ಥಗಳನ್ನು ಮತ್ತು ಪವಿತ್ರವಾದ ಕ್ಷೇತ್ರಗಳನ್ನು ನಿನಗೆ ಹೇಳುವೆನು.

ಸರಸ್ವತೀ ಪುಣ್ಯತಮಾ ಹ್ರಾದಿನೀ ವನಮಾಲಿನೀ ।
ಸಮುದ್ರಗಾ ಮಹಾವೇಗಾ ಯಮುನಾ ಯತ್ರ ಪಾಂಡವ ॥೨॥

ಎಲೈ ಪಾಂಡವನೇ, ಅಲ್ಲಿ ಪವಿತ್ರವಾದ ವನಗಳ ಮಧ್ಯದಲ್ಲಿ ನಿರ್ಘೋಷದಿಂದ ಹರಿಯುವ ಮಹಾವೇಗವುಳ್ಳ ಸಮುದ್ರಗಾಮಿಯಾದ ಸರಸ್ವತೀನದಿಯೂ ಮತ್ತು ಯಮುನಾ ನದಿಯೂ ಇವೆ.

ಯತ್ರ ಪುಣ್ಯತಮಂ ತೀರ್ಥಂ ಪ್ಲಕ್ಷಾವತರಣಂ ಶುಭಮ್ ।
ಯತ್ರ ಸಾರಸ್ವತೈರಿಷ್ಟ್ವಾ ಗಚ್ಛಂತ್ಯವಭೃಥಂ ದ್ವಿಜಾಃ ॥೩॥

ಅಲ್ಲಿ ಶುಭವು, ಪವಿತ್ರವು ಆದ ಪ್ಲಕ್ಷಾವತರಣವೆಂಬ ತೀರ್ಥವಿದೆ. ಆ ತೀರ್ಥದಲ್ಲಿ ಸಾರಸ್ವತ ಬ್ರಾಹ್ಮಣರು ಯಜ್ಞವು ಮುಗಿದ ಮೇಲೆ ಮಾಡುವ ಅವಭೃಥ ಸ್ನಾನವನ್ನು ಮಾಡಿದರು.

ಪುಣ್ಯಂ ಚಾಖ್ಯಾಯತೇ ದಿವ್ಯಂ ಶಿವಮಗ್ನಿಶಿರೋ ನೃಪ ।
ಸಹದೇವೋಽಯಜದ್ಯತ್ರ ಶಮ್ಯಾಕ್ಷೇಪೇಣ ಭಾರತ ॥೪॥

ಎಲೈ ರಾಜನೇ, ಭಾರತನೇ, ಅಲ್ಲಿ ದಿವ್ಯವೂ ಮಂಗಳವೂ ಮತ್ತು ಪವಿತ್ರವೂ ಆದ ಅಗ್ನಿಶಿರ ಎಂಬ ಕ್ಷೇತ್ರವಿದೆ. ಸಹದೇವನು ಅಲ್ಲಿ ಯಜ್ಞಸಾಧನವಾದ ಶಮ್ಯ ಎಂಬ ಉಪಕರಣವನ್ನು ಎಸೆದು ಯಜ್ಞವನ್ನು ಮಾಡಿದನು.

ಏತಸ್ಮಿನ್ನೇವ ಚಾರ್ಥೇಽಸೌ ಇಂದ್ರಗೀತಾ ಯುಧಿಷ್ಠಿರ ।
ಗಾಥಾ ಚರತಿ ಲೋಕೇಽಸ್ಮಿನ್ ಗೀಯಮಾನಾ ದ್ವಿಜಾತಿಭಿಃ ॥೫॥

ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೇ ಇಂದ್ರನಿಂದ ಹಾಡಲ್ಪಟ್ಟ ಒಂದು ಗೀತೆಯಿದೆ. ಅದನ್ನು ಬ್ರಾಹ್ಮಣರು ಇಂದಿಗೂ ಗಾನಮಾಡಿ ಪ್ರಚಾರದಲ್ಲಿಟ್ಟಿದ್ದಾರೆ.

ಅಗ್ನಯಃ ಸಹದೇವೇನ ಯೇ ಚಿತಾ ಯಮುನಾಮನು ।
ಶತಂ ಶತಸಹಸ್ರಾಣಿ ಸಹಸ್ರಶತದಕ್ಷಿಣಾಃ ॥೬॥

ಯಮುನಾ ನದಿಯ ದಡದಲ್ಲಿ ಸಹದೇವನು ಅಗ್ನಿಚಯನವನ್ನು ಮಾಡಿದ ಯಾಗಗಳಲ್ಲಿ ಶತ, ಶತಸಹಸ್ರ ಮತ್ತು ಸಹಸ್ರಶತದಕ್ಷಿಣೆಯಿದ್ದಿತು.

ತತ್ರೈವ ಭರತೋ ರಾಜಾ ಚಕ್ರವರ್ತೀ ಮಹಾಯಶಾಃ ।
ವಿಂಶತಿಂ ಸಪ್ತ ಚಾಷ್ಟೌ ಚ ಹಯಮೇಧಾನುಪಾಹರತ್ ॥೭॥

ಅಲ್ಲಿಯೇ ಮಹಾಕೀರ್ತಿಶಾಲಿಯಾದ ಭರತಚಕ್ರವರ್ತಿಯು ಮೂವತ್ತೈದು ಅಶ್ವಗಳನ್ನು ಕಟ್ಟಿ ಅಶ್ವಮೇಧ ಯಾಗವನ್ನು ಮಾಡಿದನು.

ಕಾಮಕೃದ್ಯೋ ದ್ವಿಜಾತೀನಾಂ ಶ್ರುತಸ್ತಾತ ಮಯಾ ಪುರಾ ।
ಆತ್ಯಂತಮಾಶ್ರಮಃ ಪುಣ್ಯಃ ಶಂಕರಸ್ತತ್ರ ವಿಶ್ರುತಃ ॥೮॥

ಎಲೈ ಪ್ರೀತಿಪಾತ್ರನೇ, ಬ್ರಾಹ್ಮಣರಿಗೆ ಅಭೀಷ್ಟವನ್ನು ಪೂರೈಸುವುದೆಂದು ನಾನು ಹಿಂದೆ ಯಾವ ಕ್ಷೇತ್ರವನ್ನು ಕೇಳಿದ್ದನೋ ಅಂತಹ ಪವಿತ್ರವಾದ ಸುಖಕರವಾದ ಪ್ರಖ್ಯಾತವಾದ ಆಶ್ರಮವು ಅಲ್ಲಿ ಇದೆ.

ಸರಸ್ವತೀ ನದೀ ಸದ್ಭಿಃ ಸತತಂ ಪಾರ್ಥ ಪೂಜಿತಾ ।
ವಾಲಖಿಲ್ಯೈರ್ಮಹಾರಾಜ ಯತ್ರೇಷ್ಟಮೃಷಿಭಿಃ ಪುರಾ ॥೯॥

ಎಲೈ ಪಾರ್ಥನೇ, ಸಜ್ಜನರಿಂದ ಸತತವಾಗಿ ಪೂಜಿತವಾದ ಸರಸ್ವತೀ ನದಿಯು ಅಲ್ಲಿದೆ. ಮಹಾರಾಜನೇ, ಅದರ ತೀರದಲ್ಲಿ ವಾಲಖಿಲ್ಯಋಷಿಗಳು ಹಿಂದೆ ಯಜ್ಞವನ್ನು ಮಾಡಿದರು.

ದೃಷದ್ವತೀ ಪುಣ್ಯತಮಾ ಯತ್ರ ಖ್ಯಾತಾ ಯುಧಿಷ್ಠಿರ ।
ತತ್ರ ವೈವರ್ಣ್ಯವರ್ಣೋ ಚ ಪುಣ್ಯೌ ಭರತಸತ್ತಮ ॥೧೦॥

ವೇದಜ್ಞೌ ವೇದವಿದಿತೌ ವಿದ್ಯಾವೇದವಿದಾವುಭೌ ।
ಯಜಂತೌ ಕ್ರತುಭಿರ್ನಿತ್ಯಂ ಪುಣ್ಯೈರ್ಭರತಸತ್ತಮ ॥೧೧॥

ಸಮೇತ್ಯ ಬಹುಶೋ ದೇವಾಃ ಸೇಂದ್ರಾಃ ಸವರುಣಾಃ ಪುರಾ ।
ವಿಶಾಖಯೂಪೇಕತಪ್ಯಂತ ತಸ್ಮಾತ್ ಪುಣ್ಯತಮಃ ಸ ಚ ॥೧೨॥

ಎಲೈ ಯುಧಿಷ್ಠಿರನೇ, ಅಲ್ಲಿ ಪವಿತ್ರವಾದ ಮತ್ತು ಪ್ರಖ್ಯಾತವಾದ ದೃಷದ್ವತೀ ನದಿಯಿದೆ. ಅಲ್ಲಿ ವೈವರ್ಣ್ಯ ಮತ್ತು ವರ್ಣ ಎಂಬ ಪವಿತ್ರರಾದ ವೇದಜ್ಞರಾದ, ವೇದಪ್ರಸಿದ್ಧರಾದ, ವೇದವಿದ್ಯಾವಿಶಾರದರಾದ ಇಬ್ಬರು ಋಷಿಗಳು ಯಾವಾಗಲೂ ಪವಿತ್ರವಾದ ಯಜ್ಞಗಳಿಂದ ಯಾಗವನ್ನು ಮಾಡುತ್ತಾರೆ. ಎಲೈ ಭರತಸತ್ತಮನೇ, ಇಂದ್ರ, ವರುಣ ಮೊದಲಾದ ದೇವತೆಗಳು ಹಿಂದೆ ಅನೇಕಬಾರಿ ಅಲ್ಲಿಗೆ ಬಂದು

ವಿಶಾಖಯೂಪ ಎಂಬ ಆ ಕ್ಷೇತ್ರದಲ್ಲಿ ತಪಸ್ಸನ್ನು ಮಾಡಿದರು. ಆದ್ದರಿಂದ ಆ ದೇಶವು ಬಹಳ ಪವಿತ್ರವಾಗಿದೆ.

ಋಷಿರ್ಮಹಾನ್ ಮಹಾಭಾಗೋ ಜಮದಗ್ನಿರ್ಮಹಾಯಶಾಃ ।
ಪಲಾಶಕೇಷು ಪುಣ್ಯೇಷು ರಮ್ಯೇಷ್ವಯಜತಾಭಿಭೂಃ ॥೧೩॥

ಮಹಾನುಭಾವರೂ, ಮಹಾಕೀರ್ತಿಶಾಲಿಗಳೂ, ಸರ್ವಾಭಿಭವ ಸಾಮರ್ಥ್ಯವುಳ್ಳವರೂ ಆದ ಜಮದಗ್ನಿಮಹರ್ಷಿಗಳು ಅಲ್ಲಿ ಸುಂದರವಾದ, ಪವಿತ್ರವಾದ ಫಲಾಶಷ ಎಂಬ ಪ್ರದೇಶಗಳಲ್ಲಿ ಯಜ್ಞವನ್ನು ಮಾಡಿದರು.

ಯತ್ರ ಸರ್ವಾಃ ಸರಿಚ್ಶ್ರೇಷ್ಠಾಃ ಸಾಕ್ಷಾತ್ ತಮೃಷಿಸತ್ತಮಮ್ ।
ಸ್ವಂಸ್ವಂ ತೋಯಮುಪಾದಾಯ ಪರಿವಾರ್ಯೋಪತಸ್ಥಿರೇ ॥೧೪॥

ಆಗ ಎಲ್ಲ ಶ್ರೇಷ್ಠವಾದ ನದಿಗಳು ಶರೀರವನ್ನು ಧರಿಸಿ ತಮ್ಮ ತಮ್ಮ ಜಲವನ್ನು ತೆಗೆದುಕೊಂಡು ಬಂದು ಆ ಋಷಿಶ್ರೇಷ್ಠರನ್ನು ಸುತ್ತುವರಿದು ಅವರ ಸೇವೆಯನ್ನು ಮಾಡಿದವು.

ಅಪಿ ಚಾತ್ರ ಮಹಾರಾಜ ಸ್ವಯಂ ವಿಶ್ವಾವಸುರ್ಜಗೌ ।
ಇಮಂ ಶ್ಲೋಕಂ ತದಾ ವೀರ ಯಜ್ಞಂ ವೀಕ್ಷ್ಯ ಮಹಾತ್ಮನಃ ॥೧೫॥

ಎಲೈ ಮಹಾರಾಜನೇ, ಆ ಮಹಾತ್ಮರ ಯಜ್ಞವನ್ನು ನೋಡಿದ ವಿಶ್ವಾವಸು ಗಂಧರ್ವನು ಸ್ವತಃ ಆಗ ಈ ಶ್ಲೋಕವನ್ನು ಹಾಡಿದನು.

ಯಜಮಾನಸ್ಯ ವೈ ದೇವಾಃ ಜಮದಗ್ನೇರ್ಮಹಾತ್ಮನಃ ।
ಆಗಮ್ಯ ಸರಿತಃ ಸರ್ವಾನ್ ಮಧುನಾ ಸಮತರ್ಪಯನ್ ॥೧೬॥

ಮಹಾತ್ಮರಾದ ಜಮದಗ್ನಿಗಳು ಯಜ್ಞವನ್ನು ಮಾಡುತ್ತಿರುವಾಗ ನದಿಗಳು ಶರೀರವನ್ನು ಧರಿಸಿಬಂದು ಎಲ್ಲ ದೇವತೆಗಳಿಗೂ ಮಧುವನ್ನು ಬಡಿಸಿದರು.

ಗಂಧರ್ವಯಕ್ಷರಕ್ಷೋಭಿರಪ್ಸರೋಭಿಶ್ಚ ಶೋಭಿತಮ್ ।
ಕಿರಾತಕಿನ್ನರಾವಾಸಂ ಶೈಲಂ ಶಿಖರಿಣಾಂ ವರಮ್ ॥೧೭॥

ಬಿಭೇದ ತರಸಾ ಗಂಗಾ ಗಂಗಾದ್ವಾರೇ ಯುಧಿಷ್ಠಿರ ।
ಪುಣ್ಯಂ ತತ್ ಖ್ಯಾಯತೇ ರಾಜನ್ ಬ್ರಹ್ಮರ್ಷಿಗಣಸೇವಿತಮ್ ॥೧೮॥

ಭೃಗುರ್ಯತ್ರ ತಪಸ್ತೇಪೇ ಮಹರ್ಷಿಗಣಸೇವಿತಃ ।
ಸ ರಾಜನಾಶ್ರಮಃ ಖ್ಯಾತೋ ಭೃಗುತುಂದೋ ಮಹಾಗಿರಿಃ ॥೧೯॥

ಎಲೈ ಯುಧಿಷ್ಠಿರನೇ, ಗಂಗೆಯು ತನ್ನ ವೇಗದಿಂದ ಗಂಧರ್ವ, ಯಕ್ಷ, ರಾಕ್ಷಸ ಮತ್ತು ಅಪ್ಸರೆಯರಿಂದ ಶೋಭಿತವಾದ ಕಿರಾತಕಿನ್ನರರಿಗೆ ಆವಾಸಸ್ಥಾನವಾದ ಶ್ರೇಷ್ಠವಾದ ಪರ್ವತವನ್ನು ಗಂಗಾದ್ವಾರದಲ್ಲಿ ಭೇದಿಸಿದಳು. ಆ ಕ್ಷೇತ್ರವು ಬ್ರಹ್ಮರ್ಷಿಗಣ ಸೇವಿತವಾಗಿ ಪವಿತ್ರವಾದುದೆಂದು ಪ್ರಸಿದ್ಧವಾಗಿದೆ. ಎಲೈ ರಾಜನೇ, ಮಹರ್ಷಿಗಳ ಸಮಾಗಮದಿಂದ ಸೇವಿತವಾದ ಆ ಸ್ಥಳದಲ್ಲಿ ಭೃಗು ಋಷಿಗಳು ತಪಸ್ಸನ್ನು ಮಾಡಿದರು. ಭೃಗುತುಂದ ಎಂಬ ಶ್ರೇಷ್ಠ ಪರ್ವತರೂಪವಾದ ಆ ಆಶ್ರಮವು ಪ್ರಖ್ಯಾತವಾಗಿದೆ.

ಯಚ್ಚ ಭೂತಂ ಭವಿಷ್ಯಚ್ಚ ಭವಚ್ಚ ಭರತರ್ಷಭ ।
ನಾರಾಯಣಃ ಪ್ರಭುರ್ವಿಷ್ಣುಃ ಶಾಶ್ವತಃ ಪುರುಷೋತ್ತಮಃ ॥೨೦॥

ತಸ್ಯಾತಿಯಶಸಃ ಪುಣ್ಯಾಂ ವಿಶಾಲಾಂ ಬದರೀಮನು ।
ಆಶ್ರಮಃ ಖ್ಯಾಯತೇ ಪುಣ್ಯಂ ತ್ರಿಷು ಲೋಕೇಷು ಭಾರತ ॥೨೧॥

ಎಲೈ ಭರತರ್ಷಭನೇ, ಭೂತಭವ್ಯಭವತ್ಪ್ರಭುವೆಂದು, ಪುರುಷೋತ್ತಮನೆಂದು, ಶಾಶ್ವತನೆಂದು, ವಿಷ್ಣುವೆಂದು ಕರೆಯಲ್ಪಡುವ ಮಹಾಕೀರ್ತಿವಂತನಾದ ನಾರಾಯಣನ ಆಶ್ರಮವು ವಿಶಾಲಾ ಎಂದು ಕರೆಯಲ್ಪಡುವ ಬದರೀಕ್ಷೇತ್ರದಲ್ಲಿದೆ. ಎಲೈ ಭಾರತನೇ, ಆ ಆಶ್ರಮವು ಬಹಳ ಪವಿತ್ರವಾದುದೆಂದು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ.

ಉಷ್ಣಾತೋಯವಹಾ ಗಂಗಾ ಶೀತತೋಯವಹಾऽಪರಾ ।
ಸುವರ್ಣಸಿಕತಾ ರಾಜನ್ ವಿಶಾಲಾಂ ಬದರೀಮನು ॥೨೨॥

ಎಲೈ ರಾಜನೇ, ಬದರೀವಿಶಾಲಾಕ್ಷೇತ್ರದಲ್ಲಿ ಉಷ್ಣಜಲವನ್ನು ಹೊಂದಿರುವ ಉಷ್ಣಗಂಗೆಯೂ ಶೀತಜಲವನ್ನು ಹೊಂದಿರುವ ಇನ್ನೊಂದು ಶೀತಗಂಗೆಯೂ ಇದೆ. ಆ ಗಂಗೆಯ ಪಾರ್ಶ್ವದಲ್ಲಿ ಸುವರ್ಣಮಯವಾದ ಮರುಳಗಳು ಇವೆ.

ಋಷಯೋ ಯತ್ರ ದೇವಾಶ್ಚ ಮಹಾಭಾಗಾ ಮಹೌಜಸಃ ।
ಪ್ರಾಪ್ಯ ನಿತ್ಯಂ ನಮಸ್ಯಂತೇ ದೇವಂ ನಾರಾಯಣಂ ಪ್ರಭುಮ್ ॥೨೩॥

ಅಲ್ಲಿ ಮಹಾಸಾಮರ್ಥ್ಯೋಪೇತರಾದ ಮಹಾನುಭಾವರಾದ ದೇವತೆಗಳು ಮತ್ತು ಋಷಿಗಳು ಪ್ರತಿನಿತ್ಯವೂ ಬಂದು ಪ್ರಭುವಾದ ನಾರಾಯಣದೇವರಿಗೆ ನಮಸ್ಕಾರವನ್ನು ಸಲ್ಲಿಸುತ್ತಾರೆ.

ಯತ್ರ ನಾರಾಯಣೋ ದೇವಃ ಪರಮಾತ್ಮಾ ಸನಾತನಃ ।
ತತ್ರ ಕೃತ್ಸ್ನಂ ಜಗತ್ ಪಾರ್ಥ ತೀರ್ಥಾನ್ಯಾಯತನಾನಿ ಚ ॥೨೪॥

ಎಲೈ ಪಾರ್ಥನೇ, ಎಲ್ಲಿ ಸನಾತನನಾದ ಪರಮಾತ್ಮನಾದ, ದೇವನಾದ ನಾರಾಯಣನಿದ್ದಾನೆಯೋ ಅಲ್ಲಿ ಸಮಸ್ತವಾದ ಜಗತ್ತು, ಎಲ್ಲಾ ತೀರ್ಥಗಳು ಮತ್ತು ಎಲ್ಲಾ ಕ್ಷೇತ್ರಗಳೂ ಇರುತ್ತವೆ.

ತತ್ ಪುಣ್ಯಂ ತತ್ ಪರಂ ಬ್ರಹ್ಮ ತತ್ ತೀರ್ಥಂ ತತ್ ತಪೋವನಮ್।
ತತ್ರ ದೇವರ್ಷಯಃ ಸಿದ್ಧಃ ಸರ್ವೇ ಚೈವ ತಪೋಧನಾಃ ॥೨೫॥

ಆದಿದೇವೋ ಮಹಾಯೋಗೀ ಯತ್ರಾಸ್ತೇ ಮಧುಸೂದನಃ ।
ಪುಣ್ಯಾನಾಮಪಿ ತತ್ ಪುಣ್ಯಂ ಮಾ ಭೂತ್ ತೇ ಸಂಶಯೋಽತ್ರ ವೈ ॥

ಆದಿದೇವನೂ, ಮಹಾಯೋಗಿಯೂ ಆದ ಮಧುಸೂದನನು ಎಲ್ಲಿ ಇದ್ದಾನೆಯೋ ಅದೇ ಪವಿತ್ರವಾದ ಸ್ಥಳ; ಅವನೇ ಪರಂಬ್ರಹ್ಮ; ಅದೇ ತೀರ್ಥ; ಅದೇ ತಪೋವನ. ಅಲ್ಲಿ ಎಲ್ಲಾ ದೇವತೆಗಳು, ಋಷಿಗಳು, ಸಿದ್ಧರು ಮತ್ತು ತಪೋಧನರೂ ಇರುತ್ತಾರೆ. ಅದು ಪವಿತ್ರವಾದ ಕ್ಷೇತ್ರಗಳಿಗಿಂತ ಪರಮಪವಿತ್ರವಾದುದು. ಈ ವಿಷಯದಲ್ಲಿ ನಿನಗೆ ಸಂಶಯವು ಇಲ್ಲದಿರಲಿ.

ವಿತಾನಿ ರಾಜನ್ ಪುಣ್ಯಾನಿ ಪೃಥಿವ್ಯಾಂ ಪೃಥಿವೀಪತೇ ।
ಕೀರ್ತಿತಾನಿ ನರಶ್ರೇಷ್ಠ ತೀರ್ಥಾನ್ಯಾಯತನಾನಿ ಚ ॥೨೬॥

ಎಲೈ ರಾಜನೇ, ಪೃಥಿವೀಪತಿಯೇ, ನರಶ್ರೇಷ್ಠನೇ, ಇವು ಭೂಮಿಯ ಮೇಲಿರುವ ಪವಿತ್ರವಾದ ತೀರ್ಥಕ್ಷೇತ್ರಗಳು. ಇವುಗಳನ್ನು ನಾನು ನಿನಗೆ ಹೇಳಿದ್ದೇನೆ.

ಏತಾನಿ ವಸುಭಿಃಸಾಧ್ಯೈರಾದಿತ್ಯೈರ್ಮರುದಶ್ವಿಭಃ ।
ಋಷಿಭಿರ್ಬ್ರಹ್ಮಕಲ್ಪೈಶ್ಚ ಸೇವಿತಾನಿ ಮಹಾತ್ಮಭಿಃ ॥೨೮॥

ಈ ತೀರ್ಥಕ್ಷೇತ್ರಗಳು ಮಹಾತ್ಮರಾದ ವಸುಗಳಿಂದಲೂ, ಸಾಧ್ಯರಿಂದಲೂ, ಆದಿತ್ಯರಿಂದಲೂ, ಮರುತ್ತುಗಳಿಂದಲೂ, ಅಶ್ವಿನಿಗಳಿಂದಲೂ, ಬ್ರಹ್ಮಕಲ್ಪರಾದ ಋಷಿಗಳಿಂದಲೂ ಸೇವಿಸಲ್ಪಡುತ್ತವೆ.

ಚರನ್ನೇತಾನಿ ಕೌಂತೇಯ ಸಹಿತೋ ಬ್ರಾಹ್ಮಣರ್ಷಭೈಃ ।
ಭ್ರಾತೃಭಿಶ್ಚ ಮಹಾಭಾಗೈರುತ್ಕಂಠಾಂ ವಿಜಹಿಷ್ಯಸಿ ॥೨೯॥

ಎಲೈ ಕೌಂತೇಯನೇ, ನೀನು ಬ್ರಾಹ್ಮಣಶ್ರೇಷ್ಠರ ಮತ್ತು ಮಹಾನುಭಾವರಾದ ತಮ್ಮಂದಿರ ಜೊತೆಯಲ್ಲಿ ಈ ತೀರ್ಥಕ್ಷೇತ್ರಯಾತ್ರೆಯನ್ನು ಮಾಡಿದರೆ ನಿನ್ನ ಮನಸ್ಸಿನ ದುಗುಡವು ಪರಿಹಾರ ಹೊಂದುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಶೀತಿತಮೋಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತಾರನೆಯ ಅಧ್ಯಾಯ

ಇಂದ್ರನ ವಚನದಂತೆ ಲೋಮಶರಿಂದ ಯುಧಿಷ್ಠಿರನಿಗೆ
ಅರ್ಜುನನ ವೃತ್ತಾಂತ ಕಥನ.

ವೈಶಂಪಾಯನಃ

ಏವಂ ಸಂಭಾಷಮಾಣೇ ಚ ಧೌಮ್ಯೇ ಕೌರವನಂದನಮ್ ।

ಲೋಮಶಃ ಸುಮಹಾತೇಜಾ ಋಷಿಸ್ತತ್ರಾಜಗಾಮ ಹ ॥೧॥

ವೈಶಂಪಾಯನ– ಹೀಗೆ ಧೌಮ್ಯರು ಕೌರವನಂದನನಾದ ಯುಧಿಷ್ಠಿರನನ್ನು ಕುರಿತು ಮಾತನಾಡುತ್ತಿರುವಾಗ ಮಹಾತೇಜಸ್ವಿಗಳಾದ ಲೋಮಶ ಋಷಿಗಳು ಅಲ್ಲಿಗೆ ಬಂದರು.

ತಂ ಪಾಂಡವಾಗ್ರಜೋ ರಾಜಾ ಸಾನುಜೋ ಬ್ರಾಹ್ಮಣಾಶ್ಚ ತೇ ।
ಉದತಿಷ್ಠನ್ಮಹಾಭಾಗಂ ದಿವಿ ಶಕ್ರಂ ಯಥಾಮರಾಃ ॥೨॥

ಪಾಂಡವರಲ್ಲಿ ಅಗ್ರಜನಾದ ಧರ್ಮರಾಜನು ತಮ್ಮಂದಿರು ಮತ್ತು ಬ್ರಾಹ್ಮಣರ ಜೊತೆಯಲ್ಲಿ ಆ ಮಹಾನುಭಾವನನ್ನು ನೋಡಿ ಸ್ವರ್ಗದಲ್ಲಿ ಇಂದ್ರನನ್ನು ನೋಡಿದ ದೇವತೆಗಳಂತೆ ಎದ್ದುನಿಂತನು.

ತಮಭ್ಯರ್ಚ್ಯ ಯಥಾನ್ಯಾಯಂ ಧರ್ಮಪುತ್ರೋ ಯುಧಿಷ್ಠಿರಃ ।
ಪಪ್ರಚ್ಛಾಗಮನೇ ಹೇತುಂ ಮಹರ್ಷಿಂ ಲೋಕವಿಶ್ರುತಮ್ ॥೩॥

ಧರ್ಮಪುತ್ರನಾದ ಯುಧಿಷ್ಠಿರನು ವಿಧಿವತ್ತಾಗಿ ಅವರಿಗೆ ಪೂಜೆಯನ್ನು ಸಲ್ಲಿಸಿ ಲೋಕವಿಖ್ಯಾತರಾದ ಆ ಮಹರ್ಷಿಗಳನ್ನು ಕುರಿತು ಅವರ ಆಗಮನದ ಕಾರಣವನ್ನು ಕೇಳಿದನು.

ಸ ಪೃಷ್ಟಃ ಪಾಂಡುಪುತ್ರೇಣ ಪ್ರೀಯಮಾಣೋ ಮಹಾಮನಾಃ ।
ಉವಾಚ ಶ್ಲಕ್ಷ್ಣಯಾ ವಾಚಾ ಹರ್ಷಯನ್ನಿವ ಪಾಂಡವಾನ್ ॥೪॥

ಪಾಂಡುಪುತ್ರನಿಂದ ಹೀಗೆ ಕೇಳಲ್ಪಟ್ಟ ಉದಾತ್ತಮನಸ್ಸುಳ್ಳ ಲೋಮಶರು ಸಂತೋಷ ಪಡುತ್ತಾ ತಮ್ಮ ಮಧುರವಾದ ಮಾತುಗಳಿಂದ ಪಾಂಡವರಿಗೆ ಸಂತೋಷವನ್ನು ಉಂಟು ಮಾಡುತ್ತಾ ಮಾತನಾಡಿದರು.

ಸಂಚರನ್ಸ್ಮಿ ಕೌಂತೇಯ ಸರ್ವಾಂಲ್ಲೋಕಾನ್ ಯದೃಚ್ಛಯಾ ।
ಗತಃಶಕ್ರಸ್ಯ ಭವನಂ ತತ್ರಾಪಶ್ಯಂ ಸುರೇಶ್ವರಮ್ ॥೫॥

ಎಲೈ ಕೌಂತೇಯನೇ, ನಾನು ಯದೃಚ್ಛೆಯಿಂದ ಎಲ್ಲಾ ಲೋಕಗಳನ್ನೂ ಸಂಚರಿಸುತ್ತಾ ಇಂದ್ರನ ಭವನಕ್ಕೆ ಹೋಗಿ ಅಲ್ಲಿ ಇಂದ್ರನನ್ನು ನೋಡಿದೆನು.

ತವ ಚ ಭ್ರಾತರಂ ವೀರಮಪಶ್ಯಂ ಸವ್ಯಸಾಚಿನಮ್ ।
ಶಕ್ರಸ್ಯಾರ್ಧಾಸನಗತಂ ತತ್ರ ಮೇ ವಿಸ್ಮಯೋ ಮಹಾನ್ ॥೬॥

ಆಸೀತ್ ಪುರುಷಶಾರ್ದೂಲ ದೃಷ್ಟ್ವಾ ಪಾರ್ಥಂ ತಥಾಗತಮ್ ।
ಆಹ ಮಾಂ ತತ್ರ ದೇವೇಂದ್ರೋ ಗಚ್ಛ ಪಾಂಡುಸುತಾನಿತಿ ॥೭॥

ಅಲ್ಲಿ ಶಕ್ರನ ಅರ್ಧಾಸನದಲ್ಲಿ ಕುಳಿತಿದ್ದ ನಿನ್ನ ತಮ್ಮನಾದ ವೀರನಾದ ಸವ್ಯಸಾಚಿಯನ್ನೂ ನೋಡಿದನು. ಪುರುಷಶಾರ್ದೂಲನೇ, ಆ ರೀತಿಯಲ್ಲಿದ್ದ ಅರ್ಜುನನನ್ನು ನೋಡಿ ನನಗೆ ಬಹಳ ಆಶ್ಚರ್ಯವುಂಟಾಯಿತು. ಆಗ ದೇವೇಂದ್ರನು ನೀನು ಪಾಂಡವರ ಬಳಿಗೆ ಹೋಗು ಎಂದು ನನಗೆ ಹೇಳಿದನು.

ಸೋಽಹಮಭ್ಯಾಗತಃ ಕ್ಷಿಪ್ರಂ ದಿದೃಕ್ಷುಸ್ತ್ವಾಂ ಸಹಾನುಜಮ್ ।
ವಚನಾತ್ ಪುರುಹೂತಸ್ಯ ಪಾರ್ಥಸ್ಯ ಚ ಮಹಾತ್ಮನಃ ॥೮॥

ಅಂತಹ ನಾನು ತಮ್ಮಂದಿರ ಸಹಿತನಾದ ನಿನ್ನನ್ನು ನೋಡುವ ಉದ್ದೇಶದಿಂದ ಇಂದ್ರನ ವಚನದಂತೆ ಮತ್ತು ಮಹಾತ್ಮನಾದ ಅರ್ಜುನನ ವಚನದಂತೆ ಇಲ್ಲಿಗೆ ಬಂದಿದ್ದೇನೆ.

ಆಖ್ಯಾಸ್ಯೇ ತೇ ಪ್ರಿಯಂ ತಾತ ಮಹತ್ ಪಾಂಡವನಂದನ ।
ಭ್ರಾತೃಭಿಃ ಸಹಿತೋ ರಾಜನ್ ಕೃಷ್ಣಯಾ ಚೈವ ತಚ್ಛೃಣು ॥೯॥

ಎಲೈ ಪ್ರೀತಿಪಾತ್ರನಾದ ಪಾಂಡವನಂದನನೇ, ನಿನಗೆ ಬಹಳ ಪ್ರಿಯವಾದ ವಾರ್ತೆಯನ್ನು ಹೇಳುತ್ತೇನೆ. ರಾಜನೇ, ತಮ್ಮಂದಿರ ಮತ್ತು ದ್ರೌಪದಿಯ ಜೊತೆಯಲ್ಲಿ ಇದನ್ನು ಕೇಳು.

ಯಸ್ತ್ವಯೋಕ್ತೋ ಮಹಾಬಾಹುರಸ್ತ್ರಾರ್ಥಂ ಪಾಂಡವರ್ಷಭ ।
ತದಸ್ತ್ರಮಾಪ್ತಂ ಪಾರ್ಥೇನ ರುದ್ರಾದಪ್ರತಿಮಂ ಮಹತ್ ॥೧೦॥

ಎಲೈ ಪಾಂಡವರ್ಷಭನೇ, ನೀನು ಮಹಾಬಾಹುವಾದ ಅರ್ಜುನನಿಗೆ ಯಾವ ಅಸ್ತ್ರವನ್ನು ಪಡೆಯಬೇಕೆಂದು ಹೇಳಿದ್ದೆಯೋ ಆ ಅಪ್ರತಿಮವಾದ ಮಹಾಸ್ತ್ರವನ್ನು ಅರ್ಜುನನು ರುದ್ರನಿಂದ ಪಡೆದಿದ್ದಾನೆ.

ಯತ್ತದ್ ಬ್ರಹ್ಮಶಿರೋ ನಾಮ ತಪಸಾ ರುದ್ರಮಾಗತಮ್ ।
ಅಮೃತಾದುತ್ಥಿತಂ ರೌದ್ರಂ ತಲ್ಲಬ್ಧಂ ಸವ್ಯಸಾಚಿನಾ ॥೧೧॥

ತತ್ ಸಮಂತ್ರಂ ಸಸಂಹಾರಂ ಸಪ್ರಾಯಶ್ಚಿತ್ತಮಂಗಲಮ್ ।
ವಜ್ರಂ ಚಾನ್ಯಾನಿ ಚಾಸ್ತ್ರಾಣಿ ದಂಡಾದೀನಿ ಯುಧಿಷ್ಠಿರ ॥೧೨॥

ಯಮಾತ್ ಕುಬೇರಾದ್ವರುಣಾದ್ ಇಂದ್ರಾಚ್ಚ ಕುರುನಂದನ ।
ಅಸ್ತ್ರಾಣ್ಯಧೀತವಾನ್ ಪಾರ್ಥೋ ದಿವ್ಯಾನ್ಯಮಿತವಿಕ್ರಮಃ ॥೧೩॥

ಅಮೃತದಿಂದ ಉತ್ಪನ್ನವಾದ, ಘೋರವಾದ ಯಾವ ಬ್ರಹ್ಮಶಿರೋಸ್ತ್ರವು ರುದ್ರದೇವರ ಬಳಿಯಲ್ಲಿದ್ದಿತೋ ಅದನ್ನು ಅರ್ಜುನನು ಮಂತ್ರ, ಉಪಸಂಹಾರ, ಪ್ರಾಯಶ್ಚಿತ್ತ ಮತ್ತು ಮಂಗಳವಿಧಿಗಳೊಡನೆ ಸಂಪಾದಿಸಿದ್ದಾನೆ. ಎಲೈ ಯುಧಿಷ್ಠಿರನೇ, ಹಾಗೆಯೇ ವಜ್ರಾಯುಧವನ್ನೂ ಮತ್ತು ಉಳಿದ ದಂಡ ಮೊದಲಾದ ಅಸ್ತ್ರಗಳನ್ನು ಇಂದ್ರನಿಂದಲೂ, ಯಮನಿಂದಲೂ, ಕುಬೇರನಿಂದಲೂ, ವರುಣನಿಂದಲೂ ಪಡೆದಿದ್ದಾನೆ. ಎಲೈ ಕುರುನಂದನನೇ, ಅಮಿತವಿಕ್ರಮನಾದ ಅರ್ಜುನನು ಅಂತಹ ದಿವ್ಯಾಸ್ತ್ರಗಳನ್ನು ಉಪದೇಶಪೂರ್ವಕವಾಗಿ ಸಂಪಾದಿಸಿದ್ದಾನೆ.

ವಿಶ್ವಾವಸೋಶ್ಚ ತನಯಾದ್ ಗೀತಂ ನೃತ್ತಂ ಚ ಸಾಮ ಚ ।
ವಾದಿತ್ರಂ ಚ ಯಥಾನ್ಯಾಯಂ ಪ್ರತ್ಯವಿಂದದ್ ಯಥಾವಿಧಿ ॥೧೪॥

ವಿಶ್ವಾವಸುವಿನ ಪುತ್ರನಿಂದ ಸಂಗೀತವನ್ನು, ನೃತ್ಯವನ್ನು, ಸಾಮವನ್ನು ಮತ್ತು ವಾದ್ಯಗಳನ್ನು ವಿಧಿಪೂರ್ವಕವಾಗಿ ಶಾಸ್ತ್ರೋಕ್ತರೀತಿಯಲ್ಲಿ ಸಂಪಾದಿಸಿದ್ದಾನೆ.

ಏವಂ ಕೃತಾಸ್ತ್ರಃ ಕೌಂತೇಯೋ ಗಾಂಧರ್ವಂ ವೇದಮಾಪ್ತವಾನ್ ।
ಸುಖಂ ವಸತಿ ಬೀಭತ್ಸುರನುಜಸ್ಯಾನುಜಸ್ತವ ॥೧೫॥

ಹೀಗೆ ಅಸ್ತ್ರಗಳನ್ನು ಕೃತಾರ್ಥನಾದ ಅರ್ಜುನನು ಗಾಂಧರ್ವವಿದ್ಯೆಯನ್ನೂ ಸಂಪಾದಿಸಿದ್ದಾನೆ. ನಿನ್ನ ತಮ್ಮನ ತಮ್ಮನಾದ ಅರ್ಜುನನು ಸುಖವಾಗಿ ಸ್ವರ್ಗದಲ್ಲಿ ವಾಸವಾಗಿದ್ದಾನೆ.

ಯದರ್ಥಂ ಮಾ ಸುರಶ್ರೇಷ್ಠ ಇದಂ ವಚನಮಬ್ರವೀತ್ ।
ತಚ್ಚ ತೇ ಕಥಯಿಷ್ಯಾಮಿ ಯುಧಿಷ್ಠಿರ ನಿಬೋಧ ತತ್ ॥೧೬॥

ಯುಧಿಷ್ಠಿರನೇ, ದೇವಶ್ರೇಷ್ಠನಾದ ಇಂದ್ರನು ಯಾವ ಉದ್ದೇಶದಿಂದ ನನ್ನನ್ನು ಇಲ್ಲಿಗೆ ಕಳುಹಿಸಿದನೋ ಅಂತಹ ಅವನ ಸಂದೇಶವನ್ನು ನಿನಗೆ ಹೇಳುವೆನು. ಅದನ್ನು ತಿಳಿ.

ಇಂದ್ರಃ

ಭವಾನ್ ಮನುಷ್ಯಲೋಕಾಯ ಗಮಿಷ್ಯತಿ ನ ಸಂಶಯಃ ।
ಬ್ರೂಯಾದ್ ಯುಧಿಷ್ಠಿರಂ ತತ್ರ ವಚನಂ ಮೇ ದ್ವಿಜೋತ್ತಮ ॥೧೭॥

ಇಂದ್ರ– ಎಲೈ ದ್ವಿಜಶ್ರೇಷ್ಠನೇ, ನೀನು ನಿಸ್ಸಂಶಯವಾಗಿ ಮನುಷ್ಯಲೋಕಕ್ಕೆ ಹೋಗುವಿ. ಅಲ್ಲಿ ನನ್ನ ವಚನದಂತೆ ಯುಧಿಷ್ಠಿರನನ್ನು ಕುರಿತು ಹೀಗೆ ಹೇಳು.

ಆಗಮಿಷ್ಯತಿ ತೇ ಭ್ರಾತಾ ಕೃತಾಸ್ತ್ರಃ ಕ್ಷಿಪ್ರಮರ್ಜುನಃ ।
ಸುರಕಾರ್ಯಂ ಮಹತ್ ಕೃತ್ವಾ ಯದಶಕ್ಯಂ ದಿವೌಕಸಾಮ್ ॥೧೮॥

ನಿನ್ನ ತಮ್ಮನಾದ ಅರ್ಜುನನು ದೇವತೆಗಳಿಗೂ ಅಸಾಧ್ಯವಾದ ದೊಡ್ಡ ದೇವತಾ ಕಾರ್ಯವನ್ನು ಮಾಡಿ ಶೀಘ್ರದಲ್ಲಿಯೇ ಬರುವನು.

ತಪಸಾ ತು ತ್ವಮಾತ್ಮಾನಂ ಭ್ರಾತೃಭಿಃಸಹ ಯೋಜಯ ।
ತಪಸೋ ಹಿ ಸಮಂ ನಾಸ್ತಿ ತಪಸಾ ವಿಂದತೇ ಮಹತ್ ॥೧೯॥

ನೀನು ಮತ್ತು ನಿನ್ನ ತಮ್ಮಂದಿರು ತಪಸ್ಸನ್ನು ಆಚರಿಸಿ. ತಪಸ್ಸಿಗೆ ಸಮಾನವಾದುದು ಯಾವುದೂ ಇಲ್ಲ. ತಪಸ್ಸಿನಿಂದ ಯಾವ ದೊಡ್ಡ ಕಾರ್ಯವನ್ನೂ ಸಾಧಿಸಬಹುದು.

ಅಹಂ ಚ ಕರ್ಣಂ ಜಾನಾಮಿ ಯಥಾವತ್ ಪುರುಷರ್ಷಭ ।
ನ ಸ ಪಾರ್ಥಸ್ಯ ಸಂಗ್ರಾಮೇ ಕಲಾಮರ್ಹತಿ ಷೋಡಶೀಮ್ ॥೨೦॥

ಎಲೈ ಪುರುಷರ್ಷಭನೇ, ನಾನು ಕರ್ಣನನ್ನು ಯಥಾರ್ಥವಾಗಿ ತಿಳಿದಿದ್ದೇನೆ. ಅವನು ಯುದ್ಧದಲ್ಲಿ ಅರ್ಜುನನ ಹದಿನಾರನೆಯ ಒಂದು ಕಲೆಗೂ ಸಮಾನನಲ್ಲ.

ಯಚ್ಚಾಪಿ ತೇ ಭಯಂ ತಸ್ಮಾನ್ಮನಸಿಸ್ಥಮರಿಂದಮ ।
ತಚ್ಚಾಪ್ಯಹಂ ಪರಿಹರಿಷ್ಯಾಮಿ ಸವ್ಯಸಾಚಾವಿಹಾಗತೇ ॥೨೧॥

ಎಲೈ ಅರಿಂದಮನೇ, ನಿನ್ನ ಮನಸ್ಸಿನಲ್ಲಿಯಾವ ಭಯವಿದೆಯೋ ಅದನ್ನೂ ಸಹ ಅರ್ಜುನನು ಇಲ್ಲಿ ಬಂದಾಗ ಪರಿಹರಿಸುವೆನು.

ಯಚ್ಚ ತೇ ಮಾನಸಂ ವೀರ ತೀರ್ಥಯಾತ್ರಾಮಿಮಾಂ ಪ್ರತಿ ।
ತಚ್ಚ ತೇ ಲೋಮಶಃ ಸರ್ವಂ ಕಥಯಿಷ್ಯತ್ಯಸಂಶಯಮ್ ॥೨೨॥

ಎಲೈ ವೀರನೇ, ತೀರ್ಥಯಾತ್ರೆಯನ್ನು ಕುರಿತು ನಿನ್ನ ಮನಸ್ಸಿನಲ್ಲಿ ಯಾವ ಸಂಕಲ್ಪವಿದೆಯೋ ಆ ವಿಷಯದಲ್ಲಿ ಲೋಮಶರು ನಿನಗೆ ನಿಸ್ಸಂಶಯವಾಗಿ ಎಲ್ಲವನ್ನೂ ತಿಳಿಸುವರು.

ಯಚ್ಚ ಕಿಂಚಿತ್ ತಪೋಯುಕ್ತಂ ಫಲಂ ತೀರ್ಥೇಷು ಭಾರತ ।
ಬ್ರಹ್ಮರ್ಷಿರೇಷ ಯದ್‌ಬ್ರೂಯಾತ್ ತಚ್ಛ್ರದ್ಧೇಯಂ ನ ಚಾನ್ಯಥಾ ॥೨೩॥

ಎಲೈ ಭಾರತನೇ, ತೀರ್ಥಗಳಲ್ಲಿ ಮಾಡಿದ ತಪಸ್ಸುಗಳಿಗೆ ಈ ಬ್ರಹ್ಮರ್ಷಿಗಳು ಯಾವ ಯಾವ ಫಲವನ್ನು ಹೇಳುತ್ತಾರೆಯೋ ಆದರಲ್ಲಿ ಶ್ರದ್ಧೆಯನ್ನು ಮಾಡಬೇಕು. ಬೇರೆ ರೀತಿಯಲ್ಲಿ ಯೋಚನೆಯನ್ನು ಮಾಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಡಶೀತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೇಳನೆಯ ಅಧ್ಯಾಯ

ಲೋಮಶರ ವಚನದಂತೆ ಪರಿವಾರವನ್ನು ಅಲ್ಲೀಕರಿಸಿ ಯುಧಿಷ್ಠಿರನ ತೀರ್ಥಯಾತ್ರಾಗಮನ ಪ್ರಯತ್ನ.

ಲೋಮಶಃ

ಧನಂಜಯೇನ ಚಾಪ್ಯುಕ್ತಂ ಯತ್ ತಚ್ಛೃಣು ಯುಧಿಷ್ಠಿರ ।
ಭ್ರಾತರಂ ಮೇ ಯೋಜಯೇಸ್ತ್ವಂ ತೀರ್ಥಪುಣ್ಯೇನ ಪಾಂಡವಮ್।
ಭ್ರಾತರಂ ಮೇಽನುಜೈಃ ಸಾರ್ಧಂ ಯೋಜಯೇರ್ಧರ್ಮ್ಯಯಾ ಧಿಯಾ ॥

ಲೋಮಶರು– ಯುಧಿಷ್ಠಿರನೇ, ಧನಂಜಯನು ಹೇಳಿದ ವಿಷಯವನ್ನೂ ನೀನು ಕೇಳು. ನನ್ನ ಅಣ್ಣನಾದ ಧರ್ಮರಾಜನನ್ನೂ ಮತ್ತು ಅವನ ಅನುಜರನ್ನೂ

ತೀರ್ಥಯಾತ್ರಾ ಪುಣ್ಯದಿಂದಲೂ ಮತ್ತು ಧರ್ಮಬುದ್ಧಿಯಿಂದಲೂ ನೀವು ಸಂಯೋಜಿಸಬೇಕು.

ತ್ವಂ ಹಿ ಧರ್ಮಾನ್ ಪರಾನ್ ವೇತ್ಥ ತಪಾಂಸಿ ಚ ತಪೋಧನ ।
ಶ್ರೇಮತಾಂ ಚಾಪಿ ಜಾನಾಸಿ ಧರ್ಮಂ ರಾಜ್ಞಾಂ ಸನಾತನಮ್ ॥೨॥

ಎಲೈ ತಪೋಧನರೇ, ನೀವು ಶ್ರೇಷ್ಠವಾದ ಧರ್ಮಗಳನ್ನು ಮತ್ತು ತಪಸ್ಸುಗಳನ್ನು ತಿಳಿದಿದ್ದೀರಿ. ಶ್ರೀಮಂತರಾದ ರಾಜರ ಸನಾತನ ಧರ್ಮಗಳನ್ನೂ ತಿಳಿದಿದ್ದೀರಿ.

ಸ ಭವಾನ್ ಯತ್ ಪರಂ ವೇದ ಪಾವನಂ ಪುರುಷಾನ್ ಪ್ರತಿ ।
ತೇನ ಸಂಯೋಜಯೇತ್ಥಾಸ್ತ್ವಂ ತೀರ್ಥಪುಣ್ಯೇನ ಪಾಂಡವಮ್ ॥೩॥

ಅಂತಹ ನೀವು ಪುರುಷರಿಗೆ ಯಾವುದು ಶ್ರೇಷ್ಠವೆಂದು ತಿಳಿದಿದ್ದೀರೋ ಅಂತಹ ತೀರ್ಥಯಾತ್ರಾಪುಣ್ಯದಿಂದ ಪಾಂಡವನಾದ ನನ್ನ ಅಣ್ಣನನ್ನು ಯುಕ್ತನನ್ನಾಗಿ ಮಾಡಬೇಕು.

ಯಥಾ ತೀರ್ಥಾನಿ ಗಚ್ಛೇತ ಗಾಶ್ಚ ದದ್ಯಾತ್ ಸ ಪಾರ್ಥಿವಃ ।
ತಥಾ ಸರ್ವಾತ್ಮನಾ ಕಾರ್ಯಮಿತಿ ಮಾಂ ವಿಜಯೋಽಬ್ರವೀತ್ ॥೪॥

ಹೇಗೆ ರಾಜನಾದ ಯುಧಿಷ್ಠಿರನು ತೀರ್ಥಯಾತ್ರೆಗೆ ಹೋಗಿ ಗೋದಾನವನ್ನು ಮಾಡುತ್ತಾನೆಯೋ ಅದಕ್ಕೆ ಅನುಗುಣವಾಗಿ ಸರ್ವಥಾ ಮಾಡಬೇಕು ಎಂದು ನನ್ನನ್ನು ಕುರಿತು ಅರ್ಜುನನು ಹೇಳಿದನು.

ಭವತಾ ಚಾನುಗುಪ್ತೋಽಸೌ ಚರೇತ್ ತೀರ್ಥಾನಿ ಸರ್ವಶಃ ।
ರಕ್ಷೋಭ್ಯೋ ರಕ್ಷಿತವ್ಯಶ್ಚ ದುರ್ಗೇಷು ವಿಷಮೇಷು ಚ ॥೫॥

ನಿಮ್ಮಿಂದ ರಕ್ಷಿತನಾಗಿ ಧರ್ಮರಾಜನು ಎಲ್ಲಾತೀರ್ಥಯಾತ್ರೆಯನ್ನೂ ಮಾಡಲಿ. ದುರ್ಗಗಳಲ್ಲಿಯೂ ಮತ್ತು ವಿಷಮಪ್ರದೇಶಗಳಲ್ಲಿಯೂ ನೀವು ಅವನನ್ನು ರಾಕ್ಷಸರಿಂದ ರಕ್ಷಿಸಬೇಕು.

ದಧೀಚಿರಿವ ದೇವೇಂದ್ರಂ ಯಥಾ ಚಾಪ್ಯಂಗಿರಾ ರವಿಮ್ ।
ತಥಾ ರಕ್ಷಸ್ವ ಕೌಂತೇಯಂ ರಾಕ್ಷಸೇಭ್ಯೋ ದ್ವಿಜೋತ್ತಮ ॥೬॥

ಎಲೈ ದ್ವಿಜೋತ್ತಮರೇ, ದಧೀಚಿಯು ದೇವೇಂದ್ರನನ್ನು ರಕ್ಷಿಸಿದಂತೆ, ಅಂಗಿರಸರು ಸೂರ್ಯನನ್ನು ರಕ್ಷಿಸಿದಂತೆ, ಧರ್ಮರಾಜನನ್ನು ನೀವು ರಾಕ್ಷಸರಿಂದ ರಕ್ಷಿಸಬೇಕು.

ಯಾತುಧಾನಾ ಹಿ ಬಹವೋ ರಾಕ್ಷಸಾಃ ಪರ್ವತೋಪಮಾಃ ।

ತ್ವಯಾ ಹಿ ಗುಪ್ತಾನ್ ಕೌಂತೇಯಾನ್ ನಾತಿವರ್ತೇಯುರಂತಿಕಾತ್ ॥೭॥

ಯಾತುಧಾನರು ಮತ್ತು ಪರ್ವತದಂತಹ ಶರೀರವುಳ್ಳ ಅನೇಕ ರಾಕ್ಷಸರು ಸಹ ನಿಮ್ಮಿಂದ ರಕ್ಷಿತರಾದ ಪಾಂಡವರ ಬಳಿಯಲ್ಲಿಯೂ ಸುಳಿಯಲಾರರು.

ಸೋಽಹಮಿಂದ್ರಸ್ಯ ವಚನಾನ್ನಿಯೋಗಾದರ್ಜುನಸ್ಯ ಚ ।
ರಕ್ಷಮಾಣೋ ಭಯೇಭ್ಯಸ್ತ್ವಾಂ ಚರಿಷ್ಯಾಮಿ ತ್ವಯಾ ಸಹ ॥೮॥

ಅಂತಹ ನಾನು ಇಂದ್ರನ ವಚನದಂತೆ ಮತ್ತು ಅರ್ಜುನನ ಆದೇಶದಂತೆ ನಿಮ್ಮನ್ನು ಎಲ್ಲಾ ಭಯಗಳಿಂದಲೂ ರಕ್ಷಿಸುತ್ತಾ ನಿಮ್ಮ ಜೊತೆಯಲ್ಲಿ ಸಂಚರಿಸುವೆನು.

ದ್ವಿಸ್ತೀರ್ಥಾನಿ ಮಯಾ ಪೂರ್ವಂ ದೃಷ್ಟಾನಿ ಕುರುನಂದನ ।
ಇದಂ ತೃತೀಯಂ ದ್ರಕ್ಷ್ಯಾಮಿ ತಾನ್ಯೇವ ಭವತಾ ಸಹ ॥೯॥

ಎಲೈ ಕುರುನಂದನನೇ, ನಾನು ಹಿಂದೆ ಎರಡುಬಾರಿ ತೀರ್ಥಯಾತ್ರೆಯನ್ನು ಮಾಡಿದ್ದೇನೆ. ಈಗ ಮೂರನೆಯ ಬಾರಿಗೆ ನಿನ್ನ ಜೊತೆಯಲ್ಲಿ ಅದೇ ತೀರ್ಥಕ್ಷೇತ್ರಗಳನ್ನು ನೋಡುವೆನು.

ಇಯಂ ರಾಜರ್ಷಿಭಿರ್ಯಾತಾ ಪುಣ್ಯಕೃದ್ಭಿರ್ಯುಧಿಷ್ಠಿರ ।
ಮನ್ವಾದಿಭಿರ್ಮಹಾರಾಜ ತೀರ್ಥಯಾತ್ರಾ ಶುಭಾವಹಾ ॥೧೦॥

ಎಲೈ ಯುಧಿಷ್ಠಿರ ಮಹಾರಾಜನೇ, ಈ ಶುಭಪ್ರದವಾದ ತೀರ್ಥಯಾತ್ರೆಯು ಪುಣ್ಯವಂತರಾದ, ಮನ್ವಾದಿರಾಜರ್ಷಿಗಳಿಂದ ನಡೆದು ಹೋದ ದಾರಿ.

ನಾನೃಜುರ್ನಾಕೃತಾತ್ಮಾ ಚ ನಾವೈದ್ಯೋ ನ ಚ ಪಾಪಕೃತ್ ।
ಸ್ನಾತಿ ತೀರ್ಥೇಷು ಕೌರವ್ಯ ನ ಚ ವಕ್ರಮತಿರ್ನರಃ ॥೧೧॥

ಆರ್ಜವವು ಇಲ್ಲದ, ಮನಶ್ಶುದ್ಧಿ ಇಲ್ಲದ, ವೇದಜ್ಞಾನವಿಲ್ಲದ, ಪಾಪಾಚಾರವನ್ನು ಮಾಡುವ, ವಕ್ರಮತಿಯಾದ ನರನು ಎಲೈ ಕೌರವನೇ, ಎಂದೂ ತೀರ್ಥಗಳಲ್ಲಿ ಸ್ನಾನವನ್ನು ಮಾಡುವುದಿಲ್ಲ.

ತ್ವಂ ತು ಧರ್ಮರತಿರ್ನಿತ್ಯಂ ಧರ್ಮಜ್ಞಃ ಸತ್ಯಸಂಗರಃ ।
ವಿಮುಕ್ತಃ ಸರ್ವಪಾಪೇಭ್ಯೋ ಭೂಯ ಏವ ಭವಿಷ್ಯಸಿ ॥೧೨॥

ನೀನಾದರೋ ಧರ್ಮಜ್ಞಾನ ಇರುವವನು, ಸತ್ಯಸಂಧನಾದವನು ಮತ್ತು ಯಾವಾಗಲೂ ಧರ್ಮರತಿಯುಳ್ಳವನು. ನೀನು ತೀರ್ಥಯಾತ್ರೆಯಿಂದ ಎಲ್ಲ ಪಾಪಗಳಿಂದಲೂ ಇನ್ನೂ ಬಹಳ ಚೆನ್ನಾಗಿ ವಿಮುಕ್ತನಾಗುವಿ.

ಯಥಾ ಭಗೀರಥೋ ರಾಜಾ ರಾಜಾನಶ್ಚ ಗಯಾದಯಃ ।
ಯಥಾ ಯಯಾತಿಃ ಕೌಂತೇಯ ತಥಾ ತ್ವಮಪಿ ಪಾಂಡವ ॥೧೩॥

ಕೌಂತೇಯನೇ, ಪಾಂಡವನೇ, ಹೇಗೆ ಭಗೀರಥರಾಜನೋ, ಹೇಗೆ ಗಯಾದಿ ರಾಜರುಗಳೋ, ಹೇಗೆ ಯಯಾತಿಯೋ ಹಾಗೆಯೇ ನೀನು ಇದ್ದೀಯೆ.

ಯುಧಿಷ್ಠಿರಃ

ನ ಹರ್ಷಾತ್ ಸಂಪ್ರಪಶ್ಯಾಮಿ ವಾಕ್ಯಸ್ಯಾಸ್ಯೋತ್ತರಂ ಮುನೇ ।
ಸ್ಮರೇದ್ಧಿ ದೇವರಾಜೋ ಯಂ ಕಿಂ ನಾಮಾಭ್ಯಧಿಕಂ ತತಃ ॥೧೪॥

ಯುಧಿಷ್ಠಿರ– ಋಷಿಗಳೇ, ನನ್ನ ಸಂತೋಷದಿಂದ ನಿಮ್ಮ ಮಾತಿಗೆ ಉತ್ತರವನ್ನು ಕೊಡಲು ಸಾಧ್ಯವಾಗುತ್ತಿಲ್ಲ. ದೇವರಾಜನಾದ ಇಂದ್ರನು ಯಾವ ನನ್ನನ್ನು ಸ್ಮರಿಸುವನೆಂದ ಮೇಲೆ ಅದಕ್ಕಿಂತ ದೊಡ್ಡದು ಏನಿದೆ?

ಭವತಾ ಸಂಗಮೋ ಯಸ್ಯ ಭ್ರಾತಾ ಚೈವ ಧನಂಜಯಃ ।
ವಾಸವಃ ಸ್ಮರತೇ ಯಸ್ಯ ಕೋ ನಾಮಾಭ್ಯಧಿಕಸ್ತತಃ ॥೧೫॥

ಯಾವನಿಗೆ ನಿಮ್ಮಂತಹವರ ಸಂಗಮವಿದೆಯೋ, ಯಾವನಿಗೆ ಅರ್ಜುನನಂತಹ ತಮ್ಮನಿದ್ದಾನೆಯೋ, ಯಾವನನ್ನು ಇಂದ್ರನು ಸ್ಮರಿಸುತ್ತಾನೋ ಅವನಿಗೆ ಅದಕ್ಕಿಂತ ದೊಡ್ಡದು ಯಾವುದಿದೆ?

ಯಚ್ಚ ಮಾಂ ಭಗವಾನಾಹ ತೀರ್ಥಾನಾಂ ದರ್ಶನಂ ಪ್ರತಿ ।
ಧೌಮ್ಯಸ್ಯ ವಚನಾದೇಷಾ ಬುದ್ಧಿಃ ಪೂರ್ವಂ ಕೃತೈವ ಮೇ ॥೧೬॥

ಪೂಜ್ಯರಾದ ತಾವು ತೀರ್ಥದರ್ಶನವನ್ನು ಕುರಿತು ನನಗೆ ಹೇಳಿದಿರಷ್ಟೆ? ಧೌಮ್ಯರ ವಚನದಂತೆ ನಾನು ಮೊದಲೇ ತೀರ್ಥಯಾತ್ರೆಯನ್ನು ಮಾಡುವುದೆಂದು ಸಂಕಲ್ಪಿಸಿದ್ದೇನೆ.

ತದ್ಯದಾ ಮನ್ಯಸೇ ದೃಷ್ಟ್ವಾ ಗಮನೇ ತೀರ್ಥದರ್ಶನೇ ।
ತದೈವ ಗಂತಾಸ್ಮಿ ದೃಢಮೇಷ ಮೇ ನಿಶ್ಚಯಃ ಪರಃ ॥೧೭॥

ತಾವು ತೀರ್ಥದರ್ಶನಕ್ಕಾಗಿ ಹೊರಡಲು ಯಾವುದು ಉಚಿತವಾದ ಸಮಯವೆಂದು ಭಾವಿಸುತ್ತೀರೋ ಆಗಲೇ ಹೊರಡುವೆನು. ಈ ನನ್ನ ಶ್ರೇಷ್ಠವಾದ ನಿರ್ಧಾರವು ದೃಢವಾದುದು.

ವೈಶಂಪಾಯನಃ

ಗಮನೇ ಕೃತಬುದ್ಧಿಂ ತಂ ಪಾಂಡವಂ ಲೋಮಶೋಽಬ್ರವೀತ್ ।
ಲಘುರ್ಭವ ಮಹಾರಾಜ ತತಃ ಸ್ವೈರಂ ಗಮಿಷ್ಯಸಿ ॥೧೮॥

ವೈಶಂಪಾಯನ– ಪ್ರಯಾಣಮಾಡಲು ನಿರ್ಧರಿಸಿದ್ದ ಆ ಧರ್ಮರಾಜನನ್ನುಕುರಿತು ಲೋಮಶರು, ಮಹಾರಾಜನೇ, ಅಲ್ಪಪರಿವಾರವನ್ನು ಹೊಂದುವವನಾಗು. ಆನಂತರ ಸುಖವಾಗಿ ಪ್ರಯಾಣ ಮಾಡುವಿ ಎಂದು ಹೇಳಿದರು.

ಯುಧಿಷ್ಠಿರಃ

ಭಿಕ್ಷಾಭುಜೋ ನಿವರ್ತಂತಾಂ ಬ್ರಾಹ್ಮಣಾ ಯತಯಶ್ಚ ಯೇ ।
ಯೇ ಚಾಪ್ಯನುಗತಾಃ ಪೌರಾ ರಾಜಭಕ್ತಿಪುರಸ್ಕೃತಾಃ ॥೧೯॥

ಯುಧಿಷ್ಠಿರ– ಭಿಕ್ಷೆಯನ್ನು ಸ್ವೀಕರಿಸುವ ಯತಿಗಳು, ಬ್ರಾಹ್ಮಣರು ಮತ್ತು ರಾಜಭಕ್ತಿಯನ್ನು ಹೊಂದಿ ನಮ್ಮನ್ನು ಹಿಂಬಾಲಿಸಿದ್ದ ಪೌರರೂ ಸಹ ಇಲ್ಲಿಂದ ಹಿಂದಿರುಗಲಿ.

ಧೃತರಾಷ್ಟ್ರಂ ಮಹಾರಾಜಮಭಿಗಚ್ಛಂತು ಚೈವ ತೇ ।
ಸ ದಾಸ್ಯತಿ ಯಥಾಕಾಲಮುಚಿತಾ ಯಸ್ಯ ಯಾ ಭೃತಿಃ ॥೨೦॥

ಅವರೆಲ್ಲರೂ ಧೃತರಾಷ್ಟ್ರಮಹಾರಾಜನನ್ನು ಸಮೀಪಿಸಲಿ. ಅವನು ಅವರವರಿಗೆ ಯೋಗ್ಯವಾದ ವೇತನವನ್ನು ಕಾಲಕ್ಕೆ ಸರಿಯಾಗಿ ಕೊಡುವನು.

ಸ ಚೇದ್ಯಥೋಚಿತಾಂ ವೃತ್ತಿಂ ನ ದದ್ಯಾನ್ನನುಜೇಶ್ವರಃ ।
ಅಸ್ಮತ್ಪ್ರಿಯಹಿತಾರ್ಥಾಯ ಪಾಂಚಾಲೋ ವಃ ಪ್ರದಾಸ್ಯತಿ ॥೨೧॥

ಒಂದುಪಕ್ಷ ಆ ಮನುಜೇಶ್ವರನು ಯಥೋಚಿತವಾದ ಜೀವನವೃತ್ತಿಯನ್ನು ಕೊಡದಿದ್ದರೆ ನಮಗೆ ಪ್ರಿಯವನ್ನು ಮತ್ತು ಹಿತವನ್ನುಂಟುಮಾಡಲು ಪಾಂಚಾಲರಾಜನಾದ ದ್ರುಪದನು ನಿಮಗೆ ವೇತನವನ್ನು ಕೊಡುವನು.

ವೈಶಂಪಾಯನಃ

ತತೋ ಭೂಯಿಷ್ಠಶಃ ಪೌರಾ ಗುರುಭಾರಸಮಾಹಿತಾಃ ।
ವಿಪ್ರಾಶ್ಚ ಯತಯೋ ಯುಕ್ತಾ ಜಗ್ಮುರ್ನಾಗಪುರಂ ಪ್ರತಿ ॥೨೨॥

ವೈಶಂಪಾಯನ– ಅನಂತರ ಬಹಳ ಭಾರವನ್ನು ಜೊತೆಯಲ್ಲಿ ತಂದಿದ್ದ ಪೌರರು, ಬ್ರಾಹ್ಮಣರು, ಯತಿಗಳು ಮತ್ತು ರಾಜನ ಪರಿವಾರದವರು ದೊಡ್ಡದೊಡ್ಡ ಗುಂಪುಗಳಲ್ಲಿ ನಾಗಪುರಕ್ಕೆ ಪ್ರಯಾಣ ಮಾಡಿದರು.

ತಾನ್ ಸರ್ವಾನ್ ಧರ್ಮರಾಜಸ್ಯ ಪ್ರೇಮ್ಣಾ ರಾಜಾಽಂಬಿಕಾಸುತಃ ।
ಪ್ರತಿಜಗ್ರಾಹ ವಿಧಿವದ್ ಧನೈಶ್ಚ ಸಮತರ್ಪಯತ್ ॥೨೩॥

ಅಂಬಿಕಾಸುತನಾದ ಧೃತರಾಷ್ಟ್ರರಾಜನು ಧರ್ಮರಾಜನ ಮೇಲಿನ ಪ್ರೇಮದಿಂದ ಅವರೆಲ್ಲರನ್ನೂ ವಿಧಿಪೂರ್ವಕವಾಗಿ ಸ್ವೀಕರಿಸಿ ಧನದಾನಗಳಿಂದ ತೃಪ್ತಿಪಡಿಸಿದನು.

ತತಃ ಕುಂತೀಸುತೋ ರಾಜಾ ಲಘುಭಿರ್ಬಾಹ್ಮಣೈಃ ಸಹ ।
ಲೋಮಶೇನ ಚ ಸುಪ್ರೀತಃ ತ್ರಿರಾತ್ರಂ ಕಾಮ್ಯಕೇಽವಸತ್ ॥೨೪॥

ಅನಂತರ ಕುಂತೀಪುತ್ರನಾದ ಧರ್ಮರಾಜನು ಅಲ್ಪಸಂಖ್ಯೆಯ ಬ್ರಾಹ್ಮಣರ ಮತ್ತು ಲೋಮಶರ ಜೊತೆಯಲ್ಲಿ ಬಹಳ ಸಂತೋಷದಿಂದ ಕಾಮ್ಯಕವನದಲ್ಲಿ ಮೂರು ರಾತ್ರಿಗಳನ್ನು ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಾಶೀತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೆಂಟನೆಯ ಅಧ್ಯಾಯ

ಯುಧಿಷ್ಠಿರನಿಂದ ಲೋಮಶಾದಿ ಋಷಿಗಳ ಜೊತೆಯಲ್ಲಿ ತೀರ್ಥಯಾತ್ರೆಯ ಉಪಕ್ರಮ.

ವೈಶಂಪಾಯನಃ

ತತಃ ಪ್ರಯಾಂತಂ ಕೌಂತೇಯಂ ಬ್ರಾಹ್ಮಣಾ ವನವಾಸಿನಃ ।
ಅಭಿಗಮ್ಯ ತದಾ ರಾಜನ್ನಿದಂ ವಚನಮಬ್ರುವನ್ ॥೧॥

ವೈಶಂಪಾಯನ– ಎಲೈ ರಾಜನೇ, ಆಗ ಹೊರಡಲು ನಿಶ್ಚಯಿಸಿದ ಧರ್ಮರಾಜನನ್ನು ಸಮೀಪಿಸಿ ವನವಾಸಿಗಳಾದ ಬ್ರಾಹ್ಮಣರಾದ ಋಷಿಗಳು ಈ ಮಾತನ್ನು ಆಡಿದರು.

ರಾಜಂಸ್ತೀರ್ಥಾನಿ ಗಂತಾಸಿ ಪುಣ್ಯಾನಿ ಭ್ರಾತೃಭಿಃ ಸಹ ।
ದೇವರ್ಷಿಣಾ ಚ ಸಹಿತೋ ಲೋಮಶೇನ ಮಹಾತ್ಮನಾ ॥೨॥

ಎಲೈ ರಾಜನೇ, ನಿನ್ನ ತಮ್ಮಂದಿರ ಜೊತೆಯಲ್ಲಿಯೂ ಮತ್ತು ಮಹಾತ್ಮರಾದ ದೇವಋಷಿಗಳಾದ ಲೋಮಶರ ಜೊತೆಯಲ್ಲಿಯೂ ನೀನು ಪುಣ್ಯತೀರ್ಥಗಳಿಗೆ ಹೋಗುವವನಾಗಿದ್ದೀಯ.

ಅಸ್ಮಾನಪಿ ಮಹಾರಾಜ ನೇತುಮರ್ಹಸಿ ಪಾಂಡವ ।
ಅಸ್ಮಾಭಿರ್ಹಿ ನ ಶಕ್ಯಾನಿ ತ್ವಾಮೃತೇ ಕುರುನಂದನ ॥೩॥

ಎಲೈ ಪಾಂಡವಮಹಾರಾಜನೇ, ನಮ್ಮನ್ನೂ ಸಹ ನಿನ್ನ ಜೊತೆಯಲ್ಲಿ ಕರೆದುಕೊಂಡು ಹೋಗು. ಎಲೈ ಕುರುನಂದನನೇ, ನೀನಿಲ್ಲದಿದ್ದರೆ ನಮ್ಮಿಂದ ಆ ತೀರ್ಥಕ್ಷೇತ್ರಗಳಿಗೆ ಹೋಗುವುದು ಸಾಧ್ಯವಿಲ್ಲ.

ಶ್ವಾಪದೈರುಪಸೃಷ್ಟಾನಿ ದುರ್ಗಾಣಿ ವಿಷಮಾಣಿ ಚ ।
ಅಗಮ್ಯಾನಿ ನರೈರಲ್ಪೈಸ್ತೀರ್ಥಾನಿ ಮನುಜೇಶ್ವರ ॥೪॥

ಎಲೈ ಮನುಜೇಶ್ವರನೇ, ಆ ತೀರ್ಥಗಳು ಕ್ರೂರಮೃಗಗಳಿಂದಲೂ, ದುರ್ಗಗಳಿಂದಲೂ, ವಿಷಮಪ್ರದೇಶದಿಂದಲೂ ಕೂಡಿ ಅಲ್ಪರಾದ ಮನುಷ್ಯರಿಗೆ ಅಗಮ್ಯವಾಗಿರುತ್ತವೆ.

ಭವತೋ ಭ್ರಾತರಃಶೂರಾ ಧನುರ್ಧರವರಾಸ್ತಥಾ ।
ಭವದ್ಭಿಃ ಪಾಲಿತಾಃ ಶೂರೈರ್ಗಚ್ಛಾಮೋ ವಯಮಪ್ಯುತ ॥೫॥

ನಿನ್ನ ತಮ್ಮಂದಿರಾದರೂ ಶೂರರು ಮತ್ತು ಧನುರ್ಧಾರಿಗಳಲ್ಲಿ ಶ್ರೇಷ್ಠರಾದವರು. ಶೂರರಾದ ನಿಮ್ಮಿಂದ ರಕ್ಷಿತರಾದ ನಾವೂ ಸಹ ತೀರ್ಥಯಾತ್ರೆಯನ್ನು ಮಾಡುತ್ತೇವೆ.

ಭವತ್ಪ್ರಸಾದಾದ್ವಿ ವಯಂ ಪ್ರಾಪ್ನುಯಾಮ ಫಲಂ ಶುಭಮ್ ।
ತೀರ್ಥಾನಾಂ ಪೃಥಿವೀಪಾಲ ವನಾನಾಂ ಚ ವಿಶಾಂಪತೇ ॥೬॥

ಎಲೈ ಪೃಥಿವೀಪಾಲನೇ, ಎಲೈ ವಿಶಾಂಪತಿಯೇ, ನಿನ್ನ ಅನುಗ್ರಹದಿಂದ ನಾವೂ ಸಹ ತೀರ್ಥಗಳ ಮತ್ತು ವನಗಳ ಪುಣ್ಯಫಲವನ್ನು ಹೊಂದುವೆವು.

ತವ ವೀರ್ಯಪರಿತ್ರಾತಾಃ ಶುದ್ಧಾಸ್ತೀರ್ಥಪರಿಪ್ಲುತಾಃ ।
ಭವೇಮ ಧೂತಪಾಪ್ಮಾನಃ ತೀರ್ಥಸಂದರ್ಶನಾನ್ನೃಪ ॥೭॥

ಎಲೈ ರಾಜನೇ, ನಿನ್ನ ಶೌರ್ಯದಿಂದ ರಕ್ಷಿತರಾಗಿ ತೀರ್ಥಸ್ನಾನದಿಂದ ಶುದ್ಧರಾಗಿ ತೀರ್ಥಸಂದರ್ಶನದಿಂದ ಪಾಪಗಳಿಂದ ನಿರ್ಮುಕ್ತರಾಗುವೆವು.

ಭವಾನಪಿ ನರೇಂದ್ರಸ್ಯ ಕಾರ್ತವೀರ್ಯಸ್ಯ ಚಾನಘ ।
ಅಷ್ಟಕಸ್ಯ ಚ ರಾಜರ್ಷೇರ್ಯೋಮಪಾದಸ್ಯ ಚೈವ ಹ ॥೮॥

ಭರತಸ್ಯ ಚ ವೀರಸ್ಯ ಸಾರ್ವಭೌಮಸ್ಯ ಪಾರ್ಥಿವ ।
ತ್ವಂ ಹಿ ಪ್ರಾಪ್ಸ್ಯತಿ ದುಷ್ಪ್ರಾಪಾನ್ಲೋಕಾಂಸ್ತೀರ್ಥಪರಿಪ್ಲುತಃ ॥೯॥

ಎಲೈ ಅನಘನೇ, ಎಲೈ ಪಾರ್ಥಿವನೇ, ನೀನೂ ಸಹ ಕಾರ್ತವೀರ್ಯರಾಜನಿಂದ, ಅಷ್ಟಕರಾಜರ್ಷಿಯಿಂದ, ರೋಮಪಾದರಾಜನಿಂದ, ವೀರನಾದ ಭರತಸಾರ್ವಭೌಮನಿಂದ ಹೊಂದಲ್ಪಟ್ಟ ದುರ್ಲಭವಾದ ಲೋಕಗಳನ್ನು ತೀರ್ಥಸ್ನಾನದಿಂದ ಉಂಟಾದ ಪುಣ್ಯದಿಂದ ಪಡೆಯುವಿ.

ಪ್ರಭಾಸಾದೀನಿ ತೀರ್ಥಾನಿ ಮಹೇಂದ್ರಾದೀಂಶ್ಚ ಪರ್ವತಾನ್ ।
ಗಂಗಾದ್ಯಾಃ ಸರಿತಶ್ಚೈವ ಪ್ಲಕ್ಷಾದೀಂಶ್ಚ ವನಸ್ಪತೀನ್ ॥೧೦॥

ತ್ವಯಾ ಸಹ ಮಹೀಪಾಲ ದ್ರಷ್ಟುಮಿಚ್ಛಾಮಹೇ ವಯಮ್ ।
ಭವದ್ಭಿಃ ಪಾಲಿತಾಃ ಶೂರೈಃ ತೀರ್ಥಾನ್ಯಾಯತನಾನಿ ಚ ॥೧೧॥

ಶೂರರಾದ ನಿಮ್ಮಿಂದ ರಕ್ಷಿಸಲ್ಪಟ್ಟವರಾಗಿ ನಾವು ಪ್ರಭಾಸಾದಿ ತೀರ್ಥಗಳನ್ನೂ, ಮಹೇಂದ್ರಾದಿ ಪರ್ವತಗಳನ್ನೂ ಗಂಗಾದಿ ನದಿಗಳನ್ನೂ, ಪ್ಲಕ್ಷಾದಿ ವನಸ್ಪತಿಗಳನ್ನೂ ಇನ್ನೂ ಉಳಿದ ತೀರ್ಥಕ್ಷೇತ್ರಗಳನ್ನು ಎಲೈ ಮಹೀಪಾಲನೇ, ನಿನ್ನ ಜೊತೆಯಲ್ಲಿ ನೋಡಲು ನಾವು ಬಯಸುತ್ತೇವೆ.

ಯದಿ ತೇ ಬ್ರಾಹ್ಮಣೇಷ್ವಸ್ತಿ ಕಾಚಿತ್ ಪ್ರೀತಿರ್ಜನಾಧಿಪ ।
ಕುರು ಕ್ಷಿಪ್ರಂ ವಚೋಽಸ್ಮಾಕಂ ತತಃಶ್ರೇಯೋಽಭಿಪತ್ಸ್ಯಸೇ ॥೧೨॥

ಎಲೈ ಜನಾಧಿಪನೇ, ನಿನಗೆ ಬ್ರಾಹ್ಮಣರಲ್ಲಿ ಪ್ರೀತಿಯಿದ್ದರೆ ನಮ್ಮ ಮಾತನ್ನು ಶೀಘ್ರವಾಗಿ ನಡೆಸಿಕೊಡು. ಅದರಿಂದ ಶ್ರೇಯಸ್ಸನ್ನು ಪಡೆಯುವಿ.

ತೀರ್ಥಾನಿ ಹಿ ಮಹಾಬಾಹೋ ತಪೋವಿಘ್ನಕರೈಃ ಸದಾ ।
ಅನುಕೀರ್ಣಾನಿ ರಕ್ಷೋಭಿಃ ತೇಭ್ಯೋ ನಸ್ತ್ರಾತುಮರ್ಹಸಿ ॥೧೩॥

ಎಲೈ ಮಹಾಬಾಹುವೇ, ತೀರ್ಥಗಳು ಯಾವಾಗಲೂ ತಪಸ್ಸಿಗೆ ವಿಘ್ನವನ್ನು ಉಂಟುಮಾಡುವ ರಾಕ್ಷಸರಿಂದ ನಿಬಿಡವಾಗಿರುತ್ತವೆ. ನೀನು ನಮ್ಮನ್ನು ಅವರಿಂದ ರಕ್ಷಿಸಬೇಕು.

ತೀರ್ಥಾನ್ಯುಕ್ತಾನಿ ಧೌಮ್ಯೇನ ನಾರದೇನ ಚ ಧೀಮತಾ ।
ಯಾನ್ಯುವಾಚ ಚ ದೇವರ್ಷಿರ್ಲೋಮಶಃ ಸುಮಹಾತಪಾಃ ॥೧೪॥

ವಿಧಿವತ್ ತಾನಿ ಸರ್ವಾಣಿ ಪರ್ಯಟಸ್ವ ನರಾಧಿಪ ।
ಧೂತಪಾಪ್ಮಾ ಸಹಾಸ್ಮಾಭಿರ್ಲೋಮಶೇನಾಭಿಪಾಲಿತಃ ॥೧೫॥

ಎಲೈ ನರಾಧಿಪನೇ, ಧೌಮ್ಯರಿಂದ ಹೇಳಲ್ಪಟ್ಟ ಮೇಧಾವಿಗಳಾದ ನಾರದರಿಂದ ಹೇಳಲ್ಪಟ್ಟ, ಮಹಾತಪಸ್ವಿಗಳಾದ ದೇವರ್ಷಿಗಳಾದ ಲೋಮಶರಿಂದ ಹೇಳಲ್ಪಟ್ಟ ತೀರ್ಥಗಳನ್ನು ನಮ್ಮ ಜೊತೆಯಲ್ಲಿ ಲೋಮಶರಿಂದ ರಕ್ಷಿತನಾಗಿ ನಿರ್ಮುಕ್ತಪಾಪನಾಗಿ ವಿಧಿಪೂರ್ವಕವಾಗಿ ಎಲ್ಲಕಡೆಗಳಲ್ಲಿಯೂ ಸಂಚರಿಸು.

ವೈಶಂಪಾಯನಃ

ಸ ತಥಾ ಪೂಜ್ಯಮಾನಸ್ತೈರ್ಹರ್ಷಾದಶ್ರುಪರಿಪ್ಲುತಃ ।
ಭೀಮಸೇನಾದಿಭಿರ್ವೀರೈರ್ಭ್ರಾತೃಭಿಃ ಪರಿವಾರಿತಃ ॥೧೬॥

ಬಾಢಮಿತ್ಯಬ್ರವೀತ್ ಸರ್ವಾನ್ ತಾನೃಷೀನ್ ಪಾಂಡವರ್ಷಭಃ ।
ಲೋಮಶಂ ಸಮನುಜ್ಞಾಪ್ಯ ಧೌಮ್ಯಂ ಚೈವ ಪುರೋಹಿತಮ್ ॥೧೭॥

ವೈಶಂಪಾಯನ– ಆ ಋಷಿಗಳಿಂದ ಹೀಗೆ ಹೇಳಲ್ಪಟ್ಟ ಯುಧಿಷ್ಠಿರನು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಭೀಮಸೇನ ಮೊದಲಾದ ವೀರಸಹೋದರರಿಂದ ಸುತ್ತುವರಿಯಲ್ಪಟ್ಟು ಲೋಮಶರ ಮತ್ತು ಪುರೋಹಿತರಾದ ಧೌಮ್ಯರ ಅನುಮತಿಯನ್ನು ಪಡೆದು ಆ ಪಾಂಡವರ್ಷಭನು ಆ ಎಲ್ಲಾ ಋಷಿಗಳನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

ತತಸ್ತ ಪಾಂಡವಶ್ರೇಷ್ಠೋ ಭ್ರಾತೃಭಿಃ ಸಹಿತೋ ವಶೀ ।
ದ್ರೌಪದ್ಯಾ ಚಾನವದ್ಯಾಂಗ್ಯಾ ಗಮನಾಯ ಮನೋ ದಧೇ ॥೧೮॥

ಅನಂತರ ಧೈರ್ಯಶಾಲಿಯಾದ ಆ ಪಾಂಡವಶ್ರೇಷ್ಠನು ತಮ್ಮಂದಿರಿಂದ ಮತ್ತು ಅನವದ್ಯಾಂಗಿಯಾದ ದ್ರೌಪದಿಯಿಂದ ಸಹಿತನಾಗಿ ಹೊರಡಲು ನಿರ್ಧರಿಸಿದನು.

ಅಥ ವ್ಯಾಸೋ ಮಹಾಭಾಗಃ ತಥಾ ನಾರದಪರ್ವತೌ ।
ಕಾಮ್ಯಕೇ ಪಾಂಡವಂ ದ್ರಷ್ಟುಂ ಸಮಾಜಗ್ಮುರ್ಮನೀಷಿಣಃ ॥೧೯॥

ಆ ಸಮಯಕ್ಕೆ ಸರಿಯಾಗಿ ಮಹಾನುಭಾವರಾದ ಮೇಧಾವಿಗಳಾದ ವ್ಯಾಸರು ಮತ್ತು ನಾರದ ಪರ್ವತರು ಕಾಮ್ಯಕವನದಲ್ಲಿ ಪಾಂಡವನನ್ನು ನೋಡಲು ಅಲ್ಲಿಗೆ ಬಂದರು.

ತೇಷಾಂ ಯುಧಿಷ್ಠಿರೋ ರಾಜಾ ಪೂಜಾಂ ಚಕ್ರೇ ಯಥಾವಿಧಿ ।
ಸತೃತಾಸ್ತೇ ಮಹಾಭಾಗಾ ಯುಧಿಷ್ಠಿರಮಥಾಬ್ರುವನ್ ॥೨೦॥

ಅವರಿಗೆ ಯುಧಿಷ್ಠಿರ ರಾಜನು ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದನು. ಪೂಜಿತರಾದ ಆ ಮಹಾನುಭಾವರು ಅನಂತರ ಯುಧಿಷ್ಠಿರನನ್ನು ಕುರಿತು ಮಾತನಾಡಿದರು.

ಯುಧಿಷ್ಠಿರ ಯಮೌ ಭೀಮ ಮನಸಾ ಕುರುತಾರ್ಜವಮ್ ।
ಮನಸಾ ಕೃತಶೌಚಾ ವೈ ಶುದ್ಧಾಸ್ತೀರ್ಥಾನಿ ಗಚ್ಛತ ॥೨೧॥

ಯುಧಿಷ್ಠಿರನೇ, ನಕುಲಸಹದೇವರೇ ಮತ್ತು ಭೀಮಸೇನನೇ, ಮನಸ್ಸಿನಲ್ಲಿ ಆರ್ಜವವನ್ನು ಹೊಂದುವವರಾಗಿ. ಮನಸ್ಸಿನಲ್ಲಿ ಶುದ್ಧರಾಗಿ, ಅನಂತರ ತೀರ್ಥಗಳಿಗೆ ಹೊರಡಿ.

ಶರೀರನಿಯಮಂ ಪ್ರಾಹುರ್ಬ್ರಾಹ್ಮಣಾ ಮಾನುಷಂ ವ್ರತಮ್ ।
ಮನೋವಿಶುದ್ಧಾಂ ಬುದ್ಧಿಂ ಚ ದೈವಮಾಹುರ್ವ್ರತಂ ದ್ವಿಜಾಃ ॥೨೨॥

ಬ್ರಾಹ್ಮಣರು ಶರೀರನಿಯಮಗಳನ್ನು ಮಾನುಷವ್ರತವೆಂದು ಹೇಳುತ್ತಾರೆ. ಮನಃಶುದ್ಧಿಯನ್ನು ಮತ್ತು ಬುದ್ಧಿಶುದ್ಧಿಯನ್ನು ದೈವವ್ರತವೆಂದು ಹೇಳುತ್ತಾರೆ.

ಮನೋ ಹ್ಯದುಷ್ಟಂ ಶೌಚಾಯ ಪರ್ಯಾಪ್ತಂ ವೈ ನರಾಧಿಪ ।
ಮೈತ್ರೀಂ ಬುದ್ಧಿಂ ಸಮಾಸ್ಥಾಯ ಶುದ್ಧಾಸ್ತೀರ್ಥಾನಿ ಗಚ್ಛತ ॥೨೩॥

ಎಲೈ ನರಾಧಿಪನೇ, ಅದುಷ್ಟವಾದ ಮನಸ್ಸು ಶುದ್ಧಿಯನ್ನು ಹೊಂದಲು ಸಮರ್ಥವಾಗುತ್ತದೆ. ಸ್ನೇಹಬುದ್ಧಿಯನ್ನು ಹೊಂದಿ ಶುದ್ಧರಾಗಿ ತೀರ್ಥಗಳಿಗೆ ಹೊರಡಿ.

ತೇ ಯೂಯಂ ಮಾನಸೈಃ ಶುದ್ಧಾಃ ಶರೀರನಿಯಮವ್ರತೈಃ ।
ದೈವಂ ವ್ರತಂ ಸಮಾಸ್ಥಾಯ ಯಥೋಕ್ತಂ ಫಲಮಾಪ್ಸ್ಯಥ ॥೨೪॥

ಅಂತಹ ನೀವು ಮನಸ್ಸಿನಲ್ಲಿ ಶುದ್ಧರಾಗಿ ಶರೀರದ ನಿಯಮವ್ರತಗಳನ್ನು ಧರಿಸಿದವರಾಗಿ ದೈವವ್ರತವನ್ನು ಆಚರಿಸುವವರಾಗಿ ಶಾಸ್ತ್ರದಲ್ಲಿ ಹೇಳಿದ ಫಲವನ್ನು ಹೊಂದುವವರಾಗಿ.

ವೈಶಂಪಾಯನಃ

ತೇ ತಥೇತಿ ಪ್ರತಿಜ್ಞಾಯ ಕೃಷ್ಣಯಾ ಸಹ ಪಾಂಡವಾಃ ।
ಕೃತಸ್ವಸ್ತ್ಯಯನಾಃ ಸರ್ವೇ ಮುನಿಭಿರ್ದಿವ್ಯಮಾನುಷೈಃ ॥೨೫॥

ಲೋಮಶಸ್ಯೋಪಸಂಗೃಹ್ಯ ಪಾದೌ ದ್ವೈಪಾಯನಸ್ಯ ಚ ।
ನಾರದಸ್ಯ ಚ ರಾಜೇಂದ್ರ ದೇವರ್ಷೇಃ ಪರ್ವತಸ್ಯ ಚ ॥೨೬॥

ಧೌಮ್ಯೇನ ಸಹಿತಾ ವೀರಾಸ್ತಥಾ ತೈರ್ವನವಾಸಿಭಿಃ ।
ಮಾರ್ಗಶೀರ್ಷ್ಯಾಮತೀತಾಯಾಂ ಪುಷ್ಯೇಣ ಪ್ರಯಯುಸ್ತತಃ ॥೨೭॥

ವೈಶಂಪಾಯನ– ಎಲೈ ರಾಜೇಂದ್ರನೇ, ಹಾಗೆಯೇ ಆಗಲಿ ಎಂದು ಹೇಳಿ ಆ ಪಾಂಡವರೆಲ್ಲರೂ ದ್ರೌಪದಿಯ ಜೊತೆಯಲ್ಲಿ ದೇವರ್ಷಿಗಳಿಂದ ಮತ್ತು ಮನುಷ್ಯ ಋಷಿಗಳಿಂದ ಆಶೀರ್ವಾದವನ್ನು ಪಡೆದು ಲೋಮಶರ ಪಾದಗಳಿಗೆ, ವ್ಯಾಸರ ಪಾದಗಳಿಗೆ, ದೇವರ್ಷಿಗಳಾದ ನಾರದರ ಮತ್ತು ಪರ್ವತರ ಪಾದಗಳಿಗೆ ನಮಸ್ಕರಿಸಿ ಧೌಮ್ಯರಿಂದಲೂ, ವನವಾಸಿಗಳಾದ ಋಷಿಗಳಿಂದಲೂ ಸಹಿತರಾಗಿ ಆ ವೀರರು ಮಾರ್ಗಶೀರ್ಷ ಮಾಸವು ಕಳೆಯುತ್ತಿರಲು ಪುಷ್ಯಮಾಸದಲ್ಲಿ ಅಲ್ಲಿಂದ ಹೊರಟರು.

ಕಠಿನಾನಿ ಸಮಾದಾಯ ಚೀರಾಜಿನಜಟಾಧರಾಃ ।
ಪ್ರಯಯುಃ ಪಾಂಡವಾಃ ಸರ್ವೇ ಕಾಮ್ಯಕಾದ್ ಗುರುವತ್ಸಲಾಃ ।
ಅಭೇದ್ಯೈಃ ಕವಚೈರ್ಯುಕ್ತಾಃ ತೀರ್ಥಾನ್ಯನ್ವಚರಂಸ್ತತಃ ॥೨೮॥

ಗುರುಭಕ್ತಿಯುಳ್ಳ ಪಾಂಡವರೆಲ್ಲರೂ ದೃಢವಾದ ಚೀರಾಜಿನವನ್ನು ತೆಗೆದುಕೊಂಡು, ಜಟೆಗಳನ್ನು ಧರಿಸಿದವರಾಗಿ ಕಾಮ್ಯಕವನದಿಂದ ಹೊರಟರು. ಅಭೇದ್ಯವಾದ ಕವಚಗಳನ್ನು ತೊಟ್ಟು ಅವರು ಮುಂದೆ ತೀರ್ಥಯಾತ್ರೆಯನ್ನು ಮಾಡಿದರು.

ಇಂದ್ರಸೇನಾದಿಭಿರ್ಭರ್ತ್ಯೈ ರಥೈಃ ಪರಿಚತುರ್ದಶೈಃ ।
ಮಹಾನಸವ್ಯಾಪೃತೈಶ್ಚ ತಥಾಽನ್ಯೈಃ ಪರಿಚಾರಕೈಃ ।
ಸಾಯುಧಾ ಬದ್ಧನಿಸ್ತ್ರಿಂಶಾಃ ತೂಣವಂತಃ ಸಮಾರ್ಗಣಾಃ ।
ಪ್ರಾಙ್‌ಮುಖಾಃ ಪ್ರಯಯುರ್ವೀರಾಃ ಪಾಂಡವಾ ಜನಮೇಜಯ ॥

ಎಲೈ ಜನಮೇಜಯನೇ, ವೀರರಾದ ಪಾಂಡವರು ಇಂದ್ರಸೇನ ಮೊದಲಾದ ಸಾರಥಿಗಳಿಂದ ಕೂಡಿದ ಹದಿನಾಲ್ಕು ರಥಗಳನ್ನು ತೆಗೆದುಕೊಂಡು ಬಾಣಸಿಗರನ್ನು ಮತ್ತು ಬೇರೆ ಪರಿಚಾರಕರನ್ನು ಕರೆದುಕೊಂಡು ಆಯುಧಗಳನ್ನು ಧರಿಸಿ ಸೊಂಟದಲ್ಲಿ ಕತ್ತಿಯನ್ನು ಕಟ್ಟಿ ಬಾಣಗಳನ್ನು ಮತ್ತು ಬತ್ತಳಿಕೆಗಳನ್ನು ತೆಗೆದುಕೊಂಡು ಪೂರ್ವಾಭಿಮುಖವಾಗಿ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾಶೀತಿಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುಶ್ಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಎಂಬತ್ತೊಂಬತ್ತನೆಯ ಅಧ್ಯಾಯ

ಲೋಮಶರಿಂದ ಯುಧಿಷ್ಠಿರನನ್ನು ಕುರಿತು ಧರ್ಮಾಧರ್ಮಗಳ ವಿರುದ್ಧ ಫಲಗಳ ನಿರೂಪಣೆ

ಯುಧಿಷ್ಠಿರಃ

ನ ವೈ ನಿರ್ಗುಣಮಾತ್ಮಾನಂ ಮನ್ಯೇ ದೇವರ್ಷಿಸತ್ತಮ ।
ಯಥಾಽನ್ಯೇ ದುಃಖಸಂತಪ್ತೋ ಯಥಾ ನಾನ್ಯೋ ಮಹೀಪತಿಃ ॥೧॥

ಪರಾಂಶ್ಚ ನಿರ್ಗುಣಾನ್ ಮನ್ಯೇ ನ ಚ ಧರ್ಮರತಾನಪಿ ।
ತೇ ಚ ಲೋಮಶ ಲೋಕೇಽಸ್ಮಿನ್ಕ್ಲಿಶ್ಯಂತೇ ಕೇನ ಹೇತುನಾ ॥೨॥

ಯುಧಿಷ್ಠಿರ– ಎಲೈ ದೇವರ್ಷಿಶ್ರೇಷ್ಠನೇ, ನಾನು ನನ್ನನ್ನು ಗುಣಹೀನನೆಂದು ತಿಳಿಯುವುದಿಲ್ಲ. ಆದರೂ ಇನ್ನೊಬ್ಬ ರಾಜನು ಅನುಭವಿಸದಷ್ಟು ದುಃಖವನ್ನು

ಅನುಭವಿಸುತ್ತಿದ್ದೇನೆ. ನಮ್ಮ ಶತ್ರುಗಳಾದರೂ ಗುಣಶೂನ್ಯರು ಮತ್ತು ಧರ್ಮಶೂನ್ಯರು. ಎಲೈ ಲೋಮಶರೇ, ಈ ಲೋಕದಲ್ಲಿ ಅವರು ಯಾವ ಕಾರಣದಿಂದ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ?

ಲೋಮಶಃ

ನಾತ್ರ ದುಃಖಂ ತ್ವಯಾ ಕಾರ್ಯಂ ರಾಜನ್ ಪಾರ್ಥ ಕಥಂಚನ ।
ಯದಧರ್ಮೇಣ ವರ್ಧೇರನ್ನಧರ್ಮರುಚಯೋ ನರಾಃ ॥೩॥

ಲೋಮಶ– ಎಲೈ ಪಾರ್ಥನೇ, ರಾಜನೇ, ಅಧರ್ಮಾಸಕ್ತರಾದ ಮನುಷ್ಯರು ಅಧರ್ಮವನ್ನು ಮಾಡಿ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆಂದು ನೀನು ಯಾವ ರೀತಿಯಿಂದಲೂ ದುಃಖಪಡಬಾರದು.

ವರ್ಧತ್ಯಧರ್ಮೇಣ ನರಸ್ತತೋ ಭದ್ರಾಣಿ ಪಶ್ಯತಿ ।
ತತಃ ಸಪತ್ನಾಂಜಯತೀ ಸಮೂಲಸ್ತು ವಿನಶ್ಯತಿ ॥೪॥

ಮನುಷ್ಯನು ಅಧರ್ಮದಿಂದ ಅಭಿವೃದ್ಧಿಯನ್ನು ಹೊಂದುತ್ತಾನೆ; ಸಂಪತ್ತನ್ನೂ ಬಯಸುತ್ತಾನೆ; ಶತ್ರುಗಳನ್ನು ಜಯಿಸುತ್ತಾನೆ; ಕೊನೆಗೆ ಮೂಲ ಸಹಿತವಾಗಿ ನಾಶವನ್ನು ಹೊಂದುತ್ತಾನೆ.

ಮಯಾ ಹಿ ದೃಷ್ಟಾ ದೈತೇಯಾ ದಾನವಾಶ್ಚ ಮಹೀಪತೇ ।
ವರ್ಧಮಾನಾ ಹ್ಯಧರ್ಮೇಣ ಕ್ಷಯಂ ಚೋಪಗತಾಃ ಪುನಃ ॥೫॥

ಎಲೈ ಮಹಿಪತಿಯೇ, ನಾನು ಅಧರ್ಮದಿಂದ ಅಭಿವೃದ್ಧಿಯನ್ನು ಹೊಂದಿ ಪುನಃ ವಿನಾಶವನ್ನು ಹೊಂದಿದ ಅನೇಕ ದೈತೇಯರನ್ನೂ ಮತ್ತು ದಾನವರನ್ನೂ ನೋಡಿದ್ದೇನೆ.

ಪುರಾ ದೇವಯುಗೇ ಚೈವ ದೃಷ್ಟಂ ಸರ್ವಂ ಮಯಾ ವಿಭೋ ।
ಅರೋಚಯನ್ ಸುರಾ ಧರ್ಮಂ ಧರ್ಮಂ ತತ್ಯಜಿರೇಽಸುರಾಃ ॥೬॥

ಎಲೈ ವಿಭುವೇ, ನಾನು ಹಿಂದೆ ದೇವಯುಗದಲ್ಲಿ ಎಲ್ಲವನ್ನೂ ನೋಡಿದ್ದೇನೆ. ದೇವತೆಗಳು ಧರ್ಮವನ್ನು ಬಯಸಿದರು. ಅಸುರರು ಧರ್ಮವನ್ನು ತ್ಯಜಿಸಿದರು.

ತೀರ್ಥಾನಿ ದೇವಾ ವಿವಿಶುಃ ತತ್ ಸಂತತ್ಯಜುರಾಸುರಾಃ ।
ತಾನಧರ್ಮಕೃತೋ ದರ್ಪಃ ಪೂರ್ವಮೇವ ಸಮಾವಿಶತ್ ॥೭॥

ದೇವತೆಗಳು ತೀರ್ಥಕ್ಷೇತ್ರಗಳಲ್ಲಿ ನೆಲೆಸಿದರು. ಅಸುರರು ಅವುಗಳನ್ನು ತ್ಯಜಿಸಿದರು. ಅಂತಹ ಅಧರ್ಮಶೀಲರಾದ ಅಸುರರನ್ನು ಮೊದಲೇ ದರ್ಪವು ಪ್ರವೇಶಿಸಿತು.

ದರ್ಪಾನ್ಮಾನಃ ಸಮಭವನ್ಮಾನಾತ್ ಕ್ರೋಧೋ ವ್ಯಜಾಯತ ।
ಕ್ರೋಧಾದಹ್ರೀಸ್ತತೋಽಲಜ್ಜಾ ವೃತ್ತಂ ತೇಷಾಂ ತತೋಽನಶತ್ ॥೮॥

ದರ್ಪದಿಂದ ಅಹಂಕಾರವೂ, ಅಹಂಕಾರದಿಂದ ಕ್ರೋಧವೂ ಉಂಟಾಯಿತು. ಕ್ರೋಧದಿಂದ ಸಂಕೋಚ ಸ್ವಭಾವವು ದೂರವಾಯಿತು. ಅನಂತರ ಲಜ್ಜೆಯೂ, ಅನಂತರ ಅವರ ಶೀಲವೂ ನಾಶವಾಯಿತು.

ನಿರ್ಲಜ್ಜಾನ್ ಹೀನವೃತ್ತಾಂಸ್ತಾನಕ್ಷಮಾನೀರ್ಷ್ಯಕಾನಥ ।
ಜಹಾತಿ ಶ್ರೀಶ್ಚ ಧರ್ಮಶ್ಚ ಹ್ಯಕ್ಷಮಾನ್ ಪಾಪಚೇತಸಃ ॥೯॥

ನಿರ್ಲಜ್ಜರೂ, ಕೆಟ್ಟನಡತೆಯುಳ್ಳವರೂ, ಸಹನೆ ಇಲ್ಲದವರೂ, ಅಸೂಯಾ ಪರರೂ ಆದ ಆ ಪಾಪ ಬುದ್ಧಿಯುಳ್ಳವರನ್ನು ಸಂಪತ್ತು ಮತ್ತು ಧರ್ಮಗಳು ತೊರೆದವು.

ಕ್ಷಮಾ ಲಕ್ಷ್ಮೀಶ್ಚ ಧರ್ಮಶ್ಚ ನಚಿರಾತ್ ಪ್ರಜಹುಸ್ತತಃ ।
ಲಕ್ಷ್ಮೀಸ್ತು ದೇವಾನಗಮದ್ ಅಲಕ್ಷ್ಮೀರಸುರಾನ್ನೃಪ ॥೧೦॥

ಅನಂತರ ಕ್ಷಮೆಯೂ ಸಂಪತ್ತು ಮತ್ತು ಧರ್ಮಗಳು ಶೀಘ್ರವಾಗಿ ಪೂರ್ಣವಾಗಿ ನಷ್ಟವಾದವು. ಎಲೈ ರಾಜನೇ, ಲಕ್ಷ್ಮಿಯು ದೇವತೆಗಳನ್ನು ಸೇರಿದಳು. ಅಲಕ್ಷ್ಮಿಯು ಅಸುರರನ್ನು ಸೇರಿದಳು.

ತಾನಲಕ್ಷ್ಮೀಸಮಾವಿಷ್ಟಾನ್ ದರ್ಪೋಪಹತಚೇತಸಃ ।
ದೈತೇಯಾನ್ ದಾನವಾಂಶ್ಚೈವ ಕಲಿರಭ್ಯಾವಿಶತ್ ತತಃ ॥೧೧॥

ಅಲಕ್ಷ್ಮಿಯಿಂದ ಆವಿಷ್ಟರಾಗಿ ದರ್ಪದಿಂದ ಕೂಡಿದ ಮನಸ್ಸುಳ್ಳ ದೈತೇಯರನ್ನು ಮತ್ತು ದಾನವರನ್ನು ಆಗ ಕಲಿಯು ಚೆನ್ನಾಗಿ ಪ್ರವೇಶಿಸಿದನು.

ತಾನಲಕ್ಷ್ಮೀಸಮಾವಿಷ್ಟಾನ್ ದಾನವಾನ್ ಕಲಿನಾ ತಥಾ ।
ದರ್ಪಾಭಿಭೂತಾನ್ ಕೌಂತೇಯ ಕ್ರಿಯಾಹೀನಾನಚೇತಸಃ ॥೧೨॥

ಮಾನಾಭಿಭೂತಾನಚಿರಾದ್ ವಿನಾಶಃ ಪ್ರತ್ಯಪದ್ಯತ ॥೧೩॥

ಎಲೈ ಕೌಂತೇಯನೇ, ಅಲಕ್ಷ್ಮಿಯಿಂದಲೂ, ಕಲಿಯಿಂದಲೂ ಸಮಾವಿಷ್ಟರಾದ ದರ್ಪದಿಂದ ಕೂಡಿದ, ಸತ್ಕ್ರಿಯಾ ಹೀನರಾದ ದುಷ್ಟಬುದ್ಧಿಯುಳ್ಳ ಅಹಂಕಾರ ವಶರಾದ ದಾನವರಿಗೆ ಶೀಘ್ರವಾಗಿ ವಿನಾಶ ಉಂಟಾಯಿತು.

ನಿರ್ಯಶಸ್ಕಾಸ್ತತೋ ದೈತ್ಯಾಃ ಕೃತ್ಸ್ನಶೋ ವಿಲಯಂ ಗತಾಃ ।
ಅಧರ್ಮರುಚಯೋ ರಾಜನ್ನಲಕ್ಷ್ಮ್ಯಾ ಸಮಾಧಿಷ್ಠಿತಾಃ ॥೧೪॥

ಎಲೈ ರಾಜನೇ, ಅಲಕ್ಷ್ಮಿಯಿಂದ ಚೆನ್ನಾಗಿ ಆವರಿಸಲ್ಪಟ್ಟು ಅಧರ್ಮಾಭಿರುಚಿಯನ್ನು ಹೊಂದಿ ಕೀರ್ತಿಹೀನರಾದ ದೈತ್ಯರು ಸಮಗ್ರವಾಗಿ ನಾಶವನ್ನು ಹೊಂದಿದರು.

ತತೋ ದೇವಾಃ ಸಾಗರಾಂಶ್ಚ ಸರಿತಶ್ಚ ಸರಾಂಸಿ ಚ ।
ಅಭ್ಯಾಗಚ್ಛನ್ ಧರ್ಮಶೀಲಾಃ ಪುಣ್ಯಾನ್ಯಾಯತನಾನಿ ಚ ॥೧೫॥

ಆನಂತರ ಧರ್ಮಶೀಲರಾದ ದೇವತೆಗಳು ಸಾಗರಗಳಿಗೂ, ನದಿಗಳಿಗೂ, ಸರೋವರಗಳಿಗೂ, ಪುಣ್ಯಕ್ಷೇತ್ರಗಳಿಗೂ ಬಂದು ನೆಲೆಸಿದರು.

ತಪೋಭಿಃ ಕ್ರತುಭಿರ್ದಾನೈರಾಶೀರ್ವಾದೈಶ್ಚ ಪಾಂಡವ ।
ಪ್ರಜಹುಃ ಸರ್ವಪಾಪಾನಿ ಶ್ರೇಯಶ್ಚ ಪ್ರತಿಪೇದಿರೇ ॥೧೬॥

ಎಲೈ ಪಾಂಡವನೇ, ಅವರು ತಪಸ್ಸುಗಳಿಂದಲೂ, ಯಜ್ಞಗಳಿಂದಲೂ, ದಾನಗಳಿಂದಲೂ, ಹಿರಿಯ ಆಶೀರ್ವಾದಗಳಿಂದಲೂ ಎಲ್ಲ ಪಾಪಗಳನ್ನೂ ಕಳೆದುಕೊಂಡರು. ಶ್ರೇಯಸ್ಸನ್ನೂ ಸಂಪಾದಿಸಿದರು.

ಏವಂ ಹಿ ದಾನವಂತಶ್ಚ ಕ್ರಿಯಾವಂತಶ್ಚ ಸರ್ವಶಃ ।
ತೀರ್ಥಾನ್ಯಗಚ್ಛನ್ವಿಬುಧಾಃ ತೇನಾಪುರ್ಭೂತಿಮುತ್ತಮಾಮ್ ॥೧೭॥

ಹೀಗೆ ದಾನಶೀಲರಾದ, ಸತ್ಕರ್ಮಶೀಲರಾದ ದೇವತೆಗಳು ಎಲ್ಲಾ ತೀರ್ಥಯಾತ್ರೆಯನ್ನೂ ಮಾಡಿದರು. ಆದರಿಂದ ಶ್ರೇಷ್ಠವಾದ ಸಂಪತ್ತನ್ನು ಪಡೆದರು.

ತಥಾ ತ್ವಮಪಿ ರಾಜೇಂದ್ರ ಸ್ನಾತ್ವಾ ತೀರ್ಥೇಷು ಸಾನುಜಃ ।
ಪುನರ್ಲಪ್ಸ್ಯಸಿ ತಾಂ ಲಕ್ಷ್ಮೀಮೇಷ ಪಂಥಾಃ ಸನಾತನಃ ॥೧೮॥

ಎಲೈ ರಾಜೇಂದ್ರನೇ, ಅದರಂತೆ ನೀನೂ ಸಹ ತಮ್ಮಂದಿರ ಜೊತೆಯಲ್ಲಿ ತೀರ್ಥಗಳಲ್ಲಿಸ್ನಾನವನ್ನುಮಾಡಿ ಪುನಃ ಸಂಪತ್ತನ್ನು ಪಡೆಯುವಿ. ಇದು ಸನಾತನವಾದ ಸನ್ಮಾರ್ಗ.

ಯಥೈವ ಹಿ ನೃಗೋ ರಾಜಾ ಶಿಬಿರೌಶೀನರೋ ಯಥಾ ।
ಭಗೀರಥೋ ವಸುಮನಾ ಗಯಃ ಪೂರುಃ ಪುರೂರವಾಃ ॥೧೯॥

ಚರಮಾಣಾಸ್ತಪೋ ನಿತ್ಯಂ ಸ್ಪರ್ಧನಾದಂಭಸಶ್ಚ ತೇ ।
ತೀರ್ಥಾನಾಂ ದರ್ಶನಾತ್ ಪೂತಾ ದರ್ಶನಾಚ್ಚ ಮಹಾತ್ಮನಾಮ್॥೨೦॥

ಅಲಭಂತ ಯಶಃ ಪುಣ್ಯಂ ಧನಾನಿ ಚ ವಿಶಾಂಪತೇ ।

ಹೇಗೆ ನೃಗರಾಜನೂ, ಔಶೀನರಾದ ಶಿಬಿಯೂ, ಭಗೀರಥನು, ವಸುಮನನೂ, ಗಯನೂ, ಪೂರುವೂ, ಪುರೂರವನೂ ಯಾವಾಗಲೂ ತಪಸ್ಸನ್ನು ಆಚರಿಸಿ ತೀರ್ಥಗಳ ದರ್ಶನವನ್ನು ಮಾಡಿ ಆ ಜಲಗಳಲ್ಲಿಸ್ನಾನವನ್ನು ಮಾಡಿ ಮಹಾತ್ಮರ ದರ್ಶನದಿಂದ ಪವಿತ್ರರಾಗಿ ಪವಿತ್ರವಾದ ಯಶಸ್ಸನ್ನೂ ಮತ್ತು ಸಂಪತ್ತನ್ನೂ ಗಳಿಸಿದರೋ;

ತಥಾ ತ್ವಮಪಿ ರಾಜೇಂದ್ರ ಲಬ್ಧಾ ಸುವಿಪುಲಾಂ ಶ್ರಿಯಮ್ ॥೨೧॥

ಯಥಾ ಚೇಕ್ಷ್ವಾಕುರಚರತ್ ಸಪುತ್ರಜನಬಾಂಧವಃ ।
ಮುಚುಕುಂದೋಽಥ ಮಾಂಧಾತಾ ಮರುತ್ತಶ್ಚ ವಿಶಾಂಪತಿಃ ॥೨೨॥

ಕೀರ್ತಿಂ ಪುಣ್ಯಾಮವಿಂದಂತ ಯಥಾ ದೇವಾಸ್ತಪೋಬಲಾತ್।
ದೇವರ್ಷಯಶ್ಚ ಕಾತ್ಸ್ನ್ಯೇನ ತಥಾ ತ್ವಮಪಿ ವೇತ್ಸ್ಯಸಿ ॥೨೩॥

ಎಲೈ ರಾಜೇಂದ್ರನೇ, ವಿಪುಲವಾದ ಸಂಪತ್ತನ್ನು ಹೊಂದಿ ಹೇಗೆ ಇಕ್ಷ್ವಾಕುವೂ, ಮುಚುಕುಂದನೂ, ಮಾಂಧಾತನೂ, ರಾಜನಾದ ಮರುತ್ತನೂ, ಪುತ್ರ-ಮಿತ್ರ ಬಾಂಧವರ ಜೊತೆಯಲ್ಲಿ ಪವಿತ್ರವಾದ ಕೀರ್ತಿಯನ್ನು ಪಡೆದರೋ, ಹೇಗೆ

ದೇವತೆಗಳೂ ಮತ್ತು ದೇವರ್ಷಿಗಳೂ ತಪೋಬಲದಿಂದ ಸಮಗ್ರವಾದ ಕೀರ್ತಿಯನ್ನು ಪಡೆದರೋ ಅದರಂತೆ ನೀನೂ ಸಹ ಪಡೆಯುವಿ.

ಧಾರ್ತರಾಷ್ಟ್ರಾಸ್ತು ದರ್ಪೇಣ ಮೋಹೇನ ಚ ವಶೀಕೃತಾಃ ।
ನಚಿರಾದ್ ವಿನಶಿಷ್ಯಂತಿ ದೈತ್ಯಾ ಇವ ನ ಸಂಶಯಃ ॥೨೪॥

ಧೃತರಾಷ್ಟ್ರನ ಮಕ್ಕಳಾದರೂ ದೈತ್ಯರಂತೆ ದರ್ಪಕ್ಕೂ, ಮೋಹಕ್ಕೂ ವಶರಾಗಿ ಶೀಘ್ರವಾಗಿ ವಿನಾಶವನ್ನು ಹೊಂದುವರು. ಇದರಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ನವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತನೆಯ ಅಧ್ಯಾಯ

ಬ್ರಹ್ಮಸರತೀರದಲ್ಲಿ ಶಮಠ ಋಷಿಗಳಿಂದ ಯುಧಿಷ್ಠಿರಾದಿಗಳಿಗೆ
ಗಯನ ಯಜ್ಞಗಳ ವರ್ಣನೆ.

ವೈಶಂಪಾಯನಃ

ತೇ ತಥಾ ಸಹಿತಾ ವೀರಾ ವಸಂತಸ್ತತ್ರಯತ್ರ ಹ ।
ಕ್ರಮೇಣ ಪೃಥಿವೀಪಾಲ ನೈಮಿಶಾರಣ್ಯಮಾಗತಾಃ ॥೧॥

ವೈಶಂಪಾಯನ– ಎಲೈ ಪೃಥಿವೀಪಾಲನೇ ಆ ವೀರರು ಜೊತೆಯಲ್ಲಿ ಹೊರಟು ಅಲ್ಲಲ್ಲಿ ವಾಸಮಾಡುತ್ತಾ ಕ್ರಮವಾಗಿ ನೈಮಿಶಾರಣ್ಯವನ್ನು ತಲುಪಿದರು.

ತತಸ್ತೀರ್ಥೇಷು ಪುಣ್ಯೇಷು ಗೋಮತ್ಯಾಂ ಪಾಂಡವಾ ನೃಪ ।
ಕೃತಾಭಿಷೇಕಾಃ ಪ್ರದದುರ್ಗಾಶ್ಚ ವಿತ್ತಂ ಚ ಭಾರತ ॥೨॥

ಎಲೈ ರಾಜನೇ, ಭಾರತನೇ, ಅನಂತರ ಪಾಂಡವರು ಪುಣ್ಯತೀರ್ಥಗಳಲ್ಲಿ ಮತ್ತು ಗೋಮತೀ ನದಿಯಲ್ಲಿ ಸ್ನಾನವನ್ನು ಮಾಡಿ ಗೋವುಗಳನ್ನು ಮತ್ತು ಸುವರ್ಣಗಳನ್ನು ದಾನಮಾಡಿದರು.

ತತ್ರ ದೇವಾನ್ ಪಿತೄನ್ ವಿಪ್ರಾನ್ ತರ್ಪಯಿತ್ವಾ ಪುನಃ ಪುನಃ ।
ಕನ್ಯಾತೀರ್ಥೇಽಶ್ವತೀರ್ಥೇ ಚ ಗವಾಂ ತೀರ್ಥೇ ಚ ಕೌರವಃ ॥೩॥

ಪಾಲಕೋಟ್ಯಾಂ ವೃಷಪ್ರಸ್ಥೇ ಗಿರಾವುಷ್ಯ ಚ ಪಾಂಡವಃ ।
ಬಾಹುದಾಯಾಂ ಮಹೀಪಾಲ ಚಕ್ರುಃ ಸರ್ವೇಽಭಿಷೇಚನಮ್ ॥೪॥

ಕೌರವರು ಅಲ್ಲಿ ದೇವತೆಗಳಿಗೂ, ಪಿತೃಗಳಿಗೂ ಆರಾಧನೆಯನ್ನು ಮಾಡಿ ಬ್ರಾಹ್ಮಣರನ್ನು ಮತ್ತಮತ್ತೆ ದಾನಗಳಿಂದ ತೃಪ್ತಿಪಡಿಸಿದರು. ಹಾಗೆಯೇ ಕನ್ಯಾತೀರ್ಥದಲ್ಲಿಯೂ, ಅಶ್ವತೀರ್ಥದಲ್ಲಿಯೂ ಮತ್ತು ಗೋತೀರ್ಥದಲ್ಲಿಯೂ ಅನುಷ್ಠಾನ ಮಾಡಿದರು. ಎಲೈ ರಾಜನೇ, ಪಾಂಡವರು ಪಾಲಕೋಟಿಯಲ್ಲಿ ವೃಷಪ್ರಸ್ಥ ಪರ್ವತದಲ್ಲಿ ವಾಸಮಾಡಿ ಬಾಹುದಾ ನದಿಯಲ್ಲಿ ಎಲ್ಲರೂ ಸ್ನಾನವನ್ನು ಮಾಡಿದರು.

ಪ್ರಯಾಗೇ ದೇವಯಜನೇ ದೇವಾನಾಂ ಪೃಥಿವೀಪತೇ ।
ಊಷುರಾಪ್ಲಾವ್ಯ ಗಾತ್ರಾಣಿ ತಪಶ್ಚಾತಸ್ಥುರುತ್ತಮಮ್ ॥೫॥

ಎಲೈ ರಾಜನೇ, ದೇವತೆಗಳ ಯಜ್ಞಭೂಮಿಯ ವೇದಿಕೆಯಾದ ಪ್ರಯಾಗದಲ್ಲಿ ಸ್ನಾನವನ್ನು ಮಾಡಿ, ವಾಸವನ್ನು ಮಾಡಿ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದರು.

ಗಂಗಾಯಮುನಯೋಶ್ಚಾಪಿ ಸಂಗಮೇ ಸತ್ಯಸಂಗರಾಃ ।
ವಿಪಾಪ್ಮಾನೋ ಮಹಾತ್ಮಾನೋ ವಿಪ್ರೇಭ್ಯಃ ಪ್ರದದುರ್ವಸು ॥೬॥

ಸತ್ಯಸಂಧರಾದ, ಮಹಾನುಭಾವರಾದ ಅವರು ಗಂಗಾಯಮುನಾ ಸಂಗಮದಲ್ಲಿ ಸ್ನಾನವನ್ನು ಮಾಡಿ ಪಾಪರಹಿತರಾಗಿ ಬ್ರಾಹ್ಮಣರಿಗೆ ಬಹಳ ಧನವನ್ನು ದಾನಮಾಡಿದರು.

ತಪಸ್ವಿಜನಜುಷ್ಟಾಂ ಚ ತತೋ ವೇದೀಂ ಪ್ರಜಾಪತೇಃ ।
ಜಗ್ಮುಃ ಪಾಂಡುಸುತಾ ರಾಜನ್ ಬ್ರಾಹ್ಮಣೈಃ ಸಹ ಭಾರತ ॥೭॥

ತತ್ರ ತೇ ನ್ಯವಸನ್ ವೀರಾಃ ತಪಶ್ಚಾತಸ್ಥುರುತ್ತಮಮ್ ।
ಸಂತರ್ಪಯಂತಃ ಸತತಂ ವನ್ಯೇನ ಹವಿಷಾ ದ್ವಿಜಾನ್ ॥೮॥

ಎಲೈ ರಾಜನೇ, ಭಾರತನೇ, ಅನಂತರ ಪಾಂಡುಪುತ್ರರು ತಪಸ್ವಿಜನರಿಂದ ಸೇವಿತವಾದ ಪ್ರಜಾಪತಿಯ ವೇದಿಗೆ, ಬ್ರಾಹ್ಮಣರ ಜೊತೆಯಲ್ಲಿ ಪ್ರಯಾಣ

ಮಾಡಿದರು. ಆ ವೀರರು ಅಲ್ಲಿ ಕಾಡಿನಲ್ಲಿ ದೊರೆಯುವ ಹವಿಷ್ಯವಸ್ತುಗಳಿಂದ ಬ್ರಾಹ್ಮಣರನ್ನು ಸತತವಾಗಿ ತೃಪ್ತಿಪಡಿಸುತ್ತಾ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದರು.

ತತೋ ಮಹೀಧರಂ ಜಗ್ಮುರ್ಧರ್ಮಜ್ಞೇನಾಭಿಸತ್ಕೃತಮ್ ।
ರಾಜರ್ಷಿಣಾ ಪುಣ್ಯಕೃತಾ ಗಯೇನಾನುಪಮದ್ಯುತಾ ॥೯॥

ಅನಂತರ ಅನುಪಮದ್ಯುತಿಯಾದ, ಪುಣ್ಯಶಾಲಿಯಾದ, ರಾಜರ್ಷಿಯಾದ, ಧರ್ಮಜ್ಞನಾದ ಗಯನಿಂದ ಪೂಜಿತವಾದ ಪರ್ವತವನ್ನು ತಲುಪಿದರು.

ಸರೋ ಗಯಶಿರೋ ಯತ್ರ ಪುಣ್ಯಾ ಚೈವ ಮಹಾನದೀ ।
ಋಷಿಜುಷ್ಟಂ ಸುಪುಣ್ಯಂ ತತ್ ತೀರ್ಥಂ ಬ್ರಹ್ಮಸರೋಽತುಲಮ್॥೧೦॥

ಗಯಶಿರಾ ಎಂಬ ಸರೋವರವೂ ಮಹಾನದಿಯೆಂಬ ಪವಿತ್ರವಾದ ನದಿಯೂ ಋಷಿಗಳಿಂದ ಸೇವಿತವಾದ ಬ್ರಹ್ಮಸರ ಎಂಬ ಅಸದೃಶವಾದ ಪವಿತ್ರವಾದ ತೀರ್ಥವೂ ಅಲ್ಲಿ ಇವೆ.

ಅಗಸ್ತ್ಯೋ ಭಗವಾನ್ ಯತ್ರ ಗತೋ ವೈವಸ್ವತಂ ಪ್ರತಿ ।
ಉವಾಸ ಚ ಸ್ವಯಂ ಯತ್ರ ಧರ್ಮರಾಜಃಸನಾತನಃ ॥೧೧॥

ಸರ್ವಾಸಾಂ ಸರಿತಾಂ ಚೈವ ಸಮುದ್ಭೇದೋ ವಿಶಾಂಪತೇ ।
ಯತ್ರ ಸನ್ನಿಹಿತೋ ನಿತ್ಯಂ ಮಹಾದೇವಃ ಪಿನಾಕಧೃಕ್ ॥೧೨॥

ತತ್ರ ತೇ ಪಾಂಡವಾ ರಾಜನ್ ಚಾತುರ್ಮಾಸ್ಯೈಸ್ತದೇಜಿರೇ ।
ಋಷಿಯಜ್ಞೈಶ್ಚ ಮಹತಾ ತತ್ರಾಕ್ಷಯವಟೋ ಮಹಾನ್ ॥೧೩॥

ಅಲ್ಲಿ ಪೂಜ್ಯರಾದ ಅಗಸ್ತ್ಯರು ಯಮದೇವರನ್ನು ಸಂಧಿಸಿದರು. ಸನಾತನನಾದ ಯಮಧರ್ಮರಾಜನು ಅಲ್ಲಿ ಸ್ವತಃ ವಾಸಮಾಡಿದನು. ಎಲೈ ರಾಜನೇ, ಅಲ್ಲಿ ಎಲ್ಲ ನದಿಗಳ ಉಗಮವಾಗುತ್ತದೆ. ಪಿನಾಕಧಾರಿಯಾದ ಮಹಾದೇವನು ಅಲ್ಲಿ ಯಾವಾಗಲೂ ಸನ್ನಿಹಿತನಾಗಿದ್ದಾನೆ. ಎಲೈ ರಾಜನೇ, ಅಲ್ಲಿ ಪಾಂಡವರು ಚಾತುರ್ಮಾಸ್ಯ ಯಾಗಗಳನ್ನು ಮತ್ತು ಶ್ರೇಷ್ಠವಾದ ಋಷಿಯಜ್ಞಗಳನ್ನು ಮಾಡಿದರು. ಅಲ್ಲಿ ಶ್ರೇಷ್ಠವಾದ ಅಕ್ಷಯವಟವಿದೆ.

ಬ್ರಾಹ್ಮಣಾಸ್ತತ್ರ ಶತಶಃ ಸಮಾಜಗ್ಮುಸ್ತಪೋಧನಾಃ ।
ವರ್ತಮಾನೇಷು ವೈ ತಸ್ಯ ಚಾತುರ್ಮಾಸ್ಯೇಷು ಭಾರತ ॥೧೪॥

ಎಲೈ ಭಾರತನೇ, ಧರ್ಮರಾಜನ ಈ ಚಾತುರ್ಮಾಸ್ಯಯಾಗಗಳು ಅಲ್ಲಿ ಜರುಗುತ್ತಿರುವಾಗ ತಪೋಧನರಾದ ಬ್ರಾಹ್ಮಣರು ನೂರಾರು ಸಂಖ್ಯೆಯಲ್ಲಿ ಅಲ್ಲಿಗೆ ಆಗಮಿಸಿದರು.

ತತ್ರ ವಿದ್ಯಾತಪೋವೃದ್ಧಾ ಬ್ರಾಹ್ಮಣಾ ವೇದಪಾರಗಃ ।
ಕಥಾಃ ಪ್ರಚಕ್ರೀರೇ ಪುಣ್ಯಾಃ ಸದಸ್ಯಾ ಮಹಾತ್ಮನಾಮ್ ॥೧೫॥

ಅಲ್ಲಿ ಆ ಮಹಾನುಭಾವರ ಸದಸ್ಸಿನಲ್ಲಿ ವಿದ್ಯಾತಪೋವೃದ್ಧರೂ, ವೇದಪಾರಂಗತರೂ ಆದ ಬ್ರಾಹ್ಮಣರು ಪುಣ್ಯವಾದ ಕಥೆಗಳನ್ನು ಹೇಳಿದರು.

ತತ್ರ ವಿದ್ಯಾವ್ರತಸ್ನಾತಃ ಕೌಮಾರಂ ವ್ರತಮಾಸ್ಥಿತಃ ।
ಶಮಠೋಽಕಥಯದ್ ರಾಜನ್ನಾರ್ಧೂರ್ತರಜಸಂ ಗಯಮ್ ॥೧೬॥

ಅಲ್ಲಿ ವಿದ್ಯಾವ್ರತಸ್ನಾತರಾದ, ನೈಷ್ಠಿಕ ಬ್ರಹ್ಮಚರ್ಯವನ್ನು ಧರಿಸಿದ, ಶಮಠರೆಂಬ ಋಷಿಗಳು ಆರ್ಧೂರ್ತರಜಸನ ಪುತ್ರನಾದ ಗಯನ ಮಹಿಮೆಯನ್ನು ಹೇಳಿದರು.

ಶಮಠಃ

ಆರ್ಧೂರ್ತರಜಸಃ ಪುತ್ರೋ ಗಯೋ ರಾಜರ್ಷಿಸತ್ತಮಃ ।
ಪುಣ್ಯಾನಿ ತಸ್ಯ ಕರ್ಮಾಣಿ ತಾನಿ ಮೇ ಶೃಣು ಭಾರತ ॥೧೭॥

ಶಮಠ– ಎಲೈ ಭಾರತನೇ, ಆರ್ಧೂರ್ತರಜಸನ ಪುತ್ರನಾದ ಗಯನು ರಾಜರ್ಷಿ ಶ್ರೇಷ್ಠನಾಗಿದ್ದನು. ಅವನು ಪವಿತ್ರವಾದ ಕರ್ಮಗಳನ್ನು ಮಾಡಿದನು. ಅದನ್ನು ಕೇಳು.

ಯಸ್ಯ ಯಜ್ಞೋ ಬಭೂವೇಹ ಬಹ್ವನ್ನೋ ಬಹುದಕ್ಷಿಣಃ ।
ಯತ್ರಾನ್ನಪರ್ವತಾ ರಾಜನ್ನಾಸನ್ ಶತಸಹಸ್ರಶಃ ॥೧೮॥

ಘೃತಕುಲ್ಯಾಶ್ಚ ದಧ್ನಶ್ಚ ನದ್ಯೋ ಬಹುಶತಾಸ್ತಥಾ ।
ವ್ಯಂಜನಾನಾಂ ಪ್ರವಾಹಾಶ್ಚ ಮಹಾರ್ಹಾಣಾಂ ಸಹಸ್ರಶಃ ॥೧೯॥

ಇಲ್ಲಿ ಬಹಳ ಅನ್ನ ಮತ್ತು ದಕ್ಷಿಣೆಗಳಿಂದ ಕೂಡಿದ್ದ ಅವನ ಯಜ್ಞವು ಜರುಗಿತು. ಎಲೈ ರಾಜನೇ, ಅಲ್ಲಿ ಪರ್ವತದಂತಹ ಅನ್ನದ ರಾಶಿಗಳು, ಹತ್ತಾರು ಸಾವಿರಗಟ್ಟಲೆ ಇದ್ದವು. ಘೃತದ ಸರೋವರಗಳು, ಮೊಸರಿನ ನದಿಗಳು ನೂರಾರುಗಟ್ಟಲೆಯಲ್ಲಿ ಇದ್ದವು. ಶ್ರೇಷ್ಠವಾದ ವ್ಯಂಜನಗಳ ಪ್ರವಾಹವು ಸಾವಿರಗಟ್ಟಲೆ ಇದ್ದಿತು.

ಅಹನ್ಯಹನಿ ಚಾಪ್ಯೇತದ್ ಯಾಚತಾಂ ಸಂಪ್ರದೀಯತೇ ।
ಅನ್ಯತ್ತು ಬ್ರಾಹ್ಮಣಾ ರಾಜನ್ ಭುಂಜತೇಽನ್ನಂ ಸುಸಂಸ್ಕೃತಮ್ ॥೨೦॥

ಪ್ರತಿದಿನವೂ ಇದನ್ನು ಯಾಚಕರಿಗೆ ಕೊಡುತ್ತಿದ್ದರು. ಎಲೈ ರಾಜನೇ, ಬ್ರಾಹ್ಮಣರು ಸುಸಂಸ್ಕೃತನಾದ ಬೇರೆ ಅನ್ನವನ್ನೇ ಭುಂಜಿಸುತ್ತಿದ್ದರು.

ತತ್ರ ವೈ ದಕ್ಷಿಣಾಕಾಲೇ ಬ್ರಹ್ಮಘೋಷಾ ದಿವಂ ಗತಾಃ ।
ನ ಚ ಪ್ರಜ್ಞಾಯತೇ ಕಿಂಚಿದ್ ಬ್ರಹ್ಮಘೋಷೇಣ ಭಾರತ ॥೨೧॥

ಪುಣ್ಯೇನೋಚ್ಚರಿತಾ ರಾಜನ್ ಭೂರ್ದಿಶಃ ಖಿಂ ತಥಾ ನೃಪ ।
ಆಪೂರ್ಣಮಾಸೀಚ್ಚಬ್ದೇನ ತದಪ್ಯಾಸೀನ್ಮಹಾದ್ಭುತಮ್ ॥೨೨॥

ಅಲ್ಲಿ ದಕ್ಷಿಣೆಯನ್ನು ಕೊಡುವ ಸಮಾಪ್ತಿಕಾಲದಲ್ಲಿ ಉಂಟಾದ ವೇದಘೋಷವು ಅಂತರಿಕ್ಷವನ್ನು ಮುಟ್ಟಿತು. ಎಲೈ ಭಾರತನೇ, ಆ ವೇದಘೋಷದ ಕಾರಣದಿಂದಾಗಿ ಬೇರೆ ಏನೂ ಕೇಳುತ್ತಿರಲಿಲ್ಲ. ಎಲೈ ರಾಜನೇ, ಪುಣ್ಯಜನರಿಂದ ಉಚ್ಚರಿಸಲ್ಪಟ್ಟ ಆ ವೇದಘೋಷವು ಭೂಮಿಯನ್ನು, ದಿಕ್ಕುಗಳನ್ನು ಮತ್ತು ಆಕಾಶವನ್ನು ತನ್ನ ಶಬ್ದದಿಂದ ಪೂರ್ಣವಾಗಿ ತುಂಬಿತು. ಅದು ಅದ್ಭುತವಾಗಿದ್ದಿತು.

ತತ್ರ ಸ್ಮ ಗಾಥಾಂ ಗಾಯಂತಿ ಮನುಷ್ಯಾ ಭರತರ್ಷಭ ।
ಅನ್ನಪಾನಗುಣೈಸ್ತೃಪ್ತಾ ದೇಶೇ ದೇಶೇ ಸುವರ್ಚಸಃ ॥೨೩॥

ಎಲೈ ಭರತರ್ಷಭನೇ, ಅಲ್ಲಿ ಅನ್ನಪಾನಗಳಿಂದಲೂ, ದಕ್ಷಿಣೆ ಮೊದಲಾದ ಗುಣಗಳಿಂದಲೂ ತೃಪ್ತರಾದ ಕಾಂತಿಯುಕ್ತರಾದ ಮನುಷ್ಯರು ದೇಶದೇಶಗಳಲ್ಲಿ ಗಯನ ಯಜ್ಞದ ಮಹಿಮೆಯನ್ನು ಹಾಡಿದರು.

ಗಯಸ್ಯ ಯಜ್ಞೇ ಕೇ ತ್ವದ್ಯ ಪ್ರಾಣಿನೋಽಭೋಕ್ತುಮೀಪ್ಸವಃ ।
ಯತ್ರ ಭೋಜನಶೇಷಸ್ಯ ಪರ್ವತಾಃ ಪಂಚವಿಂಶತಿಃ ॥೨೪॥

ನ ಸ್ಮ ಪೂರ್ವೇ ಜನಾಶ್ಚಕ್ರುರ್ನ ಕರಿಷ್ಯಂತಿ ಚಾಪರೇ ।
ಗಯೋ ಯದಕರೋದ್ಯಜ್ಞೇ ರಾಜರ್ಷಿರಮಿತದ್ಯುತಿಃ ॥೨೫॥

ಕಥಂ ತು ದೇವಾ ಹವಿಷಾ ಗಯೇನ ಪರಿತರ್ಪಿತಾಃ ।
ಪುನಃಶಕ್ಕ್ಯಂತ್ಯುಪಾದಾತುಮನ್ಯೈರ್ದತ್ತಾನಿ ಕಾನಿಚಿತ್ ॥೨೬॥

ಗಯನ ಯಜ್ಞದಲ್ಲಿ ಈ ದಿನ ಭೋಜನವನ್ನು ಮಾಡದೇ ಇರುವ ಮನುಷ್ಯರು ಯಾರು? ಅಲ್ಲಿ ಭೋಜನಶೇಷದ ಇಪ್ಪತ್ತೈದು ಪರ್ವತಗಳಿವೆ. ಅಮಿತದ್ಯುತಿಯಾದ ರಾಜರ್ಷಿಯಾದ ಗಯನು ಯಜ್ಞದಲ್ಲಿ ಏನನ್ನು ಮಾಡಿದನೋ ಅದನ್ನು ಹಿಂದಿನವರು ಯಾರೂ ಮಾಡಲಿಲ್ಲ ಮತ್ತು ಮುಂದಿನವರು ಮಾಡುವುದಿಲ್ಲ. ಗಯನ ಯಜ್ಞದಲ್ಲಿ ಹವಿಸ್ಸಿನಿಂದ ತೃಪ್ತಿಹೊಂದಿದ ದೇವತೆಗಳು ಬೇರೆಯವರು ಮಾಡುವ ಯಜ್ಞದಲ್ಲಿ ಕೊಡುವ ಹವಿಸ್ಸನ್ನು ಸ್ವೀಕರಿಸಲು ಹೇಗೆ ಸಮರ್ಥರಾಗುತ್ತಾರೆ?

ಏವಂವಿಧಾಃ ಸುಬಹವಃ ತಸ್ಯ ಯಜ್ಞೋ ಮಹಾತ್ಮನಃ ।
ಬಭೂವುರಸ್ಯ ಸರಸಃ ಸಮೀಪೇ ಕುರುನಂದನ ॥೨೭॥

ಎಲೈ ಕುರುನಂದನನೇ, ಆ ಮಹಾತ್ಮನ ಇಂತಹ ಅನೇಕ ಯಜ್ಞಗಳು ಈ ಬ್ರಹ್ಮ ಸರೋವರದ ಸಮೀಪದಲ್ಲಿ ಜರುಗಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ನವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಟ್‌ಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ಲೋಮಶರಿಂದ ಯುಧಿಷ್ಠಿರನಿಗೆ ಅಗಸ್ತ್ಯರ ಚರಿತೆಯ ಕಥನ. ಇಲ್ವಲ ವಾತಾಪಿಗಳ ನಡತೆ ಮತ್ತು ಲೋಪಾಮುದ್ರೆಯ ಜನನ.

ವೈಶಂಪಾಯನಃ

ತತಃ ಸಂಪ್ರಸ್ಥಿತೋ ರಾಜಾ ಕೌಂತೇಯೋ ಭೂರಿದಕ್ಷಿಣಃ ।
ಅಗಸ್ತ್ಯಾಶ್ರಮಮಾಸಾದ್ಯ ದುರ್ಜಯಾಯಾಮುವಾಸ ಹ ॥೧॥

ವೈಶಂಪಾಯನ– ಅನಂತರ ಬಹಳ ದಕ್ಷಿಣೆಗಳನ್ನು ಕೊಡುವ ಕೌಂತೇಯನಾದ ಧರ್ಮರಾಜನು ಅಲ್ಲಿಂದ ಹೊರಟು ಅಗಸ್ತ್ಯಾಶ್ರಮವನ್ನು ತಲುಪಿ ದುರ್ಜಯಾ ಎಂಬ ಆ ಸ್ಥಳದಲ್ಲಿ ವಾಸಮಾಡಿದನು.

ತತ್ರೈವ ಲೋಮಶಂ ರಾಜಾ ಪಪ್ರಚ್ಛ ವದತಾಂ ವರಃ ।
ಅಗಸ್ತ್ಯೇನೇಹ ವಾತಾಪಿಃ ಕಿಮರ್ಥಮುಪಶಾಮಿತಃ ॥೨॥

ಆಸೀದ್ವಾ ಕಿಂಪ್ರಭಾವಶ್ಚ ಸ ದೈತ್ಯೋ ಮನುಜಾಂತಕಃ ।
ಕಿಮರ್ಥಂ ಚೋದ್ಯತೋ ಮನ್ಯುರಗಸ್ತ್ಯಸ್ಯ ಮಹಾತ್ಮನಃ ॥೩॥

ಮಾತಾಡುವವರಲ್ಲಿ ಅಗ್ರಗಣ್ಯನಾದ ಆ ರಾಜನು ಅಲ್ಲಿ ಲೋಮಶರನ್ನು ಇಲ್ಲಿ ಅಗಸ್ತ್ಯರಿಂದ ವಾತಾಪಿಯು ಏಕೆ ಸಂಹರಿಸಲ್ಪಟ್ಟನು? ಮನುಜಾಂತಕನಾದ ಆ ದೈತ್ಯನ ಪ್ರಭಾವವು ಹೇಗಿದ್ದಿತು? ಮಹಾತ್ಮರಾದ ಅಗಸ್ತ್ಯರಿಗೆ ಏಕೆ ಕೋಪವು ಉಂಟಾಯಿತು? ಎಂದು ಕೇಳಿದನು.

ಲೋಮಶಃ

ಇಲ್ವಲೋ ನಾಮ ದೈತ್ಯೋ ಯ ಆಸೀತ್ ಕೌರವನಂದನ ।
ಮಣಿಮತ್ಯಾಂ ಪುರಿ ಪುರಾ ವಾತಾಪಿಸ್ತಸ್ಯ ಚಾನುಜಃ ॥೪॥

ಲೋಮಶ– ಎಲೈ ಕೌರವನಂದನನೇ, ಇಲ್ವಲನೆಂಬ ದೈತ್ಯನು ಹಿಂದೆ ಮಣಿಮತಿ ಎಂಬ ಪಟ್ಟಣದಲ್ಲಿದ್ದನು. ವಾತಾಪಿಯು ಅವನ ತಮ್ಮ.

ಸ ಬ್ರಾಹ್ಮಣಂ ತಪೋಯುಕ್ತಮುವಾಚ ದಿತಿನಂದನಃ ।
ಪುತ್ರಂ ಮೇ ಭಗವಾನೇಕಮಿಂದ್ರತುಲ್ಯಂ ಪ್ರಯಚ್ಛತು ॥೫॥

ಆ ದಿತಿನಂದನನಾದ ಇಲ್ವಲನು ಒಬ್ಬ ತಪೋಯುಕ್ತನಾದ ಬ್ರಾಹ್ಮಣನ್ನು ಸಮೀಪಿಸಿ ನನಗೆ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಒಬ್ಬ ಪುತ್ರನನ್ನು ಕೊಡು ಎಂದು ಕೇಳಿದನು.

ಲೋಮಶಃ

ತಸ್ಮೈ ಸ ಬ್ರಾಹ್ಮಣೋ ನಾದಾತ್ ಪುತ್ರಂ ವಾಸವಸಮ್ಮಿತಮ್ ।
ಚುಕ್ರೋಧ ಸೋಽಸುರಸ್ತಸ್ಯ ಬ್ರಾಹ್ಮಣಸ್ಯ ತತೋ ಭೃಶಮ್ ॥೬॥

ಲೋಮಶ– ಆ ಬ್ರಾಹ್ಮಣರು ಅವನಿಗೆ ಇಂದ್ರಸಮಾನನಾದ ಪುತ್ರನನ್ನು ಕೊಡಲಿಲ್ಲ. ಆಗ ಅಸುರನು ಆ ಬ್ರಾಹ್ಮಣರ ಮೇಲೆ ಬಹಳ ಕ್ರೋಧವನ್ನು ಹೊಂದಿದನು.

ತದಾ ಪ್ರಭೃತಿ ರಾಜೇಂದ್ರ ಬ್ರಹ್ಮಹಾಽಸುರಸತ್ತಮಃ ।
ಮನ್ಯುಮಾನ್ ಭ್ರಾತರಂ ಭಾಗಂ ಮಾಯಯಾ ಪ್ರಚಕಾರ ಹ ॥೭॥

ಸಮಾಹ್ವಯತಿ ಯಂ ವಾಚಾ ಗತಂ ವೈವಸ್ವತಕ್ಷಯಮ್ ।
ಸ ಪುನರ್ದೇಹಮಾಸ್ಥಾಯ ಜೀವನ್ ಸ್ಮ ಪ್ರತಿದೃಶ್ಯತೇ ॥೮॥

ಎಲೈ ರಾಜೇಂದ್ರನೇ, ಆಗಿನಿಂದ ಪ್ರಾರಂಭಿಸಿ ಆ ಅಸುರಶ್ರೇಷ್ಠನು ಬ್ರಹ್ಮಹತ್ಯೆಯನ್ನು ಮಾಡಲು ಪ್ರಾರಂಭಿಸಿದನು. ಕ್ರೋಧಶಾಲಿಯಾದ ಅವನು ತನ್ನ ತಮ್ಮನಾದ ವಾತಾಪಿಯನ್ನು ತನ್ನ ಮಾಯಾಶಕ್ತಿಯಿಂದ ಹೋತವನ್ನಾಗಿ ಮಾಡಿ ಯಮಸದನಕ್ಕೆ ಹೋದ ಅವನನ್ನು ಕರೆಯುತ್ತಿದ್ದನು. ವಾತಾಪಿಯಾದರೂ ದೇಹವನ್ನು ಧರಿಸಿ ಜೀವ ಸಹಿತನಾಗಿ ಪುನಃ ಹಿಂದೆ ಬಂದು ಕಾಣಿಸಿಕೊಳ್ಳುತ್ತಿದ್ದನು.

ತತೋ ವಾತಾಪಿಮಸುರಂ ಭಾಗಂ ಕೃತ್ವಾ ಸುಸಂಸ್ಕೃತಮ್ ।
ಬ್ರಾಹ್ಮಣಾನ್ ಭೋಜಯಿತ್ವಾಽಸೌ ಪುನರೇವ ಸಮಾಹ್ವಯತ್ ॥೯॥

ಆಗ ಇಲ್ವಲನು ತನ್ನ ತಮ್ಮನಾದ ಅಸುರನಾದ ವಾತಾಪಿಯನ್ನು ಹೋತವನ್ನಾಗಿ ಮಾಡಿ ಅವನ ಮಾಂಸವನ್ನು ಚೆನ್ನಾಗಿ ಬೇಯಿಸಿ ಅದರಿಂದ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ಪುನಃ ಅವನನ್ನು 'ವಾತಾಪಿಯೇ ಬಾ' ಎಂದು ಕರೆಯುತ್ತಿದ್ದನು.

ತಸ್ಯ ಸ್ವನೇನ ಮಹತಾ ಸ್ವರೇಣ ಗಿರಮೀರಿತಾಮ್ ।
ಶ್ರುತ್ವಾತಿಮಾಯೋ ಬಲವಾನ್ ಕ್ಷಿಪ್ರಂ ಬ್ರಾಹ್ಮಣಕಂಟಕಃ ॥೧೦॥

ತಸ್ಯ ಪಾರ್ಶ್ವಂ ವಿನಿರ್ಭಿದ್ಯ ಬ್ರಾಹ್ಮಣಸ್ಯ ಮಹಾಸುರಃ ।
ವಾತಾಪಿಃ ಪ್ರಹಸನ್ ರಾಜನ್ ನಿಷ್ಕ್ರಾಮ ವಿಶಾಂ ಪತೇ ॥೧೧॥

ಎಲೈ ರಾಜನೇ, ಆ ದೊಡ್ಡಘೋಷವುಳ್ಳ ಮಾತುಗಳನ್ನು ಕೇಳಿ ಬ್ರಾಹ್ಮಣಕಂಟಕನೂ, ಬಲಿಷ್ಠನೂ, ಮಾಯಾವಿಯೂ ಆದ ಆ ವಾತಾಪಿಮಹಾಸುರನು ಭೋಜನವನ್ನು ಮಾಡಿದ ಆ ಬ್ರಾಹ್ಮಣರ ಪಾರ್ಶ್ವವನ್ನು ಸೀಳಿಕೊಂಡು ನಗುತ್ತಾ ಹೊರಗೆ ಬರುತ್ತಿದ್ದನು.

ಏವಂ ಸ ಬ್ರಾಹ್ಮಣಾನ್ ರಾಜನ್ ಭೋಜಯಿತ್ವಾ ಪುನಃ ಪುನಃ ।
ಹಿಂಸಯಾಮಾಸ ದೈತೇಯ ಇಲ್ವಲೋ ದುಷ್ಟಚೇತನಃ ॥೧೨॥

ಎಲೈ ರಾಜನೇ, ಹೀಗೆ ಆ ದುಷ್ಟಚೇತನನಾದ, ದಿತಿಯ ಸುತನಾದ ಇಲ್ವಲನು ಬ್ರಾಹ್ಮಣರಿಗೆ ಪುನಃಪುನಃ ಭೋಜನವನ್ನು ಮಾಡಿಸಿ ಅವರನ್ನು ಕೊಲ್ಲುತ್ತಿದ್ದನು.

ಅಗಸ್ತ್ಯಶ್ಚಾಪಿ ಭಗವಾನ್ ಏತಸ್ಮಿನ್ನಂತರೇವ ತು ।
ಪಿತೄನ್ ದದರ್ಶ ಗರ್ತೇ ತು ಲಂಬಮಾನಾನವಾಙ್ಮುಖಾನ್ ॥೧೩॥

ಪೂಜ್ಯರಾದ ಅಗಸ್ತ್ಯರೂ ಕೂಡ ಈ ಸಮಯದಲ್ಲಿತಮ್ಮ ಪಿತೃಗಳು ಒಂದು ಹಳ್ಳದಲ್ಲಿ ಕೆಳಮುಖವಾಗಿ ನೇತಾಡುವುದನ್ನು ನೋಡಿದರು.

ಸೋಽಪೃಚ್ಛಲ್ಲಂಬಮಾನಾನ್ ತಾನ್ ಭಗವಂತಶ್ಚ ಕಿಂಕರಾಃ ।
ಕಿಮರ್ಥಂ ವೇಹ ಲಂಬಧ್ವಂ ಗರ್ತೇ ಯೂಯಮಧೋಮುಖಾಃ ।
ಸಂತಾನಹೇತೋರಿತಿ ತೇ ತಮೂಚುರ್ಬ್ರಹ್ಮವಾದಿನಃ ॥೧೪॥

ಅವರು ಹಾಗೆ ನೇತಾಡುತ್ತಿದ್ದ ಅವರನ್ನು ಕುರಿತು ಪೂಜ್ಯರಾದ ತಾವು ದಯಾಳುಗಳು. ಈ ಕತ್ತಲಲ್ಲಿ ಏಕೆ ಅಧೋಮುಖರಾಗಿ ಹೀಗೆ ನೇತಾಡುತ್ತಿದ್ದೀರಿ? ಎಂದು ಕೇಳಿದರು. ಬ್ರಹ್ಮವಾದಿಗಳಾದ ಅವರು ಅಗಸ್ತ್ಯರನ್ನು ಕುರಿತು ಸಂತಾನದ ಸಲುವಾಗಿ ಎಂದು ಉತ್ತರವನ್ನು ಕೊಟ್ಟರು.

ತೇ ತಸ್ಮೈ ಕಥಯಾಮಾಸುರ್ವಯಂ ತೇ ಪಿತರಃಸ್ವಕಾಃ ।
ಗರ್ತಮೇತಮನುಪ್ರಾಪ್ತಾ ಲಂಬಾಮಃ ಪ್ರಸವಾರ್ಥಿನಃ ॥೧೫॥

ಯದಿ ನೋ ಜನಯೇತ್ಥಾಸ್ತ್ವಮಗಸ್ಯಾಪತ್ಯಮುತ್ತಮಮ್ ।
ಸ್ಯಾನ್ನೋಽಸ್ಮಾನ್ನಿರಯಾನ್ನೋಕ್ಷ್ವಂ ಚಾಪಿ ಭಜ ನೋ ಗತಿಮ್ ॥೧೬॥

ಅವರು ಅಗಸ್ತ್ಯರನ್ನು ಕುರಿತು ನಾವು ನಿನ್ನ ಸ್ವಂತ ಪಿತೃಗಳು; ನಮ್ಮ ವಂಶದಲ್ಲಿ ಸಂತಾನವಿಲ್ಲದಿರುವುದರಿಂದ ಈ ಗರ್ತದಲ್ಲಿ ನೇತಾಡುತ್ತಿದ್ದೇವೆ. ನೀನು ಒಬ್ಬ ಶ್ರೇಷ್ಠನಾದ ಪುತ್ರನನ್ನು ಪಡೆಯುವುದಾದರೆ ನಮಗೆ ಇಂತಹ ನರಕದಿಂದ ಬಿಡುಗಡೆಯಾಗುತ್ತದೆ. ಇಲ್ಲದಿದ್ದರೆ ನಿನಗೂ ನಮ್ಮ ಗತಿಯೇ ಆಗುತ್ತದೆ ಎಂದು ಹೇಳಿದರು.

ಸ ತಾನುವಾಚ ತೇಜಸ್ವೀ ಸತ್ಯಧರ್ಮಪರಾಯಣಃ ।
ಕರಿಷ್ಯೇ ಪಿತರಃ ಕಾಮಂ ವ್ಯೇತು ವೋ ಮಾನಸೋ ಜ್ವರಃ ॥೧೭॥

ತೇಜಸ್ವಿಗಳೂ, ಸತ್ಯಧರ್ಮಪರಾಯಣರೂ ಆದ ಅಗಸ್ತ್ಯರು ಅವರನ್ನು ಕುರಿತು ಎಲೈ ಪಿತೃಗಳೇ, ನಿಮ್ಮ ಆಸೆಯನ್ನು ನಾನು ಈಡೇರಿಸುತ್ತೇನೆ. ನಿಮ್ಮ ಮನಸ್ಸಿನ ಸಂತಾಪವನ್ನು ಬಿಡಿ ಎಂದು ಹೇಳಿದರು.

ಲೋಮಶಃ

ತತಃ ಪ್ರಸವಸಂತಾನಂ ಚಿಂತಯನ್ ಭಗವಾನೃಷಿಃ ।
ಆತ್ಮನಃ ಪ್ರಸವಸ್ಯಾರ್ಥೇ ನಾವಿಂದತ್ ಸದೃಶೀಂ ಸ್ತ್ರಿಯಮ್ ॥೧೮॥

ಲೋಮಶ– ಆನಂತರ ಪೂಜ್ಯರಾದ ಅಗಸ್ತ್ಯ ಋಷಿಗಳು ತಮ್ಮ ಸಂತತಿಯ ವಿಸ್ತಾರಕ್ಕಾಗಿ ಒಬ್ಬ ಮಗನನ್ನು ಪಡೆಯುವ ಸಲುವಾಗಿ ಚಿಂತಿಸಿದರು. ಆದರೆ ಅವರಿಗೆ ಅನುರೂಪವಾದ ಒಬ್ಬ ವನಿತೆಯು ದೊರೆಯಲಿಲ್ಲ.

ಸ ತಸ್ಯ ತಸ್ಯ ಸತ್ತ್ವಸ್ಯ ತತ್ತದಂಗಮನುತ್ತಮಮ್ ।
ಸಂಗೃಹ್ಯ ತನ್ಮಯೈರಂಶೈರ್ನಿರ್ಮಮೇ ಸ್ತ್ರಿಯಮುತ್ತಮಾಮ್ ॥೧೯॥

ಅವರು ಆಯಾ ಪ್ರಾಣಿಗಳ ಅವಯವಗಳಿಂದ ಶ್ರೇಷ್ಠವಾದ ಅಲ್ಪ ಅಲ್ಪ ಭಾಗಗಳನ್ನು ತೆಗೆದು ಅವುಗಳನ್ನು ಸಂಗ್ರಹಿಸಿ ಆ ಅಂಶಗಳಿಂದ ಶ್ರೇಷ್ಠವಾದ ಒಬ್ಬ ವನಿತೆಯನ್ನು ನಿರ್ಮಾಣ ಮಾಡಿದರು.

ಸ ತಾಂ ವಿದರ್ಭರಾಜಾಯ ಪುತ್ರಕಾಮಾಯ ಶಾಮ್ಯತೇ ।
ನಿರ್ಮಿತಾಮಾತ್ಮನೋಽರ್ಥಾಯ ಮುನಿಃ ಪ್ರಾದಾನ್ಮಹಾತಪಾಃ ॥೨೦॥

ಮಹಾತಪಸ್ವಿಗಳಾದ ಆ ಋಷಿಗಳು ತಮ್ಮ ಸಲುವಾಗಿ ನಿರ್ಮಾಣ ಮಾಡಿದ್ದ ಆ ವನಿತೆಯನ್ನು ಪುತ್ರಕಾಮನಾಗಿ ಬಳಲುತ್ತಿದ್ದ ವಿದರ್ಭರಾಜನಿಗೆ ಕೊಟ್ಟರು.

ಸಾ ತತ್ರ ಜಜ್ಞೇ ಸುಭಗಾ ವಿದ್ಯುತ್ಸೌದಾಮನೀ ಯಥಾ ।
ವಿಭ್ರಾಜಮಾನಾ ವಪುಷಾ ವ್ಯವರ್ಧತ ಶುಭಾನನಾ ॥೨೧॥

ಸೌಭಾಗ್ಯವತಿಯಾದ ಅವಳು ಮೋಡದಲ್ಲಿ ಮಿಂಚುಮೂಡಿದಂತೆ ಅಲ್ಲಿ ಅವತರಿಸಿ ತನ್ನ ಕಾಂತಿಯಿಂದ ಬೆಳಗುತ್ತಾ ಸುಂದರವಾಗಿ ಬೆಳೆದಳು.

ಜಾತಮಾತ್ರಂ ಚ ತಾಂ ದೃಷ್ಟ್ವಾ ವೈದರ್ಭಃ ಪೃಥಿವೀಪತಿಃ ।
ಪ್ರಹರ್ಷೇಣ ದ್ವಿಜಾತಿಭ್ಯೋ ನ್ಯವೇದಯತ ಭಾರತ ॥೨೨॥

ಎಲೈ ಭಾರತನೇ, ಅವಳು ಜನಿಸಿದ ತಕ್ಷಣ ಅವಳನ್ನು ನೋಡಿ ವಿದರ್ಭರಾಜನು ಸಂತೋಷದಿಂದ ಬ್ರಾಹ್ಮಣರಿಗೆ ನಿವೇದಿಸಿದನು.

ಅಭ್ಯನಂದತ ತಾಂ ಸರ್ವೇ ಬ್ರಾಹ್ಮಣಾ ವಸುಧಾಧಿಪ ।
ಲೋಪಾಮುದ್ರೇತಿ ತಸ್ಯಾಶ್ಚ ಚಕ್ರುರೇ ನಾಮ ತೇ ದ್ವಿಜಾಃ ॥೨೩॥

ಎಲೈ ವಸುಧಾಧಿಪನೇ, ಆ ಎಲ್ಲ ಬ್ರಾಹ್ಮಣರು ಆ ವಾರ್ತೆಯನ್ನು ಕೇಳಿ ಅಭಿನಂದಿಸಿ ಅವಳಿಗೆ ಲೋಪಾಮುದ್ರಾ ಎಂದು ನಾಮಕರಣ ಮಾಡಿದರು.

ವವೃಧೇ ಸಾ ಮಹಾರಾಜ ಬಿಭ್ರತೀ ರೂಪಮುತ್ತಮಮ್ ।
ಅಪ್ಸ್ವವೋತ್ಪಲಿನೀ ಶೀಘ್ರಮಗ್ನೇರಿವ ಶಿಖಾ ಶುಭಾ ॥೨೪॥

ಎಲೈ ಮಹಾರಾಜನೇ, ಅವಳು ಉತ್ತಮವಾದ ರೂಪವನ್ನು ಹೊಂದಿದವಳಾಗಿ ಅಗ್ನಿಯ ಶಿಖೆಯಂತೆ ಶುದ್ಧಳಾಗಿ ನೀರಿನಲ್ಲಿನೈದಿಲೆಯಂತೆ ಶೀಘ್ರವಾಗಿ ಬೆಳೆದಳು.

ತಾಂ ಯೌವನಗತಾಂ ರಾಜನ್ ಶತಂ ಕನ್ಯಾಸ್ತಲಂಕೃತಾಃ ।
ದಾಸೀಶತಂ ಚ ಕಲ್ಯಾಣೀಮುಪಾತಸ್ತುರ್ವಶಾನುಗಾಃ ॥೨೫॥

ಎಲೈ ರಾಜನೇ, ಯೌವನಸ್ಥಳಾದ ಆ ಲೋಪಾಮುದ್ರೆಯನ್ನು ಅಲಂಕೃತರಾದ ವಶವರ್ತಿಗಳಾದ ನೂರುಕನ್ಯೆಯರು ಮತ್ತು ನೂರು ದಾಸಿಯರು ಉಪಚರಿಸುತ್ತಿದ್ದರು.

ಸಾ ಸ್ಮ ದಾಸೀಶತವೃತಾ ಮಧ್ಯೇ ಕನ್ಯಾಶತಸ್ಯ ಚ ।
ಆಸ್ತೇ ತೇಜಸ್ವಿನೀ ಕನ್ಯಾ ರೋಹಿಣೀವ ದಿವಿ ಪ್ರಭೋ ॥೨೬॥

ಎಲೈ ಪ್ರಭುವೇ, ಆ ಲೋಪಾಮುದ್ರೆಯಾದರೂ ನೂರುದಾಸಿಯರ ಮತ್ತು ನೂರು ಕನ್ಯೆಯರ ಮಧ್ಯೆ ತನ್ನ ತೇಜಸ್ಸಿನಿಂದ ಬೆಳಗುತ್ತಾ ಆಕಾಶದಲ್ಲಿ ರೋಹಿಣಿಯಂತೆ ಕಂಗೊಳಿಸುತ್ತಿದ್ದಳು.

ಯೌವನಸ್ಥಾಮಪಿ ಚ ತಾಂ ಶೀಲಾಚಾರಸಮನ್ವಿತಾಮ್ ।
ನ ವವ್ರೇ ಪುರುಷಃ ಕಶ್ಚಿದ್ ಭಯಾತ್ ತಸ್ಯ ಮಹಾತ್ಮನಃ ॥೨೭॥

ಲೋಪಾಮುದ್ರೆಯು ಯೌವನಸ್ಥಳಾಗಿದ್ದರೂ, ಶೀಲಾಚಾರಸಂಪನ್ನಳಾಗಿದ್ದರೂ ಮಹಾತ್ಮನಾದ ವಿದರ್ಭರಾಜನ ಭಯದಿಂದ ಯಾರೂ ಅವಳನ್ನು ವರಿಸಲಿಲ್ಲ.

ಸಾ ತು ಸತ್ಯವತೀ ಕನ್ಯಾ ರೂಪೇಣಾಪ್ಸರಸೋಽಪ್ಯತಿ ।
ತೋಷಯಾಮಾಸ ಪಿತರಂ ಶೀಲೇನ ಸ್ವಜನಂ ತಥಾ ॥೨೮॥

ಸತ್ಯವತಿಯಾದ, ಅಪ್ಸರೆಯರನ್ನೂ ಮೀರಿದ ಸೌಂದರ್ಯವನ್ನು ಹೊಂದಿದ್ದ ಆ ಕನ್ಯೆಯು ತನ್ನ ಶೀಲದಿಂದ ತನ್ನ ತಂದೆಯನ್ನೂ ಮತ್ತು ಬಂಧುಗಳನ್ನೂ ಸಂತೋಷ ಪಡಿಸಿದಳು.

ವೈದರ್ಭೀ ತು ತಥಾಯುಕ್ತಾಂ ಯುವತೀಂ ಪ್ರೇಕ್ಷ್ಯ ವೈ ಪಿತಾ ।
ಮನಸಾ ಚಿಂತಯಾಮಾಸ ಕಸ್ಮೈ ದದ್ಯಾಮಿಮಾಂ ಸುತಾಮ್ ॥೨೯॥

ತನ್ನ ಮಗಳು ಯುವನಸ್ಥಳಾಗಿರುವುದನ್ನು ಗಮನಿಸಿದ ವಿದರ್ಭರಾಜನು ಇಂತಹ ಮಗಳನ್ನು ಯಾರಿಗೆ ಕೊಡಲಿ ಎಂದು ಮನಸ್ಸಿನಲ್ಲಿಯೇ ಚಿಂತಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕನವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತೆರಡನೆಯ ಅಧ್ಯಾಯ

ಲೋಪಾಮುದ್ರೆಯ ವಿವಾಹ ಮತ್ತು ಧರ್ಮಾಚರಣೆ.

ಯದಾ ತ್ವಮನ್ಯತಾಗಸ್ಯೇ ಗಾರ್ಹಸ್ಥ್ಯೇ ತಾಮನಿಂದಿತಾಮ್ ।
ತದಾಽಭಿಗಮ್ಯ ಪ್ರೋವಾಚ ವೈದರ್ಭಂ ಪೃಥಿವೀಪತಿಮ್ ॥೧॥

ರಾಜನ್ನಿವೇಶೇ ಬುದ್ಧಿರ್ಮೇ ವರ್ತತೇ ಪುತ್ರಕಾರಣಾತ್ ।
ವರಯೇ ತ್ವಾಂ ಮಹೀಪಾಲ ಲೋಪಾಮುದ್ರಾಂ ಪ್ರಯಚ್ಛ ಮೇ ॥೨॥

ಲೋಮಶ– ಅಗಸ್ತ್ಯರು ಆ ಪರಿಶುದ್ಧಳಾದ ಲೋಪಾಮುದ್ರೆಯನ್ನು ತಮ್ಮ ಗಾರ್ಹಸ್ಥ್ಯಕ್ಕೆ ಅನುಕೂಲವಾದ ಪತ್ನಿ ಎಂದು ತಿಳಿದು ವಿದರ್ಭರಾಜನನ್ನು ಸಮೀಪಿಸಿ, ರಾಜನೇ, ನಾನು ಪುತನನ್ನು ಪಡೆಯುವ ಸಲುವಾಗಿ ವಿವಾಹವನ್ನು ಮಾಡಿಕೊಳ್ಳುವ ಇಚ್ಛೆಯುಳ್ಳವನಾಗಿದ್ದೇನೆ. ಎಲ್ಲೆ ರಾಜನೇ, ನಿನ್ನನ್ನು ಬೇಡುತ್ತಿದ್ದೇನೆ. ಲೋಪಾಮುದ್ರೆಯನ್ನು ನನಗೆ ಕೊಡು ಎಂದು ಕೇಳಿದರು.

ಏವಮುಕ್ತ್ವಾ ಸ ಮುನಿನಾ ಮಹೀಪಾಲೋ ವಿಚೇತನಃ ।
ಪ್ರತ್ಯಾಖ್ಯಾನಾಯ ಚಾಶಕ್ತಃ ಪ್ರದಾತುಮಪಿ ನೇಚ್ಛತಿ ॥೩॥

ಈ ಮಾತುಗಳನ್ನು ಕೇಳಿದ ರಾಜನು ನಿರಾಕರಿಸಲು ಸಾಮರ್ಥ್ಯವಿಲ್ಲದೆ, ಕೊಡಲು ಮನಸ್ಸಿಲ್ಲದೆ ನಿಚೇತನನಾದನು.

ತತಃ ಸ ಭಾರ್ಯಾಮಭ್ಯೇತ್ಯ ಪ್ರೋವಾಚ ಪೃಥಿವೀಪತಿಃ ।
ಮಹರ್ಷಿರ್ವೀರ್ಯವಾನೇಷ ಕ್ರುದ್ಧಃ ಶಾಪಾಗ್ನಿನಾ ದಹೇತ್ ॥೪॥

ಅನಂತರ ಆ ರಾಜನು ತನ್ನ ಪತ್ನಿಯನ್ನು ಸಮೀಪಿಸಿ ಈ ಮಹರ್ಷಿಗಳು ಪ್ರತಾಪಶಾಲಿಗಳು, ಅವರಿಗೆ ಕೋಪವುಂಟಾದರೆ ಶಾಪಾಗ್ನಿಯಿಂದ ನಮ್ಮನ್ನು ಸುಡಬಹುದು ಎಂದು ಹೇಳಿದನು.

ಲೋಮಶಃ

ತಂ ತಥಾ ದುಃಖಿತಂ ದೃಷ್ಟ್ವಾ ಸಭಾರ್ಯಂ ಪೃಥಿವೀಪತಿಮ್ ।
ಲೋಪಾಮುದ್ರಾऽಭಿಗಮ್ಯೇದಂ ಕಾಲೇ ವಚನಮಬ್ರವೀತ್ ॥೫॥

ಮತ್ಕೃತೇ ನ ಮಹೀಪಾಲ ಪೀಡಾಮಭ್ಯೇತುಮರ್ಹಸಿ ।
ಪ್ರಯಚ್ಛ ಮಾಮಗಸ್ತ್ಯಾಯ ತ್ರಾಹ್ಯಾತ್ಮಾನಂ ಮಯಾ ಪಿತಃ ॥೬॥

ಲೋಮಶ– ತನ್ನ ತಂದೆಯಾದ ರಾಜನು ತನ್ನ ಪತ್ನಿಯ ಜೊತೆಯಲ್ಲಿ ಅಪ್ಪು ದುಃಖಿದಿಂದ ಇರುವುದನ್ನುನೋಡಿದ ಲೋಪಾಮುದ್ರೆಯು ಯೋಗ್ಯವಾದ ಕಾಲದಲ್ಲಿ ತಂದೆಯನ್ನು ಸಮೀಪಿಸಿ ಎಲೈ ರಾಜನೇ, ನನ್ನ ಸಲುವಾಗಿ ಚಿಂತೆಯನ್ನು ಮಾಡಬೇಡ. ನನ್ನನ್ನು ಅಗಸ್ತ್ಯರಿಗೆ ಕೊಡು. ತಂದೆಯೇ, ನನ್ನನ್ನು ದಾನಮಾಡಿ ನೀನು ನಿನ್ನನ್ನು ರಕ್ಷಿಸಿಕೋ ಎಂದು ಹೇಳಿದಳು.

ಲೋಮಶಃ

ದುಹಿತುರ್ವಚನಾದ್ರಾಜಾ ಸೋऽಗಸ್ತ್ಯಾಯ ಮಹಾತ್ಮನೇ ।
ಲೋಪಾಮುದ್ರಾಂ ತತಃ ಪ್ರಾದಾದ್ ವಿಧಿಪೂರ್ವಂ ವಿಶಾಂಪತೇ ॥೭॥

ಲೋಮಶ– ಎಲೈ ವಿಶಾಂಪತಿಯೇ, ಮಗಳ ಮಾತಿನಂತೆ ವಿದರ್ಭರಾಜನು ಮಹಾತ್ಮರಾದ ಅಗಸ್ತ್ಯರಿಗೆ ಲೋಪಾಮುದ್ರೆಯನ್ನು ವಿಧಿಪೂರ್ವಕವಾಗಿ ದಾನ ಮಾಡಿದನು.

ಪ್ರಾಪ್ಯ ಭಾರ್ಯಾಮಗಸ್ತ್ಯಸ್ತು ಲೋಪಮುದ್ರಾಮಭಾಷತ ।
ಮಹಾರ್ಹಾಣ್ಯುತ್ಸೃಜೈತಾನಿ ವಾಸಾಂಸ್ಯಾಭರಣಾನಿ ಚ ॥೮॥

ವಿವಾಹವನ್ನು ಮಾಡಿಕೊಂಡ ಅಗಸ್ತ್ಯರು ಲೋಪಾಮುದ್ರೆಯನ್ನು ಕುರಿತು ಈ ಬೆಲೆಬಾಳುವ ವಸ್ತ್ರಗಳನ್ನು ಮತ್ತು ಆಭರಣಗಳನ್ನು ಪರಿತ್ಯಜಿಸು ಎಂದು ಹೇಳಿದರು.

ಲೋಮಶಃ

ತತಃ ಸಾ ತಾನಿ ವಾಸಾಂಸಿ ತನೂನಿ ಚ ಮೃದೂನಿ ಚ ।
ಸಮುತ್ಸಜತ್ಸ ರಂಭೋರೂಃ ದಿವ್ಯಾನ್ಯಾಭರಣಾನಿ ಚ ॥೯॥

ಆಗ ಆ ರಂಭೋರುವಾದ ಲೋಪಾಮುದ್ರೆಯು ಸೂಕ್ಷ್ಮವೂ ಮತ್ತು ಮೃದುವೂ ಆದ ವಸ್ತ್ರವನ್ನೂ ಮತ್ತು ದಿವ್ಯವಾದ ಆಭರಣಗಳನ್ನೂ ತೆಗೆದಿಟ್ಟಳು.

ತತಶ್ಚೀರಾಣಿ ಜಗ್ರಾಹ ವಲ್ಕಲಾನ್ಯಜಿನಾನಿ ಚ ।
ಸಮಾನವ್ರತಚರ್ಯಾ ಚ ಬಭೂವಾಯತಲೋಚನಾ ॥೧೦॥

ಅನಂತರ ಚೀರಗಳನ್ನು ಮತ್ತು ನಾರುಮಡಿಗಳನ್ನು ಮತ್ತು ಕೃಷ್ಣಾಜಿನವನ್ನು ಧರಿಸಿ ವಿಶಾಲನೇತ್ರೆಯಾದ ಅವಳು ಪತಿಗೆ ಸಮಾನವಾದ ವ್ರತಚರ್ಯೆಯಲ್ಲಿ ತೊಡಗಿದಳು.

ಗಂಗಾದ್ವಾರಮುಪಾಗಮ್ಯ ಭಗವಾನ್ ಋಷಿಸತ್ತಮಃ ।
ಉಗ್ರಮಾತಿಷ್ಠತ ತಪಃ ಸಹ ಪತ್ನ್ಯಾನುಕೂಲಯಾ ॥೧೧॥

ಪೂಜ್ಯರಾದ ಆ ಋಷಿಶ್ರೇಷ್ಠರು ಹರಿದ್ವಾರಕ್ಕೆ ಬಂದು ಅನುಕೂಲಳಾದ ತಮ್ಮ ಪತ್ನಿಯ ಜೊತೆಯಲ್ಲಿ ಉಗ್ರವಾದ ತಪಸ್ಸನ್ನು ಆಚರಿಸಿದರು.

ಸಾ ಪ್ರೀತ್ಯಾ ಬಹುಮಾನಾಚ್ಚ ಪತಿಂ ಪರ್ಯಚರತ್ ತದಾ ।
ಅಗಸ್ತ್ಯಶ್ಚ ಪರಾಂ ಪ್ರೀತಿಂ ಭಾರ್ಯಾಯಾಮಕರೋತ್ ಪ್ರಭುಃ ॥೧೨॥

ಲೋಪಾಮುದ್ರೆಯು ಆಗ ಪತಿಯ ಮೇಲಿನ ಪ್ರೀತಿಯಿಂದಲೂ ಮತ್ತು ಬಹುಮಾನದಿಂದಲೂ ಅವರ ಸೇವೆಯನ್ನು ಮಾಡಿದಳು. ಸಮರ್ಥರಾದ ಅಗಸ್ತ್ಯರು ತಮ್ಮ ಪತ್ನಿಯಲ್ಲಿ ಬಹಳವಾದ ಪ್ರೀತಿಯನ್ನು ಹೊಂದಿದರು.

ತತೋ ಬಹುತಿಥೇ ಕಾಲೇ ಲೋಪಾಮುದ್ರಾಂ ವಿಶಾಂಪತೇ ।
ತಪಸಾ ದ್ಯೋತಿತಾಂ ಸ್ನಾತಾಂ ದದರ್ಶ ಭಗವಾನ್ ಋಷಿಃ ॥೧೩॥

ಎಲೈ ರಾಜನೇ, ಅನಂತರ ಬಹುಕಾಲವು ಕಳೆದಮೇಲೆ ಪೂಜ್ಯರಾದ ಅಗಸ್ತ್ಯ ಋಷಿಗಳು ತಪಸ್ಸಿನಿಂದ ಬೆಳಗುತ್ತಿದ್ದ ಸ್ನಾನಮಾಡಿ ಶುದ್ಧಳಾಗಿದ್ದ ಲೋಪಾಮುದ್ರೆಯನ್ನು ನೋಡಿದರು.

ಸ ತಸ್ಯಾಃ ಪರಿಚಾರೇಣ ಶೀಲೇನ ಚ ದಮೇನ ಚ ।
ಶ್ರಿಯಾ ರೂಪೇಣ ಚ ಪ್ರೀತೋ ಮೈಥುನಾಯಾಜುಹಾವ
ತಾಮ್॥೧೪॥

ಅವರು ಅವಳ ಪರಿಚಾರದಿಂದಲೂ, ಶೀಲದಿಂದಲೂ, ಇಂದ್ರಿಯನಿಗ್ರಹದಿಂದಲೂ, ಕಾಂತಿಯಿಂದಲೂ, ಸೌಂದರ್ಯದಿಂದಲೂ ಸಂತುಷ್ಟರಾಗಿ ಅವಳನ್ನು ಮೈಥುನಕ್ಕಾಗಿ ಕರೆದರು.

ತತಃ ಸಾ ಪ್ರಾಂಜಲಿರ್ಭೂತ್ವಾ ಲಜ್ಜಮಾನೇವ ಭಾಮಿನೀ ।
ತದಾ ಸಪ್ರಣಯಂ ವಾಕ್ಯಂ ಭಗವಂತಮಥಾಬ್ರವೀತ್ ॥೧೫॥

ಆಗ ಭಾಮಿನಿಯಾದ ಆ ಲೋಪಾಮುದ್ರೆಯು ಕೈಗಳನ್ನು ಮುಗಿದು ನಾಚಿಕೊಳ್ಳುತ್ತಾ ಪ್ರೀತಿಯಿಂದ ಪೂಜ್ಯರಾದ ಅಗಸ್ತ್ಯರನ್ನು ಕುರಿತು ಹೀಗೆ ಮಾತನಾಡಿದಳು.

ಅಸಂಶಯಂ ಪ್ರಜಾಹೇತೋರ್ಭಾರ್ಯಾಂ ಪತಿರವಿಂದತ ।
ಯಾ ತು ತ್ವಯಿ ಮಮ ಪ್ರೀತಿಃ ತಾಮೃಷೇ ಕರ್ತುಮರ್ಹಸಿ ॥೧೬॥

ಯಥಾ ಪಿತುರ್ಗೃಹೇ ವಿಪ್ರ ಪ್ರಾಸಾದೇ ಶಯನಂ ಮಮ ।
ತಥಾವಿಧೇ ತ್ವಂ ಶಯನೇ ಮಾಮುಪೈತುಮಿಹಾರ್ಹಸಿ ॥೧೭॥

ಇಚ್ಛಾಮಿ ತ್ವಾಂ ಸ್ರಗ್ವಿಣಂ ಚ ಭೂಷಣೈಶ್ಚ ವಿಭೂಷಿತಮ್ ।
ಉಪಸರ್ತುಂ ಯಥಾಕಾಮಂ ದಿವ್ಯಾಭರಣಭೂಷಿತಾ ॥೧೮॥

ಎಲೈ ಋಷಿಶ್ರೇಷ್ಠರೇ, ಖಂಡಿತವಾಗಿ ಮಕ್ಕಳನ್ನು ಪಡೆಯುವುದಕ್ಕಾಗಿ ಪತಿಯು ಪತ್ನಿಯನ್ನು ಸಂಪಾದಿಸುತ್ತಾನೆ. ನಿಮ್ಮಲ್ಲಿ ನನಗೆ ಎಂತಹ ಪ್ರೀತಿ ಇದೆಯೋ ಅದಕ್ಕೆ ಅನುಗುಣವಾಗಿ ನೀವು ನಡೆದುಕೊಳ್ಳಬೇಕು. ನಾನು ನನ್ನ ತಂದೆಯ ಮನೆಯಲ್ಲಿ ಹೇಗೆ ಉಪ್ಪರಿಗೆಯಲ್ಲಿ ಮಲಗುತ್ತಿದ್ದೆನೋ ಅಂತಹ ಶಯನದಲ್ಲಿ ನೀವು ನನ್ನ ಬಳಿಗೆ ಬರಬೇಕು.

ನೀವು ಭೂಷಣಗಳಿಂದಲೂ, ಮಾಲೆಗಳಿಂದಲೂ ಅಲಂಕೃತರಾಗಿರುವಾಗ ನಾನೂ ನನ್ನ ಮನಸ್ಸಿಗೆ ಒಪ್ಪುವ ದಿವ್ಯಾಭರಣಗಳಿಂದ ಭೂಷಿತಳಾಗಿ ನಿಮ್ಮ ಬಳಿಗೆ ಬರಬೇಕೆಂದು ಬಯಸುತ್ತೇನೆ ಎಂದು ಹೇಳಿದಳು.

ಅಗಸ್ತ್ಯಃ

ನ ವೈ ಧನಾನಿ ವಿದ್ಮಂತೇ ಲೋಪಾಮುದ್ರೇ ತಥಾ ಮಮ ।
ಯಥಾವಿಧಾನಿ ಕಲ್ಯಾಣಿ ಪಿತುಸ್ತವ ಸುಮಧ್ಯಮೇ ॥೧೯॥

ಅಗಸ್ತ್ಯರು– ಎಲೌ ಲೋಪಮುದ್ರೆಯೇ, ಎಲೌ ಸುಂದರಿಯೇ, ಕಲ್ಯಾಣಿಯೇ, ನಿನ್ನ ತಂದೆಯ ಬಳಿ ಇದ್ದಂತಹ ಧನಸಂಪತ್ತು ನನ್ನ ಬಳಿಯಲ್ಲಿಲ್ಲ.

ಲೋಪಾಮುದ್ರಾ

ಈಶೋಽಸಿ ತಪಸಾ ಸರ್ವಂ ಸಮಾಹರ್ತುಂ ಮಮೇಪ್ಸಿತಮ್ ।
ಕ್ಷಣೇನ ಜೀವಲೋಕೇ ಯದ್ ವಸು ಕಿಂಚನ ವಿದ್ಯತೇ ॥೨೦॥

ಲೋಪಾಮುದ್ರೆ– ನೀವು ನಿಮ್ಮ ತಪಸ್ಸಿನಿಂದ ನನಗೆ ಇಷ್ಟವಾದ ಜೀವಲೋಕದಲ್ಲಿರುವ ಯಾವ ಸಂಪತ್ತನ್ನಾದರೂ ಒಂದುಕ್ಷಣದಲ್ಲಿ ತಂದುಕೊಡಲು ಸಮರ್ಥರಾಗಿದ್ದೀರಿ.

ಅಗಸ್ತ್ಯಃ

ಏವಮೇತದ್ಯಥಾऽऽತ್ಥ ತ್ವಂ ತಪೋವ್ಯಯಕರಂ ತು ಮೇ ।
ಯಥಾ ತು ಮೇ ನ ಪ್ರಣಶ್ಯೇತ್ ತಪಸ್ತದುಪಧಾರಯ ॥೨೧॥

ಅಗಸ್ತ್ಯರು– ನೀನು ಹೇಳಿದುದು ಸರಿ. ಆದರೆ ಅದರಿಂದ ನನ್ನ ತಪಸ್ಸು ನಾಶವಾಗುತ್ತದೆ. ಹೇಗೆ ಮಾಡಿದರೆ ನನ್ನ ತಪಸ್ಸು ನಾಶ ಹೊಂದುವುದಿಲ್ಲವೋ ಅಂತಹ ಉಪಾಯವನ್ನು ಚಿಂತಿಸು.

ಲೋಪಾಮುದ್ರಾ

ಅಲ್ಪಾವಶಿಷ್ಟಃ ಕಾಲೋऽಯಮ್ ಋತೌ ಮಮ ತಪೋಧನ ।
ನ ಚಾನ್ಯಥಾऽಹಮಿಚ್ಛೇಯಂ ತ್ವಾಮುಪೈತುಂ ಕಥಂಚನ ॥೨೨॥

ನ ಚಾಪಿ ಧರ್ಮಮಿಚ್ಛಾಮಿ ವಿಲೋಪ್ತುಂ ತೇ ತಪೋಧನ ।
ವಿವಂ ತು ಮೇ ಯಥಾಕಾಮಂ ಸಂಪಾದಯಿತುಮರ್ಹಸಿ ॥೨೩॥

ಲೋಪಾಮುದ್ರೆ– ಎಲೈ ತಪೋಧನರೇ, ನನ್ನ ಋತುಕಾಲದಲ್ಲಿ ಅಲ್ಪಸಮಯವು ಮಾತ್ರ ಉಳಿದಿದೆ. ನಾನು ಬೇರೆ ರೀತಿಯಲ್ಲಿಯೂ ನಿಮ್ಮ ಬಳಿಗೆ ಬರಲು ಇಷ್ಟಪಡುವುದಿಲ್ಲ. ಎಲೈ ತಪೋಧನರೇ, ನಿಮ್ಮ ಧರ್ಮವನ್ನು ನಾಶಮಾಡಲು ನಾನು ಬಯಸುವುದಿಲ್ಲ. ಆದರೆ ನಾನು ಬಯಸಿದ ಈ ವಿಷಯವನ್ನು ಮಾತ್ರ ನೀವು ಸಂಪಾದಿಸಿಕೊಡಬೇಕು.

ಅಗಸ್ತ್ಯಃ

ಯದ್ಯೇಷ ಕಾಮಃ ಸುಭಗೇ ತವ ಬುದ್ಧ್ಯಾ ವಿನಿಶ್ಚಿತಃ ।
ಹಂತ ಗಚ್ಛಾಮ್ಯಹಂ ಭದ್ರೇ ಚರ ಧರ್ಮಮಿಹ ಸ್ಥಿತಾ ॥೨೪॥

ಅಗಸ್ತ್ಯರು– ಎಲೌ ಸುಂದರಿಯೇ, ಮಂಗಳಸ್ವರೂಪಳೇ, ನೀನು ಬುದ್ಧಿಯಿಂದ ವಿಚಾರಮಾಡಿ ಇದೇ ಆಸೆಯನ್ನು ಹೊಂದಿರುವವಳಾದರೆ ನಾನು ಸಂಪಾದಿಸಿಕೊಂಡು ಬರಲು ಹೋಗುತ್ತೇನೆ. ನೀನು ಇಲ್ಲಿಯೇ ಇದ್ದು ಧರ್ಮವನ್ನು ಆಚರಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿನವತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಚತ್ವಾರಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ಮೂರನೆಯ ಅಧ್ಯಾಯ

ಧನವನ್ನು ಯಾಚಿಸಲು ಶ್ರುತರ್ವಾದಿರಾಜರ ಬಳಿಗೆ ಅಗಸ್ತ್ಯರ ಗಮನ.

ಲೋಮಶಃ

ತತೋ ಜಗಾಮ ಕೌರವ್ಯ ಸೋಽಗಸ್ತ್ಯೋ ಭಿಕ್ಷಿತುಂ ವಸು ।
ಶ್ರುತರ್ವಾಣಂ ಮಹೀಪಾಲಂ ಯಂ ವೇದಾಭ್ಯಧಿಕಂ ನೃಪೈಃ ॥೧॥

ಲೋಮಶ– ಎಲೈ ಕೌರವ್ಯನೇ, ಆನಂತರ ಅಗಸ್ತ್ಯರು ತಾವು ಉಳಿದ ಎಲ್ಲ ರಾಜರುಗಳಿಗಿಂತಲೂ ಶ್ರೇಷ್ಠನೆಂದು ತಿಳಿದಿದ್ದ ಶ್ರುತರ್ವರಾಜನಲ್ಲಿಗೆ ಧನವನ್ನು ಯಾಚಿಸಲು ಹೋದರು.

ಸ ವಿದಿತ್ವಾ ತು ನೃಪತಿಃ ಕುಂಭಯೋನಿಮುಪಾಗತಮ್ ।
ವಿಷಯಾಂತೇ ಸಹಾಮಾತ್ಯಃ ಪ್ರತ್ಯಗೃಹ್ಣಾತ್ ಸುಸತ್ಕೃತಮ್ ॥೨॥

ಆ ರಾಜನಾದರೂ ಕುಂಭಸಂಭವರಾದ ಅಗಸ್ತ್ಯರು ಬರುತ್ತಿರುವುದನ್ನು ತಿಳಿದು ತನ್ನ ಮಂತ್ರಿಗಳ ಜೊತೆಯಲ್ಲಿ ತನ್ನ ರಾಜ್ಯದ ಕೊನೆಯ ಭಾಗಕ್ಕೆ ಬಂದು ಸತ್ಕಾರದಿಂದ ಅವರನ್ನು ಸ್ವೀಕರಿಸಿದನು.

ತಸ್ಮೈ ಚಾರ್ಘ್ಯಂ ಯಥಾನ್ಯಾಯಮಾನೀಯ ಪೃಥಿವೀಪತಿಃ ।
ಪ್ರಾಂಜಲಿಃ ಪ್ರಣತೋ ಭೂತ್ವಾ ಪಪ್ರಚ್ಛಾಗಮನಂ ಪ್ರತಿ ॥೩॥

ಆ ರಾಜನು ಅವರಿಗೆ ಶಾಸ್ತ್ರೋಕ್ತರೀತಿಯಿಂದ ಅರ್ಘ್ಯವನ್ನು ಸಮರ್ಪಿಸಿ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿ ಆಗಮನವನ್ನು ಕುರಿತು ಕಾರಣವನ್ನು ಕೇಳಿದನು.

ಅಗಸ್ತ್ಯಃ

ವಿತ್ತಾರ್ಥಿನಮನುಪ್ರಾಪ್ತಂ ವಿದ್ಧಿ ಮಾಂ ಪೃಥಿವೀಪತೇ ।
ಯಥಾಶಕ್ಯವಿಹಿಂಸ್ಯಾನ್ಯಾನ್ ಸಂವಿಭಾಗಂ ಪ್ರಯಚ್ಛ ಮೇ ॥೪॥

ಅಗಸ್ತ್ಯರು– ಎಲೈ ಪೃಥಿವೀಪತಿಯೇ, ನಾನು ವಿತ್ತಾರ್ಥಿಯಾಗಿ ಬಂದಿದ್ದೇನೆಂದು ತಿಳಿ. ಬೇರೆ ಪ್ರಜೆಗಳಿಗೆ ಹಿಂಸೆಯಾಗದಂತೆ ನನಗೆ ನಿನ್ನ ಧನದ ಒಂದು ಭಾಗವನ್ನು ಕೊಡು.

ಲೋಮಶಃ

ತತ ಆಯವ್ಯಯೌ ಪೂರ್ಣೌ ತಸ್ಯೈ ರಾಜಾ ನ್ಯವೇದಯತ್ ।
ಅತೋ ವಿದ್ವನ್ನುಪಾದತ್ತ್ವ ಯದತ್ರಾಭ್ಯಧಿಕಂ ವಸು ॥೫॥

ಲೋಮಶ– ಆಗ ರಾಜನು ಅಗಸ್ತ್ಯರಿಗೆ ತನ್ನ ಆಯ-ವ್ಯಯಗಳು ಸಮವಾಗಿದೆ ಎಂದು ತಿಳಿಸಿ, ವಿದ್ವಾಂಸರೇ ಇಲ್ಲಿ ಯಾವುದು ಅಧಿಕವಾಗಿದೆಯೋ ಆ ಧನವನ್ನು ಸ್ವೀಕರಿಸಿ ಎಂದು ಹೇಳಿದನು.

ತತ ಆಯವ್ಯಯೌ ದೃಷ್ಟ್ವಾ ಸಮೌ ಸಮಮತಿರ್ದ್ವಿಜಃ ।
ಸರ್ವಥಾ ಪ್ರಾಣಿನಾಂ ಪೀಡಾಮುಪಾದಾನಾದಮನ್ಯತ ॥೬॥

ಸಮಾಧಾನಚಿತ್ತರಾದ ಅಗಸ್ತ್ಯರು ರಾಜನ ಆಯ-ವ್ಯಯಗಳು ಸಮಾನವಾಗಿರುವುದನ್ನು ನೋಡಿ ತಾವು ಧನವನ್ನು ಸ್ವೀಕರಿಸಿದರೆ ಪ್ರಜೆಗಳಿಗೆ ಪೀಡೆಯಾಗುವುದೆಂದು ಭಾವಿಸಿದರು.

ಸ ಶ್ರುತವರ್ವಾಣಮಾದಾಯ ವಾರ್ಧ್ಯಶ್ವಮಗಮತ್ ತತಃ ।
ಸ ಚ ತೌ ವಿಷಯಸ್ಯಾಂತೇ ಪ್ರತ್ಯಗೃಹ್ಣಾದ್ಯಥಾವಿಧಿ ॥೭॥

ಅವರು ಶ್ರುತವರ್ವಾಣನನ್ನು ಕರೆದುಕೊಂಡು ವಾರ್ಧ್ಯಶ್ವರಾಜನ ಬಳಿಗೆ ಬಂದರು. ವಾರ್ಧ್ಯಶ್ವನಾದರೂ ತನ್ನ ರಾಜ್ಯದ ಕೊನೆಯ ಭಾಗದಲ್ಲಿ ಅವರನ್ನು ವಿಧಿಪೂರ್ವಕವಾಗಿ ಸ್ವೀಕರಿಸಿದನು.

ತಯೋರರ್ಘ್ಯಂ ಚ ಪಾದ್ಯಂ ಚ ವಾರ್ಧ್ಯಶ್ವಃ ಪ್ರತ್ಯವೇದಯತ್ ।
ಅನುಜ್ಞಾಪ್ಯ ಚ ಪಪ್ರಚ್ಛ ಪ್ರಯೋಜನಮುಪಕ್ರಮೇ ॥೮॥

ವಾರ್ಧ್ಯಶ್ವನು ಅವರಿಗೆ ಅರ್ಘ್ಯಪಾದ್ಯಗಳನ್ನು ಕೊಟ್ಟು ಅವರ ಅನುಮತಿಯನ್ನು ಪಡೆದು ಆಗಮನದ ಉದ್ದೇಶವನ್ನು ಕೇಳಿದನು.

ಅಗಸ್ತ್ಯಃ

ವಿತ್ತಕಾಮಾವಿಹ ಪ್ರಾಪ್ತೌ ವಾರ್ಧ್ಯಶ್ವ ಪೃಥಿವೀಪತೇ ।
ಯಥಾಶಕ್ಯ ವಿಹಿಂಸ್ಯಾನ್ನಾನ್ ಸಂವಿಭಾಗಂ ಪ್ರಯಚ್ಛ ನೌ ॥೯॥

ಅಗಸ್ತ್ಯರು– ಎಲೈ ವಾರ್ಧ್ಯಶ್ವರಾಜನೇ ನಾವಿಬ್ಬರೂ ಧನಕಾಮರಾಗಿ ಬಂದಿದ್ದೇವೆ. ಬೇರೆ ಪ್ರಜೆಗಳಿಗೆ ಪೀಡೆಯಾಗದಂತೆ ನಮಗೆ ಯಥಾಶಕ್ತಿಯಾಗಿ ಧನವನ್ನು ಕೊಡು.

ಲೋಮಶಃ

ತತ ಆಯವ್ಯಯೌ ಪೂರ್ಣೌ ಜಾಮಾತಾऽಸ್ಯ ನ್ಯವೇದಯತ್ ।
ತತೋ ಜ್ಞಾತ್ವಾ ಸಮಾದತ್ತಾಂ ಯದತ್ರಾಪ್ಯತಿರಿಚ್ಯತೇ ॥೧೦॥

ಲೋಮಶ– ಆಗ ವಾರ್ಧ್ಯಶ್ವನ ಅಳಿಯನು ಆಯ-ವ್ಯಯಗಳು ಸಮಾನವಾಗಿವೆ ಎಂದು ತಿಳಿಸಿದನು. ವಾರ್ಧ್ಯಶ್ವನು ಅವರಿಬ್ಬರನ್ನು ಕುರಿತು ಆಯ-ವ್ಯಯಗಳನ್ನು ನೋಡಿ ಇಲ್ಲಿ ಅಧಿಕವಾಗಿರುವ ಭಾಗವನ್ನು ಸ್ವೀಕರಿಸಿ ಎಂದು ಹೇಳಿದನು.

ತತ ಆಯವ್ಯಯೌ ದೃಷ್ಟ್ವಾ ಸಮೌ ಸಮಮಿತಿರ್ದ್ವಿಜಃ ।
ಸರ್ವಥಾ ಪ್ರಾಣಿನಾಂ ಪೀಡಾಮುಪಾದಾನಾದಮನ್ಯತ ॥೧೧॥

ಅನಂತರ ಸಮಮತಿಗಳಾದ ಅಗಸ್ತ್ಯರು ಆಯ-ವ್ಯಯಗಳು ಸಮಾನವಾಗಿರುವುದನ್ನು ನೋಡಿ ಧನವನ್ನು ತೆಗೆದುಕೊಂಡರೆ ಪ್ರಜೆಗಳಿಗೆ ಸರ್ವಥಾ ಪೀಡೆಯುಂಟಾಗುವುದೆಂದು ಭಾವಿಸಿದರು.

ಪೌರುಕುತ್ಸಂ ತತೋ ಜಗ್ಮುಃ ತ್ರಸದಸ್ಯುಂ ಮಹಾಧನಮ್ ।
ಅಗಸ್ತ್ಯಶ್ಚ ಶ್ರುತರ್ವಾ ಚ ವಾರ್ಧ್ಯಶ್ವಶ್ಚ ಮಹೀಪತಿಃ ॥೧೨॥

ಅನಂತರ ಅಗಸ್ತ್ಯರು, ಶ್ರುತರ್ವ ಮತ್ತು ವಾರ್ಧ್ಯಶ್ವರಾಜರು ಪುರುಕುತ್ಸನ ಮಗನಾದ ಮಹಾಧನವಂತನಾದ ತ್ರಸದಸ್ಯುರಾಜನ ಬಳಿಗೆ ಹೋದರು.

ತ್ರಸದಸ್ಯುಸ್ತು ತಾನ್ ಸರ್ವಾನ್ ಪ್ರತ್ಯಗೃಹ್ಣಾದ್ಯಥಾವಿಧಿ ।
ಅಭಿಗಮ್ಯ ಮಹಾರಾಜ ವಿಷಯಾಂತೇ ಸ ಚಾದೃತಃ ॥೧೩॥

ಆರ್ಚಯಿತ್ವಾ ಯಥಾನ್ಯಾಯಮೈಕ್ಷ್ವಾಕೋ ರಾಜಸತ್ತಮಃ ।
ಸಮಾಶ್ವಸ್ತಾಂಸ್ತತೋऽಪೃಚ್ಛತ್ ಪ್ರಯೋಜನಮುಪಕ್ರಮೇ ॥೧೪॥

ಎಲೈ ಮಹಾರಾಜನೇ, ತ್ರಸದಸ್ಯುವಾದರೂ ತನ್ನ ರಾಜ್ಯದ ಕೊನೆಯ ಭಾಗಕ್ಕೆ ಬಂದು ಆ ಎಲ್ಲರನ್ನೂ ವಿಧಿಪೂರ್ವಕವಾಗಿ ಸ್ವೀಕರಿಸಿ ಆದರದಿಂದ ಶಾಸ್ತ್ರೋಕ್ತ

ರೀತಿಯಲ್ಲಿ ಪೂಜಿಸಿದನು. ಇಕ್ಷ್ವಾಕುವಂಶದಲ್ಲಿ ಬಂದ ಆ ರಾಜಶ್ರೇಷ್ಠನು ಅವರು ವಿಶ್ರಮಿಸಿಕೊಂಡ ಮೇಲೆ ಆಗಮನದ ಉದ್ದೇಶವನ್ನು ಕುರಿತು ಕೇಳಿದನು.

ಅಗಸ್ತ್ಯಃ

ವಿತ್ತಕಾಮಾನಿಹ ಪ್ರಾಪ್ತಾನ್ ವಿದ್ಧಿ ನಃ ಪೃಥಿವೀಪತೇ ।
ಯಥಾಶಕ್ತ್ಯವಿಹಿಂಸ್ಯಾನ್ನಾನ್ ಸಂವಿಭಾಗಂ ಪ್ರಯಚ್ಛ ನಃ ॥೧೫॥

ಅಗಸ್ತ್ಯ– ಎಲೈ ರಾಜನೇ, ನಾವೆಲ್ಲರೂ ಧನಕಾಮರಾಗಿ ಬಂದಿದ್ದೇವೆಂದು ತಿಳಿ. ಬೇರೆ ಪ್ರಜೆಗಳಿಗೆ ಹಿಂಸೆಯಾಗದಂತೆ ಯಥಾಶಕ್ತಿ ಧನವನ್ನು ದಾನಮಾಡು.

ಲೋಮಶಃ

ತತ ಆಯವ್ಯಯೌ ದೃಷ್ಟ್ವಾ ತೇಷಾಂ ರಾಜಾ ನ್ಯವೇದಯತ್ ।
ತತೋ ಜ್ಞಾತ್ವಾ ಸಮಾದದ್ಧ್ಂ ಯದತ್ರ ವ್ಯತಿರಿಚ್ಯತೇ ॥೧೬॥

ಲೋಮಶ– ಅನಂತರ ತನ್ನ ಆಯ-ವ್ಯಯಗಳನ್ನು ನೋಡಿ ರಾಜರನ್ನು, ಅವರನ್ನು ಕುರಿತು ನನ್ನ ಆಯ-ವ್ಯಯಗಳನ್ನು ತಿಳಿದು ಇದರಲ್ಲಿ ಅಧಿಕವಾದ ಭಾಗವನ್ನು ಸ್ವೀಕರಿಸಿ ಎಂದು ಹೇಳಿದನು.

ತತ ಆಯವ್ಯಯೌ ದೃಷ್ಟ್ವಾ ತಸ್ಯಾಪಿ ಸ ಮುನಿಸ್ತದಾ ।
ಸರ್ವಥಾ ಪ್ರಾಣಿನಾಂ ಪೀಡಾಮುಪಾದಾನಾದಮನ್ಯತ ॥೧೭॥

ಆಗ ಅಗಸ್ತ್ಯಋಷಿಗಳು ಅವನ ಆಯ-ವ್ಯಯಗಳೂ ಸಮಾನವಾಗಿರುವುದನ್ನು ನೋಡಿ ಧನಸ್ವೀಕಾರದಿಂದ ಪ್ರಜೆಗಳಿಗೆ ಸರ್ವಥಾ ಪೀಡೆಯುಂಟಾಗುವುದೆಂದು ಭಾವಿಸಿದರು.

ತತಃ ಸರ್ವೇ ಸಮೇತ್ಯಾಥ ತೇ ನೃಪಾಸ್ತಂ ಮಹಾಮುನಿಮ್ ।
ಇದಮೂಚುರ್ಮಹಾರಾಜ ಸಮವೇಕ್ಷ್ಯ ಪರಸ್ಪರಮ್ ॥೧೮॥

ಎಲೈ ಮಹಾರಾಜನೇ, ಅನಂತರ ಆ ಮೂರು ರಾಜರೂ ಒಟ್ಟುಸೇರಿ ಪರಸ್ಪರವಾಗಿ ನೋಡುತ್ತಾ ಶ್ರೇಷ್ಠ ಋಷಿಗಳಾದ ಅಗಸ್ತ್ಯರನ್ನು ಕುರಿತು ಹೀಗೆ ಹೇಳಿದರು.

ರಾಜಾನಃ

ಅಯಂ ವೈ ದಾನವೋ ಬ್ರಹ್ಮನ್ ವಸುಮಾನಿಲ್ವಲೋ ಭುವಿ ।
ತಮಭಿಕ್ರಮ್ಯ ಸರ್ವೇऽದ್ಯ ವಯಂ ಯಾಚಾಮಹೇ ವಸು ॥೧೯॥

ರಾಜರು– ಎಲೈ ಬ್ರಾಹ್ಮಣರೇ, ಈ ದಾನವನಾದ ಇಲ್ವಲನು ಭೂಮಿಯಲ್ಲಿ ಎಲ್ಲರಿಗಿಂತ ಧನವಂತನಾಗಿದ್ದಾನೆ. ಅವನ ಬಳಿಗೆ ನಾವೆಲ್ಲರೂ ಹೋಗಿ ಧನವನ್ನು ಯಾಚಿಸೋಣ.

ಲೋಮಶಃ

ತೇಷಾಂ ತದಾಸೀದುಚಿತಮಿಲ್ವಲಸ್ಯಾರ್ಥಭಿಕ್ಷಣಮ್ ।
ತತಸ್ತೇ ಸಹಿತಾ ರಾಜನ್ನಿಲ್ವಲಂ ಸಮುಪಾದ್ರವನ್ ॥೨೦॥

ಲೋಮಶ– ಅವರೆಲ್ಲರೂ ಇಲ್ವಲನ ಬಳಿಗೆ ಹೋಗಿ ಧನವನ್ನು ಯಾಚಿಸುವುದು ಯೋಗ್ಯವೆಂದು ಭಾವಿಸಿದರು. ಅನಂತರ ಎಲ್ಲರೂ ಜೊತೆಯಲ್ಲಿ ಇಲ್ವಲರಾಜನ ಬಳಿಗೆ ಶೀಘ್ರವಾಗಿ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿನವತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಅಗಸ್ಯರಿಂದ ವಾತಾಪಿಯ ವಿನಾಶ.

ಲೋಮಶಃ

ಇಲ್ವಲಸ್ತಾನ್ ವಿದಿತ್ವಾ ತು ಮಹರ್ಷಿಸಹಿತಾನ್ ನೃಪಾನ್ ।
ಉಪಸ್ಥಿತಾನ್ ಸಹಾಮಾತ್ಯೋ ವಿಷಯಾಂತೇ ಹ್ಯಪೂಜಯತ್ ॥೧॥

ಲೋಮಶ– ಇಲ್ವಲನು ಅಗಸ್ಯಮಹರ್ಷಿಗಳ ಜೊತೆಯಲ್ಲಿ ಆ ರಾಜರು ಬರುತ್ತಿದ್ದಾರೆಂದು ತಿಳಿದು ತನ್ನ ರಾಜಧಾನಿಯ ಹೊರಗೆ ಬಂದು ಅವರನ್ನು ಪೂಜಿಸಿದನು.

ತೇಷಾಂ ತತೋಽಸುರಶ್ರೇಷ್ಠಃ ತ್ವಾತಿಥ್ಯಮಕರೋತ್ ತದಾ ।
ಸುಸಂಸ್ಕೃತೇನ ಕೌರವ್ಯ ಭ್ರಾತ್ರಾ ವಾತಾಪಿನಾ ನೃಪ ॥೨॥

ಎಲೈ ರಾಜನೇ, ಅನಂತರ ಅಸುರಶ್ರೇಷ್ಠನಾದ ಅವನು ತನ್ನ ತಮ್ಮನಾದ ವಾತಾಪಿಯ ಸುಸಂಸ್ಕೃತವಾದ ಮಾಂಸದಿಂದ ಅವರಿಗೆ ಆತಿಥ್ಯವನ್ನು ಮಾಡಿದನು.

ತತೋ ರಾಜರ್ಷಯಃ ಸರ್ವೇ ವಿಷಣ್ಣಾ ಗತಚೇತಸಃ ।
ವಾತಾಪಿಂ ಸಂಸ್ಕೃತಂ ದೃಷ್ಟ್ವಾ ಮೇಷಭೂತಂ ಮಹಾಸುರಮ್ ॥೩॥

ಮೇಷನಾಗಿದ್ದ ವಾತಾಪಿಮಹಾಸುರನನ್ನು ಬೇಯಿಸುವುದನ್ನು ನೋಡಿದ ಆ ರಾಜರೆಲ್ಲರೂ ವಿಷಾದದಿಂದ ವಿಚೇತನರಾದರು.

ಅಥಾಬ್ರವೀಚ್ಚಿದಗಸ್ತ್ಯಸ್ತಾನ್ ರಾಜರ್ಷೀನ್ ಋಷಿಸತ್ತಮಃ ।
ವಿಷಾದೋ ವೋ ನ ಕರ್ತವ್ಯೋ ಹ್ಯಹಂ ಭೋಕ್ಷ್ಯೇ ಮಹಾಸುರಮ್ ॥

ಆಗ ಋಷಿಶ್ರೇಷ್ಠರಾದ ಅಗಸ್ತ್ಯರು ಆ ರಾಜರ್ಷಿಗಳನ್ನು ಕುರಿತು ನೀವು ಚಿಂತಿಸಬೇಡಿ. ಆ ಮಹಾಸುರನನ್ನು ನಾನು ಭುಂಜಿಸುತ್ತೇನೆ ಎಂದು ಹೇಳಿದರು.

ಲೋಮಶಃ

ಧುರ್ಯಾಸನಮಥಾಕ್ರಮ್ಯ ನಿಷಸಾದ ಮಹಾಮುನಿಃ ।
ತಂ ಪರ್ಯವೇಷದ್ ದೈತ್ಯೇಂದ್ರ ಇಲ್ವಲಃ ಪ್ರಹಸನ್ನಿವ ॥೫॥

ಲೋಮಶ– ಆ ಮಹಾಮುನಿಗಳು ಆಗ್ರಾಸನವನ್ನು ಏರಿ ಕುಳಿತರು. ದೈತ್ಯೇಂದ್ರನಾದ ಇಲ್ವಲನು ನಗುತ್ತಲೇ ಅವರಿಗೆ ಭೋಜನವನ್ನು ಬಡಿಸಿದನು.

ಅಗಸ್ತ್ಯ ಏವ ಕೃತ್ಸ್ನಂ ತು ವಾತಾಪಿಂ ಬುಭುಜೇ ತತಃ ।
ಭುಕ್ತವತ್ಯಸುರೋಽಽಹ್ವಾನಮಕರೋತ್ ತಸ್ಯ ಚೇಲ್ವಲಃ ॥೬॥

ವಾತಾಪೇ ಪ್ರತಿಬುಧ್ಯಸ್ವ ದರ್ಶಯನ್ ಬಲತೇಜಸೀ ।
ತಪಸಾ ದುರ್ಜಯಂ ಯಾವದ್ ಏಷ ತ್ವಾಂ ನಾತಿವರ್ತತೇ ॥೭॥

ಅಗಸ್ತ್ಯರೊಬ್ಬರೇ ಆ ವಾತಾಪಿಯ ಎಲ್ಲ ಮಾಂಸವನ್ನೂ ಭುಂಜಿಸಿದರು. ಅವರ ಭೋಜನವಾದ ಮೇಲೆ ಅಸುರನಾದ ಇಲ್ವಲನು ವಾತಾಪಿಯೇ ಎಚ್ಚರಗೊಂಡು ನಿನ್ನ ಬಲಪರಾಕ್ರಮವನ್ನು ತೋರಿಸುತ್ತಾ ಈ ಋಷಿಯು ತಪಸ್ಸಿನಿಂದ ದುರ್ಜಯನಾದ ನಿನ್ನನ್ನು ಮೀರುವುದಕ್ಕಿಂತ ಮೊದಲೇ ಹೊರಗೆ ಬಾ ಎಂದು ಆಹ್ವಾನಮಾಡಿದನು.

ಲೋಮಶಃ

ತತಸ್ತಸ್ಯೋದರಂ ಭೇತ್ತುಂ ವಾತಾಪಿರ್ವೇಗಮಾಹರತ್ ।
ತಮಬುಧ್ಯತ ತೇಜಸ್ವೀ ಕುಂಭಯೋನಿರ್ಮಹಾತಪಾಃ ।
ಸ ವೀರ್ಯಾತ್ ತಪಸೋಗ್ರಸ್ತು ನನರ್ದ ಭಗವಾನ್ ಋಷಿಃ ॥೮॥

ಲೋಮಶ– ಆಗ ಅಗಸ್ತ್ಯರ ಉದರವನ್ನು ಭೇದಿಸಲು ವಾತಾಪಿಯು ವೇಗವನ್ನು ಹೊಂದಿದನು. ಮಹಾತಪಸ್ವಿಗಳಾದ, ಪರಾಕ್ರಮಶಾಲಿಗಳಾದ, ಕುಂಭಸಂಭವರಾದ ಅಗಸ್ತ್ಯರು ಅದನ್ನು ತಿಳಿದರು. ತಪಸ್ಸಿನಿಂದ ಉಗ್ರರಾದ ಆ ಪೂಜ್ಯರಾದ ಋಷಿಗಳು ಒಮ್ಮೆ ತಮ್ಮ ಸಾಮರ್ಥ್ಯದಿಂದ ಗರ್ಜಿಸಿದರು.

ಅಗಸ್ತ್ಯಃ

ಏಷ ಜೀರ್ಣೋಽಸಿ ವಾತಾಪೇ ಮಯಾ ಲೋಕಸ್ಯ ಶಾಂತಯೇ ॥೯॥

ಅಗಸ್ತ್ಯರು– ವಾತಾಪಿಯೇ ಲೋಕದ ಶಾಂತಿಗೋಸ್ಕರ ನಾನು ನಿನ್ನನ್ನು ಜೀರ್ಣಿಸಿಕೊಂಡಿದ್ದೇನೆ.

ಲೋಮಶಃ

ಇತ್ಯುಕ್ತ್ವಾ ಸ್ವಕರಾಗ್ರೇಣ ಉದರಂ ಸಮತಾಡಯತ್ ।
ತ್ರಿರೇವಂ ಪ್ರತಿಸಂರಬ್ಧಸ್ತೇಜಸಾ ಪ್ರಜ್ವಲನ್ನಿವ ॥೧೦॥

ಲೋಮಶರು– ಹೀಗೆ ಹೇಳಿ ಸಿಟ್ಟಿನಿಂದ ಕೂಡಿದವರಾಗಿ, ತೇಜಸ್ಸಿನಿಂದ ಉರಿಯುತ್ತಾ ತಮ್ಮ ಉದರವನ್ನು ಮೂರುಬಾರಿ ತಮ್ಮ ಕೈಯಿಂದ ಹೊಡೆದುಕೊಂಡರು.

ತತೋ ವಾಯುಃ ಪ್ರಾದುರಭೂದ್ ಅಗಸ್ತ್ಯಸ್ಯ ಮಹಾತ್ಮನಃ ।
ಇಲ್ವಲಶ್ಚ ವಿಷಣ್ಣೋಽಭೂದ್ ದೃಷ್ಟ್ವಾ ಜೀರ್ಣಂ ಮಹಾಸುರಮ್ ।
ಪ್ರಾಂಜಲಿಶ್ಚ ಸಹಾಮಾತ್ಯೋ ರಿದಂ ವಚನಮಬ್ರವೀತ್ ॥೧೧॥

ಆಗ ಮಹಾತ್ಮರಾದ ಅಗಸ್ತ್ಯರಿಗೆ ಒಂದು ತೇಗು ಬಂದಿತು. ಇಲ್ವಲನಾದರೂ ಮಹಾಸುರನಾದ ವಾತಾಪಿಯು ಜೀರ್ಣವಾದುದನ್ನು ನೋಡಿ ವಿಷಾದವನ್ನು ಹೊಂದಿದನು. ಅವನು ಅಮಾತ್ಯರ ಜೊತೆಯಲ್ಲಿ ಅಗಸ್ತ್ಯರಿಗೆ ಕೈಗಳನ್ನು ಮುಗಿದು ಈ ಮಾತನ್ನು ಆಡಿದನು.

ಕಿಮರ್ಥಮುಪಯಾತಾಃ ಸ್ಥ ಬ್ರೂತ ಕಿಂ ಕರವಾಣಿ ವಃ ।
ತಮಗಸ್ತ್ಯೋ ಹಸನ್ ವಾಕ್ಯಮಿಲ್ವಲಂ ಪ್ರತ್ಯಭಾಷತ ॥೧೨॥

ನೀವು ಯಾವ ಉದ್ದೇಶದಿಂದ ಬಂದಿದ್ದೀರೆಂದು ಹೇಳಿ; ನಾನು ನಿಮಗೆ ಏನು ಮಾಡಲಿ. ಆಗ ಅಗಸ್ತ್ಯರು ಇಲ್ವಲನನ್ನು ನೋಡಿ ನಗುತ್ತಾ ಉತ್ತರವನ್ನು ಕೊಟ್ಟರು.

ಈಶೋಽಸುರ ವಿದ್ಮಸ್ತ್ವಾಂ ವಯಂ ಸರ್ವೇ ಧನೇಶ್ವರಮ್ ॥೧೩॥

ಇಮೇ ಚ ತಾತಾಧನಿನೋ ಧನಾರ್ಥಶ್ಚ ಮಹಾನ್ ಮಮ ।
ಯಥಾಶಕ್ಯವಿಹಿಂಸ್ಯಾನ್ನಾನ್ ಸಂವಿಭಾಗಂ ಪ್ರಯಚ್ಛ ನಃ ॥೧೪॥

ಎಲೈ ಅಸುರನೇ, ನೀನು ಪ್ರಭುವಾಗಿದ್ದೀಯೆ. ನೀನು ಧನಾಧಿಪತಿಯೆಂದು ನಾವೆಲ್ಲರೂ ತಿಳಿದಿದ್ದೇವೆ. ಪ್ರೀತಿಪಾತ್ರನೇ, ಈ ಮೂರು ರಾಜರೂ ಧನವಿಲ್ಲದವರು. ನನಗೂ ಸಹ ಧನದ ದೊಡ್ಡ ಅಪೇಕ್ಷೆಯಿದೆ. ಪ್ರಜೆಗಳಿಗೆ ಪೀಡೆಯಾಗದಂತೆ ಯಥಾಶಕ್ತಿ ನಮಗೆ ಧನವನ್ನು ದಾನಮಾಡು.

ಲೋಮಶಃ

ತತೋಽವಮತ್ಯ ತಮೃಷಿಮಿಲ್ವಲೋ ವಾಕ್ಯಮಬ್ರವೀತ್ ।
ಈಪ್ಸಿತಂ ಯದಿಹ ಬ್ರೂಹಿ ತದ್ದಿ ದಾಸ್ಯಾಮಿ ವೇ ವಸು ॥೧೫॥

ಆಗ ಇಲ್ವಲನು ಆ ಋಷಿಗಳಿಗೆ ತಿರಸ್ಕಾರವನ್ನು ಮಾಡುತ್ತಾ ನಿಮಗೆ ಏನು ಬೇಕಾಗಿದೆ ಎಂದು ಹೇಳಿ. ನಾನು ನಿಮಗೆ ಆ ಧನವನ್ನು ಕೊಡುವೆನು ಎಂದು ಹೇಳಿದನು.

ಅಗಸ್ತ್ಯಃ

ಗವಾಂ ಶತಸಹಸ್ರಾಣಿ ರಾಜ್ಞಾಮೇಕೈಕಶೋಽಸುರ ।
ತಾವದೇವ ಸುವರ್ಣಸ್ಯ ದಿತ್ಸಿತಂ ತೇ ಮಹಾಸುರ ॥೧೬॥

ಮಹ್ಯಂ ತತೋ ವೈ ದ್ವಿಗುಣಂ ರಥಂ ಚೈವ ಹಿರಣ್ಮಯಮ್ ।
ಮನೋಜವೌ ವಾಜಿನೌ ದ್ವೌ ದಿತ್ಸಿತಂ ತೇ ಮಹಾಸುರ ॥೧೭॥

ಅಗಸ್ತ್ಯರು– ಎಲೈ ಅಸುರನೇ, ಒಬ್ಬೊಬ್ಬ ರಾಜನಿಗೆ ಹತ್ತುಸಹಸ್ರ ಗೋವುಗಳನ್ನೂ ಮತ್ತು ಅಷ್ಟೇ ಸುವರ್ಣವನ್ನೂ ಕೊಡಬೇಕು. ಎಲೈ ಮಹಾಸುರನೇ, ನನಗೆ ಅದರ ಎರಡರಷ್ಟು ಗೋವುಗಳನ್ನು ಸುವರ್ಣವನ್ನು, ಸುವರ್ಣಮಯವಾದ ರಥವನ್ನೂ, ಮನೋಜವನ್ನು ಹೊಂದಿದ ಎರಡು ಅಶ್ವಗಳನ್ನೂ ಕೊಡಬೇಕು.

ಲೋಮಶಃ

ಇಲ್ವಲಸ್ತು ಮುನಿಂ ಪ್ರಾಹ ಸರ್ವಮಸ್ತಿ ಯಥಾऽऽತ್ಥ ಮಾಮ್ ।
ರಥಂ ತು ಯದವೋಚೋ ಮಾಂ ನೈನಂ ವಿದ್ಮ ಹಿರಣ್ಮಯಮ್ ॥೧೮॥

ಲೋಮಶ– ಇಲ್ವಲನು ಆ ಋಷಿಗಳನ್ನು ಕುರಿತು ನೀವು ಹೇಳಿದ ಎಲ್ಲವೂ ನನ್ನ ಬಳಿಯಲ್ಲಿದೆ. ಆದರೆ ಸುವರ್ಣಮಯವಾದ ರಥವನ್ನು ಹೇಳಿದಿರಷ್ಟೆ? ಅದು ನನಗೆ ತಿಳಿದಿಲ್ಲ.

ಅಗಸ್ತ್ಯಃ

ನ ಮೇ ವಾಗನೃತಾ ಕಾಚಿದ್ ಉಕ್ತಪೂರ್ವಾ ಮಹಾಸುರ ।
ವಿಜ್ಞಾಯತಾಂ ರಥಃ ಸಾಧು ವ್ಯಕ್ತಮಸ್ತಿ ಹಿರಣ್ಮಯಃ ॥೧೯॥

ಅಗಸ್ತ್ಯರು– ಎಲೈ ಮಹಾಸುರನೇ, ನನ್ನ ಮಾತು ಹಿಂದೆ ಎಂದೂ ಸುಳ್ಳಾಗಿಲ್ಲ. ಆ ರಥವು ಎಲ್ಲಿದೆ ಎಂದು ಚೆನ್ನಾಗಿ ನೋಡು. ಖಂಡಿತವಾಗಿ ಸುವರ್ಣಮಯವಾದ ರಥವಿದೆ.

ಲೋಮಶಃ

ವಿಜ್ಞಾಯಮಾನಸ್ಸ ರಥಃ ಕೌಂತೇಯಾಸೀದ್ವಿರಣ್ಮಯಃ ।
ತತಃ ಸ ವ್ಯಥಿತೋ ದೈತ್ಯೋ ದದಾವಭ್ಯಧಿಕಂ ವಸು ॥೨೦॥

ಲೋಮಶ– ಕೌಂತೇಯನೇ, ಇಲ್ವಲನು ವಿಚಾರಮಾಡುತ್ತಿರಲು ಸುವರ್ಣ ರಥವು ಇದ್ದದ್ದು ತಿಳಿಯಿತು. ಆಗ ಆ ದೈತ್ಯನು ವ್ಯಥೆಯಿಂದ ಕೂಡಿದವನಾಗಿ ಅಗಸ್ತ್ಯರಿಗೆ ಬಹಳ ಧನವನ್ನು ಕೊಟ್ಟನು.

ವಿವಾಜೇ ಚ ಸುವಾಜೇ ಚ ತಸ್ಮಿನ್ ಯುಕ್ತೌ ರಥೇ ಹಯೌ ।
ಊಹತುಸ್ತೌ ವಸೂನ್ಯಾಶು ತಾನ್ಯಗಸ್ತ್ಯಾಶ್ರಮಂ ಪ್ರತಿ ।
ಸರ್ವಾನ್ ರಾಜ್ಞಃ ಸಹಾಗಸ್ತ್ಯಾನ್ ನಿಮೇಷಾದಿಹ ಭಾರತ ॥೨೧॥

ವಿವಾಜಿ ಮತ್ತು ಸುವಾಜಿ ಎಂಬ ಎರಡು ಅಶ್ವಗಳು ಆ ರಥದಲ್ಲಿ ಹೂಡಲ್ಪಟ್ಟು ಅವನು ಕೊಟ್ಟ ಧನವನ್ನೂ, ಎಲ್ಲ ರಾಜರನ್ನೂ ಮತ್ತು ಅಗಸ್ತ್ಯಋಷಿಗಳನ್ನೂ ಒಂದೇ ನಿಮಿಷದಲ್ಲಿ ಅಗಸ್ತ್ಯಾಶ್ರಮಕ್ಕೆ ಕರೆದುಕೊಂಡು ಹೋದವು.

ಅಗಸ್ತ್ಯೇನಾಭ್ಯನುಜ್ಞಾತಾ ಜಗ್ಮೂ ರಾಜರ್ಷಯಸ್ತದಾ ।
ಕೃತವಾಂಶ್ಚ ಮುನಿಃ ಸರ್ವಂ ಲೋಪಾಮುದ್ರಾಚಿಕೀರ್ಷಿತಮ್ ॥೨೨॥

ಎಲೈ ಭಾರತನೇ, ಅಗಸ್ತ್ಯರ ಅಪ್ಪಣೆಯನ್ನು ಪಡೆದು ಆ ರಾಜರ್ಷಿಗಳು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು. ಅಗಸ್ತ್ಯರಾದರೂ ಲೋಪಾಮುದ್ರೆಯ ಎಲ್ಲಾ ಅಭೀಷ್ಟವನ್ನೂ ನೆರವೇರಿಸಿದರು.

ಲೋಪಾಮುದ್ರಾ

ಕೃತವಾನಸಿ ತತ್ ಸರ್ವಂ ಭಗವನ್ ಮಮ ಕಾಂಕ್ಷಿತಮ್ ।
ಉತ್ಪಾದಯ ಸಕೃನ್ಮಹ್ಯಮಪತ್ಯಂ ವೀರ್ಯವತ್ತರಮ್ ॥೨೩॥

ಲೋಪಾಮುದ್ರೆ– ಪೂಜ್ಯರೇ, ನಾನು ಇಷ್ಟಪಟ್ಟದ್ದೆಲ್ಲವನ್ನೂ ನೀವು ಮಾಡಿದ್ದೀರಿ. ನನ್ನಲ್ಲಿ ಬಹಳ ವೀರ್ಯವಂತರಾದ ಒಬ್ಬ ಮಗನನ್ನು ಪಡೆಯಿರಿ.

ಅಗಸ್ತ್ಯಃ

ತುಷ್ಟೋऽಹಮಸ್ಮಿ ಕಲ್ಯಾಣಿ ತವ ವೃತ್ತೇನ ಶೋಭನೇ ।
ವಿಚಾರಣಾಮಪತ್ಯೇ ತು ವಕ್ಷ್ಯಾಮಿ ಶೃಣು ತಾಂ ಮಮ ॥೨೩॥

ಸಹಸ್ರಂ ತೇऽಸ್ತು ಪುತ್ರಾಣಾಂ ಶತಂ ವಾ ದಶಸಮ್ಮಿತಮ್ ।
ದಶ ವಾ ಶತತುಲ್ಯಾಸ್ಸ್ಯುರೇಕೋ ವಾऽಪಿ ಸಹಸ್ರವತ್ ॥೨೪॥

ಎಲೌ ಕಲ್ಯಾಣಿಯೇ, ಶೋಭನಳೇ, ನಾನು ನಿನ್ನನಡತೆಯಿಂದ ಸಂತುಷ್ಟನಾಗಿದ್ದೇನೆ. ಪುತ್ರನ ವಿಷಯದಲ್ಲಿ ಒಂದು ಮಾತು ಇದೆ. ಅದನ್ನು ನನ್ನಿಂದ ಕೇಳು. ನಿನಗೆ ಸಹಸ್ರ ಪುತ್ರರು ಬೇಕೋ ಅಥವಾ ಹತ್ತುಪುತ್ರರಿಗೆ ಸಮರಾದ ನೂರು ಪುತ್ರರು ಬೇಕೋ ಅಥವಾ ನೂರು ಪುತ್ರರಿಗೆ ಸಮಾನರಾದ ಹತ್ತು ಪುತ್ರರು ಬೇಕೋ, ಅಥವಾ ಸಹಸ್ರ ಪುತ್ರರಿಗೆ ಸಮಾನವಾದ ಒಬ್ಬ ಪುತ್ರನು ಬೇಕೋ ಎಂದು ಹೇಳು.

ಲೋಪಮುದ್ರಾ

ಸಹಸ್ರಸಮ್ಮಿತಃ ಪುತ್ರ ಏಕೋ ಮೇऽಸ್ತು ತಪೋಧನ ।
ಏಕೋ ಹಿ ಬಹುಭಿಃ ಶ್ರೇಯಾನ್ ಪುತ್ರಃ ಸಾಧುರಸಾಧುಭಿಃ ॥೨೫॥

ಎಲೈ ತಪೋಧನರೇ, ನನಗೆ ಸಹಸ್ರಪುತ್ರರಿಗೆ ಸಮರಾದ ಒಬ್ಬ ಪುತ್ರನೇ ಇರಲಿ. ವಿದ್ವಾಂಸನೂ, ಸಾಧುವೂ ಆದ ಒಬ್ಬ ಪುತ್ರನು ಅನೇಕ ಸಂಖ್ಯೆಯ ದುಷ್ಟಪುತ್ರರಿಗಿಂತ ಶ್ರೇಷ್ಠನಾದವನಷ್ಟೇ .

ಲೋಮಶಃ

ಸ ತಥೇತಿ ಪ್ರತಿಜ್ಞಾಯ ತಯಾ ಸಮಭವನ್ಮುನಿಃ ।
ಸಮಯೇ ಸಮಶೀಲಿನ್ಯಾ ಶ್ರದ್ದಾವಾನ್ ಶ್ರದ್ದಧಾನಯಾ ॥೨೬॥

ಲೋಮಶ– ಆ ಋಷಿಗಳು ಹಾಗೆಯೇ ಆಗಲಿ ಎಂದು ಪ್ರತಿಜ್ಞೆ ಮಾಡಿ ಶ್ರದ್ಧೆಯಿಂದ ಕೂಡಿದವರಾಗಿ ಶ್ರದ್ಧೆಯುಳ್ಳ ಮತ್ತು ಸಮಾನಶೀಲವುಳ್ಳ ತಮ್ಮ ಪತ್ನಿಯ ಸಮಾಗಮವನ್ನು ಯೋಗ್ಯವಾದ ಕಾಲದಲ್ಲಿ ಮಾಡಿದರು.

ತತ ಆಧಾಯ ಗರ್ಭಂ ತಮಗಚ್ಛದ್ವನಮೇವ ಸಃ ।
ತಸ್ಮಿನ್ ವನಂ ಗತೇ ಗರ್ಭೋ ವವೃಧೇ ಸಪ್ತ ಶಾರದಾನ್ ॥೨೭॥

ಗರ್ಭಾಧಾನವನ್ನು ಮಾಡಿ ಆನಂತರ ಅವರು ಕಾಡಿಗೇ ಹೊರಟುಹೋದರು. ಅವರು ಕಾಡಿಗೆ ಹೋಗುತ್ತಿರಲು ಗರ್ಭವು ಏಳುವರ್ಷಗಳ ಕಾಲ ಬೆಳೆಯಿತು.

ಸಪ್ತಮೇಽಬ್ದೇ ಗತೇ ಚಾಪಿ ಪ್ರಾಚ್ಯವತ್ ಸ ಮಹಾಕವಿಃ ।
ಜ್ವಲನ್ನಿವ ಪ್ರಭಾವೇಣ ದೃಢಸ್ಯುರ್ನಾಮ ಭಾರತ ॥೨೮॥

ಎಲೈ ಭಾರತನೇ, ಏಳನೇ ವರ್ಷವು ಪ್ರಾಪ್ತವಾಗುತ್ತಿರಲು ಮಹಾಜ್ಞಾನಿಗಳಾದ ದೃಢಸ್ಯು ಎಂಬ ಋಷಿಗಳು ತಮ್ಮ ಪ್ರಭಾವದಿಂದ ಜ್ವಲಿಸುತ ಗರ್ಭದಿಂದ ತಾವೇ ಹೊರಬಂದರು.

ಸಾಂಗೋಪನಿಷದಾನ್ ವೇದಾನ್ ಜಪನ್ನೇವ ಮಹಾತಪಾಃ ।
ತಸ್ಯ ಪುತ್ರೋಽಭವದ್ಧಿಷೇಃ ಸ ತೇಜಸ್ವೀ ಮಹಾನ್ ಋಷಿಃ ॥೨೯॥

ಮಹಾತಪಸ್ವಿಗಳಾದ ಅವರು ವೇದಗಳನ್ನು ಮತ್ತು ಉಪನಿಷತ್ತುಗಳನ್ನು ಮತ್ತು ವೇದಾಂಗಗಳನ್ನು ಪಠಿಸುತ್ತಲೇ ಹೊರಗೆ ಬಂದರು. ಅಂತಹ ತೇಜಸ್ವಿಗಳಾದ ಮಹರ್ಷಿಗಳು ಅಗಸ್ತ್ಯರಿಗೆ ಪುತ್ರರಾಗಿ ಜನಿಸಿದರು.

ಸ ಬಾಲ ಏವ ತೇಜಸ್ವೀ ಪಿತುಸ್ತಸ್ಯ ನಿವೇಶನೇ ।
ಇಧ್ಮಾನಾಂ ಭಾರಮಾಜಹ್ರೇ ಇಧ್ಮವಾಹಸ್ತತೋಽಭವತ್ ॥೩೦॥

ಅವರು ಇನ್ನೂ ಬಾಲಕರಾಗಿರುವಾಗಲೇ ತೇಜಸ್ವಿಗಳಾಗಿ ತಂದೆಯ ಆಶ್ರಮದಲ್ಲಿ ಕಟ್ಟಿಗೆಯ ಹೊರೆಗಳನ್ನು ಹೊತ್ತುತರುತ್ತಿದ್ದರು. ಆದರಿಂದ ಅವರಿಗೆ ಇಧ್ಮವಾಹ ಎಂದು ಹೆಸರಾಯಿತು.

ತಥಾಯುಕ್ತಂ ತು ತಂ ದೃಷ್ಟ್ವಾ ಮುಮುದೇ ಸ ಮುನಿಸ್ತದಾ ।
ಏವಂ ಸ ಜನಯಾಮಾಸ ಭಾರತಾಪತ್ಯಮುತ್ತಮಮ್ ॥೩೧॥

ಅಂತಹ ಪುತ್ರನನ್ನು ನೋಡಿ ಅಗಸ್ತ್ಯ ಋಷಿಗಳು ಸಂತೋಷಪಟ್ಟರು. ಎಲೈ ಭಾರತನೇ, ಹೀಗೆ ಅಗಸ್ತ್ಯರು ಶ್ರೇಷ್ಠವಾದ ಪುತ್ರನನ್ನು ಪಡೆದರು.

ಲೇಭಿರೇ ಪಿತರಶ್ಚಾಸ್ಯ ಲೋಕಾನ್ ರಾಜನ್ ಯಥೇಪ್ಸಿತಾನ್ ॥೩೨॥

ಎಲೈ ರಾಜನೇ, ಆಗ ಅಗಸ್ತ್ಯರ ಪಿತೃಗಳು (ಗರ್ತದಲ್ಲಿ ನೇತಾಡುತ್ತಿದ್ದವರು) ತಮಗೆ ಅಭೀಷ್ಟವಾದ ಲೋಕಗಳನ್ನು ಪಡೆದರು.

ಅಗಸ್ಯಸ್ಯಾಶ್ರಮಶ್ಚಾಯಮತ ಊರ್ಧ್ವಂ ವಿಶಾಂಪತೇ ।
ಖ್ಯಾತೋ ಭುವಿ ಮಹಾರಾಜ ತೇಜಸಾ ತಸ್ಯ ಧೀಮತಃ ॥೩೩॥

ಎಲೈ ರಾಜನೇ, ಇಲ್ಲಿಂದ ಮುಂದೆ ಇರುವುದೇ ಅಗಸ್ತ್ಯಾಶ್ರಮ. ಎಲೈ ಮಹಾರಾಜನೇ, ಅದು ಆ ಮೇಧಾವಿಗಳ ತೇಜಸ್ಸಿನಿಂದ ಭೂಮಿಯಲ್ಲಿ ಪ್ರಖ್ಯಾತವಾಗಿದೆ.

ಪ್ರಾಹ್ಲಾದಿಶ್ಚಾಪಿ ವಾತಾಪಿರ್ಬ್ರಹ್ಮಘ್ನೋ ದುಷ್ಟಚೇತನಃ ।
ವಿವಂ ವಿನಾಶಿತೋ ರಾಜನ್ನಗಸ್ತ್ಯೇನ ಮಹಾತ್ಮನಾ ॥೩೪॥

ಎಲೈ ರಾಜನೇ, ಪ್ರಹ್ಲಾದರಾಜರ ವಂಶದಲ್ಲಿ ಬಂದ ದುಷ್ಟಚೇತನನೂ ಬ್ರಹ್ಮಹತ್ಯೆಯನ್ನು ಮಾಡುವವನೂ ಆದ ಆ ವಾತಾಪಿಯು ಮಹಾತ್ಮರಾದ ಅಗಸ್ತ್ಯರಿಂದ ಹೀಗೆ ವಿನಾಶ ಮಾಡಲ್ಪಟ್ಟನು.

ತಸ್ಯಾಯಮಾಶ್ರಮೋ ರಾಜನ್ ರಮಣೀಯೈರ್ಗುಣೈರ್ಯುತಃ ।
ವಿಷಾ ಭಾಗೀರಥೀ ಪುಣ್ಯಾ ಯಥೇಷ್ಟ ಮವಗಾಹ್ಯತಾಮ್ ॥೩೫॥

ಎಲೈ ರಾಜನೇ, ಇದು ಮನೋಹರವಾದ ಗುಣಗಳಿಂದ ಕೂಡಿದ ಅವರ ಆಶ್ರಮ. ಇದೇ ಪವಿತ್ರವಾದ ಭಾಗೀರಥಿ ನದಿ. ಇಲ್ಲಿ ಯಥೇಷ್ಟವಾಗಿ ಸ್ನಾನವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ನವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತೈದನೆಯ ಅಧ್ಯಾಯ

ದಧೀಚಿ ಋಷಿಗಳ ಅಸ್ಥಿಯಿಂದ ವಜ್ರವನ್ನು ನಿರ್ಮಾಣ ಮಾಡಿ ವೃತ್ರಾಸುರನನ್ನು ಕುರಿತು ಇಂದ್ರನ ಅಭಿಗಮನ.

ಯುಧಿಷ್ಠಿರಃ

ಭೂಯ ಏವಾಹಮಿಚ್ಛಾಮಿ ಮಹರ್ಷೇಸ್ಯಸ್ಯ ಧೀಮತಃ ।
ಕರ್ಮಣಾಂ ವಿಸ್ತರಂ ಶ್ರೋತುಮಗಸ್ಯಸ್ಯ ದ್ವಿಜೋತ್ತಮ ॥೧॥

ಯುಧಿಷ್ಠಿರ– ಎಲೈ ದ್ವಿಜೋತ್ತಮರೇ, ಮೇಧಾವಿಗಳಾದ ಅಗಸ್ತ್ಯಮಹರ್ಷಿಗಳ ಕರ್ಮಗಳನ್ನು ನಾನು ಇನ್ನೂ ವಿಸ್ತಾರವಾಗಿ ಕೇಳಬಯಸುತ್ತೇನೆ.

ಲೋಮಶಃ

ಶೃಣು ರಾಜನ್ ಕಥಾಂ ದಿವ್ಯಾಮದ್ಭುತಾಮತಿಮಾನುಷೀಮ್ ।
ಅಗಸ್ತ್ಯಸ್ಯ ಮಹಾಪ್ರಾಜ್ಞ ಪ್ರಭಾವಮಮಿತೌಜಸಃ ॥೨॥

ಲೋಮಶ– ಎಲೈ ರಾಜನೇ, ಮಹಾಪ್ರಾಜ್ಞನೇ, ದಿವ್ಯವಾದ ಅದ್ಭುತವಾದ ಮನುಷ್ಯರ ಸಾಮರ್ಥ್ಯವನ್ನು ಮೀರಿದ ಅಮಿತ ಸಾಮರ್ಥ್ಯೋಪೇತರಾದ ಅಗಸ್ತ್ಯರ ಪ್ರಭಾವವನ್ನು ಮತ್ತು ಕಥೆಯನ್ನು ಕೇಳು.

ಆಸನ್ ಕೃತಯುಗೇ ಘೋರಾ ದಾನವಾ ಯುದ್ಧದುರ್ಮದಾಃ ।
ಕಾಲಕೇಯಾ ಇತಿ ಖ್ಯಾತಾ ಗಣಾಃ ಪರಮದಾರುಣಾಃ ॥೩॥

ಕೃತಯುಗದಲ್ಲಿ ಯುದ್ಧದುರ್ಮದರಾದ, ಘೋರರಾದ ಕಾಲಕೇಯರೆಂಬ ಪರಮದಾರುಣರಾದ ದಾನವರ ಗಣಗಳಿದ್ದವು.

ತೇ ತು ವೃತ್ರಂ ಸಮಾಶ್ರಿತ್ಯ ನಾನಾಪ್ರಹರಣೋದ್ಯತಾಃ ।
ಸಮಂತಾತ್ ಪರ್ಯಧಾವಂತ ಮಹೇಂದ್ರಪ್ರಮುಖಾನ್ ಸುರಾನ್॥೪॥

ಅವರಾದರೂ ವೃತ್ರಾಸುರನನ್ನು ಆಶ್ರಯಿಸಿ ಅನೇಕ ಆಯುಧಗಳನ್ನು ಧರಿಸಿ ಎಲ್ಲಕಡೆಗಳಿಂದಲೂ ಇಂದ್ರನೇ ಮೊದಲಾದ ದೇವತೆಗಳ ಮೇಲೆ ಎರಗುತ್ತಿದ್ದರು.

ತತೋ ವೃತ್ರವಧೇ ಯತ್ನಮಕುರ್ವಂಸ್ತ್ರಿದಶಾಃ ಪುರಾ ।
ಪುರಂದರಂ ಪುರಸ್ಕೃತ್ಯ ಬ್ರಹ್ಮಾಣಮುಪತಸ್ಥಿರೇ ।
ಕೃತಾಂಜಲೀಂಸ್ತು ತಾನ್ ಸರ್ವಾನ್ ಪರಮೇಷ್ಠೀತ್ಯುವಾಚ ಹ ॥೫॥

ಆಗ ಹಿಂದೆ ದೇವತೆಗಳೆಲ್ಲರೂ ವೃತ್ರವಧೆಗಾಗಿ ಪ್ರಯತ್ನವನ್ನು ಮಾಡಿದರು. ಅವರು ಇಂದ್ರನನ್ನು ಮುಂದೆ ಮಾಡಿಕೊಂಡು ಬ್ರಹ್ಮದೇವರ ಬಳಿಗೆ ಹೋದರು. ಕೈಮುಗಿದು ನಿಂತ ಅವರೆಲ್ಲರನ್ನು ಕುರಿತು ಬ್ರಹ್ಮದೇವರು ಹೀಗೆ ಹೇಳಿದರು.

ವಿದಿತಂ ಮೇ ಸುರಾಃ ಸರ್ವಂ ಯದ್ವೋ ಭಯಮುಪಸ್ಥಿತಮ್ ।
ತಮುಪಾಯಂ ಪ್ರವಕ್ಷ್ಯಾಮಿ ಯಥಾ ವೃತ್ರಂ ವಧಿಷ್ಯಥ ॥೬॥

ಎಲೈ ದೇವತೆಗಳೇ, ನಿಮಗೆ ಉಂಟಾಗಿರುವ ಭಯವೆಲ್ಲವೂ ನನಗೆ ತಿಳಿದಿದೆ. ನೀವು ವೃತ್ರನನ್ನು ಸಂಹರಿಸುವ ಉಪಾಯವನ್ನು ನಿಮಗೆ ಹೇಳುವೆನು.

ದಧೀಚ ಇತಿ ವಿಖ್ಯಾತೋ ಮಹಾನ್ ಋಷಿರುದಾರಧೀಃ ।
ತಂ ಗತ್ವಾ ಸಹಿತಾಃ ಸರ್ವೇ ವರಂ ವೈ ಸಂಪ್ರಯಾಚತ ॥೭॥

ದಧೀಚರೆಂಬ ಉದಾರಬುದ್ಧಿಯುಳ್ಳ ಪ್ರಖ್ಯಾತರಾದ ಮಹರ್ಷಿಗಳಿದ್ದಾರೆ. ನೀವೆಲ್ಲರೂ ಅವರ ಬಳಿಗೆ ಹೋಗಿ ಅವರಲ್ಲಿ ವರವನ್ನು ಯಾಚಿಸಿ. ಧರ್ಮಾತ್ಮರಾದ ಅವರು ಸಂತೋಷಗೊಂಡ ಮನಸ್ಸಿನಿಂದ ನಿಮಗೆ ವರವನ್ನು ಕೊಡುವರು.

ಸ ವೋ ದಾಸ್ಯತಿ ಧರ್ಮಾತ್ಮಾ ಸುಪ್ರೀತೇನಾಂತರಾತ್ಮನಾ ॥೮॥

ಸ ವಾಚ್ಯಃ ಸಹಿತೈಃ ಸರ್ವೈರ್ಭವದ್ಭಿರ್ಜಯಕಾಂಕ್ಷಿಭಿಃ ।
ಸ್ವಾನ್ಯಸ್ಥೀನಿ ಪ್ರಯಚ್ಛೇತಿ ತ್ರೈಲೋಕ್ಯಸ್ಯ ಹಿತಾಯ ವೈ ॥೯॥

ವೃತ್ರನ ಮೇಲೆ ಜಯವನ್ನು ಗಳಿಸುವ ಆಸೆಯಿರುವ ನೀವೆಲ್ಲರೂ ಒಟ್ಟಾಗಿ ಅವರಿಗೆ ಮೂರುಲೋಕದ ಹಿತಕ್ಕಾಗಿ ನಿಮ್ಮ ಅಸ್ಥಿಗಳನ್ನು ಕೊಡಿ ಎಂದು ಕೇಳಬೇಕು.

ಸ ಶರೀರಂ ಸಮುತ್ಸೃಜ್ಯ ಸ್ವಾನ್ಯಸ್ಥೀನಿ ಪ್ರದಾಸ್ಯತಿ ।
ತಸ್ಯಾಸ್ಥಿಭಿರ್ಮಹಾಘೋರಂ ವಜ್ರಂ ಸಂಹ್ರಿಯತಾಂ ದೃಢಮ್ ॥೧೦॥

ಮಹಚ್ಚತ್ರುಹಣಂ ಭೀಮಂ ಷಡಶ್ರಂ ಭೀಮನಿಸ್ವನಮ್ ।

ಅವರು ತಮ್ಮ ಶರೀರವನ್ನು ಪರಿತ್ಯಜಿಸಿ ತಮ್ಮ ಅಸ್ಥಿಗಳನ್ನು ಕೊಡುವರು. ಅವರ ಅಸ್ಥಿಗಳಿಂದ ಮಹಾಘೋರವಾದ, ದೃಢವಾದ, ಭಯಂಕರವಾದ ಆರು ಅಲಗುಗಳಿಂದ ಕೂಡಿದ, ಭಯಂಕರ ನಾದದಿಂದ ಕೂಡಿದ, ಶತ್ರುಸಂಹಾರಕವಾದ ವಜ್ರಾಯುಧವನ್ನು ನಿರ್ಮಾಣ ಮಾಡಿಸಿ.

ತೇನ ವಜ್ರೇಣ ವೈ ವೃತ್ರಂ ಹನಿಷ್ಯತಿ ಶತಕ್ರತುಃ ।
ಏತದ್ಧಃ ಸರ್ವಮಾಖ್ಯಾತಂ ತಸ್ಮಾಚ್ಛೀಘ್ರಂ ವಿಧೀಯತಾಮ್ ॥೧೧॥

ಇಂದ್ರನು ಆ ವಜ್ರಾಯುಧದಿಂದ ವೃತ್ರನನ್ನು ಸಂಹರಿಸುವನು. ನಾನು ನಿಮಗೆ ಎಲ್ಲವನ್ನೂ ಹೇಳಿದ್ದೇನೆ. ಆದ್ದರಿಂದ ಶೀಘ್ರವಾಗಿ ಅನುಷ್ಠಾನ ಮಾಡಿ (ಎಂದು ಹೇಳಿದರು).

ಏವಮುಕ್ತಾಸ್ತತೋ ದೇವಾ ಅನುಜ್ಞಾಪ್ಯ ಪಿತಾಮಹಮ್ ।
ಶತಕ್ರತುಂ ಪುರಸ್ಕೃತ್ಯ ದಧೀಚಸ್ಯಾಶ್ರಮಂ ಯಯುಃ ॥೧೨॥

ಹೀಗೆ ಹೇಳಲ್ಪಟ್ಟ ದೇವತೆಗಳು ಪಿತಾಮಹರಾದ ಬ್ರಹ್ಮದೇವರ ಅಪ್ಪಣೆಯನ್ನು ಪಡೆದು ಇಂದ್ರನನ್ನು ಮುಂದೆ ಮಾಡಿಕೊಂಡು ದಧೀಚರ ಆಶ್ರಮಕ್ಕೆ ಬಂದರು.

ಸರಸ್ವತ್ಯಾಃ ಪರೇ ಪಾರೇ ನಾನಾದ್ರುಮಲತಾವೃತೇ ।
ಷಟ್‌ಪದೋದ್ಗೀತನಿನದೈರ್ವಿಘುಷ್ಟಂ ಸಾಮಗೈರಿವ ॥೧೩॥

ಪುಂಸ್ಕೋಕಿಲರವೋನ್ಮಿಶ್ರಂ ಕೋಕಿಲೈರ್ಜೀವಜೀವಕೈಃ ।
ಮಹಿಷೈಶ್ಚ ವರಾಹೈಶ್ಚ ಭ್ರಮರೈರಮರೈರಪಿ ॥೧೪॥

ತತ್ರ ತತ್ಸಾನುಚರಿತಂ ಮೃಗೇಂದ್ರಭಯವೇದಿತೈಃ ।
ಕರೇಣುಭಿರ್ವಾರಣೈಶ್ಚ ಪ್ರಭಿನ್ನಕರಟಾಮುಖೈಃ ॥೧೫॥

ಸರೋವಗಾಢೈಃ ಕ್ರೀಡದ್ಭಿಃ ಸಮಂತಾದನುನಾದಿತಮ್ ।
ಅಪರೈಶ್ಚಾಪಿ ಸಂಲೀನೈರ್ಮಹಾಕಂದರವಾಸಿಭಿಃ ॥೧೬॥

ಸಿಂಹವ್ಯಾಘ್ರೈರ್ಮಹಾನಾದಾನ್ ನದದ್ಭಿರನುನಾದಿತಮ್ ।
ತೇಷು ತೇಷ್ವವಕಾಶೇಷು ಶೋಭಿತಂ ಸುಮನೋರಹಮ್ ॥೧೭॥

ತ್ರಿವಿಷ್ಟಪಸಮಪ್ರಖ್ಯಂ ದಧೀಚಾಶ್ರಮಮಾಗಮನ್ ॥೧೮॥

ಸರಸ್ವತೀ ನದಿಯ ಆಚೆಯ ದಡದಲ್ಲಿ ಇದ್ದ ಅವರ ಆಶ್ರಮವು ನಾನಾ ದ್ರುಮಲತೆಗಳಿಂದ ಕೂಡಿ ಭೃಂಗಗಳ ಝೇಂಕಾರದಿಂದ ಸಾಮಗಾನ ಮಾಡುವವರ ಘೋಷದಂತೆ ಇದ್ದಿತು. ಪುಂಸ್ಕೋಕಿಲ ಧ್ವನಿಗಳಿಂದ ಕೂಡಿದ್ದುದಾಗಿ ಕೋಗಿಲೆಗಳು, ಚಕೋರಗಳು, ಮಹಿಷಗಳು, ವರಾಹಗಳಿಂದಲೂ, ಚಮರೀ ಮೃಗಗಳಿಂದಲೂ ಕೂಡಿದ್ದಿತು. ಅಲ್ಲಲ್ಲಿ ಮರಿ ಆನೆಗಳು ಮತ್ತು ದೊಡ್ಡ ಆನೆಗಳು ಮದೋದಕವನ್ನು ಸ್ರವಿಸುತ್ತಾ ಸಿಂಹಗಳ ಭಯವಿಲ್ಲದೇ ಸಂಚರಿಸುತ್ತಿದ್ದವು. ಸರೋವರದಲ್ಲಿ ಇಳಿದು ಆಟವಾಡುವ ಆನೆಗಳ ಭ್ರಮಣದಿಂದ ಆಶ್ರಮವು ಪ್ರತಿಧ್ವನಿಸುತ್ತಿದ್ದಿತು. ಇನ್ನೂ ಕೆಲವು ಆನೆಗಳು ಗುಹೆಗಳಲ್ಲಿ ಮತ್ತು ಕಂದರಗಳಲ್ಲಿ ವಾಸಿಸುತ್ತಿದ್ದವು. ಸಿಂಹ ವ್ಯಾಘ್ರಗಳು ಮಾಡುವ ಮಹಾನಾದಗಳು ಪ್ರತಿಧ್ವನಿಸುತ್ತಿದ್ದವು. ಅಲ್ಲಲ್ಲಿ ಮಧ್ಯದ ಅವಕಾಶಗಳಲ್ಲಿ ಮನೋಹರವಾಗಿದ್ದು ಸ್ವರ್ಗಕ್ಕೆ ಸದೃಶವಾದ ಕಾಂತಿಯುಳ್ಳ ದಧೀಚರ ಆಶ್ರಮಕ್ಕೆ ದೇವತೆಗಳು ಬಂದರು.

ತತ್ರಾಪಶ್ಯನ್ ದಧೀಚಂ ತೇ ದಿವಾಕರಸಮುದ್ಯುತಿಮ್ ।
ಜಾಜ್ವಲ್ಯಮಾನಂ ವಪುಷಾ ಯಥಾ ಸಾಕ್ಷಾತ್ ಪಿತಾಮಹಮ್ ॥೧೯॥

ಅವರು ಅಲ್ಲಿ ಸೂರ್ಯನಿಗೆ ಸಮಾನಯುಕ್ತವಾದ ತೇಜಸ್ಸುಳ್ಳ ಸಾಕ್ಷಾತ್ ಬ್ರಹ್ಮದೇವರಂತೆ ಶರೀರದಿಂದ ಬೆಳಗುತ್ತಿದ್ದ ದಧೀಚರನ್ನು ನೋಡಿದರು.

ತಸ್ಯ ಪಾದೌ ಸುರಾ ರಾಜನ್ನಭಿವಾದ್ಯ ಪ್ರಣಮ್ಯ ಚ ।
ಅಯಾಚಂತ ವರಂ ಸರ್ವೇ ಯಥೋಕ್ತಂ ಪರಮೇಷ್ಠಿನಾ ।
ತತೋ ದಧೀಚಃ ಪರಮಪ್ರೀತಃ ಸುರೋತ್ತಮಾಂಸ್ತಾನಿದಮಿತ್ಯುವಾಚ ॥

ಎಲೈ ರಾಜನೇ, ದೇವತೆಗಳು ಅವರ ಪಾದಗಳಿಗೆ ನಮಸ್ಕರಿಸಿ ಎಲ್ಲರೂ ಬ್ರಹ್ಮದೇವರು ಹೇಳಿದಂತೆ ಅವರಿಂದ ವರವನ್ನು ಕೇಳಿದರು.

ಕರೋಮಿ ಯದ್ದೋ ಹಿತಮದ್ಯ ದೇವಾಃ
ಸ್ವಂ ಚಾಪಿ ದೇಹಂ ಸ್ವಯಮುತ್ಸೃಜಾಮಿ ॥೨೧॥

ಆಗ ದಧೀಚರು ಪರಮಸಂತುಷ್ಟರಾಗಿ ಆ ಸುರಶ್ರೇಷ್ಠರನ್ನು ಕುರಿತು ಎಲೈ ದೇವತೆಗಳೇ, ನಿಮಗೆ ಯಾವುದು ಹಿತವೋ ಅದನ್ನು ಈ ದಿನ ಮಾಡುತ್ತೇನ. ನನ್ನ ದೇಹವನ್ನು ನಾನೇ ಪರಿತ್ಯಾಗಮಾಡುತ್ತೇನೆ ಎಂದು ಹೇಳಿದರು.

ಸ ಏವಮುಕ್ತ್ವಾ ದ್ವಿಪದಾಂ ವರಿಷ್ಠಃ
ಪ್ರಾಣಾನ್ ವಶೀ ಸ್ವಾನ್ ಸಹಸೋತ್ಸಸರ್ಜ ॥೨೨॥

ಸುರಾಸ್ತತೋಽಸ್ಥೀನಿ ಗತಾಯುಷಸ್ತೇ
ಯಥೋಪಜೋಷಂ ಜಗೃಹುಃ ಸ್ಮ ತಸ್ಯ ॥೨೩॥

ಮನುಷ್ಯರಲ್ಲಿ ಶ್ರೇಷ್ಠರಾದ ಸ್ವವಶರಾದ ಅವರು ಹೀಗೆ ಹೇಳಿ ತಮ್ಮ ಪ್ರಾಣವನ್ನು ತಕ್ಷಣದಲ್ಲಿ ತ್ಯಜಿಸಿದರು. ದೇವತೆಗಳು ಅವರು ಮರಣಹೊಂದಿದ ನಂತರ ತಮಗೆ ಇಷ್ಟಬಂದಂತೆ ಅವರ ಅಸ್ಥಿಗಳನ್ನು ಸಂಗ್ರಹಿಸಿದರು.

ಪ್ರಹೃಷ್ಟರೂಪಾಶ್ಚ ಜಯಾಯ ದೇವಾಃ
ತ್ವಷ್ಟಾರಮಾಗಮ್ಯ ತಮರ್ಚ್ಯ ಚೋಚುಃ ॥೨೪॥

ತ್ವಷ್ಟಾ ತು ತೇಷಾಂ ವಚನಂ ನಿಶಮ್ಯ
ಪ್ರಹೃಷ್ಟರೂಪಃ ಪ್ರಯತಃ ಪ್ರಯತ್ನಾತ್ ॥೨೫॥

ಚಕಾರ ವಜ್ರಂ ಭೃಶಮುಗ್ರರೂಪಂ
ಕೃತ್ವಾ ಚ ಶಕ್ರಂ ತಮುವಾಚ ಹೃಷ್ಟಃ ॥೨೬॥

ಅನೇನ ವಜ್ರಪ್ರವರೇಣ ದೇವ
ಭಸ್ಮೀಕುರುಷ್ವಾದ್ಯ ಸುರಾರಿಮುಗ್ರಮ್ ।
ತತೋ ಹತಾರೀ ಸಗಣಃ ಸುಖಂ ವೈ
ಪ್ರಶಾಧಿ ಕೃತ್ಸ್ನಂ ತ್ರಿದಿವಂ ದಿವಿಷ್ಠಃ ॥೨೭॥

ದೇವತೆಗಳು ಜಯವನ್ನು ಉದ್ದೇಶಿಸಿ ಸಂತೋಷಗೊಂಡವರಾಗಿ ತ್ವಷ್ಟೃವಿನ ಬಳಿಗೆ ಬಂದು ಅವನನ್ನು ಸತ್ಕರಿಸಿ ಹೇಳಿದರು. ತ್ವಷ್ಟೃವಾದರೂ ಅವರ ಮಾತನ್ನು ಕೇಳಿ ಸಂತೋಷಗೊಂಡವನಾಗಿ ಬಹಳ ಅವಧಾನದಿಂದ ಪ್ರಯತ್ನಪೂರ್ವಕವಾಗಿ ಬಹಳ ಉಗ್ರವಾದ ವಜ್ರಾಯುಧವನ್ನು ನಿರ್ಮಿಸಿದನು. ವಜ್ರಾಯುಧವನ್ನು ನಿರ್ಮಾಣ ಮಾಡಿ ಅವನು ಸಂತೋಷದಿಂದ ಇಂದ್ರನನ್ನು ಕುರಿತು ದೇವನೇ, ಈ ಶ್ರೇಷ್ಠವಾದ ವಜ್ರಾಯುಧದಿಂದ ಈ ದಿನ ಉಗ್ರವಾದ ದೇವಶತ್ರುವಾದ ವೃತ್ರಾಸುರನನ್ನು ಭಸ್ಮೀಕರಿಸು. ಅನಂತರ ಶತ್ರುವಿನ ನಾಶವಾಗುತ್ತಿರಲು ನಿನ್ನ ಪರಿವಾರದ ಜೊತೆಯಲ್ಲಿ ಸ್ವರ್ಗದಲ್ಲಿ ಇದ್ದು ಸಮಗ್ರವಾದ ಮೂರುಲೋಕಗಳನ್ನು ಆಳು ಎಂದು ಹೇಳಿದನು.

ತ್ವಷ್ಟಾ ತಥೋಕ್ತಃ ಸ ಪುರಂದರಸ್ತು
ವಜ್ರಂ ಪ್ರಹೃಷ್ಟಃ ಪ್ರಯತೋ ಹ್ಯಗೃಹ್ಣಾತ್ ॥೨೮॥

ತ್ವಷ್ಟನಿಂದ ಹೀಗೆ ಹೇಳಲ್ಪಟ್ಟ ಪುರಂದರನು ಸಂತೋಷದಿಂದ ಅವಧಾನ ಪೂರ್ವಕವಾಗಿ ವಜ್ರಾಯುಧವನ್ನು ಸ್ವೀಕರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚನವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತಾರನೆಯ ಅಧ್ಯಾಯ

ವೃತ್ರವಧೆ. ಉಳಿದ ದೈತ್ಯರಿಂದ ಸಮುದ್ರದಲ್ಲಿ ಅಡಗಿ ದುರ್ಮಂತ್ರಣ.

ಲೋಮಶಃ

ತತಃ ಸ ವಜ್ರೀ ಬಲಭಿದ್ ದೈವತೈರಭಿರಕ್ಷಿತಃ ।
ಆಸಸಾದ ತತೋ ವೃತ್ರಂ ಸ್ಥಿತಮಾವೃತ್ಯ ರೋದಸೀ ॥೧॥

ಕಾಲಕೇಯೈರ್ಮಹಾಕಾಯೈಃ ಸಮಂತಾದಭಿರಕ್ಷಿತಮ್ ।
ಸಮುದ್ಯತಪ್ರಹರಣೈಃ ಸಶೃಂಗೈರಿವ ಪರ್ವತೈಃ ॥೨॥

ಲೋಮಶ– ಅನಂತರ ಬಲಸೂದನನಾದ ಮತ್ತು ದೇವತೆಗಳಿಂದ ರಕ್ಷಿತನಾದ ಇಂದ್ರನು ಆಯುಧಗಳನ್ನು ಧರಿಸಿ ಶೃಂಗವುಳ್ಳ ಪರ್ವತದಂತೆ ಮಹಾಕಾಯನಾದ ಕಾಲಕೇಯರಿಂದ ಎಲ್ಲಕಡೆಗಳಲ್ಲಿಯೂ ರಕ್ಷಿತನಾದಂತಹ ಭೂಮಿ ಮತ್ತು ಅಂತರಿಕ್ಷವನ್ನು ಆವರಿಸಿ ನಿಂತಂತಹ ವೃತ್ರನನ್ನು ಸಮೀಪಿಸಿದನು.

ತತೋ ಯುದ್ಧಂ ಸಮಭವದ್ ದೇವಾನಾಂ ಸಹ ದಾನವೈಃ ।
ಮುಹೂರ್ತಂ ಭರತಶ್ರೇಷ್ಠ ಲೋಕತ್ರಾಸಕರಂ ಮಹತ್ ॥೩॥

ಎಲೈ ಭರತಶ್ರೇಷ್ಠನೇ, ಅನಂತರ ಒಂದು ಮುಹೂರ್ತಕಾಲ ದೇವತೆಗಳಿಗೂ ಮತ್ತು ದಾನವರಿಗೂ ಲೋಕಭಯಂಕರವಾದ ದೊಡ್ಡ ಯುದ್ಧವಾಯಿತು.

ಉದ್ಯತಪ್ರತಿವಿಷ್ಟಾನಾಂ ಖಿಡ್ಡಾನಾಂ ವೀರಬಾಹುಭಿಃ ।
ಅಸೀತ್ ಸುತುಮುಲಃ ಶಬ್ದಃ ಶರೀರೇಷ್ವಭಿಪಾತಿತಃ ॥೪॥

ವೀರರ ಬಾಹುಗಳಿಂದ ಎತ್ತಿಹೊಡೆಯಲ್ಪಟ್ಟು ಶರೀರಗಳನ್ನು ಪ್ರವೇಶಿಸುತ್ತಿದ್ದ ಖಡ್ಗಗಳ ಶಬ್ದವು ತೀವ್ರವಾಗಿದ್ದಿತು.

ಶಿರೋಭಿಃ ಪ್ರಪತದ್ಭಿಶ್ಚಾಪ್ಯಂತರಿಕ್ಷಾನ್ನಹೀತಳಮ್ ।
ತಾಳೈರಿವ ಮಹೀಪಾಲ ವೃಂತಾದ್ ಭ್ರಷ್ಟೈರದೃಶ್ಯತ ॥೫॥

ಎಲೈ ಮಹೀಪಾಲನೇ, ಅಂತರಿಕ್ಷದಿಂದ ಭೂತಲದ ಮೇಲೆ ಬೀಳುತ್ತಿದ್ದ ಹೊಡೆದು ಉರುಳಿಸಲ್ಪಟ್ಟ ಶಿರಸ್ಸುಗಳು ತೊಟ್ಟನ್ನು ಕಳಚಿಕೊಂಡು ಬೀಳುವ ತಾಳಫಲಗಳಂತೆ ತೋರುತ್ತಿದ್ದವು.

ತೇ ಹೇಮಕವಚಾ ಭೂತ್ವಾ ಕಾಲೇಯಾಃ ಪರಿಘಾಯುಧಾಃ ।
ತ್ರಿದಶಾನಭ್ಯಧಾವಂತ ದಾವದಗ್ಧಾ ಇವ ದ್ರುಮಾಃ ॥೬॥

ಆ ಕಾಲೇಯರು ಹೇಮಕವಚಗಳನ್ನೂ ಪರಿಘಾಯುಧವನ್ನೂ ಧರಿಸಿ ಕಾಡ್ಗಿಚ್ಚಿನಿಂದ ಸುಟ್ಟ ವೃಕ್ಷಗಳಂತೆ ದೇವತೆಗಳ ಮೇಲೆ ಎರಗಿದರು.

ತೇಷಾಂ ವೇಗವತಾಂ ವೇಗಂ ಸಹಿತಾನಾಂ ಪ್ರಧಾವತಾಮ್ ।
ನ ಶೇಕುಸ್ತ್ರಿದಶಾಃ ಸೋಢುಂ ತೇ ಭಗ್ನಾಃ ಪ್ರಾದ್ರವನ್ ಭಯಾತ್ ॥೭॥

ಆ ದಾನವರು ಒಟ್ಟಾಗಿ ವೇಗದಿಂದ ತಮ್ಮ ಮೇಲೆ ಎರಗುವಾಗ ದೇವತೆಗಳು ಆ ವೇಗವನ್ನು ತಡೆಯಲಾರದೆ ಚೆಲ್ಲಾಪಿಲ್ಲಿಯಾಗಿ ಭಯದಿಂದ ಓಡಿದರು.

ತಾನ್ ದೃಷ್ಟ್ವಾ ದ್ರವತೋ ಭೀತಾನ್ ಸಹಸ್ರಾಕ್ಷಃ ಪುರಂದರಃ ।
ವೃತ್ರೇ ಏವರ್ಧಮಾನೇ ಚ ಕಶ್ಮಲಂ ಮಹದಾವಿಶತ್ ॥೮॥

ದೇವತೆಗಳು ಭಯದಿಂದ ಓಡುತ್ತಿರುವುದನ್ನೂ ವೃತ್ರನು ಅಭಿವೃದ್ಧಿ ಹೊಂದುತ್ತಿರುವುದನ್ನೂ ನೋಡಿದ ಸಹಸ್ರಾಕ್ಷನಾದ ಇಂದ್ರನು ಮನಸ್ಸಿನಲ್ಲಿ ದೊಡ್ಡ ಗ್ಲಾನಿಯನ್ನು ಹೊಂದಿದನು.

ತಂ ಶಕ್ರಂ ಕಶ್ಮಲಾವಿಷ್ಟಂ ದೃಷ್ಟ್ವಾ ವಿಷ್ಣುಃ ಸನಾತನಃ ।
ಸ್ವತೇಜೋ ವ್ಯದಧಾಚ್ಛಕ್ರೇ ಬಲಮಸ್ಯಾಭಿವರ್ಧಯನ್ ॥೯॥

ಮನೋಗ್ಲಾನಿಗೆ ಒಳಗಾದ ಇಂದ್ರನನ್ನು ನೋಡಿ ಸನಾತನನಾದ ವಿಷ್ಣುವು ಅವನಿಗೆ ಬಲವನ್ನು ಅಭಿವೃದ್ಧಿಗೊಳಿಸಲು ತನ್ನ ತೇಜಸ್ಸನ್ನು ಅವನಲ್ಲಿ ಇಟ್ಟನು.

ವಿಷ್ಣುನಾऽऽಪ್ಯಾಯಿತಂ ದೃಷ್ಟ್ವಾ ಶಕ್ರಂ ದೇವಗಣಾಸ್ತತಃ ।
ಸ್ವಂಸ್ವಂ ತೇಜಃ ಸಮಾದಧ್ಯುಃ ತಥಾ ಬ್ರಹ್ಮರ್ಷಯೋऽಮಲಾಃ ॥೧೦॥

ವಿಷ್ಣುವಿನಿಂದ ತೇಜೋಭಿವೃದ್ಧಿಯನ್ನು ಹೊಂದಿದ ಶಕ್ರನನ್ನು ನೋಡಿ ಆಗ ದೇವತಾಗಣಗಳು ಮತ್ತು ಪರಿಶುದ್ಧರಾದ ಬ್ರಹ್ಮರ್ಷಿಗಳು ತಮ್ಮ ತಮ್ಮ ತೇಜಸ್ಸನ್ನು ಇಂದ್ರನಲ್ಲಿ ತುಂಬಿದರು.

ಸ ಸಮಾಪ್ಯಾಯಿತಃ ಶಕ್ರೋ ವಿಷ್ಣುನಾ ದೈವತೈಃ ಸಹ ।
ಋಷಿಭಿಶ್ಚ ಮಹಾಭಾಗೈರ್ಬಲವಾನ್ ಸಮಪದ್ಯತ ॥೧೧॥

ವಿಷ್ಣುವಿನಿಂದಲೂ, ದೇವತೆಗಳಿಂದಲೂ, ಮಹಾನುಭಾವರಾದ ಋಷಿಗಳಿಂದಲೂ ತೇಜೋಭಿವೃದ್ಧಿಯನ್ನು ಹೊಂದಿ ಶಕ್ರನು ಬಲಿಷ್ಠನಾದನು.

ಜ್ಞಾತ್ವಾ ಬಲಸ್ಥಂ ತ್ರಿದಶಾಧಿಪಂ ತು
ನನಾದ ವೃತ್ರೋ ಮಹತೋ ನಿನಾದಾನ್ ।
ತಸ್ಯ ಪ್ರಣಾದೇನ ಧರಾ ದಿಶಶ್ಚ
ಖಂ ದ್ಯೌರ್ನಗಾಶ್ಚಾತಿಚಚಾಲ ಸರ್ವಮ್ ॥೧೨॥

ತ್ರಿದಶಾಧ್ಯಕ್ಷನಾದ ಇಂದ್ರನು ಬಲದಿಂದ ಅಭಿವೃದ್ಧಿಯನ್ನು ಹೊಂದುವುದನ್ನು ನೋಡಿದ ವೃತ್ರಾಸುರನು ದೊಡ್ಡ ನಾದವನ್ನು ಮಾಡಿದನು. ಅವನ ಆ ನಾದಕ್ಕೆ ಭೂಮಿಯೂ, ದಿಕ್ಕುಗಳೂ, ಆಕಾಶವೂ, ಅಂತರಿಕ್ಷವೂ, ಪರ್ವತಗಳೂ ಎಲ್ಲವೂ ಬಹಳವಾಗಿ ಚಲಿಸಿದವು.

ತತೋ ಮಹೇಂದ್ರಃ ಪರಮಾಭಿತಪ್ತಃ
ಶ್ರುತ್ವಾಂ ಖಂ ಘೋರಮುದಗ್ರಕಲ್ಪಮ್ ।

ಭಯೇ ನಿಮಗ್ನಸ್ತ್ರಿತೋ ಮುಮೋಚ
ವಜ್ರಂ ಮಹತ್ ತಸ್ಯ ವಧಾಯ ರಾಜನ್ ॥೧೩॥

ಎಲೈ ರಾಜನೇ, ಆ ಮಹೇಂದ್ರನು ಅತಿಭಯಂಕರವಾದ ಆ ಘೋರವಾದ ರವವನ್ನು ಕೇಳಿ ಬಹಳ ಸಂತಾಪಕ್ಕೆ ಒಳಗಾದವನಾಗಿ ಭಯವನ್ನು ಹೊಂದಿ ಶೀಘ್ರವಾಗಿ ವೃತ್ರವಧೆಗಾಗಿ ಆ ದೊಡ್ಡ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ಶಕ್ರವಜ್ರಾಭಿಹತಃ ಪಪಾತ
ಮಹಾಸುರಃ ಕಾಂಚನಮಾಲ್ಯಧಾರೀ ।
ಯಥಾ ಮಹಾಶೈಲವರಃ ಪುರಸ್ತಾತ್
ಸ ಮಂದರೋ ವಿಷ್ಣುಕರಾತ್ ಪ್ರಮುಕ್ತಃ ॥೧೪॥

ಶಕ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಕಾಂಚನಮಾಲೆಯ ಧಾರಿಯಾದ ಆ ಮಹಾಸುರನು ಹಿಂದೆ ವಿಷ್ಣುವಿನ ಕರದಿಂದ ಮುಕ್ತವಾದ ಮಂದರಪರ್ವತದಂತೆ ನೆಲಕ್ಕೆ ಉರುಳಿದನು.

ತಸ್ಮಿನ್ ಹತೇ ದೈತ್ಯವರೇ ಭಯಾರ್ತಃ
ಶಕ್ರಃ ಪ್ರದುದ್ರಾವ ಸರಃ ಪ್ರವೇಷ್ಟುಮ್ ।
ವಜ್ರಂ ನ ಮೇನೇ ಸ್ವಕರಾತ್ ಪ್ರಮುಕ್ತಂ
ವೃತ್ರಂ ಭಯಾಚ್ಚಾಪಿಹತಂ ನ ಮೇನೇ ॥೧೫॥

ಆ ದೈತ್ಯಶ್ರೇಷ್ಠನು ಹತನಾಗುತ್ತಿರಲು ಭಯಾರ್ತನಾದ ಇಂದ್ರನು ಒಂದು ಸರೋವರವನ್ನು ಪ್ರವೇಶಿಸಲು ಓಡಿದನು. ಅವನು ಭಯದಿಂದ ತಾನು ವಜ್ರಾಯುಧವನ್ನು ತನ್ನ ಹಸ್ತದಿಂದ ಪ್ರಯೋಗಿಸಿದ್ದೇನೆಂದೂ ವೃತ್ರನು ಹತನಾಗಿದ್ದಾನೆಂದೂ ತಿಳಿಯಲಿಲ್ಲ.

ಸರ್ವೇ ಚ ದೇವಾ ಮುದಿತಾಃ ಪ್ರಹೃಷ್ಟಾ
ಮಹರ್ಷಯಶ್ಚೇಂದ್ರಮಭದ್ರವಂತಃ ।
ವೃತ್ರಂ ಹತಂ ಸಂದದೃಶುಃ ಪೃಥಿವ್ಯಾಂ
ವಜ್ರಾಹತಂ ಶೈಲಮಿವಾವಕೀರ್ಣಮ್ ॥೧೬॥

ಎಲ್ಲ ದೇವತೆಗಳು ಮತ್ತು ಮಹರ್ಷಿಗಳು ಸಂತೋಷ ಮತ್ತು ಹರ್ಷಗಳಿಂದ ಕೂಡಿದವರಾಗಿ ಇಂದ್ರನ ಬಳಿಗೆ ಓಡಿಬಂದು ವಜ್ರಾಘಾತಕ್ಕೆ ಒಳಗಾದ ಪರ್ವತದಂತೆ ಭೂಮಿಯ ಮೇಲೆ ಚೂರುಚೂರಾಗಿ ಬಿದ್ದಿರುವ ಮೃತನಾದ ವೃತ್ರನನ್ನು ನೋಡಿದರು.

ಶೇಷಾಂಶ್ಚ ದೈತ್ಯಾಂಸ್ತ್ವರಿತಾಃ ಸಮೇತ್ಯ
ಜಘ್ನುಃ ಸುರಾ ವೃತ್ರವಧಾಭಿತಪ್ತಾನ್ ।
ತೇ ವಧ್ಯಮಾನಾಸ್ತ್ರಿದಶೈಸ್ತದಾನೀಂ
ಸಮುದ್ರಮೇವಾವಿವಿಶುರ್ಭಯಾರ್ತಾಃ ॥೧೭॥

ಆಗ ದೇವತೆಗಳು ಎಲ್ಲರೂ ಸೇರಿ ವೃತ್ರವಧೆಯಿಂದ ಸಂತಾಪಗೊಂಡ ಉಳಿದ ದೈತ್ಯರನ್ನು ಶೀಘ್ರವಾಗಿ ಸಂಹರಿಸಿದರು. ದೇವತೆಗಳ ಪ್ರಹಾರಕ್ಕೆ ಒಳಗಾದ ಆ ದೈತ್ಯರು ಆಗ ಭಯದಿಂದ ಕೂಡಿದವರಾಗಿ ಸಮುದ್ರವನ್ನು ಪ್ರವೇಶಿಸಿದರು.

ಪ್ರವಿಶ್ಯ ಚೈವೋದಧಿಮಪ್ರಮೇಯಂ
ಝಷಾಕುಲಂ ನಕ್ರಸಮಾಕುಲಂ ಚ ।
ತದಾ ಸುಮಂತ್ರಂ ಸಹಿತಾಃ ಪ್ರಚಕ್ರುಃ
ತ್ರೈಲೋಕ್ಯನಾಶಾರ್ಥಮಭಿಪ್ರಯುಕ್ತಾಃ ॥೧೮॥

ಅವರು ಮೀನು, ಮೊಸಳೆಗಳಿಂದ ನಿಬಿಡವಾದ ಅಪಾರವಾದ ಸಮುದ್ರವನ್ನು ಪ್ರವೇಶಿಸಿ ಆಗ ಮೂರುಲೋಕಗಳ ನಾಶವನ್ನು ಉದ್ದೇಶಿಸಿ ಎಲ್ಲರೂ ಒಟ್ಟಿಗೆ ಮಂತ್ರಾಲೋಚನೆಯನ್ನು ನಡೆಸಿದರು.

ತತ್ರ ಸ್ಮ ಕೇಚನ್ಮತಿನಿಶ್ಚಯಜ್ಞಾಃ
ತಾಂಸ್ತಾನುಪಾಯಾನುಪವರ್ಣಯಂತಿ ।
ತೇಷಾಂ ತು ತತ್ರ ಕ್ಷಯಕಾಲಯೋಗಾದ್
ಘೋರಾ ಮತಿಶ್ಚಿಂತಯತಾಂ ಬಭೂವ ॥೧೯॥

ಅಲ್ಲಿ ಕೆಲವು ದೃಢನಿಶ್ಚಯವುಳ್ಳ ದೈತ್ಯರು ಬೇರೆ ಬೇರೆ ಉಪಾಯಗಳನ್ನು ವರ್ಣಿಸಿದರು. ಅವರಿಗಾದರೂ ವಿನಾಶದ ಕಾಲವು ಸಮೀಪಿಸಿದ್ದರಿಂದ ಹೀಗೆ ಮಂತ್ರಾಲೋಚನೆ ಮಾಡುವಾಗ ಘೋರವಾದ ಬುದ್ಧಿಯುಂಟಾಯಿತು.

ಯೇ ಸಂತಿ ವಿದ್ಯಾತಪಸೋಪಪನ್ನಾಃ
ತೇಷಾಂ ತು ಕಾರ್ಯಃ ಪ್ರಥಮಂ ವಿನಾಶಃ ।
ಲೋಕಾ ಹಿ ಸರ್ವೇ ತಪಸಾ ಧ್ರಿಯಂತೇ
ತಸ್ಮಾತ್ ತ್ವರದ್ಧ್ವಂ ತಪಸಃ ಕ್ಷಯಾಯ ॥೨೦॥

ಯೇ ಸಂತಿ ಕೇಚಿಚ್ಚ ವಸುಂಧರಾಯಾಂ
ತಪಸ್ವಿನೋ ಧರ್ಮವಿದಶ್ಚ ತಜ್ಞಾಃ ।
ತೇಷಾಂ ವಧಃ ಕ್ರಿಯತಾಂ ಕ್ಷಿಪ್ರಮೇವ
ತೇಷು ಪ್ರನಷ್ಟೇಷು ಜಗದ್ವಿನಷ್ಟಮ್ ॥೨೧॥

ಭೂಮಿಯಲ್ಲಿಯಾರು ವಿದ್ಯಾತಪಸ್ಸುಗಳಿಂದ ಸಂಪನ್ನರಾಗಿದ್ದಾರೆಯೋ ಅವರ ವಿನಾಶವನ್ನು ಮೊದಲು ಮಾಡಬೇಕು. ಎಲ್ಲ ಲೋಕಗಳು ತಪಸ್ಸನ್ನು ಆಧರಿಸಿವೆ. ಆದ್ದರಿಂದ ತಪಸ್ಸನ್ನು ವಿನಾಶಮಾಡಲು ಜಾಗ್ರತೆಯಾಗಿ ಪ್ರಯತ್ನವನ್ನು ಮಾಡಿ. ಭೂಮಿಯಲ್ಲಿಯಾವ ತಪಸ್ವಿಗಳು ಮತ್ತು ಧರ್ಮಜ್ಞರು ಇದ್ದಾರೆಯೋ ಶೀಘ್ರವಾಗಿ ಅವರ ವಧೆಯನ್ನು ಮಾಡಿ. ಅವರು ನಷ್ಟರಾದರೆ ಜಗತ್ತೇ ವಿನಾಶವನ್ನು ಹೊಂದುತ್ತದೆ.

ಏವಂ ಹಿ ಸರ್ವೇ ಕೃತಬುದ್ಧಿಭಾವಾ
ಜಗದ್ವಿನಾಶೇ ಪರಮಪ್ರಹೃಷ್ಟಾಃ ।
ದುರ್ಗಂ ಸಮಾಶ್ರಿತ್ಯ ಮಹೋರ್ಮಿಮಂತಂ
ರತ್ನಾಕರಂ ವರುಣಸ್ಯಾಲಯಂ ಚ ॥೨೨॥

ಹೀಗೆ ಆ ದಾನವರು ದೊಡ್ಡ ಅಲೆಗಳಿರುವ ರತ್ನಾಕರವಾದ ವರುಣಾಲಯವಾದ ಸಮುದ್ರವನ್ನು ಪ್ರವೇಶಿಸಿ ಜಗದ್ವಿನಾಶವನ್ನು ಉದ್ದೇಶಿಸಿ ಮಂತ್ರಾಲೋಚನೆಯನ್ನು ನಡೆಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಣ್ಣವತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಿಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತೇಳನೆಯ ಅಧ್ಯಾಯ

ಕಾಲಕೇಯರಿಂದ ಉಪದ್ರುತವಾದ ಲೋಕಗಳನ್ನು ನೋಡಿ
ದೇವತೆಗಳಿಂದ ವಿಷ್ಣುವಿನಲ್ಲಿ ಶರಣಾಗತಿ.

ಲೋಮಶಃ

ಸಮುದ್ರಂ ತೇ ಸಮಾಸಾದ್ಯ ವಾರುಣಂ ನಿಧಿಮಂಭಸಾಮ್ ।
ಕಾಲೇಯಾಃ ಸಂಪ್ರವರ್ತಂತೇ ತ್ರೈಲೋಕ್ಯಸ್ಯ ವಿನಾಶನೇ ॥೧॥

ಲೋಮಶ– ಕಾಲಕೇಯರು ವರುಣಪಾಲಿತವಾದ ಜಲನಿಧಿಯಾದ ಸಮುದ್ರವನ್ನು ಸೇರಿ ಮೂರುಲೋಕಗಳ ವಿನಾಶಕ್ಕಾಗಿ ಪ್ರವೃತ್ತಿಯನ್ನು ಮಾಡಿದರು.

ತೇ ರಾತ್ರೌ ಸಮಭಿಕ್ರುದ್ಧಾ ಭಕ್ಷಯಂತಿ ಸದಾ ಮುನೀನ್ ।
ಆಶ್ರಮೇಷು ಚ ಯೇ ಸಂತಿ ಪುಣ್ಯೇಷ್ವಾಯತನೇಷು ಚ ॥೨॥

ಅವರು ಕ್ರೋಧದಿಂದ ಕೂಡಿದವರಾಗಿ ಆಶ್ರಮದಲ್ಲಿಮತ್ತು ಪುಣ್ಯಕ್ಷೇತ್ರಗಳಲ್ಲಿ ವಾಸಿಸುವ ಮುನಿಗಳನ್ನು ಯಾವಾಗಲೂ ರಾತ್ರಿಯ ಕಾಲದಲ್ಲಿ ಭಕ್ಷಿಸುತ್ತಿದ್ದರು.

ವಸಿಷ್ಠಸ್ಯಾಶ್ರಮೇ ವಿಪ್ರಾ ಭಕ್ಷಿತಾಸ್ತೈರ್ದುರಾತ್ಮಭಿಃ ।
ಅಶೀತಿಶತಮಷ್ಟೌ ಚ ನವ ಚಾನ್ಯೇ ತಪಸ್ವಿನಃ ॥೩॥

ಆ ದುರಾತ್ಮರು ವಸಿಷ್ಠರ ಆಶ್ರಮಕ್ಕೆ ಹೋಗಿ ನೂರತೊಂಭತ್ತೇಳು ತಪಸ್ವಿಗಳನ್ನು ಭಕ್ಷಿಸಿದರು.

ಚ್ಯವನಸ್ಯಾಶ್ರಮಂ ಗತ್ವಾ ಪುಣ್ಯಂ ದ್ವಿಜನಿಷೇವಿತಮ್ ।
ಫಲಮೂಲಾಶನಾನಾಂ ಹಿ ಮುನೀನಾಂ ಭಕ್ಷಿತಂ ಶತಮ್ ॥೪॥

ಬ್ರಾಹ್ಮಣರಿಂದ ಸೇವಿತವಾದ ಪವಿತ್ರವಾದ ಚ್ಯವನಾಶ್ರಮಕ್ಕೆ ಹೋಗಿ ಫಲ ಮೂಲ ಭಕ್ಷಕರಾದ ನೂರು ಮುನಿಗಳನ್ನು ಭಕ್ಷಿಸಿದರು.

ಏವಂ ರಾತ್ರೌ ವಿಕುರ್ವಂತಿ ವಿವಿಶುಶ್ಚಾರ್ಣವಂ ದಿವಾ ।
ಕಾಲೇಯಾಶ್ಚ ದುರಾತ್ಮಾನೋ ಭಕ್ಷಯಂತಸ್ತಪೋಧನಾನ್ ॥೫॥

ಹೀಗೆ ದುರಾತ್ಮರಾದ ಕಾಲೇಯರು ತಪೋಧನರನ್ನು ಭಕ್ಷಿಸುತ್ತಾ ರಾತ್ರಿಯ ವೇಳೆಯಲ್ಲಿ ಅಪಚಾರವನ್ನು ಮಾಡಿ ಹಗಲಿನಲ್ಲಿ ಸಮುದ್ರವನ್ನು ಸೇರುತ್ತಿದ್ದರು.

ಭಾರದ್ವಾಜಾಶ್ರಮೇ ಚೈವ ನಿಯತಾ ಬ್ರಹ್ಮಚಾರಿಣಃ ।
ವಾಯ್ವಾಹಾರಾಂಬುಭಕ್ಷಾಶ್ಚ ವಿಂಶತಿಃ ಸ್ಮ ನಿಷೂದಿತಾಃ ॥೬॥

ಭರದ್ವಾಜರ ಆಶ್ರಮದಲ್ಲಿಯೂ ಸಹ ನಿಯಮಬದ್ಧರಾದ ಅಬ್ಭಕ್ಷರು ಮತ್ತು ವಾಯುಭಕ್ಷರೂ ಆದ ಇಪ್ಪತ್ತು ಬ್ರಹ್ಮಚಾರಿಗಳು ಕೊಲ್ಲಲ್ಪಟ್ಟರು.

ಏವಂ ಕ್ರಮೇಣ ಸರ್ವಾಂಸ್ತಾನಾಶ್ರಮಾನ್ ದಾನವಾಸ್ತದಾ ।
ನಿಶಾಯಾಂ ಪರಿಧಾವಂತಿ ಸಮುದ್ರಾಂಬುಬಲಾಶ್ರಯಾತ್ ॥೭॥

ಹೀಗೆ ಆಗ ಆ ದಾನವರು ಸಮುದ್ರಜಲವನ್ನು ಆಶ್ರಯಿಸಿ ಕ್ರಮವಾಗಿ ರಾತ್ರಿಯ ವೇಳೆಯಲ್ಲಿ ಎಲ್ಲಾ ಆಶ್ರಮಗಳಿಗೂ ಬರುತ್ತಿದ್ದರು.

ಕಾಲೋಪನೃಷ್ಟಾಃ ಕಾಲೇಯಾ ಘ್ನಂತೋ ದ್ವಿಜಗಣಾನ್ ಬಹೂನ್ ।
ನ ಚೈನಾನನ್ವಬುಧ್ಯಂತ ಮನುಜಾ ಮನುಜೋತ್ತಮ ॥೮॥

ಮೃತ್ಯುಸನ್ನಿಹಿತರಾದ ಕಾಲೇಯರು ಅನೇಕ ಬ್ರಾಹ್ಮಣ ಸಮೂಹಗಳನ್ನು ಕೊಲ್ಲುತ್ತಿದ್ದರು. ಎಲೈ ಮನುಜಶ್ರೇಷ್ಠನೇ, ಯಾವ ಮನುಷ್ಯರಿಗೂ ಇದು ತಿಳಿಯಲಿಲ್ಲ.

ಏವಂ ಪ್ರವೃತ್ತಾಸ್ತೇ ದೈತ್ಯಾಃ ತಾಪಸೇಷು ತರಸ್ವಿನಃ ।
ಕ್ಷಯಾಯ ಜಗತಃ ಕ್ರೂರಾಃ ಪರಿಧಾವಂತಿ ಮೇದಿನೀಮ್ ॥೯॥

ಹೀಗೆ ಕ್ರೂರರಾದ ದೈತ್ಯರು ತಪಸ್ವಿಗಳ ಆಶ್ರಮದಲ್ಲಿ ಜಗತ್ತಿನ ಕ್ಷಯವನ್ನುಂಟು ಮಾಡುವುದಕ್ಕೋಸ್ಕರ ಭೂಮಿಯಲ್ಲಿ ಸಂಚರಿಸುತ್ತಿದ್ದರು.

ಪ್ರಭಾತೇ ಸಮದೃಶ್ಯಂತ ನಿಯಮಾಹಾರಕರ್ಶಿತಾಃ ।
ಮಹೀತಳಸ್ಥಾ ಮುನಯಃ ಶರೀರೈರ್ಗತಜೀವಿತೈಃ ॥೧೦॥

ಕ್ಷೀಣಮಾಂಸೈರ್ವಿರುಧಿರೈರ್ವಿಮಜ್ಜಾಂತ್ಯೈರ್ವಿಸಂಧಿಭಿಃ ।
ಆಕೀರ್ಣೈರಾಚಿತಾ ಭೂಮಿಃ ಶಂಖಾನಾಮಿವ ರಾಶಿಭಿಃ ॥೧೧॥

ಕಲಶೈರ್ವಿಪ್ರಭಗ್ನೈಶ್ಚ ಸ್ರುವೈರ್ಭಗ್ನೈಸ್ತಥೈವ ಚ ।
ವಿಶೀರ್ಣೈರಗ್ನಿಹೋತ್ರೈಶ್ಚ ಭೂರ್ಬಭೂವ ಸಮಾವೃತಾ ॥೧೨॥

ಬೆಳಗಾದಮೇಲೆ ವ್ರತನಿಯಮಗಳಿಂದ ಕರ್ಶಿತರಾದ ಋಷಿಗಳ ಮೃತಶರೀರಗಳು ಭೂಮಿಯ ಮೇಲೆ ಬಿದ್ದಿರುವುದು ಕಾಣುತ್ತಿದ್ದಿತು. ಮಾಂಸಗಳಿಲ್ಲದೆ ರಕ್ತ, ಮಜ್ಜ ಮತ್ತು ಕೀಲುಗಳಿಲ್ಲದೆ ಭೂಮಿಯ ಮೇಲೆ ಬಿದ್ದ ಅಸ್ಥಿಗಳ ರಾಶಿಯು ಶಂಖದ ರಾಶಿಗಳಂತೆ ಕಾಣುತ್ತಿದ್ದಿತು. ಭೂಮಿಯಲ್ಲಿ ಎಲ್ಲಕಡೆಗಳಲ್ಲಿಯೂ ಒಡೆದು ಹೋದ ಕಮಂಡಲಗಳು, ಮುರಿದ ಸ್ರುವಗಳು ವಿನಾಶವನ್ನು ಹೊಂದಿದ ಅಗ್ನಿಹೋತ್ರಗಳು ನಿಬಿಡವಾಗಿದ್ದವು.

ನಿಃಸ್ವಾಧ್ಯಾಯವಷಟ್‌ಕಾರಂ ನಷ್ಟಯಜ್ಞೋತ್ಸವಕ್ರಿಯಮ್ ।
ಜಗದಾಸೀನ್ನಿರುತ್ಸಾಹಂ ಕಾಲೇಯಭಯಪೀಡಿತಮ್ ॥೧೩॥

ಕಾಲೇಯರ ಭಯದಿಂದ ಪೀಡಿತವಾದ ಜಗತ್ತು ಸ್ವಾಧ್ಯಾಯವಷಟ್‌ಕಾದ ರಹಿತವಾಗಿ ಯಜ್ಞಾಹುತಿ ಮೊದಲಾದ ಕ್ರಿಯೆಗಳಿಂದ ರಹಿತವಾಗಿ ನಿರುತ್ಸಾಹವಾಗಿದ್ದಿತು.

ಏವಂ ತೇ ಕ್ಷೀಯಮಾಣಾಶ್ಚ ಮಾನವಾ ಮನುಜೇಶ್ವರ ।
ಆತ್ಮತ್ರಾಣಪರಾ ಭೀತಾಃ ಪ್ರಾದ್ರವಂತ ದಿಶೋ ಭಯಾತ್ ॥೧೪॥

ಎಲೈ ಮನುಜೇಶ್ವರನೇ, ಹೀಗೆ ಮಾನವರು ದಿನದಿನಕ್ಕೆ ಕ್ಷೀಣಿಸುತ್ತಾ ತಮ್ಮನ್ನು ಉಳಿಸಿಕೊಳ್ಳಲು ಭಯದಿಂದ ದಿಕ್ಕುದಿಕ್ಕುಗಳಿಗೆ ಓಡಿದರು.

ಕೇಚಿದ್ಗುಹಾಃ ಪ್ರವಿವಿಶುರ್ನಿರ್ಝರಾಂಶ್ಚಾಪರೇ ಶ್ರಿತಾಃ ।
ಅಪರೇ ತದ್‌ಭಯಾದೇವ ಸಹಸಾಽಸೂನ್ ಸಮತ್ಯಜನ್ ॥೧೫॥

ಕೆಲವರು ಗುಹೆಗಳನ್ನು ಪ್ರವೇಶಿಸಿದರು. ಕೆಲವರು ಸಣ್ಣ ತೊರೆಗಳನ್ನು ಆಶ್ರಯಿಸಿದರು. ಇನ್ನು ಕೆಲವರು ಕಾಲೇಯರ ಭಯದಿಂದ ಇದ್ದಕ್ಕಿದ್ದಂತೆಯೇ ಪ್ರಾಣಗಳನ್ನು ತ್ಯಜಿಸಿದರು.

ಕೇಚಿತ್ತತ್ರ ಮಹೇಷ್ವಾಸಾಃ ಶೂರಾಃ ಪರಮದರ್ಪಿತಾಃ ।
ಮಾರ್ಗಮಾಣಾಃ ಪರಂ ಯತ್ನಂ ದಾನವಾನಾಂ ಪ್ರಚಕ್ರಿರೇ ॥೧೬॥

ಅಲ್ಲಿ ಕೆಲವು ಶೂರರು ದರ್ಪದಿಂದ ಕೂಡಿದವರಾಗಿ ದೊಡ್ಡ ಧನುಸ್ಸುಗಳನ್ನು ಹಿಡಿದು ದಾನವರನ್ನು ಹುಡುಕುತ್ತಾ ದೊಡ್ಡ ಪ್ರಯತ್ನವನ್ನು ಮಾಡಿದರು.

ನ ಚೈತಾನಧಿಜಗ್ಮುಸ್ತೇ ಸಮುದ್ರಂ ಸಮುಪಾಶ್ರಿತಾನ್ ।
ಶ್ರಮಂ ಜಗ್ಮುಶ್ಚ ಪರಮಂ ಸಂಜಗ್ಮುಃ ಕ್ಷಯಮೇವ ಚ ॥೧೭॥

ಆದರೆ ಸಮುದ್ರವನ್ನು ಆಶ್ರಯಿಸಿದ್ದ ದಾನವರು ಅವರಿಗೆ ಸಿಗಲಿಲ್ಲ. ಆ ವೀರರು ದಾನವರನ್ನು ಹುಡುಕುತ್ತಾ ಬಹಳವಾಗಿ ದಣಿದು ವಿನಾಶವನ್ನೇ ಹೊಂದಿದರು.

ಜಗತ್ಯುಪಶಮಂ ಯಾತೇ ನಷ್ಟಯಜ್ಞೋತ್ಸವಕ್ರಿಯೇ ।
ಆಜಗ್ಮುಃ ಪರಮಾಮರ್ತಿಂ ತ್ರಿದಶಾ ಮನುಜಾಧಿಪ ॥೧೮॥

ಎಲೈ ಮನುಜಾಧಿಪನೇ, ಯಜ್ಞೋತ್ಸವಕ್ರಿಯೆಗಳನ್ನು ಕಳೆದುಕೊಂಡು ಜಗತ್ತು ವಿನಾಶವನ್ನು ಹೊಂದುತ್ತಿರಲು ದೇವತೆಗಳು ಪರಮದುಃಖವನ್ನು ತಾಳಿದರು.

ಸಮೇತ್ಯ ಸಮಹೇಂದ್ರಾಶ್ಚ ಭಯಾನ್ಮಂತ್ರಂ ಪ್ರಚಕ್ರಿರೇ ।
ನಾರಾಯಣಂ ಪುರಸ್ಕೃತ್ಯ ವೈಕುಂಠಮಪರಾಜಿತಮ್ ॥೧೯॥

ದೇವತೆಗಳು ಭಯದಿಂದ ಕೂಡಿದವರಾಗಿ ಇಂದ್ರನ ಜೊತೆಯಲ್ಲಿ ಅಪರಾಜಿತನಾದ ವೈಕುಂಠನಾದ ನಾರಾಯಣನನ್ನು ಮುಂದೆ ಮಾಡಿಕೊಂಡು ಮಂತ್ರಾಲೋಚನೆಯನ್ನು ಮಾಡಿದರು.

ತತೋ ದೇವಾಃ ಸಮೇತಾಸ್ತೇ ತದೋಚುರ್ಮಧುಸೂದನಮ್ ॥೨೦॥

ಆಗ ದೇವತೆಗಳು ಎಲ್ಲರೂ ಸೇರಿ ಮಧುಸೂದನನನ್ನು ಕುರಿತು ಹೀಗೆ ಹೇಳಿದರು.

ತ್ವಂ ನಃ ಸ್ರಷ್ಟಾ ಚ ಪಾತಾ ಚ ಭರ್ತಾ ಚ ಜಗತಃ ಪ್ರಭೋ ।
ತ್ವಯೋತ್ಸೃಷ್ಟಮಿದಂ ಸರ್ವಂ ಸ್ಥಾವರಂ ಜಂಗಮಂ ಚಯತ್ ॥೨೧॥

ತ್ವಯ್ಯೇವ ಪುಂಡರೀಕಾಕ್ಷ ಪುನಸ್ತತ್ ಪ್ರವಿಲೀಯತೇ ॥೨೨॥

ನೀನು ನಮ್ಮನ್ನು ಸೃಷ್ಟಿಸುವವನು ಮತ್ತು ಪಾಲಿಸುವವನು. ಪ್ರಭುವೇ, ನೀನು ಜಗತ್ತಿಗೇ ರಕ್ಷಕನಾದವನು. ಎಲೈ ಪುಂಡರೀಕಾಕ್ಷನೇ, ಈ ಸ್ಥಾವರ ಜಂಗಮಾತ್ಮಕವಾದ ಜಗತ್ತೆಲ್ಲವೂ ನಿನ್ನಿಂದಲೇ ಸೃಷ್ಟವಾಗಿದೆ. ಪುನಃ ನಿನ್ನಲ್ಲಿಯೇ ಲಯವನ್ನು ಹೊಂದುತ್ತವೆ.

ತ್ವಯಾ ಭೂಮಿಃ ಪುರಾ ನಷ್ಟಾ ಸಮುದ್ರಾತ್ ಪುಷ್ಕರೇಕ್ಷಣ ।
ವಾರಾಹಂ ರೂಪಮಾಸ್ಥಾಯ ಜಗದರ್ಥೇ ಸಮುದ್ಧೃತಾ ॥೨೩॥

ಎಲೈ ಪುಷ್ಕರೇಕ್ಷಣನೇ, ನೀನು ಹಿಂದೆ ಸಮುದ್ರದಲ್ಲಿ ಮುಳುಗಿಹೋದ ಭೂಮಿಯನ್ನು ಜಗತ್ತಿನ ಹಿತಕ್ಕೋಸ್ಕರವಾಗಿ ವರಾಹರೂಪವನ್ನು ಧರಿಸಿ ಮೇಲಕ್ಕೆತ್ತಿದೆ.

ಆದಿದೈತ್ಯೋ ಮಹಾವೀರ್ಯೋ ಹಿರಣ್ಯಕಶಿಪುಸ್ತ್ವಯಾ ।
ನಾರಸಿಂಹಂ ವಪುಃ ಕೃತ್ವಾ ಸೂದಿತಃ ಪುರುಷೋತ್ತಮ ॥೨೪॥

ಎಲೈ ಪುರುಷೋತ್ತಮನೇ, ಆದಿದೈತ್ಯನೂ, ಮಹಾಪರಾಕ್ರಮಶಾಲಿಯೂ ಆದ ಹಿರಣ್ಯಕಶಿಪುವು ನರಸಿಂಹರೂಪವನ್ನು ಧರಿಸಿದ ನಿನ್ನಿಂದ ಸಂಹರಿಸಲ್ಪಟ್ಟನು.

ಅವಧ್ಯಃ ಸರ್ವಭೂತಾನಾಂ ಬಲಿಶ್ಚಾಪಿ ಮಹಾಸುರಃ ।
ವಾಮನಂ ವಪುರಾಸ್ಥಾಯ ತ್ರೈಲೋಕ್ಯಾದ್ ಭ್ರಂಶಿತಃ ಪುರಾ ॥೨೫॥

ಸರ್ವಭೂತರಿಂದಲೂ ಅವಧ್ಯನಾದ ಮಹಾಸುರನಾದ ಬಲಿಯೂ ಸಹ ವಾಮನರೂಪವನ್ನು ಧರಿಸಿದ ನಿನ್ನಿಂದಲೇ ತ್ರೈಲೋಕ್ಯದಿಂದ ಭ್ರಂಶಿತನಾದನು.

ಅಸುರಶ್ಚ ಮಹೇಷ್ವಾಸೋ ಜಂಭ ಇತ್ಯಭಿವಿಶ್ರುತಃ ।
ಯಜ್ಞಕ್ಷೋಭಕರಃ ಶೂರಃ ತ್ವಯೈವ ವಿನಿಪಾತಿತಃ ॥೨೬॥

ಯಜ್ಞನಾಶಕನೂ, ಮಹಾಧನುರ್ಧಾರಿಯೂ, ಶೂರನೂ ಆದ ಪ್ರಖ್ಯಾತನಾದ ಜಂಭಾಸುರನು ನಿನ್ನಿಂದಲೇ ನಾಶವನ್ನು ಹೊಂದಿದನು.

ಏವಮಾದೀನಿ ಕರ್ಮಾಣಿ ಯೇಷಾಂ ಸಂಖ್ಯಾ ನ ವಿದ್ಯತೇ ।
ಅಸ್ಮಾಕಂ ಭಯಭೀತಾನಾಂ ತ್ವಂ ಗತಿರ್ಮಧುಸೂದನ ॥೨೭॥

ಇಂತಹ ಅನೇಕ ಕರ್ಮಗಳನ್ನು ನೀನು ಮಾಡಿದ್ದೀಯೆ. ಅವುಗಳಿಗೆ ಗಣನೆಯೇ ಇಲ್ಲ. ಎಲೈ ಮಧುಸೂದನನೇ, ಭಯಭೀತರಾದ ನಮಗೆ ನೀನೇ ಗತಿಯಾಗಿದ್ದೀಯೆ.

ತಸ್ಮಾತ್ ತ್ವಾಮೇವದೇವೇಶ ಲೋಕಾರ್ಥಂ ಜ್ಞಾಪಯಾಮಹೇ ।
ರಕ್ಷ ದೇವಾಂಶ್ಚ ಲೋಕಾಂಶ್ಚ ಶಕ್ರಂ ಚ ಮಹತೋ ಭಯಾತ್ ।
ಶರಣಾಗತಸಂತ್ರಾಣೇ ತ್ವಮೇಕೋಽಸಿ ದೃಢವ್ರತಃ ॥೨೮॥

ಆದ್ದರಿಂದ ಎಲೈ ದೇವೇಶನೇ, ಎಲ್ಲ ಲೋಕಗಳ ಹಿತದ ಸಲುವಾಗಿ ನಿನಗೆ ವಿಜ್ಞಾಪನೆಯನ್ನು ಮಾಡುತ್ತಿದ್ದೇವೆ. ದೇವತೆಗಳನ್ನು, ಲೋಕಗಳನ್ನು ಮತ್ತು ಇಂದ್ರನನ್ನು ದೊಡ್ಡಭಯದಿಂದ ರಕ್ಷಿಸು. ನೀನೊಬ್ಬನೇ ಶರಣಾಗತರನ್ನು ರಕ್ಷಣೆ ಮಾಡುವ ದೃಢವಾದ ವ್ರತವನ್ನು ಹೊಂದಿರುವವನು (ಎಂದು ಸ್ತೋತ್ರ ಮಾಡಿದರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತನವತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತೆಂಟನೆಯ ಅಧ್ಯಾಯ

ವಿಷ್ಣುವನ್ನು ಮುಂದೆ ಮಾಡಿಕೊಂಡು ದೇವತೆಗಳಿಂದ ಬ್ರಹ್ಮಸಮೀಪ ಗಮನ. ಬ್ರಹ್ಮದೇವರ ವಚನದಂತೆ ದೇವತೆಗಳಿಂದ ಅಗಸ್ತ್ಯರ ಸ್ತುತಿ.

ದೇವಾಃ

ಇತಃ ಪ್ರಸಾದಾದ್ ವರ್ತಂತೇ ಪ್ರಜಾಃ ಸರ್ವಾಶ್ಚತುರ್ವಿಧಾಃ ।
ತಾ ಭಾವಿತಾ ಭಾವಯಂತಿ ಹವ್ಯಕವ್ಯೈರ್ದಿವೌಕಸಃ ॥೧॥

ದೇವತೆಗಳು– ನಮ್ಮ ಅನುಗ್ರಹದಿಂದ ನಾಲ್ಕುವಿಧವಾದ ಎಲ್ಲಾ ಪ್ರಜೆಗಳು ಶರೀರಯಾತ್ರೆಯನ್ನು ನಡೆಸುತ್ತಾರೆ. ಸತ್ಕೃತರಾದ ಆ ಪ್ರಜೆಗಳು ಹವ್ಯಕವ್ಯಗಳಿಂದ ದೇವತೆಗಳನ್ನು ಸತ್ಕರಿಸುತ್ತಾರೆ.

ಲೋಕಾ ಹ್ಯೇವಂ ವರ್ತಯಂತಿ ಅನ್ಯೋನ್ಯಂ ಸಮುಪಾಶ್ರಿತಾಃ ।
ತ್ವತ್ಪ್ರಸಾದಾನ್ನಿರುದ್ವಿಗ್ನಾಃ ತ್ವಯ್ಯೇವ ಪರಿರಕ್ಷಿತಾಃ ॥೨॥

ಹೀಗೆ ಲೋಕಗಳು ಪರಸ್ಪರವಾಗಿ ಆಶ್ರಯಿಸಿಕೊಂಡು ಸಾಗುತ್ತವೆ. ನಿನ್ನಿಂದಲೇ ರಕ್ಷಿತವಾದ ಎಲ್ಲ ಪ್ರಜೆಗಳೂ ನಿನ್ನ ಅನುಗ್ರಹದಿಂದಲೇ ನಿರುದ್ವಿಗ್ನರಾಗಿರುತ್ತಾರೆ.

ಇದಂ ಚ ಸಮನುಪ್ರಾಪ್ತಂ ಲೋಕಾನಾಂ ಭಯಮುಚ್ಯತ ।
ರಾತ್ರೌ ವಧ್ಯಂತಿ ಸತತಂ ಕೇನೈತೇ ದ್ವಿಜಪುಂಗವಾಃ ॥೩॥

ಎಲೈ ಅಚ್ಯುತನೇ, ಈಗ ಲೋಕಗಳಿಗೆ ಈ ಭಯವು ಉಂಟಾಗಿದೆ. ಬ್ರಾಹ್ಮಣ ಶ್ರೇಷ್ಠರೆಲ್ಲರೂ ರಾತ್ರಿಯ ವೇಳೆಯಲ್ಲಿ ಸತತವಾಗಿ ಯಾರಿಂದ ಕೊಲ್ಲಲ್ಪಡುತ್ತಿದ್ದಾರೆ?

ಕ್ಷೀಣೇಷು ಚ ಬ್ರಾಹ್ಮಣೇಷು ಪೃಥಿವೀ ಕ್ಷಯಮೇಷ್ಯತಿ ।
ತತಃ ಪೃಥಿವ್ಯಾಂ ಕ್ಷೀಣಾಯಾಂ ತ್ರಿದಿವಂ ಕ್ಷಯಮೇಷ್ಯತಿ ॥೪॥

ಬ್ರಾಹ್ಮಣರು ನಾಶವನ್ನು ಹೊಂದಿದರೆ ಭೂಮಿಯು ನಾಶವನ್ನು ಹೊಂದುವುದು. ಭೂಮಿಯು ನಾಶವನ್ನು ಹೊಂದಿದರೆ ಅನಂತರ ಸ್ವರ್ಗವು ನಾಶವನ್ನು ಹೊಂದುವುದು.

ತ್ವತ್ಪ್ರಸಾದಾನ್ಮಹಾಬಾಹೋ ಸರ್ವೇ ಲೋಕಾ ಜಗತ್ಪತೇ ।
ವಿನಾಶಂ ನಾಭಿಗಚ್ಛೇಯುಃ ತ್ವಯೈವ ಪರಿರಕ್ಷಿತಾಃ ॥೫॥

ಎಲೈ ಜಗತ್ಪತಿಯೇ, ಮಹಾಬಾಹುವೇ, ನಿನ್ನಿಂದಲೇ ಪರಿರಕ್ಷಿತವಾದ ಎಲ್ಲ ಲೋಕಗಳು ನಿನ್ನ ಅನುಗ್ರಹದಿಂದಲೇ ನಾಶವನ್ನು ಹೊಂದದಿರುವಂತೆ ಆಗಬೇಕು.

ಶ್ರೀಭಗವಾನ್

ವಿದಿತಂ ಮೇ ಸುರಾಃ ಸರ್ವಂ ಪ್ರಜಾನಾಂ ಕ್ಷಯಕಾರಣಮ್ ।
ಭವತಾಂ ಚಾಪಿ ವಕ್ಷ್ಯಾಮಿ ಶೃಣುಧ್ವಂ ವಿಗತಜ್ವರಾಃ ॥೬॥

ಶ್ರೀಭಗವಾನ್ - ಎಲೈ ದೇವತೆಗಳೇ, ಪ್ರಜೆಗಳ ವಿನಾಶಕ್ಕೆ ಕಾರಣವನ್ನೆಲ್ಲಾ ನಾನು ತಿಳಿದಿದ್ದೇನೆ. ನಿಮಗೂ ಅದನ್ನು ಹೇಳುವೆನು. ನಿರಾತಂಕವಾಗಿ ಕೇಳಿ.

ಕಾಲೇಯಾ ಇತಿ ವಿಖ್ಯಾತಾ ಗಣಾಃ ಪರಮದಾರುಣಾಃ ।
ತೈಶ್ಚ ವೃತ್ರಂ ಸಮಾಶ್ರಿತ್ಯ ಜಗತ್ ಸರ್ವಂ ಪ್ರಬಾಧಿತಮ್ ॥೭॥

ಕಾಲೇಯರೆಂದು ಪ್ರಸಿದ್ಧವಾದ ಪರಮಘೋರರಾದ ದಾನವರ ಒಂದು ಗಣವಿದೆ. ಅವರು ವೃತ್ರಾಸುರನನ್ನು ಆಶ್ರಯಿಸಿಕೊಂಡು ಎಲ್ಲಾ ಜಗತ್ತನ್ನೂ ಬಾಧಿಸುತ್ತಿದ್ದರು.

ವೃತ್ರಂ ತು ನಿಹತಂ ದೃಷ್ಟ್ವಾ ಸಹಸ್ರಾಕ್ಷೇಣ ಧೀಮತಾ ।
ಜೀವಿತಂ ಪರಿರಕ್ಷಂತಃ ಪ್ರವಿಷ್ಟಾ ವರುಣಾಲಯಮ್ ॥೮॥

ಮೇಧಾವಿಯಾದ ಇಂದ್ರನಿಂದ ವೃತ್ರನು ಹತನಾದುದನ್ನು ನೋಡಿ ಅವರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಸಮುದ್ರವನ್ನು ಪ್ರವೇಶಿಸಿದ್ದಾರೆ.

ತೇ ಪ್ರವಿಶ್ಯೋದಧಿಂ ಘೋರಂ ನಾನಾಗ್ರಾಹಸಮಾಕುಲಮ್ ।
ಉತ್ಸಾದನಾರ್ಥಂ ಲೋಕಾನಾಂ ರಾತ್ರೌ ಕ್ಷ್ನಂತಿ ಮುನೀನಿಹ ॥೯॥

ಅವರು ಕ್ರೂರವಾದ ಅನೇಕ ಜಲಚರಪ್ರಾಣಿಗಳಿಂದ ನಿಬಿಡವಾದ ಘೋರವಾದ ಸಮುದ್ರವನ್ನು ಪ್ರವೇಶಿಸಿ ಜಗತ್ತನ್ನು ನಾಶಮಾಡುವುದಕ್ಕಾಗಿ ರಾತ್ರಿಯ ವೇಳೆಯಲ್ಲಿ ಋಷಿಗಳನ್ನು ಕೊಲ್ಲುತ್ತಿದ್ದಾರೆ.

ನ ಹಿ ಶಕ್ಯಃ ಕ್ಷಯಂ ನೇತುಂ ಸಮುದ್ರಾಶ್ರಯಿಣೋ ಹಿ ತೇ ।
ಸಮುದ್ರಸ್ಯ ಕ್ಷಯೇ ಬುದ್ಧಿರ್ಧವದ್ಧಿಃ ಸಂವಿಧೀಯತಾಮ್ ॥೧೦॥

ಸಮುದ್ರವನ್ನು ಆಶ್ರಯಿಸಿರುವ ಅವರನ್ನು ವಿನಾಶಮಾಡಲು ಸಾಧ್ಯವಿಲ್ಲ. ಸಮುದ್ರವನ್ನೇ ಬತ್ತಿಸುವ ವಿಷಯದಲ್ಲಿ ನೀವೆಲ್ಲರೂ ವಿಚಾರಮಾಡಿ.

ಅಗಸ್ತ್ಯೇನ ವಿನಾ ಕೋಹಿ ಶಕ್ತೋಽನ್ಯೋಽರ್ಣವಶೋಷಣೇ ।
ಅನ್ಯಥಾ ನಹಿ ಶಕ್ಯಾಸ್ತೇ ವಿನಾ ಸಾಗರಶೋಷಣಮ್ ॥೧೧॥

ಅಗಸ್ತ್ಯರನ್ನು ಬಿಟ್ಟು ಬೇರೆ ಯಾರು ಸಮುದ್ರವನ್ನು ಬತ್ತಿಸಲು ಸಮರ್ಥರಾಗುತ್ತಾರೆ? ಸಮುದ್ರವನ್ನು ಬತ್ತಿಸುವುದನ್ನು ಬಿಟ್ಟು ಬೇರೆ ಯಾವ ಉಪಾಯದಿಂದಲೂ ನೀವು ಅವರನ್ನು ಸೋಲಿಸಲು ಸಾಧ್ಯವಿಲ್ಲ.

ಲೋಮಶಃ

ವಿತಚ್ಯುತ್ವಾ ವಚೋ ದೇವಾ ವಿಷ್ಣುನಾ ಸಮುದಾಹೃತಮ್ ।
ವಿಷ್ಣುಮೇವ ಪುರಸ್ಕೃತ್ಯ ಬ್ರಹ್ಮಾಣಂ ಸಮುಪಸ್ಥಿತಾಃ ॥೧೨॥

ಲೋಮಶ– ದೇವತೆಗಳು ವಿಷ್ಣುವಿನಿಂದ ಹೇಳಲ್ಪಟ್ಟ ಈ ಮಾತುಗಳನ್ನು ಕೇಳಿ ವಿಷ್ಣುವನ್ನೇ ಮುಂದೆ ಮಾಡಿಕೊಂಡು ಬ್ರಹ್ಮದೇವರ ಸಮೀಪಕ್ಕೆ ಹೋದರು.

ತೇ ನೀಚೈಃ ಪ್ರಣತಾ ಭೂತ್ವಾ ತಮೇವಾರ್ಥಂ ನ್ಯವೇದಯನ್ ।
ಸರ್ವಲೋಕವಿನಾಶಾರ್ಥಂ ಕಾಲೇಯಾಃ ಕೃತನಿಶ್ಚಯಾಃ ॥೧೩॥

ಅವರು ಬ್ರಹ್ಮದೇವರಿಗೆ ದಂಡಪ್ರಕಾಮವನ್ನು ಮಾಡಿ ಸರ್ವಲೋಕಗಳನ್ನು ವಿನಾಶಮಾಡಲು ಕಾಲೇಯರು ಸಂಕಲ್ಪಿಸಿದ್ದಾರೆ ಎಂಬ ಈ ವಿಷಯವನ್ನೇ ನಿವೇದಿಸಿದರು.

ತೇಷಾಂ ತದ್ವಚನಂ ಶ್ರುತ್ವಾ ಧರ್ಮಯೋನಿಃ ಪುರಾತನಃ ।
ಉವಾಚ ಪರಮಪ್ರೀತಃ ತ್ರಿದಶಾನರ್ಥವದ್ವಚಃ ॥೧೪॥

ಅವರ ಆ ಮಾತುಗಳನ್ನು ಕೇಳಿದ ಪದ್ಮಯೋನಿಯಾದ (ಧರ್ಮಯೋನಿಯಾದ) ಪುರಾತನರಾದ (ಸನಾತನರಾದ) ಬ್ರಹ್ಮದೇವರು ಬಹಳ ಸಂತೋಷದಿಂದ ದೇವತೆಗಳನ್ನು ಕುರಿತು ಪ್ರಯೋಜನಪೂರ್ಣವಾದ ಮಾತುಗಳನ್ನು ಆಡಿದರು.

ಪರಮೇಷ್ಠೀ

ವಿದಿತಂ ಮೇ ಸುರಾಃ ಸರ್ವಂ ದಾನವಾನಾಂ ವಿಚೇಷ್ಟಿತಮ್ ।
ಮನುಷ್ಯಾದೇಶ್ಚ ನಿಧನಂ ಕಾಲೇಯೈಃ ಕಾಲಚೋದಿತೈಃ ॥೧೫॥

ಪರಮೇಷ್ಠೀ– ಎಲೈ ದೇವತೆಗಳೇ, ದಾನವರ ಎಲ್ಲಾ ವ್ಯಾಪಾರಗಳೂ ನನಗೆ ತಿಳಿದಿವೆ. ಕಾಲಚೋದಿತರಾದ ಕಾಲೇಯರಿಂದ ಮನುಷ್ಯಾದಿಗಳ ವಧೆಯು ನನಗೆ ತಿಳಿದಿದೆ.

ಕ್ಷಯಸ್ತೇಷಾಮನುಪ್ರಾಪ್ತಃ ಕಾಲೇನೋಪಹತಾಶ್ಚ ತೇ ।
ಉಪಾಯಂ ಸಂಪ್ರವಕ್ಷ್ಯಾಮಿ ಸಮುದ್ರಸ್ಯ ವಿಶೋಷಣೇ ॥೧೬॥

ಮೃತ್ಯುಗ್ರಸ್ತರಾದ ಅವರ ವಿನಾಶಕಾಲವು ಪ್ರಾಪ್ತವಾಗಿದೆ. ಸಮುದ್ರವನ್ನು ಬತ್ತಿಸುವುದಕ್ಕೆ ನಾನು ನಿಮಗೆ ಒಂದು ಉಪಾಯವನ್ನು ಹೇಳುವೆನು.

ಅಗಸ್ತ್ಯ ಇತಿ ವಿಖ್ಯಾತೋ ವಾರುಣಿಃ ಸುಮಹಾಮುನಿಃ ।
ತಮುಪಾಗಮ್ಯ ಸಹಿತಾ ಇಮಮರ್ಥಂ ಪ್ರಯಾಚತ ॥೧೭॥

ಅಗಸ್ತ್ಯರೆಂದು ಪ್ರಖ್ಯಾತರಾದ ವರುಣಪುತ್ರರಾದ ಒಳ್ಳೆಯ ಮಹರ್ಷಿಗಳಿದ್ದಾರೆ. ನೀವೆಲ್ಲರೂ ಒಟ್ಟಿಗೆ ಅವರ ಬಳಿಗೆ ಹೋಗಿ ಅವರಲ್ಲಿ ಈ ವಿಷಯವನ್ನು ಯಾಚಿಸಿ.

ಸ ಹಿ ಶಕ್ತೋ ಮಹಾಭಾಗಃ ಕ್ಷಣಾತ್ ಪಾತುಂ ಮಹೋದಧಿಮ್।
ಸಮುದ್ರೇ ಚ ಕ್ಷಯಂ ನೀತೇ ಕಾಲೇಯಾನ್ ನಿಹನಿಷ್ಯಥ ॥೧೮॥

ಮಹಾನುಭಾವರಾದ ಅವರು ಒಂದೇ ಕ್ಷಣದಲ್ಲಿ ಸಮುದ್ರವನ್ನು ಪಾನಮಾಡಲು ಸಮರ್ಥರಾದವರು. ಸಮುದ್ರವು ಬತ್ತಿಹೋಗುತ್ತಿರಲು ನೀವು ಕಾಲೇಯರನ್ನು ಸಂಹರಿಸುವಿರಿ.

ಏವಂ ಶ್ರುತ್ವಾ ವಚೋ ದೇವಾ ಬ್ರಹ್ಮಣಃ ಪರಮೇಷ್ಠಿನಃ ।
ಪರಮೇಷ್ಠ್ಯಭ್ಯನುಜ್ಞಾತಾ ಅಗಸ್ತ್ಯಸ್ಯಾಶ್ರಮಂ ಯಯುಃ ॥೧೯॥

ಹೀಗೆ ದೇವತೆಗಳು ಪರಮೇಷ್ಠಿಯಾದ ಬ್ರಹ್ಮದೇವರ ಮಾತುಗಳನ್ನು ಕೇಳಿ ಅವರ ಅನುಮತಿಯನ್ನು ಪಡೆದು ಅಗಸ್ತ್ಯರ ಆಶ್ರಮಕ್ಕೆ ಹೋದರು.

ತತ್ರಾಪಶ್ಯನ್ ಮಹಾತ್ಮಾನಂ ವಾರುಣಿಂ ದೀಪ್ತತೇಜಸಮ್ ।
ಉಪಾಸ್ಯಮಾನಮೃಷಿಭಿರ್ ದೇವೈರಿವ ಪಿತಾಮಹಮ್ ॥೨೦॥

ಅಲ್ಲಿ ಅವರು ಬ್ರಹ್ಮದೇವರು, ದೇವತೆಗಳಿಂದ ಉಪಾಸ್ಯರಾದಂತೆ ಋಷಿಗಳಿಂದ ಉಪಾಸ್ಯರಾದ ದೀಪ್ತವಾದ ತೇಜಸುಳ್ಳ ಮಹಾನುಭಾವರಾದ ವರುಣಪುತ್ರರಾದ ಅಗಸ್ತ್ಯರನ್ನು ನೋಡಿದರು.

ತೇಽಭಿಗಮ್ಯ ಮಹಾತ್ಮಾನಂ ಮೈತ್ರಾವರುಣಿಮಚ್ಯುತಮ್ ।
ಆಶ್ರಮಸ್ಥಂ ತಪೋರಾಶಿಂ ಕರ್ಮಭಿಸ್ತ್ವೃಷಿಮಸ್ತುವನ್ ॥೨೧॥

ಅವರು ಮಹಾತ್ಮರಾದ ತಮ್ಮ ಗುಣಗಳಿಂದ ಚ್ಯುತರಾಗದ ಮಿತ್ರಾವರುಣಪುತ್ರರಾದ ತಪೋರಾಶಿಯಾದ ಆಶ್ರಮದಲ್ಲಿದ್ದ ಅಗಸ್ತ್ಯರನ್ನು ಸಮೀಪಿಸಿ ಅವರ ಕರ್ಮಗಳಿಂದ ಅವರನ್ನು ಸ್ತೋತ್ರಮಾಡಿದರು.

ದೇವಾಃ

ನಹುಷೇಣಾಭಿತಪ್ತಾನಾಂ ತ್ವಂ ಲೋಕಾನಾಂ ಗತಿಃ ಪುರಾ ।
ಧ್ವಂಶಿತಶ್ಚ ಸುರೈರ್ದರ್ಪಾಲ್ಲೋಕಾರ್ಥಂ ಲೋಕಕಂಟಕಃ ॥೨೨॥

ನಹುಷನಿಂದ ಸಂತಾಪಕ್ಕೆ ಒಳಗಾಗಿದ್ದ ಲೋಕಗಳಿಗೆ ಹಿಂದೆ ನೀವೇ ಗತಿಯಾದಿರಿ. ನಹುಷನು ಲೋಕವನ್ನು ರಕ್ಷಣೆಮಾಡುವ ಉದ್ದೇಶದಿಂದ ನಿಮ್ಮಿಂದ ಲೋಕಕಂಟಕನಾದ ದೇವಲೋಕದ ಐಶ್ವರ್ಯದಿಂದ ಭ್ರಂಶಿತನಾದನು.

ಕ್ರೋಧಾತ್ ಪ್ರವೃದ್ಧರಸಾ ಭಾಸ್ಕರಸ್ಯ ನಗೋತ್ತಮಃ ।
ವಚಸ್ತವಾನತಿಕ್ರಾಮನ್ ವಿಂಧ್ಯಃಶೈಲೋ ನ ವರ್ಧತೇ ॥೨೩॥

ಪರ್ವತಶ್ರೇಷ್ಠವಾದ ವಿಂಧ್ಯಪರ್ವತವು ಸೂರ್ಯನ ಮೇಲಿನ ಕೋಪದಿಂದ ಇದ್ದಕ್ಕಿದ್ದಂತೆಯೇ ಬೆಳೆಯುತ್ತಾ ನಿಮ್ಮ ಮಾತನ್ನು ಮೀರಲಾರದೆ ಈಗ ಬೆಳೆಯುವುದನ್ನು ನಿಲ್ಲಿಸಿದೆ.

ತಮಸಾ ಚಾವೃತೇ ಲೋಕೇ ಮೃತ್ಯುನಾऽಭ್ಯರ್ದಿತಾಃ ಪ್ರಜಾಃ ।
ತ್ವಾಮೇವ ನಾಥಮಾಸಾದ್ಯ ನಿರ್ವೃತಿಂ ಪರಮಾಂ ಗತಾಃ ॥೨೪॥

ಲೋಕವೆಲ್ಲವೂ ತಮಸ್ಸಿನಿಂದ ಆವೃತವಾದಾಗ ಮೃತ್ಯುವಿನ ಭಯದಿಂದ ಪೀಡಿತರಾದ ಪ್ರಜೆಗಳು ನಿಮ್ಮನ್ನೇ ನಾಥರನ್ನಾಗಿ ಪಡೆದು ಪರಮಸಂತೋಷವನ್ನು ಹೊಂದಿದರು.

ಅಸ್ಮಾಕಂ ಭಯಭೀತಾನಾಂ ನಿತ್ಯಶೋ ಹಿ ಭವಾನ್ ಗತಿಃ ।
ತತಸ್ತಾ ತ್ವಾಂ ಪ್ರಯಾಚಾಮಃ ತ್ವಾಂ ವರಂ ವರದೋ ಹ್ಯಸಿ ॥೨೫॥

ಭಯಭೀತರಾದ ನಮಗೂ ಸಹ ನೀವೇ ಯಾವಾಗಲೂ ಗತಿಯಾಗಿದ್ದೀರಿ. ಆದ್ದರಿಂದ ಆರ್ತರಾದ ನಾವು ನಿಮ್ಮಲ್ಲಿ ವರವನ್ನು ಬೇಡುತ್ತಿದ್ದೇವೆ. ನೀವು ವರಪ್ರದರಷ್ಟೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟನವತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುಃಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ತೊಂಬತ್ತೊಂಬತ್ತನೆಯ ಅಧ್ಯಾಯ

ಅಗಸ್ತ್ಯರಿಂದ ವಿಂಧ್ಯಪರ್ವತದ ಸ್ತಂಭನ. ಅಗಸ್ತ್ಯರ ಜೊತೆಯಲ್ಲಿ ದೇವತೆಗಳಿಂದ ಸಮುದ್ರ ಗಮನ.

ಯುಧಿಷ್ಠಿರಃ

ಕಿಮರ್ಥಂ ಸಹಸಾ ವಿಂಧ್ಯಃ ಪ್ರವೃದ್ಧಃ ಕ್ರೋಧಮೂರ್ಚ್ಛಿತಃ ।
ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಮಹಾಮುನೇ ॥೧॥

ಯುಧಿಷ್ಠಿರ– ಮಹಾಮುನಿಗಳೇ, ವಿಂಧ್ಯಪರ್ವತವು ಕ್ರೋಧಮೂರ್ಛಿತವಾಗಿ ಏಕೆ ಇದ್ದಕ್ಕಿದ್ದಂತೆಯೇ ಬೆಳೆಯಲು ಪ್ರಾರಂಭಿಸಿತು ಎಂಬುದನ್ನು ನಾನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ.

ಲೋಮಶಃ

ಆದ್ರಿರಾಜಂ ಮಹಾಶೈಲಂ ಮೇರುಂ ಕನಕಪರ್ವತಮ್ ।
ಉದಯಾಸ್ತಮಯೇ ಭಾನುಃ ಪ್ರದಕ್ಷಿಣಮವರ್ತತ ।
ತಂ ತು ದೃಷ್ಟ್ವಾ ತಥಾ ವಿಂಧ್ಯಃ ಶೈಲಃ ಸೂರ್ಯಮಥಾಬ್ರವೀತ್ ॥೨॥

ಯಥಾ ಹಿ ಮೇರುರ್ಭವತಾ ನಿತ್ಯಶಃ ಪರಿಗಮ್ಯತೇ ।
ಪ್ರದಕ್ಷಿಣಂ ಚ ಕ್ರಿಯತೇ ಮಾಮೇವಂ ಕುರು ಭಾಸ್ಕರ ॥೩॥

ಲೋಮಶ– ಸೂರ್ಯನು ಉದಯಾಸ್ತಮಯ ಸಮಯದಲ್ಲಿ ಸುವರ್ಣ ಪರ್ವತವಾದ ಅದ್ರಿರಾಜನಾದ ಮಹಾಶೈಲವಾದ ಮೇರುವನ್ನು ಪ್ರದಕ್ಷಿಣೆಯನ್ನು ಮಾಡುತ್ತಿದ್ದನು. ಸೂರ್ಯನು ಹಾಗೆ ಮಾಡುತ್ತಿರುವುದನ್ನು ನೋಡಿ ವಿಂಧ್ಯಪರ್ವತವು ಸೂರ್ಯನನ್ನು ಕುರಿತು ನೀನು ಹೇಗೆ ನಿತ್ಯವೂ ಮೇರುವಿನ ಸುತ್ತಲೂ ಹೋಗಿ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡುತ್ತೀಯೋ ಹಾಗೆಯೇ, ಎಲೈ ಭಾಸ್ಕರನೇ, ನನಗೂ ಪ್ರದಕ್ಷಿಣೆಯನ್ನು ಮಾಡು ಎಂದು ಹೇಳಿದನು.

ಏವಮುಕ್ತಸ್ತತಸ್ಸೂರ್ಯಃ ಶೈಲೇಂದ್ರಂ ಪ್ರತ್ಯಭಾಷತ ॥೪॥

ನಾಹಮಾತ್ಮೇಚ್ಛಯಾ ಶೈಲಂ ಕರೋಮ್ಯೇತಂ ಪ್ರದಕ್ಷಿಣಮ್ ।
ಏಷ ಮಾರ್ಗಃ ಪ್ರದಿಷ್ಟೋ ಮೇ ಯೇನೇದಂ ನಿರ್ಮಿತಂ ಜಗತ್ ॥೫॥

ಹೀಗೆ ಹೇಳಲ್ಪಟ್ಟ ಸೂರ್ಯನು ಶೈಲರಾಜನಾದ ವಿಂಧ್ಯನನ್ನು ಕುರಿತು ನಾನು ನನ್ನ ಇಚ್ಛೆಯಿಂದ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡುತ್ತಿಲ್ಲ. ಈ ಜಗತ್ತನ್ನು ಸೃಷ್ಟಿಸಿದ ಪರಮಾತ್ಮನು ನನಗೆ ಅದನ್ನು ಮಾರ್ಗವಾಗಿ ಆದೇಶಿಸಿದ್ದಾನೆ ಎಂದು ಹೇಳಿದನು.

ಲೋಮಶಃ

ಏವಮುಕ್ತಸ್ತತಃ ಕ್ರೋಧಾತ್ ಪ್ರವೃದ್ಧಃ ಸಹಸಾऽಚಲಃ ।
ಸೂರ್ಯಾಚಂದ್ರಮಸೋರ್ಮಾರ್ಗಂ ರೋದ್ಧುಮೈಚ್ಛತ್ ಪರಂತಪ ॥೬॥

ಲೋಮಶ– ಎಲೈ ಪರಂತಪನೇ, ಹೀಗೆ ಹೇಳಲ್ಪಟ್ಟ ವಿಂಧ್ಯಪರ್ವತನು ಕ್ರೋಧದಿಂದ ಇದ್ದಕ್ಕಿದ್ದಂತೆಯೇ ಬೆಳೆಯಲು ಪ್ರಾರಂಭಿಸಿ ಸೂರ್ಯಚಂದ್ರರ ಮಾರ್ಗವನ್ನು ತಡೆಯಲು ಇಚ್ಛಿಸಿದನು.

ತತೋ ದೇವಾಃ ಸಹಿತಾಃ ಸರ್ವ ಏವ
ಸೇಂದ್ರಾಃ ಸಮಾಗಮ್ಯ ಮಹಾದ್ರಿರಾಜಮ್ ।
ನಿವಾರಯಾಮಾಸುರುಪಾಯತಸ್ತಂ
ನ ಚಾಪಿ ತೇಷಾಂ ವಚನಂ ಚಕಾರ ॥೭॥

ಆಗ ಇಂದ್ರನೇ ಮೊದಲಾದ ಎಲ್ಲ ದೇವತೆಗಳು ಜೊತೆಯಲ್ಲಿ ಬಂದು ಅದ್ರಿರಾಜನಾದ ವಿಂಧ್ಯನನ್ನು ಕುರಿತು ಉಪಾಯದ ಮಾತುಗಳಿಂದ ಅವನನ್ನು ನಿವಾರಿಸಲು ಪ್ರಯತ್ನಪಟ್ಟರು. ವಿಂಧ್ಯನಾದರೂ ಅವರ ಮಾತನ್ನು ಕೇಳಲಿಲ್ಲ.

ಅಥಾಭಜಗ್ಮುರ್ಮುನಿಮಾಶ್ರಮಸ್ಥಂ
ತಪಸ್ವಿನಂ ಧರ್ಮಭೃತಾಂ ವರಿಷ್ಠಮ್ ।
ಅಗಸ್ತ್ಯಮತ್ಯದ್ಭುತವೀರ್ಯಯುಕ್ತಂ
ತಂ ಚಾರ್ಥಮೂಚುಃ ಸಹಿತಾಃ ಸುರಾಸ್ತಮ್ ॥೮॥

ಅನಂತರ ತಮ್ಮ ಆಶ್ರಮದಲ್ಲಿ ತಪಸ್ವಿನಲ್ಲಿ ನಿರತರಾಗಿದ್ದಂತಹ ಧರ್ಮಿಷ್ಠರಲ್ಲಿ ಶ್ರೇಷ್ಠರಾದ ಅದ್ಭುತ ಸಾಮರ್ಥ್ಯವುಳ್ಳ ಅಗಸ್ತ್ಯ ಸಮೀಪಕ್ಕೆ ಬಂದು ಎಲ್ಲ ದೇವತೆಗಳೂ ಈ ವಿಷಯವನ್ನು ಹೇಳಿದರು.

ಸೂರ್ಯಾಚಂದ್ರಮಸೋರ್ಮಾರ್ಗಂ ನಕ್ಷತ್ರಾಣಾಂ ಗತಿಂ ತಥಾ ।
ಶೈಲರಾಜೋ ವೃಣೋತ್ಯೇಷ ವಿಂಧ್ಯಃ ಕ್ರೋಧವಶಾನುಗಃ ॥೯॥

ತಂ ನಿವಾರಯಿತುಂ ಶಕ್ತೋ ನಾನ್ಯಃ ಕಶ್ಚಿದ್ದ್ವಿಜೋತ್ತಮ ।
ತ್ವದೃತೇ ಹಿ ಮಹಾಭಾಗ ತಸ್ಮಾದೇತನ್ನಿವಾರಯ ॥೧೦॥

ಶೈಲರಾಜನಾದ ವಿಂಧ್ಯನು ಕ್ರೋಧಕ್ಕೆ ವಶನಾಗಿ ಸೂರ್ಯಚಂದ್ರರ ಮಾರ್ಗವನ್ನು ನಕ್ಷತ್ರಗಳ ಗಮನವನ್ನು ತಡೆಯುತ್ತಿದ್ದಾನೆ. ಎಲೈ ದ್ವಿಜೋತ್ತಮರೇ, ಮಹಾನುಭಾವರೇ, ನಿಮ್ಮನ್ನು ಬಿಟ್ಟು ವಿಂಧ್ಯನನ್ನು ತಡೆಯುವವರು ಬೇರೆ ಯಾರೂ ಇಲ್ಲ. ಆದ್ದರಿಂದ ಈ ತೊಂದರೆಯನ್ನು ನಿವಾರಿಸಿ.

ತಚ್ಛ್ರುತ್ವಾ ವಚನಂ ವಿಪ್ರಃ ಸುರಾಣಾಂ ಶೈಲಮಭ್ಯಗಾತ್ ।
ಸೋಽಭಿಗಮ್ಯಾಬ್ರವೀದ್ ವಿಂಧ್ಯಂ ಸದಾರಃ ಸಮುಪಾಶ್ಥಿತಃ ॥೧೧॥

ಮಾರ್ಗಮಿಚ್ಛಾಮ್ಯಹಂ ದತ್ತಂ ಭವತಾ ಪರ್ವತೋತ್ತಮ ।
ದಕ್ಷಿಣಾಮಭಿಗಂತಾಸ್ಮಿ ದಿಶಂ ಕಾರ್ಯೇಣ ಕೇನಚಿತ್ ॥೧೨॥

ಯಾವದಾಗಮನಂ ಮಹ್ಯಂ ತಾವತ್ ತ್ವಂ ಪ್ರತಿಪಾಲಯ ।
ನಿವೃತ್ತೇ ಮಯಿ ಶೈಲೇಂದ್ರ ತತೋ ವರ್ಧಸ್ವ ಕಾಮತಃ ॥೧೩॥

ಆ ದೇವತೆಗಳ ಮಾತುಗಳನ್ನು ಕೇಳಿದ ಬ್ರಾಹ್ಮಣರಾದ ಅಗಸ್ತ್ಯರು ವಿಂಧ್ಯ ಪರ್ವತದ ಸಮೀಪಕ್ಕೆ ಬಂದರು. ಅವರು ವಿಂಧ್ಯನ ಎದುರಿಗೆ ನಿಂತು ಅವನನ್ನು ಕುರಿತು ನಾನು ಪತ್ನಿಯ ಸಹಿತನಾಗಿ ಇಲ್ಲಿಗೆ ಬಂದಿದ್ದೇನೆ. ಎಲೈ ಪರ್ವತೋತ್ತಮನೇ, ನೀನು ನನಗೆ ಮಾರ್ಗವನ್ನು ಬಿಡಬೇಕೆಂದು ನಾನು ಬಯಸುತ್ತೇನೆ. ಯಾವುದೋ ಒಂದು ಕಾರ್ಯದ ಸಲುವಾಗಿ ನಾನು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದೇನೆ. ನಾನು ಹಿಂದಿರುಗಿ ಬರುವವರೆಗೆ ನನ್ನ ನಿರೀಕ್ಷಣೆಯನ್ನು ಮಾಡಿಕೊಂಡಿರು. ಎಲೈ ಶೈಲೇಂದ್ರನೇ, ನಾನು ಹಿಂದಿರುಗಿದ ಮೇಲೆ ನಿನ್ನ ಮನಸ್ಸಿಗೆ ಬಂದಂತೆ ನೀನು ಬೆಳೆಯಬಹುದು (ಎಂದು ಹೇಳಿದರು).

ಏವಂ ಸ ಸಮಯಂ ಕೃತ್ವಾ ವಿಂಧ್ಯೇನಾಮಿತ್ರಕರ್ಶನ ।
ಅದ್ಯಾಪಿ ದಕ್ಷಿಣಾದ್‌ದೇಶಾದ್ ವಾರುಣಿರ್ನ ನಿವರ್ತತೇ ॥೧೪॥

ಎಲೈ ಶತ್ರುಕರ್ಶನನೇ, ವಿಂಧ್ಯನ ಜೊತೆಯಲ್ಲಿ ಹೀಗೆ ಒಪ್ಪಂದವನ್ನು ಮಾಡಿಕೊಂಡು ಹೊರಟ ವರುಣಪುತ್ರರಾದ ಅಗಸ್ತ್ಯರು ಈ ದಿನವೂ ಕೂಡ ದಕ್ಷಿಣದಿಕ್ಕಿನಿಂದ ಹಿಂದಿರುಗಿಲ್ಲ.

ಏತತ್ ತೇ ಸರ್ವಮಾಖ್ಯಾತಂ ಯಥಾ ವಿಂಧ್ಯೋ ನ ವರ್ಧತೇ ।
ಅಗಸ್ತ್ಯಸ್ಯ ಪ್ರಭಾವೇಣ ಯಸ್ಮಾಂ ತ್ವಂ ಪರಿಪೃಚ್ಛಸಿ ॥೧೫॥

ಅಗಸ್ತ್ಯರ ಪ್ರಭಾವದಿಂದ ವಿಂಧ್ಯಯು ಏಕೆ ಬೆಳೆಯುತ್ತಿಲ್ಲ ಎಂಬ ನಿನ್ನ ಪ್ರಶ್ನೆಗೆ ಅನುಗುಣವಾಗಿ ನಾನು ಎಲ್ಲವನ್ನೂ ಹೇಳಿದ್ದೇನೆ.

ಕಾಲೇಯಾಸ್ತು ಯಥಾ ರಾಜನ್ ಸುರೈಃ ಸರ್ವೈರ್ನಿಷೂದಿತಾಃ ।
ಅಗಸ್ತ್ಯಾದ್ವರಮಾಸಾದ್ಯ ತನ್ಮೇ ನಿಗದತಃ ಶೃಣು ॥೧೬॥

ಎಲೈ ರಾಜನೇ, ದೇವತೆಗಳು ಅಗಸ್ತ್ಯರಿಂದ ವರವನ್ನು ಪಡೆದು ಹೇಗೆ ಎಲ್ಲಾ ಕಾಲೇಯರನ್ನು ಸಂಹಾರ ಮಾಡಿದರು ಎಂಬುದನ್ನು ಹೇಳುತ್ತೇನೆ; ಅದನ್ನೂ ಕೇಳು.

ತ್ರಿದಶಾನಾಂ ವಚಃ ಶ್ರುತ್ವಾ ಮೈತ್ರಾವರುಣಿರಬ್ರವೀತ್ ।
ಕಿಮರ್ಥಮಭಿಯಾತಾಃ ಸ್ಥ ವರಂ ಮತ್ತಃ ಕಮಿಚ್ಛಥ ॥೧೭॥

ದೇವತೆಗಳ ಮಾತನ್ನು ಕೇಳಿ ಮೈತ್ರಾವರುಣಿಗಳಾದ ಅಗಸ್ತ್ಯರು ಅವರನ್ನು ಕುರಿತು ಏತಕ್ಕೆ ಬಂದಿದ್ದೀರಿ? ನನ್ನಿಂದ ಯಾವ ವರವನ್ನು ಬಯಸುತ್ತೀರಿ ಎಂದು ಕೇಳಿದರು.

ಏವಮುಕ್ತಸ್ತತಸ್ತೇನ ದೇವತಾ ಮುನಿಮಬ್ರುವನ್ ।
ಸರ್ವೇ ಪ್ರಾಂಜಲಯೋ ಭೂತ್ವಾ ಪುರಂದರಪುರೋಗಮಾಃ ॥೧೮॥

ಏವಂ ತ್ವಯೇಚ್ಛಾಮ ಕೃತಂ ಹಿ ಕಾರ್ಯಂ
ಮಹಾರ್ಣವಂ ಪೀಯಮಾನಂ ಮಹಾತ್ಮನ್ ।
ತತೋ ವಧಿಷ್ಯಾಮ ಸಹಾನುಬಂಧಾನ್
ಕಾಲೇಯದುಷ್ಟಾನ್ ಸುರವಿದ್ವಿಷ್ಟಾನ್ ॥೧೯॥

ಹೀಗೆ ಅಗಸ್ತ್ಯರಿಂದ ಕೇಳಲ್ಪಟ್ಟ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಕೈಗಳನ್ನು ಮುಗಿದು ಅಗಸ್ತ್ಯಋಷಿಗಳನ್ನು ಕುರಿತು– ಎಲೈ ಮಹಾತ್ಮರೇ, ನೀವು ಮಹಾಸಮುದ್ರವನ್ನು

ಪಾನಮಾಡಬೇಕೆಂದು ನಾವು ನಿಮ್ಮಿಂದ ಬಯಸುವ ಕಾರ್ಯ. ಅನಂತರ ನಾವು ಸುರದ್ವೇಷಿಗಳಾದ ದುಷ್ಟರಾದ ಕಾಲೇಯರನ್ನು ಅವರ ಪರಿವಾರ ಸಹಿತವಾಗಿ ಸಂಹರಿಸುವೆವು ಎಂದು ಹೇಳಿದರು.

ತ್ರಿದಶಾನಾಂ ವಚಃಶ್ರುತ್ವಾ ತಥೇತಿ ಮುನಿರಬ್ರವೀತ್ ।
ಕರಿಷ್ಯೇ ಭವತಾಂ ಕಾಮಂ ಲೋಕಾನಾಂ ಚ ಹಿತಂ ಮಹತ್ ॥೨೦॥

ದೇವತೆಗಳ ಮಾತನ್ನು ಕೇಳಿ ಅಗಸ್ತ್ಯಮುನಿಗಳು ನಿಮ್ಮ ಆಸೆಯನ್ನು ನಾನು ನೆರವೇರಿಸುವೆನು. ಅದು ಲೋಕಕ್ಕೆ ಬಹಳ ಹಿತವೂ ಆಗಿದೆಯಷ್ಟೆ? ಆದ್ದರಿಂದ ಹಾಗೆಯೇ ಆಗಲಿ ಎಂದು ಹೇಳಿದರು.

ಏವಮುಕ್ತ್ವಾ ತತೋಽಗಚ್ಛತ್ ಸಮುದ್ರಂ ಸರಿತಾಂ ಪತಿಮ್ ।
ಋಷಿಭಿಶ್ಚ ತಪಸ್ಸಿದ್ಧೈಃ ಸಾರ್ಧಂ ದೇವೈಶ್ಚ ಸುವ್ರತ ॥೨೧॥

ಎಲೈ ಸುವ್ರತನೇ, ಹೀಗೆ ಹೇಳಿ ತಪಸ್ಸಿದ್ಧರಾದ ಋಷಿಗಳಿಂದಲೂ, ದೇವತೆಗಳಿಂದಲೂ ಕೂಡಿಕೊಂಡು ಅಗಸ್ತ್ಯರು ಸರಿತ್ಪತಿಯಾದ ಸಮುದ್ರನ ಬಳಿಗೆ ಹೋದರು.

ಮನುಷ್ಯೋರಗಗಂಧರ್ವಯಕ್ಷಕಿಂಪುರುಷಾಸ್ತಥಾ ।
ಅನುಜಗ್ಮುರ್ಮಹಾತ್ಮಾನಂ ದ್ರಷ್ಟುಕಾಮಸ್ತದದ್ಭುತಮ್ ॥೨೨॥

ಆ ಅದ್ಭುತವಾದ ಕಾರ್ಯವನ್ನು ನೋಡಲು ಬಯಸಿ ಮನುಷ್ಯರು, ಉರಗಗಳು, ಗಂಧರ್ವರು, ಯಕ್ಷರು ಮತ್ತು ಕಿಂಪುರುಷರೂ ಸಹ ಮಹಾನುಭಾವರಾದ ಅಗಸ್ತ್ಯರನ್ನು ಹಿಂಬಾಲಿಸಿದರು.

ತತೋಽಭ್ಯಗಚ್ಛನ್ ಸಹಿತಾಃ ಸಮುದ್ರಂ ಭೀಮನಿಸ್ವನಮ್ ।
ನೃತ್ಯಂತಮಿವ ಚೋರ್ಮಿಭಿರ್ವಲ್ಗಂತಮಿವ ವಾಯುನಾ ॥೨೩॥

ಹಸಂತಮಿವ ಫೇನೌಘೈಃ ಸ್ಖಲಂತಂ ಮಂದರೇಷ್ವಥ ।
ನಾನಾಗ್ರಾಹಸಮಾಕೀರ್ಣಂ ನಾನಾದ್ವಿಜಗಣಾಯುತಮ್ ॥೨೪॥

ಅನಂತರ ಎಲ್ಲರೂ ಒಟ್ಟಾಗಿ ಅಲೆಗಳಿಂದ ನರ್ತನವನ್ನು ಮಾಡುವಂತೆ ತೋರುವ, ವಾಯುವಿನಿಂದ ಮಾತನಾಡುವಂತೆ ತೋರುವ, ನೊರೆಗಳ ಸಮೂಹದಿಂದ ನಗುವಂತೆ ತೋರುವ, ಮಂದರಪರ್ವತದ ತಪ್ಪಲಿನಲ್ಲಿ ಎಡವುವಂತೆ ತೋರುವ, ಭಯಂಕರವಾದ ಘೋಷವುಳ್ಳ ಅನೇಕ ಜಲಚರಪ್ರಾಣಿಗಳಿಂದ ನಿಬಿಡವಾದ, ಅನೇಕ ಪಕ್ಷಿಗಳ ಗಣದಿಂದ ಕೂಡಿದ, ಸಮುದ್ರವನ್ನು ಸಮೀಪಿಸಿದರು.

ಅಗಸ್ತ್ಯಸಹಿತಾ ದೇವಾಃ ಸಗಂಧರ್ವಮಹೋರಗಾಃ ।
ಋಷಯಶ್ಚ ಮಹಾಭಾಗಾಃ ಸಮಾನೇದುರ್ಮಹೋದಧಿಮ್ ॥೨೫॥

ಅಗಸ್ತ್ಯಸಹಿತರಾದ ದೇವತೆಗಳು, ಗಂಧರ್ವರು, ಮಹೋರಗಗಳು, ಮತ್ತು ಮಹಾನುಭಾವರಾದ ಋಷಿಗಳು ಮಹಾಸಮುದ್ರವನ್ನು ತಲುಪಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಪಂಚಾಶೋದ್ಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರನೆಯ ಅಧ್ಯಾಯ

ಅಗಸ್ತ್ಯರಿಂದ ಸಮುದ್ರತೋಷಣ. ದೇವತೆಗಳಿಂದ ಕಾಲೇಯರ ಹನನ. ಸಮುದ್ರ ಜಲವು ಅಗಸ್ತ್ಯರಿಂದ ಜೀರ್ಣವಾಗಲು ದೇವತೆಗಳಿಂದ ಬ್ರಹ್ಮಸಮೀಪ ಗಮನ.

ಲೋಮಶಃ

ಸಮುದ್ರಂ ಸ ಸಮಾಸಾದ್ಯ ವಾರುಣೇರ್ಭಗವಾನೃಷಿಃ ।
ಉವಾಚ ಸಹಿತಾನ್ ದೇವಾನ್ ಋಷೀಂಶ್ಚೈವ ಸಮಾಗತಾನ್ ॥೧॥

ಏಷ ಲೋಕಹಿತಾರ್ಥಂ ವೈ ಪಿಬಾಮಿ ವರುಣಾಲಯಮ್ ।
ಭವದ್ಭಿರ್ಯದನುಷ್ಠೇಯಂ ತಚ್ಚೀಘ್ರಂ ಸಂವಿಧೀಯತಾಮ್ ॥೨॥

ಲೋಮಶ– ಪೂಜ್ಯರಾದ ವಾರುಣಿಗಳಾದ ಅಗಸ್ತ್ಯ ಋಷಿಗಳು ಸಮುದ್ರವನ್ನು ತಲುಪಿ ಅಲ್ಲಿಗೆ ಬಂದ ದೇವತೆಗಳನ್ನು ಮತ್ತು ಋಷಿಗಳನ್ನು ಕುರಿತು ಲೋಕಹಿತಕ್ಕಾಗಿ

ನಾನು ಸಮುದ್ರದ ನೀರನ್ನು ಪಾನಮಾಡುತ್ತೇನೆ. ನೀವು ಏನು ಮಾಡಬೇಕೋ ಅದನ್ನು ಶೀಘ್ರವಾಗಿ ಮಾಡಿ ಎಂದು ಹೇಳಿದರು.

ಏತಾವದುಕ್ತ್ವಾ ವಚನಂ ಮೈತ್ರಾವರುಣಿರಚ್ಯುತಃ ।
ಸಮುದ್ರಮಪಿಬತ್ ಕ್ರುದ್ಧಃ ಸರ್ವಲೋಕಸ್ಯ ಪಶ್ಯತಃ ॥೩॥

ಮೈತ್ರಾವರುಣಿಗಳಾದ ತಮ್ಮ ಗುಣಗಳಿಂದ ಚ್ಯುತರಾಗದ ಅಗಸ್ತ್ಯರು ಇಷ್ಟು ಮಾತನ್ನು ಹೇಳಿ ಎಲ್ಲರೂ ನೋಡುತ್ತಿರುವಂತೆಯೇ ಕ್ರುದ್ಧರಾಗಿ ಸಮುದ್ರ ಜಲವನ್ನು ಪಾನಮಾಡಿದರು.

ಪೀಯಮಾನಂ ಸಮುದ್ರಂ ಚ ದೃಷ್ಟ್ವಾ ಸೇಂದ್ರಾಃ ಸಹಾಮರಾಃ ।
ವಿಸ್ಮಯಂ ಪರಮಂ ಜಗ್ಮುಃ ಸ್ತುತಿಭಿಶ್ಚಾಪ್ಯಪೂಜಯನ್ ॥೪॥

ಇಂದ್ರನೇ ಮೊದಲಾದ ದೇವತೆಗಳು ಅಗಸ್ತ್ಯರು ಸಮುದ್ರಜಲವನ್ನು ಪಾನ ಮಾಡುವುದನ್ನು ನೋಡಿ ವಿಸ್ಮಿತರಾದರು ಮತ್ತು ಸ್ತೋತ್ರಗಳಿಂದ ಅವರನ್ನು ಪೂಜಿಸಿದರು.

ತ್ವಂ ನಸ್ತ್ರಾತಾ ವಿಧಾತಾ ಚ ಲೋಕಾನಾಂ ಲೋಕಭಾವನ ।
ತತ್ತಸ್ಮಾದಾತ್ ಸಮುಚ್ಛೇದಂ ನ ಗಚ್ಛೇತ್ ಸಾಮರಂ ಜಗತ್ ॥೫॥

ನೀವೇ ನಮ್ಮ ಪಾಲಕರು. ಎಲೈ ಲೋಕಪಾವನರೇ, ನೀವೇ ಲೋಕಗಳನ್ನು ಸರಿಯಾದ ಸ್ಥಿತಿಯಲ್ಲಿ ಇಡುವವರು. ನಿಮ್ಮ ಅನುಗ್ರಹದಿಂದಲೇ ದೇವತೆಗಳಿಂದ ಕೂಡಿದ ಜಗತ್ತು ವಿನಾಶವನ್ನು ಹೊಂದುವುದಿಲ್ಲ (ಎಂದು ಸ್ತೋತ್ರಮಾಡಿದರು).

ಸ ಪೂಜ್ಯಮಾನಸ್ತ್ರಿದಶೈರ್ಮಹಾತ್ಮಾ
ಗಂಧರ್ವತೂರ್ಯೇಷು ನದತ್ಸು ಸರ್ವಶಃ ।
ದಿವ್ಯೈಶ್ಚ ಪುಷ್ಪೈರವಕೀರ್ಯಮಾಣೋ
ಮಹಾರ್ಣವಂ ನಿಸ್ಸಲಿಲಂ ಚಕಾರ ॥೬॥

ಮಹಾತ್ಮರಾದ ಅಗಸ್ತ್ಯರು ದೇವತೆಗಳು ಹೀಗೆ ಅವರನ್ನು ಪೂಜಿಸುತ್ತಿರಲು ಗಂಧರ್ವ ವಾದ್ಯಗಳು ಎಲ್ಲಕಡೆಯಲ್ಲಿಯೂ ಮೊಳಗುತ್ತಿರಲು ದಿವ್ಯವಾದ ಪುಷ್ಪವೃಷ್ಟಿಯು ಅವರ ಮೇಲೆ ಬೀಳುತ್ತಿರಲು ಮಹಾಸಮುದ್ರದಲ್ಲಿ ಒಂದು ಹನಿಯೂ ಜಲವಿಲ್ಲದಂತೆ ಮಾಡಿದರು.

ದೃಷ್ಟ್ವಾ ಕೃತಂ ನಿಸ್ಸಲಿಲಂ ಮಹಾರ್ಣವಂ
ಸುರಾಃ ಸಮಸ್ತಾಃ ಪರಮಪ್ರಹೃಷ್ಟಾಃ ।
ಪ್ರಗೃಹ್ಯ ದಿವ್ಯಾನಿ ವರಾಯುಧಾನಿ
ತಾನ್ ದಾನವಾನ್ ಜಘ್ನುರದೀನಸತ್ತ್ವಾಃ ॥೭॥

ಮಹಾರ್ಣವವು ನಿರ್ಜಲವಾಗಿ ಮಾಡಲ್ಪಟ್ಟದ್ದನ್ನು ನೋಡಿದ ಎಲ್ಲಾ ದೇವತೆಗಳು ಪರಮ ಸಂತೋಷದಿಂದ ಕೂಡಿದವರಾಗಿ ದಿವ್ಯವಾದ ಮತ್ತು ಶ್ರೇಷ್ಠವಾದ ಆಯುಧಗಳನ್ನು ಹಿಡಿದು ಉತ್ಸಾಹವುಳ್ಳ ಮನಸ್ಸುಳ್ಳವರಾಗಿ ಆ ಕಾಲೇಯದಾನವರ ಮೇಲೆ ಪ್ರಹಾರ ಮಾಡಿದರು.

ತೇ ವಧ್ಯಮಾನಾಸ್ತ್ರಿದಶೈರ್ಮಹಾತ್ಮಭಿಃ
ಮಹಾಬಲೈರ್ವೇಗಯುತೈರ್ನದದ್ಭಿಃ ।
ನ ಸೇಹಿರೇ ವೇಗವತಾಂ ಮಹಾತ್ಮನಾಂ
ವೇಗಂ ತದಾ ಧಾರಯಿತುಂ ದಿವೌಕಸಾಮ್ ॥೮॥

ಮಹಾತ್ಮರೂ, ಮಹಾಬಲವುಳ್ಳವರೂ, ವೇಗವುಳ್ಳವರೂ ಆದ ದೇವತೆಗಳು ಗರ್ಜಿಸುತ್ತಾ ದಾನವರ ಮೇಲೆ ಪ್ರಹಾರವನ್ನು ಮಾಡುತ್ತಿರಲು ಆಗ ಕಾಲೇಯರು ಮಹಾತ್ಮರಾದ ವೇಗವುಳ್ಳ ದೇವತೆಗಳ ವೇಗವನ್ನು ಎದುರಿಸಲು ಸಾಧ್ಯವಾಗಲಿಲ್ಲ.

ತೇ ವಧ್ಯಮಾನಾಸ್ತ್ರಿದಶೈರ್ದಾನವಾ ಭೀಮನಿಸ್ವನಾಃ ।
ಚಕ್ರುಃ ಸುತುಮುಲಂ ಯುದ್ಧಂ ಮುಹೂರ್ತಮಿವ ಭಾರತ ॥೯॥

ಎಲೈ ಭಾರತನೇ, ದೇವತೆಗಳ ಪ್ರಹಾರಕ್ಕೆ ಒಳಗಾದ ದಾನವರು ಭಯಂಕರವಾದ ಗರ್ಜನೆಯನ್ನು ಮಾಡುತ್ತಾ ಒಂದು ಮುಹೂರ್ತದ ಕಾಲ ತೀವ್ರವಾದ ಯುದ್ಧವನ್ನು ಮಾಡಿದರು.

ತೇ ಪೂರ್ವಂ ತಪಸಾ ದಗ್ಧಾ ಮುನಿಭಿರ್ಭಾವಿತಾತ್ಮಭಿಃ ।
ಯತಮಾನಾಃ ಪರಂ ಶಕ್ಯಾ ತ್ರಿದಶೈರ್ವಿನಿಷೂದಿತಾಃ ॥೧೦॥

ಅವರು ಮೊದಲೇ ಭಾವಿತಾತ್ಮರಾದ ಋಷಿಗಳ ತಪಸ್ಸಿನಿಂದ ದಗ್ಧರಾಗಿದ್ದುದರಿಂದ ಎಷ್ಟೇ ಶಕ್ತಿಯಿಂದ ಪ್ರಯತ್ನಪಟ್ಟರೂ ದೇವತೆಗಳಿಂದ ಹತರಾದರು.

ತೇ ಹೇಮನಿಷ್ಕಾಭರಣಾಃ ಕುಂಡಲಾಂಗದಧಾರಿಣಃ ।
ನಿಹತಾ ಬಹ್ವಶೋಭಂತ ಪುಷ್ಪಿತಾ ಇವ ಕಿಂಶುಕಾಃ ॥೧೧॥

ಹೇಮನಿಷ್ಕಾಭರಣಗಳನ್ನು ಧರಿಸಿ ಕುಂಡಲ ಮತ್ತು ಅಂಗದವನ್ನು ಧರಿಸಿದ ಅವರು ಹತರಾಗಿ ಅರಳಿದ ಕಿಂಶುಕ ವೃಕ್ಷಗಳಂತೆ ಬಹುವಾಗಿ ಶೋಭಿಸಿದರು.

ಹತಶೇಷಾಸ್ತತಃ ಕೇಚಿತ್ ಕಾಲೇಯಾ ಮನುಜೋತ್ತಮ ।
ವಿದಾರ್ಯ ವಸುಧಾಂ ದೇವೀಂ ಪಾತಾಳತಳಮಾಶ್ರಿತಾಃ ॥೧೨॥

ಎಲೈ ಮನುಜೋತ್ತಮನೇ, ಅಳಿದುಳಿದ ಕೆಲವು ಕಾಲೇಯರು ಆಗ ಭೂಮಿಯನ್ನು ಸೀಳಿಕೊಂಡು ಪಾತಾಳತಳಕ್ಕೆ ಹೋಗಿ ನೆಲೆಸಿದರು.

ನಿಹತಾನ್ ದಾನವಾನ್ ದೃಷ್ಟ್ವಾ ತ್ರಿದಶಾ ಮುನಿಪುಂಗವಮ್ ।
ತುಷ್ಟುವುರ್ವಿವಿಧೈರ್ವಾಕ್ಯೈರಿದಂ ವಚನಮಬ್ರುವನ್ ॥೧೩॥

ದಾನವರು ನಿಹತರಾದುದನ್ನು ನೋಡಿ ದೇವತೆಗಳು ಮುನಿಶ್ರೇಷ್ಠರಾದ ಅಗಸ್ತ್ಯರನ್ನು ಅನೇಕ ವಾಕ್ಯಗಳಿಂದ ಸ್ತೋತ್ರವನ್ನು ಮಾಡಿ ಹೀಗೆ ಮಾತನಾಡಿದರು;

ತ್ವತ್ತಸ್ತಾದಾನ್ಮುನಿಶ್ರೇಷ್ಠ ಲೋಕೈಃ ಪ್ರಾಪ್ತಂ ಮಹತ್ ಸುಖಮ್ ।
ತತ್ತೇಜಸಾ ಚ ನಿಹತಾಃ ಕಾಲೇಯಾಃ ಕ್ರೂರವಿಕ್ರಮಾಃ ॥೧೪॥

ಪೂರಯಸ್ವ ಮಹಾಭಾಗ ಸಮುದ್ರಂ ಲೋಕಭಾವನ ।
ಯತ್ ತ್ವಯಾ ಸಲಿಲಂ ಪೀತಂ ತದಸ್ಮಿನ್ ಪುನರುತ್ಸೃಜ ॥೧೫॥

ಎಲೈ ಮುನಿಶ್ರೇಷ್ಠರೇ, ನಿಮ್ಮ ಅನುಗ್ರಹದಿಂದ ಲೋಕಗಳಿಗೆ ಬಹಳ ಸುಖವುಂಟಾಯಿತು. ಕ್ರೂರಪರಾಕ್ರಮಿಗಳಾದ ಕಾಲೇಯರು ನಿಮ್ಮ ತೇಜಸ್ಸಿನಿಂದಲೇ

ಹತರಾದರು. ಎಲೈ ಲೋಕಭಾವನರಾದ ಮಹಾನುಭಾವರೇ, ನೀವು ಪಾನ ಮಾಡಿದ ಜಲವನ್ನು ಈ ಸಮುದ್ರಕ್ಕೆ ಪುನಃ ವಿಸರ್ಜಿಸಿ, ಸಮುದ್ರವನ್ನು ಪೂರ್ಣವನ್ನು ಮಾಡಿ.

ಏವಮುಕ್ತಃ ಪ್ರತ್ಯುವಾಚ ಭಗವಾನ್ ಮುನಿಪುಂಗವಃ ।
ತಾಂಸ್ತದಾ ಸಹಿತಾನ್ ದೇವಾನ್ ಅಗಸ್ತ್ಯಃ ಸಪುರಂದರಾನ್ ॥೧೬॥

ಜೀರ್ಣಂ ತದ್ಧಿ ಮಯಾ ತೋಯಮುಪಾಯೋಽನ್ಯಃ ಪ್ರಚಿಂತ್ಯತಾಮ್।
ಪೂರಣಾರ್ಥಂ ಸಮುದ್ರಸ್ಯ ಭವದ್ಭಿರ್ಯತ್ನಮಾಸ್ಥಿತೈಃ ॥೧೭॥

ಹೀಗೆ ಹೇಳಲ್ಪಟ್ಟ ಪೂಜ್ಯರಾದ ಮುನಿಶ್ರೇಷ್ಠರಾದ ಅಗಸ್ತ್ಯರು ಇಂದ್ರನೇ ಮೊದಲಾದ ನೆರೆದ ಎಲ್ಲಾ ದೇವತೆಗಳನ್ನು ಕುರಿತು ಆಗ ನಾನು ಪಾನಮಾಡಿದ ಆ ಜಲವು ಜೀರ್ಣವಾಗಿದೆ. ಸಮುದ್ರಕ್ಕೆ ನೀರನ್ನು ತುಂಬಲು ಯತ್ನವನ್ನು ವಹಿಸಿದ ನೀವು ಬೇರೆ ಉಪಾಯವನ್ನು ಚಿಂತಿಸಬೇಕು ಎಂದು ಹೇಳಿದರು.

ಏತಚ್ಛ್ರುತ್ವಾ ಚ ವಚನಂ ಮಹರ್ಷೇರ್ಭಾವಿತಾತ್ಮನಃ ।
ವಿಷ್ಣುಶ್ಚ ವಿಷ್ಣ್ವಾಶ್ಚ ಬಭೂವುಃ ಸಹಿತಾಃ ಸುರಾಃ ॥೧೮॥

ಪರಿಶುದ್ಧ ಮಾತುಳ್ಳ ಮಹರ್ಷಿಗಳ ಈ ಮಾತನ್ನು ಕೇಳಿ ದೇವತೆಗಳು ವಿಷ್ಣುತರೂ, ವಿಷ್ಣ್ವರೂ ಆದರು.

ಪರಸ್ಪರಮನುಜ್ಞಾಪ್ಯ ಪ್ರಣಮ್ಯ ಮುನಿಪುಂಗವಮ್ ।
ಪ್ರಜಾಃ ಸರ್ವಾ ಮಹಾರಾಜ ವಿಪ್ರಜಗ್ಮುರ್ಯಥಾಗತಮ್ ॥೧೯॥

ಎಲೈ ಮಹಾರಾಜನೇ, ಎಲ್ಲಾ ಪ್ರಜೆಗಳು ಪರಸ್ಪರವಾಗಿ ಅನುಮತಿಯನ್ನು ಪಡೆದು ಮುನಿಪುಂಗವರಾದ ಅಗಸ್ತ್ಯರಿಗೆ ನಮಸ್ಕಾರವನ್ನು ಮಾಡಿ ತಾವು ಬಂದ ದಾರಿಯಲ್ಲಿಯೇ ಹಿಂದಿರುಗಿದರು.

ತ್ರಿದಶಾ ವಿಷ್ಣುನಾ ಸಾರ್ಧಮ್ ಉಪಜಗ್ಮುಃ ಪಿತಾಮಹಮ್ ।
ಪೂರಣಾರ್ಥಂ ಸಮುದ್ರಸ್ಯ ಮಂತ್ರಯಿತ್ವಾ ಪುನಃ ಪುನಃ ॥೨೦॥

ದೇವತೆಗಳು ಸಮುದ್ರಪೂರಣವನ್ನು ಕುರಿತು ಮತ್ತೆಮತ್ತೆ ಮಂತ್ರಾಲೋಚನೆಯನ್ನು ಮಾಡಿ ವಿಷ್ಣುವಿನ ಜೊತೆಯಲ್ಲಿ ಬ್ರಹ್ಮದೇವರನ್ನು ಸಮೀಪಿಸಿದರು.

ತೇ ಧಾತಾರಮುಪಾಗಮ್ಯ ತ್ರಿದಶಾಃ ಸಹ ವಿಷ್ಣುನಾ ।
ಊಚುಃ ಪ್ರಾಂಜಲಯಃ ಸರ್ವೇ ಸಾಗರಸ್ಯಾಭಿಪೂರಣಮ್ ॥೨೧॥

ಆ ದೇವತೆಗಳು ವಿಷ್ಣುವಿನ ಜೊತೆಯಲ್ಲಿ ಬ್ರಹ್ಮದೇವರನ್ನು ಸಮೀಪಿಸಿ ಎಲ್ಲರೂ ಕೈಗಳನ್ನು ಜೋಡಿಸಿ ಸಾಗರವನ್ನು ಪೂರ್ಣಮಾಡುವಂತೆ ಕೇಳಿಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಟ್‌ಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಒಂದನೆಯ ಅಧ್ಯಾಯ

ಬ್ರಹ್ಮದೇವರಿಂದ ದೇವತೆಗಳಿಗೆ ಆಶ್ವಾಸನೆ. ಸಗರ ಕಥೆ.
ಅರವತ್ತುಸಾವಿರ ಪುತ್ರರ ಜನನ.

ಲೋಮಶಃ

ತಾನುವಾಚ ಸಮೇತಾಂಸ್ತು ಬ್ರಹ್ಮಾ ಲೋಕಪಿತಾಮಹಃ ।
ನಿರ್ಹ್ರಾದಿನ್ಯಾ ಗಿರಾ ರಾಜನ್ ದೇವಾನಾಶ್ವಾಸಯಂಸ್ತದಾ ॥೧॥

ಗಚ್ಛಧ್ವಂ ವಿಬುಧಾಃ ಸರ್ವೇ ಯಥಾಕಾಮಂ ಯಥೇಪ್ಸಿತಮ್ ।
ಮಹತಾ ಕಾಲಯೋಗೇನ ಪ್ರಕೃತಿಂ ಯಾಸ್ಯತೇಽರ್ಣವಃ ॥೨॥

ಜ್ಞಾತೀನ್ ವೈ ಕಾರಣಂ ಕೃತ್ವಾ ಮಹಾರಾಜೋ ಭಗೀರಥಃ ।
ಪೂರಯಿಷ್ಯತಿ ತೋಯೌಘೈಃ ಸಮುದ್ರಂ ನಿಧಿಮಂಭಸಾಮ್ ॥೩॥

ಲೋಮಶ– ಎಲೈ ರಾಜನೇ, ಒಟ್ಟಿಗೆ ಬಂದ ದೇವತೆಗಳನ್ನು ಕುರಿತು ಬ್ರಹ್ಮದೇವರು ತಮ್ಮ ಗಂಭೀರವಾದ ವಾಣಿಯಿಂದ– ಎಲೈ ದೇವತೆಗಳೇ, ನೀವೆಲ್ಲರೂ ನಿಮಗೆ ಇಷ್ಟಬಂದಂತೆ ಹೊರಟುಹೋಗಿ. ಬಹಳ ಕಾಲದ ಮೇಲೆ ಸಮುದ್ರವು ತನ್ನ ಮೊದಲಿನ ಸ್ಥಿತಿಯನ್ನು ಪಡೆಯುವುದು. ಭಗೀರಥ ಮಹಾರಾಜನು ತನ್ನ ಬಂಧುಗಳನ್ನು ನಿಮಿತ

ಮಾಡಿಕೊಂಡು ಜಲನಿಧಿಯಾದ ಸಮುದ್ರವನ್ನು ಜಲರಾಶಿಗಳಿಂದ ತುಂಬುವನು ಎಂದು ಆಶ್ವಾಸನೆಯನ್ನು ನೀಡಿದರು.

ಯುಧಿಷ್ಠಿರಃ

ಕಥಂ ವೈ ಜ್ಞಾತಯೋ ಬ್ರಹ್ಮನ್ ಕಾರಣಂ ಚಾಭವನ್ ಮುನೇ ।
ಕಥಂ ಸಮುದ್ರಃ ಪೂರ್ಣಶ್ಚ ಭಗೀರಥಪರಿಶ್ರಮಾತ್ ॥೪॥

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ತಪೋಧನ ।
ಕಥ್ಯಮಾನಂ ತ್ವಯಾ ವಿಪ್ರ ರಾಜ್ಞಾಂ ಚರಿತಮುತ್ತಮಮ್ ॥೫॥

ಯುಧಿಷ್ಠಿರ– ಬ್ರಾಹ್ಮಣರೇ, ಋಷಿಗಳೇ, ದಾಯಾದಿಗಳು ಹೇಗೆ ಕಾರಣರಾದರು? ಭಗೀರಥನ ಪ್ರಯತ್ನದಿಂದ ಸಮುದ್ರವು ಹೇಗೆ ತುಂಬಿತು? ತಪೋಧನರೇ, ನೀವು ಹೇಳುವ ರಾಜರ ಶ್ರೇಷ್ಠವಾದ ಚರಿತ್ರೆಯನ್ನು ನಾನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತಸ್ತು ವಿಪ್ರೇಂದ್ರೋ ಧರ್ಮರಾಜೇನ ಧೀಮತಾ ।
ಕಥಯಾಮಾಸ ಮಾಹಾತ್ಮ್ಯಂ ಸಗರಸ್ಯ ಮಹಾತ್ಮನಃ ॥೬॥

ವೈಶಂಪಾಯನ– ಮೇಧಾವಿಯಾದ ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಬ್ರಾಹ್ಮಣಶ್ರೇಷ್ಠರಾದ ಲೋಮಶರು ಮಹಾತ್ಮನಾದ ಸಗರನ ಮಹಾತ್ಮ್ಯವನ್ನು ವರ್ಣಿಸಿದರು.

ಲೋಮಶಃ

ಇಕ್ಷ್ವಾಕೂಣಾಂ ಕುಲೇ ಜಾತಃ ಸಗರೋ ನಾಮ ಪಾರ್ಥಿವಃ ।
ರೂಪಸತ್ತ್ವಬಲೋಪೇತಃ ಸ ಚಾಪುತ್ರಃ ಪ್ರತಾಪವಾನ್ ॥೭॥

ಲೋಮಶ– ಇಕ್ಷ್ವಾಕುವಿನ ವಂಶದಲ್ಲಿ ಸಗರನೆಂಬ ರಾಜನು ಜನಿಸಿದನು. ಅವನು ರೂಪಸತ್ತ್ವಬಲೋಪೇತನಾಗಿ ಪ್ರತಾಪಶಾಲಿಯಾಗಿದ್ದರೂ ಮಕ್ಕಳನ್ನು ಪಡೆದಿರಲಿಲ್ಲ.

ಸ ಹೈಹಯಾನ್ ಸಮುತ್ಸಾದ್ಯ ತಾಲಜಂಘಾಂಶ್ಚ ಭಾರತ ।
ವಶೇ ಕೃತ್ವಾ ತು ರಾಜ್ಞೋಽನ್ಯಾನ್ ಸ್ವರಾಜ್ಯಮನುಶಿಷ್ಟವಾನ್ ॥೮॥

ಎಲೈ ಭಾರತನೇ, ಅವನು ಹೈಹಯರನ್ನು, ತಾಳಜಂಘರನ್ನು ಸಂಹರಿಸಿ ಉಳಿದ ರಾಜರನ್ನು ತನ್ನ ವಶದಲ್ಲಿ ಇಟ್ಟುಕೊಂಡು ತನ್ನ ರಾಜ್ಯವನ್ನು ಆಳಿದನು.

ತಸ್ಯ ಭಾರ್ಯೇ ಹ್ಯಭವತಾಂ ರೂಪಯೌವನದರ್ಪಿತೇ ।
ವೈದರ್ಭೀ ಭರತಶ್ರೇಷ್ಠ ಶೈಬ್ಯಾ ಚ ಕುರುನಂದನ ॥೯॥

ಎಲೈ ಕುರುನಂದನನೇ, ಎಲೈ ಭರತಶ್ರೇಷ್ಠನೇ, ಅವನಿಗೆ ರೂಪಯೌವನ ದರ್ಪವನ್ನು ಹೊಂದಿದ ವಿದರ್ಭರಾಜಕುಮಾರಿ ಮತ್ತು ಶಿಬಿಯ ವಂಶದ ರಾಜಕುಮಾರಿ ಹೀಗೆ ಇಬ್ಬರು ಪತ್ನಿಯರಿದ್ದರು.

ಸ ಪುತ್ರಕಾಮೋ ನೃಪತಿಃ ತತಾಪ ಸುಮಹತ್ ತಪಃ ।
ಪತ್ನೀಭ್ಯಾಂ ಸಹ ರಾಜೇಂದ್ರ ಕೈಲಾಸಂ ಗಿರಿಮಾಸ್ಥಿತಃ ॥೧೦॥

ಎಲೈ ರಾಜೇಂದ್ರನೇ, ಪುತ್ರಕಾಮನಾದ ಆ ರಾಜನು ತನ್ನ ಪತ್ನಿಯರ ಜೊತೆಯಲ್ಲಿ ಕೈಲಾಸ ಪರ್ವತಕ್ಕೆ ಹೋಗಿ ದೊಡ್ಡ ತಪಸ್ಸನ್ನು ಆಚರಿಸಿದನು.

ಸ ತಪ್ಯಮಾನಃ ಸುಮಹತ್‌ತಪೋಯೋಗಸಮನ್ವಿತಃ ।
ಆರಾಧಯನ್ಮಹಾತ್ಮಾನಂ ಶರ್ವಂ ತ್ರಿಭುವನೇಶ್ವರಮ್ ॥೧೧॥

ಶಂಕರಂ ಭವಮೀಶಾನಂ ಶೂಲಪಾಣಿಂ ಪಿನಾಕಿನಮ್ ।
ತ್ರ್ಯಂಬಕಂ ಚ ಶಿವಂ ಶ್ರೇಷ್ಠಂ ಬಹುರೂಪಮುಮಾಪತಿಮ್ ॥೧೨॥

ಅವನು ತಪೋಯೋಗಸಮನ್ವಿತನಾಗಿ ದೊಡ್ಡ ತಪಸ್ಸನ್ನು ಮಾಡುತ್ತಾ ಮಹಾತ್ಮನೂ, ಶರ್ವನೂ, ತ್ರಿಭುವನೇಶ್ವರನೂ, ಶಂಕರನೂ, ಭವನೂ, ಈಶಾನನೂ, ಶೂಲಪಾಣಿಯೂ, ಪಿನಾಕಧಾರಿಯೂ, ತ್ರಿಲೋಚನನೂ, ಶಿವನೂ, ಶ್ರೇಷ್ಠನೂ, ಬಹುರೂಪನೂ ಆದ ಉಮಾಪತಿಯನ್ನು ಆರಾಧಿಸಿದನು.

ಸ ತಂ ದೃಷ್ಟ್ವೈವ ವರದಂ ಪತ್ನೀಭ್ಯಾಂ ಸಹಿತೋ ನೃಪಃ ।
ಪ್ರಣಿಪತ್ಯ ಮಹಾಬಾಹುಃ ಪುತ್ರಾರ್ಥಂ ಸಮಯಾಚತ ॥೧೩॥

ಆ ರಾಜನು ಪತ್ನಿಯರ ಜೊತೆಯಲ್ಲಿ ಶಿವನ ದರ್ಶನವನ್ನು ಮಾಡಿದ ತಕ್ಷಣ ಮಹಾಬಾಹುವಾದ ಅವನು ನಮಸ್ಕಾರವನ್ನು ಮಾಡಿ ಪುತ್ರನನ್ನು ಯಾಚಿಸಿದನು.

ತಂ ಪ್ರೀತಿಮಾನ್ ಹರಃ ಪ್ರಾಹ ಸಭಾರ್ಯಂ ನೃಪಸತ್ತಮಮ್ ।
ಯಸ್ಮಿನ್ ವೃತೋ ಮುಹೂರ್ತೇऽಹಂ ತ್ವಯೇಹ ನೃಪತೇ ವರಮ್ ॥

ಪುತ್ರಾಃ ಷಷ್ಟಿಸಹಸ್ರಾಣಿ ಶೂರಾಃ ಪರಮದರ್ಪಿತಾಃ ।
ಏಕಸ್ಯಾಂ ಸಂಭವಿಷ್ಯಂತಿ ಪತ್ನ್ಯಾಂ ತವ ನರೋತ್ತಮ ॥೧೫॥

ತೇ ಚಾಪಿ ಸಹಿತಾಃ ಸರ್ವೇ ಕ್ಷಯಂ ಯಾಸ್ಯಂತಿ ಪಾರ್ಥಿವ ।
ಏಕೋ ವಂಶಧರಃ ಶೂರ ಏಕಸ್ಯಾಂ ಸಂಭವಿಷ್ಯತಿ ॥೧೬॥

ಸಂತೋಷಗೊಂಡ ಶಂಕರನು ತನ್ನ ಭಾರ್ಯೆಯರಿಂದ ಕೂಡಿದ ಆ ಶ್ರೇಷ್ಠರಾಜನನ್ನು ಕುರಿತು ಎಲೈ ರಾಜನೇ, ನೀನು ಯಾವ ಮುಹೂರ್ತದಲ್ಲಿ ವರವನ್ನು ಕೇಳಿದ್ದೀಯೋ ಅದಕ್ಕೆ ಅನುಗುಣವಾಗಿ, ಎಲೈ ನರೋತ್ತಮನೇ, ನಿನಗೆ ಒಬ್ಬ ಪತ್ನಿಯಲ್ಲಿ ಶೂರರೂ ಮತ್ತು ಪರಮದರ್ಪಿಷ್ಠರೂ ಆದ ಅರವತ್ತುಸಾವಿರ ಪುತ್ರರು ಜನಿಸುವರು. ಎಲೈ ಪಾರ್ಥಿವನೇ, ಅವರೆಲ್ಲರೂ ಒಟ್ಟಿಗೆ ವಿನಾಶವನ್ನು ಹೊಂದುವರು. ಇನ್ನೊಬ್ಬ ಪತ್ನಿಯಲ್ಲಿ ಶೂರನೂ, ವಂಶಧರನೂ ಆದ ಒಬ್ಬ ಪುತ್ರನು ಜನಿಸುವನು ಎಂದು ಹೇಳಿದನು.

ಏವಮುಕ್ತ್ವಾ ತು ತಂ ರುದ್ರಃ ತತ್ರೈವಾಂತರಧೀಯತ ।
ಸ ಚಾಪಿ ಸಗರೋ ರಾಜಾ ಜಗಾಮ ಸ್ವಂ ನಿವೇಶನಮ್ ॥೧೭॥

ಪತ್ನೀಭ್ಯಾಂ ಸಹಿತಸ್ತತ್ರ ಪ್ರಹೃಷ್ಟೋऽಂತರಾತ್ಮನಾ ।
ಕಾಲಂ ಶಂಭುವರಪ್ರಾಪ್ತಂ ಪ್ರತೀಕ್ಷನ್ ಸಗರೋऽನಯತ್ ॥೧೮॥

ಹೀಗೆ ಹೇಳಿ ಶಂಕರನು ಅಲ್ಲಿಯೇ ಅದೃಶ್ಯನಾದನು. ಆ ಸಗರರಾಜನಾದರೂ ತನ್ನ ಮನೆಗೆ ಹಿಂದಿರುಗಿ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಪತ್ನಿಯರಿಂದ ಕೂಡಿಕೊಂಡು ರುದ್ರದೇವರು ಕೊಟ್ಟವರದ ಕಾಲವನ್ನು ನಿರೀಕ್ಷಣೆ ಮಾಡುತ್ತಾ ಕಾಲವನ್ನು ಕಳೆದನು.

ತಸ್ಯಾಥ ಭರತಶ್ರೇಷ್ಠ ತೇ ಭಾರ್ಯೇ ಕಮಲೇಕ್ಷಣೇ ।
ವೈದರ್ಭೀ ಚೈವ ಶೈಬ್ಯಾ ಚ ಗರ್ಭಾಣ್ಯೌ ಸಂಬಭೂವತುಃ ॥೧೯॥

ಎಲೈ ಭರತಶ್ರೇಷ್ಠನೇ, ಅನಂತರ ಕಮಲಲೋಚನೆಯರಾದ ಅವನ ಇಬ್ಬರು ಪತ್ನಿಯರಾದ ವೈದರ್ಭೀ ಮತ್ತು ಶೈಬ್ಯೆ ಇವರು ಗರ್ಭವನ್ನು ಧರಿಸಿದರು.

ತತಃ ಕಾಲೇನ ವೈದರ್ಭೀ ಗರ್ಭಾಲಾಬುಂ ಹ್ಯಜಾಯತ ।
ಶೈಬ್ಯಾ ಚ ಸುಷುವೇ ಪುತ್ರಂ ಕುಮಾರಂ ದೇವರೂಪಿಣಮ್ ॥೨೦॥

ಅನಂತರ ಕಾಲಕ್ರಮದಲ್ಲಿ ವೈದರ್ಭಿಯು ಸೋರೆಕಾಯಿಯಂತಹ ಗರ್ಭವನ್ನು ಪ್ರಸವಿಸಿದಳು. ಶೈಬ್ಯೆಯಾದರೂ ದೇವರೂಪವನ್ನು ಧರಿಸಿದ ಕುಮಾರನನ್ನು ಪ್ರಸವಿಸಿದಳು.

ತದಾಽಲಾಬುಂ ಸಮುತ್ಸೃಷ್ಟುಂ ಮನಶ್ಚಕ್ರೇಽಥ ಪಾರ್ಥಿವಃ ।
ಅಥಾಂತರಿಕ್ಷಾತ್ ಶುಶ್ರಾವ ವಾಚಂ ಗಂಭೀರನಿಸ್ವನಾಮ್ ॥೨೧॥

ಆಗ ರಾಜನು ವೈದರ್ಭಿಯ ಗರ್ಭವನ್ನು ಪರಿತ್ಯಾಗಮಾಡಲು ಮನಸ್ಸಿನಲ್ಲಿ ನಿರ್ಧರಿಸಿದನು. ಆಗ ಅಂತರಿಕ್ಷದಿಂದ ಗಂಭೀರಸ್ವರವುಳ್ಳ ಒಂದು ವಾಣಿಯು ಕೇಳಿಬಂದಿತು.

ರಾಜನ್ ಮಾ ಸಾಹಸಂ ಕಾರ್ಷೀಃ ಪುತ್ರಾನ್ ನ ತ್ಯಕ್ತುಮರ್ಹಸಿ ।
ಅಲಾಬುಮಧ್ಯಾನಿಷ್ಪಶ್ಯ ಬೀಜಂ ಯತ್ನೇನ ಧಾರ್ಯತಾಮ್ ॥೨೨॥

ಸೋಪಸ್ವೇದೇಷು ಭಾಂಡೇಷು ಘೃತಪೂರ್ಣೇಷು ಭಾಗಶಃ ।
ತತಃ ಪುತ್ರಸಹಸ್ರಾಣಿ ಷಷ್ಟಿಂ ಪ್ರಾಪ್ಸ್ಯಸಿ ಪಾರ್ಥಿವ ॥೨೩॥

ಮಹಾದೇವೇನ ದಿಷ್ಟಂ ತೇ ಪುತ್ರಜನ್ಮ ನರಾಧಿಪ ।
ಅನೇನ ಕ್ರಮಯೋಗೇನ ಮಾ ತೇ ಬುದ್ಧಿರತೋಽನ್ಯಥಾ ॥೨೪॥

ರಾಜನೇ, ಸಾಹಸವನ್ನು ಮಾಡಬೇಡ. ಪುತ್ರರನ್ನು ಪರಿತ್ಯಾಗಮಾಡಬೇಡ. ಆ ಸೋರೆಕಾಯಿಯಂತಹ ಗರ್ಭದ ಮಧ್ಯದಿಂದ ಬೀಜಗಳನ್ನು ತೆಗೆದು ಅದನ್ನು ಬಿಸಿಯಾಗಿರುವ ಘೃತಪೂರ್ಣವಾದ ಭಾಂಡಗಳಲ್ಲಿ ರಕ್ಷಿಸು. ಎಲೈ ಪಾರ್ಥಿವನೇ,

ಅದರಿಂದ ನೀನು ಅರವತ್ತುಸಾವಿರ ಪುತ್ರರನ್ನು ಪಡೆಯುವಿ. ಎಲೈ ನರಾಧಿಪನೇ, ನಿನಗೆ ಪುತ್ರಜನ್ಮವು ಈ ರೀತಿಯಲ್ಲಿ ಮಹಾದೇವರಿಂದ ಹೇಳಲ್ಪಟ್ಟಿದೆ. ನಿನ್ನ ಬುದ್ಧಿಯು ಬೇರೆ ರೀತಿ ಆಗದೇ ಇರಲಿ (ಎಂದು ನುಡಿಯಿತು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋತ್ತರಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ಸಗರನ ಅಶ್ವಮೇಧಯಾಗ. ಅಶ್ವದ ಅದರ್ಶನ. ಸಗರ ಪುತ್ರರಿಂದ ಕಪಿಲಾಶ್ರಮದಲ್ಲಿ ಅಶ್ವದರ್ಶನ.

ಲೋಮಶಃ

ಏತಚ್ಛ್ರುತ್ವಾಽಂತರಿಕ್ಷಾದ್ವೈ ಸ ರಾಜಾ ರಾಜಸತ್ತಮಃ ।
ಯಥೋಕ್ತಂ ತಚ್ಚಕಾರಾಥ ಶ್ರದ್ದಧದ್ ಭರತರ್ಷಭ ॥೧॥

ಲೋಮಶ– ಎಲೈ ಭರತರ್ಷಭನೇ, ಆ ರಾಜಶ್ರೇಷ್ಠನಾದ ಸಗರನು ಅಂತರಿಕ್ಷದಿಂದ ಈ ವಾಣಿಯನ್ನು ಕೇಳಿ ಅದನ್ನು ನಂಬಿ ಆ ವಾಣಿಯು ಹೇಳಿದಂತೆಯೇ ಮಾಡಿದನು.

ಷಷ್ಟಿಃ ಪುತ್ರಸಹಸ್ರಾಣಿ ತಸ್ಯಾಪ್ರತಿಮತೇಜಸಃ ।
ರುದ್ರಪ್ರಸಾದಾದ್ರಾಜರ್ಷೇಃ ಸಮಜಾಯಂತ ಪಾರ್ಥಿವ ॥೨॥

ಎಲೈ ಪಾರ್ಥಿವನೇ, ರುದ್ರದೇವರ ಅನುಗ್ರಹದಿಂದ ಆ ರಾಜರ್ಷಿಗೆ ಅಸದೃಶ ಪರಾಕ್ರಮವುಳ್ಳ ಅರವತ್ತು ಸಾವಿರ ಪುತ್ರರು ಜನಿಸಿದರು.

ತೇ ಘೋರಾಃ ಕ್ರೂರಕರ್ಮಾಣ ಆಕಾಶೇ ಪರಿಸರ್ಪಿಣಃ ।
ಬಹುತ್ವಾಚ್ಚಾವಜಾನಂತಃ ಸರ್ವಾನ್‌ಲ್ಲೋಕಾನ್ ಸಹಾಮರಾನ್ ॥೩॥

ತ್ರಿದಶಾಂಶ್ಚಾಪ್ಯಬಾಧಂತ ತಥಾ ಗಂಧರ್ವರಾಕ್ಷಸಾನ್ ।
ಸರ್ವಾಣಿ ಚೈವ ಭೂತಾನಿ ಶೂರಾಃ ಸಮರಶಾಲಿನಃ ॥೪॥

ಅವರು ಘೋರರೂ, ಶೂರರೂ, ಸಮರಶೀಲರೂ, ಕ್ರೂರಕರ್ಮಗಳನ್ನು ಮಾಡುವವರೂ, ಆಕಾಶದಲ್ಲಿ ಸಂಚರಿಸುವವರೂ ಆಗಿ ತಮ್ಮ ಸಂಖ್ಯಾಬಲದಿಂದ ದೇವತೆಗಳಿಂದ ಕೂಡಿದ ಎಲ್ಲಾ ಲೋಕಗಳನ್ನು ಅವಮಾನಗೊಳಿಸುತಾ ದೇವತೆಗಳನ್ನೂ, ಗಂಧರ್ವರನ್ನೂ, ರಾಕ್ಷಸರನ್ನೂ ಮತ್ತು ಎಲ್ಲಾ ಪ್ರಾಣಿಗಳನ್ನೂ ಬಾಧಿಸಿದರು.

ವಧ್ಯಮಾನಾಸ್ತದಾ ಲೋಕಾಃ ಸಾಗರೈರ್ಮಂದಬುದ್ಧಿಭಿಃ ।
ಬ್ರಹ್ಮಾಣಂ ಶರಣಂ ಜಗ್ಮುಃ ಸಹಿತಾಃ ಸರ್ವದೈವತೈಃ ॥೫॥

ಮಂದಬುದ್ಧಿಗಳಾದ ಸಗರಪುತ್ರರಿಂದ ಬಾಧಿಸಲ್ಪಟ್ಟವರೆಲ್ಲರೂ ದೇವತೆಗಳ ಜೊತೆಯಲ್ಲಿ ಹೋಗಿ ಬ್ರಹ್ಮದೇವರಿಗೆ ಶರಣಾಗತರಾದರು.

ತಾನುವಾಚ ಮಹಾಭಾಗಃ ಸರ್ವಲೋಕಪಿತಾಮಹಃ ।
ಗಚ್ಛಧ್ವಂ ತ್ರಿದಶಾಃ ಸರ್ವೇ ಲೋಕೈಃ ಸಾರ್ಧಂ ಯಥಾಗತಮ್ ॥೬॥

ನಾತಿದೀರ್ಘೇಣ ಕಾಲೇನ ಸಾಗರಾಣಾಂ ಕ್ಷಯೋ ಮಹಾನ್ ।
ಭವಿಷ್ಯತಿ ಮಹಾಘೋರಃ ಸ್ವಕೈಃ ಕರ್ಮಭಿಃ ಸುರಾಃ ॥೭॥

ಮಹಾನುಭಾವರೂ, ಸರ್ವಲೋಕಪಿತಾಮಹರೂ ಆದ ಬ್ರಹ್ಮದೇವರು ಅವರನ್ನುದ್ದೇಶಿಸಿ ಎಲೈ ದೇವತೆಗಳೇ, ನೀವೆಲ್ಲರೂ ಪ್ರಜೆಗಳ ಜೊತೆಯಲ್ಲಿ ನೀವು ಬಂದ ದಾರಿಯಲ್ಲಿಯೇ ನಿಮ್ಮ ನಿಮ್ಮ ಲೋಕಗಳಿಗೆ ಹಿಂದಿರುಗಿ. ಇನ್ನು ಸ್ವಲ್ಪಕಾಲದಲ್ಲಿಯೇ ಸಗರಪುತ್ರರಿಗೆ ಅವರ ಕರ್ಮದಿಂದಲೇ ಉಂಟಾದ ಮಹಾಘೋರವಾದ ವಿನಾಶವು ಉಂಟಾಗುವುದು ಎಂದು ಹೇಳಿದರು.

ಏವಮುಕ್ತಾಸ್ತು ತೇ ದೇವಾ ಲೋಕಾಶ್ಚ ಮನುಜೋತ್ತಮ ।
ಪಿತಾಮಹಮನುಜ್ಞಾಪ್ಯ ವಿಪ್ರಜಗ್ಮುರ್ಯಥಾಗತಮ್ ॥೮॥

ಎಲೈ ಮನುಜೋತ್ತಮನೇ, ಹೀಗೆ ಹೇಳಲ್ಪಟ್ಟ ದೇವತೆಗಳು ಮತ್ತು ಪ್ರಜೆಗಳು ಬ್ರಹ್ಮದೇವರ ಅಪ್ಪಣೆಯನ್ನು ಪಡೆದು ತಾವು ಬಂದ ದಾರಿಯಲ್ಲಿ ಹಿಂದಿರುಗಿದರು.

ತತಃ ಕಾಲೇ ಬಹುತಿಥೇ ವ್ಯತೀತೇ ಮನುಜೇಶ್ವರ ।
ದೀಕ್ಷಿತಃ ಸಗರೋ ರಾಜಾ ಹಯಮೇಧೇನ ವೀರ್ಯವಾನ್ ॥೯॥

ಎಲೈ ಮನುಜೇಶ್ವರನೇ, ಅನಂತರ ಬಹಳ ಕಾಲವು ಕಳೆದ ಮೇಲೆ ಪ್ರತಾಪಶಾಲಿಯಾದ ಸಗರರಾಜನು ಅಶ್ವಮೇಧ ಯಾಗಕ್ಕೆ ದೀಕ್ಷೆಯನ್ನು ಹೊಂದಿದನು.

ತಸ್ಯಾಶ್ವೋ ವ್ಯಚರದ್ ಭೂಮಿಂ ಪುತ್ರೈಃ ಸುಪರಿರಕ್ಷಿತಃ ।
ಸರ್ವೈರೇವ ಮಹೋತ್ಸಾಹೈಃ ಸ್ವಚ್ಛಂದಪ್ರಚರೋ ನೃಪ ॥೧೦॥

ಎಲೈ ರಾಜನೇ, ಸ್ವಚ್ಛಂದವಾಗಿ ಸಂಚರಿಸುವ ಅವನ ಯಜ್ಞಾಶ್ವವಾದರೂ ಮಹೋತ್ಸಾಹವುಳ್ಳ ಅವನ ಎಲ್ಲಾ ಮಕ್ಕಳಿಂದ ರಕ್ಷಿಸಲ್ಪಟ್ಟಿದ್ದಾಗಿ ಭೂಮಿಯಲ್ಲಿ ಸಂಚರಿಸಿತು.

ಸಮುದ್ರಂ ಸ ಸಮಾಸಾದ್ಯ ನಿಸ್ತೋಯಂ ಭೀಮದರ್ಶನಮ್ ।
ರಕ್ಷ್ಯಮಾಣಃ ಪ್ರಯತ್ನೇನ ತತ್ಯೈವಾಂತರಧೀಯತ ॥೧೧॥

ಆ ಅಶ್ವವು ಭಯಂಕರವಾಗಿ ಕಾಣುತ್ತಿದ್ದ ಜಲವಿಲ್ಲದ ಸಮುದ್ರವನ್ನು ತಲುಪಿ ಸಗರ ಪುತ್ರರು ಪ್ರಯತ್ನಪೂರ್ವಕವಾಗಿ ರಕ್ಷಣೆ ಮಾಡುತ್ತಿದ್ದರೂ ಅಲ್ಲಿಯೇ ಅದೃಶ್ಯವಾಯಿತು.

ತತಸ್ತೇ ಸಾಗರಾಸ್ತಾತ ಹೃತಂ ಜ್ಞಾತ್ವಾ ಹಯೋತ್ತಮಮ್ ।
ಆಗಮ್ಯ ಪಿತುರಾಚಖ್ಯುರದೃಶ್ಯಂ ತುರಗೋತ್ತಮಮ್ ॥೧೨॥

ಎಲೈ ಪ್ರೀತಿಪಾತ್ರನೇ, ಅನಂತರ ಆ ಸಗರಪುತ್ರರು ಅಶ್ವಶ್ರೇಷ್ಠವು ಅಪಹೃತವಾಗಿದೆ ಎಂದು ತಿಳಿದು ತಂದೆಯ ಬಳಿಗೆ ಬಂದು ಶ್ರೇಷ್ಠವಾದ ಯಜ್ಞಾಶ್ವವು ಅದೃಶ್ಯವಾಗಿದೆ ಎಂದು ಹೇಳಿದರು.

ತೇನೋಕ್ತಾ ದಿಕ್ಷು ಸರ್ವಾಸು ಪುತ್ರಾ ಮಾರ್ಗತ ವಾಜಿನಮ್ ।
ಸಸಮುದ್ರವನದ್ವೀಪಾಂ ವಿಚಿನ್ವಂತೋ ವಸುಂಧರಾಮ್ ॥೧೩॥

ಸಗರನಾದರೂ ಎಲೈ ಮಕ್ಕಳೇ, ಸಮುದ್ರವನದ್ವೀಪಗಳಿಂದ ಸಹಿತವಾದ ಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಹುಡುಕುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಅಶ್ವವನ್ನು ಹುಡುಕಿ ಎಂದು ಹೇಳಿದನು.

ತತಸ್ತೇ ಪಿತುರಾಜ್ಞಾಯ ದಿಕ್ಷು ಸರ್ವಾಸು ತಂ ಹಯಮ್ ।
ಅಮಾರ್ಗಂತ ಮಹಾರಾಜ ಸಂಚೇರುಃ ಪೃಥಿವೀತಳಮ್ ॥೧೪॥

ಎಲೈ ಮಹಾರಾಜನೇ, ಆಗ ಅವರು ತಂದೆಯ ಆಜ್ಞೆಯನ್ನು ಧರಿಸಿ ಎಲ್ಲಾ ದಿಕ್ಕುಗಳಲ್ಲಿಯೂ ಹಯವನ್ನು ಹುಡುಕುತ್ತಾ ಭೂಮಿಯಲ್ಲೆಲ್ಲಾ ಸಂಚರಿಸಿದರು.

ತತಸ್ತೇ ಸಾಗರಾಃ ಸರ್ವೇ ಸಮಾಸಾದ್ಯ ಪರಸ್ಪರಮ್ ।
ನಾಧ್ಯಗಚ್ಛಂತ ತುರಗಮಶ್ವಹರ್ತಾರಮೇವ ಚ ॥೧೫॥

ಆಗ ಆ ಸಗರಪುತ್ರರೆಲ್ಲರೂ ಪರಸ್ಪರವಾಗಿ ಸೇರಿ ಹುಡುಕಿದರೂ ಅಶ್ವವನ್ನಾಗಲೀ, ಅಶ್ವದ ಅಪಹರಣಕಾರರನ್ನಾಗಲೀ ಕಾಣಲಿಲ್ಲ.

ಆಗಮ್ಯ ಪಿತರಂ ಚೋಚುಃ ತತಃ ಪ್ರಾಂಜಲಯೋಽಗ್ರತಃ ।
ಸ್ಥಿತಾಃ ಸರ್ವೇ ಮಹೀಪಾಲ ಸಾಗರಾಃ ಸಹಿತಾಸ್ತದಾ ॥೧೬॥

ಸಸಮುದ್ರವನದ್ವೀಪಾ ಸನದೀನದಕಂದರಾ ।
ಸಪರ್ವತವನೋದ್ದೇಶಾ ನಿಖಿಲೇನ ಮಹೀ ನೃಪ ॥೧೭॥

ಅಸ್ಮಾಭಿರ್ವಿಚಿತಾ ರಾಜನ್ ಶಾಸನಾತ್ ತವ ಪಾರ್ಥಿವ ।
ನ ಚಾಶ್ವಮಧಿಗಚ್ಛಾಮೋ ನಾಶ್ವಹರ್ತಾರಮೇವ ವಾ ॥೧೮॥

ಎಲೈ ಮಹಿಪಾಲನೇ, ಸಗರನ ಪುತ್ರರೆಲ್ಲರೂ ಒಟ್ಟಾಗಿ ಬಂದು ತಂದೆಯ ಎದುರಿನಲ್ಲಿ ಕೈಗಳನು ಮುಗಿದು ನಿಂತು ಅವನನ್ನು ಕುರಿತು ಸಮುದ್ರವನ ದ್ವೀಪಗಳನ್ನೂ ನದಿ ನದಗಳ ಕಂದರುಗಳನ್ನೂ, ಪರ್ವತವನೋದ್ದೇಶಗಳನ್ನೂ, ಸಮಗ್ರವಾದ ಪೃಥ್ವಿಯನ್ನು ನಿನ್ನ ಅಪ್ಪಣೆಯಂತೆ ನಾವು ಹುಡುಕಿದರೂ, ಎಲೈ ರಾಜನೇ, ಅಶ್ವವನ್ನಾಗಲೀ, ಅಶ್ವದ ಅಪಹರಣಕಾರರನ್ನಾಗಲೀ ನಾವು ಕಾಣಲಿಲ್ಲ ಎಂದು ಹೇಳಿದರು.

ಶ್ರುತ್ವಾ ತು ವಚನಂ ತೇಷಾಂ ಸ ರಾಜಾ ಕ್ರೋಧಮೂರ್ಚ್ಛಿತಃ ।
ಉವಾಚ ವಚನಂ ಸರ್ವಾನ್ ತದಾ ದೈವವಶಾನ್ನೃಪ ॥೧೯॥

ಅನಾಗಮಾಯ ಗಚ್ಛಧ್ವಂ ಭೂಯೋ ಮಾರ್ಗತ ವಾಜಿನಮ್ ।
ಯಾಜ್ಞಿಯಂ ತಂ ವಿನಾ ಹ್ಯಶ್ವಂ ನಾಗಂತವ್ಯಂ ಹಿ ಪುತ್ರಕಾಃ ॥೨೦॥

ಎಲೈ ರಾಜನೇ, ಅವರ ವಚನವನ್ನು ಕೇಳಿದ ರಾಜನು ಕ್ರೋಧಮೂರ್ಛಿತನಾಗಿ ದೈವ ಪ್ರೇರಣೆಯಂತೆ ಅವರೆಲ್ಲರನ್ನು ಕುರಿತು ಹೋಗಿ ಹಿಂದಿರುಗಿ ಬರಬೇಡಿ; ಪುನಃ ಅಶ್ವವನ್ನು ಹುಡುಕಿ. ಪುತ್ರರೇ, ಯಜ್ಞಾಶ್ವವಿಲ್ಲದೇ ನೀವು ಹಿಂದಕ್ಕೆ ಬರಬೇಡಿ ಎಂದು ಹೇಳಿದನು.

ಪ್ರತಿಗೃಹ್ಯ ತು ಸಂದೇಶಂ ಪಿತುಸ್ತೇ ಸಗರಾತ್ಮಜಾಃ ।
ಭೂಯ ಏವ ಮಹೀಂ ಕೃತ್ಸ್ನಂ ವಿಚೇತುಮುಪಚಕ್ರಮುಃ ॥೨೧॥

ಆಗ ಸಗರಾತ್ಮಜರು ತಂದೆಯ ಸಂದೇಶವನ್ನು ಸ್ವೀಕರಿಸಿ ಪುನಃ ಭೂಮಿಯಲ್ಲೆಲ್ಲಾ ಅಶ್ವವನ್ನು ಹುಡುಕಲು ಪ್ರಾರಂಭಿಸಿದರು.

ಅಥಾಪಶ್ಯಂತ ತೇ ವೀರಾಃ ಪೃಥಿವೀಂ ತು ವಿದಾರಿತಾಮ್ ।
ಸಮುದ್ರೇ ಪೃಥಿವೀಪಾಲ ಪದಮಾರ್ಗಂ ಚ ವಾಜಿನಃ ॥೨೨॥

ಎಲೈ ಪೃಥಿವೀಪಾಲನೇ, ಆಗ ವೀರರಾದ ಅವರು ಸಮುದ್ರದ ಸಮೀಪದಲ್ಲಿ ಭೂಮಿಯು ಸೀಳಿರುವುದನ್ನೂ ಮತ್ತು ಅಶ್ವದ ಹೆಜ್ಜೆಗಳ ದಾರಿಯನ್ನೂ ಗಮನಿಸಿದರು.

ಸಮಾಸಾದ್ಯ ಬಲಂ ತಚ್ಚಾಪ್ಯಖನನ್ ಸಗರಾತ್ಮಜಾಃ ।
ಕುದ್ದಾಲೈರ್ಮುಸಲೈಶ್ಚೈವ ಸಮುದ್ರಂ ಯತ್ನಮಾಸ್ಥಿತಾಃ ॥೨೩॥

ಸಗರಾತ್ಮಜರು ಆ ಭೂಮಿಯ ಬಲದ ಬಳಿಗೆ ಬಂದು ಹಾರೆಗಳಿಂದಲೂ ಮತ್ತು ಒನಕೆಗಳಿಂದ ಪ್ರಯತ್ನಪೂರ್ವಕವಾಗಿ ಆ ಸಮುದ್ರವನ್ನು ಅಗೆದರು.

ಸ ಖನ್ಯಮಾನಃ ಸಹಿತೈಃ ಸಾಗರೈರ್ವರುಣಾಲಯಃ ।
ಅಗಚ್ಛತ್ ಪರಮಾಮಾರ್ತಿಂ ದಾರ್ಯಮಾಣಃ ಸಮಂತತಃ ॥೨೪॥

ಸಗರ ಪುತ್ರರಿಂದ ಒಟ್ಟಾಗಿ ಅಗೆಯಲ್ಪಡುವ ಆ ಸಮುದ್ರವು ಎಲ್ಲಕಡೆಗಳಲ್ಲಿಯೂ ಸೀಳಲ್ಪಟ್ಟದ್ದಾಗಿ ಬಹಳ ದುಃಖವನ್ನು ಹೊಂದಿತು.

ಅಸುರೋರಗರಕ್ಷಾಂಸಿ ಸತ್ತ್ವಾನಿ ವಿವಿಧಾನಿ ಚ ।
ಆರ್ತನಾದಮಕುರ್ವಂತ ವಧ್ಯಮಾನಾನಿ ಸಾಗರೈಃ ॥೨೫॥

ಆ ಸಮುದ್ರದ ಖಾತದಲ್ಲಿದ್ದ ಅಸುರರು, ಉರಗ ರಾಕ್ಷಸರು, ವಿವಿಧ ಪ್ರಾಣಿಗಳು ಸಗರ ಪುತ್ರರಿಂದ ವಧೆಗೆ ಒಳಗಾಗಿ ಆರ್ತನಾದವನ್ನು ಮಾಡಿದರು.

ಭಿನ್ನಶೀರ್ಷಾ ವಿದೇಹಾಶ್ಚ ಭಿನ್ನಜಾನ್ವಸ್ಥಿಮಸ್ತಕಾಃ ।
ಪ್ರಾಣಿನಃ ಸಮದೃಶ್ಯಂತ ಶತಶೋಽಥ ಸಹಸ್ರಶಃ ॥೨೬॥

ತಲೆಯನ್ನು ಒಡೆದ ದೇಹರಹಿತವಾದ ಜಾನು, ಅಸ್ಥಿ ಮತ್ತು ಮಸ್ತಕಗಳು ಭಿನ್ನಭಿನ್ನವಾದ ಪ್ರಾಣಿಗಳು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಅಲ್ಲಿ ಕಂಡುಬಂದವು.

ಏವಂ ತು ಖನತಾಂ ತೇಷಾಂ ಸಮುದ್ರಂ ಮಕರಾಲಯಮ್ ।
ವ್ಯತೀತಃ ಸುಮಹಾನ್ ಕಾಲೋ ನ ಚಾಶ್ವಃ ಸಮದೃಶ್ಯತ ॥೨೭॥

ಹೀಗೆ ಸಗರಪುತ್ರರು ಮಕರಾಲಯವಾದ ಸಮುದ್ರವನ್ನು ಅಗೆಯುತ್ತಿರಲು ಬಹಳ ಕಾಲವು ಕಳೆದು ಹೋಯಿತು. ಅಶ್ವವೂ ಕಾಣಲಿಲ್ಲ.

ತತಃ ಪೂರ್ವೋತ್ತರೇ ದೇಶೇ ಸಮುದ್ರಸ್ಯ ವಿಶಾಂಪತೇ ।
ವಿದಾರ್ಯ ಪಾತಾಳಮುಖಂ ಸಂಕ್ರುದ್ಧಾಃ ಸಗರಾತ್ಮಜಾಃ ॥೨೮॥

ಅಪಶ್ಯಂತ ಹಯಂ ತತ್ರ ವಿಚರಂತಂ ಮಹೀತಲೇ ।
ಕಪಿಲಂ ಚ ಮಹಾತ್ಮಾನಂ ತೇಜೋರಾಶಿಮನುತ್ತಮಮ್ ॥೨೯॥

ತೇಜಸಾ ದೀಪ್ಯಮಾನಂ ತಂ ಜ್ವಾಲಾಭಿರಿವ ಪಾವಕಮ್ ।
ದೃಷ್ಟ್ವಾ ಹಿ ಹೃಷಿತಾಃ ಸರ್ವೇ ಬಭೂವುಃ ಸಗರಾತ್ಮಜಾಃ ॥೩೦॥

ಎಲೈ ರಾಜನೇ, ಅನಂತರ ಸಮುದ್ರದ ಈಶಾನ್ಯಭಾಗದಲ್ಲಿ ಭೂಮಿಯನ್ನು ಸೀಳಿಕೊಂಡು ಸಂಕ್ರುದ್ಧರಾದ ಸಗರಪುತ್ರರು ಪಾತಾಳಕ್ಕೆ ಹೋಗಿ ಅಲ್ಲಿನೆಲದ ಮೇಲೆ ಸಂಚರಿಸುತ್ತಿದ್ದ ತಮ್ಮ ಕುದುರೆಯನ್ನೂ, ತೇಜೋರಾಶಿಯಾದ ಪರಮಶ್ರೇಷ್ಠನಾದ ಮಹಾತ್ಮನಾದ ಕಪಿಲನನ್ನೂ ನೋಡಿದರು. ಜ್ವಾಲೆಗಳಿಂದ ಅಗ್ನಿಯು ಉರಿಯುವಂತೆ ತಮ್ಮ ತೇಜಸ್ಸಿನಿಂದ ಬೆಳಗುತ್ತಿದ್ದ ಕಪಿಲನನ್ನು ನೋಡಿ ಎಲ್ಲಾ ಸಗರಪುತ್ರರೂ ಸಂತುಷ್ಟರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವ್ಯುತ್ತರಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಪಂಚಾಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಮೂರನೆಯ ಅಧ್ಯಾಯ

ನಾರದರಿಂದ ಸಗರನಿಗೆ ಪುತ್ರನಾಶವಾರ್ತೆ, ಅಂಶುಮಂತನಿಂದ ಯಜ್ಞಾಶ್ವವನ್ನು ತಂದು ಯಜ್ಞಸಮಾಪ್ತಿ. ಭಗೀರಥನ ಜನನ.

ಲೋಮಶಃ

ತೇ ತಂ ದೃಷ್ಟ್ವಾ ಹಯಂ ರಾಜನ್ ಸಂಪ್ರಹೃಷ್ಟತನೂರುಹಾಃ ।
ಅನಾದೃತ್ಯ ಮಹಾತ್ಮಾನಂ ಕಪಿಲಂ ಕಾಲಚೋದಿತಾಃ ॥೦॥

ಸಂಕ್ರುದ್ಧಾಃ ಸಮಧಾವಂತ ವಾಜಿಗ್ರಹಣಕಾಂಕ್ಷಿಣಃ ।

ಎಲೈ ರಾಜನೇ, ಆ ಸಗರನ ಪುತ್ರರು ಅಶ್ವವನ್ನು ನೋಡಿ ರೋಮಾಂಚ ಉಳ್ಳವರಾಗಿ ಮಹಾತ್ಮರಾದ ಕಪಿಲರನ್ನು ತಿರಸ್ಕರಿಸಿ ಕಾಲಚೋದಿತರಾಗಿ ಕ್ರೋಧವಶರಾಗಿ ಅಶ್ವವನ್ನು ಹಿಡಿದುಕೊಳ್ಳಲು ಬಯಸಿ ಓಡಿದರು.

ತತಃ ಕ್ರುದ್ಧೋ ಮಹಾಭಾಗಃ ಕಪಿಲೋ ಮುನಿಸತ್ತಮಃ ॥೨॥

ವಾಸುದೇವೇತಿ ಯಂ ಪ್ರಾಹುಃ ಕಪಿಲಂ ಮುನಿಪುಂಗವಮ್ ।
ಸ ಚಕ್ಷುರ್ವಿವೃತಂ ಕೃತ್ವಾ ತೇಜಸ್ತೇಷು ಸಮುತ್ಸೃಜನ್ ॥೩॥

ದದಾಹ ಸುಮಹಾತೇಜಾ ಮಂದಬುದ್ಧೀನ್ ಸ ಸಾಗರಾನ್ ।
ಷಷ್ಟಿಂ ತಾನಿ ಸಹಸ್ರಾಣಿ ಯುಗಪನ್ಮುನಿಸತ್ತಮಃ ॥೪॥

ಮುನಿಶ್ರೇಷ್ಠರಾದ ಕಪಿಲರನ್ನು ವಾಸುದೇವನೆಂದು ಜ್ಞಾನಿಗಳು ಹೇಳುತ್ತಾರೆ. ಮಹಾನುಭಾವರಾದ, ಮುನಿಶ್ರೇಷ್ಠರಾದ ಕಪಿಲರು ಕೋಪದಿಂದ ಕಣ್ಣುಗಳನ್ನು ಅರಳಿಸಿ ತಮ್ಮ ತೇಜಸ್ಸನ್ನು ಸಗರಪುತ್ರರ ಮೇಲೆ ಬೀರಿದರು. ಮಹಾತೇಜಸ್ವಿಗಳೂ, ಮುನಿಶ್ರೇಷ್ಠರೂ ಆದ ಅವರು ಮಂದಬುದ್ಧಿಗಳಾದ ಅರವತ್ತುಸಾವಿರ ಸಗರಪುತ್ರರನ್ನು ಒಟ್ಟಿಗೆ ದಹಿಸಿದರು.

ತಾನ್ ದೃಷ್ಟ್ವಾ ಭಸ್ಮಸಾದ್ಭೂತಾನ್ ನಾರದಃ ಸುಮಹಾತಪಾಃ ।
ಸಗರಾಂತಿಕಮಾಸಾದ್ಯ ತಚ್ಚ ತಸ್ಮೈ ನ್ಯವೇದಯತ್ ॥೫॥

ಆ ಸಗರಪುತ್ರರು ಭಸ್ಮರಾಶಿಯಾಗಿ ಬಿದ್ದುದನ್ನು ನೋಡಿದ ಮಹಾತಪಸ್ವಿಗಳಾದ ನಾರದರು ಸಗರನ ಬಳಿಗೆ ಬಂದು ಆ ವಾರ್ತೆಯನ್ನು ಅವನಿಗೆ ತಿಳಿಸಿದರು.

ಸ ತಚ್ಛ್ರುತ್ವಾ ವಚೋ ರಾಜಾ ಘೋರಂ ಮುನಿಮುಖೋದ್ಗತಮ್ ।
ಮುಹೂರ್ತಂ ವಿಮನಾ ಭೂತ್ವಾ ಸ್ಥಾಣೋರ್ವಾಕ್ಯಮಚಿಂತಯತ್ ॥೬॥

ಋಷಿಗಳ ಮುಖದಿಂದ ಬಂದ ಆ ಘೋರವಾದ ಮಾತುಗಳನ್ನು ಕೇಳಿ ರಾಜನು ಒಂದು ಮುಹೂರ್ತಕಾಲ ವಿಮನಸ್ಕನಾಗಿ ಅನಂತರ ರುದ್ರದೇವರ ವಚನವನ್ನು ಸ್ಮರಿಸಿದನು.

ಸ ಪುತ್ರನಿಧನೋದ್ಭೂತದುಃಖೇನ ಸಮಭಿಪ್ಲುತಃ ।
ಆತ್ಮಾನಮಾತ್ಮನಾऽऽಶ್ವಾಸ್ಯ ಹಯಮೇವಾನ್ವಚಿಂತಯತ್ ॥೭॥

ಅವನು ಪುತ್ರನಾಶದಿಂದ ಉಂಟಾದ ದುಃಖದಿಂದ ಪೂರ್ಣವಾಗಿ ತುಂಬಿದವನಾಗಿ ತನ್ನನ್ನು ತಾನೇ ಸಮಾಧಾನಮಾಡಿಕೊಂಡು ಯಜ್ಞಾಶ್ವವನ್ನೇ ಕುರಿತು ಚಿಂತಿಸಿದನು.

ಅಂಶುಮಂತಂ ಸಮಾಹೂಯ ಅಸಮಂಜಸುತಂ ತದಾ ।
ಪೌತ್ರಂ ಭರತಶಾರ್ದೂಲ ಇದಂ ವಚನಮಬ್ರವೀತ್ ॥೮॥

ಷಷ್ಟಿಸ್ತಾನಿ ಸಹಸ್ರಾಣಿ ಪುತ್ರಾಣಾಮಮಿತೌಜಸಾಮ್ ।
ಕಾಪಿಲಂ ತೇಜ ಆಸಾದ್ಯ ಮತ್ಕೃತೇ ನಿಧನಂ ಗತಾಃ ॥೯॥

ತವ ಚಾಪಿ ಪಿತಾ ತಾತ ಪರಿತ್ಯಕ್ತೋ ಮಯಾಽನಘ ।
ಧರ್ಮಂ ಸಂರಕ್ಷಮಾಣೇನ ಪೌರಾಣಾಂ ಹಿತಮಾಮ್ಯಯಾ ॥೧೦॥

ಎಲೈ ಭರತಶಾರ್ದೂಲನೇ, ಅಸಮಂಜಸುತನಾದ ಪೌತ್ರನಾದ ಅಂಶುಮಂತನನ್ನು ಕರೆದು– 'ಪ್ರೀತಿಪಾತ್ರನೇ, ಪರಿಶುದ್ಧನಾದವನೇ, ಅಮಿತಪರಾಕ್ರಮಿಗಳಾದ ನನ್ನ ಅರವತ್ತುಸಾವಿರ ಪುತ್ರರು ಕಪಿಲ ಋಷಿಗಳ ತೇಜಸ್ಸಿನಿಂದ ನನ್ನ ಸಲುವಾಗಿ ನಿಧನವನ್ನು ಹೊಂದಿದರು. ನಿನ್ನ ತಂದೆಯನ್ನಾದರೂ ನಾನು ಪೌರರ ಹಿತವನ್ನು ಬಯಸಿ ಧರ್ಮವನ್ನು ರಕ್ಷಣೆ ಮಾಡುವ ಉದ್ದೇಶದಿಂದ ಮೊದಲೇ ಪರಿತ್ಯಜಿಸಿದೆ' ಎಂದು ಹೇಳಿದನು.

ಯುಧಿಷ್ಠಿರಃ

ಕಿಮರ್ಥಂ ರಾಜಶಾರ್ದೂಲಃ ಸಗರಃ ಪುತ್ರಮಾತ್ಮಜಮ್ ।
ತ್ಯಕ್ತವಾನ್ ದುಸ್ತ್ಯಜಂ ವೀರಂ ತನ್ಮೇ ಬ್ರೂಹಿ ತಪೋಧನ ॥೧೧॥

ಯುಧಿಷ್ಠಿರ– ಎಲೈ ತಪೋಧನರೇ, ರಾಜಶಾರ್ದೂಲನಾದ ಸಗರನು ವೀರನಾದ, ತ್ಯಜಿಸಲು ಸಾಧ್ಯವಿಲ್ಲದ ತನ್ನ ಔರಸಪುತ್ರನನ್ನು ಏತಕ್ಕೆ ಪರಿತ್ಯಜಿಸಿದನು? ಈ ವಿಷಯವನ್ನು ನನಗೆ ಹೇಳಿ.

ಲೋಮಶಃ

ಅಸಮಂಜ ಇತಿ ಖ್ಯಾತಃ ಸಗರಸ್ಯ ಸುತೋಽಭವತ್ ।
ಯಂ ಶೈಬ್ಯಾ ಜನಯಾಮಾಸ ಪೌರಾಣಾಂ ಸ ಹಿ ದಾರಕಾನ್ ॥೧೨॥

ಕ್ರೀಡತಃ ಸಹಸಾಽಽಸಾದ್ಯ ತತ್ರತತ್ರ ಮಹೀಪತೇ ।
ಚೂಡಾಸು ಕ್ರೋಶತೋ ಗೃಹ್ಯ ನದ್ಯಾಂ ಚಿಕ್ಷೇಪ ವೈ ಬಲಾತ್ ॥೧೩॥

ಲೋಮಶರು– ಅಸಮಂಜ ಎಂದು ಪ್ರಖ್ಯಾತನಾದ ಸಗರಪುತ್ರನು ಶೈಬ್ಯಳಾದ ಕೇಶಿನಿಯಲ್ಲಿ ಜನಿಸಿದನು. ಮಹೀಪತಿಯೇ, ಅವನು ಅಲ್ಲಲ್ಲಿ ಆಟವಾಡುವ ಪ್ರಜೆಗಳ ಮಕ್ಕಳ ತಲೆಗಳನ್ನು ಹಿಡಿದುಕೊಂಡು ಅವರು ಕಿರುಚುತ್ತಿದ್ದರೂ ಎತ್ತಿಕೊಂಡು ಹೋಗಿ ನದಿಯಲ್ಲಿ ಎಸೆಯುತ್ತಿದ್ದನು.

ತತಃ ಪೌರಾಃ ಸಮಾಜಗ್ಮುರ್ಭಯಶೋಕಪರಿಪ್ಲುತಾಃ ।
ಸಗರಂ ಚಾಪ್ಯಯಾಚಂತ ಸರ್ವೇ ಪ್ರಾಂಜಲಯಃ ಸ್ಥಿತಾಃ ॥೧೪॥

ತ್ವಂ ನಸ್ತ್ರಾತಾ ಮಹಾರಾಜ ಪರಚಕ್ರಾದಿಭಿರ್ಭಯಾತ್ ।
ಅಸಮಂಜಭಯಾದ್ ಘೋರಾದಸ್ಮಾಂಸ್ತ್ರಾತುಂ ತ್ವಮರ್ಹಸಿ ॥೧೫॥

ಆಗ ಪೌರರು ಭಯಶೋಕಗಳಿಂದ ತುಂಬಿದವರಾಗಿ ಸಗರನ ಬಳಿಗೆ ಬಂದು ಎಲ್ಲರೂ ಕೈಗಳನ್ನು ಮುಗಿದು– 'ಮಹಾರಾಜನೇ, ನೀನೇ ನಮ್ಮನ್ನು ಪರರಾಜರ ಭಯದಿಂದ ಸಂರಕ್ಷಿಸುವವನು. ಈಗ ಅಸಮಂಜನಿಂದ ಉಂಟಾದ ಘೋರವಾದ ಭಯದಿಂದಲೂ ನಮ್ಮನ್ನು ರಕ್ಷಿಸಬೇಕು' ಎಂದು ಯಾಚಿಸಿದರು.

ಪೌರಾಣಾಂ ವಚನಂ ಶ್ರುತ್ವಾ ಘೋರಂ ನೃಪತಿಸತ್ತಮಃ ।
ಮುಹೂರ್ತಂ ವಿಮನಾ ಭೂತ್ವಾ ಸಚಿವಾನಿದಮಬ್ರವೀತ್ ॥೧೬॥

ಅಸಮಂಜಃ ಕುಮಾರೋಽದ್ಯ ನಗರಾದ್ ವಿಪ್ರವಾಸ್ಯತಾಮ್ ।
ಯದಿ ವೋ ಮತ್ಪ್ರಿಯಂ ಕಾರ್ಯಮೇತಚ್ಚೀಘ್ರಂ ವಿಧೀಯತಾಮ್॥೧೭॥

ಪೌರರ ಘೋರವಾದ ವಚನವನ್ನು ಕೇಳಿ ನೃಪತಿಶ್ರೇಷ್ಠನು ಒಂದು ಮುಹೂರ್ತದ ಕಾಲ ವಿಷಣ್ಣನಾಗಿ ಅನಂತರ ಸಚಿವರನ್ನು ಕುರಿತು ನನ್ನ ಕುಮಾರನಾದ ಅಸಮಂಜನನ್ನು ನೀವು ನಗರದಿಂದ ಹೊರಗೆ ಕಳುಹಿಸಿ. ನೀವು ನನಗೆ ಪ್ರಿಯವನ್ನು ಮಾಡುವುದಿದ್ದರೆ ಇದನ್ನು ಶೀಘ್ರವಾಗಿ ನೆರವೇರಿಸಿ ಎಂದು ಹೇಳಿದನು.

ಏವಮುಕ್ತಾ ನರೇಂದ್ರೇಣ ಸಚಿವಾಸ್ತೇ ನರಾಧಿಪ ।
ಯಥೋಕ್ತಂ ತ್ವರಿತಾಶ್ಚಕ್ರುರ್ಯಥಾऽऽಜ್ಞಾಪಿತವಾನ್ ನೃಪಃ ॥೧೮॥

ಎಲೈ ನರಾಧಿಪನೇ, ನರೇಂದ್ರನಿಂದ ಹೀಗೆ ಹೇಳಲ್ಪಟ್ಟ ಆ ಸಚಿವರು ಶೀಘ್ರವಾಗಿ ರಾಜನು ಆಜ್ಞೆ ಮಾಡಿದಂತೆಯೇ ನಡೆದುಕೊಂಡರು.

ಏತತ್ ತೇ ಸರ್ವಮಾಖ್ಯಾತಂ ಯಥಾ ಪುತ್ರೋ ಮಹಾತ್ಮನಾ ।
ಪೌರಾಣಾಂ ವಿಪ್ರಿಯೇ ತಿಷ್ಠನ್ ಸಗರೇಣ ವಿವಾಸಿತಃ ॥೧೯॥

ಮಹಾತ್ಮನಾದ ಸಗರನು ಪೌರರಿಗೆ ಅಪ್ರಿಯವನ್ನು ಉಂಟುಮಾಡುವ ಮಗನನ್ನು ಹೇಗೆ ತ್ಯಜಿಸಿದನು ಎಂಬ ಎಲ್ಲಾ ವಿಷಯವನ್ನು ನಿನಗೆ ಹೇಳಿದ್ದೇನೆ.

ಅಂಶುಮಾಂಸ್ತು ಮಹೇಷ್ವಾಸೋ ಯದುಕ್ತಃ ಸಗರೇಣ ಹ ।
ತತ್ ತೇ ಸರ್ವಂ ಪ್ರವಕ್ಷ್ಯಾಮಿ ಕೀರ್ತ್ಯಮಾನಂ ನಿಬೋಧ ಮೇ ॥೨೦॥

ಸಗರನು ಮಹಾಧನುರ್ಧಾರಿಯಾದ ಅಂಶುಮಂತನನ್ನು ಕುರಿತು ಏನು ಹೇಳಿದನೋ ಅದೆಲ್ಲವನ್ನೂ ನಿನಗೆ ಹೇಳುವೆನು. ನನ್ನ ಮಾತನ್ನು ಕೇಳು.

ಸಗರಃ

ತ್ಯಾಗಾತ್ ತವ ಪಿತುಶ್ಚಾಪಿ ಶೇಷಾಣಾಂ ನಿಧನೇನ ಚ ।
ಅಲಾಭೇನ ತಥಾऽಶ್ವಸ್ಯ ಪರಿತಪ್ಸ್ಯಾಮಿ ಪುತ್ರಕ ।
ಸುತಾನಾಮಶ್ವನಾಶಾಚ್ಚ ಮನೋ ಮೇ ತಾತ ಮೋಹಿತಮ್ ॥೨೧॥

ತಸ್ಮಾದ್ ದುಃಖಾಭಿಸಂತಪ್ತಂ ಯಜ್ಞವಿಘ್ನಾಚ್ಚ ಮೋಹಿತಮ್ ।
ಹಯಸ್ಯಾನಯನಾತ್ ಪೌತ್ರ ನರಕಾನ್ನಾಂ ಸಮುದ್ಧರ ॥೨೨॥

ಸಗರ– ಎಲೈ ಪುತ್ರಕನೇ, ನಿನ್ನ ತಂದೆಯನ್ನು ಪರಿತ್ಯಾಗಮಾಡಿದುದರಿಂದಲೂ, ಉಳಿದ ಮಕ್ಕಳ ನಿಧನದಿಂದಲೂ ಯಜ್ಞಾಶ್ವದ ಅದರ್ಶನದಿಂದಲೂ ಪರಿತಾಪವನ್ನು ಪಡುತ್ತಿದ್ದೇನೆ. ಪ್ರೀತಿಪಾತ್ರನೇ, ಪುತ್ರನಾಶದಿಂದ ಮತ್ತು ಅಶ್ವನಾಶದಿಂದ ನನ್ನ ಮನಸ್ಸು ಮೋಹಕ್ಕೆ ಒಳಗಾಗಿದೆ. ಆದ್ದರಿಂದ ಎಲೈ ಪೌತ್ರನೇ, ದುಃಖದಿಂದ ಕೂಡಿರುವ ಮತ್ತು ಯಜ್ಞವಿಘ್ನದಿಂದ ಮೋಹಿತನಾದ ನನಗೆ ಅಶ್ವವನ್ನು ಮರಳಿ ತಂದು ನನ್ನನ್ನು ನರಕದಿಂದ ಉದ್ಧರಿಸು (ಎಂದು ಹೇಳಿದನು).

ಅಂಶುಮಾನೇವಮುಕ್ತಸ್ತು ಸಗರೇಣ ಮಹಾತ್ಮನಾ ।
ಜಗಾಮ ದುಃಖಾತ್ ತಂ ದೇಶಂ ಯತ್ರ ವೈ ದಾರಿತಾ ಮಹೀ ॥೨೩॥

ಮಹಾತ್ಮನಾದ ಸಗರನಿಂದ ಹೀಗೆ ಹೇಳಲ್ಪಟ್ಟ ಅಂಶುಮಂತನು ದುಃಖದಿಂದ ಕೂಡಿದವನಾಗಿ ಭೂಮಿಯು ಅಗೆಯಲ್ಪಟ್ಟಿದ್ದ ಆ ಸಮುದ್ರದೇಶಕ್ಕೆ ಹೋದನು.

ಸ ತು ತೇನೈವ ಮಾರ್ಗೇಣ ಸಮುದ್ರಂ ಪ್ರವಿವೇಶ ಹ ।
ಅಪಶ್ಯಚ್ಚ ಮಹಾತ್ಮಾನಂ ಕಪಿಲಂ ತುರಗಂ ಚ ತಮ್ ॥೨೪॥

ಅವನು ಅದೇ ಮಾರ್ಗದಿಂದ ಸಮುದ್ರವನ್ನು ಪ್ರವೇಶಮಾಡಿ ಮಹಾತ್ಮನಾದ ಕಪಿಲನನ್ನೂ ಮತ್ತು ಯಜ್ಞಾಶ್ವವನ್ನೂ ನೋಡಿದನು.

ದೃಷ್ಟ್ವಾ ತಂ ತೇಜಸಾಂ ರಾಶಿಂ ಪುರಾಣಮೃಷಿಸತ್ತಮಮ್ ।
ಪ್ರಣಮ್ಯ ಶಿರಸಾ ಭೂಮೌ ಕಾರ್ಯಂ ತಸ್ಮೈ ನ್ಯವೇದಯತ್ ॥೨೫॥

ತೇಜೋರಾಶಿಯೂ, ಪುರಾತನ ಋಷಿಶ್ರೇಷ್ಠನೂ ಆದ ಕಪಿಲನನ್ನು ನೋಡಿ ಅವನಿಗೆ ಭೂಮಿಯ ಮೇಲೆ ಶಿರಸಾ ನಮಸ್ಕರಿಸಿ ತಾನು ಬಂದ ಕಾರ್ಯವನ್ನು ಅವನಿಗೆ ತಿಳಿಸಿದನು.

ತತಃ ಪ್ರೀತೋ ಮಹಾತೇಜಾಃ ಕಪಿಲೋಂಽಶುಮತೋಽಭವತ್ ।
ಉವಾಚ ಚೈನಂ ಧರ್ಮಾತ್ಮಾ ವರದೋಽಸ್ಮೀತಿ ಭಾರತ ॥೨೬॥

ಎಲೈ ಭಾರತನೇ, ಆಗ ಮಹಾತೇಜಸ್ವಿಯಾದ ಕಪಿಲನು ಅಂಶುಮಂತನಿಗೆ ಪ್ರಸನ್ನನಾಗಿ, ಅಂಶುಮಂತನನ್ನು ಕುರಿತು ನಾನು ನಿನಗೆ ವರವನ್ನು ಕೊಡುತ್ತೇನೆ ಎಂದು ಹೇಳಿದನು.

ಸ ವವ್ರೇ ತುರಗಂ ತತ್ರ ಪ್ರಥಮಂ ಯಜ್ಞಕಾರಣಾತ್ ।
ದ್ವಿತೀಯಮುದಕಂ ವವ್ರೇ ಪಿತೃಣಾಂ ಪಾವನೇಪ್ಸಯಾ ॥೨೭॥

ಆಗ ಅಂಶುಮಂತನು ಮೊದಲು ಯಜ್ಞವನ್ನು ನೆರವೇರಿಸಲು ಅಶ್ವವನ್ನೂ ಮತ್ತು ಎರಡನೆಯದಾಗಿ ಪಿತೃಗಳನ್ನು ಪವಿತ್ರೀಕರಿಸಲು ಉದಕವನ್ನೂ ವರವಾಗಿ ಬೇಡಿದನು.

ತಮುವಾಚ ಮಹಾತೇಜಾಃ ಕಪಿಲೋ ಮುನಿಪುಂಗವಃ ।
ದದಾನಿ ತವ ಭದ್ರಂ ತೇ ಯದ್ಯತ್ ಪ್ರಾರ್ಥಯಸೇಽನಘ ॥೨೮॥

ತ್ವಯಿ ಕ್ಷಮಾ ಚ ಧರ್ಮಶ್ಚ ಸತ್ಯಂ ಚಾಪಿ ಪ್ರತಿಷ್ಠಿತಮ್ ।
ತ್ವಯಾ ಕೃತಾರ್ಥಃ ಸಗರಃ ಪುತ್ರವಾಂಶ್ಚ ತ್ವಯಾ ಪಿತಾ ॥೨೯॥

ತವ ಚೈವ ಪ್ರಭಾವೇಣ ಸ್ವರ್ಗಂ ಯಾಸ್ಯಂತಿ ಸಾಗರಾಃ ।
ಶಲಭತ್ವಂ ಗತಾ ಹ್ಯೇತೇ ಮಮ ಕ್ರೋಧಹುತಾಶನೇ ॥೩೦॥

ಪೌತ್ರಶ್ಚ ತೇ ತ್ರಿಪಥಗಾಂ ತ್ರಿದಿವಾದಾನಯಿಷ್ಯತಿ ।
ಪಾವನಾರ್ಥಂ ಸಾಗರಾಣಾಂ ತೋಷಯಿತ್ವಾ ಮಹೇಶ್ವರಮ್ ॥೩೧॥

ಹಯಂ ನಯಸ್ವ ಭದ್ರಂ ತೇ ಯಾಜ್ಞಿಯಂ ನರಪುಂಗವ ।
ಯಜ್ಞಃ ಸಮಾಪ್ಯತಾಂ ತಸ್ಯ ಸಗರಸ್ಯ ಮಹಾತ್ಮನಃ ॥೩೨॥

ಆಗ ಮಹಾತೇಜಸ್ವಿಯೂ, ಮುನಿಶ್ರೇಷ್ಠನೂ ಆದ ಕಪಿಲನು ಅವನನ್ನು ಕುರಿತು– 'ಎಲೈ ಪರಿಶುದ್ಧನಾದವನೇ ನಿನಗೆ ಮಂಗಳವಾಗಲಿ. ನೀನು ಕೇಳಿದ ವರವನ್ನೆಲ್ಲಾ ಕೊಡುವೆನು. ನಿನ್ನಲ್ಲಿ ಕ್ಷಮೆಯೂ, ಧರ್ಮವೂ, ಸತ್ಯವೂ ಪ್ರತಿಷ್ಠಿತವಾಗಿದೆ. ಸಗರನು ನಿನ್ನಿಂದ ಕೃತಾರ್ಥನಾಗಿದ್ದಾನೆ. ಅಸಮಂಜನೂ ಸಹ ನಿನ್ನಂಥ ಮಗನನ್ನು ಪಡೆದು ಪುತ್ರವಂತನಾಗಿದ್ದಾನೆ. ನಿನ್ನ ಪ್ರಭಾವದಿಂದಲೇ ನನ್ನ ಕ್ರೋಧಾಗ್ನಿಯಲ್ಲಿ ಶಲಭದಂತೆ ಬೆಂದುಹೋದ ಸಗರಪುತ್ರರೆಲ್ಲರೂ ಸ್ವರ್ಗಕ್ಕೆ ಹೋಗುವರು. ನಿನ್ನ ಮೊಮ್ಮಗನು ಮಹೇಶ್ವರನನ್ನು ಸಂತೋಷಪಡಿಸಿ ಸಗರಪುತ್ರರನ್ನು ಪವಿತ್ರೀಕರಿಸಲು ಸ್ವರ್ಗದಿಂದ ಗಂಗೆಯನ್ನು ಭೂಮಿಗೆ ತರುವನು. ನಿನಗೆ ಮಂಗಳವಾಗಲಿ. ಎಲೈ ನರಶ್ರೇಷ್ಠನೇ, ಯಜ್ಞಾಶ್ವವನ್ನು ತೆಗೆದುಕೊಂಡು ಹೋಗಿ ಮಹಾತ್ಮನಾದ ಸಗರನ ಯಜ್ಞವನ್ನು ಪೂರ್ಣಗೊಳಿಸು' ಎಂದು ಹೇಳಿದನು.

ಅಂಶುಮಾನೇವಮುಕ್ತಸ್ತು ಕಪಿಲೇನ ಮಹಾತ್ಮನಾ ।
ಆಜಗಾಮ ಹಯಂ ಗೃಹ್ಯ ಯಜ್ಞವಾಟಂ ಮಹಾತ್ಮನಃ ॥೩೩॥

ಮಹಾತ್ಮನಾದ ಕಪಿಲನಿಂದ ಹೀಗೆ ಹೇಳಲ್ಪಟ್ಟ ಅಂಶುಮಂತನು ಯಜ್ಞಾಶ್ವವನ್ನು ತೆಗೆದುಕೊಂಡು ಮಹಾತ್ಮನಾದ ಸಗರನ ಯಜ್ಞಶಾಲೆಗೆ ಬಂದನು.

ಸೋಽಭವಾದ್ಯ ಪಿತುಃ ಪಾದೌ ಸಗರಸ್ಯ ಮಹಾತ್ಮನಃ ।
ಮೂರ್ಧ್ನಿ ತೇನಾಪ್ಯುಪಾಘ್ರಾತಃ ತಸ್ಮೈ ಸರ್ವಂ ನ್ಯವೇದಯತ್ ॥೩೪॥

ಯಥಾ ದೃಷ್ಟಂ ಶ್ರುತಂ ಚಾಪಿ ಸಾಗರಾಣಾಂ ಕ್ಷಯಂ ತಥಾ ।
ತಂ ಚಾಸ್ಮೈ ಹಯಮಾಚಷ್ಟ ಯಜ್ಞವಾಟಮುಪಾಗತಮ್ ॥೩೫॥

ಅವನು ಮಹಾತ್ಮನಾದ ತನ್ನ ತಾತನಾದ ಸಗರನ ಪಾದಗಳಿಗೆ ನಮಸ್ಕರಿಸಿ ಅವನಿಂದ ಶಿರಸ್ಸಿನಲ್ಲಿ ಆಘ್ರಾಣಿಸಲ್ಪಟ್ಟು ತಾನು ಕೇಳಿದ ಮತ್ತು ನೋಡಿದ ಸಗರಪುತ್ರರ ನಾಶವನ್ನೆಲ್ಲಾ ಅವನಿಗೆ ಹಾಗೆಯೇ ಹೇಳಿ ಯಜ್ಞಶಾಲೆಗೆ ಯಜ್ಞಾಶ್ವವು ಬಂದಿದೆ ಎಂದು ತಿಳಿಸಿದನು.

ತಚ್ಚ್ರುತ್ವಾ ಸಗರೋ ರಾಜಾ ಪುತ್ರಜಂ ದುಃಖಮತ್ಯಜತ್ ।
ಅಂಶುಮಂತಂ ಚ ಸಂಪೂಜ್ಯ ಸಮಾಪಯತ ತಂ ಕ್ರತುಮ್ ॥೩೬॥

ಅದನ್ನು ಕೇಳಿದ ಸಗರರಾಜನು ಪುತ್ರಶೋಕವನ್ನು ಮರೆತು ಅಂಶುಮಂತನನ್ನು ಸತ್ಕರಿಸಿ ಯಜ್ಞವನ್ನು ಸಮಾಪ್ತಿಗೊಳಿಸಿದನು.

ಸಮಾಪ್ತಯಜ್ಞಃ ಸಗರೋ ದೇವೈಃ ಸರ್ವೈಃ ಸಭಾಜಿತಃ ।
ಪುತ್ರತ್ವೇ ಕಲ್ಪಯಾಮಾಸ ಸಮುದ್ರಂ ವರುಣಾಲಯಮ್ ॥೩೭॥

ಯಜ್ಞವನ್ನು ಸಮಾಪ್ತಿಗೊಳಿಸಿದ ಸಗರನು ಎಲ್ಲಾ ದೇವತೆಗಳಿಂದಲೂ ಸತ್ಕೃತನಾಗಿ ವರುಣಾಲಯವಾದ ಸಮುದ್ರವನ್ನು ತನ್ನ ಪುತ್ರನನ್ನಾಗಿ ಮಾಡಿಕೊಂಡನು (ಆದ್ದರಿಂದ ಸಾಗರ ಎಂದು ಹೆಸರು).

ಪ್ರಶಾಸ್ಯ ಸುಚಿರಂ ಕಾಲಂ ರಾಜ್ಯಂ ರಾಜೀವಲೋಚನಃ ।
ಪೌತ್ರೇ ಭಾರಂ ಸಮಾವೇಶ್ಯ ಜಗಾಮ ತ್ರಿದಿವಂ ನೃಪಃ ॥೩೮॥

ರಾಜೀವಲೋಚನನಾದ ಅವನು ಬಹುಕಾಲದವರೆಗೆ ರಾಜ್ಯವನ್ನು ಆಳಿ ಮೊಮ್ಮಗನಿಗೆ ರಾಜ್ಯಭಾರವನ್ನು ವಹಿಸಿ ಸ್ವರ್ಗಸ್ಥನಾದನು.

ಅಂಶುಮಾನಪಿ ಧರ್ಮಾತ್ಮಾ ಮಹೀಂ ಸಾಗರಮೇಖಲಾಮ್ ।
ಪ್ರಶಶಾಸ ಮಹಾರಾಜ ಯಜ್ಞೈರಾಪ್ತ ಪಿತಾಮಹಃ ॥೩೯॥

ಎಲೈ ಮಹಾರಾಜನೇ, ಧರ್ಮಾತ್ಮನಾದ ಅಂಶುಮಂತನಾದರೂ ತನ್ನ ತಾತನಂತೆಯೇ ಸಮುದ್ರ ಮೇಖಲೆಯಾದ ಭೂಮಿಯನ್ನು ಆಳಿದನು.

ತಸ್ಯ ಪುತ್ರಃ ಸಮಭವದ್ ದಿಲೀಪೋ ನಾಮ ಧರ್ಮವಿತ್ ।
ತಸ್ಮಿನ್ ರಾಜ್ಯಂ ಸಮಾಧಾಯ ಅಂಶುಮಾನಪಿ ಸ್ವರ್ಗತಃ ॥೪೦॥

ಅವನಿಗೆ ದಿಲೀಪನೆಂಬ ಧರ್ಮಜ್ಞನಾದ ಮಗನಾದನು. ಅವನಿಗೆ ರಾಜ್ಯವನ್ನು ಒಪ್ಪಿಸಿ ಅಂಶುಮಂತನೂ ಸ್ವರ್ಗಸ್ಥನಾದನು.

ದಿಲೀಪಸ್ತು ತತಃ ಶ್ರುತ್ವಾ ಪಿತೄಣಾಂ ನಿಧನಂ ಮಹತ್ ।
ಪರ್ಯತಪ್ಯತ ದುಃಖೇನ ಗತಿಂ ತೇಷಾಂ ವಿಚಿಂತಯನ್ ॥೪೧॥

ದಿಲೀಪನೂ ಸಹ ತನ್ನ ಪಿತೃಗಳ ಮಹಾನಿಧನವನ್ನು ಕೇಳಿ ದುಃಖದಿಂದ ಪರಿತಪಿಸಿ ಅವರಿಗೆ ಸದ್ಗತಿಯಾಗುವ ಬಗೆಯನ್ನು ಚಿಂತಿಸಿದನು.

ಗಂಗಾವತರಣೇ ಯತ್ನಂ ಮಹಾಂತಂ ಚಾಕರೋನ್ನೃಪಃ ।
ನ ಚಾವತಾರಯಾಮಾಸ ಚೇಷ್ಟಮಾನೋ ಯಥಾಬಲಮ್ ॥೪೨॥

ಆ ರಾಜನು ಗಂಗೆಯನ್ನು ಕೆಳಗೆ ತರುವ ವಿಷಯದಲ್ಲಿ ದೊಡ್ಡ ಪ್ರಯತ್ನವನ್ನು ಮಾಡಿ ತನ್ನ ಶಕ್ತಿ ಇದ್ದಷ್ಟು ಪ್ರಯತ್ನಪಟ್ಟರೂ ಗಂಗೆಯನ್ನು ಕೆಳಗೆ ತರಲು ಸಾಧ್ಯವಾಗಲಿಲ್ಲ.

ತಸ್ಯ ಪುತ್ರಃ ಸಮಭವತ್ ಶ್ರೀಮಾನ್ ಧರ್ಮಪರಾಯಣಃ ।
ಭಗೀರಥ ಇತಿ ಖ್ಯಾತಃ ಸತ್ಯವಾಗನಸೂಯಕಃ ॥೪೩॥

ಅವನಿಗೆ ಧರ್ಮಪರಾಯಣನೂ, ಸತ್ಯವಚನನೂ, ಅಸೂಯಾಹಿತನೂ, ಕಾಂತಿಯುಕ್ತನೂ ಆದ ಭಗೀರಥನೆಂದು ಪ್ರಸಿದ್ಧನಾದ ಪುತ್ರನು ಜನಿಸಿದನು.

ಅಭಿಷಿಚ್ಯ ತು ತಂ ರಾಜ್ಯೇ ದಿಲೀಪೋ ವನಮಾಶ್ರಿತಃ ।
ಭಗೀರಥಂ ಮಹಾತ್ಮಾನಂ ಸತ್ಯಧರ್ಮಪರಾಯಣಮ್ ॥೪೪॥

ದಿಲೀಪನು ಮಹಾತ್ಮನೂ, ಸತ್ಯಧರ್ಮಪರಾಯಣನೂ ಆದ ಭಗೀರಥನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿ ತಾನೂ ಕಾಡಿಗೆ ಹೋದನು.

ತಪಸ್ಸಿದ್ಧಿಸಮಾಯೋಗಾತ್ ಸ ರಾಜಾ ಮನುಜಾಧಿಪ ।
ವನಾಜ್ಜಗಾಮ ತ್ರಿದಿವಂ ಕಾಲಯೋಗೇನ ಭಾರತ ॥೪೫॥

ಎಲೈ ಮನುಜಾಧಿಪನೇ, ಎಲೈ ಭಾರತನೇ, ಆ ರಾಜನೂ ಸಹ ತಪಸ್ಸಿದ್ಧಿಗಳ ಸಂಯೋಗದಿಂದ ಕಾಲಕ್ರಮದಲ್ಲಿ ಆ ಕಾಡಿನಿಂದ ಸ್ವರ್ಗಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋತ್ತರಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನಷಷ್ಟಿತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ನಾಲ್ಕನೆಯ ಅಧ್ಯಾಯ

ಹಿಮಾಲಯದಲ್ಲಿ ಭಗೀರಥನ ತಪಸ್ಸು. ಗಂಗೆಯ ಮತ್ತು ಶಿವನ ಅನುಗ್ರಹ.

ಲೋಮಶಃ

ಸ ತು ರಾಜಾ ಮಹೇಷ್ವಾಸಃ ಚಕ್ರವರ್ತೀ ಮಹಾಮನಾಃ ।
ಬಭೂವ ಸರ್ವಲೋಕಸ್ಯ ಮನೋನಯನನಂದನಃ ॥೧॥

ಲೋಮಶ– ಮಹಾಮನನೂ, ಮಹಾಧನುರ್ಧಾರಿಯೂ, ಚಕ್ರವರ್ತಿಯೂ ಆದ ಆ ಭಗೀರಥರಾಜನು ಎಲ್ಲ ಜನರಿಗೂ ಮನೋನಯನಗಳಿಗೆ ಸಂತೋಷವನ್ನು ಉಂಟು ಮಾಡುವವನಾಗಿದ್ದನು.

ಸ ಶುಶ್ರಾವ ಮಹಾಬಾಹುಃ ಕಪಿಲೇನ ಮಹಾತ್ಮನಾ ।
ಪಿತೄಣಾಂ ನಿಧನಂ ಘೋರಮಪ್ರಾಪ್ತಿಂ ತ್ರಿದಿವಸ್ಯ ಚ ॥೨॥

ಮಹಾಬಾಹುವಾದ ಅವನು ಮಹಾತ್ಮನಾದ ಕಪಿಲನಿಂದ ತನ್ನ ಪಿತೃಗಳು ಘೋರವಾದ ನಿಧನವನ್ನು ಹೊಂದಿದುದನ್ನೂ ಮತ್ತು ಅವರಿಗೆ ಸ್ವರ್ಗದ ಅಪ್ರಾಪ್ತಿಯನ್ನೂ ಕೇಳಿದನು.

ಸ ರಾಜ್ಯಂ ಸಚಿವೇ ನ್ಯಸ್ಯ ಹೃದಯೇನ ವಿದೂಯತಾ ।
ಜಗಾಮ ಹಿಮವತ್ಪಾರ್ಶ್ವಂ ತಪಸ್ತಪ್ತುಂ ನರೇಶ್ವರಃ ॥೩॥

ಆ ನರೇಶ್ವರನು ದುಃಖಪೂರ್ಣವಾದ ಹೃದಯವುಳ್ಳವನಾಗಿ ಸಚವರಿಗೆ ರಾಜ್ಯಭಾರವನ್ನು ಒಪ್ಪಿಸಿ ತಪಸ್ಸನ್ನು ಆಚರಿಸಲು ಹಿಮಾಲಯದ ಪಾರ್ಶ್ವಕ್ಕೆ ಹೋದನು.

ಆರಿರಾಧಯಿಷುರ್ಗಂಗಾಂ ತಪಸಾ ದಗ್ಧಕಿಲ್ಬಿಷಃ ।
ಸೋಽಪಶ್ಯತ ಗಿರಿಶ್ರೇಷ್ಠಂ ಹಿಮವಂತಂ ನರೇಶ್ವರಃ ॥೪॥

ಶೃಂಗೈರ್ಬಹುವಿಧಾಕಾರೈರ್ಧಾತುನದ್ಧೈರಲಂಕೃತಮ್ ।
ಪವನಾಲಂಬಿಭಿರ್ಮೇಘೈಃ ಪರಿಷ್ವಕ್ತಂ ಸಮಂತತಃ ॥೫॥

ನದೀಕುಂಜನಿತಂಭೈಶ್ಚ ಸೋದಕೈರುಪಶೋಭಿತಮ್ ।
ಗುಹಾಕಂದರಸಂಲೀನೈಃ ಸಿಂಹವ್ಯಾಘ್ರೈರ್ನಿಷೇವಿತಮ್ ॥೬॥

ಶಕುನೈಶ್ಚ ವಿಚಿತ್ರಾಂಗೈಃ ಕೂಜದ್ಭಿರ್ವಿವಿಧಾ ಗಿರಃ ।
ಭೃಂಗರಾಜೈಸ್ತಥಾ ರಾಜನ್ ನತ್ಯೂಹೈರ್ಜಲಕುಕ್ಕುಟೈಃ ॥೭॥

ತಪಸ್ಸಿನಿಂದ ಪಾಪನಿರ್ಮುಕ್ತನಾಗಿ ಗಂಗೆಯನ್ನು ಆರಾಧಿಸಲು ಬಯಸಿದ ಆ ನರೇಶ್ವರನು ಅನೇಕ ಆಕಾರಗಳನ್ನು ಹೊಂದಿದ ಶಿಖರಗಳಿಂದ ಕೂಡಿದ, ಅನೇಕ ಧಾತುಲಗ್ನವಾದ ಶಿಖರಗಳಿಂದ ಅಲಂಕೃತವಾದ, ಗಾಳಿಯ ಮೇಲೆ ತೇಲುವ ಮೇಘಗಳಿಂದ ಸುತ್ತಲೂ ಆಲಿಂಗಿತವಾದ, ನೀರಿನಿಂದ ಪೂರ್ಣವಾದ ನದಿ ಕುಂಜ ಮತ್ತು ತಪ್ಪಲು ಪ್ರದೇಶಗಳಿಂದ ಉಪಶೋಭಿತವಾದ, ಗುಹೆಗಳಲ್ಲಿಯೂ ಹಳ್ಳಗಳಲ್ಲಿಯೂ ಆಡಗಿದ ಸಿಂಹವ್ಯಾಘ್ರಗಳಿಂದ ಸೇವಿಸಲ್ಪಡುವ, ವಿಚಿತ್ರವರ್ಣದ ಶರೀರಗಳುಳ್ಳ ಪಕ್ಷಿಗಳ ವಿವಿಧವಾದ ನಾದಗಳಿಂದ ಕೂಡಿದ, ಭೃಂಗರಾಜಗಳು, ನತ್ಯೂಹಗಳು ಮತ್ತು ಜಲಕುಕ್ಕುಟಗಳ ಧ್ವನಿಗಳಿಂದ ಕೂಡಿದ, ಹಿಮಾಲಯ ಪರ್ವತಶ್ರೇಷ್ಠವನ್ನು ನೋಡಿದನು.

ಮಯೂರೈಃ ಶತಪತ್ರೈಶ್ಚ ಕೋಕಿಲೈರ್ಜೀವಜೀವಕೈಃ ।
ಚಕೋರೈರಪಿತಾಪಾಂಗೈಃ ತಥಾ ಪುತ್ರಪ್ರಿಯೈರಪಿ ॥೮॥

ಜಲಸ್ಥಾನೇಷು ಸರ್ವೇಷು ಪದ್ಮಿನೀಭಿಶ್ಚ ಸಂಕುಲಮ್ ।
ಸಾರಸಾನಾಂ ಚ ಮಧುರೈರ್ವ್ಯಾಹೃತೈಃ ಸಮಲಂಕೃತಮ್ ॥೯॥

ಕಿನ್ನರೈರಪ್ಸರೋಭಿಶ್ಚ ಗಂಧರ್ವೈಶ್ಚ ನಿಷೇವಿತಮ್ ।
ದಿಗ್ಗಜೇಂದ್ರವಿಷಾಣಾಗ್ರೈಃ ಸಮಂತಾದ್ ಘೃಷ್ಟಪಾದಪಮ್ ॥೧೦॥

ವಿದ್ಯಾಧರಾನುಚರಿತಂ ನಾನಾದ್ರುಮಲತಾಯುತಮ್ ।
ವಿಷೋಲ್ಬಣೈರ್ಭುಜಂಗೈಶ್ಚ ದೀಪ್ತಜಿಹ್ವೈರ್ಭಯಾನಕಮ್ ॥೧೧॥

ಕ್ವಚಿತ್ ಕನಕಸಂಕಾಶಂ ಕ್ವಚಿದ್ರಜತಸನ್ನಿಭಮ್ ।
ಕ್ವಚಿದಂಜನಪುಂಜಾಭಂ ಹಿಮವಂತಮುಪಾಗಮತ್ ॥೧೨॥

ಮಯೂರಗಳಿಂದಲೂ, ಶತಪತ್ರಗಳಿಂದಲೂ, ಕೋಕಿಲಗಳಿಂದಲೂ, ಚಕೋರಗಳಿಂದಲೂ ಹಾಗೆಯೇ ಕಪ್ಪಾದ ಕಣ್ಣುಗಳುಳ್ಳ ಚಕೋರಗಳಿಂದಲೂ, ಪುತ್ರಪ್ರಿಯಗಳಿಂದಲೂ ಎಲ್ಲಾ ಜಲಸ್ಥಾನಗಳಲ್ಲಿ ಪದ್ಮವನಗಳಿಂದಲೂ ನಿಬಿಡವಾಗಿದ್ದ, ಸಾರಸಪಕ್ಷಿಗಳ ಮಧುರ ಸ್ವರಗಳಿಂದ ಅಲಂಕೃತವಾಗಿದ್ದಂತಹ ಕಿನ್ನರರಿಂದಲೂ,

ಅಪ್ಸರೆಯರಿಂದಲೂ, ಗಂಧರ್ವರಿಂದಲೂ ಸೇವಿತವಾದ, ದಿಗ್ಗಜಗಳ ದಂತಗಳ ತುದಿಯಿಂದ ಗಾಯಗೊಳಿಸಲ್ಪಟ್ಟ ವೃಕ್ಷಗಳನ್ನುಳ್ಳ ವಿದ್ಯಾಧರರ ಸಂಚಾರದಿಂದ ಕೂಡಿದ, ಅನೇಕ ಧೂಮಲತೆಗಳನ್ನು ಹೊಂದಿದ, ಪ್ರಕಾಶಿಸುವ ನಾಲಿಗೆಗಳಿಂದ ಭಯಂಕರವಾಗಿದ್ದ ವಿಷಸರ್ಪಗಳಿಂದ ಕೂಡಿದ್ದ, ಕೆಲವೆಡೆ ಸುವರ್ಣವರ್ಣದಿಂದಲೂ, ಕೆಲವೆಡೆ ರಜತಕಾಂತಿಯಿಂದಲೂ, ಕೆಲವೆಡೆ ಕಾಡಿಗೆಯ ರಾಶಿಯಂತೆಯೂ ಶೋಭಿಸುತ್ತಿದ್ದ ಹಿಮಾಲಯವನ್ನು ತಲುಪಿದನು.

ಸ ತು ತತ್ರ ನರಶ್ರೇಷ್ಠ ತಪೋ ಘೋರಂ ಸಮಾಶ್ರಿತಃ ।
ಫಲಮೂಲಾಂಬುಭಕ್ಷೋಽಭೂತ್ ಸಹಸ್ರಪರಿವತ್ಸರಾನ್ ॥೧೩॥

ಎಲೈ ನರಶ್ರೇಷ್ಠನೇ, ಅವನು ಅಲ್ಲಿ ಘೋರವಾದ ತಪಸ್ಸನ್ನು ಆಚರಿಸಿ ಫಲಮೂಲ ಜಲಭಕ್ಷನಾಗಿ ಒಂದು ಸಹಸ್ರವರ್ಷಗಳನ್ನು ಕಳೆದನು.

ಸಂವತ್ಸರಸಹಸ್ರೇ ತು ಗತೇ ದಿವ್ಯೇ ಮಹಾನದೀ ।
ದರ್ಶಯಾಮಾಸ ತಂ ಗಂಗಾ ತದಾ ಮೂರ್ತಿಮತೀ ಸ್ವಯಮ್ ॥೧೪॥

ದಿವ್ಯಮಾನದ ಒಂದುಸಹಸ್ರ ವರ್ಷಗಳು ಕಳೆಯುತ್ತಿರಲು ಮಹಾನದಿಯಾದ ಗಂಗೆಯು ಶರೀರವನ್ನು ಧರಿಸಿ ಅವನಿಗೆ ದರ್ಶನವನ್ನು ಕೊಟ್ಟಳು.

ಗಂಗಾ

ಕಿಮಿಚ್ಛಸಿ ಮಹಾರಾಜ ಮತ್ತಃ ಕಿಂಚಿದ್ ದದಾಮಿ ತೇ ।
ತದ್ ಬ್ರೂಹಿ ನೃಪತಿಶ್ರೇಷ್ಠ ಕರಿಷ್ಯಾಮಿ ವಚಸ್ತವ ॥೧೫॥

ಗಂಗೆ– ಮಹಾರಾಜನೇ, ನನ್ನಿಂದ ನೀನು ಏನನ್ನು ಬಯಸುತ್ತೀಯೆ? ನಾನು ನಿನಗೆ ಏನನ್ನು ಕೊಡಲಿ? ಎಲೈ ನೃಪತಿಶ್ರೇಷ್ಠನೇ, ನೀನು ಏನು ಬೇಕೆಂದು ಹೇಳು. ನಿನ್ನ ವಚನವನ್ನು ನೆರವೇರಿಸುವೆನು.

ಏವಮುಕ್ತಃ ಪ್ರತ್ಯುವಾಚ ರಾಜಾ ಹೈಮವತೀಂ ತದಾ ।
ನದೀಂ ಭಗೀರಥೋ ರಾಜನ್ ಪ್ರಣಿಪತ್ಯ ಕೃತಾಂಜಲಿಃ ॥೧೬॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ಭಗೀರಥನು ಹಿಮಾಲಯಕನ್ಯೆಯಾದ ಆ ನದಿಯನ್ನು ಕುರಿತು ಕೈಗಳನ್ನು ಜೋಡಿಸಿ ನಮಸ್ಕಾರವನ್ನು ಮಾಡಿ ಉತ್ತರವನ್ನು ನೀಡಿದನು.

ಪಿತಾಮಹಾ ಮೇ ವರದೇ ಕಪಿಲೇನ ಮನಾನದಿ ।
ಅನ್ವೇಷಮಾಣಾಸ್ತುರಗಂ ನೀತಾ ವೈವಸ್ವತಕ್ಷಯಮ್ ॥೧೭॥

ಷಷ್ಟಿಸ್ತಾನಿ ಸಹಸ್ರಾಣಿ ಸಾಗರಾಣಾಂ ಮಹಾತ್ಮನಾಮ್ ।
ಕಾಪಿಲಂ ತೇಜ ಆಸಾದ್ಯ ಕ್ಷಣೇಣ ನಿಧನಂ ಗತಾಃ ॥೧೮॥

ಏಷಾಮೇವಂ ವಿನಷ್ಟಾನಾಂ ಸ್ವರ್ಗೇ ವಾಸೋ ನ ವಿದ್ಯತೇ ।
ಯಾವತ್ ತಾನಿ ಶರೀರಾಣಿ ತ್ವಂ ಜಲೈರ್ನಾಭಿಷಿಂಚಸಿ ॥೧೯॥

ಸ್ವರ್ಗಂ ನಯ ಮಹಾಭಾಗೇ ಮತ್ಪ್ರಸೂನ್ ಸಗರಾತ್ಮಜಾನ್ ।
ತೇಷಾಮರ್ಥೇ ಹಿ ಯಾಚಾಮಿ ತ್ವಾಮಹಂ ವೈ ಮಹಾನದಿ ॥೨೦॥

ಎಲೌ ಮಹಾನದಿಯೇ, ವರಪ್ರದಳೇ, ಯಜ್ಞಾಶ್ವವನ್ನು ಹುಡುಕುತ್ತಾ ನನ್ನ ಪಿತಾಮಹರು ಯಮಲೋಕವನ್ನು ಹೊಂದಿದರು. ಮಹಾತ್ಮರಾದ ಸಗರಪುತ್ರರಾದ ಅರವತ್ತುಸಾವಿರ ಪಿತೃಗಳು ಕಪಿಲನ ತೇಜಸ್ಸನ್ನು ಸಂಧಿಸಿ ಒಂದು ಕ್ಷಣದಲ್ಲಿ ನಿಧನರಾದರು. ಎಲ್ಲಿಯವರೆಗೆ ಅವರ ಶರೀರಗಳನ್ನು ನಿನ್ನ ಜಲದಿಂದ ನೀನು ತೋಯಿಸುವುದಿಲ್ಲವೋ ಅಲ್ಲಿಯವರೆಗೆ ಈ ರೀತಿಯಲ್ಲಿ ನಿಧನವನ್ನು ಹೊಂದಿದ ಅವರಿಗೆ ಸ್ವರ್ಗದಲ್ಲಿ ವಾಸವು ಉಂಟಾಗುವುದಿಲ್ಲ. ಎಲೌ ಮಹಾನುಭಾವಳೇ, ನನ್ನ ಪಿತೃಗಳಾದ ಸಗರಪುತ್ರರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗು. ಎಲೌ ಮಹಾನದಿಯೇ, ಅವರ ಸಲುವಾಗಿ ನಾನು ನಿನ್ನನ್ನು ಯಾಚಿಸುತ್ತಿದ್ದೇನೆ.

ಏತಚ್ಛ್ರುತ್ವಾ ವಚೋ ರಾಜ್ಞೋ ಗಂಗಾ ಲೋಕನಮಸ್ಕೃತಾ ।
ಭಗೀರಥಮಿದಂ ವಾಕ್ಯಂ ಪ್ರೀತಾ ಪಶ್ಚಾದಭಾಷತ ॥೨೧॥

ಲೋಕನಮಸ್ಕೃತಳಾದ ಗಂಗೆಯು ಭಗೀರಥರಾಜನ ಈ ಮಾತುಗಳನ್ನು ಕೇಳಿ ಅನಂತರ ಸಂತೋಷದಿಂದ ಅವನನ್ನು ಕುರಿತು ಮಾತನಾಡಿದಳು.

ಕರಿಷ್ಯಾಮಿ ಮಹಾರಾಜ ವಚಸ್ತೇ ನಾತ್ರ ಸಂಶಯಃ ।
ವೇಗಂ ತು ಮಮ ದುರ್ಧಾರ್ಯಂ ಪತಂತ್ಯಾ ಗಗನಾಚ್ಚ್ಯುತಮ್ ॥

ನ ಶಕ್ತಿಷ್ಟು ಲೋಕೇಷು ಕಶ್ಚಿದ್ ಧಾರಯಿತುಂ ನೃಪ ।
ಅನ್ಯತ್ರ ವಿಬುಧಶ್ರೇಷ್ಠಾನ್ನೀಲಕಂಠಾನ್ಮಹೇಶ್ವರಾತ್ ॥೨೩॥

ತಂ ತೋಷಯ ಮಹಾಬಾಹೋ ತಪಸಾ ವರದಂ ಹರಮ್ ।
ಸ ತು ಮಾಂ ಪ್ರಚ್ಯುತಾಂ ದೇವಃ ಶಿರಸಾ ಧಾರಯಿಷ್ಯತಿ ॥೨೪॥

ಕರಿಷ್ಯತಿ ಚ ತೇ ಕಾಮಂ ಪಿತೃಣಾಂ ಹಿತಕಾಮ್ಯಯಾ ।
ತಪಸಾऽರಾಧಿತಃ ಶಂಭುರ್ಭಗವಾನ್‌ಲೋಕಭಾವನಃ ॥೨೫॥

ಎಲೈ ಮಹಾರಾಜನೇ, ನಿನ್ನ ವಚನವನ್ನು ನೆರವೇರಿಸುವೆನು. ಇದರಲ್ಲಿ ಸಂಶಯವಿಲ್ಲ. ಗಗನದಿಂದ ಬೀಳುವ ನನ್ನ ವೇಗವನ್ನು ಧರಿಸಲು ವಿಬುಧಶ್ರೇಷ್ಠನಾದ ನೀಲಕಂಠನಾದ ಮಹೇಶ್ವರನನ್ನು ಬಿಟ್ಟು ಮೂರುಲೋಕಗಳಲ್ಲಿ ಬೇರೆ ಯಾರಿಗೂ ಸಾಮರ್ಥ್ಯವಿಲ್ಲ. ಎಲೈ ಮಹಾಬಾಹುವಾದ ರಾಜನೇ, ವರಪ್ರದನಾದ ಶಂಕರನನ್ನು ತಪಸ್ಸಿನಿಂದ ಸಂತೋಷಪಡಿಸು. ಆ ದೇವನು ಮೇಲಿನಿಂದ ಬೀಳುವ ನನ್ನನ್ನು ತನ್ನ ಶಿರಸ್ಸಿನಲ್ಲಿ ಧರಿಸುವನು. ತಪಸ್ಸಿನಿಂದ ಆರಾಧಿಸಲ್ಪಟ್ಟ ಲೋಕಭಾವನನಾದ ಭಗವಂತನಾದ ಶಂಭುವು ನಿನ್ನ ಪಿತೃಗಳಿಗೆ ಹಿತವನ್ನು ಮಾಡುವ ಇಚ್ಛೆಯಿಂದ ನಿನ್ನ ಸಂಕಲ್ಪವನ್ನು ನೆರವೇರಿಸುವನು (ಎಂದು ಹೇಳಿದಳು).

ಏತಚ್ಛ್ರುತ್ವಾ ವಚೋ ರಾಜನ್ ಮಹಾರಾಜೋ ಭಗೀರಥಃ ।
ಕೈಲಾಸಂ ಪರ್ವತಂ ಗತ್ವಾ ತೋಷಯಾಮಾಸ ಶಂಕರಮ್ ॥೨೬॥

ಎಲೈ ರಾಜನೇ, ಈ ಮಾತುಗಳನ್ನು ಕೇಳಿದ ಭಗೀರಥ ಮಹಾರಾಜನು ಕೈಲಾಸ ಪರ್ವತಕ್ಕೆ ಹೋಗಿ ಶಂಕರನನ್ನು (ತಪಸ್ಸಿನಿಂದ) ಸಂತೋಷಪಡಿಸಿದನು.

ತತಸ್ತೇನ ಸಮಾಗಮ್ಯ ಕಾಲಯೋಗೇನ ಕೇನಚಿತ್ ।
ಗಂಗಾವತರಣಂ ರಾಜನ್ನಯಾಚತ ಮಹೀಪತಿಃ ॥೨೭॥

ಎಲೈ ರಾಜನೇ, ಅನಂತರ ಕೆಲವು ಕಾಲದನಂತರ ಮಹೀಪತಿಯಾದ ಭಗೀರಥನು ಶಂಕರನ ಸಮಾಗಮವನ್ನು ಹೊಂದಿ ಗಂಗಾವತರಣವನ್ನು ಪ್ರಾರ್ಥಿಸಿದನು.

ಅಗೃಹ್ಣಾಚ್ಚ ವರಂ ತಸ್ಮಾದ್ ಗಂಗಾಯಾ ಧಾರಣೇ ನೃಪ ।
ಸ್ವರ್ಗೇ ವಾಸಂ ಸಮುದ್ದಿಶ್ಯ ಪಿತೃಣಾಂ ಸ ನರೋತ್ತಮಃ ॥೨೮॥

ಎಲೈ ರಾಜನೇ, ನರೋತ್ತಮನಾದ ಭಗೀರಥನು ತನ್ನ ಪಿತೃಗಳಿಗೆ ಸ್ವರ್ಗವಾಸವನ್ನು ಉದ್ದೇಶಿಸಿ ಶಂಕರನಿಂದ ಗಂಗೆಯ ಧಾರಣೆಯ ವಿಷಯದಲ್ಲಿ ವರವನ್ನು ಸ್ವೀಕರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಷ್ಠಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ನೂರ ಐದನೆಯ ಅಧ್ಯಾಯ

ಗಂಗೆಯಿಂದ ಸಗರಪುತ್ರರ ಅಸ್ಥಿಗಳ ಪ್ಲಾವನ ಮತ್ತು ಸಮುದ್ರ ಪೂರಣ.

ಲೋಮಶಃ

ಭಗೀರಥವಚಃ ಶ್ರುತ್ವಾ ಪ್ರಿಯಾರ್ಥಂ ಚ ದಿವೌಕಸಾಮ್ ।
ಏವಮಸ್ತ್ವಿತಿ ರಾಜಾನಂ ಭಗವಾನ್ ಪ್ರತ್ಯಭಾಷತ ॥೧॥

ಲೋಮಶ– ಭಗವಂತನಾದ ಶಂಕರನು ಭಗೀರಥನ ಮಾತನ್ನು ಕೇಳಿ ದೇವತೆಗಳಿಗೂ ಪ್ರಿಯವನ್ನು ಉಂಟುಮಾಡುವ ಸಲುವಾಗಿ ರಾಜನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

ಧಾರಯಿಷ್ಯೇ ಮಹಾಬಾಹೋ ಗಗನಾತ್ ಪ್ರಚ್ಯುತಾಂ ಶಿವಾಮ್ ।
ದಿವ್ಯಾಂ ದೇವನದೀಂ ಪುಣ್ಯಾಂ ತ್ವತ್ಕೃತೇ ರಾಜಸತ್ತಮ ॥೨॥

ಏವಮುಕ್ತ್ವಾ ಮಹಾದೇವೋ ಹಿಮವಂತಮುಪಾಗಮತ್ ।
ಸಂವೃತಃ ಪಾರ್ಷದೈರ್ಘೋರೈರ್ನಾನಾಪ್ರಹರಣೋದ್ಯತೈಃ ॥೩॥

ಎಲೈ ಮಹಾಬಾಹುವೇ, ರಾಜಸತ್ತಮನೇ, ಗಗನದಿಂದ ಕೆಳಗೆ ಬೀಳುವ ಪವಿತ್ರವಾದ ಮಂಗಳವಾದ ದಿವ್ಯವಾದ ದೇವನದಿಯನ್ನು ನಿನ್ನ ಸಲುವಾಗಿ ನಾನು

ಧರಿಸುವೆನು. ಹೀಗೆ ಹೇಳಿ ಮಹಾದೇವನು ನಾನಾಪ್ರಹರಣಾಯುಧಗಳನ್ನು ಧರಿಸಿದ ತನ್ನ ಪರಿವಾರದಿಂದ ಕೂಡಿಕೊಂಡು ಹಿಮಾಲಯಕ್ಕೆ ಬಂದನು.

ತತ್ರ ಸ್ಥಿತ್ವಾ ನರಶ್ರೇಷ್ಠ ಭಗೀರಥಮುವಾಚ ಹ ।
ಪ್ರಯಾಚಸ್ವ ಮಹಾಬಾಹೋ ಶೈಲರಾಜಸುತಾಂ ನದೀಮ್ ॥೪॥

ಪಿತೃಣಾಂ ಪಾವನಾರ್ಥಾಯ ತಾಮಹಂ ಮನುಜಾಧಿಪ ।
ಪತಮಾನಂ ಸರಿಚ್ಶ್ರೇಷ್ಠಾಂ ಧಾರಯಿಷ್ಯೇ ತ್ರಿವಿಷ್ಟಪಾತ್ ॥೫॥

ಎಲೈ ನರಶ್ರೇಷ್ಠನೇ, ಅಲ್ಲಿ ನಿಂತು ಅವನು ಭಗೀರಥನನ್ನು ಕುರಿತು- 'ಮಹಾಬಾಹುವೇ, ಪಿತೃಗಳನ್ನು ಪವಿತ್ರೀಕರಿಸುವುದಕ್ಕೋಸ್ಕರ ಶೈಲರಾಜಸುತೆಯಾದ ಗಂಗೆಯನ್ನು ಬೇಡಿಕೋ. ಎಲೈ ಮನುಜಾಧಿವನೇ, ಸ್ವರ್ಗದಿಂದ ಕೆಳಗೆ ಬೀಳುವ ಆ ಶ್ರೇಷ್ಠವಾದ ನದಿಯನ್ನು ನಾನು ಧರಿಸುವೆನು' ಎಂದು ಹೇಳಿದನು.

ಏತಚ್ಛ್ರುತ್ವಾ ವಚೋ ರಾಜಾ ಶರ್ವೇಣ ಸಮುದಾಹೃತಮ್ ।
ಪ್ರಯತಃ ಪ್ರಣತೋ ಭೂತ್ವಾ ಗಂಗಾಂ ತಾಂ ಸಮಚಿಂತಯತ್ ॥೬॥

ರಾಜನು ಮಹಾದೇವನಿಂದ ಹೇಳಲ್ಪಟ್ಟ ಈ ಮಾತುಗಳನ್ನು ಕೇಳಿ ಮೌನವಾಗಿ ಮನಸ್ಸಿನಲ್ಲಿ ನಮಸ್ಕರಿಸಿ ಆ ಗಂಗೆಯನ್ನು ಚಿಂತಿಸಿದನು.

ತತಃ ಪುಣ್ಯಜಲಾ ರಮ್ಯಾ ರಾಜ್ಞಾ ಸಮನುಚಿಂತಿತಾ ।
ಈಶಾನಂ ಚ ಸ್ಥಿತಂ ದೃಷ್ಟ್ವಾ ಗಗನಾತ್ ಸಹಸಾ ಚ್ಯುತಾ ॥೭॥

ಅನಂತರ ರಾಜನಿಂದ ಚಿಂತಿತಳಾದ ಪುಣ್ಯಜಲವುಳ್ಳ ಮನೋಹರವಾದ ಆ ಗಂಗೆಯು ಮಹಾದೇವನು ಅಲ್ಲಿ ನಿಂತಿರುವುದನ್ನು ನೋಡಿ ತಕ್ಷಣವೇ ಗಗನದಿಂದ ಕೆಳಗೆ ಧುಮುಕಿದಳು.

ತಾಂ ಪ್ರಚ್ಯುತಾಂ ತತೋ ದೃಷ್ಟ್ವಾ ದೇವಾಃ ಸಾರ್ಧಂ ಮಹರ್ಷಿಭಿಃ ।
ಗಂಧರ್ವೋರಗಯಕ್ಷಾಶ್ಚ ಸಮಾಜಗ್ಮುರ್ದಿದೃಕ್ಷಯಾ ॥೮॥

ಹಾಗೆ ಕೆಳಗೆ ಬೀಳುತ್ತಿರುವ ಗಂಗೆಯನ್ನು ನೋಡಿ ಅವಳನ್ನು ಇನ್ನೂ ನೋಡಬೇಕೆಂಬ ಆಸೆಯಿಂದ ದೇವತೆಗಳು ಮಹರ್ಷಿಗಳ, ಗಂಧರ್ವರ, ಉರಗರ ಮತ್ತು ಯಕ್ಷರ ಜೊತೆಯಲ್ಲಿ ಅಲ್ಲಿಗೆ ಬಂದರು.

ತತಃ ಪಪಾತ ಗಗನಾದ್ ಗಂಗಾ ಹಿಮವತಃ ಸುತಾ ।
ಸಮುದ್ಯಾಂತಮಹಾವರ್ತಾ ಮೀನಗ್ರಾಹಸಮಾಕುಲಾ ॥೯॥

ಆಗ ಹಿಮಾಲಯನ ಮಗಳಾದ ಗಂಗೆಯು ತಿರುಗುತ್ತಿರುವ ದೊಡ್ಡ ಸುಳಗಳಿಂದ ಕೂಡಿದವಳಾಗಿ ಮೀನು, ಮೊಸಳೆಗಳಿಂದ ನಿಬಿಡಳಾಗಿ ಗಗನದಿಂದ ಕೆಳಗೆ ಬಿದ್ದಳು.

ತಾಂ ದಧಾರ ಹರೋ ರಾಜನ್ ಗಂಗಾಂ ಗಗನಮೇಖಲಾಮ್ ।
ಲಲಾಟದೇಶೇ ಪತಿತಾಂ ಮಾಲಾಂ ಮುಕ್ತಾಮಯೀಮಿವ ॥೧೦॥

ಎಲೈ ರಾಜನೇ, ಗಗನಮೇಖಲೆಯಾಗಿದ್ದ ಆ ಗಂಗೆಯನ್ನು ಮಹಾದೇವನು ತನ್ನ ಲಲಾಟದೇಶದಲ್ಲಿ ಒಂದು ಮುತ್ತಿನ ಮಾಲೆಯಂತೆ ಧರಿಸಿದನು.

ಬಭೌ ಸಾऽಥ ವಿಸರ್ಪಂತೀ ತ್ರಿಧಾ ರಾಜನ್ ಸಮುದ್ರಗಾ ।
ಫೇನಪುಂಜಾಕುಲಜಲಾ ಹಂಸಾನಾಮಿವ ಪಂಕ್ತಯಃ ॥೧೧॥

ಕ್ವಚಿದಾಭೋಗಕುಟಿಲಾ ಪ್ರಸ್ಖಲಂತೀ ಕ್ವಚಿತ್ ಕ್ವಚಿತ್ ।
ಸ್ವಫೇನಪಟಸಂವೀತಾ ಮತ್ತೇವ ಪ್ರಮದಾऽವ್ರಜತ್ ॥೧೨॥

ಎಲೈ ರಾಜನೇ, ಆನಂತರ ಗಂಗೆಯು ಮೂರು ಕವಲುಗಳಾಗಿ ಹರಿಯುತ್ತಾ ನೊರೆಯ ಸಮೂಹದಿಂದ ತುಂಬಿದ ಜಲವುಳ್ಳದ್ದಾಗಿ ಹಂಸಗಳ ಪಂಕ್ತಿಯಂತೆ ಕಾಣುತ್ತಿದ್ದಿತು. ಕೆಲವೊಮ್ಮೆ ವಕ್ರವಾದ ದೇಹವುಳ್ಳವಳಾಗಿ ಒಮ್ಮೊಮ್ಮೆ ಜಾರುತ್ತಾ ನೊರೆಯೆಂಬ ಬಿಳಿಯ ವಸ್ತ್ರವನ್ನು ಧರಿಸಿದ ಮತ್ತಳಾದ ವನಿತೆಯಂತೆ ಗಂಗೆಯು ಹರಿದಳು.

ಕ್ವಚಿತ್ ಸಾ ತೋಯನಿನದೈರ್ನದಂತೀ ನಾದಮುತ್ತಮಮ್ ।
ಕ್ವಚಿಚ್ಚಾಕಾಶಮಾವರ್ತೈಃ ಸಂಕ್ಷಿಪಂತೀವ ಸರ್ವಶಃ ॥೧೩॥

ಏವಂಪ್ರಕಾರಾನ್ ಸುಬಹೂನ್ ಕುರ್ವಂತೀ ಗಗನಾಚ್ಚ್ಯುತಾ ।
ಪೃಥಿವೀತಲಮಾಸಾದ್ಯ ಭಗೀರಥಮಥಾಬ್ರವೀತ್ ॥೧೪॥

ದರ್ಶಯಸ್ವ ಮಹಾಭಾಗ ಮಾರ್ಗಂ ಕೇನ ವ್ರಜಾಮ್ಯಹಮ್ ।
ತ್ವದರ್ಥಮತೀರ್ಣಾऽಸ್ಮಿ ಪೃಥಿವೀಂ ಪೃಥಿವೀಪತೇ ॥೧೫॥

ಒಮ್ಮೊಮ್ಮೆ ಅವಳು ಜಲದ ನಾದಗಳಿಂದ ಶ್ರೇಷ್ಠವಾದ ನಾದವನ್ನು ಉಂಟು ಮಾಡುತ್ತಾ, ಕೆಲವೊಮ್ಮೆ ಸುಳಿಗಳ ಮಧ್ಯೆ ಇರುವ ಪ್ರದೇಶಗಳನ್ನು ಬಹಳವಾಗಿ ಸಂಕೋಚ ಮಾಡುತ್ತಾ, ಹೀಗೆ ಇನ್ನೂ ಅನೇಕ ಪ್ರಕಾರಗಳನ್ನು ತೋರಿಸುತ್ತಾ ಗಗನದಿಂದ ಬಿದ್ದು ಭೂತಲವನ್ನು ಸೇರಿ ಭಗೀರಥನನ್ನು ಕುರಿತು– 'ಎಲೈ ಮಹಾಭಾಗನೇ, ನಿನ್ನ ಸಲುವಾಗಿ ನಾನು ಭೂಮಿಗೆ ಇಳಿದು ಬಂದಿದ್ದೇನೆ. ನಾನು ಯಾವ ಮಾರ್ಗದಲ್ಲಿ ಹೋಗಬೇಕೋ ಅದನ್ನು ತೋರಿಸು' ಎಂದು ಹೇಳಿದಳು.

ಏತಚ್ಛ್ರುತ್ವಾ ಮಹಾರಾಜ ಪ್ರಾತಿಷ್ಠತ ಭಗೀರಥಃ ।
ಯತ್ರ ತಾನಿ ಶರೀರಾಣಿ ಸಾಗರಾಣಾಂ ಮಹಾತ್ಮನಾಮ್ ॥೧೬॥

ಎಲೈ ಮಹಾರಾಜನೇ, ಇದನ್ನು ಕೇಳಿದ ಭಗೀರಥನು, ಎಲ್ಲಿ ಮಹಾತ್ಮರಾದ ಸಗರಪುತ್ರರ ಶರೀರಗಳು ಬಿದ್ದಿದ್ದವೋ ಅಲ್ಲಿಗೆ ಹೊರಡಲು ಉಪಕ್ರಮಿಸಿದನು.

ಪ್ಲಾವನಾರ್ಥಂ ನರಶ್ರೇಷ್ಠ ಪುಣ್ಯೇನ ಸಲಿಲೇನ ಚ ।
ಗಂಗಾಯಾ ಧಾರಣಂ ಕೃತ್ವಾ ಹರೋ ಲೋಕನಮಸ್ಕೃತಃ ।
ಕೈಲಾಸಂ ಪರ್ವತಶ್ರೇಷ್ಠಂ ಜಗಾಮ ತ್ರಿದಶೈಃ ಸಹ ॥೧೭॥

ಎಲೈ ನರಶ್ರೇಷ್ಠನೇ, ಗಂಗೆಯ ಪವಿತ್ರವಾದ ಜಲದಿಂದ ತೋಯಿಸುವ ಸಲುವಾಗಿ ಲೋಕನಮಸ್ಕೃತನಾದ ಶಂಕರನು ಗಂಗೆಯ ಧಾರಣೆಯನ್ನು ಮಾಡಿ ಅನಂತರ ದೇವತೆಗಳ ಜೊತೆಯಲ್ಲಿ ಪರ್ವತಶ್ರೇಷ್ಠವಾದ ಕೈಲಾಸಕ್ಕೆ ಹೋದನು.

ಸಮಾಸಾದ್ಯ ಸಮುದ್ರಂ ಚ ಗಂಗಯಾ ಸಹಿತೋ ನೃಪಃ ।
ಪೂರಯಾಮಾಸ ವೇಗೇನ ಸಮುದ್ರಂ ವರುಣಾಲಯಮ್ ॥೧೮॥

ಭಗೀರಥರಾಜನು, ಗಂಗಾಸಹಿತನಾಗಿ ಸಮುದ್ರವನ್ನು ಸಮೀಪಿಸಿ ಆ ವರುಣಾಲಯವಾದ ಸಮುದ್ರವನ್ನು ಶೀಘ್ರವಾಗಿ ತುಂಬಿಸಿದನು.

ದುಹಿತೄತ್ವೇ ಚ ನೃಪತಿರ್ಗಂಗಾಂ ಸಮನುಕಲ್ಪಯತ್ ।
ಪಿತೃಭ್ಯಶ್ಚೋದಕಂ ತತ್ರ ದದೌ ಪೂರ್ಣಮನೋರಥಃ ॥೧೯॥

ಆ ರಾಜನು ಗಂಗೆಯನ್ನು ಮಗಳನ್ನಾಗಿ ಸ್ವೀಕರಿಸಿ ಗಂಗಾಜಲದಲ್ಲಿ ತನ್ನ ಪಿತೃಗಳಿಗೆ ಉದಕಕ್ರಿಯೆಯನ್ನು ಮಾಡಿ ತನ್ನ ಅಭಿಲಾಷೆಯನ್ನು ಪೂರೈಸಿಕೊಂಡನು.

ಏತತ್ ತೇ ಸರ್ವಮಾಖ್ಯಾತಂ ಗಂಗಾ ತ್ರಿಪಥಗಾ ಯಥಾ ।
ಪೂರಣಾರ್ಥಂ ಸಮುದ್ರಸ್ಯ ಪೃಥಿವೀಮವತಾರಿತಾ ॥೨೦॥

ಕಾಲೇಯಾಶ್ಚ ಯಥಾ ರಾಜನ್ ತ್ರಿದಶೈರ್ವಿನಿಪಾತಿತಾಃ ।
ಸಮುದ್ರಶ್ಚ ಯಥಾ ಪೀತಃ ಕಾರಣಾರ್ಥೇ ಮಹಾತ್ಮನಾ ॥೨೧॥

ವಾತಾಪಿಶ್ಚ ಯಥಾ ನೀತಃ ಕ್ಷಯಂ ಸ ಬ್ರಹ್ಮಹಾಽಸುರಃ ।
ಅಗಸ್ತ್ಯೇನ ಮಹಾರಾಜ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೨॥

ಎಲೈ ಮಹಾರಾಜನೇ, ತ್ರಿಪಥಗೆಯಾದ ಗಂಗೆಯು ಸಮುದ್ರವನ್ನು ಪೂರ್ಣಮಾಡಲು ಹೇಗೆ ಭೂಮಿಗೆ ಇಳಿದು ಬಂದಳು, ಕಾಲೇಯ ದೈತ್ಯರು ದೇವತೆಗಳಿಂದ ಹೇಗೆ ವಿನಾಶಕ್ಕೆ ಒಳಗಾದರು, ಮಹಾತ್ಮರಾದ ಅಗಸ್ತ್ಯರು ದೊಡ್ಡ ಉದ್ದೇಶದ ಸಲುವಾಗಿ ಸಮುದ್ರ ಜಲವನ್ನು ಹೇಗೆ ಪಾನ ಮಾಡಿದರು, ಬ್ರಹ್ಮ ಹತ್ಯೆಯನ್ನು ಮಾಡುತ್ತಿದ್ದ ಅಸುರನಾದ ವಾತಾಪಿಯು ಅಗಸ್ತ್ಯರಿಂದ ಹೇಗೆ ವಿನಾಶ ಮಾಡಲ್ಪಟ್ಟನು, ಎಂದು ನೀನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಆರನೆಯ ಅಧ್ಯಾಯ

ಯುಧಿಷ್ಠಿರನ ತೀರ್ಥಯಾತ್ರೆ. ನಂದಾ-ಪರಮನಂದಾ ನದಿಗಳು
ಋಷಭಕೂಟ ಪರ್ವತದಲ್ಲಿ ಋಷಭ ಋಷಿಯ ಮಹಿಮೆ.

ವೈಶಂಪಾಯನಃ

ತತಃ ಪ್ರಯಾತಃ ಕೌಂತೇಯಃ ಕ್ರಮೇಣ ಭರತರ್ಷಭ ।
ನಂದಾಂ ಪರಮನಂದಾಂ ಚ ನದ್ಯೌ ಪಾಪಭಯಾಪಹೇ ॥೧॥

ವೈಶಂಪಾಯನ– ಎಲೈ ಭರತರ್ಷಭನೇ, ಅನಂತರ ಕೌಂತೇಯನಾದ ಯುಧಿಷ್ಠಿರನು ಕ್ರಮವಾಗಿ ಪಾಪಪರಿಹಾರಕಗಳಾದ ನಂದಾ ಮತ್ತು ಪರಮನಂದಾ ನದಿಗಳನ್ನು ತಲುಪಿದನು.

ಸ ಪರ್ವತಂ ಸಮಾಸಾದ್ಯ ಹೇಮಕೂಟಮನಾಮಯಮ್ ।
ಅಚಿಂತ್ಯಾನದ್ಭುತಾನ್ ಭಾವಾನ್ ದದರ್ಶ ಸುಬಹೂನ್ ನೃಪಃ ॥೨॥

ಆ ರಾಜನು ನಿರ್ದುಷ್ಟವಾದ ಹೇಮಕೂಟಪರ್ವತವನ್ನು ತಲುಪಿ ಅಚಿಂತ್ಯವಾದ ಅನೇಕ ಅದ್ಭುತವಾದ ಘಟನೆಗಳನ್ನು ಅಲ್ಲಿನೋಡಿದನು.

ವರ್ಷಾಯಿತಾऽಭವನ್ ಮೇಘಾ ಉಪಲಾಶ್ಚ ಸಹಸ್ರಶಃ ।
ನಾಶಕ್ನುವಂಸ್ತದಾರೋಢುಂ ವಿಷಣ್ಣಾಮನಸೋऽಪಿ ವಾ ॥೩॥

ಮೇಘಗಳು ಯಾವಾಗಲೂ ಮಳೆಯನ್ನು ಸುರಿಸುತ್ತಿದ್ದವು. ಸಹಸ್ರಾರು ಸಣ್ಣ ಕಲ್ಲುಗಳು ಉದುರುತ್ತಿದ್ದವು. ವಿಷಾದದಿಂದ ಕೂಡಿದ ಜನರು ಆ ಪರ್ವತವನ್ನು ಏರಲು ಸಾಧ್ಯವಾಗುತ್ತಿರಲಿಲ್ಲ.

ವಾಯುರ್ಯತ್ರ ವವೌ ನಿತ್ಯಂ ನಿತ್ಯಂ ದೇವಶ್ಚ ವರ್ಷತಿ ।
ಸಾಯಂ ಪ್ರಾತಶ್ಚ ಭಗವಾನ್ ದೃಶ್ಯತೇ ಹವ್ಯವಾಹನಃ ॥೪॥

ಆ ಪರ್ವತದಲ್ಲಿ ನಿತ್ಯವೂ ವಾಯುವು ಬೀಸುತ್ತದೆ. ನಿತ್ಯವೂ ಇಂದ್ರನು ಮಳೆಯನ್ನು ಸುರಿಸುತ್ತಾನೆ. ಪ್ರಾತಃಕಾಲದಲ್ಲಿ ಮತ್ತು ಸಾಯಂಕಾಲದಲ್ಲಿ ಅಗ್ನಿದೇವನು ಪ್ರತ್ಯಕ್ಷವಾಗಿ ಕಾಣುತ್ತಾನೆ.

ಏವಂ ಬಹುವಿಧಾನ್ ಭಾವಾನದ್ಭುತಾನ್ ವೀಕ್ಷ್ಯ ಪಾಂಡವಃ ।
ಲೋಮಶಂ ಪುನರೇವ ಸ್ಮ ಪರ್ಯಪೃಚ್ಛತ್ ತದದ್ಭುತಮ್ ॥೫॥

ಯದೇತದ್ ಭಗವಂಶ್ಚಿತ್ರಂ ಪರ್ವತೇಽಸ್ಮಿನ್ ಮಹೌಜಸಿ ।
ಏತನ್ಮೇ ಸರ್ವಮಾಚಕ್ಷ್ವ ವಿಸ್ತರೇಣ ಮಹಾದ್ಯುತೇ ॥೬॥

ಹೀಗೆ ಅನೇಕ ಅದ್ಭುತವಾದ ಘಟನೆಗಳನ್ನು ನೋಡಿದ ಪಾಂಡುಪುತ್ರನಾದ ಯುಧಿಷ್ಠಿರನು ಲೋಮಶರನ್ನು ಕುರಿತು– 'ಪೂಜ್ಯರೇ, ಈ ಮಹಾಸಾಮರ್ಥ್ಯವುಳ್ಳ ಪರ್ವತದಲ್ಲಿ ವಿಚಿತ್ರವಾದ ಅನೇಕ ಅದ್ಭುತ ಘಟನೆಗಳು ನಡೆಯುತ್ತಿವೆ. ಎಲೈ ಮಹಾದ್ಯುತಿಯೇ, ಇವೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳಿ' ಎಂದು ಕೇಳಿದನು.

ಲೋಮಶಃ

ಯಥಾಶ್ರುತಮಿದಂ ಪೂರ್ವಮಸ್ಮಾಭಿರರಿಕರ್ಶನ ।
ತದೇಕಾಗ್ರಮನಾ ರಾಜನ್ ನಿಬೋಧ ವದತೋ ಮಮ ॥೭॥

ಲೋಮಶ– ಎಲೈ ರಾಜನೇ, ಶತ್ರುಕರ್ಶನನೇ, ಹಿಂದೆ ನಾನು ಹೇಮಕೂಟ ಪರ್ವತದ ಮಹಿಮೆಯನ್ನು ಕೇಳಿದಂತೆ ನಿನಗೆ ತಿಳಿಸುತ್ತೇನೆ. ಏಕಾಗ್ರಮನಸ್ಸಿನಿಂದ ಕೇಳು.

ಅಸ್ಮಿನ್ನೃಷಭಕೂಟೇ ತು ಋಷಭೋ ನಾಮ ತಾಪಸಃ ।
ಅನೇಕಶತವರ್ಷಾಯುಃ ತಪಸ್ವೀ ಕೋಪನೋ ಭೃಶಮ್ ॥೮॥

ಸ ವೈ ಸಂಭಾಷ್ಯಮಾಣೋಽನ್ಯೈಃ ಕೋಪಾದ್ ಗಿರಿಮುವಾಚ ಹ ।
ಯ ಇಹ ವ್ಯಾಹರೇತ್ ಕಶ್ಚಿದ್ ಉಪಲಾನುತ್ಸೃಜೇಸ್ತಥಾ ॥೯॥

ಈ ಋಷಭಕೂಟಪರ್ವತದಲ್ಲಿ ಹಿಂದೆ ಋಷಭ ಎಂಬ ಋಷಿಯು ಇದ್ದನು. ಅನೇಕ ನೂರುವರ್ಷಗಳ ಆಯುಸ್ಸನ್ನು ಹೊಂದಿದ ಅವನು ಒಳ್ಳೆಯ ತಪಸ್ವಿಯೂ, ಬಹಳ ಕೋಪಿಷ್ಠನೂ ಆಗಿದ್ದನು. ಅವನನ್ನು ಬೇರೆಯವರು ಮಾತನಾಡಿಸಲು ಯತ್ನಿಸಿದಾಗ ಅವನು ಕೋಪದಿಂದ ಪರ್ವತವನ್ನು ಕುರಿತು ಇಲ್ಲಿ ಯಾರಾದರೂ ಬಂದು ಮಾತಾಡಿದರೆ ಅವರ ಮೇಲೆ ಕಲ್ಲುಗಳ ಮಳೆಯನ್ನು ಸುರಿಸು ಎಂದು ಹೇಳಿದನು.

ವಾತಂ ಚಾಹೂಯ ಮಾ ಶಬ್ದಮಿತ್ಯುವಾಚ ಸ ತಾಪಸಃ ।
ವ್ಯಾಹರಂಶ್ಚೈವ ಪುರುಷೋ ಮೇಘೇನ ವಿನಿವಾರ್ಯತೇ ॥೧೦॥

ಆ ತಾಪಸನು ವಾಯುವನ್ನು ಕರೆದು ಇಲ್ಲಿ ಶಬ್ದಮಾಡಬೇಡ ಎಂದು ಹೇಳಿದನು. ಯಾವನಾದರೂ ಪುರುಷನು ಇಲ್ಲಿ ಮಾತನಾಡಲು ಪ್ರಯತ್ನಿಸಿದರೆ ಮೇಘಗಳ ಗರ್ಜನೆಯಿಂದ ಅವನು ನಿವಾರಿಸಲ್ಪಡುತ್ತಾನೆ.

ಏವಮೇತಾನಿ ಕರ್ಮಾಣಿ ರಾಜಂಸ್ತೇನ ಮಹರ್ಷಿಣಾ ।
ಕೃತಾನಿ ಕಾನಿಚಿತ್ ಕೋಪಾತ್ ಪ್ರತಿಷಿದ್ಧಾನಿ ಕಾನಿಚಿತ್ ॥೧೧॥

ಎಲೈ ರಾಜನೇ, ಹೀಗೆ ಆ ಮಹರ್ಷಿಯು ಇಲ್ಲಿ ಅನೇಕ ಕರ್ಮಗಳನ್ನು ಮಾಡಿದನು. ತಪಸ್ಸಿಗೆ ಅನುಕೂಲವಾದ ಅನೇಕ ವಿಷಯಗಳನ್ನು ಅಂಗೀಕರಿಸಿದನು. ತಪಸ್ಸಿಗೆ ವಿರುದ್ಧವಾದ ವಿಷಯಗಳನ್ನು ಕೋಪದಿಂದ ನಿರಾಕರಿಸಿದನು.

ನಂದಾಮಭಿಗತಾ ದೇವಾಃ ಪುರಾ ರಾಜನ್ನಿತಿ ಶ್ರುತಿಃ ।
ಅನ್ವಪದ್ಯಂತ ಸಹಸಾ ಪುರುಷಾ ದೇವದರ್ಶನಃ ॥೧೨॥

ಎಲೈ ರಾಜನೇ, ನಂದಾ ನದಿಗೆ ಬಂದ ದೇವತೆಗಳು ಹಿಂದೆ ಪುರುಷರ ದೃಷ್ಟಿಗೆ ತಕ್ಷಣವೇ ಗೋಚರವಾಗುತ್ತಿದ್ದರು ಎಂದು ನಾನು ಹೇಳಿದ್ದೇನೆ.

ತೇನಾದರ್ಶನಮಿಚ್ಛಂತೋ ದೇವಾಃ ಶಕ್ರಪುರೋಗಮಾಃ ।
ದುರ್ಗಂ ಚಕ್ರುರಿಮಂ ದೇಶಂ ಗಿರಿಂ ಪ್ರತ್ಯೂಹರೂಪಕಮ್ ॥೧೩॥

ಆ ಕಾರಣದಿಂದ ಇಂದ್ರ ಮೊದಲಾದ ದೇವತೆಗಳು ಮನುಷ್ಯರಿಂದ ದರ್ಶನವನ್ನು ಇಷ್ಟಪಡದೆ ಈ ಪರ್ವತ ಪ್ರದೇಶವನ್ನು ಮನುಷ್ಯ ದರ್ಶನಕ್ಕೆ ಪ್ರತಿಬಂಧಕವಾದ ದುರ್ಗವನ್ನಾಗಿ ಮಾಡಿಕೊಂಡರು.

ತದಾ ಪ್ರಭೃತಿ ಕೌಂತೇಯ ನರಾ ಗಿರಿಮಿಮಂ ಸದಾ ।
ನಾಶಕ್ನುವನ್ನಭಿದ್ರಷ್ಟುಂ ಕುತ ಏವಾಧಿರೋಹಿತುಮ್ ॥೧೪॥

ಎಲೈ ಕೌಂತೇಯನೇ, ಆಗಿನಿಂದ ಪ್ರಾರಂಭಿಸಿ ಮನುಷ್ಯರು ಈ ಪರ್ವತವನ್ನು ನೋಡುವುದಕ್ಕೂ ಸಾಧ್ಯವಾಗುವುದಿಲ್ಲ. ಇನ್ನು ಹತ್ತುವುದು ಹೇಗೆ ಸಾಧ್ಯವಾಗುತ್ತದೆ?

ನಾತಪ್ತತಪಸಾ ಶಕ್ಯೋ ದ್ರಷ್ಟುಮೇಷ ಮಹಾಗಿರಿಃ ।
ಆರೋಢುಂ ವಾಽಪಿ ಕೌಂತೇಯ ತಸ್ಮಾನ್ನಿಯತವಾಗ್ಭವ ॥೧೫॥

ಎಲೈ ಕೌಂತೇಯನೇ, ತಪಸ್ಸನ್ನು ಮಾಡದವನಿಂದ ಈ ಪರ್ವತವನ್ನು ನೋಡಲು ಅಥವಾ ಏರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಾಙ್ನಿಯಮವನ್ನು ಧರಿಸು.

ಇಹ ದೇವಾಸ್ತದಾ ಸರ್ವೇ ಯಜ್ಞಾನಾಜಹ್ರುರುತ್ತಮಾನ್ ।
ತೇಷಾಮೇತಾನಿ ಲಿಂಗಾನಿ ದೃಶ್ಯಂತೇ ಪುರುಷರ್ಷಭ ॥೧೬॥

ಕುಶಾಂಕುರೇಣ ದೂರ್ವೇಯಂ ಸಂಪೀರ್ಣೇವ ಚ ಮೇದಿನೀ ।
ಯೂಪಪ್ರಕಾರಾ ಬಹವೋ ವೃಕ್ಷಾಶ್ಚೈಮೇ ವಿಶಾಂ ಪತೇ ॥೧೭॥

ಎಲೈ ಪುರುಷರ್ಷಭನೇ, ಆ ಕಾಲದಲ್ಲಿ ಇಲ್ಲಿ ಎಲ್ಲಾ ದೇವತೆಗಳೂ ಶ್ರೇಷ್ಠವಾದ ಯಜ್ಞಗಳನ್ನು ಆಚರಿಸಿದರು. ಆ ಯಜ್ಞದ ಈ ಚಿಹ್ನೆಗಳು ಇಂದಿಗೂ ಕಂಡುಬರುತ್ತವೆ. ಭೂಮಿಯ ಮೇಲಿರುವ ಈ ಗರಿಕೆಗಳು ಕುಶಾಂಕುರಗಳನ್ನು ಹರಡಿದಂತೆ ತೋರುತ್ತವೆ. ಎಲೈ ರಾಜನೇ, ಈ ವೃಕ್ಷಗಳು ಅನೇಕ ವಿಧವಾದ ಯೂಪಗಳನ್ನು ಹೋಲುತ್ತವೆ.

ದೇವಾಶ್ಚ ಋಷಯಶ್ಚಾಪಿ ವಸಂತ್ಯದ್ಯಾಪಿ ಭಾರತ ।
ತೇಷಾಂ ಸಾಯಂ ತಥಾ ಪ್ರಾತರ್ದೃಶ್ಯತೇ ಹವ್ಯವಾಹನಃ ॥೧೮॥

ಇಹಾಪ್ಲುತಾನಾಂ ಕೌಂತೇಯ ಪಾಪ್ಮಾ ಸದ್ಯೋ ವಿಹನ್ಯತೇ ।
ಕುರುಶ್ರೇಷ್ಠಾಭಿಷೇಕಂ ತ್ವಮಸ್ಮಿನ್ ಕುರು ಸಹಾನುಜೈಃ ॥೧೯॥

ತತೋ ನಂದಾಪ್ಲುತಾಂಗಸ್ತ್ವಂ ಕೌಶಿಕೀಮಭಿಯಾಸ್ಯಸಿ ।
ವಿಶ್ವಾಮಿತ್ರೇಣ ಯೈ ಯತ್ರ ತಪಸ್ತಪ್ತಮನುತ್ತಮಮ್ ॥೨೦॥

ಎಲೈ ಭಾರತನೇ, ಇಲ್ಲಿ ಇಂದಿಗೂ ದೇವತೆಗಳು ಮತ್ತು ಋಷಿಗಳು ವಾಸ ಮಾಡುತ್ತಾರೆ. ಆ ಋಷಿಗಳಿಗೆ ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ಅಗ್ನಿದೇವನ ದರ್ಶನವಾಗುತ್ತದೆ. ಎಲೈ ಕೌಂತೇಯನೇ, ಇಲ್ಲಿ ಸ್ನಾನವನ್ನು ಮಾಡಿದವರಿಗೆ ಪಾಪವು ತಕ್ಷಣ ವಿನಾಶವನ್ನು ಹೊಂದುತ್ತದೆ. ಎಲೈ ಕುರುಶ್ರೇಷ್ಠನೇ, ನೀನು ಇಲ್ಲಿ ತಮ್ಮಂದಿರ ಜೊತೆಯಲ್ಲಿ ಸ್ನಾನ ಮಾಡು. ನೀನು ನಂದಾನದಿಯಲ್ಲಿ ಸ್ನಾನಮಾಡಿ ಪವಿತ್ರವಾಗಿ

ಅನಂತರ ಕೌಶಕೀ ನದಿಗೆ ಹೋಗುವಿ. ಅಲ್ಲಿ ವಿಶ್ವಾಮಿತ್ರರು ಶ್ರೇಷ್ಠವಾದ ತಪಸ್ಸು ಆಚರಿಸಿದರು.

ವೈಶಂಪಾಯನಃ

ತತಸ್ತತ್ರ ಸಮಾಪ್ಲುತ್ಯ ಗಾತ್ರಾಣಿ ಸಗಣೋ ನೃಪಃ ।
ಜಗಾಮ ಕೌಶಿಕೀಂ ಪುಣ್ಯಾಂ ರಮ್ಯಾಂ ಶಿವಜಲಾಂ ನದೀಮ್ ॥೨೧॥

ವೈಶಂಪಾಯನ– ಅನಂತರ ಅಲ್ಲಿ ಧರ್ಮರಾಜನು ಪರಿವಾರ ಸಹಿತನಾಗಿ ಸ್ನಾನವನ್ನು ಮಾಡಿ ಅಲ್ಲಿಂದ ಪುಣ್ಯಪ್ರದವಾದ ಕೌಶಿಕೀ ನದಿಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಷ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಏಳನೆಯ ಅಧ್ಯಾಯ

ಯುಧಿಷ್ಠಿರನಿಂದ ವಿಭಾಂಡಕಾಶ್ರಮ ಪ್ರಾಪ್ತಿ. ಋಷ್ಯಶೃಂಗ ಕಥಾ.

ಲೋಮಶಃ

ಏಷಾ ದೇವೀ ನದೀ ಪುಣ್ಯಾ ಕೌಶಿಕೀ ಭರತರ್ಷಭ ।
ವಿಶ್ವಾಮಿತ್ರಾಶ್ರಮೋ ರಮ್ಯ ಏಷ ಚಾತ್ರ ಪ್ರಕಾಶತೇ ॥೧॥

ಲೋಮಶ– ಎಲೈ ಭರತರ್ಷಭನೇ, ಇದು ಪವಿತ್ರವಾದ ಕೌಶಿಕೀ ನದಿ. ಇಲ್ಲಿಯೇ ಮನೋಹರವಾದ ವಿಶ್ವಾಮಿತ್ರರ ಆಶ್ರಮವು ಕಂಗೊಳಿಸುತ್ತಿದೆ.

ಆಶ್ರಮಶ್ಚೈವ ಪುಣ್ಯಾಖ್ಯಃ ಕಾಶ್ಯಪಸ್ಯ ಮಹಾತ್ಮನಃ ।
ಋಶ್ಯಶೃಂಗಃ ಸುತೋ ಯಸ್ಯ ತಪಸ್ವೀ ಸಂಯತೇಂದ್ರಿಯಃ ॥೨॥

ಇದು ಕಾಶ್ಯಪ ವಂಶದಲ್ಲಿ ಬಂದ ಮಹಾತ್ಮರಾದ ವಿಭಾಂಡಕ ಋಷಿಗಳ ಪುಣ್ಯವೆಂಬ ಹೆಸರಿನ ಆಶ್ರಮ. ತಪಸ್ವಿಗಳೂ, ಜಿತೇಂದ್ರಿಯರೂ ಆದ ಋಶ್ಯಶೃಂಗರು ಅವರ ಪುತ್ರರು.

ತಪಸೋ ಯಃ ಪ್ರಭಾವೇಣ ವರ್ಷಯಾಮಾಸ ಪಾಂಡವ ।
ಅನಾವೃಷ್ಟ್ಯಾ ಭಯಾದ್ ಯಸ್ಯ ವವರ್ಷ ಬಲವೃತ್ರಹಾ ॥೩॥

ಎಲೈ ಪಾಂಡವನೇ, ಅನಾವೃಷ್ಟಿ ಉಂಟಾದಾಗ ಅವರ ಭಯದಿಂದ ಮತ್ತು ಅವರ ತಪಸ್ಸಿನ ಪ್ರಭಾವದಿಂದ ಬಲವೃತ್ರಸೂದನನಾದ ದೇವೇಂದ್ರನು ಮಳೆಯನ್ನು ಸುರಿಸಿದನು.

ಮೃಗ್ಯಾಂ ಜಾತಃ ಸ ತೇಜಸ್ವೀ ಕಾಶ್ಯಪಸ್ಯ ಸುತಃ ಪ್ರಭುಃ ।
ವಿಷಯೇ ರೋಮಪಾದಸ್ಯ ಯಶ್ಚಕಾರಾದ್ಭುತಂ ಮಹತ್ ॥೪॥

ತೇಜಸ್ವಿಗಳೂ, ಪ್ರಭುಗಳೂ ಆದ ಆ ಋಷ್ಯಶೃಂಗರು ಕಾಶ್ಯಪರಿಗೆ ಒಂದು ಜಿಂಕೆಯಲ್ಲಿ ಜನಿಸಿದ ಪುತ್ರರು. ಅವರು ರೋಮಪಾದನ ರಾಜ್ಯದಲ್ಲಿ ಅದ್ಭುತವಾದ ಕಾರ್ಯವನ್ನು ಮಾಡಿದರು.

ಪ್ರವರ್ತಿತೇಷು ಸಸ್ಯೇಷು ಯಸ್ಮೈ ಶಾಂತಾಂ ದದೌ ನೃಪಃ ।
ರೋಮಪಾದೋ ದುಹಿತರಂ ಸಾವಿತ್ರೀಂ ಸವಿತಾ ಯಥಾ ॥೫॥

ರೋಮಪಾದನ ರಾಜ್ಯದಲ್ಲಿ ಮಳೆಯಿಂದ ಪುನಃ ಸಸ್ಯಗಳು ಬೆಳೆಯುತ್ತಿರಲು ರೋಮಪಾದ ರಾಜನು ಸೂರ್ಯನು ಸಾವಿತ್ರಿಯನ್ನು ಕೊಟ್ಟಂತೆ ತನ್ನ ಮಗಳಾದ ಶಾಂತಳನ್ನು ಅವರಿಗೆ ಕೊಟ್ಟನು.

ಯುಧಿಷ್ಠಿರಃ

ಋಶ್ಯಶೃಂಗಃ ಕಥಂ ಮೃಗ್ಯಾಮುತ್ಪನ್ನಃ ಕಾಶ್ಯಪಾತ್ಮಜಃ ।
ವಿರುದ್ಧಯೋನಿಸಂಸರ್ಗೇ ಕಥಂ ಚ ತಪತಾಂ ವರಃ ॥೬॥

ಯುಧಿಷ್ಠಿರ– ಕಾಶ್ಯಪ ಪುತ್ರರಾದ ಋಶ್ಯಶೃಂಗರು ಹೇಗೆ ಜಿಂಕೆಯಲ್ಲಿ ಜನಿಸಿದರು? ವಿರುದ್ಧಯೋನಿ ಸಂಸರ್ಗದಿಂದ ಜನಿಸಿದ ಅವರು ಹೇಗೆ ತಪಸ್ಸುಗಳಲ್ಲಿ ಶ್ರೇಷ್ಠರಾದರು?

ಕಿಮರ್ಥಂ ಚ ಭಯಾತ್ ತಸ್ಯ ಕ್ರೋಧಾದ್ ಬಾಲಸ್ಯ ಧೀಮತಃ ।
ಅನಾವೃಷ್ಟ್ಯಾಂ ಪ್ರವೃತ್ತಾಯಾಂ ವವರ್ಷ ಬಲವೃತ್ರಹಾ ॥೭॥

ಕ್ರೋಧದಿಂದ ಅನಾವೃಷ್ಟಿಯನ್ನು ಉಂಟುಮಾಡಿದ್ದ ಬಲವೃತ್ರಸೂದನನಾದ ದೇವೇಂದ್ರನು ಏಕೆ ಮೇಧಾವಿಗಳೂ ಮತ್ತು ಬಾಲಕರೂ ಆದ ಅವರ ಭಯದಿಂದ ಮಳೆಯನ್ನು ಸುರಿಸಿದನು?

ಕಥಂರೂಪಾ ಚ ಸಾ ಶಾಂತಾ ರಾಜಪುತ್ರೀ ಯತವ್ರತಾ ।
ಲೋಭಯಾಮಾಸ ಯಾ ಚೇತೋ ಮೃಗಸೂತಸ್ಯ ತಸ್ಯ ವೈ ॥೮॥

ಮೃಗದಲ್ಲಿ ಜನಿಸಿದ ಅವರ ಮನಸ್ಸನ್ನು ಲೋಭಗೊಳಿಸಿದ ಪತಿವ್ರತೆಯಾದ ರಾಜಪುತ್ರಿಯಾದ ಶಾಂತಳು ಎಂತಹ ಸ್ವಭಾವದವಳು?

ರೋಮಪಾದಃ ಸ ರಾಜರ್ಷಿರ್ಯದಾಽಶ್ರಾಯತ ಧಾರ್ಮಿಕಃ ।
ಕಥಂ ವೈ ವಿಷಯೇ ತಸ್ಯ ನಾವರ್ಷತ್ ಪಾಕಶಾಸನಃ ॥೯॥

ರಾಜರ್ಷಿಯಾದ ರೋಮಪಾದನು ಧಾರ್ಮಿಕನೆಂದು ಕೇಳಿಬರುತ್ತಿರುವಾಗ ಅವನ ರಾಜ್ಯದಲ್ಲಿ ಇಂದ್ರನು ಏಕೆ ಮಳೆಯನ್ನು ಸುರಿಸಲಿಲ್ಲ?

ಏತನ್ಮೇ ಭಗವನ್ ಸರ್ವಂ ವಿಸ್ತರೇಣ ಯಥಾತಥಮ್ ।
ವಕ್ತುಮರ್ಹಸಿ ಶುಶ್ರೂಷೋಃ ಋಶ್ಯಶೃಂಗಸ್ಯ ಚೇಷ್ಟಿತಮ್ ॥೧೦॥

ಪೂಜ್ಯರೇ, ಋಶ್ಯಶೃಂಗರ ಈ ಎಲ್ಲಾ ಮಹಿಮೆಗಳನ್ನೂ ಕೇಳಬಯಸುವ ನನಗೆ ನೀವು ಎಲ್ಲವನ್ನೂ ವಿಸ್ತಾರವಾಗಿ ಯಥಾರ್ಥವಾಗಿ ಹೇಳಿ.

ಲೋಮಶಃ

ವಿಭಾಂಡಕಸ್ಯ ಬ್ರಹ್ಮರ್ಷೇಸ್ತಪಸಾ ಭಾವಿತಾತ್ಮನಃ ।
ಅಮೋಘವೀರ್ಯಸ್ಯ ಸುತಃ ಪ್ರಜಾಪತಿಸಮದ್ಯುತಿಃ ॥೧೧॥

ಶೃಣು ಪುತ್ರೋ ಯಥಾ ಜಾತ ಋಶ್ಯಶೃಂಗಃ ಪ್ರತಾಪವಾನ್ ।
ಮಹಾಹ್ರದೇ ಮಹಾತೇಜಾ ಬಾಲಃ ಸ್ಥವಿರಸಮ್ಮತಃ ॥೧೨॥

ಲೋಮಶರು– ಬ್ರಹ್ಮರ್ಷಿಗಳಾದ ಮನೋಜಯವುಳ್ಳ ಅಮೋಘ ವೀರ್ಯರಾದ ಪ್ರಜಾಪತಿಗಳಿಗೆ ಸಮಾನವಾದ ಕಾಂತಿಯನ್ನು ಹೊಂದಿದ ವಿಭಾಂಡಕ ಋಷಿಗಳಿಗೆ ಮಹಾತೀರ್ಥದಲ್ಲಿ ಮಹಾತೇಜಸ್ವಿಯೂ, ಪ್ರತಾಪಶಾಲಿಯೂ, ಬಾಲಕನಾದರೂ

ವೃದ್ಧಸಮ್ಮತರೂ ಆದ ಋಶ್ಯಶೃಂಗರು ಹೇಗೆ ಪುತ್ರರಾಗಿ ಜನಿಸಿದರೆಂದು ಹೇಳುತ್ತೇನೆ ಕೇಳು.

ಮಹಾಹ್ರದಂ ಸಮಾಸಾದ್ಯ ಕಾಶ್ಯಪಸ್ತಪಸಿ ಸ್ಥಿತಃ ।
ದೀರ್ಘಕಾಲಂ ಪರಿಶ್ರಾಂತ ಋಷಿರ್ದೇವರ್ಷಿಸಮ್ಮಿತಃ ।
ತಸ್ಯ ರೇತಃ ಪ್ರಚಸ್ಕಂದ ದೃಷ್ಟ್ವಾಽಪ್ಸರಸಮುರ್ವಶೀಮ್ ॥೧೩॥

ಕಾಶ್ಯಪರಾದ ವಿಭಾಂಡಕರು ಮಹಾಹ್ರದವನ್ನು ತಲುಪಿ ಬಹುಕಾಲ ಅಲ್ಲಿ ತಪಸ್ಸನ್ನು ಮಾಡಿದರು. ದೇವರ್ಷಿಗಳಿಗೆ ಸಮಾನರಾದ ಆ ಋಷಿಗಳು ತಪಸ್ಸಿನಿಂದ ದಣಿದಿರುವಾಗ ಅಪ್ಸರೆಯಾದ ಊರ್ವಶಿಯನ್ನು ನೋಡಿ ಅವರಿಗೆ ವೀರ್ಯಸ್ಖಲನವಾಯಿತು.

ಅಪ್ಸೂಪಸ್ಪೃತೋ ರಾಜನ್ ತದ್ರೇತಃ ಪತಿತಂ ತದಾ ।
ಸಹ ತೋಯೇನ ತೃಷಿತಾ ಮೃಗೀ ತಚ್ಚಾಪಿಬತ್ ತದಾ ॥೧೪॥

ಎಲೈ ರಾಜನೇ, ಅವರು ನೀರಿನಲ್ಲಿ ಸ್ನಾನಮಾಡುತ್ತಿರುವಾಗ ಸ್ಖಲನಗೊಂಡ ವೀರ್ಯವು ನೀರಿನಲ್ಲಿ ಬಿದ್ದಿತು. ಆಗ ಬಾಯಾರಿಕೆಯಿಂದ ಬಂದ ಒಂದು ಹೆಣ್ಣು ಜಿಂಕೆಯು ನೀರಿನ ಜೊತೆಯಲ್ಲಿ ಆ ರೇತಸ್ಸನ್ನೂ ಕುಡಿಯಿತು.

ಅಮೋಘತ್ವಾದ್ ವಿಧೇರ್ಲೈವ ಭಾವಿತ್ವಾದ್ ದೇವನಿರ್ಮಿತಾತ್ ।
ತಸ್ಯಾಂ ಮೃಗ್ಯಾಂ ಸಮಭವತ್ ತಸ್ಯ ಪುತ್ರೋ ಮಹಾನೃಷಿಃ ।
ಋಶ್ಯಶೃಂಗಸ್ತಪೋನಿತ್ಯೋ ವನ ಏವ ವ್ಯವರ್ಧತ ॥೧೫॥

ವಿಭಾಂಡಕರು ಅಮೋಘವೀರ್ಯರಾದ್ದರಿಂದ ಮತ್ತು ದೈವಸಂಕಲ್ಪದಂತೆ ಮುಂದಿನ ಕಾರ್ಯವು ಆಗಬೇಕಾದುದರಿಂದ ಆ ಹೆಣ್ಣು ಜಿಂಕೆಯಲ್ಲಿ ಮಹರ್ಷಿಗಳಾದ ಋಶ್ಯಶೃಂಗರು ಜನಿಸಿದರು. ಋಶ್ಯಶೃಂಗರಾದರೂ ನಿತ್ಯವೂ ತಪೋನಿಷ್ಠರಾಗಿ ಕಾಡಿನಲ್ಲೇ ಬೆಳೆದರು.

ತಸ್ಯ ಶೃಂಗಂ ಶಿರಸಿ ವೈ ರಾಜನ್ನಸೀನ್ಮಹಾತ್ಮನಃ ।
ತೇನರ್ಶ್ಯಶೃಂಗ ಇತ್ಯುಕ್ತ ತದಾ ಸ ಪ್ರಥಿತೋಽಭವತ್ ॥೧೬॥

ಎಲೈ ರಾಜನೇ, ಆ ಮಹಾನುಭಾವರಿಗೆ ತಲೆಯಲ್ಲಿ ಎರಡು ಕೊಂಬುಗಳಿದ್ದವು. ಆದ್ದರಿಂದ ಅವರು ಋಶ್ಯಶೃಂಗ ಎಂಬ ಹೆಸರಿನಿಂದಲೇ ಪ್ರಖ್ಯಾತರಾದರು.

ನ ತೇನ ದೃಷ್ಟಪೂರ್ವೋ೨ನ್ಯಃ ಪಿತುರನ್ಯತ್ರ ಮಾನುಷಃ ।
ತಸ್ಮಾತ್ ತಸ್ಯ ಮನೋ ನಿತ್ಯಂ ಬ್ರಹ್ಮಚರ್ಯೇ೨ಭವನ್ನೃಪ ॥೧೭॥

ಅವರು ತಮ್ಮ ತಂದೆಯನ್ನು ಬಿಟ್ಟು ಬೇರೆ ಯಾವ ಮನುಷ್ಯರನ್ನೂ ನೋಡಿರಲಿಲ್ಲ. ಎಲೈ ರಾಜನೇ, ಆದ್ದರಿಂದ ಅವರ ಮನಸ್ಸು ಯಾವಾಗಲೂ ಬ್ರಹ್ಮಚರ್ಯದಲ್ಲಿಯೇ ಸ್ಥಿರವಾಗಿದ್ದಿತು.

ವಿತಣ್ಡಿನ್ಯೇವ ಕಾಲೇ ತು ಸಖಾ ದಶರಥಸ್ಯ ವೈ ।
ರೋಮಪಾದ ಇತಿ ಖ್ಯಾತೋ ಹ್ಯಂಗಾನಾಮೀಶ್ವರೋ೨ಭವತ್ ॥೧೮॥

ಆ ಸಮಯದಲ್ಲಿ ದಶರಥನ ಸ್ನೇಹಿತನಾದ ರೋಮಪಾದನೆಂದು ಪ್ರಖ್ಯಾತನಾದ ರಾಜನು ಅಂಗಾಧಿಪತಿಯಾಗಿದ್ದನು.

ತೇನ ಕಾಮಾತ್ ಕೃತಾ ಮಿಥ್ಯಾ ಬ್ರಾಹ್ಮಣೇಭ್ಯ ಇತಿ ಶ್ರುತಿಃ ।
ದೈವೋಪಹತಸತ್ವೇನ ಧರ್ಮಜ್ಞೇನಾಪಿ ಭಾರತ ॥೧೯॥

ಎಲೈ ಭಾರತನೇ, ಅವನು ಧರ್ಮಜ್ಞನಾಗಿದ್ದರೂ ದೈವಪ್ರೇರಣೆಯಿಂದ ಉಂಟಾದ ಚಿತ್ತದಿಂದ ಬ್ರಾಹ್ಮಣರಿಗೆ ಕೊಟ್ಟ ಆಶ್ವಾಸನೆಗಳನ್ನು ಸುಳ್ಳು ಮಾಡಿದನೆಂದು ನಾವು ಕೇಳಿದ್ದೇವೆ.

ಸ ಬ್ರಾಹ್ಮಣೈಃ ಪರಿತ್ಯಕ್ತ ತದಾ ಭರತಸತ್ತಮ ।
ಪುರೋಹಿತಾಪಚಾರೇಣ ತಸ್ಯ ರಾಜ್ಞೋ ಯದೃಚ್ಛಯಾ ।
ನ ವವರ್ಷ ಸಹಸ್ರಾಕ್ಷಃ ತತೋ೨ಪೀಡ್ಯಂತ ವೈ ಪ್ರಜಾಃ ॥೨೦॥

ಎಲೈ ಭರತಸತ್ತಮನೇ, ಆಗ ಅವನು ಬ್ರಾಹ್ಮಣರಿಂದ ಪರಿತ್ಯಜಿಸಲ್ಪಟ್ಟನು. ಅವನು ಅಕಸ್ಮಾತ್ತಾಗಿ ಮಾಡಿದ ಪುರೋಹಿತರ ಅಪಚಾರದಿಂದಲೂ ಅವನ ರಾಜ್ಯದಲ್ಲಿ ಇಂದ್ರನು ಮಳೆಯನ್ನು ಸುರಿಸಲಿಲ್ಲ. ಆದರಿಂದ ಪ್ರಜೆಗಳು ಪೀಡೆಗೆ ಒಳಗಾದರು.

ಸ ಬ್ರಾಹ್ಮಣಾನ್ ಪರ್ಯಪೃಚ್ಛತ್ ತಪೋಯುಕ್ತಾನ್ ಮನೀಷಿಣಃ ।
ಪ್ರವರ್ಷಣೇ ಸುರೇಂದ್ರಸ್ಯ ಸಮರ್ಥಾನ್ ಪೃಥಿವೀಪತಿಃ ॥೨೧॥

ಆ ರಾಜನು ತಪೋಯುಕ್ತರಾದ ಮೇಧಾವಿಗಳಾದ ದೇವೇಂದ್ರನನ್ನು ಸಂತೋಷ ಪಡಿಸಿ ಮಳೆಯನ್ನು ತರಿಸಲು ಸಮರ್ಥರಾದ ಬ್ರಾಹ್ಮಣರನ್ನು ಈ ವಿಷಯದಲ್ಲಿ ಪ್ರಶ್ನೆ ಮಾಡಿದನು.

ಕಥಂ ಸ ವರ್ಷೇತ್ ಪರ್ಜನ್ಯ ಉಪಾಯಃ ಪರಿಮೃಶ್ಯತಾಮ್ ।
ತಮೂಚುಶ್ಚೋದಿತಾಸ್ತೇ ತು ಸ್ವಮತಾನಿ ಮನೀಷಿಣಃ ।
ತತ್ರ ತ್ವೇಕೋ ಮುನಿವರಃ ತಂ ರಾಜಾನಮುವಾಚ ಹ ॥೨೨॥

ಅದರಲ್ಲಿ ಒಬ್ಬ ಋಷಿಶ್ರೇಷ್ಠರು ರಾಜನನ್ನು ಕುರಿತು ಹೀಗೆ ಮಾತನಾಡಿದರು. ಏನು ಮಾಡಿದರೆ ಪರ್ಜನ್ಯನು ಮಳೆಯನ್ನು ಸುರಿಸುತ್ತಾನೆ. ಅದಕ್ಕೆ ಬೇಕಾದ ಉಪಾಯವನ್ನು ಚಿಂತಿಸಿ (ಎಂದು ಹೇಳಿದನು). ರಾಜನಿಂದ ಹೀಗೆ ಪ್ರೇರಿಸಲ್ಪಟ್ಟ ಮೇಧಾವಿಗಳಾದ ಬ್ರಾಹ್ಮಣರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದರು.

ಕುಪಿತಾಸ್ತವ ರಾಜೇಂದ್ರ ಬ್ರಾಹ್ಮಣಾ ನಿಷ್ಕೃತಿಂ ಚರ ।
ಋಶ್ಯಶೃಂಗಂ ಮುನಿವರಮಾನಯಸ್ವ ಚ ಪಾರ್ಥಿವ ।
ಜಣೇಯಮನಭಿಜ್ಞಂ ಚ ನಾರೀಣಾಮಾರ್ಜವೇ ರತಮ್ ॥೨೩॥

ಸ ಚೇದವತರೇದ್ ರಾಜನ್ ವಿಷಯಂ ತೇ ಮಹಾತಪಾಃ ।
ಸದ್ಯಃ ಪ್ರವರ್ಷೇತ್ ಪರ್ಜನ್ಯ ಇತಿ ಮೇ ನಾಸ್ತಿ ಸಂಶಯಃ ॥೨೪॥

ಏತಚ್ಛ್ರುತ್ವಾ ತು ವಚನಂ ಕೃತ್ವಾ ನಿಷ್ಕೃತಿಮಾತ್ಮನಃ ।
ಸ ಕೃತ್ವಾ ಪುನರಾಗಚ್ಛತ್ ಪ್ರಸನ್ನೇಷು ದ್ವಿಜಾತಿಷು ॥೨೫॥

ರಾಜೇಂದ್ರನೇ, ಬ್ರಾಹ್ಮಣರು ನಿನ್ನ ಮೇಲೆ ಕೋಪಗೊಂಡಿದ್ದಾರೆ. ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೋ. ಎಲೈ ರಾಜನೇ, ಜಿಂಕೆಯಲ್ಲಿ ಜನಿಸಿ ನಾರಿಯರನ್ನೇ ನೋಡದಿರುವ ಆರ್ಜವವುಳ್ಳ ಮುನಿಶ್ರೇಷ್ಠರಾದ ಋಶ್ಯಶೃಂಗರನ್ನು ನಿನ್ನ ರಾಜ್ಯಕ್ಕೆ ಕರೆದುಕೊಂಡು ಬಾ. ಎಲೈ ರಾಜನೇ, ಮಹಾತಪಸ್ವಿಗಳಾದ ಅವರು ನಿನ್ನ ರಾಜ್ಯದಲ್ಲಿ

ಪಾದವನ್ನು ಇಟ್ಟ ತಕ್ಷಣ ಪರ್ಜನ್ಯನು ಮಳೆಯನ್ನು ಸುರಿಸುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ (ಎಂದು ಹೇಳಿದರು).

ಈ ಮಾತುಗಳನ್ನು ಕೇಳಿದ ರಾಜನು ರಾಜ್ಯದಿಂದ ಹೊರಗೆ ಹೋಗಿ ತನಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಬ್ರಾಹ್ಮಣರು ಪ್ರಸನ್ನರಾದಮೇಲೆ ಪುನಃ ರಾಜ್ಯಕ್ಕೆ ಹಿಂದಿರುಗಿದನು.

ರಾಜಾನಮಾಗತಂ ದೃಷ್ಟ್ವಾ ಪ್ರತಿಸಂಜಗೃಹುಃ ಪ್ರಜಾಃ ।
ಸ ವೈ ತಾಃ ಪ್ರತಿಜಗ್ರಾಹ ಪಿತೇವ ಹಿತಕೃತ್ ಸದಾ ॥೨೬॥

ರಾಜನು ಹಿಂದಿರುಗುವುದನ್ನು ನೋಡಿ ಪ್ರಜೆಗಳು ಅವನನ್ನು ಸ್ವೀಕರಿಸಿದರು. ತಂದೆಯಂತೆ ಯಾವಾಗಲೂ ಪ್ರಜೆಗಳಿಗೆ ಹಿತವನ್ನುಂಟುಮಾಡುತ್ತಿದ್ದ ಅವನೂ ಸಹ ಪ್ರಜೆಗಳನ್ನು ಸ್ವೀಕರಿಸಿದನು.

ತತೋಽಂಗಪತಿರಾಹೂಯ ಸಚಿವಾನ್ ಮಂತ್ರಕೋವಿದಾನ್ ।
ಋಶ್ಯಶೃಂಗಾಗಮೇ ಯತ್ನಮಕರೋನ್ಮಂತ್ರನಿಶ್ಚಯೇ ॥೨೭॥

ಅನಂತರ ಅಂಗಪತಿಯಾದ ರೋಮಪಾದನು ಮಂತ್ರನಿಪುಣರಾದ ಸಚಿವರನ್ನು ಕರೆದು ಮಂತ್ರಾಲೋಚನೆಯನ್ನು ಮಾಡಿ ಋಶ್ಯಶೃಂಗರನ್ನು ಕರೆತರುವ ಪ್ರಯತ್ನವನ್ನು ಮಾಡಿದನು.

ಸೋಽಧ್ಯಗಚ್ಛದುಪಾಯಂ ತು ತೈರಮಾತ್ಯೈಃ ಸಹಾಚ್ಯುತಃ ।
ಶಾಸ್ತ್ರಜ್ಞೈರಲಮರ್ಥಜ್ಞೈರ್ನಿತ್ಯಂ ಚ ಪರಿನಿಷ್ಠಿತೈಃ ॥೨೮॥

ಶಾಸ್ತ್ರಜ್ಞರಾದ ಅರ್ಥಜ್ಞರಾದ ನಿತ್ಯವೂ ತನ್ನಲ್ಲಿ ಶ್ರದ್ಧೆಯುಳ್ಳ ಮಂತ್ರಿಗಳ ಜೊತೆಯಲ್ಲಿ ತನ್ನ ಗುಣಗಳಿಂದ ಚ್ಯುತನಾಗದ ಆ ರಾಜನು ಮಂತ್ರಾಲೋಚನೆಯನ್ನು ಮಾಡಿ ಒಂದು ಉಪಾಯವನ್ನು ತಿಳಿದನು.

ತತಸ್ತಾ ಆನಯಾಮಾಸ ಚಾರಮುಖ್ಯಾನ್ ಮಹೀಪತಿಃ ।
ವೇಶ್ಯಾಃ ಸರ್ವತ್ರ ನಿಷ್ಣಾತಾಸ್ತಾ ಉವಾಚ ಸ ಪಾರ್ಥಿವಃ ॥೨೯॥

ಋಶ್ಯಶೃಂಗಮೃಷೇಃ ಪುತ್ರಮಾನಯದ್ವಮುಪಾಯತಃ ।
ಲೋಭಯಿತ್ವಾದ್ಭುತವಿಶ್ರಬ್ಧಂ ವಿಷಯಂ ಮಮ ಶೋಭನಾಃ ॥೩೦॥

ಅನಂತರ ತನ್ನ ಮುಖ್ಯಚಾರರ ಮೂಲಕ ಮಹೀಪತಿಯು ಎಲ್ಲ ವಿಧದಲ್ಲಿಯೂ ನಿಷ್ಣಾತರಾದ ವೇಶ್ಯೆಯರನ್ನು ಕರೆಸಿ ಅವರನ್ನು ಕುರಿತು– 'ಎಲೌ ಶೋಭನೆಯರೇ, ಋಷಿಕುಮಾರರಾದ ಋಶ್ಯಶೃಂಗರನ್ನು ಅತಿವಿಶ್ವಾಸವುಂಟಾಗುವಂತೆ ಉಪಾಯದಿಂದ ಪ್ರಲೋಭಗೊಳಿಸಿ ನನ್ನ ದೇಶಕ್ಕೆ ಕರೆದುಕೊಂಡು ಬನ್ನಿ' ಎಂದು ಹೇಳಿದನು.

ತಾ ರಾಜಭಯಭೀತಾಶ್ಚ ಶಾಪಭೀತಾಶ್ಚ ಯೋಷಿತಃ ।
ಅಶಕ್ಯಮೂಚುಸ್ತತ್ ಕಾರ್ಯಂ ವಿಷಣ್ಣಾ ಗತಚೇತಸಃ ॥೩೨॥

ಆ ಸ್ತ್ರೀಯರಾದರೂ ರಾಜಭಯದಿಂದಲೂ, ಋಷಿಯ ಶಾಪದ ಭಯದಿಂದಲೂ ಭೀತರಾಗಿ ವಿಷಾದದಿಂದ ವಿಚೇತನರಾಗಿ ಈ ಕಾರ್ಯವು ಸಾಧ್ಯವಿಲ್ಲವೆಂದು ಹೇಳಿದರು.

ತಂ ಚೈಕಾ ಚ ಜರದ್ಯೋಷಾ ರಾಜಾನಮಿದಮಬ್ರವೀತ್ ।
ಪ್ರಯತಿಷ್ಯೇ ಮಹಾರಾಜ ತಮಾನೇತುಂ ತಪೋಧನಮ್ ॥೩೩॥

ಅಭಿಪ್ರೇತಾಂಶ್ಚ ಮೇ ಕಾಮಾನ್ ಸಮನುಜ್ಞಾತುಮರ್ಹಸಿ ।
ತತಃ ಶಕ್ಷ್ಯೇ ಲೋಭಯಿತುಮ್ ಋಶ್ಯಶೃಂಗಮೃಷೇಃ ಸುತಮ್ ॥೩೪॥

ಅವರಲ್ಲಿ ಒಬ್ಬ ವಯಸ್ಸಾದ ವನಿತೆಯು ರಾಜನನ್ನು ಕುರಿತು– 'ಮಹಾರಾಜನೇ, ಆ ತಪೋಧನರನ್ನು ಕರೆತರಲು ನಾನು ಪ್ರಯತ್ನಿಸುವೆನು. ನನಗೆ ಬೇಕಾದ ಸಲಕರಣೆಗಳೆಲ್ಲವನ್ನೂ ನೀನು ಒದಗಿಸಿಕೊಡಬೇಕು. ಹಾಗೆ ಮಾಡಿದರೆ ಋಷಿಪುತ್ರರಾದ ಋಶ್ಯಶೃಂಗರನ್ನು ಪ್ರಲೋಭಗೊಳಿಸಲು ಸಮರ್ಥಳಾಗುತ್ತೇನೆ' ಎಂದು ಹೇಳಿದಳು.

ತಸ್ಯಾಃ ಸರ್ವಮಭಿಪ್ರಾಯಮನ್ವಜಾನಾತ್ ಸ ಪಾರ್ಥಿವಃ ।
ಧನಂ ಚ ಪ್ರದದೌ ಭೂರಿ ರತ್ನಾನಿ ವಿವಿಧಾನಿ ಚ ॥೩೫॥

ಅವಳ ಅಭಿಪ್ರಾಯದಂತೆ ರಾಜನು ಅವಳಿಗೆ ಬೇಕಾದ ಎಲ್ಲ ಅನುಕೂಲಗಳನ್ನೂ ಕಲ್ಪಿಸಿ ಕೊಟ್ಟನು ಮತ್ತು ಅವಳಿಗೆ ಬಹಳವಾದ ಧನವನ್ನೂ ಮತ್ತು ವಿಧವಿಧವಾದ ರತ್ನಗಳನ್ನೂ ಕೊಟ್ಟನು.

ತತೋ ರೂಪೇಣ ಸಂಪನ್ನಾ ವಯಸಾ ಚ ವಿಶಾಂಪತೇ ।
ಸ್ತ್ರಿಯ ಆದಾಯ ಕಾಶ್ಚಿತ್ ಸಾ ಜಗಾಮ ವನಮಂಜಸಾ ॥೩೬॥

ಎಲೈ ರಾಜನೇ, ಆಗ ಅವಳು ಒಳ್ಳೆಯ ರೂಪ ಮತ್ತು ವಯಸ್ಸಿನಿಂದ ಕೂಡಿದ ಕೆಲವು ಸ್ತ್ರೀಯರನ್ನು ಕರೆದುಕೊಂಡು ಚೆನ್ನಾಗಿ ಆಶ್ರಮಕ್ಕೆ ಹೊರಟಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಂಟನೆಯ ಅಧ್ಯಾಯ

ರೋಮಪಾದ ನಿರ್ದೇಶದಂತೆ ವರಾಂಗನೆಯರಿಂದ ಋಶ್ಯಶೃಂಗರ ಪ್ರಲೋಭನ.

ಲೋಮಶಃ

ತಾಸ್ತು ನಾವ್ಯಾಶ್ರಮಂ ಚಕ್ರೇ ರಾಜಕಾರ್ಯಾರ್ಥಸಿದ್ಧಯೇ ।
ಸಂದೇಶಾಚ್ಚಾಪಿ ನೃಪತೇಃ ಸ್ವಬುದ್ಧ್ಯಾ ಚೈವ ಭಾರತ ॥೧॥

ಎಲೈ ಭಾರತನೇ, ಆ ಸ್ತ್ರೀಯರಾದರೂ ರಾಜಕಾರ್ಯಾರ್ಥಸಿದ್ಧಿಗಾಗಿ ರಾಜನ ಸಂದೇಶದಿಂದಲೂ ಮತ್ತು ತಮ್ಮ ಬುದ್ಧಿಯಿಂದಲೂ ಪ್ರೇರಿತರಾಗಿ ನಾವೆಯಲ್ಲೇ ಒಂದು ಆಶ್ರಮವನ್ನು ನಿರ್ಮಾಣ ಮಾಡಿದರು.

ನಾನಾಪುಷ್ಪಫಲೈರ್ವೃಕ್ಷೈಃ ಕೃತ್ರಿಮೈರುಪಶೋಭಿತಮ್ ।
ನಾನಾಗುಲ್ಮಲತೋಪೇತೈಃ ಸ್ವಾದುಕಾಮಫಲಪ್ರದೈಃ ॥೨॥

ಅತೀವ ರಮಣೀಯಂ ತದತೀವ ಚ ಮನೋಹರಮ್ ।
ಚಕ್ರೇ ನಾವ್ಯಾಶ್ರಮಂ ರಮ್ಯಮದ್ಭುತೋಪಮದರ್ಶನಮ್ ॥೩॥

ರುಚಿಕರವಾದ ಬೇಡಿದ ಹಣ್ಣುಗಳನ್ನು ಕೊಡುವ ನಾನಾ ಪುಷ್ಪಫಲಗಳುಳ್ಳ ಕೃತ್ರಿಮ ವೃಕ್ಷಗಳಿಂದ ಸುಂದರವಾದ ಅನೇಕ ಗುಲ್ಮ ಮತ್ತು ಲತೆಗಳಿಂದ ಕೂಡಿದ ಬಹಳ

ರಮಣೀಯವೂ, ಮನೋಹರವೂ, ಸುಂದರವೂ ಆದ್ಭುತವೂ ಆದ ಒಂದು ನಾವೆ ಆಶ್ರಮವನ್ನು ಮಾಡಿದರು.

ತತೋ ನಿಬಧ್ಯ ಸಾ ನಾವಮದೂರೇ ಕಾಶ್ಯಪಾಶ್ರಮಾತ್ ।
ಚಾರಯಾಮಾಸ ಪುರುಷೈರ್ವಿಹಾರಂ ತಸ್ಯ ವೈ ಮುನೇಃ ॥೪॥

ಅನಂತರ ಆ ವೇಶ್ಯೆಯು ಆ ನಾವೆಯನ್ನು ಕಾಶ್ಯಪರ ಆಶ್ರಮದ ಸಮೀಪದಲ್ಲಿ ನಿಲ್ಲಿಸಿ ತನ್ನ ಪುರುಷರಿಂದ ಆ ಋಷಿಗಳ ಆಶ್ರಮವನ್ನು ಸಂಚಾರ ಮಾಡಿಸಿದಳು.

ತತೋ ದುಹಿತರಂ ವೇಶ್ಯಾಂ ಸಮಧ್ಯಾಪ್ಯೇತಿಕೃತ್ಯತಾಮ್ ।
ದೃಷ್ಟ್ವಾ ಽಽಶ್ರಮಂ ಕಾಶ್ಯಪಸ್ಯ ಪ್ರಾಹಿಣೋದ್ ಬುದ್ಧಿಸಮ್ಮತಾಮ್ ॥೫॥

ಅನಂತರ ಕಾಶ್ಯಪರ ಆಶ್ರಮವನ್ನು ಚೆನ್ನಾಗಿ ತಿಳಿದು ಮೇಧಾವಿಯಾದ ವೇಶ್ಯೆಯಾದ ತನ್ನ ಮಗಳಿಗೆ ಮಾಡಬೇಕಾದ ಕಾರ್ಯದ ಬಗ್ಗೆ ಸರಿಯಾದ ಶಿಕ್ಷಣವನ್ನು ನೀಡಿ ಅವಳನ್ನು ಆಶ್ರಮಕ್ಕೆ ಕಳುಹಿಸಿಕೊಟ್ಟಳು.

ಸಾ ತತ್ರ ಗತ್ವಾ ಕುಶಲಾ ತಪೋನಿತ್ಯಸ್ಯ ಸನ್ನಿಧೌ ।
ಆಶ್ರಮಂ ತಂ ಸಮಾಸಾದ್ಯ ದದರ್ಶ ತಮೃಷೇಃ ಸುತಮ್ ॥೬॥

ಕುಶಲಳಾದ ಅವಳು ತಪೋನಿರತರಾದ ಆ ಋಷಿಗಳ ಸನ್ನಿಧಿಯಲ್ಲಿ (ಸಮೀಪದಲ್ಲಿ) ಆಶ್ರಮವನ್ನು ಪ್ರವೇಶಿಸಿ ಋಷಿಪುತ್ರರಾದ ಋಷ್ಯಶೃಂಗರನ್ನು ನೋಡಿದಳು.

ವೇಶ್ಯಾ

ಕಚ್ಚನ್ಮುನೇ ಕುಶಲಂ ತಾಪಸಾನಾಂ
ಕಚ್ಚಿಚ್ಚ ವೋ ಮೂಲಫಲಂ ಸಮೃದ್ಧಮ್ ।
ಕಚ್ಚಿದ್ ಭವಾನ್ ಕುಶಲೀ ಚಾಶ್ರಮೇಽಸ್ಮಿನ್
ತ್ವಾಂ ವೈ ದ್ರಷ್ಟುಂ ಸಾಂಪ್ರತಮಾಗತಾಽಸ್ಮಿ ॥೭॥

ವೇಶ್ಯಾ– ಋಷಿಗಳೇ, ನಿಮ್ಮ ಆಶ್ರಮದಲ್ಲಿ ತಾಪಸರಿಗೆ ಕುಶಲವೇ? ಮೂಲಫಲಗಳು ಸಮೃದ್ಧವಾಗಿವೆಯೇ? ಈ ಆಶ್ರಮದಲ್ಲಿ ನೀವು ಕ್ಷೇಮದಿಂದ ಇದ್ದೀರಾ? ನಾನು ನಿಮ್ಮನ್ನು ನೋಡಲು ಈಗ ಇಲ್ಲಿಗೆ ಬಂದಿದ್ದೇನೆ.

ಕಚ್ಚಿತ್ ತಪೋ ವರ್ಧತೇ ತಾಪಸಾನಾಂ
ಪಿತಾ ಚ ತೇ ಕಚ್ಚಿದದೀನತೇಜಾಃ ।
ಕಚ್ಚಿತ್ ತ್ವಯಾ ಪ್ರೀಯತೇ ಚೈವ ವಿಪ್ರ
ಕಚ್ಚಿತ್ ಸ್ವಾಧ್ಯಾಯಃ ಕ್ರಿಯತೇ ಋಶ್ಯಶೃಂಗ ॥೮॥

ತಾಪಸರೂ ತಪಸ್ಸುಗಳೂ ಅಭಿವೃದ್ಧಿಯನ್ನು ಹೊಂದುತ್ತಿವೆಯೇ? ನಿಮ್ಮ ತಂದೆಯು ಒಳ್ಳೆಯ ತೇಜಸ್ವಿಗಳಾಗಿದ್ದಾರೆಯೇ? ಎಲೈ ಬ್ರಾಹ್ಮಣರೇ, ನೀವು ಸಂತೋಷವಾಗಿದ್ದೀರಾ? ಎಲೈ ಋಶ್ಯಶೃಂಗರೇ ನಿಮ್ಮ ಸ್ವಾಧ್ಯಾಯವು ಚೆನ್ನಾಗಿ ಜರುಗುತ್ತಿದೆಯೇ?

ಋಶ್ಯಶೃಂಗಃ

ಋದ್ಧೋ ಭವಾನ್ ಜ್ಯೋತಿರಿವ ಪ್ರಕಾಶತೇ
ಮನ್ಯೇ ಚಾಹಂ ತ್ವಾಮಭಿವಾದನೀಯಮ್ ।
ಪಾದ್ಯಂ ತೇ ವೈ ಸಂಪ್ರದಾಸ್ಯಾಮಿ ಕಾಮಾದ್
ಯಥಾಧರ್ಮಂ ಫಲಮೂಲಾನಿ ಚೈವ ॥೯॥

ಋಶ್ಯಶೃಂಗ– ಚೆನ್ನಾಗಿ ಬೆಳೆದ ನೀನು ಜ್ಯೋತಿಯಂತೆ ಪ್ರಕಾಶಿಸುತ್ತಿದ್ದೀಯೆ. ನಾನು ನಿನಗೆ ನಮಸ್ಕಾರವನ್ನು ಮಾಡಬೇಕೆಂದು ಭಾವಿಸುತ್ತೇನೆ. ನನ್ನ ಇಚ್ಛೆಯಿಂದಲೇ ನಿನಗೆ ಪಾದ್ಯವನ್ನು ನೀಡುವೆನು. ನನ್ನ ಧರ್ಮಕ್ಕೆ ಅನುಗುಣವಾಗಿ ಫಲಮೂಲಗಳನ್ನೂ ನೀಡುವೆನು.

ಕೌಶ್ಯಾಂ ಬ್ಯಸ್ಯಾಮಸ್ತ್ವಯಥೋಪಜೋಷಂ
ಕೃಷ್ಣಾಜಿನೇನಾವೃತಾಯಾಂ ಶುಭಾಯಾಮ್ ।
ಕ್ವ ಚಾಶ್ರಮಸ್ತವ ಕಿಂ ನಾಮ ಚೇದಂ
ವ್ರತಂ ಬ್ರಹ್ಮಂಶ್ಚರಸಿ ತೇ ಧ್ಯೇಯಂ ವದ ತ್ವಮ್ ॥೧೦॥

ಕೃಷ್ಣಾಜಿನದಿಂದ ಆವೃತವಾದ ಪವಿತ್ರವಾದ ದರ್ಭಾಸನದಲ್ಲಿ ಸುಖವಾಗಿ ಕುಳಿತುಕೋ. ನಿನ್ನ ಆಶ್ರಮವು ಎಲ್ಲಿದೆ? ಎಲೈ ಬ್ರಾಹ್ಮಣನೇ, ನೀನು ಆಚರಿಸುವ ವ್ರತಕ್ಕೆ ಏನು ಹೆಸರು? ನಿನ್ನ ಧ್ಯೇಯವಸ್ತುವು ಯಾವುದು?

ವೇಶ್ಯಾ

ಮಮಾಶ್ರಮಃ ಕಾಶ್ಯಪಪುತ್ರ ರಮ್ಯಃ
ತ್ರಿಯೋಜನಂ ಶೈಲಮಿಮಂ ಪರೇಣ ।
ತತ್ರ ಸ್ವಧರ್ಮೋಽನಭಿವಾದನಂ ನೋ
ನ ಚೋದಕಂ ಪಾದ್ಯಮುಪಸ್ಪೃಶಾಮಿ ॥೧೧॥

ವೇಶ್ಯ– ಕಾಶ್ಯಪಪುತ್ರರೇ ನನ್ನ ಸುಂದರವಾದ ಆಶ್ರಮವು ಈ ಪರ್ವತದ ಆಚೆಯ ಭಾಗದಲ್ಲಿ ಮೂರುಯೋಜನ ದೂರದಲ್ಲಿದೆ. ಅಲ್ಲಿ ನಮ್ಮ ಸ್ವಧರ್ಮವೆಂದರೆ ಯಾರಿಂದಲೂ ನಮಸ್ಕಾರವನ್ನು ಮಾಡಿಸಿಕೊಳ್ಳದಿರುವುದು ಮತ್ತು ಅರ್ಘ್ಯಪಾದ್ಯಗಳನ್ನು ಸ್ವೀಕರಿಸದಿರುವುದು.

ಋಶ್ಯಶೃಂಗಃ

ಫಲಾನಿ ಪಕ್ವಾನಿ ದದಾನಿ ತೇಽಹಂ
ಭಲ್ಲಾತಕಾನ್ಯಾಮಲಕಾನಿ ಚೈವ ।
ಬಿಲ್ವಾನಿ ಚೈವೇಂಗುದಧನ್ವನಾನಿ
ಪ್ರಿಯಾಲಕಾನ್ ಕಾಮಕರಂ ಕುರುಷ್ವ ॥೧೨॥

ಋಶ್ಯಶೃಂಗ– ನಾನು ನಿನಗೆ ಮಾಗಿದ ಭಲ್ಲಾತಕ, ಆಮರಕ, ಬಿಲ್ವ, ಇಂಗುದ, ಧನ್ವನ, ಪ್ರಿಯಾಲಕ ಮೊದಲಾದ ಫಲಗಳನ್ನು ಕೊಡುವೆನು. ಅವುಗಳನ್ನು ನಿನ್ನ ಇಷ್ಟಬಂದಂತೆ ಸ್ವೀಕರಿಸು.

ಲೋಮಶಃ

ಸಾ ತಾನಿ ಸರ್ವಾಣಿ ವಿಸರ್ಜಯಿತ್ವಾ
ಭಕ್ಷಾನ್ ಮಹಾರ್ಹಾನ್ ಪ್ರದದೌ ಚ ತಸ್ಮೈ ।
ತಾನ್ಯೃಶ್ಯಶೃಂಗಸ್ಯ ಮಹಾರಸಾನಿ
ಭೃಶಂ ಸುರೂಪಾಣಿ ರುಚಿಂ ದದುರ್ಹಿ ॥೧೩॥

ಲೋಮಶ– ಆ ವೇಶ್ಯೆಯು ಆ ಎಲ್ಲಾ ಫಲಗಳನ್ನೂ ದೂರಸರಿಸಿ ತಾನು ತಂದಿದ್ದ ಮಹಾರ್ಹವಾದ ಭಕ್ಷ್ಯಗಳನ್ನು ಅವರಿಗೆ ಕೊಟ್ಟಳು. ಮಹಾರಸವುಳ್ಳ ಒಳ್ಳೆಯ ರೂಪವನ್ನು ಹೊಂದಿದ್ದ ಆ ಭಕ್ಷಗಳು ಋಶ್ಯಶೃಂಗರಿಗೆ ಚೆನ್ನಾಗಿ ರುಚಿಸಿದವು.

ದದೌ ಚ ಮಾಲ್ಯಾನಿ ಸುಗಂಧವಂತಿ
ಚಿತ್ರಾಣಿ ವಾಸಾಂಸಿ ಚ ಭಾನುಮಂತಿ ।
ಪಾನಾನಿ ಚಾಗ್ರ್ಯಾಣಿ ತತೋ ಮುಮೋದ
ಚಕ್ರೀಡ ಚೋಚ್ಚೈಃ ಪ್ರಜಹಾಸ ಚೈವ ॥೧೪॥

ಆ ವೇಶ್ಯೆಯು ಅವರಿಗೆ ಪರಿಮಳಯುಕ್ತವಾದ ಮಾಲೆಗಳನ್ನೂ, ಹೊಳೆಯುವ ವಿಚಿತ್ರವಾದ ವಸ್ತುಗಳನ್ನೂ, ಶ್ರೇಷ್ಠವಾದ ಪಾನೀಯಗಳನ್ನೂ ಕೊಟ್ಟುಸಂತೋಷಪಟ್ಟಳು ಮತ್ತು ಆಟವನ್ನು ಆಡಿ ಗಟ್ಟಿಯಾಗಿ ನಗುತ್ತಿದ್ದಳು.

ಸಾ ಕಂದುಕೇನಾರಮತಾಸ್ಯ ಮೂಲೇ
ವಿಭಜ್ಯಮಾನಾ ಫಲಿತಾ ಲತೇವ ।
ಗಾತ್ರೈಶ್ಚ ಗಾತ್ರಾಣಿ ನಿಷೇವಮಾಣಾ
ಸಮಾಶ್ಲಿಷಚ್ಚಾಸಕೃದೃಶ್ಯಶೃಂಗಮ್ ॥೧೫॥

ಅವಳು ಅವನ ಸಮೀಪದಲ್ಲಿ ಕಂದುಕ ಕ್ರೀಡೆಯನ್ನು ಆಡುತ್ತಾ ಫಲಗಳ ಬಾರದಿಂದ ಬಾಗಿದ ಲತೆಯಂತೆ ಮುರಿದು ಹೋಗುವಂತೆ ಕಾಣುತ್ತಾ ಆಟವಾಡಿದಳು. ಅವಳು ತನ್ನ ದೇಹದಿಂದ ಋಶ್ಯಶೃಂಗರ ದೇಹವನ್ನು ಸೇವಿಸುತ್ತಾ ಪುನಃ ಪುನಃ ಋಶ್ಯಶೃಂಗರನ್ನು ಆಲಿಂಗಿಸಿದಳು.

ಸರ್ಜಾನಶೋಕಾಂಸ್ತಿಲಕಾಂಶ್ಚ ವೃಕ್ಷಾನ್
ಪ್ರಪುಷ್ಪಿತಾನವನಾಮ್ಯಾವಭಜ್ಯ ।
ವಿಲಜ್ಜಮಾನೇವ ಮದಾಭಿಭೂತಾ
ಪ್ರಲೋಭಯಾಮಾಸ ಸುತಂ ಮಹರ್ಷೇಃ ॥೧೬॥

ಸರ್ಜ, ಅಶೋಕ, ತಿಲಕ ಮೊದಲಾದ ಪುಷ್ಪಭರಿತವಾದ ವೃಕ್ಷಗಳನ್ನು ಬಗ್ಗಿಸಿ ಸಣ್ಣರೆಂಬೆಗಳನ್ನು ಕೀಳುತ್ತಾ ಮದಕ್ಕೆ ವಶಳಾದವಳಾಗಿ ನಾಚಿಕೆಯನ್ನು ಪಡುವವಳಂತೆ ತೋರಿಸುತ್ತಾ ಆ ಮಹರ್ಷಿಗಳ ಪುತ್ರರನ್ನು ಪ್ರಲೋಭಿಸಿದಳು.

ಅಥರ್ಶ್ಯಶೃಂಗಂ ವಿಕೃತಂ ಸಮೀಕ್ಷ್ಯ
ಪುನಃಪುನಃ ಪೀಡ್ಯ ಚ ಗಾತ್ರಮಸ್ಯ ।

ಅವೇಕ್ಷ್ಯಮಾಣಾ ಶನಕೈರ್ಜಗಾಮ
ಕೃತ್ವಾऽಗ್ನಿಹೋತ್ರಸ್ಯ ತದಾऽಪದೇಶಮ್ ॥೧೭॥

ಅನಂತರ ಋಶ್ಯಶೃಂಗರು ಮನಸ್ಸಿನಲ್ಲಿ ವಿಕಾರವನ್ನು ಹೊಂದಿದುದನ್ನು ಗಮನಿಸಿ ಪುನಃಪುನಃ ಅವರ ದೇಹವನ್ನು ಒತ್ತಿ ಅಗ್ನಿಹೋತ್ರದ ಸಮಯವಾಯಿತೆಂದು ನೆಪವನ್ನು ಹೇಳಿ ಅವರನ್ನೇ ನೋಡುತ್ತಾ ನಿಧಾನವಾಗಿ ಆಶ್ರಮದಿಂದ ಹೊರಗೆ ಹೋದಳು.

ತಸ್ಯಾಂ ಗತಾಯಾಂ ಮದನೇನ ಮತ್ತೋ
ವಿಚೇತನಶ್ಚಾಭವದೃಶ್ಯಶೃಂಗಃ ।
ತಾಮೇವ ಭಾವೇನ ಗತೇನ ಶೂನ್ಯೋ
ವಿನಿಃಶ್ವಸನ್ನಾರ್ತರೂಪೋ ಬಭೂವ ॥೧೮॥

ಅವಳು ಹೊರಟು ಹೋದಮೇಲೆ ಋಶ್ಯಶೃಂಗರು ಕಾಮವಶರಾಗಿ ವಿಚೇತನರಾದರು. ಮನಸ್ಸಿನಲ್ಲಿ ಅವಳನ್ನೇ ಯೋಚಿಸುತ್ತಾ ಶೂನ್ಯದೃಷ್ಟಿಯಿಂದ ನಿಟ್ಟುಸಿರನ್ನು ಬಿಡುತ್ತಾ ಆರ್ತರೂಪವನ್ನು ಧರಿಸಿ ಕುಳಿತರು.

ತತೋ ಮುಹೂರ್ತಾದ್ಧರಿಪಿಂಗಲಾಕ್ಷಃ
ಪ್ರವೇಷ್ಟಿತೋ ರೋಮಭಿರಾನಖಾಗ್ರಮ್ ।
ಸ್ವಾಧ್ಯಾಯವಾನ್ ವೃತ್ತಸಮಾಧಿಯುಕ್ತೋ
ವಿಭಾಂಡಕಃ ಕಾಶ್ಯಪಃ ಪ್ರಾದುರಾಸೀತ್ ॥೧೯॥

ಅನಂತರ ಒಂದು ಮುಹೂರ್ತವು ಕಳೆದಮೇಲೆ ಹರಿಪಿಂಗಲಾಕ್ಷರಾದ ಶರೀರದಲ್ಲೆಲ್ಲಾ ರೋಮಗಳಿಂದ ತುಂಬಿದ ಸ್ವಾಧ್ಯಾಯಶೀಲರಾದ ಒಳ್ಳೆಯ ನಡತೆ ಮತ್ತು ಸಮಾಧಿಯನ್ನು ಹೊಂದಿದ ಕಾಶ್ಯಪರಾದ ವಿಭಾಂಡಕರು ಅಲ್ಲಿಗೆ ಬಂದರು.

ಸೋऽಪಶ್ಯದಾಸೀನಮುಪೇತ್ಯ ಪುತ್ರಂ
ಧ್ಯಾಯಂತಮೇಕಂ ವಿಪರೀತಚಿತ್ತಮ್ ।
ವಿನಿಃಶ್ವಸಂತಂ ಮುಹುರೂರ್ಧ್ವದೃಷ್ಟಿಂ
ವಿಭಾಂಡಕಃ ಪುತ್ರಮುವಾಚ ದೀನಮ್ ॥೨೦॥

ಅವರು ಪುತ್ರನನ್ನು ಸಮೀಪಿಸಿ ಒಬ್ಬನೇ ಕುಳಿತು ಏನನ್ನೋ ಚಿಂತಿಸುತಾ ವಿಪರೀತವಾದ ಮನಸ್ಸನ್ನು ಹೊಂದಿದವನಾಗಿ ನಿಟ್ಟುಸಿರನ್ನು ಬಿಡುತ್ತಾ ಮತ್ತೆ ಮತ್ತೆ ಊರ್ಧ್ವದೃಷ್ಟಿಯನ್ನು ಹೊಂದಿದ ತಮ್ಮ ದೀನನಾದ ಪುತ್ರನನ್ನು ನೋಡಿ ವಿಭಾಂಡಕರು ಮಾತನಾಡಿದರು.

ವಿಭಾಂಡಕಃ

ಕಲ್ಪ್ಯಂತೇ ವೈ ಸಮಿಧಃ ಕಿನ್ನು ತಾತ
ಕಚ್ಚಿದ್ಧುತಂ ಚಾಗ್ನಿಹೋತ್ರಂ ತ್ವಯಾऽದ್ಯ ।
ಸುನಿರ್ಕೃತಂ ಸ್ರುಕ್ಸ್ರುವಂ ಹೋಮಧೇನುಃ
ಕಚ್ಚಿತ್ ಸವತ್ಸಾ ಚ ಕೃತಾ ತ್ವಯಾ ಚ ॥೨೧॥

ವಿಭಾಂಡಕ– ಪುತ್ರನೇ, ಸಮಿತ್ತುಗಳು ಸಿದ್ಧವಾಗಿವೆಯೇ? ಈ ದಿನ ನೀನು ಅಗ್ನಿಹೋತ್ರವನ್ನು ಮಾಡಿದೆಯಾ? ಸ್ರುಕ್‌ಸ್ರವವನ್ನು ಚೆನ್ನಾಗಿ ತೊಳೆದು ಆಗಿದೆಯೇ? ಹೋಮಧೇನುವಿನ ಸಮೀಪದಲ್ಲಿ ಕರುವನ್ನು ಬಿಟ್ಟು ಹಾಲುಕುಡಿಸಿದ್ದಾಗಿದೆಯೇ?

ನ ವೈ ಯಥಾಪೂರ್ವಮಿವಾಸಿ ಪುತ್ರ
ಚಿಂತಾಪರಶ್ಚಾಸಿ ವಿಚೇತನಶ್ಚ ।
ದೀನೋऽತಿಮಾತ್ರಂ ಕಿಮಿವಾದ್ಯ ಖಿನ್ನಃ
ಪೃಚ್ಛಾಮಿ ತ್ವಾಂ ಕ ಇಹಾಭ್ಯಾಗತೋऽಭೂತ್ ॥೨೨॥

ಪುತ್ರನೇ, ನೀನು ಮೊದಲಿನಂತೆ ಇಲ್ಲ. ಚಿಂತಾಪರನೂ, ವಿಚೇತನನೂ ಆಗಿದ್ದೀಯೆ. ಈ ದಿನ ಇಷ್ಟು ದೈನ್ಯವನ್ನು ಮತ್ತು ಖೇದವನ್ನು ಹೊಂದಿರುವುದಕ್ಕೆ ಏನು ಕಾರಣ? ನಾನು ಇಲ್ಲದಿರುವಾಗ ಇಲ್ಲಿಗೆ ಯಾರು ಬಂದಿದ್ದರು ಎಂದು ನಿನ್ನನ್ನು ಕೇಳುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಆಷ್ಟಾಧಿಕಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

★★★★★

ನೂರ ಒಂಭತ್ತನೆಯ ಅಧ್ಯಾಯ

ಋಶ್ಯಶೃಂಗರಿಂದ ತಂದೆಗೆ ವಾರಾಂಗನೆಯ ವಿಲಾಸ ಕಥನ.

ಋಶ್ಯಶೃಂಗಃ

ಇಹಾಗತೋ ಜಟಿಲೋ ಬ್ರಹ್ಮಚಾರೀ
ನ ವೈ ಹ್ರಸ್ವೋ ನಾತಿದೀರ್ಘೋ ಮನಸ್ವೀ ।
ಸುವರ್ಣವರ್ಣಃ ಕಮಲಾಯತಾಕ್ಷಃ
ಸುತಃ ಸುರಾಣಾಮಿವ ಶೋಭಮಾನಃ ॥೧॥

ಇಲ್ಲಿಗೆ ಒಬ್ಬ ಜಟಿಲನಾದ ಬ್ರಹ್ಮಚಾರಿಯು ಬಂದಿದ್ದನು. ಅವನು ಹ್ರಸ್ವವಾಗಿಯೂ ಇರಲಿಲ್ಲ. ಬಹಳ ಎತ್ತರವಾಗಿಯೂ ಇರಲಿಲ್ಲ. ಅವನು ಧೈರ್ಯಶಾಲಿ. ಸುವರ್ಣವರ್ಣವುಳ್ಳವನು. ಕಮಲಾಯತ ನೇತ್ರನು. ದೇವತೆಗಳ ಪುತ್ರನಂತೆ ಶೋಭಿಸುತ್ತಿದ್ದನು.

ಸಮೃದ್ಧರೂಪಃ ಸವಿತೇವ ದೀಪ್ತಃ
ಸ ಶುಕ್ಲ ಕೃಷ್ಣಾಕ್ಷತಾರಶ್ಚಕೋರಾತ್ ।
ನೀಲಾಃ ಪ್ರಸನ್ನಾಕ್ಷ ಜಟಾಃ ಸುಗಂಧಾ
ಹಿರಣ್ಮಯಜ್ಜುಗ್ರಥಿತಾಃ ಸುದೀರ್ಘಾಃ ॥೨॥

ಚೆನ್ನಾಗಿ ಬೆಳೆದಿದ್ದ ಅವನು ಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಮಧುರವಾದ ಮಾತುಗಳನ್ನು ಹೊಂದಿದ್ದ ಅವನ ಕಣ್ಣನ ತಾರೆಗಳು ಚಕೋರಕ್ಕಿಂತಲೂ ಕಪ್ಪಾಗಿದ್ದವು. ಅವನ ಸುದೀರ್ಘವಾದ ಸುಗಂಧಯುಕ್ತವಾದ ಪ್ರಸನ್ನವಾದ ಕಪ್ಪಾದ ಜಟೆಗಳು ಸುವರ್ಣರಜ್ಜುವಿನಿಂದ ಕಟ್ಟಲ್ಪಟ್ಟಿದ್ದವು.

ಆಶ್ಚರ್ಯಭೂತಃ ಪುನರಸ್ಯ ಕಂಠೇ
ವಿಭ್ರಾಜತೇ ವಿದ್ಯುದಿವಾಂತರಿಕ್ಷೇ ।
ದ್ವೌ ಚಾಸ್ಯ ಪಿಂಡಾವವಧರೇಣ ಕಂಠಮ್
ಅಜಾತರೋಮೌ ಸುಮನೋಹರೌ ಮೇ ॥೩॥

ಆಕಾಶದಲ್ಲಿರುವ ಮಿಂಚಿನಂತೆ ಅವನ ಕಂಠದಲ್ಲಿ ಆಶ್ಚರ್ಯವಾದ ಒಂದು ವಸ್ತುವು ಶೋಭಿಸುತ್ತಿತ್ತು. ಅವನ ಕಂಠದ ಕೆಳಗೆ ಎರಡು ಮನೋಹರವಾದ ಪಿಂಡಗಳಿದ್ದವು. ಅವುಗಳ ಮೇಲೆ ರೋಮವು ಬೆಳೆದಿರಲಿಲ್ಲ.

ವಿಲಗ್ನಮಧ್ಯಶ್ಚ ಸ ನಾಭಿದೇಶಃ
ಕಟೀ ಚ ತಸ್ಯಾತಿಕೃತಪ್ರಮಾಣಾ ।
ತಥಾಽಸ್ಯ ಚೀರಾಂತರಿತಾ ಪ್ರಭಾತಿ
ಹಿರಣ್ಮಯೀ ಮೇಖಲಾ ಮೇ ಯಥೇಯಮ್ ॥೪॥

ಅವನ ನಾಭಿದೇಶವು ಬಹಳ ತೆಳುವಾಗಿದ್ದಿತು. ಅವನ ಕಟಿಯು ಅಲ್ಪಪ್ರಮಾಣ ಉಳ್ಳದ್ದಾಗಿದ್ದಿತು. ಅವನು ಉಟ್ಟ ನಾರುಮಡಿಯೊಳಗೆ ಈ ನನ್ನ ಮೇಖಲೆಯಂತೆ ಶೋಭಿಸುವ ಒಂದು ಸುವರ್ಣಮಯವಾದ ಮೇಖಲೆ ಇದ್ದಿತು.

ಅನ್ಯಚ್ಚ ತಸ್ಯಾದ್ಭುತದರ್ಶನೀಯಂ
ವಿಕೂಜಿತಂ ಪಾದಯೋಃ ಸಂಪ್ರಭಾತಿ ।
ಪಾಣ್ಯೋಶ್ಚ ತದ್ವದ್ ಬಹುಭಿರ್ನಿಬದ್ಧೌ
ಕಲಾಪಕಾವಕ್ಷಮಾಲಾ ಯಥೇಯಮ್ ॥೫॥

ಅವನ ಬಳಿ ಇನ್ನೊಂದು ಅದ್ಭುತವಾದ ಸುಂದರವಾದ ವಸ್ತುವಿದ್ದಿತು. ಅವನ ಪಾದಗಳಿಂದ ಒಳ್ಳೆಯ ನಾದವು ಕೇಳಿಬರುತ್ತಿದ್ದಿತು. ಅವನ ಹಸ್ತಗಳಲ್ಲಿಯೂ ಸಹ ನನ್ನ ಹಸ್ತಗಳಲ್ಲಿರುವ ಈ ಅಕ್ಷಮಾಲೆಯಂತೆ ಬಹಳವಾಗಿ ಪೋಣಿಸಿದ ಅನೇಕ ಮಣಿಗಳಿದ್ದವು.

ವಿಚೇಷ್ಟಮಾನಸ್ಯ ಚ ತಾನಿ ತಸ್ಯ
ಕೂಜಂತಿ ಹಂಸಾಃ ಸರಸೀವ ಮತ್ತಾಃ ।
ಚೀರಾಣಿ ತಸ್ಯಾದ್ಭುತದರ್ಶನಾನಿ
ನೇಮಾನಿ ತದ್ವನ್ಮಮ ರೂಪವಂತಿ ॥೬॥

ಅವನು ಅಲ್ಲಿಂದಿಲ್ಲಿಗೆ ತಿರುಗುವಾಗ ಅಥವಾ ಕೈಗಳನ್ನು ಅಲ್ಲಾಡಿಸುವಾಗ ಅವು ಸರೋವರದಲ್ಲಿರುವ ಮದಿಸಿದ ಹಂಸಗಳಂತೆ ಕೂಗುತ್ತಿದ್ದವು. ಅವನು ಉಟ್ಟ

ನಾರುಮಡಿಗಳು ಅದ್ಭುತವಾಗಿ ತೋರುತ್ತಿದ್ದವು. ನನ್ನ ಈ ನಾರುಮಡಿಗಳು ಅಂತಹ ರೂಪವನ್ನು ಹೊಂದಿಲ್ಲ.

ವಕ್ತ್ರಂ ಚ ತಸ್ಯಾದ್ಭುತದರ್ಶನೀಯಂ
ಸುವ್ಯಾಹೃತಂ ಹ್ಲಾದಯತೇ ಚ ಚೇತಃ ।
ಪುಂಸ್ಕೋಕಿಲಸ್ಯೇವ ಚ ತಸ್ಯ ವಾಣೀ
ತಾಂ ಶೃಣ್ವತೋ ಮೇ ವ್ಯಥಿತೋಽಂತರಾತ್ಮಾ ॥೭॥

ಅವನ ಮುಖವು ಅದ್ಭುತವಾಗಿದ್ದಿತು. ಅವನ ಒಳ್ಳೆಯ ಮಾತುಗಳು ನನ್ನ ಮನಸ್ಸಿಗೆ ಸಂತೋಷವನ್ನು ಕೊಡುತ್ತಿದ್ದವು. ಅವನ ವಾಣಿಯಾದರೂ ಪುಂಸ್ಕೋಕಿಲ ವಾಣಿಯಂತೆ ಇದ್ದಿತು. ಅದನ್ನು ಕೇಳಿದ ನನ್ನ ಮನಸ್ಸು ವ್ಯಥೆಯಿಂದ ತುಂಬಿತು.

ಯಥಾ ವನಂ ಮಾಧವಮಾಸಿ ಮಧ್ಯೇ
ಸಮೀರಿತಂ ಶ್ವಸನೇನೇವ ಭಾತಿ ।
ತಥಾ ಸ ಭಾತ್ಯುತ್ತಮಪುಣ್ಯಗಂಧೀ
ನಿಷೇವ್ಯಮಾಣಾ ಪವನೇನ ತಾತ ॥೮॥

ಹೇಗೆ ವಸಂತಮಾಸದ ಮಧ್ಯದಲ್ಲಿ ವಾಯುವಿನಿಂದ ಪ್ರೇರಿಸಲ್ಪಟ್ಟ ವನವು ಸುಗಂಧವನ್ನು ಬೀರುತ್ತದೆಯೋ ಅದರಂತೆ ಅವನು ಹೋದಕಡೆಯಲ್ಲೆಲ್ಲಾ, ಎಲೈ ತಂದೆಯೇ, ಉತ್ತಮ ಪುಣ್ಯಗಂಧವುಳ್ಳ ವಾಯುವು ಅವನನ್ನು ಸೇವಿಸುವಂತೆ ತೋರುತ್ತಿದ್ದಿತು.

ಸುಸಂಯತಾ ಚಾಪಿ ಜಟಾ ವಿಭಕ್ತಾ
ದ್ವ್ಯೇಧೀಕೃತಾ ಭಾತಿ ಲಲಾಟದೇಶೇ ।
ಕರ್ಣೌ ಚ ಚಿತ್ರೈರಿವ ಚಕ್ರವಾಕೈಃ
ಸಮಾವೃತೌ ತಸ್ಯ ಸುರೂಪವದ್ಭಿಃ ॥೯॥

ಅವನು ಜಟೆಗಳನ್ನು ಕಟ್ಟಿದ್ದರೂ ಎಲ್ಲ ಜಟೆಗಳೂ ವಿರಳವಾಗಿದ್ದವು. ಅವನ ಲಲಾಟ ದೇಶದಲ್ಲಿ ಆ ಜಟೆಗಳನ್ನು ಎರಡು ಭಾಗವಾಗಿ ಮಾಡಲಾಗಿದ್ದಿತು. ಅವನ ಕರ್ಣಗಳಲ್ಲಿ ವಿಚಿತ್ರವಾದ ಚಕ್ರಪಕ್ಷಿಗಳಂತಿರುವ ಒಳ್ಳೆಯ ರೂಪವುಳ್ಳ ಎರಡು ವಸ್ತುಗಳಿದ್ದವು.

ತಥಾ ಫಲಂ ವೃತ್ತಮಥೋ ವಿಚಿತ್ರಂ
ಸಮಾಹತಂ ಪಾಣಿನಾ ದಕ್ಷಿಣೇನ ।
ತದ್ಭೂಮಿಮಾಸಾದ್ಯ ಪುನಃಪುನಶ್ಚ
ಸಮುತ್ಪತತ್ಯದ್ಭುತರೂಪಮುಚ್ಚೈಃ ॥೧೦॥

ಅವನು ಒಂದು ದುಂಡಾಗಿರುವ ಒಂದು ವಿಚಿತ್ರವಾದ ಫಲವನ್ನು ಬಲಗೈಯಿಂದ ಹೊಡೆಯುತ್ತಿದ್ದನು. ಅದು ಭೂಮಿಯನ್ನು ತಲುಪಿ ಪುನಃಪುನಃ ಅದ್ಭುತ ರೂಪವನ್ನು ತಾಳಿ ಎತ್ತರಕ್ಕೆ ಮೇಲೆ ಬರುತ್ತಿದ್ದಿತು.

ತಚ್ಚಾಭಿಹತ್ಯಾ ಪರಿವರ್ತತೇಽಸೌ
ವಾತೇರಿತೋ ವೃಕ್ಷ ಇವಾವಘೂರ್ಣಃ ।
ಸಂಪ್ರೇಕ್ಷ್ಯ ಮೇ ಪುತ್ರಮಿವಾಮರಾಣಾಂ
ಪ್ರೀತಿಃ ಪರಾ ತಾತ ರತಿಶ್ಚ ಜಾತಾ ॥೧೧॥

ಆ ಫಲವನ್ನು ಕೈಯಿಂದ ಹೊಡೆದು ಅವನು ವಾಯುವಿನ ವೇಗಕ್ಕೆ ಸಿಲುಕಿದ ವೃಕ್ಷದಂತೆ ಎಲ್ಲ ಕಡೆಯಲ್ಲಿಯೂ ಬಾಗಿ ಸಂಚರಿಸುತ್ತಿದ್ದನು. ತಂದೆಯೇ, ದೇವಪುತ್ರನಂತಿರುವ ಅವನನ್ನು ನೋಡಿ ನನಗೆ ಅವನಲ್ಲಿತುಂಬಾ ಪ್ರೀತಿಯೂ ಮತ್ತು ರತಿಯೂ ಉಂಟಾಗಿದೆ.

ಸ ಮೇ ಸಮಾಶ್ಲಿಷ್ಯ ಪುನಃಶರೀರಂ
ಜಟಾಸು ಗೃಹ್ಯಾಭ್ಯವನಾಮ್ಯ ವಕ್ತ್ರಮ್ ।
ವಕ್ತ್ರೇಣ ವಕ್ತ್ರಂ ಪ್ರಣಿಧಾಯ ಶಬ್ದಂ
ಚಕಾರ ತನ್ಮೇಽಜನಯತ್ ಪ್ರಹರ್ಷಮ್ ॥೧೨॥

ಅವನು ಪುನಃ ನನ್ನ ಶರೀರವನ್ನು ಆಲಿಂಗಿಸಿ ನನ್ನ ಜಟೆಗಳನ್ನು ಹಿಡಿದು ಮುಖವನ್ನು ಬಗ್ಗಿಸಿ ನನ್ನ ವದನದಲ್ಲಿ ತನ್ನ ವದನವನ್ನು ಇಟ್ಟು ಶಬ್ದವನ್ನು ಮಾಡುತ್ತಿದ್ದನು. ಅದು ನನಗೆ ಬಹಳ ಸಂತೋಷವನ್ನು ಉಂಟುಮಾಡಿತು.

ನ ಚಾಪಿ ಪಾದ್ಯಂ ಬಹುಮನ್ಯತೇಽಸೌ
ಫಲಾನಿ ಚೇಮಾನಿ ಮಯಾ ಹೃತಾನಿ ।

ಏವಂವ್ರತೋಽಸ್ಮೀತಿ ಚ ಮಾಮವೋಚತ್
ಫಲಾನಿ ಚಾನ್ಯಾನಿ ನವಾನ್ಯದಾನ್ಮೇ ॥೧೩॥

ಅವನು ನಾವು ಕೊಡುವ ಪಾದ್ಯಗಳನ್ನೂ ಸ್ವೀಕರಿಸುವುದಿಲ್ಲ. ನಾವು ಕೊಡುವ ಹಣ್ಣುಗಳನ್ನೂ ಸ್ವೀಕರಿಸುವುದಿಲ್ಲ. ನನ್ನ ವ್ರತವು ಈ ರೂಪವಾದುದು ಎಂದು ನನಗೆ ಹೇಳಿದನು. ಅವನು ಬೇರೆ ಹೊಸ ಫಲಗಳನ್ನು ನನಗೆ ಕೊಟ್ಟನು.

ಮಯೋಪಯುಕ್ತಾನಿ ಫಲಾನಿ ತಾನಿ
ನೇಮಾನಿ ತುಲ್ಯಾನಿ ರಸೇನ ತೇಷಾಮ್ ।
ನ ಚಾಪಿ ತೇಷಾಂ ತ್ವಗಿಯಂ ಯಥೈಷಾಂ
ಸಾರಾಣಿ ನೈಷಾಮಿವ ಸಂತಿ ತೇಷಾಮ್ ॥೧೪॥

ನಾನು ಆ ಫಲಗಳನ್ನು ಭುಂಜಿಸಿದೆ. ನಮ್ಮ ಈ ಫಲಗಳು ಅವನು ಕೊಟ್ಟ ಫಲಗಳಿಗೆ ಸಮಾನವಾದ ರಸವನ್ನು ಹೊಂದಿಲ್ಲ. ಆ ಹಣ್ಣುಗಳ ಸಿಪ್ಪೆಯೂ ಸಹ ಆಶ್ರಮದ ಈ ಹಣ್ಣುಗಳ ಸಿಪ್ಪೆಯಂತೆ ಇಲ್ಲ. ಆ ಹಣ್ಣುಗಳ ತಿರುಳೂ ಸಹ ಈ ಹಣ್ಣಿನ ತಿರುಳಿನಂತಿಲ್ಲ.

ತೋಯಾನಿ ಚೈವಾತಿರಸಾನಿ ಮಹ್ಯಂ
ಪ್ರಾದಾತ್ ಸ ವೈ ಪಾತುಮುದಾರರೂಪಃ ।
ಪೀತ್ವೈವ ಯಾನ್ಯಭ್ಯಧಿಕಂ ಪ್ರಹರ್ಷೋ
ಮಮಾಭವದ್ ಭೂಶ್ಚಲಿತೇವ ಚಾಸೀತ್ ॥೧೫॥

ಉದಾರನಾದ ಅವನು ನನಗೆ ಕುಡಿಯಲು ಬಹಳ ರಸಭರಿತವಾದ ಅನೇಕ ಪಾನೀಯಗಳನ್ನು ಕೊಟ್ಟನು. ಅದನ್ನು ಕುಡಿದ ತಕ್ಷಣವೇ ನನಗೆ ಬಹಳ ಸಂತೋಷ ಉಂಟಾಯಿತು. ಮತ್ತು ಭೂಮಿಯೆಲ್ಲವೂ ತಿರುಗುತ್ತಿರುವಂತೆ ಭಾಸವಾಯಿತು.

ಇಮಾನಿ ಚಿತ್ರಾಣಿ ಚ ಗಂಧವಂತಿ
ಮಾಲ್ಯಾನಿ ತಸ್ಯೋದ್ಗ್ರಥಿತಾನಿ ಪಟ್ಟ್ಯೈಃ ।
ಯಾನಿ ಪ್ರಕೀರ್ಯೇಹ ಗತಃ ಸ್ವಮೇವ
ಸ ಆಶ್ರಮಂ ತಪಸಾ ದ್ಯೋತಮಾನಃ ॥೧೬॥

ಈ ಸುಗಂಧಯುಕ್ತವಾದ ವಿಚಿತ್ರವಾದ ಮಾಲೆಗಳು ಅವನ ಬಟ್ಟೆಗಳಲ್ಲಿ ಕಟ್ಟಿದವಗಳು. ಅವನು ಇವುಗಳನ್ನು ಇಲ್ಲಿ ಹರಡಿ ತಪಸ್ಸಿನಿಂದ ಬೆಳಗುತ್ತಾ ತನ್ನ ಆಶ್ರಮಕ್ಕೆ ಹೊರಟುಹೋದನು.

ಗತೇನ ತೇನಾಸ್ಮಿ ಕೃತೋ ವಿಚೇತಾ
ಗಾತ್ರಂ ಚ ಮೇ ಸಂಪರಿತಪ್ಯತೇ ಚ ।
ಇಚ್ಛಾಮಿ ತಸ್ಯಾಂತಿಕಮಾಶು ಗಂತುಂ
ತಂ ಚೇಹ ನಿತ್ಯಂ ಪರಿವರ್ತಮಾನಮ್ ॥೧೭॥

ಅವನು ಹೊರಟು ಹೋದ ಮೇಲೆ ನಾನು ವಿಚೇತನನಾಗಿದ್ದೇನೆ. ನನ್ನ ದೇಹವೆಲ್ಲವೂ ಬಿಸಿಯಾಗಿವೆ. ನಾನು ಅವನ ಬಳಿಗೇ ಹೋಗಲು ಬಯಸುತ್ತೇನೆ. ಅಥವಾ ಅವನಾದರೂ ಇಲ್ಲಿಯೇ ಯಾವಾಗಲೂ ಇರಬೇಕೆಂದು ಬಯಸುತ್ತೇನೆ.

ಗಚ್ಛಾಮಿ ತಸ್ಯಾಂತಿಕಮೇವ ತಾತ
ಕಾ ನಾಮ ಸಾ ಬ್ರಹ್ಮಚರ್ಯಾ ಚ ತಸ್ಯ ।
ಇಚ್ಛಾಮ್ಯಹಂ ಚರಿತುಂ ತೇನ ಸಾರ್ಧಂ
ಯಥಾ ತಪಃ ಸ ಚರತ್ಯುಗ್ರಕರ್ಮಾ ॥೧೮॥

ತಂದೆಯೇ, ನಾನು ಅವನ ಬಳಿಗೇ ಹೋಗುತ್ತೇನೆ. ಅವನು ಆಚರಿಸುವ ಬ್ರಹ್ಮಚರ್ಯಕ್ಕೆ ಏನು ಹೆಸರು? ನಾನೂ ಸಹ ಅವನ ಜೊತೆಯಲ್ಲಿಯೇ ಆ ವ್ರತವನ್ನು ಆಚರಿಸಲು ಬಯಸುತ್ತೇನೆ. ಉಗ್ರಕರ್ಮನಾದ ಅವನು ಹೇಗೆ ತಪಸ್ಸನ್ನು ಮಾಡುತ್ತಾನೆಯೋ ಹಾಗೆಯೇ ನಾನೂ ತಪಸ್ಸನ್ನು ಮಾಡಲು ಇಚ್ಛಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ನವಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರಹತ್ತನೆಯ ಅಧ್ಯಾಯ

ವೇಶ್ಯೆಯರಿಂದ ಋಶ್ಯಶೃಂಗರನ್ನು ಕರೆದುಕೊಂಡು ಅಂಗದೇಶಕ್ಕೆ ಗಮನ. ಅಂಗರಾಜ್ಯದಲ್ಲಿ ವೃಷ್ಟಿ. ಶಾಂತಾ ವಿವಾಹ. ವಿಭಾಂಡಕರ ಕೋಪಶಾಂತಿ. ಶಾಂತೆಯ ತಪಸ್ಸು ಮತ್ತು ಪಾತಿವ್ರತ್ಯ.

ವಿಭಾಂಡಕಃ

ರಕ್ಷಾಂಸಿ ಚೈತಾನಿ ಚರಂತಿ ಪುತ್ರ
ರೂಪೇಣ ತೇನಾದ್ಭುತದರ್ಶನೇನ ।
ಅತುಲ್ಯವೀರ್ಯಾಣ್ಯತಿಘೋರವಂತಿ
ವಿಘ್ನಂ ಸದಾ ತಪಸಶ್ಚಿಂತಯಂತಿ ॥೧॥

ವಿಭಾಂಡಕ– ಪುತ್ರನೇ, ಇವರೆಲ್ಲರೂ ರಾಕ್ಷಸರು. ಅದ್ಭುತ ರೂಪವನ್ನು ಧರಿಸಿ ಅಸದೃಶ ಪರಾಕ್ರಮವನ್ನು ಹೊಂದಿ ಅತಿ ಘೋರ ಕರ್ಮವನ್ನು ಮಾಡುತ್ತಾ ಭೂಮಿಯಲ್ಲಿ ಸಂಚಾರವನ್ನು ಮಾಡಿ ಯಾವಾಗಲೂ ತಪಸ್ಸಿಗೆ ವಿಘ್ನವನ್ನು ಉಂಟು ಮಾಡಲು ಬಯಸುತ್ತಾರೆ.

ಸುರೂಪರೂಪಾಣಿ ಚ ತಾನಿ ಭೂತ್ವಾ
ವಿಲೋಭ್ಯ ಭೂಯೋ ವಿವಿಧೈರುಪಾಯೈಃ ।
ಸುಖಾಚ್ಚ ಲೋಕಾಚ್ಚ ನಿಪಾತಯಂತಿ
ತಾನ್ಯುಗ್ರರೂಪಾಣಿ ಮುನೀನ್ ವನೇಷು ॥೨॥

ಒಳ್ಳೆಯ ರೂಪಗಳನ್ನು ಧರಿಸಿ ಅನೇಕ ಉಪಾಯಗಳಿಂದ ಕಾಡಿನಲ್ಲಿರುವ ಋಷಿಗಳನ್ನು ಪುನಃ ಪುನಃ ಪ್ರಲೋಭನೆಗೊಳಿಸಿ ಉಗ್ರರೂಪವುಳ್ಳ ಆ ರಾಕ್ಷಸರು ಆ ಋಷಿಗಳು ಸುಖದಿಂದಲೂ, ಸುಖಲೋಕಗಳಿಂದಲೂ ಚ್ಯುತರಾಗುವಂತೆ ಮಾಡುತ್ತಾರೆ.

ನ ತಾನಿ ಸೇವೇವ ಮುನಿರ್ಯತಾತ್ಮಾ
ಸತಾಂ ಲೋಕಾನ್ ಪ್ರಾರ್ಥಯಾನಃ ಕಥಂಚಿತ್ ।
ಕೃತ್ವಾ ವಿಘ್ನಂ ತಾಪಸಾನಾಂ ರಮಂತೇ
ಪಾಪಾಚಾರಾಸ್ತಪಸಃ ಪಾತಯಂತಿ ॥೩॥

ಜಿತಮನಸ್ಸುಳ್ಳ ಮತ್ತು ಶುಭಲೋಕಗಳನ್ನು ಬಯಸುವ ಮುನಿಯು ಎಂದೂ ಅವುಗಳನ್ನು ಸೇವಿಸಬಾರದು. ಆ ರಾಕ್ಷಸರಾದರೂ ಪಾಪಾಚಾರವನ್ನು ಹೊಂದಿ ತಾಪಸಿಗರಿಗೆ ವಿಘ್ನವನ್ನು ಉಂಟುಮಾಡಿ ಸಂತೋಷಪಡುತ್ತಾರೆ ಮತ್ತು ಋಷಿಗಳನ್ನು ತಪಸ್ಸಿನಿಂದ ನಿವೃತ್ತಿಗೊಳಿಸುತ್ತಾರೆ.

ಅಸಜ್ಜನೇನಾಚರಿತಾನಿ ಪುತ್ರ
ಪಾನಾನ್ಯಪೇಯಾನಿ ಮಧೂನಿ ತಾನಿ ।
ಮಾಲ್ಯಾನಿ ಚೈತಾನಿ ನ ವೈ ಮುನೀನಾಂ
ಸ್ಪೃತಾನಿ ಪುತ್ರೋತ್ತಮಗಂಧವಂತಿ ॥೪॥

ಎಲೈ ಪುತ್ರನೇ, ಅವನು ಕೊಟ್ಟ ಪಾನೀಯಗಳು ದುಷ್ಪರು ಉಪಯೋಗಿಸುವಂತಹವು. ಅವು ಮದ್ಯಗಳು. ಎಲೈ ಪುತ್ರನೇ, ಇಂತಹ ಶ್ರೇಷ್ಠವಾದ ಗಂಧವುಳ್ಳ ಮಾಲೆಗಳು ಋಷಿಗಳಿಗೆ ಯೋಗ್ಯವೆಂದು ಹೇಳಲ್ಪಡುವುದಿಲ್ಲ.

ಲೋಮಶಃ

ರಕ್ಷಾಂಸಿ ತಾನೀತಿ ನಿವಾರ್ಯ ಪುತ್ರಂ
ವಿಭಾಂಡಕಸ್ತಂ ಮೃಗಯಾಂಬಭೂವ ।
ನಾಸಾದಯಾಮಾಸ ಯದಾ ತ್ರ್ಯಹೇಣ
ತದಾ ಸ ಪರ್ಯಾವವೃತೇ ಶ್ರಮಾಯ ॥೫॥

ಲೋಮಶ– ಅವನು ರಾಕ್ಷಸರೆಂದು ಹೇಳಿ ವಿಭಾಂಡಕರು ಪುತ್ರನನ್ನು ನಿವಾರಿಸಿ ಅವರನ್ನು ಹುಡುಕಿದರು. ಮೂರುದಿನ ಹುಡುಕಿದರೂ ಯಾರೂ ಕಾಣದಿದ್ದುದರಿಂದ ಅವರು ಆಶ್ರಮಕ್ಕೆ ಹಿಂದಿರುಗಿದರು.

ಯದಾ ಪುನಃ ಕಾಶ್ಯಪೋ ವೈ ಜಗಾಮ
ಫಲಾನ್ಯಾಹರ್ತುಂ ವಿಧಿನಾಶ್ರಮೇ ಸಃ ।
ತದಾ ಪುನರ್ಲೋಭಯಿತುಂ ಜಗಾಮ
ಸಾ ವೇಶಯೋಷಾ ಮುನಿಮೃಶ್ಯಶೃಂಗಮ್ ॥೬॥

ಪುನಃ ಮತ್ತೊಮ್ಮೆ ಕಾಶ್ಯಪರು ವಿಧಿವತ್ತಾಗಿ ಫಲಗಳನ್ನು ತರಲು ಆಶ್ರಮದಿಂದ ಹೊರಗೆ ಹೋದಾಗ ಆ ವೇಶ್ಯಾವನಿತೆಯು ಪುನಃ ಋಶ್ಯಶೃಂಗರನ್ನು ಪ್ರಲೋಭಗೊಳಿಸಲು ಆಶ್ರಮಕ್ಕೆ ಬಂದಳು.

ದೃಷ್ಟ್ವೈವ ತಾಮೃಶ್ಯಶೃಂಗಃ ಪ್ರಹೃಷ್ಟಃ
ಸಂಭ್ರಾತರೂಪೋ ಹ್ಯಭವತ್ ತದಾನೀಮ್ ।
ಪ್ರೋವಾಚ ಚೈನಾಂ ಭವದಾಶ್ರಮಾಯ
ಗಚ್ಛಾವ ಯಾವನ್ನ ಪಿತಾ ಮಮೈತಿ ॥೭॥

ಅವಳನ್ನು ನೋಡಿದ ತಕ್ಷಣವೇ ಋಶ್ಯಶೃಂಗರು ಸಂತೋಷದಿಂದ ಹುಚ್ಚರಂತೆ ಆದರು. ಅವಳನ್ನು ಕುರಿತು ನಮ್ಮ ತಂದೆಯು ಬರುವುದಕ್ಕಿಂತ ಮೊದಲೇ ನನ್ನನ್ನು ನಿನ್ನ ಆಶ್ರಮಕ್ಕೆ ಕರೆದುಕೊಂಡು ಹೋಗು ಎಂದು ಹೇಳಿದರು.

ತತೋ ರಾಜನ್ ಕಾಶ್ಯಪಸ್ಯೈಕಪುತ್ರಂ
ಪ್ರವೇಶ್ಯ ವೇಗೇನ ವಿಮುಚ್ಯ ನಾವಮ್ ।
ಪ್ರಲೋಭಯಂತ್ಯೋ ವಿವಿಧೈರುಪಾಯೈಃ
ಆಜಗ್ಮುರಂಗಾಧಿಪತೇಃ ಸಮೀಪಮ್ ॥೮॥

ಎಲೈ ರಾಜನೇ, ಆಗ ಆ ಸ್ತ್ರೀಯರು ಕಾಶ್ಯಪರ ಏಕಮಾತ್ರಪುತ್ರನನ್ನು ಶೀಘ್ರವಾಗಿ ನಾವೆಯಲ್ಲಿ ಕೂಡಿಸಿ ಆ ನಾವೆಯನ್ನು ಬಿಚ್ಚಿ ಅನೇಕ ಉಪಾಯಗಳಿಂದ ಅವರನ್ನು ಪ್ರಲೋಭನೆಗೊಳಿಸುತ್ತಾ ಅಂಗಾಧಿಪತಿಯ ಸಮೀಪಕ್ಕೆ ಬಂದರು.

ಸಂಸ್ಥಾಪ್ಯ ತಾಮಾಶ್ರಮದರ್ಶನೇ ಸ
ಸಂತಾರಿತಂ ನಾವಮತೀವ ಶುಭ್ರಮ್ ।
ತೀರಾದುಪಾದಾಯ ತಥೈವ ಚಕ್ರೇ
ರಾಜಾಶ್ರಮಂ ನಾಮ ವನಂ ವಿಚಿತ್ರಮ್ ॥೯॥

ನದಿಯನ್ನು ದಾಟಿಸಿ ಆ ನಾವೆಯನ್ನು ತೀರದಲ್ಲಿಯೇ ನಿಲ್ಲಿಸಿ ಆಶ್ರಮವನ್ನು ನೋಡಲು (ನಾವೆಯ ಆಶ್ರಮವನ್ನುನೋಡಲು) ಋಶ್ಯಶೃಂಗರಿಗೆ ಹೇಳಿ ತೀರದಿಂದ ಸ್ವಲ್ಪದೂರದಲ್ಲಿ ಅದರಂತೆಯೇ ಶುಭ್ರವಾದ, ವಿಚಿತ್ರವಾದ ರಾಜಾಶ್ರಮವೆಂಬ ಇನ್ನೊಂದು ವನವನ್ನು ನಿರ್ಮಿಸಿದರು.

ಅಂತಃಪುರೇ ತಂ ತು ನಿವೇಶ್ಯ ರಾಜಾ
ವಿಭಾಂಡಕಸ್ಯಾತ್ಮಜಮೇಕಪುತ್ರಮ್ ।
ದದರ್ಶ ಮೇಧ್ಯೈಃ ಸಹಸಾ ಪ್ರವೃಷ್ಟಮ್
ಆಪೂರ್ಯಮಾಣಂ ಚ ಜಗಜ್ಜಲೇನ ॥೧೦॥

ರೋಮಪಾದ ರಾಜನಾದರೂ ವಿಭಾಂಡಕರ ಏಕಮಾತ್ರ ಪುತ್ರನನ್ನು ಅಂತಃಪುರದಲ್ಲಿ ಪ್ರವೇಶಮಾಡಿಸಿದ ತಕ್ಷಣ ಮೇಘಗಳು ಇದ್ದಕ್ಕಿದ್ದಂತೆಯೇ ಮಳೆಯನ್ನು ಸುರಿಸಲು ಪ್ರಾರಂಭಿಸಿ ಜಗತ್ತೆಲ್ಲವೂ ಜಲದಿಂದ ತುಂಬಿಹೋದುದನ್ನು ನೋಡಿದನು.

ಸ ರೋಮಪಾದಃ ಪರಿಪೂರ್ಣಕಾಮಃ
ಸುತಾಂ ದದಾವೃಶ್ಯಶೃಂಗಾಯ ಶಾಂತಾಮ್ ।
ಕ್ರೋಧಪ್ರತೀಕಾರಕರಂ ಚ ಚಕ್ರೇ
ಗೋಭಿಶ್ಚ ಮಾರ್ಗೇಷ್ವಭಿಕರ್ಷಣಂ ಚ ॥೧೧॥

ತನ್ನ ಆಸೆಯು ನೆರವೇರಿದ ರೋಮಪಾದನು ತನ್ನ ಮಗಳಾದ ಶಾಂತಳನ್ನು ಋಶ್ಯಶೃಂಗನಿಗೆ ಕೊಟ್ಟನು. ವಿಭಾಂಡಕರ ಕೋಪವನ್ನು ಪರಿಹಾರ ಮಾಡುವುದಕ್ಕಾಗಿ ಅವರು ಬರುವ ಮಾರ್ಗದಲ್ಲಿ ಗೋವುಗಳಿಂದ ಕರ್ಷಣವನ್ನೂ ಮಾಡಿಸಿದನು.

ವಿಭಾಂಡಕಸ್ಯಾವ್ರಜತಃ ಸ ರಾಜಾ
ಪಶೂನ್ ಪ್ರಭೂತಾನ್ ಪಶುಪಾಂಶ್ಚ ವೀರಾನ್ ।
ಸಮಾದಿಶತ್ ಪುತ್ರಗೃಧ್ನುರ್ಮಹರ್ಷಿಃ
ವಿಭಾಂಡಕಃ ಪರ್ಯಪೃಚ್ಛೇದ್ ಯದಾ ವಃ ॥೧೨॥

ಸ ವಕ್ತವ್ಯಃ ಪ್ರಾಂಜಲಿಭಿರ್ಭವದ್ಭಿಃ
ಪುತ್ರಸ್ಯೈತೇ ಬಹವಃ ಕರ್ಷಕಾಶ್ಚ ।
ಕಿಂ ತೇ ಪ್ರಿಯಂ ಕ್ರಿಯತಾಂ ಕಿಂ ಮಹರ್ಷೇ
ದಾಸಾಶ್ಚ ಸರ್ವೇ ತವ ವಾಚಿ ಬದ್ಧಾಃ ॥೧೩॥

ವಿಭಾಂಡಕರು ಬರುವ ದಾರಿಯಲ್ಲಿ ಆ ರಾಜನು ಘೋಷಗಳನ್ನು ನಿರ್ಮಿಸಿ ಬಹಳ ಪಶುಗಳನ್ನು, ವೀರರಾದ ಗೋಪಾಲಕರನ್ನು ನಿಲ್ಲಿಸಿ ಅವರಿಗೆ ಹೀಗೆ ಹೇಳಿದನು–

'ಮಗನನ್ನು ನೋಡಲು ಬಯಸಿ ಬರುವ ಮಹರ್ಷಿಗಳಾದ ವಿಭಾಂಡಕರು ನಿಮ್ಮನ್ನೇನಾದರೂ ಕೇಳಿದರೆ ನೀವು ಅವರಿಗೆ ಕೈಗಳನ್ನು ಮುಗಿದು ಈ ಗೋ ಸಂಪತ್ತು ಮತ್ತು ಉತ್ತಕ್ಷೇತ್ರಗಳೆಲ್ಲವೂ ನಿಮ್ಮ ಪುತ್ರನಿಗೇ ಸೇರಿದುದು. ಮಹರ್ಷಿಗಳೇ ನಿಮಗೆ ಏನು ಪ್ರಿಯವನ್ನು ಮಾಡೋಣ? ನಾವೆಲ್ಲರೂ ನಿಮ್ಮ ದಾಸರು. ನಿಮ್ಮ ಆಜ್ಞಾಧಾರಕರು' ಎಂದು ಹೇಳಬೇಕೆಂದು ತಿಳಿಸಿದನು.

ಅಥೋಪಾಯಾತ್ ಸ ಮುನಿಶ್ಚಂಡಕೋಪಃ
ಸ್ವಮಾಶ್ರಮಂ ಫಲಮೂಲಂ ಪ್ರಗೃಹ್ಯ ।
ಅನ್ವೇಷಮಾಣಶ್ಚ ನ ತತ್ರ ಪುತ್ರಂ
ದದರ್ಶ ಚುಕ್ರೋಧ ಭೃಶಂ ತತಃ ಸಃ ॥೧೪॥

ಅನಂತರ ಚಂಡಕೋಪವುಳ್ಳ ವಿಭಾಂಡಕ ಋಷಿಗಳು ಫಲಮೂಲಗಳನ್ನು ತೆಗೆದುಕೊಂಡು ತಮ್ಮ ಆಶ್ರಮಕ್ಕೆ ಹಿಂದಿರುಗಿದರು. ಹುಡುಕಿದರೂ ತಮ್ಮ ಪುತ್ರನು ದೊರೆಯದಿದ್ದಾಗ ಅವರು ಬಹಳವಾಗಿ ಕ್ರೋಧಗೊಂಡರು.

ತತಃ ಸ ಕೋಪೇನ ವಿದೀರ್ಯಮಾಣಃ
ಕರಿಷ್ಯಮಾಣೋ ನೃಪತೇರ್ವಿನಾಶಮ್ ।
ಜಗಾಮ ಚಂಪಂ ಪ್ರತಿಧಕ್ಷ್ಯಮಾಣಃ
ತಮಂಗರಾಜಂ ವಿಷಯಂ ಚ ತಸ್ಯ ॥೧೫॥

ಆಗ ಅವರು ಕೋಪದಿಂದ ಬಿರಿದುಹೋಗುತ್ತಾ ರಾಜನ ವಿನಾಶವನ್ನು ಮಾಡಲು ಬಯಸುವವರಾಗಿ ರಾಜಧಾನಿಯಾದ ಚಂಪವನ್ನೇ ಭಸ್ಮಮಾಡುವ ಇಚ್ಛೆಯಿಂದ ಅಂಗರಾಜ್ಯಕ್ಕೂ ಮತ್ತು ಅಂಗರಾಜನ ಬಳಿಗೂ ಬಂದರು.

ಸ ವೈ ಶ್ರಾಂತಃ ಕ್ಷುಧಿತಃ ಕಾಶ್ಯಪಸ್ತಾನ್
ಘೋಷಾನ್ ಸಮಾಸಾದಿತವಾನ್ ಸಮೃದ್ಧಾನ್ ।
ಗೋಪೈಶ್ಚ ತೈರ್ವಿಧಿವತ್ ಪೂಜ್ಯಮಾನೋ
ರಾಜೇವ ತಾಂ ರಾತ್ರಿಮುವಾಸ ತತ್ರ ॥೧೬॥

ದಣಿದು ಹಸಿವಿನಿಂದ ಕೂಡಿದವರಾದ ಆ ಕಾಶ್ಯಪರು ಮಾರ್ಗದಲ್ಲಿ ಸಮೃದ್ಧವಾದ ಆ ಘೋಷಗಳನ್ನು ತಲುಪಿದರು. ಗೋಪಾಲಕರಿಂದ ವಿಧಿಪೂರ್ವಕವಾಗಿ ಅವರು ಪೂಜಿಸಲ್ಪಟ್ಟು ಆ ರಾತ್ರಿಯನ್ನು ರಾಜನಂತೆ ಸುಖವಾಗಿ ಅಲ್ಲಿಯೇ ಕಳೆದರು. (ಗೋಪಾಲಕರು ವಾದಿಸುವ ಸ್ಥಳಕ್ಕೆಘೋಷವೆಂದು ಹೆಸರು).

ಸಂಪ್ರಾಪ್ಯ ಸತ್ಕಾರಮತೀವ ಹೃಷ್ಟಃ
ಪ್ರೋವಾಚ ಕಸ್ಯ ಪ್ರಥಿತಾಃ ಸ್ಥ ಸೌಮ್ಯಾಃ ।
ಊಚುಸ್ತತಸ್ತೇಽಭ್ಯವನಮ್ಯ ಸರ್ವೇ
ಧನಂ ತವೇದಂ ವಿಹಿತಂ ಸುತಸ್ಯ ॥೧೭॥

ಅಂತಹ ಸತ್ಕಾರವನ್ನು ಪಡೆದು ಬಹಳ ಸಂತೋಷಗೊಂಡ ಅವರು– 'ಪ್ರೀತಿಪಾತ್ರರೇ, ನೀವು ಯಾರಿಗೆ ಸೇರಿದವರು' ಎಂದು ಕೇಳಿದರು. ಆಗ ಆ ಗೋಪಾಲರೆಲ್ಲರೂ ಶರೀರವನ್ನು ಬಗ್ಗಿಸಿ ಈ ಎಲ್ಲಾ ಸಂಪತ್ತೂ ನಿಮ್ಮ ಪುತ್ರರಿಗೇ ಕೊಡಲ್ಪಟ್ಟದ್ದು ಎಂದು ಹೇಳಿದರು.

ಏವಂ ಸ ದೇಶೇಷ್ವಭಿಪೂಜ್ಯಮಾನಃ
ತಾಂಶ್ಚೈವ ಶೂನ್ಯಾನ್ ಮಧುರಾನ್ ಪ್ರಲಾಪಾನ್ ।
ಪ್ರಶಾಂತಭೂಯಿಷ್ಠರಜಾಃ ಪ್ರಹೃಷ್ಟಃ
ಸಮಾಸಸಾದಾಂಗಪತಿಂ ಪುರಸ್ಥಮ್ ॥೧೮॥

ಹೀಗೆ ಆ ವಿಭಾಂಡಕರು ಮಾರ್ಗದೇಶದಲ್ಲಿ ಮತ್ತೆ ಮತ್ತೆ ಪೂಜಿಸಲ್ಪಡುತ್ತಾ ಮಧುರವಾದ ಮಾತುಗಳನ್ನು ಕೇಳುತ್ತಾ ಕೋಪವನ್ನು ಕಳೆದುಕೊಂಡವರಾಗಿ ಸಂತೋಷದಿಂದ ಕೂಡಿ ರಾಜಧಾನಿಯಲ್ಲಿದ್ದ ಅಂಗಾಧಿಪತಿಯ ಬಳಿಗೆ ಬಂದರು.

ಸ ಪೂಜಿತಸ್ತೇನ ನರರ್ಷಭೇಣ
ದದರ್ಶ ಪುತ್ರಂ ತ್ರಿದಿವೇ ಯಥೇಂದ್ರಮ್ ।
ಶಾಂತಾಂ ಸ್ನುಷಾಂ ತಾಂ ಚ ದದರ್ಶ ತತ್ರ
ಸೌದಾಮಿನೀಮುಚ್ಚರಂತೀಂ ಯಥೈವ ॥೧೯॥

ಅವರು ನರಶ್ರೇಷ್ಠನಾದ ಅಂಗಾಧಿಪತಿಯಿಂದ ಪೂಜಿಸಲ್ಪಟ್ಟವರಾಗಿ ಸ್ವರ್ಗದಲ್ಲಿ ಇಂದ್ರನಂತಿರುವ ತಮ್ಮ ಪುತ್ರನನ್ನೂ ಮತ್ತು ಮೋಡದ ಮಧ್ಯದಿಂದ ಹೊರಗೆ ಬರುತ್ತಿರುವ ಮಿಂಚಿನಂತೆ ಪ್ರಕಾಶಿಸುತ್ತಿರುವ ಸೊಸೆಯಾದ ಶಾಂತಳನ್ನೂ ಅಲ್ಲಿ ನೋಡಿದರು.

ಗ್ರಾಮಾಂಶ್ಚ ಘೋಷಾಂಶ್ಚ ಸುತಂ ಚ ದೃಷ್ಟ್ವಾ
ಶಾಂತಾಂ ಚ ಶಾಂತಃ ಪರಮೋಽಸ್ಯ ಕೋಪಃ ।
ಚಕಾರ ತಸ್ಮೈ ಚ ಪರಂ ಪ್ರಸಾದಂ
ವಿಭಾಂಡಕೋ ಭೂಪತಯೇ ನರೇಂದ್ರ ॥೨೦॥

ಗ್ರಾಮಗಳನ್ನು, ಘೋಷಗಳನ್ನು, ಪುತ್ರನನ್ನು ಮತ್ತು ಶಾಂತಳನ್ನು ನೋಡಿ ಅವರ ಉಗ್ರವಾದ ಕೋಪವು ಶಾಂತವಾಯಿತು. ಎಲೈ ನರೇಂದ್ರನೇ, ವಿಭಾಂಡಕರು ಆಗ ರಾಜನಿಗೆ ಪರಮಾನುಗ್ರಹವನ್ನು ಮಾಡಿದರು.

ಸ ತತ್ರ ನಿಕ್ಷಿಪ್ಯ ಸುತಂ ಮಹರ್ಷಿಃ
ಉವಾಚ ಸೂರ್ಯಾಗ್ನಿಸಮಪ್ರಭಾವಃ ।
ಜಾತೇ ಚ ಪುತ್ರೇ ವನಮೇವಾವ್ರಜೇಥಾ
ರಾಜ್ಞಃ ಪ್ರಿಯಾಣ್ಯಸ್ಯ ಸರ್ವಾಣಿ ಕೃತ್ವಾ ॥೨೧॥

ಸೂರ್ಯಾಗ್ನಿಸಮಪ್ರಭಾವವುಳ್ಳ ಆ ಮಹರ್ಷಿಗಳು ತಮ್ಮ ಪುತ್ರನನ್ನು ಅಲ್ಲಿಯೇ ಇರಿಸಿ ಒಬ್ಬ ಪುತ್ರನು ಜನಿಸಿದ ಮೇಲೆ ರಾಜನಿಗೆ ಪ್ರಿಯವಾದ ಎಲ್ಲಾ ಕಾರ್ಯಗಳನ್ನು ಮಾಡಿ ಪುನಃ ಆಶ್ರಮಕ್ಕೇ ಬರಬೇಕೆಂದು ಹೇಳಿದರು.

ಲೋಮಶಃ

ಸ ತದ್ವಚಃ ಕೃತವಾನ್ ಋಶ್ಯಶೃಂಗೋ
ಯಯೌ ಚ ಯತ್ರಾಸ್ಯ ಪಿತಾ ಬಭೂವ ।
ಶಾಂತಾ ಚೈನಂ ಪರ್ಯಚರದ್ ಯಥಾವತ್
ಪ್ರೇ ರೋಹಿಣೀ ಸೋಮಮಿವಾನುರಕ್ತಾ ॥೨೨॥

ಋಶ್ಯಶೃಂಗರಾದರೂ ತಂದೆಯ ವಚನವನ್ನು ಪಾಲಿಸುತ್ತಾ ಪುನಃ ತಂದೆಯಿದ್ದ ಆಶ್ರಮಕ್ಕೇ ಹೋದರು. ಪತ್ನಿಯಾದ ಶಾಂತಳೂ ಕೂಡ ಆಕಾಶದಲ್ಲಿ ಚಂದ್ರನಲ್ಲಿ ಅನುರಕ್ತಳಾದ ರೋಹಿಣಿಯಂತೆ ಅವರನ್ನೂ ಪರಿಚರಿಸಿದಳು.

ಅರುಂಧತೀ ಚಾಪಿ ಯಥಾ ವಸಿಷ್ಠಂ
ಲೋಪಾಮುದ್ರಾ ಚಾಪಿ ಯಥಾ ಹ್ಯಗಸ್ತ್ಯಮ್ ।
ನಳಸ್ಯ ವಾ ದಮಯಂತೀ ಯಥಾऽಭೂದ್
ಯಥಾ ಶಚೀ ವಜ್ರಧರಸ್ಯ ಚೈವ ॥೨೩॥

ನಾಳಾಯನೀ ಚೇಂದ್ರಸೇನಾ ಬಭೂವ
ವಶ್ಯಾ ನಿತ್ಯಂ ಮುದ್ಗಲಸ್ಯಾದಮೀಢ ।
ಯಥಾ ಸೀತಾ ದಾಶರಥೇರ್ಮಹಾತ್ಮನೋ
ಯಥಾ ತವ ದ್ರೌಪದೀ ಪಾಂಡುಪುತ್ರ
ತಥಾ ಶಾಂತಾ ಋಷ್ಯಶೃಂಗಂ ವನಸ್ಥಂ
ಪ್ರೀತ್ಯಾ ಯುಕ್ತಾ ಪರ್ಯಚರನ್ನರೇಂದ್ರ ॥೨೪॥

ಎಲೈ ನರೇಂದ್ರನೇ, ಅರುಂಧತಿಯು ವಸಿಷ್ಠರನ್ನು ಪರಿಚರಿಸಿದಂತೆ, ಲೋಪಾಮುದ್ರೆಯು ಅಗಸ್ತ್ಯರನ್ನು ಸೇವಿಸಿದಂತೆ, ನಳನಿಗೆ ದಮಯಂತಿ ಇದ್ದಂತೆ, ಇಂದ್ರನಿಗೆ ಶಚಿ ಇದ್ದಂತೆ; ಎಲೈ ಅಜಮೀಢನೇ, ನಳಕುಮಾರಿಯಾದ ಇಂದ್ರಸೇನೆಯು ಯಾವಾಗಲೂ ಮುದ್ಗಲನಿಗೆ ವಶವಾಗಿದ್ದಂತೆ; ಸೀತೆಯು ಮಹಾತ್ಮನಾದ ದಶರಥ ಪುತ್ರ ರಾಮನಿಗೆ ವಶವಾಗಿದ್ದಂತೆ; ಪಾಂಡುಪುತ್ರನೇ, ದ್ರೌಪದಿಯು ನಿನಗೆ ವಶಳಾದಂತೆ ಶಾಂತಳು ಋಶ್ಯಶೃಂಗರಿಗೆ ವಶಳಾಗಿ ಪ್ರೀತಿಯಿಂದ ಪರಿಚರಿಸಿದಳು.

ತಸ್ಯಾಶ್ರಮಃ ಪುಣ್ಯ ಏಷೋ ವಿಭಾತಿ
ಮಹಾಹ್ಲದಂ ಶೋಭಯನ್ ಪುಣ್ಯಕೀರ್ತೇಃ ।
ಅತ್ರ ಸ್ನಾತಃ ಕೃತಕೃತ್ಯೋ ವಿಶುದ್ಧಃ
ತೀರ್ಥಾನ್ಯನ್ಯಾನ್ಯಭಿಸಂಯಾಹಿ ರಾಜನ್ ॥೨೫॥

ಎಲೈ ರಾಜನೇ, ಅವರ ಪವಿತ್ರವಾದ ಈ ಆಶ್ರಮವು ಪುಣ್ಯತೀರ್ಥಗಳಾದ ಅವರ ಮಹಾಹ್ರದ ತೀರ್ಥವನ್ನು ಶೋಭಿಸುತ್ತಾ ಇಲ್ಲಿಯೇ ಕಂಗೊಳಿಸುತ್ತಿದೆ. ಇಲ್ಲಿ ಸ್ನಾನವನ್ನು ಮಾಡಿ ವಿಶುದ್ಧನಾಗಿ ಕೃತಕೃತ್ಯನಾಗಿ ಬೇರೆ ತೀರ್ಥಗಳಿಗೆ ಪ್ರಯಾಣವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಟ್‌ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹನ್ನೊಂದನೆಯ ಅಧ್ಯಾಯ

ಲೋಮಶರಿಂದ ಗಂಗಾಸಾಗರ ಸಂಗಮಾದಿ ತೀರ್ಥಮಹಿಮೆಗಳ ವರ್ಣನೆ.

ವೈಶಂಪಾಯನಃ

ತತಃ ಪ್ರಯಾತಃ ಕೌಶಿಕ್ಯಾಃ ಪಾಂಡವೋ ಜನಮೇಜಯ ।
ಆನುಪೂರ್ವ್ಯೇಣ ಸರ್ವಾಣಿ ತೀರ್ಥಾನ್ಯಾಯತನಾನಿ ಚ ॥೧॥

ವೈಶಂಪಾಯನ– ಎಲೈ ಜನಮೇಜಯನೇ, ಕೌಶಿಕೀನದಿಯಿಂದ ಹೊರಟ ಪಾಂಡವನು ಕ್ರಮಬದ್ಧವಾಗಿ ಎಲ್ಲಾ ತೀರ್ಥಗಳಿಗೂ, ಕ್ಷೇತ್ರಗಳಿಗೂ ಹೋದನು.

ಸ ಸಾಗರಂ ಸಮಾಸಾದ್ಯ ಗಂಗಾಯಾಃ ಸಂಗಮೇ ನೃಪ ।
ನದೀಶತಾನಾಂ ಪಂಚಾನಾಂ ಮಧ್ಯೇ ಚಕ್ರೇ ಸಮಾಪ್ಲವಮ್ ॥೨॥

ಎಲೈ ರಾಜನೇ, ಅವನು ಗಂಗಾಸಾಗರ ಸಂಗಮವನ್ನು ತಲುಪಿ ಅಲ್ಲಿ ನೂರೈದು ನದಿಗಳ ಮಧ್ಯೆ ಸ್ನಾನವನ್ನು ಮಾಡಿದನು.

ತತಃ ಸಮುದ್ರತೀರೇಣ ಜಗಾಮ ವಸುಧಾಧಿಪಃ ।
ಭ್ರಾತೃಭಿಃ ಸಹಿತೋ ವೀರಃ ಕಳಿಂಗಾನ್ ಪ್ರತಿ ಭಾರತ ॥೩॥

ಎಲೈ ಭಾರತನೇ, ಅನಂತರ ವಸುಧಾಧಿಪನೂ ವೀರನೂ ಆದ ಯುಧಿಷ್ಠಿರನು ತಮ್ಮಂದಿರ ಜೊತೆಯಲ್ಲಿ ಸಮುದ್ರತೀರದಲ್ಲಿ ಪ್ರಯಾಣ ಮಾಡುತ್ತಾ ಕಳಿಂಗ ದೇಶವನ್ನು ತಲುಪಿದನು.

ಲೋಮಶಃ

ಏತೇ ಕಳಿಂಗಾ ಕೌಂತೇಯ ಯತ್ರ ವೈತರಣೀ ನದೀ ।
ಯತ್ರಾಯಜತ ಧರ್ಮೋ ವೈ ದೇವಾನ್ ಶರಣಮೇತ್ಯ ವೈ ॥೪॥

ಲೋಮಶರು– ಕೌಂತೇಯನೇ, ಇದು ಕಳಿಂಗದೇಶ. ಇಲ್ಲಿ ವೈತರಣೀ ನದಿ ಇದೆ. ಇಲ್ಲಿ ಯಮಧರ್ಮನು ದೇವತೆಗಳನ್ನು ಶರಣು ಹೊಂದಿ ಯಾಗವನ್ನು ಮಾಡಿದನು.

ತತ್ರರ್ಷಿಭಿಃ ಸಮಾಯುಕ್ತಂ ಯಜ್ಞಿಯಂ ಗಿರಿಶೋಭಿತಮ್ ।
ಉತ್ತರಂ ತೀರಮೇತದ್ಧಿ ಸತತಂ ದ್ವಿಜಸೇವಿತಮ್ ॥೫॥

ಈ ಕಳಿಂಗದೇಶದ ಉತ್ತರತೀರವು ಪರ್ವತದಿಂದ ಶೋಭಿತವಾಗಿ ದ್ವಿಜಸೇವಿತವಾಗಿದೆ. ಇದು ಋಷಿಗಳಿಂದ ಸೇವಿತವಾದ ಯಜ್ಞಭೂಮಿ.

ಸಮೇನ ದೇವಯಾನೇನ ಪಥಾ ಸ್ವರ್ಗಮುಪೇಯುಷಃ ।
ಅತ್ರ ಚೈವರ್ಷಯೋ ನಿತ್ಯಂ ಪುರಾ ಕ್ರತುಭಿರೀಜಿರೇ ॥೬॥

ಸಮವಾದ ದೇವಯಾನದ ಮಾರ್ಗದಿಂದ ಸ್ವರ್ಗವನ್ನು ಹೊಂದಲು ಬಯಸುವ ಋಷಿಗಳು ಇಲ್ಲಿ ಹಿಂದೆ ಯಾವಾಗಲೂ ಯಜ್ಞಗಳನ್ನು ಮಾಡಿದರು.

ಅತ್ರೈವ ರುದ್ರೋ ರಾಜೇಂದ್ರ ಪಶುಮಾದತ್ತವಾನ್ ಮಖೇ ।
ರೌದ್ರಂ ಪಶುಂ ಮಾನವೇಂದ್ರ ಭಾಗೋಽಯಮಿತಿ ಚಾಬ್ರವೀತ್ ॥೭॥

ಎಲೈ ರಾಜೇಂದ್ರನೇ, ಇಲ್ಲಿಯೇ ರುದ್ರನು ಯಜ್ಞದಲ್ಲಿ ಪಶುವನ್ನು ಸ್ವೀಕರಿಸಿದನು. ಎಲೈ ಮಾನವೇಂದ್ರನೇ, ರುದ್ರನು ಯಜ್ಞಪಶುವನ್ನು ಇದು ನನ್ನ ಭಾಗವೆಂದು ಹೇಳಿದನು.

ಹೃತೇ ಪಶೌ ತತೋ ದೇವಾಃ ತಮೂಚುರ್ಭರತರ್ಷಭ ।
ಮಾ ಪರಸ್ವಮಭದ್ರೋಗ್ರಾ ಮಾಽಧರ್ಮ್ಯಾನ್ವೇನಶಃ ಪಥಃ ॥೮॥

ಎಲೈ ಭರತರ್ಷಭನೇ, ರುದ್ರನಿಂದ ಯಜ್ಞಪಶುವು ತೆಗೆದುಕೊಂಡು ಹೋಗಲ್ಪಡುತ್ತಿರಲು ದೇವತೆಗಳು ಅವನನ್ನು ಕುರಿತು ಇನ್ನೊಬ್ಬರ ಸ್ತ್ತಿಗೆ ಆಸೆಯನ್ನು

ಮಾಡಬೇಡ. ಅಧರ್ಮವನ್ನು ಮಾಡಿ ಧರ್ಮಪಥದಿಂದ ವಿನಾಶವನ್ನು ಹೊಂದಬೇಡ ಎಂದು ಹೇಳಿದರು.

ಲೋಮಶಃ

ತತಃ ಕಲ್ಯಾಣರೂಪಾಭಿಃ ವಾಗ್ಭಿಸ್ತೇ ರುದ್ರಮಸ್ತುವನ್ ।
ಇಷ್ಟ್ಯಾ ಚೈನಂ ತರ್ಪಯಿತ್ವಾ ಮಾನಯಾಂಚಕ್ರರೇ ತದಾ ॥೯॥

ಲೋಮಶರು– ಆನಂತರ ಅವರು ಮಂಗಳವಾದ ಮಾತುಗಳಿಂದ ರುದ್ರನನ್ನು ಸ್ತೋತ್ರಮಾಡಿದರು. ಒಂದು ಇಷ್ಟಿಯನ್ನು ಮಾಡಿ ರುದ್ರನನ್ನು ತೃಪ್ತಿಪಡಿಸಿ ಆಗ ಅವನಿಗೆ ಸತ್ಕಾರವನ್ನೂ ಮಾಡಿದರು.

ತತಃ ಪಶುಂ ಸಮುತ್ಸೃಜ್ಯ ದೇವಯಾನೇನ ಜಗ್ಮಿವಾನ್ ।
ಅತ್ರಾನುವಂಶೋ ರುದ್ರಸ್ಯ ತಂ ನಿಬೋಧ ಯುಧಿಷ್ಠಿರ ॥೧೦॥

ಆಗ ರುದ್ರನು ಪಶುವನ್ನು ಬಿಟ್ಟು ದೇವಯಾನದಿಂದ ಹೊರಟು ಹೋದನು. ಎಲೈ ಯುಧಿಷ್ಠಿರನೇ, ಇಲ್ಲಿ ರುದ್ರನ ಅನುವಂಶಿಕವಾದ ಗೀತೆಯಿದೆ; ಅದನ್ನು ತಿಳಿ.

ಅಯಾತಯಾಮಂ ಸರ್ವೇಭ್ಯೋ ಭಾಗೇಭ್ಯೋ ಭಾಗಮುತ್ತಮಮ್ ।
ದೇವಾಃ ಸಂಕಲ್ಪಯಾಮಾಸುರ್ಭಯಾದ್ ರುದ್ರಸ್ಯ ಶಾಶ್ವತಮ್ ॥೧೧॥

ದೇವತೆಗಳು ರುದ್ರನ ಭಯದಿಂದ ಎಲ್ಲ ಭಾಗಗಳಿಗಿಂತಲೂ ಶ್ರೇಷ್ಠವಾದ ಅಯಾತಯಾಮವಾದ (ಮೀಸಲಾದ) ಶಾಶ್ವತವಾದ ಭಾಗವನ್ನು ರುದ್ರನಿಗಾಗಿ ಸಂಕಲ್ಪಿಸಿದರು.

ಇಮಾಂ ಗಾಥಾಮತ್ರ ಗಾಯನ್ತಪಃ ಸ್ಪೃಶತಿ ಯೋ ನರಃ ।
ದೇವಯಾನಸ್ತಸ್ಯ ಪಂಥಾಃ ಚಕ್ಷುಶ್ಮೈವ ಪ್ರಕಾಶತೇ ॥೧೨॥

ಈ ಗೀತೆಯನ್ನು ಹಾಡುತ್ತಾ ಯಾವ ನರನು ಇಲ್ಲಿ ಸ್ನಾನವನ್ನು ಮಾಡುತ್ತಾನೆಯೋ ಅವನ ಮಾರ್ಗವು ದೇವಯಾನವೇ ಆಗುತ್ತದೆ ಮತ್ತು ಅವನಿಗೆ ದಿವ್ಯದೃಷ್ಟಿಯು ಉಂಟಾಗುತ್ತದೆ.

ವೈಶಂಪಾಯನಃ

ತತೋ ವೈತರಣೀಂ ಗತ್ವಾ ಪಾಂಡವಾ ದ್ರೌಪದೀ ತಥಾ ।
ಅವತೀರ್ಯ ಮಹಾಭಾಗಾಃ ತರ್ಪಯಾಂಚಕ್ರಿರೇ ಪಿತೄನ್ ॥೧೩॥

ವೈಶಂಪಾಯನರು– ಅನಂತರ ಮಹಾನುಭಾವರಾದ ಪಾಂಡವರು ಮತ್ತು ದ್ರೌಪದಿಯು ತಮ್ಮ ರಥಗಳಿಂದ ಇಳಿದು ವೈತರಣೀ ನದಿಗೆ ಹೋಗಿ ಪಿತೃಗಳಿಗೆ ತರ್ಪಣವನ್ನು ಕೊಟ್ಟರು.

ಯುಧಿಷ್ಠಿರಃ

ಉಪಸ್ಪೃಶ್ಯೈವ ಭಗವನ್ನಸ್ಯಾಂ ನದ್ಯಾಂ ತಪೋಧನ ।
ಮಾನುಷಾದಸ್ಮಿ ವಿಷಯಾದ್ ಅಪೇತಃ ಪಶ್ಯ ಲೋಮಶ ॥೧೪॥

ಯುಧಿಷ್ಠಿರ– ತಪೋಧನರೇ, ಈ ನದಿಯ ನೀರಿನ ಸ್ಪರ್ಶಮಾತ್ರದಿಂದಲೇ ನಾನು ಮಾನುಷ ವಿಷಯದಿಂದ ದೂರವಾಗಿದ್ದೇನೆ. ಲೋಮಶರೇ ಇದನ್ನು ನೋಡಿ.

ದಿವ್ಯಾನ್ ಲೋಕಾನ್ ಪ್ರಪಶ್ಯಾಮಿ ಪ್ರಸಾದಾತ್ ತವ ಸುವ್ರತ ।
ವೈಖಾನಸಾನಾಂ ಜಪತಾಮೇಷ ಶಬ್ದೋ ಮಹಾತ್ಮನಾಮ್ ॥೧೫॥

ಎಲೈ ಸುವ್ರತರೇ, ನಿಮ್ಮ ಅನುಗ್ರಹದಿಂದ ನಾನು ದಿವ್ಯಲೋಕಗಳನ್ನು ನೋಡುತ್ತಿದ್ದೇನೆ. ಮಹಾತ್ಮರಾದ ವೈಖಾನಸರು ಜಪವನ್ನು ಮಾಡುವ ಈ ಶಬ್ದವು ಕೇಳಿಬರುತ್ತಿದೆ.

ಲೋಮಶಃ

ತ್ರಿಶಂದ್ ಭೂಮೇಃ ಸಹಸ್ರಾಣಿ ಯೋಜನಾನಾಂ ಯುಧಿಷ್ಠಿರ ।
ಯತ್ರ ಧ್ವನಿಂ ಶೃಣೋಷ್ಯೇನಂ ತೂಷ್ಣೀಮಾಸ್ಸ್ವ ವಿಶಾಂಪತೇ ॥೧೬॥

ಲೋಮಶರು– ಎಲೈ ಯುಧಿಷ್ಠಿರನೇ, ಭೂಮಿಯ ಮೇಲೆ ಮೂವತ್ತು ಸಾವಿರ ಯೋಜನಗಳವರೆಗೆ ಈ ಧ್ವನಿಯನ್ನು ನೀನು ಕೇಳುವಿ. ರಾಜನೇ, ಮೌನವಾಗಿರು.

ಏತತ್ ಸ್ವಾಯಂಭುವಂ ರಾಜನ್ ವನಂ ದಿವ್ಯಂ ಪ್ರಕಾಶತೇ ।
ಯತ್ರಾಯಜತ ಧರ್ಮಾತ್ಮಾ ವಿಶ್ವಕರ್ಮಾ ಪ್ರತಾಪವಾನ್ ॥೧೭॥

ಎಲೈ ರಾಜನೇ, ಬ್ರಹ್ಮದೇವರ ಈ ದಿವ್ಯವಾದ ವನವು ಶೋಭಿಸುತ್ತಿದೆ. ಇಲ್ಲಿ ಪ್ರತಾಪಶಾಲಿಗಳಾದ ಜಗತ್ಕರ್ತೃಗಳಾದ ಧರ್ಮಾತ್ಮರಾದ ಬ್ರಹ್ಮದೇವರು ಯಾಗವನ್ನು ಮಾಡಿದರು.

ಯಸ್ಮಿನ್ ಯಜ್ಞೇ ಹಿ ಭೂರ್ದತ್ತಾ ಕಾಶ್ಯಪಾಯ ಮಹಾತ್ಮನೇ ।
ಸಪರ್ವತವನೋದ್ದೇಶಾ ದಕ್ಷಿಣಾ ವೈ ಸ್ವಯಂಭುವಾ ॥೧೮॥

ಆ ಯಜ್ಞದಲ್ಲಿ ಬ್ರಹ್ಮದೇವರು ಪರ್ವತವನೋದ್ದೇಶಗಳಿಂದ ಸಹಿತವಾದ ಭೂಮಿಯನ್ನು ಮಹಾನುಭಾವರಾದ ಕಾಶ್ಯಪರಿಗೆ ದಕ್ಷಿಣೆಯಾಗಿ ಕೊಟ್ಟರು.

ಅವಾಸೀದಚ್ಚ ಕೌಂತೇಯ ದತ್ತಮಾತ್ಮಾ ಮಹೀ ತದಾ ।
ಉವಾಚ ಚಾಪಿ ಕುಪಿತಾ ಲೋಕೇಶ್ವರಮಿದಂ ವಚಃ ॥೧೯॥

ಎಲೈ ಕೌಂತೇಯನೇ, ಆಗ ತಕ್ಷಣದಲ್ಲಿಯೇ ಭೂಮಿಯು ಕೋಪದಿಂದ ಕೆಳಗೆ ಕುಸಿದು ಹೋಗಿ ಲೋಕೇಶ್ವರನಾದ ಬ್ರಹ್ಮದೇವರನ್ನು ಕುರಿತು ಈ ಮಾತನ್ನು ಹೇಳಿತು.

ನ ಮಾಂ ಮರ್ತ್ಯಾಯ ಭಗವನ್ ಕಸ್ಮೈಚಿದ್ ದಾತುಮರ್ಹಸಿ ।
ಪ್ರದಾನಂ ಮೋಘಮೇತತ್ ತೇ ಯಾಸ್ಯಾಮ್ಯೇಷಾ ರಸಾತಳಮ್ ॥೨೦॥

ಪೂಜ್ಯನೇ, ನನ್ನನ್ನು ಯಾವುದೋ ಒಬ್ಬ ಮನುಷ್ಯನಿಗೆ ನೀನು ಕೊಡಬಾರದು. ನಿನ್ನ ಈ ದಾನವು ವ್ಯರ್ಥವಾಗುತ್ತದೆ. ಇದೋ ನಾನು ರಸಾತಳ ಲೋಕಕ್ಕೆ ಹೋಗುವೆನು.

ಲೋಮಶಃ

ವಿಷೀದಂತೀಂ ತು ತಾಂ ದೃಷ್ಟ್ವಾ ಕಾಶ್ಯಪೋ ಭಗವಾನೃಷಿಃ ।
ಪ್ರಸಾದಯಾಂಬಭೂವಾಥ ತತೋ ಭೂಮಿಂ ವಿಶಾಂಪತೇ ॥೨೧॥

ಲೋಮಶರು– ಎಲೈ ರಾಜನೇ, ಕೆಳಗೆ ಕುಸಿದುಹೋಗುತ್ತಿದ್ದ ಭೂಮಿಯನ್ನು ನೋಡಿ ಪೂಜ್ಯರಾದ ಕಾಶ್ಯಪ ಋಷಿಗಳು ಭೂಮಿಯನ್ನು ಪ್ರಸನ್ನೀಕರಿಸಿದರು.

ತತಃ ಪ್ರಸನ್ನಾ ಪೃಥಿವೀ ತಪಸಾ ತಸ್ಯ ಪಾಂಡವ ।
ಪುನರುತ್ಸೃಷ್ಟಸಲಿಲಾ ವೇದಿರ್ಭೂತ್ವಾ ಸ್ಥಿತಾ ಬಭೌ ॥೨೨॥

ಎಲೈ ಪಾಂಡವನೇ, ಅವರ ತಪಸ್ಸಿನಿಂದ ಪ್ರಸನ್ನಳಾದ ಭೂಮಿಯು ಪುನಃ ನೀರನ್ನು ಬಿಟ್ಟುಮೇಲೆ ಬಂದು ವೇದಿಕೆಯಾಗಿ ನಿಂತಳು.

ಸೈಷಾ ಪ್ರಕಾಶತೇ ರಾಜನ್ ವೇದೀಸಂಸ್ಥಾನಲಕ್ಷಣಾ ।
ಆರೋಹಾತ್ರ ಮಹಾರಾಜ ವೀರ್ಯವಾಂಸ್ತ್ವಂ ಭವಿಷ್ಯಸಿ ॥೨೩॥

ಎಲೈ ರಾಜನೇ, ವೇದಿಕೆಯ ಆಕಾರದಲ್ಲಿರುವ ಈ ಭೂಮಿಯು ಇಲ್ಲಿ ಶೋಭಿಸುತ್ತಿದೆ. ಮಹಾರಾಜನೇ, ಇದನ್ನು ಏರು. ನೀನು ಪ್ರತಾಪಶಾಲಿಯಾಗುವಿ.

ಆಹಂ ಚ ತೇ ಸ್ವಸ್ತ್ಯಯನಂ ಪ್ರಯೋಕ್ಷ್ಯೇ
ಯಥಾ ತ್ವಮೇನಾಮಧಿರೋಕ್ಷ್ಯಸೇಽದ್ಯ ।
ಸ್ಪೃಷ್ಟಾ ಹಿ ಮರ್ತ್ಯೇನ ತತಃ ಸಮುದ್ರಮ್
ಏಷಾ ವೇದಿಃ ಪ್ರವಿಶತ್ಯಾಜಮೀಢ ॥೨೪॥

ನೀನು ಈ ವೇದಿಕೆಯನ್ನು ಈ ದಿನ ಏರುವಂತೆ ನಾನು ನಿನಗೆ ಮಂಗಳಾಶೀರ್ವಾದವನ್ನು ಮಾಡುವೆನು. ಎಲೈ ಅಜಮೀಢನೇ, ಮನುಷ್ಯರು ಸ್ಪರ್ಶಮಾಡಿದ ತಕ್ಷಣ ಈ ವೇದಿಕೆಯು ಸಮುದ್ರವನ್ನು ಪ್ರವೇಶಿಸುತ್ತದೆ.

ಅಗ್ನಿರ್ಮಿತ್ರೋ ಯೋನಿರಾಪೋಽಥ ದೇವ್ಯೋ
ವಿಷ್ಣೋ ರೇತಶ್ಚಾಸ್ಯ ಭೂಮಿಶ್ಚ ನಾಭಿಃ ।
ಏವಂ ಬ್ರುವನ್ ಪಾಂಡವ ಸತ್ಯವಾಕ್ಯಂ
ವೇದೀಮಿಮಾ ತ್ವಂ ತರಸಾಽಧಿರೋಹ ॥೨೫॥

ಎಲೈ ಪಾಂಡವನೇ, ನೀನು ಅಗ್ನಿ ಮಿತ್ರರು, ಜಗತ್ತಿನ ಯೋನಿ, ಆಪೋದೇವಿಯರು ವಿಷ್ಣುವಿನ ವೀರ್ಯ, ಭೂಮಿಯು ನಾಭಿ ಎಂಬ ಸತ್ಯವಾಕ್ಯವನ್ನು ಹೇಳುತ್ತಾ ಈ ವೇದಿಕೆಯನ್ನು ಶೀಘ್ರವಾಗಿ ಏರು.

ವೈಶಂಪಾಯನಃ

ತತಃ ಕೃತಸ್ವಸ್ತ್ಯಯನೋ ಮಹಾತ್ಮಾ
ಯುಧಿಷ್ಠಿರಃ ಸಾಗರಗಾಮಗಚ್ಛತ್ ।

ಕೃತ್ವಾ ಚ ತಚ್ಛಾಸನಮಸ್ಯ ಸರ್ವಂ
ಮಹೇಂದ್ರಮಾಸಾದ್ಯ ನಿಶಾಮುವಾಸ ॥೨೬॥

ವೈಶಂಪಾಯನ– ಅನಂತರ ಲೋಮಶರಿಂದ ಮಂಗಳಾಶೀರ್ವಾದವನ್ನು ಪಡೆದ ಮಹಾತ್ಮನಾದ ಯುಧಿಷ್ಠಿರನು ಸಾಗರದಲ್ಲಿ ಮುಳುಗಿಹೋಗಲಿರುವ ವೇದಿಕೆಯನ್ನು ಏರಿದನು. ಲೋಮಶರ ಎಲ್ಲಾ ಆದೇಶವನ್ನೂ ನೆರವೇರಿಸಿ ಮಹೇಂದ್ರ ಪರ್ವತಕ್ಕೆ ಹೋಗಿ ರಾತ್ರಿಯನ್ನು ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾದಶಾಧಿಕಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರಹನ್ನೊಂದನೆಯ ಅಧ್ಯಾಯ ಮುಗಿಯಿತು.

★★★★★

ನೂರಾ ಹನ್ನೆರಡನೆಯ ಅಧ್ಯಾಯ

ಅಕೃತವ್ರಣನಿಂದ ಯುಧಿಷ್ಠಿರನಿಗೆ ಪರಶುರಾಮ ಚರಿತ್ರೆಯ ಕಥನ.

ವೈಶಂಪಾಯನಃ

ಸ ತತ್ರ ತಾಮುಷಿತ್ವೈಕಾಂ ರಜನೀಂ ಪೃಥಿವೀಪತಿಃ ।
ತಾಪಸಾನಾಂ ಪರಂ ಚಕ್ರೇ ಸತ್ಕಾರಂ ಭ್ರಾತೃಭಿಃ ಸಹ ॥೧॥

ವೈಶಂಪಾಯನ– ರಾಜನಾದ ಆ ಯುಧಿಷ್ಠಿರನು ಅಲ್ಲಿ ಒಂದು ರಾತ್ರಿಯನ್ನು ಕಳೆದು ತಮ್ಮಂದಿರ ಜೊತೆಯಲ್ಲಿ ಅಲ್ಲಿದ್ದ ತಾಪಸರಿಗೆ ಪೂಜೆಯನ್ನು ಸಲ್ಲಿಸಿದನು.

ಲೋಮಶಶ್ಚಾತ್ರ ತಾನ್ ಸರ್ವಾನಾಚಖ್ಯೌ ತತ್ರ ತಾಪಸಾನ್ ।
ಭೃಗೂನಂಗಿರಸಶ್ಚೈವ ವಾಸಿಷ್ಠಾನಥ ಕಾಶ್ಯಪಾನ್ ॥೨॥

ಅಲ್ಲಿ ಲೋಮಶರು ಸಹ ಅಲ್ಲಿದ್ದ ಭೃಗುಗಳು, ಅಂಗೀರಸರು, ವಾಸಿಷ್ಠರು, ಕಾಶ್ಯಪರು ಮೊದಲಾದ ಎಲ್ಲಾ ಋಷಿಗಳನ್ನೂ ಪರಿಚಯ ಮಾಡಿಕೊಟ್ಟರು.

ತಾನ್ ಸಮೇತ್ಯ ಸ ರಾಜರ್ಷಿರಭಿವಾದ್ಯ ಕೃತಾಂಜಲಿಃ ।
ರಾಮಸ್ಯಾನುಚರಂ ವೀರಮಪೃಚ್ಛದಕೃತವ್ರಣಮ್ ॥೩॥

ಕದಾ ನು ರಾಮೋ ಭಗವಾನ್ ತಾಪಸಾನ್ ದರ್ಶಯಿಷ್ಯತಿ ।
ತೇನೈವಾಹಂ ಪ್ರಸಂಗೇನ ದ್ರಷ್ಟುಮಿಚ್ಛಾಮಿ ಭಾರ್ಗವಮ್ ॥೪॥

ರಾಜರ್ಷಿಯಾದ ಯುಧಿಷ್ಠಿರನು ಆ ಋಷಿಗಳನ್ನು ಸಂಧಿಸಿ ಅವರಿಗೆ ಪ್ರಣಾಮವನ್ನು ಸಲ್ಲಿಸಿ ಪರಶುರಾಮನ ಅನುಚರನಾದ ವೀರನಾದ ಅಕೃತವ್ರಣನನ್ನು ಕುರಿತು 'ಪೂಜ್ಯನಾದ ಪರಶುರಾಮನು ಯಾವಾಗ ತಾಪಸರಿಗೆ ದರ್ಶನವನ್ನು ಕೊಡುವನು? ಆ ಪ್ರಸಂಗದಲ್ಲಿಯೇ ನಾನು ಅವನು ನೋಡಲು ಬಯಸುತ್ತೇನೆ' ಎಂದು ಹೇಳಿದನು.

ಅಕೃತವ್ರಣಃ

ಆಯಾನೇವಾಸಿ ವಿದಿತೋ ರಾಮಸ್ಯ ವಿದಿತಾತ್ಮನಃ ।
ಪ್ರೀತಿಸ್ತ್ವಯಿ ಚ ರಾಮಸ್ಯ ಕ್ಷಿಪ್ರಂ ತ್ವಾಂ ದರ್ಶಯಿಷ್ಯತಿ ॥೫॥

ಅಕೃತವ್ರಣ– ನೀನು ಇಲ್ಲಿ ಬರುವಾಗಲೇ ಸರ್ವಜ್ಞನಾದ ಪರಶುರಾಮನಿಗೆ ಅದು ತಿಳಿದಿದೆ. ನಿನ್ನಲ್ಲಿ ಪರಶುರಾಮನಿಗೆ ಬಹಳ ಪ್ರೀತಿಯಿದೆ. ಬೇಗಲೇ ನಿನಗೆ ದರ್ಶನವನ್ನು ಕೊಡುವನು.

ಚತುರ್ದಶೀಮಷ್ಟಮೀಂ ಚ ರಾಮಂ ಪಶ್ಯಂತಿ ತಾಪಸಾಃ ।
ಅಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಭವಿತ್ರೀ ಚ ಚತುರ್ದಶೀ ।
ತತ್ರ ದ್ರಕ್ಷ್ಯಸಿ ರಾಮಂ ತ್ವಂ ಕೃಷ್ಣಾಜಿನಜಟಾಧರಮ್ ॥೬॥

ಚತುರ್ದಶೀ ಮತ್ತು ಅಷ್ಟಮಿಯಂದು ತಾಪಸರು ರಾಮನನ್ನು ನೋಡುತ್ತಾರೆ. ಈ ರಾತ್ರಿಯು ಕಳೆದರೆ ಚತುರ್ದಶಿಯಾಗುತ್ತದೆ. ಆಗ ನೀನು ಕೃಷ್ಣಾಜಿನ ಜಟಾಧಾರಿಯಾದ ರಾಮನನ್ನು ನೋಡುವಿ.

ಯುಧಿಷ್ಠಿರಃ

ಭವಾನನುಗತೋ ರಾಮಂ ಜಾಮದಗ್ನ್ಯಂ ಮಹಾಬಲಮ್ ।
ಪ್ರತ್ಯಕ್ಷದರ್ಶೀ ಸರ್ವಸ್ಯ ಪೂರ್ವವೃತ್ತಸ್ಯ ಕರ್ಮಣಃ ॥೭॥

ಸ ಭವಾನ್ ಕಥಯತ್ವೇತದ್ ಯಥಾ ರಾಮೇಣ ನಿರ್ಜಿತಾಃ ।
ಆಹವೇ ಕ್ಷತ್ರಿಯಾಃ ಸರ್ವೇ ಕಥಂ ಕೇನ ಚ ಹೇತುನಾ ॥೮॥

ಯುಧಿಷ್ಠಿರ– ನೀನು ಜಮದಗ್ನಿಯ ಪುತ್ರರಾದ ಮಹಾಬಲಿಷ್ಠರಾದ ಪರಶುರಾಮರಿಗೆ ಯಾವಾಗಲೂ ಜೊತೆಯಲ್ಲಿದ್ದೀಯೆ. ಹಿಂದಿನ ಎಲ್ಲಾ ಕರ್ಮಗಳನ್ನೂ ಪ್ರತ್ಯಕ್ಷವಾಗಿ ನೋಡಿದ್ದೀಯೆ. ಅಂತಹ ನೀನು ಪರಶುರಾಮರಿಂದ ಎಲ್ಲ ಕ್ಷತ್ರಿಯರು ಯಾವ ಕಾರಣದಿಂದ ಯುದ್ಧದಲ್ಲಿ ನಿರ್ಜಿತರಾದರೆಂಬ ವಿಷಯವನ್ನು ತಿಳಿಸು.

ಅಕೃತವ್ರಣಃ

ಕನ್ಯಾಕುಬ್ಜೇ ಮಹಾನಾಸೀತ್ ಪಾರ್ಥಿವಃ ಸುಮಹಾಬಲಃ ।
ಗಾಧೀತಿ ವಿಶ್ರುತೋ ಲೋಕೇ ವನವಾಸಂ ಜಗಾಮ ಸಃ ॥೯॥

ಅಕೃತವ್ರಣ– ಕನ್ಯಾಕುಬ್ಜದಲ್ಲಿ ಮಹಾಬಲಿಷ್ಠನಾದ, ಮಹಾತ್ಮನಾದ ಗಾಧಿ ಎಂಬ ಲೋಕದಲ್ಲಿ ಪ್ರಖ್ಯಾತನಾದ ರಾಜನಿದ್ದನು. ಅವನು ವನವಾಸಕ್ಕೆ ಹೋದನು.

ವನೇ ತು ತಸ್ಯ ವಸತಃ ಕನ್ಯಾ ಜಜ್ಞೇऽಪ್ಸರೋಪಮಾ ।
ಋಚೀಕೋ ಭಾರ್ಗವಸ್ತಾಂ ವೈ ವರಯಾಮಾಸ ಭಾರತ ॥೧೦॥

ಅವನು ವನದಲ್ಲಿ ವಾಸಮಾಡುತ್ತಿರುವಾಗ ಅವನಿಗೆ ಅಪ್ಸರೆಯಂತಹ ಒಬ್ಬ ಮಗಳು (ಸತ್ಯವತಿ) ಜನಿಸಿದಳು. ಎಲೈ ಭಾರತನೇ, ಭೃಗುಪುತ್ರನಾದ ಋಚೀಕನು ಅವಳನ್ನು ಪ್ರಾರ್ಥಿಸಿದನು.

ತಮುವಾಚ ತತೋ ರಾಜಾ ಬ್ರಾಹ್ಮಣಂ ಸಂಶಿತವ್ರತಮ್ ।
ಉಚಿತಂ ನಃ ಕುಲೇ ಕಿಂಚಿತ್ ಪೂರ್ವೈರ್ಯತ್ ಸಂಪರಿವರ್ತನಮ್ ॥

ಏಕತಃ ಶ್ಯಾಮಕರ್ಣಾನಾಂ ಪಾಂಡರಾಣಾಂ ತರಸ್ವಿನಾಮ್ ।
ಸಹಸ್ರಂ ವಾಜಿನಾಂ ಶುಲ್ಕಮಿತಿ ವಿದ್ಧಿ ದ್ವಿಜೋತ್ತಮ ॥೧೨॥

ನ ಚಾಪಿ ಭಗವಾನ್ ವಾಚ್ಯೋ ದೀಯತಾಮಿತಿ ಭಾರ್ಗವ ।
ದೇಯಾ ಮೇ ದುಹಿತಾ ಚೈವ ತ್ವದ್ವಿಧಾಯ ದ್ವಿಜಾಯ ತೇ ॥೧೩॥

ಗಾಧಿರಾಜನು ವ್ರತನಿಷ್ಠನಾದ ಆ ಬ್ರಾಹ್ಮಣನನ್ನು ಕುರಿತು 'ನಮ್ಮ ಕುಲದಲ್ಲಿ ಹಿಂದಿನಿಂದ ನಡೆದುಬಂದ ಯೋಗ್ಯವಾದ ಒಂದು ಸಂಪ್ರದಾಯವಿದೆ. ಎಲೈ ದ್ವಿಜೋತ್ತಮನೇ, ಕಪ್ಪಾದ ಒಂದು ಕಿವಿಯುಳ್ಳ ಶುಭ್ರಬಿಳಿಯ ಬಣ್ಣದ ವೇಗವನ್ನು ಹೊಂದಿರುವ ಸಹಸ್ರ ಅಶ್ವಗಳನ್ನು ಕನ್ಯಾಶುಲ್ಕವೆಂದು ತಿಳಿ' ಎಂದು ಹೇಳಿದನು. 'ಎಲೈ ಭಾರ್ಗವನೇ, ಪೂಜ್ಯನಾದ ನಿನಗೆ ನಾನು ಶುಲ್ಕವನ್ನು ಕೊಡು ಎಂದು ಹೇಳಬಾರದು. ನಿನ್ನಂತಹ ಬ್ರಾಹ್ಮಣನಿಗೇ ನಾನು ನನ್ನ ಮಗಳನ್ನು ಕೊಡಬೇಕಷ್ಟೆ' ಎಂದು ಹೇಳಿದನು.

ಋಚೀಕಃ

ಏಕತಃ ಶ್ಯಾಮಕರ್ಣಾನಾಂ ಪಾಂಡರಾಣಾಂ ತರಸ್ವಿನಾಮ್ ।
ದಾಸ್ಯಾಮ್ಯಶ್ವಸಹಸ್ರಂ ತೇ ಮಮ ಭಾರ್ಯಾ ಸುತಾऽಸ್ತು ತೇ ॥೧೪॥

ಋಚೀಕರು– ಒಂದುಕಡೆ ಶ್ಯಾಮಕರ್ಣವುಳ್ಳ ವೇಗಶಾಲಿಗಳಾದ ಪಾಂಡುವರ್ಣದ ಅಶ್ವಸಹಸ್ರವನ್ನು ನಿನಗೆ ಕೊಡುವೆನು. ನಿನ್ನ ಪುತ್ರಿಯು ನನ್ನ ಪತ್ನಿಯಾಗಲಿ.

ವೈಶಂಪಾಯನಃ

ಸ ತಥೇತಿ ಪ್ರತಿಜ್ಞಾಯ ರಾಜನ್ ವರುಣಮಬ್ರವೀತ್ ।
ಏಕತಃ ಶ್ಯಾಮಕರ್ಣಾನಾಂ ಪಾಂಡರಾಣಾಂ ತರಸ್ವಿನಾಮ್ ।
ಸಹಸ್ರಂ ವಾಜಿನಾಮೇಕಂ ಶುಲ್ಕಾರ್ಥಂ ಮೇ ಪ್ರದೀಯತಾಮ್ ॥೧೫॥

ವೈಶಂಪಾಯನ– ಎಲೈ ರಾಜನೇ, ಅವನು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ ಅನಂತರ ವರುಣನನ್ನು ಕುರಿತು ಒಂದುಕಡೆ ಶ್ಯಾಮಕರ್ಣವುಳ್ಳ ವೇಗಶಾಲಿಗಳಾದ ಪಾಂಡುವರ್ಣದ ಸಹಸ್ರ ಅಶ್ವಗಳನ್ನು ಶುಲ್ಕಾರ್ಥವಾಗಿ ನನಗೆ ಕೊಡು ಎಂದು ಕೇಳಿದನು.

ಆಕೃತವ್ರಣಃ

ತಸ್ಮೈ ಪ್ರಾದಾತ್ ಸಹಸ್ರಂ ವೈ ವಾಜಿನಾಂ ವರುಣಸ್ತದಾ ।
ತದಶ್ವತೀರ್ಥಂ ವಿಖ್ಯಾತಮುತ್ತಿತಾ ಯತ್ರ ತೇ ಹಯಾಃ ॥೧೬॥

ಆಕೃತವರ್ಣ– ಆಗ ವರುಣನು ಋಚೀಕರಿಗೆ ಒಂದು ಸಹಸ್ರ ಅಶ್ವಗಳನ್ನು ಕೊಟ್ಟನು. ಆ ಅಶ್ವಗಳು ನೀರಿನಿಂದ ಮೇಲೆದ್ದು ಬಂದ ಈ ಅಶ್ವತೀರ್ಥವು ಪ್ರಖ್ಯಾತವಾಗಿದೆ.

ಗಂಗಾಯಾಂ ಕಾನ್ಯಕುಬ್ಜೇ ವೈ ದದೌ ಸತ್ಯವತೀಂ ತದಾ ।
ತತೋ ಗಾಧಿಃ ಸುತಾಂ ತಸ್ಮೈ ಕನ್ಯಾಂ ಚಾಪ್ಸರಸೋಪಮಾಮ್ ॥೧೭॥

ನಂತರ ಗಾಧಿಯು ಕನ್ಯಾಕುಬ್ಜದಲ್ಲಿ ತನ್ನ ಮಗಳಾದ ಅಪ್ಸರೆಯರಿಗೆ ಸದೃಶಳಾದ ಸತ್ಯವತಿಯನ್ನು ಋಚೀಕರಿಗೆ ಕೊಟ್ಟನು.

ಲಬ್ಧಂ ಹಯಸಹಸ್ರಂ ತತ್ ತಾಂ ಚ ದೃಷ್ಟ್ವಾ ದಿವೌಕಸಃ ।
ವಿಸ್ಮಯಂ ಪರಮಂ ಜಗ್ಮುಃ ತಮೇವ ದಿವಿ ಸಂಸ್ತುವನ್ ॥೧೮॥

ಋಚೀಕರು ಸಹಸ್ರ ಅಶ್ವಗಳನ್ನೂ ಮತ್ತು ಭಾರ್ಯೆಯನ್ನೂ ಸಂಪಾದಿಸುದುದನ್ನು ನೋಡಿ ದೇವತೆಗಳು ಪರಮ ವಿಸ್ಮಿತರಾದರು. ದೇವಲೋಕದಲ್ಲಿಯೂ ಅವರನ್ನು ಸ್ತೋತ್ರಮಾಡಿದರು.

ಧರ್ಮೇಣ ಲಬ್ಧ್ವಾ ತಾಂ ಭಾರ್ಯಾಮ್ ಋಚೀಕೋ ದ್ವಿಜಸತ್ತಮಃ ।
ಯಥಾಕಾಮಂ ಯಥಾಶ್ರದ್ಧಂ ತಯಾ ರೇಮೇ ಸುಮಧ್ಯಯಾ ॥೧೯॥

ದ್ವಿಜಶ್ರೇಷ್ಠರಾದ ಋಚೀಕರು ಧರ್ಮದಿಂದ ಆ ಭಾರ್ಯೆಯನ್ನು ಪಡೆದು ತಮ್ಮ ಇಚ್ಛೆಗೆ ಮತ್ತು ಶ್ರದ್ಧೆಗೆ ಅನುಗುಣವಾಗಿ ಆ ಸುಂದರಿಯ ಜೊತೆಯಲ್ಲಿ ಸುಖವಾಗಿ ಕಾಲವನ್ನು ಕಳೆದರು.

ತಂ ವಿವಾಹೇ ಕೃತೇ ರಾಜನ್ ಸಭಾರ್ಯಮವಲೋಕಿತುಮ್ ।
ಆಜಗಾಮ ಭೃಗುಶ್ರೇಷ್ಠಃ ಪುತ್ರಂ ದೃಷ್ಟ್ವಾ ನನಂದ ಚ ॥೨೦॥

ಎಲೈ ರಾಜನೇ, ವಿವಾಹವು ಜರುಗಿದ ಮೇಲೆ ಭಾರ್ಯಾಸಹಿತರಾದ ತಮ್ಮ ಪುತ್ರನಾದ ಋಚೀಕನನ್ನು ನೋಡಲು ಶ್ರೇಷ್ಠರಾದ ಭೃಗುಋಷಿಗಳು ಬಂದು ನೋಡಿ ಸಂತೋಷಪಟ್ಟರು.

ಭಾರ್ಯಾಪತೀ ಸಮಾಸೀನಂ ಗುರುಂ ಸುರಗಣಾರ್ಚಿತಮ್ ।
ಅರ್ಚಯಿತ್ವಾಭ್ಯುಪಾಸೀನೌ ಪ್ರಾಂಜಲೀ ತಸ್ಥತುಸ್ತದಾ ॥೨೧॥

ದಂಪತಿಗಳು ದೇವತಾಸಮೂಹದಿಂದ ಪೂಜಿತರಾದ ಆಸೀನರಾದ ತಮ್ಮ ಹಿರಿಯರಾದ ಭೃಗುಗಳನ್ನು ಪೂಜಿಸಿ ಅವರ ಸಮೀಪದಲ್ಲಿ ಕೈಗಳನ್ನು ಮುಗಿದು ನಿಂತರು.

ತತಃ ಸುಪ್ತಾಂ ಸ ವಿಪ್ರರ್ಷಿಃ ಪ್ರಹೃಷ್ಟೋ ಭೃಗುರಬ್ರವೀತ್ ।
ವರಂ ವೃಣೀಷ್ವ ಸುಭಗೇ ದಾತಾ ಹ್ಯಸ್ಮಿ ತವೇಪ್ಸಿತಮ್ ॥೨೨॥

ಆಗ ಬ್ರಹ್ಮಋಷಿಗಳಾದ ಭೃಗುಋಷಿಗಳು ಸಂತೋಷದಿಂದ ಸೊಸೆಯನ್ನು ಕುರಿತು– 'ಸೌಭಾಗ್ಯವತಿಯೇ, ವರವನ್ನು ಕೇಳು; ನಿನಗೆ ಅಭೀಷ್ಟವಾದುದನ್ನು ನಾನು ಕೊಡುವೆನು' ಎಂದು ಹೇಳಿದರು.

ಸಾ ವೈ ಪ್ರಸಾದಯಾಮಾಸ ತಂ ಗುರುಂ ಪುತ್ರಕಾರಣಾತ್ ।
ಆತ್ಮನಶ್ಚೈವ ಮಾತುಶ್ಚ ಪ್ರಸಾದಂ ಚ ಚಕಾರ ಸಃ ॥೨೩॥

ಅವಳಾದರೂ ತನಗೂ ಮತ್ತು ತನ್ನ ತಾಯಿಗೂ ಮಕ್ಕಳು ಉಂಟಾಗುವ ಸಲುವಾಗಿ ತಮ್ಮ ಹಿರಿಯರಾದ ಆ ಭೃಗುಗಳನ್ನು ಪ್ರಾರ್ಥಿಸಿದಳು. ಭೃಗುಗಳು ಅವಳಿಗೆ ಅನುಗ್ರಹವನ್ನು ಮಾಡಿದರು.

ಋತೌ ತ್ವಂ ಚೈವ ಮಾತಾ ಚ ಸ್ನಾತೇ ಪುಂಸವನಾಯ ವೈ ।
ಆಲಿಂಗೇತಾಂ ಪೃಥಗ್ ವೃಕ್ಷೌ ಸಾऽಶ್ವತ್ಥಂ ತ್ವಮುದುಂಬರಮ್ ॥೨೪॥

ಋತುಕಾಲದಲ್ಲಿ ನೀನೂ ಮತ್ತು ನಿನ್ನ ತಾಯಿಯೂ ಸ್ನಾನವನ್ನು ಮಾಡಿ ಪುತ್ರನನ್ನು ಪಡೆಯುವುದಕ್ಕೋಸ್ಕರ ಬೇರೆ ಬೇರೆ ವೃಕ್ಷಗಳನ್ನು ಆಲಿಂಗಿಸಿ. ನಿನ್ನ ತಾಯಿಯು ಅಶ್ವತ್ಥ ವೃಕ್ಷವನ್ನೂ, ನೀನು ಮುದುಂಬರ ವೃಕ್ಷವನ್ನೂ ಆಲಿಂಗಿಸಬೇಕು ಎಂದು ಹೇಳಿದರು.

ಆಲಿಂಗನೇ ತು ರಾಜನ್ ವೈ ಚಕ್ರತುಸ್ತೇ ವಿಪರ್ಯಯಮ್ ।
ಕದಾಚಿದ್ ಭೃಗುರಾಗಚ್ಛತ್ ತತ್ರ ವೇದ ವಿಪರ್ಯಯಮ್ ॥೨೫॥

ಎಲೈ ರಾಜನೇ, ಆದರೆ ಅವರು ಆಲಿಂಗನ ಮಾಡುವ ವಿಷಯದಲ್ಲಿ ವ್ಯತ್ಯಾಸವನ್ನು ಮಾಡಿದರು. ಅನಂತರ ಒಮ್ಮೆ ಭೃಗುಋಷಿಗಳು ಬಂದು ಆ ವ್ಯತ್ಯಾಸವನ್ನು ತಿಳಿದರು.

ಅಥೋವಾಚ ಮಹಾತೇಜಾ ಭೃಗುಃ ಸತ್ಯವತೀಂ ಸುಪ್ತಾಮ್ ।
ಬ್ರಾಹ್ಮಣಃ ಕ್ಷತ್ರವೃತ್ತಿರ್ವೈ ತವ ಪುತ್ರೋ ಭವಿಷ್ಯತಿ ॥೨೬॥

ಕ್ಷತ್ರಿಯೋ ಬ್ರಾಹ್ಮಣಾಚಾರೋ ಮಾತುಸ್ತವ ಸುತೋ ಮಹಾನ್ ।
ಭವಿಷ್ಯತಿ ಮಹಾವೀರ್ಯಃ ಸಾಧೂನಾಂ ಮಾರ್ಗಮಾಸ್ಥಿತಃ ॥೨೭॥

ಆಗ ಮಹಾತೇಜಸ್ವಿಗಳಾದ ಭೃಗುಗಳು ಸೊಸೆಯಾದ ಸತ್ಯವತಿಯನ್ನು ಕುರಿತು – 'ಕ್ಷತ್ರಿಯ ಸ್ವಭಾವದ ಬ್ರಾಹ್ಮಣನು ನಿನಗೆ ಪುತ್ರನಾಗಿ ಜನಿಸುವನು. ಬ್ರಾಹ್ಮಣ ಸ್ವಭಾವದ ಮಹಾಕ್ಷತ್ರಿಯನು ನಿನ್ನ ತಾಯಿಗೆ ಪುತ್ರನಾಗಿ ಜನಿಸುವನು. ಅವನು ಮಹಾವೀರ್ಯ ಉಳ್ಳವನಾಗಿ ಸಜ್ಜನರ ಮಾರ್ಗವನ್ನು ಅನುಸರಿಸುವನು' ಎಂದು ಹೇಳಿದರು.

ಪ್ರಸಾದಯಾಮಾಸ ಚ ತಂ ಶ್ವಶುರಂ ಸಾ ಪುನಃ ಪುನಃ ।
ನ ಮೇ ಪುತ್ರೋ ಭವೇದೀದೃಕ್ ಕಾಮಂ ಪೌತ್ರೋ ಭವೇದಿತಿ ॥೨೮॥

ಸತ್ಯವತಿಯು ತಮ್ಮ ಮಾವನನ್ನು ಕುರಿತು ಮತ್ತೆಮತ್ತೆ ನನಗೆ ಅಂತಹ ಮಗನು ಬೇಡ. ಬೇಕಾದರೆ ಮೊಮ್ಮಗನು ಹಾಗಿರಲಿ ಎಂದು ಒತ್ತಾಯದಿಂದ ಬೇಡಿದಳು.

ಏವಮಸ್ತ್ವಿತಿ ಸಾ ತೇನ ಪಾಂಡವ ಪ್ರತಿನಂದಿತಾ ।
ಕಾಲಂ ಪ್ರತೀಕ್ಷತೀ ಗರ್ಭಂ ಧಾರಯಾಮಾಸ ಯತ್ನತಃ ॥೨೯॥

ಎಲೈ ಪಾಂಡವನೇ, ಹಾಗೆಯೇ ಆಗಲಿ ಎಂದು ಅವರಿಂದ ಆಶೀರ್ವಾದವನ್ನು ಪಡೆದು ಕಾಲವನ್ನು ನಿರೀಕ್ಷಿಸುತ್ತಾ ಅವಳು ಪ್ರಯತ್ನಪೂರ್ವಕವಾಗಿ ಗರ್ಭವನ್ನು ಧರಿಸಿದಳು.

ಜಮದಗ್ನಿಂತತಃ ಪುತ್ರಂ ಜಜ್ಞೇ ಸಾ ಕಾಲ ಆಗತೇ ।
ತೇಜಸಾ ವರ್ಚಸಾ ಚೈವ ಯುಕ್ತಂ ಭಾರ್ಗವನಂದನಮ್ ॥೩೦॥

ಯೋಗ್ಯವಾದ ಕಾಲದಲ್ಲಿ ಅವಳು ತೇಜಸ್ಸಿನಿಂದಲೂ, ಕಾಂತಿಯಿಂದಲೂ ಕೂಡಿದ ಭಾರ್ಗವನಂದನನಾದ ಜಮದಗ್ನಿಯನ್ನು ಪುತ್ರನನ್ನಾಗಿ ಪಡೆದಳು.

ಸ ವರ್ಧಮಾನಸ್ತೇಜಸ್ವೀ ವೇದಸ್ಯಾಧ್ಯಯನೇನ ಚ ।
ಬಹೂನೃಷೀನ್ ಮಹಾತೇಜಾಃ ಪಾಂಡವೇಯಾತ್ಯವರ್ತತ ॥೩೧॥

ಎಲೈ ಪಾಂಡುಪುತ್ರನೇ, ಅವನು ತೇಜಸ್ವಿಯಾಗಿ ಬೆಳೆಯುತ್ತಾ ಮಹಾತೇಜಸ್ಸನ್ನು ಹೊಂದಿ ತನ್ನ ವೇದಾಧ್ಯಯನದಿಂದ ಅನೇಕ ಋಷಿಗಳನ್ನು ಮೀರಿದನು.

ತಂ ತು ಕೃತ್ಸ್ನೋ ಧನುರ್ವೇದಃ ಪ್ರತ್ಯಭಾದ್ ಭರತರ್ಷಭ ।
ಚತುರ್ವಿಧಾನಿ ಚಾಸ್ತ್ರಾಣಿ ಭಾಸ್ಕರೋಪಮವರ್ಚಸಮ್ ॥೩೨॥

ಎಲೈ ಭರತರ್ಷಭನೇ, ಸೂರ್ಯನಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ ಅವನಿಗೆ ಸಮಗ್ರವಾದ ಧನುರ್ವೇದವೂ, ಚತುರ್ವಿಧವಾದ ಅಸ್ತ್ರಗಳೂ ಸ್ವತಃ ಪ್ರತಿಭಾತವಾದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿಮೂರನೆಯ ಅಧ್ಯಾಯ

ಪರಶುರಾಮ ಕಥೆ. ಜಮದಗ್ನಿಯ ವಧೆ.

ಅಕೃತವ್ರಣಃ

ಸ ವೇದಾಧ್ಯಯನೇ ಯುಕ್ತೋ ಜಮದಗ್ನಿರ್ಮಹಾತಪಾಃ ।
ತಪಸ್ತೇಪೇ ತತೋ ದೇವಾನ್ ನಿಯಮಾದ್ ವಶಮಾನಯತ್ ॥೧॥

ಅಕೃತವ್ರಣ– ಮಹಾತಪಸ್ವಿಗಳಾದ ಜಮದಗ್ನಿಗಳು ವೇದಾಧ್ಯಯನದಲ್ಲಿ ನಿರತರಾಗಿ ತಪಸ್ಸನ್ನು ಮಾಡಿ ತಮ್ಮ ವ್ರತನಿಯಮಗಳಿಂದ ದೇವತೆಗಳನ್ನು ವಶಪಡಿಸಿಕೊಂಡರು.

ಸ ಪ್ರಸೇನಜಿತಂ ರಾಜನ್ನಧಿಗಮ್ಯ ನರಾಧಿಪಮ್ ।
ರೇಣುಕಾಂ ವರಯಾಮಾಸ ಸ ಚ ತಸ್ಮೈ ದದೌ ನೃಪಃ ॥೨॥

ಎಲೈ ರಾಜನೇ, ಅವರು ಪ್ರಸೇನಜಿತ್ ರಾಜನನ್ನು ಸಮೀಪಿಸಿ ಅವನ ಮಗಳಾದ ರೇಣುಕೆಯನ್ನು ವರಿಸಲು ಪ್ರಾರ್ಥಿಸಿದರು. ರಾಜನು ಅವರಿಗೆ ಅವಳನ್ನು ಕೊಟ್ಟನು.

ರೇಣುಕಾಂ ತ್ವಥ ಸಂಪ್ರಾಪ್ಯ ಭಾರ್ಯಾಂ ಭಾರ್ಗವನಂದನಃ ।
ಆಶ್ರಮಸ್ಥಾಸ್ತಯಾ ಸಾರ್ಧಂ ತಪಸ್ತೇಪೇಽನುಕೂಲಯಾ ॥೩॥

ಭಾರ್ಗವನಂದನರಾದ ಜಮದಗ್ನಿಗಳು ರೇಣುಕೆಯನ್ನು ಭಾರ್ಯೆಯಾಗಿ ಹೊಂದಿ ಅನಂತರ ಆಶ್ರಮಕ್ಕೆ ಬಂದು ಅನುಕೂಲಳಾಗಿದ್ದ ಅವಳ ಜೊತೆಯಲ್ಲಿ ತಪಸ್ಸನ್ನು ಮಾಡಿದರು.

ತಸ್ಯಾಃ ಕುಮಾರಾಶ್ಚತ್ವಾರೋ ಜಜ್ಞಿರೇ ರಾಮಪಂಚಮಾಃ ।
ಸರ್ವೇಷಾಮಜಘನ್ಯಸ್ತು ರಾಮ ಆಸೀದ್ಜಘನ್ಯಜಃ ॥೪॥

ಅವಳಿಗೆ ನಾಲ್ಕು ಪುತ್ರರು ಜನಿಸಿದರು. ರಾಮನು ಐದನೆಯವನು. ಅವನು ಎಲ್ಲರಿಗಿಂತಲೂ ಕಿರಿಯನಾದರೂ (ಗುಣಗಳಿಂದ) ಎಲ್ಲರಿಗಿಂತ ಶ್ರೇಷ್ಠನಾದವನು.

ಫಲಾಹಾರೇಷು ಸರ್ವೇಷು ಗತೇಷ್ವಥ ಸುತೇಷು ವೈ ।
ರೇಣುಕಾ ಸ್ನಾತುಮಗಮತ್ ಕದಾಚಿನ್ನಿಯತವ್ರತಾ ॥೫॥

ಒಮ್ಮೆ ಫಲಗಳನ್ನು ತರಲು ತನ್ನ ಎಲ್ಲಾ ಮಕ್ಕಳೂ ಹೊರಗೆ ಹೋಗಿರುವಾಗ ನಿಯತವ್ರತಳಾದ ರೇಣುಕೆಯು ಸ್ನಾನಕ್ಕಾಗಿ ಹೊರಟಳು.

ಸ ತು ಚಿತ್ರರಥಂ ನಾಮ ಮಾರ್ತಿಕಾವತಕಂ ನೃಪಮ್ ।
ದದರ್ಶ ರೇಣುಕಾ ರಾಜನ್ನಾಗಚ್ಛಂತೀ ಯದೃಚ್ಛಯಾ ॥೬॥

ಎಲೈ ರಾಜನೇ, ಅವಳು ಹೋಗುತ್ತಾ ಅಕಸ್ಮಾತ್ತಾಗಿ ಮಾರ್ತಿಕಾವತರಾಜನಾದ ಚಿತ್ರರಥನನ್ನು ನೋಡಿದಳು. (ಮೂರ್ತಿಕಾವತವು ಮಗಧದ ರಾಜಧಾನಿ).

ಕ್ರೀಡಂತಂ ಸಲಿಲೇ ದೃಷ್ಟ್ವಾ ಸಭಾರ್ಯಂ ಹೇಮಮಾಲಿನಮ್ ।
ಋದ್ಧಿಮತ್ತಾಂ ತತಸ್ತಸ್ಯ ಸ್ಪೃಶಯಾಮಾಸ ರೇಣುಕಾ ॥೭॥

ರೇಣುಕೆಯು ಹೇಮಮಾಲೆಗಳನ್ನು ಧರಿಸಿ ತನ್ನ ಪತ್ನಿಯರೊಡನೆ ಜಲಕ್ರೀಡೆಯಾಡುತ್ತಿದ್ದ ಅವನ ಸಮೃದ್ಧಿಯನ್ನು ನೋಡಿ ಮನಸ್ಸಿನಲ್ಲಿ ಒಮ್ಮೆ ಬಯಸಿದಳು.

ವ್ಯಭಿಚಾರಾತ್ ತು ತಸ್ಮಾತ್ ಸಾ ಕ್ಲಿನ್ನಾಂಭಸಿ ವಿಚೇತನಾ ।
ಪ್ರವಿವೇಶಾಶ್ರಮಂ ತ್ರಸ್ತಾ ತಾಂ ವೈ ಭರ್ತಾऽನ್ವಬುಧ್ಯತ ॥೮॥

ಅವಳು ಆ ವ್ಯಭಿಚಾರದಿಂದ ವಿಚೇತನಳಾಗಿ ಜಲದಲ್ಲಿ ಸ್ನಾನವನ್ನು ಮಾಡಿ ಹೆದರಿ ಆಶ್ರಮಕ್ಕೆ ಬಂದಳು. ಪತಿಗಳಾದ ಜಮದಗ್ನಿಗಳಿಗೆ ಅವಳ ಮನೋವೃತ್ತಿಯು ತಿಳಿಯಿತು.

ಸ ತಾಂ ಧೃಷ್ಟಾಚ್ಯುತಾಂ ಧೈರ್ಯಾದ್ ಬ್ರಾಹ್ಮ್ಯಾ ಲಕ್ಷ್ಮ್ಯಾ ಚ ವರ್ಜಿತಾಮ್
ಧಿಕ್‌ಶಬ್ದೇನ ಮಹಾತೇಜಾ ಗರ್ಹಯಾಮಾಸ ವೀರ್ಯವಾನ್ ॥೯॥

ಧೈರ್ಯಚ್ಯುತಳಾಗಿ ಬ್ರಾಹ್ಮೀಕಾಂತಿಯಿಂದ ರಹಿತಳಾದ ಅವಳನ್ನು ನೋಡಿ ಮಹಾತೇಜಸ್ವಿಗಳೂ, ಸಾಮರ್ಥ್ಯವಂತರೂ ಆದ ಜಮದಗ್ನಿಗಳು ಧಿಕ್‌ಶಬ್ದದಿಂದ ಅವಳನ್ನು ನಿಂದಿಸಿದರು.

ತತೋ ಜ್ಯೇಷ್ಠೋ ಜಾಮದಗ್ನ್ಯೋ ರುಮಣ್ವಾನ್ನಾಮ ನಾಮತಃ ।
ಆಜಗಾಮ ಸುಷೇಣಶ್ಚ ವಸುರ್ವಿಶ್ವಾವಸುಸ್ತದಾ ॥೧೦॥

ಆನಂತರ ಜಮದಗ್ನಿಗಳ ಜ್ಯೇಷ್ಠಪುತ್ರರಾದ ರುಮಣ್ವಾನ್ ಎಂಬುವರು, ಆನಂತರ ಉಳಿದ ಮಕ್ಕಳಾದ ಸುಷೇಣ, ವಸು, ವಿಶ್ವಾವಸುಗಳು ಅಲ್ಲಿಗೆ ಬಂದರು.

ತಾನಾನುಪೂರ್ವ್ಯಾದ್ ಭಗವಾನ್ ವಧೇ ಮಾತುರಚೋದಯತ್ ।
ನ ಚ ತೇ ಜಾತಸಮ್ಮೋಹಾಃ ಕಿಂಚಿದೂಚುರ್ವಿಚೇತಸಃ ॥೧೧॥

ಪೂಜ್ಯರಾದ ಜಮದಗ್ನಿಗಳು ಕ್ರಮವಾಗಿ ಅವರನ್ನು ತಾಯಿಯನ್ನು ಸಂಹರಿಸುವಂತೆ ಪ್ರೇರಿಸಿದರು. ಆ ಮಕ್ಕಳಾದರೂ ದಿಗ್ಭ್ರಾಂತರಾಗಿ ವಿಚೇತನರಾಗಿ ಏನನ್ನೂ ಮಾತನಾಡಲಿಲ್ಲ.

ತತಃ ಶಶಾಪ ತಾನ್ ಕ್ರೋಧಾತ್ ತೇ ಶಪ್ತಾಸ್ಚೇತನಾಂ ಜಹುಃ ।
ಮೃಗಪಕ್ಷ್ಯಧರ್ಮಾಣಃ ಕ್ಷಿಪ್ರಮಾಸನ್ ಜಡೋಪಮಾಃ ॥೧೨॥

ಆಗ ಜಮದಗ್ನಿಗಳು ಕ್ರೋಧದಿಂದ ಅವರಿಗೆ ಶಾಪವನ್ನು ಕೊಟ್ಟರು. ತಂದೆಯ ಶಾಪಕ್ಕೆ ಒಳಗಾದ ಅವರು ತಮ್ಮ ಬುದ್ಧಿಯನ್ನು ಕಳೆದುಕೊಂಡು ಮೃಗಪಕ್ಷಿಗಳ ಸಮಾನ ಧರ್ಮವುಳ್ಳವರಾಗಿ ಶೀಘ್ರವಾಗಿ ಜಡರಂತೆ ಆದರು.

ತತೋ ರಾಮೋಽಭ್ಯಗಾತ್ ಪಶ್ಚಾದಾಶ್ರಮಂ ಪರವೀರಹಾ ।
ತಮುವಾಚ ಮಹಾಮನ್ಯುರ್ಜಮದಗ್ನಿರ್ಮಹಾತಪಾಃ ॥೧೩॥

ಜಹೀಮಾಂ ಮಾತರಂ ಪಾಪಾಂ ಮಾ ಚ ಪುತ್ರ ವೃಥಾಂ ಕೃಥಾಃ ।
ತತ ಆದಾಯ ಪರಶುಂ ರಾಮೋ ಮಾತುಃ ಶಿರೋಽಹರತ್ ॥೧೪॥

ಆನಂತರ ಪರವೀರಘಾತಕನಾದ ರಾಮನು ಆಶ್ರಮಕ್ಕೆ ಹಿಂದಿರುಗಿದನು. ಮಹಾಕೋಪವುಳ್ಳ, ಮಹಾತಪಸ್ವಿಗಳಾದ ಜಮದಗ್ನಿಗಳು ಅವನನ್ನು ಕುರಿತು 'ಪುತ್ರನೇ, ಪಾಪವನ್ನು ಎಸಗಿದ ಈ ನಿನ್ನ ತಾಯಿಯನ್ನು ಕೊಲ್ಲು. ವ್ಯಥೆಯನ್ನು ಮಾಡಬೇಡ' ಎಂದು ಹೇಳಿದರು. ಆಗ ರಾಮನು ಪರಶುವನ್ನು ತೆಗೆದುಕೊಂಡು ತಾಯಿಯ ಶಿರಸ್ಸನ್ನು ಛೇದಿಸಿದನು.

ತತಸ್ತಸ್ಯ ಮಹಾರಾಜ ಜಮದಗ್ನೇರ್ಮಹಾತ್ಮನಃ ।
ಕೋಪೋಽಭ್ಯಗಚ್ಛತ್ ಸಹಸಾ ಪ್ರಸನ್ನಶ್ಚಾಬ್ರವೀತ್ ಸುತಮ್ ॥೧೫॥

ಮಮೇದಂ ವಚನಾದ್ ರಾಮ ಕೃತಂ ತೇ ಕರ್ಮ ದುಷ್ಕರಮ್ ।
ವೃಣೀಷ್ವ ಕಾಮಾನ್ ಧರ್ಮಜ್ಞ ಯಾವತೋ ವಾಂಛಸೇ ಹೃದಿ ॥೧೬॥

ಎಲೈ ಮಹಾರಾಜನೇ, ಆಗ ಮಹಾತ್ಮರಾದ ಜಮದಗ್ನಿಗಳ ಕೋಪವು ತಕ್ಷಣದಲ್ಲಿಯೇ ಶಾಂತವಾಗಿ ಅವರು ಪ್ರಸನ್ನಚಿತ್ತರಾಗಿ ಪುತ್ರನಾದ ಪರಶುರಾಮನನ್ನು ಕುರಿತು– 'ರಾಮನೇ, ನನ್ನ ವಚನದಂತೆ ನೀನು ದುಷ್ಕರವಾದ ಕರ್ಮವನ್ನು ಮಾಡಿದ್ದೀಯೆ. ಧರ್ಮಜ್ಞನೇ, ನಿನಗೆ ಎಷ್ಟು ವರಗಳು ಅಪೇಕ್ಷಿತವಾಗಿದೆಯೋ ಅಷ್ಟು ವರಗಳನ್ನು ಕೇಳು ಎಂದು ಹೇಳಿದರು.

ಸ ವವ್ರೇ ಮಾತುರುತ್ಥಾನಮಸ್ಮೃತಿಂ ಚ ವಧಸ್ಯ ವೈ ।
ಪಾಪೇನ ತೇನ ಚಾಸ್ಪರ್ಶಂ ಭ್ರಾತೃಣಾಂ ಪ್ರಕೃತಿಂ ಪುನಃ ॥೧೭॥

ಅಪ್ರತಿದ್ವಂದ್ವತಾಂ ಯುದ್ಧೇ ದೀರ್ಘಮಾಯುಶ್ಚ ಭಾರತ ।
ದದೌ ಚ ಸರ್ವಾನ್ ಕಾಮಾಂಸ್ತಾನ್ ಜಮದಗ್ನಿರ್ಮಹಾತಪಾಃ ॥೧೮॥

ಪರಶುರಾಮನಾದರೂ ತಾಯಿಯ ಉತ್ಥಾನವನ್ನೂ ತಾನು ಮಾಡಿದ ವಧೆಯ ವಿಸ್ಮರಣೆಯನ್ನೂ ಆ ಪಾಪದ ಆಲೇಪವನ್ನೂ, ತನ್ನ ಅಣ್ಣಂದಿರಿಗೆ ಮೊದಲಿನ ಸ್ವಭಾವವನ್ನೂ, ತನಗೆ ಯುದ್ಧದಲ್ಲಿ ಅಪ್ರತಿದ್ವಂದ್ವತ್ವವನ್ನೂ ದೀರ್ಘವಾದ ಆಯುಷ್ಯವನ್ನೂ ವರವಾಗಿ ಕೇಳಿದನು. ಎಲೈ ಭಾರತನೇ, ಮಹಾತಪಸ್ವಿಗಳಾದ ಜಮದಗ್ನಿಗಳು ಆ ಎಲ್ಲಾ ವರಗಳನ್ನೂ ಅವನಿಗೆ ಕೊಟ್ಟರು.

ಕದಾಚಿತ್ ತು ತಥೈವಾಸ್ಯ ವಿನಿಷ್ಕ್ರಮನ್ ಸುತಾಃ ಪ್ರಭೋ ।
ಅಥಾನೂಪಪತಿರ್ವೀರಃ ಕಾರ್ತವೀಯೋಽಭ್ಯವರ್ತತ ॥೧೯॥

ಎಲೈ ಪ್ರಭುವೇ, ಒಮ್ಮೆ ಹಾಗೆಯೇ ಆ ಜಮದಗ್ನಿಯ ಮಕ್ಕಳೆಲ್ಲರೂ ವನಕ್ಕೆ ಹೋಗಿದ್ದರು. ಆಗ ಅನೂಪರಾಜನಾದ ವೀರನಾದ ಕಾರ್ತವೀರ್ಯನು ಆಶ್ರಮಕ್ಕೆ ಬಂದನು.

ತಮಾಶ್ರಮಮನುಪ್ರಾಪ್ತಮ್ ಋಷೇರ್ಭಾರ್ಯಾ ಸಮರ್ಚಯತ್ ।
ಸ ಯುದ್ಧಮದಸಮ್ಮತ್ತೋ ನಾಭ್ಯನಂದನ್ನಥಾಽರ್ಚನಮ್ ॥೨೦॥

ಪ್ರಮಥ್ಯ ಚಾಶ್ರಮಾತ್ ತಸ್ಮಾದ್ಧೋಮಧೇನೋಸ್ತದಾ ಬಲಾತ್ ।
ಜಹಾರ ವತ್ಸಂ ಕ್ರೋಶಂತ್ಯಾ ಬಭಂಜ ಚ ಮಹಾದ್ರುಮಾನ್ ॥೨೧॥

ಆಶ್ರಮಕ್ಕೆ ಪ್ರಾಪ್ತನಾದ ಅವನನ್ನು ಜಮದಗ್ನಿಯ ಪತ್ನಿಯು ಸತ್ಕರಿಸಿದಳು. ಆದರೆ ಯುದ್ಧಮದದಿಂದ ಮತ್ತನಾಗಿದ್ದ ಅವನು ಆ ಪೂಜೆಯನ್ನು ಅಭಿನಂದಿಸದೇ ತನ್ನ ಬಲದಿಂದ ಆ ಆಶ್ರಮದ ಕಾಮಧೇನುವಿನ ಕರುವನ್ನು ಅದರ ತಾಯಿಯು ಕಿರುಚುತ್ತಿದ್ದರೂ ಎಳೆದುಕೊಂಡು ಹೋಗಿ ಆ ಆಶ್ರಮದ ಮಹಾವೃಕ್ಷಗಳನ್ನು ಕಡಿದನು.

ಆಗತಾಯ ಚ ರಾಮಾಯ ಪಿತಾऽऽಚಷ್ಟ ತದಾ ಸ್ವಯಮ್ ।
ಗಾಂ ಚ ರೋರೂಯತೀಂ ದೃಷ್ಟ್ವಾ ಕೋಪೋ ರಾಮಂ ಸಮಾವಿಶತ್ ।
ಸ ಮನ್ಯುವಶಮಾಪನ್ನಃ ಕಾರ್ತವೀರ್ಯಮುಪಾದ್ರವತ್ ॥೨೨॥

ಹಿಂದಿರುಗಿದ ರಾಮನಿಗೆ ತಂದೆಯು ಸ್ವತಃ ಎಲ್ಲಾ ವಿಷಯವನ್ನು ಹೇಳಿದರು. ಪುನಃಪುನಃ ರೋದನವನ್ನು ಮಾಡುತ್ತಿದ್ದ ಹೋಮಧೇನುವನ್ನು ನೋಡಿ ರಾಮನಿಗೆ ಕೋಪವು ಆವರಿಸಿತು. ಮನ್ಯುವಶನಾದ ರಾಮನು ಕಾರ್ತವೀರ್ಯನ ಮೇಲೆ ಎರಗಲು ಹೊರಟನು.

ತಸ್ಯಾಥ ಯುಧಿ ವಿಕ್ರಮ್ಯ ಭಾರ್ಗವಃ ಪರವೀರಹಾ ।
ಚಿಚ್ಛೇದ ನಿಶಿತೈರ್ಭಲ್ಲೈರ್ಬಾಹೂನ್ ಪರಿಘಸನ್ನಿಭಾನ್ ।
ಸಹಸ್ರಸಮ್ಮಿತಾನ್ ರಾಜನ್ ಪ್ರಗೃಹ್ಯ ರುಚಿರಂ ಧನುಃ ॥೨೩॥

ಎಲೈ ರಾಜನೇ, ಪರವೀರಘಾತಕನಾದ ಪರಶುರಾಮನು ಸುಂದರವಾದ ಧನುಸ್ಸನ್ನು ತೆಗೆದುಕೊಂಡು ಯುದ್ಧದಲ್ಲಿ ಕಾರ್ತವೀರ್ಯನನ್ನು ಮೆಟ್ಟಿ ತನ್ನ ಹರಿತವಾದ ಭಲ್ಲಗಳಿಂದ ಪರಿಘದಂತಿದ್ದ ಅವನ ಸಹಸ್ರಬಾಹುಗಳನ್ನು ಛೇದಿಸಿದನು.

ಅರ್ಜುನಸ್ಯಾಥ ದಾಯಾದಾ ರಾಮೇಣ ಕೃತಮನ್ಯವಃ ।
ಆಶ್ರಮಸ್ಥಂ ವಿನಾ ರಾಮಂ ಜಮದಗ್ನಿಮುಪಾದ್ರವನ್ ॥೨೪॥

ತೇ ತಂ ಜಘ್ನುರ್ಮಹಾವೀರ್ಯಮಯುಧ್ಯಂತಂ ತಪಸ್ವಿನಮ್ ।
ಅಸಕೃದ್ ರಾಮರಾಮೇತಿ ವಿಕ್ರೋಶಂತಮನಾಥವತ್ ॥೨೫॥

ಕಾರ್ತವೀರ್ಯಾರ್ಜುನನ ಮಕ್ಕಳು ಪರಶುರಾಮನ ಜೊತೆಯಲ್ಲಿ ವೈರವನ್ನು ಸಂಪಾದಿಸಿ ರಾಮನು ಇಲ್ಲದ ಸಮಯದಲ್ಲಿ ಆಶ್ರಮದಲ್ಲಿದ್ದ ಜಮದಗ್ನಿಗಳ ಸಮೀಪಕ್ಕೆ ಬಂದರು. ಅವರು ಯುದ್ಧಮಾಡದೇ ಶಾಂತವಾಗಿ ತಪಸ್ಸನ್ನು ಮಾಡುತ್ತಿದ್ದ ಮಹಾ ಸಾಮರ್ಥ್ಯೋಪೇತರಾದ ಜಮದಗ್ನಿಗಳನ್ನು ಅವರು ಅನಾಥರಂತೆ 'ರಾಮ, ರಾಮ' ಎಂದು ಅನೇಕ ಬಾರಿ ಕಿರುಚುತ್ತಿದ್ದರೂ ಅವರನ್ನು ಸಂಹರಿಸಿದರು.

ಕಾರ್ತವೀರ್ಯಸ್ಯ ಪುತ್ರಾಸ್ತು ಜಮದಗ್ನಿಂ ಯುಧಿಷ್ಠಿರ ।
ಘಾತಯಿತ್ವಾ ಶರೈರ್ಜಗ್ಮುರ್ಯಥಾಗತಮರಿಂದಮಾಃ ॥೨೬॥

ಎಲೈ ಯುಧಿಷ್ಠಿರನೇ, ಕಾರ್ತವೀರ್ಯನ ಅರಿಂದಮರಾದ ಪುತ್ರರಾದರೂ ಜಮದಗ್ನಿಗಳನ್ನು ತಮ್ಮ ಬಾಣಗಳಿಂದ ಸಂಹರಿಸಿ ಬಂದ ದಾರಿಯಲ್ಲಿ ಹಿಂದಿರುಗಿ ಹೊರಟುಹೋದರು.

ಅಪಕ್ರಾಂತೇಷು ಚೈತೇಷು ಜಮದಗ್ನೌ ತಥಾಗತೇ ।
ಸಮಿತ್ಪಾಣಿರುಪಾಗಚ್ಛದಾಶ್ರಮಂ ಭೃಗುನಂದನಃ ॥೨೭॥

ಅವರೆಲ್ಲರೂ ಹೊರಟುಹೋಗುತ್ತಿರಲು ಜಮದಗ್ನಿಗಳು ಮರಣವನ್ನು ಹೊಂದಿರಲು ಕೈಯಲ್ಲಿ ಸಮಿತ್ತನ್ನು ಹಿಡಿದು ಭೃಗುನಂದನನಾದ ಪರಶುರಾಮನು ಆಶ್ರಮಕ್ಕೆ ಬಂದನು.

ಸ ದೃಷ್ಟ್ವಾ ಪಿತರಂ ವೀರಃ ತದಾ ಮೃತ್ಯುವಶಂ ಗತಮ್ ।
ಅನಾಗಸಂ ಮಹಾತ್ಮಾನಂ ವಿಲಲಾಪ ಸುದುಃಖಿತಃ ॥೨೮॥

ವೀರನಾದ ಅವನು ನಿರಪರಾಧಿಯಾದ, ಮಹಾತ್ಮನಾದ ತನ್ನ ತಂದೆಯು ಮೃತ್ಯುವಶನಾಗಿರುವುದನ್ನು ನೋಡಿ ಬಹಳ ದುಃಖದಿಂದ ಕೂಡಿದವನಾಗಿ ವಿಲಾಪವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನಸಪ್ತತಿಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನಾಲ್ಕನೆಯ ಅಧ್ಯಾಯ

ರಾಮನ ವಿಲಾಪ. ಕ್ಷತ್ರಿಯ ವಧೆ. ಋಚೀಕರ ವಚನದಂತೆ ಕ್ಷತ್ರಿಯ ವಧೆಯಿಂದ ನಿವೃತ್ತಿ. ಯಾಗದಲ್ಲಿ ಸರ್ವಸ್ವ ದಾನ ಮತ್ತು ತಪಶ್ಚರ್ಯಾ.

ಪರಶುರಾಮಃ

ಮಮಾಪರಾಧಾತ್ ತೈಃ ಕ್ಷುದ್ರೈರ್ಹತಸ್ತ್ವಂ ತಾತ ಬಾಲಿಶೈಃ ।
ಕಾರ್ತವೀರ್ಯಸ್ಯ ದಾಯಾದೈರ್ವನೇ ಮೃಗ ಇವೇಷುಭಿಃ ॥೧॥

ಪರಶುರಾಮ– ತಂದೆಯೇ, ನನ್ನ ಅಪರಾಧದಿಂದ ಬಾಲಿಶರಾದ, ಕ್ಷುದ್ರರಾದ ಕಾರ್ತವೀರ್ಯನ ಪುತ್ರರಿಂದ ನೀನು ಕಾಡಿನಲ್ಲಿ ಬಾಣಗಳಿಂದ ಮೃಗವು ಹತವಾಗುವಂತೆ ಹತನಾಗಿದ್ದೀಯೆ.

ಧರ್ಮಜ್ಞಸ್ಯ ಕಥಂ ತಾತ ವರ್ತಮಾನಸ್ಯ ಸತ್ಪಥೇ ।
ಮೃತ್ಯುರೇವಂವಿಧೋ ಯುಕ್ತಃ ಸರ್ವಭೂತೇಷ್ವನಾಗಸಃ ॥೨॥

ಎಲೈ ತಂದೆಯೇ, ಧರ್ಮಜ್ಞನಾಗಿ ಸನ್ಮಾರ್ಗದಲ್ಲಿ ನಡೆದು ಯಾವ ಪ್ರಾಣಿಗೂ ಅಪರಾಧಮಾಡದಿದ್ದ ನಿನಗೆ ಈ ರೀತಿಯ ಮರಣವು ಹೇಗೆ ಉಚಿತವಾಗುತ್ತದೆ?

ಕಂ ನು ತ್ವೈರ್ನ ಕೃತಂ ಪಾಪಂ ಯೈರ್ಭವಾಂಸ್ತಪಸಿ ಸ್ಥಿತಃ ।
ಅಯುದ್ಧ್ಯಮಾನೋ ವೃದ್ಧಃ ಸನ್ ಹತಃ ಶರಶತೈಃ ಶಿತೈಃ ॥೩॥

ಯುದ್ಧವನ್ನು ಮಾಡದೇ ತಪಸ್ಸಿನಲ್ಲಿ ನಿರತನಾಗಿದ್ದ ವೃದ್ಧನಾದ ನಿನ್ನನ್ನು ನೂರಾರು ಹರಿತವಾದ ಬಾಣಗಳಿಂದ ಕೊಂದ ಅವರು ಯಾವ ಪಾಪವನ್ನು ಮಾಡಲಿಲ್ಲ?

ಅಕೃತವ್ರಣಃ

ಲಾಲಪ್ಯೈವಂ ಸಕರುಣಂ ಬಹು ನಾನಾವಿಧಂ ನೃಪ ।
ಪ್ರೇತಕಾರ್ಯಾಣಿ ಸರ್ವಾಣಿ ಪಿತುಶ್ಚಕ್ರೇ ಮಹಾತಪಾಃ ॥೪॥

ಅಕೃತವ್ರಣ– ಎಲೈ ರಾಜನೇ, ಮಹಾತಪಸ್ವಿಯಾದ ರಾಮನು ಹೀಗೆ ಕರುಣಾಜನಕವಾಗಿ ನಾನಾ ವಿಧವಾಗಿ ಬಹಳವಾಗಿ ವಿಲಾಪವನ್ನು ಮಾಡಿ ತನ್ನ ತಂದೆಗೆ ಎಲ್ಲಾ ಪ್ರೇತಕಾರ್ಯಗಳನ್ನೂ ಮಾಡಿದನು.

ದದಾಹ ಪಿತರಂ ಚಾಗ್ನೌ ರಾಮಃ ಪರಪುರಂಜಯಃ ।
ಪ್ರತಿಜಜ್ಞೇ ವಧಂ ಚಾಪಿ ಸರ್ವಕ್ಷತ್ರಸ್ಯ ಭಾರತ ॥೫॥

ಎಲೈ ಭಾರತನೇ, ಪರಪುರಂಜಯನಾದ ರಾಮನು ತನ್ನ ತಂದೆಯ ಶರೀರವನ್ನು ದಹಿಸಿ ಸರ್ವಕ್ಷತ್ರಿಯರ ವಧೆಯನ್ನು ಮಾಡುವುದಾಗಿ ಪ್ರತಿಜ್ಞೆಯನ್ನು ಮಾಡಿದನು.

ಸಂಕ್ರುದ್ಧೋಽತಿಬಲಃ ಶೂರಃ ಶಸ್ತ್ರಮಾದಾಯ ವೀರ್ಯವಾನ್ ।
ಜಘ್ನಿವಾನ್ ಕಾರ್ತವೀರ್ಯಸ್ಯ ಸುತಾನೇಕೋ ಮಹಾಬಲಃ ॥೬॥

ಅತಿಬಲಿಷ್ಠನೂ, ಪರಾಕ್ರಮಶಾಲಿಯೂ, ಶೂರನೂ, ಮಹಾಬಲಿಷ್ಠನೂ, ಸಂಕ್ರುದ್ಧನೂ ಆದ ಅವನು ಶಸ್ತ್ರವನ್ನು ತೆಗೆದುಕೊಂಡು ಕಾರ್ತವೀರ್ಯನ ಮಕ್ಕಳನ್ನೆಲ್ಲಾ ಒಬ್ಬನೇ ಕೊಂದನು.

ತೇಷಾಂ ಯೇ ಚಾನುಗಾಃ ಕೇಚಿತ್ ಕ್ಷತ್ರಿಯಾಃ ಕ್ಷತ್ರಿಯರ್ಷಭ ।
ತಾಂಶ್ಚ ಸರ್ವಾನವಾಮೃದ್ನಾದ್ ರಾಮಃ ಶಸ್ತ್ರಭೃತಾಂ ವರಃ ॥೭॥

ಎಲೈ ಕ್ಷತ್ರಿಯರ್ಷಭನೇ, ಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನಾದ ರಾಮನು ಕಾರ್ತವೀರ್ಯನ ಪುತ್ರರ ಅನುಚರರಾದ ಕ್ಷತ್ರಿಯರನ್ನೆಲ್ಲಾ ಒರೆಸಿಹಾಕಿದನು.

ತ್ರಿಃಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ ।
ಸಮಂತಪಂಚಕೇ ಪಂಚ ಚಕಾರ ರುಧಿರಹ್ರದಾನ್ ॥೮॥

ವ್ರಭುವಾದ ಅವನು ಇಪ್ಪತ್ತೊಂದುಬಾರಿ ಭೂಮಿಯಲ್ಲಿ ಕ್ಷತ್ರಿಯರನ್ನು ಸಂಹರಿಸಿ ಸಮಂತಪಂಚಕದಲ್ಲಿ ಐದು ರಕ್ತಸರೋವರಗಳನ್ನು ಮಾಡಿದನು.

ಸ ತೇಷು ತರ್ಪಯಾಮಾಸ ಪಿತೄನ್ ಭೃಗುಕುಲೋದ್ವಹಃ ।
ಸಾಕ್ಷಾದ್ ದದರ್ಶ ಚರ್ಚೀಕಂ ಸ ಚ ರಾಮಂ ನ್ಯವಾರಯತ್ ॥೯॥

ಭೃಗುವಂಶೋದ್ಭವನಾದ ಅವನು ಅದರಲ್ಲಿ ತನ್ನ ಪಿತೃಗಳಿಗೆ ತರ್ಪಣವನ್ನು ನೀಡಿದನು. ಅಲ್ಲಿಗೆ ಬಂದ ಋಚೀಕರನ್ನು ನೋಡಿ ಅವರ ವಚನದಂತೆ ರಾಮನು ಕ್ಷತ್ರಿಯ ವಧೆಯಿಂದ ನಿವೃತ್ತನಾದನು.

ತತೋ ಯಜ್ಞೇನ ಮಹತಾ ಜಾಮದಗ್ನ್ಯಃ ಪ್ರತಾಪವಾನ್ ।
ತರ್ಪಯಾಮಾಸ ದೇವೇಂದ್ರಮ್ ಋತ್ವಿಗ್ಭ್ಯಶ್ಚ ಮಹೀಂ ದದೌ ॥೧೦॥

ಅನಂತರ ಪ್ರತಾಪಶಾಲಿಯಾದ ಪರಶುರಾಮನು ದೊಡ್ಡ ಯಜ್ಞವನ್ನು ಮಾಡಿ ದೇವೇಂದ್ರನನ್ನು ಸಂತೋಷಪಡಿಸಿದನು. ಋತ್ವಿಜರಿಗೆ ಭೂಮಿಯನ್ನು ದಾನವಾಗಿ ಕೊಟ್ಟನು.

ವೇದೀಂ ಚ ಪ್ರದದಾದ್ ಹೈಮೀಂ ಕಾಶ್ಯಪಾಯ ಮಹಾತ್ಮನೇ ।
ದಶವ್ಯಾಮಾಯತಾಂ ಕೃತ್ವಾ ನವೋತ್ಸೇಧಾಂ ವಿಶಾಂ ಪತೇ ॥೧೧॥

ಎಲೈ ರಾಜನೇ, ಅವನು ಹತ್ತುಮಾರು ಉದ್ದ ಮತ್ತು ಒಂಭತ್ತು ಮಾರು ಎತ್ತರ ಇದ್ದ ಸುವರ್ಣಮಯವಾದ ಯಜ್ಞವೇದಿಕೆಯನ್ನು ಮಹಾತ್ಮರಾದ ಕಾಶ್ಯಪರಿಗೆ ಕೊಟ್ಟನು.

ತಾಂ ಕಾಶ್ಯಪಸ್ಯಾನುಮತೇ ಬ್ರಾಹ್ಮಣಾಃ ಖಂಡಶಸ್ತದಾ ।
ವ್ಯಭಜಂಸ್ತೇನ ತೇ ರಾಜನ್ ಪ್ರಖ್ಯಾತಾಃ ಖಂಡವಾಹನಾಃ ॥೧೨॥

ಕಾಶ್ಯಪರ ಅನುಮತಿಯಂತೆ ಬ್ರಾಹ್ಮಣರು ಆ ವೇದಿಕೆಯನ್ನು ತುಂಡು ತುಂಡು ಮಾಡಿ ಹಂಚಿಕೊಂಡರು. ಎಲೈ ರಾಜನೇ, ಆ ಬ್ರಾಹ್ಮಣರು ಖಂಡವಾಹನರೆಂದು ಪ್ರಸಿದ್ಧರಾದರು.

ಸ ಪ್ರದಾಯ ಮಹೀಂ ತಸ್ಮೈ ಕಾಶ್ಯಪಾಯ ಮಹಾತಪಾಃ ।
ತಪಸ್ಸು ಮನ ಆಸ್ಥಾಯ ಮಹಾಬಲಪರಾಕ್ರಮಃ ।
ಅಸ್ಮಿನ್ ವಸತಿ ಶೈಲೇಂದ್ರೇ ಮಹೇಂದ್ರೇऽಮಿತವಿಕ್ರಮಃ ॥೧೩॥

ಮಹಾತಪಸ್ವಿಯಾದ ಪರಶುರಾಮನು, ಕಾಶ್ಯಪರಿಗೆ ಭೂಮಿಯನ್ನು ದಾನಮಾಡಿ ತಪಸ್ಸಿನಲ್ಲಿಯೇ ಮನಸ್ಸನ್ನು ಇಟ್ಟು ಮಹಾಬಲಪರಾಕ್ರಮವುಳ್ಳವನೂ, ಅಮಿತ ವಿಕ್ರಮವುಳ್ಳವನೂ ಆಗಿ ಈ ಮಹೇಂದ್ರಪರ್ವತದಲ್ಲಿ ವಾಸಮಾಡುತ್ತಾನೆ.

ಏವಂ ವೈರಮಭೂತ್ ತಸ್ಯ ಕ್ಷತ್ರಿಯೈರ್ಲೋಕವಾಸಿಭಿಃ ।
ಪೃಥಿವೀ ಚಾಪಿ ವಿಜಿತಾ ರಾಮೇಣಾಮಿತತೇಜಸಾ ॥೧೪॥

ಹೀಗೆ ರಾಮನಿಗೆ ಲೋಕವಾಸಿಗಳಾದ ಕ್ಷತ್ರಿಯರ ಜೊತೆಯಲ್ಲಿ ವೈರವು ಉಂಟಾಯಿತು ಮತ್ತು ಅಮಿತಪರಾಕ್ರಮಿಯಾದ ರಾಮನು ಭೂಮಿಯನ್ನು ಜಯಿಸಿದನು.

ವೈಶಂಪಾಯನಃ

ತತಶ್ಚತುರ್ದಶೀಂ ರಾಮಃ ಸಮಯೇನ ಮಹಾತಪಾಃ ।
ದರ್ಶಯಾಮಾಸ ತಾನ್ ವಿಪ್ರಾನ್ ಧರ್ಮರಾಜಂ ಚ ಸಾನುಜಮ್ ॥

ವೈಶಂಪಾಯನ– ಅನಂತರ ಚತುರ್ದಶೀಯಂದು ಮಹಾತಪಸ್ವಿಯಾದ ಪರಶುರಾಮನು ತನ್ನ ನಿಯಮದಂತೆ ಅಲ್ಲಿದ್ದ ಋಷಿಗಳಿಗೂ, ಧರ್ಮರಾಜನಿಗೂ ಮತ್ತು ಅವನ ಸಹೋದರರಿಗೂ ತನ್ನ ದರ್ಶನವನ್ನು ನೀಡಿದನು.

ಸ ತಮಾನರ್ಚ ರಾಜೇಂದ್ರ ಭ್ರಾತೃಭಿಃ ಸಹಿತಃ ಪ್ರಭುಃ ।
ಸ ತಸ್ಮೈ ಪರಮಾಂ ಪೂಜಾಂ ಚಕ್ರೇ ನೃಪತಿಸತ್ತಮಃ ॥೧೬॥

ಎಲೈ ರಾಜೇಂದ್ರನೇ, ಪ್ರಭುವಾದ ಧರ್ಮರಾಜನು ತನ್ನ ತಮ್ಮಂದಿರ ಜೊತೆಯಲ್ಲಿ ಪರಶುರಾಮನನ್ನು ಪೂಜಿಸಿದನು. ನೃಪಶ್ರೇಷ್ಠನಾದ ಅವನು ಪರಶುರಾಮನಿಗೆ ಶ್ರೇಷ್ಠವಾದ ಪೂಜೆಯನ್ನು ಮಾಡಿದನು.

ಅರ್ಚಯಿತ್ವಾ ಜಾಮದಗ್ನ್ಯಂ ಪೂಜಿತಸ್ತೇನ ಚಾಭಿಭೂಃ ।
ಮಹೇಂದ್ರ ಉಷ್ಯ ತಾಂ ರಾತ್ರಿಂ ಪ್ರಯಯೌ ದಕ್ಷಿಣಾಮುಖಃ ॥೧೭॥

ಜಯಶೀಲನಾದ ಧರ್ಮರಾಜನು ಪರಶುರಾಮನನ್ನು ಪೂಜಿಸಿ ಅವನಿಂದ ಸತ್ಕೃತನಾಗಿ ಆ ರಾತ್ರಿಯನ್ನು ಮಹೇಂದ್ರಪರ್ವತದಲ್ಲಿ ಕಳೆದು ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನೈದನೆಯ ಅಧ್ಯಾಯ

ತೀರ್ಥಯಾತ್ರಾಕ್ರಮದಿಂದ ಪ್ರಭಾಸಕ್ಕೆ ಬಂದ ಪಾಂಡವರಿಗೆ
ಕೃಷ್ಣಬಲರಾಮರಿಂದ ಸತ್ಕಾರ.

ವೈಶಂಪಾಯನಃ

ಗಚ್ಛನ್ ಸ ತೀರ್ಥಾನಿ ಮಹಾನುಭಾವಃ
ಪುಣ್ಯಾನಿ ರಮ್ಯಾಣಿ ದದರ್ಶ ರಾಜಾ ।
ಸರ್ವಾಣಿ ವಿಪ್ರೈರುಪಶೋಭಿತಾನಿ
ಕ್ವಚಿತ್ ಕ್ವಚಿದ್ ಭಾರತ ಸಾಗರಸ್ಯ ॥೧॥

ವೈಶಂಪಾಯನ– ಎಲೈ ಭಾರತನೇ, ಮಹಾನುಭಾವನಾದ ಧರ್ಮರಾಜನು ತೀರ್ಥಯಾತ್ರೆಯನ್ನು ಮಾಡುತ್ತಾ ಸಮುದ್ರತೀರದಲ್ಲಿ ಅಲ್ಲಲ್ಲಿ ಇರುವ ಬ್ರಾಹ್ಮಣರಿಂದ ಪರಿಶೋಭಿತವಾದ ಎಲ್ಲಾ ಮನೋಹರವಾದ ಮತ್ತು ಪವಿತ್ರವಾದ ತೀರ್ಥಗಳನ್ನೂ ನೋಡಿದನು.

ಸ ವೃತ್ತವಾಂಸ್ತೇಷು ಕೃತಾಭಿಷೇಕಃ
ಸಹಾನುಜಃ ಪಾರ್ಥಿವಪುತ್ರಪೌತ್ರಃ ।

ಸಮುದ್ರಗಾಂ ಪುಣ್ಯತಮಾಂ ಪ್ರಶಸ್ತಾಂ
ಜಗಾಮ ಪಾರೀಕ್ಷಿತ ಪಾಂಡುಪುತ್ರಃ ॥೨॥

ಎಲೈ ಜನಮೇಜಯನೇ, ಪಾಂಡುಪುತ್ರನೂ ಪಾರ್ಥಿವಪುತ್ರಪೌತ್ರನೂ ಆದ ಒಳ್ಳೆಯ ನಡತೆಯುಳ್ಳ ಯುಧಿಷ್ಠಿರನು ಆ ತೀರ್ಥಗಳಲ್ಲಿ ಸಹೋದರರ ಜೊತೆಯಲ್ಲಿ ಸ್ನಾನವನ್ನು ಮಾಡಿ ಪುಣ್ಯತಮವೂ ಪ್ರಶಸ್ತವೂ ಆದ ಸಮುದ್ರಗಾಮಿಯಾದ ನದಿಗೆ (ಗಂಗಾನದಿಗೆ) ಹೋದನು.

ತತ್ರಾಪಿ ಚಾಪ್ಲುತ್ಯ ಮಹಾನುಭಾವಃ
ಸಂತರ್ಪಯಾಮಾಸ ಸುರಾನ್ ಪಿತೄಂಶ್ಚ ।
ದ್ವಿಜಾತಿಮುಖ್ಯೇಷು ಧನಂ ವಿಸೃಜ್ಯ
ಗೋದಾವರೀಂ ಸಾಗರಗಾಮಗಚ್ಛತ್ ॥೩॥

ಮಹಾನುಭಾವನಾದ ಅವನು ಅಲ್ಲಿಯೂ ಸ್ನಾನವನ್ನು ಮಾಡಿ ದೇವತೆಗಳಿಗೆ ಮತ್ತು ಪಿತೃಗಳಿಗೆ ತರ್ಪಣವನ್ನು ನೀಡಿದನು. ಬ್ರಾಹ್ಮಣಶ್ರೇಷ್ಠರಿಗೆ ಧನವನ್ನು ನೀಡಿ ಅಲ್ಲಿಂದ ಸಾಗರಗಾಮಿಯಾದ ಗೋದಾವರಿಯನ್ನು ತಲುಪಿದನು.

ತತೋ ವಿಪಾಪ್ಮಾ ದ್ರಮಿಳೇ ಸ ರಾಜಾ
ಸಮುದ್ರಮಾಸಾದ್ಯ ಚ ಲೋಕಪುಣ್ಯಮ್ ।
ಅಗಸ್ತ್ಯತೀರ್ಥಂ ಚ ಪವಿತ್ರಮಾಹುಃ
ನಾರೀತೀರ್ಥಾನ್ಯಥ ವೀರೋ ದದರ್ಶ ॥೪॥

ಆ ವೀರನಾದ ರಾಜನು ಪಾಪರಹಿತನಾಗಿ ಅನಂತರ ದ್ರವಿಡದೇಶಕ್ಕೆ ಬಂದು ಸಮುದ್ರದ ಬಳಿ ಲೋಕಪಾವನವಾದ ಅಗಸ್ತ್ಯತೀರ್ಥವನ್ನು ಮತ್ತು ಸಜ್ಜನರು ಪವಿತ್ರವೆಂದು ಹೇಳುವ ನಾರೀತೀರ್ಥಗಳನ್ನು ನೋಡಿದನು.

ತತ್ರಾರ್ಜುನಸ್ಯಾಗ್ರ್ಯ ಧನುರ್ಧರಸ್ಯ
ನಿಶಮ್ಯ ತತ್ ಕರ್ಮ ಪರೈರಸಹ್ಯಮ್ ।
ಸಂಪೂಜ್ಯಮಾನಃ ಪರಮರ್ಷಿಸಂಘೈಃ
ಪರಾಂ ಮುದಂ ತತ್ರ ತದಾ ಸ ಲೇಭೇ ॥೫॥

ಅಲ್ಲಿ ಶ್ರೇಷ್ಠ ಧನುರ್ಧಾರಿಯಾದ ಅರ್ಜುನನು ಮಾಡಿದ ಇನ್ನೊಬ್ಬರಿಂದ ಮಾಡಲು ಅಸಾಧ್ಯವಾದ ಆ ಕರ್ಮವನ್ನು ಕೇಳಿ ಶ್ರೇಷ್ಠವಾದ ಋಷಿ ಸಮೂಹಗಳಿಂದ ಪೂಜಿಸಲ್ಪಟ್ಟವನಾಗಿ ಆಗ ಅಲ್ಲಿ ಬಹಳ ಸಂತೋಷವನ್ನು ಹೊಂದಿದನು.

ಸ ತೇಷು ತೀರ್ಥೇಷ್ವಭಿಷಿಕ್ತಗಾತ್ರಃ
ಕೃಷ್ಣಾಸಹಾಯಃ ಸಹಿತೋಽನುಜೈಶ್ಚ ।
ಸಂಪೂಜಯನ್ ವಿಕ್ರಮಮರ್ಜುನಸ್ಯ
ರೇಮೇ ಮಹೀಪಾಲಪತಿಃ ಪೃಥಿವ್ಯಾಮ್ ॥೬॥

ಮಹೀಪಾಲರಿಗೆ ಪತಿಯಾದ ಅವನು ಆ ತೀರ್ಥಗಳಲ್ಲಿ ದ್ರೌಪದಿ ಮತ್ತು ಸಹೋದರರ ಜೊತೆಯಲ್ಲಿ ಸ್ನಾನವನ್ನು ಮಾಡಿ ಅರ್ಜುನನ ಪರಾಕ್ರಮವನ್ನು ಸಮ್ಮಾನಿಸುತ್ತಾ ಭೂಮಿಯಲ್ಲಿ ಸಂತೋಷಪಟ್ಟನು.

ತತಃ ಸಹಸ್ರಾಣಿ ಗವಾಂ ಪ್ರದಾಯ
ತೀರ್ಥೇಷು ತೇಷ್ವಬುಧರೋತ್ತಮಸ್ಯ ।
ಹೃಷ್ಟಃ ಸಹ ಭ್ರಾತೃಭಿರರ್ಜುನಸ್ಯ
ಸಂಕೀರ್ತಯಾಮಾಸ ಗವಾಂ ಪ್ರದಾನಮ್ ॥೭॥

ಅನಂತರ ಸಮುದ್ರಜಲಪಾನ ಮಾಡಿದವರಲ್ಲಿ ಶ್ರೇಷ್ಠರಾದ ಅಗಸ್ತ್ಯ ತೀರ್ಥಗಳಲ್ಲಿ ಸಹಸ್ರ ಗೋದಾನವನ್ನು ಮಾಡಿ ತಮ್ಮಂದಿರ ಜೊತೆಯಲ್ಲಿ ಸಂತೋಷಗೊಂಡು ಅರ್ಜುನನು ಮಾಡಿದ ಗೋದಾನವನ್ನು ಸಂಕೀರ್ತನೆ ಮಾಡಿದನು.

ಸ ತಾನಿ ತೀರ್ಥಾನಿ ಚ ಸಾಗರಸ್ಯ
ಪುಣ್ಯಾನಿ ಚಾನ್ಯಾನಿ ಬಹೂನಿ ರಾಜನ್ ।
ಕ್ರಮೇಣ ಗಚ್ಛನ್ ಪರಿಪೂರ್ಣಕಾಮಃ
ಶೂರ್ಪಾಕರಂ ಪುಣ್ಯತಮಂ ದದರ್ಶ ॥೮॥

ರಾಜನೇ, ಅವನು ಆ ಸಾಗರ ಸಮೀಪದ ಅನೇಕ ಪವಿತ್ರವಾದ ತೀರ್ಥಗಳಿಗೂ ಮತ್ತು ಬೇರೆ ತೀರ್ಥಗಳಿಗೂ ಕ್ರಮವಾಗಿ ಪ್ರಯಾಣ ಮಾಡುತ್ತಾ ಪರಿಪೂರ್ಣ ಕಾಮನಾಗಿ ಬಹಳ ಪವಿತ್ರವಾದ ಶೂರ್ಪಾಕರ ಕ್ಷೇತ್ರವನ್ನು ನೋಡಿದನು.

ತತ್ರೋದಧೇಃ ಕಂಚಿದತೀತ್ಯ ದೇಶಂ
ಖ್ಯಾತಂ ಪೃಥಿವ್ಯಾಂ ವನಮಾಸಸಾದ ।
ತಪ್ತಂ ಸುರೈರ್ಯತ್ರ ತಪಃ ಪುರಸ್ತಾತ್
ಪುಣ್ಯೋಪೇತಂ ಪುಣ್ಯತಮೈರ್ನರೇಂದ್ರೈಃ ॥೯॥

ಅಲ್ಲಿ ಸಮುದ್ರ ಸಮೀಪದಿಂದ ಸ್ವಲ್ಪ ಪ್ರದೇಶವನ್ನು ದಾಟಿ ಹಿಂದೆ ದೇವತೆಗಳು ತಪಸ್ಸನ್ನು ಮಾಡಿದ್ದ, ಪವಿತ್ರತಮರಾದ ರಾಜರ ತಪಸ್ಸಿನ ಪುಣ್ಯದಿಂದ ಕೂಡಿದ, ಭೂಮಿಯಲ್ಲಿ ಪ್ರಖ್ಯಾತವಾದ ವನವನ್ನು ಸೇರಿದನು.

ಸ ತತ್ರ ತಾಮಗ್ರ್ಯಧನುರ್ಧರಸ್ಯ
ವೇದೀಂ ದದರ್ಶಾಯತಪೀನಬಾಹುಃ ।
ಆರ್ಚೀಕಪುತ್ರಸ್ಯ ತಪಸ್ವಿಸಂಘೈಃ
ಸಮಾವೃತಾಂ ಪುಣ್ಯಕೃದರ್ಚನೀಯಾಮ್ ॥೧೦॥

ದೀರ್ಘಪೀನಬಾಹುವಾದ ಅವನು ಶ್ರೇಷ್ಠಧನುರ್ಧರರಾದ ಜಮದಗ್ನಿಗಳ ಪುತ್ರರಾದ ಪರಶುರಾಮರ ತಪಸ್ವಿಸಂಘಗಳಿಂದ ಕೂಡಿದ ಮತ್ತು ಪುಣ್ಯವಂತರಿಂದ ಪೂಜಿಸಲ್ಪಡುವ ಯಜ್ಞವೇದಿಯನ್ನು ನೋಡಿದನು.

ತತೋ ವಸೂನಾಂ ವಸುಧಾಧಿಪಃ ಸ
ಮರುದ್ಗಣಾನಾಂ ಚ ತಥಾऽಶ್ವಿನೋಶ್ಚ ।
ವೈವಸ್ವತಾದಿತ್ಯಧನೇಶ್ವರಾಣಾಮ್
ಇಂದ್ರಸ್ಯ ವಿಷ್ಣೋಃ ಸವಿತುರ್ವಿಭೋಶ್ಚ ॥೧೧॥

ಭಗಸ್ಯ ಚಂದ್ರಸ್ಯ ದಿವಾಕರಸ್ಯ
ಪತೇರಪಾಂ ಸಾಧ್ಯಗಣಸ್ಯ ಚೈವ ।
ಧಾತುಃ ಪಿತೄಣಾಂ ಚ ತಥಾ ಮಹಾತ್ಮಾ
ರುದ್ರಸ್ಯ ರಾಜನ್ ಸಗಣಸ್ಯ ಚಾಪಿ ॥೧೨॥

ಸರಸ್ವತ್ಯಾಃ ಸಿದ್ಧಗಣಸ್ಯ ಚೈವ
ಪೂಷ್ಣಶ್ಚ ಯೇ ಚಾಪ್ಯಮರಾಸ್ತಥಾऽನ್ಯೇ ।

ಪುಣ್ಯಾನಿ ತೀರ್ಥಾಯತನಾನಿ ತೇಷಾಂ
ದದರ್ಶ ರಾಜಾ ಸುಮನೋಹರಾಣಿ ॥೧೩॥

ಎಲೈ ರಾಜನೇ, ಅನಂತರ ರಾಜನಾದ ಅವನು ವಸುಗಳ, ಮರುದ್ಗಣಗಳ, ಅಶ್ವಿನಿಗಳ, ಯಮನ, ಆದಿತ್ಯನ, ಕುಬೇರನ, ಇಂದ್ರನ, ವಿಷ್ಣುವಿನ, ಸವಿತೃವಿನ, ಭಗನ, ಚಂದ್ರನ, ಸೂರ್ಯನ, ವರುಣನ, ಸಾಧ್ಯಗಣದ, ಬ್ರಹ್ಮನ, ಪಿತೃಗಳ, ಪರಿವಾರ ಸಹಿತನಾದ ರುದ್ರನ, ಸರಸ್ವತಿಯ, ಸಿದ್ಧಗಣಗಳ, ಪೂಷನ ಮತ್ತು ಇನ್ನೂ ಬೇರೆ ದೇವತೆಗಳ ಬಹಳ ಮನೋಹರವಾದ ಮತ್ತು ಪವಿತ್ರವಾದ ತೀರ್ಥಗಳನ್ನೂ ಮತ್ತು ಕ್ಷೇತ್ರಗಳನ್ನೂ ನೋಡಿದನು.

ತೇಷೂಪವಾಸಾನ್ ವಿವಿಧಾನುಪೋಷ್ಯ
ದತ್ವಾ ಚ ರತ್ನಾನಿ ಮಹಾನುಭಾವಃ ।
ತೀರ್ಥೇಷು ಸರ್ವೇಷು ಪರಿಪ್ಲುತಾಂಗಃ
ಪುನಃ ಸ ಶೂರ್ಪಾಕರಮಾಜಗಾಮ ॥೧೪॥

ಮಹಾನುಭಾವನಾದ ಅವನು ಆ ಕ್ಷೇತ್ರಗಳಲ್ಲಿ ಅನೇಕ ವಿಧವಾದ ಉಪವಾಸಗಳನ್ನು ಮಾಡಿ ರತ್ನಗಳನ್ನು ದಾನಮಾಡಿ ಎಲ್ಲ ತೀರ್ಥಗಳಲ್ಲಿಯೂ ಸ್ನಾನವನ್ನು ಮಾಡಿ ಪುನಃ ಶೂರ್ಪಾಕರ ಕ್ಷೇತ್ರಕ್ಕೆ ಬಂದನು.

ಸ ತೇನ ತೀರೇಣ ಚ ಸಾಗರಸ್ಯ
ಪುನಃ ಪ್ರಯಾತಃ ಸಹ ಸೋದರೀಯೈಃ ।
ದ್ವಿಜೈಃ ಪೃಥಿವ್ಯಾಂ ಕಥಿತಂ ಮಹದ್ಭಿಃ
ತೀರ್ಥಂ ಪ್ರಭಾಸಂ ಚ ತತೋ ಜಗಾಮ ॥೧೫॥

ಅವನು ತನ್ನ ಸಹೋದರರ ಜೊತೆಯಲ್ಲಿ ಪುನಃ ಸಾಗರದ ಅಂಚಿನ ತೀರ್ಥಗಳಿಗೆ ಹೊರಟು ಭೂಮಿಯಲ್ಲಿ ಶ್ರೇಷ್ಠರಾದ ಬ್ರಾಹ್ಮಣರು ಪ್ರಶಂಸಿಸುವ ಪ್ರಭಾಸ ಕ್ಷೇತ್ರಕ್ಕೆ ಬಂದನು.

ತತ್ರಾಭಿಷಿಕ್ತಃ ಪೃಥುಲೋಹಿತಾಕ್ಷಃ
ಸಹಾನುಜೈರ್ದೇವಗಣಾನ್ ಪಿತೄಂಶ್ಚ ।

ಸಂತರ್ಪಯಾಮಾಸ ತಥೈವ ಕೃಷ್ಣಾ
ತೇ ಚಾಪಿ ವಿಪ್ರಾಃ ಸಹ ಲೋಮಶೇನ ॥೧೬॥

ಪೃಥುಲೋಹಿತಾಕ್ಷನಾದ ಅವನು ಅಲ್ಲಿ ತಮ್ಮಂದಿರ ಜೊತೆಯಲ್ಲಿ ಸ್ನಾನವನ್ನು ಮಾಡಿ ದೇವಗಣಗಳಿಗೂ ಮತ್ತು ಪಿತೃಗಳಿಗೂ ತರ್ಪಣವನ್ನು ನೀಡಿದನು. ದ್ರೌಪದಿಯೂ ಹಾಗೆಯೇ ಮಾಡಿದಳು. ಲೋಮಶರ ಜೊತೆಯಲ್ಲಿದ್ದ ಬ್ರಾಹ್ಮಣರು ಸಹ ಹಾಗೆಯೇ ಮಾಡಿದರು.

ಸ ದ್ವಾದಶಾಹಂ ಜಲವಾಯುಭಕ್ಷಃ
ಕುರ್ವನ್ ಕ್ಷಪಾಹಸ್ಸು ತಥಾऽಭಿಷೇಕಮ್ ।
ಸಮಂತತೋऽಗ್ನೀನುಪದೀಪಯಿತ್ವಾ
ತೇಪೇ ತಪೋ ಧರ್ಮಭೃತಾಂ ವರಿಷ್ಠಃ ॥೧೭॥

ಧರ್ಮಾಚರಣೆ ಮಾಡುವವರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಅಲ್ಲಿ ಹನ್ನೆರಡು ದಿವಸ ಕೇವಲ ಜಲವಾಯುಭಕ್ಷನಾಗಿ ಹಗಲು-ರಾತ್ರಿಯೂ ಸ್ನಾನವನ್ನು ಮಾಡಿ ಸುತ್ತಲೂ ಅಗ್ನಿಯನ್ನು ಪ್ರಜ್ವಲಿಸಿ ತಪಸ್ಸನ್ನು ಮಾಡಿದನು.

ಸಮಾಗತಂ ತತ್ರ ತಪಶ್ಚರಂತಂ
ಶುಶ್ರಾವ ರಾಮಶ್ಚ ಜನಾರ್ದನಶ್ಚ ।
ತೌ ಸರ್ವವೃಷ್ಣಿಪ್ರವರೌ ಸಸೈನ್ಯೌ
ಯುಧಿಷ್ಠಿರಂ ಜಗ್ಮತುರಾಜಮೀಢಮ್ ॥೧೮॥

ಅಲ್ಲಿಗೆ ಬಂದು ತಪಸ್ಸನ್ನು ಮಾಡುತ್ತಿರುವ ಅವನ ವಾರ್ತೆಯನ್ನು ಕೃಷ್ಣ-ಬಲರಾಮರು ಕೇಳಿದರು. ಮತ್ತು ಎಲ್ಲಾ ವೃಷ್ಣಿಪ್ರಧಾನರಾದ ಅವರು ಸೈನ್ಯವನ್ನು ತೆಗೆದುಕೊಂಡು ಅಜಮೀಢನಾದ ಯುಧಿಷ್ಠಿರನ ಬಳಿಗೆ ಬಂದರು.

ತೇ ವೃಷ್ಣಯಃ ಪಾಂಡುಸುತಾನ್ ಸಮೀಕ್ಷ್ಯ
ಭೂಮೌ ಶಯಾನಾನ್ ಮಲದಿಗ್ಧಗಾತ್ರಾನ್ ।
ಅನರ್ಹತೀಂ ದ್ರೌಪದೀಂ ಚಾಪಿ ದೃಷ್ಟ್ವಾ
ಸುದುಃಖಿತಾಶ್ಚುಕ್ರುಶುರಾರ್ತನಾದಾನ್ ॥೧೯॥

ಆ ವೃಷ್ಣಿಗಳು ಭೂಮಿಯಲ್ಲಿ ಮಲಗಿ ಕಶ್ಮಲಗಾತ್ರರಾದ ಪಾಂಡುಪುತ್ರರನ್ನೂ, ದುಃಖಕ್ಕೆ ಅನರ್ಹಳಾದ ದ್ರೌಪದಿಯನ್ನೂ ನೋಡಿ ಬಹಳ ದುಃಖಿತರಾಗಿ ಆರ್ತನಾದವನ್ನು ಮಾಡಿದರು.

ರಾಜಾऽಥ ರಾಮಂ ಚ ಜನಾರ್ದನಂ ಚ
ಕಾಷ್ಣಿಂ ಚ ಸಾಂಬಂ ಚ ಶಿನೇಶ್ಚ ಪೌತ್ರಮ್ ।
ಅನ್ಯಾಂಶ್ಚ ವೃಷ್ಣೀನುಪಗಮ್ಯ ಪೂಜಾಂ
ಚಕ್ರೇ ಯಥಾಧರ್ಮಮದೀನಸತ್ತ್ವಃ ॥೨೦॥

ಅದೀನವಾದ ಮನಸ್ಸುಳ್ಳ ಧರ್ಮರಾಜನು ಬಲರಾಮ, ಕೃಷ್ಣ, ಪ್ರದ್ಯುಮ್ನ, ಸಾಂಬ, ಸಾತ್ಯಕಿ ಮತ್ತು ಬೇರೆಯ ವೃಷ್ಣಿಗಳನ್ನು ಸಮೀಪಿಸಿ ಅವರಿಗೆ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದನು.

ತೇ ಚಾಪಿ ಸರ್ವೇ ಪ್ರತಿಪೂಜ್ಯ ಪಾರ್ಥಾನ್ ।
ತೈಃ ಸತ್ಕೃತಾಃ ಪಾಂಡುಸುತೈಸ್ತಥೈವ ।
ಯುಧಿಷ್ಠಿರಂ ಸಂಪರಿವಾರ್ಯ ರಾಜನ್
ಉಪಾವಿಶನ್ ದೇವಗಣಾ ಯಥೇಂದ್ರಮ್ ॥೨೧॥

ಎಲೈ ರಾಜನೇ, ಅವರೆಲ್ಲರೂ ಸಹ ಪಾಂಡವರಿಗೆ ಸತ್ಕಾರವನ್ನು ಮಾಡಿ ಹಾಗೆಯೇ ಪಾಂಡುಪುತ್ರರಿಂದ ಸತ್ಕೃತರಾಗಿ ಯುಧಿಷ್ಠಿರನನ್ನು ಸುತ್ತುವರಿದು ಇಂದ್ರನನ್ನು ಸುತ್ತುವರಿದ ದೇವಗಣಗಳಂತೆ ಕುಳಿತುಕೊಂಡರು.

ತೇಷಾಂ ಸ ಸರ್ವಂ ಚರಿತಂ ಪರೇಷಾಂ
ವನೇ ಚ ವಾಸಂ ಪರಮಪ್ರತೀತಃ ।
ಅಸಾರ್ಜ್ಜಮಿಂದ್ರಂ ಚ ಗತಂ ಚ ಪಾರ್ಥಂ
ಕೃಷ್ಣೇ ಶಶಂಸಾಮರರಾಜಪುತ್ರಮ್ ॥೨೨॥

ಪರಮಸಂತುಷ್ಟನಾದ ಧರ್ಮರಾಜನು ಅವರಿಗೆ ದುರ್ಯೋಧನಾದಿಗಳ ಎಲ್ಲಾ ನಡತೆಯನ್ನೂ, ತಮ್ಮ ವನವಾಸವನ್ನೂ, ದೇವೇಂದ್ರಪುತ್ರನಾದ ಅರ್ಜುನನು ಅಸ್ತ್ರವನ್ನು ಪಡೆಯುವ ಸಲುವಾಗಿ ಇಂದ್ರನ ಸಮೀಪಕ್ಕೆ ಹೋಗಿರುವುದನ್ನೂ ಕೃಷ್ಣನಿಗೆ ತಿಳಿಸಿದನು.

ಶ್ರುತ್ವಾ ತು ತೇ ತಸ್ಯ ವಚಃ ಪ್ರತೀತಾಃ
ತಾಂಶ್ಚಾಪಿ ದೃಷ್ಟ್ವಾ ಸುಕೃಶಾನತೀವ ।
ನೇತ್ರೋದ್ಭವಂ ಸಮ್ಮುಮುರ್ಚರ್ದಶಾರ್ಹಾ
ದುಃಖಾರ್ತಿಜಂ ವಾರಿ ಮಹಾನುಭಾವಾಃ ॥೨೩॥

ಮಹಾನುಭಾವರಾದ ದಶಾರ್ಹರು ಅವನ ಮಾತುಗಳನ್ನು ಕೇಳಿ ಎಲ್ಲವನ್ನೂ ತಿಳಿದು ಅತ್ಯಂತ ಕೃಶರಾದ ಅವರನ್ನು ನೋಡಿ ದುಃಖದಿಂದ ಕಣ್ಣೀರನ್ನು ಸುರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನಾರನೆಯ ಅಧ್ಯಾಯ

ಬಲರಾಮನಿಂದ ಕೃಷ್ಣನೆದುರಿನಲ್ಲಿ ಪಾಂಡವರನ್ನು ಕುರಿತು ಶೋಕ.

ಜನಮೇಜಯಃ

ಪ್ರಭಾಸತೀರ್ಥಂ ಸಂಪ್ರಾಪ್ಯ ವೃಷ್ಣಯಃ ಪಾಂಡವಾ ಅಪಿ ।
ಕಿಮಕುರ್ವನ್ ಕಥಾಶ್ಚಾಪಿ ಕಾಸ್ತತ್ರಾಸಂಸ್ತಪೋಧನ ॥೧॥

ತೇ ಹಿ ಸರ್ವೇ ಮಹಾತ್ಮಾನಃ ಸರ್ವಶಾಸ್ತ್ರವಿಶಾರದಾಃ ।
ವೃಷ್ಣಯಃ ಪಾಂಡವಾಶ್ಚೈವ ಸುಹೃದಶ್ಚ ಪರಸ್ಪರಮ್ ॥೨॥

ಜನಮೇಜಯ– ಎಲೈ ತಪೋಧನರೇ, ಪ್ರಭಾಸತೀರ್ಥವನ್ನು ತಲುಪಿದ ವೃಷ್ಣಿಗಳು ಮತ್ತು ಪಾಂಡವರು ಏನು ಮಾಡಿದರು? ಅಲ್ಲಿಯಾವ ಮಾತುಕಥೆಗಳು ನಡೆದವು? ಪಾಂಡವರು ಮತ್ತು ವೃಷ್ಣಿಗಳು ಪರಸ್ಪರ ಸುಹೃದರು, ಸರ್ವಶಾಸ್ತ್ರವಿಶಾರದರು ಮತ್ತು ಎಲ್ಲರೂ ಮಹಾನುಭಾವರಷ್ಟೆ?

ವೈಶಂಪಾಯನಃ

ಪ್ರಭಾಸತೀರ್ಥಂ ಸಂಪ್ರಾಪ್ಯ ಪುಣ್ಯಂ ತೀರ್ಥಂ ಮಹೋದಧೇಃ ।
ವೃಷ್ಣಯಃ ಪಾಂಡವಾನ್ ವೀರಾನ್ ಪರಿವಾರ್ಯೋಪತಸ್ಥಿರೇ ॥೩॥

ವೈಶಂಪಾಯನ– ಸಮುದ್ರದ ಪುಣ್ಯತೀರ್ಥವಾದ ಪ್ರಭಾಸತೀರ್ಥವನ್ನು ತಲುಪಿ ವೃಷ್ಣಿಗಳು ವೀರರಾದ ಪಾಂಡವರನ್ನು ಸುತ್ತುವರಿದು ಸಮೀಪದಲ್ಲಿ ಕುಳಿತರು.

ತತೋ ಗೋಕ್ಷೀರಕುಂದೇಂದುಮೃಣಾಲರಜತಪ್ರಭಃ ।
ವನಮಾಲೀ ಹಲೀ ರಾಮೋ ಬಭಾಷೇ ಪುಷ್ಕರೇಕ್ಷಣಮ್ ॥೪॥

ಅನಂತರ ಗೋಕ್ಷೀರದಂತೆ, ಕುಂದಪುಷ್ಪದಂತೆ, ಚಂದ್ರನಂತೆ, ಮೃಣಾಲದಂತೆ, ರಜತದಂತೆ ಶ್ವೇತಕಾಂತಿಯುಳ್ಳ ವನಮಾಲಿಯಾದ ಹಲಾಯುಧನಾದ ಬಲರಾಮನು ಪುಷ್ಕರಾಕ್ಷನಾದ ಕೃಷ್ಣನನ್ನು ಕುರಿತು ಮಾತನಾಡಿದನು.

ನ ಕೃಷ್ಣ ಧರ್ಮಶ್ಚರಿತೋ ಭವಾಯ
ಜಂತೋರಧರ್ಮಶ್ಚ ಪರಾಭವಾಯ ।
ಯುಧಿಷ್ಠಿರೋ ಯತ್ರ ಜಟೀ ಮಹಾತ್ಮಾ
ವನಾಶ್ರಯಃ ಕ್ಲಿಶ್ಯತಿ ಚೀರವಾಸಾಃ ॥೫॥

ಕೃಷ್ಣನೇ, ಮಹಾತ್ಮನಾದ ಯುಧಿಷ್ಠಿರನು ಜಟೆಗಳನ್ನು ಧರಿಸಿ ನಾರುಮಡಿಯನ್ನುಟ್ಟು ವನವಾಸದಲ್ಲಿ ಕ್ಲೇಶವನ್ನು ಪಡುವಾಗ ಧರ್ಮಾಚರಣೆಯು ಸಮೃದ್ಧಿಯನ್ನೂ, ಅಧರ್ಮಾಚರಣೆಯು ಜೀವರಿಗೆ ಪರಾಭವವನ್ನೂ ಉಂಟುಮಾಡುತ್ತದೆ ಎಂದು ತಿಳಿಯುವುದಿಲ್ಲ.

ದುರ್ಯೋಧನಶ್ಚಾಪಿ ಮಹೀಂ ಪ್ರಶಾಸ್ತಿ
ನ ಚಾಸ್ಯ ಭೂಮಿರ್ವಿವರಂ ದದಾತಿ ।
ಧರ್ಮಾದಧರ್ಮಶ್ಚರಿತೋ ಗರೀಯಾನ್
ಇತೀವ ಮನ್ಯೇತ ನರೋಽಲ್ಪಬುದ್ಧಿಃ ॥೬॥

ದುರ್ಯೋಧನನಾದರೂ ಭೂಮಿಯನ್ನು ಆಳುತ್ತಿದ್ದಾನೆ. ಭೂಮಿಯು ಬಾಯಿಬಿಟ್ಟು ಅವನನ್ನು ನುಂಗುವುದಿಲ್ಲ. ಅಲ್ಪಬುದ್ಧಿಯುಳ್ಳ ನರನು ಧರ್ಮಾಚರಣೆಗಿಂತ ಅಧರ್ಮವನ್ನು ಆಚರಿಸುವುದೇ ಶ್ರೇಷ್ಠವಾದುದು ಎಂದು ತಿಳಿಯಬಹುದು.

ದುರ್ಯೋಧನೇ ಚಾಪಿ ವಿವರ್ಧಮಾನೇ
ಯುಧಿಷ್ಠಿರೇ ಚಾಸುಖ ಆತ್ತಸಾರೇ ।
ಹೃತಸ್ವರಾಜ್ಯಾಯತನಾರ್ಥಭಾರ್ಯೇ
ದುರ್ಯೋಧನೇನಾಲ್ಪಧನೇ ಚ ಪಾರ್ಥೇ ।
ಕಿಂ ತ್ವದ್ಯ ಕರ್ತವ್ಯಮಿಹ ಪ್ರಜಾಭಿಃ
ಶಂಕಾ ಮಿಥಃ ಸಂಜನಿತಾ ನರಾಣಾಮ್ ॥೭॥

ಒಂದುಕಡೆ ದುರ್ಯೋಧನನು ಅಭಿವೃದ್ಧಿಯನ್ನು ಹೊಂದುತ್ತಿರಲು, ಇನ್ನೊಂದು ಕಡೆ ದುರ್ಯೋಧನನಿಂದ ತನ್ನ ಸರ್ವಸ್ವವನ್ನೂ ರಾಜ್ಯವನ್ನೂ, ಸ್ಥಾನವನ್ನೂ, ಸಂಪತ್ತನ್ನೂ ಮತ್ತು ಭಾರ್ಯೆಯನ್ನು ಕಳೆದುಕೊಂಡ ಅಲ್ಪಧನನಾದ ಕುಂತೀಪುತ್ರನಾದ ಯುಧಿಷ್ಠಿರನು ದುಃಖದಿಂದ ಕೂಡಿರಲು, ಪ್ರಜೆಗಳು ಇಲ್ಲಿ ಈಗ ಏನು ಮಾಡಬೇಕು? ಮನುಷ್ಯರಿಗೆ ಧರ್ಮದ ವಿಷಯದಲ್ಲಿ ಶಂಕೆಯುಂಟಾಗುವುದಷ್ಟೆ?

ಅಯಂ ಹಿ ಧರ್ಮಪ್ರಭವೋ ನರೇಂದ್ರೋ
ಧರ್ಮೇ ರತಃ ಸತ್ಯಧೃತಿಃ ಪ್ರದಾತಾ ।
ಚಲೇದ್ಧಿ ರಾಜ್ಯಾದಿತಿ ಸಂಶಯೋ ಮೇ
ಧರ್ಮಾದಪೇತಶ್ಚ ಕಥಂ ವಿವರ್ಧೇತ್ ॥೮॥

ಈ ನರೇಂದ್ರನಾದ ಯುಧಿಷ್ಠಿರನು ಯಮಧರ್ಮನಿಂದ ಜನಿಸಿದವನು (ಧರ್ಮದಿಂದಲೇ ಜನಿಸಿದವನು). ಧರ್ಮದಲ್ಲಿಯೇ ರತನಾದವನು; ಸತ್ಯಧೃತಿಯಾದವನು; ಬಹಳ ದಾನವನ್ನು ಮಾಡುವವನು. ಅವನು ರಾಜ್ಯವನ್ನು ಕಳೆದುಕೊಳ್ಳಬಹುದು. ಆದರೆ ಧರ್ಮವನ್ನು ಪರಿತ್ಯಜಿಸಿ ಅವನು ಅಭಿವೃದ್ಧಿಯನ್ನು ಹೊಂದಲಾರ ಎಂಬ ಶಂಕೆಯು ನನಗಿದೆ.

ಕಥಂ ಚ ಭೀಷ್ಮಶ್ಚ ಕೃಪಶ್ಚ ವಿಪ್ರೋ
ದ್ರೋಣಶ್ಚ ರಾಜಾ ಚ ಕುಲಸ್ಯ ವೃದ್ಧಃ ।
ಪ್ರವ್ರಾಜ್ಯ ಪಾರ್ಥಾನ್ ಸುಖಿಮಾಪ್ನುವಂತಿ
ಧಿಕ್ ಪಾಪಬುದ್ಧೀನ್ ಭರತಪ್ರಧಾನಾನ್ ॥೯॥

ಭೀಷ್ಮರು, ಕೃಪರು, ಬ್ರಾಹ್ಮಣರಾದ ದ್ರೋಣರು, ಕುಲವೃದ್ಧನಾದ ಧೃತರಾಷ್ಟ್ರ ಇವರೆಲ್ಲರೂ ಭರತಪ್ರಧಾನರಾದ ಪಾಂಡವರನ್ನು ಕಾಡಿಗೆ ಕಳುಹಿಸಿ ಹೇಗೆ ಸುಖವನ್ನು ಹೊಂದುತ್ತಾರೆ? ಪಾಪಬುದ್ಧಿಯುಳ್ಳ ಅವರಿಗೆ ಧಿಕ್ಕಾರವಿರಲಿ.

ಕಿಂ ನಾಮ ವಕ್ಷ್ಯತ್ಯವನಿಪ್ರಧಾನಾನ್
ಪಿತ್ಸನ್ ಸಮಾಗಮ್ಯ ಪರತ್ರ ಪಾಪಃ ।
ಪುತ್ರೇಷು ಸಮ್ಯಕ್ಚರಿತಂ ಮಯೇತಿ
ಪುತ್ರಾನಪಾಪಾನವರೋಪ್ಯ ರಾಜ್ಯಾತ್ ॥೧೦॥

ನಿರಪರಾಧಿಗಳಾದ ಪುತ್ರರನ್ನು ರಾಜ್ಯಭ್ರಷ್ಟರನ್ನಾಗಿ ಮಾಡಿ ಪಾಪವನ್ನು ಆಚರಿಸಿದ ಧೃತರಾಷ್ಟ್ರನು ಪರಲೋಕದಲ್ಲಿ ಪಿತೃಗಳನ್ನು ಸೇರಿ ರಾಜರಾದ ಅವರನ್ನು ಕುರಿತು ನಾನು ಮಕ್ಕಳ ವಿಷಯದಲ್ಲಿ ಸರಿಯಾಗಿ ನಡೆದುಕೊಂಡೆ ಎಂದು ಹೇಗೆ ಹೇಳುವನು?

ನಾಸೌ ಧಿಯಾ ಸಂಪ್ರತಿ ಪಶ್ಯತಿ ಸ್ಮ
ಕಿಂ ನಾಮ ಕೃತ್ವಾಽಹಮಚಕ್ಷುರೇವಮ್ ।
ಜಾತಃ ಪೃಥಿವ್ಯಾಮಿಹ ಪಾರ್ಥಿವೇಷು
ಪ್ರವ್ರಾಜ್ಯ ಕೌಂತೇಯಮಥಾಧಿರಾಜ್ಯಾತ್ ॥೧೧॥

ಕುಂತಿಯ ಪುತ್ರರನ್ನು ಶ್ರೇಷ್ಠವಾದ ರಾಜ್ಯದಿಂದ ಭ್ರಷ್ಟರನ್ನಾಗಿ ಮಾಡಿ ಕಾಡಿಗೆ ಕಳುಹಿಸಿ ಈ ಧೃತರಾಷ್ಟ್ರನು ನಾನು ರಾಜರ ಮಧ್ಯದಲ್ಲಿ ಭೂಮಿಯ ಮೇಲೆ ಏಕೆ ಅಂಧನಾಗಿ ಜನಿಸಿದೆ ಎಂದು ಸರಿಯಾಗಿ ಚಿಂತಿಸುವುದಿಲ್ಲ.

ನೂನಂ ಸಮೃದ್ಧಾನ್ ಪಿತೃಲೋಕಭೂಮೌ
ಚಾಮೀಕರಾಭಾನ್ ಕ್ಷಿತಿಜಾನ್ ಪ್ರಫುಲ್ಲಾನ್ ।
ವಿಚಿತ್ರವೀರ್ಯಸ್ಯ ಸುತಃ ಸಪುತ್ರಃ
ಸಂಪಶ್ಯತೀದಂ ಹಿ ಕೃತಂ ನೃಶಂಸಮ್ ॥೧೨॥

ಇಂತಹ ಕ್ರೂರಕರ್ಮವನ್ನು ಮಾಡಿದ ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರನು ಪರಲೋಕದಲ್ಲಿ ಸುವರ್ಣವರ್ಣವನ್ನು ಹೊಂದಿದ ಸಂತೋಷದಲ್ಲಿರುವ ರಾಜರನ್ನು ಪುತ್ರಸಹಿತನಾಗಿ ನೋಡುತ್ತಾನೆ! (ನೋಡುವುದಿಲ್ಲ ಎಂದು ಅಭಿಪ್ರಾಯ)

ವ್ಯೂಢೋತ್ತರಾಂಸ್ತಾನ್ ಪೃಥುಲೋಹಿತಾಕ್ಷಾನ್
ಇಮಾನ್ ಸ್ಮ ಪೃಚ್ಚನ್ ನ ಶಕ್ನೋತಿ ನೂನಮ್ ।
ಪ್ರಸ್ಥಾಪಯಿತ್ವಾ ವನಂ ಸಶಂಕೋ
ಯುಧಿಷ್ಠಿರಂ ಸಾನುಜಮಾತ್ತಶಸ್ತ್ರಮ್ ॥೧೩॥

ಸಹೋದರರಿಂದ ಸಹಿತನಾದ ಯುಧಿಷ್ಠಿರನನ್ನು ಶಸ್ತ್ರಸಹಿತನಾಗಿ ಆಶಂಕೆಯಿಂದ ವನಕ್ಕೆ ಕಳುಹಿಸಿ ವಿಶಾಲವಕ್ಷಸ್ಸುಳ್ಳ ಪೃಥುಲೋಹಿತಾಕ್ಷರಾದ ಇವರನ್ನು ವಿಚಾರಿಸಿದರೂ ಅಲ್ಲಿಯಾರಿಂದಲೂ ಇವರ ವಾರ್ತೆಯನ್ನು ಕೇಳುವುದಿಲ್ಲ.

ಯೋಽಯಂ ಪರೇಷಾಂ ಪೃತನಾಂ ಸಮೃದ್ಧಾಂ
ನಿರಾಯುಧೋ ದೀರ್ಘಭುಜೋ ನಿಹನ್ಯಾತ್ ।
ಶ್ರುತ್ವೈವ ಶಬ್ದಂ ಚ ವೃಕೋದರಸ್ಯ
ಮುಂಚಂತಿ ಸೈನ್ಯಾನಿ ಶಕೃತ್ ಸಮೂತ್ರಮ್ ॥೧೪॥

ಸ ಕ್ಷುತ್ಪಿಪಾಸಾಧ್ವಕೃಶಸ್ತರಸ್ವೀ
ಸಮೇತ್ಯ ನಾನಾಯುಧಬಾಣಪಾಣಿಃ ।
ವನೇ ಸ್ಮರನ್ ವಾಸಮಿಮಂ ಸುಘೋರಂ
ಶೇಷಂ ನ ಕುರ್ಯಾದಿತಿ ನಿಶ್ಚಿತಂ ಮೇ ॥೧೫॥

ಯಾವ ಈ ಭೀಮಸೇನನು ಆಯುಧವನ್ನೇ ಹಿಡಿಯದೇ ತನ್ನ ಭುಜಬಲದಿಂದಲೇ ಶತ್ರುಗಳ ಸಮೃದ್ಧವಾದ ಸೈನ್ಯವನ್ನು ಒಬ್ಬನೇ ಕೊಲ್ಲಬಲ್ಲನೋ, ಯಾವ ಈ ವೃಕೋದರನ ಸಿಂಹನಾದವನ್ನು ಕೇಳಿಯೇ ಸೈನ್ಯಗಳು ಮಲಮೂತ್ರಗಳನ್ನು ವಿಸರ್ಜಿಸುತ್ತವೆಯೋ, ಅಂತಹ ಇವನು ಹಸಿವು-ನೀರಡಿಕೆ ಮತ್ತು ಮಾರ್ಗಾಯಾಸಗಳಿಂದ ಕೃಶನಾಗಿ ಯುದ್ಧವು ಪ್ರಾಪ್ತವಾದಾಗ ನಾನಾಯುಧಗಳನ್ನೂ, ಬಾಣಗಳನ್ನೂ ಕೈಯಲ್ಲಿ ಹಿಡಿದವನಾಗಿ ವೇಗದಿಂದ ಶತ್ರುಗಳನ್ನು ಸಮೀಪಿಸಿ ಈ ಸುಘೋರವಾದ ವನವಾಸವನ್ನು ಸ್ಮರಿಸುತ್ತಾ ಶತ್ರುಸೈನ್ಯದಲ್ಲಿ ಯಾರನ್ನೂ ಉಳಿಸುವುದಿಲ್ಲವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ನ ಹ್ಯಸ್ಯ ವೀರ್ಯೇ ಚ ಬಲೇ ಚ ಕಶ್ಚಿತ್
ಸಮಃ ಪೃಥಿವ್ಯಾಂ ಭವಿತಾ ನರೇಷು ।
ಸ ಶೀತವಾತಾತಪಕರ್ಶಿತಾಂಗೋ
ನ ಶೇಷಮಾಜಾವಸುಹೃತ್ಸು ಕುರ್ಯಾತ್ ॥೧೬॥

ಇವನ ಪರಾಕ್ರಮಕ್ಕೂ ಮತ್ತು ಬಲಕ್ಕೂ ಸಮನಾದವನು ಭೂಮಿಯಲ್ಲಿ ಯಾವನೂ ಇಲ್ಲ. ಅಂತಹ ಇವನು ಚಳಿ, ಮಳೆ, ಬಿಸಿಲುಗಳಿಂದ ಕೃಶತ್ವವನ್ನು ಉಳ್ಳವನಾಗಿ ಯುದ್ಧದಲ್ಲಿ ಶತ್ರುಗಳಲ್ಲಿ ಯಾರನ್ನೂ ಉಳಿಸುವುದಿಲ್ಲ.

ಪ್ರಾಚ್ಯಾಂ ನೃಪಾಸ್ತ್ವೇಕರಥೇನ ಜಿತ್ವಾ
ವೃಕೋದರಃ ಸಾನುಚರಾನ್ ರಣೇಷು ।
ಸ್ವಸ್ಯಾಗಮದ್ ಯೋಽತಿರಥಸ್ತರಸ್ವೀ
ಸೋಽಯಂ ವನೇ ಕ್ಲಿಶ್ಯತಿ ಚೀರವಾಸಾಃ ॥೧೭॥

ಯಾವ ಅತಿರಥನೂ, ವೇಗಶಾಲಿಯೂ ಆದ ವೃಕೋದರನು ಏಕರಥನಾಗಿ ಹೋಗಿ ಪೂರ್ವದಿಕ್ಕಿನ ರಾಜರುಗಳನ್ನೂ, ಅವರ ಅನುಚರರನ್ನೂ ಯುದ್ಧಗಳಲ್ಲಿ ಜಯಿಸಿ, ಶರೀರದಲ್ಲಿ ಒಂದು ವ್ರಣವೂ ಇಲ್ಲದೇ ಹಿಂದಿರುಗಿದನೋ ಅಂತಹ ಇವನು ನಾರುಮಡಿಯನ್ನುಟ್ಟು ಕಾಡಿನಲ್ಲಿ ಕ್ಲೇಶಪಡುತ್ತಿದ್ದಾನೆ.

ಯೋ ದಂತಕೂಪೇಷ್ವಜಯತ್ ಸಮೇತಾನ್
ಸಮಾಗತಾನ್ ದಾಕ್ಷಿಣಾತ್ಯಾನ್ ಮಹೀಪಾನ್ ।
ತಂ ಪಶ್ಯತೈನಂ ಸಹದೇವಮದ್ಯ
ತರಸ್ವಿನಂ ತಾಪಸವೇಷಧಾರಿಣಮ್ ॥೧೮॥

ಯಾವ ಸಹದೇವನು ದಕ್ಷಿಣದೇಶದಲ್ಲಿ ವರಾಹದಂಷ್ಟ್ರಗಳಿಂದ ಕೂಪವುಂಟಾದ ಸ್ಥಳದಲ್ಲಿ ಯುದ್ಧಕ್ಕೆ ಒಟ್ಟಿಗೆ ಬಂದ ಎಲ್ಲ ದಕ್ಷಿಣದೇಶದ ರಾಜರುಗಳನ್ನು ಗೆದ್ದನೋ ಅಂತಹ ವೇಗಶಾಲಿಯಾದ ಈ ಸಹದೇವನು ಮುನಿವೇಷವನ್ನು ಧರಿಸಿರುವುದನ್ನು ನೋಡಿ;

ಯಃ ಪಾರ್ಥಿವಾನೇಕರಥೇನ ವೀರೋ
ದಿಶಂ ಪ್ರತೀಚೀಂ ಪ್ರತಿ ಯುದ್ಧಶೌಂಡಃ ।
ಜಗ್ಯೇ ರಣೇ ತಂ ನಕುಲಂ ವನೇಽಸ್ಮಿನ್
ಸಂಪಶ್ಯತೈನಂ ಮಲದಿಗ್ಧಗಾತ್ರಮ್ ॥೧೯॥

ಯಾವ ಯುದ್ಧನಿಪುಣನಾದ ವೀರನಾದ ನಕುಲನು ಪಶ್ಚಿಮದಿಕ್ಕಿನಲ್ಲಿ ಒಂದೇ ರಥದಿಂದ ಕೂಡಿದವನಾಗಿ ಅನೇಕ ರಾಜರನ್ನು ಯುದ್ಧದಲ್ಲಿ ಗೆದ್ದನೋ ಅಂತಹ ನಕುಲನು ಕಾಡಿನಲ್ಲಿ ಕಶ್ಮಲದಿಂದ ಕೂಡಿದ ಶರೀರವುಳ್ಳವನಾಗಿರುವುದನ್ನು ನೋಡಿ;

ಸತ್ರೇ ಸಮೃದ್ಧೇಽತಿರಥಸ್ಯ ರಾಜ್ಞೋ
ವೇದೀತಳಾದುತ್ಥಿತಾ ಸುತಾ ಯಾ ।
ಸೇಯಂ ವನೇ ವಾಸಮಿಮಂ ಸುದುಃಖಂ
ಕಥಂ ಸಹತ್ಯದ್ಯ ಸತೀ ಸುಖಾರ್ಹಾ ॥೨೦॥

ಯಾವ ದ್ರೌಪದಿಯು ಅತಿರಥನಾದ ದ್ರುಪದನ ಸಮೃದ್ಧವಾದ ಯಾಗದಲ್ಲಿ ವೇದಿ ಮಧ್ಯದಿಂದ ಮೇಲೆದ್ದು ಬಂದಳೋ ಅಂತಹ ಪತಿವ್ರತೆಯಾದ, ಸುಖಾರ್ಹಳಾದ ಇವಳು ಈ ದಿನ ಈ ವನವಾಸದ ದುಃಖವನ್ನು ಹೇಗೆ ಸಹಿಸುತ್ತಾಳೆ?

ತ್ರಿವರ್ಗಮುಖ್ಯಸ್ಯ ಸಮೀರಣಸ್ಯ
ದೇವೇಶ್ವರಸ್ಯಾಪಿ ತಥಾಽಶ್ವಿನೋಶ್ಚ ।
ತೇಷಾಂ ಸುರಾಣಾಂ ತನಯಾಃ ಕಥಂ ನು
ವನೇ ಚರಂತ್ಯಲ್ಪಸುಖಾಃ ಸುಖಾರ್ಹಾಃ ॥೨೧॥

ತ್ರಿವರ್ಗಪ್ರಧಾನನಾದ ಧರ್ಮನ, ವಾಯುವಿನ, ದೇವೇಶ್ವರನಾದ ಇಂದ್ರನ ಹಾಗೆಯೇ ಅಶ್ವಿನೀದೇವತೆಗಳ ಕುಮಾರರಾದ ಸುಖೋಚಿತರಾದ ಈ ಪಾಂಡವರು ಈ ಕಾಡಿನಲ್ಲಿ ಹೇಗೆ ಅಲ್ಪಸುಖದಿಂದ ಜೀವಿಸುತ್ತಿದ್ದಾರೆ?

ಜಿತೇ ಹಿ ಧರ್ಮಸ್ಯ ಸುತೇ ಸಭಾರ್ಯೇ
ಸಭ್ರಾತೃಕೇ ಸಾನುಚರೇ ನಿರಸ್ತೇ ।
ದುರ್ಯೋಧನೇ ಚಾಪಿ ವಿವರ್ಧಮಾನೇ
ಕಥಂ ನ ಸೀದತ್ಯವನಿಃ ಸಶೈಲಾ ॥೨೨॥

ಯಮಧರ್ಮನ ಮಗನಾದ ಯುಧಿಷ್ಠಿರನು ತಮ್ಮಂದಿರ, ಪತ್ನಿ ಮತ್ತು ಅನುಚರರ ಜೊತೆಯಲ್ಲಿ ಪರಾಜಿತನಾಗಿ ವನವಾಸವನ್ನು ಮಾಡುತ್ತಿರಲು ದುರ್ಯೋಧನನಾದರೂ ಅಭ್ಯವೃದ್ಧಿಯನ್ನು ಹೊಂದುತ್ತಿರಲು ಈ ಭೂಮಿಯು ಪರ್ವತಗಳ ಜೊತೆಯಲ್ಲಿ ಏಕೆ ಮುಳುಗಿಹೋಗುವುದಿಲ್ಲ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಞ್ಚದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಾಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನೇಳನೆಯ ಅಧ್ಯಾಯ

ಸಾತ್ಯಕಿಯ ವೀರ ವಚನಗಳು. ಯುಧಿಷ್ಠಿರನಿಂದ ಅವನ ಸಮಾಧಾನ.
ವೃಷ್ಣಿಗಳನ್ನು ಪೂಜಿಸಿ ಪಾಂಡವರಿಂದ ಬೀಳ್ಕೊಡುಗೆ.

ಸಾತ್ಯಕಿಃ

ನ ರಾಮ ಕಾಲಃ ಪರಿದೇವನಸ್ಯ
ಯದುತ್ತರಂ ತ್ವತ್ರ ತದೇವ ಸರ್ವೇ ।
ಸಮೂಚಿರಾಮೋ ಹ್ಯನವೀತಕಾಲಂ
ಯುಧಿಷ್ಠಿರೋ ಯದ್ಯಪಿ ನಾಹ ಕಿಂಚಿತ್ ॥೧॥

ಸಾತ್ಯಕಿ– ಬಲರಾಮನೇ, ಇದು ವಿಲಾಪವನ್ನು ಮಾಡುವ ಕಾಲವಲ್ಲ. ಈಗ ಏನು ಉತ್ತರವನ್ನು ನೀಡಬೇಕೋ ಅದನ್ನೇ ನಾವೆಲ್ಲರೂ ಮಾಡೋಣ. ಯದ್ಯಪಿ ಯುಧಿಷ್ಠಿರನು ಏನನ್ನೂ ಹೇಳಲಿಲ್ಲ. ಆದರೂ ಕಾಲವು ಮೀರಿಹೋಗುವುದಕ್ಕಿಂತ ಮುಂಚೆಯೇ ನಮ್ಮ ಕರ್ತವ್ಯವನ್ನು ಮಾಡೋಣ.

ತೇ ನಾಥವಂತೋಽದ್ಯ ಭವಂತಿ ಕಾರೇ
ಯೇ ನಾತ್ಮನಾ ಕರ್ಮ ಸಮಾರಭಂತೇ ।
ತೇಷಾಂ ತು ಕಾರ್ಯೇಷು ಭವಂತಿ ನಾಥಾಃ
ಶೈಬ್ಯಾದಯೋ ರಾಮ ಯಥಾ ಯಯಾತೇಃ ॥೨॥

ಯಾರು ತಾವೇ ತಮ್ಮ ಕಾರ್ಯವನ್ನು ಆರಂಭಮಾಡುವುದಿಲ್ಲವೋ ಅವರು ಯೋಗ್ಯವಾದ ಇಂತಹ ಕಾಲದಲ್ಲಿ ಅನ್ಯನಾಥರನ್ನು ಉಳ್ಳವರಾಗುತ್ತಾರೆ. ಬಲರಾಮನೇ, ಕೈಬ್ಯಾದಿಗಳು ಯಯಾತಿಯ ಕಾರ್ಯವನ್ನು ಸಾಧಿಸಿದಂತೆ ಅವರ ಕಾರ್ಯವನ್ನು ಅವರ ನಾಥರು ಸಾಧಿಸುತ್ತಾರೆ.

ತೇಷಾಂ ತಥಾ ರಾಮ ಸಮಾಚರಂತಃ
ಕಾರ್ಯಾಣಿ ನಾಥಾಃ ಸ್ವಮತೇನ ಲೋಕೇ ।
ತೇ ನಾಥವಂತಃ ಪುರುಷಪ್ರವೀರಾ
ನಾನಾಥವತ್ ಕೃಚ್ಛ್ರಮವಾಪ್ನುವಂತಿ ॥೩॥

ಎಲೈ ರಾಮನೇ, ಯಾರು ಅತ್ರಿತರ ಕಾರ್ಯಗಳನ್ನು ನಾಥರಾಗಿ ತಮ್ಮ ಬುದ್ಧಿಯಿಂದಲೇ ಯೋಚಿಸಿ ಆರಂಭಮಾಡುತ್ತಾರೆಯೋ ಅಂತಹ ನಾಥವಂತರಾದ ಪುರುಷಶ್ರೇಷ್ಠರು ಅನಾಥರಂತೆ ಕಷ್ಟವನ್ನು ಹೊಂದುವುದಿಲ್ಲ.

ಕಸ್ಮಾದಯಂ ರಾಮಜನಾರ್ದನೌ ಚ
ಪ್ರದ್ಯುಮ್ನಸಾಂಬೌ ಚ ಮಯಾ ಸಮೇತೌ ।
ವಸಂತ್ಯರಣ್ಯೇ ಸಹ ಸೋದರೀಯೈಃ
ತ್ಯಕ್ತೋಕ್ಷನಾಥಾನಭಿಗಮ್ಯ ನಾಥಾನ್ ॥೪॥

ತ್ಯಕ್ತೋಕ್ಷನಾಥರಾದ ರಾಮಕೃಷ್ಣರನ್ನು, ನನ್ನಿಂದ ಸಹಿತರಾದ ಪ್ರದ್ಯುಮ್ನ-ಸಾಂಬರನ್ನು ನಾಥರನ್ನಾಗಿ ಪಡೆದ ಈ ಧರ್ಮರಾಜನು ತನ್ನ ತಮ್ಮಂದಿರ ಜೊತೆಯಲ್ಲಿ ಏಕೆ ಅರಣ್ಯದಲ್ಲಿ ವಾಸಮಾಡುತ್ತಿದ್ದಾನೆ?

ನಿರ್ಯಾತು ಸಾ ತದ್ಧ ದಶಾರ್ಹಸೇನಾ
ಪ್ರಭೂತನಾನಾಯುಧಚಿತ್ರವರ್ಮಾ ।
ಯಮಕ್ಷಯಂ ಗಚ್ಛತು ಧಾರ್ತರಾಷ್ಟ್ರಃ
ಸಬಾಂಧವೋ ವೃಷ್ಣಿಬಲಾಭಿಭೂತಃ ॥೫॥

ಈ ದಿನವೇ ದಶಾರ್ಹಸೈನ್ಯವು ನಾನಾಯುಧಗಳನ್ನೂ ವಿಚಿತ್ರಕವಚಗಳನ್ನೂ ಧರಿಸಿ ಯುದ್ಧಕ್ಕೆ ಹೊರಡಲಿ. ವೃಷ್ಣಿಗಳ ಬಲದಿಂದ ಅಭಿಭೂತನಾದ ದುರ್ಯೋಧನನು ತನ್ನ ಬಾಂಧವರಿಂದೊಡಗೂಡಿ ಯಮಲೋಕಕ್ಕೆ ಹೋಗಲಿ.

ತ್ವಂ ಹ್ಯೇವ ಕೋಪಾತ್ ಪೃಥಿವೀಮಪೀಮಾಂ
ಸಂವೇಷ್ಟಯೇಸ್ತಿಷ್ಠತು ಶಾರ್ಙ್ಗಧನ್ವಾ ।
ಸ ಧಾರ್ತರಾಷ್ಟ್ರಂ ಜಹಿ ಸಾನುಬಂಧಂ
ವೃತ್ರಂ ಯಥಾ ದೇವಪತಿರ್ನರೇಂದ್ರ ॥೬॥

ಎಲೈ ಬಲರಾಮನೇ, ನೀನೇ ನಿನ್ನ ಸಿಟ್ಟಿನಿಂದ ಸಮಗ್ರವಾದ ಈ ಭೂಮಿಯನ್ನು ಚಾಪೆಯನ್ನು ಸುತ್ತಲು ಸಮರ್ಥನಾಗಿದ್ದೀಯೆ. ಕೃಷ್ಣನ ಮಾತು ಹಾಗಿರಲಿ. ಅಂತಹ ನೀನು ದೇವೇಂದ್ರನು ವೃತ್ರಾಸುರನನ್ನು ಕೊಂದಂತೆ, ದುರ್ಯೋಧನನನ್ನು ಅವನ ಅನುಚರರ ಸಹಿತವಾಗಿ ಸಂಹಾರ ಮಾಡು.

ಭ್ರಾತಾ ಚ ಮೇ ಯಃ ಸ ಸಖಾ ಗುರುಶ್ಚ
ಜನಾರ್ದನಸ್ಯಾತ್ಮಸಮಶ್ಚ ಪಾರ್ಥಃ ।
ತದರ್ಥಮೇಕೋ ಹಿ ಯ ಉದ್ಯಮಂ ವೈ
ಕರೋತಿ ಕರ್ಣೋ೨ಸ್ತ್ರಮವಾರಣೀಯಮ್ ॥೭॥

ತಸ್ಯಾಸ್ತ್ರವರ್ಷಾಣ್ಯಹಮುತ್ತಮಾಸ್ತ್ರೈಃ
ನಿಹತ್ಯ ಸರ್ವಾಣಿ ರಣೇ೨ಭಭೂಯ ।
ಕಾಯಾಚ್ಛಿರಃ ಸರ್ಪವಿಷಾಗ್ನಿಕಲ್ಪೈಃ
ಶರೋತ್ತಮೈರುನ್ಮಥಿತಾಸ್ಮಿ ರಾಮ ॥೮॥

ಅರ್ಜುನನು ನನ್ನ ಸಹೋದರ, ನನ್ನ ಸ್ನೇಹಿತ, ಗುರು ಮತ್ತು ಜನಾರ್ದನನಿಗೆ ಪ್ರಾಣಸಮಾನನಾದವನು. ಅವನ ಸಲುವಾಗಿ ಅವಾರಣೀಯವಾದ ಅಸ್ತ್ರೋದ್ಯಮವನ್ನು ಮಾಡುತ್ತಿರುವವನು ಕರ್ಣನೊಬ್ಬನೇ. ಎಲೈ ರಾಮನೇ, ನಾನಾದರೂ ನನ್ನ ಉತ್ತಮಾಸ್ತ್ರಗಳಿಂದ ಕರ್ಣನ ಅಸ್ತ್ರದ ಮಳೆಯನ್ನು ನಿವಾರಿಸಿ ಯುದ್ಧದಲ್ಲಿ ಅವನನ್ನು ಮೆಟ್ಟಿ ಅವನನ್ನು ಸಂಹರಿಸಿ ಸರ್ಪವಿಷಕ್ಕೂ, ಅಗ್ನಿಗೂ ಸಮಾನವಾದ ನನ್ನ ಶ್ರೇಷ್ಠವಾದ ಬಾಣಗಳಿಂದ ಅವನ ದೇಹದಿಂದ ಶಿರಸ್ಸನ್ನು ಕತ್ತರಿಸುವವನಾಗುವೆನು.

ಖಡ್ಗೇನ ಚಾಹಂ ನಿಶಿತೇನ ಸಂಖೇ
ಕಾಯಾಚ್ಛಿರಸ್ತಸ್ಯ ಬಲಾತ್ ಪ್ರಮಥ್ಯ ।
ತತೋಽಸ್ಯ ಸರ್ವಾನನುಗಾನ್ ಹನಿಷ್ಯೇ
ದುರ್ಯೋಧನಂ ಚಾಪಿ ಕುರೂಂಶ್ಚ ಸರ್ವಾನ್ ॥೯॥

ನಾನು ನನ್ನ ಹರಿತವಾದ ಖಡ್ಗದಿಂದ ಯುದ್ಧದಲ್ಲಿ ಅವನನ್ನು ಪರಾಭವಗೊಳಿಸಿ ಅವನ ದೇಹದಿಂದ ಶಿರಸ್ಸನ್ನು ಕತ್ತರಿಸಿ ಅನಂತರ ಅವನ ಅನುಚರರನ್ನೂ, ದುರ್ಯೋಧನನನ್ನೂ ಮತ್ತು ಎಲ್ಲಾ ಕುರುಗಳನ್ನೂ ಸಂಹರಿಸುವೆನು.

ಆತ್ತಾಯುಧಂ ಮಾ ಯುಧಿ ರೌಹಿಣೇಯ
ಪಶ್ಯಂತು ಸರ್ವೇ ಯುಧಿ ಜಾತಹರ್ಷಾಃ ।
ನಿಘ್ನಂತಮೇಕಂ ಕುರುಯೋಧಮುಖ್ಯಾನ್
ಅಗ್ನಿಂ ಮಹಾಕಕ್ಷಮಿವಾನಿಲೇನ ॥೧೦॥

ಎಲೈ ಬಲರಾಮನೇ, ಕೈಯಲ್ಲಿ ಆಯುಧವನ್ನು ಹಿಡಿದ ನನ್ನನ್ನು ಯುದ್ಧದಲ್ಲಿ ಸಂತೋಷದಿಂದ ಎಲ್ಲರೂ ನೋಡಲಿ. ವಾಯುವಿನ ಸಹಾಯದಿಂದ ದೊಡ್ಡ ಹುಲ್ಲುಗಾವಲನ್ನು ಸುಡುವ ಅಗ್ನಿಯಂತೆ ಇರುವ, ಕುರುಸೈನ್ಯದಲ್ಲಿ ಪ್ರಧಾನರಾದವರನ್ನು ಒಬ್ಬನೇ ಕೊಲ್ಲುತ್ತಿರುವ, ನನ್ನನ್ನು ಸಂತೋಷದಿಂದ ನೋಡಲಿ.

ಪ್ರದ್ಯುಮ್ನಮುಕ್ತಾನ್ ನಿಶಿತಾನ್ನ ಶಕ್ತಾಃ
ಸೋಢುಂ ಕೃಪದ್ರೋಣವಿಕರ್ಣಕರ್ಣಾಃ ।
ಜಾನಾಸಿ ವೀರ್ಯಂ ಹಿ ತವಾತ್ಮಜಸ್ಯ
ಕಾರ್ಷ್ಣಿರ್ಭವತ್ಯೇಷ ಯಥಾ ರಣಸ್ಯ ॥೧೧॥

ಪ್ರದ್ಯುಮ್ನನು ಪ್ರಯೋಗಿಸಿದ ನಿಶಿತವಾದ ಬಾಣಗಳನ್ನು ಸಹಿಸಲು ಕೃಪ-ದ್ರೋಣ ವಿಕರ್ಣ-ಕರ್ಣರು ಸಮರ್ಥರಲ್ಲ. ಕೃಷ್ಣನಂತಾದ ಈ ಪ್ರದ್ಯುಮ್ನನು ಯುದ್ಧದಲ್ಲಿ ಹೇಗೆ ಇರುತ್ತಾನೆ ಎಂದು ನಿನ್ನ ಪುತ್ರನ ಪರಾಕ್ರಮವನ್ನು ನೀನೇ ತಿಳಿದಿದ್ದೀಯೆ.

ಸಾಂಬಃ ಸಸೂತಂ ಸರಥಂ ಭುಜಾಭ್ಯಾಂ
ದುಃಶಾಸನಂ ಶಾಸ್ತು ಬಲಾತ್ ಪ್ರಮಥ್ಯ ।

ನ ವಿದ್ಯತೇ ಜಾಂಬವತೀಸುತಸ್ಯ
ರಣೇಽವಿಷಹ್ಯಂ ಹಿ ರಣೋತ್ಕಟಸ್ಯ ॥೧೨॥

ಸಾಂಬನು ತನ್ನ ಭುಜಬಲದಿಂದ ರಥಸೂತಸಹಿತನಾದ ದುಶ್ಶಾಸನನನ್ನು ಪರಾಭವಗೊಳಿಸಿ ಅವನನ್ನು ಶಾಸನಮಾಡಲಿ. ರಣೋತ್ಕಟನಾದ ಜಾಂಬವತೀ ಸುತನಾದ ಸಾಂಬನಿಗೆ ಯುದ್ಧದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ.

ಏತೇನ ಬಾಲೇನ ಹಿ ಶಂಬರಸ್ಯ
ದೈತ್ಯಸ್ಯ ಸೈನ್ಯಂ ತರಸಾ ಪ್ರಣುದ್ಯ ।
ಹತಃ ಸ ಪಾಪೋ ಯುಧಿ ಕೇವಲೇನ
ಯುದ್ಧೇಽದ್ವಿತೀಯೋಽತುಲಬಲವೀರ್ಯಃ ॥೧೩॥

ಅವನು ಬಾಲನಾಗಿರುವಾಗಲೇ ಶಂಬರಾಸುರನ ಸೈನ್ಯವನ್ನು ತನ್ನ ಬಲದಿಂದ ಪರಾಭವಗೊಳಿಸಿ ತಾನೊಬ್ಬನೇ ಅತುಲಬಲವೀರ್ಯನಾಗಿ, ಅದ್ವಿತೀಯನಾಗಿ ಯುದ್ಧದಲ್ಲಿ ಅವನನ್ನು ಸಂಹರಿಸಿದನು.

ವೃತ್ತೋರುರತ್ಯಾಯತಪೀನಬಾಹುಃ ।
ಏಕೇನ ಸಂಖೇ ನಿಹತೋಽಶ್ವಚಕ್ರಃ ।
ಕೋ ನಾಮ ಸಾಂಬಸ್ಯ ರಣೇ ಮನುಷ್ಯೋ
ಗತ್ವಾಽಭಿಮುಖ್ಯಂ ಸಹಸಾ ಪ್ರಮುಚ್ಯೇತ್ ॥೧೪॥

ಪುಷ್ಟವಾದ ಮತ್ತು ದೀರ್ಘವಾದ ವರ್ತುಲವಾದ ಬಾಹುಗಳುಳ್ಳ ಸಾಂಬನೊಬ್ಬನೇ ಯುದ್ಧದಲ್ಲಿ ಅಶ್ವಸಮೂಹವನ್ನು ನಾಶಮಾಡಿದನು. ಯಾವ ಮನುಷ್ಯನು ಯುದ್ಧದಲ್ಲಿ ಸಾಂಬನ ಎದುರಿಗೆ ನಿಂತು ಜೀವಸಹಿತವಾಗಿ ಹಿಂದೆ ಬರುತ್ತಾನೆ?

ಯಥೈವ ಯತ್ತಸ್ಯ ಪುರಂದರಸ್ಯ
ಹರಿದ್ಧಜಂ ಸ್ಯಂದನಮಾಸ್ಥಿತಸ್ಯ ।
ಯಥಾ ಪ್ರವಿಶ್ಯಾಂತಿಕಮಂತಕಸ್ಯ
ಕಾಲೇ ಮನುಷ್ಯೋ ನ ಹಿ ವಿಕ್ರಮೇತ ।
ತಥಾ ಪ್ರವಿಶ್ಯಾಂತರಮಸ್ಯ ಸಂಖೇ
ಕೋ ನಾಮ ಜೀವನ್ ಪುನರಾವ್ರಜೇತ ॥೧೫॥

ಹೇಗೆ ಹರಿಧ್ವಜವನ್ನು ಹೊಂದಿದ ರಥದಲ್ಲಿ ಕುಳಿತು ಯುದ್ಧೋದ್ಯುಕ್ತನಾದ ದೇವೇಂದ್ರನ ಮುಂದೆ ನಿಂತವನು ಅಥವಾ ಯಮನ ಸಮ್ಮುಖದಲ್ಲಿ ಪ್ರವೇಶಿಸಿದ ಮನುಷ್ಯನು ತನ್ನ ವಿಕ್ರಮದಿಂದ ಹಿಂದೆ ಬರುವುದಿಲ್ಲವೋ ಹಾಗೆಯೇ ಯುದ್ಧದಲ್ಲಿ ಸಾಂಬನನ್ನು ಎದುರಿಸಿದ ಯಾವ ವೀರನೂ ಜೀವಸಹಿತವಾಗಿ ಹಿಂದೆ ಬರುವುದಿಲ್ಲ.

ದ್ರೋಣಂ ಚ ಭೀಷ್ಮಂ ಚ ಮಹಾರಥೌ ತೌ
ದ್ರೌಣಿಂ ಚ ವೀರಂ ಸಹಸೋಮದತ್ತಮ್ ।
ಸರ್ವಾಣಿ ಸೈನ್ಯಾನಿ ಚ ವಾಸುದೇವಃ
ಪ್ರಧಕ್ಷ್ಯತೇ ಸಾಯಕವಹ್ನಿಜಾಲೈಃ ॥೧೬॥

ಮಹಾರಥರಾದ ಆ ಭೀಷ್ಮದ್ರೋಣರು, ವೀರರಾದ ಅಶ್ವತ್ಥಾಮರು, ಸೋಮದತ್ತ ಮತ್ತು ಎಲ್ಲಾ ಸೈನ್ಯಗಳು ಇವೆಲ್ಲವನ್ನೂ ವಾಸುದೇವನೊಬ್ಬನೇ ತನ್ನ ಶರವಹ್ನಿ ಸಮೂಹಗಳಿಂದ ಸುಡಬಲ್ಲನು.

ಕಿಂ ನಾಮ ಲೋಕೇಷ್ವವಿಷಹ್ಯಮಸ್ತಿ
ಕೃಷ್ಣಸ್ಯ ಸರ್ವೇಷು ಚ ದೈವತೇಷು ।
ಆತ್ತಾಯುಧಸ್ಯೋತ್ತಮಬಾಣಪಾಣೇಃ
ಚಕ್ರಾಯುಧಸ್ಯಾಪ್ರತಿಮಸ್ಯ ಯುದ್ಧೇ ॥೧೭॥

ಕೈಯಲ್ಲಿ ಚಕ್ರವನ್ನು ಹಿಡಿದು ಬೇರೆ ಆಯುಧಗಳನ್ನೂ ಉತ್ತಮವಾದ ಬಾಣಗಳನ್ನೂ ಹಿಡಿದು, ಯುದ್ಧದಲ್ಲಿ ಅಪ್ರತಿಮನಾದ ಕೃಷ್ಣನ ಎದುರಿಗೆ ಲೋಕದಲ್ಲೇ ಆಗಲೀ, ಸರ್ವದೇವತೆಗಳಲ್ಲೇ ಆಗಲಿ ಅಸಾಧ್ಯವಾದುದು ಯಾವುದಿದೆ?

ತತೋಽನಿರುದ್ಧೋಽಪ್ಯಸಿಚರ್ಮಪಾಣಿಃ
ಮಹೀಮಿಮಾಂ ಧಾರ್ತರಾಷ್ಟ್ರೈರ್ವಿಸಂಜ್ಞೈಃ ।
ಹೃತೋತ್ತಮಾಂಗೈರ್ನಿಹತೈಃ ಕರೋತು
ಕೀರ್ಣಾಂಕುಶೈರ್ವೇದಿಮಿವಾದ್ಧರೇಷು ॥೧೮॥

ಅನಂತರ ಅನಿರುದ್ಧನು ಅಸಿಚರ್ಮಗಳನ್ನು ಕೈಯಲ್ಲಿ ಹಿಡಿದು ಯಜ್ಞದಲ್ಲಿ ವೇದಿಕೆಯನ್ನು ಕುಶಗಳಿಂದ ಹರಡಿದಂತೆ ಈ ಭೂಮಿಯನ್ನು ವಿಸಂಜ್ಞರಾಗಿ ಮೃತರಾದ ದುರ್ಯೋಧನಾದಿಗಳ ಶಿರಸ್ಸಿನಿಂದ ಹರಡಲಿ.

ಗದೋಲ್ಮುಕೌ ಬಾಹುಕಭಾನುನೀಥಾಃ
ಶೂರಶ್ಚ ಸಂಖೇ ನಿಶಠಃ ಕುಮಾರಃ ।
ರಣೋತ್ಕಟೌ ಸಾರಣಚಾರುದೇಷ್ಣೌ
ಕುಲೋಚಿತಂ ವಿಪ್ರಥಯಂತು ಲೋಕೇ ॥೧೯॥

ಗದೋಲ್ಮುಕರು, ಬಾಹುಕಭಾನುನೀಥರು, ಯುದ್ಧದಲ್ಲಿ ಶೂರನಾದ ನಿಶಠನು, ರಣೋತ್ಕಟರಾದ ಸಾರಣಚಾರುದೇಷ್ಣರು ನಮ್ಮ ಕುಲೋಚಿತವಾದುದನ್ನು ಲೋಕದಲ್ಲಿ ಯುದ್ಧದಲ್ಲಿ ಪ್ರಸಿದ್ಧಿಪಡಿಸಲಿ.

ಸವೃಷ್ಣಿಭೋಜಾಂಧಕಯೋಧಮುಖ್ಯಾ
ಸಮಾಗತಾ ಕ್ಷತ್ರಿಯಶೂರಸೇನಾ ।
ಹತ್ವಾ ರಣೇ ತಾನ್ ಧೃತರಾಷ್ಟ್ರಪುತ್ರಾನ್
ಲೋಕೇ ಯಶಃ ಸ್ಫೀತಮುಪಾಕರೋತು ॥೨೦॥

ವೃಷ್ಣಿಭೋಜಾಂಧಕರ ಯೋಧಮುಖ್ಯರಿಂದ ಕೂಡಿದ, ಕ್ಷತ್ರಿಯಶೂರರ ಸೇನೆಯು ಬಂದು ಯುದ್ಧದಲ್ಲಿ ಧೃತರಾಷ್ಟ್ರಪುತ್ರರನ್ನು ಸಂಹರಿಸಿ ಲೋಕದಲ್ಲಿ ನಿರ್ಮಲವಾದ ಯಶಸ್ಸನ್ನು ಪ್ರವರ್ತಿಸಲಿ.

ತತೋಽಭಿಮನ್ಯುಃ ಪೃಥಿವೀಂ ಪ್ರಶಾಸ್ತು
ಯಾವದ್ ವ್ರತಂ ಧರ್ಮಭೃತಾಂ ವರಿಷ್ಠಃ ।
ಯುಧಿಷ್ಠಿರಃ ಪಾಲಯತೇ ಮಹಾತ್ಮಾ
ದ್ಯೂತೇ ಯಥೋಕ್ತಂ ಕುರುಸತ್ತಮೇನ ॥೨೧॥

ಅನಂತರ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಮಹಾತ್ಮನಾದ ಕುರುಶ್ರೇಷ್ಠನಾದ ಧರ್ಮರಾಜನು ದ್ಯೂತದಲ್ಲಿ ಹೇಳಿದಂತೆ ತನ್ನ ಪ್ರತಿಜ್ಞೆಯನ್ನು ಪಾಲಿಸುವವರೆಗೆ ಅಭಿಮನ್ಯುವು ಭೂಮಿಯನ್ನು ಆಳಲಿ.

ಅಸ್ಮತ್ಪ್ರಮುಕ್ತೈರ್ವಿಶಿಖೈರ್ಜಿತಾರಿಃ
ತತೋ ಮಹೀಂ ಭೋಕ್ಷ್ಯತಿ ಧರ್ಮರಾಜಃ ।
ನಿರ್ಹರ್ತಾರಾಷ್ಟ್ರಾ ಹತಸೂತಪುತ್ರಾಮ್
ಏತದ್ಧಿ ನಃ ಕೃತ್ಯತಮಂ ಯಶಸ್ಯಮ್ ॥೨೨॥

ನಾವು ಪ್ರಯೋಗಿಸಿದ ನಿಶಿತವಾದ ಬಾಣಗಳಿಂದ ಶತ್ರುವು ನಾಶಮಾಡಲ್ಪಡುತ್ತಿರಲು ಅನಂತರ ಧರ್ಮರಾಜನು ಧಾರ್ತರಾಷ್ಟ್ರರಹಿತವಾದ, ಕರ್ಣರಹಿತವಾದ ಭೂಮಿಯನ್ನು ಆಳುವನು. ಇದು ನಾವು ಈ ದಿನ ಮಾಡಬೇಕಾದ ಯಶಸ್ಕರವಾದ ಶ್ರೇಷ್ಠವಾದ ಕರ್ತವ್ಯ.

ವಾಸುದೇವಃ

ಅಸಂಶಯಂ ಮಾಧವ ಸತ್ಯಮೇತದ್
ಗೃಹ್ಣೀಮ ತೇ ವಾಕ್ಯಮದೀನಸತ್ತ್ವ।
ಸ್ವಾಭ್ಯಾಂ ಭುಜಾಭ್ಯಾಮಜಿತಾಂ ತು ಭೂಮಿಂ
ನೇಚ್ಛೇತ್ ಕುರೂಣಾಮೃಷಭಃ ಕಥಂಚತ್ ॥೨೩॥

ವಾಸುದೇವ– ಎಲೈ ಮಧುಕುಲೋತ್ಪನ್ನನಾದ ಸಾತ್ಯಕಿಯೇ, ಅದೀನಸತ್ವನೇ, ನಿನ್ನ ಸತ್ಯವಾಕ್ಯಗಳನ್ನು ನಾವು ನಿಸ್ಸಂಶಯವಾಗಿ ಸ್ವೀಕರಿಸುತ್ತೇವೆ. ಆದರೆ ಕುರುಶ್ರೇಷ್ಠನಾದ ಧರ್ಮರಾಜನು ತನ್ನ ಭುಜಬಲದಿಂದ ಜಯಿಸದ ಭೂಮಿಯನ್ನು ಭೋಗಿಸಲು ಯಾವ ಕಾರಣದಿಂದಲೂ ಇಷ್ಟಪಡುವುದಿಲ್ಲ.

ನ ಹ್ಯೇಷ ಕಾಮಾನ್ನ ಭಯಾನ್ನ ಲೋಭಾದ್
ಯುಧಿಷ್ಠಿರೋ ಜಾತು ಜಹ್ಯಾತ್ ಸ್ವಧರ್ಮಮ್ ।
ಭೀಮಾರ್ಜುನೌ ಚಾತಿರಥೌ ಯಮೌ ಚ
ಯಜ್ಞೈವ ಕೃಷ್ಣಾ ದ್ರುಪದಾತ್ಮಜೇಯಮ್ ॥೨೪॥

ಈ ಯುಧಿಷ್ಠಿರನು ಕಾಮದಿಂದಾಗಲೀ, ಭಯದಿಂದಾಗಲೀ, ಲೋಭದಿಂದಾಗಲೀ ಎಂದೂ ತನ್ನ ಧರ್ಮವನ್ನು ಬಿಡುವುದಿಲ್ಲ. ಅತಿರಥರಾದ ಭೀಮಾರ್ಜುನರಾಗಲೀ, ನಕುಲಸಹದೇವರಾಗಲೀ ದ್ರುಪದಾತ್ಮಜೆಯಾದ ಕೃಷ್ಣೆಯಾಗಲೀ ಎಂದೂ ತಮ್ಮ ಧರ್ಮವನ್ನು ಬಿಡುವುದಿಲ್ಲ.

ಉಭೌ ಹಿ ಯುದ್ಧೇऽಪ್ರತಿಮೌ ಪೃಥಿವ್ಯಾಂ
ವೃಕೋದರಶ್ಚೈವ ಧನಂಜಯಶ್ಚ।
ಕಸ್ಮಾನ್ನ ಕೃತ್ಸ್ನಾಂ ಪೃಥಿವೀಂ ಪ್ರಶಾಸೇತ್
ಮಾದ್ರೀಸುತಾಭ್ಯಾಂ ಚ ಪುರಸ್ಕೃತೋऽಸೌ ॥೨೫॥

ವೃಕೋದರ-ಧನಂಜಯರಿಬ್ಬರೂ ಭೂಮಿಯಲ್ಲಿ ಯುದ್ಧದಲ್ಲಿ ಅಪ್ರತಿಮರಾದವರು. ಮಾದ್ರೀಸುತರಿಂದಲೂ ಪುರಸ್ಕೃತನಾದ ಈ ಧರ್ಮರಾಜನು ತಾನೇ ಭೂಮಿಯನ್ನು ಗೆದ್ದು ಏಕೆ ಆಳುವುದಿಲ್ಲ?

ಯದಾ ತು ಪಾಂಚಾಲಪತಿರ್ಮಹಾತ್ಮಾ
ಸಕೇಕಯಾಶ್ಚೇದಿಪತಿರ್ವಯಂ ಚ ।
ಯೋತ್ಸ್ಯಾಮ ವಿಕ್ರಮ್ಯ ಪರಾಂಸ್ತದಾ ವೈ
ಸುಯೋಧನಸ್ಯಕ್ಷ್ಯತಿ ಜೀವಲೋಕಮ್ ॥೨೬॥

ಯಾವಾಗ ಪಾಂಚಾಲರಾಜನೂ, ಮಹಾತ್ಮನಾದ ದ್ರುಪದನೂ, ಚೇದಿ ರಾಜನೂ ಮತ್ತು ನಾವೂ ಸಹ ಪರಾಕ್ರಮದಿಂದ ಯುದ್ಧವನ್ನು ಮಾಡುವೆವೋ ಆಗ ಸುಯೋಧನನು ಮನುಷ್ಯಲೋಕವನ್ನು ತೊರೆಯುತ್ತಾನೆ.

ಯುಧಿಷ್ಠಿರಃ

ನ ತಚ್ಚಿತ್ರಂ ಮಾಧವ ಯದ್ ಬ್ರವೀಷಿ
ಸತ್ಯಂ ತು ಮೇ ರಕ್ಷಿತವ್ಯಂ ನ ರಾಜ್ಯಮ್ ।
ಕೃಷ್ಣಶ್ಚ ಮಾಂ ವೇದ ಯಥಾವದೇಕಃ
ಕೃಷ್ಣಂ ಚ ವೇದಾಹಮಥೋ ಯಥಾವತ್ ॥೨೭॥

ಯುಧಿಷ್ಠಿರ– ಸಾತ್ಯಕಿಯೇ, ನೀನು ಮಾತನಾಡುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆದರೆ ನಾನು ಸತ್ಯವನ್ನು ರಕ್ಷಿಸಬೇಕು. ರಾಜ್ಯವನ್ನಲ್ಲ. ಕೃಷ್ಣನೊಬ್ಬನೇ ನನ್ನನ್ನು ಸರಿಯಾಗಿ ತಿಳಿದಿದ್ದಾನೆ. ನಾನೂ ಸಹ ಕೃಷ್ಣನನ್ನು ಸರಿಯಾಗಿ ತಿಳಿದಿದ್ದೇನೆ.

ಯದೈವ ಕಾಲಂ ಪುರುಷಪ್ರವೀರೋ
ವೇತ್ಸ್ಯತ್ಯಯಂ ಮಾಧವ ವಿಕ್ರಮಸ್ಯ ।
ತದಾ ರಣೇ ತ್ವಂ ಚ ಶಿನಿಪ್ರವೀರ
ಸುಯೋಧನಂ ಜೇಷ್ಯಸಿ ಕೇಶವಶ್ಚ ॥೨೮॥

ಎಲೈ ಮಧುಕುಲೋತ್ಪನ್ನನಾದ ಸಾತ್ಯಕಿಯೇ, ಈ ಪುರುಷಪ್ರವೀರನಾದ ಕೃಷ್ಣನು ಯಾವಾಗ ಯುದ್ಧದ ಕಾಲವೆಂದು ತಿಳಿಯುವನೋ, ಎಲೈ ಶಿನಿಪ್ರವೀರನೇ, ಆಗ ನೀನೂ ಮತ್ತು ಕೃಷ್ಣನೂ ಯುದ್ಧದಲ್ಲಿ ಸುಯೋಧನನ್ನು ಗೆಲ್ಲುವಿರಿ.

ಪ್ರತಿಪ್ರಯಾಂತ್ವದ್ಯ ದಶಾರ್ಹವೀರ
ದೃಷ್ಟೋऽಸ್ಮಿ ನಾಥೈರ್ನರದೇವನಾಥೈಃ ।
ಧರ್ಮೇऽಪ್ರಮಾದಂ ಕುರುತಾಪ್ರಮೇಯಾ
ದ್ರಷ್ಟಾಸ್ಮಿ ಭೂಯಃ ಸುಖಿನಃ ಸಮೇತಾನ್ ॥೨೯॥

ದಶಾರ್ಹವೀರನೇ, ಈಗ ಹಿಂದಿರುಗಿ. ನರದೇವನಾಥರಾದ ನಿಮ್ಮಿಂದ ನೋಡಲ್ಪಟ್ಟಿದ್ದೇವೆ. ಅಪ್ರಮೇಯರಾದ ನೀವು ಧರ್ಮದ ವಿಷಯದಲ್ಲಿ ಪ್ರಮಾದವನ್ನು ಮಾಡಬೇಡಿ. ನಾನು ಪುನಃ ಸುಖದಿಂದ ಒಟ್ಟಿಗೆ ಇರುವ ನಿಮ್ಮನ್ನು ನೋಡುವೆನು.

ವೈಶಂಪಾಯನಃ

ತೇऽನ್ಯೋನ್ಯಮಾಮಂತ್ರ್ಯ ತಥಾऽಭವಾದ್ಯ
ವೃದ್ಧಾನ್ ಪರಿಷ್ವಜ್ಯ ಶಿಶೂಂಶ್ಚ ಸರ್ವಾನ್ ।
ಯದುಪ್ರವೀರಾಃ ಸ್ವಗೃಹಾನಿ ಜಗ್ಮು
ರಾಜಾऽಪಿ ತೀರ್ಥಾನ್ಯನುಸಂಚಚಾರ ॥೩೦॥

ವೈಶಂಪಾಯನ– ಆ ಯದುಪ್ರವೀರರು ಪರಸ್ಪರ ಅನುಮತಿಯನ್ನು ಪಡೆದು ಹಿರಿಯರನ್ನು ನಮಸ್ಕರಿಸಿ, ಚಿಕ್ಕವರನ್ನೆಲ್ಲಾ ಆಲಿಂಗಿಸಿ ತಮ್ಮ ಮನೆಗೆ ಹಿಂದಿರುಗಿದರು. ಯುಧಿಷ್ಠಿರನಾದರೂ ತನ್ನ ತೀರ್ಥಯಾತ್ರೆಯನ್ನು ಮುಂದುವರಿಸಿದನು.

ಸಮರ್ಚ್ಯ ಕೃಷ್ಣಂ ತ್ವಥ ಧರ್ಮರಾಜೋ
ವಿದರ್ಭರಾಜೋಪಚಿತಾಂ ಸುತೀರ್ಥಮ್ ।
ಜಗಾಮ ಪುಣ್ಯಾಂ ಸರಿತಂ ಪಯೋಷ್ಣೀಂ
ಸಭ್ರಾತೃಬಂಧುಃ ಸಹ ಲೋಮಶೇನ ॥೩೧॥

ಆಗ ಧರ್ಮರಾಜನು ಕೃಷ್ಣನನ್ನು ಪೂಜಿಸಿ ವಿದರ್ಭರಾಜನಿಂದ ಸೇವಿತವಾದ ಶ್ರೇಷ್ಠವಾದ ತೀರ್ಥವಾದ ಪವಿತ್ರವಾದ ಪಯೋಷ್ಣಿ ನದಿಯನ್ನು ತನ್ನ ಭ್ರಾತೃ ಬಂಧು ಮತ್ತು ಲೋಮಶರ ಜೊತೆಯಲ್ಲಿ ತಲುಪಿದನು.

ಸುತೇನ ಸೋಮೇನ ವಿಮಿಶ್ರಿತೋದಾಂ
ಪಯಃ ಪಯೋಷ್ಣೀಂ ಪ್ರತಿ ಸೋऽಧ್ಯುವಾಸ ।

ದ್ವಿಜಾತಿಮುಖ್ಯೈರ್ಮುದಿತೈರ್ಮಹಾತ್ಮಾ
ಸಂಸ್ತೂಯಮಾನಃ ಸ್ತುತಿಭಿಃ ಪುಷ್ಕಲಾಭಿಃ ॥೩೨॥

ಸೋಮರಸದಿಂದ ಮಿಶ್ರಿತವಾದ ಉದಕವನ್ನು ಹೊಂದಿದ ಪಯೋಷ್ಣೀ ನದಿಯ ತೀರದಲ್ಲಿ ಆ ಮಹಾತ್ಮನಾದ ಧರ್ಮರಾಜನು ಅನೇಕ ಸಂತೋಷಗೊಂಡ ಬ್ರಾಹ್ಮಣಶ್ರೇಷ್ಠರಿಂದ ಅನೇಕ ಪ್ರಶಂಸೆಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ಸುಖವಾಗಿ ವಾಸಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತದಶಾಧಿಕಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹದಿನೆಂಟನೆಯ ಅಧ್ಯಾಯ

ಪಯೋಷ್ಣಿಯಲ್ಲಿ ಗಯನು ಮಾಡಿದ ಯಾಗದ ವರ್ಣನೆ.
ಚ್ಯವನ ಕಥಾ ಪ್ರಸಕ್ತಿ.

ಲೋಮಶಃ

ಗಯೇನ ಯಜಮಾನೇನ ಸೋಮೇನೇಹ ಪುರಂದರಃ ।
ತರ್ಪಿತಃ ಶ್ರೂಯತೇ ರಾಜನ್ ಸ ತೃಪ್ತೋ ಮುದಮಭ್ಯಗಾತ್ ॥೧॥

ಲೋಮಶ– ಎಲೈ ರಾಜನೇ, ಇಲ್ಲಿ ಗಯನು ಯಜ್ಞವನ್ನು ಮಾಡುತ್ತಾ ಇಂದ್ರನನ್ನು ಸೋಮರಸದಿಂದ ತೃಪ್ತಿಪಡಿಸಿದನು. ಇಂದ್ರನು ತೃಪ್ತನಾಗಿ ಸಂತೋಷವನ್ನು ಹೊಂದಿದನು ಎಂದು ಕೇಳಿದ್ದೇವೆ.

ಇಹ ದೇವೈಃ ಸಹೇಂದ್ರೇಸ್ತು ಪ್ರಜಾಪತಿಭಿರೇವ ಚ ।
ಇಷ್ಟಂ ಬಹುವಿಧೈರ್ಯಜ್ಞೈರ್ಮಹದ್ಭಿರ್ಭೂರಿದಕ್ಷಿಣೈಃ ॥೨॥

ಇಲ್ಲಿ ಇಂದ್ರನಿಂದಲೂ, ಪ್ರಜಾಪತಿಗಳಿಂದಲೂ ಸಹಿತರಾದ ದೇವತೆಗಳು ಅನೇಕ ದಕ್ಷಿಣೆಗಳುಳ್ಳ ಬಹುವಿಧವಾದ ಅನೇಕ ಯಜ್ಞಗಳನ್ನು ಮಾಡಿದ್ದಾರೆ.

ಆಧೂರ್ತರಯಸಶ್ಚೇಹ ರಾಜಾ ವಜ್ರಧರಂ ಪ್ರಭುಃ ।
ತರ್ಪಯಾಮಾಸ ಸೋಮೇನ ಹಯಮೇಧೇಷು ಸಪ್ತಸು ॥೩॥

ಆಧೂರ್ತರಯನ ಪುತ್ರನಾದ ಪ್ರಭುವಾದ ಗಯಮಹಾರಾಜನು ಇಲ್ಲಿ ಏಳು ಅಶ್ವಮೇಧ ಯಾಗಗಳಲ್ಲಿ ಮತ್ತು ಸೋಮಯಾಗಗಳಲ್ಲಿ ಇಂದ್ರನನ್ನು ತೃಪ್ತಿಪಡಿಸಿದನು.

ತಸ್ಯ ಸಪ್ತಸು ಯಜ್ಞೇಷು ಸರ್ವಮಾಸೀದ್ಧಿರಣ್ಮಯಮ್ ।
ವಾನಸ್ಪತ್ಯಂ ಚ ಭೌಮಂ ಚ ಯದ್ ದ್ರವ್ಯಂ ನಿಯತಂ ಮಖೇ ॥೪॥

ಅವನ ಏಳು ಯಜ್ಞಗಳಲ್ಲಿ ವನಸ್ಪತಿಗಳಿಂದ ಮತ್ತು ಮೃತ್ತಿಕೆಯಿಂದ ಮಾಡಲ್ಪಡುವ ದ್ರವ್ಯಗಳೆಲ್ಲವೂ ನಿಯಮೇನ ಸುವರ್ಣಮಯವಾಗಿದ್ದವು.

ತೇಷ್ವೇವ ಚಾಸ್ಯ ಯಜ್ಞೇಷು ಪ್ರಯೋಗಾಃ ಸಪ್ತ ವಿಶ್ರುತಾಃ ।
ಸಪ್ತೈಕೈಕಸ್ಯ ಯಜ್ಞಸ್ಯ ಚಷಾಲಾಶ್ಚ ಪ್ರತಿಷ್ಠಿತಾಃ ॥೫॥

ಅಲ್ಲಿ ಮಾಡಿದ ಅವನ ಯಜ್ಞಗಳಲ್ಲಿ ಒಂದೊಂದರಲ್ಲೂ ಏಳು ಪ್ರಯೋಗಗಳು (ಏಳುಪಟ್ಟು ಆಹುತಿ, ದಕ್ಷಿಣೆ, ದಾನ ಮೊದಲಾದವುಗಳು) ಪ್ರಖ್ಯಾತವಾಗಿವೆ. ಒಂದೊಂದು ಯಜ್ಞದಲ್ಲಿಯೂ ಏಳು ಚಷಾಲಗಳು (ಯೂಪಾಲಂಕಾರವಾದ ಚಿನ್ನದ ಬಳೆಗಳು) ಪ್ರತಿಷ್ಠಿತವಾಗಿದ್ದವು.

ತಸ್ಯ ಸ್ಮ ಯೂಪಾನ್ ಯಜ್ಞೇಷು ಭ್ರಾಜಮಾನಾನ್ ಹಿರಣ್ಮಯಾನ್ ।
ಸ್ವಯಮುತ್ಥಾಪಯಾಮಾಸುರ್ದೇವಾಃ ಸೇಂದ್ರಾ ಯುಧಿಷ್ಠಿರ ॥೬॥

ಎಲೈ ಯುಧಿಷ್ಠಿರನೇ, ಅಲ್ಲಿ ಅವನ ಯಜ್ಞಗಳಲ್ಲಿ ಇಂದ್ರ ಮೊದಲಾದ ದೇವತೆಗಳು ಸುವರ್ಣಮಯವಾದ ಪ್ರಕಾಶಿಸುವ ವ್ಯೂಹಗಳನ್ನು ತಾವೇ ಎತ್ತಿ ನಿಲ್ಲಿಸಿದರು.

ತೇಷು ತಸ್ಯ ಮಖಾಗ್ರ್ಯೇಷು ಗಯಸ್ಯ ಪೃಥಿವೀಪತೇಃ ।
ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ॥೭॥

ಪೃಥಿವೀಪತಿಯಾದ ಗಯನ ಶ್ರೇಷ್ಠವಾದ ಆ ಯಜ್ಞಗಳಲ್ಲಿ ಇಂದ್ರನು ಸೋಮದಿಂದಲೂ, ಬ್ರಾಹ್ಮಣರು ದಕ್ಷಿಣೆಗಳಿಂದಲೂ ಸಂತೋಷಪಟ್ಟರು.

ಸಿಕತಾ ವಾ ಯಥಾ ಲೋಕೇ ಯಥಾ ವಾ ದಿವಿ ತಾರಕಾಃ ।
ಯಥಾ ವಾ ವರ್ಷತೋ ಧಾರಾ ಅಸಂಖ್ಯೇಯಾಶ್ಚ ಕೇನಚಿತ್ ॥೮॥

ತಥೈವ ತದಸಂಖ್ಯೇಯಂ ಧನಂ ಯತ್ ಪ್ರದದೌ ಗಯಃ ।
ಸದಸ್ಯೇಭ್ಯೋ ಮಹಾರಾಜ ತೇಷು ಯಜ್ಞೇಷು ಸಪ್ತಸು ॥೯॥

ಭವೇತ್ ಸಂಖ್ಯೇಯಮೇತದ್ವೈ ಯದೇತತ್ ಪರಿಕೀರ್ತಿತಮ್ ।
ನ ಸಾ ಶಕ್ಯಾ ತು ಸಂಖ್ಯಾತುಂ ದಕ್ಷಿಣಾ ದಕ್ಷಿಣಾವತಃ ॥೧೦॥

ಪ್ರಪಂಚದಲ್ಲಿ ಮರಳಿನ ಕಣಗಳು, ಆಕಾಶದಲ್ಲಿರುವ ನಕ್ಷತ್ರಗಳು, ಮಳೆಯ ಧಾರೆಗಳು ಇವುಗಳನ್ನು ಹೇಗೆ ಯಾರೂ ಎಣಿಸಲು ಸಾಧ್ಯವಿಲ್ಲವೋ ಅದರಂತೆ ಎಲೈ ಮಹಾರಾಜನೇ, ಆ ಏಳು ಯಜ್ಞಗಳಲ್ಲಿ ಸದಸ್ಯರಿಗೆ ಗಯನು ಕೊಟ್ಟ ಧನವನ್ನೂ ಸಹ ಎಣಿಸಲು ಸಾಧ್ಯವಿಲ್ಲ. ಮೊದಲು ಹೇಳಿದ ವಸ್ತುಗಳು ಒಂದು ಪಕ್ಷ ಪರಿಗಣನೆಯನ್ನು ಪಡೆಯಬಹುದು, ಆದರೆ ದಕ್ಷಿಣೆಯನ್ನು ನೀಡಿದ ಗಯನ ದಕ್ಷಿಣೆಯು ಪರಿಗಣನೆಯನ್ನು ಪಡೆಯುವುದಿಲ್ಲ.

ಹಿರಣ್ಮಯೀಭಿರ್ಗೋಭಿಶ್ಚ ಸ ಯಜ್ಞೇಷು ವಿಶಾಂ ಪತೇ ।
ಬ್ರಾಹ್ಮಣಾಂಸ್ತರ್ಪಯಾಮಾಸ ನಾನಾದಿಗ್ಭ್ಯಃ ಸಮಾಗತಾನ್ ॥೧೧॥

ಎಲೈ ರಾಜನೇ, ಅವನು ಯಜ್ಞಗಳಲ್ಲಿ ಹಿರಣ್ಮಯವಾದ ಗೋವುಗಳಿಂದ ನಾನಾ ದೇಶದಿಂದ ಬಂದ ಬ್ರಾಹ್ಮಣರನ್ನು ತೃಪ್ತಿಪಡಿಸಿದನು.

ಅಲ್ಪಾವಶೇಷಾ ಪೃಥಿವೀ ಚೈತ್ಯೈರಾಪೀತ್ ಸಮಾಚಿತಾ ।
ಗಯಸ್ಯ ಯಜಮಾನಸ್ಯ ತತ್ರತತ್ರ ವಿಶಾಂ ಪತೇ ॥೧೨॥

ಎಲೈ ರಾಜನೇ, ಗಯನು ಅಲ್ಲಲ್ಲಿ ಯಜ್ಞವನ್ನು ಮಾಡುತ್ತಿರಲು ಭೂಮಿಯಲ್ಲಿ ಚೈತ್ಯ ಯೂಪಗಳು ನೆಡದಿದ್ದ ಪ್ರದೇಶವು ಅಲ್ಪವೇ ಉಳಿಯಿತು.

ಸ ಲೋಕಾನ್ ಪ್ರಾಪ್ತವಾನ್ಪೌಂದ್ರಾನ್ ಕರ್ಮಣಾ ತೇನ ಭಾರತ ।
ಸಲೋಕತಾಂ ತಸ್ಯ ಗಚ್ಛೇತ್ ಪಯೋಷ್ಣ್ಯಾಂ ಯ ಉಪಸ್ಪೃಶೇತ್ ॥

ಎಲೈ ಭಾರತನೇ, ಅವನು ತನ್ನ ಕರ್ಮದಿಂದ ಇಂದ್ರಲೋಕವನ್ನು ಹೊಂದಿದನು. ಈ ಪಯೋಷ್ಣೀ ನದಿಯಲ್ಲಿ ಯಾವನು ಸ್ನಾನಮಾಡುವನೋ ಅವನೂ ಸಹ ಗಯನ ಸಾಲೋಕ್ಯವನ್ನು ಹೊಂದುವನು.

ತಸ್ಮಾತ್ತ್ವಮಸ್ಯಾಂ ರಾಜೇಂದ್ರ ಭ್ರಾತೃಭಿಃ ಸಹಿತೋಽಚ್ಯುತ ।
ಉಪಸ್ಪೃಶ್ಯ ಮಹೀಪಾಲ ಧೂತಪಾಪ್ಮಾ ಭವಿಷ್ಯಸಿ ॥೧೪॥

ಎಲೈ ಅಚ್ಯುತನೇ, ಮಹೀಪಾಲನೇ, ರಾಜೇಂದ್ರನೇ, ಆದ್ದರಿಂದ ನೀನೂ ಸಹ ತಮ್ಮಂದಿರ ಜೊತೆಯಲ್ಲಿ ಇಲ್ಲಿ ಸ್ನಾನವನ್ನು ಮಾಡಿ ಪಾಪದಿಂದ ನಿರ್ಮುಕ್ತನಾಗುವಿ.

ವೈಶಂಪಾಯನಃ

ಸ ಪಯೋಷ್ಣ್ಯಾಂ ನರಶ್ರೇಷ್ಠಃ ಸ್ನಾತ್ವಾ ವೈ ಭ್ರಾತೃಭಿ ಸಹ ।
ವೈಡೂರ್ಯಪರ್ವತಂ ಚೈವ ನರ್ಮದಾಂ ಚ ಮಹಾನದೀಮ್ ॥೧೫॥

ಉದ್ದಿಶ್ಯ ಪಾಂಡವಶ್ರೇಷ್ಠಃ ಸ ಪ್ರತಸ್ಥೇ ಮಹೀಪತಿಃ ।
ಸಮಾನವೇಷ್ಯತೇಜಸ್ವೀ ಭ್ರಾತೃಭಿಃ ಸಹಿತೋಽನಘಃ ॥೧೬॥

ವೈಶಂಪಾಯನ– ಆ ನರಶ್ರೇಷ್ಠನು ಪಯೋಷ್ಣೀ ನದಿಯಲ್ಲಿ ತಮ್ಮಂದಿರ ಜೊತೆಯಲ್ಲಿ ಸ್ನಾನವನ್ನು ಮಾಡಿ ಮಹೀಪತಿಯೂ, ಪಾಂಡವಶ್ರೇಷ್ಠನೂ, ಅನಘನೂ ಆದ ಅವನು ಸಮಾನವೇಷವನ್ನು ಧರಿಸಿದ ತಮ್ಮಂದಿರ ಜೊತೆಯಲ್ಲಿ ತೇಜಸ್ವಿಯಾಗಿ ವೈಡೂರ್ಯ ಪರ್ವತವನ್ನು ಮತ್ತು ನರ್ಮದಾ ಮಹಾನದಿಯನ್ನು ಉದ್ದೇಶಿಸಿ ಹೊರಟನು.

ತತೋಽಸ್ಯ ಸರ್ವಾಣ್ಯಾಚಷ್ಟೌ ಲೋಮಶೋ ಭಗವಾನೃಷಿಃ ।
ತೀರ್ಥಾನಿ ರಮಣೀಯಾನಿ ತತ್ರ ತತ್ರ ವಿಶಾಂಪತೇ ॥೧೭॥

ಎಲೈ ರಾಜನೇ, ಆಗ ಪೂಜ್ಯರಾದ ಲೋಮಶ ಋಷಿಗಳು ದಾರಿಯಲ್ಲಿ ಅಲ್ಲಲ್ಲಿ ಸಿಕ್ಕಿದ ಎಲ್ಲಾ ರಮಣೀಯವಾದ ತೀರ್ಥಗಳನ್ನೂ ಅವನಿಗೆ ತಿಳಿಸಿದರು.

ಯಥಾಯೋಗಂ ಯಥಾಪ್ರೀತಿ ಸ ಯಯೌ ಭ್ರಾತೃಭಿಃ ಸಹ ।
ಸಂದದಾನೋಽಸಕೃದ್ ವಿತ್ತಂ ಬ್ರಾಹ್ಮಣೇಭ್ಯಃ ಸಹಸ್ರಶಃ ॥೧೮॥

ಅವನು ತನ್ನ ಅವಕಾಶಕ್ಕೆ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ತಮ್ಮಂದಿರ ಜೊತೆಯಲ್ಲಿ ಬ್ರಾಹ್ಮಣರಿಗೆ ಸಹಸ್ರಸಂಖ್ಯೆಯಲ್ಲಿ ವಿತ್ತವನ್ನು ಅನೇಕಬಾರಿ ದಾನಮಾಡುತ್ತಾ ಮುಂದೆ ಹೊರಟನು.

ಲೋಮಶಃ

ದೇವಾನಾಮೇತಿ ಕೌಂತೇಯ ತಥಾ ರಾಜ್ಞಾಂ ಸಲೋಕತಾಮ್ ।
ವೈಡೂರ್ಯಪರ್ವತಂ ದೃಷ್ಟ್ವಾ ನರ್ಮದಾಮತೀರ್ಯ ಚ ॥೧೯॥

ಲೋಮಶ– ಕೌಂತೇಯನೇ, ವೈಡೂರ್ಯಪರ್ವತವನ್ನು ನೋಡಿ ನರ್ಮದಾ ನದಿಯಲ್ಲಿ ಸ್ನಾನವನ್ನು ಮಾಡಿದವನು ಪೂರ್ವರಾಜರ ಮತ್ತು ದೇವತೆಗಳ ಸಾಲೋಕ್ಯವನ್ನು ಹೊಂದುತ್ತಾನೆ.

ಸಂಧಿರೇಷ ನರಶ್ರೇಷ್ಠ ತ್ರೇತಾಯಾ ದ್ವಾಪರಸ್ಯ ಚ ।
ಏನಮಾಸಾದ್ಯ ಕೌಂತೇಯ ಸರ್ವಪಾಪೈಃ ಪ್ರಮುಚ್ಯತೇ ॥೨೦॥

ಕೌಂತೇಯನೇ, ನರಶ್ರೇಷ್ಠನೇ, ತ್ರೇತಾ ಮತ್ತು ದ್ವಾಪರಯುಗಗಳ ಸಂಧಿಯಲ್ಲಿ ಈ ಪರ್ವತಕ್ಕೆ ಬಂದರೆ ಸರ್ವಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಏಷ ಶರ್ಯಾತಿಯಜ್ಞಸ್ಯ ದೇಶಸ್ತಾತ ಪ್ರಕಾಶತೇ ।
ಸಾಕ್ಷಾದ್ಯತ್ರಾಪಿಬತ್ ಸೋಮಮಶ್ವಿಭ್ಯಾಂ ಸಹ ವಾಸವಃ ॥೨೧॥

ಎಲೈ ಪ್ರೀತಿಪಾತ್ರನೇ, ಶರ್ಯಾತಿಯು ಯಜ್ಞವನ್ನು ಮಾಡಿದ ಈ ಪ್ರದೇಶವು ಶೋಭಿಸುತ್ತಿದೆ. ಅಲ್ಲಿ ಇಂದ್ರನು ಸ್ವತಃ ಅಶ್ವಿನಿಗಳ ಜೊತೆಯಲ್ಲಿ ಬಂದು ಸೋಮಪಾನವನ್ನು ಮಾಡಿದನು.

ಚುಕೋಪ ಭಾರ್ಗವಶ್ಚಾಪಿ ಮಹೇಂದ್ರಾಯ ಮಹಾತಪಾಃ ।
ಸಂಸ್ತಂಭಯಾಮಾಸ ಚ ತಂ ವಾಸವಂ ಚ್ಯವನಃ ಪ್ರಭುಃ ॥೨೨॥

ಇಲ್ಲಿಯೇ ಪ್ರಭ್ಭುಗಳೂ, ಮಹಾತಪಸ್ವಿಗಳೂ, ಭಾರ್ಗವರೂ ಆದ ಚ್ಯವನರು ಇಂದ್ರನ ಮೇಲೆ ಕ್ರೋಧವನ್ನು ಮಾಡಿ ಅವನ ಬಾಹುವನ್ನು ಸ್ತಂಭಗಳೂ ಮಾಡಿದರು.

ಸುಕನ್ಯಾಂ ಚಾಪಿ ಭಾರ್ಯಾಂ ಸ ರಾಜಪುತ್ರೀಮವಾಪ್ತವಾನ್ ।
ನಾಸತ್ಯೌ ಚ ಮಹಾರಾಜ ಕೃತವಾನ್ ಸೋಮಪೀಥಿನೌ ॥೨೩॥

ಎಲೈ ಮಹಾರಾಜನೇ, ಚ್ಯವನರು ರಾಜಪುತ್ರಿಯಾದ ಸುಕನ್ಯೆಯನ್ನು ಭಾರ್ಯೆಯಾಗಿ ಪಡೆದು ಅಶ್ವಿನೀದೇವತೆಗಳನ್ನು ಸೋಮಪಾನಾರ್ಹರನ್ನಾಗಿ ಮಾಡಿದರು.

ಯುಧಿಷ್ಠಿರಃ

ಕಥಂ ವಿಷ್ಟಂಭತಸ್ತೇನ ಭಗವಾನ್ ಪಾಕಶಾಸನಃ ।
ಕಿಮರ್ಥಂ ಭಾರ್ಗವಶ್ಚಾಪಿ ಕೋಪಂ ಚಕ್ರೇ ಮಹಾತಪಾಃ ॥೨೪॥

ನಾಸತ್ಯೌ ಚ ಕಥಂ ಬ್ರಹ್ಮನ್ ಕೃತವಾನ್ ಸೋಮಪೀಥಿನೌ ।
ಏತತ್ ಸರ್ವಂ ಯಥಾವೃತ್ತಮಾಖ್ಯಾತು ಭಗವಾನ್ ಮಮ ॥೨೫॥

ಯುಧಿಷ್ಠಿರ– ಪೂಜ್ಯನಾದ ಇಂದ್ರನು ಅವರಿಂದ ಹೇಗೆ ಬಹುಸ್ತಂಭವನ್ನು ಹೊಂದಿದನು? ಮಹಾತಪಸ್ವಿಗಳಾದ ಭಾರ್ಗವರಾದ ಚ್ಯವನರೂ ಸಹ ಏಕೆ ಇಂದ್ರನ ಮೇಲೆ ಕೋಪವನ್ನು ಮಾಡಿದರು? ಚ್ಯವನರಾದರೂ ಅಶ್ವಿನೀದೇವತೆಗಳನ್ನು ಹೇಗೆ ಸೋಮಪಾನಾರ್ಹರನ್ನಾಗಿ ಮಾಡಿದರು? ಪೂಜ್ಯ ಬ್ರಾಹ್ಮಣರೇ, ಪೂಜ್ಯರಾದ ತಾವು ನನಗೆ ಇದೆಲ್ಲವನ್ನೂ ಯಥಾವತ್ತಾಗಿ ತಿಳಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟದಶಾಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★★★★★

ನೂರ ಹತ್ತೊಂಬತ್ತನೆಯ ಅಧ್ಯಾಯ

ಸುಕನ್ಯೆಯ ಅಪರಾಧ ಮತ್ತು ಚ್ಯವನರ ಜೊತೆಯಲ್ಲಿ ವಿವಾಹ.

ಲೋಮಶಃ

ಭೃಗೋರ್ಮಹರ್ಷೇಃ ಪುತ್ರೋಽಭೂತ್ ಚ್ಯವನೋ ನಾಮ ಭಾರತ ।
ಸಮೀಪೇ ಸರಸಃ ಸೋಽಸ್ಯ ತಪಸ್ತೇಪೇ ಮಹಾಮತಿಃ ॥೧॥

ಲೋಮಶ– ಎಲೈ ಭಾರತನೇ, ಭೃಗುಮಹರ್ಷಿಗಳ ಪುತ್ರರಾದ ಮಹಾಮತಿಗಳಾದ ಚ್ಯವನರು ಈ ಸರೋವರದ ಸಮೀಪದಲ್ಲಿ ತಪಸ್ಸನ್ನು ಮಾಡುತ್ತಿದರು.

ಸ್ಥಾಣುಭೂತೋ ಮಹಾತೇಜಾ ವೀರಸ್ಥಾನೇನ ಪಾಂಡವ ।
ಅತಿಷ್ಠನ್ ಸ ಬಹೂನ್ ಕಾಲಾನ್ ಏಕದೇಶೇ ವಿಶಾಂಪತೇ ॥೨॥

ಎಲೈ ಪಾಂಡವನೇ, ಎಲೈ ರಾಜನೇ, ಮಹಾತೇಜಸ್ವಿಗಳಾದ ಅವರು ಮರದ ತುಂಡಿನಂತೆ ವೀರಾಸನದಲ್ಲಿ ಅಲುಗಾಡದೇ ಒಂದೇ ಸ್ಥಳದಲ್ಲಿ ನಿಂತು ಬಹುಕಾಲದವರೆಗೆ ತಪಸ್ಸನ್ನು ಮಾಡಿದರು.

ಸ ವಲ್ಮೀಕೋಽಭವದ್ಭರ್ಷಿರ್ತಾಭಶ್ಚ ಸುಸಂವೃತಃ ।
ಕಾಲೇನ ಮಹತಾ ರಾಜನ್ ಸಮಾಕೀರ್ಣಂ ಪಿಪೀಲಿಕೈಃ ॥೩॥

ಎಲೈ ರಾಜನೇ, ಬಹಳ ಕಾಲವು ಕಳೆಯುವಷ್ಟರಲ್ಲಿ ಆ ಋಷಿಗಳು ಲತೆಗಳಿಂದ ಆವೃತವಾದ ಒಂದು ವಲ್ಮೀಕವಾದರು. ಆ ವಲ್ಮೀಕವು ಇರುವೆಗಳಿಂದ ತುಂಬಿಕೊಂಡಿತು.

ತಥಾ ಸ ಸಂವೃತೋ ಧೀಮಾನ್ ಮೃತ್ಪಿಂಡ ಇವ ಸರ್ವಶಃ ।
ತಪ್ಯತೇ ಸ್ಮ ತಪೋ ರಾಜನ್ ವಲ್ಮೀಕೇನ ಸಮಾವೃತಃ ॥೪॥

ಎಲೈ ರಾಜನೇ, ಎಲ್ಲಕಡೆಯಲ್ಲಿಯೂ ಮುಚ್ಚಲ್ಪಟ್ಟು ಮೃತ್ಪಿಂಡದಂತೆ ಇದ್ದ ಅವರು ಆ ಹುತ್ತದಿಂದ ಮುಚ್ಚಲ್ಪಟ್ಟವರಾಗಿ ತಪಸ್ಸನ್ನು ಮುಂದುವರಿಸಿದರು.

ಅತಿದೀರ್ಘಸ್ಯ ಕಾಲಸ್ಯ ಶರ್ಯಾತಿರ್ನಾಮ ಪಾರ್ಥಿವಃ ।
ಆಜಗಾಮ ಸರೋ ರಮ್ಯಂ ವಿಹರ್ತುಮಿದಮುತ್ತಮಮ್ ॥೫॥

ಅನಂತರ ಬಹುಕಾಲ ಕಳೆದ ಮೇಲೆ ಶರ್ಯ್ಯಾತಿ ಎಂಬ ರಾಜನು ವಿಹಾರವನ್ನು ಮಾಡಲು ಈ ಶ್ರೇಷ್ಠವಾದ ಮನೋಹರವಾದ ಸರೋವರಕ್ಕೆ ಬಂದನು.

ತಸ್ಯ ಸ್ತ್ರೀಣಾಂ ಸಹಸ್ರಾಣಿ ಚತ್ವಾರ್ಯಾಸನ್ ಪರಿಗ್ರಹಾಃ ।
ಏಕೈವ ಚ ಸುತಾ ಶುಭ್ರಾ ಸುಕನ್ಯಾ ನಾಮ ಭಾರತ ॥೬॥

ಅವನಿಗೆ ನಾಲ್ಕುಸಹಸ್ರ ಪತ್ನಿಯರಿದ್ದರು. ಎಲೈ ಭಾರತನೇ, ಆದರೆ ಸುಕನ್ಯೆ ಎಂಬ ಶುಭ್ರವಾದ ಒಬ್ಬಳೇ ಮಗಳಿದ್ದಳು.

ಸಾ ಸಖೀಭಿಃ ಪರಿವೃತಾ ಸರ್ವಾಭರಣಭೂಷಿತಾ ।
ಚಂಕ್ರಮ್ಯಮಾಣಾ ವಲ್ಮೀಕಂ ಭಾರ್ಗವಸ್ಯ ಸಮಾಸದತ್ ॥೭॥

ಸರ್ವಾಭರಣಭೂಷಿತಳಾದ ಅವಳು ತನ್ನ ಸಖಿಯರ ಜೊತೆಯಲ್ಲಿ ಅಲ್ಲಿ ತಿರುಗಾಡುತ್ತಾ ಚ್ಯವನರ ವಲ್ಮೀಕದ ಸಮೀಪಕ್ಕೆ ಬಂದಳು.

ಸಾ ವೈ ವಸುಮತೀಂ ತತ್ರ ಪಶ್ಯಮಾನಾ ಮನೋರಮಾಮ್ ।
ವನಸ್ಪತೀನ್ ಪ್ರಚಿನ್ವಾನಾ ವಿಜಹಾರ ಸಖೀವೃತಾ ॥೮॥

ಅವಳು ಅಲ್ಲಿ ಮನೋರಮವಾದ ಕಾನನ ಭೂಮಿಯನ್ನು ನೋಡುತ್ತಾ ವನಸ್ಪತಿಗಳಿಂದ ಪುಷ್ಪಗಳನ್ನು ಕೀಳುತ್ತಾ ಸಖಿಯರಿಂದ ಕೂಡಿ ವಿಹರಿಸಿದಳು.

ರೂಪೇಣ ವಯಸಾ ಚೈವ ಸುರಾಪಾನಮದೇನ ಚ ।
ಬಭಂಜ ವನವೃಕ್ಷಾಣಾಂ ಶಾಖಾಃ ಪರಮಪುಷ್ಪಿತಾಃ ॥೯॥

ರೂಪದಿಂದಲೂ, ವಯಸ್ಸಿನಿಂದಲೂ, ಸುರಾಪಾನದಿಂದ ಉಂಟಾದ ಮದದಿಂದಲೂ ಕೂಡಿದವಳಾಗಿ ಕಾಡಿನ ವೃಕ್ಷಗಳ ಅರಳಿದ ಹೂಗಳುಳ್ಳ ಕೊಂಬೆಗಳನ್ನು ಮುರಿಯುತ್ತಿದ್ದಳು.

ತಾಂ ಸಖೀರಹಿತಾಮೇಕಾಮ್ ಏಕವಸ್ತ್ರಾಮಲಂಕೃತಾಮ್ ।
ದದರ್ಶ ಭಾರ್ಗವೋ ಧೀಮಾನ್ ಚರಂತೀಮಿವ ವಿದ್ಯುತಮ್ ॥೧೦॥

ಒಮ್ಮೆ ಸಖಿಯರಿಲ್ಲದೆ ಒಬ್ಬಳೇ ಅಲಂಕೃತಳಾಗಿ ಏಕವಸ್ತ್ರವನ್ನು ಧರಿಸಿ ಮಿಂಚಿನ ಬಳ್ಳಿಯಂತೆ ತಿರುಗಾಡುತ್ತಿದ್ದ ಅವಳನ್ನು ಮೇಧಾವಿಗಳಾದ ಭಾರ್ಗವ ಚ್ಯವನರು ನೋಡಿದರು.

ತಾಂ ಪಶ್ಯಮಾನೋ ವಿಜನೇ ಸ ರೇಮೇ ಪರಮದ್ಯುತಿಃ ।
ಕಾಮೋತ್ಕಂಠಶ್ಚ ಬ್ರಹ್ಮರ್ಷಿಃ ತಪೋಬಲಸಮನ್ವಿತಃ ।
ತಾಮಾಬಭಾಷೇ ಕಲ್ಯಾಣೀಂ ಸಾ ಚಾಸ್ಯ ನ ಶೃಣೋತಿ ವೈ ॥೧೧॥

ಪರಮಕಾಂತಿಯುಕ್ತರಾದ ಅವರು ಏಕಾಂತದಲ್ಲಿ ಅವಳನ್ನು ನೋಡುತ್ತಾ ಸಂತೋಷಪಟ್ಟರು. ತಪೋಬಲಸಮನ್ವಿತರಾದ ಬ್ರಹ್ಮರ್ಷಿಗಳಾದ ಅವರು ಕಾಮೋತ್ಕಂಠವನ್ನು ಹೊಂದಿದವರಾಗಿ ಆ ಕಲ್ಯಾಣಿಯನ್ನು ಕುರಿತು ಮಾತನಾಡಿದರು. ಆದರೆ ಅವಳಿಗೆ ಆ ಮಾತುಗಳು ಕೇಳಲಿಲ್ಲ.

ತತಃ ಸುಕನ್ಯಾ ವಲ್ಮೀಕೇ ದೃಷ್ಟ್ವಾ ಭಾರ್ಗವಚುಕ್ಷುಷೀ ।
ಕೌತೂಹಲಾತ್ ಕಂಟಕೇನ ಬುದ್ಧಿಮೋಹಬಲಾತೃತಾ ।
ಕಿಂ ನು ಖಿದ್ದಮಿತ್ಯುಕ್ತ್ವಾ ನಿರ್ಬಿಭೇದಾಸ್ಯ ಲೋಚನೇ ॥೧೨॥

ಆಗ ಸುಕನ್ಯೆಯು ಹುತ್ತದಲ್ಲಿ ಚ್ಯವನರ ಕಣ್ಣುಗಳನ್ನು ನೋಡಿ ಕುತೂಹಲದಿಂದಲೂ ಬುದ್ಧಿಮೋಹದಿಂದಲೂ ಕೂಡಿದವಳಾಗಿ ಇವು ಏನಿರಬಹುದು ಎಂದು ಯೋಚಿಸುತ್ತಾ ಒಂದು ಮುಳ್ಳಿನಿಂದ ಆ ಕಣ್ಣುಗಳನ್ನು ಚುಚ್ಚಿದಳು.

ಆಕ್ರುದ್ಧ್ಯತ್ ಸ ತಯಾ ವಿದ್ಧೋ ನೇತ್ರೇ ಪರಮಮನ್ಯುಮಾನ್ ।
ತತಃ ಶಯ್ಯಾತಿಸೈನ್ಯಸ್ಯ ಶಕೃನ್ಮೂತ್ರೇ ಸಮಾವೃಣೋತ್ ॥೧೩॥

ಪರಮಕೋಪಶೀಲರಾದ ಚ್ಯವನರು ಕಣ್ಣಿಗೆ ಅವಳು ಚುಚ್ಚಿದಾಗ ಕೋಪಗೊಂಡು ಶರ್ಯ್ಯಾತಿ ಸೈನ್ಯದ ಮಲಮೂತ್ರಗಳನ್ನು ಬಂಧಿಸಿದರು.

ತತೋ ರುದ್ಧೇ ಶಕೃನ್ಮೂತ್ರೇ ಸೈನ್ಯಮಾಸೀತ್ ಸುದುಃಖಿತಮ್ ।
ತಥಾಗತಮಭಿಪ್ರೇಕ್ಷ್ಯ ಪರ್ಯತಪ್ಯತ ಪಾರ್ಥಿವಃ ॥೧೪॥

ಮಲಮೂತ್ರಗಳು ಬಂಧಿಸಲ್ಪಡುತ್ತಿರಲು ಸೈನ್ಯಕ್ಕೆ ಬಹಳ ದುಃಖವುಂಟಾಯಿತು. ಸೈನ್ಯದ ಆ ಸ್ಥಿತಿಯನ್ನು ನೋಡಿ ರಾಜನು ಬಹಳ ಪರಿತಪಿಸಿದನು.

ಶರ್ಯಾತಿಃ

ತಪೋನಿತ್ಯಸ್ಯ ವೃದ್ಧಸ್ಯ ಸರೋಷಸ್ಯ ವಿಶೇಷತಃ ।
ಕೇನಾಪಕೃತಮದ್ಯೇಹ ಭಾರ್ಗವಸ್ಯ ಮಹಾತ್ಮನಃ ।
ಜ್ಞಾತಂ ವಾ ಯದಿ ವಾಽಜ್ಞಾತಂ ತದ್ ದ್ರುತಂ ಬ್ರೂತ ಮಾಚಿರಮ್ ॥

ಶರ್ಯಾತಿ– ತಪೋನಿರತರು, ವೃದ್ಧರು, ವಿಶೇಷವಾಗಿ ಕೋಪಿಷ್ಠರು, ಮಹಾನುಭಾವರು ಆದ ಭಾರ್ಗವರಿಗೆ ತಿಳಿದಾಗಲೀ, ತಿಳಿಯದೇ ಆಗಲಿ ಯಾರು ಈ ದಿನ ಇಲ್ಲಿ ಅಪಕಾರವನ್ನು ಮಾಡಿದ್ದೀರಿ? ತಡಮಾಡದೇ ಬೇಗ ಹೇಳಿ.

ಲೋಮಶಃ

ತಮೂಚುಃ ಸೈನಿಕಾಃ ಸರ್ವೇ ನ ವಿದ್ಮೋಽಪಕೃತಂ ವಯಮ್ ।
ಸರ್ವೋಪಾಯೈರ್ಯಥಾಕಾಮಂ ಭವಾಂಸ್ತದಧಿಗಚ್ಛತು ॥೧೬॥

ಲೋಮಶರು– ಆಗ ಸೈನಿಕರೆಲ್ಲರೂ ನಾವು ಯಾವ ಅಪಕಾರವನ್ನೂ ಮಾಡಿಲ್ಲ. ಎಲ್ಲಾ ಉಪಾಯಗಳಿಂದಲೂ ನಿನ್ನ ಮನಸ್ಸಿಗೆ ಬಂದಂತೆ ನೀನು ಪರೀಕ್ಷಿಸಿ ತಿಳಿದುಕೊಳ್ಳಬಹುದು ಎಂದು ಹೇಳಿದರು.

ತತಃ ಸ ಪೃಥಿವೀಪಾಲಃ ಸಾಮ್ನಾ ಚೋಗ್ರೇಣ ಚ ಸ್ವಯಮ್ ।
ಪರ್ಯಪೃಚ್ಛತ್ ಸುಹೃದ್ವರ್ಗಂ ಪ್ರತ್ಯಜಾನನ್ನ ಚೈವ ತೇ ॥೧೭॥

ಆನಂತರ ಆ ರಾಜನು ಮೃದುವಾಗಿ ಮತ್ತು ಉಗ್ರವಾಗಿ ತನ್ನ ಬಂಧುವರ್ಗವನ್ನು ತಾನೇ ಕೇಳಿದನು. ಅವರಿಗೆ ಯಾರಿಗೂ ಈ ವಿಷಯವು ತಿಳಿದಿರಲಿಲ್ಲ.

ಸಾ ತದಾರ್ತಂ ತತೋ ದೃಷ್ಟ್ವಾ ತತ್ ಸೈನ್ಯಮಸುಖಾರ್ದಿತಮ್ ।
ಪಿತರಂ ದುಃಖಿತಂ ಚಾಪಿ ಸುಕನ್ಯೇದಮಥಾಬ್ರವೀತ್ ॥೧೮॥

ಮಯಾಽಟಂತ್ಯೇಹ ವಲ್ಮೀಕೇ ದೃಷ್ಟ್ವಾ ಸತ್ತ್ವಮಭಿಜ್ವಲತ್ ।
ಖದ್ಯೋತವದಭಿಜ್ಞಾತಂ ತನ್ಮಯಾ ವಿದ್ಧಮಂತಿಕಾತ್ ॥೧೯॥

ಆಗ ಸುಕನ್ಯೆಯು ದುಃಖಿತನಾದ ತಂದೆಯನ್ನೂ, ದುಃಖದಿಂದ ಕೂಡಿದ ಆರ್ತವಾದ ಸೈನ್ಯವನ್ನೂ ನೋಡಿ ತಂದೆಯನ್ನು ಕುರಿತು– 'ನಾನು ಇಲ್ಲಿ ತಿರುಗಾಡುತ್ತಾ

ಒಂದು ಹುತ್ತದಲ್ಲಿ ಮಿಣುಕು ಹುಳಗಳಂತೆ ಪ್ರಕಾಶಿಸುತ್ತಿದ್ದ ಎರಡು ವಸ್ತುಗಳನ್ನು ನೋಡಿ ಒಂದು ಮುಳ್ಳಿನಿಂದ ಚುಚ್ಚಿದೆ.

ಏತಚ್ಛ್ರುತ್ವಾ ತು ಶರ್ಯ್ಯಾತಿಃ ವಲ್ಮೀಕಂ ತೂರ್ಣಮಭ್ಯಗಾತ್।
ತತ್ರಾಪಶ್ಯತ್ ತಪೋವೃದ್ಧಂ ಚಂದ್ರಾದಿತ್ಯಸಮಪ್ರಭಮ್ ॥೨೦॥

ಜ್ಞಾನವೃದ್ಧಂ ವಯೋವೃದ್ಧಂ ಯೋಗವೃದ್ಧಂ ಚ ಭಾರ್ಗವಮ್ ।
ಆಯಾಚದಥ ಸೈನ್ಯಾರ್ಥಂ ಪ್ರಾಂಜಲಿಃ ಪೃಥಿವೀಪತಿಃ ॥೨೧॥

ಅಜ್ಞಾನಾದ್ ಬಾಲಯಾ ಯತ್ ತೇ ಕೃತಂ ತತ್ ಕ್ಷಂತುಮರ್ಹಸಿ ।

ಇದನ್ನು ಕೇಳಿದ ಶರ್ಯ್ಯಾತಿಯು ಶೀಘ್ರವಾಗಿ ಹುತ್ತದ ಸಮೀಪಕ್ಕೆ ಬಂದು ತಪೋವೃದ್ಧರೂ, ವಯೋವೃದ್ಧರೂ, ಯೋಗವೃದ್ಧರೂ, ಸೂರ್ಯಚಂದ್ರರಿಗೆ ಸಮಾನವಾದ ಪ್ರಭೆಯುಳ್ಳವರೂ ಆದ ಚ್ಯವನರನ್ನು ನೋಡಿದನು. ಆಗ ರಾಜನು ಸೈನ್ಯದ ಸಲುವಾಗಿ ಕೈಗಳನ್ನು ಮುಗಿದು ನಮಸ್ಕರಿಸಿ ಅಜ್ಞಾನದಿಂದ ನನ್ನ ಮಗಳು ಮಾಡಿದ ಅಪರಾಧವನ್ನು ನೀವು ಕ್ಷಮಿಸಬೇಕು ಎಂದು ಬೇಡಿಕೊಂಡನು.

ತತೋಽಬ್ರವೀನ್ಮಹೀಪಾಲಂ ಚ್ಯವನೋ ಭಾರ್ಗವಸ್ತದಾ ॥೨೨॥

ರೂಪೌದಾರ್ಯಗುಣೈರ್ಯುಕ್ತಾಂ ಲೋಭಮೋಹಬಲಾತೃತಾಮ್ ।
ತಾಮೇವ ಪ್ರತಿಗೃಹ್ಯಾಹಂ ರಾಜನ್ ದುಹಿತರಂ ತವ ।
ಕ್ಷಮಿಷ್ಯಾಮಿ ಮಹೀಪಾಲ ಸತ್ಯಮೇತದ್ ಬ್ರವೀಮಿ ತೇ ॥೨೩॥

ಆಗ ಭಾರ್ಗವ ಚ್ಯವನರು ಆ ರಾಜನನ್ನುಕುರಿತು– 'ರೂಪದಿಂದಲೂ, ಔದಾರ್ಯ ಗುಣಗಳಿಂದಲೂ ಕೂಡಿದ ಲೋಭಮೋಹಗಳಿಗೆ ಒಳಗಾದ ನಿನ್ನ ಮಗಳನ್ನು ಪಾಣಿಗ್ರಹಣ ಮಾಡಿಕೊಂಡೇ ನಾನು ನಿನ್ನನ್ನು ಕ್ಷಮಿಸುವೆನು. ಎಲೈ ರಾಜನೇ, ನಾನು ಸತ್ಯವನ್ನು ಹೇಳುತ್ತಿದ್ದೇನೆ' ಎಂದು ಹೇಳಿದರು.

ಋಷೇರ್ವಚನಮಾಜ್ಞಾಯ ಶರ್ಯ್ಯಾತಿರವಿಚಾರಯನ್ ।
ದದೌ ದುಹಿತರಂ ತಸ್ಮೈ ಚ್ಯವನಾಯ ಮಹಾತ್ಮನೇ ॥೨೪॥

ಋಷಿಗಳ ಮಾತನ್ನು ಕೇಳಿ ಶರ್ಯ್ಯಾತಿಯು ಏನೂ ವಿಚಾರ ಮಾಡದೇ ತನ್ನ ಮಗಳನ್ನು ಮಹಾನುಭಾವರಾದ ಚ್ಯವನರಿಗೆ ಕೊಟ್ಟನು.

ಪ್ರತಿಗೃಹ್ಯ ಚ ತಾಂ ಕನ್ಯಾಂ ಚ್ಯವನಃ ಪ್ರಸಸಾದ ಹ ।
ಪ್ರಾಪ್ತಪ್ರಸಾದೋ ರಾಜರ್ಷಿಃ ಸಸೈನ್ಯಃ ಪುರಮಾವ್ರಜತ್ ॥೨೫॥

ಆ ಕನ್ಯೆಯನ್ನು ಸ್ವೀಕಾರವನ್ನು ಮಾಡಿದ ಚ್ಯವನರು ಪ್ರಸನ್ನರಾದರು. ರಾಜರ್ಷಿಯಾದ ಶರ್ಯ್ಯಾತಿಯು ಅವರ ಅನುಗ್ರಹವನ್ನು ಪಡೆದು ಸೈನ್ಯದ ಜೊತೆಯಲ್ಲಿ ತನ್ನ ಪಟ್ಟಣಕ್ಕೆ ಹಿಂದಿರುಗಿದರು.

ಸುಕನ್ಯಾऽಪಿ ಪತಿಂ ಲಬ್ಧ್ವಾ ತಪಸ್ವಿನಮನಿಂದಿತಾ ।
ನಿತ್ಯಂ ಪರ್ಯಚರತ್ ಪ್ರೀತ್ಯಾ ತಪಸಾ ನಿಯಮೇನ ಚ ॥೨೬॥

ಪರಿಶುದ್ಧಳಾದ ಸುಕನ್ಯೆಯೂ ಕೂಡ ತಪಸ್ವಿಗಳನ್ನು ಪತಿಯನ್ನಾಗಿ ಪಡೆದು ನಿತ್ಯವೂ ಪ್ರೀತಿಯಿಂದಲೂ, ತಪಸ್ಸಿನಿಂದಲೂ ಮತ್ತು ನಿಯಮಗಳಿಂದಲೂ ಅವರನ್ನು ಪರಿಚರಿಸಿದಳು.

ಅಗ್ನೀನಾಮತಿಥೀನಾಂ ಚ ಶುಶ್ರೂಷುರನಸೂಯಕಾ ।
ಸಮಾರಾಧಯತ ಕ್ಷಿಪ್ರಂ ಚ್ಯವನಂ ಸಾ ಶುಚಿಸ್ಮಿತಾ ॥೨೭॥

ಶುಚಿಸ್ಮಿತಳಾದ ಅವಳು ಯಾವ ಅಸೂಯೆಯೂ ಇಲ್ಲದೇ ಅಗ್ನಿಗಳ ಮತ್ತು ಅತಿಥಿಗಳ ಶುಶ್ರೂಷೆಯನ್ನು ಮಾಡುತ್ತಾ ಬಹಳ ಬೇಗ ಚ್ಯವನರನ್ನು ಸಂತೋಷ ಪಡಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವಿಂಶತ್ಯಧಿಕಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತನೆಯ ಅಧ್ಯಾಯ

ಅಶ್ವಿನಿಗಳಿಂದ ಚ್ಯವನರಿಗೆ ವಯೋರೂಪದಾನ. ಅವರಿಗೆ ಸೋಮಪಾನವನ್ನು ಮಾಡಿಸಲು ಚ್ಯವನರ ಪ್ರತಿಜ್ಞೆ.

ಲೋಮಶಃ

ಕಸ್ಯ ಚಿತ್ತ್ವಥ ಕಾಲಸ್ಯ ತ್ರಿದಶಾವಶ್ವಿನೌ ನೃಪ ।
ಕೃತಾಭಿಷೇಕಾಂ ವಿವೃತಾಂ ಸುಕನ್ಯಾಂ ತಾಪಮಶ್ಯತಾಮ್ ॥೧॥

ಲೋಮಶರು– ಎಲೈ ರಾಜನೇ, ಸ್ವಲ್ಪಕಾಲವು ಕಳೆದ ಮೇಲೆ ಅಶ್ವಿನೀದೇವತೆಗಳು ಸ್ನಾನವನ್ನು ಮಾಡಿ ಸ್ವಲ್ಪ ವಿವೃತವಾದ ಶರೀರವುಳ್ಳ ಆ ಸುಕನ್ಯೆಯನ್ನು ನೋಡಿದರು.

ತಾಂ ದೃಷ್ಟ್ವಾ ದರ್ಶನೀಯಾಂಗೀಂ ದೇವರಾಜಸುತಾಮಿವ ।
ಊಚತುಃ ಸಮಭಿದ್ರುತ್ಯ ನಾಸತ್ಯಾವಶ್ವಿನಾವಿದಮ್ ॥೨॥

ಕಸ್ಯ ತ್ವಮಸಿ ವಾಮೋರು ಕಿಂ ವನೇ ವೈ ಚಿಕೀರ್ಷಸಿ ।
ಇಚ್ಛಾವ ಭದ್ರೇ ತ್ವಾಂ ಜ್ಞಾತುಂ ತತ್ತ್ವಮಾಖ್ಯಾಹಿ ಶೋಭನೇ ।

ದೇವೇಂದ್ರನ ಪುತ್ರಿಯಂತಿರುವ ಸುಂದರವಾದ ಅವಯವಗಳುಳ್ಳ ಅವಳನ್ನು ನೋಡಿ ನಾಸತ್ಯರಾದ ಅಶ್ವಿನಿಗಳು ಬೇಗ ಅವಳ ಬಳಿಗೆ ಬಂದು 'ಎಲೌ ವಾಮೋರುವೇ ನೀನು ಯಾರವಳು? ಈ ಕಾಡಿನಲ್ಲಿ ಏನು ಮಾಡುತ್ತಿದ್ದೀಯೇ? ಎಲೌ ಶೋಭನಳೇ, ನಿನ್ನನ್ನು ತಿಳಿಯಲು ನಾವು ಇಚ್ಛಿಸುತ್ತೇವೆ. ಮಂಗಳಸ್ವರೂಪಳೇ, ನಿಜವನ್ನು ಹೇಳು' ಎಂದು ಹೇಳಿದರು.

ತತಃ ಸುಕನ್ಯಾ ಸಂವೀತಾ ತಾಮುವಾಚ ಸುರೋತ್ತಮೌ ॥೩॥

ಶರ್ಯ್ಯಾತಿತನಯಾಂ ವಿತ್ತ ಭಾರ್ಯಾಂ ಚ ಚ್ಯವನಸ್ಯ ಮಾಮ್ ।
ನಾಮ್ನಾ ಚಾಹಂ ಸುಕನ್ಯಾಽಸ್ಮಿ ನೃಲೋಕೇಽಸ್ಮಿನ್ ಪ್ರತಿಷ್ಠಿತಾ ॥೪॥

ಸಾಽಹಂ ಸರ್ವಾತ್ಮನಾ ನಿತ್ಯಂ ಪತಿವ್ರತಸುನಿಷ್ಠಿತಾ ।

ಆಗ ಸುಕನ್ಯೆಯು ವಸ್ತ್ರವನ್ನು ಸರಿಯಾಗಿ ಹೊದ್ದುಕೊಂಡು ದೇವಶ್ರೇಷ್ಠರಾದ ಅವರನ್ನು ಕುರಿತು ನನ್ನನ್ನು ಶರ್ಯ್ಯಾತಿಯ ಮಗಳೆಂದು, ಚ್ಯವನರ ಪತ್ನಿಯೆಂದು

ತಿಳಿಯಿರಿ. ನನ್ನ ಹೆಸರು ಸುಕನ್ಯಾ ಎಂದು ಈ ಭೂಲೋಕದಲ್ಲಿ ಪ್ರಸಿದ್ಧವಾಗಿದೆ. ಅಂತಹ ನಾನು ಯಾವಾಗಲೂ ಸರ್ವರೀತಿಯಿಂದಲೂ ಪತಿವ್ರತಪರಾಯಣಳಾಗಿದ್ದೇನೆ.

ಅಥಾಶ್ವಿನೌ ಪ್ರಹಸ್ಯೈನಾಮಬ್ರೂತಾಂ ಪುನರೇವ ತು ॥೫॥

ಕಥಂ ತ್ವಮಸಿ ಕಲ್ಯಾಣಿ ಪಿತ್ರಾ ದತ್ತಾऽऽಗತಾ ವನೇ ।
ಭ್ರಾಜಸೇ ವನಮಧ್ಯೇऽಸ್ಮಿನ್ ವಿದ್ಯುತ್‌ಸೌದಾಮಿನೀ ಯಥಾ ॥೬॥

ಆಗ ಅಶ್ವಿನಿಗಳು ನಕ್ಕು ಅವಳನ್ನು ಕುರಿತು ಹೀಗೆ ಹೇಳಿದರು- 'ಎಲೌ ಕಲ್ಯಾಣಿಯೇ, ನಿನ್ನ ತಂದೆಯು ನಿನ್ನನ್ನು ಕೊಟ್ಟು ಹೇಗೆ ನೀನು ಕಾಡಿಗೆ ಬಂದಿದ್ದೀಯೆ? ಈ ಕಾಡಿನ ಮಧ್ಯದಲ್ಲಿ ನೀನು ಮೋಡದ ಮಧ್ಯದಲ್ಲಿರುವ ಮಿಂಚಿನಂತೆ ಹೊಳೆಯುತ್ತಿದ್ದೀಯೆ.

ನ ದೇವೇಷ್ವಪಿ ತುಲ್ಯಾಂ ಹಿ ತವ ಪಶ್ಯಾವ ಭಾಮಿನಿ ॥೭॥

ಅನಾಭರಣಸಂಪನ್ನಾ ಪರಮಾಂಬರವರ್ಜಿತಾ ।
ಶೋಭಸೇ ಹ್ಯಧಿಕಂ ಭದ್ರೇ ಏವಮಪ್ಯನಲಂಕೃತಾ ॥೮॥

ಭಾಮಿನಿಯೇ, ದೇವತೆಗಳಲ್ಲಿಯೂ ಸಹ ನಿನ್ನ ರೂಪಕ್ಕೆ ಸಮಾನವಾದ ರೂಪವನ್ನು ನಾವು ಕಾಣಲಾರೆವು. ಎಲೌ ಮಂಗಳಸ್ವರೂಪಳೇ, ಆಭರಣಗಳನ್ನು ಧರಿಸದೇ, ಒಳ್ಳೆಯ ವಸ್ತ್ರಗಳನ್ನು ಉಡದೇ, ಅಲಂಕಾರ ಮಾಡಿಕೊಳ್ಳದೇ ಇದ್ದರೂ ನೀನು ಬಹಳವಾಗಿ ಬೆಳಗುತ್ತಿದ್ದೀಯೆ.

ಸರ್ವಾಭರಣಸಂಪನ್ನಾ ಪರಮಾಂಬರಧಾರಿಣೀ ।
ಶೋಭಸೇ ತ್ವನವದ್ಯಾಂಗಿ ನ ತ್ವೇವ ಮಲಪಂಕಿನೀ ॥೯॥

ಎಲೌ ಅನವದ್ಯಾಂಗಿಯೇ, ನೀನು ಸರ್ವಾಭರಣಭೂಷಿತಳಾಗಿ ಒಳ್ಳೆಯ ವಸ್ತ್ರಗಳನ್ನು ಧರಿಸಿದವಳಾಗಿ ಶೋಭಿಸುತ್ತೀಯೆ. ಹೀಗೆ ಕಶ್ಮಲವಾದ ಶರೀರವನ್ನು ಧರಿಸಿರುವುದು ನಿನಗೆ ಶೋಭಿಸುವುದಿಲ್ಲ.

ಕಸ್ಮಾದೇವಂವಿಧಾ ಭೂತ್ವಾ ಜರಯಾ ಜರ್ಝರಂ ಪತಿಮ್ ।
ತ್ವಮುಪಾಸ್ಸೇ ಹ ಕಲ್ಯಾಣಿ ಕಾಮಭೋಗಬಹಿಷ್ಕೃತಮ್ ॥೧೦॥

ಎಲೌ ಕಲ್ಯಾಣಿಯೇ, ಇಂತಹ ರೂಪವನ್ನು ಹೊಂದಿದವಳಾಗಿ ನೀನು ಮುಪ್ಪಿನಿಂದ ಮುದುಡಿಹೋದ ಶರೀರವುಳ್ಳ ಕಾಮಭೋಗವಿವರ್ಜಿತನಾದ ಪತಿಯನ್ನು ಏನು ಉಪಾಸನೆ ಮಾಡುತ್ತಿದ್ದೀಯೆ?

ಅಸಮರ್ಥಂ ಪರಿತ್ರಾಣೇ ಪೋಷಣೇ ಚ ಶುಚಿಸ್ಮಿತೇ ।
ಸಾಧು ಚ್ಯವನಮುತ್ಸೃಜ್ಯ ವರಯಸ್ವೈಕಮಾವಯೋಃ ।
ಪತ್ಯರ್ಥಂ ದೇವಗರ್ಭಾಭೇ ಮಾ ವೃಥಾ ಯೌವನಂ ಕೃಥಾಃ ॥೧೧॥

ಎಲೌ ಶುಚಿಸ್ಮಿತೆಯೇ, ಅವನು ನಿನ್ನನ್ನು ರಕ್ಷಣೆ ಮಾಡುವುದಕ್ಕಾಗಲೀ, ಪೋಷಣೆ ಮಾಡುವುದಕ್ಕಾಗಲೀ ಸಮರ್ಥನಲ್ಲ. ಎಲೌ ದೇವಗರ್ಭಸದೃಶಳೇ, ಆದ್ದರಿಂದ ಒಳ್ಳೆಯ ರೀತಿಯಲ್ಲಿ ಚ್ಯವನನ್ನು ಬಿಟ್ಟುನಮ್ಮಲ್ಲಿ ಒಬ್ಬರನ್ನು ಪತಿಯಾಗಿ ವರಿಸು. ನಿನ್ನ ಯೌವನವನ್ನು ವ್ಯರ್ಥಮಾಡಿಕೊಳ್ಳಬೇಡ (ಎಂದು ಹೇಳಿದರು).

ಏವಮುಕ್ತಾ ಸುಕನ್ಯಾ ತು ಸುರೌ ತಾವಿದಮಬ್ರವೀತ್ ।
ರತಾऽಹಂ ಚ್ಯವನೇ ಪತ್ಯೌ ಮೈವಂ ಮಾಂ ಪರಿಶಂಕತಮ್ ॥೧೨॥

ಹೀಗೆ ಹೇಳಲ್ಪಟ್ಟ ಸುಕನ್ಯೆಯು ಆ ದೇವತೆಗಳನ್ನು ಕುರಿತು ನಾನು ನನ್ನ ಪತಿಯಾದ ಚ್ಯವನರಲ್ಲಿ ತುಂಬಾ ಪ್ರೀತಿಯುಳ್ಳವಳಾಗಿದ್ದೇನೆ. ನೀವು ನನ್ನನ್ನು ಹೀಗೆ ಶಂಕಿಸಬಾರದು ಎಂದು ಹೇಳಿದಳು.

ತಾವಬ್ರೂತಾಂ ಪುನರ್ಹೈನಾಮಾವಾಂ ದೇವಭಿಷಗ್ವರೌ ।
ಯುವಾನಂ ರೂಪಸಂಪನ್ನಂ ಕರಿಷ್ಯಾವಃ ಪತಿಂ ತವ ॥೧೩॥

ತತಸ್ತ್ಯಾವಯೋರ್ಹ್ಯೇವ ಪತಿಮನ್ಯತಮಂ ವೃಣು ।
ಏತೇನ ಸಮಯೇನೈನಮಾಮಂತ್ರಯ ಸುಮಧ್ಯಮೇ ॥೧೪॥

ಅವರಿಬ್ಬರೂ ಅವಳನ್ನು ಕುರಿತು ಪುನಃ ನಾವು ದೇವವೈದ್ಯರು. ನಿನ್ನ ಪತಿಯನ್ನು ಯುವಕನನ್ನಾಗಿಯೂ, ರೂಪಸಂಪನ್ನನಾಗಿಯೂ ಮಾಡುವೆವು. ಅನಂತರ ನೀನು ಚ್ಯವನ ಅಥವಾ ನಮ್ಮಿಬ್ಬರಲ್ಲಿ ಯಾವನನ್ನಾದರೂ ಒಬ್ಬರನ್ನು ಪತಿಯನ್ನಾಗಿ ವರಿಸು. ಎಲೌ ಸುಮಧ್ಯಮಳೇ, ಈ ನಿಯಮದಂತೆ ನಿನ್ನ ಪತಿಯನ್ನು ಆಮಂತ್ರಿಸು ಎಂದು ಹೇಳಿದರು.

ಸಾ ತಯೋರ್ವಚನಾದ್ ರಾಜನ್ನುಪಸಂಗಮ್ಯ ಭಾರ್ಗವಮ್ ।
ಉವಾಚ ತಾಭ್ಯಾಂ ಯದ್ವಾಕ್ಯಮುಕ್ತಂ ಭೃಗುಸುತಂ ಪ್ರತಿ ॥೧೫॥

ಎಲೈ ರಾಜನೇ, ಅವಳು ಅವರ ಮಾತಿನಂತೆ ಭಾರ್ಗವರನ್ನು ಸಮೀಪಿಸಿ ಅವರಿಬ್ಬರೂ ಚ್ಯವನರ ಬಗ್ಗೆ ಹೇಳಿದ ಮಾತನ್ನು ಅವರಿಗೆ ತಿಳಿಸಿದಳು.

ತಚ್ಛ್ರುತ್ವಾ ಚ್ಯವನೋ ಭಾರ್ಯಾಮುವಾಚ ಕ್ರಿಯತಾಮಿತಿ ।
ಸ ಭರ್ತ್ರಾ ಸಮನುಜ್ಞಾತಾ ಕ್ರಿಯತಾಮಿತ್ಯಥಾಬ್ರವೀತ್ ॥೧೬॥

ಅದನ್ನು ಕೇಳಿದ ಚ್ಯವನರು ಹೆಂಡತಿಯನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು. ಪತಿಯ ಅನುಜ್ಞೆಯನ್ನು ಪಡೆದ ಸುಕನ್ಯೆಯು ಅಶ್ವಿನೀದೇವತೆಗಳಿಗೆ ಹಾಗೆಯೇ ಮಾಡಿ ಎಂದು ಹೇಳಿದಳು.

ಶ್ರುತ್ವಾ ತದಶ್ವಿನೌ ವಾಕ್ಯಂ ತಸ್ಯಾಸ್ತತ್ಕ್ರಿಯತಾಮಿತಿ ।
ಊಚತೂ ರಾಜಪುತ್ರೀಂ ತಾಂ ಪತಿಸ್ತವ ವಿಶತ್ವಪಃ ॥೧೭॥

ಹಾಗೆಯೇ ಮಾಡಿ ಎಂದು ಹೇಳಿದ ಅವಳ ಮಾತುಗಳನ್ನು ಕೇಳಿದ ಅಶ್ವಿನೀದೇವತೆಗಳು ಆ ರಾಜಪುತ್ರಿಯನ್ನು ಕುರಿತು ನಿನ್ನ ಪತಿಯು ಈ ಸರೋವರದ ಜಲವನ್ನು ಪ್ರವೇಶಿಸಲಿ ಎಂದು ಹೇಳಿದರು.

ತತೋಽಂಭಶ್ಚ್ಯವನಃ ಶೀಘ್ರಂ ರೂಪಾರ್ಥೀ ಪ್ರವಿವೇಶ ತತ್ ।
ಅಶ್ವಿನಾವಪಿ ತದ್ ರಾಜನ್ ಸರಃ ಪ್ರಾವಿಶತಾಂ ವಿಭೋ ॥೧೮॥

ಆಗ ರೂಪಾರ್ಥಿಯಾದ ಚ್ಯವನರು ಶೀಘ್ರವಾಗಿ ಆ ಜಲವನ್ನು ಪ್ರವೇಶಿಸಿದರು. ಎಲೈ ರಾಜನೇ, ಎಲೈ ವಿಭುವೇ, ಅಶ್ವಿನಿಗಳೂ ಸಹ ಆ ಸರೋವರವನ್ನು ಪ್ರವೇಶಿಸಿದರು.

ತತೋ ಮುಹೂರ್ತಾದುತ್ಥಿತಾಃ ಸರ್ವೇ ತೇ ಸರಸಸ್ತ್ರಯಃ ।
ದಿವ್ಯರೂಪಧರಾಃ ಸರ್ವೇ ಯುವಾನೋ ಮೃಷ್ಟಕುಂಡಲಾಃ ।
ತುಲ್ಯರೂಪಧರಾಶ್ಚೈವ ಮನಸಃ ಪ್ರೀತಿವರ್ಧನಾಃ ॥೧೯॥

ಒಂದು ಮುಹೂರ್ತವು ಕಳೆದ ಮೇಲೆ ಮೂರು ಜನರೂ ದಿವ್ಯರೂಪವನ್ನು ಧರಿಸಿ ಯುವಕರಾಗಿ, ಹೊಳೆಯುವ ಕುಂಡಲವನ್ನು ಧರಿಸಿ, ಸಮಾನರೂಪವನ್ನು ಧರಿಸಿ,

ಮನಸ್ಸಿಗೆ ಸಂತೋಷವನ್ನು ಉಂಟುಮಾಡುವವರಾಗಿ ಆ ಸರೋವರದಿಂದ ಮೇಲೆದ್ದರು.

ತೇಽಬ್ರುವನ್ ಸಹಿತಾಃ ಸರ್ವೇ ವೃಣೀಷ್ವಾನ್ಯತಮಂ ಶುಭೇ ।
ಅಸ್ಮಾಕಮೀಪ್ಸಿತಂ ಭದ್ರೇ ಪತಿತ್ವೇ ವರವರ್ಣಿನಿ ॥೨೦॥

ತ್ವಮಶ್ವಿನೋರನ್ಯತಮಂ ಚ್ಯವನಂ ವಾ ಯಶಸ್ವಿನಿ ।
ಯತ್ರ ವಾಽಪ್ಯಭಿಕಾಮಾಽಸಿ ತಂ ವೃಣೀಷ್ವ ಶುಭಾನನೇ ॥೨೧॥

ಅವಳನ್ನು ಕುರಿತು ಎಲೌ ಶುಭಳೇ, ಸುಂದರಿಯೇ, ನಮ್ಮ ಮೂವರಲ್ಲಿ ನಿನಗೆ ಇಷ್ಟವಾದ ಒಬ್ಬನನ್ನು ಪತಿಯಾಗಿ ವರಿಸು. ಎಲೌ ಯಶಸ್ವಿನಿಯೇ, ನೀನು ಅಶ್ವಿನಿಗಳಲ್ಲಿ ಒಬ್ಬರನ್ನಾಗಲೀ ಅಥವಾ ಚ್ಯವನರನ್ನಾಗಲೀ ನಿನ್ನ ಮನಸ್ಸು ಹೇಗೆ ಆಸೆಪಡುತ್ತದೆಯೋ, ಅದರಂತೆ ಒಬ್ಬನನ್ನು ವರಿಸು ಎಂದು ಹೇಳಿದರು.

ಸಾ ಸಮೀಕ್ಷ್ಯ ತು ತಾನ್ ಸರ್ವಾನ್ ತುಲ್ಯರೂಪಧರಾನ್ ಸ್ಥಿತಾನ್ ।
ನಿಶ್ಚಿತ್ಯ ಮನಸಾ ಬುದ್ಧ್ಯಾ ತತೋ ವವ್ರೇ ಸ್ವಕಂ ಪತಿಮ್ ।
ತಸ್ಯೈ ದೇವಾಶ್ಚ ಸಂತುಷ್ಟಾಃ ಚ್ಯವನಂ ತಂ ಪತಿಂ ದದುಃ ॥೨೨॥

ಅವಳು ಅವರೆಲ್ಲರೂ ಸಮಾನವಾದ ರೂಪವನ್ನು ಧರಿಸಿ ನಿಂತಿರುವುದನ್ನು ನೋಡಿ ಮನಸ್ಸಿನಿಂದಲೂ ಬುದ್ಧಿಯಿಂದಲೂ ನಿಶ್ಚಯಿಸಿ ತನ್ನ ನಿಜವಾದ ಪತಿಯನ್ನೇ ವರಿಸಿದಳು. ಅಶ್ವಿನೀದೇವತೆಗಳು ಸಂತುಷ್ಟರಾಗಿ ಅವಳಿಗೆ ಚ್ಯವನರನ್ನು ಪತಿಯನ್ನಾಗಿ ಕೊಟ್ಟರು.

ಲಬ್ಧ್ವಾ ತು ಚ್ಯವನೋ ಭಾರ್ಯಾಂ ವಯೋ ರೂಪಂ ಚ ವಾಂಛಿತಮ್
ಹೃಷ್ಟೋಽಬ್ರವೀನ್ಮಹಾತೇಜಾಃ ತೌ ನಾಸತ್ಯಾವಿದಂ ವಚಃ ॥೨೩॥

ಯಥಾಽಹಂ ರೂಪಸಂಪನ್ನೋ ವಯಸಾ ಚ ಸಮನ್ವಿತಃ ।
ಕೃತೋ ಭವದ್ಭ್ಯಾಂ ವೃದ್ಧಃ ಸನ್ ಭಾರ್ಯಾಂ ಚ ಪ್ರಾಪ್ತವಾನಿಮಾಮ್ ॥
ತಸ್ಮಾದ್ ಯುವಾಂ ಕರಿಷ್ಯಾಮಿ ಪ್ರೀತೋಽಹಂ ಸೋಮಪೀಥಿನೌ ।
ಮಿಷತೋ ದೇವರಾಜಸ್ಯ ಸತ್ಯಮೇತದ್ ಬ್ರವೀಮಿ ವಾಮ್ ॥೨೫॥

ಚ್ಯವನರಾದರೂ ಭಾರ್ಯೆಯನ್ನೂ ಅಭೀಷ್ಟವಾದ ರೂಪಯೌವನಗಳನ್ನೂ ಪಡೆದು ಮಹಾತೇಜಸ್ವಿಗಳಾದ ಅವರು ಸಂತುಷ್ಟರಾಗಿ ಅಶ್ವಿನೀದೇವತೆಗಳನ್ನು ಕುರಿತು ನಾನು ವೃದ್ಧನಾಗಿದ್ದರೂ ನೀವು ನನ್ನನ್ನು ರೂಪಯೌವನಸಂಪನ್ನನಾಗಿರುವಂತೆ ಮಾಡಿದಿರಿ. ನಿಮ್ಮಿಂದ ಈ ನನ್ನ ಭಾರ್ಯೆಯನ್ನು ಪಡೆದಿದ್ದೇನೆ. ಆದ್ದರಿಂದ ನಾನು ದೇವರಾಜನ ಕಣ್ಣೆದುರಿಗೇ ನಿಮ್ಮನ್ನು ಸೋಮಪಾನಾರ್ಹರನ್ನಾಗಿ ಮಾಡುವೆನು. ನಾನು ನಿಮ್ಮಿಬ್ಬರನ್ನು ಕುರಿತು ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇನೆ.

ತಚ್ಛ್ರುತ್ವಾ ಹೃಷ್ಟಮನಸೌ ದಿವಂ ತೌ ಪ್ರತಿದಗ್ಮತುಃ ।
ಚ್ಯವನಶ್ಚ ಸುಕನ್ಯಾ ಚ ಸುರಾವಿವ ವಿಜಹ್ರತುಃ ॥೨೬॥

ಅದನ್ನು ಕೇಳಿದ ಅಶ್ವಿನೀದೇವತೆಗಳು ಸಂತೋಷಗೊಂಡ ಮನಸ್ಸಿನಿಂದ ಸ್ವರ್ಗಕ್ಕೆ ಹೊರಟು ಹೋದರು. ಚ್ಯವನ ಮತ್ತು ಸುಕನ್ಯೆಯರು ದೇವತೆಗಳಿಂದ ವಿಹರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಟ್‌ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೊಂದನೆಯ ಅಧ್ಯಾಯ

ಶರ್ಯ್ಯಾತಿಯ ಯಾಗದಲ್ಲಿ ಇಂದ್ರನ ಬಾಹುಸ್ಥಂಭನ. ಕೃತ್ಯಾಸೃಷ್ಟಿ. ಚ್ಯವನರ ಅನುಗ್ರಹ ಮತ್ತು ಆರ್ಚೀಕಪರ್ವತದ ಮಹಿಮೆ.

ಲೋಮಶಃ

ತತಃ ಶ್ರುತ್ವಾ ತು ಶರ್ಯ್ಯಾತಿರ್ವಯಸ್ಥಂ ಚ್ಯವನಂ ಕೃತಮ್ ।
ಪ್ರಹೃಷ್ಟಃ ಸೇನಯಾ ಸಾರ್ಧಮುಪಾಯಾದ್ ಭಾರ್ಗವಾಶ್ರಮಮ್ ॥೧॥

ಲೋಮಶ– ಅನಂತರ ಶರ್ಯ್ಯಾತಿಯು ಚ್ಯವನರು ಯುವಕರಾಗಿ ಮಾಡಲ್ಪಟ್ಟದ್ದಾರೆಂದು ಕೇಳಿ ಸಂತುಷ್ಟನಾಗಿ ಸೈನ್ಯದ ಜೊತೆಯಲ್ಲಿ ಅವರ ಆಶ್ರಮಕ್ಕೆ ಬಂದನು.

ಚ್ಯವನಂ ಚ ಸುಕನ್ಯಾಂ ಚ ದೃಷ್ಟ್ವಾ ದೇವಸುತಾವಿವ ।
ರೇಮೇ ಮಹೀಪಃ ಶರ್ಯ್ಯಾತಿಃ ಕೃತ್ಸ್ನಾಂ ಪ್ರಾಪ್ಯ ಮಹೀಮಿವ ॥೨॥

ಚ್ಯವನ ಮತ್ತು ಸುಕನ್ಯೆಯರು ದೇವಕುಮಾರರಂತಿರುವುದನ್ನು ನೋಡಿದ ಶರ್ಯ್ಯಾತಿ ರಾಜನು ಸಮಗ್ರವಾದ ಭೂಮಿಯನ್ನು ಪಡೆದವನಂತೆ ಸಂತೋಷ ಪಟ್ಟನು.

ಋಷಿಣಾ ಸತ್ಕೃತಸ್ತೇನ ಸಭಾರ್ಯಃ ಪೃಥಿವೀಪತಿಃ ।
ಉಪೋಪವಿಷ್ಟಃ ಕಲ್ಯಾಣೀಃ ಕಥಾಶ್ಚಕ್ರೇ ಮಹಾಮನಾಃ ॥೩॥

ಚ್ಯವನರಿಂದ ಸತ್ಕೃತನಾದ ರಾಜನು ತನ್ನ ಭಾರ್ಯೆಯ ಜೊತೆಯಲ್ಲಿ ಋಷಿಗಳ ಸಮೀಪದಲ್ಲಿ ಕುಳಿತು ಉತ್ಸಾಹವುಳ್ಳ ಮನಸ್ಸಿನಿಂದ ಶುಭವಾದ ಮಾತುಗಳನ್ನು ಆಡಿದನು.

ಅಥೈನಂ ಭಾರ್ಗವೋ ರಾಜನ್ನುವಾಚ ಪರಿಸಾಂತ್ವಯನ್ ।
ಯಾಜಯಿಷ್ಯಾಮಿ ರಾಜಂಸ್ತ್ವಾ ಸಂಭಾರಾನುಪಕಲ್ಪಯ ॥೪॥

ಎಲೈ ರಾಜನೇ, ಆಗ ಭಾರ್ಗವ ಚ್ಯವನರು ಅವನನ್ನು ಸಮಾಧಾನ ಪಡಿಸುತ್ತಾ, ರಾಜನೇ, ನಿನಗೆ ಯಾಗವನ್ನು ಮಾಡಿಸುವೆನು. ಸಾಮಗ್ರಿಗಳನ್ನು ಅಣಿಗೊಳಿಸು ಎಂದು ಹೇಳಿದರು.

ತತಃ ಪರಮಸಂಹೃಷ್ಟಃ ಶರ್ಯ್ಯಾತಿಃ ಪೃಥಿವೀಪತಿಃ ।
ಚ್ಯವನಸ್ಯ ಮಹಾರಾಜ ತದ್ವಾಕ್ಯಂ ಪ್ರತ್ಯಪೂಜಯತ್ ॥೫॥

ಎಲೈ ಮಹಾರಾಜನೇ, ಆಗ ಪರಮಸಂತೋಷದಿಂದ ಯುಕ್ತನಾದ ಶರ್ಯ್ಯಾತಿ ರಾಜನು ಚ್ಯವನರ ಆ ವಾಕ್ಯವನ್ನು ಸಮ್ಮಾನಿಸಿದನು.

ಪ್ರಶಸ್ತೇऽಹನಿ ಯಾಜ್ಞೀಯೇ ಸರ್ವಕಾಮಸಮೃದ್ಧಿಮತ್ ।
ಕಾರಯಾಮಾಸ ಶರ್ಯಾತಿರ್ಯಜ್ಞಾಯತನಮುತ್ತಮಮ್ ॥೬॥

ಒಂದು ಪ್ರಶಸ್ತವಾದ ದಿನದಲ್ಲಿ ಶರ್ಯ್ಯಾತಿಯು ಸರ್ವಾಪೇಕ್ಷಿತ ಪದಾರ್ಥಗಳಿಂದ ತುಂಬಿದ್ದ ಶ್ರೇಷ್ಠವಾದ ಯಜ್ಞಶಾಲೆಯನ್ನು ನಿರ್ಮಾಣ ಮಾಡಿಸಿದನು.

ತತ್ರೈನಂ ಚ್ಯವನೋ ರಾಜನ್ ಯಾಜಯಾಮಾಸ ಭಾರ್ಗವಃ ।
ಆತ್ಮದ್ಯುತಾನಿ ತತ್ರಾಸನ್ ಯಾನಿ ತಾನಿ ನಿಬೋಧ ಮೇ ॥೭॥

ಎಲೈ ರಾಜನೇ, ಅಲ್ಲಿ ಭಾರ್ಗವರಾದ ಚ್ಯವನರು ಅವನಿಂದ ಯಾಗವನ್ನು ಮಾಡಿಸಿದರು. ಅಲ್ಲಿ ನಡೆದ ಅದ್ಭುತವಾದ ಘಟನೆಗಳನ್ನು ಹೇಳುತ್ತೇನೆ ಕೇಳು.

ಅಗೃಹ್ಣಾಚ್ಚ್ಯವನಃ ಸೋಮಮಶ್ವಿನೋರ್ದೇವಯೋಸ್ತದಾ ।
ತಮಿಂದ್ರೋ ವಾರಯಾಮಾಸ ಗೃಹ್ಯಮಾಣಂ ತಯೋರ್ಗ್ರಹಮ್ ॥೮॥

ಉಭಾವೇತೌ ನ ಸೋಮಾರ್ಹೌ ನಾಸತ್ಯಾವಿತಿ ಮೇ ಮತಿಃ ।
ಭಿಷಜೌ ದೇವತಾನಾಂ ಹಿ ಪಾತುಂ ಸೋಮಂ ನಚಾರ್ಹತಃ ॥೯॥

ಚ್ಯವನರು ಅಶ್ವಿನೀದೇವತೆಗಳಿಗೆ ಕೊಡಲು ಸೋಮವನ್ನು ಕೈಯಲ್ಲಿ ತೆಗೆದುಕೊಂಡರು. ಅವರು ಸೋಮಪಾತ್ರೆಯನ್ನು ತೆಗೆದುಕೊಳ್ಳುವಷ್ಟರಲ್ಲಿ ಇಂದ್ರನು ಅಶ್ವಿನೀದೇವತೆಗಳಿಬ್ಬರೂ ಸೋಮಪಾನಾರ್ಹರಲ್ಲವೆಂದು ನನ್ನ ಅಭಿಪ್ರಾಯ. ಅವರು ದೇವತೆಗಳ ವೈದ್ಯರು. ಆದ್ದರಿಂದ ಸೋಮಪಾನಕ್ಕೆ ಅರ್ಹರಲ್ಲ ಎಂದು ಚ್ಯವನರನ್ನು ತಡೆದನು.

ಚ್ಯವನಃ

ಮಾಽವಮಂಸ್ಥಾ ಮಹಾತ್ಮಾನೌ ರೂಪದ್ರವಿಣವತ್ತಮೌ ।
ಯೌ ಚಕ್ರತುರ್ಮಾ ಮಘವನ್ ವೃಂದಾರಕಮಿವಾಜರಮ್ ॥೧೦॥

ಋತೇ ತ್ವಾಂ ವಿಬುಧಾಂಶ್ಚಾನ್ಯಾನ್ ಕಥಂ ವೈ ನಾರ್ಹತಃ ಸ್ವಯಮ್ ।
ಅಶ್ವಿನಾವಪಿ ದೇವೇಂದ್ರ ದೇವೌ ವಿದ್ಧಿ ಪುರಂದರ ॥೧೧॥

ಚ್ಯವನರು– ಎಲೈ ಇಂದ್ರನೇ, ಯಾವ ಮಹಾತ್ಮರಾದ ರೂಪದ್ರವಿಣ ಸಂಪನ್ನರಾದ ಅಶ್ವಿನಿಗಳು ನನ್ನನ್ನು ದೇವತೆಯಂತೆ ಅಜರನನ್ನಾಗಿ ಮಾಡಿದ್ದಾರೆಯೋ ಅವರನ್ನು ಅವಮಾನಗೊಳಿಸಬೇಡ. ನಿನ್ನನ್ನು ಮತ್ತು ಉಳಿದ ದೇವತೆಗಳನ್ನು ಬಿಟ್ಟ ಮೇಲೆ, ಎಲೈ ದೇವೇಂದ್ರನೇ, ಅಶ್ವಿನಿದೇವತೆಗಳು ಸ್ವತಃ ಸೋಮಪಾನಕ್ಕೆ ಅರ್ಹರಾಗುತ್ತಾರೆ. ಪುರಂದರನೇ ಈ ವಿಷಯವನ್ನು ತಿಳಿ.

ಇಂದ್ರಃ

ಚಿಕಿತ್ಸಕೌ ಕರ್ಮಕರೌ ಕಾಮರೂಪಸಮನ್ವಿತೌ ।
ಲೋಕೇ ಚರಂತೌ ಮರ್ತ್ಯಾನಾಂ ಕಥಂ ಸೋಮಮಿಹಾರ್ಹತಃ ॥೧೨॥

ಇಂದ್ರ– ವೈದ್ಯರೂ, ಕರ್ಮಕಾರರೂ, ಮನಸ್ಸಿಗೆ ಬಂದ ರೂಪವನ್ನು ಸ್ವೀಕರಿಸುವವರೂ, ಮನುಷ್ಯಲೋಕದಲ್ಲಿ ಸಂಚರಿಸುವವರೂ ಆದ ಇವರು ಹೇಗೆ ಸೋಮಕ್ಕೆ ಅರ್ಹರಾಗುತ್ತಾರೆ?

ಲೋಮಶಃ

ಏತದೇವ ತದಾ ವಾಕ್ಯಮಾಮ್ರೇಡಯತಿ ವಾಸವೇ ।
ಆನಾದೃತ್ಯ ತತಃ ಶಕ್ರಂ ಗ್ರಹಂ ಜಗ್ರಾಹ ಭಾರ್ಗವಃ ॥೧೩॥

ಲೋಮಶ– ಇಂದ್ರನು ಈ ಮಾತನ್ನು ಮತ್ತೆ ಮತ್ತೆ ಆಡುತ್ತಿರಲು ಚ್ಯವನರು ಆ ಮಾತುಗಳನ್ನು ಪರಿಗಣಿಸದೇ ತಮ್ಮ ಹಸ್ತದಿಂದ ಗ್ರಹವನ್ನು ಸ್ವೀಕರಿಸಿದರು.

ಗೃಹೀಷ್ಯಂತಂ ತು ತಂ ಸೋಮಮಶ್ವಿನೋರುತ್ತಮಂ ತದಾ ।
ಸಮೀಕ್ಷ್ಯ ಬಲಭಿದ್ ದೇವ ಇದಂ ವಚನಮಬ್ರವೀತ್ ॥೧೪॥

ಆಭ್ಯಾಮರ್ಥಾಯ ಸೋಮಂ ತ್ವಂ ಗ್ರಹೀಷ್ಯಸಿ ಯದಿ ಸ್ವಯಮ್ ।
ವಜ್ರಂ ತೇ ಪ್ರಹರಿಷ್ಯಾಮಿ ಘೋರರೂಪಂ ಭೃಗೂದ್ವಹ ॥೧೫॥

ಅಶ್ವಿನೀದೇವತೆಗಳಿಗೆ ಸೋಮವನ್ನು ಕೊಡಲು ಗ್ರಹವನ್ನು ತೆಗೆದುಕೊಳ್ಳುತ್ತಿದ್ದ ಚ್ಯವನರನ್ನು ನೋಡಿ ಬಲಸೂದನನಾದ ಇಂದ್ರನು ಭೃಗೂದ್ವಹರೇ, ಅಶ್ವಿನೀದೇವತೆಗಳಿಗಾಗಿ ನೀವು ಸೋಮಗ್ರಹಣವನ್ನು ಮಾಡುವುದಾದರೆ ನಾನು ಘೋರವಾದ ವಜ್ರಾಯುಧವನ್ನು ನಿಮ್ಮ ಮೇಲೆ ಪ್ರಹರಿಸುವೆನು ಎಂದು ಹೇಳಿದನು.

ಏವಮುಕ್ತಃ ಸ್ಥಯನ್ತಿಂದ್ರಮಭಿವೀಕ್ಷ್ಯ ಸ ಭಾರ್ಗವಃ ।
ಜಗ್ರಾಹ ವಿಧಿವತ್ ಸೋಮಮಶ್ವಿಭ್ಯಾಮುತ್ತಮಂ ಗ್ರಹಮ್ ॥೧೬॥

ಹೀಗೆ ಹೇಳಲ್ಪಟ್ಟ ಚ್ಯವನರು ಇಂದ್ರನನ್ನು ನೋಡಿ ನಗುತ್ತಾ ವಿಧಿಪೂರ್ವಕವಾಗಿ ಅಶ್ವಿನಿಗಳಿಗೆ ಉತ್ತಮವಾದ ಸೋಮವನ್ನು ಕೊಡಲು ಗ್ರಹ(ಸೋಮಪಾತ್ರ)ಯನ್ನು ಹಿಡಿದರು.

ತತೋಽಸ್ತ್ರಂ ಪ್ರತಿಜಗ್ರಾಹ ಘೋರರೂಪಂ ಶಚೀಪತಿಃ ।
ತಸ್ಯ ಪ್ರಹರತೋ ಬಾಹುಂ ಸ್ತಂಭಯಾಮಾಸ ಭಾರ್ಗವಃ ॥೧೭॥

ಆಗ ಶಚೀಪತಿಯು ಘೋರವಾದ ಆಕಾರವುಳ್ಳ ತನ್ನ ವಜ್ರಾಯುಧವನ್ನು ಹಿಡಿದನು. ಚ್ಯವನರು ತಮ್ಮ ಮೇಲೆ ಪ್ರಯೋಗಿಸಲು ಉದ್ಯುಕ್ತವಾದ ಅವನ ಬಾಹುವನ್ನು ಸ್ತಂಭನ ಮಾಡಿದರು.

ಸಂಸ್ತಂಭಯಿತ್ವಾ ಚ್ಯವನೋ ಜುಹುವೇ ಮಂತ್ರತೋಽನಲಮ್ ।
ಕೃತ್ಯಾರ್ಥೀ ಸುಮಹಾತೇಜಾ ದೇವಂ ಹಿಂಸಿತುಮುದ್ಯತಃ ॥೧೮॥

ಚ್ಯವನರು ಅವನ ಬಾಹುವನ್ನು ಸ್ತಂಭಿಸಿ ಮಂತ್ರದಿಂದ ಅಗ್ನಿಯಲ್ಲಿ ಹೋಮವನ್ನು ಮಾಡಿ ಇಂದ್ರನನ್ನು ಹಿಂಸಿಸುವ ಮಹಾತೇಜಸ್ಸುಳ್ಳ ಒಂದು ಪಿಶಾಚಿಯನ್ನು ಸೃಷ್ಟಿಸಲು ಉದ್ಯುಕ್ತರಾದರು.

ತತಃ ಕೃತ್ಯಾ ಸಮಭವದ್ ಋಷೇಸ್ತಸ್ಯ ತಪೋಬಲಾತ್ ।
ಮದೋ ನಾಮ ಮಹಾವೀರ್ಯೋ ಬೃಹತ್ಕಾಯೋ ಮಹಾಬಲಃ ॥

ಆಗ ಆ ಋಷಿಗಳ ತಪೋಬಲದಿಂದ ಮದ ಎಂಬ ಹೆಸರಿನ ಮಹಾಸಾಮರ್ಥ್ಯವುಳ್ಳ, ಮಹಾಬಲವುಳ್ಳ, ದೊಡ್ಡ ಶರೀರವುಳ್ಳ ಒಂದು ಪಿಶಾಚಿಯು ಉತ್ಪನ್ನವಾಯಿತು.

ಶರೀರಂ ಯಸ್ಯ ನಿರ್ದೇಷ್ಟುಮಶಕ್ಯಂ ಹಿ ಸುರಾಸುರೈಃ ।
ತಸ್ಯಾಸ್ಯಮಭವದ್ ಘೋರಂ ತೀಕ್ಷ್ಣಾಗ್ರದಶನಂ ಮಹತ್ ॥೨೦॥

ಹನುರೇಕಾ ಸ್ಥಿತಾ ತಸ್ಯ ಭೂಮಾವೇಕಾ ದಿವಂ ಗತಾ ।
ಚತಸ್ರ ಆಯತಾ ದಂಷ್ಟ್ರಾ ಯೋಜನಾನಾಂ ಶತಂಶತಮ್ ॥೨೧॥

ಅದರ ಶರೀರವನ್ನು ಹೀಗಿದೆ ಎಂದು ಹೇಳಲು ಸುರಾಸುರರಿಗೂ ಸಾಧ್ಯವಾಗುತ್ತಿರಲಿಲ್ಲ. ಅದರ ವದನವು ತೀಕ್ಷ್ಣವಾದ, ಘೋರವಾದ ದಂತಗಳಿಂದ ಕೂಡಿದ್ದಿತು. ಅದರ ಒಂದು ದವಡೆಯು ಭೂಮಿಯಲ್ಲಿಯೂ, ಇನ್ನೊಂದು ದವಡೆಯು ಅಂತರಿಕ್ಷದಲ್ಲಿಯೂ ಇದ್ದಿತು. ನಾಲ್ಕು ಎತ್ತರವಾದ ಕೋರೆದಾಡೆಗಳು ನೂರು ನೂರು ಯೋಜನಗಳಷ್ಟು ಎತ್ತರವಿದ್ದವು.

ಇತರೇ ತಸ್ಯ ದಶನಾ ಬಭೂವುರ್ದಶಯೋಜನಾಃ ।
ಪ್ರಾಕಾರಸದೃಶಾಕಾರಾಃ ಶೂಲಾಗ್ರಸಮದರ್ಶನಾಃ ॥೨೨॥

ಬಾಹೂ ಪರಿಘಸಂಕಾಶಾವಾಯತಾವಯುತಂ ಶತಮ್ ।
ನೇತ್ರೇ ರವಿಶಶಿಪ್ರಖ್ಯೇ ವಕ್ತ್ರಂ ಕಾಲಾಗ್ನಿಸನ್ನಿಭಮ್ ॥೨೩॥

ಅದರ ಇತರ ದಂತಗಳು ಒಂದೊಂದೂ ಹತ್ತು ಯೋಜನ ಎತ್ತರವಿದ್ದವು. ಅವು ಒಟ್ಟಿಗೆ ಸೇರಿ ಶೂಲಗಳು ನೆಟ್ಟರುವ ಕೋಟೆಯ ಗೋಡೆಯಂತೆ ತೋರುತ್ತಿದ್ದವು. ಒನಕೆಗಳಂತಿದ್ದ ಬಾಹುಗಳು ದೀರ್ಘವಾಗಿ ನೂರು ಯೋಜನ ಉದ್ದವಾಗಿದ್ದವು. ಕಣ್ಣುಗಳು ಚಂದ್ರಸೂರ್ಯರಂತೆ ಹೊಳೆಯುತ್ತಿದ್ದವು. ವದನವು ಕಾಲಾಗ್ನಿಯನ್ನು ಹೋಲುತ್ತಿದ್ದಿತು.

ಲೇಲಿಹನ್ ಜಿಹ್ವಯಾ ವಕ್ತ್ರಂ ವಿದ್ಯುಚ್ಚಪಲಲೋಲಯಾ ।
ವ್ಯಾತ್ತಾನನೋ ಘೋರದೃಷ್ಟಿರ್ಗ್ರಸನ್ನಿವ ಜಗದ್ ಬಲಾತ್ ॥೨೪॥

ಸ ಭಕ್ಷಯಿಷ್ಯನ್ ಸಂಕ್ರುದ್ಧಃ ಶತಕ್ರತುಮುಪಾದ್ರವತ್ ।
ಮಹತಾ ಘೋರರೂಪೇಣ ಲೋಕಾನ್ ಶಬ್ದೇನ ಪೂರಯನ್ ॥೨೫॥

ಆದು ಮಿಂಚಿನಂತೆ ಚಂಚಲವಾದ ತನ್ನ ನಾಲಿಗೆಯಿಂದ ತನ್ನ ಕಟಬಾಯಿಗಳನ್ನು ಸವರಿಕೊಳ್ಳುತ್ತಾ ಬಾಯಿಯನ್ನು ದೊಡ್ಡದಾಗಿ ತೆರೆದು ಘೋರದೃಷ್ಟಿಯಿಂದ ತನ್ನ ಸಾಮರ್ಥ್ಯದಿಂದ ಸಕಲ ಜಗತ್ತನ್ನೇ ನುಂಗುವಂತಿದ್ದಿತು. ಆ ಪಿಶಾಚಿಯು ಕೋಪದಿಂದ ಇಂದ್ರನನ್ನು ನುಂಗಲು ಬಯಸಿ ಘೋರವಾದ ದೊಡ್ಡ ನಾದದಿಂದ ಲೋಕಗಳನ್ನೆಲ್ಲಾ ತುಂಬುತ್ತಾ ಇಂದ್ರನ ಕಡೆಗೆ ಧಾವಿಸಿತು.

ಲೋಮಶಃ

ತಂ ದೃಷ್ಟ್ವಾ ಘೋರವದನಂ ಮದಂ ದೇವಃ ಶತಕ್ರತುಃ ।
ಆಯಾಂತಂ ಭಕ್ಷಯಿಷ್ಯಂತಂ ವ್ಯಾತ್ತಾನನಮಿವಾಂತಕಮ್ ॥೨೬॥

ಭಯಾತ್ ಸಂಸ್ತಂಭಿತಭುಜಃ ಸೃಕ್ವಿಣೀ ಲೇಲಿಹನ್ ಮುಹುಃ ।
ತತೋಽಬ್ರವೀದ್ ದೇವರಾಜಃ ಚ್ಯವನಂ ಭಯಪೀಡಿತಃ ॥೨೭॥

ತನ್ನನ್ನು ಭಕ್ಷಿಸಲು ಬಾಯಿಯನ್ನು ತೆಗೆದು ಯಮನಂತೆ ಬರುತ್ತಿರುವ ಘೋರ ವದನವುಳ್ಳ ಆ ಮದಪಿಶಾಚಿಯನ್ನು ನೋಡಿದ ಇಂದ್ರದೇವನು ಬಾಹುಗಳು ಸ್ತಂಭಿತವಾಗಿರಲು ಭಯದಿಂದ ತನ್ನ ಕಟಬಾಯಿಗಳನ್ನು ನೆಕ್ಕುತ್ತಾ ಭಯಭೀತನಾಗಿ ಚ್ಯವನರನ್ನು ಕುರಿತು ಹೇಳಿದನು.

ಸೋಮಾರ್ಹಾವಶ್ವಿನಾವೇತಾವದ್ಯ ಪ್ರಭೃತಿ ಭಾರ್ಗವ ।
ಭವಿಷ್ಯತಃ ಸತ್ಯಮೇತದ್ ವಚೋ ವಿಪ್ರ ಪ್ರಸೀದ ಮೇ ॥೨೮॥

ಎಲೈ ಭಾರ್ಗವರೇ, ಇಂದಿನಿಂದ ಪ್ರಾರಂಭಿಸಿ ಅಶ್ವಿನೀದೇವತೆಗಳು ಸೋಮಪಾನಾರ್ಹರಾಗುವರು. ಈ ಮಾತು ಸತ್ಯವಾದುದು. ಬ್ರಾಹ್ಮಣರೇ, ನನಗೆ ಅನುಗ್ರಹವನ್ನು ಮಾಡಿ.

ನ ತೇ ಮಿಥ್ಯಾ ಸಮಾರಂಭೋ ಭವತ್ಯೇಷ ತಪೋಧನ ।
ಜಾನಾಮಿ ಚಾಹಂ ವಿಪ್ರರ್ಷೇ ನ ಮಿಥ್ಯಾ ತ್ವಂ ಕರಿಷ್ಯಸಿ ॥೨೯॥

ಎಲೈ ತಪೋಧನರೇ, ನಿಮ್ಮ ಈ ಪ್ರಯತ್ನವು ಎಂದೂ ವ್ಯರ್ಥವಾಗುವುದಿಲ್ಲ. ಎಲೈ ಬ್ರಹ್ಮರ್ಷಿಗಳೇ, ನಿಮ್ಮ ಪ್ರಯತ್ನವು ಎಂದೂ ಸುಳ್ಳಾಗುವುದಿಲ್ಲವೆಂದು ನಾನು ತಿಳಿದಿದ್ದೇನೆ.

ಸೋಮಪಾವಶ್ವಿನಾವೇತೌ ಯಥಾ ವಾऽದ್ಯ ಕೃತೋ ತ್ವಯಾ ।
ತಥೈವ ಮಾಮಪಿ ಬ್ರಹ್ಮನ್ ಶ್ರೇಯಸಾ ಯೋಕ್ತುಮರ್ಹಸಿ ॥೩೦॥

ಎಲೈ ಬ್ರಾಹ್ಮಣರೇ, ನೀವು ಹೇಗೆ ಈ ದಿನ ಅಶ್ವಿನಿದೇವತೆಗಳನ್ನು ಸೋಮಪಾನಾರ್ಹರನ್ನಾಗಿ ಮಾಡಿದರೋ ಅದರಂತೆ ನನಗೂ ಶ್ರೇಯಸ್ಸನ್ನು ಉಂಟು ಮಾಡಿ.

ಭೂಯ ಏವ ತು ತೇ ವೀರ್ಯಂ ಪ್ರಕಾಶೇದಿತಿ ಭಾರ್ಗವ ।
ಸುಕನ್ಯಾಯಾಃ ಪಿತುಶ್ಚಾಸ್ಯ ಕೀರ್ತಿರ್ಲೋಕೇ ಪ್ರಥೇದಿತಿ ॥೩೧॥

ಅತೋ ಮಯೈತತ್ ಪ್ರಥಿತಂ ತವ ಕೀರ್ತಿಪ್ರಕಾಶನಮ್ ।
ತಸ್ಮಾತ್ ಪ್ರಸಾದಂ ಕುರು ಮೇ ಭವತ್ವೇತದ್ ಯದಿಚ್ಛಸಿ ॥೩೨॥

ಎಲೈ ಭಾರ್ಗವರೇ, ನಿಮ್ಮ ಸುಕನ್ಯೆಯ ಮತ್ತು ಅವಳ ತಂದೆಯಾದ ಶರ್ಯ್ಯಾತಿಯ ಕೀರ್ತಿಯು ಲೋಕದಲ್ಲಿ ವಿಸ್ತಾರವಾಗಲಿ ಎಂದು ನಿಮ್ಮ ಕೀರ್ತಿಪ್ರಸಾರಕ್ಕಾಗಿ ನಾನು ಈ ಕಾರ್ಯವನ್ನು ಮಾಡಿದೆ. ಆದ್ದರಿಂದ ನೀವು ಏನು ಬಯಸುತ್ತೀರೋ ಅದರಂತೆ ಆಗಲಿ. ನನಗೆ ಅನುಗ್ರಹವನ್ನು ಮಾಡಿ.

ಏವಮುಕ್ತಸ್ಯ ಶಕ್ರೇಣ ಚ್ಯವನಸ್ಯ ಮಹಾತ್ಮನಃ ।
ಸ ಮನ್ಯುರ್ವ್ಯಗಮಚ್ಛೀಘ್ರಂ ಮುಮೋಚ ಚ ಪುರಂದರಮ್ ॥೩೩॥

ಇಂದ್ರನಿಂದ ಹೀಗೆ ಹೇಳಲ್ಪಟ್ಟ ಮಹಾನುಭಾವರಾದ ಚ್ಯವನರಿಗೆ ಕೋಪವು ಶೀಘ್ರವಾಗಿ ಹೊರಟುಹೋಯಿತು. ಅವರು ಇಂದ್ರನನ್ನು ಬಿಡುಗಡೆಗೊಳಿಸಿದರು.

ಮದಂ ಚ ವ್ಯಭಜದ್ ರಾಜನ್ ಮದ್ಯೇ ಸ್ತ್ರೀಷು ಚ ವೀರ್ಯವಾನ್ ।
ಅಕ್ಷೇಷು ಮೃಗಯಾಯಾಂ ಚ ಪೂರ್ವಸೃಷ್ಟಂ ಪುನಃ ಪುನಃ ॥೩೪॥

ಎಲೈ ರಾಜನೇ, ವೀರಶಾಲಿಗಳಾದ ಅವರು ಮದವನ್ನು ನಾಲ್ಕುಭಾಗವನ್ನಾಗಿ ಮಾಡಿ ಮದ್ಯದಲ್ಲಿ, ಸ್ತ್ರೀಯರಲ್ಲಿ, ದ್ಯೂತದಲ್ಲಿ ಮತ್ತು ಬೇಟೆಯಲ್ಲಿ ಮೊದಲೇ ಇದ್ದುದರ ಜೊತೆಗೆ ಪುನಃಪುನಃ ಇಟ್ಟರು.

ತದಾ ಮದಂ ವಿನಿಕ್ಷಿಪ್ಯ ಶಕ್ರಂ ಸಂತರ್ಪ್ಯ ಚೇಂದುನಾ ।
ಅಶ್ವಿಭ್ಯಾಂ ಸಹಿತಾನ್ ದೇವಾನ್ ಯಾಜಯಿತ್ವಾ ಚ ತಂ ನೃಪಮ್ ॥

ವಿಖ್ಯಾಪ್ಯ ವೀರ್ಯಂ ಲೋಕೇಷು ಸರ್ವೇಷು ವದತಾಂ ವರಃ ।
ಸುಕನ್ಯಯಾ ಮಹಾರಣ್ಯೇ ವಿಜಹಾರಾನುರಕ್ತಯಾ ॥೩೬॥

ಅವರು ಮದವನ್ನು ವಿಭಾಗಮಾಡಿ ಬೇರೆ ಕಡೆಯಲ್ಲಿ ಇಟ್ಟು ಇಂದ್ರನನ್ನೂ ಸೋಮರಸದಿಂದ ತೃಪ್ತಪಡಿಸಿ, ಅಶ್ವಿನಿಗಳನ್ನು ಮತ್ತು ಉಳಿದ ದೇವತೆಗಳನ್ನು ಸೇರಿಸಿ ರಾಜನಿಂದ ಯಾಗವನ್ನು ಮಾಡಿಸಿ ವಾಗ್ಮಿಗಳಲ್ಲಿ ಶ್ರೇಷ್ಠರಾದ ಅವರು ಎಲ್ಲ ಲೋಕಗಳಲ್ಲಿಯೂ ತಮ್ಮ ಪ್ರತಾಪವನ್ನು ಅಭಿವೃದ್ಧಿಪಡಿಸಿ, ಅನುರಕ್ತಳಾದ ಸುಕನ್ಯೆಯ ಜೊತೆಯಲ್ಲಿ ಮಹಾರಣ್ಯದಲ್ಲಿ ವಿಹರಿಸಿದರು.

ತಸ್ಯೈತದ್ ದ್ವಿಜಸಂಘುಷ್ಟಂ ಸರೋ ದಿವ್ಯಂ ಪ್ರಕಾಶತೇ ।
ಅತ್ರ ತ್ವಂ ಸಹ ಸೋದರ್ಯೈಃ ಪಿತೄನ್ ದೇವಾಂಶ್ಚ ತರ್ಪಯ ॥೩೭॥

ಅವರ ದಿವ್ಯವಾದ ಈ ಸರೋವರವು ಪಕ್ಷಿಗಳ ನಾದಗಳಿಂದ ಕೂಡಿದುದಾಗಿ ಶೋಭಿಸುತ್ತಿದೆ. ಇಲ್ಲಿ ನೀನು ತಮ್ಮಂದಿರ ಜೊತೆಯಲ್ಲಿ ಪಿತೃಗಳಿಗೂ ಮತ್ತು ದೇವತೆಗಳಿಗೂ ತರ್ಪಣವನ್ನು ಕೊಡು.

ಏತದ್ ದೃಷ್ಟ್ವಾ ಮಹೀಪಾಲ ವಲ್ಮೀಕಾಗ್ರಂ ಚ ಭಾರತ ।
ಸೈಂಧವಾರಣ್ಯಮಾಸಾದ್ಯ ಕುಲ್ಯಾನಾಂ ಕುರು ದರ್ಶನಮ್ ।
ಪುಷ್ಕರೇಷು ಮಹಾರಾಜ ಸರ್ವೇಷು ಚ ಜಲಂ ಸ್ಪೃಶ ॥೩೮॥

ಎಲೈ ಭಾರತನೇ, ಎಲೈ ರಾಜನೇ, ಈ ವಲ್ಮೀಕದ ತುದಿಯ ದರ್ಶನವನ್ನು ಮಾಡಿ ಸೈಂಧವಾರಣ್ಯವನ್ನು ತಲುಪಿ ಅಲ್ಲಿರುವ ಸರೋವರಗಳನ್ನು ದರ್ಶನಮಾಡು. ಎಲೈ ಮಹಾರಾಜನೇ, ಎಲ್ಲ ಪುಷ್ಕರಗಳಲ್ಲಿಯೂ ಸ್ನಾನವನ್ನು ಮಾಡು.

ಆರ್ಚೀಕಪರ್ವತಶ್ಚೈವ ನಿವಾಸೋ ವೈ ಮನೀಷಿಣಾಮ್ ।
ಸದಾಫಲಂ ಸದಾಸ್ರೋತೋ ಮರುತಾಂ ಸ್ಥಾನಮುತ್ತಮಮ್ ॥೩೯॥

ಈ ಆರ್ಚೀಕಪರ್ವತವಾದರೂ ವಿವೇಕಿಗಳ ನಿವಾಸಸ್ಥಾನವಾಗಿದೆ. ಅಲ್ಲಿ ಯಾವಾಗಲೂ ಫಲಗಳು ಮತ್ತು ಜಲವು ಇರುತ್ತದೆ. ಅದು ಮರುತ್ತುಗಳ ಸನ್ನಿಧಾನವಿರುವ ಶ್ರೇಷ್ಠವಾದ ಸ್ಥಾನ.

ಚೈತ್ಯಾಶ್ಚೈತೇ ಬಹುವಿಧಾಃ ತ್ರಿದಶಾನಾಂ ಯುಧಿಷ್ಠಿರ ।
ಏತಚ್ಚಂದ್ರಸರೋ ನಿತ್ಯಮರ್ಚಯನ್ನೃಷಯಃ ಸದಾ ॥೪೦॥

ವೈಖಾನಸಾಶ್ಚ ಋಷಯೋ ವಾಲಖಿಲ್ಯಾಸ್ತಥೈವ ಚ ॥೪೧॥

ಎಲೈ ಯುಧಿಷ್ಠಿರನೇ, ಇವೆಲ್ಲವೂ ದೇವತೆಗಳು ನೆಟ್ಟಿರುವ ಬಹುವಿಧವಾದ ಯೂಪಗಳು. ಇದಕ್ಕೆ ಚಂದ್ರಸರೋವರವೆಂದು ಹೆಸರು. ಇಲ್ಲಿ ವೈಖಾನಸರು ಮತ್ತು ವಾಲಖಿಲ್ಯ ಋಷಿಗಳು ಅರ್ಚನೆಯನ್ನು ಮತ್ತು ತಪಸ್ಸನ್ನು ಮಾಡಿದರು.

ಶೃಂಗಾಣಿ ತ್ರೀಣಿ ಪುಣ್ಯಾನಿ ತ್ರೀಣಿ ಪ್ರಸ್ರವಣಾನಿ ಚ ।
ಸರ್ವಾಣ್ಯನುಪರಿಕ್ರಮ್ಯ ಯಥಾಕಾಮಮುಪಸ್ಪೃಶ ॥೪೨॥

ಇಲ್ಲಿರುವ ಮೂರು ಪವಿತ್ರವಾದ ಶಿಖರಗಳನ್ನು, ಮೂರು ಜಲಪಾತಗಳನ್ನು, ಸಮವಾಗಿ ಪ್ರದಕ್ಷಿಣೆಯನ್ನು ಮಾಡಿ ಎಲ್ಲದರಲ್ಲಿಯೂ ನಿನ್ನ ಮನಸ್ಸಿಗೆ ಬಂದಂತ ಸ್ನಾನವನ್ನು ಮಾಡು.

ಶಂತನುಶ್ಚಾತ್ರ ಕೌಂತೇಯ ಶುನಕಶ್ಚ ವಿಶಾಂಪತೇ ।
ನರನಾರಾಯಣೌ ಚೋಭೌ ಸ್ಥಾನಂ ಪ್ರಾಪ್ತಾಃ ಸನಾತನಮ್ ॥೪೩॥

ಎಲೈ ಕೌಂತೇಯನೇ, ರಾಜನೇ, ಇಲ್ಲಿ ಶಂತನವೂ, ಶುನಕರೂ, ನರನಾರಾಯಣ ಋಷಿಗಳೂ ತಪಸ್ಸನ್ನು ಮಾಡಿ ಸನಾತನವಾದ ಸ್ಥಾನಗಳನ್ನು ಪಡೆದರು.

ಇಹ ನಿತ್ಯಾಶ್ರಯಾ ದೇವಾಃ ಪಿತರಶ್ಚ ಮಹರ್ಷಿಭಿಃ ।
ಆರ್ಚೀಕಪರ್ವತೇ ಯೇ ತು ತಾನ್ ಯಜಸ್ವ ಯುಧಿಷ್ಠಿರ ॥೪೪॥

ಎಲೈ ಯುಧಿಷ್ಠಿರನೇ, ಈ ಆರ್ಚೀಕಪರ್ವತದಲ್ಲಿ ಯಾವ ಪಿತೃಗಳು, ದೇವತೆಗಳು ಮತ್ತು ಮಹರ್ಷಿಗಳು ಯಾವಾಗಲೂ ಸನ್ನಿಹಿತರಾಗಿರುತ್ತಾರೆಯೋ ಅವರನ್ನು ಪೂಜಿಸು.

ಇಹ ತೇ ವೈ ಚರೂನ್ ಪ್ರಾಶ್ನಂಸ್ತ್ರಿದಶಾಶ್ಚ ವಿಶಾಂಪತೇ ।
ಯಮುನಾ ಚಾಕ್ಷಯಸ್ರೋತಾಃ ಕೃಷ್ಣಶ್ಚೇಹ ತಪೋಽಚರನ್ ॥೪೫॥

ಎಲೈ ರಾಜನೇ, ಇಲ್ಲಿ ಆ ದೇವತೆಗಳೆಲ್ಲಾ ಚರುವನ್ನು ಪ್ರಾಶನಮಾಡಿದರು. ಅಕ್ಷಯ ಸ್ರೋತ್ರವಾದ ಯಮುನೆಯು ಮತ್ತು ಕೃಷ್ಣನು ಇಲ್ಲಿ ತಪಸ್ಸನ್ನು ಆಚರಿಸಿದರು.

ಯಮೌ ಚ ಭೀಮಸೇನಶ್ಚ ಕೃಷ್ಣಾ ಚಾಮಿತ್ರಕರ್ಶನ ।
ಸರ್ವೇ ಚಾತ್ರ ಗಮಿಷ್ಯಾಮಃ ತ್ವಯೈವ ಸಹ ಪಾಂಡವ ।
ಏತತ್ ಪ್ರಸ್ರವಣಂ ಪುಣ್ಯಮಿಂದ್ರಸ್ಯ ಮನುಜಾಧಿಪ ॥೪೬॥

ಎಲೈ ಪಾಂಡವನೇ, ಎಲೈ ಶತ್ರುನಾಶಕನೇ, ನಕುಲಸಹದೇವರು, ಭೀಮಸೇನ, ದ್ರೌಪದಿ ನಾವೆಲ್ಲರೂ ನಿನ್ನ ಜೊತೆಯಲ್ಲೇ ಮುಂದೆ ಹೋಗೋಣ. ಎಲೈ ಮನುಜಾಧಿಪನೇ, ಇದು ಪವಿತ್ರವಾದ ಇಂದ್ರನ ಪ್ರಸ್ರವಣ (ಜಲಪಾತ).

ಅತ್ರ ಧಾತಾ ವಿಧಾತಾ ಚ ವರುಣಶ್ಚೋರ್ದ್ಧಮಾಗತಾಃ ।
ಅತ್ರ ತೇ ನ್ಯವಸನ್ ರಾಜನ್ ಕಾಂಕ್ಷಂತಃ ಸಹಧರ್ಮಿಣಃ ।
ಮೈತ್ರಾಣಾಮೃಜುಬುದ್ಧೀನಾಮಯಂ ಗಿರಿವರಃ ಶಿವಃ ॥೪೭॥

ಇಲ್ಲಿ ಧಾತೃ, ವಿಧಾತೃ ಮತ್ತು ವರುಣ ಈ ದೇವತೆಗಳು ಮೇಲಕ್ಕೆ ಬಂದರು. ಎಲೈ ರಾಜನೇ, ಇಲ್ಲಿ ಅವರು ಸಮಾನವಾದ ಧರ್ಮವನ್ನು ಆಚರಿಸುತ್ತಾ, ಶ್ರೇಯಸ್ಸನ್ನು ಬಯಸುತ್ತಾ ವಾಸವನ್ನು ಮಾಡಿದರು. ಸ್ನೇಹಬುದ್ಧಿಯುಳ್ಳ ಮತ್ತು ಋಜುಬುದ್ಧಿಯುಳ್ಳ ಜನರಿಗೆ ಈ ಪರ್ವತಶ್ರೇಷ್ಠವು ಬಹಳ ಸುಖಕರವಾದುದು.

ಏಷಾ ಸಾ ಯಮುನಾ ರಾಜನ್ ಮಹರ್ಷಿಗಣಸೇವಿತಾ ।
ನಾನಾಯಜ್ಞಚಿತಾ ಪುಣ್ಯಾ ಸರ್ವಪಾಪಭಯಾಪಹಾ ॥೪೮॥

ಎಲೈ ರಾಜನೇ, ಮಹರ್ಷಿಗಣಸೇವಿತವಾದ ಇದೇ ಆ ಯಮುನಾ ನದಿ. ತೀರದಲ್ಲಿ ಮಾಡಿದ ನಾನಾ ಯಜ್ಞಗಳಿಂದ ಕೂಡಿದ ಈ ಪವಿತ್ರವಾದ ನದಿಯು ಸರ್ವಪಾಪಗಳ ಮತ್ತು ಭಯಗಳ ಪರಿಹಾರಕವಾಗಿದೆ.

ಅತ್ರ ರಾಜಾ ಮಹೇಷ್ವಾಸೋ ಮಾಂಧಾತಾऽಯಜತ ಸ್ವಯಮ್ ।
ಸಹದೇವಶ್ಚ ಕೌಂತೇಯ ಸೋಮಕೇ ವದತಾಂ ವರಃ ॥೪೯॥

ಎಲೈ ಕೌಂತೇಯನೇ, ಇಲ್ಲಿ ರಾಜನಾದ ಮಹಾಧನುರ್ಧಾರಿಯಾದ ಮಾಂಧಾತನು ಯಜ್ಞವನ್ನು ಮಾಡಿದನು. ಹಾಗೆಯೇ, ಸಹದೇವನೂ ವಾಗ್ಮಿಗಳಲ್ಲಿ ಶ್ರೇಷ್ಠನಾದ ಸೋಮಕನೂ ಇಲ್ಲಿ ಯಜ್ಞವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕವಿಂಶತ್ಯಧಿಕಶತತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೆರಡನೆಯ ಅಧ್ಯಾಯ

ಲೋಮಶರಿಂದ ಮಾಂಧಾತೃ ಚರಿತ್ರ ಕಥನ.

ಯುಧಿಷ್ಠಿರಃ

ಮಾಂಧಾತಾ ರಾಜಾಶಾರ್ದೂಲಃ ತ್ರಿಷು ಲೋಕೇಷು ವಿಶ್ರುತಃ ।
ಕಥಂ ಜಾತೋ ಮಹಾಬ್ರಹ್ಮನ್ ಯೌವನಾಶ್ವ ನೃಪೋತ್ತಮಃ ॥೧॥

ಕಥಂ ಚೈತಾಂ ಪರಾಂ ಖ್ಯಾತಿಂ ಪ್ರಾಪ್ತವಾನಮಿತದ್ಯುತಿಃ ।
ಯಸ್ಯ ಲೋಕಾಸ್ತ್ರಯೋ ವಶ್ಯಾ ವಿಷ್ಣೋರಿವ ಮಹಾತ್ಮನಃ ॥೨॥

ಯುಧಿಷ್ಠಿರ– ಮಹಾಬ್ರಾಹ್ಮಣರೇ, ಯುವನಾಶ್ವನ ಮಗನಾದ ರಾಜಶಾರ್ದೂಲನೂ ನೃಪೋತ್ತಮನೂ ಆದ ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಮಾಂಧಾತೃವು ಹೇಗೆ ಜನಿಸಿದನು? ಯಾವ ಮಹಾತ್ಮನಿಗೆ ವಿಷ್ಣುವಿಗೆ ವಶವಾದಂತೆ ಮೂರು ಲೋಕಗಳೂ ವಶವಾಗಿದ್ದವೋ ಅಂತಹ ಅಮಿತಪರಾಕ್ರಮಿಯಾದ ಅವನು ಇಂತಹ ಉತ್ತಮವಾದ ಖ್ಯಾತಿಯನ್ನು ಹೇಗೆ ಪಡೆದನು?

ವಿತದಿಚ್ಛಾಮ್ಯಹಂ ಶ್ರೋತು ಚರಿತಂ ತಸ್ಯ ಧೀಮತಃ ।
ಸತ್ಯಕೀರ್ತೇರ್ಹಿ ಮಾಂಧಾತುಃ ಕಥ್ಯಮಾನಂ ತ್ವಯಾऽನಘ ॥೩॥

ಯಥಾ ಮಾಂಧಾತೃಶಬ್ದಶ್ಚ ತಸ್ಯ ಶಕ್ರಸಮದ್ಯುತೇಃ ।
ಜನ್ಮ ಚಾಪ್ರತಿವೀರ್ಯಸ್ಯ ಕುಶಲೋ ಹ್ಯಸಿ ಭಾಷಿತುಮ್ ॥೪॥

ಎಲೈ ಅನಘರೇ, ಸತ್ಯಕೀರ್ತಿಯಾದ ಮೇಧಾವಿಯಾದ ಆ ಮಾಂಧಾತೃವಿನ ಚರಿತ್ರೆಯನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ. ಶಕ್ರನಿಗೆ ಸಮಾನವಾದ ತೇಜಸ್ಸುಳ್ಳ ಅವನಿಗೆ ಮಾಂಧಾತೃನಾಮವು ಹೇಗೆ ಬಂದಿತು? ಅಪ್ರತಿಮ ಪರಾಕ್ರಮಿಯಾದ ಅವನ ಜನನವು ಹೇಗೆ ಆಯಿತು? ಎಲ್ಲವನ್ನೂ ಹೇಳಿ. ನೀವು ಮಾತನಾಡುವುದರಲ್ಲಿ ಬಹಳ ಕುಶಲರಾಗಿದ್ದೀರಿ.

ಲೋಮಶಃ

ಶೃಣುಷ್ವಾವಹಿತೋ ರಾಜನ್ ರಾಜ್ಞಸ್ತಸ್ಯ ಮಹಾತ್ಮನಃ ।
ಯಥಾ ಮಾಂಧಾತೃಶಬ್ದೋ ವೈ ಲೋಕೇಷು ಪರಿಗೀಯತೇ ॥೫॥

ಲೋಮಶ– ಎಲೈ ರಾಜನೇ, ಮಹಾತ್ಮನಾದ ಆ ರಾಜನ ಚರಿತ್ರೆಯನ್ನು ಸಾವಧಾನವಾಗಿ ಕೇಳು. ಮಾಂಧಾತೃ ಶಬ್ದವು ಹೇಗೆ ಲೋಕದಲ್ಲಿ ಪ್ರಸಿದ್ಧವಾಯಿತು ಎಂಬುದನ್ನೂ ಕೇಳು.

ಇಕ್ಷ್ವಾಕುವಂಶಪ್ರಭವೋ ಯುವನಾಶ್ವೋ ಮಹೀಪತಿಃ ।
ಸೋಽಯಜತ್ ಪೃಥಿವೀಪಾಲಃ ಕ್ರತುಭಿರ್ಭೂರಿದಕ್ಷಿಣೈಃ ॥೬॥

ಅಶ್ವಮೇಧಸಹಸ್ರಂ ಚ ಪ್ರಾಪ್ಯ ಧರ್ಮಭೃತಾಂ ವರಃ ।
ಅನ್ಯೈಶ್ಚ ಕ್ರತುಭಿರ್ಮುಖ್ಯೈರ್ವಿವಿಧೈರಾಪ್ತದಕ್ಷಿಣೈಃ ॥೭॥

ಇಕ್ಷ್ವಾಕುವಂಶದಲ್ಲಿ ಜನಿಸಿದ ಯುವನಾಶ್ವನೆಂಬ ರಾಜನಿದ್ದನು. ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಆ ರಾಜನು ಬಹಳ ದಕ್ಷಿಣೆಗಳುಳ್ಳ ಸಹಸ್ರ ಅಶ್ವಮೇಧಯಾಗಗಳನ್ನು ಮತ್ತು ಬಹಳ ದಕ್ಷಿಣಗಳುಳ್ಳ ಇನ್ನೂ ಅನೇಕ ವಿಧವಾದ ಕ್ರತುಗಳನ್ನು ಮಾಡಿದನು.

ಅನಪತ್ಯಸ್ತು ರಾಜರ್ಷಿಃ ಸ ಮಹಾತ್ಮಾ ದೃಢವ್ರತಃ ।
ಮಂತ್ರಿಷ್ವಾಧಾಯ ತದ್ರಾಜ್ಯಂ ವನನಿತ್ಯೋ ಬಭೂವ ಹ ॥೮॥

ಪುತ್ರಸಂತಾನವಿಲ್ಲದ ಆ ಮಹಾತ್ಮನಾದ ದೃಢವ್ರತನಾದ ರಾಜರ್ಷಿಯು ತನ್ನ ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ ನಿತ್ಯವೂ ವನದಲ್ಲಿ ವಾಸಮಾಡಿದನು.

ಶಾಸ್ತ್ರದೃಷ್ಟೇನ ವಿಧಿನಾ ಸಂಯೋಜ್ಯಾತ್ಮಾನಮಾತ್ಮನಾ ।
ಪಿಪಾಸುಃ ಶುಷ್ಕಕಂಠಃ ಸ ಪ್ರವಿವೇಶಾಶ್ರಮಂ ಭೃಗೋಃ ॥೯॥

ಶಾಸ್ತ್ರದೃಷ್ಟವಾದ ವಿಧಿಯಿಂದ ತನ್ನನ್ನು ತಾನು ತಪಸ್ಸಿನಲ್ಲಿ ತೊಡಗಿಸಿಕೊಂಡನು. ಒಮ್ಮೆ ಅವನು ರಾತ್ರಿಯ ವೇಳೆಯಲ್ಲಿ ಕಂಠವು ಒಣಗಿಹೋಗಿ ನೀರನ್ನು ಕುಡಿಯಲು ಬಯಸಿ ಭೃಗುಗಳ ಆಶ್ರಮವನ್ನು ಪ್ರವೇಶಿಸಿದನು.

ತಾಮೇವ ರಾತ್ರಿಂ ರಾಜೇಂದ್ರ ಮಹಾತ್ಮಾ ಭೃಗುನಂದನಃ ।
ಇಷ್ಟಿಂ ಚಕಾರ ಸೌದ್ಯುಮ್ನೇಃ ಮಹರ್ಷಿಃ ಪುತ್ರಕಾರಣಾತ್ ॥೧೦॥

ಎಲೈ ರಾಜೇಂದ್ರನೇ, ಆದೇ ರಾತ್ರಿಯೇ ಭೃಗುನಂದನರಾದ ಮಹಾನುಭಾವರಾದ ಮಹರ್ಷಿಗಳು (ಚ್ಯವನರು) ಸುದ್ಯುಮ್ನನ ಪುತ್ರನಾದ ಯುವನಾಶ್ವನಿಗೆ ಪುತ್ರಸಂತಾನವಾಗಬೇಕೆಂಬ ಉದ್ದೇಶದಿಂದ ಒಂದು ಇಷ್ಟಿಯನ್ನು ಮಾಡಿದ್ದರು.

ಸಂಭೃತೋ ಮಂತ್ರಪೂತೇನ ವಾರಿಣಾ ಕಲಶೋ ಮಹಾನ್ ।
ತತ್ರಾತಿಷ್ಠತ ರಾಜೇಂದ್ರ ಪೂರ್ವಮೇವ ಸಮಾಹಿತಃ ॥೧೧॥

ಎಲೈ ರಾಜೇಂದ್ರನೇ, ಮಂತ್ರಪೂತವಾದ ಜಲದಿಂದ ಪೂರ್ಣವಾಗಿ ತುಂಬಿದ್ದ ಒಂದು ದೊಡ್ಡ ಕಲಶವು ಮೊದಲೇ ಅಲ್ಲಿ (ಹೋಮಕುಂಡದ ಬಳಿ) ಸ್ಥಾಪಿಸಲ್ಪಟ್ಟಿತ್ತು.

ಯತ್ ಪ್ರಾಶ್ಯ ಪ್ರಸವೇತ್ ಪತ್ನೀ ತಸ್ಯ ಶಕ್ರಸಮಂ ಸುತಮ್ ।
ತದ್ ವಾರಿ ವಿಧಿವದ್ ರಾಜನ್ ಯಜ್ಞಿಯಾಸೀತ್ ಸುಸಂಸ್ಕೃತಮ್ ।
ತಂ ನ್ಯಸ್ಯ ವೇದ್ಯಾಂ ಕಲಶಂ ಸುಷುಪುಸ್ತೇ ಮಹರ್ಷಯಃ ॥೧೨॥

ಯಾವ ಜಲವನ್ನು ರಾಜನ ಪತ್ನಿಯು ಪ್ರಾಶನಮಾಡಿ ಇಂದ್ರ ಸಮಾನನಾದ ಪುತ್ರನನ್ನು ಪಡೆಯಬೇಕೋ ಅಂತಹ ಸುಸಂಸ್ಕೃತವಾದ ಜಲವು ಆ ಕಲಶದಲ್ಲಿದ್ದಿತು. ಎಲೈ ರಾಜನೇ, ವೇದಿಕೆಯಲ್ಲಿ ಆ ಕಲಶವನ್ನಿಟ್ಟು ಆ ಎಲ್ಲ ಮಹರ್ಷಿಗಳೂ ನಿದ್ರೆಯನ್ನು ಮಾಡಿದ್ದರು.

ರಾತ್ರಜಾಗರಣಾಚ್ಛ್ರಾಂತಾನ್ ಸೌದ್ಯುಮ್ನಿಸ್ತತ್ರ ಪಾರ್ಥಿವಃ ।
ಶುಷ್ಕಕಂಠಃ ಪಿಪಾಸಾರ್ತಃ ಪಾನೀಯಾರ್ಥೀ ಭೃಶಂ ನೃಪಃ ।
ತಂ ಪ್ರವಿಶ್ಯಾಶ್ರಮಂ ಶ್ರಾಂತಃ ಪಾನೀಯಂ ಸೋಽಭ್ಯಯಾಚತ ॥೧೩॥

ಆಶ್ರಮವನ್ನು ಪ್ರವೇಶಮಾಡಿದ ಶುಷ್ಕಕಂಠನೂ ಬಾಯಾರಿಕೆಯಿಂದ ಬಳಲಿದವನೂ, ಬಹಳವಾಗಿ ನೀರನ್ನು ಬಯಸುವವನೂ ಆದ ಆ ಯುವನಾಶ್ವರಾಜನು ರಾತ್ರಿಯ ಜಾಗರಣೆಯಿಂದ ದಣಿದಿದ್ದ ಆ ಮಹರ್ಷಿಗಳನ್ನು ತಾನೂ ದಣಿದು ನೀರನ್ನು ಯಾಚಿಸಿದನು.

ತಸ್ಯ ಶ್ರಾಂತಸ್ಯ ಶುಷ್ಕೇಣ ಕಂಠೇನ ಕ್ರೋಶತಃ ಶನೈಃ ।
ನಾಶ್ರೌಷೀತ್ ಕಶ್ಚನ ಗಿರಂ ಶಕುನೇರಿವ ವಾಶಿತಮ್ ॥೧೪॥

ತತಸ್ತಂ ಕಲಶಂ ದೃಷ್ಟ್ವಾ ಜಲಪೂರ್ಣಂ ಸ ಪಾರ್ಥಿವಃ ।
ಅಭ್ಯಧಾವತ ವೇಗೇನ ಪೀತ್ವಾ ಚಾಂಭೋ ವ್ಯವಾಸೃಜತ್ ॥೧೫॥

ದಣಿದು ಶುಷ್ಕಕಂಠದಿಂದ ಅವನು ಕಿರುಚುತ್ತಿದ್ದರೂ ಪಕ್ಷಿಸ್ವರದಂತೆ ದುರ್ಬಲವಾದ ಅವನ ಮಾತನ್ನು ಯಾರೂ ಕೇಳಲಿಲ್ಲ. ಆಗ ಆ ರಾಜನು ಜಲಪೂರ್ಣವಾದ ಆ ಕಲಶವನ್ನು ನೋಡಿ ಶೀಘ್ರವಾಗಿ ಅದರ ಬಳಿಗೆ ಹೋಗಿ ಅದರಲ್ಲಿದ್ದ ಜಲವನ್ನು ಕುಡಿದು ಆ ಕಲಶವನ್ನು ಎಸೆದನು.

ಸ ಪೀತ್ವಾ ಶೀತಲಂ ತೋಯಂ ಪಿಪಾಸಾರ್ತೋ ಮಹೀಪತಿಃ ।
ನಿರ್ವಾಣಮಗಮದ್ ಧೀಮಾನ್ ಸುಸುಖೀ ಚಾಭವತ್ ತದಾ ॥೧೬॥

ತತಸ್ತೇ ಪ್ರತ್ಯಬುಧ್ಯಂತ ಮುನಯಸ್ತು ನರಾಧಿಪ ।
ನಿಸ್ತೋಯಂ ತಂ ಚ ಕಲಶಂ ದದೃಶುಃ ಸರ್ವ ಏವ ತೇ ॥೧೭॥

ಬಾಯಾರಿಕೆಯಿಂದ ಆರ್ತನಾದ ಆ ಮೇಧಾವಿಯಾದ ರಾಜನು ಶೀತಲವಾದ ಆ ಜಲವನ್ನು ಪಾನಮಾಡಿ ಶ್ರಮಪರಿಹಾರವನ್ನು ಹೊಂದಿ ಆಗ ಸುಖದಿಂದ ಕೂಡಿದವನಾದನು. ಎಲೈ ರಾಜನೇ, ಆಗ ಆ ಮುನಿಗಳೆಲ್ಲರೂ ಎಚ್ಚರಗೊಂಡು ಕಲಶದ ಜಲವು ಬರಿದಾಗಿರುವುದನ್ನು ನೋಡಿದರು.

ಕಸ್ಯ ಕರ್ಮೇದಮಿತಿ ತೇ ಪರ್ಯತಪ್ಯನ್ ಸಮಾಗತಾಃ ।
ಯುವನಾಶ್ವೋ ಮಯೇತ್ಯೇವಂ ಸತ್ಯಂ ಸಮಭಿಪದ್ಯತ ॥೧೮॥

ಅವರೆಲ್ಲರೂ ಒಟ್ಟಿಗೆ ಸೇರಿ ಇದು ಯಾರ ಕೆಲಸವೆಂದು ಪರಿತಪಿಸಿದರು. ಯುವನಾಶ್ವನು ನನ್ನದು ಎಂದು ಸತ್ಯವನ್ನು ಹೇಳಿದನು.

ನ ಯುಕ್ತಮಿತಿ ತಂ ಪ್ರಾಹ ಭಗವಾನ್ ಭಾರ್ಗವಸ್ತದಾ ।
ಪುತ್ರಾರ್ಥಂ ಸ್ಥಾಪಿತಾಶ್ಚಾಪಃ ತಪಸಾ ಚೈವ ಸಂಭೃತಾಃ ॥೧೯॥

ಪೂಜ್ಯರಾದ ಭಾರ್ಗವರು ಇದು ಅಯೋಗ್ಯವಾದುದು. ನಾನು ನಿನ್ನ ಪುತ್ರ ಸಂತಾನದ ಸಲುವಾಗಿ ನನ್ನ ತಪಶಕ್ತಿಯಿಂದ ಕೂಡಿದ ಜಲವನ್ನು ಆ ಕಲಶದಲ್ಲಿ ಇಟ್ಟಿದ್ದೆನು ಎಂದು ಹೇಳಿದರು.

ಮಯಾ ತತ್ರಾಹಿತಂ ಬ್ರಹ್ಮನ್ ತಪ ಆಸ್ಥಾಯ ದಾರುಣಮ್ ।
ಪುತ್ರಾರ್ಥಂ ತವ ರಾಜರ್ಷೇ ಮಹಾಬಲಪರಾಕ್ರಮಃ ॥೨೦॥

ಎಲೈ ರಾಜರ್ಷಿಯೇ, ನಿನಗೆ ಮಹಾಬಲಪರಾಕ್ರಮವುಳ್ಳ ಪುತ್ರನು ಜನಿಸಬೇಕೆಂದು ನಾನು ಗಹನವಾದ ತಪಸ್ಸನ್ನು ಮಾಡಿ ಮಂತ್ರಶಕ್ತಿಯನ್ನು ಆ ಜಲದಲ್ಲಿ ಆಧಾನ ಮಾಡಿದ್ದೆನು.

ಮಹಾಬಲೋ ಮಹಾವೀರ್ಯಃ ತಪೋಯೋಗಸಮನ್ವಿತಃ ।
ಯಃ ಶಕ್ರಮಪಿ ವೀರ್ಯೇಣ ಗಮಯೇದ್ ಯಮಸಾದನಮ್ ॥೨೧॥

ಆನೇನ ವಿಧಿನಾ ರಾಜನ್ ಮಯೈತದುಪಪಾದಿತಮ್ ।

ನಾನು ಮಹಾಬಲನೂ, ಮಹಾವೀರ್ಯನೂ, ತಪೋಯೋಗಸಮನ್ವಿತನೂ, ಇಂದ್ರನನ್ನೂ ತನ್ನ ಸಾಮರ್ಥ್ಯದಿಂದ ಯಮಲೋಕಕ್ಕೆ ಕಳುಹಿಸುವವನೂ ಆದ ಒಬ್ಬ ಪುತ್ರನನ್ನು ನಿನಗಾಗಿ ಈ ಮಂತ್ರವಿಧಾನದಿಂದ ಸಾಧಿಸಿದ್ದೆನು.

ಅಭಕ್ಷಣಾತ್ ತ್ವಯಾ ರಾಜನ್ ನಯುಕ್ತಂ ಕೃತಮದ್ಯ ವೈ ॥೨೨॥

ಎಲೈ ರಾಜನೇ, ನೀನು ಜಲವನ್ನು ಕುಡಿದು ಈ ದಿನ ಅಯುಕ್ತವಾದ ಕಾರ್ಯವನ್ನು ಮಾಡಿದ್ದೀಯೆ.

ನ ತ್ವದ್ಯ ಕ್ಷಮಮಸ್ಮಾಭಿರೇತತ್ ಕರ್ತುಮತೋಽನ್ಯಥಾ ।
ನೂನಂ ದೈವಕೃತಂ ಹ್ಯೇತದ್ ಯದೇತತ್ ಕೃತವಾನಸಿ ॥೨೩॥

ನಾವು ಈ ದಿನ ನೀನು ಮಾಡಿದ ಈ ಕಾರ್ಯವನ್ನು ವ್ಯತ್ಯಾಸ ಮಾಡಿ ಸರಿ ಮಾಡಲು ಸಾಧ್ಯವಿಲ್ಲ. ಖಂಡಿತವಾಗಿಯೂ ನೀನು ಮಾಡಿದ ಈ ಕಾರ್ಯವು ದೈವಕೃತವಾದುದೇ ಸರಿ.

ಪಿಪಾಸಿತೇನ ಯಾಃ ಪೀತಾ ವಿಧಿಮಂತ್ರಪುರಸ್ಕೃತಾಃ ।
ಆಪಸ್ತ್ವಯಾ ಮಹಾರಾಜ ಮತ್ತಪೋವೀರ್ಯಸಂಭೃತಾಃ ॥೨೪॥

ತಾಭ್ಯಸ್ತ್ವಮಾತ್ಮನಾ ಪುತ್ರಮೇವಂವೀರ್ಯಂ ಜನಿಷ್ಯಸಿ ।
ವಿಧಾಸ್ಯಾಮೋ ವಯಂ ತತ್ರ ತವೇಷ್ಟಿಂ ಪರಮಾದ್ಭುತಾಮ್ ॥೨೫॥

ಯಥಾ ಶಕ್ರಸಮಂ ಪುತ್ರಂ ಜನಯಿಷ್ಯಸಿ ವೀರ್ಯವಾನ್ ।
ನಚ ಪ್ರಾಣೈರ್ಮಹಾರಾಜ ವಿಯೋಗಸ್ತೇ ಭವಿಷ್ಯತಿ ॥೨೬॥

ಎಲೈ ಮಹಾರಾಜನೇ, ತೃಷೆಯಿಂದ ಬಳಲಿದ್ದನೀನು ವಿಧಿಮಂತ್ರ ಪುರಸ್ಕೃತವಾದ ನನ್ನ ತಪೋವಿಧಿಯಿಂದ ಪೂರ್ಣವಾದ ಯಾವ ಜಲವನ್ನು ಪಾನಮಾಡಿದಯೋ ಆದರಿಂದ ನೀನೇ ಅಂತಹ ಪರಾಕ್ರಮವುಳ್ಳ ಒಬ್ಬ ಪುತ್ರನನ್ನು ಪಡೆಯುತ್ತೀಯೆ. ಎಲೈ ಮಹಾರಾಜನೇ, ಪರಾಕ್ರಮಶಾಲಿಯಾದ ನೀನು ಶಕ್ರಸಮನಾದ ಪುತ್ರನನ್ನು ಪಡೆದರೂ ನಿನಗೆ ಪ್ರಾಣಹಾನಿಯಾಗದಿರುವಂತೆ ನಾವು ಅದ್ಭುತವಾದ ಒಂದು ಇಷ್ಟಿಯನ್ನು ಮಾಡುವೆವು (ಎಂದು ಹೇಳಿದರು).

ತತೋ ವರ್ಷಶತೇ ಪೂರ್ಣೇ ತಸ್ಯ ರಾಜ್ಞೋ ಮಹಾತ್ಮನಃ ।
ವಾಮಂ ಪಾರ್ಶ್ವಂ ವಿನಿರ್ಭಿದ್ಯ ಸುತಃ ಸೂರ್ಯ ಇವಾಪರಃ ॥೨೭॥

ನಿಶ್ಚಕ್ರಾಮ ಮಹಾತೇಜಾ ನಚ ತಂ ಮೃತ್ಯುರಾವಿಶತ್ ।
ಯುವನಾಶ್ವಂ ನರಪತಿಂ ತದದ್ಭುತಮಿವಾಭವತ್ ॥೨೮॥

ಲೋಮಶರು– ಅನಂತರ ನೂರುವರ್ಷಗಳು ಪೂರ್ಣವಾಗುತ್ತಿರಲು ಆ ಮಹಾನುಭಾವನಾದ ರಾಜನ ವಾಮಕುಕ್ಷಿಯನ್ನು ಭೇದಿಸಿಕೊಂಡು ಇನ್ನೊಬ್ಬ ಸೂರ್ಯನಂತಿರುವ ಮಹಾತೇಜಸ್ವಿಯಾದ ಪುತ್ರನು ಹೊರಗೆ ಬಂದನು. ಆದರೂ ರಾಜನಾದ ಯುವನಾಶ್ವನಿಗೆ ಮರಣವುಂಟಾಗಲಿಲ್ಲ. ಆದೊಂದು ಅದ್ಭುತವಾದ ಘಟನೆಯಾಯಿತು.

ತತಃ ಶಕ್ರೋ ಮಹಾತೇಜಾಸ್ತಂ ದಿದೃಕ್ಷುರುಪಾಗಮತ್ ।
ಪ್ರದೇಶಿನೀಂ ತತೋಽಸ್ಯೈ ಶಕ್ರಃ ಸಮಭಿಸಂದಧೇ ॥೨೯॥

ಮಾಮಯಂ ಧಾಸ್ಯತೀತ್ಯೇವಂ ಪರಿತುಷ್ಟ ಇವಾಬ್ರವೀತ್ ।
ಮಾಂಧಾತೇತಿ ಚ ನಾಮಾऽಸ್ಯ ಚಕ್ರುಃ ಸೇಂದ್ರಾ ದಿವೌಕಸಃ ॥೩೦॥

ಆನಂತರ ಮಹಾತೇಜಸ್ವಿಯಾದ ಇಂದ್ರನು ಆ ಶಿಶುವನ್ನು ನೋಡಲು ಬಂದನು. ಅವನು ತನ್ನ ತೋರುಬೆರಳನ್ನು ಶಿಶುವಿನ ಬಾಯಿಯಲ್ಲಿಟ್ಟುಇವನು ನನ್ನಿಂದ ಹಾಲು ಕುಡಿಯುತ್ತಾನೆ ಎಂದು ಪರಿತುಷ್ಟನಾದವನಂತೆ ಹೇಳಿದನು. ಆಗ ಇಂದ್ರ ಮೊದಲಾದ ದೇವತೆಗಳು ಆ ಶಿಶುವಿಗೆ ಮಾಂಧಾತೃ ಎಂದು ನಾಮಕರಣವನ್ನು ಮಾಡಿದರು.

ಪ್ರದೇಶಿನೀಂ ಶಕ್ರದತ್ತಾಮಾಸ್ವಾದ್ಯ ಸ ಶಿಶುಸ್ತದಾ ।
ಅವರ್ಧತ ಮಹಾತೇಜಾಃ ಕಿಷ್ಕೂನಾಂ ಚ ತ್ರಯೋದಶ ॥೩೧॥

ಇಂದ್ರನು ಬಾಯಿಯಲ್ಲಿಟ್ಟತೋರುಬೆರಳನ್ನು ಆಸ್ವಾದಿಸುತ್ತಾ ಮಹಾತೇಜಸ್ವಿಯಾದ ಆ ಶಿಶುವು ಹದಿಮೂರು ಕಿಷ್ಕುಗಳಷ್ಟು ಎತ್ತರ ಬೆಳೆಯಿತು.

ವೇದಾಸ್ತಂ ಸಧನುರ್ವೇದಾ ದಿವ್ಯಾನ್ಯಸ್ತ್ರಾಣಿ ಚೇಶ್ವರಮ್ ।
ಉಪತಸ್ಥುರ್ಮಹಾರಾಜಂ ಧ್ಯಾತಮಾತ್ರಾಣಿ ಸರ್ವಶಃ ॥೩೨॥

ಎಲೈ ಮಹಾರಾಜನೇ, ಅವನು ಚಿಂತಿಸಿದ ತಕ್ಷಣವೇ ಎಲ್ಲ ವೇದಗಳು, ಧನುರ್ವೇದಗಳು, ದಿವ್ಯಾಸ್ತ್ರಗಳು ಪ್ರಭುವಾದ ಅವನನ್ನು ಬಂದು ಸೇರಿದವು.

ಧನುರಾಜಗವಂ ನಾಮ ಶರಾಃ ಶೃಂಗೋದ್ಭವಾಶ್ಚ ಯೇ ।
ಅಭೇದ್ಯಂ ಕವಚಂ ಚೈವ ಸದ್ಯಸ್ತಮುಪಸಂಶ್ರಯನ್ ॥೩೩॥

ಆಜಗವ ಧನುಸ್ಸು, ಶೃಂಗದಿಂದ ಮಾಡಿದ ಬಾಣಗಳು ಅಭೇದ್ಯವಾದ ಕವಚ ಎಲ್ಲವೂ ತಕ್ಷಣದಲ್ಲಿಯೇ ಅವನನ್ನು ಆಶ್ರಯಿಸಿದವು.

ಸೋऽಭಿಷಿಕ್ತೋ ಭಗವತಾ ಸ್ವಯಂ ಶಕ್ರೇಣ ಭಾರತ ।
ಧರ್ಮೇಣೈವಾಜಯಲ್ಲೋಕಾನ್ ತ್ರೀನ್ ವಿಷ್ಣುರಿವ ವಿಕ್ರಮೈಃ ॥೩೪॥

ಎಲೈ ಭಾರತನೇ, ಅವನು ಪೂಜ್ಯನಾದ ಇಂದ್ರನಿಂದ ಸ್ವಯಂ ಅಭಿಷಿಕ್ತನಾಗಿ ವಿಷ್ಣುವು ಮೂರು ವಿಕ್ರಮಗಳಿಂದ ಮೂರು ಲೋಕಗಳನ್ನು ಗೆದ್ದಂತೆ ಧರ್ಮದಿಂದಲೇ ಲೋಕಗಳನ್ನು ವಶಪಡಿಸಿಕೊಂಡನು.

ತಸ್ಯಾಪ್ರತಿಹತಂ ಚಕ್ರಂ ಪ್ರಾವರ್ತತ ಮಹಾತ್ಮನಃ ।
ರತ್ನಾನಿ ಚೈವ ರಾಜರ್ಷಿಂ ಸ್ವಯಮೇವೋಪತಸ್ಥಿರೇ ॥೩೫॥

ಮಹಾತ್ಮನಾದ ಅವನ ಚಕ್ರಾಧಿಪತ್ಯವು ಅಪ್ರತಿಹತವಾಗಿ ಸಾಗಿತು. ರತ್ನಗಳು ರಾಜರ್ಷಿಯಾದ ಅವನನ್ನು ತಾವಾಗಿಯೇ ಬಂದು ಸೇರಿದವು.

ತಸ್ಯೈವಂ ವಸುಸಂಪೂರ್ಣಾ ವಸುಧಾ ವಸುಧಾಧಿಪ ।
ತೇನೇಷ್ಟಂ ವಿವಿಧೈರ್ಯಜ್ಞೈರ್ವಿಧಿವಚ್ಚಾಪ್ತದಕ್ಷಿಣೈಃ ॥೩೬॥

ಎಲೈ ವಸುಧಾಧಿಪನೇ, ಹೀಗೆ ಅವನಿಗೆ ವಸುಧೆಯು ಧನರತ್ನದಿಂದ ಸಂಪೂರ್ಣವಾಯಿತು. ಅವನು ಬಹಳ ದಕ್ಷಿಣೆಗಳಿಂದ ಕೂಡಿದ ವಿವಿಧ ಯಜ್ಞಗಳನ್ನು ವಿಧಿಪೂರ್ವಕವಾಗಿ ಮಾಡಿದನು.

ಕೃತಕೃತ್ಯೋ ಮಹಾತೇಜಾ ಧರ್ಮಂ ಪ್ರಾಪ್ಯ ಸುಪುಷ್ಕಲಮ್ ।
ಶಕ್ರಸ್ಯಾರ್ಧಾಸನಂ ರಾಜನ್ ಲಬ್ಧವಾನಮಿತದ್ಯುತಿಃ ॥೩೭॥

ಕೃತಕೃತ್ಯನೂ, ಮಹಾತೇಜಸ್ವಿಯೂ, ಅಮಿತದ್ಯುತಿಯೂ ಆದ ಅವನು ಎಲೈ ರಾಜನೇ, ಬಹಳ ಪುಷ್ಕಳವಾದ ಧರ್ಮವನ್ನು ಸಂಪಾದಿಸಿ ಇಂದ್ರನ ಅರ್ಧಾಸನವನ್ನು ಪಡೆದನು.

ಏಕಾಹ್ನಾ ಪೃಥಿವೀ ತೇನ ಧರ್ಮನಿತ್ಯೇನ ಧೀಮತಾ ।
ನಿರ್ಜಿತಾ ಶಾಸನಾದೇವ ಸರತ್ನಾಕರಪಟ್ಟನಾ ॥೩೮॥

ಮೇಧಾವಿಯೂ, ಧರ್ಮನಿತ್ಯನೂ ಆದ ಅವನು ಒಂದೇ ದಿನದಲ್ಲಿ ತನ್ನ ಶಾಸನದಿಂದಲೇ ಸಮುದ್ರ ಮತ್ತು ಪಟ್ಟಣಗಳಿಂದ ಕೂಡಿದ ಸಮಸ್ತವಾದ ಪೃಥಿವಿಯನ್ನು ಜಯಿಸಿದನು.

ತಸ್ಯ ಚೈತ್ಯೈರ್ಮಹಾರಾಜ ಕ್ರತೂನಾಂ ದಕ್ಷಿಣಾವತಾಮ್ ।
ಚತುರಂತಾ ಮಹೀ ವ್ಯಾಪ್ತಾ ನಾಸೀತ್ ಕಿಂಚಿದಸಂವೃತಾ ॥೩೯॥

ಎಲೈ ಮಹಾರಾಜನೇ, ಬಹಳ ದಕ್ಷಿಣೆಗಳಿಂದ ಕೂಡಿದ ಅವನ ಯಾಗಗಳ ಚೈತ್ಯ ರೂಪಗಳಿಂದ ಭೂಮಿಯು ನಾಲ್ಕುಕಡೆಗಳಲ್ಲಿಯೂ ತುಂಬಿಹೋಗಿ ಯಾವ ಭಾಗವೂ ಉಳಿದಿರಲಿಲ್ಲ.

ತೇನ ಪದ್ಮಸಹಸ್ರಾಣಿ ಗವಾಂ ದಶ ಮಹಾತ್ಮನಾ ।
ಬ್ರಾಹ್ಮಣೇಭ್ಯೋ ಮಹಾರಾಜ ದತ್ತಾನೀತಿ ಪ್ರಚಕ್ಷತೇ ॥೪೦॥

ಎಲೈ ಮಹಾರಾಜನೇ, ಆ ಮಹಾತ್ಮನು ಹತ್ತು ಪದ್ಮಸಹಸ್ರಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದನೆಂದು ಹೇಳುತ್ತಾರೆ.

ತೇನ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ನರಾಧಿಪ ।
ವೃಷ್ಟಂ ಸಸ್ಯಸಮೃದ್ಧ್ಯರ್ಥಂ ಮಿಷತೋ ವಜ್ರಪಾಣಿನಃ ॥೪೧॥

ಎಲೈ ನರಾಧಿಪನೇ, ಹನ್ನೆರಡು ವರ್ಷ ಅನಾವೃಷ್ಟಿ ಉಂಟಾದಾಗ ಅವನು ಸಸ್ಯಸಮೃದ್ಧಿಯನ್ನು ಮಾಡಲು ವಜ್ರಪಾಣಿಯು ನೋಡುತ್ತಿರುವಂತೆಯೇ ಸ್ವತಃ ಮಳೆಯನ್ನು ಸುರಿಸಿದನು.

ತೇನ ಸೋಮಕುಲೋತ್ಪನ್ನೋ ಗಾಂಧಾರಾಧಿಪತಿರ್ಮಹಾನ್ ।
ಗರ್ಜನ್ನಿವ ಮಹಾಮೇಘಃ ಪ್ರಮಥ್ಯ ನಿಹತಃ ಶರೈಃ ॥೪೨॥

ಅವನು ಸೋಮಕುಲೋತ್ಪನ್ನನಾದ ಮಹಾಮೇಘದಂತೆ ಗರ್ಜನೆಯನ್ನು ಮಾಡುತ್ತಿದ್ದ ಬಲಿಷ್ಠನಾದ ಗಾಂಧಾರಾಧಿಪತಿಯನ್ನು ಯುದ್ಧದಲ್ಲಿ ಸೋಲಿಸಿ ಬಾಣಗಳಿಂದ ಸಂಹರಿಸಿದನು.

ಪ್ರಜಾಶ್ಚತುರ್ವಿಧಾಸ್ತೇನ ತ್ರಾತಾ ರಾಜನ್ ಮಹಾತ್ಮನಾ ।
ತೇನಾತ್ಮತಪಸಾ ಲೋಕಾ ಧಾರಿತಾಶ್ಚಾತಿತೇಜಸಾ ॥೪೩॥

ಎಲೈ ರಾಜನೇ, ಆ ಮಹಾತ್ಮನು ನಾಲ್ಕುವಿಧವಾದ ಪ್ರಜೆಗಳನ್ನೂ ರಕ್ಷಿಸಿದನು. ಅವನು ತನ್ನ ತಪಃಶಕ್ತಿಯಿಂದ ಮತ್ತು ಅತಿತೇಜಸ್ಸಿನಿಂದ ಲೋಕಗಳನ್ನು ಧರಿಸಿದನು.

ತಸ್ಯೈತದ್ ದೇವಯಜನಂ ಸ್ವಾನಮಾದಿತ್ಯತೇಜಸಃ ।
ಯಸ್ಯ ಪುಣ್ಯತಮೋ ದೇಶಃ ಕುರುಕ್ಷೇತ್ರಸ್ಯ ಮಧ್ಯತಃ ॥೪೪॥

ಇದು ಸೂರ್ಯಸಮಾನವಾದ ಪರಾಕ್ರಮವನ್ನು ಹೊಂದಿದ್ದ ಅವನ ದೇವಯಜನ. ಅವನ ಪವಿತ್ರವಾದ ದೇಶವು ಕುರುಕ್ಷೇತ್ರದ ಮಧ್ಯದಲ್ಲಿದೆ.

ತಥಾ ತ್ವಮಪಿ ರಾಜೇಂದ್ರ ಮಾಂಧಾತೇವ ಮಹೀಪತಿಃ ।
ಧರ್ಮಂ ಕೃತ್ವಾ ಮಹೀಂ ರಕ್ಷನ್ ಸ್ವರ್ಗಲೋಕಮವಾಪ್ಸ್ಯಸಿ ॥೪೫॥

ರಾಜೇಂದ್ರನೇ, ನೀನೂ ಮಾಂಧಾತೃ ರಾಜನಂತೆ ಧರ್ಮವನ್ನು ಆಚರಿಸಿ ಭೂಮಿಯನ್ನು ರಕ್ಷಿಸಿ ಸ್ವರ್ಗಲೋಕವನ್ನು ಹೊಂದುವಿ.

ಏತತ್ತೇ ಸರ್ವಮಾಖ್ಯಾತಂ ಮಾಂಧಾತುಶ್ಚರಿತಂ ಮಹತ್ ।
ಯಶಶ್ಚಾಗ್ರ್ಯಂ ಮಹೀಪಾಲ ಯನ್ಮಾಂ ತ್ವಂ ಪರಿಪೃಚ್ಛಸಿ ॥೪೬॥

ಎಲೈ ರಾಜನೇ, ನೀನು ಕೇಳಿದ ಮಾಂಧಾತೃ ರಾಜನ ದೊಡ್ಡ ಚರಿತ್ರೆಯನ್ನು ಮತ್ತು ಅವನ ಶ್ರೇಷ್ಠವಾದ ಕೀರ್ತಿಯನ್ನು ನಿನಗೆ ಹೇಳಿದ್ದೇನೆ.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯೋ ಲೋಮಶೇನ ಮಹಾತ್ಮನಾ ।
ಪಪ್ರಚ್ಛಾನಂತರಂ ಭೂಯಃ ಸೋಮಕಂ ಪ್ರತಿ ಭಾರತ ॥೪೭॥

ವೈಶಂಪಾಯನ– ಎಲೈ ಭಾರತನೇ, ಮಹಾತ್ಮರಾದ ಲೋಮಶರಿಂದ ಹೀಗೆ ಹೇಳಲ್ಪಟ್ಟ ಕೌಂತೇಯನು ಅನಂತರ ಪುನಃ ಸೋಮಕರಾಜನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ತೇನ ಪದ್ಮಸಹಸ್ರಾಣಿ ಗವಾಂ ದಶ ಮಹಾತ್ಮನಾ ।
ಬ್ರಾಹ್ಮಣೇಭ್ಯೋ ಮಹಾರಾಜ ದತ್ತಾನೀತಿ ಪ್ರಚಕ್ಷತೇ ॥೪೦॥

ಎಲೈ ಮಹಾರಾಜನೇ, ಆ ಮಹಾತ್ಮನು ಹತ್ತು ಪದ್ಮಸಹಸ್ರಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದನೆಂದು ಹೇಳುತ್ತಾರೆ.

ತೇನ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ನರಾಧಿಪ ।
ವೃಷ್ಟಂ ಸಸ್ಯಸಮೃದ್ಧ್ಯರ್ಥಂ ಮಿಷತೋ ವಜ್ರಪಾಣಿನಃ ॥೪೧॥

ಎಲೈ ನರಾಧಿಪನೇ, ಹನ್ನೆರಡು ವರ್ಷ ಅನಾವೃಷ್ಟಿ ಉಂಟಾದಾಗ ಅವನು ಸಸ್ಯಸಮೃದ್ಧಿಯನ್ನು ಮಾಡಲು ವಜ್ರಪಾಣಿಯು ನೋಡುತ್ತಿರುವಂತೆಯೇ ಸ್ವತಃ ಮಳೆಯನ್ನು ಸುರಿಸಿದನು.

ತೇನ ಸೋಮಕುಲೋತ್ಪನ್ನೋ ಗಾಂಧಾರಾಧಿಪತಿರ್ಮಹಾನ್ ।
ಗರ್ಜನ್ನಿವ ಮಹಾಮೇಘಃ ಪ್ರಮಥ್ಯ ನಿಹತಃ ಶರೈಃ ॥೪೨॥

ಅವನು ಸೋಮಕುಲೋತ್ಪನ್ನನಾದ ಮಹಾಮೇಘದಂತೆ ಗರ್ಜನೆಯನ್ನು ಮಾಡುತ್ತಿದ್ದ ಬಲಿಷ್ಠನಾದ ಗಾಂಧಾರಾಧಿಪತಿಯನ್ನು ಯುದ್ಧದಲ್ಲಿ ಸೋಲಿಸಿ ಬಾಣಗಳಿಂದ ಸಂಹರಿಸಿದನು.

ಪ್ರಜಾಶ್ಚತುರ್ವಿಧಾಸ್ತೇನ ತ್ರಾತಾ ರಾಜನ್ ಮಹಾತ್ಮನಾ ।
ತೇನಾತ್ಮತಪಸಾ ಲೋಕಾ ಧಾರಿತಾಶ್ಚಾತಿತೇಜಸಾ ॥೪೩॥

ಎಲೈ ರಾಜನೇ, ಆ ಮಹಾತ್ಮನು ನಾಲ್ಕುವಿಧವಾದ ಪ್ರಜೆಗಳನ್ನೂ ರಕ್ಷಿಸಿದನು. ಅವನು ತನ್ನ ತಪಃಶಕ್ತಿಯಿಂದ ಮತ್ತು ಅತಿತೇಜಸ್ಸಿನಿಂದ ಲೋಕಗಳನ್ನು ಧರಿಸಿದನು.

ತಸ್ಯೈತದ್ ದೇವಯಜನಂ ಸ್ಥಾನಮಾದಿತ್ಯತೇಜಸಃ ।
ಯಸ್ಯ ಪುಣ್ಯತಮೋ ದೇಶಃ ಕುರುಕ್ಷೇತ್ರಸ್ಯ ಮಧ್ಯತಃ ॥೪೪॥

ಇದು ಸೂರ್ಯಸಮಾನವಾದ ಪರಾಕ್ರಮವನ್ನು ಹೊಂದಿದ್ದ ಅವನ ದೇವಯಜನ. ಅವನ ಪವಿತ್ರವಾದ ದೇಶವು ಕುರುಕ್ಷೇತ್ರದ ಮಧ್ಯದಲ್ಲಿದೆ.

ತಥಾ ತ್ವಮಪಿ ರಾಜೇಂದ್ರ ಮಾಂಧಾತೇವ ಮಹೀಪತಿಃ ।
ಧರ್ಮಂ ಕೃತ್ವಾ ಮಹೀಂ ರಕ್ಷನ್ ಸ್ವರ್ಗಲೋಕಮವಾಪ್ಸ್ಯಸಿ ॥೪೫॥

ರಾಜೇಂದ್ರನೇ, ನೀನೂ ಮಾಂಧಾತೃ ರಾಜನಂತೆ ಧರ್ಮವನ್ನು ಆಚರಿಸಿ ಭೂಮಿಯನ್ನು ರಕ್ಷಿಸಿ ಸ್ವರ್ಗಲೋಕವನ್ನು ಹೊಂದುವಿ.

ಏತತ್ತೇ ಸರ್ವಮಾಖ್ಯಾತಂ ಮಾಂಧಾತುಶ್ಚರಿತಂ ಮಹತ್ ।
ಯಶಶ್ಚಾಗ್ರ್ಯಂ ಮಹೀಪಾಲ ಯನ್ಮಾಂ ತ್ವಂ ಪರಿಪೃಚ್ಛಸಿ ॥೪೬॥

ಎಲೈ ರಾಜನೇ, ನೀನು ಕೇಳಿದ ಮಾಂಧಾತೃ ರಾಜನ ದೊಡ್ಡ ಚರಿತ್ರೆಯನ್ನು ಮತ್ತು ಅವನ ಶ್ರೇಷ್ಠವಾದ ಕೀರ್ತಿಯನ್ನು ನಿನಗೆ ಹೇಳಿದ್ದೇನೆ.

ವೈಶಂಪಾಯನಃ

ಏವಮುಕ್ತಸ್ತು ಕೌಂತೇಯೋ ಲೋಮಶೇನ ಮಹಾತ್ಮನಾ ।
ಪಪ್ರಚ್ಛಾನಂತರಂ ಭೂಯಃ ಸೋಮಕಂ ಪ್ರತಿ ಭಾರತ ॥೪೭॥

ವೈಶಂಪಾಯನ– ಎಲೈ ಭಾರತನೇ, ಮಹಾತ್ಮರಾದ ಲೋಮಶರಿಂದ ಹೀಗೆ ಹೇಳಲ್ಪಟ್ಟ ಕೌಂತೇಯನು ಅನಂತರ ಪುನಃ ಸೋಮಕರಾಜನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ಮೂರನೆಯ ಅಧ್ಯಾಯ

ಸೋಮಕ ಕಥಾ. ಋತ್ವಿಕ್ ವಚನದಂತೆ ಒಬ್ಬ ಪುತ್ರನನ್ನು ಹೋಮ ಮಾಡಿ ನೂರು ಪುತ್ರರನ್ನು ಪಡೆಯುವ ಆಸೆ.

ಯುಧಿಷ್ಠಿರಃ

ಕಥಂವೀರ್ಯಃ ಸ ರಾಜಾऽಭೂತ್ ಸೋಮಕೋ ವದತಾಂ ವರ ।
ಕರ್ಮಾಣ್ಯಸ್ಯ ಪ್ರಭಾವಂ ಚ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

ಎಲೈ ವಾಗ್ಮಿಶ್ರೇಷ್ಠರೇ, ಸೋಮಕರಾಜನು ಎಂತಹ ಪ್ರಭಾವವುಳ್ಳವನಾಗಿದ್ದನು? ಅವನ ಕರ್ಮಗಳನ್ನು ಮತ್ತು ಪ್ರಭಾವಗಳನ್ನು ಯಥಾರ್ಥವಾಗಿ ತಿಳಿಯಲು ಇಚ್ಛಿಸುತ್ತೇನೆ.

ಲೋಮಶಃ

ಯುಧಿಷ್ಠಿರಾಸೀನ್ನೃಪತಿಃ ಸೋಮಕೋ ನಾಮ ಧಾರ್ಮಿಕಃ ।
ತಸ್ಯ ಭಾರ್ಯಾಶತಂ ರಾಜನ್ ಸದೃಶೀನಾಮಭೂತ್ತದಾ ॥೨॥

ಲೋಮಶ– ಎಲೈ ಯುಧಿಷ್ಠಿರನೇ, ಸೋಮಕನೆಂಬ ಧಾರ್ಮಿಕನಾದ ರಾಜನಿದ್ದನು. ಎಲೈ ರಾಜನೇ, ಅವನಿಗೆ ಅನುರೂಪರಾದ ನೂರುಜನ ಪತ್ನಿಯರಿದ್ದರು.

ಸ ವೈ ಯತ್ನೇನ ಮಹತಾ ತಾಸು ಪುತ್ರಂ ಮಹೀಪತಿಃ ।
ಕಂಚಿನ್ನಾಸಾದಯಾಮಾಸ ಕಾಲೇನ ಮಹತಾऽಪಿ ಚ ॥೩॥

ಆ ರಾಜನು ಬಹಳ ಕಾಲವಾದರೂ ಬಹಳ ಪ್ರಯತ್ನಪಟ್ಟರೂ ಅವರಲ್ಲಿ ಯಾರಲ್ಲಿಯೂ ಅವನಿಗೆ ಒಬ್ಬ ಪುತ್ರನು ಜನಿಸಲಿಲ್ಲ.

ಕದಾಚಿತ್ತಸ್ಯ ವೃದ್ಧಸ್ಯ ಯತಮಾನಸ್ಯ ಧೀಮತಃ ।
ಜಂತುರ್ನಾಮ ಸುತಸ್ತಸ್ಯ ಜ್ಯೇಷ್ಠಾಯಾಂ ಸಮಜಾಯತ ॥೪॥

ಒಮ್ಮೆ ಮೇಧಾವಿಯಾದ ವೃದ್ಧನಾದರೂ ಪ್ರಯತ್ನಶೀಲನಾದ ಅವನಿಗೆ ಜ್ಯೇಷ್ಠ ಪತ್ನಿಯಲ್ಲಿ ಜಂತು ಎಂಬ ಪುತ್ರನು ಜನಿಸಿದನು.

ತಂ ಜಾತಂ ಮಾತರಃ ಸರ್ವಾಃ ಪರಿವಾರ್ಯ ಸಮಾಸತೇ ।
ಸತತಂ ಪೃಷ್ಠತಃ ಕೃತ್ವಾ ಕಾಮಭೋಗಾನ್ ವಿಶಾಂಪತೇ ॥೫॥

ಎಲೈ ರಾಜನೇ, ಆ ಪುತ್ರನು ಹುಟ್ಟಿದ ಮೇಲೆ ಅವನ ಎಲ್ಲಾ ತಾಯಿಯರೂ ತಮ್ಮ ಇಷ್ಟವಾದ ಭೋಗಗಳನ್ನೆಲ್ಲಾ ತಿರಸ್ಕರಿಸಿ ಸತತವಾಗಿ ಆ ಶಿಶುವಿನ ಸುತ್ತಲೂ ಇರುತ್ತಿದ್ದರು.

ತತಃ ಪಿಪೀಲಿಕಾ ಜಂತುಂ ಕದಾಚಿದದಶತ್ ಸ್ಪೃಜೆ ।
ಸ ದಷ್ಟೋ ಹ್ಯರುದದ್ ರಾಜನ್ ತೇನ ದುಃಖೇನ ಬಾಲಕಃ ॥೬॥

ಅನಂತರ ಒಮ್ಮೆ ಒಂದು ಇರುವೆಯು ಆ ಶಿಶುವಿನ ಪೃಷ್ಠದಲ್ಲಿ ಕಚ್ಚಿತು. ಎಲೈ ರಾಜನೇ, ಇರುವೆಯಿಂದ ಕಚ್ಚಲ್ಪಟ್ಟ ಆ ಬಾಲಕನು ದುಃಖದಿಂದ ಅತ್ತನು.

ತತಸ್ತಾ ಮಾತರಃ ಸರ್ವಾಃ ಪ್ರಾಕ್ರೋಶನ್ ಭೃಶದುಃಖಿತಾಃ ।
ಪರಿವಾರ್ಯ ಜಂತುಂ ಬಾಲಂ ತಂ ಸ ಶಬ್ದಸ್ತುಮುಲೋಽಭವತ್ ॥೭॥

ಅನಂತರ ಆ ತಾಯಿಯರೆಲ್ಲರೂ ಬಾಲನಾದ ಜಂತುವನ್ನು ಸುತ್ತುವರಿದು ಬಹಳ ದುಃಖದಿಂದ ಗಟ್ಟಿಯಾಗಿ ಅತ್ತರು. ಆ ಶಬ್ದವು ಬಹಳ ತೀವ್ರವಾಗಿದ್ದಿತು.

ತಮಾರ್ತನಾದಂ ಸಹಸಾ ಶುಶ್ರಾವ ಸ ಮಹೀಪತಿಃ ।
ಅಮಾತ್ಯಪರಿಷನ್ಮಧ್ಯೇ ಉಪವಿಷ್ಟಃ ಸಹ ದ್ವಿಜೈಃ ॥೮॥

ಅಮಾತ್ಯಪರಿಷತ್ತಿನ ಮಧ್ಯದಲ್ಲಿ ಬ್ರಾಹ್ಮಣರ ಜೊತೆಯಲ್ಲಿ ಕುಳಿತಿದ್ದ ರಾಜನು ಇದ್ದಕ್ಕಿದ್ದಂತೆಯೇ ಉಂಟಾದ ಆ ಆರ್ತನಾದವನ್ನು ಕೇಳಿದನು.

ತತಃ ಪ್ರಸ್ಥಾಪಯಾಮಾಸ ಕಿಮೇತದಿತಿ ಪಾರ್ಥಿವಃ ।
ತಸ್ಮೈ ಕ್ಷತ್ತಾ ಯಥಾವೃತ್ತಮಾಚಚಕ್ಷೇ ಸುತಂ ಪ್ರತಿ ॥೯॥

ಆಗ ಆ ರಾಜನು ಇದೇನೆಂದು ತಿಳಿದುಕೊಳ್ಳಲು ತನ್ನ ಸೂತನನ್ನು ಕಳುಹಿಸಿದನು. ಆ ಸೂತನು ಹಿಂದಿರುಗಿ ಬಂದು ಅವನಿಗೆ ಶಿಶುವಿನ ಯಥಾರ್ಥಸ್ಥಿತಿಯನ್ನು ತಿಳಿಸಿದನು.

ತ್ವರಮಾಣಃ ಸ ಚೋತ್ಥಾಯ ಸೋಮಕಃ ಸಹ ಮಂತ್ರಿಭಿಃ ।
ಪ್ರವಿಶ್ಯಾಂತಃಪುರಂ ಪುತ್ರಮಾಶ್ವಾಸಯದರಿಂದಮಃ ॥೧೦॥

ಸೋಮಕರಾಜನು ಮಂತ್ರಿಗಳ ಜೊತೆಯಲ್ಲಿ ಎದ್ದು ಶೀಘ್ರವಾಗಿ ಅಂತಃಪುರಕ್ಕೆ ಹೋಗಿ ಅರಿಂದಮನಾದ ಅವನು ತಾನೇ ಪುತ್ರನನ್ನು ಸಮಾಧಾನಪಡಿಸಿದನು.

ಸಾಂತ್ವಯಿತ್ವಾ ತು ತಂ ಪುತ್ರಂ ನಿಷ್ಕ್ರಮ್ಯಾಂತಃಪುರಾತ್ ತತಃ ।
ಋತ್ವಿಜಾ ಸಹಿತೋ ರಾಜನ್ ಸಹಾಮಾತ್ಯ ಉಪಾವಿಶತ್ ॥೧೧॥

ಎಲೈ ರಾಜನೇ, ಶಿಶುವನ್ನು ಸಮಾಧಾನಪಡಿಸಿ ಅಂತಃಪುರದಿಂದ ಹೊರಗೆ ಬಂದು ತನ್ನ ಪುರೋಹಿತನ ಜೊತೆಯಲ್ಲಿ ಅಮಾತ್ಯನ ಎದುರಿಗೆ ಕುಳಿತುಕೊಂಡನು.

ಸೋಮಕಃ

ಧಿಗಸ್ತ್ವಹೈಕಪುತ್ರತ್ವಮಪುತ್ರತ್ವಂ ವರಂ ಭವೇತ್ ।
ಅನಿತ್ಯತ್ವಾಚ್ಚ ಭೂತಾನಾಂ ಶೋಕ ಏವೈಕಪುತ್ರತಾ ॥೧೨॥

ಸೋಮಶ– ಏಕಪುತ್ರತ್ವಕ್ಕೆ ಧಿಕ್ಕಾರವಿರಲಿ. ಅದಕ್ಕಿಂತ ಪುತ್ರನನ್ನು ಪಡೆಯದಿರುವುದೇ ಶ್ರೇಷ್ಠವಾದುದು. ಪ್ರಾಣಿಗಳ ಜೀವನವು ಅನಿತ್ಯವಾಗಿರುವುದರಿಂದ ಏಕಪುತ್ರತ್ವವು ಶೋಕವೇ ಸರಿ.

ಇದಂ ಭಾರ್ಯಾಶತಂ ಬ್ರಹ್ಮನ್ ಪರೀಕ್ಷ್ಯೋಪಚಿತಂ ಪ್ರಭೋ ।
ಪುತ್ರಾರ್ಥಿನಾ ಮಯಾ ಚೋಢಂ ನ ಚಾಸಾಂ ವಿದ್ಯತೇ ಪ್ರಜಾ ॥೧೩॥

ಎಲೈ ಬ್ರಾಹ್ಮಣರೇ (ಪುರೋಹಿತರೇ), ಪ್ರಭುಗಳೇ, ನಾನು ಪರೀಕ್ಷೆಮಾಡಿ ಈ ನೂರು ಪತ್ನಿಯರನ್ನು ಸಂಪಾದಿಸಿದೆನು. ಪುತ್ರಸಂತಾನವನ್ನು ಬಯಸಿ ಅವರನ್ನು ವಿವಾಹ ಮಾಡಿಕೊಂಡೆನು. ಆದರೆ ಯಾರಿಗೂ ಒಂದು ಮಗುವೂ ಜನಿಸಲಿಲ್ಲ.

ಏಕಃ ಕಥಂಚಿದುತ್ಪನ್ನಃ ಪುತ್ರೋ ಜಂತುರಯಂ ಮಮ ।
ಯತಮಾನಾಸು ಸರ್ವಾಸು ಕಿಂ ನು ದುಃಖಮತಃ ಪರಮ್ ॥೧೪॥

ಕೊನೆಗೆ ಹೇಗೋ ಕಷ್ಟಪಟ್ಟು ಎಲ್ಲರಲ್ಲಿಯೂ ಪ್ರಯತ್ನಪಡುತ್ತಿದ್ದನನಗೆ ಈ ಜಂತುವು ಪುತ್ರನಾಗಿ ಜನಿಸಿದನು. ಇದಕ್ಕಿಂತ ಹೆಚ್ಚು ದುಃಖಕರವಾದುದು ಏನಿದೆ?

ವಯಶ್ಚ ಸಮತೀತಂ ಮೇ ಸಭಾರ್ಯಸ್ಯ ದ್ವಿಜೋತ್ತಮ ।
ಆಸಾಂ ಪ್ರಾಣಾಃ ಸಮಾಯತ್ತಾ ಮಮಾಸ್ಮಿನ್ನೇಕಪುತ್ರಕೇ ॥೧೫॥

ಎಲೈ ದ್ವಿಜೋತ್ತಮರೇ, ನನಗೂ ಮತ್ತು ನನ್ನ ಭಾರ್ಯೆಯರಿಗೂ ವಯಸ್ಸು ಮೀರಿ ಹೋಗಿದೆ. ಇವರೆಲ್ಲರ ಪ್ರಾಣಗಳು ನನ್ನ ಆ ಒಂದು ಪುತ್ರನಲ್ಲಿ ಪ್ರತಿಷ್ಠಿತವಾಗಿವೆ.

ಸ್ಯಾತ್ತು ಕರ್ಮ ತಥಾಯುಕ್ತಂ ಯೇನ ಪುತ್ರಶತಂ ಭವೇತ್ ।
ಮಹತಾ ಲಘುನಾ ವಾऽಪಿ ಕರ್ಮಣಾ ದುಷ್ಕರೇಣ ವಾ ॥೧೬॥

ದೊಡ್ಡದಾಗಲೀ, ಚಿಕ್ಕದಾಗಲೀ ಅಥವಾ ದುಷ್ಕರವಾದುದಾಗಲೀ ಅಂತಹದ್ದನ್ನು ಮಾಡಿ ನೂರುಜನ ಪುತ್ರರನ್ನು ಪಡೆಯುವ ಯಾವುದಾದರೂ ಕರ್ಮವಿದೆಯೇ?

ಋತ್ವಿಕ್

ಅಸ್ತಿ ಚೈತಾದೃಶಂ ಕರ್ಮ ಯೇನ ಪುತ್ರಶತಂ ಭವೇತ್ ।
ಯದಿ ಶಕ್ನೋಷಿ ತತ್ ಕರ್ತುಮಥ ವಕ್ಷ್ಯಾಮಿ ಸೋಮಕ ॥೧೭॥

ಋತ್ವಿಕ್- ಪುತ್ರಶತವನ್ನು ಪಡೆಯುವ ಅಂತಹ ಒಂದು ಕರ್ಮವಿದೆ. ಎಲೈ ಸೋಮಕನೇ, ನಿನಗೆ ಅದನ್ನು ಮಾಡುವ ಶಕ್ತಿ ಇದ್ದರೆ ನಾನು ಅದನ್ನು ಹೇಳುವೆನು.

ಸೋಮಕಃ

ಕಾರ್ಯಂ ವಾ ಯದಿ ವಾऽಕಾರ್ಯಂ ಯೇನ ಪುತ್ರಶತಂ ಭವೇತ್ ।
ಕೃತಮೇವೇತಿ ತದ್ ವಿದ್ಧಿ ಭಗವನ್ ತದ್ ಬ್ರವೀಹಿ ಮೇ ॥೧೮॥

ಸೋಮಕ– ಅದು ಕಾರ್ಯವಾಗಲೀ ಅಥವಾ ಅಕಾರ್ಯವಾಗಲೀ, ಯಾವ ಕರ್ಮದಿಂದ ನೂರು ಪುತ್ರರು ಜನಿಸುವರೋ ಅಂತಹ ಕರ್ಮವನ್ನು ನಾನು ಮಾಡಿದ್ದೇನೆಂದು ತಿಳಿಯಿರಿ. ಪೂಜ್ಯರೇ, ನನಗೆ ಅದನ್ನು ಹೇಳಿ.

ಋತ್ವಿಕ್

ಯಜಸ್ವ ಜಂತುನಾ ರಾಜನ್ ತ್ವಂ ಮಯಾ ವಿತತೇ ಕ್ರತೌ ।
ತತಃ ಪುತ್ರಶತಂ ಶ್ರೀಮದ್ ಭವಿಷ್ಯತ್ಯಚಿರೇಣ ತೇ ॥೧೯॥

ಋತ್ವಿಕ್- ಎಲೈ ರಾಜನೇ, ನಾನು ಮಾಡುವ ವಿಸ್ತಾರವಾದ ಯಜ್ಞದಲ್ಲಿ ಜಂತುವಿನಿಂದ ಯಾಗವನ್ನು ಮಾಡು. ಆಗ ನಿನಗೆ ಶೀಘ್ರದಲ್ಲಿಯೇ ಸಂಪದ್ಯುಕ್ತರಾದ ನೂರುಪುತ್ರರು ಜನಿಸುವರು.

ವಪಾಯಾಂ ಹೂಯಮಾನಾಯಾಂ ಧೂಮಮಾಘ್ರಾಂತು ಮಾತರಃ ।
ತತಸ್ತಾಃ ಸುಮಹಾವೀರ್ಯಾನ್ ಜನಯಿಷ್ಯಂತಿ ತೇ ಸುತಾನ್ ॥೨೦॥

ಜಂತುವಿನ ಹೋಮ ಮಾಡುವಾಗ ಆ ವಸೆಯ ಧೂಮವನ್ನು ನಿನ್ನ ಪತ್ನಿಯರು ಆಘ್ರಾಣಿಸಲಿ. ಅದರಿಂದ ಅವರೆಲ್ಲರೂ ಮಹಾಬಲಶಾಲಿಗಳಾದ ಪುತ್ರರನ್ನು ಪಡೆಯುವರು.

ತಸ್ಯಾಮೇವ ತು ತೇ ಜಂತುರ್ಭವಿತಾ ಪುನರಾತ್ಮಜಃ ।
ಉತ್ತರೇ ಚಾಸ್ಯ ಸೌವರ್ಣಂ ಲಕ್ಷ್ಮ ಪಾರ್ಶ್ವೇ ಭವಿಷ್ಯತಿ ॥೨೧॥

ಈ ಜಂತುವಾದರೂ ನಿನ್ನ ಜ್ಯೇಷ್ಠಪತ್ನಿಯಲ್ಲಿಯೇ ಇನ್ನೊಮ್ಮೆ ನಿನ್ನ ಮಗನಾಗಿ ಜನಿಸುವನು. ಅವನ ಎಡಭಾಗದಲ್ಲಿ ಒಂದು ಚಿನ್ನದ ಚಿಹ್ನೆಯು ಇರುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಸೋಮಕನಿಗೆ ಪುತ್ರಶತ ಪ್ರಾಪ್ತಿ. ಪುರೋಹಿತರ ಜೊತೆಯಲ್ಲಿ ನರಕವನ್ನು ಅನುಭವಿಸಿ ಸ್ವರ್ಗಗಮನ.

ಸೋಮಕಃ

ಬ್ರಹ್ಮನ್ ಯದ್ಯದ್ಯಥಾ ಕಾರ್ಯಂ ತತ್ತತ್ ಕುರು ತಥಾತಥಾ ।
ಪುತ್ರಕಾಮತಯಾ ಸರ್ವಂ ಕರಿಷ್ಯಾಮಿ ವಚಸ್ತವ ॥೧॥

ಸೋಮಕ– ಎಲೈ ಬ್ರಾಹ್ಮಣರೇ, ಯಾವ ಯಾವ ಕಾರ್ಯವನ್ನು ಹೇಗೆ ಹೇಗೆ ಮಾಡಬೇಕೋ ಹಾಗೆಯೇ ಮಾಡಿ. ನಾನು ಪುತ್ರಕಾಮನಾದ ಕಾರಣದಿಂದ ನೀವು ಹೇಳಿದುದೆಲ್ಲವನ್ನೂ ಮಾಡುವೆನು.

ಲೋಮಶಃ

ತತಃ ಸ ಯಾಜಯಾಮಾಸ ಸೋಮಕಂ ತೇನ ಜಂತುನಾ ।
ಮಾತರಃ ಸ್ಮ ಬಲಾತ್ ಪುತ್ರಮಪಾಕಾರ್ಷುಃ ಕೃಪಾನ್ವಿತಾಃ ॥೨॥

ಲೋಮಶ– ಆನಂತರ ಆ ಋತ್ವಿಜನು ಜಂತುವಿನಿಂದ ಸೋಮಕನಿಗೆ ಯಾಗವನ್ನು ಮಾಡಿಸಿದನು. ಕೃಪಾವಿಷ್ಟರಾದ ತಾಯಿಯರು ಆ ಶಿಶುವನ್ನು ಬಲಾತ್ಕಾರದಿಂದ ತಮ್ಮೆಡೆಗೆ ಎಳೆದುಕೊಂಡರು.

ಹಾ ಹತಾಃ ಸ್ಮೇತಿ ವಾಶಂತ್ಯಃ ತೀವ್ರಶೋಕಸಮನ್ವಿತಾಃ ।
ತಂ ಮಾತರಃ ಪರ್ಯಕರ್ಷನ್ ಗೃಹೀತ್ವಾ ದಕ್ಷಿಣೇ ಕರೇ ।
ಸವ್ಯೇ ಪಾಣೌ ಗೃಹೀತ್ವಾ ತು ಯಾಜಕೋಽಪಿ ಸ್ಮ ಕರ್ಷತಿ ॥೩॥

ಅಯ್ಯೋ! ನಾವು ಸತ್ತೆವು ಎಂದು ಕಿರುಚುತ್ತಾ ಬಹಳ ಶೋಕದಿಂದ ಕೂಡಿದ ಆ ತಾಯಿಯರು ಶಿಶುವಿನ ಬಲಗೈಯನ್ನು ಹಿಡಿದು ಎಳೆದರು. ಪುರೋಹಿತನೂ ಸಹ ಶಿಶುವಿನ ಎಡಗೈಯನ್ನು ಹಿಡಿದು ಎಳೆದನು.

ಕುರರೀಣಾಮಿವಾರ್ತಾನಾಮಪಾಕೃಷ್ಯ ತು ತಂ ಸುತಮ್ ।
ವಿಶಸ್ಯ ಚೈನಂ ವಿಧಿನಾ ವಪಾಮಸ್ಯ ಜುಹಾವ ಸಃ ॥೪॥

ಕುರರೀ ಪಕ್ಷಿಗಳಂತೆ ಆರ್ತನಾದವನ್ನು ಮಾಡುತ್ತಿದ್ದ ಆ ತಾಯಿಯರಿಂದ ಆ ಮಗುವನ್ನು ಕಿತ್ತುಕೊಂಡು ಪುರೋಹಿತನು ಅವನನ್ನು ಸಂಹರಿಸಿ ಅವನ ವಪೆಯಿಂದ ಹೋಮವನ್ನು ಮಾಡಿದನು.

ಜಂತೋರ್ವಪಾಯಾಂ ಹೂಯಂತ್ಯಾಂ ಧೂಮಮಾಘ್ರಾಯ ಮಾತರಃ ।
ಆರ್ತಾ ನಿಪೇತುಃ ಸಹಸಾ ಪೃಥಿವ್ಯಾಂ ಕುರುನಂದನ ।
ಸರ್ವಾಶ್ಚ ಗರ್ಭಾನಲಭನ್ ತತಸ್ತಾಃ ಪಾರ್ಥಿವಾಂಗನಾಃ ॥೫॥

ಜಂತುವಿನ ವಪೆಯು ಆಹುತಿಯಾಗಿ ಕೊಡಲ್ಪಡುತ್ತಿರಲು ಅವನ ತಾಯಿಯರು ಆ ಧೂಮವನ್ನು ಆಘ್ರಾಣಿಸಿ ಆರ್ತರಾಗಿ ಇದ್ದಕ್ಕಿದ್ದಂತೆಯೇ ಭೂಮಿಯ ಮೇಲೆ ಕುಸಿದು ಬಿದ್ದರು. ಎಲೈ ಕುರುನಂದನನೇ, ಆನಂತರ ಆ ರಾಜಪತ್ನಿಯರೆಲ್ಲರೂ ಗರ್ಭಗಳನ್ನು ಧರಿಸಿದರು.

ತತೋ ದಶಸು ಮಾಸೇಷು ಸೋಮಕಸ್ಯ ವಿಶಾಂಪತೇ ।
ಜಜ್ಞೇ ಪುತ್ರಶತಂ ಪೂರ್ಣಂ ತಾಸು ಸರ್ವಾಸು ಭಾರತ ॥೬॥

ಎಲೈ ಭಾರತನೇ, ಎಲೈ ರಾಜನೇ, ಅನಂತರ ಹತ್ತುತಿಂಗಳುಗಳು ಕಳೆದಮೇಲೆ ಸೋಮಕನಿಗೆ ಆ ಎಲ್ಲ ಪತ್ನಿಯರಲ್ಲಿಯೂ ಸೇರಿ ಪುತ್ರಶತವು ಜನಿಸಿತು.

ಜಂತುಜ್ಯೇಷ್ಠಃ ಸಮಭವತ್ ಜನಿತ್ರ್ಯಾಮೇವ ಭಾರತ ।
ಸ ತಾಸಾಮಿಷ್ಟ ಏವಾಸೀನ್ನ ತಥಾಽನ್ಯೇ ನಿಜಾಃ ಸುತಾಃ ॥೭॥

ಎಲೈ ಭಾರತನೇ, ಜಂತುವೂ ಸಹ ಅದೇ ತಾಯಿಯಲ್ಲಿಯೇ ಜ್ಯೇಷ್ಠಪುತ್ರನಾಗಿ ಜನಿಸಿದನು. ಅವನು ಎಲ್ಲರಿಗೂ ಇಷ್ಟವಾಗಿದ್ದನು. ತಮ್ಮ ತಮ್ಮ ಪುತ್ರರು ಆ ಸ್ತ್ರೀಯರಿಗೆ ಅಷ್ಟು ಇಷ್ಟವಾಗಿರಲಿಲ್ಲ.

ತಚ್ಚ ಲಕ್ಷಣಮಪ್ಯಾಸೀತ್ ಸೌವರ್ಣಂ ಪಾರ್ಶ್ವ ಉತ್ತರೇ ।
ತಸ್ಮಿನ್ ಪುತ್ರಶತೇ ಚಾಗ್ರ್ಯಃ ಸ ಬಭೂವ ಗುಣೈರ್ಯುತಃ ॥೮॥

ಅವನ ವಾಮಪಾರ್ಶ್ವದಲ್ಲಿ ಚಿನ್ನದ ಲಕ್ಷಣವೂ ಇದ್ದಿತು. ಆ ನೂರುಪುತ್ರರ ಮಧ್ಯದಲ್ಲಿ ಅವನು ಗುಣಗಳಿಂದ ಕೂಡಿದವನಾಗಿ ಶ್ರೇಷ್ಠನಾಗಿದ್ದನು.

ತತಃ ಸ ಕಾಲಮಗಮತ್ ಸೋಮಕಸ್ಯ ಗುರುರ್ನೃಪ ।
ಅಥ ಕಾಲೇ ವ್ಯತೀತೇ ತು ಸೋಮಕೋಽಪ್ಯಗಮತ್ ಪರಮ್ ॥೯॥

ಎಲೈ ರಾಜನೇ, ಅನಂತರ ಕಾಲಕ್ರಮದಲ್ಲಿ ಸೋಮಕನ ಪುರೋಹಿತನು ಮೃತ್ಯುವಶನಾದನು. ಸ್ವಲ್ಪಕಾಲವು ಕಳೆದ ಮೇಲೆ ಸೋಮಕನೂ ಮರಣವನ್ನು ಹೊಂದಿದನು.

ನರಕೇ ಪಚ್ಯಮಾನಂ ತು ದದರ್ಶ ಸ ತು ಸೋಮಕಃ ।
ತಮಪೃಚ್ಛತ್ ಕಥಂ ನು ತ್ವಂ ನರಕೇ ಪಚ್ಯಸೇ ದ್ವಿಜ ॥೧೦॥

ಸೋಮಕನು ತನ್ನ ಗುರುವು ನರಕದಲ್ಲಿ ಬೇಯಿಸಲ್ಪಡುತ್ತಿರುವುದನ್ನು ನೋಡಿ ಅವನನ್ನು ಕುರಿತು 'ಎಲೈ ಬ್ರಾಹ್ಮಣರೇ, ನೀವು ಏಕೆ ನರಕದಲ್ಲಿ ಪಚನವನ್ನು ಹೊಂದುತ್ತಿದ್ದೀರಿ?' ಎಂದು ಕೇಳಿದನು.

ತಮಬ್ರವೀದ್ ಗುರುಃ ಸೋಽಥ ಪಚ್ಯಮಾನೋಽಗ್ನಿನಾ ಭೃಶಮ್ ।
ತ್ವಂ ಮಯಾ ಯಾಜಿತೋ ರಾಜನ್ ತಸ್ಯೇದಂ ಕರ್ಮಣಃ ಫಲಮ್।

ಅದನ್ನು ಕೇಳಿದ ಅವನ ಗುರುವು ಅಗ್ನಿಯ ತಾಪದಿಂದ ತೀವ್ರಬಾಧೆಗೆ ಒಳಗಾಗಿ– 'ರಾಜನೇ, ನಾನು ನಿನಗೆ ಯಾಗವನ್ನು ಮಾಡಿಸಿದೆ; ಇದು ಅದರ ಫಲ' ಎಂದು ಹೇಳಿದನು.

ಏತಚ್ಛ್ರುತ್ವಾ ತು ರಾಜರ್ಷಿರ್ಧರ್ಮರಾಜಮಥಾಬ್ರವೀತ್ ॥೧೧॥

ಅಹಂ ತತ್ರ ಪ್ರವೇಕ್ಷ್ಯಾಮಿ ಮುಚ್ಯತಾಂ ಮಮ ಯಾಜಕಃ ।
ಮತ್ಕೃತೇ ಹಿ ಮಹಾಭಾಗಃ ಪಚ್ಯತೇ ನರಕಾಗ್ನಿನಾ ।
ಸೋಽಹಮಾತ್ಮಾನಮಾಧಾಸ್ಯೇ ನರಕಾನ್ಮುಚ್ಯತಾಂ ಗುರುಃ ॥೧೨॥

ಇದನ್ನು ಕೇಳಿದ ರಾಜರ್ಷಿಯು ಧರ್ಮರಾಜನನ್ನು ಕುರಿತು ನಾನು ಅಲ್ಲಿ ಪ್ರವೇಶ ಮಾಡುವೆನು. ನನ್ನ ಗುರುವನ್ನು ಬಿಟ್ಟುಬಿಡಿ. ಆ ಮಹಾನುಭಾವನು ನನ್ನ ನಿಮಿತ್ತದಿಂದ ನರಕಾಗ್ನಿಯಲ್ಲಿ ಬೇಯುತ್ತಿದ್ದಾನೆ. ಆದ್ದರಿಂದ ನಾನು ನನ್ನನ್ನೇ ಆ ತಾಪಕ್ಕೆ ಒಡ್ಡುತ್ತೇನೆ. ನರಕದಿಂದ ನನ್ನ ಗುರುವನ್ನು ಬಿಟ್ಟುಬಿಡಿ ಎಂದು ಹೇಳಿದನು.

ಧರ್ಮಃ

ನಾನ್ಯಃ ಕರ್ತುಃ ಫಲಂ ರಾಜನ್ನುಪಭುಂಕ್ತೇ ಕದಾಚನ ।
ಇಮಾನಿ ತವ ದೃಶ್ಯಂತೇ ಫಲಾನಿ ವದತಾಂ ವರ ॥೧೩॥

ಧರ್ಮ– ರಾಜನೇ, ಒಬ್ಬನ ಕರ್ಮದ ಫಲವನ್ನು ಇನ್ನೊಬ್ಬನು ಎಂದೂ ಅನುಭವಿಸುವುದಿಲ್ಲ. ವಾಗ್ಮಿಗಳನ್ನು ಶ್ರೇಷ್ಠನಾದವನೇ, ನೀನು ಮಾಡಿದ ಕರ್ಮದ ಪುಣ್ಯಫಲಗಳು ಇಗೋ ಕಾಣುತ್ತಿವೆ.

ಸೋಮಕಃ

ಪುಣ್ಯಾನ್ನ ಕಾಮಯೇ ಲೋಕಾನ್ ಋತೇಽಹಂ ಬ್ರಹ್ಮವಾದಿನಮ್ ।
ಇಚ್ಛಾಮ್ಯಹಮನೇನೈವ ಸಹ ವಸ್ತುಂ ಸುರಾಲಯೇ ॥೧೪॥

ನರಕೇ ವಾ ಧರ್ಮರಾಜ ಕರ್ಮಣಾಽಸ್ಯ ಸಮೋ ಹ್ಯಹಮ್ ।
ಪುಣ್ಯಾಪುಣ್ಯಫಲಂ ದೇವ ಸಮಮಸ್ತ್ವಯೋರಿದಮ್ ॥೧೫॥

ಸೋಮಕ– ನಾನು ನನ್ನ ಪುರೋಹಿತರನ್ನು ಬಿಟ್ಟು ಪುಣ್ಯದಿಂದ ಸಂಪಾದಿಸಿದ ಲೋಕಗಳನ್ನು ಹೊಂದಲು ಇಷ್ಟಪಡುವುದಿಲ್ಲ. ನಾನು ಸ್ವರ್ಗದಲ್ಲಿರುವುದಾದರೆ ಈ ಗುರುಗಳ ಜೊತೆಯಲ್ಲೇ ಇರುತ್ತೇನೆ ಎಂದು ಬಯಸುತ್ತೇನೆ. ಎಲೈ ಧರ್ಮರಾಜನೇ, ನರಕದಲ್ಲಿರುವುದಾದರೂ ಇವರ ಜೊತೆಯಲ್ಲಿಯೇ ಇರುತ್ತೇನೆ. ನಾನು ಕರ್ಮದಿಂದ ಅವರ ಕರ್ಮಕ್ಕೆ ಸಮಾನನಾಗಿದ್ದೇನೆ. ಎಲೈ ದೇವನೇ, ಪುಣ್ಯಪಾಪಗಳ ಈ ಫಲಗಳು ನಮ್ಮಿಬ್ಬರಿಗೂ ಸಮಾನವಾಗಿಯೇ ಇರಲಿ.

ಧರ್ಮಃ

ಯದ್ಯೇವಮೀಪ್ಸಿತೋ ರಾಜನ್ ಭುಂಕ್ಷ್ವಾದ್ಯ ಸಹಿತಃ ಫಲಮ್ ।
ತುಲ್ಯಕಾಲಂ ಸಹಾನೇನ ಪಶ್ಚಾತ್ ಪ್ರಾಪ್ಸ್ಯಸಿ ಸದ್ಗತಿಮ್ ॥೧೬॥

ಧರ್ಮ– ಎಲೈ ರಾಜನೇ, ನೀನು ಹೀಗೆ ಇಷ್ಟಪಡುವುದಾದರೆ ಈಗ ಗುರುವಿನ ಜೊತೆಯಲ್ಲಿಯೇ ಸಮಾನಕಾಲದವರೆಗೆ ಇಲ್ಲಿ ಫಲವನ್ನು ಅನುಭವಿಸು. ಆನಂತರ ಅವನ ಜೊತೆಯಲ್ಲಿಯೇ ಸದ್ಗತಿಯನ್ನು ಹೊಂದುವಿ.

ಲೋಮಶಃ

ಸ ಚಕಾರ ತಥಾ ಸರ್ವಂ ರಾಜಾ ರಾಜೀವಲೋಚನ ॥೧೭॥

ಪುನಶ್ಚ ಲೇಭೇ ಲೋಕಾನ್ ಸ್ವಾನ್ ಕರ್ಮಣಾ ನಿರ್ಜಿತಾನ್ ಶುಭಾನ್ ।
ಸಹ ತೇನೈವ ವಿಪ್ರೇಣ ಗುರುಣಾ ಸ ಗುರುಪ್ರಿಯಃ ॥೧೮॥

ಲೋಮಶ– ಎಲೈ ರಾಜೀವಲೋಚನನೇ, ಆ ರಾಜನು ಎಲ್ಲವನ್ನೂ ಹಾಗೆಯೇ ಮಾಡಿ ಪುನಃ ಗುರುಪ್ರಿಯನಾದ ಅವನು ತನ್ನ ಬ್ರಾಹ್ಮಣ ಗುರುವಿನ ಜೊತೆಯಲ್ಲಿಯೇ ತನ್ನ ಪುಣ್ಯದಿಂದ ಸಂಪಾದಿಸಿದ ಲೋಕಗಳನ್ನು ಹೊಂದಿದನು.

ಏಷ ತಸ್ಯಾಶ್ರಮಃ ಪುಣ್ಯೋ ಯ ಏಷೋಽತ್ರ ಪ್ರಕಾಶತೇ ।
ಕ್ಷಾಂತ್ಯಾ ಉಷ್ಯಾತ್ರಂ ಷಡ್ರಾತ್ರಂ ಪ್ರಾಪ್ನೋತಿ ಸುಗತಿಂ ನರಃ ॥೧೯॥

ಇಲ್ಲಿ ಎದುರಿಗೆ ಪ್ರಕಾಶಿಸುತ್ತಿರುವುದು ಅವನ ಪವಿತ್ರವಾದ ಆಶ್ರಮ. ಯಾವ ಮನುಷ್ಯನು ಇಲ್ಲಿ ಆರು ರಾತ್ರಿ ಕ್ಷಮೆಯಿಂದ ವಾಸಮಾಡುತ್ತಾನೆಯೋ ಅವನು ಸದ್ಗತಿಯನ್ನು ಹೊಂದುತ್ತಾನೆ.

ವಿತಸ್ಥಿನ್ನೇವ ರಾಜೇಂದ್ರ ವತ್ಸ್ಯಾಮೋ ವಿಗತಜ್ವರಾಃ ।
ಷಡ್ರಾತ್ರಂ ನಿಯತಾಹಾರಾಃ ಸಜ್ಜೀಭವ ಕುರೂತ್ತಮ ॥೨೦॥

ಎಲೈ ರಾಜೇಂದ್ರನೇ, ನಾವೂ ಈ ಆಶ್ರಮದಲ್ಲಿಯೇ ನಿರಾತಂಕವಾಗಿ ಆರು ರಾತ್ರಿಗಳ ಕಾಲ ವಾಸಿಸೋಣ. ಎಲೈ ಕುರೂತ್ತಮನೇ, ನಿಯತಾಹಾರನಾಗಿ ನೀನು ಸಿದ್ಧನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೈದನೆಯ ಅಧ್ಯಾಯ

ಲೋಮಶರಿಂದ ಯುಧಿಷ್ಠಿರನಿಗೆ ನಾನಾ ತೀರ್ಥಗಳ ಮಹಿಮೆಗಳ ವರ್ಣನೆ.

ಲೋಮಶಃ

ಅಸ್ಮಿನ್ ಕಿಲ ಸ್ವಯಂ ರಾಜನ್ನಿಷ್ಟವಾನ್ ವೈ ಪ್ರಜಾಪತಿಃ ।
ಸತ್ರಮಿಷ್ಟೀಕೃತಂ ನಾಮ ಪುರಾ ವರ್ಷಸಹಸ್ರಿಕಮ್ ॥೧॥

ಲೋಮಶರು– ಎಲೈ ರಾಜನೇ, ಈ ಪ್ರದೇಶದಲ್ಲಿ ಪ್ರಜಾಪತಿಯು ಒಂದು ಸಹಸ್ರವರ್ಷ ನಡೆಯುವ ಇಷ್ಟೀಕೃತ ಎಂಬ ಸತ್ರಯಾಗವನ್ನು ಹಿಂದೆ ಮಾಡಿದನು.

ಅಂಬರೀಷಶ್ಚ ನಾಭಾಗ ಇಷ್ಟವಾನ್ ಯಮುನಾಮನು ।
ಯಜ್ಞೈಶ್ಚ ತಪಸಾ ಚೈವ ಪರಾಂ ಸಿದ್ಧಿಮವಾಪ ಹ ॥೨॥

ನಾಭಾಗನಾದ ಅಂಬರೀಷನು ಯಮುನಾ ತೀರದಲ್ಲಿ ಯಜ್ಞಗಳನ್ನು ಮತ್ತು ತಪಸ್ಸನ್ನು ಆಚರಿಸಿ ಉತ್ತಮವಾದ ಸಿದ್ಧಿಯನ್ನು ಪಡೆದನು.

ದೇಶೋ ನಾಹುಷಯಜ್ಞಸ್ಯ ಆಯಂ ಪುಣ್ಯತಮೋ ನೃಪ ।
ಯತ್ರೇಷ್ಟ್ವಾ ದಶಪದ್ಮಾನಿ ಸದಸ್ಯೇಭ್ಯೋಽತಿಸೃಷ್ಟವಾನ್ ॥೩॥

ಎಲೈ ರಾಜನೇ, ಇದು ನಹುಷನ ಯಜ್ಞದ ಪುಣ್ಯತಮವಾದ ಪ್ರದೇಶ. ಇಲ್ಲಿ ಯಾಗವನ್ನು ಮಾಡಿ ಅವನು ಸದಸ್ಯರಿಗೆ ಹತ್ತು ಪದ್ಮಗಳನ್ನು ದಾನವಾಗಿ ಕೊಟ್ಟನು.

ಸಾರ್ವಭೌಮಸ್ಯ ಕೌಂತೇಯ ಯಯಾತೇರಮಿತದ್ಯುತೇಃ ।
ಸ್ಪರ್ಧಮಾನಸ್ಯ ಶಕ್ರೇಣ ಪಶ್ಯೇದಂ ಯಜ್ಞವಾಸ್ತು ವೈ ॥೪॥

ಎಲೈ ಕೌಂತೇಯನೇ, ಇಂದ್ರನ ಜೊತೆಯಲ್ಲಿ ಸ್ಪರ್ಧಿಸುವ ಅಮಿತದ್ಯುತಿಯಾದ ಸಾರ್ವಭೌಮನಾದ ಯಯಾತಿಯ ಈ ಯಜ್ಞವಾಸ್ತುವನ್ನು ನೋಡು.

ಪಶ್ಯ ನಾನಾವಿಧಾಕಾರೈರಗ್ನಿಭಿರ್ನಿಚಿತಂ ಮಹೀಮ್ ।
ಮಜ್ಜಂತೀಮಿವ ಚಾಕ್ರಾಂತಾಂ ಯಯಾತೇರ್ನೃಪ ಕರ್ಮಭಿಃ ॥೫॥

ಎಲೈ ರಾಜನೇ, ನಾನಾವಿಧವಾದ ಚಿತಿಯ ಆಕಾರಗಳಿಂದ ಅಗ್ನಿಚಯನವನ್ನು ಮಾಡಿ ಭೂಮಿಯು ಅಲಂಕಾರವಾಗಿರುವುದನ್ನು ನೋಡು. ಯಯಾತಿಯ ಯಜ್ಞ ಕರ್ಮಗಳಿಂದ ಆಕ್ರಾಂತವಾಗಿ ಮುಳುಗಿಹೋಗುತ್ತಿರುವಂತೆ ಕಾಣುವ ಭೂಮಿಯನ್ನು ನೋಡು.

ವಿಪಾ ಶಮ್ಯೇಕಪಾತ್ರಾ ಸಾ ಶಕಟಂ ಚೈತದುತ್ತಮಮ್ ।
ಪಶ್ಯ ರಾಮಹ್ರದಾನೇತಾನ್ ಪಶ್ಯ ನಾರಾಯಣಾಶ್ರಮಾನ್ ॥೬॥

ಇದ್ರು (ಚಿತಿಯು) ಶಮಿ ಆಕಾರವಾಗಿದೆ; ಇದು ವಿಕಪತ್ರಾಕಾರವಾಗಿದೆ; ಇದು ಉತ್ತಮವಾದ ಶಕಟಾಕಾರವಾಗಿದೆ. ಈ ಪರಶುರಾಮನ ಸರೋವರಗಳನ್ನು ನೋಡು; ನಾರಾಯಣನ ಆಶ್ರಮವನ್ನು ನೋಡು.

ಏತದಾರ್ಚೀಕಪುತ್ರಸ್ಯ ಯೋಗ್ಯೈರ್ವಿಚರತೋ ಮಹೀಮ್ ।
ಉಪಸರ್ಪಣಮುರ್ವೀಶ ಪ್ರಖ್ಯಾತಮಮಿತೌಜಸಃ ॥೭॥

ಎಲೈ ರಾಜನೇ, ಇದು ಅಮಿತಪರಾಕ್ರಮಿಯಾದ ಯೋಗಶಕ್ತಿಯಿಂದ ಭೂಮಿಯನ್ನು ಸಂಚರಿಸುವ ಆರ್ಚೀಕಪುತ್ರನಾದ ಪರಶುರಾಮನು ನಡದಾಡುವ ದಾರಿ.

ಆತ್ರಾನುವಂಶ್ಯಾಃ ಪಠಿತಾಃ ಶೃಣು ಮೇ ಕುರುನಂದನ ।
ಉಲೂಖಲೈರಾಭರಣೈಃ ಪಿಶಾಚೀ ಯದಭಾಷತ ॥೮॥

ಇಲ್ಲಿವಂಶೋಚಿತವಾದ ಕಥೆಗಳನ್ನು ಹೇಳುತ್ತಾರೆ. ಕುರುನಂದನನೇ, ಪಿಶಾಚಿಯು ಕಂಠದಲ್ಲಿ ಉಲೂಖಲ (ಒರಳು) ಆಭರಣವನ್ನು ಧರಿಸಿ ಆಡಿದ ಮಾತನ್ನು ಕೇಳು.

ಯುಗಂಧರೇ ದಧಿ ಪ್ರಾಶ್ಯ ಉಷಿತ್ವಾ ಚಾಚ್ಯುತಸ್ಥಲೇ ।
ತದ್ದದ್ ಭೂತಲಯೇ ಸ್ನಾತ್ವಾ ಸಪುತ್ರಾ ವಸ್ತುಮಿಚ್ಛಸಿ ॥೯॥

ಏಕರಾತ್ರಮುಷಿತ್ವೇಹ ದ್ವಿತೀಯಂ ಯದಿ ವತ್ಸ್ಯಸಿ ।
ಏತದ್ಧಿ ಮೇ ದಿವಾವೃತ್ತಂ ರಾತ್ರೌ ವೃತ್ತಮತೋಽನ್ಯಥಾ ॥೧೦॥

ಯುಗಂಧರದಲ್ಲಿ ದಧಿಯನ್ನು ಪ್ರಾಶನಮಾಡಿ ಅಚ್ಯುತಸ್ಥಳದಲ್ಲಿ ವಾಸವನ್ನು ಮಾಡಿ ಅದರಂತೆ ಭೂತಲಯದಲ್ಲಿ ಸ್ನಾನವನ್ನು ಮಾಡಿ ಒಂದು ರಾತ್ರಿ ಪುತ್ರಸಹಿತವಾಗಿ ವಾಸಮಾಡಬಹುದು. ಇಲ್ಲಿ ಒಂದು ರಾತ್ರಿ ವಾಸವನ್ನು ಮಾಡಿ, ಎರಡನೆಯ ರಾತ್ರಿ ವಾಸವನ್ನು ಮಾಡುವುದಾದರೆ ಇದು, ಇದು ನನ್ನ ಹಗಲಿನ ನಡತೆ. ರಾತ್ರಿಯ ನಡತೆಯು ಬೇರೆ ರೂಪವಾಗಿ ಎಂದರೆ ಕ್ರೋಧರೂಪವಾಗಿರುತ್ತದೆ.

ಅತ್ರಾದ್ಯಾಭಿನಿವತ್ಸ್ಯಾಮಃ ಕ್ಷಪಾಂ ಭರತಸತ್ತಮ ।
ದ್ವಾರಮೇತತ್ ತು ಕೌಂತೇಯ ಕುರುಕ್ಷೇತ್ರಸ್ಯ ಭಾರತ ॥೧೧॥

ಎಲೈ ಭರತಸತ್ತಮನೇ, ನಾವು ಈ ರಾತ್ರಿ ಇಲ್ಲೇ ವಾಸವನ್ನು ಮಾಡೋಣ. ಎಲೈ ಕೌಂತೇಯನೇ, ಭಾರತನೇ, ಇದು ಕುರುಕ್ಷೇತ್ರದ ಬಾಗಿಲು.

ಅತ್ರೈವ ನಾಹುಷೋ ರಾಜಾ ರಾಜನ್ ಕ್ರತುಭಿರಿಷ್ಟವಾನ್ ।
ಯಯಾತಿರ್ಬಹುರತ್ನಾಢ್ಯೋ ಯತ್ರೇಂದ್ರೋ ಮುದಮಾಪ್ತವಾನ್ ॥

ಎಲೈ ರಾಜನೇ, ಇಲ್ಲಿಯೇ ನಹುಷ ಪುತ್ರನಾದ ಯಯಾತಿಯು ಬಹುರತ್ನಗಳಿಂದ ಕೂಡಿದವನಾಗಿ ಯಾಗಗಳನ್ನು ಮಾಡಿದನು. ಅವುಗಳಲ್ಲಿ ಇಂದ್ರನು ಸಂತೋಷಗೊಂಡನು.

ಏತತ್ ಪ್ಲಕ್ಷವಟಂ ನಾಮ ಯಮುನಾತೀರ್ಥಮುಚ್ಯತೇ ।
ಏತದ್ವೈ ನಾಕಪೃಷ್ಠಸ್ಯ ದ್ವಾರಮಾಹುರ್ಮನೀಷಿಣಃ ॥೧೩॥

ಇದು ಪ್ಲಕ್ಷವಟ ಎಂಬ ಯಮುನಾತೀರ್ಥ. ಜ್ಞಾನಿಗಳು ಇದನ್ನು ಸ್ವರ್ಗದ ದ್ವಾರವೆಂದು ಹೇಳುತ್ತಾರೆ.

ಯತ್ರ ಸಾರಸ್ವತೈರ್ಯಜ್ಞೈರೀಜಾನಾಃ ಪರಮರ್ಷಯಃ ।
ಯೂಪೋಲೂಖಲಿನಸ್ತತ್ರ ಗಚ್ಛಂತ್ಯವಭೃಥಪ್ಲವಮ್ ।
ಅತ್ರೋಪಸ್ಪೃಶ್ಯ ರಾಜೇಂದ್ರ ಸರ್ವಪಾಪೈಃ ಪ್ರಮುಚ್ಯತೇ ॥೧೪॥

ಇಲ್ಲಿ ಪರಮರ್ಷಿಗಳು ಸಾರಸ್ವತ ಯಜ್ಞಗಳನ್ನು ಆಚರಿಸಿ ಯಜ್ಞಸಾಧನವಾದ ಯೂಪಗಳನ್ನು, ಸುವರ್ಣಮಯವಾದ ಉಖಲನಗಳನ್ನು ತೆಗೆದುಕೊಂಡು ಅವಭೃಥ ಸ್ನಾನಕ್ಕೆ ಹೋಗುತ್ತಾರೆ. ಎಲೈ ರಾಜೇಂದ್ರನೇ, ಇಲ್ಲಿ ಸ್ನಾನವನ್ನು ಮಾಡಿದವನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಅತ್ರ ವೈ ಭರತೋ ರಾಜಾ ರಾಜನ್ ಕ್ರತುಭಿರಿಷ್ಟವಾನ್ ।
ಅಸಕೃತ್ ಕೃಷ್ಣಸಾರಂಗಂ ಧರ್ಮೇಣಾವಾಪ್ಯ ಮೇದಿನೀಮ್ ॥೧೫॥

ಎಲೈ ರಾಜನೇ, ಭರತನು ಧರ್ಮದಿಂದ ಭೂಮಿಯನ್ನು ಸಂಪಾದಿಸಿ ಇಲ್ಲಿಯೇ ಅನೇಕಬಾರಿ ಕೃಷ್ಣಸಾರಂಗ ಪಶುಗಳಿಂದ ಯಾಗವನ್ನು ಮಾಡಿದನು.

ಅತ್ರೈವ ಪುರುಷವ್ಯಾಘ್ರ ಮರುತ್ತಃ ಸತ್ರಮುತ್ತಮಮ್ ।
ಚಕ್ರೇ ದೇವರ್ಷಿಮುಖ್ಯೇನ ಸಂವರ್ತೇನಾಭಿಪಾಲಿತಃ ॥೧೬॥

ಎಲೈ ಪುರುಷವ್ಯಾಘ್ರನೇ, ಇಲ್ಲಿಯೇ ಮರುತ್ತನು ದೇವರ್ಷಿಶ್ರೇಷ್ಠರಾದ ಸಂವರ್ತರಿಂದ ರಕ್ಷಿತನಾಗಿ ಶ್ರೇಷ್ಠವಾದ ಸತ್ರವನ್ನು ಮಾಡಿದನು.

ಅತ್ರೋಪಸ್ಪೃಶ್ಯ ರಾಜೇಂದ್ರ ಸರ್ವಾನ್‌ಲ್ಲೋಕಾನ್ ಪ್ರಪಶ್ಯಸಿ ।
ಪೂಯಸೇ ದುಷ್ಕೃತಾಚ್ಚೈವ ಸಮುಪಸ್ಪೃಶ್ಯ ಭಾರತ ॥೧೭॥

ಎಲೈ ರಾಜೇಂದ್ರನೇ, ಇಲ್ಲಿ ಸ್ನಾನವನ್ನು ಮಾಡಿದರೆ ಎಲ್ಲಾ ಲೋಕಗಳನ್ನೂ ನೋಡುವಿ. ಎಲೈ ಭಾರತನೇ, ಇಲ್ಲಿ ಸ್ನಾನವನ್ನು ಮಾಡಿ ದುಷ್ಕರ್ಮಗಳನ್ನು ಕಳೆದುಕೊಂಡು ಪವಿತ್ರನಾಗುತ್ತೀಯೆ.

ವೈಶಂಪಾಯನಃ

ತತ್ರ ಸಭ್ರಾತೃಕಃ ಸ್ನಾತ್ವಾ ಸ್ತೂಯಮಾನೋ ಮಹರ್ಷಿಭಿಃ ।
ಲೋಮಶಂ ಪಾಂಡವಶ್ರೇಷ್ಠ ಇದಂ ವಚನಮಬ್ರವೀತ್ ॥೧೮॥

ಸರ್ವಾನ್‌ಲ್ಲೋಕಾನ್ ಪ್ರಪಶ್ಯಾಮಿ ತಪಸಾ ಸತ್ಯವಿಕ್ರಮ ।
ಇಹಸ್ಥಃ ಪಾಂಡವಶ್ರೇಷ್ಠಂ ಪಶ್ಯಾಮಿ ಶ್ವೇತವಾಹನಮ್ ॥೧೯॥

ವೈಶಂಪಾಯನ– ಆನಂತರ ಪಾಂಡವಶ್ರೇಷ್ಠನಾದ ಧರ್ಮರಾಜನು ತಮ್ಮಂದಿರ ಜೊತೆಯಲ್ಲಿ ಸ್ನಾನವನ್ನು ಮಾಡಿ ಮಹರ್ಷಿಗಳಿಂದ ಪ್ರಶಂಸಿಸಲ್ಪಟ್ಟವನಾಗಿ ಲೋಮಶರನ್ನು ಕುರಿತು ಸತ್ಯವಿಕ್ರಮರೇ, ಇಲ್ಲಿತಪಃಶಕ್ತಿಯಿಂದ ಎಲ್ಲ ಲೋಕಗಳನ್ನೂ ನೋಡುತ್ತಿದ್ದೇನೆ. ಇಲ್ಲಿದ್ದೇ ಪಾಂಡವಶ್ರೇಷ್ಠನಾದ ಶ್ವೇತವಾಹನನಾದ ಅರ್ಜುನನನ್ನು ನೋಡುತ್ತಿದ್ದೇನೆ ಎಂದು ಹೇಳಿದನು.

ಏವಮೇತನ್ಮಹಾಬಾಹೋ ಪಶ್ಯಂತಿ ಪರಮರ್ಷಯಃ ।
ಇಹ ಸ್ನಾತ್ವಾ ತಪೋಯುಕ್ತಾಃ ತ್ರೀನ್‌ಲ್ಲೋಕಾನ್ ಸಚರಾಚರಾನ್ ॥೨೦॥

ಎಲೈ ಮಹಾಬಾಹುವೇ, ಹೀಗೆಯೇ ಪರಮರ್ಷಿಗಳು ತಪೋಯುಕ್ತರಾಗಿ ಇಲ್ಲಿ ಸ್ನಾನವನ್ನು ಮಾಡಿ ಚರಾಚರಸಹಿತವಾದ ಮೂರುಲೋಕಗಳನ್ನೂ ನೋಡುತ್ತಾರೆ.

ಸರಸ್ವತೀಮಿಮಾಂ ಪುಣ್ಯಾಂ ಪುಣ್ಯೈಃ ಕಶರಣಾನ್ವಿತಾಮ್ ।
ಅತ್ರ ಸ್ನಾತ್ವಾ ನರಶ್ರೇಷ್ಠ ಧೂತಪಾಪ್ಮಾ ಭವಿಷ್ಯಸಿ ॥೨೧॥

ಇದು ಪುಣ್ಯಪುರುಷರ ನಿವಾಸಗಳಿಂದ ಮಾತ್ರ ಕೂಡಿದಂತಹ ಪವಿತ್ರವಾದ ಸರಸ್ವತೀ ನದಿ. ಎಲೈ ನರಶ್ರೇಷ್ಠನೇ, ಇಲ್ಲಿ ಸ್ನಾನವನ್ನು ಮಾಡಿ ಪಾಪದಿಂದ ವಿಮುಕ್ತನಾಗುವಿ.

ಇಹ ಸಾರಸ್ವತೈರ್ಯಜ್ಞೈರಿಷ್ಟವಂತಃ ಸುರರ್ಷಯಃ ।
ಋಷಯಶ್ಚೈವ ಕೌಂತೇಯ ತಥಾ ರಾಜರ್ಷಯೋಽಪಿ ಚ ॥೨೨॥

ಎಲೈ ಕೌಂತೇಯನೇ, ಇಲ್ಲಿ ದೇವರ್ಷಿಗಳು, ರಾಜರ್ಷಿಗಳು ಮತ್ತು ಉಳಿದ ಋಷಿಗಳು ಸಾರಸ್ವತ ಯಜ್ಞಗಳನ್ನು ಆಚರಿಸಿದ್ದಾರೆ.

ವೇದಿಃ ಪ್ರಜಾಪತೇರೇಷಾ ಸಮಂತಾತ್ ಪಂಚಯೋಜನಾ ।
ಕುರೋಶ್ಚ ಯಜ್ಞಶೀಲಸ್ಯ ಕ್ಷೇತ್ರಮೇತನ್ಮಹಾತ್ಮನಃ ॥೨೩॥

ಇದು ಪ್ರಜಾಪತಿಯ ಸುತ್ತಲೂ ಐದುಯೋಜನ ವಿಸ್ತಾರವಾದ ವೇದಿ. ಇದು ಮಹಾತ್ಮನಾದ ಯಜ್ಞಶೀಲನಾದ ಕುರುವಿನ ಕ್ಷೇತ್ರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತಾರನೆಯ ಅಧ್ಯಾಯ

ಲೋಮಶರಿಂದ ನಾನಾ ತೀರ್ಥಕ್ಷೇತ್ರಗಳ ಮಹಿಮೆಯ ವರ್ಣನೆ.
ಶಿಬಿಯ ಕಥೋಪಾಖ್ಯಾನ ಪ್ರಾರಂಭ.

ಲೋಮಶಃ

ಇಹ ದೇವಾಸ್ತಪಸ್ತಪ್ತ್ವಾ ಸ್ವರ್ಗಂ ಗಚ್ಛಂತಿ ಭಾರತ ।
ಮರ್ತುಕಾಮಾ ನರಾ ರಾಜನ್ನಿಹಾಯಾಂತಿ ಸಹಸ್ರಶಃ ॥೧॥

ಲೋಮಶ– ಎಲೈ ಭಾರತನೇ, ದೇವತೆಗಳು ಇಲ್ಲಿ ತಪಸ್ಸನ್ನು ಮಾಡಿ ಸ್ವರ್ಗಕ್ಕೆ ಹೋಗುತ್ತಾರೆ. ಎಲೈ ರಾಜನೇ, ಮರಣವನ್ನು ಹೊಂದುವ ಮನುಷ್ಯರೂ ಸಹ ಸಹಸ್ರ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ.

ಏವಮಾಶೀಃ ಪ್ರಯುಕ್ತಾ ಹಿ ದಕ್ಷೇಣ ಯಜತಾ ಪುರಾ ।
ಇಹ ಯೇ ವೈ ಮರಿಷ್ಯಂತಿ ತೇ ವೈ ಸ್ವರ್ಗಜಿತೋ ನರಾಃ ॥೨॥

ಇಲ್ಲಿಯಾರು ಮರಣವನ್ನು ಹೊಂದುವರೋ ಅಂತಹ ಮನುಷ್ಯರು ಸ್ವರ್ಗವನ್ನು ಜಯಿಸುತ್ತಾರೆ ಎಂದು ಹಿಂದೆ ಇಲ್ಲಿ ಯಾಗವನ್ನು ಮಾಡಿದ ದಕ್ಷನು ವರವನ್ನು ನೀಡಿದ್ದಾನೆ.

ಏಷಾ ಸರಸ್ವತೀ ಪುಣ್ಯಾ ದಿವ್ಯಾ ಚೌಘವತೀ ನದೀ ।
ಏತದ್ವಿನಶನಂ ನಾಮ ಸರಸ್ತ್ಯಾ ವಿಶಾಂಪತೇ ॥೩॥

ಇದು ಬಹಳ ಪ್ರವಾಹದಿಂದ ಕೂಡಿದ ದಿವ್ಯವಾದ ಮತ್ತು ಪವಿತ್ರವಾದ ಸರಸ್ವತೀ ನದಿ. ಎಲೈ ರಾಜನೇ, ಇದು ಸರಸ್ವತಿಯು ಅದೃಶ್ಯವಾದ ವಿನಶನವೆಂಬ ಕ್ಷೇತ್ರ.

ದ್ವಾರಂ ನಿಷಾದರಾಷ್ಟ್ರಸ್ಯ ಯೇಷಾಂ ದೋಷಾತ್ ಸರಸ್ವತೀ ।
ಪ್ರವಿಷ್ಟಾ ಪೃಥಿವೀಂ ವೀರ ಮಾ ನಿಷಾದಾಸ್ತು ಮಾಂ ವಿದುಃ ॥೪॥

ಎಲೈ ವೀರನೇ, ಇದು ನಿಷಾದರಾಷ್ಟ್ರಕ್ಕೆ ದ್ವಾರದೇಶ. ನಿಷಾದರ ದೋಷವನ್ನು ಗಮನಿಸಿ ಸರಸ್ವತಿಯು ನಿಷಾದರು ನನ್ನನ್ನು ತಿಳಿಯುವುದು ಬೇಡವೆಂದು ಇಲ್ಲಿ ಭೂಮಿಯನ್ನು ಪ್ರವೇಶಿಸಿದಳು.

ಏಷ ವೈ ಚಮಸೋದ್ಭೇದೋ ಯತ್ರ ದೃಶ್ಯಾ ಸರಸ್ವತೀ ।
ಯತ್ಕೈಸಾಮನ್ವವರ್ತಂತ ದಿವ್ಯಾಃ ಪುಣ್ಯಾಃ ಸಮುದ್ರಗಾಃ ॥೫॥

ಇದು ಸರಸ್ವತಿಯು ಪುನಃ ಪ್ರತ್ಯಕ್ಷವಾದ ಚಮಸೋದ್ಭೇದ ಕ್ಷೇತ್ರ. ಇಲ್ಲಿ ಸರಸ್ವತಿಯನ್ನು ದಿವ್ಯವಾದ, ಪುಣ್ಯವಾದ ಸಮುದ್ರಗಾಮಿಗಳಾದ ನದಿಗಳು ಹಿಂಬಾಲಿಸಿದವು.

ಏತತ್ ಸಿಂಧೋರ್ಮಹತ್ತೀರ್ಥಂ ಯತ್ರಾಗಸ್ಯಮರಿಂದಮ ।
ಲೋಪಾಮುದ್ರಾ ಸಮಾಗಮ್ಯ ಭರ್ತಾರಮವೃಣೀತ ವೈ ॥೬॥

ಎಲೈ ಅರಿಂದಮನೇ, ಇದು ಸಿಂಧುವಿನ ಮಹಾತೀರ್ಥ. ಇಲ್ಲಿ ಲೋಪಾಮುದ್ರೆಯು ಬಂದು ಅಗಸ್ತ್ಯರನ್ನು ಪತಿಯನ್ನಾಗಿ ವರಿಸಿದಳು.

ಏತತ್ ಪ್ರಭಾಸತೇ ತೀರ್ಥಂ ಪ್ರಭಾಸಂ ಭಾಸ್ಕರದ್ಯುತೇ ।
ಚಂದ್ರಸ್ಯ ದಯಿತಂ ನಿತ್ಯಂ ಪವಿತ್ರಂ ಪಾಪನಾಶನಮ್ ॥೭॥

ಎಲೈ ಸೂರ್ಯಕಾಂತಿಯುಳ್ಳ ರಾಜನೇ, ಇದು ಕಂಗೊಳಿಸುತ್ತಿರುವ ಪ್ರಭಾಸ ಎಂಬ ಕ್ಷೇತ್ರ. ಇದು ನಿತ್ಯವೂ ಚಂದ್ರನಿಗೆ ಪ್ರಿಯವಾದುದು, ಪವಿತ್ರವಾದುದು ಮತ್ತು ಪಾಪವನ್ನು ನಾಶಮಾಡುವಂತಹದು.

ಏತದ್ ವಿಷ್ಣುಪದಂ ನಾಮ ದೃಶ್ಯತೇ ತೀರ್ಥಮುತ್ತಮಮ್ ।
ಏಷಾ ಪುಣ್ಯಾ ವಿಪಾಶಾ ಚ ನದೀ ಪರಮಪಾವನೀ ॥೮೪॥

ಈ ವಿಷ್ಣುಪದವೆಂಬ ಶ್ರೇಷ್ಠವಾದ ತೀರ್ಥವು ಇಲ್ಲಿ ಕಾಣುತ್ತಿದೆ. ಇದು ಪರಮಪಾವನಿಯಾದ ಪುಣ್ಯಪ್ರದವಾದ ವಿಪಾಶಾ ನದಿ.

ಆತ್ಮೈವ ಪುತ್ರಶೋಕೇನ ವಸಿಷ್ಠೋ ಭಗವಾನೃಷಿಃ ।
ಬದ್ಧ್ವಾऽऽತ್ಮಾನಂ ನಿಪತಿತೋ ವಿಪಾಶಃ ಪುನರುತ್ಥಿತಃ ।
ವಿಪಾಶಾಂ ಪಶ್ಯ ರಾಜೇಂದ್ರ ಸರ್ವಪಾಪಪ್ರಮೋಚನೀಮ್ ॥೮೫॥

ಇಲ್ಲಿಯೇ ಪುತ್ರಶೋಕದಿಂದ ಪೀಡಿತರಾದ ಪರಮಪೂಜ್ಯರಾದ ವಸಿಷ್ಠ ಋಷಿಗಳು ತಮ್ಮನ್ನು ತಾವು ಕಟ್ಟಿಕೊಂಡು ನದಿಯಲ್ಲಿ ಬಿದ್ದು ಪಾಶಗಳ ನಾಶವನ್ನು ಹೊಂದಿ ಪುನಃ ಮೇಲೆದ್ದರು. ರಾಜೇಂದ್ರನೇ, ಸರ್ವಪಾಪನಾಶಕವಾದ ವಿಪಾಶಾ ನದಿಯನ್ನು ನೋಡು.

ಕಾಶ್ಮೀರಮಂಡಲಂ ಚೈತತ್ ಸರ್ವಪುಣ್ಯಮರಿಂದಮ ।
ಮಹರ್ಷಿಭಿಶ್ಚಾಧ್ಯುಷಿತಂ ಪಶ್ಯೇದಂ ಭ್ರಾತೃಭಿಃ ಸಹ ॥೮೦॥

ಎಲೈ ಅರಿಂದಮನೇ, ಇದು ಸರ್ವಪುಣ್ಯವಾದ ಕಾಶ್ಮೀರ ಕ್ಷೇತ್ರ. ಇದು ಮಹರ್ಷಿಗಳ ವಾಸಸ್ಥಾನವಾಗಿದೆ. ಇದನ್ನು ತಮ್ಮಂದಿರ ಜೊತೆಯಲ್ಲಿ ನೋಡು.

ಅತ್ರೋತ್ತಮಾನಾಂ ಸರ್ವೇಷಾಮೃಷೀಣಾಂ ನಾಹುಷಸ್ಯ ಚ ।
ಅಗ್ನೇಶ್ಚಾಪೀದ್ದಿ ಸಂವಾದಃ ಕಾಶ್ಯಪಸ್ಯ ಚ ಭಾರತ ॥೮೧॥

ಎಲೈ ಭಾರತನೇ, ಇದು ಉತ್ತಮರಾದ ಎಲ್ಲಾ ಋಷಿಗಳಿಗೂ, ನಹುಷ ಪುತ್ರನಿಗೂ, ಅಗ್ನಿಗೂ ಮತ್ತು ಕಾಶ್ಯಪರಿಗೂ ಸಂವಾದವು ನಡೆದ ಸ್ಥಳ.

ಏತದ್ ದ್ವಾರಂ ಮಹಾರಾಜ ಮಾನಸಸ್ಯ ಪ್ರಕಾಶತೇ ।
ವರ್ಷಮಸ್ಯ ಗಿರೇರ್ಮಧ್ಯೇ ರಾಮೇಣ ಶ್ರೀಮತಾ ಕೃತಮ್ ॥೮೨॥

ಮಹಾರಾಜನೇ, ಈ ಮಾನಸ ಪರ್ವತದ ದ್ವಾರವು ಇಲ್ಲಿ ಪ್ರಕಾಶಿಸುತ್ತಿದೆ. ಈ ಪರ್ವತದ ಮಧ್ಯದಲ್ಲಿ ಸಂಪದ್ಯುಕ್ತನಾದ ರಾಮನು ಒಂದು ಕ್ಷೇತ್ರವನ್ನು ನಿರ್ಮಿಸಿದ್ದಾನೆ.

ಏಷ ವಾತಿಕಷಂಡೋ ವೈ ವಿಖ್ಯಾತಃ ಸತ್ಯವಿಕ್ರಮಃ ।
ನಾತ್ಯವರ್ತತ ಯದ್ ದ್ವಾರಂ ವಿದೇಹಾದುತ್ತರಂ ಚ ಯಃ ॥೧೩॥

ಇದು ವಾತಿಕಶಂಡವೆಂಬ ವಿಖ್ಯಾತವಾದ ಕ್ಷೇತ್ರ. ದ್ವಾರವಾದ ಈ ಕ್ಷೇತ್ರವನ್ನು ಸತ್ಯವಿಕ್ರಮರಾದ ಯಾರೂ ದಾಟಲಿಲ್ಲ. ಇದು ವಿದೇಹದೇಶದ ಉತ್ತರಕ್ಕೆ ಇದೆ.

ಇದಮಾಶ್ಚರ್ಯಪರಮಂ ದೇಶೇಽಸ್ಮಿನ್ ಪುರುಷರ್ಷಭ ।
ಕ್ಷೀಣೇ ಪುಣ್ಯೇಪಿ ಕೌಂತೇಯ ಸರ್ವಸ್ಯ ಸಹ ಪಾರ್ಷದೈಃ ॥೧೪॥

ಸಹೋಮಯಾ ಚ ಭವತಿ ದರ್ಶನಂ ಕಾಮರೂಪಿಣಃ ।
ಅಸ್ಮಿನ್ ಸರಸಿ ರಮ್ಯೇ ವೈ ಚೈತ್ರಮಾಸೇ ಪಿನಾಕಿನಃ ।
ಯಜಂತಿ ಯಾಜಕಾಃ ಸಮ್ಯಕ್ ಪರಿವಾರಂ ಶುಭಾರ್ಥಿನಃ ॥೧೫॥

ಎಲೈ ಪುರುಷಶ್ರೇಷ್ಠನೇ, ಈ ದೇಶದಲ್ಲಿ ಇದೊಂದು ಪರಮಾಶ್ಚರ್ಯವಾದುದು. ಕೌಂತೇಯನೇ, ಪುಣ್ಯವು ನಾಶವನ್ನು ಹೊಂದಿದ ಎಲ್ಲರಿಗೂ ಸಹ ಪಾರ್ವತಿಯ ಜೊತೆಯಲ್ಲಿ ಮತ್ತು ಪಾರ್ಷದರ ಜೊತೆಯಲ್ಲಿ ಕಾಮರೂಪವನ್ನು ಧರಿಸಿದ ಶಂಕರನ ದರ್ಶನವಾಗುತ್ತದೆ. ಈ ಮನೋಹರವಾದ ಸರೋವರದಲ್ಲಿ ಚೈತ್ರಮಾಸದಲ್ಲಿ ಶುಭವನ್ನು ಬಯಸುವ ಯಾಜಕರು ರುದ್ರದೇವರ ಪರಿವಾರವನ್ನು ಚೆನ್ನಾಗಿ ಪೂಜಿಸುತ್ತಾರೆ.

ಅತ್ರೋಪಸ್ಪೃಶ್ಯ ಸರಸಿ ಶ್ರದ್ಧಾನೋ ಜಿತೇಂದ್ರಿಯಃ ।
ಕ್ಷೀಣಪಾಪಃ ಶುಭಾನ್ ಲೋಕಾನ್ ಪ್ರಾಪ್ನುತೇ ನಾತ್ರ ಸಂಶಯಃ ॥೧೬॥

ಜಿತೇಂದ್ರಿಯನಾಗಿ ಈ ಸರೋವರದಲ್ಲಿ ಶ್ರದ್ಧೆಯಿಂದ ಸ್ನಾನವನ್ನು ಮಾಡಿದವನು ಪಾಪಗಳನ್ನು ಕಳೆದುಕೊಂಡು ಶುಭಲೋಕಗಳನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಏಷ ಉದ್ಯಾನಕೋ ನಾಮ ಯಮಕೀರ್ಯತ್ರ ಶಾಂತವಾನ್ ।
ಆರುಂಧತೀಸಹಾಯಶ್ಚ ವಸಿಷ್ಠೋ ಭಗವಾನೃಷಿಃ ॥೧೭॥

ಇದು ಉದ್ಯಾನಕವೆಂಬ ಕ್ಷೇತ್ರ. ಇಲ್ಲಿ ಪುತ್ರಶೋಕದಿಂದ ಯಮದೇವರನ್ನು ಕುರಿತು ಹೆಣ್ಣು ಗಿಣಿಯಂತೆ ಆರ್ತಸ್ವರವನ್ನು ಮಾಡಿದ ಅರುಂಧತೀ ಸಹಿತರಾದ ಪೂಜ್ಯ ಋಷಿಗಳಾದ ವಸಿಷ್ಠರು ಸಮಾಧಾನವನ್ನು ಪಡೆದರು (ಲಕ್ಷಾಲಂಕಾರ).

ಹ್ರದಶ್ಚ ಕುಶವಾನೇಷ ಯತ್ರ ಪದ್ಮಂ ಕುಶೋದಯಮ್ ।
ಆಶ್ರಮಶ್ಚೈವ ರುಗ್ಮಿಣ್ಯಾ ಯತ್ರಾಶಾಮ್ಯತ ಕೋಪನಾ ॥೧೮॥

ಇದು ಕುಶವಾನ್ ಎಂಬ ಸರೋವರ. ಇಲ್ಲಿ ಪದ್ಮವು ಕುಶಗಳಿಂದ ಉಂಟಾದಂತೆ ತೋರುತ್ತದೆ. ಇದು ರುಗ್ಮಿಣಿಯ ಆಶ್ರಮ. ಕೋಪಗೊಂಡಿದ್ದ ಅವಳು ಇಲ್ಲಿ ಶಾಂತಳಾದಳು.

ಸಮಾಸತಸ್ತು ತತ್ಸರ್ವಂ ಪಾಂಡವೇಯ ಶ್ರುತಸ್ತ್ವಯಾ ।
ತಂ ದ್ರಕ್ಷ್ಯಸಿ ಮಹಾರಾಜ ಭೃಗುತುಂದಂ ಮಹಾಗಿರಿಮ್ ॥೧೯॥

ಎಲೈ ಪಾಂಡವನೇ, ನೀನು ಸಂಕ್ಷೇಪವಾಗಿ ಎಲ್ಲವನ್ನೂ ಕೇಳಿದ್ದೀಯೆ. ಎಲೈ ಮಹಾರಾಜನೇ, ನೀನು ಭೃಗುತುಂದವೆಂಬ ಮಹಾಪರ್ವತವನ್ನು ನೋಡುವಿ.

ಜಲಾಂ ಚೋರ್ಧ್ವಜಲಾಂ ಚೈವ ಯಮುನಾಮಭಿತೋ ನದೀಮ್ ।
ಔಶೀನರೋ ವೈ ಯತ್ರೇಷ್ಟ್ವಾ ವಾಸವಾದತ್ಯರಿಚ್ಯತ ॥೨೦॥

ಯಮುನೆಯ ಪಕ್ಕದಲ್ಲಿ ಹರಿಯುವ ಜಲ ಮತ್ತು ಊರ್ಧ್ವಜಲ ಎಂಬ ನದಿಗಳನ್ನು ನೋಡುವಿ. ಔಶೀನರನಾದ ಶಿಬಿಯು ಅಲ್ಲಿ ಯಾಗವನ್ನು ಮಾಡಿ ಇಂದ್ರನನ್ನು ಮೀರಿಸಿದನು.

ತಾಂ ದೇವಸಮಿತಿಂ ತಸ್ಯ ವಾಸವಶ್ಚ ವಿಶಾಂ ಪತೇ ।
ಅಭ್ಯಗಚ್ಛತ ರಾಜಾನಂ ಜ್ಞಾತುಮಗ್ನಿಶ್ಚ ಭಾರತ ॥೨೧॥

ಎಲೈ ರಾಜನೇ, ಆ ಶಿಬಿಯನ್ನು ಪರೀಕ್ಷಿಸಲು ಅವನ ದೇವಯಜನ ಭೂಮಿಗೆ ಅಗ್ನಿ ಮತ್ತು ಇಂದ್ರರು ಬಂದರು.

ಜಿಜ್ಞಾಸಮಾನೌ ವರದೌ ಮಹಾತ್ಮಾನಮುಶೀನರಮ್ ।
ಇಂದ್ರಃ ಶ್ಯೇನಃ ಕಪೋತೋಽಗ್ನಿರ್ಭೂತ್ವಾ ಯಜ್ಞೇಽಭಿಜಗ್ಮತುಃ ॥೨೨॥

ಅವನ ಸತ್ತ್ವವನ್ನು ಪರೀಕ್ಷೆ ಮಾಡಿ ಆ ಮಹಾತ್ಮನಾದ ಶಿಬಿಗೆ ವರವನ್ನು ಕೊಡಲು ಇಂದ್ರನು ಶ್ಯೇನವಾಗಿಯೂ, ಅಗ್ನಿಯು ಕಪೋತವಾಗಿಯೂ ಯಜ್ಞಕ್ಕೆ ಬಂದರು.

ಊರುಂ ರಾಜ್ಞಃ ಸಮಾಸಾದ್ಯ ಕಪೋತಃ ಶ್ಯೇನಜಾದ್ ಭಯಾತ್ ।
ಶರಣಾರ್ಥೀ ತದಾ ರಾಜನ್ ನಿಲಿಲ್ಯೇ ಭಯಪೀಡಿತಃ ॥೨೩॥

ಎಲೈ ರಾಜನೇ, ಕಪೋತವು (ಪಾರಿವಾಳವು) ಶ್ಯೇನ (ಗಿಡುಗ)ದ ಭಯದಿಂದ ರಾಜನನ್ನು ಸಮೀಪಿಸಿ ಶರಣಾರ್ಥಿಯಾಗಿ ಭಯದಿಂದ ಕೂಡಿ ರಾಜನ ತೊಡೆಯನ್ನು ಸೇರಿ ಅಡಗಿಕೊಂಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಡ್‌ವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವ್ಯಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೇಳನೆಯ ಅಧ್ಯಾಯ

ಶ್ಯೇನ ಕಪೋತೋಪಾಖ್ಯಾನ

ಶ್ಯೇನಃ

ಧರ್ಮಾತ್ಮಾನಂ ತ್ವಾಹುರೇಕಂ ರಾಜನ್ ಸರ್ವೇ ಮಹೀಕ್ಷಿತಃ ।
ಸ ತ್ವಂ ಧರ್ಮವಿರುದ್ಧಂ ಹಿ ಕಸ್ಮಾತ್ ಕರ್ಮ ಚಿಕೀರ್ಷಸಿ ॥೧॥

ವಿಹಿತಂ ರಕ್ಷಣಂ ರಾಜನ್ ಪೀಡ್ಯಮಾನಸ್ಯ ಮೇ ಕ್ಷುಧಾ ।
ಮಾ ಹಿಂಸೀರ್ಧರ್ಮಲೋಭೇನ ಧರ್ಮಮುತ್ಸೃಜ್ಯ ಮಾ ನಶೀಃ ॥೨॥

ಶ್ಯೇನ– ಎಲೈ ರಾಜನೇ, ಎಲ್ಲರಾಜರೂ ನಿನ್ನನ್ನು ಪ್ರಧಾನನಾದ ಧರ್ಮಾತ್ಮನೆಂದು ಹೇಳುತಾರೆ. ಅಂತಹ ನೀನು ಧರ್ಮವಿರುದ್ಧವಾದ ಕರ್ಮವನ್ನು ಮಾಡಲು ಏಕೆ ಬಯಸುತ್ತಿದ್ದೀಯೆ? ಎಲೈ ರಾಜನೇ, ಹಸಿವಿನಿಂದ ಪೀಡಿಸಲ್ಪಡುತ್ತಿರುವ ನನಗೆ ವಿಹಿತವಾದ ರಕ್ಷಣೆ ಎಂದರೆ ಕಪೋತದ ಭಕ್ಷಣೆ. ನಿನ್ನ ಧರ್ಮಲೋಭದಿಂದ ನನ್ನನ್ನು ಹಿಂಸಿಸಬೇಡ. ಧರ್ಮವನ್ನು ತೊರೆದು ನಾಶವನ್ನು ಹೊಂದಬೇಡ.

ರಾಜಾ

ಸಂತ್ರಸ್ತರೂಪಸ್ತ್ರಾಕಾರ್ಥೀ ತ್ವತ್ತೋ ಭೀತೋ ಮಹಾದ್ವಿಜ ।
ಮತ್ಸಕಾಶಮನುಪ್ರಾಪ್ತಃ ಪ್ರಾಣಗೃಧ್ನುರಯಂ ದ್ವಿಜಃ ॥೩॥

ರಾಜ– ಎಲೈ ಮಹಾಪಕ್ಷಿಯೇ, ನಿನ್ನಿಂದ ಭೀತನಾಗಿ ನಡುಗುತ್ತಾ ರಕ್ಷಣೆಯನ್ನು ಬಯಸಿ ಪ್ರಾಣವನ್ನು ಉಳಿಸಿಕೊಳ್ಳಲು ಬಯಸಿ ಈ ಕಪೋತವು ನನ್ನ ಬಳಿಗೆ ಬಂದಿದೆ.

ಏವಮಭ್ಯಾಗತಸ್ಯೇಹ ಕಪೋತಸ್ಯಾಭಯಾರ್ಥಿನಃ ।
ಅಪ್ರದಾನೇ ಪರೋಽಧರ್ಮಃ ಕಂ ತ್ವಂ ಶ್ಯೇನ ಪ್ರಪಶ್ಯಸಿ ॥೪॥

ಹೀಗೆ ಅಭಯಾರ್ಥಿಯಾಗಿ, ಅಭ್ಯಾಗತನಾಗಿ ನನ್ನ ಬಳಿಗೆ ಬಂದ ಕಪೋತಕ್ಕೆ ಅಭಯವನ್ನು ಕೊಡದಿದ್ದರೆ ದೊಡ್ಡ ಅಧರ್ಮವಾಗುತ್ತದೆ. ಎಲೈ ಶ್ಯೇನವೇ, ನೀನು ಹೇಗೆ ಯೋಚಿಸುತ್ತೀಯೆ?

ಪ್ರಸ್ಪಂದಮಾನಃ ಸಂಭ್ರಾಂತಃ ಕಪೋತಃ ಶ್ಯೇನ ಲಕ್ಷ್ಯತೇ ।
ಮತ್ಸಕಾಶಂ ಜೀವಿತಾರ್ಥೇ ತಸ್ಯ ತ್ಯಾಗೋ ವಿಗರ್ಹಿತಃ ॥೫॥

ಎಲೈ ಶ್ಯೇನವೇ, ಕಪೋತವು ದಿಗ್ಭ್ರಾಂತವಾಗಿ ಭಯದಿಂದ ನಡುಗುತ್ತಿರುವುದು ಕಾಣುತ್ತಿದೆ. ಜೀವನದ ಸಲುವಾಗಿ ಆದು ನನ್ನ ಬಳಿಗೆ ಬಂದಿದೆ. ಆದನ್ನು ಪರಿತ್ಯಾಗ ಮಾಡುವುದು ನಿಂದಿತವಾದುದು.

ಶ್ಯೇನಃ

ಆಹಾರಾತ್ ಸರ್ವಭೂತಾನಿ ಸಂಭವಂತಿ ಮಹೀಪತೇ ।
ಆಹಾರೇಣ ವಿವರ್ಧಂತೇ ತೇನ ಜೀವಂತಿ ಸರ್ವಶಃ ॥೬॥

ಶ್ಯೇನ– ಎಲೈ ರಾಜನೇ, ಎಲ್ಲ ಪ್ರಾಣಿಗಳೂ ಆಹಾರದಿಂದ ಹುಟ್ಟುತ್ತವೆ; ಆಹಾರದಿಂದ ಬೆಳೆಯುತ್ತವೆ ಮತ್ತು ಆಹಾರದಿಂದಲೇ ಜೀವಿಸುತ್ತವೆ.

ಶಕ್ಯತೇ ದುಸ್ತ್ಯಜೇಽಪ್ಯರ್ಥೇ ಚಿರರಾತ್ರಾಯ ಜೀವಿತುಮ್ ।
ನ ತು ಭೋಜನಮುತ್ಸೃಜ್ಯ ಶಕ್ಯಂ ವರ್ತಯಿತುಂ ಚಿರಮ್ ॥೭॥

ಬಿಡಲು ಬಹಳ ಕಷ್ಟವಾದ ವಸ್ತುವನ್ನು ಬಿಟ್ಟು ಬಹುಕಾಲ ಜೀವಿಸಬಹುದು. ಆದರೆ ಅನ್ನವನ್ನು ತೊರೆದು ಬಹಳ ಸಮಯ ಬದುಕಲು ಸಾಧ್ಯವಿಲ್ಲ.

ಭಕ್ಷಾದ್ವಿಜೋಪಿತಸ್ಯಾದ್ಯ ಮಮ ಪ್ರಾಣಾ ವಿಶಾಂಪತೇ ।
ವಿಸೃಜ್ಯ ಕಾಯಮೇಷ್ಯಂತಿ ಪಂಥಾನಮಪುನರ್ಭವಮ್ ॥೮॥

ಎಲೈ ರಾಜನೇ, ನನ್ನ ಆಹಾರದಿಂದ ವಂಚಿತನಾದ ನನಗೆ ಈ ದಿನ ನನ್ನ ಪ್ರಾಣಗಳು ನನ್ನ ದೇಹವನ್ನು ಬಿಟ್ಟು ಪುನರಾವರ್ತಿಯಿಲ್ಲದ ಮಾರ್ಗದಲ್ಲಿ ಹೊರಟು ಹೋಗುವವು.

ಪ್ರಮೃತೇ ಮಯಿ ಸರ್ವಂ ಮೇ ಪುತ್ರದಾರಂ ಮರಿಷ್ಯತಿ ।
ರಕ್ಷನ್ ಕಪೋತಂ ರಾಜಂಸ್ತ್ವಂ ಬಹೂನ್ ಪ್ರಾಣಾನ್ ಹನಿಷ್ಯಸಿ ॥೯॥

ನಾನು ಮೃತನಾದರೆ ನನ್ನ ಹೆಂಡತಿ, ಮಕ್ಕಳು ಮೃತರಾಗುವರು. ಎಲೈ ರಾಜನೇ, ನೀನು ಕಪೋತವನ್ನು ರಕ್ಷಿಸುತ್ತಾ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿದ್ದೀಯೆ.

ಬಹೂನ್ ಯೋ ಬಾಧತೇ ಧರ್ಮೋ ನ ಸ ಧರ್ಮಃ ಕುವರ್ತ್ಮ ತತ್ ।
ಅವಿರೋಧೀ ತು ಯೋ ಧರ್ಮಃ ಸ ಧರ್ಮಃ ಸದ್ಭಿರುಚ್ಯತೇ ॥೧೦॥

ಯಾವುದು ಬಹಳ ವ್ಯಕ್ತಿಗಳಿಗೆ ಬಾಧೆಯನ್ನು ಉಂಟುಮಾಡುವುದೋ ಅದು ಧರ್ಮವಲ್ಲ. ಅದು ಕುಮಾರ್ಗ. ಯಾವುದು ಬಹಳ ಜನರಿಗೆ ಅವಿರೋಧಿಯಾಗಿರುತ್ತದೆಯೋ ಅದೇ ಧರ್ಮವೆಂದು ಸಜ್ಜನರು ಹೇಳುತ್ತಾರೆ.

ವಿರೋಧಿಷು ಮಹೀಪಾಲ ನಿಶ್ಚಿತ್ಯ ಗುರುಲಾಘವಮ್ ।
ನ ಬಾಧಾ ವಿದ್ಯತೇ ಯತ್ರ ತಂ ಧರ್ಮಂ ಸಮುಪಾಚರೇತ್ ॥೧೧॥

ಎಲೈ ರಾಜನೇ, ಎರಡು ಧರ್ಮಗಳಲ್ಲಿ ವಿರೋಧವು ಬಂದಾಗ ಅವುಗಳ ಗುರುಲಾಘವವನ್ನು ವಿಚಾರಮಾಡಿ ಯಾವುದಕ್ಕೆ ಬಾಧೆ ಬರುವುದಿಲ್ಲವೋ ಅಂತಹ ಧರ್ಮವನ್ನು ಆಚರಿಸಬೇಕು.

ಗುರುಲಾಘವಮಾಜ್ಞಾಯ ಧರ್ಮಾಧರ್ಮವಿನಿಶ್ಚಯೇ ।
ಯತೋ ಭೂಯಸ್ತತೋ ರಾಜನ್ ಕುರು ಧರ್ಮವಿನಿಶ್ಚಯಮ್ ॥೧೨॥

ಎಲೈ ರಾಜನೇ, ಧರ್ಮಾಧರ್ಮದ ವಿಷಯದಲ್ಲಿ ಗೌರವಲಾಘವವನ್ನು ಚೆನ್ನಾಗಿ ತಿಳಿದು ಯಾವುದು ಶ್ರೇಷ್ಠವೋ ಅಂತಹ ಧರ್ಮನಿಶ್ಚಯವನ್ನು ಮಾಡು.

ರಾಜಾ

ಬಹುಕಲ್ಯಾಣಸಂಯುಕ್ತಂ ಭಾಷಸೇ ವಿಹಗೋತ್ತಮ ।
ಸುಪರ್ಣಃ ಪಕ್ಷಿರಾಟ್ ಕಿಂ ತ್ವಂ ಧರ್ಮಜ್ಞಸ್ತು ವಿಭಾವ್ಯಸೇ ।
ಸ ತಥಾ ಧರ್ಮಸಂಯುಕ್ತಂ ಬಹುಚಿತ್ರಂ ಪ್ರಭಾಷಸೇ ॥೧೩॥

ರಾಜಾ– ಎಲೈ ವಿಹಗೋತ್ತಮನೇ, ನೀನು ಬಹಳ ಕಲ್ಯಾಣಯುಕ್ತವಾಗಿ ಮಾತನಾಡುತ್ತಿದ್ದೀಯೆ. ನೀನೇನು ಪಕ್ಷಿರಾಜನಾದ ಗರುಡನೇ? ನೀನಾದರೂ ಧರ್ಮಜ್ಞನಂತೆ ಕಾಣುತ್ತಿದ್ದೇನೆ. ಏಕೆಂದರೆ ಅಂತಹ ಧರ್ಮಯುಕ್ತವಾದ ಬಹಳ ವಿಚಿತ್ರವಾದ ಮಾತುಗಳನ್ನು ಆಡುತ್ತಿದ್ದೀಯೆ.

ನ ತೇಽಸ್ಯವಿದಿತಂ ಕಿಂಚಿದಿತಿ ತ್ವಾಂ ಲಕ್ಷಯಾಮ್ಯಹಮ್ ।
ಶರಣಾಗತಸಂತ್ಯಾಗಂ ಕಥಂ ಸಾಧ್ವಿತಿ ಮನ್ಯಸೇ ॥೧೪॥

ನಿನಗೆ ತಿಳಿಯದಿದ್ದ ವಿಷಯವು ಯಾವುದೂ ಇಲ್ಲ ಎಂದು ನಾನು ಗಮನಿಸುತ್ತಿದ್ದೀಯೆ. ಶರಣಾಗತರನ್ನು ಪರಿತ್ಯಾಗ ಮಾಡುವುದು ಹೇಗೆ ಸಾಧುವೆಂದು ನೀನು ತಿಳಿಯುತ್ತೀಯೆ?

ಆಹಾರಾರ್ಥಃ ಸಮಾರಂಭಃ ತವ ಚಾಯಂ ವಿಹಂಗಮ ।
ಶಕ್ಯಶ್ಚಾಪ್ಯನ್ಯಥಾ ಕರ್ತುಮಾಹಾರೋಽಪ್ಯಧಿಕಸ್ತ್ವಯಾ ॥೧೫॥

ಎಲೈ ಪಕ್ಷಿಯೇ, ಈ ನಿನ್ನ ಪ್ರಯತ್ನವು ನಿನ್ನ ಆಹಾರಕ್ಕಾಗಿ ಇದೆ. ಇದಕ್ಕಿಂತ ಹೆಚ್ಚಿನ ಆಹಾರವನ್ನು ನೀನು ಬೇರೆ ರೀತಿಯಲ್ಲಿಯೂ ಸಂಪಾದನೆ ಮಾಡಬಹುದು.

ಗೋವೃಷೋ ವಾ ವರಾಹೋ ವಾ ಮೃಗೋ ವಾ ಮಹಿಷೋಽಪಿ ವಾ ।
ತದರ್ಥಮತ್ರ ಕ್ರಿಯತಾಂ ಯದನ್ಯದಭಿಕಾಂಕ್ಷಸೇ ॥೧೬॥

ನಿನಗೆ ಯಾವುದು ಇಷ್ಟವಾಗಿದೆಯೋ ಅಂತಹ ಗೋವೃಷವನ್ನಾಗಲೀ, ವರಾಹವನ್ನಾಗಲೀ, ಮೃಗವನ್ನಾಗಲೀ ಅಥವಾ ಮಹಿಷವನ್ನಾಗಲೀ ನೀನು ನಿನ್ನ ಆಹಾರವಾಗಿ ಸ್ವೀಕರಿಸಬಹುದು.

ಶ್ಯೇನಃ

ನ ವರಾಹಂ ನ ಚೋಕ್ಷಾಣಂ ನ ಮೃಗಾಂಶ್ಚ ಪೃಥಗ್ವಿಧಾನ್ ।
ಭಕ್ಷಯಾಮ ಮಹಾರಾಜ ಕಿಂ ಮಮಾನ್ಯೇನ ಕೇನಚಿತ್ ॥೧೭॥

ಶ್ಯೇನ– ಎಲೈ ಮಹಾರಾಜನೇ, ವರಾಹವನ್ನಾಗಲೀ, ಗೋವೃಷವನ್ನಾಗಲೀ ಅಥವಾ ಬೇರೆ ಬೇರೆ ಮೃಗಗಳನ್ನಾಗಲೀ ನಾವು ತಿನ್ನುವುದಿಲ್ಲ. ಬೇರೆ ಪ್ರಾಣಿಗಳಿಂದ ನನಗೆ ಏನಾಗಬೇಕಾಗಿದೆ?

ಯಸ್ತು ಮೇ ದೇವವಿಹಿತೋ ಭಕ್ಷಃ ಕ್ಷತ್ರಿಯಪುಂಗವ ।
ತಮುತ್ಸೃಜ ಮಹಾರಾಜ ಕಪೋತಮಿಮಮೇವ ಮೇ ॥೧೮॥

ಎಲೈ ಕ್ಷತ್ರಿಯಪುಂಗವನಾದ ಮಹಾರಾಜನೇ, ನನಗೆ ಈ ಕಪೋತವೇ ದೇವವಿಹಿತವಾದ ಆಹಾರ. ಆದ್ದರಿಂದ ಇದನ್ನು ನನಗೆ ಬಿಟ್ಟುಕೊಡು.

ಶ್ಯೇನಾಃ ಕಪೋತಾನ್ ಖಾದಂತಿ ಶ್ರುತಿರೇಷಾ ಸನಾತನೀ ।
ಮಾ ರಾಜನ್ ಸಾರಮಜ್ಞಾತ್ವಾ ಕದಲೀಸ್ಕಂಧಮಾರುಹ ॥೧೯॥

ಶ್ಯೇನಗಳು ಕಪೋತಗಳನ್ನು ತಿನ್ನುತ್ತವೆ ಎಂಬ ಈ ಶಾಶ್ವತವಾದ ಶ್ರುತಿಯಿದೆ. ರಾಜನೇ, ಅದನ್ನು ತಿಳಿಯದೆ ಬಾಳೆಯ ಮರವನ್ನು ಹತ್ತಬೇಡ.

ರಾಜಾ

ರಾಷ್ಟ್ರಂ ಶಿಬೀನಾಮೃದ್ಧಂ ವೈ ಶಾಧಿ ಪಕ್ಷಿಭರರ್ಚಿತಃ ।
ಕೃತ್ಸ್ನಮೇತನ್ಮಯಾ ದತ್ತಂ ರಾಜವದ್ ವಿಹಗೋತ್ತಮ ॥೨೦॥

ರಾಜಾ– ಎಲೈ ವಿಹಗೋತ್ತಮನೇ, ನೀನು ಪಕ್ಷಿಗಳ ಜೊತೆಯಲ್ಲಿ ಶಿಬಿಗಳಾದ ನಮ್ಮ ಸಮೃದ್ಧವಾದ ರಾಷ್ಟ್ರವೆಲ್ಲವನ್ನು ರಾಜನಂತೆ ಆಳು. ನನ್ನ ಸಮಸ್ತವಾದ ರಾಷ್ಟ್ರವನ್ನು ನಿನಗೆ ಕೊಟ್ಟಿದ್ದೇನೆ.

ಯದ್ ವಾ ಕಾಮಯಸೇ ಕಿಂಚಿತ್ ಶ್ಯೇನ ಸರ್ವಂ ದದಾನಿ ತೇ ।
ವಿನೇಮಂ ಪಕ್ಷಿಣಂ ಶ್ಯೇನ ಶರಣಾರ್ಥಿನಮಾಗತಮ್ ॥೨೧॥

ಅಥವಾ ಎಲೈ ಶ್ಯೇನವೇ, ನಿನಗೆ ಏನು ಇಷ್ಟವೋ ಅದೆಲ್ಲವನ್ನೂ ಕೊಡುತ್ತೇನೆ. ಎಲೈ ಶ್ಯೇನವೇ, ಆದರೆ ಶರಣಾರ್ಥಿಯಾಗಿ ನನ್ನ ಬಳಿಗೆ ಬಂದ ಈ ಕಪೋತವನ್ನು ಮಾತ್ರ ಕೊಡುವುದಿಲ್ಲ.

ಯೇನೇಮಂ ಸ್ಥಾಪಯೇಥಾಸ್ತ್ವಂ ಕರ್ಮಣಾ ಪಕ್ಷಿಸತ್ತಮ ।
ತದಾಚಕ್ಷ್ವ ಕರಿಷ್ಯಾಮಿ ನ ಹಿ ದಾಸ್ಯೇ ಕಪೋತಕಮ್ ॥೨೨॥

ಎಲೈ ಪಕ್ಷಿಶ್ರೇಷ್ಠನೇ, ನಾನು ಏನು ಮಾಡಿದರೆ ನೀನು ಈ ಕಪೋತವನ್ನು ಉಳಿಸುತ್ತೀಯೋ ಅಂತಹ ಉಪಾಯವನ್ನು ಹೇಳು. ಅದನ್ನು ನಾನು ಮಾಡುವೆನು. ಈ ಕಪೋತವನ್ನು ಮಾತ್ರ ಕೊಡುವುದಿಲ್ಲ.

ಶ್ಯೇನಃ

ಉಶೀನರ ಕಪೋತೇ ತೇ ಯದಿ ಸ್ನೇಹೋ ನರಾಧಿಪ ।
ಆತ್ಮಾನಂ ಸುಸಮುತ್ಕೃತ್ಯ ಕಪೋತತುಲಯಾ ಧೃತಮ್ ॥೨೩॥

ಯದಾ ಸಮಂ ಕಪೋತೇನ ತವ ಮಾಂಸಂ ನರಾಧಿಪ ।
ತದಾ ಪ್ರದೇಯಂ ತನ್ಮಹ್ಯಂ ಸಾ ಮೇ ತುಷ್ಟಿರ್ಭವಿಷ್ಯತಿ ॥೨೪॥

ಶ್ಯೇನ– ಉಶೀನರನೇ, ರಾಜನೇ, ನಿನಗೆ ಕಪೋತದಲ್ಲಿ ಅಷ್ಟು ಸ್ನೇಹವಿದ್ದರೆ ನಿನ್ನ ಮಾಂಸವನ್ನು ಕತ್ತರಿಸಿ ಕಪೋತದ ಜೊತೆಯಲ್ಲಿ ತಕ್ಕಡಿಯಲ್ಲಿ ತೂಗಿ ಯಾವಾಗ ನಿನ್ನ ಮಾಂಸದ ತೂಕವು ಕಪೋತದ ತೂಕಕ್ಕೆ ಸಮವಾಗುತ್ತದೆಯೋ ಆಗ ಅದನ್ನು ನನಗೆ ಕೊಡು. ಅದರಿಂದ ನನಗೆ ಸಂತೋಷವುಂಟಾಗುವುದು.

ರಾಜಾ

ಅನುಗ್ರಹಮಿಮಂ ಮನ್ಯೇ ಯನ್ಮಾಂ ಶ್ಯೇನಾಭಯಾಚಸೇ ।
ತಸ್ಮಾತ್ತೇಽದ್ಯ ಪ್ರದಾಸ್ಯಾಮಿ ಸ್ವಮಾಂಸಂ ತುಲಯಾ ಧೃತಮ್ ॥೨೫॥

ರಾಜಾ– ಎಲೈ ಶ್ಯೇನನೇ, ನೀನು ಯಾವ ಈ ವಸ್ತುವನ್ನು ಬೇಡುತ್ತಿದ್ದೀಯೋ ಅದು ನನಗೆ ಮಾಡಿದ ದೊಡ್ಡ ಅನುಗ್ರಹವೆಂದು ಭಾವಿಸುತ್ತೇನೆ. ಆದ್ದರಿಂದ ಈ ದಿನ ನನ್ನ ಮಾಂಸವನ್ನು ತಕ್ಕಡಿಯಲ್ಲಿ ತೂಗಿ ನಿನಗೆ ಕೊಡುವೆನು.

ಲೋಮಶಃ

ಅಥೋತ್ಕೃತ್ಯ ಸ್ವಮಾಂಸಂ ತು ರಾಜಾ ಪರಮಧರ್ಮವಿತ್ ।
ತುಲಯಾಮಾಸ ಕೌಂತೇಯ ಕಪೋತೇನ ಸಮಂ ವಿಭೋ ॥೨೬॥

ಲೋಮಶ– ಎಲೈ ಕೌಂತೇಯನೇ, ವಿಭುವೇ, ಅನಂತರ ಪರಮಧಾರ್ಮಿಕನಾದ ಆ ರಾಜನು ತನ್ನ ಮಾಂಸವನ್ನು ಕತ್ತರಿಸಿ ಕಪೋತದ ಎದುರಿಗೆ ತಕ್ಕಡಿಯಲ್ಲಿ ತೂಗಿದನು.

ಧ್ರಿಯಮಾಣಸ್ತು ತುಲಯಾ ಕಪೋತೋಽತ್ಯತಿರಿಚ್ಯತೇ ।
ಪುನಶ್ಚೋತ್ಕೃತ್ಯ ಮಾಂಸಾನಿ ರಾಜಾ ಪ್ರಾದಾದುಶೀನರಃ ॥೨೭॥

ತಕ್ಕಡಿಯಲ್ಲಿ ತೂಗಿದಾಗ ಕಪೋತದ ಭಾರವೇ ಹೆಚ್ಚಾಗುತ್ತದೆ. ಆಗ ಉಶೀನರ ರಾಜನು ತನ್ನ ಮಾಂಸವನ್ನು ದೇಹದಿಂದ ಪುನಃ ಕತ್ತರಿಸಿ ಕೊಟ್ಟನು (ತೂಗಿದನು).

ನ ವಿದ್ಯತೇ ಯದಾ ಮಾಂಸಂ ಕಪೋತೇನ ಸಮಂ ಧೃತಮ್ ।
ತತಃ ಪ್ರಕ್ಷೀಣಮಾಂಸೋಽಸಾವಾರುರೋಹ ತುಲಾಂ ಸ್ವಯಮ್ ॥೨೮॥

ಕಪೋತದ ತೂಕಕ್ಕೆ ಸಮವಾದ ಮಾಂಸವು ತನ್ನ ಶರೀರದಲ್ಲಿ ಇಲ್ಲದಿದ್ದಾಗ ರಾಜನು ತನ್ನ ಮಾಂಸವನ್ನೆಲ್ಲಾ ಕಳೆದುಕೊಂಡು ತಾನೇ ತಕ್ಕಡಿಯಲ್ಲಿ ಕುಳಿತುಕೊಂಡನು.

ಶ್ಯೇನಃ

ಇಂದ್ರೋಽಹಮಸ್ಮಿ ಧರ್ಮಜ್ಞ ಕಪೋತೋ ಹವ್ಯವಾಡಯಮ್ ।
ಜಿಜ್ಞಾಸಮಾನೌ ಧರ್ಮಂ ತ್ವಾಂ ಯಜ್ಞವಾಟಮುಪಾಗತೌ ॥೨೯॥

ಯತ್ತೇ ಮಾಂಸಾನಿ ಗಾತ್ರೇಭ್ಯಃ ಸಮುತೃತ್ತಾನಿ ಪಾರ್ಥಿವ ।
ಏಷಾ ತೇ ಶಾಶ್ವತೀ ಕೀರ್ತಿರ್ಲೋಕಾನಭಿವಿಷ್ಯತಿ ॥೩೦॥

ಶ್ಯೇನ– ಎಲೈ ಧರ್ಮಜ್ಞನೇ, ನಾನು ಇಂದ್ರ. ಈ ಕಪೋತವು ಅಗ್ನಿ. ನಿನ್ನ ಧರ್ಮವನ್ನು ಪರೀಕ್ಷೆ ಮಾಡುವ ಉದ್ದೇಶದಿಂದ ನಾವು ಯಜ್ಞಶಾಲೆಗೆ ಬಂದವು. ಎಲೈ ಪಾರ್ಥಿವನೇ, ನೀನು ನಿನ್ನ ಮಾಂಸವನ್ನು ಶರೀರದಿಂದ ಕತ್ತರಿಸಿಕೊಟ್ಟ ಕಾರಣದಿಂದ ನಿನಗೆ ಶಾಶ್ವತ ಕೀರ್ತಿಯು ಲೋಕದಲ್ಲಿ ಉಂಟಾಗಿ ಲೋಕವನ್ನೆಲ್ಲಾ ತುಂಬುತ್ತದೆ.

ಯಾವಲ್ಲೋಕೇ ಮನುಷ್ಯಾಸ್ತ್ವಾಂ ಕಥಯಿಷ್ಯಂತಿ ಪಾರ್ಥಿವ ।
ತಾವತ್ ಕೀರ್ತಿಶ್ಚ ಲೋಕಾಶ್ಚ ಸ್ವಾಸ್ಯಂತಿ ತವ ಸರ್ವದಾ ॥೩೧॥

ಎಲೈ ರಾಜನೇ, ಎಲ್ಲಿಯವರೆಗೆ ಮನುಷ್ಯರು ನಿನ್ನ ಕಥೆಯನ್ನು ಹೇಳುವರೋ ಅಲ್ಲಿಯವರೆಗೆ ನಿನ್ನ ಕೀರ್ತಿಯೂ, ನಿನ್ನ ಶುಭಲೋಕಗಳೂ ಸರ್ವದಾ ಇರುತ್ತವೆ.

ಇತ್ಯುಕ್ತ್ವಾ ತಂ ದಾನಪತಿಮಿಂದ್ರಾಗ್ನೀ ತೌ ತದಾ ನೃಪಂ ।
ಪೂರ್ವದೇಹಯುತಂ ಕೃತ್ವಾ ಜಗ್ಮತುಸ್ತ್ರಿದಶಾಲಯಮ್ ॥೩೨॥

ಆ ಇಂದ್ರಾಗ್ನಿಗಳು ದಾನಪತಿಯಾದ ಆ ರಾಜನಿಗೆ ಹೀಗೆ ಹೇಳಿ ಅವನನ್ನು ಮೊದಲಿನ ದೇಹವುಳ್ಳವನನ್ನಾಗಿಯೇ ಮಾಡಿ ಸ್ವರ್ಗಕ್ಕೆ ಹೊರಟುಹೋದರು.

ತತ್ ಪಾಂಡವೇಯ ಯಜನಂ ರಾಜ್ಞಸ್ತಸ್ಯ ಮಹಾತ್ಮನಃ ।
ಪಶ್ಯಸ್ವೈತನ್ಮಯಾ ಸಾರ್ಧಂ ಪುಣ್ಯಂ ಪಾಪಪ್ರಣಾಶನಮ್ ॥೩೩॥

ಎಲೈ ಪಾಂಡುಪುತ್ರನೇ, ಇದು ಮಹಾತ್ಮನಾದ ಆ ಶಿಬಿರಾಜನ ಯಜ್ಞಭೂಮಿ. ಪಾಪಪ್ರಣಾಶನವಾದ ಪವಿತ್ರವಾದ ಈ ಭೂಮಿಯನ್ನು ನನ್ನ ಜೊತೆಯಲ್ಲಿ ನೋಡು.

ಅತ್ರೈವ ಸತತಂ ದೇವಾ ಮುನಯಶ್ಚ ತಪೋಧನಾಃ ।
ದೃಶ್ಯಂತೇ ಬ್ರಾಹ್ಮಣಾ ರಾಜನ್ ಪುಣ್ಯವದ್ಭಿರ್ಮಹಾತ್ಮಭಿಃ ॥೩೪॥

ಎಲೈ ರಾಜನೇ, ಪುಣ್ಯವಂತರಾದ ಮಹಾತ್ಮರಿಗೆ ಇಲ್ಲಿಯೇ ಸತತವಾಗಿ ದೇವತೆಗಳು, ತಪೋಧನರಾದ ಋಷಿಗಳು ಮತ್ತು ಶ್ರೇಷ್ಠರಾದ ಬ್ರಾಹ್ಮಣರು ಕಾಣುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರ್ಯಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೆಂಟನೆಯ ಅಧ್ಯಾಯ

ಅಷ್ಟಾವಕ್ರೋಪಾಖ್ಯಾನ

ಲೋಮಶಃ

ಯಃ ಕಥ್ಯತೇ ಮಂತ್ರದ್‌ಗ್ರ್ಯ ಬುದ್ಧಿಃ
ಔದ್ದಾಲಕಿಃ ಶ್ವೇತಕೇತುಃ ಪೃಥಿವ್ಯಾಮ್ ।
ತಸ್ಯಾಶ್ರಮಂ ಪಶ್ಯತ ಪಾಂಡವೇಯಾಃ
ಸದಾಫಲೈರುಪಪನ್ನಂ ಮಹೀಜೈಃ ॥೧॥

ಲೋಮಶರು– ಎಲೈ ಪಾಂಡವರೇ, ಭೂಮಿಯಲ್ಲಿ ಉದ್ದಾಲಕರ ಪುತ್ರರಾದ ಯಾವ ಶ್ವೇತಕೇತುವನ್ನು ಮಂತ್ರಜ್ಞರೆಂದು, ಶ್ರೇಷ್ಠಬುದ್ಧಿಯುಳ್ಳವರೆಂದು ಹೇಳುತ್ತಾರೆಯೋ ಅವರ ಯಾವಾಗಲೂ ಫಲಭರಿತ ವೃಕ್ಷಗಳಿಂದ ತುಂಬಿರುವ ಈ ಆಶ್ರಮವನ್ನು ನೋಡಿ.

ಸಾಕ್ಷಾದತ್ರ ಶ್ವೇತಕೇತುರ್ದದರ್ಶ
ಸರಸ್ವತೀಂ ಮಾನುಷದೇಹರೂಪಾಮ್ ।
ವೇತ್ಸ್ಯಾಮಿ ವಾಣೀಮಿತಿ ಸಂಪ್ರವೃತ್ತಾಂ
ಸರಸ್ವತೀಂ ಶ್ವೇತಕೇತುರ್ಬಭಾಷೇ ॥೨॥

ಇಲ್ಲಿ ಶ್ವೇತಕೇತುವು ಮನುಷ್ಯರೂಪವನ್ನು ಧರಿಸಿದ ಸರಸ್ವತಿಯನ್ನು ಸಾಕ್ಷಾತ್ತಾಗಿ ನೋಡಿದರು. ಮತ್ತು ವಾಣಿಯನ್ನು ತಿಳಿದುಕೊಳ್ಳುವೆನು ಎಂದು ಯೋಚಿಸಿ ಅಲ್ಲಿ ಪ್ರವೃತ್ತಳಾದ ಸರಸ್ವತಿಯನ್ನು ಕುರಿತು ಶ್ವೇತಕೇತುವು ಮಾತನಾಡಿದರು (ಇದು ಅಂತಹ ಪವಿತ್ರವಾದ ಕ್ಷೇತ್ರ).

ತಸ್ಮಿನ್ ಕಾಲೇ ಬ್ರಹ್ಮವಿದಾಂ ವರಿಷ್ಠಾ-
ವಾಸ್ತಾಂ ತದಾ ಮಾತುಲಭಾಗಿನೇಯೌ ।
ಅಷ್ಟಾವಕ್ರಶ್ಚೈವ ಕಹೋಲಸೂನುಃ
ಔದ್ದಾಲಕಿಃ ಶ್ವೇತಕೇತುಶ್ಚ ರಾಜನ್ ॥೩॥

ಎಲೈ ರಾಜನೇ, ಆ ಕಾರಣದಿಂದ ಬುದ್ಧಿವಂತನಾಗಿರುವವನು ಸಂಸಾರದಲ್ಲಿ ಸಿಕ್ಕಿಕೊಳ್ಳದೆ ವಿವೇಕಿಯಾಗಿ ಸಂಸಾರಸಾಗರವನ್ನು ದಾಟಿ ಹೋಗಬೇಕು. ಆದರೆ ಮೂರ್ಖನು ಸಂಸಾರದಲ್ಲಿ ಸಿಕ್ಕಿಕೊಂಡು ಅಲ್ಲಿಯೇ ಮುಳುಗಿ ಹೋಗುತ್ತಾನೆ.

ವಿವೇಕಾಯಾಸ್ಯ ಸಂಸಾರಃ
ಧೀರಾಸ್ತೀರ್ತ್ವಾ ದುರತ್ಯಯಮ್ ।
ಕ್ಷುದ್ರಾಸ್ತು ಮಜ್ಜಯಂತ್ಯೇವ
ಪಾಪಿನೋ ವಿಷಯಾಶಯಾಃ ॥೧೫॥

ಅನ್ವಯಾರ್ಥ. ಧೀರರು ಅತಿ ಆ ದುಃಖ-ಧಾಯಕವಾದ ವಿವೇಕವಾಗಿ ಸಂಸಾರವನ್ನು ತೊರೆದು ಅದು ಮತ್ತೆಯಾಯಿಸುವ ಸ್ಥಳವಾದ ಎಂದಾದರೂ ಪಾಪವನ್ನು ದಾಟಿ ಹೋಗುತ್ತಾರೆ.

ಮುದ್ರಿತ್ಯ

ಕ್ಷುದ್ರಾಸ್ತು ಕ ಬುದ್ಧಿವ ನಿತ್ಯ
ಕ್ಷುದ್ರಾದಿಂದ ಮೋಕ್ಷ ವಿಷಾಸ್ಯ ಪಾಪಿನಿ ।
ಅಜ್ಞಾನಿಸ್ಯಾಸ್ಯ ಸಂಸಾರಾಪಾದಿಂದ
ವಿವೇಕಾಯಾಸ್ಯ ಸಂಸಾರ ಆಗಿ ।
ಅಜ್ಞಾನಿಸ್ಯ ಕೆಸ ಮಾಡಿ ಬುದ್ಧಿವ
ಹಿಗೆ ಸಂಸಾರ ಹೋಲ ದೋಷಾಯಾಸ್ಯ ಬುದ್ಧಿಗೆ ॥೧೫॥

ಮುದ್ರಿತ್ಯ- ಅಂತಹ ಪಾಪವನ್ನು ನಿಗ್ರಹಿಸದ ಆ ಬ್ರಾಹ್ಮಣರು ಎಂತಹ ಶ್ರೇಷ್ಠರಾಗುತ್ತಾರಾಗುವರು? ಮತ್ತು ವಿವೇಕಯಾಸ ಸಂಸಾರದಲ್ಲಿ ಅಜ್ಞಾನಿಗಳೂ ಯಾವ ವಿಷಯದಲ್ಲಿ ಪಾಪವನ್ನು ಪಾಪವಾಗಿ ಎಣಿಸುವುದಿಲ್ಲ? ಮತ್ತು ಯಾವ ಅಜ್ಞಾನದಿಂದ ಅಜ್ಞಾನಿಗಳು ಈ ಪಾಪವನ್ನು ಮಾಡುವರು? ಎಲೈ ಬ್ರಾಹ್ಮಣಾದ ದೋಷವೇ, ಅದೃಷ್ಟವನ್ನು ಹೊರಗೆ ಹೋಗು.

ದೋಷವಾಸ

ಅಜ್ಞಾನಸ್ಯ ವಿವಾಸ ಬುದ್ಧಿ ದರ್ಶಿಸ
ಜಾಸ್ಯ ಸಂಸಿಸಾಗಿ ಬುದ್ಧಿವ ರಾಜಾಸ್ಯ ।

ಶಂಕಪ್ರಾಸಾದಾಯಾಗಾಯಾಮಿಷಾಮಿಷಾಗೀ
ದಿಕ್ಷಾಗಂ ಶಾಲಂ ಶೋಕಾಧ್ಯಮಂ ಚಾಯಾ IIಓ.II

ದೋಮಕ- ಎಲೈ ರಾಜನೇ, ಉದ್ಯಾಲಂಗೆ ನಿಯಮವಾದ ಒಟ್ಟು ಶಿಲೋಚ್ಚಯಂ ಪೇಳ್ಪೆನಿದನು. ಅವನು ಆಚಾರ್ಯವರ್ಧಕಿಯಾಗಿ ಅವರ ಶೀಲೆಯನ್ನು ಮಾಡಿಂದಂ ಬಹುಶಾಲವರಿಗೆ ಅಧ್ಯಯನವನ್ನು ಮಾಡಿದನು.

ಶಂ ದೈ ವಿಷ್ಣು ಶಯಾಧಿಪಂಚ್ಚ ಪೆಷ್ಣಾ
ಶಂ ಚ ಷ್ಣಾಶ್ಚ ವಿಷ್ಣಾಂಶಂ ಗುರು ಷ್ಣಃ ।
ಪೈಷ್ಣ ಷ್ಣಾಯಾ ಷ್ಣ ದಿವ ಷ್ಣುಂ ಚ
ಧಾಯಾಗಂ ಚ ದೈ ದುಃಖಂ ಷ್ಣಾ ಶುಷ್ಣಾಯಾ IIಓ.II

ಅವನು ಉದ್ಯಾಲದ ಪಿಕ್ಕವಾದ ಅಳದ ಬ್ರಾಹ್ಮಣರು ಅವರೂಪ ಮಾಡಿದರು. ೪ ಆವಾರವನ್ನು ತೀರ ಗುರುಗಳು ಅವರಿಗೆ ಶಬ್ದಾದಿಗಳೇ ಶ್ಲೋಪವನ್ನು ನೀಡಿ ಸಿದ್ಧ ಮಗಳಾದ ಸುಜಾತೆಯನ್ನು ಪತ್ನಿಯಾಗಿಯೂ ಕೊಟ್ಟರು

ಶಾಸ್ತ್ರಂ ಗುರು ಷಾಯಾಧಿಷ್ಣಾಗೈಲ್ಲ
ಶೋಃ ಧೀಯಾಪಂ ಷಾಧಿಷಾಷ್ಟಾಯ್ಕಾಚಾಷ ।
ಷಾಯಾ ಧ್ಯಾಗಧ್ಯಯಂ ಶೋಷಂ
ಶೇರಂ ಷಷ ಷಷ್ಟುಗೂಢ ಷಾಯಾಶ್ಚ IIಶಿII

ಶಿಲೋಚ್ಚಯಂಗೆ ಅವಳಲ್ಲಿ ಅನ್ಯಪುರುಷರ ಒಂದು ಗರ್ಭಸ್ರಾವಂಯಾಯಿತು ಆ ಘಟ್ಟದಲ್ಲಿದ್ದ ಶಿಷ್ಯರು ಯಜ್ಞಯಾಗಂ ಅಧ್ಯಯನ ಮಾಡುವ ಸಂದರ್ಭವನ್ನು ತಿಂದು-

ಎಲೈ ರಾಜನೇ, ಆ ಕಾಲದಲ್ಲಿ ಬ್ರಹ್ಮಜ್ಞಾನಿಗಳಲ್ಲಿ ವಿಶಿಷ್ಟರಾದ ಸೋದರಮಾವ ಮತ್ತು ಸೋದರಳಿಯರಾದ ಕಹೋಲಪುತ್ರರಾದ ಅಷ್ಟಾವಕ್ರರು ಮತ್ತು ಉದ್ದಾಲಕರ ಪುತ್ರರಾದ ಶ್ವೇತಕೇತುವು ಇದ್ದರು.

ವಿದೇಹರಾಜಸ್ಯ ಸಮೀಪತಸ್ತೌ
ಧೀರಾವುಭೌ ಮಾತುಲಭಾಗಿನೇಯೌ ।
ಪ್ರವಿಶ್ಯ ಯಜ್ಞಾಯತನಂ ವಿವಾದೇ
ವಂದಿಂ ನಿಜಗ್ರಾಹತುರಪ್ರಮೇಯೌ ॥೪॥

ಅಪ್ರಮೇಯರೂ, ಧೀರರೂ ಆದ ಆ ಮಾತುಲ-ಭಾಗಿನೇಯರು ವಿದೇಹರಾಜನ ಸಮೀಪಕ್ಕೆ ಹೋಗಿ ಅವನ ಯಜ್ಞಶಾಲೆಯನ್ನು ಪ್ರವೇಶಿಸಿ ವಿವಾದದಲ್ಲಿ ವಂದಿಯನ್ನು ನಿಗ್ರಹಿಸಿದರು.

ಯುಧಿಷ್ಠಿರಃ

ಕಥಂಪ್ರಭಾವಃ ಸ ಬಭೂವ ವಿಪ್ರಃ
ತಥಾವಿಧಂ ಯೋ ನಿಜಗ್ರಾಹ ವಂದಿಮ್ ।
ಕಿಂಚಾಧಿಕೃತ್ಯಾಥ ತಯೋರ್ವಿವಾದೋ
ವಿದೇಹರಾಜಸ್ಯ ಸಮೀಪ ಆಸೀತ್ ।
ಅಷ್ಟಾವಕ್ರಃ ಕೇನ ಚಾಸೌ ಬಭೂವ
ತತ್ ಸರ್ವಂ ನೋ ಲೋಮಶಾಚಕ್ಷ್ವ ಬ್ರಹ್ಮನ್ ॥೫॥

ಯುಧಿಷ್ಠಿರ– ಅಂತಹ ವಂದಿಯನ್ನು ನಿಗ್ರಹಿಸಿದ ಆ ಬ್ರಾಹ್ಮಣರು ಎಂತಹ ಪ್ರಭಾವವುಳ್ಳವರಾಗಿದ್ದರು? ಮತ್ತು ವಿದೇಹರಾಜನ ಸಮೀಪದಲ್ಲಿ ಅವರಿಬ್ಬರಿಗೂ ಯಾವ ವಿಷಯದಲ್ಲಿ ವಂದಿಯ ಜೊತೆಯಲ್ಲಿ ವಿವಾದ ಉಂಟಾಯಿತು? ಮತ್ತು ಯಾವ ಕಾರಣದಿಂದ ಅಷ್ಟಾವಕ್ರರು ಆ ಹೆಸರನ್ನು ಪಡೆದರು? ಎಲೈ ಬ್ರಾಹ್ಮಣರಾದ ಲೋಮಶರೇ, ಅದೆಲ್ಲವನ್ನೂ ನನಗೆ ಹೇಳಿ.

ಲೋಮಶಃ

ಉದ್ದಾಲಕಸ್ಯ ನಿಯತಃ ಶಿಷ್ಯ ಏಕೋ
ನಾಮ್ನಾ ಕಹೋಳೇತಿ ಬಭೂವ ರಾಜನ್ ।

ಶುಶ್ರೂಷುರಾಚಾರ್ಯವಶಾನುವರ್ತೀ
ದೀರ್ಘಂ ಕಾಲಂ ಸೋಽಧ್ಯಯನಂ ಚಕಾರ ॥೬॥

ಲೋಮಶ– ಎಲೈ ರಾಜನೇ, ಉದ್ದಾಲಕರಿಗೆ ನಿಯತನಾದ ಒಬ್ಬ ಕಹೋಳನೆಂಬ ಶಿಷ್ಯನಿದ್ದನು. ಅವನು ಆಚಾರ್ಯವಶವರ್ತಿಯಾಗಿ ಅವರ ಸೇವೆಯನ್ನು ಮಾಡಿಕೊಂಡು ಬಹುಕಾಲದವರೆಗೆ ಅಧ್ಯಯನವನ್ನು ಮಾಡಿದನು.

ತಂ ವೈ ವಿಪ್ರಾಃ ಪರ್ಯಭವಂಸ್ತು ಶಿಷ್ಯಾಃ
ತಂ ಚ ಜ್ಞಾತ್ವಾ ವಿಪ್ರಕಾರಂ ಗುರುಃ ಸಃ ।
ತಸ್ಮೈ ಪ್ರಾದಾತ್ ಸದ್ಯ ಏವ ಶ್ರುತಂ ಚ
ಭಾರ್ಯಾಂ ಚ ವೈ ದುಹಿತರಂ ಸ್ವಾಂ ಸುಜಾತಾಮ್ ॥೭॥

ಅವನನ್ನು ಉದ್ದಾಲಕರ ಶಿಷ್ಯರಾದ ಉಳಿದ ಬ್ರಾಹ್ಮಣರು ಅವಮಾನ ಮಾಡಿದರು. ಆ ಅಪಕಾರವನ್ನು ತಿಳಿದ ಗುರುಗಳು ಅವರಿಗೆ ತಕ್ಷಣದಲ್ಲಿಯೇ ಜ್ಞಾನವನ್ನು ನೀಡಿ ತಮ್ಮ ಮಗಳಾದ ಸುಜಾತೆಯನ್ನು ಪತ್ನಿಯಾಗಿಯೂ ಕೊಟ್ಟರು.

ತಸ್ಯಾಂ ಗರ್ಭಃ ಸಮಭವದಗ್ನಿಕಲ್ಪಃ
ಸೋಽಧೀಯಾನಂ ಪಿತರಮಥಾಭ್ಯುವಾಚ ।
ಸರ್ವಾ ರಾತ್ರೀರಧ್ಯಯನಂ ಕರೋಷಿ
ನೇದಂ ಪಿತಃ ಸಮ್ಯಗಿವ ವರ್ತತೇ ॥೮॥

ಕಹೋಳರಿಗೆ ಅವಳಲ್ಲಿ ಅಗ್ನಿಸಮವಾದ ಒಂದು ಗರ್ಭವುಂಟಾಯಿತು. ಆ ಗರ್ಭದಲ್ಲಿದ್ದ ಶಿಶುವು ಯಾವಾಗಲೂ ಅಧ್ಯಯನ ಮಾಡುವ ತಂದೆಯನ್ನು ಕುರಿತು- 'ತಂದೆಯೇ, ರಾತ್ರಿಯೆಲ್ಲಾ ಅಧ್ಯಯನವನ್ನು ಮಾಡುತ್ತಿದ್ದೀಯೆ. ಇದು ಸರಿಯಲ್ಲ' ಎಂದು ಹೇಳಿತು.

ಉಪಾಲಬ್ಧಃ ಶಿಷ್ಯಮಧ್ಯೇ ಮಹರ್ಷಿಃ
ಸ ತಂ ಕೋಪಾದುದರಸ್ಥಂ ಶಶಾಪ ।
ಯಸ್ಮಾತ್ ಕುಕ್ಷೌ ವರ್ತಮಾನೋ ಬ್ರವೀಷಿ
ತಸ್ಮಾದ್ವಕ್ರೋ ಭವಿತಾಸ್ಯಪ್ಪಥಾ ತ್ವಮ್ ॥೯॥

ಶಿಷ್ಯರ ಮಧ್ಯದಲ್ಲಿ ಹೀಗೆ ನಿಂದಿಸಲ್ಪಟ್ಟ ಮಹರ್ಷಿಗಳಾದ ಕಹೋಳರು ಕೋಪದಿಂದ ಉದರಸ್ಥಿತವಾದ ಆ ಶಿಶುವಿಗೆ ತಾಯಿಯ ಉದರದಲ್ಲಿದ್ದುಕೊಂಡೇ ಹೀಗೆ ಮಾತನಾಡುವುದರಿಂದ ನೀನು ಎಂಟು ರೀತಿಯಲ್ಲಿ ವಕ್ರನಾಗು ಎಂದು ಶಾಪವನ್ನು ಕೊಟ್ಟರು.

ಸ ವೈ ತಥಾ ವಕ್ರ ಏವೋಪಜಾತಃ
ತತ್ಷಾವಕ್ರಃ ಪ್ರಥಿತೋ ಮಾನವೇಷು ।
ತಸ್ಯಾಸೀದ್ ವೈಮಾತುಲಃ ಶ್ವೇತಕೇತುಃ
ಸ ತೇನ ತುಲ್ಯೋ ವಯಸಾ ಬಭೂವ ॥೧೦॥

ಆ ಶಿಶುವು ಹಾಗೆಯೇ ವಕ್ರವಾಗಿಯೇ ಜನಿಸಿ ಮನುಷ್ಯರಲ್ಲಿ ಅಷ್ಟಾವಕ್ರನೆಂದು ಪ್ರಸಿದ್ಧವಾಯಿತು. ಶ್ವೇತಕೇತುವು ಅವನ ಸೋದರಮಾವನಾಗಿದ್ದನು. ಅವರಿಬ್ಬರೂ ವಯಸ್ಸಿನಲ್ಲಿ ಸಮಾನರಾಗಿದ್ದರು.

ಸಂಪೀಡ್ಯಮಾನಾ ತು ತದಾ ಸುಜಾತಾ
ವಿವರ್ಧಮಾನೇನ ಸುತೇನ ಕುಕ್ಷೌ ।
ಉವಾಚ ಭರ್ತಾರಮಿದಂ ರಹೋ ವಚಃ
ಪ್ರಸಾದ್ಯ ಹೀನಾ ವಸುನಾ ಧನಾರ್ಥಿನೀ ॥೧೧॥

ಕಥಂ ಕರಿಷ್ಯಾಮ್ಯಧುನಾ ಮಹರ್ಷೇ
ಮಾಸಶ್ಚಾಯಂ ದಶಮೋ ವರ್ತತೇ ಮೇ ।
ನ ಚಾಸ್ತಿ ಮೇ ವಸು ಕಿಂಚಿತ್ ಪ್ರದಾತಾ
ಯೇನಾಹಮೇತಾಮಾಪದಂ ನಿಸ್ತರೇಯಮ್ ॥೧೨॥

ಉದರದಲ್ಲಿ ಬೆಳೆಯುತ್ತಿದ್ದ ಗರ್ಭದಿಂದ ಪೀಡಿತಳಾದ ಸುಜಾತೆಯು ಆಗ ಧನಹೀನಳಾಗಿ ಧನವನ್ನು ಬಯಸಿ ಏಕಾಂತದಲ್ಲಿ ಪತಿಯನ್ನು ಕುರಿತು– 'ಮಹರ್ಷಿಗಳೇ, ಈ ಕಾರ್ಯವನ್ನು ನಾನು ಹೇಗೆ ಮಾಡುವೆನು? ಇದು ನನಗೆ ಹತ್ತನೆಯ ತಿಂಗಳು. ನನ್ನ ಬಳಿ ಧನವಿಲ್ಲ. ನನಗೆ ಧನವನ್ನು ಕೊಡುವವರೂ ಯಾರೂ ಇಲ್ಲ. ಈ ಆಪತ್ತನ್ನು ನಾನು ಹೇಗೆ ದಾಟುವೆನು?' ಎಂದು ಹೇಳಿದಳು.

ಉಕ್ತಸ್ತ್ವೇವಂ ಭಾರ್ಯಯಾ ವೈ ಕಹೋಳೋ
ವಿತ್ತಸ್ಯಾರ್ಥೇ ಜನಕಮಥಾಭ್ಯಧಾವತ್ ।
ಸ ವೈ ತದಾ ವೇದವಿದಾ ನಿಗೃಹ್ಯ
ನಿಮಜ್ಜಿತೋ ವಂದಿನಾ ಹ್ಯಪ್ಸು ವಿಪ್ರಃ ॥೧೩॥

ಪತ್ನಿಯಿಂದ ಹೀಗೆ ಹೇಳಲ್ಪಟ್ಟ ಕಹೋಳರು ಧನದ ಸಲುವಾಗಿ ಜನಕನ ಬಳಿಗೆ ಶೀಘ್ರವಾಗಿ ಹೋದರು. ಅವರು ಆಗ ವೇದಜ್ಞನಾದ ಜನಕನ ವಂದಿಯಿಂದ ವಾದದಲ್ಲಿ ನಿಗ್ರಹಿಸಲ್ಪಟ್ಟು ನೀರಿನಲ್ಲಿ ಮುಳುಗಿಸಲ್ಪಟ್ಟರು.

ಉದ್ದಾಲಕಸ್ತಂ ತು ತದಾ ನಿಶಮ್ಯ
ಸೂತೇನ ವಾದೇಽಪ್ಸು ತಂ ವೈ ನಿಮಜ್ಜಿತಂ ।
ಉವಾಚ ತಾಂ ತತ್ರ ತತಃ ಸುಜಾತಾಮ್
ಅಷ್ಟಾವಕ್ರಂ ಗೂಹಿತವ್ಯೋಽಯಮರ್ಥಃ ॥೧೪॥

ಉದ್ದಾಲಕರು ಜನಕನ ಸೂತನಿಂದ ವಾದದಲ್ಲಿ ಕಹೋಳರು ಮುಳುಗಿಸಲ್ಪಟ್ಟಿದ್ದನ್ನು ಕೇಳಿ ಆ ಸುಜಾತೆಯನ್ನು ಕುರಿತು ಈ ವಿಷಯವು ಅಷ್ಟಾವಕ್ರನಿಗೆ ತಿಳಿಯದಂತೆ ಮರೆಮಾಚಬೇಕು ಎಂದು ಹೇಳಿದರು.

ರರಕ್ಷ ಮಾತಾಽಪ್ಯನಿಶಂ ಸ ಮಂತ್ರಂ
ಜಾತೋಽಪ್ಯೇವಂ ನ ಸ ಶುಶ್ರಾವ ವಿಪ್ರಃ ।
ಉದ್ದಾಲಕಂ ಪಿತರಂ ಸೋಽಭಮೇನೇ
ತಥಾಽಷ್ಟಾವಕ್ರೋ ಭ್ರಾತರಂ ಶ್ವೇತಕೇತುಮ್ ॥೧೫॥

ತಾಯಿಯು ಈ ರಹಸ್ಯವನ್ನು ಯಾವಾಗಲೂ ರಕ್ಷಿಸಿದಳು. ಅಷ್ಟಾವಕ್ರರು ಜನಿಸಿದರೂ ಅವರಿಗೆ ಈ ವಿಷಯವು ತಿಳಿಯಲಿಲ್ಲ. ಅವರು ಉದ್ದಾಲಕರನ್ನು ತಂದೆ ಎಂದೂ, ಶ್ವೇತಕೇತುವನ್ನು ಅಣ್ಣನೆಂದೂ ತಿಳಿದರು.

ತತೋ ವರ್ಷೇ ದ್ವಾದಶೇ ಶ್ವೇತಕೇತುಃ
ಅಷ್ಟಾವಕ್ರಂ ಪಿತುರಂಕೇ ನಿಷಣ್ಣಮ್ ।
ಅಪಾಕರ್ಷದ್ ಗೃಹ್ಯ ಪಾಣೌ ರುದಂತಂ
ನಾಯಂ ತವಾಂಕಃ ಪಿತುರಿತ್ಯುಕ್ತವಾಂಶ್ಚ ॥೧೬॥

ಅನಂತರ ಹನ್ನೆರಡನೆಯ ವರ್ಷದಲ್ಲಿ ಶ್ವೇತಕೇತುವು ತನ್ನ ತಂದೆಯ ತೊಡೆಯ ಮೇಲೆ ಕುಳಿತಿದ್ದ ಅಷ್ಟಾವಕ್ರನನ್ನು ಅವನು ಅಳುತ್ತಿದ್ದರೂ ಕೈಯಿಂದ ಹಿಡಿದು ಎಳೆದು ಇದು ನಿನ್ನ ತಂದೆಯ ತೊಡೆಯಲ್ಲ ಎಂದು ಹೇಳಿದನು.

ತತ್ತೇನೋಕ್ತಂ ರುದಿತಃ ಸೋಽಭಿವೀಕ್ಷ್ಯ
ಹೃದಿ ಸ್ಥಿತಂ ಶಲ್ಯಮಿವಾತಿದುಃಖಾತ್ ।
ಗತ್ವಾ ಗೃಹಂ ರೋದಮಾನೋ ಜನಿತ್ರೀಂ
ಪಪ್ರಚ್ಛೈನಾಂ ಕ್ವ ನು ತಾತೋ ಮಮೇತಿ ॥೧೭॥

ಅಳುತ್ತಿದ್ದ ಅಷ್ಟಾವಕ್ರರು ಶ್ವೇತಕೇತುವು ಹೇಳಿದ ಮಾತುಗಳನ್ನು ಗಮನಿಸಿ ಹೃದಯದಲ್ಲಿ ಶಲ್ಯವು ನಾಟಿದಷ್ಟು ದುಃಖದಿಂದ ಮನೆಗೆ ಹೋಗಿ ಅಳುತ್ತಾ ತಾಯಿಯನ್ನು ಕುರಿತು ಅವಳನ್ನು ನನ್ನ ತಂದೆ ಎಲ್ಲಿ ಎಂದು ಕೇಳಿದರು.

ತತಃ ಸುಜಾತಾ ಪರಮಾರ್ತರೂಪಾ
ಶಾಪಾದ್ ಭೀತಾ ತತ್ತ್ವಮಸ್ಯಾಚಚಕ್ಷೇ ।
ತದ್ವೈ ತತ್ತ್ವಂ ಸರ್ವಮಾಜ್ಞಾಯ ರಾತ್ರಾ-
ವಿತ್ಯಬ್ರವೀಚ್ಛ್ವೇತಕೇತುಂ ಸ ವಿಪ್ರಃ ॥೧೮॥

ಗಚ್ಛಾವ ಯಜ್ಞಂ ಜನಕಸ್ಯ ರಾಜ್ಞೋ
ಬಹ್ವಾಶ್ಚರ್ಯಂ ಶ್ರೂಯತೇ ಯಸ್ಯ ಯಜ್ಞೇ ।
ಶ್ರೋಷ್ಯಾವೋಽತ್ರ ಬ್ರಾಹ್ಮಣಾನಾಂ ವಿವಾದಮ್
ಅನ್ನಂ ಚಾಗ್ರ್ಯಂ ತತ್ರ ಭೋಕ್ಷ್ಯಾವಹೇ ಚ ॥೧೯॥

ವಿಚಕ್ಷಣತ್ವಂ ಚ ಭವಿಷ್ಯತೇ ನೌ
ಶಿವಶ್ಚ ಸೌಮ್ಯಶ್ಚ ಹಿ ಬ್ರಹ್ಮಘೋಷಃ ॥೨೦॥

ಆಗ ಸುಜಾತೆಯು ಬಹಳ ದುಃಖವನ್ನು ಹೊಂದಿದವಳಾಗಿ ಶಾಪಕ್ಕೂ ಹೆದರಿ ಅವರಿಗೆ ತತ್ತ್ವವನ್ನು ತಿಳಿಸಿದಳು. ಆ ತತ್ತ್ವವನ್ನೆಲ್ಲಾ ತಿಳಿದ ಅಷ್ಟಾವಕ್ರರು ರಾತ್ರಿಯಲ್ಲಿ ಶ್ವೇತಕೇತುವನ್ನು ಕುರಿತು ನಾವು ಜನಕರಾಜನ ಯಜ್ಞಕ್ಕೆ ಹೋಗೋಣ. ಯಜ್ಞದಲ್ಲಿ ಬಹಳ ಆಶ್ಚರ್ಯವಿದೆ ಎಂದು ಕೇಳಿಬರುತ್ತಿದೆ. ಅಲ್ಲಿ ಬ್ರಾಹ್ಮಣರ ವಿವಾದವನ್ನು

ಕೇಳೋಣ. ಶ್ರೇಷ್ಠವಾದ ಅನ್ನವನ್ನೂ ಭಕ್ಷಿಸೋಣ. ಆಲ್ಲಿನಮ್ಮಿಬ್ಬರಿಗೂ ವಿಚಕ್ಷಣರೆಂಬ ಕೀರ್ತಿಯು ಬರುತ್ತದೆ. ಮಂಗಳವೂ ಸೌಮ್ಯವೂ ಆದ ವೇದಘೋಷವನ್ನೂ ಕೇಳಬಹುದು ಎಂದು ಹೇಳಿದರು.

ಲೋಮಶಃ

ತೌ ಜಗ್ಮತುರ್ಮಾತುಲಭಾಗಿನೇಯೌ
ಯಜ್ಞಂ ಸಮೃದ್ಧಂ ಜನಕಸ್ಯ ರಾಜ್ಞಃ ।
ಅಷ್ಟಾವಕ್ರಃ ಪಥಿ ರಾಜ್ಞಾ ಸಮೇತ್ಯ
ಪ್ರೋತ್ಸಾರ್ಯಮಾಣೋ ವಾಕ್ಯಮಿದಂ ಜಗಾದ ॥೨೧॥

ಲೋಮಶರು– ಆ ಮಾತುಲ ಭಾಗಿನಿಯರು ಜನಕರಾಜನ ಸಮೃದ್ಧವಾದ ಯಜ್ಞವನ್ನು ಕುರಿತು ಹೊರಟರು. ಮಾರ್ಗದಲ್ಲಿ ಅಷ್ಟಾವಕ್ರರು ಒಬ್ಬ ರಾಜನನ್ನು ಸಂಧಿಸಿ ಅವನಿಂದ ದೂರಸರಿಸಲ್ಪಡುವವರಾಗಿ ಈ ಮಾತನ್ನು ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಪಂಚಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುರಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಅಷ್ಟಾವಕ್ರ ಮತ್ತು ದ್ವಾರಪಾಲರ ಸಂವಾದ. ಅಷ್ಟಾವಕ್ರರಿಗೆ ರಾಜಸಭೆಯನ್ನು ಪ್ರವೇಶಿಸಲು ಅನುಮತಿ.

ಅಷ್ಟಾವಕ್ರಃ

ಅಂಧಸ್ಯ ಪಂಥಾ ಬಧಿರಸ್ಯ ಪಂಥಾಃ
ಸ್ತ್ರಿಯಃ ಪಂಥಾ ಭಾರವಹಸ್ಯ ಪಂಥಾಃ ।
ರಾಜ್ಞಃ ಪಂಥಾ ಬ್ರಾಹ್ಮಣೇನಾಸಮೇತ್ಯ
ಸಮೇತ್ಯ ತು ಬ್ರಾಹ್ಮಣಸ್ಯೈವ ಪಂಥಾಃ ॥೧॥

ಅಪ್ಲಾವಕ್ರ– ಕುರುಡನದೇ ಮಾರ್ಗ, ವನಿತೆಯದೇ ಮಾರ್ಗ, ಭಾರವನ್ನು ಹೊತ್ತವನದೇ ಮಾರ್ಗ, ಬ್ರಾಹ್ಮಣನನ್ನು ಸಂಧಿಸದಿದ್ದರೆ ರಾಜನದೇ ಮಾರ್ಗ. ಆದರೆ ಬ್ರಾಹ್ಮಣನನ್ನು ಸಂಧಿಸಿದರೆ ಬ್ರಾಹ್ಮಣನದೇ ಮಾರ್ಗ.

ರಾಜಾ

ಪಂಥಾ ಅಯಂ ತೇऽದ್ಯ ಮಯಾ ವಿಸೃಷ್ಟೋ
ಯೇನೇಚ್ಛಸೇ ತೇನ ಕಾಮಂ ವ್ರಜಸ್ವ ।
ನ ಪಾವಕೋ ವಿದ್ಯತೇ ವೈ ಲಘೀಯಾನ್
ಇಂದ್ರೋऽಪಿ ನಿತ್ಯಂ ನಮತೇ ಬ್ರಾಹ್ಮಣಾನಾಮ್ ॥೨॥

ರಾಜಾ– ನಾನು ನಿನಗೆ ಮಾರ್ಗವನ್ನು ಬಿಟ್ಟದ್ದೇನೆ. ನಿನಗೆ ಇಷ್ಟವಾದ ಮಾರ್ಗದಿಂದ ಹೋಗು. ಅಗ್ನಿಯು ಅಲ್ಪವಾದುದು ಎಂಬುದಿಲ್ಲ. ಇಂದ್ರನೂ ಸಹ ನಿತ್ಯವೂ ಬ್ರಾಹ್ಮಣರಿಗೆ ನಮಸ್ಕರಿಸುತ್ತಾನೆ.

ಲೋಮಶಃ

ಸ ಏವಮುಕ್ತೋ ಮಾತುಲೇನೈನ ಸಾರ್ಧಂ
ಯಥೇಷ್ಟಮಾಗೋ೯ ಯಜ್ಞನಿವೇಶನಂ ತತ್ ।
ಸಂಪ್ರಾಪ್ಯ ಧರ್ಮೇಣ ನಿವಾರಿತಃ ಸನ್
ದ್ವಾರಿ ದ್ವಾಃಸ್ಥಂ ವಾಕ್ಯಮಿದಂ ಬಭಾಷೇ ॥೩॥

ಲೋಮಶರು– ಹೀಗೆ ಹೇಳಲ್ಪಟ್ಟ ಅಷ್ಟಾವಕ್ರರು ತಮ್ಮ ಸೋದರಮಾವನ ಜೊತೆಯಲ್ಲಿ ತಮಗೆ ಧರ್ಮದಿಂದಲೇ ಇಷ್ಟವಾದ ಮಾರ್ಗದಿಂದ ಯಜ್ಞಶಾಲೆಯನ್ನು ತಲುಪಿ ದ್ವಾರಪಾಲಕನಿಂದ ತಡೆಯಲ್ಪಟ್ಟು ಈ ಮಾತನ್ನು ಆಡಿದರು.

ಅಷ್ಟಾವಕ್ರಃ

ಯಜ್ಞಂ ದ್ರಷ್ಟುಂ ಪ್ರಾಪ್ತವಂತೌ ಸ್ಮ ತಾತ
ಕೌತೂಹಲಂ ಬಲವದ್ವೈ ವಿವೃದ್ಧಮ್ ।
ಆವಾಂ ಪ್ರಾಪ್ತಾವತಿಥೀ ಸಂಪ್ರವೇಶಂ
ಕಾಂಕ್ಷಾವಹೇ ದ್ವಾರಪತೇ ತವಾಜ್ಞಾಮ್ ॥೪॥

ಅಷ್ಟಾವಕ್ರ– ಎಲೈ ಪ್ರೀತಿಪಾತ್ರನೇ, ನಾವಿಬ್ಬರೂ ಯಜ್ಞವನ್ನು ನೋಡಲು ಬಂದಿದ್ದೇವೆ. ನಮಗೆ ಯಜ್ಞವನ್ನು ನೋಡುವ ಕುತೂಹಲವು ದೊಡ್ಡದಾಗಿ ಬೆಳೆದಿದೆ. ನಾವಿಬ್ಬರೂ ಅತಿಥಿಗಳಾಗಿ ಬಂದಿದ್ದೇವೆ. ಎಲೈ ದ್ವಾರಪಾಲಕನೇ, ಸಭೆಯನ್ನು ಪ್ರವೇಶಿಸಲು ನಿನ್ನ ಆಜ್ಞೆಯನ್ನು ಬಯಸುತ್ತಿದ್ದೇವೆ.

ಐಂದ್ರದ್ಯುಮ್ನೇರ್ಯಜ್ಞದೃಶಾವಿಹಾವಾಂ
ವಿವಕ್ಷೂ ವೈ ಜನಕೇಂದ್ರಂ ದಿದೃಕ್ಷೂ ।
ನ ವೈ ಕ್ರೋಧಾದ್ ವ್ಯಾಧಿನಾ ವೋತ್ತಮೇನ
ಸಂಯೋಜಯಾವಾಂ ದ್ವಾರಪಾಲ ಕ್ಷಣೇನ ॥೫॥

ಇಂದ್ರದ್ಯುಮ್ನನ ಮಗನಾದ ಜನಕನ ಯಜ್ಞಶಾಲೆಯನ್ನು ಪ್ರವೇಶಿಸಿ ಜನಕರಾಜನನ್ನು ನೋಡಿ ಅವನ ಜೊತೆಯಲ್ಲಿ ಮಾತನಾಡುವ ಇಚ್ಛೆಯನ್ನು ಹೊಂದಿದ್ದೇವೆ. ಎಲೈ ದ್ವಾರಪಾಲಕನೇ, ನೀನು ನಮಗೆ ಕ್ರೋಧವನ್ನಾಗಲೀ ಅಥವಾ ಮನಸ್ತಾಪವನ್ನಾಗಲೀ ಶೀಘ್ರವಾಗಿ ಉಂಟುಮಾಡಬೇಡ.

ದ್ವಾರಪಾಲಃ

ವಂದೇಃ ಸಮಾದೇಶಕರಾ ವಯಂ ಸ್ಮ
ನಿಬೋಧ ಮದ್ವಾಕ್ಯಮಥೋಽಧಿಗಮ್ಯ ।
ನ ವೈ ಬಾಲಾಃ ಪ್ರವಿಶಂತ್ಯತ್ರ ವೃದ್ಧಾ
ವಿಪ್ರಾ ಹ್ಯತ್ರ ಪ್ರವಿಶಂತಿ ದ್ವಿಜಾಗ್ರ್ಯಾಃ ॥೬॥

ದ್ವಾರಪಾಲಕ– ನಾವು ವಂದಿಯ ಆಜ್ಞಾಧಾರಕರು. ನನ್ನ ಮಾತನ್ನು ಕೇಳಿ ತಿಳಿ. ಈ ಸಭೆಯಲ್ಲಿ ಬಾಲಕರು ಪ್ರವೇಶಿಸುವುದಿಲ್ಲ. ವೃದ್ಧರಾದ ಬ್ರಾಹ್ಮಣಶ್ರೇಷ್ಠರಷ್ಟೇ ಇಲ್ಲಿ ಪ್ರವೇಶಿಸುತ್ತಾರೆ.

ಅಷ್ಟಾವಕ್ರಃ

ಯದ್ಯತ್ರ ವೃದ್ಧೇಷು ಕೃತಃ ಪ್ರವೇಶೋ
ಯುಕ್ತಂ ಮಯಾ ದ್ವಾರಪಾಲ ಪ್ರವೇಷ್ಟುಮ್ ।
ವಯಂ ಹಿ ವೃದ್ಧಾಶ್ಚರಿತವ್ರತಾಶ್ಚ
ತಪಃಪ್ರಭಾವೇನ ನಿವೇಶನಾರ್ಹಾಃ ॥೭॥

ಅಷ್ಟಾವಕ್ರ– ದ್ವಾರಪಾಲಕನೇ, ಇಲ್ಲಿ ವೃದ್ಧರಿಗೇ ಪ್ರವೇಶವಿರುವುದಾದರೆ ನಾನು ಪ್ರವೇಶಿಸಲು ಯೋಗ್ಯನಾಗಿದ್ದೇನೆ. ನಾವು ನಮ್ಮ ತಪಸ್ಸಿನ ಪ್ರಭಾವದಿಂದ ವೃದ್ಧರೂ ಮತ್ತು ವ್ರತನಿಷ್ಠರೂ ಆಗಿದ್ದೇವೆ. ಆದ್ದರಿಂದ ಪ್ರವೇಶಕ್ಕೆ ಅರ್ಹರಾಗಿದ್ದೇವೆ.

ಶುಶ್ರೂಷವಶ್ಚಾತಿಜಿತೇಂದಿಯಾಶ್ಚ
ಜ್ಞಾನಾಗಮೇ ಚೈವ ಪರಂ ನಿವಿಷ್ಟಾಃ ।
ನ ಬಾಲ ಇತ್ಯವಮಂತವ್ಯಮಾಹುಃ
ಬಾಲೋಽಪ್ಯಗ್ನಿರ್ದಹತೇ ಸ್ಪೃಶ್ಯಮಾನಃ ॥೮॥

ನಾವು ಶಾಸ್ತ್ರಶ್ರವಣವನ್ನು ಮಾಡಿದವರು ಮತ್ತು ಜಿತೇಂದ್ರಿಯರಾದವರು ಮತ್ತು ಜ್ಞಾನಸಂಪಾದನೆಯಲ್ಲಿಯೇ ಬಹಳ ಪ್ರಯತ್ನವುಳ್ಳವರು. ಬಾಲಕರು ಎಂದು ಯಾರನ್ನೂ ತಿರಸ್ಕರಿಸಬಾರದು. ಅಗ್ನಿಯು ಸಣ್ಣದಾಗಿದ್ದರೂ ಮುಟ್ಟಿದರೆ ಸುಡುತ್ತದೆ.

ದ್ವಾರಪಾಲಃ

ಸರಸ್ವತೀಮೀರಯ ವೇದಜುಷ್ಟಾಮ್
ಏಕಾಕ್ಷರಾಂ ಬ್ರಹ್ಮರೂಪಾಂ ವಿರಾಜಾಮ್ ।
ಆಂಗಾತ್ಮಾನಂ ಸಮವೇಕ್ಷ್ವ ಬಾಲಂ
ಕಿಂ ಶ್ಲಾಘಸೇ ದುರ್ಲಭಾ ವಾದಸಿದ್ಧಿಃ ॥೯॥

ದ್ವಾರಪಾಲಕ– ವೇದಗಳಲ್ಲಿರುವ ಬ್ರಹ್ಮಪ್ರತಿಪಾತ್ರವಾದ ಚೆನ್ನಾಗಿ ಪ್ರಕಾಶಿಸುವ ಏಕಾಕ್ಷರವಾದ ಓಂಕಾರವನ್ನು ಉಚ್ಚಾರಮಾಡು. ಪ್ರೀತಿಪಾತ್ರನೇ, ನೀನು ಬಾಲಕನೆಂದು ಗಮನಿಸು. ಏತಕ್ಕೆ ನಿನ್ನನ್ನು ಹೊಗಳಿಕೊಳ್ಳುತ್ತಿದ್ದೀಯೆ? ವಾದಸಿದ್ಧಿಯು ದುರ್ಲಭವಾದುದು.

ಅಷ್ಟಾವಕ್ರಃ

ನ ಜ್ಞಾಯತೇ ಕಾಯವೃದ್ಧ್ಯಾ ವಿವೃದ್ಧಿಃ
ಯಥಾಽಽಮಲಾ ಶಾಲ್ಮಲೀ ಸಂಪ್ರವೃದ್ಧಾ ।
ಹ್ರಸ್ವೋಽಲ್ಪಕಾಃ ಫಲತೇ ಸ್ಮ ವೃದ್ಧೋ
ಯಶ್ಚಾಫಲಸ್ತಸ್ಯ ನೋ ವೃದ್ಧಭಾವಃ ॥೧೦॥

ಅಷ್ಟಾವಕ್ರ– ದೇಹದ ವೃದ್ಧಿಯಿಂದ ಮನುಷ್ಯನ ವೃದ್ಧಿಯು ತಿಳಿಯುವುದಿಲ್ಲ. ಮುಳ್ಳುಗಳಿರುವ ಶಾಲ್ಮಲೀ ವೃಕ್ಷವು ದೊಡ್ಡದಾಗಿಯೇ ಇರುತ್ತದೆ (ಆದರೆ ಫಲವನ್ನು ಕೊಡುವುದಿಲ್ಲ). ಇನ್ನೊಂದು ವೃಕ್ಷವು ಚಿಕ್ಕದಾಗಿದ್ದರೂ ಫಲವನ್ನು ಕೊಡುತ್ತದೆ. ಫಲವನ್ನು ಕೊಡದಿದ್ದ ವೃದ್ಧನಿಗೆ ವೃದ್ಧತ್ವವು ಇರುವುದಿಲ್ಲ.

ದ್ವಾರಪಾಲಃ

ವೃದ್ಧೇಭ್ಯ ಏವೇಹ ಮತಿಂ ಸ್ಮ ಬಾಲಾ
ಗೃಹ್ಣಂತಿ ಕಾಲೇನ ಭವಂತಿ ವೃದ್ಧಾಃ ।
ನ ಹಿ ತೇ ಜ್ಞಾತುಮಲ್ಪಕಾಲೇನ ಶಕ್ಯಂ
ಕಸ್ಮಾದ್ ಬಾಲ ಪ್ರಾಜ್ಞ ಇವಾವಭಾಷಸೇ ॥೧೧॥

ದ್ವಾರಪಾಲಕ– ಬಾಲಕರು ವೃದ್ಧರಿಂದಲೇ ಜ್ಞಾನವನ್ನು ಪಡೆದು ಕಾಲಕ್ರಮದಲ್ಲಿ ತಾವೂ ವೃದ್ಧರಾಗುತ್ತಾರೆ. ಅಲ್ಪಕಾಲದಲ್ಲಿ ಅಷ್ಟು ಜ್ಞಾನವನ್ನು ಸಂಪಾದಿಸುವುದು ಸಾಧ್ಯವಿಲ್ಲ. ಎಲೈ ಬಾಲಕನೇ, ಏಕೆ ಪ್ರಾಜ್ಞನಂತೆ ಮಾತನಾಡುತ್ತಿದ್ದೀಯೆ?

ಅಷ್ಟಾವಕ್ರಃ

ನ ತೇನ ಸ್ಥವಿರೋ ಭವತಿ ಯೇನಾಸ್ಯ ಪಲಿತಂ ಶಿರಃ ।
ಬಾಲೋಽಪಿ ಯಃ ಪ್ರಜಾನಾತಿ ತಂ ದೇವಾಃ ಸ್ಥವಿರಂ ವಿದುಃ ॥೧೨॥

ಅಷ್ಟಾವಕ್ರ– ತಲೆಯು ನೆರೆಯುವುದರಿಂದ ವೃದ್ಧರಾಗುವುದಿಲ್ಲ. ಬಾಲಕನಾದರೂ ಯಾವನಿಗೆ ಜ್ಞಾನವಿದೆಯೋ ಅವನನ್ನು ದೇವತೆಗಳು ವೃದ್ಧನೆಂದು ತಿಳಿಯುತ್ತಾರೆ.

ನ ಹಾಯನೈರ್ನ ಪಲಿತೈರ್ನ ವಿತ್ತೇನ ಚ ಬಂಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥

ಋಷಿಗಳು ಸನಾತನವಾದ ಮಹಾಧರ್ಮವನ್ನು ಸಂವತ್ಸರಗಳಿಂದಾಗಲೀ ಅಥವಾ ದೇಹದ ನೆರೆಯಿಂದಾಗಲೀ, ಧನದಿಂದಾಗಲೀ ಅಥವಾ ಬಂಧುಗಳಿಂದಾಗಲೀ ಅನುಷ್ಠಾನ ಮಾಡಲಿಲ್ಲ.

ದಿದೃಕ್ಷುರಸ್ಮಿ ಸಂಪ್ರಾಪ್ತೋ ವಂದಿನಂ ರಾಜಸಂಸದಿ ।
ನಿವೇದಯಸ್ವ ಮಾಂ ರಾಜ್ಞೇ ದ್ವಾಸ್ಥ ಪುಷ್ಕರಮಾಲಿನೇ ॥೧೪॥

ನಾನು ರಾಜಸಭೆಯಲ್ಲಿ ವಂದಿಯನ್ನು ನೋಡಲು ಬಂದಿದ್ದೇನೆ. ಎಲೈ ದ್ವಾರಪಾಲಕನೇ, ಪುಷ್ಕರಮಾಲೆಯನ್ನು ಧರಿಸಿದ ರಾಜನಿಗೆ ನಾನು ಬಂದಿದ್ದೇನೆ ಎಂದು ನಿವೇದಿಸು.

ಶ್ವೇತಕೇತುಃ

ದ್ರಷ್ಟಾಸಿ ತೇ ದ್ವಾರಪಾಲ ಪ್ರವೇಶ್ಯ
ಮನೀಷಿಭಿಃ ಸಹ ವಾದೇ ಪ್ರವೃದ್ಧೇ ।
ಉತಾಹೋ ವಾऽಪ್ಯುಚ್ಚತಾಂ ನೀಚತಾಂ ವಾ
ತೂಷ್ಣೀಂಭೂತೇಷ್ವೇಷು ಸರ್ವೇಷ್ವಥಾದ್ಯ ॥೧೫॥

ಶ್ವೇತಕೇತು– ಎಲೈ ದ್ವಾರಪಾಲಕನೇ, ನಮಗೆ ಪ್ರವೇಶವನ್ನು ನೀಡಿ ಮೇಧಾವಿಗಳ ಜೊತೆಯಲ್ಲಿ ವಾದವು ಬೆಳೆದು ಎಲ್ಲರೂ ಮೌನವಾಗಿ ಕುಳಿತಾಗ ನಾವು ಉಚ್ಚರೋ ಅಥವಾ ನೀಚರೋ ಎಂದು ನೀನೇ ನೋಡುವಿ.

ದ್ವಾರಪಾಲಃ

ಕಥಂ ಯಜ್ಞಂ ದಶವರ್ಷೋ ವಿಶೇಸ್ತ್ವಂ
ವಿನೀತಾನಾಂ ವಿದುಷಾಂ ಸಂಪ್ರವೇಶಮ್ ।
ಉಪಾಯತಃ ಪ್ರಯತಿಷ್ಯೇ ತವಾಹಂ
ಪ್ರವೇಶನೇ ಕುರು ಯತ್ನಂ ಯಥಾವತ್ ॥೧೬॥

ದ್ವಾರಪಾಲಕ– ಅನೇಕ ಶಾಸ್ತ್ರಗಳನ್ನು ಬಲ್ಲ ವಿದ್ವಾಂಸರು ಪ್ರವೇಶಮಾಡುವ ಯಜ್ಞಶಾಲೆಯನ್ನು ಹತ್ತುವರ್ಷದ ಬಾಲಕನಾದ ನೀನು ಹೇಗೆ ಪ್ರವೇಶಮಾಡುತ್ತೀಯೆ? ನಾನು ಉಪಾಯದಿಂದ ನಿನ್ನ ಪ್ರವೇಶದಲ್ಲಿ ಪ್ರಯತ್ನವನ್ನು ಮಾಡುವೆನು. ನೀನು ನಿನ್ನ ಪ್ರಯತ್ನವನ್ನು ಮಾಡು.

ಏಷ ರಾಜಾ ಸಂಶ್ರವಣೇ ಸ್ಥಿತಃ ಸ್ಯಾತ್
ಶ್ರೋಷ್ಯತ್ಯೇವಂ ವಚಸಾ ಸಂಸ್ಕೃತೇನ ।
ಸ ಚಾನುಜ್ಞಾಂ ದಾಸ್ಯತಿ ಪ್ರೀತಿಯುಕ್ತಃ
ಪ್ರವೇಶನೇ ಯಚ್ಚ ಕಿಂಚತ್ತವೇಷ್ಟಮ್ ॥೧೭॥

ಈಗ ರಾಜನು ಪ್ರಜೆಗಳ ಅಥವಾ ಅತಿಥಿಗಳ ಮಾತನ್ನು ಕೇಳುವ ಸಮಯದಲ್ಲಿದ್ದಾನೆ. ಆದ್ದರಿಂದ ನಿನ್ನ ಸಂಸ್ಕೃತವಾದ ಮಾತನ್ನು ಅವನು ಕೇಳುವನು. ಅವನು ಸಂತೋಷಗೊಂಡು ನಿನಗೆ ಸಭೆಯನ್ನು ಪ್ರವೇಶಿಸುವುದಕ್ಕೆ ಅನುಮತಿಯನ್ನೂ ಮತ್ತು ನಿನಗೆ ಇಷ್ಟವಾದುದನ್ನೂ ಕೊಡುವನು.

ಅಷ್ಟಾವಕ್ರಃ

ಭೋ ಭೋ ರಾಜನ್ ಜನಕಾನಾಂ ವರಿಷ್ಠ
ತ್ವಂ ವೈ ಸಮ್ರಾಟ್ ತ್ವಯಿ ಸರ್ವಂ ಸಮೃದ್ಧಮ್ ।
ತ್ವಂ ಹಿ ಕರ್ತಾ ಕರ್ಮಣಾಂ ಯಾಜ್ಞಿಯಾನಾಂ
ಯಯಾತಿರೇಕೋ ನೃಪತಿರ್ವಾ ಪುರಸ್ತಾತ್ ॥೧೮॥

ಅಷ್ಟಾವಕ್ರ– ಎಲೈ ಜನಕರಲ್ಲಿ ಶ್ರೇಷ್ಠನಾದ ರಾಜನೇ, ನೀನು ಸಮ್ರಾಜನಾದವನು. ನಿನ್ನಲ್ಲಿ ಎಲ್ಲವೂ ಸಮೃದ್ಧವಾಗಿದೆ. ಹಿಂದೆ ಯಯಾತಿರಾಜನು ಮಾಡಿದಂತೆ ಯಜ್ಞ ಕರ್ಮಗಳನ್ನು ಮಾಡುವುದರಲ್ಲಿ ನೀನೇ ಸಮರ್ಥನಾದವನು.

ವಿದ್ವಾನ್ ವಂದೀ ವಾದವಿದೋ ನಿಗೃಹ್ಯ
ವಾದೇ ಭಗ್ನಾನಪ್ರತಿಶಂಕಮಾನಃ ।
ತ್ವದ್ಯಾ ನಿಸೃಷ್ಟೈಃ ಪುರುಷೈರಾಪ್ತಕೃದ್ಭಿಃ
ಜಲೇ ಸರ್ವಾನ್ ಮಜ್ಜಯತೀತಿ ನಃಶ್ರುತಮ್ ॥೧೯॥

ವಿದ್ವಾಂಸನಾದ ನಿನ್ನ ವಂದಿಯು ವಾದಕ್ಕೆ ಬಂದವರನ್ನು ವಾದದಲ್ಲಿ ನಿಗ್ರಹಿಸಿ ಅವರನ್ನು ಸೋಲಿಸಿ ಯಾವ ಶಂಕೆಯೂ ಇಲ್ಲದೆ ನಿನ್ನ ಆಜ್ಞಾಧಾರಕರಾದ ಆಪ್ತಕಾರಿಗಳಾದ ನಿನ್ನ ಪುರುಷರಿಂದ ಅವರೆಲ್ಲರನ್ನೂ ನೀರಿನಲ್ಲಿ ಮುಳುಗಿಸುತ್ತಾನೆ ಎಂದು ನಾನು ಕೇಳಿದ್ದೇನೆ.

ಸ ತಚ್ಛ್ರುತ್ವಾ ಬ್ರಾಹ್ಮಣಾನಾಂ ಸಮೀಪಾದ್
ಬ್ರಹ್ಮೋದ್ಯಂ ವೈ ಕಥಯಿತುಮಾಗತೋಽಸ್ಮಿ ।
ಕ್ವಾಸೌ ವಂದೀ ಯಾವದೇನಂ ಸಮೇತ್ಯ
ನಕ್ಷತ್ರಾಣೀವ ಸವಿತಾ ನಾಶಯಾಮಿ ॥೨೦॥

ನಾನು ರಾಜಸಭೆಯಲ್ಲಿ ವಂದಿಯನ್ನು ನೋಡಲು ಬಂದಿದ್ದೇನೆ. ಎಲೈ ದ್ವಾರಪಾಲಕನೇ, ಪುಷ್ಕರಮಾಲೆಯನ್ನು ಧರಿಸಿದ ರಾಜನಿಗೆ ನಾನು ಬಂದಿದ್ದೇನೆ ಎಂದು ನಿವೇದಿಸು.

ಶ್ವೇತಕೇತುಃ

ದ್ರಷ್ಟಾಸಿ ತೇ ದ್ವಾರಪಾಲ ಪ್ರವೇಶ್ಯ
ಮನೀಷಿಭಿಃ ಸಹ ವಾದೇ ಪ್ರವೃದ್ಧೇ ।
ಉತಾಹೋ ವಾऽಪ್ಯುಚ್ಚತಾಂ ನೀಚತಾಂ ವಾ
ತೂಷ್ಣೀಂಭೂತೇಷ್ವೇಷು ಸರ್ವೇಷ್ವಥಾದ್ಯ ॥೧೫॥

ಶ್ವೇತಕೇತು– ಎಲೈ ದ್ವಾರಪಾಲಕನೇ, ನಮಗೆ ಪ್ರವೇಶವನ್ನು ನೀಡಿ ಮೇಧಾವಿಗಳ ಜೊತೆಯಲ್ಲಿ ವಾದವು ಬೆಳೆದು ಎಲ್ಲರೂ ಮೌನವಾಗಿ ಕುಳಿತಾಗ ನಾವು ಉಚ್ಚರೋ ಅಥವಾ ನೀಚರೋ ಎಂದು ನೀನೇ ನೋಡುವಿ.

ದ್ವಾರಪಾಲಃ

ಕಥಂ ಯಜ್ಞಂ ದಶವರ್ಷೋ ವಿವೇಸ್ತ್ವಂ
ವಿನೀತಾನಾಂ ವಿದುಷಾಂ ಸಂಪ್ರವೇಶಮ್ ।
ಉಪಾಯತಃ ಪ್ರಯತಿಷ್ಯೇ ತವಾಹಂ
ಪ್ರವೇಶನೇ ಕುರು ಯತ್ನಂ ಯಥಾವತ್ ॥೧೬॥

ದ್ವಾರಪಾಲಕ– ಅನೇಕ ಶಾಸ್ತ್ರಗಳನ್ನು ಬಲ್ಲ ವಿದ್ವಾಂಸರು ಪ್ರವೇಶಮಾಡುವ ಯಜ್ಞಶಾಲೆಯನ್ನು ಹತ್ತುವರ್ಷದ ಬಾಲಕನಾದ ನೀನು ಹೇಗೆ ಪ್ರವೇಶಮಾಡುತ್ತೀಯೆ? ನಾನು ಉಪಾಯದಿಂದ ನಿನ್ನ ಪ್ರವೇಶದಲ್ಲಿ ಪ್ರಯತ್ನವನ್ನು ಮಾಡುವೆನು. ನೀನು ನಿನ್ನ ಪ್ರಯತ್ನವನ್ನು ಮಾಡು.

ವಿಷ ರಾಜಾ ಸಂಶ್ರವಣೇ ಸ್ಥಿತಃ ಸ್ಯಾತ್
ಶ್ರೋಷ್ಯತ್ಯೇವಂ ವಚಸಾ ಸಂಸ್ಕೃತೇನ ।
ಸ ಚಾನುಜ್ಞಾಂ ದಾಸ್ಯತಿ ಪ್ರೀತಿಯುಕ್ತಃ
ಪ್ರವೇಶನೇ ಯಚ್ಚ ಕಿಂಚಿತ್ತವೇಷ್ಟಮ್ ॥೧೭॥

ಈಗ ರಾಜನು ಪ್ರಜೆಗಳ ಅಥವಾ ಅತಿಥಿಗಳ ಮಾತನ್ನು ಕೇಳುವ ಸಮಯದಲ್ಲಿದ್ದಾನೆ. ಆದ್ದರಿಂದ ನಿನ್ನ ಸಂಸ್ಕೃತವಾದ ಮಾತನ್ನು ಅವನು ಕೇಳುವನು. ಅವನು ಸಂತೋಷಗೊಂಡು ನಿನಗೆ ಸಭೆಯನ್ನು ಪ್ರವೇಶಿಸುವುದಕ್ಕೆ ಅನುಮತಿಯನ್ನೂ ಮತ್ತು ನಿನಗೆ ಇಷ್ಟವಾದುದನ್ನೂ ಕೊಡುವನು.

ಅಷ್ಟಾವಕ್ರಃ

ಭೋ ಭೋ ರಾಜನ್ ಜನಕಾನಾಂ ವರಿಷ್ಠ
ತ್ವಂ ವೈ ಸಮ್ರಾಟ್ ತ್ವಯಿ ಸರ್ವಂ ಸಮೃದ್ಧಮ್ ।
ತ್ವಂ ಹಿ ಕರ್ತಾ ಕರ್ಮಣಾಂ ಯಾಜ್ಞಿಯಾನಾಂ
ಯಯಾತಿರೇಕೋ ನೃಪತಿರ್ವಾ ಪುರಸ್ತಾತ್ ॥೧೮॥

ಅಷ್ಟಾವಕ್ರ– ಎಲೈ ಜನಕರಲ್ಲಿ ಶ್ರೇಷ್ಠನಾದ ರಾಜನೇ, ನೀನು ಸಮ್ರಾಜನಾದವನು. ನಿನ್ನಲ್ಲಿ ಎಲ್ಲವೂ ಸಮೃದ್ಧವಾಗಿದೆ. ಹಿಂದೆ ಯಯಾತಿರಾಜನು ಮಾಡಿದಂತೆ ಯಜ್ಞ ಕರ್ಮಗಳನ್ನು ಮಾಡುವುದರಲ್ಲಿ ನೀನೇ ಸಮರ್ಥನಾದವನು.

ವಿದ್ವಾನ್ ವಂದೀ ವಾದವಿದೋ ನಿಗೃಹ್ಯ
ವಾದೇ ಭಗ್ನಾನಪ್ರತಿಶಂಕಮಾನಃ ।
ತ್ವದ್ಯಾ ನಿಸೃಷ್ಟೈಃ ಪುರುಷೈರಾಪ್ತಕೃದ್ಭಿಃ
ಜಲೇ ಸರ್ವಾನ್ ಮಜ್ಜಯತೀತಿ ನಃಶ್ರುತಮ್ ॥೧೯॥

ವಿದ್ವಾಂಸನಾದ ನಿನ್ನ ವಂದಿಯು ವಾದಕ್ಕೆ ಬಂದವರನ್ನು ವಾದದಲ್ಲಿ ನಿಗ್ರಹಿಸಿ ಅವರನ್ನು ಸೋಲಿಸಿ ಯಾವ ಶಂಕೆಯೂ ಇಲ್ಲದೆ ನಿನ್ನ ಆಜ್ಞಾಧಾರಕರಾದ ಆಪ್ತಕಾರಿಗಳಾದ ನಿನ್ನ ಪುರುಷರಿಂದ ಅವರೆಲ್ಲರನ್ನೂ ನೀರಿನಲ್ಲಿ ಮುಳುಗಿಸುತ್ತಾನೆ ಎಂದು ನಾನು ಕೇಳಿದ್ದೇನೆ.

ಸ ತಚ್ಛ್ರುತ್ವಾ ಬ್ರಾಹ್ಮಣಾನಾಂ ಸಮೀಪಾದ್
ಬ್ರಹ್ಮೋದ್ಯಂ ವೈ ಕಥಯಿತುಮಾಗತೋಽಸ್ಮಿ ।
ಕ್ವಾಸೌ ವಂದೀ ಯಾವದೇನಂ ಸಮೇತ್ಯ
ನಕ್ಷತ್ರಾಣೀವ ಸವಿತಾ ನಾಶಯಾಮಿ ॥೨೦॥

ಬ್ರಾಹ್ಮಣರ ಮುಖದಿಂದ ಅದನ್ನು ಕೇಳಿದ ನಾನು ಬ್ರಹ್ಮೋದ್ಯವನ್ನು ಹೇಳಲು (ಅವನ ಜೊತೆಯಲ್ಲಿ ವಾಕ್ಯಾರ್ಥವನ್ನು ಮಾಡಲು) ಬಂದಿದ್ದೇನೆ. ಆ ವಂದಿಯು ಎಲ್ಲಿದ್ದಾನೆ? ನಾನು ಅವನನ್ನು ಸೇರಿ ಸೂರ್ಯನು ನಕ್ಷತ್ರಗಳನ್ನು ನಾಶಮಾಡಿದಂತೆ ಅವನನ್ನು ನಾಶಮಾಡುತ್ತೇನೆ.

ಜನಕಃ

ಆಶಂಸಸೇ ವಂದಿನಂ ತ್ವಂ ವಿಜೇತುಂ
ನ ಚ ಜ್ಞಾತ್ವಾ ವಾಕ್ಯಬಲಂ ತ್ವಮಸ್ಯ ।
ವಿಜ್ಞಾತವೀರ್ಯೈಃ ಶಕ್ಯಮೇವಂ ಪ್ರವಕ್ತುಂ
ದೃಷ್ಟಶ್ಚಾಸೌ ಬ್ರಾಹ್ಮಣೈರ್ವಾದಶೀಲೈಃ ॥೨೧॥

ಜನಕ– ವಂದಿಯ ವಾಕ್ಯಗಳ ಬಲವನ್ನು ತಿಳಿಯದೆ ನೀನು ಅವನನ್ನು ಜಯಿಸಲು ಬಯಸುತ್ತಿದ್ದೀಯೆ. ಇನ್ನೊಬ್ಬರ ಬಲವನ್ನು ತಿಳಿದವರು ಹೀಗೆ ಮಾತನಾಡುವುದು ಯುಕ್ತವಾಗುತ್ತದೆ. ವಾದಶೀಲರಾದ ಬ್ರಾಹ್ಮಣರು ವಂದಿಯ ಬಲವನ್ನು ತಿಳಿದಿದ್ದಾರೆ.

ಆಶಂಸಮಾನಾ ವಂದಿನಂ ವೈ ಕುಮಾರಾ
ಅವಿಜ್ಞಾನಾತ್ತೇ ಹ್ಯಶಕ್ತಾ ವಿಜೇತುಮ್ ।
ಸಮಾಗತಾ ಬ್ರಾಹ್ಮಣಾಸ್ತೇನ ಪೂರ್ವಂ
ನ ಶೋಭಂತೇ ಭಾಸ್ಕರೇಣೇವ ತಾರಾಃ ॥೨೨॥

ವಂದಿಯನ್ನು ಜಯಿಸಲು ಬಯಸುವ ಬಾಲಕರು ಅಪ್ರಜ್ಞಾನವಿಲ್ಲದವರಾದ್ದರಿಂದ ಅವರಿಂದ ಅವನನ್ನು ಜಯಿಸಲು ಸಾಧ್ಯವಿಲ್ಲ. ಮೊದಲು ಇಲ್ಲಿಗೆ ಬಂದ ಬ್ರಾಹ್ಮಣರು ಸೂರ್ಯನ ಎದುರಿಗೆ ನಕ್ಷತ್ರಗಳು ಮಂಕಾಗುವಂತೆ ಎಲ್ಲರೂ ಅವನ ಎದುರಿಗೆ ಮಂಕಾಗಿದ್ದಾರೆ.

ಆಶಾನುಬಂಧೋ ಹಿ ತವಾತ್ರ ಯತ್ತಮ್
ಸ ವಂದಿಮಾಸಾದ್ಯ ತಥಾ ವಿನಶ್ಯತಿ ।
ವಿಜ್ಞಾನವಂತೋ ನಿಕೃತಾಸ್ತು ತಾತ
ಕಥಂ ಸದಸ್ತರ್ತುಮಿದಂ ಸಮರ್ಥಾಃ ॥೨೩॥

ನಿನಗೆ ವಂದಿಯ ಜೊತೆಯಲ್ಲಿ ಚರ್ಚೆಯನ್ನು ಮಾಡಬೇಕೆಂಬ ಯಾವ ದೊಡ್ಡ ಆಸೆ ಇದೆಯೋ ಅದು ವಂದಿಯನ್ನು ಸಂಧಿಸಿ ವಿನಾಶವನ್ನು ಹೊಂದುವುದು. ಪ್ರೀತಿಪಾತ್ರನೇ, ಬಹಳ ಜ್ಞಾನವುಳ್ಳವರು ಅವನಿಗೆ ಸೋತುಹೋಗಿದ್ದಾರೆ. ನೀನು ಈ ಸಭೆಯನ್ನು ದಾಟಲು ಹೇಗೆ ಸಮರ್ಥನಾಗುತ್ತೀಯೆ?

ಅಷ್ಟಾವಕ್ರಃ

ವಿವಾದಿತೋಽಸೌ ನ ತು ಮಾದೃಶೈರ್ಹಿ
ಸಿಂಹೀಕೃತಸ್ತೇನ ವದತ್ಯಭೀತಃ ।
ಸಮೇತ್ಯ ಮಾಂ ನಿಹತಃ ಶೇಷ್ಯತೇಽದ್ಯ
ಮಾರ್ಗೇ ಭಗ್ನಂ ಶಕಟಮಿವಾಬಲಾಕ್ಷಮ್ ॥೨೪॥

ಅಷ್ಟಾವಕ್ರ– ಅವನು ನನ್ನಂತಹವರ ಜೊತೆಯಲ್ಲಿ ವಿವಾದವನ್ನು ಮಾಡಿಲ್ಲ. ಆದ್ದರಿಂದ ತನ್ನನ್ನು ಸಿಂಹದಂತೆ ಎಂದು ತಿಳಿದುಕೊಂಡು ಅವನು ನಿರ್ಭಯವಾಗಿ ಮಾತನಾಡುತ್ತಿದ್ದಾನೆ. ಈ ದಿನ ಅವನು ನನ್ನ ಜೊತೆಯಲ್ಲಿವಾದ ಮಾಡಿ ಮಾರ್ಗದಲ್ಲಿ ದುರ್ಬಲವಾದ ತೂಬನ್ನು ಮುರಿದುಕೊಂಡು ಬಿದ್ದ ಗಾಡಿಯಂತೆ ಸೋತು ಮಲಗುತ್ತಾನೆ.

ರಾಜಾ

ಷಣ್ಣಾಭೇರ್ದ್ವಾದಶಾಕ್ಷಸ್ಯ ಚತುರ್ವಿಂಶತಿಪರ್ವಣಃ ।
ಕಸ್ತ್ರಿಷಷ್ಟಿಶತಾರಸ್ಯ ವೇದಾರ್ಥಂ ಸ ಪರಃ ಕವಿಃ ॥೨೫॥

ರಾಜಾ– ಆರು ನಾಭಿಗಳುಳ್ಳ, ಹನ್ನೆರಡು ಅಕ್ಷಗಳುಳ್ಳ, ಇಪ್ಪತ್ತನಾಲ್ಕು ಪರ್ವಗಳುಳ್ಳ, ಮುನ್ನೂರ ಅರವತ್ತು ಅರಗಳುಳ್ಳ ವಸ್ತುವನ್ನು ಯಾವನು ತಿಳಿಯುತ್ತಾನೆಯೋ ಅವನು ಶ್ರೇಷ್ಠವಾದ ಜ್ಞಾನಿ (ಒಂದು ಸಂವತ್ಸರಕ್ಕೆ ಆರು ಋತುಗಳು ನಾಭಿಗಳು, ಹನ್ನೆರಡು ಮಾಸಗಳು ಅಕ್ಷಗಳು, ಹನ್ನೆರಡು ಪೂರ್ಣಿಮೆ ಮತ್ತು ಅಮಾವಾಸ್ಯೆಗಳು ಪರ್ವಗಳು, ಮುನ್ನೂರ ಅರವತ್ತು ದಿನಗಳು).

ಅಷ್ಟಾವಕ್ರಃ

ಚತುರ್ವಿಂಶತಿಪರ್ವ ತ್ವಾಂ ಷಣ್ಣಾಭಿ ದ್ವಾದಶಪ್ರಧಿ ।
ತತ್ರ್ರಿಷಷ್ಟಿಶತಾರಂ ವೈ ಚಕ್ರಂ ಪಾತು ಸದಾಗತಿ ॥೨೬॥

ಅಷ್ಟಾವಕ್ರ– ಎಲೈ ರಾಜನೇ, ಇಪ್ಪತ್ತನಾಲ್ಕು ಪರ್ವಗಳುಳ್ಳ, ಆರು ನಾಭಿಗಳುಳ್ಳ, ಹನ್ನೆರಡು ಅಲಗುಗಳುಳ್ಳ, ಮುನ್ನೂರರವತ್ತು ಅರಗಳನ್ನುಳ್ಳ ಸದಾ ತಿರುಗುವ ಚಕ್ರವು ನಿನ್ನನ್ನು ರಕ್ಷಿಸಲಿ.

ರಾಜಾ

ಬಡಬೇ ಇವ ಸಂಪೃಕ್ತೇ ಶ್ಯೇನ್ಯೇ ಪಾತೇ ದಿವೌಕಸಾಮ್ ।
ಕಸ್ತಯೋರ್ಗರ್ಭಮಾಧತ್ತೇ ಗರ್ಭಂ ಸುಷುವತುಶ್ಚ ಕಮ್ ॥೨೭॥

ರಾಜಾ– ಉತ್ತರಾಯಣ ಮತ್ತು ದಕ್ಷಿಣಾಯನದ ಎರಡು ದೇವತೆಗಳ ಸಂಧಿಗಳಲ್ಲಿ ಸಂಯುಕ್ತವಾಗಿರುವ ಎರಡು ಹೆಣ್ಣು ಕುದುರೆಗಳಲ್ಲಿ ಯಾರು ಗರ್ಭವನ್ನು ಆಧಾನ ಮಾಡುತ್ತಾರೆ? ಅವು ಏನನ್ನು ಪ್ರಸವಿಸುತ್ತವೆ?

ಅಷ್ಟಾವಕ್ರಃ

ಮಾ ಸ್ಮ ಭೂಃ ಸ್ವಗೃಹೇ ರಾಜನ್ ಶಾತ್ರವಾಣಾಮಪಿ ಧ್ರುವಮ್ ।
ವಾತಸಾರಥಿರಾಧತ್ತೇ ಗರ್ಭಂ ಸುಷುವತುಶ್ಚ ಕಮ್ ॥೨೮॥

ಅಷ್ಟಾವಕ್ರ– ಎಲೈ ರಾಜನೇ, ನೀನು ಮನೆಯಲ್ಲಿ ಇರುವವನೇ ಆಗಬೇಡ. ಶತ್ರುವನ್ನು ಸಂಹರಿಸಿ ಶಾಶ್ವತವಾದ ಕೀರ್ತಿಯನ್ನು ಪಡೆ. ವಾತಸಾರಥಿಯಾದ ನಿದಾಘ ಕಾಲದ ಅಗ್ನಿಯು ಗರ್ಭಾಧಾನವನ್ನು ಮಾಡುತ್ತದೆ. ಎರಡು ಕುದುರೆಗಳೂ ಸೇರಿ ಮಳೆಯ ರೂಪವಾದ ನೀರನ್ನು ಪ್ರಸವಿಸುತ್ತವೆ. (ಲಕ್ಷಾಲಂಕಾರ)

ರಾಜಾ

ಕಿಂ ಸ್ವಿತ್ ಸುಪ್ತೋ ನ ನಿಮಿಷೇತ್ ಕಿಂ ಸ್ವಿಜ್ಜಾತಂ ತ ಚೋತ್ಪತಿ ।
ಕಸ್ಯ ಸ್ವಿದ್ ಹೃದಯಂ ನಾಸ್ತಿ ಕಿಂ ಸ್ವಿದ್ ವೇಗೇನ ವರ್ಧತೇ ॥೨೯॥

ರಾಜಾ– ಯಾವ ಪ್ರಾಣಿಯು ನಿದ್ರಿಸುವಾಗ ಕಣ್ಣುಮುಚ್ಚುವುದಿಲ್ಲ? ಯಾವುದು ಹುಟ್ಟಿದಾಗ ಮೇಲೆ ಹೋಗುವುದಿಲ್ಲ? ಯಾವುದಕ್ಕೆ ಹೃದಯವಿಲ್ಲ? ಯಾವುದು ವೇಗದಿಂದ ಹೆಚ್ಚುತ್ತದೆ?

ಅಷ್ಟಾವಕ್ರಃ

ಮತ್ಸ್ಯಃ ಸುಪ್ತೋ ನ ನಿಮಿಷತ್ಯಂಡಂ ಜಾತಂ ನ ಚೋತ್ಪತಿ ।
ಅಶ್ಮನೋ ಹೃದಯಂ ನಾಸ್ತಿ ನದೀ ವೇಗೇನ ವರ್ಧತೇ ॥೩೦॥

ಅಷ್ಟಾವಕ್ರ– ನಿದ್ರಿಸುವ ಮತ್ಸ್ಯವು ಕಣ್ಣುಮುಚ್ಚುವುದಿಲ್ಲ. ಪಕ್ಷಕುಲೀನವಾದ ಮೊಟ್ಟೆಗಳು ಜನಿಸಿದಾಗ ಮೇಲೆ ಹೋಗುವುದಿಲ್ಲ. ಕಲ್ಲಿಗೆ ಹೃದಯವಿಲ್ಲ. ನದಿಯು ವೇಗದಿಂದ ಅಭಿವೃದ್ಧಿಯನ್ನು ಹೊಂದುತ್ತದೆ.

ರಾಜಾ

ನ ತ್ವಾಂ ಮನ್ಯೇ ಮಾನುಷಂ ದೇವಸತ್ತ್ವ
ನ ತ್ವಂ ಬಾಲಃ ಸ್ಥವಿರಸ್ತ್ವಂ ಮತೋ ಮೇ ।
ನ ತೇ ತುಲ್ಯೋ ವಿದ್ಯತೇ ವಾಕ್ಪಲಾಪೇ
ತಸ್ಮಾದ್ ದ್ವಾರಂ ವಿತರಾಮುಷ್ಯ ವಂದಿನ್ ॥೩೧॥

ರಾಜಾ– ಎಲೈ ದೇವಸತ್ವನೇ, ನಿನ್ನನ್ನು ಮನುಷ್ಯನೆಂದು ನಾನು ತಿಳಿಯುವುದಿಲ್ಲ. ನೀನು ಬಾಲಕನಲ್ಲ. ವೃದ್ಧನೆಂದು ನನ್ನ ಅಭಿಪ್ರಾಯ. ಮಾತನಾಡುವವರಲ್ಲಿ ನಿನಗೆ ಸಮಾನರಾದವರು ಇಲ್ಲ. ಆದ್ದರಿಂದ ಎಲೈ ವಂದಿಯೇ, ಇವನಿಗೆ ಪ್ರವೇಶವನ್ನು ನೀಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಮೂವತ್ತನೆಯ ಅಧ್ಯಾಯ

ಅಷ್ಟಾವಕ್ರ ವಂದಿ ಸಂವಾದ ಮತ್ತು ವಂದಿಯ ಪರಾಜಯ

ಅಷ್ಟಾವಕ್ರಃ

ಅತ್ರೋಗ್ರಸೇನಸಮಿತೇಷು ರಾಜನ್
ಸಮಾಗತೇಷ್ವಪ್ರತಿಮೇಷು ರಾಜಸು ।
ನ ವೈ ತಿತಿಕ್ಷಾಮ್ಯಹಮದ್ಯ ವಾದಿನಾಂ
ಮಹಾಜನೇ ಹಂಸನಿನಾದಿನಾಮಿವ ॥೧॥

ಅಷ್ಟಾವಕ್ರ– ಎಲೈ ರಾಜನೇ, ಇಲ್ಲಿ ಉಗ್ರಸೇನನಿಗೆ ಸಮಾನವಾದ ಅದ್ವಿತೀಯರಾದ ರಾಜರುಗಳು ಬಂದು ಸೇರಿರುವಾಗ ಈ ಮಹಾಜನ ಸಮೂಹದಲ್ಲಿ ಈ ದಿನ ಹಂಸದಂತಾ ಮೃದು ಮಧುರ ಮಾತಿನಿಂದ ವಾದಿಗಳನ್ನು ನಾನು ಸಹಿಸುವುದಿಲ್ಲ.

ನ ಮೋಕ್ಷ್ಯಸೇ ವೈ ವದಮಾನೋ ನಿಮಜ್ಜನ್ ।
ಜಲಂ ಪ್ರಪನ್ನಃ ಸರಿತಾಮಿವಾದ್ಯಗಃ ।
ಹುತಾಶನಸ್ಯೇವ ಸಮಿದ್ಧತೇಜಸಃ
ಸ್ಥಿರೋ ಭವಸ್ವೇಹ ಮಮಾದ್ಯ ವಂದಿನ್ ॥೨॥

ಎಲೈ ವಂದಿಯೇ, ವಾದವನ್ನು ಮಾಡಿ ವಾದದಲ್ಲಿ ಸೋತವರನ್ನು ನೀರಿನಲ್ಲಿ ಮುಳುಗಿಸುವ ನೀನು ದಾರಿಹೋಕನಿಗೆ ಅಡ್ಡಲಾಗಿ ನದಿಯ ಜಲವು ಸಿಕ್ಕದಂತೆ ಮತ್ತು ದೊಡ್ಡದಾಗಿ ಉರಿಯುತ್ತಿರುವ ಅಗ್ನಿಯನ್ನು ಸಮೀಪಿಸಿದಂತೆ ನನ್ನಿಂದ ಬಿಡುಗಡೆಯನ್ನು ಹೊಂದುವುದಿಲ್ಲ. ಈ ದಿನ ಇಲ್ಲಿ ಸ್ಥಿರವಾಗಿ ನಿಲ್ಲು.

ವಂದೀ

ವ್ಯಾಘ್ರಂ ಶಯಾನಂ ಪ್ರತಿಬೋಧಯಿತ್ವಾ
ಆಶೀವಿಷಂ ಸೃಕ್ಕಿಣೀ ಲೇಲಿಹಾನಮ್ ।
ಪದಾ ಹತಸ್ಯೇವ ಶಿರೋಽಭಿಹತ್ಯ
ನಾದಜ್ಞೋ ವೈ ಮೋಕ್ಷ್ಯಸೇ ತನ್ನಿಬೋಧ ॥೩॥

ವಂದೀ– ನಿದ್ರಿಸುತ್ತಿರುವ ವ್ಯಾಘ್ರವನ್ನು ಎಬ್ಬಿಸಿ ಕಟವಾಯಿಯನ್ನು ನಾಲಿಗೆಯನ್ನು ಸವರಿಕೊಳ್ಳುತ್ತಿರುವ ಆಶೀವಿಷ ಸರ್ಪವನ್ನು ಕಾಲಿನಿಂದ ಒದ್ದು, ತಲೆಯ ಮೇಲೆ ಹೊಡೆದಂತೆ ನೀನು ಕಚ್ಚಲ್ಪಡದೇ ನನ್ನಿಂದ ಬಿಡುಗಡೆಯನ್ನು ಹೊಂದುವುದಿಲ್ಲ. ಅದನ್ನು ತಿಳಿ.

ಯೋ ವೈ ದರ್ಪಾತ್ ಸಂಹನನೋಪಪನ್ನಃ
ಸುದುರ್ಬಲಃ ಪರ್ವತಮಾವಿಹಂತಿ ।
ತಸ್ಯೈವ ಪಾಣಿಃ ಸನಖೋ ವಿದೀರ್ಯತೇ
ನ ವಾಪಿ ಶೈಲಸ್ಯ ತು ದೃಶ್ಯತೇ ವ್ರಣಃ ॥೪॥

ಯಾವನು ಒಳ್ಳೆಯ ಶರೀರ ಸಂಪನ್ನನಾಗಿದ್ದರೂ, ಪರ್ವತಕ್ಕಿಂತ ದುರ್ಬಲನಾದರೂ ದರ್ಪದಿಂದ ಪರ್ವತವನ್ನೇ ಗುದ್ದುತ್ತಾನೆಯೋ ಆವನ ಹಸ್ತವೇ ನಖಸಹಿತವಾಗಿ ಬಿರಿದುಹೋಗುತ್ತದೆ. ಪರ್ವತಕ್ಕೆ ಯಾವ ವ್ರಣವೂ ಉಂಟಾಗುವುದಿಲ್ಲ.

ಅಷ್ಟಾವಕ್ರಃ

ಸರ್ವೇ ರಾಜ್ಞೋ ಮೈಥಿಲಸ್ಯ ಮೈನಾಕಸ್ಯೇವ ಪರ್ವತಾಃ ।
ವಿಕರ್ಷಭೂತಾ ರಾಜಾನೋ ವತ್ಸಾ ಅನಡುಹೋ ಯಥಾ ॥೫॥

ಅಷ್ಟಾವಕ್ರ– ಎಲ್ಲ ಪರ್ವತಗಳೂ ಮೈನಾಕ ಪರ್ವತಕ್ಕಿಂತ ನಿಮ್ನವಾಗಿರುವಂತೆ, ಎಲ್ಲ ಕರುಗಳೂ ಎತ್ತುಗಳಿಗಿಂತ ನಿಮ್ನವಾಗಿರುವಂತೆ, ಎಲ್ಲ ರಾಜರೂ ಮೈಥಿಲ ರಾಜನಿಗಿಂತ ಕೆಳಗಿನ ದರ್ಜೆಯವರು.

ಲೋಮಶಃ

ಅಷ್ಟಾವಕ್ರಃ ಸಮಿತೌ ಗರ್ಜಮಾನೋ
ಜಾತಕ್ರೋಧೋ ವಂದಿನಮಾಹ ರಾಜನ್ ।
ಉಕ್ತೇ ವಾಕ್ಯೇ ಚೋತ್ತರಂ ಮೇ ಬ್ರವೀಹಿ
ವಾಕ್ಯಸ್ಯ ಚಾಪ್ಯುತ್ತರಂ ತೇ ಬ್ರವೀಮಿ ॥೬॥

ಲೋಮಶ– ಎಲೈ ರಾಜನೇ, ಅಷ್ಟಾವಕ್ರನು ಕ್ರೋಧವನ್ನು ತಾಳಿದವನಾಗಿ ಆ ಸಭೆಯಲ್ಲಿ ಗರ್ಜನೆ ಮಾಡುತ್ತಾ ನನ್ನ ವಾಕ್ಯವನ್ನು ಉತ್ತರವನ್ನು ಕೊಡು. ನಿನ್ನ ವಾಕ್ಯಕ್ಕೆ ನಾನು ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದನು.

ವಂದೀ

ಏಕ ಏವಾಗ್ನಿರ್ಬಹುಧಾ ಸಮಿಧ್ಯತೇ
ಏಕಃ ಸೂರ್ಯಃ ಸರ್ವಮಿದಂ ಪ್ರಭಾಸತೇ ।
ಏಕೋ ವೀರೋ ದೇವರಾಜೋ ನಿಯಂತಾ
ಯಮಃ ಪಿತೄಣಾಮೀಶ್ವರಶ್ಚೈಕ ಏವ ॥೭॥

ವಂದೀ– ಒಬ್ಬನೇ ಅಗ್ನಿಯು ಅನೇಕ ವಿಧವಾಗಿ ಪ್ರಜ್ವಲಿಸುತ್ತಾನೆ.. ಒಬ್ಬನೇ ಸೂರ್ಯನು ಈ ಜಗತ್ತೆಲ್ಲವನ್ನೂ ಬೆಳಗುತ್ತಾನೆ. ಮೂರುಲೋಕಗಳಿಗೂ ನಿಯಾಮಕನಾದ ವೀರನಾದ ದೇವರಾಜನು ಒಬ್ಬನೇ. ಪಿತೃಗಳಿಗೆ ಪ್ರಭುವಾದ ಯಮನೂ ಸಹ ಒಬ್ಬನೇ ಆಗಿದ್ದಾನೆ.

ಅಷ್ಟಾವಕ್ರಃ

ದ್ವಾವಿಂದ್ರಾಗ್ನೀ ಚರತೋ ವೈ ಸಖಾಯೌ
ದ್ವೌ ದೇವರ್ಷೀ ನಾರದಃ ಪರ್ವತಶ್ಚ ।
ದ್ವಾವಶ್ವಿನೌ ದ್ವೇ ಚ ರಥಸ್ಯ ಚಕ್ರೇ
ಭಾರ್ಯಾಪತೀ ದ್ವೌ ವಿಹಿತೌ ವಿಧಾತ್ರಾ ॥೮॥

ಅಷ್ಟಾವಕ್ರ– ಇಂದ್ರ ಮತ್ತು ಅಗ್ನಿ ಇಬ್ಬರು ಮಿತ್ರರಾಗಿ ಸಂಚರಿಸುತ್ತಾರೆ. ನಾರದ ಮತ್ತು ಪರ್ವತರು ಇಬ್ಬರು ದೇವರ್ಷಿಗಳು. ಅಶ್ವಿನೀದೇವತೆಗಳು ಇಬ್ಬರು. ರಥದ ಚಕ್ರಗಳು ಎರಡು. ಬ್ರಹ್ಮದೇವರು ಭಾರ್ಯಾಪತೀ ಎಂದು ಇಬ್ಬರನ್ನು ವಿಧಿಸಿದ್ದಾನೆ. (ಅದ್ವೈತ ಮತವನ್ನು ಅವಲಂಬಿಸಿ ಒಂದು ಎಂಬ ಪ್ರಾಶಸ್ತ್ಯವನ್ನು ವಂದಿಯು ಹೇಳಲು ಪ್ರಾರಂಭಿಸಿದಾಗ ಅಷ್ಟಾವಕ್ರನು ಅದನ್ನು ಸಹಿಸದೇ ದ್ವೈತಮತವನ್ನು ಅವಲಂಬಿಸಿ ಎರಡು ಎಂಬ ಸಂಖ್ಯೆಯ ಪ್ರಾಶಸ್ತ್ಯವನ್ನು ನಿರೂಪಿಸುತ್ತಿದ್ದಾನೆ).

ವಂದೀ

ತ್ರಿಃ ಸೂಯತೇ ಕರ್ಮಣಾ ವೈ ಪ್ರಜೇಯಂ
ತ್ರಯೋ ದೇವಾ ವಾಜಪೇಯಂ ವಹಂತಿ ।
ಅಧ್ವರ್ಯವಸ್ತ್ರಿವನಾನಿ ತನ್ವತೇ
ತ್ರಯೋ ಲೋಕಾಸ್ತ್ರೀಣಿ ಜ್ಯೋತಿಂಷಿ ಚಾಹುಃ ॥೯॥

ವಂದೀ– ಧಾನ್ಯದಿಂದ, ಪಿತೃವಿನಿಂದ ಮತ್ತು ಮಾತೃವಿನಿಂದ ಮೂರು ಬಾರಿ ಮನುಷ್ಯನು ಪ್ರಸವಿಸಲ್ಪಡುತ್ತಾನೆ. ಮೂರು ವೇದಗಳು ಎಂದರೆ ಋಗ್, ಯಜುಸ್, ಸಾಮವೇದಗಳು ವಾಜಪೇಯ ಯಾಗವನ್ನು ನಿರ್ವಹಿಸುತ್ತವೆ. ಸೂರ್ಯ, ಚಂದ್ರ ಮತ್ತು ಅಗ್ನಿ ಎಂಬ ಮೂರು ಅಧ್ವರ್ಯಗಳು ಹಗಲು, ರಾತ್ರಿ ಮತ್ತು ಸಂಧ್ಯಾಕಾಲ ಎಂಬ ಮೂರು ಚವನಗಳನ್ನು ಉಂಟು ಮಾಡುತ್ತಾರೆ. ಲೋಕಗಳು ಮೂರು. ಜ್ಯೋತಿಷ್ಯಗಳನ್ನು ಮೂರು ಎಂದು ಹೇಳುತ್ತಾರೆ.

ಅಷ್ಟಾವಕ್ರಃ

ಚತುಷ್ಪಯಂ ಬ್ರಾಹ್ಮಣಾನಾಂ ನಿಕೇತಂ
ಚತ್ವಾರೋ ಯುಕ್ತಾ ಯಜ್ಞಮಿಮಂ ವಹಂತಿ ।
ದಿಶಶ್ಚತಸ್ರಶ್ಚತುರಶ್ಚ ವೇದಾಃ
ಚತುಷ್ಪದಾ ಗೌರಪಿ ಶಶ್ವದುಕ್ತಾ ॥೧೦॥

ಅಷ್ಟಾವಕ್ರ– ನಾಲ್ಕು ವೇದಗಳು ಬ್ರಾಹ್ಮಣರ ಆವಾಸಸ್ಥಾನವಾಗಿದೆ. ಶ್ರೋತೃ, ಉದ್ಗಾತೃ, ಅಧ್ವರ್ಯು ಮತ್ತು ಬ್ರಹ್ಮ ಎಂಬ ನಾಲ್ಕು ಋತ್ವಿಕ್ಕುಗಳು ಈ ಯಜ್ಞವನ್ನು ನಿರ್ವಹಿಸುತ್ತಾರೆ. ದಿಕ್ಕುಗಳು ನಾಲ್ಕು, ವೇದಗಳೂ ನಾಲ್ಕು. ಗೋವಿಗೆ ನಾಲ್ಕು ಪಾದಗಳೆಂದು ಯಾವಾಗಲೂ ಪ್ರಸಿದ್ಧವಾಗಿದೆ.

ವಂದೀ

ಪಂಚಾಗ್ನಯಃ ಪಂಚಪದಾ ಚ ಪಂಕ್ತಿಃ
ಯಜ್ಞಾಃ ಪಂಚೈವಾಪ್ಯಥ ಪಂಚೇಂದ್ರಿಯಾಣಿ ।
ದೃಷ್ಟಾ ಹ್ಯೇತೇ ಪಂಚಚೂಡಾಶ್ಚ ಪಂಚ
ಲೋಕೇ ಖ್ಯಾತಂ ಪಂಚನದಂ ಚ ಪುಣ್ಯಮ್ ॥೧೧॥

ವಂದೀ– ಅಗ್ನಿಗಳು ಐದು. ಪಂಕ್ತಿ ಛಂದಸ್ಸಿನ ಪಾದಗಳು ಐದು. ಯಜ್ಞಗಳು ಐದು ರೀತಿಗಳು ಮತ್ತು ಇಂದ್ರಿಯಗಳು ಐದು ಸಂಖ್ಯೆ ಉಳ್ಳವುಗಳು. ವೇದದಲ್ಲಿ ಪಂಚಚೂಡಾ ಎಂಬ ಅಕ್ಷರ್ಯವು ಹೇಳಲ್ಪಟ್ಟಿರುವುದು ಕಂಡುಬರುತ್ತದೆ. ಲೋಕದಲ್ಲಿ ಪಂಚನದ ಎಂಬ ಕ್ಷೇತ್ರವು ಪವಿತ್ರವೆಂದು ಪ್ರಸಿದ್ಧವಾಗಿದೆ.

ಅಷ್ಟಾವಕ್ರಃ

ಷಡಾಧಾನೇ ದಕ್ಷಿಣಾ ಆಹುರೇಕೇ
ಷಡೇತೇ ಋತವಃ ಕಾಲಚಕ್ರಂ ತಥೈವ ।
ಷಡಿಂದ್ರಿಯಾಣ್ಯುತ ಷಟ್ ಕೃತ್ತಿಕಾಶ್ಚ
ಷಡೇವ ಯಜ್ಞಾಃ ಸರ್ವವೇದೇಷು ಸಿದ್ಧಾಃ ॥೧೨॥

ಅಷ್ಟಾವಕ್ರ– ಅಗ್ನ್ಯಾದಾನ ಮಾಡುವಾಗ ಆರು ದಕ್ಷಿಣೆಗಳನ್ನು ಕೊಡಬೇಕೆಂದು ಕೆಲವರು ಹೇಳುತ್ತಾರೆ. ಈ ಋತುಗಳು ಆರು. ಕಾಲಚಕ್ರವೂ ಸಹ ಆದರಂತೆ ಆರು ಋತುಗಳಿಂದ ಕೂಡಿದುದು. ಇಂದ್ರಿಯಗಳು ಆರು (ಪಂಚಜ್ಞಾನೇಂದ್ರಿಯಗಳ ಜೊತೆಯಲ್ಲಿ ಮನಸ್ಸನ್ನು ಆರನೆಯ ಇಂದ್ರಿಯವಾಗಿ ಸೇರಿಸಬೇಕು). ಮತ್ತು ಕೃತ್ತಿಕೆಯರು ಆರು ಮಂದಿ. ಸರ್ವವೇದಗಳಲ್ಲಿ ಪ್ರಸಿದ್ಧವಾದ ಯಜ್ಞಗಳೂ ಸಹ ಆರೇ ಆಗಿವೆ.

ವಂದೀ

ಸಪ್ತ ಗ್ರಾಮ್ಯಾಃ ಪಶವಃ ಸಪ್ತ ವನ್ಯಾಃ
ಸಪ್ತ ಚ್ಛಂಧಾಂಸಿ ಕ್ರತುಮೇಕಂ ವಹಂತಿ ।
ಸಪ್ತರ್ಷಯಃ ಸಪ್ತ ಚಾಪ್ಯರ್ಹಣಾನಿ
ಸಪ್ತತಂತ್ರೀ ಪ್ರಥಿತಾ ಚೈವ ವೀಣಾ ॥೧೩॥

ವಂದೀ– ಗ್ರಾಮ್ಯ ಪಶುಗಳು ಏಳು ವಿಧವಾದವು. ಕಾಡಿನಲ್ಲಿರುವ ಪಶುಗಳೂ ಏಳು ವಿಧವಾದವು. ಏಳು ಛಂದಸ್ಸುಗಳು (ಗಾಯತ್ರೀ, ಪುಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ) ಏಳು ಛಂದಸ್ಸುಗಳು ಒಂದು ಯಜ್ಞವನ್ನು ನಿರ್ವಹಿಸುತ್ತವೆ. ಸಪ್ತರ್ಷಿಗಳು ಏಳು ಮಂದಿ. ಪೂಜಾ ಪ್ರಕಾರಗಳೂ ಏಳು ರೀತಿಯಾದವು ಮತ್ತು ವೀಣೆಯು ಸಪ್ತ ತಂತಿಗಳನ್ನು ಉಳ್ಳದ್ದೆಂದು ಪ್ರಸಿದ್ಧವಾಗಿದೆ.

ಅಷ್ಟಾವಕ್ರಃ

ಅಷ್ಟೌ ದಿಗೀಶಾನನ್ಯತಯಮಾನ್ ವದಂತಿ
ತಥಾऽಷ್ಟಪಾದಃ ಶರಭಃ ಸಿಂಹಘಾತೀ ।
ಅಷ್ಟೌ ವಸೂನ್ ಶುಶ್ರುಮೋ ದೇವತಾಸು
ಯೂಪೋऽಷ್ಟಾಶ್ರಃ ವಿಹಿತಶ್ಚ ಯಜ್ಞೇ ॥೧೪॥

ಅಷ್ಟಾವಕ್ರ– ಅಷ್ಟದಿಕ್ಪಾಲಕರು ಜಗತ್ತಿನ ಧಾರಣೆಯಲ್ಲಿ ಪ್ರಯತ್ನಪೂರ್ವಕವಾಗಿ ನಿರತರಾಗಿದ್ದಾರೆಂದು ಹೇಳುತ್ತಾರೆ. ಸಿಂಹವನ್ನು ಕೊಲ್ಲುವ ಶರಭ ಎಂಬ ಮೃಗವು ಅಷ್ಟಪಾದಗಳನ್ನುಳ್ಳದ್ದು. ದೇವತೆಗಳಲ್ಲಿ ವಸುಗಳು ಎಂಟು ಮಂದಿ ಎಂದು ಕೇಳುತ್ತೇವೆ. ಯಜ್ಞವಲ್ಲಿ ವಿಹಿತವಾದ ಯೂಪವು ಎಂಟು ಅಂಶಗಳಿಂದ ಕೂಡಿದುದು.

ವಂದೀ

ನ ವೈವೋಕ್ತಾಃ ಸಾಮಿಧೇನ್ಯಃ ಪಿತೃಣಾಂ
ತಥಾ ಪ್ರಾಹುರ್ನವಯೋಗಂ ವಿಸರ್ಗಮ್ ।
ನವಾಕ್ಷರಾ ಬೃಹತೀ ಸಂಪ್ರದಿಷ್ಟಾ
ನವೈವ ಯೋಗೋ ಗಣನಾಮೇತಿ ಶಶ್ವತ್ ॥೧೫॥

ವಂದೀ– ಪಿತೃಗಳ ಸನ್ನಿಧಿ ಸ್ಥಾನವಾದದು ಒಂಬತ್ತು ಸ್ಥಾನಗಳು (ವಿಶಂತಸ್ತಾ ಹವಾಮಹೀ ಎಂದು ಒಂಬತ್ತು ಮಂತ್ರಗಳೆಂದು ಕೆಲವರ ಅಭಿಪ್ರಾಯ). ಸೃಷ್ಟಿಯೂ ಸಹ ಒಂಬತ್ತರ ಯೋಗದಿಂದ ಕೂಡಿದುದು ಎಂದು ಹೇಳುತ್ತಾರೆ (ಮಹತತ್ತ್ವ, ಅಹಂಕಾರ ತತ್ತ್ವದ ಮೂರು ಪ್ರಭೇದಗಳು ಮತ್ತು ಪಂಚಮಹಾಭೂತಗಳು ಇವುಗಳಿಂದ ಎಲ್ಲ ಸೃಷ್ಟಿಯೂ ಉಂಟಾಗುತ್ತದೆ). ಬೃಹತೀ ಛಂದಸ್ಸು ಒಂದೊಂದು ಪಾದದಲ್ಲಿ ಒಂಬತ್ತು ಅಕ್ಷ ಉಳ್ಳದ್ದು. ಒಂಬತ್ತು ಎಂಬ ಸಂಖ್ಯೆಯು ಪುನಃಪುನಃ ಗಣನೆಯನ್ನು ಹೊಂದುತ್ತದೆ (ಒಂಬತ್ತನ್ನು ಯಾವ ಸಂಖ್ಯೆಯಿಂದ ಗುಣಿಸಿದರೂ ಬರುವ ಗುಣಲಬ್ದದ ಅಂಕೆಗಳನ್ನು ಸೇರಿಸಿದರೆ ಪುನಃ ಒಂಬತ್ತೇ ಬರುತ್ತದೆ).

ಅಷ್ಟಾವಕ್ರಃ

ದಶಾ ದಶೋಕ್ತಾಃ ಪುರುಷಸ್ಯ ಲೋಕೇ
ಸಹಸ್ರಮಾಹುರ್ದಶ ಪೂರ್ಣಂ ಶತಾನಿ ।
ದಶೈವ ಮಾಸಾನ್ ಬಿಭ್ರತಿ ಗರ್ಭವತ್ಯೋ
ದಶೈರಕಾ ದಶ ದಾಶಾರ್ಣಾಃ ॥೧೬॥

ಅಷ್ಟಾವಕ್ರ– ಮನುಷ್ಯನಿಗೆ ಲೋಕದಲ್ಲಿ ಹತ್ತು ದೆಶೆಗಳು– ಅವಸ್ಥೆಗಳು ಎಂದು ಪ್ರಸಿದ್ಧವಾಗಿವೆ (ಗರ್ಭವಾಸ, ಜನ್ಮ, ಬಾಲ್ಯ, ಕೌಮಾರ, ಪೌಗಂಡ, ಕೈಸೋರ, ಯೌವನ, ಪ್ರೌಢತ್ವ, ವಾರ್ದಕ್ಯ ಮತ್ತು ಮರಣ). ಹತ್ತುನೂರುಗಳು ಒಂದು ಸಹಸ್ರವಾಗುತ್ತವೆ. ಅದು ಪೂರ್ಣವು ಎಂದರೆ ಅನಂತವೂ ಆಗುತ್ತದೆ. ಗರ್ಭವನ್ನು ಧರಿಸಿದ ಸ್ತ್ರೀಯರು ಹತ್ತು ತಿಂಗಳ ಕಾಲ ಗರ್ಭವನ್ನು ಧರಿಸುತ್ತಾರೆ. ಶ್ರಾದ್ಧಕರ್ಮಗಳಲ್ಲಿ ಪಿತೃಗಳಿಗೆ ಆಸನವಾಗಿ ಅರ್ಪಿಸುವ ಎರಕವು ಹತ್ತುವಿಧವಾದುದು. ದಾಶರು (ಬೆಸ್ತರು) ಹತ್ತು ಮಂದಿ. ದಶಾರಣವೆಂಬ ದೇಶವು ಪ್ರಸಿದ್ಧವಾಗಿದೆ.

ವಂದೀ

ಏಕಾದಶೈಕಾದಶಿನಃ ಪಶೂನಾಮ್
ಏಕಾದಶೈವಾತ್ರ ಭವಂತಿ ಯೂಪಾಃ ।
ಏಕಾದಶ ಪ್ರಾಣಭೃತಾಂ ವಿಕಾರಾ
ಏಕಾದಶೋಕ್ತಾ ದಿವಿ ದೇವೇಷು ರುದ್ರಾಃ ॥೧೭॥

ವಂದೀ– ಎಲ್ಲ ಪಶುಗಳೂ ಸಹ ಪಂಚಜ್ಞಾನೇಂದ್ರಿಯಗಳೂ, ಪಂಚ ಕರ್ಮೇಂದ್ರಿಯಗಳೂ ಮತ್ತು ಮನಸ್ಸು ಎಂಬ ಹನ್ನೊಂದು ಇಂದ್ರಿಯಗಳನ್ನು ಹೊಂದಿರುವಂತಹವು. ಯಜ್ಞದಲ್ಲಿ ಉಪಯೋಗಿಸುವ ಯೂಪವು ಹನ್ನೊಂದು ರೀತಿಯದು. ಪ್ರಾಣಿಗಳಿಗೆ ಉಂಟಾಗುವ ವಿಕಾರವು ಹನ್ನೊಂದು ರೀತಿಯದು (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಹರ್ಷ, ಶೋಕ, ರಾಗ, ದ್ವೇಷ ಮತ್ತು ಅಹಂಕಾರ). ಸ್ವರ್ಗದಲ್ಲಿ ದೇವತೆಗಳಿಗೆ ರುದ್ರರು ಹನ್ನೊಂದು ಮಂದಿ ಎಂದು ಹೇಳಲ್ಪಡುತ್ತಾರೆ.

ಅಷ್ಟಾವಕ್ರಃ

ಸಂವತ್ಸರಂ ದ್ವಾದಶಮಾಸಮಾಹುಃ
ಜಗತ್ಯಾಃ ಪಾದೋ ದ್ವಾದಶೈವಾಕ್ಷರಾಣಿ ।
ದ್ವಾದಶಾಹಃ ಪ್ರಾಕೃತೋ ಯಜ್ಞ ಉಕ್ತೋ
ದ್ವಾದಶಾದಿತ್ಯಾನ್ ಕಥಯಂತೀಹ ವಿಪ್ರಾಃ ॥೧೮॥

ಅಷ್ಟಾವಕ್ರ– ಒಂದು ಸಂವತ್ಸರವು ಹನ್ನೆರಡು ಮಾಸಗಳಿಂದ ಕೂಡಿದುದು ಎಂದು ಹೇಳುತ್ತಾರೆ. ಜಗತೀ ಛಂದಸ್ಸಿನ ಒಂದು ಪಾದದಲ್ಲಿ ಹನ್ನೆರಡು ಅಕ್ಷರಗಳಿವೆ. ಪ್ರಾಕೃತವಾದ ಯಜ್ಞವು ಹನ್ನೆರಡು ದಿವಸಗಳ ಕಾಲ ನಡೆಯುತ್ತದೆ ಎಂದು ಹೇಳಲ್ಪಡುತ್ತದೆ (ಯಜ್ಞದಲ್ಲಿ ಪ್ರಾಕೃತ ಮತ್ತು ವೈಕೃತ ಎಂದು ಎರಡು ವಿಧ). ಬ್ರಾಹ್ಮಣರು ಆದಿತ್ಯರನ್ನು ಹನ್ನೆರಡು ಮಂದಿ ಎಂದು ಹೇಳುತ್ತಾರೆ.

ವಂದೀ

ತ್ರಯೋದಶೀ ತಿಥಿರುಕ್ತಾ ಪ್ರಶಸ್ತಾ ತ್ರಯೋದಶದ್ವೀಪವತೀ ಮಹೀ ಚ ॥

ವಂದೀ– ತ್ರಯೋದಶೀ ತಿಥಿಯನ್ನು ಪ್ರಶಸ್ತವೆಂದು ಹೇಳುತ್ತಾರೆ. ಮತ್ತು ಭೂಮಿಯಲ್ಲಿ ಹದಿಮೂರು ದ್ವೀಪಗಳಿವೆ.

ಲೋಮಶಃ

ಏತಾವದುಕ್ತ್ವಾ ವಿರರಾಮ ವಂದೀ ಶ್ಲೋಕಸ್ಯಾರ್ಧಂ ವ್ಯಾಜಹಾರಾಷ್ಟವಕ್ರಃ ॥
ತ್ರಯೋದಶಾಹಾನಿ ಸಸಾರ ಕೇಶೀ ತ್ರಯೋದಶಾದೀನ್ಯತಿಚ್ಛಂದಾಂಸಿ ಚಾಹುಃ॥
ತತೋ ಮಹಾನುದತಿಷ್ಠನ್ನಿನಾದಸ್ತೂಷ್ಣೀಂಭೂತಂ ಸೂತಪುತ್ರಂ ನಿಶಾಮ್ಯ ।
ಅಧೋಮುಖಂ ಧ್ಯಾನಪರಂ ತದಾನೀಮಷ್ಟಾವಕ್ರಂ ಚಾಪ್ಯುದೀರ್ಯಂತಮೇವ
॥೨೦॥

ಲೋಮಶ– ವಂದಿಯು ಇಷ್ಟನ್ನು ಹೇಳಿ ನಿಲ್ಲಿಸಿದನು. ಶ್ಲೋಕದ ಉಳಿದ ಅರ್ಧವನ್ನು ಅಷ್ಟಾವಕ್ರರು ಹೇಳಿದರು. ದಮಯಂತಿಯ ಧೂತಿಯಾದ ಕೇಶಿಯು ಹದಿಮೂರು ದಿನಗಳ ಕಾಲ ಬಾಹುಕನನ್ನು ಪರೀಕ್ಷೆ ಮಾಡಿದಳು. ಒಂದೊಂದು

ಪಾದದಲ್ಲಿ ಹದಿಮೂರು ಮತ್ತು ಅದಕ್ಕಿಂತ ಹೆಚ್ಚು ಅಕ್ಷರಗಳಿರುವ ಛಂದಸ್ಸುಗಳನ್ನು ಮುಖ್ಯವಾದ ಛಂದಸ್ಸು ಎಂದು ಹೇಳುತ್ತಾರೆ.

ಆಗ ಸೂತಪುತ್ರನಾದ ವಂದಿಯು ಅಧೋಮುಖನಾಗಿ ಧ್ಯಾನಪರನಾಗಿ ಸುಮ್ಮನೆ ಕುಳಿತಿರುವುದನ್ನು ಅಷ್ಟಾವಕ್ರನು ಶೋಭಿಸುತ್ತಿರುವುದನ್ನು ನೋಡಿದ ಸಭೆಯಲ್ಲಿ ದೊಡ್ಡ ಕೋಲಾಹಲ ಉಂಟಾಯಿತು.

ತಸ್ಮಿಂಸ್ತಥಾ ಸಂಕುಲೇ ವರ್ತಮಾನೇ
ಸ್ಥಿತೇ ಯಜ್ಞೇ ಜನಕಸ್ಯೋ ತ ರಾಜ್ಞಃ ।
ಅಷ್ಟಾವಕ್ರಂ ಪೂಜಯಂತೋಽಭ್ಯುಪೇಯು
ರ್ವಿಪ್ರಾಃ ಸರ್ವೇ ಪ್ರಾಂಜಲಯಃ ಪ್ರತೀತಾಃ ॥೨೧॥

ಆಗ ಜನಕರಾಜನ ಆ ಪರಿಶುದ್ಧವಾದ ಯಜ್ಞದಲ್ಲಿ ಇಂತಹ ಕೋಲಾಹಲವು ಜರುಗುತ್ತಿರಲು ಬ್ರಾಹ್ಮಣರೆಲ್ಲರು ಸಂತುಷ್ಟರಾಗಿ ಕೈಗಳನ್ನು ಮುಗಿದು ಅಷ್ಟಾವಕ್ರನನ್ನು ಪೂಜಿಸುತ್ತಾ ಅವರ ಸಮೀಪಕ್ಕೆ ಬಂದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಷಟ್‌ಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೊಂದನೆಯ ಅಧ್ಯಾಯ

ನೀರಿನಲ್ಲಿ ಮುಳುಗಿಸಲ್ಪಟ್ಟ ಎಲ್ಲಾ ವಿಪ್ರರ ಸಮುತ್ಥಾನ; ತನ್ನ ತಂದೆ ಮತ್ತು ಸೋದರ ಮಾವನ ಜೊತೆಯಲ್ಲಿ ಅಷ್ಟಾವಕ್ರರಿಂದ ತಮ್ಮ ಆಶ್ರಮಕ್ಕೆ ಗಮನ.

ಅಷ್ಟಾವಕ್ರಃ

ಅನೇನೈವ ಬ್ರಾಹ್ಮಣಾಃ ಶುಶ್ರುವಾಂಸೋ
ವಾದೇ ಜಿತ್ವಾ ಸಲಿಲೇ ಮಜ್ಜಿತಾಃ ಪ್ರಾಕ್ ।
ತಾನೇವ ಧರ್ಮಾನಯಮದ್ಯ ವಂದೀ
ಪ್ರಾಪ್ನೋತು ಗೃಹ್ಯಾಪ್ಸು ನಿಮಜ್ಜಯೈನಮ್ ॥೧॥

ಅಷ್ಟಾವಕ್ರ– ಎಲೈ ರಾಜನಾದ ಜನಕನೇ ವಾದಕ್ಕಾಗಿ ಬಂದ ವಿದ್ವಾಂಸರಾದ ಬ್ರಾಹ್ಮಣರು ಈ ವಂದಿಯಿಂದಲೇ ಜಯಿಸಲ್ಪಟ್ಟು ಹಿಂದೆ ನೀರಿನಲ್ಲಿ ಮುಳುಗಿಸಲ್ಪಟ್ಟರು. ಈ ವಂದಿಯೂ ಸಹ ಈ ದಿನ ಅದೇ ಗತಿಯನ್ನು ಹೊಂದಲಿ. ಇವನನ್ನು ಹಿಡಿದು ನೀರಿನಲ್ಲಿ ಮುಳುಗಿಸು.

ವಂದೀ

ಅಹಂ ಪುತ್ರೋ ವರುಣಸ್ಯೇತ ರಾಜ್ಞಸ್ತತ್ರಾಸ
ಸತ್ರಂ ದ್ವಾದಶವಾರ್ಷಿಕಂ ವೈ ।
ಸತ್ರೇಣ ತೇ ಜನಕ ತುಲ್ಯಕಾಲಂ ತದರ್ಥಂ
ತೇ ಪ್ರಹಿತಾ ಮೇ ದ್ವಿಜಾಗ್ರ್ಯಾಃ ॥೨॥

ವಂದೀ– ನಾನು ರಾಜನಾದ ವರುಣನ ಪುತ್ರ. ಎಲೈ ಜನಕನೇ ವರುಣ ಲೋಕದಲ್ಲಿ ನಿನ್ನ ಸತ್ರವು ನಡೆಯುವ ಸಮಾನ ಕಾಲದಲ್ಲಿಯೇ ಹನ್ನೆರಡು ವರ್ಷದ ಒಂದು ಸತ್ರವು ನಡೆಯುತ್ತಿದೆ. ಅದಕ್ಕಾಗಿ ನಾನು ಬ್ರಾಹ್ಮಣ ಶ್ರೇಷ್ಠರನ್ನು ಅಲ್ಲಿಗೆ ಕಳುಹಿಸಿದೆ.

ತೇ ತು ಸರ್ವೇ ವರುಣಸ್ಯೇತ ಯಜ್ಞಂ
ದೃಷ್ಟ್ವಾ ಗತಾ ಇಮ(ಇಹ) ಆಯಾಂತಿ ಭೂಯಃ ।
ಅಷ್ಟಾವಕ್ರಂ ಪೂಜಯೇಃ ಪೂಜನೀಯಂ
ಯಸ್ಯ ಹೇತೋರ್ಜನಿತಾರಂ ಸಮೇಷ್ಯೇ ॥೩॥

ಅವರೆಲ್ಲರೂ ವರುಣನ ಯಜ್ಞವನ್ನು ನೋಡಿ ಯಜ್ಞದಲ್ಲಿಯೇ ಇಲ್ಲಿಗೆ ಹಿಂದಿರುಗುತ್ತಾರೆ. ಎಲೈ ರಾಜನೇ! ಪೂಜನೀಯನಾದ ಅಷ್ಟಾವಕ್ರನನ್ನು ಪೂಜಿಸು ಅವರ ನಿಮಿತ್ತದಿಂದಾಗಿ ನಾನು ನನ್ನ ತಂದೆಯ ಸಮಾಗಮವನ್ನು ಹೊಂದುತ್ತೇನೆ.

ವಿಪ್ರಾಃ ಸಮುದ್ರಾಂಭಸಿ ಮಜ್ಜಿತಾ ಯೇ
ವಾಚಾ ಜಿತಾ ಮೇಧಯಾ ವಾ ವಿದಾನಾಃ ।
ತಾಂ ಮೇಧಯಾ ವಾಚಮಥೋದ್ಧಹಾರ
ಯಥಾ ವಾಚಮವಚಿನ್ವಂತಿ ಸಂತಃ ॥೪॥

ಅಷ್ಟಾವಕ್ರ– ವಿದ್ವಾಂಸರಾದ ವಿಪ್ರರು ಈ ವಂದಿಯಿಂದ ಉಚ್ಚಸ್ವರದಿಂದಲಾಗಲೀ ಅಥವಾ ಊಹಾಪೋಹ ಶಕ್ತಿಯಿಂದಲಾಗಲೀ ಸೋಲಿಸಲ್ಪಟ್ಟು ಸಮುದ್ರದ ನೀರಿನಲ್ಲಿ ಮುಳುಗಿಸಲ್ಪಟ್ಟಿದ್ದಾರೆ. ಅಂತಹ ವಂದಿಯನ್ನು ನಾನು ಪ್ರಸಿದ್ಧವಾದ ವೇದವಾಕ್ಯಗಳನ್ನು ಉದಾಹರಿಸಿ ನನ್ನ ಪ್ರತಿಭಾ ಬಲದಿಂದ ಸೋಲಿಸಿದ್ದೇನೆ. ಸಜ್ಜನರಾದವರು ಬಾಲಕರ ಬಾಯಿಂದ ಬಂದರೂ ಒಳ್ಳೆಯ ಮಾತುಗಳನ್ನು ಸಂಗ್ರಹಿಸಬೇಕು.

ಅಗ್ನಿರ್ದಹಂಜಾತವೇದಾಃ ಸತಾಂ ಗೃಹಾನ್
ವಿಸರ್ಜಯಂತ್ಯೇಜಸಾ ನ ಸ್ಮ ಧಾಕ್ಷೀತ್ ।
ಬಾಲೇಷು ಪುತ್ರೇಷು ಕೃಪಣಂ ವದತ್ಸು
ತಥಾ ವಾಚಮವಚಿನ್ವಂತಿ ಸಂತಃ ॥೫॥

ಸತ್ಯಾಸತ್ಯಗಳನ್ನು ವಿವೇಚಿಸುವ ಅಗ್ನಿಯು ಸತ್ಯಪರೀಕ್ಷೆಯನ್ನು ಮಾಡುವಾಗ ಸಜ್ಜನರ ಗೃಹಗಳಂತಿರುವ ಶರೀರಗಳನ್ನು ತನ್ನ ತೇಜಸ್ಸಿನಿಂದ ಸುಡುವುದಿಲ್ಲ (ಸಜ್ಜನರಿಗೆ ಗೌರವವನ್ನು ತೋರಿಸುತ್ತಾನೆ). ಅದರಂತೆ ಬಾಲಕರಾಗಲಿ, ಪುತ್ರರಾಗಲಿ ವಿನಯದಿಂದ ಒಳ್ಳೆಯ ಮಾತುಗಳನ್ನಾಡುವಾಗ ಸಜ್ಜನರು ಆ ಮಾತುಗಳನ್ನು ಸಂಗ್ರಹಿಸುತ್ತಾರೆ.

ಶ್ಲೇಷ್ಮಾತಕಃ ಕ್ಷೀಣವರ್ಚಾಃ ಶೃಣೋಷಿ
ಉತಾಹೋ ತ್ವಾಂ ಸ್ತುತಯೋ ಮಾದಯಂತಿ ।
ಹಸ್ತೀವ ತ್ವಂ ಜನಕ ವಿನುದ್ಯಮಾನೋ ನ
ಮಾಮಿಕಾಂ ವಾಚಮಿಮಾಂ ಶೃಣೋಷಿ ॥೬॥

ಎಲೈ ರಾಜನೇ! ಕಾಂತಿಹೀನವಾದ ಅಪವಿತ್ರವಾದ ಶ್ಲೇಷ್ಮಾತಕ ವೃಕ್ಷದಂತೆ ಉನ್ನತ ಸ್ಥಾನದಲ್ಲಿ ಕುಳಿತು ನನ್ನ ಮಾತುಗಳನ್ನು ಕೇಳುತ್ತಿದ್ದೀಯಾ? ಅಥವಾ ನಿನ್ನ ವಂದಿ ಮಾಗಧರು ಮಾಡುವ ಸ್ತೋತ್ರವು ನಿನಗೆ ಮದವನ್ನು ತಂದುಕೊಟ್ಟಿದಯೇ? ಎಲೈ ಜನಕನೇ! ಆನೆಯನ್ನು ಅಂಕುಶದಿಂದ ಚುಚ್ಚುವಂತೆ ನಿನ್ನನ್ನು ಚುಚ್ಚುತ್ತಿದ್ದರೂ ನನ್ನ ಈ ಮಾತುಗಳನ್ನು ನೀನು ಕೇಳುತ್ತಿಲ್ಲ.

ಜನಕಃ

ಶೃಣೋಮಿ ವಾಚಂ ತವ ದಿವ್ಯರೂಪಾ
ಮಮಾನುಷೀಂ ದಿವ್ಯರೂಪೋಽಸಿ ಸಾಕ್ಷಾತ್ ।
ಅಜೈಷೀರ್ಯದ್ ವಂದಿನಂ ತ್ವಂ ವಿವಾದೇ
ನಿಸೃಷ್ಟ ಏಷ ತವ ಕಾಮೋಽದ್ಯ ವಂದೀ ॥೭॥

ಜನಕ– ಎಲೈ ಅಷ್ಟಾವಕ್ರರೇ! ತಮ್ಮ ಅಮಾನುಷವಾದ ದಿವ್ಯವಾದ ಮಾತುಗಳನ್ನು ಕೇಳುತ್ತಿದ್ದೇನೆ. ನೀವೂ ಸಹ ದಿವ್ಯವಾದ ರೂಪವನ್ನು ಧರಿಸಿದ್ದೀರಿ. ನೀವು ಈ ವಂದಿಯನ್ನು ವಾದದಲ್ಲಿ ಜಯಿಸಿದ ಕಾರಣದಿಂದಾಗಿ ಈ ವಂದಿಯ ಇಷ್ಟಾರ್ಥವು ನೆರವೇರಿದೆ. ನಿಮ್ಮ ಮಾತನ್ನು ನಾನು ನೆರವೇರಿಸುತ್ತೇನೆ.

ಅಷ್ಟಾವಕ್ರಃ

ತಾನೇನ ಜೀವತಾ ಕಶ್ಚಿದರ್ಥೋ ಮೇ ವಂದಿನಾ ನೃಪ ।
ಪಿತಾ ಯದ್ಯಸ್ಯ ವರುಣೋ ಮಜ್ಜಯೈನಂ ಜಲಾಶಯೇ ॥೮॥

ಅಷ್ಟಾವಕ್ರ– ಎಲೈ ರಾಜನೇ! ಈ ವಂದಿಯು ಜೀವಿಸಿರುವುದರಿಂದ ನನಗೆ ಯಾವ ಪ್ರಯೋಜನವೂ ಆಗಬೇಕಾಗಿಲ್ಲ. ಇವನ ತಂದೆಯು ವರುಣನಾದರೆ, ಇವನನ್ನು ಜಲಾಶಯದಲ್ಲಿ ಮುಳುಗಿಸು.

ವಂದೀ

ಅಹಂ ಪುತ್ರೋ ವರುಣಸ್ಯೇತ ರಾಜ್ಞೋ
ನ ಮೇ ಭಯಂ ವಿದ್ಯತೇ ಮಜ್ಜಿತಸ್ಯ ।
ಶಮಂ ಮುಹೂರ್ತಂ ಪಿತರಂ ದ್ರಕ್ಷ್ಯತೇಽಯ–
ಮಷ್ಟಾವಕ್ರಶ್ಚಿರನಷ್ಟಂ ಕಪೋಲಮ್ ॥೯॥

ನಾನು ರಾಜನಾದ ವರುಣನ ಮಗ. ನೀರಿನಲ್ಲಿ ಮುಳುಗಿಸುವುದರಿಂದ ನನಗೆ ಭಯವಿಲ್ಲ. ಈ ಅಷ್ಟಾವಕ್ರರು ಇದೇ ಮುಹೂರ್ತದಲ್ಲಿ ಬಹಳ ಹಿಂದೆ ನಷ್ಟವಾದ ತಮ್ಮ ತಂದೆಯನ್ನು ನೋಡುತ್ತಾರೆ.

ಲೋಮಶಃ

ತತಸ್ತೇ ಪೂಜಿತಾ ವಿಪ್ರಾ ವರುಣೇನ ಮಹಾತ್ಮನಾ ।
ಉದತಿಷ್ಠಂಸ್ತತಃ ಸರ್ವೇ ಜನಕಸ್ಯ ಸಮೀಪತಃ ॥೧೦

ಲೋಮಶ– ಆಗ ಹಿಂದೆ ಮುಳುಗಿಸಲ್ಪಟ್ಟ ಆ ಎಲ್ಲಾ ಬ್ರಾಹ್ಮಣರು ಮಹಾತ್ಮನಾದ ವರುಣನಿಂದ ಪೂಜಿಸಲ್ಪಟ್ಟವರಾಗಿ ಜನಕನ ಸಮೀಪದಲ್ಲಿ ಮೇಲೆದ್ದು ಬಂದರು.

ಕಹೋಲಃ

ಇತ್ಯರ್ಥಮಿಚ್ಛಂತಿ ಸುತಾನ್ ಜನಾ ಜನಕ ಕರ್ಮಣಾ ।
ಯದಹಂ ನಾಶಕಂ ಕರ್ತುಂ ತತ್ಪುತ್ರಃ ಕೃತವಾನ್ ಮಮ ॥೧೧॥

ಕಹೋಲ– ಎಲೈ ಜನಕನೇ! ಇದಕ್ಕಾಗಿ ಜನರು ಮಕ್ಕಳನ್ನು ಅಪೇಕ್ಷಿಸುತ್ತಾರೆ. ನಾನು ಯಾವುದನ್ನು ಮಾಡಲು ಸಾಧ್ಯವಾಗಲಿಲ್ಲವೋ ಅದನ್ನು ನನ್ನ ಪುತ್ರನು ಮಾಡಿದ್ದಾನೆ.

ಉತಾಬಲಸ್ಯ ಬಲವಾನುತ ಬಾಲಸ್ಯ ಪಂಡಿತಃ ।
ಉತ ವಾऽವಿದುಷೋ ವಿದ್ವಾನ್ ಪುತ್ರೋ ಜನಕ ಜಾಯತೇ ॥೧೨॥

ಎಲೈ ಜನಕನೇ! ದುರ್ಬಲನಾದವನಿಗೆ ಬಲಿಷ್ಠನಾದವನು ಬಾಲಕನಂತಿರುವವನಿಗೆ ಪಂಡಿತನಾದವನು ಮತ್ತು ವಿದ್ಯಾಹೀನನಾದವನಿಗೆ ವಿದ್ಯಾವಂತನಾದವನು ಪುತ್ರನಾಗಿ ಜನಿಸುತ್ತಾನೆ.

ವಂದೀ

ಏತೇನ ತೇ ಪರಶುನಾ ಸ್ವಯಮೇವಾಂತಕೋ ನೃಪ ।
ಶಿರಾಂಸ್ಯಪಹರನ್ನಾಜೌ ರಿಪೂಣಾಂ ಭದ್ರಮಸ್ತು ತೇ ॥೧೩

ವಂದೀ– ಎಲೈ ರಾಜನೇ ನಿನ್ನ ಪುಣ್ಯಕೀರ್ತಿಯೆಂಬ ಪರಿಶುದ್ಧವಾದ ಪರ್ಶಮನಿಂದ ಯುದ್ಧದಲ್ಲಿ ಶತ್ರುಗಳ ತಲೆಯನ್ನು ಸವೆಯುತ್ತಾ ಮಂಗಳವನ್ನು ಹೊಂದುವವನಾಗು.

ಮಹದುಕ್ಥ್ಯಂ ಗೀಯತೇ ಸಾಮ ಚಾಗ್ರ್ಯಂ
ಸಮ್ಯಕ್ಸೋಮಃ ಪೀಯತೇ ಚಾತ್ರ ಸತ್ರೇ ।

ಋತ್ವಿಜಾನ್ ಭಗಾನ್ ಪ್ರತಿಜಗೃಹುಶ್ಚ ಹೃಷ್ಟಾಃ
ಸಾಕ್ಷಾದ್ ದೇವಾ ಜನಕಸ್ಯೇವ ರಾಜ್ಞಃ ॥೧೪॥

ಎಲೈ ಜನಕನೇ! ನಿನ್ನ ಸತ್ರದಲ್ಲಿ ಮುಖ್ಯಪ್ರಾಣನನ್ನು ಹೊಗಳುವ ಶ್ರೇಷ್ಠವಾದ ಸಾಮವು ಗಾನ ಮಾಡಲ್ಪಡುತ್ತದೆ. ಇಂದ್ರ ಮೊದಲಾದ ದೇವತೆಗಳು ಚೆನ್ನಾಗಿ ಸೋಮಪಾನ ಮಾಡುತ್ತಾರೆ. ಜನಕರಾಜನಾದ ನಿನ್ನಯಜ್ಞದಲ್ಲಿ ದೇವತೆಗಳು ಸಾಕ್ಷಾತ್ತಾಗಿ ಶುದ್ಧವಾದ ತಮ್ಮ ತಮ್ಮ ಭಾಗಗಳನ್ನು ಸಂತೋಷದಿಂದ ಸ್ವೀಕರಿಸಿದ್ದಾರೆ.

ಲೋಮಶಃ

ಸಮುತ್ಥಿತೇಷ್ವಥ ಸರ್ವೇಷು ರಾಜನ್
ವಿಪ್ರೇಷು ತೇಷ್ವಧಿಕಂ ಸುಪ್ರಭೇಷು ।
ಅನುಜ್ಞಾತೋ ಜನಕೇನಾಥ ರಾಜ್ಞಾ
ವಿವೇಶ ತೋಯಂ ಸಾಗರಸ್ಯೋತ ವಂದೀ ॥೧೫॥

ಲೋಮಶ- ಎಲೈ ರಾಜನಾದ ಯುಧಿಷ್ಠಿರನೇ! ಆ ಬ್ರಾಹ್ಮಣರೆಲ್ಲರೂ ಮೊದಲಿಗಿಂತ ಹೆಚ್ಚು ಕಾಂತಿಯುಕ್ತರಾಗಿ ನೀರಿನಿಂದ ಮೇಲೆದ್ದು ಬರುತ್ತಿರಲು ವಂದಿಯು ಜನಕರಾಜನ ಅನುಮತಿಯನ್ನು ಪಡೆದು ಸಮುದ್ರದ ಜಲವನ್ನು ಪ್ರವೇಶಿಸಿದನು.

ಅಷ್ಟಾವಕ್ರಃ ಪಿತರಂ ಪೂಜಯಿತ್ವಾ
ಸಂಪೂಜಿತೋ ಬ್ರಾಹ್ಮಣೈಸ್ತೈರ್ಯಥಾವತ್ ।
ಪ್ರತ್ಯಾಜಗಾಮಾಶ್ರಮಮೇವ ಚಾಗ್ರ್ಯಂ
ಜಿತ್ವಾ ಸೌತಿಂ ಸಹಿತೋ ಮಾತುಲೇನ ॥೧೬॥

ಅಷ್ಟಾವಕ್ರರಾದರೂ ತಮ್ಮ ತಂದೆಯನ್ನು ಪೂಜಿಸಿ ಆ ಬ್ರಾಹ್ಮಣರಿಂದ ಚೆನ್ನಾಗಿ ಪೂಜಿಸಲ್ಪಟ್ಟು, ಸೂತಪುತ್ರನಾದ ವಂದಿಯನ್ನು ವಾದದಲ್ಲಿ ಸೋಲಿಸಿ ತಮ್ಮ ಸೋದರಮಾವನ ಜೊತೆಯಲ್ಲಿ ತಮ್ಮ ಶ್ರೇಷ್ಠವಾದ ಆಶ್ರಮಕ್ಕೆ ಹಿಂದಿರುಗಿದರು.

ತತೋಽಷ್ಟಾವಕ್ರಮಾತುರಥಾಂತಿಕೇ ಪಿತಾ
ನದೀಂ ಸಮಂಗಾಂ ಶೀಘ್ರಮಿಮಾಂ ವಿಶಸ್ವ
ಪ್ರೋವಾಚ ಚೈನಂ ಸ ತಥಾ ವಿವೇಶ
ಸಮ್ಯೋರಂಗೈಶ್ಚಾಪಿ ಬಭೂವ ಸದ್ಯಃ ॥೧೭॥

ಆನಂತರ ಅಷ್ಟಾವಕ್ರರನ್ನು ಕುರಿತು ಅವರ ತಾಯಿಯ ಸಮೀಪದಲ್ಲಿ ತಂದೆಯಾದ ಕಹೋಲರು ಈ ಸಮಂಗಾನದಿಯನ್ನು ಶೀಘ್ರವಾಗಿ ಪ್ರವೇಶಿಸಿ ಎಂದು ಹೇಳಿದರು.

ಅಷ್ಟಾವಕ್ರರು ಹಾಗೆಯೇ ನೀರಿನಲ್ಲಿ ಪ್ರವೇಶ ಮಾಡಿ ಮುಳುಗಿ ತಕ್ಷಣದಲ್ಲಿಯೇ ತಮ್ಮ ಎಲ್ಲಾ ವಕ್ರತೆಯನ್ನು ಕಳೆದುಕೊಂಡು ಒಳ್ಳೆಯ ಅವಯವಗಳಿಂದ ಯುಕ್ತರಾದರು.

ನದೀ ಸಮಂಗಾ ಚ ಬಭೂವ ಪುಣ್ಯಾ
ಯಸ್ಯಾಂ ಸ್ನಾತೋ ಮುಚ್ಯತೇ ಕಿಲ್ಬಿಷಾದ್ಧಿ ।
ತ್ವಮಪ್ಯೇನಾಂ ಸ್ನಾನಪಾನಾವಗಾಹ್ಯೈಃ
ಸಭ್ರಾತೃಕಃ ಸಹ ಭಾರ್ಯೋ ವಿಶಸ್ವ ॥೧೮॥

ಎಲೈ ರಾಜನೇ! ಅದರಿಂದಾಗಿ ಈ ಪವಿತ್ರವಾದ ನದಿಯು ಸಮಂಗಾ ಎಂಬ ಹೆಸರನ್ನು ಹೊಂದಿದ್ದು ಇದರಲ್ಲಿ ಸ್ನಾನವನ್ನು ಮಾಡಿದವರು ಪಾಪಗಳಿಂದ ಮುಕ್ತರಾಗುತ್ತಾರೆ. ನೀನೂ ಸಹ ತಮ್ಮಂದಿರು ಮತ್ತು ಪತ್ನಿಯ ಜೊತೆಯಲ್ಲಿ ಈ ನದಿಯಲ್ಲಿ ಸ್ನಾನ, ಪಾನ, ಅವಗಾಹಗಳನ್ನು ಮಾಡಲು ನದಿಯನ್ನು ಪ್ರವೇಶಿಸು.

ಅತ್ರ ಕೌಂತೇಯ ಸಹಿತೋ ಭ್ರಾತೃಭಿಸ್ತ್ವಂ
ಸುಖೋಷಿತಃ ಸಹ ವಿಪ್ರೈಃ ಪ್ರತೀತಃ ।
ಪುಣ್ಯಾನ್ಯನ್ಯಾನಿ ಶುಚಕರ್ಮ್ಯೇಕಭಕ್ತಿ
ರ್ಮಯಾ ಸಾರ್ಧಂ ಚರಿತಾಸ್ಯಾಜಮೀಢ ॥೧೯॥

ಎಲೈ ಕೌಂತೇಯನಾದ ಯುಧಿಷ್ಠಿರನೇ! ನೀನು ಇಲ್ಲಿ ವಿಪ್ರರಿಂದ ಸನ್ಮಾನಿಸಲ್ಪಟ್ಟು ತಮ್ಮಂದಿರ ಜೊತೆಯಲ್ಲಿ ಸುಖವಾಗಿ ಕಾಲವನ್ನು ಕಳೆದಿದ್ದೀಯೇ. ಎಲೈ ಅಜಮೀಢನೇ! ಶ್ರೇಷ್ಠವಾದ ಭಕ್ತಿಯನ್ನು ಹೊಂದಿ ಶುದ್ಧವಾದ ಕರ್ಮಗಳನ್ನು ಆಚರಿಸುವ ನೀನು ನನ್ನ ಜೊತೆಯಲ್ಲಿ ಪವಿತ್ರವಾದ ಇನ್ನೂ ಕೆಲವು ತೀರ್ಥಕ್ಷೇತ್ರಗಳನ್ನು ಸಂಚರಿಸುವವನಾಗಿವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಸಪ್ತಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೆರಡನೆಯ ಅಧ್ಯಾಯ

ಕರ್ದಮಿಲಾದಿ ತೀರ್ಥಗಳ ಮಹಾತ್ಮೆ. ರೈಭ್ಯ ಯವಕ್ರೀತರ ಕಥೆ.
ಯವಕ್ರೀತನ ದುರಾಗ್ರಹ ಮತ್ತು ಬಾಲದಿಯ ಉಪಾಖ್ಯಾನ.

ಲೋಮಶಃ

ಏಷಾ ಮಧುವಿಲಾ ರಾಜನ್ ಸಮಂಗಾ ಸಂಪ್ರಕಾಶತೇ ।
ಏತದ್ ಕರ್ದಮಿಲಂ ನಾಮ ಭರತಸ್ಯಾಭಿಷೇಚನಮ್ ॥೧॥

ಲೋಮಶ– ಎಲೈ ರಾಜನೇ! ಇಲ್ಲಿ ಸಮಂಗಾನದಿಯು ಶೋಭಿಸುತ್ತಿದೆ. ಇದಕ್ಕೆ ಮೊದಲು ಮಧುವಿಲಾ ಎಂದು ಹೆಸರು. ಇಲ್ಲಿರುವುದು ಕರ್ದಮಿಲ ಎಂಬ ತೀರ್ಥ. ಇದು ಭರತನಿಗೆ ಅಭಿಷೇಕ ಮಾಡಿದ ಸ್ಥಳ.

ಅಲಕ್ಷ್ಮ್ಯಾ ಕಿಲ ಸಂಯುಕ್ತೋ ವೃತ್ರಂ ಹತ್ವಾ ಶಚೀಪತಿಃ ।
ಆಪ್ಲುತಃ ಸರ್ವಪಾಪೇಭ್ಯಃ ಸಮಂಗಾಯಾಂ ವ್ಯಮುಚ್ಯತ ॥೨॥

ಶಚೀಪತಿಯಾದ ಇಂದ್ರನು ವೃತ್ರನನ್ನು ಸಂಹಾರ ಮಾಡಿ ಅಲಕ್ಷ್ಮಿಯಿಂದ ಕೂಡಿದವನಾಗಿ ಈ ಸಮಂಗಾನದಿಯಲ್ಲಿ ಸ್ನಾನವನ್ನು ಮಾಡಿ ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾದನು.

ಏತದ್ ವಿನಶನಂ ಕುಕ್ಷೌ ಮೈನಾಕಸ್ಯ ನರರ್ಷಭ ।
ಅದಿತಿರ್ಯತ್ರ ಪುತ್ರಾರ್ಥಂ ತದನ್ನಮಪಚತ್ ಪುರಾ ॥೩॥

ಎಲೈ ಪುರುಷಶ್ರೇಷ್ಠನೇ! ಇದು ಮೈನಾಕಪರ್ವತದ ಒಳಭಾಗದಲ್ಲಿರುವ ವಿನಶನ ಎಂಬ ಕ್ಷೇತ್ರ. ಇಲ್ಲಿ ಹಿಂದೆ ಅದಿತಿಯು ಮಕ್ಕಳನ್ನು ಪಡೆಯುವ ಸಲುವಾಗಿ ಸಾಧ್ಯರನ್ನು ಉದ್ದೇಶಿಸಿ ಹವಿಷ್ಯಾನ್ನವನ್ನು ಮಾಡಿದಳು.

ಏನಂ ಪರ್ವತರಾಜಾನಮಾರುಹ್ಯ ಭರತರ್ಷಭಾಃ ।
ಅಯಶಸ್ಯಾಮಸಂಶಬ್ದ್ಯಾಮಲಕ್ಷ್ಮೀಂ ವ್ಯಪನೋತ್ಸ್ಯಥ ।
ಏತೇ ಕನಖಿಲಾ ರಾಜನ್ ಋಷೀಣಾಂ ದಯಿತಾ ನಗಾಃ ॥೪॥

ಎಲೈ ಭರತಶ್ರೇಷ್ಠರೇ! ಈ ಮೈನಾಕಪರ್ವತವನ್ನು ಏರಿ ನೀವು ಅಪಕೀರ್ತಿಯನ್ನೂ ಶಬ್ದದಿಂದ ಹೇಳಲು ಸಾಧ್ಯವಿಲ್ಲದಂತಹ ಅಸಹ್ಯವಾದ ಅಲಕ್ಷ್ಮಿಯನ್ನೂ ಕಳೆದುಕೊಳ್ಳುವಿರಿ. ಎಲೈ ರಾಜನೇ! ಇವುಗಳು ಋಷಿಗಳಿಗೆ ಪ್ರಿಯವಾದ ಕನಖಿಲ ಎಂಬ ಪರ್ವತಗಳು.

ಏಷಾ ಪ್ರಕಾಶತೇ ಗಂಗಾ ಯುಧಿಷ್ಠಿರ ಮಹಾನದೀ ।
ಸನತ್ಕುಮಾರೋ ಭಗವಾನತ್ರ ಸಿದ್ಧಿಮಗಾತ್ ಪುರಾ ॥೫॥

ಆಜಮೀಢಾವಗಾಹ್ಯೈನಾಂ ಸರ್ವಪಾಪೈಃ ಪ್ರಮೋಕ್ಷ್ಯಸೇ ॥೬॥

ಎಲೈ ಯುಧಿಷ್ಠಿರನೇ! ಈ ಮಹಾನದಿಯಾದ ಗಂಗೆಯು ಶೋಭಿಸುತ್ತಿದೆ. ಇಲ್ಲಿ ಹಿಂದೆ ಪೂಜ್ಯರಾದ ಸನತ್ಕುಮಾರರು ತಪಸ್ಸಿದ್ಧಿಯನ್ನು ಪಡೆದರು. ಎಲೈ ಆಜಮೀಢನೇ! ಇಲ್ಲಿಸ್ನಾನವನ್ನು ಮಾಡಿ ನೀನು ಸರ್ವಪಾಪಗಳಿಂದಲೂ ನಿರ್ಮುಕ್ತನಾಗುವಿ.

ಆಪಾಂ ಹ್ರದಂ ಚ ಪುಣ್ಯಾಖ್ಯಂ ಭೃಗುತುಂಗಂ ಚ ಪರ್ವತಮ್ ।
ಉಷ್ಣಿಗಂಗೇ ಚ ಕೌಂತೇಯ ಸಾಮಾತ್ಯಃ ಸಮುಪಸ್ಪೃಶ ॥೭॥

ಇದು ಪುಣ್ಯ ಎಂಬ ಹೆಸರಿನ ಆಳವಾದ ಸರೋವರ. ಇದು ಭೃಗುತುಂಗ ಎಂಬ ಪರ್ವತ. ಇವು ಉಷ್ಣಮತ್ತು ಶೀತಲ ಗಂಗೆಗಳು. ಎಲೈ ಕೌಂತೇಯನೇ! ಅಮಾತ್ಯರಿಂದ ಒಡಗೂಡಿ ಇಲ್ಲಿಸ್ನಾನವನ್ನು ಮಾಡು.

ಆಶ್ರಮಃ ಸ್ಥೂಲಶಿರಸೋ ರಮಣೀಯಃ ಪ್ರಕಾಶತೇ ।
ಅತ್ರ ಮಾನಂ ಚ ಕೌಂತೇಯ ಕ್ರೋಧಂ ಚೈವ ವಿವರ್ಜಯ ॥೮॥

ಸ್ಥೂಲಶಿರಸ್ ಋಷಿಗಳ ಸುಂದರವಾದ ಈಆಶ್ರಮವು ಶೋಭಿಸುತ್ತಿದೆ. ಎಲೈ ಕೌಂತೇಯನೇ! ಇಲ್ಲಿ ಗರ್ವವನ್ನು ಮತ್ತು ಕ್ರೋಧವನ್ನು ತ್ಯಜಿಸು.

ಏಷ ರೈಭ್ಯಾಶ್ರಮಃ ಶ್ರೀಮಾನ್ ಪಾಂಡವೇಯ ಪ್ರಕಾಶತೇ ।
ಭಾರದ್ವಾಜೋ ಯತ್ರ ಕವಿರ್ಯವಕ್ರೀತೋ ವ್ಯನಶ್ಯತ ॥೯॥

ಎಲೈ ಪಾಂಡವೇಯನೇ! ಇಲ್ಲಿ ಪ್ರಕಾಶಿಸುತ್ತಿರುವುದು ಕಾಂತಿಯುಕ್ತವಾದ ರೈಭ್ಯಾಶ್ರಮ. ಭರದ್ವಾಜರ ಪುತ್ರನಾದ ಕವಿಯಾದ ಯವಕ್ರೀತನು ಇಲ್ಲಿನಾಶವನ್ನು ಹೊಂದಿದನು.

ಈ ಆಶ್ರಮವು ಅನೇಕ ಫಲ-ಪುಷ್ಪಗಳಿಂದ ಶೋಭಿತವಾಗಿ, ಅನೇಕ ಪಕ್ಷಿಗಳ ಘೋಷದಿಂದ ಕೂಡಿದ್ದಾಗ ತಾಪಸರಿಗೆ ಆಶ್ರಯವಾಗಿ ಶ್ರೇಷ್ಠವಾಗಿದೆ.

ಯುಧಿಷ್ಠಿರಃ

ಕಥಂ ಯುಕ್ತೋಽಭವದ್ಯಷಿರ್ಭರದ್ವಾಜಃ ಪ್ರತಾಪವಾನ್ ।
ಕಿಮರ್ಥಂ ಚ ಯವಕ್ರೀತಃ ಪುತ್ರೋಽನಶ್ಯತ ವೈ ಮುನೇಃ ॥೧೦॥

ಯುಧಿಷ್ಠಿರ– ಪ್ರತಾಪಶಾಲಿಗಳಾದ ಭರದ್ವಾಜ ಋಷಿಗಳು ಇಲ್ಲಿ ಎಂತಹ ಯೋಗವನ್ನು ಮಾಡಿದರು? ಆ ಋಷಿಗಳ ಪುತ್ರನಾದ ಯವಕ್ರೀತನು ಏಕೆ ನಾಶವನ್ನು ಹೊಂದಿದನು?

ಏತತ್ ಸರ್ವಂ ಯಥಾವೃತ್ತಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಕರ್ಮಭರ್ದೇವಕಲ್ಪಾನಾಂ ಕೀರ್ತ್ಯಮಾನೈರ್ಭೃಶಂ ರಮೇ ॥೧೧॥

ಈ ಎಲ್ಲಾ ವೃತ್ತಾಂತವನ್ನೂ ಯಥಾರ್ಥವಾಗಿ ಕೇಳಲು ಬಯಸುತ್ತೇನೆ. ದೇವತೆಗಳಿಗೆ ಸಮಾನರಾದ ಇಂತಹ ಋಷಿಗಳ ಕರ್ಮಗಳನ್ನು ನೀನು ಕೀರ್ತಿಸುತ್ತಿರಲು ನಾನು ಅದನ್ನು ಕೇಳಿ ಬಹಳ ಸಂತೋಷಗೊಂಡಿದ್ದೆನೆ.

ಲೋಮಶಃ

ಭರದ್ವಾಜಶ್ಚ ರೈಭ್ಯಶ್ಚ ಸಖಾಯೌ ಸಂಬಭೂವತುಃ ।
ತಾವೂಷತುರಿಹಾತ್ಯಂತಂ ಪ್ರೀಯಮಾಣಾವನಂತರಮ್ ॥೧೨॥

ಲೋಮಶ– ಭರದ್ವಾಜ ಮತ್ತು ರೈಭ್ಯರಿಬ್ಬರು ಸ್ನೇಹಿತರಾಗಿದ್ದರು. ಅವರಿಬ್ಬರೂ ಪರಸ್ಪರ ಪ್ರೀತಿಯಿಂದ ಒಬ್ಬರನ್ನೊಬ್ಬರು ಅಗಲದೆ ಇಲ್ಲಿ ವಾಸವನ್ನು ಮಾಡುತ್ತಿದ್ದರು.

ರೈಭ್ಯಸ್ಯ ತು ಸುತಾವಾಸ್ತಾಮರ್ವಾವಸುಪರಾವಸೂ ।
ಆಸೀದ್ ಯವಕ್ರೀಃ ಪುತ್ರಸ್ತು ಭರದ್ವಾಜಸ್ಯ ಭಾರತ ॥೧೩॥

ರೈಭ್ಯರಿಗೆ ಅರ್ವಾವಸು ಮತ್ತು ಪರಾವಸು ಎಂಬ ಇಬ್ಬರು ಮಕ್ಕಳು. ಭರದ್ವಾಜರಿಗಾದರೂ ಯವಕ್ರೀತನೆಂಬ ಒಬ್ಬನೇ ಮಗ.

ರೈಭ್ಯೋ ವಿದ್ವಾನ್ ಸಹಾಪತ್ಯಸ್ತಪಸ್ವೀ ಚೇತರೋಽಭವತ್ ।
ತಯೋಶ್ಚಾಪ್ಯತುಲಾ ಪ್ರೀತಿರ್ಬಾಲ್ಯಾತ್ ಪ್ರಭೃತಿ ಭಾರತ ॥೧೪॥

ರೈಭ್ಯರು ಮತ್ತು ಅವರ ಮಕ್ಕಳು ವಿದ್ವಾಂಸರಾಗಿದ್ದರು. ಭರದ್ವಾಜರು ಮಾತ್ರ ತಪಸ್ಸಿನಲ್ಲಿಯೇ ನಿರತರಾಗಿದ್ದರು. ಎಲೈ ಭಾರತನೇ! ಅವರಿಬ್ಬರಿಗೂ ಬಾಲ್ಯದಿಂದಲೂ ಪರಸ್ಪರವಾಗಿ ಅಸದೃಶವಾದ ಪ್ರೀತಿಯಿದ್ದಿತು.

ಯವಕ್ರೀಃ ಪಿತರಂ ದೃಷ್ಟ್ವಾ ತಪಸ್ವಿನಮಸತ್ಕೃತಮ್ ।
ದೃಷ್ಟ್ವಾ ಚ ಸತ್ಕೃತಂ ಏಪ್ಸೈ ರೈಭ್ಯಂ ಪುತ್ರೈಃ ಸಹಾನಘ ॥೧೫॥

ಪರ್ಯತಪ್ಯತ ತೇಜಸ್ವೀ ಮನ್ಯುನಾಽಭಪರಿಪ್ಲುತಃ ।
ತಪಸ್ತೇಪೇ ತತೋ ಘೋರಂ ವೇದಜ್ಞಾನಾಯ ಪಾಂಡವ ॥೧೬॥

ಯವಕ್ರೀತನು ತನ್ನ ತಂದೆಯಾದ ಭರದ್ವಾಜರು ತಪಸ್ವಿಗಳಾಗಿ ಯಾವ ಸತ್ಕಾರವನ್ನು ಪಡೆಯದಿರುವುದನ್ನೂ, ರೈಭ್ಯರು ಮತ್ತು ಅವನ ಮಕ್ಕಳು ಎಲ್ಲ ಬ್ರಾಹ್ಮಣರಿಂದಲೂ ಸತ್ಕಾರವನ್ನು ಪಡೆಯುವುದನ್ನೂ ನೋಡಿ ಪರಿತಪಿಸಿದನು.

ಎಲೈ ಅನಘನಾದ ಪಾಂಡವನೇ! ತೇಜಸ್ವಿಯಾದ ಅವನು ಕೋಪದಿಂದ ಕೂಡಿದವನಾಗಿ ವೇದಜ್ಞಾನವನ್ನು ಪಡೆಯುವ ಉದ್ದೇಶದಿಂದ ಘೋರವಾದ ತಪಸ್ಸನ್ನು ಆಚರಿಸಿದನು.

ಸ ಸಮಿದ್ಧೇ ಮಹತ್ಯಗ್ನೌ ಶರೀರಮುಪತಾಪಯನ್ ।
ಜನಯಾಮಾಸ ಸಂತಾಪಮಿಂದ್ರಸ್ಯ ಸುಮಹಾತಪಾಃ ॥೧೭॥

ಅವನು ಉರಿಯುತ್ತಿರುವ ದೊಡ್ಡ ಅಗ್ನಿಯ ಸಮೀಪದಲ್ಲಿ ತನ್ನ ಶರೀರವನ್ನು ಒಡ್ಡಿ ದೊಡ್ಡ ತಪಸ್ಸನ್ನು ಮಾಡುತ್ತಾ ಇಂದ್ರನಿಗೆ ಸಂತಾಪವನ್ನುಂಟು ಮಾಡಿದನು.

ತತ ಇಂದ್ರೋ ಯವಕ್ರೀತಮುಪಗಮ್ಯ ಯುಧಿಷ್ಠಿರ ।
ಅಬ್ರವೀತ್ ಕಸ್ಯ ಹೇತೋಸ್ತ್ವಮಾಸ್ಥಿತಸ್ತಪ ಉತ್ತಮಮ್ ॥೧೮॥

ಎಲೈ ಯುಧಿಷ್ಠಿರನೇ! ಆಗ ಇಂದ್ರನು ಯವಕ್ರೀತನ ಸಮೀಪಕ್ಕೆ ಬಂದು ಯಾವ ಉದ್ದೇಶದಿಂದ ಇಂತಹ ಶ್ರೇಷ್ಠವಾದ ತಪಸ್ಸನ್ನು ಆಚರಿಸುತ್ತಿದ್ದೀಯೆ ಎಂದು ಕೇಳಿದನು.

ಯವಕ್ರೀತಃ

ದ್ವಿಜಾನಾಮನಧೀತಾ ವೈ ವೇದಾಃ ಸುರಗಣಾರ್ಚಿತ ।
ಪ್ರತಿಭಾಂತ್ವಿತಿ ತಪ್ಯೇಽಹಮಿದಂ ಪರಮಕಂ ತಪಃ ॥೧೯॥

ಯವಕ್ರೀತ– ಎಲೈ ಸುರಗಣಾರ್ಚಿತನಾದ ಇಂದ್ರನೇ! ಬೇರೆ ಬ್ರಾಹ್ಮಣರು ಅಧ್ಯಯನ ಮಾಡದಿರುವ ವೇದವು ನನಗೆ ಪ್ರತಿಭಾತವಾಗಬೇಕೆಂಬ ಉದ್ದೇಶದಿಂದ ಈ ಶ್ರೇಷ್ಠವಾದ ತಪಸ್ಸನ್ನು ಮಾಡುತ್ತಿದ್ದೇನೆ.

ಸ್ವಾಧ್ಯಾಯಾರ್ಥಂ ಸಮಾರಂಭೋ ಮಮಾಯಂ ಪಾಕಶಾಸನ ।
ತಪಸಾ ಜ್ಞಾತುಮಿಚ್ಛಾಮಿ ಸರ್ವಜ್ಞಾನಾನಿ ಕೌಶಿಕ ॥೨೦॥

ಎಲೈ ಪಾಕಶಾಸನನೇ! ವೇದಜ್ಞಾನವನ್ನು ಪಡೆಯುವ ಸಲುವಾಗಿ ನನ್ನ ಈ ಪ್ರಯತ್ನವಿದೆ. ಎಲೈ ಕೌಶಿಕನೇ! ನಾನು ತಪಸ್ಸಿನ ಬಲದಿಂದ ಎಲ್ಲಾ ಜ್ಞಾನವನ್ನು ಪಡೆಯಲು ಇಚ್ಛಿಸುತ್ತೇನೆ.

ಕಾಲೇನ ಮಹತಾ ವೇದಾಃ ಶಕ್ಯಾ ಗುರುಮುಖಾದ್ ವಿಭೋ ।
ಪ್ರಾಪ್ತುಂ ತಸ್ಮಾದಯಂ ಯತ್ನಃ ಪರಮೋ ಮೇ ಸಮಾಸ್ಥಿತಃ ॥೨೧॥

ಎಲೈ ವಿಭುವೇ! ಗುರುಮುಖದಿಂದ ವೇದಗಳನ್ನು ಅಧ್ಯಯನ ಮಾಡುವುದಕ್ಕೆ ಬಹಳ ಕಾಲವು ಬೇಕಾಗುತ್ತದೆ. ಆದ್ದರಿಂದ ಅದಿಲ್ಲದೇ ವೇದಜ್ಞಾನವನ್ನು ಪಡೆಯಲು ಇಂತಹ ಶ್ರೇಷ್ಠವಾದ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಇಂದ್ರಃ

ಅಮಾರ್ಗ ಏಷ ವಿಪ್ರರ್ಷೇ ಯೇನ ತ್ವಂ ಯಾತುಮಿಚ್ಛಸಿ ।
ಕಂ ವಿಘಾತೇನ ತೇ ವಿಪ್ರ ಗಚ್ಛಾದೀಹಿ ಗುರೋರ್ಮುಖಾತ್ ॥೨೨॥

ಇಂದ್ರ– ಎಲೈ ವಿಪ್ರರ್ಷಿಯೇ! ನೀನು ಯಾವ ಮಾರ್ಗದಿಂದ ಹೋಗಲು ಬಯಸುತ್ತೀಯೋ ಅದು ಸರಿಯಾದ ಮಾರ್ಗವಲ್ಲ. ಶರೀರವನ್ನು ಏಕೆ ವ್ಯರ್ಥವಾಗಿ ಘಾಸಿಗೊಳಿಸುತ್ತಿದ್ದೀಯೆ? ಎಲೈ ವಿಪ್ರನೇ! ಹೋಗಿ ಗುರುಮುಖದಿಂದ ಅಧ್ಯಯನವನ್ನು ಮಾಡು.

ಲೋಮಶಃ

ಏವಮುಕ್ತ್ವಾ ಗತಃ ಶಕ್ರೋ ಯವಕ್ರೀರಪಿ ಭಾರತ ।
ಭೂಯ ಏವಾಕರೋದ್ ಯತ್ನಂ ತಪಸ್ಯಮಿತವಿಕ್ರಮಃ ॥೨೩॥

ಲೋಮಶ– ಎಲೈ ಭಾರತನೇ! ಹೀಗೆ ಹೇಳಿ ಇಂದ್ರನು ಹೊರಟು ಹೋದನು. ಅಮಿತವಿಕ್ರಮನಾದ ಯವಕ್ರೀತನಾದರೂ ಇನ್ನೂ ಉಗ್ರವಾದ ತಪಸ್ಸನ್ನು ಮಾಡಲು ಪ್ರಯತ್ನವನ್ನು ಮಾಡಿದನು.

ಘೋರೇಣ ತಪಸಾ ರಾಜಂಸ್ತಪ್ಯಮಾನೋ ಮಹತ್ತಪಃ ।
ಸಂತಾಪಯಾಮಾಸ ಭೃಶಂ ದೇವೇಂದ್ರಮಿತಿ ನಃ ಶ್ರುತಮ್ ॥೨೪॥

ತಂ ತಥಾ ತಪ್ಯಮಾನಂ ತು ತಪಸ್ತೀವ್ರಂ ಮಹಾಮುನಿಮ್ ।
ಉಪೇತ್ಯ ಬಲಭಿದ್ ದೇವೋ ವಾರಯಾಮಾಸ ವೈ ಪುನಃ ॥೨೫॥

ಅವನು ತನ್ನ ತಪಸ್ಸಿನಿಂದ ದೇವೇಂದ್ರನನ್ನೂ ಸಂತಾಪ ಪಡಿಸಿದನೆಂದು ನಾವು ಕೇಳಿದ್ದೇವೆ. ಹಾಗೆಯೇ ತೀವ್ರವಾದ ತಪಸ್ಸನ್ನು ಆಚರಿಸುತ್ತಿರುವ ಆ ಮಹಾಮುನಿಯ ಸಮೀಪಕ್ಕೆ ಇಂದ್ರನು ಪುನಃ ಬಂದು ಅವನ ತಪಸ್ಸನ್ನು ತಡೆಯುವ ಪ್ರಯತ್ನವನ್ನು ಮಾಡಿದನು.

ಇಂದ್ರಃ

ಅಶಕ್ಯೋಽರ್ಥಃ ಸಮಾರಬ್ಧೋ ನೈತದ್ ಬುದ್ಧಿಕೃತಂ ತವ ।
ಪ್ರತಿಭಾಸ್ಯಂತಿ ವೈ ವೇದಾಸ್ತವ ಚೈವ ಪಿತುಶ್ಚ ತೇ ॥೨೬॥

ಇಂದ್ರ– ನೀನು ಅಸಾಧ್ಯವಾದುದನ್ನು ಸಾಧಿಸಲು ಹೊರಟಿದ್ದೀಯೆ. ನಿನ್ನ ಈ ಬುದ್ಧಿಯು ಸರಿಯಾದುದಲ್ಲ. ಈ ರೀತಿಯಲ್ಲಿನಿನಗಾಗಲೀ ಅಥವಾ ನಿನ್ನ ತಂದೆಗಾಗಲೀ ವೇದಗಳು ಪ್ರತಿಭಾತವಾಗುವುದಿಲ್ಲ.

ಯವಕ್ರೀತಃ

ನ ಚೈತದೇವಂ ಕ್ರಿಯತೇ ದೇವರಾಜ ಮಮೇಪ್ಸಿತಮ್ ।
ಮಹತಾ ನಿಯಮೇನಾಹಂ ತಪ್ಸ್ಯೇ ಘೋರತರಂ ತಪಃ ॥೨೭॥

ಯವಕ್ರೀತ– ಎಲೈ ದೇವರಾಜನೇ! ನೀನು ನನ್ನ ಅಭೀಷ್ಟವನ್ನು ನೆರವೇರಿಸದಿದ್ದರೆ ಇನ್ನೂ ಹೆಚ್ಚು ನಿಯಮಗಳಿಂದ ಇದಕ್ಕಿಂತ ಘೋರವಾದ ತಪಸ್ಸನ್ನು ಆಚರಿಸುವೆನು.

ಸಮಿದ್ದೇಽಗ್ನಾವುಪಕೃತ್ಯಾಂಗಮಂಗಂ
ಹೋಷ್ಯಾಮಿ ವಾ ಮಘವಂಸ್ತನ್ನಿಬೋಧ ।
ಯದ್ಯೇತದೇವಂ ನ ಕರೋಷಿ ಕಾಮಂ
ಮಮೇಪ್ಸಿತಂ ದೇವರಾಜೇಹ ಸರ್ವಮ್ ॥೨೮॥

ದೇವರಾಜನಾದ ಇಂದ್ರನೇ! ನನ್ನ ಅಭೀಷ್ಟವೆಲ್ಲವನ್ನೂ ನೀನು ಕೊಡುವುದಿಲ್ಲವಾದರೆ ನನ್ನ ದೇಹದ ಪ್ರತಿಯೊಂದು ಅಂಗವನ್ನು ಕತ್ತರಿಸಿ ಹೋಮವನ್ನು ಮಾಡುತ್ತೇನೆ. ಇದನ್ನು ತಿಳಿ.

ಲೋಮಶಃ

ನಿಶ್ಚಯಂ ತಮಭಿಜ್ಞಾಯ ಮುನೇಸ್ತಸ್ಯ ಮಹಾತ್ಮನಃ ।
ಪ್ರತಿವಾರಣಹೇತ್ವರ್ಥಂ ಬುದ್ಧ್ಯಾ ಸಂಚಿಂತ್ಯ ಬುದ್ಧಿಮಾನ್ ॥೨೯॥

ತತ ಇಂದ್ರೋಽಕರೋದ್ ರೂಪಂ ಬ್ರಾಹ್ಮಣಸ್ಯ ತಪಸ್ವಿನಃ ।
ಅನೇಕಶತಸರ್ವಸ್ಯ ದುರ್ಬಲಸ್ಯ ಸಯಕ್ಷ್ಮಣಃ ॥೩೦॥

ಲೋಮಶ– ಆಗ ಇಂದ್ರನು ಆ ಮಹಾತ್ಮನಾದ ಋಷಿಯ ಆ ದುರಾಗ್ರಹ ಪೂರ್ವಕವಾದ ನಿಶ್ಚಯವನ್ನು ಪ್ರತಿಬಂಧಿಸುವ ಸಲುವಾಗಿ ಬುದ್ಧಿವಂತನಾದ ಅವನು ತನ್ನ ಬುದ್ಧಿಯಿಂದ ಆಲೋಚಿಸಿ, ನೂರಾರುವರ್ಷ ವಯಸ್ಸಿನ ಯಕ್ಷ್ಮರೋಗ ಪೀಡಿತನಾದ ದುರ್ಬಲನಾದ ಒಬ್ಬ ಶೋಚನೀಯನಾದ ಬ್ರಾಹ್ಮಣನ ರೂಪವನ್ನು ಧರಿಸಿದನು.

ಯವಕ್ರೀತಸ್ಯ ಯತ್ ತೀರ್ಥಮುಚಿತಂ ಶೌಚಕರ್ಮಣಿ ।
ಭಾಗೀರಥ್ಯಾಂ ತತ್ರ ಸೇತುಂ ವಾಲುಕಾಭಿಶ್ಚಕಾರ ಸಃ ॥೩೧॥

ಆನಂತರ ಅವನು ಯವಕ್ರೀತನು ಸ್ನಾನಾದಿಗಳನ್ನು ಮಾಡುವ ಭಾಗೀರಥಿಯ ತೀರ್ಥಕ್ಕೆ ಹೋಗಿ ಅಲ್ಲಿ ಮರಳಿನ ಕಣಗಳಿಂದ ಸೇತುವೆಯನ್ನು ಕಟ್ಟಲು ಆರಂಭಿಸಿದನು.

ಯದಾऽಸ್ಯ ವದತೋ ವಾಕ್ಯಂ ನ ಸ ಚಕ್ರೇ ದ್ವಿಜೋತ್ತಮಃ ।
ವಾಲುಕಾಭಿಸ್ತತಃ ಶಕ್ರೋ ಗಂಗಾಂ ಸಮಭಿಪೂರಯನ್ ।
ವಾಲುಕಾಮುಷ್ಟಿಮನಿಶಂ ಭಾಗೀರಥ್ಯಾಂ ವ್ಯಸರ್ಜಯನ್ ॥೩೨॥

ಸೇತುಮಭ್ಯಾರಭಚ್ಛಕ್ರೋ ಯವಕ್ರೀತಂ ನಿದರ್ಶಯನ್ ॥೩೩॥

ಯಾವಾಗ ದ್ವಿಜಶ್ರೇಷ್ಠನಾದ ಯವಕ್ರೀತನು ತನ್ನ ಮಾತುಗಳನ್ನು ಕೇಳಲಿಲ್ಲವೋ ಆಗ ಇಂದ್ರನು ಮರಳುಗಳಿಂದ ಗಂಗೆಯನ್ನು ತುಂಬಲು ಪ್ರಾರಂಭಿಸಿದನು. ಇಂದ್ರನು ಯವಕ್ರೀತನಿಗೆ ದೃಷ್ಟಾಂತಪೂರ್ವಕವಾಗಿ ಬುದ್ಧಿಯನ್ನು ಕಲಿಸುವ ಉದ್ದೇಶದಿಂದ ಭಾಗೀರಥಿಯಲ್ಲಿ ಒಂದೊಂದೇ ಮುಷ್ಟಿ ಪ್ರಮಾಣದ ಮರಳನ್ನು ಎಸೆಯುತ್ತಾ ಸೇತುವೆಯನ್ನು ಕಟ್ಟಲು ಪ್ರಾರಂಭಿಸಿದನು.

ತಂ ದದರ್ಶ ಯವಕ್ರೀತೋ ಯತ್ನವಂತಂ ನಿಬಂಧನೇ ।
ಪ್ರಹಸಂಶ್ಚಾಬ್ರವೀದ್ ವಾಕ್ಯಮಿದಂ ಸ ಮುನಿಪುಂಗವಃ ॥೩೪॥

ಸೇತುವೆಯನ್ನು ಕಟ್ಟಲು ಪ್ರಯತ್ನಪಡುತ್ತಿರುವ ಆ ಬ್ರಾಹ್ಮಣನನ್ನು ಯವಕ್ರೀತನು ನೋಡಿದನು. ಆ ಮುನಿಪುಂಗವನು ನಗುತ್ತಾ ಅವನನ್ನು ಕುರಿತು ಹೀಗೆ ಮಾತನಾಡಿದನು.

ಕಿಮಿದಂ ವರ್ತತೇ ಬ್ರಹ್ಮನ್ ಕಿಂ ಚ ತೇ ಹ ಚಿಕೀರ್ಷಿತಮ್ ।
ಅತೀವ ಹಿ ಮಹಾನ್ ಯತ್ನಃ ಕ್ರಿಯತೇऽಯಂ ನಿರರ್ಥಕಃ

ಎಲೈ ಬ್ರಾಹ್ಮಣನೇ! ಇದೇನನ್ನು ನಡೆಸುತ್ತಿರುವಿ? ನೀನು ಏನು ಮಾಡಲು ಇಚ್ಛಿಸುತ್ತಿದ್ದಿಯೆ? ನೀನು ವ್ಯರ್ಥವಾದ ಈ ಮಹಾಪ್ರಯತ್ನವನ್ನು ಮಾಡುತ್ತಿದ್ದೀಯಪ್ಪೆ.

ಇಂದ್ರಃ

ಬಂಧಿಷ್ಯೇ ಸೇತುನಾ ಗಂಗಾಂ ಸುಖಿಃ ಪಂಥಾ ಭವಿಷ್ಯತಿ ।
ಕ್ಲಿಶ್ಯತೇ ಹಿ ಜನಸ್ತಾತ ತರಮಾಣಃ ಪುನಃ ಪುನಃ ॥೩೬॥

ಇಂದ್ರ– ಎಲೈ ಪ್ರೀತಿಪಾತ್ರನೇ! ನಾನು ಸೇತುವೆಯನ್ನು ಕಟ್ಟಿ ಗಂಗೆಯನ್ನು ಬಂಧಿಸುತ್ತೇನೆ. ಆಗ ಸೇತುವೆಯ ಮೇಲೆ ಓಡಾಡುವವರಿಗೆ ಮಾರ್ಗವು ಸುಗಮವಾಗುತ್ತದೆ. ಗಂಗೆಯನ್ನು ದಾಟುವ ಜನರೆಲ್ಲರೂ ಪುನಃ ಪುನಃ ಕ್ಲೇಶಪಡುತ್ತಿದ್ದಾರಪ್ಪೆ?

ಯವಕ್ರೀತಃ

ನಾಯಂ ಶಕ್ಯಸ್ತ್ವಯಾ ಬದ್ಧುಂ ಮಹಾನೋಘಸ್ತಪೋಧನ ।
ಅಶಕ್ಯಾದ್ ವಿನಿವರ್ತಸ್ವ ಶಕ್ಯಮರ್ಥಂ ಸಮಾರಭ ॥೩೭॥

ಯವಕ್ರೀತ– ಎಲೈ ತಪೋದನನೇ! ಈ ಮಹಾಪ್ರವಾಹವುಳ್ಳ ಗಂಗೆಯನ್ನು ನೀನು ಬಂಧಿಸಲು ಸಾಧ್ಯವಿಲ್ಲ. ಅಸಾಧ್ಯವಾದ ಈ ಪ್ರಯತ್ನವನ್ನು ಮಾಡುವುದನ್ನು ಬಿಟ್ಟು ಸಾಧ್ಯವಾದ ಬೇರೆ ಏನಾದರೂ ಕಾರ್ಯವನ್ನು ಪ್ರಾರಂಭಿಸು.

ಇಂದ್ರಃ

ಯಚ್ಚೈವ ಭವತಾ ಚೇದಂ ತಪೋ ವೇದಾರ್ಥಮುದ್ಯತಮ್ ।
ಅಶಕ್ಯಂ ತದ್ದದಸ್ಮಾಭಿರಯಂ ಭಾರಃ ಸಮಾಹಿತಃ ॥೩೮॥

ಇಂದ್ರ– ನೀನು ಹೇಗೆ ವೇದಾರ್ಥವನ್ನು ಪಡೆಯಲು ಈ ತಪಸ್ಸನ್ನು ಆಚರಿಸುತ್ತಿದ್ದೀಯೋ ಅದರಂತೆ ನಾನೂ ಸಹ ಅಶಕ್ಯವಾದ ಈ ಕಾರ್ಯವನ್ನುಮಾಡಲು ಪ್ರಯತ್ನಪಡುತ್ತಿದ್ದೇನೆ.

ಯವಕ್ರೀತಃ

ಯಥಾ ತವ ನಿರರ್ಥೋಽಯಮಾರಂಭಸ್ತ್ರಿದಶೇಶ್ವರ ।
ತಥಾ ಯದಿ ಮಮಾಪೀದಂ ಮನ್ಯಸೇ ಪಾಕಶಾಸನ ॥೩೯॥

ಕ್ರಿಯತಾಂ ಯದ್ ಭವೇಚ್ಛಕ್ಯಂ ತ್ವಯಾ ಸುರಗಣೇಶ್ವರ ।
ವರಾಂಶ್ಚ ಮೇ ಪ್ರಯಚ್ಛಾನ್ಯಾನ್ ಯೈರನ್ಯಾನ್ ಭವಿತಾಸ್ಮ್ಯತಿ ॥೪೦॥

ಯವಕ್ರೀತ– ಎಲೈ ಸುರೇಶ್ವರನೇ! ನಿನ್ನ ಈ ಪ್ರಯತ್ನವು ವ್ಯರ್ಥವಾದಂತೆ ನನ್ನ ತಪಸ್ಸೂ ಸಹ ವ್ಯರ್ಥವೆಂದು ನೀನು ತಿಳಿಯುವುದಾದರೆ, ಎಲೈ ಸುರಗಣೇಶ್ವರನಾದ ಪಾಕಶಾಸನವೇ! ನಿನಗೆ ಯಾವುದು ಸಾಧ್ಯವೋ ಅದನ್ನೇ ಮಾಡು ನನಗಾದರೂ ಉಳಿದವರನ್ನು ಅತಿಶಯಿಸಿ ನಾನು ಜೀವಿಸಿರುವಂತಹ ವರಗಳನ್ನು ಕೊಡು.

ಲೋಮಶಃ

ತಸ್ಮೈ ಪ್ರಾದಾದ್ ವರಾನಿಂದ್ರ ಉಕ್ತವಾನ್ ಯಾನ್ ಮಹಾತಪಾಃ ।
ಪ್ರತಿಭಾಸ್ಯಂತಿ ತೇ ವೇದಾಃ ಪಿತ್ರಾ ಸಹ ಯಥೇಪ್ಸಿತಾಃ ॥೪೧॥

ಯಚ್ಚಾನ್ಯತ್‌ಕಾಂಕ್ಷಸೇ ಕಾಮಂ ಯವಕ್ರೀರ್ಗಮ್ಯತಾಮಿತಿ ।
ಸ ಲಬ್ಧಕಾಮಃ ಪಿತರಂ ಸಮೇತ್ಯಾಥೇಮಬ್ರವೀತ್ ॥೪೨॥

ಲೋಮಶ– ಇಂದ್ರನು ಮಹಾತಪಸ್ವಿಯಾದ ಯವಕ್ರೀತನು ಕೇಳಿದ ವರಗಳನ್ನು ಕೊಟ್ಟನು. ನಿನಗೂ ನಿನ್ನ ತಂದೆಗೂ ನಿಮಗೆ ಅಭೀಷ್ಟವಾದ ವೇದಗಳು ಪ್ರತಿಭಾತವಾಗುತ್ತವೆ. ಮತ್ತು ನಿನ್ನ ಮನಸ್ಸಿನಲ್ಲಿ ಬೇರೆ ಏನು ಇಷ್ಟಾರ್ಥವಿದೆಯೋ ಅವೆಲ್ಲವನ್ನೂ ಕೊಟ್ಟಿದ್ದೇನೆ. ಯವಕ್ರೀತನೇ! ಇನ್ನು ನೀನು ಹೋಗು ಎಂದು ಹೇಳಿದನು. ಯವಕ್ರೀತನಾದರೂ ತನ್ನ ಆಸೆಯು ಇಡೇರಿದವನಾಗಿ ಹಿಂದಿರುಗಿ ಬಂದು ತಂದೆಯನ್ನು ಸಮೀಪಿಸಿ ಹೀಗೆ ಮಾತನಾಡಿದನು.

ಪ್ರತಿಭಾಸ್ಯಂತಿ ವೈ ವೇದಾ ಮಮ ತಾತಸ್ಯ ಚೋಭಯೋಃ ।
ಅತಿ ಚಾನ್ಯಾನ್ ಭವಿಷ್ಯಾಮೋ ವರಾ ಲಬ್ಧಾಸ್ತದಾ ಮಯಾ ॥೪೩॥

ನನಗೂ ಮತ್ತು ತಂದೆಯಾದ ನಿನಗೂ ಇಬ್ಬರಿಗೂ ಎಲ್ಲ ವೇದಗಳು ಪ್ರತಿಭಾತವಾಗುತ್ತದೆ. ನಾನು ವರಗಳನ್ನು ಪಡೆದಿದ್ದೇನೆ. ನಾವಿಬ್ಬರೂ ಉಳಿದವರನ್ನು ಮೀರಿ ಶೋಭಿಸುವೆವು.

ಭರದ್ವಾಜಃ

ದರ್ಪಸ್ತೇ ಭವಿತಾ ತಾತ ವರಾಂಲ್ಲಬ್ಧ್ವಾ ಯಥೇಪ್ಸಿತಾನ್ ।
ಸ ದರ್ಪಪೂರ್ಣಃ ಕೃಪಣಃ ಕ್ಷಿಪ್ರಮೇವ ವಿನಂಕ್ಷ್ಯಸಿ ॥೪೪॥

ಭರದ್ವಾಜ– ಎಲೈ ಪ್ರೀತಿಪಾತ್ರನೇ! ನೀನು ಅಭೀಷ್ಟವಾದ ವರಗಳನ್ನು ಪಡೆದಿರುವುದರಿಂದ ನಿನಗೆ ದರ್ಪವುಂಟಾಗುತ್ತದೆ. ದರ್ಪಪೂರ್ಣನಾದ ಕೃಪಣನಾದ ಅಂತಹ ನೀನು ಶೀಘ್ರವಾಗಿ ನಾಶವನ್ನು ಹೊಂದುವಿ.

ಆತ್ರಾಪ್ಯುದಾಹರಂತೀಮಾ ಗಾಥಾ ದೇವೈರುದಾಹೃತಾಃ ।
ಮುನಿರಾಸೀತ್ ಪುರಾ ಪುತ್ರ ಬಾಲಧಿರ್ನಾಮ ವೀರ್ಯವಾನ್ ॥೪೫॥

ಸ ಪುತ್ರಶೋಕಾದುದ್ವಿಗ್ನಪತ್ತೇಪೇ ಸುದುಷ್ಕರಮ್ ।
ಭೇವನ್ಮಮ ಸುತೋಽಮರ್ತ್ಯ ಇತಿ ತಂ ಲಬ್ಧವಾಂಶ್ಚ ಸಃ ॥೪೬॥

ಈ ವಿಷಯದಲ್ಲಿ ದೇವತೆಗಳು ಹಾಡಿದ ಒಂದು ಗಾಥೆಯನ್ನು ದೊಡ್ಡವರು ಹೇಳುತ್ತಾರೆ. ಎಲೈ ಪುತ್ರನೇ! ಹಿಂದೆ ಪ್ರತಾಪಶಾಲಿಯಾದ ಬಾಲಧಿ ಎಂಬ ಋಷಿಯಿದ್ದನು. ಪುತ್ರಶೋಕದಿಂದ ಉದ್ವಿಗ್ನನಾದ ಅವನು ಸುದುಷ್ಕರವಾದ ತಪಸ್ಸನ್ನು ಮಾಡಿದನು. ನನ್ನ ಪುತ್ರನು ಮೃತ್ಯುಹೀನನಾಗಬೇಕು ಎಂದು ಉದ್ದೇಶಿಸಿ ಅವನು ಆ ವರವನ್ನು ದೇವತೆಗಳಿಂದ ಪಡೆದನು.

ತಸ್ಯ ಪ್ರಸಾದೋ ವೈ ದೇವೈಃ ಕೃತೋ ನ ತ್ವಮರೈಃ ಸಮಃ ।
ನಾಮರ್ತ್ಯೋ ವಿದ್ಯತೇ ಮರ್ತ್ಯೋ ನಿಮಿತ್ತಾಯುರ್ಭವಿಷ್ಯತಿ ॥೪೭॥

ದೇವತೆಗಳು ಅವನಿಗೆ ಅನುಗ್ರಹವನ್ನು ಮಾಡಿದರು. ಆದರೆ ಅವನ ಪುತ್ರನನ್ನು ಅಮರನನ್ನಾಗಿ ಮಾಡಲಿಲ್ಲ. ಮರ್ತ್ಯನು ಎಂದೂ ಅಮರನಾಗಿರುವುದಿಲ್ಲ. ಒಂದು ನಿಮಿತ್ತವಿರುವವರೆಗೆ ಅವನಿಗೆ ಆಯಸ್ಸು ಇರುವುದು ಎಂದು ಹೇಳಿದರು.

ಬಾಲಧಿಃ

ಯಥೇಮೇ ಪರ್ವತಾಃ ಶಶ್ವತ್ ತಿಷ್ಠಂತಿ ಸುರಸತ್ತಮ ।
ಆಕ್ಷಯಾಸ್ತನ್ನಿಮಿತ್ತಂ ಮೇ ಸುತಸ್ಯಾಯುರ್ಭವಿಷ್ಯತಿ ॥೪೮॥

ಬಾಲಧಿ– ಎಲೈ ದೇವಶ್ರೇಷ್ಠರೇ! ಎಲ್ಲಿಯವರೆಗೆ ಭೂಮಿಯ ಮೇಲೆ ಈ ಪರ್ವತಗಳು ನಾಶವನ್ನು ಹೊಂದದೇ ಇರುತ್ತವೆಯೋ, ನನ್ನ ಪುತ್ರನ ಆಯುಸ್ಸಿಗೆ ಆದು ನಿಮಿತ್ತವಾಗುವುದು.

ಭಾರದ್ವಾಜಃ

ತಸ್ಯ ಪುತ್ರಸ್ತದಾ ಜಜ್ಞೇ ಮೇಧಾವೀ ಕ್ರೋಧನಃ ಸದಾ ।
ಸ ತಚ್ಛುತ್ವಾತಕರೋದ್ ದರ್ಪಮೃಷೀಂಶ್ಚೈವಾವಮನ್ಯತ ॥೪೯॥

ಆನಂತರ ಅವನಿಗೆ ಮೇಧಾವಿಯೂ, ಕ್ರೋಧಪರವಶನೂ ಆದ ಒಬ್ಬ ಪುತ್ರನು ಜನಿಸಿದನು. ಅವನು ತನ್ನ ತಂದೆಯು ತೆಗೆದುಕೊಂಡ ವರಗಳನ್ನು ಕೇಳಿ ದರ್ಪದಿಂದ ಕೂಡಿದವನಾಗಿ ಋಷಿಗಳಿಗೂ ಅವಮಾನವನ್ನು ಮಾಡಿದನು.

ವಿಕುರ್ವಾಣೋ ಮುನೀನಾಂ ಚ ವ್ಯಚರತ್ ಸ ಮಹೀಮಿಮಾಮ್ ।
ಆಸಸಾದ ಮಹಾವೀರ್ಯಂ ಧನುಷಾಕ್ಷಂ ಮನೀಷಿಣಮ್ ॥೫೦॥

ಅವನು ಹೀಗೆ ಋಷಿಗಳಿಗೆ ಅವಮಾನವನ್ನು ಮಾಡುತ್ತಾ ಭೂಮಿಯನ್ನೆಲ್ಲಾ ಸಂಚರಿಸಿ ಮಹಾವೀರ್ಯನೂ, ಮೇಧಾವಿಯೂ ಆದ ಧನುಷಾಕ್ಷನೆಂಬ ಋಷಿಯ ಸಮೀಪಕ್ಕೆ ಬಂದನು.

ತಸ್ಯಾಪಚಕ್ರೇ ಮೇಧಾವೀ ತಂ ಶಶಾಪ ಸ ವೀರ್ಯವಾನ್ ।
ಭವ ಭಸ್ಮೇತಿ ಚೋಕ್ತಃ ಸ ನ ಭಸ್ಮ ಸಮಪದ್ಯತ ॥೫೧॥

ಅವನು (ಅವನ ಹೆಸರು ಮೇಧಾವೀ ಎಂದು) ಧನುಷಾಕ್ಷರಿಗೂ ಅಪಚಾರವನ್ನು ಮಾಡಿದನು. ಆಗ ಪ್ರಭಾವಶಾಲಿಯಾದ ಧನುಷಾಕ್ಷರು ಭಸ್ಮವಾಗಿ ಹೋಗು ಎಂದು ಶಾಪವನ್ನು ಕೊಟ್ಟರು. ಆದರೂ ಮೇಧಾವಿಯು ಭಸ್ಮವಾಗಲಿಲ್ಲ.

ಧನುಷಾಕ್ಷಸ್ತು ತಂ ದೃಷ್ಟ್ವಾ ಮೇಧಾವಿನಮನಾಮಯಮ್ ।
ನಿಮಿತ್ತಂ ಮಹಿಷೈರಸ್ಯ ಭೇದಯಾಮಾಸ ಪರ್ವತಾನ್ ॥೫೨॥

ಧನುಷಾಕ್ಷರಾದರೂ ಆ ಮೇಧಾವಿಯು ಯಾವ ಹಾನಿಗೂ ಒಳಗಾದುದನ್ನು ನೋಡಿ ಅದರ ನಿಮಿತ್ತವನ್ನು ಚಿಂತಿಸಿ ಎಮ್ಮೆ ಕೋಣಗಳಿಂದ ಆ ಪರ್ವತಗಳನ್ನು ಭೇದಿಸಿ ನಾಶಮಾಡಿದರು (ಆ ಮಹೀತಲವು ಮತ್ತು ಆ ಪರ್ವತಗಳು ಇರುವಷ್ಟು ಕಾಲ ಅವನಿಗೆ ಆಯುಸ್ಸು ಇರಲೆಂದು ವರವಾಗಿದ್ದಿತು).

ಸ ನಿಮಿತ್ತೇ ವಿನಷ್ಟೇ ತು ಮಮಾರ ಸಹಸಾ ಶಿಶುಃ ।
ತಂ ಮೃತಂ ಪುತ್ರಮಾದಾಯ ವಿಲಲಾಪ ತತಃ ಪಿತಾ ॥೫೩॥

ತನ್ನ ಆಯುಸ್ಸಿನ ನಿಮಿತ್ತವು ನಷ್ಟವಾಗುತ್ತಿರಲು ಶಿಶುವಾದ ಆ ಮೇಧಾವಿಯು ತಕ್ಷಣ ಮರಣವನ್ನು ಹೊಂದಿದನು. ಮೃತನಾದ ಮಗನನ್ನು ಎತ್ತಿಕೊಂಡು ತಂದೆಯು ಆಗ ವಿಲಾಪವನ್ನು ಮಾಡಿದನು.

ಲಾಲಪ್ಯಮಾನಂ ತಂ ದೃಷ್ಟ್ವಾ ಮುನಯಃ ಪರಮಾರ್ತವತ್ ।
ಊರ್ಚುರ್ವೇದವಿದಃ ಸರ್ವೇ ಗಾಥಾಂ ಯಾಂ ತಾಂ ನಿಬೋಧ ಮೇ ॥

ಬಹಳದುಃಖದಿಂದ ಪೀಡಿತನಾಗಿ ಪುನಃ ಪುನಃ ವಿಲಾಪವನ್ನು ಮಾಡುತ್ತಿರುವ ಅವನನ್ನು ನೋಡಿ ವೇದಜ್ಞರಾದ ಋಷಿಗಳೆಲ್ಲರೂ ಅವನನ್ನು ಕುರಿತು ಒಂದು ಗೀತೆಯನ್ನು ಹೇಳಿದರು. ಅದನ್ನು ನಾನು ಹೇಳುತ್ತೇನೆ, ನೀನು ಕೇಳು.

ನ ದಿಷ್ಟಮರ್ಥಮತ್ಯೇತುಮೀಶೋ ಮರ್ತ್ಯಃ ಕಥಂಚನ ।
ಮಹಿಷ್ಯೈರ್ಭೇದಯಾಮಾಸ ಧನುಷಾಕ್ಷೋ ಮಹೀಧರಾನ್ ॥೫೫॥

ಮರ್ತ್ಯನಾದ ಯಾವನೂ, ಯಾವಕಾರಣದಿಂದಲೂ ತನಗೆ ದೈವವಿಹಿತವಾದುದನ್ನು ಮೀರಲು ಸಮರ್ಥನಾಗುವುದಿಲ್ಲ. ಧನುಷಾಕ್ಷ ಋಷಿಯು ಪರ್ವತಗಳನ್ನು ಮಹಿಷಗಳಿಂದ ಭೇದಿಸಿದನಷ್ಟೆ.

ಏವಂ ಲಬ್ಧ್ವಾ ವರಾನ್ ಬಾಲಾ ದರ್ಪಪೂರ್ಣಾಸ್ತಪಸ್ವಿನಃ ।
ಕ್ಷಿಪ್ರಮೇವ ವಿನಶ್ಯಂತಿ ತಥಾ ನ ಸ್ಯಾತ್ ತಥಾ ಭವಾನ್ ॥೫೬॥

ಹೀಗೆ ವರಗಳನ್ನು ಪಡೆದು ಅವಿವೇಕಿಗಳಾದವರು ದರ್ಪಪೂರ್ಣರಾಗಿ, ಶೋಚನೀಯರಾಗಿ ಶೀಘ್ರವಾಗಿ ನಾಶವನ್ನು ಹೊಂದುತ್ತಾರೆ. ನೀನು ಅವರಂತೆ ಆಗಬಾರದು.

ಏಷ ರೈಭ್ಯೋ ಮಹಾವೀರ್ಯಃ ಪುತ್ರೌ ಚಾಸ್ಯ ತಥಾವಿಧೌ ।
ತಂ ಯಥಾ ಪುತ್ರ ನಾಭ್ಯೇಷಿ ತಥಾ ಕುರ್ಯಾಸ್ತ್ವಂದ್ರಿತಃ ॥೫೭॥

ಈ ರೈಭ್ಯರು ಮಹಾಪ್ರತಾಪಶಾಲಿಗಳು. ಅವರ ಮಕ್ಕಳೂ ಸಹ ಅಂತಹವರೇ. ಎಲೈ ಪುತ್ರನೇ! ನೀನು ಜಾಗರೂಕನಾಗಿದ್ದು ಅವರಿಗೆ ಅವಮಾನ ಮಾಡದಂತೆ ನಡೆದುಕೋ.

ಸ ಹಿ ಕ್ರುದ್ಧಃ ಸಮರ್ಥಶ್ಚ(ಸ್ತ್ವಂ) ಪುತ್ರ ಪೀಡಯಿತುಂ ರುಷಾ ।
ರೈಭ್ಯಶ್ಚಾಪಿ ತಪಸ್ವೀ ಚ ಕೋಪನಶ್ಚ ಮಹಾನೃಷಿಃ ॥೫೮॥

ಎಲೈ ಪುತ್ರನೇ! ಆ ಮಹಾಋಷಿಗಳು ತಪಸ್ವಿಗಳು ಮತ್ತು ಕೋಪಿಷ್ಠರು ಎಂದು ಪ್ರಸಿದ್ಧರಾಗಿದ್ದಾರೆ. ಅವರಿಗೆ ಕೋಪವುಂಟಾದರೆ ತಮ್ಮ ಸಿಟ್ಟಿನಿಂದ ನಿನ್ನನ್ನು ವಿನಾಶ ಮಾಡಬಹುದು.

ಯವಕ್ರೀತಃ

ಏವಂ ಕರಿಷ್ಯೇ ಮಾ ತಾಪಂ ತಾತ ಕಾರ್ಷೀಃ ಕಥಂಚನ ।
ಯಥಾ ಹಿ ಮೇ ಭವಾನ್ ಮಾನ್ಯಸ್ತಥಾ ರೈಭ್ಯಃ ಪಿತಾ ಮಮ ॥೫೯॥

ಯವಕ್ರೀತ– ಎಲೈ ತಂದೆಯೇ! ನಾನು ಹಾಗೆಯೇ ಮಾಡುವೆನು. ನೀನು ಯಾವ ರೀತಿಯಿಂದಲೂ ಸಂತಾಪ ಪಡಬೇಡ. ನೀನು ನನಗೆ ಹೇಗೆ ಮಾನ್ಯನೋ, ಅದರಂತೆ ರೈಭ್ಯರೂ ಸಹ ನನಗೆ ತಂದೆಯಂತೆ ಮಾನ್ಯರು.

ಲೋಮಶಃ

ಉಕ್ತ್ವಾ ಸ ಪಿತರಂ ಶ್ಲಕ್ಷ್ಣಂ ಯವಕ್ರೀರಕುತೋಭಯಃ ।
ವಿಪ್ರಕುರ್ವನ್ಋಷೀನನ್ಯಾನತುಷ್ಯತ್ ಪರಯಾ ಮುದಾ ॥೬೦॥

ಲೋಮಶ– ಹೀಗೆ ಯವಕ್ರೀತನು ತಂದೆಯನ್ನು ಕುರಿತು ಮೃದುವಾಗಿ ಮಾತನಾಡಿ ಯಾವ ಭಯವೂ ಇಲ್ಲದೆ ಬೇರೆ ಋಷಿಗಳನ್ನು ಅವಮಾನ ಮಾಡುತ್ತಾ ಸಂತೋಷಪಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾವಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಆಪ್ಲಾವೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ಮೂರನೆಯ ಅಧ್ಯಾಯ

ರೈಭ್ಯಾಶ್ರಮದಲ್ಲಿ ಯವಕ್ರೀತನಿಂದ ಪರಾವಸುವಿನ ಪತ್ನಿಗೆ ಅವಮಾನ. ರೈಭ್ಯರಿಂದ ಪಿಶಾಚಿ ಮತ್ತು ರಾಕ್ಷಸರ ಸೃಷ್ಟಿ ಮತ್ತು ರಾಕ್ಷಸರಿಂದ ಯವಕ್ರೀತನ ವಧೆ.

ಲೋಮಶಃ

ಚಂಕ್ರಮ್ಯಮಾಣಃ ಸ ತದಾ ಯವಕ್ರೀರಕುತೋಭಯಃ ।
ಜಗಾಮ ಮಾಧವೇ ಮಾಸಿ ರೈಭ್ಯಾಶ್ರಮಪದಂ ಪ್ರತಿ ॥೧॥

ಲೋಮಶ– ಆಗ ಯವಕ್ರೀತನು ನಿರ್ಭಯವಾಗಿ ಸಂಚಾರ ಮಾಡುತ್ತಾ ವೈಶಾಖ ಮಾಸದಲ್ಲಿ ರೈಭ್ಯಾಶ್ರಮದ ಸಮೀಪಕ್ಕೆ ಹೋದನು.

ಸ ದದರ್ಶಾಶ್ರಮೇ ರಮ್ಯೇ ಪುಷ್ಪಿತದ್ರುಮಭೂಷಿತೇ ।
ವಿಚರಂತೀಂ ಸುಷ್ಠಾಂ ತಸ್ಯ ಕಿನ್ನರೀಮಿವ ಭಾರತ ॥೨॥

ಎಲೈ ಭಾರತನೇ! ಅರಳಿದ ಹೂಗಳುಳ್ಳ ಮರಗಳಿಂದ ಭೂಷಿತವಾದ ಆ ಸುಂದರವಾದ ಆಶ್ರಮದಲ್ಲಿ ಕಿನ್ನರಿಯಂತೆ ತಿರುಗಾಡುತ್ತಿದ್ದ ರೈಭ್ಯರ ಸೊಸೆಯಾದ ಪರಾವಸುವಿನ ಪತ್ನಿಯನ್ನು ನೋಡಿದನು.

ಯವಕ್ರೀಸ್ತಾಮುವಾಚೇದಮುಪಾತಿಷ್ಠಸ್ವ ಮಾಮಿತಿ ।
ನಿರ್ಲಜ್ಜೋ ಲಜ್ಜಯಾ ಯುಕ್ತಾಂ ಕಾಮೇನ ಹೃತಚೇತನಃ ॥೩॥

ಯವಕ್ರೀತನು ಅವಳನ್ನು ನೋಡಿ ಕಾಮದಿಂದ ಕೂಡಿದ ಮನಸ್ಸುಳ್ಳವನಾಗಿ ಲಜ್ಜೆಯನ್ನು ಬಿಟ್ಟು, ಲಜ್ಜಾಯುಕ್ತಳಾದ ಅವಳನ್ನು ಕುರಿತು ನನ್ನನ್ನು ಸೇವಿಸು ಎಂದು ಹೇಳಿದನು.

ಸಾ ತಸ್ಯ ಶೀಲಮಾಜ್ಞಾಯ ತಸ್ಮಾಚ್ಛಾಪಾಚ್ಚ ಬಿಭ್ಯತೀ ।
ತೇಜಸ್ವಿತಾಂ ಚ ರೈಭ್ಯಸ್ಯ ತಥೇತ್ಯುಕ್ತ್ವಾ ಽಽಜಗಾಮ ಹ ॥೪॥

ಅವಳು ಅವನ ಶೀಲವನ್ನು ತಿಳಿದು ಅವನಿಂದ ಉಂಟಾಗಬಹುದಾದ ಶಾಪಕ್ಕೆ ಹೆದರಿ ತನ್ನ ಮಾವನಾದ ರೈಭ್ಯರ ಪರಾಕ್ರಮವನ್ನು ತಿಳಿದು ಹಾಗೆಯೇ ಆಗಲಿ ಎಂದು ಸಮೀಪಕ್ಕೆ ಬಂದಳು.

ತತ ಏಕಾಂತಮುನ್ನೀಯ ಲಜ್ಜಯಾಮಾಸ ಭಾರತ ।
ಆಜಗಾಮ ತದಾ ರೈಭ್ಯಃ ಸ್ವಮಾಶ್ರಮಮರಿಂದಮ ॥೫॥

ಎಲೈ ಭಾರತನೇ! ಯವಕ್ರೀತನು ಅವಳನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿ ಅವಳಿಗೆ ನಾಚಿಕೆಯುಂಟಾಗುವಂತೆ ಕಾಮದ ಮಾತುಗಳನ್ನು ಆಡಿದನು. ಎಲೈ ಅರಿಂದಮನೇ! ಆ ವೇಳೆಗೆ ರೈಭ್ಯರು ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

ರುದತೀಂ ಚ ಸುಷ್ಠಾಂ ದೃಷ್ಟ್ವಾ ಭಾರ್ಯಾಮಾರ್ತಾಂ ಪರಾವಸೋಃ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಪರ್ಯಪೃಚ್ಛದ್ ಯುಧಿಷ್ಠಿರ ॥೬॥

ಎಲೈ ಯುಧಿಷ್ಠಿರನೇ! ಅವರು ಪರಾವಸುವಿನ ಪತ್ನಿಯಾದ ತಮ್ಮ ಸೊಸೆಯು ಅಳುತ್ತಿರುವುದನ್ನು ನೋಡಿ ಮಧುರವಾದ ಮಾತುಗಳಿಂದ ಅವಳನ್ನು ಸಮಾಧಾನ ಪಡಿಸುತ್ತಾ ಅವಳನ್ನು ಪ್ರಶ್ನಿಸಿದರು.

ಸಾ ತಸ್ಮೈ ಸರ್ವಮಾಚಷ್ಟ ಯವಕ್ರೀಭಾಷಿತಂ ಶುಭಾ ।
ಪ್ರತ್ಯುಕ್ತಂ ಚ ಯವಕ್ರೀತಂ ಪ್ರೇಕ್ಷಾಪೂರ್ವಂ ತಥಾऽऽತ್ಮನಾ ॥೬॥

ಪರಿಶುದ್ಧಳಾದ ಅವಳು ಅವರಿಗೆ ಯವಕ್ರೀತನು ಮಾತನಾಡಿದುದೆಲ್ಲವನ್ನೂ ಮತ್ತು ತಾನು ವಿವೇಕಪೂರ್ವಕವಾಗಿ ಅದನ್ನು ನಿರಾಕರಿಸಿದುದನ್ನೂ ತಿಳಿಸಿದಳು.

ಶ್ರುತ್ವಾನಸ್ಯೈವ ರೈಭ್ಯಸ್ಯ ಯವಕ್ರೀತವಿಚೇಷ್ಟಿತಮ್ ।
ದಹನ್ನಿವ ತದಾ ಚೇತಃಕ್ರೋಧಃ ಸಮಭವನ್ಮಹಾನ್ ॥೮॥

ಯವಕ್ರೀತನ ಕುಚೇಷ್ಟೆಯನ್ನು ಕೇಳುತ್ತಿದ್ದಂತೆಯೇ ರೈಭ್ಯರಿಗೆ ಮನಸ್ಸಿನಲ್ಲಿ ಯವಕ್ರೀತನನ್ನು ಸುಟ್ಟುಬಿಡುವಂತೆ ಮಹಾಕ್ರೋಧವು ಉಂಟಾಯಿತು.

ಸ ತದಾ ಮನ್ಯುನಾऽऽವಿಷ್ಟಸ್ತಪಸ್ವೀ ಕೋಪನೋ ಭೃಶಮ್ ।
ಆವಲುಚ್ಯ ಜಟಾಮೇಕಾಂ ಜುಹಾವಾಗ್ನೌ ಸುಸಂಸ್ಕೃತೇ ॥೯॥

ಕೋಪಗೊಂಡ ತಪಸ್ವಿಗಳಾದ ಅವರು ಆಗ ತಮ್ಮ ಒಂದು ಜಟೆಯನ್ನು ಕಿತ್ತು ಸುಸಂಸ್ಕೃತವಾದ ಅಗ್ನಿಯಲ್ಲಿ ಹೋಮವನ್ನು ಮಾಡಿದರು.

ತತಃ ಸಮಭವನ್ನಾರೀ ತಸ್ಯಾ ರೂಪೇಣ ಸಮ್ಮಿತಾ ।
ಅವಲುಚ್ಯಾಪರಾಂ ಚಾಪಿ ಜುಹಾವಾಗ್ನೌ ಜಟಾಂ ಪುನಃ ॥೧೦॥

ಆಗ ತಮ್ಮ ಸೊಸೆಯ ರೂಪಕ್ಕೆ ಸದೃಶಳಾದ ಒಬ್ಬ ನಾರಿಯು ಆ ಹೋಮಕುಂಡದಿಂದ ಎದ್ದುಬಂದಳು. ಆನಂತರ ಇನ್ನೊಂದು ಜಟೆಯನ್ನು ಕಿತ್ತು ಪುನಃ ಅಗ್ನಿಯಲ್ಲಿ ಹೋಮವನ್ನು ಮಾಡಿದರು.

ತತಃ ಸಮಭವದ್ ರಕ್ಷೋ ಘೋರಾಕ್ಷಂ ಭೀಮದರ್ಶನಮ್ ।
ಅಬ್ರೂತಾಂ ತೌ ತದಾ ರೈಭ್ಯಂ ಕಿಂ ಕಾರ್ಯಂ ಕರವಾವಹೈ ॥೧೧॥

ಆಗ ಘೋರವಾದ ಕಣ್ಣುಳ್ಳ ಭಯಂಕರವಾದ ರೂಪವುಳ್ಳ ಒಬ್ಬ ರಾಕ್ಷಸನು ಎದ್ದುಬಂದನು. ಅವರಿಬ್ಬರೂ ರೈಭ್ಯರನ್ನು ಕುರಿತು ನಾವು ಏನು ಮಾಡಬೇಕೆಂದು ಕೇಳಿದರು.

ತಾವಬ್ರವೀದೃಷಿಃ ಕ್ರುದ್ಧೋ ಯವಕ್ರೀರ್ವಧ್ಯತಾಮಿತಿ ।
ಜಗೃತುಸ್ತೌ ತಥೇತ್ಯುಕ್ತ್ವಾ ಯವಕ್ರೀತಜಘಾಂಸಯಾ ॥೧೨॥

ಋಷಿಗಳಾದ ರೈಭ್ಯರು ಕೋಪದಿಂದ ಕೂಡಿದವರಾಗಿ ಅವರಿಬ್ಬರನ್ನು ಕುರಿತು ಯವಕ್ರೀತನನ್ನು ಕೊಂದುಬಿಡಿ ಎಂದು ಹೇಳಿದರು. ಅವರಿಬ್ಬರೂ ಹಾಗೆಯೇ ಆಗಲಿ ಎಂದು ಹೇಳಿ, ಯವಕ್ರೀತನನ್ನು ಕೊಲ್ಲುವ ಇಚ್ಛೆಯುಳ್ಳವರಾಗಿ ಹೊರಟರು.

ತತಃ ಸ್ಮುಷಾಕೃತೀಕೃತ್ಯ ಯವಕ್ರೀತಮುಪಾಗಮತ್ ।
ಯವಕ್ರೀತೋಽಪಿ ರೈಭ್ಯಸ್ಯ ಸ್ಮುಷಾಂ ಮತ್ವಾ ಜಗಾಮ ತಾಮ್॥೧೨.೧॥

ಆಗ ನಾರಿಯು ರೈಭ್ಯರ ಸೊಸೆಯ ರೂಪವನ್ನು ಧರಿಸಿ ಯವಕ್ರೀತನ ಸಮೀಪಕ್ಕೆ ಬಂದಳು. ಯವಕ್ರೀತನಾದರೂ ರೈಭ್ಯರ ಸೊಸೆ ಎಂದು ತಿಳಿದು ಅವಳ ಗಮನವನ್ನು ಮಾಡಿದನು.

ತತಸ್ತಂ ಸಮುಪಾಸ್ಥಾಯ ಕೃತ್ಯಾ ಸೃಷ್ಟಾ ಮಹಾತ್ಮನಾ ।
ಕಮಂಡಲುಂ ಜಹಾರಾಸ್ಯ ಮೋಹಯಿತ್ವೈವ ಭಾರತ ॥೧೩॥

ಆಗ ಆ ಮಹಾತ್ಮರಿಂದ ನಾರೀರೂಪವಾದ ಪಿಶಾಚಿಯು ಯವಕ್ರೀತನನ್ನು ಸೇವಿಸಿ ಅವನಿಗೆ ಮೋಹವನ್ನು ಉಂಟುಮಾಡಿ ಅವನ ಕಮಂಡಲುವನ್ನು ಅಪಹರಿಸಿದಳು.

ಉಚ್ಛಿಷ್ಟಂ ತು ಯವಕ್ರೀತಮಪಕೃಷ್ಟಕಮಂಡಲಮ್ ।
ತತ ಉದ್ಯತಶೂಲಃ ಸ ರಾಕ್ಷಸಃ ಸಮುಪಾದ್ರವತ್ ॥೧೪॥

ಎಲೈ ಭಾರತನೇ! ಕಮಂಡಲವನ್ನು ಕಳೆದುಕೊಂಡು ಉಚ್ಛಿಷ್ಟನಾದ (ಅಪವಿತ್ರನಾದ) ಯವಕ್ರೀತನನ್ನು ಕೊಲ್ಲಲು ಆ ರಾಕ್ಷಸನು ಶೂಲವನ್ನು ಎತ್ತಿಹಿಡಿದು ಅವನ ಸಮೀಪಕ್ಕೆ ಓಡಿಬಂದನು.

ತಮಾದ್ರವಂತಂ(ಷತಂತಂ) ಸಂಪ್ರೇಕ್ಷ್ಯ ಶೂಲಹಸ್ತಂ ಜಿಘಾಂಸಯಾ ।
ಯವಕ್ರೀಃ ಸಹಸೋತ್ಥಾಯ ಪ್ರಾದ್ರವದ್ ಯೇನ ವೈ ಸರಃ ॥೧೫॥

ಶೂಲವನ್ನು ಕೈಯಲ್ಲಿ ಹಿಡಿದು ತನ್ನನ್ನು ಕೊಲ್ಲಲು ಓಡಿಬರುತ್ತಿರುವ ಆ ರಾಕ್ಷಸನನ್ನು ನೋಡಿ ಯವಕ್ರೀತನು ಬೇಗ ಎದ್ದು ಸರೋವರದ ಕಡೆಗೆ ಓಡಿದನು.

ಜಲಹೀನಂ ಸರೋ ದೃಷ್ಟ್ವಾ ಯವಕ್ರೀಸ್ತ್ವರಿತಃ ಪುನಃ ।
ಜಗಾಮ ಸರಿತಃ ಸರ್ವಾಸ್ತಾಶ್ಚಾಪ್ಯಾಸನ್ ವಿಶೋಷಿತಾಃ ॥೧೬॥

ಆ ಸರೋವರವು ಜಲಹೀನವಾಗಿರುವುದನ್ನು ನೋಡಿ ಯವಕ್ರೀತನು ಪುನಃ ಶೀಘ್ರವಾಗಿ ಬೇರೆ ನದಿಗಳ ಕಡೆಗೆ ಓಡಿದನು. ಆ ಎಲ್ಲಾ ನದಿಗಳೂ ಸಹ ಒಣಗಿ ಹೋಗಿದ್ದವು.

ಸ ಕಾಲ್ಯಮಾನೋ ಘೋರೇಣ ಶೂಲಹಸ್ತೇನ ರಕ್ಷಸಾ ।
ಅಗ್ನಿಹೋತ್ರಂ ಪಿತುರ್ಭೀತಃ ಸಹಸಾ ಪ್ರವಿವೇಶ ಹ ॥೧೭॥

ಕೈಯಲ್ಲಿ ಶೂಲವನ್ನು ಹಿಡಿದು ಅಟ್ಟಿಸಿಕೊಂಡು ಬರುವ ಆ ಘೋರರಾಕ್ಷಸನನ್ನು ನೋಡಿ ಹೆದರಿದ ಯವಕ್ರೀತನು ತನ್ನ ತಂದೆಯಾದ ಭರದ್ವಾಜರ ಅಗ್ನಿಹೋತ್ರ ಶಾಲೆಯನ್ನು ಶೀಘ್ರವಾಗಿ ಪ್ರವೇಶಿಸಿದನು.

ಸ ವೈ ಪ್ರವಿಶಮಾನಸ್ತು ಶೂದ್ರೇಣಾಂಧೇನ ರಕ್ಷಿಣಾ ।
ನಿಗೃಹೀತೋ ಬಲಾದ್ ದ್ವಾರಿ ಸೋಽವಾತಿಷ್ಠತ ಪಾರ್ಥಿವ ॥೧೮॥

ಎಲೈ ರಾಜನೇ! ಅವನು ಪ್ರವೇಶಿಸಲು ಪ್ರಯತ್ನ ಮಾಡುತ್ತಿರುವಂತೆಯೇ ಅಂಧನಾದ ಕಾವಲುಗಾರನಾದ ಒಬ್ಬ ಶೂದ್ರನು ಅವನನ್ನು ತಡೆದು ನಿಲ್ಲಿಸಲು ಅವನು ಬಾಗಿಲಿನಲ್ಲಿಯೇ ನಿಂತನು.

ನಿಗೃಹೀತಂ ತು ಶೂದ್ರೇಣ ಯವಕ್ರೀತಂ ಸ ರಾಕ್ಷಸಃ ।
ತಾಡಯಾಮಾಸ ಶೂಲೇನ ಸ ಭಿನ್ನಹೃದಯೋಽಪತತ್ ॥೧೯॥

ಶೂದ್ರರಕ್ಷನು ಯವಕ್ರೀತನನ್ನು ಬಾಗಿಲ ಬಳಿಯೇ ತಡೆಯುತ್ತಿರಲು ಆ ರಾಕ್ಷಸನು ಅವನನ್ನು ಶೂಲದಿಂದ ಇರಿದನು. ಯವಕ್ರೀತನು ಭಿನ್ನ ಹೃದಯನಾಗಿ ಕೆಳಗೆ ಬಿದ್ದನು.

ಯವಕ್ರೀತಂ ಸ ಹತ್ವಾ ತು ರಾಕ್ಷಸೋ ರೈಭ್ಯಮಾಗಮತ್ ।
ಅನುಜ್ಞಾತಸ್ತು ರೈಭ್ಯೇಣ ತಯಾ ನಾರ್ಯಾ ಸಹಾವಸತ್ ॥೨೦॥

ಆ ರಾಕ್ಷಸನು ಯವಕ್ರೀತನನ್ನು ಕೊಂದು ರೈಭ್ಯರ ಬಳಿಗೆ ಹೋದನು ಮತ್ತು ರೈಭ್ಯರ ಅನುಮತಿಯನ್ನು ಪಡೆದು ಆ ನಾರಿಯ ಜೊತೆಯಲ್ಲಿ ವಾಸ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯಸ್ತ್ರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಏಕೋನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತನಾಲ್ಕನೆಯ ಅಧ್ಯಾಯ

ಪುತ್ರಶೋಕದಿಂದ ಭರದ್ವಾಜರ ವಿಲಾಪ. ರೈಭ್ಯರಿಗೆ ಶಾಪದಾನ ಮತ್ತು ಮೃತದೇಹ ದಹನಪೂರ್ವಕವಾಗಿ ಅಗ್ನಿಪ್ರವೇಶ.

ಲೋಮಶಃ

ಭರದ್ವಾಜಸ್ತು ಕೌಂತೇಯ ಕೃತ್ವಾ ಸ್ವಾಧ್ಯಾಯಮಾಹ್ನಿಕಮ್ ।
ಸಮಿತ್ಕುಶಪಮಾದಾಯ ಪ್ರವಿವೇಶ ಸ್ವಮಾಶ್ರಮಮ್ ॥೧॥

ಲೋಮಶ– ಎಲೈ ಕೌಂತೇಯನೇ! ಭರದ್ವಾಜರಾದರೂ ತಾವು ಪ್ರತಿದಿವಸ ಮಾಡುವ ಬ್ರಹ್ಮಯಜ್ಞಾದಿಗಳನ್ನು ಮಾಡಿ ಸಮಿತ್ತುಗಳ ಹೊರೆಯನ್ನು ತೆಗೆದುಕೊಂಡು ತಮ್ಮ ಆಶ್ರಮವನ್ನು ಪ್ರವೇಶಿಸಿದರು.

ತಂ ಸ್ಮ ದೃಷ್ಟ್ವಾ ಪುರಾ ಸರ್ವೇ ಪ್ರತ್ಯುತ್ತಿಷ್ಠಂತಿ ಪಾವಕಾಃ ।
ನ ತ್ವೇನಮುಪತಿಷ್ಠಂತಿ ಹತಪುತ್ರಂ ತದಾಽಗ್ನಯಃ ॥೨॥

ಹಿಂದೆ ಅವರು ಆಶ್ರಮಕ್ಕೆ ಬಂದ ತಕ್ಷಣವೇ ಅಗ್ನಿಗಳು ತಾವಾಗಿಯೇ ಎದ್ದು ಉರಿಯುತ್ತಿದ್ದವು. ಆದರೆ ಈ ದಿನ ಪುತ್ರಮರಣದಿಂದ ಅಶುದ್ಧರಾಗಿರುವುದರಿಂದ ಅಗ್ನಿಗಳು ಮೇಲೇಳಲಿಲ್ಲ.

ಪುತ್ರಮೃತ್ಯುಜಮಾಶೌಚಂ ಭರದ್ವಾಜೋ ನ ಜಜ್ಞಿವಾನ್ ।
ವೈಕೃತಂ ತದ್ಗೃಹೋತ್ರೇ ಸ ಲಕ್ಷಯಿತ್ವಾ ಮಹಾತಪಾಃ ।
ತಮಂಧಂ ಶೂದ್ರಮಾಸೀನಂ ಗೃಹಪಾಲಮಥಾಬ್ರವೀತ್ ॥೩॥

ಭರದ್ವಾಜರಿಗೆ ಪುತ್ರಮರಣದಿಂದ ಉಂಟಾದ ಆಶೌಚವು ತಿಳಿದಿರಲಿಲ್ಲ. ಮಹಾ ತಪಸ್ವಿಗಳಾದ ಅವರು ಅಗ್ನಿಹೋತ್ರ ಶಾಲೆಯಲ್ಲಿ ಉಂಟಾದ ಈ ವಿಕಾರವನ್ನು ಗಮನಿಸಿ ಅಲ್ಲಿ ಕುಳಿತಿದ್ದ ದ್ವಾರಪಾಲಕನಾದ ಅಂಧನಾದ ಶೂದ್ರನನ್ನು ಕುರಿತು ಹೀಗೆ ಹೇಳಿದರು.

ಕಿಂ ನು ಮೇ ನಾಗ್ನಯಃ ಶೂದ್ರ ಪ್ರತಿನಂದಂತಿ ದರ್ಶನಮ್ ।
ತ್ವಂ ಚಾಪಿ ನ ಯಥಾಪೂರ್ವಂ ಕಚ್ಚಿತ್ ಕ್ಷೇಮಮಿಹಾಶ್ರಮೇ ॥೪॥

ಎಲೈ ಶೂದ್ರನೇ! ಈ ದಿನ ಏಕೆ ಅಗ್ನಿಗಳು ನನ್ನ ದರ್ಶನವನ್ನು ಅಭಿನಂದಿಸುತ್ತಿಲ್ಲ? ನೀನೂ ಸಹ ಮೊದಲಿನಂತೆ (ಎಂದಿನಂತೆ) ಇಲ್ಲ. ಇಲ್ಲಿ ಆಶ್ರಮದಲ್ಲಿ ಎಲ್ಲವೂ ಕ್ಷೇಮವಷ್ಟೆ?

ಕಚ್ಚಿನ್ನ ರೈಭ್ಯಂ ಪುತ್ರೋ ಮೇ ಗತವಾನಲ್ಪಚೇತನಃ ।
ಏತದಾಚಕ್ಷ್ವ ಮೇ ಶೀಘ್ರಂ ನ ಹಿ ಶುದ್ಧ್ಯತಿ ಮೇ ಮನಃ ॥೫॥

ಅಲ್ಪಚೇತನನಾದ ನನ್ನ ಪುತ್ರನು ರೈಭ್ಯರ ಬಳಿಗೆ ಹೋಗಿಲ್ಲವಷ್ಟೆ? ಬೇಗ ನನಗೆ ಉತ್ತರವನ್ನು ಕೊಡು. ಏಕೆಂದರೆ ನನ್ನ ಮನಸ್ಸಿಗೆ ಸಮಾಧಾನವಿಲ್ಲ.

ಶೂದ್ರಃ

ರೈಭ್ಯಂ ಯಾತೋ ನೂನಮಯಂ ಪುತ್ರಸ್ತೇ ಮಂದಚೇತನಃ ।
ತಥಾ ಹಿ ನಿಹತಃ ಶೇತೇ ರಾಕ್ಷಸೇನ ಬಲೀಯಸಾ ॥೬॥

ಶೂದ್ರ– ಮಂದಚೇತನನಾದ ನಿಮ್ಮ ಈ ಪುತ್ರನು ನಿಶ್ಚಿತವಾಗಿ ರೈಭ್ಯರ ಬಳಿಗೇ ಹೋದನು ಮತ್ತು ಬಲಿಷ್ಠನಾದ ರಾಕ್ಷಸನಿಂದ ಹತನಾಗಿ ಇಲ್ಲಿ ಮಲಗಿದ್ದಾನೆ.

ಪ್ರಕಾಲ್ಯಮಾನಸ್ತೇನಾಯಂ ಶೂಲಹಸ್ತೇನ ರಕ್ಷಸಾ ।
ಅಗ್ನ್ಯಾಗಾರಂ ಪ್ರತಿ ದ್ವಾರಿ ಮಯಾ ದೋರ್ಭ್ಯಾಂ ನಿವಾರಿತಃ ॥೭॥

ಶೂಲಹಸ್ತನಾದ ರಾಕ್ಷಸನಿಂದ ಎಟ್ಟಿಸಿಕೊಂಡು ಬಂದ ಅವನನ್ನು ಅಗ್ನಿಶಾಲೆಯ ದ್ವಾರದ ಬಳಿಯಲ್ಲಿ ನಾನು ಕೈಗಳಿಂದ ತಡೆದೆನು.

ತತಃ ಸ ವಿಹತಾಶೋಽತ್ರ ಜಲಕಾಮೋಽಶುಚಿರ್ಧ್ರುವಮ್ ।
ನಿಹತಃ ಸೋಽತಿವೇಗೇನ ಶೂಲಹಸ್ತೇನ ರಕ್ಷಸಾ ॥೮॥

ನಿಶ್ಚಿತವಾಗಿ ಅಶುಚಿಯಾಗಿದ್ದು, ಜಲಕಾಮನಾದ ಅವನ ಆಸೆಯು ಭಗ್ನವಾಗುತ್ತಿರಲು ಶೂಲಹಸ್ತನಾದ ರಾಕ್ಷಸನು ಬಹಳ ವೇಗದಿಂದ ಅವನನ್ನು ಕೊಂದನು.

ಲೋಮಶಃ

ಭರದ್ವಾಜಸ್ತು ತಚ್ಛ್ರುತ್ವಾ ರೂದ್ರಸ್ಯ ವಿಪ್ರಿಯಂ ಮಹತ್ ।
ಗತಾಸುಂ ಪುತ್ರಮಾದಾಯ ವಿಲಲಾಪ ಸುದುಃಖಿತಃ ॥೯॥

ಲೋಮಶ– ಶೂದ್ರನು ಮಾಡಿದ ಈ ದೊಡ್ಡ ಅಪ್ರಿಯವಾದ ಘಟನೆಯನ್ನು ಕೇಳಿ ಭರದ್ವಾಜರು ಮೃತನಾದ ಪುತ್ರನನ್ನು ತೊಡೆಯ ಮೇಲಿಟ್ಟುಕೊಂಡು ಬಹಳ ದುಃಖದಿಂದ ವಿಲಾಪವನ್ನು ಮಾಡಿದರು.

ಭರದ್ವಾಜಃ

ಬ್ರಾಹ್ಮಣಾನಾಂ ಕಿಲಾರ್ಥಾಯ ನನು ತ್ವಂ ತಪ್ತವಾಂಸ್ತಪಃ ।
ದ್ವಿಜಾನಾಮನಧೀತಾ ವೈ ವೇದಾಃ ಸಂಪ್ರತಿ ಭಾಂತ್ವಿತಿ ॥೧೦॥

ಭರದ್ವಾಜ– ದ್ವಿಜರು ಅಧ್ಯಯನ ಮಾಡದಿದ್ದ ವೇದವೂ ಅವರಿಗೆ ಈಗ ಪ್ರತಿಭಾತವಾಗಬೇಕೆಂಬ ಉದ್ದೇಶದಿಂದ ಬ್ರಾಹ್ಮಣರ ಹಿತಕ್ಕಾಗಿ ನೀನು ತಪಸ್ಸನ್ನು ಆಚರಿಸಿದೆಯಷ್ಟೆ?

ತಥಾ ಕಲ್ಯಾಣಶೀಲಸ್ತ್ವಂ ಬ್ರಾಹ್ಮಣೇಷು ಮಹಾತ್ಮಸು ।
ಅನಾಗಾಃ ಸರ್ವಭೂತೇಷು ಕರ್ಕಶತ್ವಮುಪೇಯಿವಾನ್ ॥೧೧॥

ಮಹಾತ್ಮರಾದ ಬ್ರಾಹ್ಮಣರ ವಿಷಯದಲ್ಲಿ ಅಪ್ಪು ಕಲ್ಯಾಣಶೀಲವುಳ್ಳ ನೀನು ಮತ್ತು ಯಾವ ಪ್ರಾಣಿಗೂ ಅಪರಾಧವನ್ನು ಮಾಡದಿದ್ದ ನೀನು ಬಹಳ ಕರ್ಕಶ ಸ್ವಭಾವವನ್ನು ಹೊಂದಿದೆ.

ಪ್ರತಿಷಿದ್ಧೋ ಮಯಾ ತಾತ ರೈಭ್ಯಾವಸಥದರ್ಶನಾತ್ ।
ಗತವಾನೇವ ತಂ ದ್ರಷ್ಟುಂ ಕಾಲಾಂತಕಯಮೋಪಮಮ್ ॥೧೨॥

ಪ್ರೀತಿಪಾತ್ರನೇ! ರೈಭ್ಯರ ಆಶ್ರಮಕ್ಕೆ ಹೋಗಬಾರದೆಂದು ನಾನು ಪ್ರತಿಷೇಧ ಮಾಡಿದ್ದರೂ ನೀನು ಕಾಲಾಂತಕ ಯಮನಂತಿರುವ ಆ ರೈಭ್ಯರನ್ನು ನೋಡಲು ಅವರ ಆಶ್ರಮಕ್ಕೆ ಹೋಗಿಯೇ ಹೋಗಿದ್ದೀಯೆ.

ಯಃ ಸ ಜಾನನ್ ಮಹಾತೇಜಾ ವೃದ್ಧಸ್ಯೈಕಂ ಮಮಾತ್ಮಜಮ್ ।
ಗತವಾನೇವ ಕೋಪಸ್ಯ ವಶಂ ಪರಮದುರ್ಮತಿಃ ॥೧೩॥

ಮಹಾತೇಜಸ್ವಿಗಳೂ ಮತ್ತು ಬಹಳ ದುರ್ಬುದ್ಧಿಯುಳ್ಳವರೂ ಆದ ಅವರು ವೃದ್ಧನಾದ ನನಗೆ ನೀನೊಬ್ಬನೇ ಮಗನೆಂದು ತಿಳಿದಿದ್ದರೂ ಕ್ರೋಧಕ್ಕೆ ವಶರಾದರು.

ಪುತ್ರಶೋಕಮನುಪ್ರಾಪ್ತ ಏಷ ರೈಭ್ಯಸ್ಯ ಕರ್ಮಣಾ ।
ತ್ಯಕ್ಷ್ಯಾಮಿ ತ್ವಾಮೃತೇ ಪುತ್ರ ಪ್ರಾಣಾನಿಷ್ಟತಮಾನ್ ಭುವಿ ॥೧೪॥

ಎಲೈ ಪುತ್ರನೇ! ರೈಭ್ಯರ ಈ ಕರ್ಮದಿಂದ ಪುತ್ರಶೋಕಕ್ಕೆ ಒಳಗಾದ ನಾನು ನೀನು ನಿನ್ನನ್ನು ಬಿಟ್ಟು ಬದುಕಲು ಸಾಧ್ಯವಾಗದೇ ನನಗೆ ಅತ್ಯಂತ ಇಷ್ಟವಾದ ಪ್ರಾಣಗಳನ್ನು ತ್ಯಜಿಸುವೆನು.

ಯಥಾಽಹಂ ಪುತ್ರಶೋಕೇನ ದೇಹಂ ತ್ಯಕ್ಷ್ಯಾಮಿ ಕಿಲ್ಬಿಷೀ ।
ತಥಾ ಜ್ಯೇಷ್ಠಃ ಸುತೋ ರೈಭ್ಯಂ ಹಿಂಸ್ಯಾಚ್ಚಿಘ್ರಮನಾಗಸಮ್ ॥೧೫॥

ಹೇಗೆ ನಾನು ಪುತ್ರಶೋಕದಿಂದ ದುಃಖಕ್ಕೆ ಒಳಗಾಗಿ ದೇಹವನ್ನು ತೊರೆಯುವೆನು ಅದರಂತೆ ಶೀಘ್ರದಲ್ಲಿಯೇ ನಿರಪರಾಧಿಯಾದ ರೈಭ್ಯರನ್ನು ಅವರ ಜ್ಯೇಷ್ಠಪುತ್ರನು ವಧೆ ಮಾಡಲಿ.

ಸುಖಿನೋ ವೈ ನರಾ ಯೇಷಾಂ ಜಾತ್ಯಾ ಪುತ್ರೋ ನ ವಿದ್ಯತೇ ।
ತೇ ಪುತ್ರಶೋಕಮಪ್ರಾಪ್ಯ ವಿಚರಂತಿ ಯಥಾಸುಖಮ್ ॥೧೬॥

ಯಾರಿಗೆ ಗಂಡುಮಕ್ಕಳಿಲ್ಲವೋ ಅಂತಹ ಮನುಷ್ಯರು ನಿಜವಾಗಲೂ ಸುಖಿಗಳು. ಅವರು ಪುತ್ರನಾಶದಿಂದ ಉಂಟಾದ ಶೋಕವನ್ನು ಅನುಭವಿಸದೇ ಸುಖವಾಗಿ ಸಂಚರಿಸುತ್ತಾರೆ.

ಯೇ ತು ಪುತ್ರಕೃತಾಚ್ಛೋಕಾದ್ ಭೃಶಂ ವ್ಯಾಕುಲಚೇತಸಃ ।
ಶಪಂತೀಷ್ಟಾನ್ ಸಖೀನಾರ್ತಸ್ತೇಭ್ಯಃ ಪಾಪತರೋ ನು ಕಃ ॥೧೭॥

ಯಾರು ಪುತ್ರಶೋಕದಿಂದ ಬಹಳ ವ್ಯಥೆಪಟ್ಟವರಾಗಿ ಆರ್ತರಾಗಿ ತಮಗೆ ಇಷ್ಟರಾದ ಮಿತ್ರರರನ್ನೂ ಶಪಿಸುತ್ತಾರೆಯೋ ಅದಕ್ಕಿಂತ ಪಾಪತರವಾದುದು ಯಾವುದಿದೆ?

ಪರಾಸುಶ್ಚ ಸುತೋ ದೃಷ್ಟಃ ಶಪ್ತಶ್ಚೇಷ್ಟಃ ಸಖಾ ಮಯಾ ।
ಈದೃಶೀಮಾಪದಂ ಕೋಽತ್ರ ದ್ವಿತೀಯೋಽನುಭವಿಷ್ಯತಿ ॥೧೮॥

ಮೃತನಾದ ಪುತ್ರನನ್ನು ನೋಡಿದ್ದಾಯಿತು. ಪ್ರೀತಿಪಾತ್ರನಾದ ನನ್ನ ಸ್ನೇಹಿತನಿಗೆ ತಾಪವನ್ನೂ ನೀಡಿದ್ದಾಯಿತು. ಇಂತಹ ವಿಪತ್ತನ್ನು ನನ್ನನ್ನು ಬಿಟ್ಟು ಯಾವ ಬೇರೆಯವರು ಅನುಭವಿಸುವರು.

ಲೋಮಶಃ

ವಿಲಪ್ಯೈವಂ ಬಹುವಿಧಂ ಭರದ್ವಾಜೋಽದಹತ್ ಸುತಮ್ ।
ಸುಸಮಿದ್ಧಂ ತತಃ ಪಶ್ಚಾತ್ ಪ್ರವಿವೇಶ ಹುತಾಶನಮ್ ॥೧೯॥

ಲೋಮಶ– ಭರದ್ವಾಜರು ಹೀಗೆ ಬಹುವಿಧವಾಗಿ ವಿಲಾಪವನ್ನು ಮಾಡಿ ತಮ್ಮ ಸುತನ ದೇಹವನ್ನು ದಹನ ಮಾಡಿದರು. ಅನಂತರ ತಾವೂ ಸಹ ಚೆನ್ನಾಗಿ ಉರಿಯುತ್ತಿದ್ದ ಆ ಅಗ್ನಿಯನ್ನು ಪ್ರವೇಶ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃತ್ರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೈದನೆಯ ಅಧ್ಯಾಯ

ರೈಭ್ಯಶಿಷ್ಯನಾದ ಬೃಹದ್ಯುಮ್ನನ ಯಾಗಕ್ಕೆ ಅರ್ವಾವಸು ಮತ್ತು ಪರಾವಸುಗಳ ಗಮನ. ರಾತ್ರಿಯ ಕಾಲದಲ್ಲಿ ಅಜ್ಞಾನದಿಂದ ಪರಾವಸುವಿನಿಂದ ರೈಭ್ಯರ ವಧೆ. ದೇವತಾನುಗ್ರಹದಿಂದ ರೈಭ್ಯ, ಭರದ್ವಾಜ ಮತ್ತು ಯವಕ್ರೀತರ ಉಜ್ಜೀವನ.

ಲೋಮಶಃ

ಏತಸ್ಮಿನ್ನೇವ ಕಾಲೇ ತು ಬೃಹದ್ಯುಮ್ನೋ ಮಹೀಪತಿಃ ।
ಸತ್ರಂ ತೇನೇ ಮಹಾಭಾಗೋ ರೈಭ್ಯಯಾಜ್ಯಃ ಪ್ರತಾಪವಾನ್ ॥೧॥

ಲೋಮಶ– ಈ ಕಾಲದಲ್ಲಿಯೇ ರೈಭ್ಯರ ಶಿಷ್ಯರಾದ ಮಹಾನುಭಾವನೂ ಮತ್ತು ಪ್ರತಾಪಶಾಲಿಯೂ ಆದ ಬೃಹದ್ದುಮ್ನರಾಜನು ಒಂದು ಸತ್ರಯಾಗವನ್ನು ಆರಂಭಿಸಿದನು.

ತೇನ ರೈಭ್ಯಸ್ಯ ವೈ ಪುತ್ರಾವರ್ವಾವಸುಪರಾವಸೂ ।
ವೃತೌ ಸಹಾಯೌ ಸತ್ರಾರ್ಥಂ ಬೃಹದ್ಯುಮ್ನೇನ ಧೀಮತಾ ॥೨॥

ಮೇಧಾವಿಯಾದ ಬೃಹದ್ಯುಮ್ನನು ಸತ್ರದಲ್ಲಿ ತನಗೆ ಸಹಾಯ ಮಾಡಲು ರೈಭ್ಯರ ಮಕ್ಕಳಾದ ಅರ್ವಾವಸು ಮತ್ತು ಪರಾವಸುಗಳನ್ನು ಋತ್ವಿಕ್ಕುಗಳಾಗಿ ವರಣ ಮಾಡಿದನು.

ತತ್ರ ತೌ ಸಮನುಜ್ಞಾತೌ ಪಿತ್ರಾ ಕೌಂತೇಯ ಜಗ್ಮತುಃ ।
ಆಶ್ರಮೇ ತ್ವಭವದ್ ರೈಭ್ಯೋ ಭಾರ್ಯಾ ಚೈವ ಪರಾವಸೋಃ ॥೩॥

ಎಲೈ ಕೌಂತೇಯನೇ! ತಂದೆಯ ಅನುಮತಿಯನ್ನು ಪಡೆದು ಅವರಿಬ್ಬರೂ ಅಲ್ಲಿಗೆ ಹೋದರು. ಆಶ್ರಮದಲ್ಲಿ ರೈಭ್ಯರು ಮತ್ತು ಪರಾವಸುವಿನ ಪತ್ನಿಯು ಉಳಿದರು.

ಅಥಾವಲೋಕಕೋऽಗಚ್ಛದ್ ಗೃಹಾನೇಕಃ ಪರಾವಸುಃ ।
ಕೃಷ್ಣಾಜಿನೇನ ಸಂವೀತಂ ದದರ್ಶ ಪಿತರಂ ವನೇ ॥೪॥

ಆನಂತರ ಪರಾವಸುವು ತನ್ನ ಪತ್ನಿಯನ್ನು ನೋಡುವ ಸಲುವಾಗಿ ಒಬ್ಬನೇ ಹೊರಟು ಕಾಡಿನಲ್ಲಿ ಕೃಷ್ಣಾಜಿನದಿಂದ ಆಚ್ಛಾದಿತನಾದ ತನ್ನ ತಂದೆಯನ್ನು ನೋಡಿದನು.

ಜಘ್ನಿರಾತ್ರೇ ನಿದ್ರಾಂಧಃ ಸಾವಶೇಷೇ ತಮಸ್ಯಪಿ ।
ಚರಂತಂ ಗಹನೇಽರಣ್ಯೇ ಮೇನೇ ಸ ಪಿತರಂ ಮೃಗಮ್ ॥೫॥

ಪಶ್ಚಿಮರಾತ್ರಿಯಲ್ಲಿ ನಿದ್ರಾಜಡನಾಗಿ ಇನ್ನೂ ಕತ್ತಲೆ ಉಳಿದಿರಲು ದಟ್ಟವಾದ ಕಾಡಿನಲ್ಲಿ ತಿರುಗಾಡುತ್ತಿದ್ದ ತನ್ನ ತಂದೆಯನ್ನು ಮೃಗವೆಂದು ತಿಳಿದನು.

ಮೃಗಂ ತು ಮನ್ಯಮಾನೇನ ಪಿತಾ ವೈ ತೇನ ಹಿಂಸಿತಃ ।
ಅಕಾಮಯಾನೇನ ತದಾ ಶರೀರತ್ರಾಣಮಿಚ್ಛತಾ ॥೬॥

ಮೃಗವೆಂದು ತಿಳಿದ ಅವನು ತನ್ನ ಶರೀರ ಯಾತ್ರೆಯನ್ನು ಬಯಸಿ ತನ್ನ ಅರಿವಿಲ್ಲದೆಯೇ ತಂದೆಯನ್ನು ವಧೆಮಾಡಿದನು.

ತತಃ ಸಮೀಪಮಾಸಾದ್ಯ ಪಿತರಂ ದೃಷ್ಟವಾನ್ ಹತಮ್ ।
ಅಜ್ಞಾನಾತ್ ಪಿತರಂ ಹತ್ವಾ ಮೃಗಬುದ್ಧ್ಯಾ ಪರಾವಸುಃ ।
ವಿಲಪ್ಯ ಬಹುಧಾ ರಾಜನ್ ರೈಭ್ಯಸ್ಯ ಚ ಮಹಾತ್ಮನಃ ॥೬.೧॥

ಅನಂತರ ಸಮೀಪಕ್ಕೆ ಬಂದು ಅವನು ತನ್ನ ತಂದೆಯು ಹತನಾಗಿರುವುದನ್ನು ನೋಡಿದನು. ಪರಾವಸುವು ತನ್ನ ಅಜ್ಞಾನದಿಂದ ಮೃಗವೆಂದು ತಿಳಿದು ತನ್ನ ತಂದೆಯಾದ ಮಹಾತ್ಮರಾದ ರೈಭ್ಯರನ್ನು ವಧೆಮಾಡಿ ಬಹುವಾಗಿ ವಿಲಾಪವನ್ನು ಮಾಡಿ (ಮಾಡಿದನು).

ತಸ್ಯ ಸ ಪ್ರೇತಕಾರ್ಯಾಣಿ ಕೃತ್ವಾ ಸರ್ವಾಣಿ ಭಾರತ ।
ಪುನರಾಗತ್ಯ ತತ್ರೈವಮಬ್ರವೀದ್ ಭ್ರಾತರಂ ವಚಃ ॥೭॥

ಎಲೈ ಭಾರತನೇ! ತನ್ನ ತಂದೆಗೆ ಎಲ್ಲಾ ಪ್ರೇತಕಾರ್ಯಗಳನ್ನೂ ನೆರವೇರಿಸಿ ಪುನಃ ಸತ್ರಕ್ಕೆ ಬಂದು ತನ್ನ ತಮ್ಮನನ್ನು ಕುರಿತು ಹೀಗೆ ಮಾತನಾಡಿದನು.

ಇದಂ ಕರ್ಮ ನ ಶಕ್ತಸ್ತ್ವಂ ವೋಢುಮೇಕಃ ಕಥಂಚನ ।
ಮಯಾ ತು ಹಿಂಸಿತಸ್ತಾತೋ ಮನ್ಯಮಾನೇನ ತಂ ಮೃಗಮ್ ॥೮॥

ಈ ಸತ್ರಯಾಗವನ್ನು ನೀನೊಬ್ಬನೇ ನಿರ್ವಹಿಸಲು ಯಾವ ರೀತಿಯಿಂದಲೂ ಸಾಧ್ಯವಾಗುವುದಿಲ್ಲ. ನಾನಾದರೂ ಮೃಗವೆಂದು ತಿಳಿದು ತಂದೆಯ ವಧೆಯನ್ನು ಮಾಡಿದ್ದೇನೆ.

ಸೋಽಸ್ಯದರ್ಥಂ ವ್ರತಂ ತಾತ ಚರ ತ್ವಂ ಬ್ರಹ್ಮಹಿಂಸನಮ್ ।
ಸಮರ್ಥೋಽಹಮೇಕಾಕೀ ಕರ್ಮ ಕರ್ತುಮಿದಂ ಮುನೇ ॥೯॥

ಆದ್ದರಿಂದ ಎಲೈ ಪ್ರೀತಿಪಾತ್ರನೇ! ಅಂತಹ ನೀನು ನನ್ನ ಸಲುವಾಗಿ ಬ್ರಹ್ಮಹತ್ಯೆಯನ್ನು ಪರಿಹಾರ ಮಾಡುವ ವ್ರತವನ್ನು ಮಾಡು. ಎಲೈ ಮುನಿಯೇ! ನಾನೊಬ್ಬನೇ ಈ ಸತ್ರಯಾಗವನ್ನು ನಿರ್ವಹಿಸಲು ಸಮರ್ಥನಾಗಿದ್ದೇನೆ.

ಆರ್ವಾವಸುಃ

ಕರೋತು ವೈ ಭವಾನ್ ಸತ್ರಂ ಬೃಹದ್ದ್ಯುಮ್ನಸ್ಯ ಧೀಮತಃ ।
ಬ್ರಹ್ಮವಧ್ಯಾಂ ಚರಿಷ್ಯೇಽಹಂ ತ್ವದರ್ಥಂ ನಿಯತೇಂದ್ರಿಯಃ ॥೧೦॥

ಆರ್ವಾವಸು– ನೀನು ಮೇಧಾವಿಯಾದ ಬೃಹದ್ಯುಮ್ನನ ಸತ್ರವನ್ನು ನಿರ್ವಹಿಸು. ನಾನು ನಿನ್ನ ಸಲುವಾಗಿ ನಿಯತೇಂದ್ರಿಯನಾಗಿ ಬ್ರಹ್ಮಹತ್ಯೆಯ ಪ್ರಾಯಶ್ಚಿತ್ತ ವ್ರತವನ್ನು ಆಚರಿಸುವೆನು.

ಲೋಮಶಃ

ಸೋಽಗಚ್ಛದ್ದನಮೇಕಾಗ್ರೋ ಬ್ರಹ್ಮಹತ್ಯಾವ್ರತಂ ಚರನ್ ।
ತಚ್ಛ್ರುತ್ವಾರ್ವಾವಸುಃ ಪಶ್ಚಾತ್ಪ್ರಾಯಶ್ಚಿತ್ತಂ ವಿಧಾಯ ಚ ॥೧೦.೧॥

ಸ ತಸ್ಯ ಬ್ರಹ್ಮವಧ್ಯಾಯಾಃ ಪಾರಂ ಗತ್ವಾ ಯುಧಿಷ್ಠಿರ ।
ಆರ್ವಾವಸುಸ್ತದಾ ಸತ್ರಮಾಜಗಾಮ ಪುನರ್ಮುನಿಃ ॥೧೧॥

ಲೋಮಶ– ಎಲೈ ಯುಧಿಷ್ಠಿರನೇ! ಆ ಆರ್ವಾವಸು ಋಷಿಯಾದರೂ ಸಹ ಬ್ರಹ್ಮಹತ್ಯೆಯನ್ನು ಪರಿಹರಿಸುವ ವ್ರತವನ್ನು ಸಂಪೂರ್ಣವಾಗಿ ನಿರ್ವಹಿಸಿ ಪುನಃ ಸತ್ರಕ್ಕೆ ಹಿಂದಿರುಗಿ ಬಂದನು.

ತತಃ ಪರಾವಸುರ್ದೃಷ್ಟ್ವಾ ಭ್ರಾತರಂ ಸಮುಪಸ್ಥಿತಮ್ ।
ಬೃಹದ್ದ್ಯುಮ್ನಮುವಾಚೇದಂ ವಚನಂ ಹರ್ಷಗದ್ಗದಮ್ ॥೧೨॥

ಆಗ ಪರಾವಸುವು ಹಿಂದಿರುಗಿದ ತಮ್ಮನನ್ನು ನೋಡಿ ಸಂತೋಷದಿಂದ ಗದ್ಗದವಾದ ಕಂಠದಿಂದ ಬೃಹದ್ದ್ಯುಮ್ನನನ್ನು ಕುರಿತು ಹೀಗೆ ಮಾತನಾಡಿದನು.

ಏಷ ತೇ ಬ್ರಹ್ಮಹಾ ಯಜ್ಞಂ ಮಾ ದ್ರಷ್ಟುಂ ಪ್ರವಿಶೇದಿತಿ ।
ಬ್ರಹ್ಮಹಾ ಪ್ರೇಕ್ಷತೇನಾಪಿ ಪೀಡಯೇತ್ ತ್ವಾಮಸಂಶಯಮ್ ॥೧೩॥

ಈ ಬ್ರಹ್ಮಹತ್ಯಾ ದೋಷವನ್ನು ಹೊಂದಿರುವ ಅರ್ವಾವಸುವು ನಿನ್ನ ಯಜ್ಞ ಶಾಲೆಯನ್ನು ನೋಡಲು ಪ್ರವೇಶಿಸದಿರಲಿ. ಬ್ರಹ್ಮಹತ್ಯೆಯನ್ನು ಮಾಡಿದವನು ತನ್ನ ದೃಷ್ಟಿಯಿಂದಲೂ ನಿನಗೆ ಪೀಡೆಯನ್ನು ಉಂಟುಮಾಡುತ್ತಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಲೋಮಶಃ

ತಚ್ಛ್ರುತ್ವೈವ ತದಾ ರಾಜಾ ಪ್ರೇಷ್ಯಾನಾಹ ಸ ವಿಟ್‌ಪತೇ ।
ಪ್ರೇಷ್ಯೈರುತ್ಸಾರ್ಯಮಾಣಸ್ತು ರಾಜನ್ನರ್ವಾವಸುಸ್ತದಾ ।
ನ ಮಯಾ ಬ್ರಹ್ಮಹತ್ಯೇಯಂ ಕೃತೇತ್ಯಾಹ ಪುನಃ ಪುನಃ ॥೧೪॥

ಆ ಮಾತುಗಳನ್ನು ಕೇಳಿದ ತಕ್ಷಣವೇ ರಾಜನು ತನ್ನ ಸೇವಕರಿಗೆ ಅಪ್ಪಣೆಯನ್ನು ಮಾಡಿದನು. ಎಲೈ ರಾಜನೇ! ರಾಜಸೇವಕರು ಅರ್ವಾವಸುವನ್ನು ಹೊರಗೆ ನೂಕುತ್ತಿರಲು ಅವನು ನಾನು ಬ್ರಹ್ಮಹತ್ಯೆಯನ್ನು ಮಾಡಿಲ್ಲ ಎಂದು ಪುನಃ ಪುನಃ ಹೇಳಿದನು.

ಉಚ್ಯಮಾನೋಽಸಕೃತ್ ಪ್ರೇಷ್ಯೈರ್ಬ್ರಹ್ಮಹನ್ನಿತಿ ಭಾರತ ।
ನೈವ ಸ್ಮ ಪ್ರತಿಜಾನಾಮಿ ಬ್ರಹ್ಮವಧ್ಯಾಂ ಸ್ವಯಂಕೃತಾಮ್ ।
ಮಮ ಭ್ರಾತ್ರಾ ಕೃತಮಿದಂ ಮಯಾ ಸ ಪರಿಮೋಕ್ಷಿತಃ ॥೧೫॥

ಎಲೈ ಭಾರತನೇ! ರಾಜಸೇವಕರಿಂದ ಅವನು ಪುನಃ ಪುನಃ ಬ್ರಹ್ಮಹತ್ಯಾಕಾರನೆಂದು ಕರೆಯಲ್ಪಟ್ಟರು, ನಾನು ಎಂದೂ ಬ್ರಹ್ಮಹತ್ಯವನ್ನು ಮಾಡಿಲ್ಲ (ಅಂತಹ ಯಾವ ನೆನಪೂ ನನಗೆ ಇಲ್ಲ). ನನ್ನ ಅಣ್ಣನಾದ ಪರಾವಸುವು ಬ್ರಹ್ಮಹತ್ಯೆಯನ್ನು ಮಾಡಿದವನು. ನಾನು ಅವನನ್ನು ಬ್ರಹ್ಮಹತ್ಯಾ ದೋಷದಿಂದ ಪಾರು ಮಾಡಿದ್ದೇನೆ ಎಂದು ಹೇಳಿದನು.

ಸ ತಥಾ ಪ್ರವದನ್ ಕ್ರೋಧಾತ್ ತೈಶ್ಚ ಪ್ರೇಷ್ಯೈಃ ಪ್ರಧಾಪಿತಃ ।
ತೂಷ್ಣೀಂ ಜಗಾಮ ಬ್ರಹ್ಮರ್ಷಿರ್ಪನಮೇವ ಮಹಾತಪಾಃ ॥೧೬॥

ಅವನು ಹಾಗೆ ಹೇಳುತ್ತಿದ್ದರೂ ರಾಜಸೇವಕರು ಅವನನ್ನು ಕುರಿತು ಕ್ರೋಧದಿಂದ ಮಾತನಾಡಿದರು. ಆಗ ಬ್ರಹ್ಮರ್ಷಿಯೂ ಮತ್ತು ಮಹಾತಪಸ್ವಿಯೂ ಆದ ಅವನು ಮೌನದಿಂದ ಪುನಃ ಕಾಡಿಗೇ ನಡೆದನು.

ಉಗ್ರಂ ತಪಃ ಸಮಾಸ್ಥಾಯ ದಿವಾಕರಮಥಾಶ್ರಿತಃ ।
ರಹಸ್ಯವೇದಂ ಕೃತವಾನ್ ಸೂರ್ಯಸ್ಯ ದ್ವಿಜಸತ್ತಮಃ ॥೧೭॥

ಮೂರ್ತಿಮಾಂಸ್ತಂ ದದರ್ಶಾಥ ಸ್ವಯಮಗ್ರ್ಯಭುಗವ್ಯಯಃ ॥೧೮॥

ಅವನು ಉಗ್ರವಾದ ತಪಸ್ಸನ್ನು ಆರಂಭಿಸಿ ಸೂರ್ಯನನ್ನು ಉಪಾಸನೆ ಮಾಡಿದನು. ಆ ದ್ವಿಜಶ್ರೇಷ್ಠನು ಸೂರ್ಯಮಹಿಮಾ ಪ್ರಕಾಶಕವಾದ ರಹಸ್ಯವೇದಕ್ಕೆ ಋಷಿಯಾದನು. ಆಗ ಯಜ್ಞದಲ್ಲಿ ಅಗ್ರಪೂಜ್ಯನೂ ಅವ್ಯಯನೂ ಆದ ಸೂರ್ಯದೇವನು ಸ್ವತಃ ಶರೀರವನ್ನು ಧರಿಸಿ ಅವನಿಗೆ ಪ್ರತ್ಯಕ್ಷನಾದನು.

ಪ್ರೀತಾಸ್ತಸ್ಯಾಭವನ್ ದೇವಾಃ ಕರ್ಮಣಾऽರ್ವಾವಸೋನೃಪ ।
ತಂ ತೇ ಪ್ರವರಯಾಮಾಸುರ್ನಿರಾಸುಶ್ಚ ಪರಾವಸುಮ್ ॥೧೯॥

ಎಲೈ ರಾಜನೇ! ಅರ್ವಾವಸುವು ಮಾಡಿದ ತಪೋರೂಪವಾದ ಕರ್ಮದಿಂದ ದೇವತೆಗಳು ಅವನಿಗೆ ಪ್ರಸನ್ನರಾದರು. ಅವರು ವರವನ್ನು ಕೇಳು ಎಂದು ಅವನನ್ನು ಒತ್ತಾಯ ಮಾಡಿ ಪರಾವಸುವನ್ನು ನಿರಾಕರಿಸಿದರು.

ತತೋ ದೇವಾ ವರಂ ತಸ್ಮೈ ದದುರಗ್ನಿಪುರೋಗಮಾಃ ।
ಸ ಚಾಪಿ ವರಯಾಮಾಸ ಪಿತುರುತ್ಥಾನಮಾತ್ಮನಃ ॥೨೦॥

ಅನಾಗಸ್ತ್ವಂ ತತೋ ಭ್ರಾತುಃ ಪಿತುಶ್ಚಾಸ್ಮರಣಂ ವಧೇ ।
ಭರದ್ವಾಜಸ್ಯ ಚೋತ್ಥಾನಂ ಯವಕ್ರೀತಸ್ಯ ಚೋಭಯೋಃ ॥೨೧॥

ಪ್ರತಿಷ್ಠಾಂ ಚಾಪಿ ವೇದಸ್ಯ ಸೌರಸ್ಯ ದ್ವಿಜಸತ್ತಮಃ ।
ಏವಮಸ್ತ್ವಿತಿ ತಂ ದೇವಾಃ ಪ್ರೋಚುಶ್ಚಾಪಿ ವರಾನ್ ದದುಃ ॥೨೧.೧॥

ಆಗ ಅಗ್ನಿ ಮೊದಲಾದ ದೇವತೆಗಳು ಅವನಿಗೆ ವರವನ್ನು ಕೊಟ್ಟರು. ಅವನಾದರೂ ತನ್ನ ತಂದೆಯ ಪುನರುತ್ಥಾನವನ್ನೂ, ಅಣ್ಣನ ಬ್ರಹ್ಮಹತ್ಯಾ ಪರಿಹಾರವನ್ನೂ, ತಂದೆಗೆ

ತನ್ನ ವಧೆಯ ಸ್ಮರಣೆ ಇಲ್ಲದಿರುವುದನ್ನೂ, ಭರದ್ವಾಜ ಮತ್ತು ಯವಕ್ರೀತ ಇವರಿಬ್ಬರ ಉತ್ಥಾನವನ್ನೂ, ಸೌರಮಂತ್ರ ಪ್ರಕಾಶಕವಾದ ವೇದಭಾಗದ ಸಂಪ್ರದಾಯ ಪ್ರವೃತ್ತಿಯನ್ನೂ ದ್ವಿಜಶ್ರೇಷ್ಠನಾದ ಅವನು ವರಗಳನ್ನಾಗಿ ಬೇಡಿದನು. ದೇವತೆಗಳು ಹಾಗೆಯೇ ಆಗಲಿ ಎಂದು ಹೇಳಿ ಅವನು ಕೇಳಿದ ವರಗಳನ್ನು ನೀಡಿದರು.

ತತಃ ಪ್ರಾದುರ್ಬಭೂವುಸ್ತೇ ಸರ್ವ ಏವ ಯುಧಿಷ್ಠಿರ ।
ಅಥಾಬ್ರವೀದ್ ಯವಕ್ರೀತೋ ದೇವಾನಗ್ನಿಪುರೋಗಮಾನ್ ॥೨೨॥

ಎಲೈ ಯುಧಿಷ್ಠಿರನೇ! ಆಗ ಅವರೆಲ್ಲರೂ ಪುನಃ ಎದ್ದು ಬಂದರು. ಆಗ ಯವಕ್ರೀತನು ಅಗ್ನಿ ಮೊದಲಾದ ದೇವತೆಗಳನ್ನು ಕುರಿತು ಹೀಗೆ ಹೇಳಿದನು.

ಸಮಧೀತಂ ಮಯಾ ಬ್ರಹ್ಮ ವ್ರತಾನಿ ಚರಿತಾನಿ ಚ
ಕಥಂ ಚ ರೈಭ್ಯಃ ಶಕ್ತೋ ಮಾಮಧೀಯಾನಂ ತಪಸ್ವಿನಮ್ ।
ತಥಾ ಯುಕ್ತೇನ ವಿಧಿನಾ ನಿಹಂತುಮಮರೋತ್ತಮಾಃ ॥೨೩॥

ದೇವತೆಗಳೇ! ನಾನು ವೇದಾಧ್ಯಯನವನ್ನು ಮಾಡಿ ವ್ರತಗಳನ್ನು ಆಚರಿಸಿದ್ದೇನೆ. ಎಲೈ ದೇವಶ್ರೇಷ್ಠರೇ! ಅಂತಹ ಅಧ್ಯಯನಶೀಲನಾದ ತಪಸ್ವಿಯಾದ ನನ್ನನ್ನು ರೈಭ್ಯರು ಆ ಪ್ರಕಾರದಲ್ಲಿ ವಧೆ ಮಾಡಲು ಹೇಗೆ ಸಾಧ್ಯವಾಯಿತು?

ದೇವಾಃ

ಮೈವಂ ಕೃಥಾ ಯವಕ್ರೀತ ಯಥಾ ವದಸಿ ವೈ ಮುನೇ ।
ಋತೇ ಗುರುಮಧೀತಾ ಹಿ ಸುಖಂ ವೇದಾಸ್ತ್ವಯಾ ಪುರಾ ॥೨೪॥

ದೇವತೆಗಳು– ಯವಕ್ರೀತ ಋಷಿಯೇ! ಹಾಗೆ ಹೇಳಬೇಡ. ನೀನು ಹಿಂದೆ ಗುರುವಿಲ್ಲದೇ ವೇದಗಳನ್ನು ಅನಾಯಾಸದಿಂದ ಅಧ್ಯಯನ ಮಾಡಿದಿ.

ಆನೇನ ತು ಗುರೂನ್ ದುಃಖಾತ್ ತೋಷಯಿತ್ವಾऽऽತ್ಮಕರ್ಮಣಾ ।
ಕಾಲೇನ ಮಹತಾ ಕ್ಲೇಶಾತ್ ಬ್ರಹ್ಮಾಧಿಗತಮುತ್ತಮಮ್ ॥೨೫॥

ನೀನು ಮಾಡಿದ ನಿನ್ನ ಕರ್ಮಗಳಿಂದ ಈ ದುಃಖಿಗಳನ್ನು ಅನುಭವಿಸಿ ಗುರುಗಳನ್ನು ಸಂತೋಷಪಡಿಸಿದ್ದೀಯೆ. ಬಹಳ ಕಾಲ ಕ್ಲೇಶವನ್ನು ಅನುಭವಿಸಿ ಈಗ ಶ್ರೇಷ್ಠವಾದ ವೇದಗಳನ್ನು ಪಡೆದಿದ್ದೀಯೆ.

ಲೋಮಶಃ

ಯವಕ್ರೀತಮಥೋಕ್ತ್ವೈವಂ ದೇವಾಃ ಸಾಗ್ನಿಪುರೋಗಮಾಃ ।
ಸಂಜೀವಯಿತ್ವಾ ತಾನ್ ಸರ್ವಾನ್ ಪುನರ್ಜಗ್ಮುಸ್ತ್ರಿವಿಷ್ಟಪಮ್ ॥೨೬॥

ಲೋಮಶ– ಅಗ್ನಿ ಮೊದಲಾದ ದೇವತೆಗಳು ಯವಕ್ರೀತನನ್ನು ಕುರಿತು ಹೀಗೆ ಮಾತನಾಡಿ ಮೃತರಾದ ಅವರೆಲ್ಲರನ್ನೂ ಪುನಃ ಬದುಕಿಸಿ ಪುನಃ ಸ್ವರ್ಗಕ್ಕೆ ಹೊರಟು ಹೋದರು.

ತತೋ ವೈ ಸ ಯವಕ್ರೀತೋ ಬ್ರಹ್ಮಚರ್ಯಂ ಚಚಾರ ಹ ।
ಅಷ್ಟಾದಶ ಚ ವರ್ಷಾಣಿ ತ್ರಿಂಶತಂ ಚ ಯುಧಿಷ್ಠಿರ ॥೨೭॥

ಎಲೈ ಯುಧಿಷ್ಠಿರನೇ! ಅನಂತರ ಆ ಯವಕ್ರೀತನು ನಲವತ್ತೆಂಟು ವರ್ಷಗಳ ಕಾಲ ಬ್ರಹ್ಮಚರ್ಯವ್ರತವನ್ನು (ಗುರುಕುಲವಾಸವನ್ನು) ಆಚರಿಸಿದನು.

ಆಶ್ರಮಸ್ತಸ್ಯ ಪುಣ್ಯೋಽಯಂ ಸದಾ ಪುಷ್ಪಫಲದ್ರುಮಃ ।
ಅತ್ರೋಷ್ಯ ರಾಜಶಾರ್ದೂಲ ಸರ್ವಂಪಾಪಂ ಪ್ರಮೋಕ್ಷ್ಯಸಿ ॥೨೮॥

ಎಲೈ ರಾಜಶಾರ್ದೂಲನೇ! ಇದು ಯವಕ್ರೀತನ ಪವಿತ್ರವಾದ ಆಶ್ರಮ. ಸದಾ ಪುಷ್ಪಫಲಗಳಿಂದ ಭರಿತವಾದ ಈ ಆಶ್ರಮದಲ್ಲಿ ವಾಸ ಮಾಡಿ ನೀನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚತ್ರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಏಕನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ ೨೨ ನೇ ಅಧ್ಯಾಯ

ಏವಂ ವಸತ್ಯಮಿತಪೌರುಷವೀರ್ಯಸಾರೇ
ನಾರಾಯಣೇ ಸ್ವಪುರಿ ಶಕ್ರಧನಂಜಯೋಕ್ತಃ ।
ಸಂಪ್ರಾಪ್ಯ ಲೋಮಶಮುನಿಃ ಸಕಲಾನಿ ತೀರ್ಥಾ-
ನ್ಯಾಪ್ತುಂ ಸ ಪಾಂಡುತನಯೇಷು ಸಹಾಯ ಆಸೀತ್ ॥೨೫೭॥

ಹೀಗೆ ಅಮಿತ ಬಲ ವೀರ್ಯಗಳಿಂದ ತುಂಬಿದ ಶ್ರೀಕೃಷ್ಣ ತನ್ನ ನಗರದಲ್ಲಿ ವಾಸವಾಗಿದ್ದಾಗ ಇಂದ್ರಾರ್ಜುನರಿಂದ ಪ್ರಾರ್ಥಿತರಾದ ಲೋಮಶ ಮುನಿ ಪಾಂಡವರಿಗೆ ಎಲ್ಲ ತೀರ್ಥಗಳ ಯಾತ್ರೆ ಮಾಡುವಲ್ಲಿ ಸಹಾಯರಾದರು.

ಪೃಥ್ವೀಂ ಪ್ರದಕ್ಷಿಣತ ಏತ್ಯ ಸಮಸ್ತತೀರ್ಥ-
ಸ್ನಾನಂ ಯಥಾಕ್ರಮತ ಏವ ವಿಧಾಯ ಪಾರ್ಥಾಃ ।
ಸಂಪೂಜ್ಯ ತೇಷು ನಿಖಿಲೇಷು ಹರಿಂ ಸುಭಕ್ತ್ಯಾ
ಕೃಷ್ಣೇ ಸಮರ್ಪಯಿತುಮಾಪುರಥ ಪ್ರಭಾಸಮ್ ।
ಸಂಭಾವನಾಯ ಸಕಲೈರ್ಯದುಭಿಃ ಸಮೇತ
ಸ್ತೇಷಾಂ ಚ ರಾಮಸಹಿತೋ ಹರಿರಾಜಗಾಮ ॥೨೫೮॥

ಪಾರ್ಥೈಃ ಸಂಪೂಜಿತಸ್ತತ್ರ ಕೃಷ್ಣೋ ಯದುಗಣೈಃ ಸಹ ।
ಪಾರ್ಥಾನ್ ಸಂಪೂಜಯಾಮಾಸುರ್ವೃಷ್ಣಯಶ್ಚಾಜ್ಞಯಾ ಹರೇಃ ॥೨೫೯॥

ಪಾಂಡವರು ಭೂಪ್ರದಕ್ಷಿಣೆ ಮಾಡುತ್ತ ಕ್ರಮವಾಗಿ ಸಕಲ ತೀರ್ಥಸ್ನಾನವನ್ನು ಮಾಡಿ ಅಲ್ಲಿ ಎಲ್ಲ ಕಡೆ ಹರಿಯನ್ನೇ ಒಳ್ಳೆಯ ಭಕ್ತಿಯಿಂದ ಆರಾಧಿಸಿ ಕೃಷ್ಣನಲ್ಲಿ ಸಮರ್ಪಿಸುವುದಕ್ಕಾಗಿ ಪ್ರಭಾಸ ಕ್ಷೇತ್ರಕ್ಕೆ ಬಂದರು. ಅವರನ್ನು ಸತ್ಕರಿಸಲು ಶ್ರೀಕೃಷ್ಣನೇ ಎಲ್ಲ ಯಾದವರೊಂದಿಗೆ ಮತ್ತು ಬಲರಾಮನೊಂದಿಗೆ ಬಂದ. ಅಲ್ಲಿ ಯಾದವರೊಂದಿಗೆ ಕೃಷ್ಣನನ್ನು ಪಾಂಡವರು ಸತ್ಕರಿಸಿದರು. ಯಾದವರೂ ಕೃಷ್ಣನಾಜ್ಞೆಯಂತೆ ಪಾಂಡವರನ್ನು ಸತ್ಕರಿಸಿದರು.

ತತ್ರ ಭೀಮಂ ತಪೋವೇಷಂ ದೃಷ್ಟ್ವಾತಿಸ್ನೇಹಕಾರಣಾತ್ ।
ದುರ್ಯೋಧನಂ ನಿಂದಯತಿ ರಾಮೇ ಸಾತ್ಯಕಿರಬ್ರವೀತ್ ॥೨೬೦॥

ಸರ್ವೇ ವಯಂ ನಿಹತ್ಯಾದ್ಯ ಸಕರ್ಣಾನ್ ಧೃತರಾಷ್ಟ್ರಜಾನ್ ।
ಅಭಿಮನ್ಯುಂ ಸ್ಥಾಪಯಾಮೋ ರಾಜ್ಯೇ ಯಾವತ್ ತ್ರಯೋದಶಮ್ ॥

ಸಂವತ್ಸರಂ ಸಮಾಪ್ಯೈವ ಪುರಂ ಯಾಸ್ಯಂತಿ ಪಾಂಡವಾಃ ।
ತತೋ ಯುಧಿಷ್ಠಿರೋ ರಾಜಾ ರಾಜ್ಯಂ ಶಾಸತು ಪೂರ್ವವತ್ ॥೨೬೨॥

ಪಾಂಡವರ ಮಧ್ಯದಲ್ಲಿ ಭೀಮನನ್ನು ತಪಸ್ಸಿನ ವೇಷದಲ್ಲಿ ಕಂಡು ಬಲರಾಮನ ಅತಿಪ್ರೀತಿಯಿಂದ ದುರ್ಯೋಧನನನ್ನು ನಿಂದಿಸಿದಾಗ ಸಾತ್ಯಕಿ ನುಡಿದ. 'ನಾವೆಲ್ಲರೂ ಈಗಲೇ ಕರ್ಣನ ಸಮೇತ ಕೌರವರನ್ನು ಕೊಂದು ಅಭಿಮನ್ಯುವನ್ನು ರಾಜ್ಯದಲ್ಲಿ ಕುಳ್ಳಿರಿಸುವೆವು. ಹದಿಮೂರು ವರ್ಷಗಳನ್ನು ಕಳೆದು ಪಾಂಡವರು ಹಸ್ತಿನಾವತಿಗೆ ಹಿಂದಿರುಗಿ ಬಂದಾಗ ಧರ್ಮರಾಜನೇ ಹಿಂದಿನಂತೆ ರಾಜ್ಯವಾಳಲಿ.

ಏವಂ ವದತ್ಯೇವ ಶಿನಿಪ್ರವೀರೇ
ಜನಾರ್ದನಃ ಪಾರ್ಥಮುಖಾಂಯುದೀಕ್ಷ್ಯ ।
ಉವಾಚ ಶೈನೇಯ ನ ಪಾಂಡುಪುತ್ರಾಃ
ಪರೇಣ ಸಂಸಾಧಿತರಾಜ್ಯಕಾಮಾಃ ॥೨೬೩॥

ಸ್ವಬಾಹುವೀರ್ಯೇಣ ನಿಹತ್ಯ ಶತ್ರೂ-
ನಾಪ್ಸ್ಯಂತಿ ರಾಜ್ಯಂ ತ ಇತಿರಿತೇऽಮುನಾ ।
ತಥೇತಿ ಪಾರ್ಥಾ ಅವದಂಸ್ತತಸ್ತೇ
ಕೃಷ್ಣಂ ಪುರಸ್ಕೃತ್ಯ ಯಯುರ್ದಶಾರ್ಹಾಃ ॥೨೬೪॥

ಸಾತ್ಯಕಿ ಹೀಗೆ ಹೇಳಿದಾಗ ಶ್ರೀಕೃಷ್ಣ ಪಾಂಡವರ ಮುಖಗಳನ್ನು ನೋಡಿ ಹೇಳಿದ– 'ಸಾತ್ಯಕಿ, ಪಾಂಡವರು ಇತರರು ಸಂಪಾದಿಸಿ ಕೊಡುವ ರಾಜ್ಯವನ್ನು ಬಯಸುವುದಿಲ್ಲ. ತಮ್ಮ ಬಾಹುಬಲದಿಂದ ಶತ್ರುಗಳನ್ನು ಸಂಹರಿಸಿಯೇ ರಾಜ್ಯವನ್ನು ಸಂಪಾದಿಸುತ್ತಾರೆ'. ಕೃಷ್ಣ ಹೀಗೆ ಹೇಳಿದಾಗ ಪಾಂಡವರು 'ಹೌದು ಹಾಗೇ ಮಾಡುತ್ತೇವೆ' ಎಂದರು. ಬಳಿಕ ಎಲ್ಲಯಾದವರೂ ಕೃಷ್ಣನನ್ನು ಮುಂದೆ ಮಾಡಿಕೊಂಡು ಹೋದರು.

★ ★ ★ ★

ನೂರ ಮೂವತ್ತಾರನೆಯ ಅಧ್ಯಾಯ

ಲೋಮಶರ ಆದೇಶದಂತೆ ಯುಧಿಷ್ಠಿರಾದಿಗಳ ಕೈಲಾಸಾದಿ ಗಿರಿ ಪ್ರವೇಶ. ಲೋಮಶರಿಂದ ಆ ಕ್ಷೇತ್ರಗಳ ದುರ್ಗಮತ್ವ ಕಥನ.

ಲೋಮಶಃ

ಉಶೀರಬೀಜಂ ಮೈನಾಕಂ ಗಿರಿಂ ಶ್ವೇತಂ ಚ ಭಾರತ ।
ಸಮತೀತೋಽಸಿ ಕೌಂತೇಯ ಕಾಲಶೈಲಂ ಚ ಪಾರ್ಥಿವ ॥೧॥

ಎಲೈ ಕೌಂತೇಯನಾದ ರಾಜನೇ! ಭಾರತನೇ, ನೀನು ಉಶೀರಬೀಜ ಪರ್ವತವನ್ನು ಮೈನಾಕ ಪರ್ವತವನ್ನು, ಶ್ವೇತಪರ್ವತವನ್ನು ಮತ್ತು ಕಾಲಶೈಲ ಪರ್ವತವನ್ನು ದಾಟಿದ್ದೀಯೆ.

ವಿಷಾ ಗಂಗಾ ಸಪ್ತವಿಧಾ ರಾಜತೇ ಭರತರ್ಷಭ ।
ಸ್ಥಾನಂ ವಿರಜಸಂ ಪುಣ್ಯಂ ಯತ್ರಾಗ್ನಿರ್ನಿತ್ಯಮಿಧ್ಯತೇ ॥೨॥

ಎಲೈ ಭರತರ್ಷಭನೇ! ಇಲ್ಲಿ ಗಂಗೆಯು ಏಳು ಕವಲುಗಳಿಂದ ಶೋಭಿಸುತ್ತಿದ್ದಾಳೆ. ಇದು ವಿರಜಸವೆಂಬ ಪುಣ್ಯಕ್ಷೇತ್ರ. ಇಲ್ಲಿ ಅಗ್ನಿಯು ಯಾವಾಗಲೂ ಜ್ವಲಿಸುತ್ತಿರುತ್ತದೆ (ಇದು ಹರಿದ್ವಾರದಿಂದ ಆಚೆಗಿರುವ ವಿಯೋಗಿ ನಾರಾಯಣವೆಂಬ ಕ್ಷೇತ್ರ).

ವಿತದ್ವೈ ಮಾನುಷೇಣಾದ್ಯ ನ ಶಕ್ಯಂ ದ್ರಷ್ಟುಮದ್ಭುತಮ್ ।
ಸಮಾಧಿಂ ಕುರುತಾವ್ಯಗ್ರಾಸ್ತೀರ್ಥಾನ್ಯೇತಾನಿ ದ್ರಕ್ಷ್ಯಥ ॥೩॥

ವಿತದ್ರಕ್ಷ್ಯಸಿ ದೇವಾನಾಮಾಕ್ರೀಡಂ ಚರಣಾಂಕಿತಮ್ ।

ಈ ಅದ್ಭುತವನ್ನು ಮನುಷ್ಯರು ನೋಡಲು ಸಾಧ್ಯವಿಲ್ಲ. ಬಹಳ ಎಚ್ಚರಿಕೆಯಿಂದ ಮನಸ್ಸಿನಲ್ಲಿ ಸಮಾಧಿಯನ್ನು ಮಾಡಿ, ಆಗ ಈ ಕ್ಷೇತ್ರಗಳನ್ನೆಲ್ಲಾ ನೋಡಬಹುದು. ದೇವತೆಗಳ ಪಾದಚಿಹ್ನೆಗಳಿಂದ ಅಲಂಕೃತವಾದ ದೇವತೆಗಳ ಈ ವಿಹಾರಸ್ಥಾನವನ್ನು ನೋಡುವಿ.

ಶ್ವೇತಂ ಗಿರಿಂ ಪ್ರವೇಕ್ಷ್ಯಾಮೋ ಮಂದರಂ ಚೈವ ಪರ್ವತಮ್ ।
ಯತ್ರ ಮಾಣಿವರೋ ಯಕ್ಷಃ ಕುಬೇರಶ್ಚೈವ ಯಕ್ಷರಾಟ್ ॥೪॥

ಇನ್ನು ಶ್ವೇತಗಿರಿಯನ್ನು ಮತ್ತು ಮಂದರಪರ್ವತವನ್ನು ಪ್ರವೇಶಿಸುವೆವು. ಅಲ್ಲಿ ಯಕ್ಷರಾಜನಾದ ಕುಬೇರನೂ ಮಾಣಿಭದ್ರನೆಂಬ ಅವನ ಸ್ನೇಹಿತನಾದ ಯಕ್ಷನೂ ಇರುತ್ತಾರೆ.

ಅಷ್ಟಾಶೀತಿಸಹಸ್ರಾಣಿ ಗಂಧರ್ವಾಃ ಶೀಘ್ರಗಾಮಿನಃ ।
ತಥಾ ಕಿಂಪುರುಷಾ ರಾಜನ್ ಯಕ್ಷಾಶ್ಚೈವ ಚತುರ್ಗುಣಾಃ ॥೫॥

ಅನೇಕರೂಪಸಂಸ್ಥಾನಾ ನಾನಾಪ್ರಹರಣಾಶ್ಚ ತೇ ।
ಯಕ್ಷೇಂದ್ರಂ ಮನುಜಶ್ರೇಷ್ಠ ಮಾಣಿಭದ್ರಮುಪಾಸತೇ ॥೬॥

ಎಲೈ ಮನುಜ ಶ್ರೇಷ್ಠನಾದ ರಾಜನೇ! ಎಂಭತ್ತೆಂಟು ಸಹಸ್ರ ಶೀಘ್ರಗಾಮಿಗಳಾದ ಆಶ್ವಗಳು ಆದರಂತೆ ಕಿಂಪುರುಷರು ಮತ್ತು ಆದರ ನಾಲ್ಕುಪಟ್ಟು ಯಕ್ಷರು ಅನೇಕ ರೂಪಗಳನ್ನು, ಅನೇಕ ಆಯುಧಗಳನ್ನು ಧರಿಸಿ ಯಕ್ಷಪತಿಯಾದ ಮಾಣಿಭದ್ರನನ್ನು ಉಪಾಸನೆ ಮಾಡುತ್ತಾರೆ.

ತೇಷಾಮೃದ್ಧಿರತೀವಾತ್ರ ಗತೌ ವಾಯುಸಮಾಶ್ಚ ತೇ ।
ಸ್ಥಾನಾತ್ ಪ್ರಚ್ಯಾವಯೇಯುರ್ಯೇ ದೇವರಾಜಮಪಿ ಧ್ರುವಮ್ ॥೭॥

ಅವರಿಗೆ ಇಲ್ಲಿ ಅತಿಶಯವಾದ ಸಂಪತ್ತು ಇದೆ. ಅವರಿಗೆ ವಾಯುಸಮಾನವಾದ ಗತಿಯಿದೆ. ಅವರು ದೇವರಾಜನಾದ ಇಂದ್ರನನ್ನೂ ಅವನ ಸ್ಥಾನದಿಂದ ಬೀಳಿಸಬಹುದು.

ತೈಸ್ತಾತ ಬಲಿಭಿರ್ಗುಪ್ತಾ ಯಾತುಧಾನೈಶ್ಚ ರಕ್ಷಿತಾಃ ।
ದುರ್ಗಮಾಃ ಪರ್ವತಾಃ ಪಾರ್ಥ ಸಮಾಧಿಂ ಪರಮಂ ಕುರು ॥೮॥

ಎಲೈ ಪ್ರೀತಿಪಾತ್ರನಾದ ಪಾರ್ಥನೇ! ಅಂತಹ ಯಕ್ಷಾದಿಗಳಿಂದಲೂ, ಮತ್ತು ಯಾತುಧಾನದಿಂದಲೂ (ರಾಕ್ಷಸರಿಂದಲೂ) ರಕ್ಷಿಸಲ್ಪಟ್ಟ ಈ ಪರ್ವತ ಪ್ರದೇಶಗಳು ದುರ್ಗಮವಾದವುಗಳು. ನೀನು ಶ್ರೇಷ್ಠವಾದ ಮನಸ್ಸಮಾಧಿಯನ್ನು ಮಾಡು.

ಕುಬೇರಸಚಿವಾಶ್ಚಾನ್ಯೇ ರೌದ್ರಾ ಮೈತ್ರಾಶ್ಚ ರಾಕ್ಷಸಾಃ ।
ತೈಃ ಸಮೇಷ್ಯಾಮ ಕೌಂತೇಯ ಸಂಯತೋ ವಿಕ್ರಮೇಣ ಚ ॥೯॥

ಎಲೈ ಕೌಂತೇಯನೇ! ಕುಬೇರನ ಮಂತ್ರಿಗಳಾದ ನೋಡಲು ಭಯಂಕರರೂ, ಸ್ನೇಹಪರರೂ ಆದ ಇನ್ನೂ ಅನೇಕ ರಾಕ್ಷಸರಿದ್ದಾರೆ. ಸಂಯಮ, ವಿಕ್ರಮಗಳನ್ನು ಅವಲಂಬಿಸಿ ಅವರ ಜೊತೆಯಲ್ಲಿಸೇರುವೆವು.

ಕೈಲಾಸಃ ಪರ್ವತೋ ರಾಜನ್ ಷಡ್ಯೋಜನಸಮುಚ್ಛ್ರಿತಃ ।
ಯತ್ರ ದೇವಾ ಸಮಾಯಾಂತಿ ವಿಶಾಲಾ ಯತ್ರ ಭಾರತ ॥೧೦॥

ಎಲೈ ರಾಜನೇ! ಕೈಲಾಸ ಪರ್ವತವು ಆರುಯೋಜನ ಎತ್ತರವಾಗಿದೆ. ಎಲೈ ಭಾರತನೇ! ಅಲ್ಲಿಗೆ ದೇವತೆಗಳು ಬರುತ್ತಾರೆ. ಮತ್ತು ಅಲ್ಲಿ ವಿಶಾಲಾ ಎಂದು ಕರೆಸಿಕೊಳ್ಳಲ್ಪಡುವ ಬದರೀ ಕ್ಷೇತ್ರವಿದೆ.

ಅಸಂಖ್ಯೇಯಾಸ್ತು ಕೌಂತೇಯ ಯಕ್ಷರಾಕ್ಷಸಕಿನ್ನರಾಃ ।
ನಾಗಾಃ ಸುಪರ್ಣಾ ಗಂಧರ್ವಾಃ ಕುಬೇರಸದನಂ ಪ್ರತಿ ॥೧೧॥

ಎಲೈ ಕೌಂತೇಯನೇ! ಕುಬೇರಸದನದ ಸುತ್ತಲೂ ಸಂಖ್ಯೆಯಿಲ್ಲದಷ್ಟು ಯಕ್ಷರಾಕ್ಷಸಕಿನ್ನರರು, ಸರ್ಪಗಳು, ಪಕ್ಷಿಗಳು ಮತ್ತು ಗಂಧರ್ವರು ರಕ್ಷಣೆ ಮಾಡುತ್ತಿರುತ್ತಾರೆ.

ತಾನ್ ವಿಗಾಹಸ್ವ ಪಾರ್ಥಾದ್ಯ ತಪಸಾ ಚ ದಮೇನ ಚ ।
ರಕ್ಷ್ಯಮಾಣೋ ಮಯಾ ರಾಜನ್ ಭೀಮಸೇನಬಲೇನ ಚ ॥೧೨॥

ಎಲೈ ರಾಜನೇ! ಪಾರ್ಥನೇ! ತಪಸ್ಸನ್ನು ಮತ್ತು ಇಂದ್ರಿಯ ನಿಗ್ರಹವನ್ನು ಆಶ್ರಯಿಸಿದವನಾಗಿ ನನ್ನಿಂದ ರಕ್ಷಿತನಾಗಿ ಭೀಮಸೇನನ ಬಲವನ್ನು ಅವಲಂಬಿಸಿ ಅವುಗಳನ್ನು ದಾಟಿ ಹೋಗುವವನಾಗು.

ಸ್ಪೃಹಾ ತೇ ವರುಣೋ ರಾಜಾ ಯಮಶ್ಚ ಸಮಿತಿಂಜಯಃ ।
ಗಂಗಾ ಚ ಯಮುನಾ ಚೈವ ಪರ್ವತಶ್ಚ ದಧಾತು ತೇ ॥೧೩॥

ಮರುತಶ್ಚ ಸಹಾಶ್ವಿಭ್ಯಾಂ ಸರಿತಶ್ಚ ಸರಾಂಸಿ ಚ ।
ಸ್ಪೃಹಾ ದೇವಾಸುರೇಭ್ಯಶ್ಚ ವಸುಭ್ಯಶ್ಚ ಮಹಾದ್ಯುತೇ ॥೧೩.೧॥

ನಿನಗೆ ವರುಣರಾಜನು ಶುಭವನ್ನು ಮಾಡಲಿ. ಯುದ್ಧದಲ್ಲಿ ಜಯಶೀಲನಾದ ಯಮನು, ಗಂಗೆಯು, ಯಮುನೆಯು ಮತ್ತು ಪರ್ವತವು ನಿನಗೆ ಶುಭವನ್ನು ಅನುಗ್ರಹಿಸಲು. ಎಲೈ ಮಹಾದ್ಯುತಿಯೇ! ಮರುತ್ತುಗಳು, ಅಶ್ವಿನೀದೇವತೆಗಳು, ನದಿಗಳು, ಸರೋವರಗಳು, ದೇವಾಸುರರು ಮತ್ತು ವಸುಗಳು ನಿನಗೆ ಮಂಗಳವನ್ನು ಮಾಡಲಿ.

ಇಂದ್ರಸ್ಯ ಜಾಂಬೂನದಪರ್ವತಾದ್ವೈ
ಶೃಣೋಮಿ ಘೋಷಂ ತವ ದೇವಿ ಗಂಗೇ ।
ಗೋಪಾಯೈನಂ ತ್ವಂ ಸುಭಗೇ ಗಿರಿಭ್ಯಃ
ಸರ್ವಾಜಮೀಢಾಪಚಿತಂ ನರೇಂದ್ರಮ್ ॥೧೪॥

ಎಲೌ ಗಂಗಾದೇವಿಯೇ! ಇಂದ್ರನ ಸಂಬಂಧಿಯಾದ ಸುವರ್ಣಮಯವಾದ ಮೇರುಪರ್ವತದಿಂದ ನಿನ್ನ ಘೋಷವನ್ನು ಕೇಳುತ್ತಿದ್ದೇನೆ. ಎಲೌ ಸೌಭಾಗ್ಯವತಿಯೇ! ಎಲ್ಲಾ ಅಜಮೀಢರಿಂದ ಪೂಜಿತನಾದ ಈ ನರೇಂದ್ರನನ್ನು ನೀನು ಈ ಪರ್ವತಗಳಲ್ಲಿ ರಕ್ಷಣೆಯನ್ನು ಮಾಡು.

ದದಸ್ವ ಶರ್ಮ ಪ್ರವಿವಿಕ್ಷತೋಽಸ್ಯ ಶೈಲಾನಿಮಾಂಶ್ಚೈಲಸುತೇ ನೃಪಸ್ಯ ।
ಶಿವಪ್ರದಾ ಸರ್ವಸರಿತ್‌ಪ್ರಧಾನೇ ಸಭ್ರಾತೃಕಸ್ಯೇಹ ಯುಧಿಷ್ಠಿರಸ್ಯ ॥೧೫॥

ಎಲೌ ಶೈಲಸುತೆಯೇ! ಈ ಪರ್ವತಗಳನ್ನು ಪ್ರವೇಶಿಸುವ ರಾಜನಿಗೆ ಸುಖವನ್ನು ನೀಡುವವಳಾಗು. ಎಲ್ಲ ನದಿಗಳಲ್ಲಿ ಶ್ರೇಷ್ಠಳಾದವಳೇ! ತನ್ನ ತಮ್ಮಂದಿರಿಂದ ಕೂಡಿದ ಯುಧಿಷ್ಠಿರನಿಗೆ ಮಂಗಳವನ್ನು ನೀಡುವವಳಾಗು. (ಹೀಗೆ ಆ ಲೋಮಶರು ಗಂಗೆಯನ್ನು ಕುರಿತು ಪ್ರಾರ್ಥಿಸಿ ರಾಜನನ್ನು ಕುರಿತು ಎಚ್ಚರಿಕೆಯಿಂದ ಇರು ಎಂದು ಹೇಳಿದರು).

ಯುಧಿಷ್ಠಿರಃ

ಅಪೂರ್ವೋಽಯಂ ಸಂಭ್ರಮೋ ಲೋಮಶಸ್ಯ
ಕೃಷ್ಣಾಂ ಚ ಸರ್ವೇ ರಕ್ಷತ ಮಾ ಪ್ರಮಾದಮ್ ।
ದೇಶೋ ಹ್ಯಯಂ ದುರ್ಗತಮೋ ಮತೋಽಸ್ಮ
ತಸ್ಮಾತ್ ಪರಂ ಶೌಚಮಚೀಚರದ್ಧ್ವಮ್ ॥೧೬॥

ಯುಧಿಷ್ಠಿರ– ಲೋಮಶರಲ್ಲಿ ಹಿಂದೆಂದೂ ಕಾಣಬರದ ಸಂಭ್ರಮವು ಕಂಡುಬರುತ್ತಿದೆ. ಎಲ್ಲರೂ ಎಚ್ಚರಿಕೆಯಿಂದ ದ್ರೌಪದಿಯನ್ನು ರಕ್ಷಿಸಿ. ಈ ಪ್ರದೇಶಗಳು ದುರ್ಗಮವಾದುದೆಂದು ಲೋಮಶರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಹೆಚ್ಚಿನ ಕಾಯಿಕ, ಮಾನಸಿಕ, ವಾಚಿಕ ಶೌಚವನ್ನು ಎಲ್ಲರೂ ಆಶ್ರಯಿಸಿ.

ವೈಶಂಪಾಯನಃ

ತತೋऽಬ್ರವೀದ್ ಭೀಮಮುದಾರವೀರ್ಯಂ
ಕೃಷ್ಣಾಂ ಯತ್ತಃ ಪಾಲಯ ಭೀಮಸೇನ ।
ಶೂನ್ಯೇऽರ್ಜುನೇऽಸನ್ನಿಹಿತೇ ಚ ತಾತ
ತ್ವಾಮೇವ ಕೃಷ್ಣಾ ಭಜತೇ ಭಯೇಷು ॥೧೭॥

ಅನಂತರ ಉದಾರವೀರ್ಯನಾದ ಭೀಮಸೇನನನ್ನು ಕುರಿತು ಧರ್ಮರಾಜನು, ಭೀಮಸೇನನೇ! ಜಾಗರೂಕತೆಯಿಂದ ದ್ರೌಪದಿಯನ್ನು ರಕ್ಷಿಸು. ಪ್ರತಿಪಾತ್ರನೇ ನಿರ್ಜನ ಪ್ರದೇಶಗಳಲ್ಲಿ ಅರ್ಜುನನು ಇಲ್ಲದಿರುವಾಗ ಉಂಟಾಗುವ ಎಲ್ಲ ಭಯಗಳಲ್ಲಿಯೂ ದ್ರೌಪದಿಯು ನಿನ್ನನ್ನೇ ಆಶ್ರಯಿಸುತ್ತಾಳೆ ಎಂದು ಹೇಳಿದನು.

ತತೋ ಮಹಾತ್ಮಾ ಸ ಯಮೌ ಸಮೇತ್ಯ
ಮೂರ್ಧ್ನ್ಯುಪಾಘ್ರಾಯ ವಿಮೃಜ್ಯ ಗಾತ್ರೇ ।
ಉವಾಚ ತೌ ಬಾಷ್ಪಫಲಂ ಸ ರಾಜಾ
ಮಾ ಭೈಷ್ಟಮಾಗಚ್ಛತಮಪ್ರಮತ್ತೌ ॥೧೮॥

ಅನಂತರ ಮಹಾತ್ಮನಾದ ಆ ಧರ್ಮರಾಜನು ನಕುಲ-ಸಹದೇವರನ್ನು ಸಮೀಪಿಸಿ ಶಿರಸ್ಸಿನಲ್ಲಿ ಆಘ್ರಾಣ ಮಾಡಿ ಅವರ ಶರೀರಗಳನ್ನು ಸವರಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಅವರಿಬ್ಬರನ್ನು ಕುರಿತು ಹೆದರಬೇಡಿ, ಎಚ್ಚರಿಕೆಯಿಂದ ಜೊತೆಯಲ್ಲಿ ಬನ್ನಿ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್ತ್ರಿಂಶದಧಿಕಶತತಮೋऽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ದ್ವಿಸವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ಮಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

ಅಶಕ್ತರಾದ ದ್ರೌಪದ್ಯಾದಿಗಳನ್ನು ತಾನು ಎತ್ತಿಕೊಂಡು ಹೋಗುವುದಾಗಿ ಭೀಮಸೇನನ ಉತ್ಸಾಹದ ಆಶ್ವಾಸನೆ. ಸುಬಾಹುರಾಜನಿಂದ ಯುಧಿಷ್ಠರಾದಿಗಳ ಸತ್ಕಾರ. ಹೆಚ್ಚಿನ ಪರಿವಾರವನ್ನು ಹಿಂದೆ ಬಿಟ್ಟು ಗಂಧಮಾದನ ಮತ್ತು ಹಿಮಾಲಯವನ್ನು ಕುರಿತು ಪಾಂಡವರ ಪ್ರಯಾಣ.

ಯುಧಿಷ್ಠಿರಃ

ಅಂತರ್ಹಿತಾನಿ ಭೂತಾನಿ ಬಲವಂತಿ ಮಹಾಂತಿ ಚ ।
ಅಗ್ನಿನಾ ತಪಸಾ ಚೈವ ಶಕ್ಯಂ ಗಂತುಂ ವೃಕೋದರ ॥೧॥

ಯುಧಿಷ್ಠಿರ– ಎಲೈ ವೃಕೋದರನೇ! ಬಲಿಷ್ಠವಾದ ಮಹಾಭೂತಗಳು ಅಂತರ್ಧಾನವನ್ನು ಹೊಂದಿವೆ. ಅಗ್ನಿಯನ್ನು ತೆಗೆದುಕೊಂಡು ತಪೋಬಲದಿಂದ ಮುಂದೆ ಹೋಗಲು ಸಾಧ್ಯವಾಗುತ್ತದೆ.

ಸನ್ನಿವರ್ತಯ ಕೌಂತೇಯ ಕ್ಷುತ್ಪಿಪಾಸೇ ಬಲಾಶ್ರಯಾತ್ ।
ತತೋ ಬಲಂ ಚ ದಾಕ್ಷ್ಯಂ ಚ ಸಂಶ್ರಯಸ್ವ ವೃಕೋದರ ॥೨॥

ಎಲೈ ಕೌಂತೇಯನಾದ ವೃಕೋದರನೇ ನಿನ್ನ ಬಲವನ್ನು ಅವಲಂಬಿಸಿ ಹಸಿವು, ನೀರಡಿಕೆಗಳನ್ನು ದೂರವಾಡು. ದಕ್ಷತೆಯನ್ನು ಮತ್ತು ಬಲವನ್ನು ಅವಲಂಬಿಸುವವನಾಗು.

ಋಷೇಸ್ತ್ವಯಾ ಶ್ರುತಂ ವಾಕ್ಯಂ ಕೈಲಾಸಂ ಪರ್ವತಂ ಪ್ರತಿ ।
ಬುದ್ಧ್ಯಾ ಪ್ರಪಶ್ಯ ಕೌಂತೇಯ ಕಥಂ ಕೃಷ್ಣಾ ಗಮಿಷ್ಯತಿ ॥೩॥

ಕೌಂತೇಯನೇ, ಲೋಮಶ ಋಷಿಗಳು ಕೈಲಾಸ ಪರ್ವತವನ್ನು ಕುರಿತು ಆಡಿದ ಮಾತುಗಳನ್ನು ನೀನು ಕೇಳಿದ್ದೀಯೆ. ದ್ರೌಪದಿಯು ಆ ದುರ್ಗಮ ಪ್ರದೇಶದಲ್ಲಿ ಹೇಗೆ ಹೋಗುವಳು ಎಂದು ನಿನ್ನ ಬುದ್ಧಿಯಿಂದ ವಿಮರ್ಶಮಾಡು.

ಅಥವಾ ಸಹದೇವೇನ ಧೌಮ್ಯೇನ ಚ ಸಮಂ ವಿಭೋ ।
ಸೂತ್ಯೈಃ ಪೌರೋಗವೈಶ್ಚೈವ ಸರ್ವೈಶ್ಚ ಪರಿಚಾರಕೈಃ ॥೪॥

ರಥೈರಶ್ವೈಶ್ಚ ಯೇ ಚಾನ್ಯೇ ವಿಪ್ರಾಃ ಕ್ಲೇಶಾಸಹಾಃ ಪಥಿ ।
ಸರ್ವೈಸ್ತ್ವಂ ಸಹಿತೋ ಭೀಮ ನಿವರ್ತಸ್ವಾಯತೇಕ್ಷಣ ॥೫॥

ವಿಭುವಾದ ವಿಶಾಲನೇತ್ರನಾದ ಭೀಮಸೇನನೇ, ಅಥವಾ ನೀನು ಸಹದೇವ, ಧೌಮ್ಯರು, ಸೂತರು, ಮೇಲ್ವಿಚಾರಕರು, ಎಲ್ಲಾ ಪರಿಚಾರಕರು, ರಥಗಳು, ಅಶ್ವಗಳು, ಮಾರ್ಗದಲ್ಲಿ ಕಷ್ಟವನ್ನು ತಡೆಯದ ಬ್ರಾಹ್ಮಣರು ಇವರೆಲ್ಲರ ಜೊತೆಯಲ್ಲಿ ಹಿಂದಿರುಗಿ ಹೋಗು.

ತ್ರಯೋ ವಯಂ ಗಮಿಷ್ಯಾಮೋ ಲಘ್ವಾಹಾರಾ ಯತವ್ರತಾಃ ।
ಅಹಂ ಚ ನಕುಲಶ್ಚೈವ ಧೌಮ್ಯಶ್ಚ ಮಹಾತಪಾಃ ॥೬॥

ನಾನು, ನಕುಲ ಮತ್ತು ಮಹಾತಪ್ವಿಗಳಾದ ಧೌಮ್ಯರು ಈ ಮೂವರೇ ವ್ರತವನ್ನು ಧರಿಸಿ, ಅಲ್ಪಾಹಾರವನ್ನು ಸೇವಿಸಿ ಮುಂದೆ ಹೋಗುವೆವು.

ಮಮಾಗಮನಮಾಕಾಂಕ್ಷನ್ ಗಂಗಾದ್ವಾರೇ ಸಮಾಹಿತಃ ।
ವಸೇಹ ದ್ರೌಪದೀಂ ರಕ್ಷನ್ ಯಾವದಾಗಮನಂ ಮಮ ॥೭॥

ನನ್ನ ಆಗಮನವನ್ನು ನಿರೀಕ್ಷಿಸುತ್ತಾ ನಾನು ಹಿಂದಿರುಗಿ ಬರುವವರೆಗೆ ಈ ಗಂಗಾದ್ವಾರದಲ್ಲಿ ಸಮಾಧಾನದಿಂದ ದ್ರೌಪದಿಯನ್ನು ರಕ್ಷಿಸುತ್ತಾ ವಾಸ ಮಾಡು.

ಭೀಮಃ

ರಾಜಪುತ್ರೀ ಶ್ರಮೇಣಾರ್ತಾ ದುಃಖಾರ್ತಾ ಚೈವ ಭಾರತ ।
ವ್ರಜತ್ಯೇವ ಹಿ ಕಲ್ಯಾಣೀ ಶ್ವೇತವಾಹದಿದೃಕ್ಷಯಾ ॥೮॥

ಭೀಮ– ಭಾರತನೇ, ರಾಜಪುತ್ರಿಯು ಶ್ರಮದಿಂದ ಮತ್ತು ದುಃಖದಿಂದ ಬಳಲಿದ್ದರೂ ಅರ್ಜುನನನ್ನು ನೋಡುವ ಆಸೆಯಿಂದ ಕಲ್ಯಾಣಿಯಾದ ಅವಳು ಮುಂದೆ ಹೋಗಿಯೇ ಹೋಗುತ್ತಾಳಷ್ಟೆ?

ಅಪಶ್ಯಂತೀಹ ತಂ ವೀರಮೇವಮೇಷಾ ಸುದುಃಖಿತಾ ।
ಕಂ ಪುನರ್ನಕುಲಂ ತ್ವಾಂ ಚ ತಂ ಚ ವೀರಂ ಧನಂಜಯಮ್ ॥೮.೧॥

ತವ ಚಾಪ್ಯರತಿಸ್ತೀವ್ರಾ ವರ್ತತೇ ತಮಪಶ್ಯತಃ ।
ಗುಡಾಕೇಶಂ ಮಹಾತ್ಮಾನಂ ಸಂಗ್ರಾಮೇಷ್ವಪಲಾಯಿನಮ್ ॥೮.೨॥
ಕಂ ಪುನಃ ಸಹದೇವಂ ಚ ಮಾಂ ಚ ಕೃಷ್ಣಾಂ ಚ ಭಾರತ ।

ಇವಳು ಆ ಅರ್ಜುನನನ್ನು ಕಾಣದೆ ಬಹಳ ದುಃಖದಿಂದಿದ್ದಾಳೆ. ಇನ್ನು ನಿನ್ನನ್ನು, ನಕುಲನನ್ನು ಆ ವೀರನಾದ ಧನಂಜಯನನ್ನು ನೋಡದಿದ್ದರೆ ಅವಳ ಪಾಡು ಏನಾದೀತು? ನಿನಗಾದರೂ ಸಂಗ್ರಾಮದಲ್ಲಿ ಹಿಮ್ಮೆಟ್ಟದಿರುವ ಮಹಾತ್ಮನಾದ ಆ ಗುಡಾಕೇಶನನ್ನು ಕಾಣದೆ ತೀವ್ರವಾದ ಬೇಸರವು ಉಂಟಾಗಿದೆ.

ತವ ಚಾಪ್ಯರತಿಸ್ತೀವ್ರಾ ವರ್ತತೇ ತಮಪಶ್ಯತಃ ।
ಗುಡಾಕೇಶಂ ಮಹಾತ್ಮಾನಂ ಸಂಗ್ರಾಮೇಷ್ವಪಲಾಯಿನಮ್ ॥೯॥

ಎಲೈ ಭಾರತನೇ, ಇನ್ನು ಸಹದೇವನನ್ನು, ನನ್ನನ್ನು ಮತ್ತು ದ್ರೌಪದಿಯನ್ನೂ ಸಹ ನೋಡದಿದ್ದರೆ ನಿನ್ನ ಪರಿಸ್ಥಿತಿ ಏನಾಗುತ್ತದೆ?

ದ್ವಿಜಾಃ ಕಾಮಂ ನಿವರ್ತಂತಾಂ ಸರ್ವೇ ಚ ಪರಿಚಾರಕಾಃ ।
ಸೂತಾಃ ಪೌರೋಗವಾಶ್ಚೈವ ಯಂ ಚ ಮನ್ಯೇತ ನೋ ಭವಾನ್ ॥೧೦॥

ಬ್ರಾಹ್ಮಣರು ಮತ್ತು ಎಲ್ಲಾ ಪರಿಚಾರಕರು, ಮತ್ತು ನೀನು ಯಾರನ್ನು ಅಭಿಪ್ರಾಯ ಪಡುತ್ತೀಯೋ ಅಂತಹ ಸೂತರು ಮತ್ತು ಮೇಲ್ವಿಚಾರಕರು ಸಂತೋಷದಿಂದ ಹಿಂದಿರುಗಲಿ.

ನ ಹ್ಯಹಂ ಹಾತುಮಿಚ್ಛಾಮಿ ಭವಂತಮಿಹ ಕರ್ಹಿಚಿತ್ ।
ಶೈಲೇಽಸ್ಮಿನ್ ರಾಕ್ಷಸಾಕೀರ್ಣೇ ದುರ್ಗೇಷು ವಿಷಮೇಷು ಚ ॥೧೧॥

ಈ ರಾಕ್ಷಸರಿಂದ ತುಂಬಿದ ಪರ್ವತದಲ್ಲಿ ದುರ್ಗಮವಾದ ವಿಷಮವಾದ ಮಾರ್ಗಗಳಲ್ಲಿ ಯಾವ ಕಾರಣದಿಂದಲೂ ನಾನು ನಿನ್ನನ್ನು ಬಿಟ್ಟುಹೋಗಲು ಬಯಸುವುದಿಲ್ಲ.

ಇಯಂ ಚಾಪಿ ಮಹಾಭಾಗಾ ರಾಜಪುತ್ರೀ ಪತಿವ್ರತಾ ।
ತ್ವಾಮೃತೇ ಪುರುಷವ್ಯಾಘ್ರ ನೋತ್ಸಹೇದ್ ವಿನಿವರ್ತಿತುಮ್ ॥೧೨॥

ಎಲೈ ಪುರುಷವ್ಯಾಘ್ರನೇ, ಈ ಮಹಾನುಭಾವಳೂ, ಪತಿವ್ರತೆಯೂ, ರಾಜಪುತ್ರಿಯೂ ಆದ ದ್ರೌಪದಿಯು ನೀನಿಲ್ಲದೆ ಹಿಂದಿರುಗಲು ಎಂದೂ ಬಯಸುವುದಿಲ್ಲ.

ತಥೈವ ಸಹದೇವೋಽಯಂ ಸತತಂ ತ್ವಾಮನುವ್ರತಃ ।
ನ ಜಾತು ವಿನಿವರ್ತೇತ ಮನೋಜ್ಞೋ ಹ್ಯಮಸ್ಯ ವೈ ॥೧೩॥

ಅದರಂತೆ ಸಹದೇವನೂ ಸಹ ಯಾವಾಗಲೂ ನಿನ್ನನ್ನು ಅನುಸರಿಸಿಕೊಂಡಿದ್ದಾನೆ. ನಿನ್ನನ್ನು ಬಿಟ್ಟು ಅವನು ಹಿಂದಿರುಗಲಾರ. ನಾನು ಅವನ ಮನಸ್ಸನ್ನು ಚೆನ್ನಾಗಿ ತಿಳಿದಿದ್ದೇನೆ.

ಅಪಿ ಚಾತ್ರ ಮಹಾರಾಜ ಸವ್ಯಸಾಚಿದಿದೃಕ್ಷಯಾ ।
ಸರ್ವೇ ಲಾಲಸಭೂತಾಃ ಸ್ಮ ತಸ್ಮಾದ್ ಯಾಸ್ಯಾಮಹೇ ಸಹ ॥೧೪॥

ಮತ್ತು ಮಹಾರಾಜನೇ, ಧನಂಜಯನನ್ನು ನೋಡಲು ನಾವೆಲ್ಲರೂ ಬಹಳ ಉತ್ಸುಕರಾಗಿದ್ದೇವೆ. ಆದ್ದರಿಂದ ಜೊತೆಯಲ್ಲಿಯೇ ಮುಂದೆ ಹೋಗೋಣ.

ಯದ್ಯಶಕ್ಯೋ ರಥೈರ್ಗಂತುಂ ಶೈಲೋಽಯಂ ಬಹುಕಂದರಃ ।
ಪದ್ಭಿರೇವ ಗಮಿಷ್ಯಾಮೋ ಮಾ ರಾಜನ್ ವಿಮನಾ ಭವ ॥೧೫॥

ಎಲೈ ರಾಜನೇ, ಅನೇಕ ಕಣಿವೆಗಳುಳ್ಳ ಈ ಪರ್ವತದಲ್ಲಿ ರಥಗಳಿಂದ ಹೋಗಲು ಸಾಧ್ಯವಾಗದಿದ್ದರೆ ನಡೆದುಕೊಂಡೇ ಹೋಗೋಣ. ನೀನು ಬೇಸರವನ್ನು ಮಾಡಬೇಡ.

ಅಹಂ ವಹಿಷ್ಯೇ ಪಾಂಚಾಲೀಂ ಯತ್ರ ಯತ್ರ ನ ಶಕ್ಷ್ಯತಿ ।
ಇತಿ ಮೇ ವರ್ತತೇ ಬುದ್ಧಿರ್ಮಾ ರಾಜನ್ ವಿಮನಾ ಭವ ॥೧೬॥

ಈ ಪಾಂಚಾಲಿಯು ಎಲ್ಲೆಲ್ಲಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿ ನಾನು ಅವಳನ್ನು ಎತ್ತಿಕೊಂಡು ಹೋಗುತ್ತೇನೆ ಎಂದು ನಿರ್ಧರಿಸಿದ್ದೇನೆ. ರಾಜನೇ! ಬೇಸರಿಸಬೇಡ.

ಸುಕುಮಾರೌ ತಥಾ ವೀರೌ ಮಾದ್ರೀನಂದಿಕರಾವುಭೌ ।
ದುರ್ಗೇ ಸಂತಾರಯಿಷ್ಯಾಮಿ ಯತ್ರಾಶಕ್ತೌ ಭವಿಷ್ಯತಃ ॥೧೭॥

ಎಲೈ ರಾಜನೇ! ಈ ಮಾದ್ರಿಯ ಸಂತೋಷಕ್ಕೆ ಕಾರಣರಾದ ವೀರರಾದ ಈ ನಕುಲಸಹದೇವರು ಎಲ್ಲಿನಡೆಯಲು ಅಶಕ್ತರಾಗುತ್ತಾರೆಯೋ ಅಲ್ಲಿನಾನು ಅವರನ್ನು ದುರ್ಗಮವಾದ ಪ್ರದೇಶದಿಂದ ದಾಟಿಸುತ್ತೇನೆ.

ಯುಧಿಷ್ಠಿರಃ

ಏವಂ ತೇ ಭಾಷಮಾಣಸ್ಯ ಬಲಂ ಭೀಮಾಭಿವರ್ಧತಾಮ್ ।
ಯತ್ ತ್ವಮುತ್ಸಹಸೇ ವೋಢುಂ ಪಾಂಚಾಲೀಂ ಚ ಯಶಸ್ವಿನೀಮ್ ॥

ಯಮಜೌ ಚಾಪಿ ಭದ್ರಂ ತೇ ನೈತದನ್ಯತ್ರ ವಿದ್ಯತೇ ।
ಬಲಂ ತವ ಯಶಶ್ಚೈವ ಧರ್ಮಃ ಕೀರ್ತಿಶ್ಚ ವರ್ಧತಾಮ್ ॥೧೯॥

ಯುಧಿಷ್ಠಿರ– ಎಲೈ ಭೀಮನೇ, ಯಶಸ್ವಿನಿಯಾದ ಪಾಂಚಾಲಿಯನ್ನು ಮತ್ತು ಅವಳಿಗಳಾದ ನಕುಲ-ಸಹದೇವರನ್ನು ಎತ್ತಿಕೊಂಡು ಹೋಗಲು ಉತ್ಸಾಹವನ್ನು ಸೂಚಿಸಿ ಮಾತನಾಡುತ್ತಿರುವ ನಿನ್ನ ಬಲವು ಅಭಿವೃದ್ಧಿಯನ್ನು ಹೊಂದಲಿ. ನಿನಗೆ ಮಂಗಳವಾಗಲಿ. ಇಂತಹ ಮಾತನ್ನು ಇನ್ನೊಂದು ಕಡೆ ಕೇಳಲು ಸಾಧ್ಯವಿಲ್ಲ. ನಿನ್ನ ಬಲವೂ, ಯಶಸ್ಸೂ, ಧರ್ಮವೂ ಮತ್ತು ಕೀರ್ತಿಯೂ ಅಭಿವೃದ್ಧಿಯನ್ನು ಹೊಂದಿಲ್ಲ.

ಯತ್ ತ್ವಮುತ್ಸಹಸೇ ನೇತುಂ ಭ್ರಾತರೌ ಸಹ ಕೃಷ್ಣಯಾ ।
ಮಾ ತೇ ಗ್ಲಾನಿರ್ಮಹಾಬಾಹೋ ಮಾ ಚ ತೇऽಸ್ತು ಪರಾಭವಃ ॥೨೦॥

ಪಾಂಚಾಲಿಯನ್ನು ಮತ್ತು ತಮ್ಮಂದಿರನ್ನು ಕರೆದುಕೊಂಡು ಹೋಗಲು ಉತ್ಸಾಹ ಪಡುತ್ತಿರುವ ನಿನಗೆ, ಎಲೈ ಮಹಾಬಾಹುವೇ, ಯಾವ ಗ್ಲಾನಿಯೂ ಅಥವಾ ಪರಾಭವವೂ ಆಗದಿರಲಿ.

ವೈಶಂಪಾಯನಃ

ತತಃ ಕೃಷ್ಣೋऽಬ್ರವೀದ್ ವಾಕ್ಯಂ ಪ್ರಹಸಂತೀ ಮನೋರಮಾ ।
ಗಮಿಷ್ಯಾಮಿ ನ ಸಂತಾಪಃ ಕಾರ್ಯೋ ಮಾಂ ಪ್ರತಿ ಭಾರತ ॥೨೧॥

ವೈಶಂಪಾಯನ– ಆಗ ಸುಂದರಿಯಾದ ದ್ರೌಪದಿಯು ನಗುತ್ತಾ, ಭಾರತನೇ, ನಾನು ನಡೆದು ಬರುವೆನು. ನನ್ನ ಸಲುವಾಗಿ ನೀನು ಸಂತಾಪ ಪಡಬೇಡ ಎಂದು ಹೇಳಿದಳು.

ಲೋಮಶಃ

ತಪಸಾ ಶಕ್ಯತೇ ಗಂತುಂ ಪರ್ವತೋ ಗಂಧಮಾದನಃ ।
ತಪಸಾ ಚೈವ ಕೌಂತೇಯ ಸರ್ವೇ ಯೋಕ್ಷ್ಯಾಮಹೇ ವಯಮ್ ॥೨೨॥

ಲೋಮಶ– ಕೌಂತೇಯನೇ, ತಪಸ್ಸಿನ ಬಲದಿಂದ ಗಂಧಮಾದನ ಪರ್ವತಕ್ಕೆ ಹೋಗಲು ಸಾಧ್ಯ. ಆದ್ದರಿಂದ ನಾವೆಲ್ಲರೂ ತಪಸ್ಸಿನಿಂದ ಯುಕ್ತರಾಗೋಣ.

ನಕುಲಃ ಸಹದೇವಶ್ಚ ಭೀಮಸೇನಶ್ಚ ಪಾರ್ಥಿವ ।
ಅಹಂ ಚ ತ್ವಂ ಚ ಕೌಂತೇಯ ದ್ರಕ್ಷ್ಯಾಮಃ ಶ್ವೇತವಾಹನಮ್ ॥೨೩॥

ಕೌಂತೇಯನೇ, ನಕುಲ-ಸಹದೇವ, ಭೀಮಸೇನ, ನಾನು ಮತ್ತು ನೀನೂ ಸಹ ಶ್ವೇತವಾಹನನಾದ ಅರ್ಜುನನನ್ನು ನೋಡುವೆವು.

ವೈಶಂಪಾಯನಃ

ಏವಂ ಸಂಭಾಷಣಮಾಣಾಸ್ತೇ ಸುಬಾಹುವಿಷಯಂ ಮಹತ್ ।
ದದೃಶುರ್ಮುದಿತಾ ರಾಜನ್ ಪ್ರಭೂತಗಜವಾಜಿಮತ್ ॥೨೪॥

ಕಿರಾತತಂಕಣಾಕೀರ್ಣಂ ಪುಳಿಂದಶತಸಂಕುಲಮ್ ।
ಹಿಮವತ್ಯಮರೈರ್ಜುಷ್ಟಂ ಬಹ್ವಾಶ್ಚರ್ಯಸಮಾಕುಲಮ್ ॥೨೫॥

ವೈಶಂಪಾಯನ– ಹೀಗೆ ಮಾತನಾಡುತ್ತಾ ಅವರು ಮುಂದೆ ಸಾಗಿ ಅನೇಕ ಗಜಾಶ್ವಗಳಿಂದ ಕೂಡಿದ ಕಿರಾತ, ತಂಕಣ ಮತ್ತು ಸಾವಿರಾರು ಪುಳಿಂದರಿಂದ ಆವೃತವಾದ, ಹಿಮಾಲಯದಲ್ಲಿ ದೇವತೆಗಳಿಂದ ಸಹಿತವಾದ ಮತ್ತು ಅನೇಕ ಆಶ್ಚರ್ಯಗಳಿಂದ ಕೂಡಿದ ಸುಬಾಹುರಾಜನ ದೊಡ್ಡ ದೇಶವನ್ನು ಸಂತೋಷದಿಂದ ನೋಡಿದರು.

ಸುಬಾಹುಶ್ಚಾಪಿ ತಾನ್ ದೃಷ್ಟ್ವಾ ಪೂಜಯಾ ಪ್ರತ್ಯಗೃಹ್ಣತ ।
ವಿಷಯಾಂತೇ ಕುಳಿಂದಾನಾಮೀಶ್ವರಃ ಪ್ರೀತಿಪೂರ್ವಕಮ್ ॥೨೬॥

ಕುಳಿಂದಾಧಿಪತಿಯಾದ ಸುಬಾಹುರಾಜನಾದರೂ ತನ್ನ ದೇಶದ ಗಡಿಯಲ್ಲಿ ಅವರನ್ನು ನೋಡಿ ಪ್ರೀತಿ ಪೂರ್ವಕವಾಗಿ ಅವರನ್ನು ಸತ್ಕಾರದಿಂದ ಸ್ವೀಕರಿಸಿದನು.

ತತಸ್ತೇ ಪೂಜಿತಾಸ್ತೇನ ಸರ್ವ ಏವ ಸುಖೋಷಿತಾಃ ।
ಪ್ರತಸ್ಥುರ್ವಿಮಲೇ ಸೂರ್ಯೇ ಹಿಮವಂತಂ ಗಿರಿಂ ಪ್ರತಿ ॥೨೭॥

ಆನಂತರ ಅವರು ಅವರಿಂದ ಪೂಜಿತರಾಗಿ ಆ ರಾತ್ರಿ ಅಲ್ಲಿಯೇ ವಾಸವನ್ನು ಮಾಡಿದರು. ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸುತ್ತಿರಲು ಹಿಮಾಲಯ ಪರ್ವತವನ್ನು ಕುರಿತು ಹೊರಟರು.

ಇಂದ್ರಸೇನಮುಖಾಂಶ್ಚಾಪಿ ಭೃತ್ಯಾನ್ ಪೌರೋಗವಾಂಸ್ತಥಾ ।
ಸೂದಾಂಶ್ಚ ಪಾರಿಬರ್ಹಾಂಶ್ಚ ದ್ರೌಪದ್ಯಾಃ ಸರ್ವತೋ ನೃಪ ॥೨೮॥

ರಾಜ್ಞಃ ಕುಳಿಂದಾಧಿಪತೇಃ ಪರಿದಾಯ ಮಹಾರಥಾಃ ।
ಪದ್ಭಿರೇವ ಮಹಾವೀರ್ಯಾ ಯಯುಃ ಕೌರವನಂದನಾಃ ॥೨೯॥

ಇಂದ್ರಸೇನ ಮೊದಲಾದ ಭೃತ್ಯರನ್ನು, ಮೇಲ್ವಿಚಾರಕರನ್ನು, ಬಾಣಸಿಗರನ್ನು ಮತ್ತು ದ್ರೌಪದಿಯ ಎಲ್ಲಾ ವಸ್ತ್ರಾಲಂಕಾರಗಳನ್ನು ಮಹಾರಥರಾದ ಅವರು ಕುಳಿಂದಾಧಿಪತಿಯಾದ ಸುಬಾಹುವಿನ ವಶದಲ್ಲಿ ಒಪ್ಪಿಸಿ, ಮಹಾವೀರ್ಯರಾದ ಆ ಕೌರವ ನಂದನರು ಕಾಲ್ನಡಿಗೆಯಿಂದಲೇ ಮುಂದೆ ಹೊರಟರು.

ತೇ ಶನೈಃ ಪ್ರಾದ್ರವನ್ ಸರ್ವೇ ಕೃಷ್ಣಯಾ ಸಹ ಪಾಂಡವಾಃ ।
ತಸ್ಮಾದ್ ದೇಶಾತ್ ಸುಸಂಹೃಷ್ಟಾ ದ್ರಷ್ಟುಕಾಮಾ ಧನಂಜಯಮ್ ॥೩೦॥

ಅವರೆಲ್ಲರೂ ದ್ರೌಪದಿಯಿಂದ ಸಹಿತರಾಗಿ ಅರ್ಜುನನನ್ನು ನೋಡಲು ಬಯಸಿ ಸಂತೋಷದಿಂದ ನಿಧಾನವಾಗಿ ಆ ಪ್ರದೇಶದಿಂದ ಓಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತ್ರಿಂಶದಧಿಕಶತತಮೋऽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ತ್ರಿನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೆಂಟನೆಯ ಅಧ್ಯಾಯ

ಅರ್ಜುನನನ್ನು ಕಾಣದೆ ಪರಿತಪಿಸುವ ಯುಧಿಷ್ಠಿರನ ಜೊತೆಯಲ್ಲಿ ಪಾಂಡವರ ಪ್ರಯಾಣ. ಗಂಧಮಾದನ ಪರ್ವತವನ್ನು ಪ್ರವೇಶಿಸಲು ನಿರ್ಧಾರ.

ಯುಧಿಷ್ಠಿರಃ

ಭೀಮಸೇನ ಯಮೌ ಚೋಭೌ ಪಾಂಚಾಲಿ ಚ ನಿಬೋಧತ ।
ನಾಸ್ತಿ ಭೂತಸ್ಯ ನಾಶೋ ವೈ ಪಶ್ಯತಾಸ್ಮಾನ್ ವನೇಚರಾನ್ ॥೧॥

ಯುಧಿಷ್ಠಿರ– ಭೀಮಸೇನನೇ, ನಕುಲಸಹದೇವರೇ, ಪಾಂಚಾಲಿಯೇ, ಕಾಡಿನಲ್ಲಿ ಸಂಚರಿಸುತ್ತಿರುವ ನಮ್ಮನ್ನು ನೋಡಿ ತಿಳಿಯಿರಿ, ಪ್ರಾಚೀನ ದುಷ್ಕರ್ಮಕ್ಕೆ ನಾಶವುಂಟಾಗುವುದಿಲ್ಲ.

ದುರ್ಬಲಾಃ ಕ್ಲೇಶಿತಾಃ ಸ್ಮೇತಿ ಯದ್ಬ್ರುವಾಮೇತರೇತರಮ್ ।
ಅಶಕ್ಯೇಽಪಿ ವ್ರಜಾಮೋ ಯದ್ ಧನಂಜಯದಿದೃಕ್ಷಯಾ ॥೨॥

ನಾವು ದುರ್ಬಲರು ಮತ್ತು ಕ್ಲೇಶಯುಕ್ತರು ಎಂದು ಪರಸ್ಪರವಾಗಿ ಹೇಳಿಕೊಂಡು ಸಾಧ್ಯವಾಗದಿದ್ದರೂ ಅರ್ಜುನನನ್ನು ನೋಡುವ ಆಸೆಯಿಂದ ಮುಂದೆ ಸಾಗುತ್ತಿದ್ದೇವಷ್ಟೆ?

ತನ್ಮೇ ದಹತಿ ಗಾತ್ರಾಣಿ ತೂಲರಾಶಿಮಿವಾನಲಃ ।
ಯಚ್ಚ ವೀರಂ ನ ಪಶ್ಯಾಮಿ ಧನಂಜಯಮುಪಾಂತಿಕಾತ್ ॥೩॥

ನಾನು ಸಮೀಪದಲ್ಲಿ ಅರ್ಜುನನ್ನು ನೋಡುತ್ತಿಲ್ಲ ಎಂಬ ವಿಷಯವು ತೂಲರಾಶಿಗೆ ಅಗ್ನಿಯು ಹೊಕ್ಕಂತೆ ನನ್ನ ದೇಹವನ್ನು ಸುಡುತ್ತಿದೆ.

ತಸ್ಯ ದರ್ಶನತೃಷ್ಣಂ ಮಾಂ ಸಾನುಜಂ ವನಮಾಸ್ಥಿತಮ್ ।
ಯಾಜ್ಞಸೇನ್ಯಾಃ ಪರಾಮರ್ಶಃ ಸ ಚ ವೀರ ದಹತ್ಯುತ ॥೪॥

ಎಲೈ ವೀರನೇ, ಅವನ ದರ್ಶನದ ಆಸೆಯಿಂದ ತಮ್ಮಂದಿರ ಜೊತೆಯಲ್ಲಿ ಕಾಡನ್ನು ಸೇರಿದ ನನ್ನನ್ನು ದ್ರೌಪದಿಗೆ ದುಶ್ಶಾಸನನು ಮಾಡಿದ ಆ ಪರಾಮರ್ಶವು ಮತ್ತೂ ಸುಡುತ್ತಿದೆ.

ನಕುಲಾತ್ ಪೂರ್ವಜಂ ಪಾರ್ಥಂ ನ ಪಶ್ಯಾಮ್ಯಮಿತೌಜಸಮ್ ।
ಅಜೇಯಮುಗ್ರಧನ್ವಾನಂ ತೇನ ತಪ್ಯೇ ವೃಕೋದರ ॥೫॥

ವೃಕೋದರನೇ, ನಕುಲನ ಅಣ್ಣನೂ ಅಮಿತಪರಾಕ್ರಮಿಯೂ, ಅಜೇಯನೂ, ಉಗ್ರಧನ್ವನೂ ಆದ ಅರ್ಜುನನನ್ನು ಕಾಣುತ್ತಿಲ್ಲ. ಆದ್ದರಿಂದ ತಾಪ ಪಡುತ್ತಿದ್ದೇನೆ.

ತೀರ್ಥಾನಿ ಚೈವ ರಮ್ಯಾಣಿ ವನಾನಿ ಚ ಸರಾಂಸಿ ಚ ।
ಚರಾಮಿ ಸಹ ಯುಷ್ಮಾಭಿಸ್ತಸ್ಯ ದರ್ಶನಕಾಂಕ್ಷಯಾ ॥೬॥

ಅವನನ್ನು ನೋಡುವ ಆಸೆಯಿಂದ ನಿಮ್ಮ ಜೊತೆಯಲ್ಲಿ ತೀರ್ಥಗಳನ್ನೂ, ಸುಂದರವಾದ ವನಗಳನ್ನೂ ಮತ್ತು ಸರೋವರಗಳನ್ನೂ ಸಂಚರಿಸುತ್ತಿದ್ದೇನೆ.

ಪಂಚವರ್ಷಾಣ್ಯಹಂ ವೀರಂ ಸತ್ಯಸಂಧಂ ಧನಂಜಯಮ್ ।
ಯನ್ನ ಪಶ್ಯಾಮಿ ಬಿಭತ್ಸುಂ ತೇನ ತಪ್ಯೇ ವೃಕೋದರ ॥೭॥

ವೃಕೋದರನೇ, ಐದುವರ್ಷಗಳ ಕಾಲ ವೀರನೂ, ಸತ್ಯಸಂಧನೂ ಆದ ಧನಂಜಯನನ್ನು ಕಾಣದೆ ನಾನು ತಾಪಪಡುತ್ತಿದ್ದೇನೆ.

ತಂ ವೈ ಶ್ಯಾಮಂ ಗುಡಾಕೇಶಂ ಸಿಂಹವಿಕ್ರಾಂತಗಾಮಿನಮ್ ।
ನ ಪಶ್ಯಾಮಿ ಮಹಾಬಾಹುಂ ತೇನ ತಪ್ಯೇ ವೃಕೋದರ ॥೮॥

ವೃಕೋದರನೇ, ಶ್ಯಾಮವರ್ಣದವನೂ, ನಿದ್ರೆಯನ್ನು ಗೆದ್ದವನೂ, ಸಿಂಹದ ವಿಕ್ರಮ ನಡಿಗೆಯುಳ್ಳವನು, ಮಹಾಬಾಹುವೂ ಆದ ಅವನನ್ನು ನೋಡದೆ ನಾನು ತಾಪ ಪಡುತ್ತಿದ್ದೇನೆ.

ಕೃತಾಸ್ತ್ರಂ ನಿಪುಣಂ ಯುದ್ಧೇಽಪ್ರತಿಮಾನಂ ಧನುಷ್ಮತಾಮ್ ।
ನ ಪಶ್ಯಾಮಿ ಕುರುಶ್ರೇಷ್ಠ ತೇನ ತಪ್ಯೇ ವೃಕೋದರ ॥೯॥

ಚರಂತಮರಿಸಂಘೇಷು ಕಾಲೇ ಕ್ರುದ್ಧಮಿವಾಂತಕಮ್ ।
ಪ್ರಭಿನ್ನಮಿವ ಮಾತಂಗಂ ಸಿಂಹಸ್ಕಂಧಂ ಧನಂಜಯಮ್ ॥೧೦॥

ಎಲೈ ಕುರುಶ್ರೇಷ್ಠನಾದ ವೃಕೋದರನೇ, ಅಸ್ತ್ರವಿದ್ಯೆಯನ್ನು ಬಲ್ಲವನೂ, ಯುದ್ಧದಲ್ಲಿ ನಿಪುಣನೂ, ಧನುರ್ಧಾರಿಗಳಲ್ಲಿ ಅಸದೃಶನೂ, ಯುದ್ಧಕಾಲದಲ್ಲಿ ಮದಿಸಿದ

ಆನೆಯಂತೆ, ಕ್ರುದ್ಧನಾದ ಯಮನಂತೆ, ಶತ್ರುಸಮೂಹದಲ್ಲಿ ಸಂಚರಿಸುವವನೂ, ಸಿಂಹಸ್ಕಂಧನೂ ಆದ ಧನಂಜಯನನ್ನು ಕಾಣದೆ ನಾನು ಪರಿತಪಿಸುತ್ತಿದ್ದೇನೆ.

ಯಃ ಸ ಶಕ್ರಾದನವರೋ ವೀರ್ಯೇಣ ದ್ರವಿಣೇನ ಚ ।
ಯಮಯೋಃ ಪೂರ್ವಜಃ ಪಾರ್ಥಃ ಶ್ವೇತಾಶ್ವೋಽಮಿತವಿಕ್ರಮಃ ॥೧೧॥

ನಾರಾಯಣಸಮೋ ಯುದ್ಧೇ ಸತ್ಯಸಂಧೋ ದೃಢವ್ರತಃ ।
ತಂ ಮಮಾಪಶ್ಯತೋ ಭೀಮ ನ ಶಾಂತಿರ್ಹೃದಯಸ್ಯ ವೈ ॥೧೨॥

ಅವನು ವೀರ್ಯದಲ್ಲೂ ಮತ್ತು ಸಂಪತ್ತಿನಲ್ಲಿಯೂ ಇಂದ್ರನಿಗಿಂತ ಏನೂ ಕಡಿಮೆ ಇಲ್ಲದವನು. ನಕುಲಸಹದೇವರಿಗೆ ಅಣ್ಣನಾದವನು. ಶ್ವೇತಾಶ್ವವುಳ್ಳವನು ಮತ್ತು ಅಮಿತವಿಕ್ರಮನಾದವನು. ಎಲೈ ಭೀಮನೇ, ಪಾರ್ಥನು ಯುದ್ಧದಲ್ಲಿ ನಾರಾಯಣನಿಗೆ ಸಮನಾದವನು. ಸತ್ಯಸಂಧನೂ ಮತ್ತು ದೃಢವ್ರತನೂ ಆಗಿರುವವನು. ಅವನನ್ನು ಕಾಣದೆ ನನ್ನ ಮನಸ್ಸಿಗೆ ಶಾಂತಿಯೇ ಉಂಟಾಗುತ್ತಿಲ್ಲ.

ದುಃಖೇನ ಮಹತಾಽವಿಷ್ಟಂ ನ ಪಶ್ಯಾಮಿ ಫಲ್ಗುನಮ್ ।
ಅಜೇಯಮುಗ್ರಧನ್ವಾನಂ ತೇನ ತಪ್ಯೇ ವೃಕೋದರ ॥೧೩॥

ನಾನು ಬಹಳ ದುಃಖದಿಂದ ಕೂಡಿದವನಾಗಿ ಅಜೇಯನೂ, ಉಗ್ರಧನ್ವನೂ ಆದ ಅರ್ಜುನನನ್ನು ಕಾಣುತ್ತಿಲ್ಲ. ವೃಕೋದರನೇ, ಅದರಿಂದ ಪರಿತಪಿಸುತ್ತಿದ್ದೇನೆ.

ಸತತಂ ಯಃ ಕ್ಷಮಾಶೀಲಃ ಕ್ಷಿಪ್ಯಮಾಣೋಽಪ್ಯರಿಂದಮಾ ।
ಋಜುಮಾರ್ಗಪ್ರಪನ್ನಸ್ಯ ಶರ್ಮದಾತಾಽಭಯಸ್ಯ ಚ ॥೧೪॥

ಅವನು ಬಹಳ ಚಿಕ್ಕವರು ನಿಂದಿಸಿದರೂ ಸಹ ಯಾವಾಗಲೂ ಅವರನ್ನು ಕ್ಷಮಿಸುವ ಸ್ವಭಾವವುಳ್ಳವನು. ಋಜುಮಾರ್ಗದಲ್ಲಿ ಅವನನ್ನು ಉಪಸತ್ತಿ ಮಾಡುವವರಿಗೆ ಸುಖವನ್ನು ಮತ್ತು ಅಭಯವನ್ನು ಕೊಡುವವನು.

ಸ ತು ಜಿಹ್ಮಪ್ರವೃತ್ತಸ್ಯ ಮಾಯಯಾಽಭಿಜಿಘಾಂಸತಃ ।
ಅಪಿ ವಜ್ರಧರಸ್ಯಾಪಿ ಭವೇತ್ ಕಾಲವಿಷೋಪಮಃ ॥೧೫॥

ಮೋಸ ವಂಚನೆಗಳಿಂದ ಮತ್ತು ಮಾಯೆಯಿಂದ ಅವನನ್ನು ಸಂಹರಿಸಲು ಬಂದರೆ ವಜ್ರಧರನಾದ ಇಂದ್ರನಿಗೂ ಸಹ ಅವನು ಕಾಲಕೂಟ ವಿಷದಂತೆ ಇರುವವನು.

ಶತ್ರೋರಪಿ ಪ್ರಪನ್ನಸ್ಯ ಸೋಽನ್ಯಶಂಸಃ ಪ್ರತಾಪವಾನ್ ।
ದಾತಾಽಭಯಸ್ಯ ಬೀಭತ್ಸೋರಮಿತಾತ್ಮಾ ಮಹಾಬಲಃ ॥೧೫.೧॥

ಪ್ರತಾಪಶಾಲಿಯಾದ ಅವನು ಪ್ರಪನ್ನನಾದ ಶತ್ರುವಿಗೂ ಸಹ ಮಾರ್ದವವನ್ನು ತೋರಿಸುವವನು. ಮಹಾಬಲನೂ, ಅಮಿತಾತ್ಮನೂ ಆದ ಬೀಭತ್ಸುವು ಅವನಿಗೂ ಅಭಯವನ್ನು ನೀಡುವವನು.

ಸದಾ ಜಿಷ್ಣುರದೀನಾತ್ಮಾ ಮಹಾತ್ಮಾ ಪಾಕಶಾಸನಿಃ ॥೧೬॥

ಸರ್ವೇಷಾಮಾಶ್ರಯೋಽಸ್ಮಾಕಂ ರಣೇಽರೀಣಾಂ ಪ್ರಮರ್ದಿತಾ ।
ಆಹರ್ತಾ ಸರ್ವರತ್ನಾನಾಂ ಸರ್ವೇಷಾಂ ನಃ ಸುಖಾವಹಃ ॥೧೭॥

ಮಹಾತ್ಮನಾದ ಪಾಕಶಾಸನನ ಪುತ್ರನಾದ ಅರ್ಜುನನು ಯಾವಾಗಲೂ ಜಯಶೀಲನಾದವನು. ಎಂದೂ ಮನೋದ್ಯೈನ್ಯವನ್ನು ಹೊಂದದವನು. ಯುದ್ಧದಲ್ಲಿ ಶತ್ರುಗಳನ್ನು ಭೇದಿಸುವವನು ಮತ್ತು ನಮಗೆಲ್ಲರಿಗೂ ಆಶ್ರಯನಾದವನು. ಎಲ್ಲ ರತ್ನಗಳನ್ನೂ ಸಂಪಾದಿಸುವವನು ಮತ್ತು ನಮಗೆಲ್ಲರಿಗೂ ಸುಖಪ್ರದನಾದವನು.

ರತ್ನಾನಿ ಯಸ್ಯ ವೀರ್ಯೇಣ ದಿವ್ಯಾನ್ಯಾಸನ್ ಪುರಾ ಮಮ ।
ಬಹೂನಿ ಬಹುಜಾತೀನಿ ಯಾನಿ ಪ್ರಾಪ್ತಃ ಸುಯೋಧನಃ ॥೧೮॥

ಅವನ ಪರಾಕ್ರಮದಿಂದಾಗಿ ಹಿಂದೆ ನನ್ನ ಬಳಿ ಅನೇಕ ಜಾತಿಯ ಅನೇಕ ರತ್ನಗಳು ಇದ್ದವು. ಅವೆಲ್ಲವೂ ಸುಯೋಧನನ ಕೈಸೇರಿದವು.

ಯಸ್ಯ ಬಾಹುಬಲಾದ್‌ವೀರ ಸಭಾ ಚಾಸೀತ್ ಪುರಾ ಮಮ ।
ಸರ್ವರತ್ನಮಯೀ ಖ್ಯಾತಾ ತ್ರಿಷು ಲೋಕೇಷು ಪಾಂಡವ ॥೧೯॥

ಎಲೈ ವೀರನಾದ ಪಾಂಡವನೇ, ಅವನ ಬಾಹುಬಲದಿಂದಲೇ ನನಗೆ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾದ ಸರ್ವರತ್ನಮಯವಾದ ಸಭೆಯು ಇದ್ದಿತು.

ವಾಸುದೇವಸಮಂ ವೀರ್ಯೇ ಕಾರ್ತವೀರ್ಯಸಮಂ ಯುಧಿ ।
ಅಜೇಯಮಮಿತಂ ಯುದ್ಧೇ ತಂ ನ ಪಶ್ಯಾಮಿ ಫಲ್ಗುನಮ್ ॥೨೦॥

ಅವನು ಪರಾಕ್ರಮದಲ್ಲಿ ಕೃಷ್ಣನಿಗೆ ಸಮನಾದವನು. ಯುದ್ಧದಲ್ಲಿ ಕಾರ್ತವೀರ್ಯನಿಗೆ ಸಮನಾದವನು. ಯುದ್ಧದಲ್ಲಿ ಅಜೇಯನಾದವನು ಮತ್ತು ಅಮಿತನಾದವನು. ಅಂತಹ ಅರ್ಜುನನನ್ನು ನಾನು ಕಾಣುತ್ತಿಲ್ಲ.

ಸಂಕರ್ಷಣಂ ಮಹಾವೀರ್ಯಂ ತ್ವಾಂ ಚ ಭೀಮಾಪರಾಜಿತಮ್ ।
ಅನುಯಾತಃ ಸ್ವವೀರ್ಯೇಣ ವಾಸುದೇವಂ ಚ ಶತ್ರುಹಾ ॥೨೧॥

ಶತ್ರುಸೂದನನಾದ ಅವನು ಪರಾಕ್ರಮಶಾಲಿಯಾದ ಬಲರಾಮನನ್ನೂ, ಅಪರಾಜಿತನಾದ ನಿನ್ನನ್ನೂ ಮತ್ತು ತನ್ನ ಪರಾಕ್ರಮದಿಂದ ಕೃಷ್ಣನನ್ನೂ ಅನುಸರಿಸಿದ್ದಾನೆ.

ಯಸ್ಯ ಬಾಹುಬಲೇ ತುಲ್ಯಃ ಪ್ರಭಾವೇ ಚ ಪುರಂದರಃ ।
ಜವೇ ವಾಯುರ್ಮುಖೇ ಸೋಮಃ ಕ್ರೋಧೇ ಮೃತ್ಯುಃ ಸನಾತನಃ॥೨೨॥

ಬಾಹುಬಲದಲ್ಲಿ ಮತ್ತು ಪ್ರಭಾವದಲ್ಲಿ ಅವನಿಗೆ ಇಂದ್ರನೇ ಸಮನಾದವನು. ವೇಗದಲ್ಲಿ ವಾಯುವನ್ನು, ಮುಖದಲ್ಲಿ ಚಂದ್ರನನ್ನು, ಕ್ರೋಧದಲ್ಲಿ ಸನಾತನನಾದ ಮೃತ್ಯುವನ್ನು ಅವನು ಹೋಲುತ್ತಾನೆ.

ತೇ ವಯಂ ತಂ ನರವ್ಯಾಘ್ರಂ ಸರ್ವೇ ವೀರ ದಿದೃಕ್ಷವಃ ।
ಪ್ರವೇಕ್ಷ್ಯಾಮೋ ಮಹಾಬಾಹೋ ಪರ್ವತಂ ಗಂಧಮಾದನಮ್ ॥೨೩॥

ಎಲೈ ಮಹಾಬಾಹುವಾದ ವೀರನೇ, ನಾವೆಲ್ಲರೂ ಆ ವೀರನನ್ನು ನೋಡುವ ಆಸೆಯಿಂದ ಗಂಧಮಾದನ ಪರ್ವತವನ್ನು ಪ್ರವೇಶಿಸೋಣ.

ವಿಶಾಲಾ ಬದರೀ ಯತ್ರ ನರನಾರಾಯಣಾಶ್ರಮಃ ।
ತಂ ಸದಾಽಧ್ಯುಷಿತಂ ಯಕ್ಷೈರ್ದ್ರಕ್ಷ್ಯಾಮೋ ಗಿರಿಮುತ್ತಮಮ್ ॥೨೪॥

ಅಲ್ಲಿ ವಿಶಾಲಾ ಎಂದು ಕರೆಯಲ್ಪಡುವ ನರನಾರಾಯಣಾಶ್ರಮವಿರುವ ಬದರೀ ಕ್ಷೇತ್ರವಿದೆ. ಆ ಕ್ಷೇತ್ರದಲ್ಲಿ ಯಕ್ಷರು ಯಾವಾಗಲೂ ವಾಸಮಾಡುತ್ತಾರೆ. ಅಂತಹ ಶ್ರೇಷ್ಠವಾದ ಪರ್ವತವನ್ನು ನಾವು ನೋಡುವೆವು.

ಕುಬೇರನಳಿನೀಂ ರಮ್ಯಾಂ ರಾಕ್ಷಸೈರಭಿಸೇವಿತಾಮ್ ।
ಪದ್ಭಿರೇವ ಗಮಿಷ್ಯಾಮಸ್ತಪ್ಯಮಾನಾ ಮಹತ್ತಪಃ ॥೨೫॥

ದೊಡ್ಡ ತಪಸ್ಸನ್ನು ಆಚರಿಸುತ್ತಾ ಪಾದಗಳಿಂದಲೇ ನಡೆದು ನಾವು ರಾಕ್ಷಸರಿಂದ ಪಾಲಿತವಾದ ಮನೋಹರವಾದ ಕುಬೇರನ ಸರೋವರವನ್ನು ತಲುಪುವೆವು.

ನ ಚ ಯಾನವತಾ ಶಕ್ಯೋ ಗಂತುಂ ದೇಶೋ ವೃಕೋದರ ।
ನ ನೃಶಂಸೇನ ಲುಬ್ಧೇನ ನಾಪ್ರಶಾಂತೇನ ಭಾರತ ॥೨೬॥

ಎಲೈ ವೃಕೋದರನೇ, ಭಾರತನೇ, ಆ ದೇಶಕ್ಕೆ ಯಾನಗಳಿಂದ ಹೋಗಲು ಸಾಧ್ಯವಿಲ್ಲ. ಕ್ರೂರಿಗಳು, ಲೋಭಿಗಳು ಮತ್ತು ಮನಶ್ಶಾಂತಿಯಿಲ್ಲದವರು ಅಲ್ಲಿಗೆ ಹೋಗಲು ಸಾಧ್ಯವಿಲ್ಲ.

ತತ್ರ ಸರ್ವೇ ಗಮಿಷ್ಯಾಮೋ ಭೀಮಾರ್ಜುನಗವೇಷಿಣಃ ।
ಸಾಯುಧಾ ಬದ್ಧನಿಸ್ತ್ರಿಂಶಾ ಸಾರ್ಧಂ ವಿಪ್ರೈರ್ಮಹಾವ್ರತೈಃ ॥೨೭॥

ಎಲೈ ಭೀಮನೇ, ಅರ್ಜುನನನ್ನು ಕಾಣುವ ಸಲುವಾಗಿ ನಾವೆಲ್ಲರೂ ಆಯುಧಗಳನ್ನು ತೆಗೆದುಕೊಂಡು, ಕತ್ತಿಗಳನ್ನು ಕಟ್ಟಿಕೊಂಡು ಮಹಾವ್ರತರಾದ ಬ್ರಾಹ್ಮಣರ ಜೊತೆಯಲ್ಲಿ ಅಲ್ಲಿಗೆ ಹೋಗೋಣ.

ಮಕ್ಷಿಕಾದಂಶಮಶಕಾನ್ ಸಿಂಹಾನ್ ವ್ಯಾಘ್ರಾನ್ ಸರೀಸೃಪಾನ್ ।
ಪ್ರಾಪ್ತೋತ್ಯನಿಯತಃ ಪಾರ್ಥ ನಿಯತಸ್ತಾನ್ ನ ಪಶ್ಯತಿ ॥೨೮॥

ಎಲೈ ಪಾರ್ಥನೇ (ಪೃಥೆಯ ಮಗನಾದ ಭೀಮನೇ), ನಿಯಮವಿಲ್ಲದವರು ಅಲ್ಲಿಗೆ ಹೋದರೆ ನೊಣಗಳು, ಸೊಳ್ಳೆಗಳು, ಸಿಂಹಗಳು, ವ್ಯಾಘ್ರಗಳು ಮತ್ತು ಸರ್ಪಗಳನ್ನು ಕಾಣುತ್ತಾರೆ. ನಿಯಮಬದ್ಧವಾಗಿ ಹೋದವನು ಅದಾವುದನ್ನೂ ನೋಡುವುದಿಲ್ಲ.

ತೇ ವಯಂ ನಿಯತಾತ್ಮಾನಃ ಪರ್ವತಂ ಗಂಧಮಾದನಮ್ ।
ಪ್ರವೇಕ್ಷ್ಯಾಮೋ ಮಿತಾಹಾರಾ ಧನಂಜಯದಿದೃಕ್ಷಯಾ(ವಃ) ॥೨೯॥

ಅಂತಹ ನಾವು ಮನೋನಿಗ್ರಹವನ್ನು ಹೊಂದಿದವರಾಗಿ ಮಿತಾಹಾರದಿಂದ ಧನಂಜಯನನ್ನು ನೋಡುವ ಆಸೆಯಿಂದ ಗಂಧಮಾದನಪರ್ವತವನ್ನು ಪ್ರವೇಶಿಸೋಣ.

।। ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಆಷ್ಟಾತ್ರಿಂಶದಧಿಕಶತತಮೋಽಧ್ಯಾಯಃ ।।
।। ಇತಿ ತೀರ್ಥಯಾತ್ರಪರ್ವಣಿ ಚತುರ್ನವತಿತಮೋಽಧ್ಯಾಯಃ ।।

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ಪಾಂಡವರಿಂದ ಗಂಗೆಯ ವಂದನ. ಲೋಮಶರಿಂದ ನರಕಾಸುರವಧೆಯ ಮತ್ತು ವರಾಹಾವತಾರದ ಕಥನ.

ಲೋಮಶಃ

ದ್ರಷ್ಟಾರಃ ಪರ್ವತಾಃ ಸರ್ವೇ ನದ್ಯಃ ಸಪುರಕಾನನಾಃ ।
ತೀರ್ಥಾನಿ ಚೈವ ಶ್ರೀಮಂತಿ ಸ್ಪೃಷ್ಟಂ ಚ ಸಲಿಲಂ ಕರೈಃ ॥೧॥

ಎಲೈ ವೀಕ್ಷಕರಾದ ಪಾಂಡವರೇ, ಎಲ್ಲಾ ಪರ್ವತಗಳನ್ನು ಮತ್ತು ಪುರಕಾನನಗಳಿಂದ ಸಹಿತವಾದ ನದಿಗಳನ್ನು ನೋಡುವಿರಿ. ಎಲ್ಲ ವೈಭವಯುತ ತೀರ್ಥಗಳ ಜಲಗಳನ್ನು ಸ್ನಾನಪಾನಾದಿಗಳಿಂದ ಸ್ಪರ್ಶ ಮಾಡಿದಿರಿ.

ಪರ್ವತಂ ಮಂದರಂ ದಿವ್ಯಮೇಷ ಪಂಥಾಃ ಪ್ರಯಾಸ್ಯತಿ ।
ಸಮಾಹಿತಾ ನಿರುದ್ವಿಗ್ನಾಃ ಸರ್ವೇ ಭವತ ಪಾಂಡವಾಃ ॥೨॥

ಎಲೈ ಪಾಂಡವರೇ, ಈ ಮಾರ್ಗವು ದಿವ್ಯವಾದ ಮಂದರ ಪರ್ವತಕ್ಕೆ ಹೋಗುವುದು. ಎಲ್ಲರೂ ಸಮಾಧಾನದಿಂದ ಕೂಡಿದವರಾಗಿ ಉದ್ವೇಗವನ್ನು ತೊರೆಯಿರಿ.

ಅಯಂ ದೇವನಿವಾಸೋ ವೈ ಗಂತವ್ಯೋ ವೋ ಭವಿಷ್ಯತಿ ।
ಋಷೀಣಾಂ ಚೈವ ದಿವ್ಯಾನಾಂ ನಿವಾಸಃ ಪುಣ್ಯಕರ್ಮಣಾಮ್ ॥೩॥

ನಾವು ಇಲ್ಲಿಂದ ಮುಂದೆ ಈ ದೇವನಿವಾಸಕ್ಕೆ ಹೋಗಬೇಕು. ಆದರಂತೆಯೇ ಪುಣ್ಯಕರ್ಮಾಸಕ್ತರಾದ ಋಷಿಗಳ ದಿವ್ಯನಿವಾಸಕ್ಕೂ ಹೋಗಬೇಕು.

ಏಷಾ ಶಿವಜಲಾ ಪುಣ್ಯಾ ಯಾತಿ ಸೌಮ್ಯ ಮಹಾನದೀ ।
ಬದರೀಪ್ರಭವಾ ರಾಜನ್ ದೇವರ್ಷಿಗಣಸೇವಿತಾ ॥೪॥

ಎಲೈ ರಾಜನೇ, ಇದು ಮಂಗಳಕರವಾದ ಜಲವನ್ನುಳ್ಳ ಪವಿತ್ರವಾದ ಗಂಗಾನದಿ. ಎಲೈ ಸೌಮ್ಯನೇ, ದೇವರ್ಷಿಗಣಸೇವಿತವಾದ ಈ ನದಿಯು ಬದರಿಯಿಂದ ಹರಿಯುತ್ತದೆ.

ಏಷಾ ವೈಹಾಯಸೈರ್ನಿತ್ಯಂ ವಾಲಖಿಲ್ಯೈರ್ಮಹಾತ್ಮಭಿಃ ।
ಅರ್ಚಿತಾ ಚೋಪಯಾತಾ ಚ ಗಂಧರ್ವೈಶ್ಚ ಮಹಾತ್ಮಭಿಃ ॥೫॥

ಗಗನಸಂಚಾರಿಯಾದ ಮಹಾತ್ಮರಾದ ವಾಲಖಿಲ್ಯರು ಇವಳನ್ನು ಅರ್ಚಿಸುತ್ತಾರೆ. ಮಹಾತ್ಮರಾದ ಗಂಧರ್ವರೂ ಸಹ ಇಲ್ಲಿಗೆ ಬರುತ್ತಾರೆ.

ಅತ್ರ ಸಾಮ ಸ್ಮ ಗಾಯಂತಿ ಸಾಮಗಾಃ ಪುಣ್ಯನಿಸ್ವನಾಃ ।
ಮರೀಚಿಃ ಪುಲಹಶ್ಚೈವ ಭೃಗುಶ್ಚೈವಾಂಗಿರಾಸ್ತಥಾ ॥೬॥

ಮರೀಚಿ, ಪುಲಹ, ಭೃಗು ಮತ್ತು ಅಂಗಿರಸ್ ಮೊದಲಾದವರು ಇಲ್ಲಿಗೆ ಬಂದು ಪುಣ್ಯಶಬ್ದವಿರುವ ಸಾಮಗಾನವನ್ನು ಮಾಡುತ್ತಾರೆ.

ಅತ್ರಾಹ್ನಿಕಂ ಸುರಶ್ರೇಷ್ಠೋ ಜಪತೇ ಸಮರುದ್ಗಣಃ ।
ಸಾಧ್ಯಾಶ್ಚೈವಾಶ್ವಿನೌ ಚೈವ ಪರಿಧಾವಂತಿ ತಂ ತದಾ ॥೭॥

ಇಲ್ಲಿ ದೇವಶ್ರೇಷ್ಠನಾದ ಇಂದ್ರನು ಮರುದ್ಗಣಗಳ ಜೊತೆಯಲ್ಲಿ ಬಂದು ಆಹ್ನಿಕವನ್ನು ಮಾಡುತ್ತಾನೆ. ಸಾಧ್ಯರು ಮತ್ತು ಅಶ್ವಿನಿಗಳು ಆಗ ಅವನ ಸೇವೆಯನ್ನು ಮಾಡುತ್ತಾರೆ.

ಚಂದ್ರಮಾಃ ಸಹ ಸೂರ್ಯೇಣ ಜ್ಯೋತೀಂಷಿ ಚ ಗ್ರಹೈಃ ಸಹ ।
ಅಹೋರಾತ್ರವಿಭಾಗೇನ ನದೀಮೇನಾಮನುವ್ರಜನ್ ॥೮॥

ಚಂದ್ರನು, ಸೂರ್ಯನು, ನಕ್ಷತ್ರಗಳು ಮತ್ತು ಗ್ರಹಗಳೂ ಸಹ ಹಗಲು-ರಾತ್ರಿಗಳ ಪರ್ಯಾಯವನ್ನು ಮಾಡಿಕೊಂಡು ಈ ನದಿಗೆ ಬರುತ್ತಾರೆ.

ಏತಸ್ಯಾಃ ಸಲಿಲಂ ಮೂರ್ಧ್ನಾ(ರ್ಧ್ನಿ) ವೃಷಾಂಕಃ ಪರ್ಯಧಾರಯತ್ ।
ಗಂಗಾದ್ವಾರೇ ಮಹಾಭಾಗ ಯೇನ ಲೋಕಸ್ಥಿತಿರ್ಭವೇತ್ ॥೯॥

ಈ ನದಿಯ ಜಲವನ್ನು ವೃಷಾಂಕನಾದ ಶಿವನು ಗಂಗಾದ್ವಾರದಲ್ಲಿ ಶಿರಸ್ಸಿನಲ್ಲಿ ಧರಿಸಿದ್ದಾನೆ. ಮಹಾಭಾಗನೇ ಅದರಿಂದ ಲೋಕಕ್ಕೇ ಹಿತವುಂಟಾಗಿದೆ.

ಏತಾಂ ಭಗವತೀಂ ದೇವೀಂ ಭವಂತಃ ಸರ್ವ ಏವ ಹಿ ।
ಪ್ರಯತೇನಾತ್ಮನಾ ತಾತ ಪ್ರತಿಗಮ್ಯಾಭಿವಾದತ ॥೧೦॥

ಎಲೈ ಪ್ರೀತಿಪಾತ್ರನೇ, ನೀವೆಲ್ಲರೂ ಮನೋನಿಗ್ರಹವುಳ್ಳವರಾಗಿ ಈ ಪೂಜ್ಯಳಾದ ಗಂಗಾದೇವಿಯ ಬಳಿಗೆ ಬಂದು ಅವಳನ್ನು ನಮಸ್ಕರಿಸಿ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಲೋಮಶಸ್ಯ ಮಹಾತ್ಮನಃ ।
ಆಕಾಶಗಂಗಾಂ ಪ್ರಯತಾಃ ಪಾಂಡವಾಸ್ತೇऽಭ್ಯವಾದಯನ್ ॥೧೧॥

ವೈಶಂಪಾಯನ– ಮಹಾತ್ಮರಾದ ಲೋಮಶರ ಆ ಮಾತುಗಳನ್ನು ಕೇಳಿ ಪಾಂಡವರೆಲ್ಲರೂ ವಾಗಾದಿನಿಗ್ರಹವುಳ್ಳವರಾಗಿ ಆಕಾಶಗಂಗೆಗೆ ನಮಸ್ಕಾರವನ್ನು ಮಾಡಿದರು.

ಅಭಿವಾದ್ಯ ಚ ತೇ ಸರ್ವೇ ಪಾಂಡವಾ ಧರ್ಮಚಾರಿಣಃ ।
ಪುನಃ ಪ್ರಯಾತಾಃ ಸಂಹೃಷ್ಟಾಃ ಸರ್ವೈರ್ಋಷಿಗಣೈಃ ಸಹ ॥೧೨॥

ಧರ್ಮಚಾರಿಗಳಾದ ಆ ಎಲ್ಲ ಪಾಂಡವರು ಗಂಗೆಯನ್ನು ನಮಸ್ಕರಿಸಿ ಸಂತೋಷಗೊಂಡು ಎಲ್ಲಾ ಋಷಿಗಳ ಸಮೂಹದ ಜೊತೆಯಲ್ಲಿ ತಮ್ಮ ಪ್ರಯಾಣವನ್ನು ಬೆಳೆಸಿದರು.

ತತೋ ದೂರಾತ್ ಪ್ರಕಾಶಂತಂ ಪಾಂಡರಂ ಮೇರುಸನ್ನಿಭಮ್ ।
ದದೃಶುಸ್ತೇ ನರಶ್ರೇಷ್ಠಾ ವಿಕೀರ್ಣಂ ಸರ್ವತೋದಿಶಮ್ ॥೧೩॥

ಆನಂತರ ಆ ನರಶ್ರೇಷ್ಠರು ದೂರದಲ್ಲಿ ಮೇರುವಿನಂತೆ ಶ್ವೇತವರ್ಣದಿಂದ ಹೊಳೆಯುತ್ತಿರುವ ಎಲ್ಲ ದಿಕ್ಕುಗಳಲ್ಲಿಯೂ ಹರಡಿಬಿದ್ದಿದ್ದ ಒಂದು ವಸ್ತುವನ್ನು ನೋಡಿದರು.

ತಾನ್ ಪ್ರಶ್ನಕಾಮಾನ್ ವಿಜ್ಞಾಯ ಪಾಂಡವಾನ್ ಸ ತು ಲೋಮಶಃ ।
ಉವಾಚ ವಾಕ್ಯಂ ವಾಕ್ಯಜ್ಞಃ ಶೃಣುಧ್ವಂ ಪಾಂಡುನಂದನಾಃ ॥೧೪॥

ಆ ಪಾಂಡವರು ಕುತೂಹಲದಿಂದ ಪ್ರಶ್ನೆಯನ್ನು ಮಾಡಲು ಉದ್ಯುಕ್ತರಾದುದನ್ನು ಗಮನಿಸಿ ವಾಕ್ಯವಿಶಾರದರಾದ ಲೋಮಶರು, ಎಲೈ ಪಾಂಡುನಂದನರೇ ಕೇಳಿ ಎಂದು ಮಾತನಾಡಲು ಪ್ರಾರಂಭಿಸಿದರು.

ಏತದ್ವಿಕೀರ್ಣಂ ಸುಶ್ರೀಮತ್ ಕೈಲಾಸಶಿಖರೋಪಮಮ್ ।
ಯತ್ ಪಶ್ಯಸಿ ನರಶ್ರೇಷ್ಠ ಪರ್ವತಪ್ರತಿಮಂ ಸ್ಥಿತಮ್ ॥೧೫॥

ಏತಾನ್ಯಸ್ಥೀನಿ ದೈತ್ಯಸ್ಯ ನರಕಸ್ಯ ಮಹಾತ್ಮನಃ ।
ಪರ್ವತಪ್ರತಿಮಂ ಭಾತಿ ಪರ್ವತಪ್ರಸ್ತರಾಶ್ರಿತಮ್ ॥೧೬॥

ಎಲೈ ನರಶ್ರೇಷ್ಠನೇ, ಕೈಲಾಸಶಿಖರದಂತೆ ಕಾಂತಿಯುಕ್ತವಾಗಿ ಎಲ್ಲ ಕಡೆಯಲ್ಲಿಯೂ ಹರಡಿ ಪರ್ವತದಂತೆ ತೋರುತ್ತಿರುವ ಯಾವ ಈ ವಸ್ತುವನ್ನು ನೋಡುತ್ತಿದ್ದೀಯೋ ಅದು ಮಹಾತ್ಮನಾದ ನರಕಾಸುರನ ಅಸ್ಥಿಗಳ ರಾಶಿ. ಅದು ಪರ್ವತದ ಶಿಲೆಯನ್ನು ಆಶ್ರಯಿಸಿ ತಾನೇ ಒಂದು ಪರ್ವತದಂತೆ ಹೊಳೆಯುತ್ತಿದೆ.

ಪುರಾತನೇನ ದೇವೇನ ವಿಷ್ಣುನಾ ಪರಮಾತ್ಮನಾ ।
ದೈತ್ಯೋ ವಿನಿಹತಸ್ತೇನ ಸುರರಾಜಹಿತೈಷಿಣಾ ॥೧೭॥

ಅನಾದಿಯಾದ ಪರಮಾತ್ಮನಾದ ವಿಷ್ಣುವು ಇಂದ್ರನಿಗೆ ಹಿತವನ್ನು ಉಂಟು ಮಾಡುವ ಸಲುವಾಗಿ ಆ ದೈತ್ಯನನ್ನು ಸಂಹರಿಸಿದನು.

ದಶವರ್ಷಸಹಸ್ರಾಣಿ ತಪಸ್ತಪ್ಯನ್ ಮಹಾಮನಾಃ ।
ಐಂದ್ರಂ ಪ್ರಾರ್ಥಯತೇ ಸ್ಥಾನಂ ತಪಸಾದ್ಧ್ಯಾಯವಿಕ್ರಮಾತ್ ॥೧೮॥

ಆ ದೈತ್ಯನಾದರೂ ತನ್ನ ತಪಸ್ಸು, ಸಾಮರ್ಥ್ಯ ಮತ್ತು ಪರಾಕ್ರಮಗಳಿಂದ ಮಹಾಮನಸ್ಸನ್ನು ಉಳ್ಳವನಾಗಿ ಇಂದ್ರನ ಸ್ಥಾನವನ್ನು ಪಡೆಯಲು ಹತ್ತುಸಾವಿರ ವರ್ಷಗಳ ಕಾಲ ತಪಸ್ಸನ್ನು ಆಚರಿಸಿದನು.

ತಪೋಬಲೇನ ಮಹತಾ ಬಾಹುವೇಗಬಲೇನ ಚ ।
ನಿತ್ಯಮೇವ ದುರಾಧರ್ಷೋ ಧರ್ಷಯನ್ ಸ ದಿತೇಃ ಸುತಃ ॥೧೯॥

ದಿತಿಪುತ್ರನಾದ ಅವನು ತನ್ನ ದೊಡ್ಡ ತಪಸ್ಸಿನ ಬಲದಿಂದಲೂ, ಮತ್ತು ಬಾಹುವೇಗದ ಬಲದಿಂದಲೂ ಯಾವಾಗಲೂ ಅಜೇಯನಾಗಿದ್ದು ದೇವತೆಗಳನ್ನು ಬಾಧಿಸುತ್ತಿದ್ದನು.

ಸ ತು ತಸ್ಯ ಬಲಂ ಜ್ಞಾತ್ವಾ ಧರ್ಮೇ ಚ ಚರಿತವ್ರತಮ್ ।
ಭಯಾಭಿಭೂತಃ ಸಂವಿಗ್ನಃ ಶಕ್ರ ಆಸೀತ್ ತದಾನಘ ॥೨೦॥

ಎಲೈ ಅನಘನೇ, ಇಂದ್ರನಾದರೂ ಅವನ ಬಲವನ್ನು ಮತ್ತು ಧರ್ಮಾಚರಣೆಯನ್ನು ಮತ್ತು ವ್ರತಗಳನ್ನು ಗಮನಿಸಿ ಭಯದಿಂದ ಕೂಡಿ ದುಃಖಿತನಾದನು.

ತೇನ ಸಂಚಿಂತಿತೋ ದೇವೋ ಮನಸಾ ವಿಷ್ಣುರವ್ಯಯಃ ।
ಸರ್ವತ್ರಗಃ ಪ್ರಭುಃ ಶ್ರೀಮಾನಾಗತಶ್ಚ ಸ್ಮಿತೋ ಬಭೌ ।
ಋಷಯಶ್ಚಾಪಿ ತಂ ಸರ್ವೇ ತುಷ್ಟುವುಶ್ಚ ದಿವೌಕಸಃ ॥೨೧॥

ಅವನು ಮನಸ್ಸಿನಲ್ಲಿ ಅವ್ಯಯನಾದ ವಿಷ್ಣುವನ್ನು ಚಿಂತಿಸಿದನು. ಸರ್ವತ್ರ ವ್ಯಾಪ್ತನಾದ ಪ್ರಭುವಾದ ಲಕ್ಷ್ಮೀಪತಿಯು ಅವನ ಎದುರಿಗೆ ಬಂದು ನಿಂತು ಕಂಗೊಳಿಸಿದನು. ಎಲ್ಲಾ ಋಷಿಗಳು ಮತ್ತು ದೇವತೆಗಳು ಅವನನ್ನು ಸ್ತೋತ್ರ ಮಾಡಿದರು.

ತಂ ದೃಷ್ಟ್ವಾ ಜ್ವಲಮಾನಶ್ರೀರ್ಭಗವಾನ್ ಹವ್ಯವಾಹನಃ ।
ನಿಷ್ಪ್ರತೇಜಾಃ ಸಮಭವತ್ ತಸ್ಯ ತೇಜೋಽಭಧರ್ಷಿತಃ ॥೨೨॥

ವಿಷ್ಣುವನ್ನು ನೋಡಿದ ಪೂಜ್ಯನಾದ ಅಗ್ನಿಯು ಅಲ್ಲಿಯವರೆಗೆ ಜ್ವಾಲೆಗಳಿಂದ ಕೂಡಿಕೊಂಡಿದ್ದರೂ ವಿಷ್ಣುವಿನ ತೇಜಸ್ಸಿನಿಂದ ಅಭಿಭೂತನಾಗಿ ತನ್ನ ತೇಜಸ್ಸನ್ನು ಕಳೆದುಕೊಂಡನು.

ತಂ ದೃಷ್ಟ್ವಾ ವರದಂ ದೇವಂ ವಿಷ್ಣುಂ ದೇವಗಣೇಶ್ವರಮ್ ॥೨೩॥

ಪ್ರಾಂಜಲಿಃ ಪ್ರಣತೋ ಭೂತ್ವಾ ನಮಸ್ಕೃತ್ಯ ಚ ವಜ್ರಭೃತ್ ।
ಪ್ರಾಹ ವಾಕ್ಯಂ ತತಸ್ತತ್ತ್ವಂ ಯತಸ್ತಸ್ಯ ಭಯಂ ಭವೇತ್ ॥೨೪॥

ದೇವಗಣೇಶ್ವರನಾದ, ವರಪ್ರದನಾದ ವಿಷ್ಣುವನ್ನು ನೋಡಿ ವಜ್ರಧರನಾದ ಇಂದ್ರನು ಅವನಿಗೆ ದಂಡಪ್ರಣಾಮವನ್ನು ಮಾಡಿ ಕೈಗಳನ್ನು ಮುಗಿದು ತನಗೆ ಭಯವು ಉಂಟಾಗಲು ಕಾರಣವನ್ನು ಯಥಾರ್ಥವಾಗಿ ತಿಳಿಸಿದನು.

ವಿಷ್ಣುಃ

ಜಾನಾಮಿ ತೇ ಭಯಂ ಶಕ್ರ ದೈತ್ಯೇಂದ್ರಾನ್ನರಕಾತ್ ತತಃ ।
ಐಂದ್ರಂ ಪ್ರಾರ್ಥಯತೇ ಸ್ಥಾನಂ ತಪಃಸಿದ್ಧೇನ ಕರ್ಮಣಾ ॥೨೫॥

ವಿಷ್ಣು– ಎಲೈ ಶಕ್ರನೇ, ದೈತ್ಯೇಂದ್ರನಾದ ನರಕಾಸುರನಿಂದ ನಿನಗೆ ಉಂಟಾಗಿರುವ ಭಯದಿಂದ ನಾನು ತಿಳಿದಿದ್ದೇನೆ. ತಪಸ್ಸಿನ ಸಿದ್ಧಿಯನ್ನು ಪಡೆದು ತನ್ನ ಕರ್ಮದಿಂದ ಅವನು ಇಂದ್ರನಾದ ನಿನ್ನ ಸ್ಥಾನವನ್ನು ಬಯಸುತ್ತಿದ್ದಾನೆ.

ಸೋಽಹಮೇನಂ ತವ ಪ್ರೀತ್ಯಾ ತಪಃಸಿದ್ಧಮಪಿ ಧ್ರುವಮ್ ।
ವಿಯುನಜ್ಮಿ ದೇಹಾದ್ ದೇವೇಂದ್ರ ಮುಹೂರ್ತಂ ಪ್ರತಿಪಾಲಯ॥೨೬॥

ಅಂತಹ ನಾನು ನಿನ್ನ ಮೇಲಿನ ಪ್ರೀತಿಯಿಂದ ಅವನು ತಪಃಸಿದ್ಧನಾದರೂ ದೇಹವಿಯೋಗವನ್ನು ಹೊಂದುವಂತೆ ಮಾಡುವೆನು. ಎಲೈ ದೇವೇಂದ್ರನೇ, ಒಂದು ಮುಹೂರ್ತದ ಕಾಲ ನಿರೀಕ್ಷಿಸು.

ಲೋಮಶಃ

ತಸ್ಯ ವಿಷ್ಣುರ್ಮಹಾತೇಜಾಃ ಪಾಣಿನಾ ಚೇತನಾಂ ಹರತ್ ।
ಸ ಪಪಾತ ತತೋ ಭೂಮೌ ಗಿರಿರಾಜ ಇವಾಹತಃ ॥೨೭॥

ಲೋಮಶ– ಆಗ ಮಹಾತೇಜಸ್ವಿಯಾದ ವಿಷ್ಣುವು ತನ್ನ ಹಸ್ತದಿಂದ ಅವನ ಆತ್ಮವನ್ನು ಹೊರಗೆ ಎಳೆದನು. ಆಗ ಅವನು ಮುರಿದುಬಿದ್ದ ದೊಡ್ಡ ಪರ್ವತದಂತೆ ಭೂಮಿಯ ಮೇಲೆ ಬಿದ್ದನು.

ತಸ್ಯೈತದಸ್ಥಿಸಂಘಾತಂ ಮಾಯಾವಿನಿಹತಸ್ಯ ವೈ ।
ಇದಂ ದ್ವಿತೀಯಮಪರಂ ವಿಷ್ಣೋಃ ಕರ್ಮ ಪ್ರಕಾಶತೇ ॥೨೮॥

ವಿಷ್ಣುವಿನ ಬಲದಿಂದ ಹತನಾದ ಅವನ ಅಸ್ಥಿಸಮೂಹವು ಇದು. ಇದಲ್ಲದೇ ವಿಷ್ಣುವು ಮಾಡಿದ ಇನ್ನೊಂದು ದಿವ್ಯವಾದ ಕರ್ಮವು ಶೋಭಿಸುತ್ತದೆ (ಅದನ್ನೂ ಕೇಳು).

ನಷ್ಟಾ ವಸುಮತೀ ಕೃತ್ಸ್ನಾ ಪಾತಾಳೇ ಚೈವ ಮಜ್ಜತಾ ।
ಪುನರುದ್ಧರಿತಾ ತೇನ ವಾರಾಹೇಣೈಕಶೃಂಗಿಣಾ ॥೨೯॥

ಭೂಮಿಯು ಸಂಪೂರ್ಣವಾಗಿ ನಷ್ಟವಾಗಿ ಪಾತಾಳದಲ್ಲಿ ಮುಳುಗಿಸಲ್ಪಟ್ಟಿತು. ಆಗ ವಿಷ್ಣುವು ವರಾಹರೂಪವನ್ನು ಧರಿಸಿ ತನ್ನ ಒಂದು ಶೃಂಗದ ಮೇಲೆ ಭೂಮಿಯನ್ನು ಮೇಲಕ್ಕೆತ್ತಿದನು.

ಯುಧಿಷ್ಠಿರಃ

ಭಗವನ್ ವಿಸ್ತರೇಣೇಮಾಂ ಕಥಾಂ ಕಥಯ ತತ್ತ್ವತಃ ।
ಕಥಂ ತೇನ ಸುರೇಶೇನ ನಷ್ಟಾ ವಸುಮತೀ ತದಾ ॥೩೦॥

ಯೋಜನಾನಾಂ ಶತಂ ಬ್ರಹ್ಮನ್ ಪುನರುದ್ಧರಿತಾ ತದಾ ।
ಕೇನ ಚೈವ ಪ್ರಕಾರೇಣ ಜಗತೋ ಧರಣೀ ಧ್ರುವಾ ॥೩೧॥

ಯುಧಿಷ್ಠಿರ– ಪೂಜ್ಯರೇ, ಈ ಕಥೆಯನ್ನು ವಿಸ್ತಾರವಾಗಿ ಯಥಾರ್ಥವಾಗಿ ಹೇಳಿ. ಎಲೈ ಬ್ರಾಹ್ಮಣರೇ, ನೂರುಯೋಜನ ಆಳದಲ್ಲಿ ಮುಳುಗಿದ್ದ ಭೂಮಿಯು ಆ ದೇವದೇವೇಶನಿಂದ ಹೇಗೆ ಪುನಃ ಮೇಲಕ್ಕೆ ಎತ್ತಲ್ಪಟ್ಟಿತು? ಎಲ್ಲಪ್ರಾಣಿಗಳನ್ನು ಧರಿಸುವ ಭೂಮಿಯು ಯಾವ ಪ್ರಕಾರದಿಂದ ಸ್ಥಿರವಾಯಿತು?

ಶಿವಾ ದೇವೀ ಮಹಾಭಾಗಾ ಸರ್ವಸಸ್ಯಪ್ರರೋಹಿಣೀ ।
ಕಸ್ಯ ಚೈವ ಪ್ರಭಾವಾದ್ಧಿ ಯೋಜನಾನಾಂ ಶತಂ ಗತಾ ॥೩೨॥

ಮಹಾನುಭಾವಳಾದ ಭೂದೇವಿಯು ಮಂಗಳಸ್ವರೂಪಳಾದವಳು ಮತ್ತು ಎಲ್ಲ ಸಸ್ಯಗಳನ್ನೂ ಬೆಳೆಸುವವಳು. ಅಂತಹ ಅವಳು ಯಾವನ ಪ್ರಭಾವದಿಂದ ನೂರು ಯೋಜನ ಕೆಳಗೆ ಹೋದಳು?

ಕೇನ ತದ್ವೀರ್ಯಸರ್ವಸ್ವಂ ದರ್ಶಿತಂ ಪರಮಾತ್ಮನಃ ।
ಏತತ್ಸರ್ವಂ ಯಥಾತತ್ತ್ವಮಿಚ್ಛಾಮಿ ದ್ವಿಜಸತ್ತಮ ।
ಶ್ರೋತುಂ ವಿಸ್ತರಶಃ ಸರ್ವಂ ತ್ವಂ ಹಿ ತಸ್ಯ ಪ್ರತಿಶ್ರಯಃ ॥೩೩॥

ಆ ಪರಮಾತ್ಮನ ಸಮಗ್ರವಾದ ಸಾಮರ್ಥ್ಯವು ಯಾರಿಂದ ನೋಡಲ್ಪಟ್ಟಿತು? ಎಲೈ ದ್ವಿಜಶ್ರೇಷ್ಠರೇ, ಇದೆಲ್ಲವನ್ನೂ ಯಥಾರ್ಥವಾಗಿ ಮತ್ತು ವಿಸ್ತಾರವಾಗಿ ಕೇಳಲು ಬಯಸುತ್ತೇನೆ. ಈ ವಿಷಯದಲ್ಲಿ ನೀವೇ ನಮಗೆ ಆಶ್ರಯರಾದವರು.

ಲೋಮಶಃ

ಯತ್ತೇऽಹಂ ಪರಿಪೃಷ್ಟೋऽಸ್ಮಿ ಕಥಾಮೇತಾಂ ಯುಧಿಷ್ಠಿರ ।
ತತ್ಸರ್ವಮಖಿಲೇನೇಹ ಶ್ರೂಯತಾಂ ಮಮ ಭಾಷತಃ ॥೩೪॥

ಲೋಮಶ– ಯುಧಿಷ್ಠಿರನೇ, ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಈ ಕಥೆಯನ್ನು ಹೇಳುತ್ತೇನೆ. ನಾನು ಹೇಳುವಾಗ ಸಮಗ್ರವಾದ ಎಲ್ಲ ಕಥೆಯನ್ನು ಆಲಿಸು.

ಪುರಾ ಕೃತಯುಗೇ ತಾತ ವರ್ತಮಾನೇऽಭಯಂಕರೇ ।
ಯಮತ್ವಂ ಕಾರಯಾಮಾಸ ಆದಿದೇವಃ ಪುರಾತನಃ ॥೩೫॥

ಹಿಂದೆ ಅಭಯಪ್ರದವಾದ ಕೃತಯುಗವು ನಡೆಯುತ್ತಿರಲು ಪುರಾತನನಾದ ಆದಿದೇವನಾದ ನಾರಾಯಣನೇ ಯಮನ ಕೆಲಸವನ್ನು ನಿರ್ವಹಿಸಿದನು.

ಯಮತ್ವಂ ಕುರ್ವತಸ್ತಸ್ಯ ದೇವದೇವಸ್ಯ ಧೀಮತಃ ।
ನ ತತ್ರ ಮ್ರಿಯತೇ ಕಶ್ಚಿಜ್ಜಾಯತೇ ವಾ ತಥಾನ್ಯುತ ॥೩೬॥

ಎಲೈ ನಿಯಮಾದಿ ಗುಣಗಳಿಂದ ಚ್ಯುತನಾಗದವನೇ, ಮೇಧಾವಿಯಾದ ಆ ದೇವದೇವನು ಯಮನಾಗಿ ಕೆಲಸವನ್ನು ಮಾಡುತ್ತಿರಲು ಯಾರೂ ಸಾಯುತ್ತಿರಲಿಲ್ಲ ಮತ್ತು ಪುನರ್ಜನ್ಮವನ್ನೂ ಪಡೆಯುತ್ತಿರಲಿಲ್ಲ.

ವರ್ಧಂತೇ ಪಕ್ಷಿಸಂಘಾಶ್ಚ ತಥಾ ಪಶುಗವೇಡಕಮ್ ।
ಗವಾರ್ದ್ಧ ಚ ಮೃಗಾಶ್ಚೈವ ಸರ್ವೇ ತೇ ಪಿತಾಶನಾಃ ॥೩೭॥

ಹುಟ್ಟಿದ ಪಕ್ಷಿಸಂಘಗಳೆಲ್ಲವೂ, ಪಶುಗಳು, ಗೋವುಗಳು ಮತ್ತು ಆಡು ಮೊದಲಾದವುಗಳೂ, ಅಶ್ವಗಳೂ, ಮಾಂಸಾಹಾರಿಗಳಾದ ಮೃಗಗಳೂ ಎಲ್ಲವೂ ಅಭವೃದ್ಧಿಯನ್ನೇ ಹೊಂದುತ್ತಿದ್ದವು.

ತಥಾ ಪುರುಷಶಾರ್ದೂಲ ಮಾನುಷಾಶ್ಚ ಪರಂತಪ ।
ಸಹಸ್ರಶೋ ಹ್ಯಯುತಶೋ ವರ್ಧಂತೇ ಸಲಿಲಂ ಯಥಾ ॥೩೮॥

ಎಲೈ ಪರಂತಪನೇ, ಪುರುಷಶಾರ್ದೂಲನೇ, ಅದರಂತೆ ಮನುಷ್ಯರೂ ಸಹ ಸಾವಿರಗಟ್ಟಲೆಯಲ್ಲಿ, ಹತ್ತುಸಾವಿರಗಟ್ಟಲೆಯಲ್ಲಿ ನೀರಿನಂತೆ ಅಭವೃದ್ಧಿಯನ್ನು ಹೊಂದಿದರು.

ವಿತಸ್ಮಿನ್ ಸಂಕುಲೇ ತಾತ ವರ್ತಮಾನೇ ಭಯಂಕರೇ ।
ಅತಿಭಾರಾದ್ ವಸುಮತೀ ಯೋಜನಾನಾಂ ಶತಂ ಗತಾ ॥೩೯॥

ಪ್ರೀತಿಪಾತ್ರನೇ, ಇಂತಹ ಭಯಂಕರವಾದ ಸಮಾವೇಶವು ಉಂಟಾಗುತ್ತಿರಲು ಭೂಮಿಯು ಎಲ್ಲ ಪ್ರಾಣಿಗಳ ಮತ್ತು ಪ್ರಜೆಗಳ ಭಾರದಿಂದಾಗಿ ನೂರು ಯೋಜನ ಕೆಳಗೆ ಹೋದಳು.

ಸಾ ವೈ ವ್ಯಥಿತಸರ್ವಾಂಗೀ ಭಾರೇಣಾಕ್ರಾಂತಚೇತನಾ ।
ನಾರಾಯಣಂ ವರಂ ದೇವಂ ಪ್ರಪನ್ನಾ ಶರಣಂ ಗತಾ ॥೪೦॥

ಭಾರಾಕ್ರಾಂತಳಾದ ಅವಳು, ಸರ್ವಾಂಗಗಳಲ್ಲಿ ವ್ಯಥೆಯನ್ನು ಹೊಂದಿ ದೇವೋತ್ತಮನಾದ ನಾರಾಯಣನನ್ನು ಶರಣು ಹೊಂದಿದಳು.

ಪೃಥಿವೀ

ಭಗವಂಸ್ತ್ವತ್ಪ್ರಸಾದಾದ್ಧಿ ತಿಷ್ಠೇಯಂ ಸುಚಿರಂ ತ್ವಿಹ ।
ಭಾರೇಣಾಸ್ಮಿ ಸಮಾಕ್ರಾಂತಾ ನ ಶಕ್ನೋಮಿ ಸ್ಮ ವರ್ತಿತುಮ್ ॥೪೧॥

ಪೃಥಿವೀ– ಭಗವಂತನೇ, ನಿನ್ನ ಅನುಗ್ರಹದಿಂದ ನಾನು ಇಲ್ಲಿ ಸ್ಥಿರವಾಗಿ ನಿಲ್ಲಲು ಬಯಸುತ್ತೇನೆ. ನಾನು ಭಾರಾಕ್ರಾಂತಳಾಗಿ ಇದ್ದಕಡೆಯಲ್ಲಿ ಇರಲು ಸಾಧ್ಯವಾಗುತ್ತಿಲ್ಲ.

ಮಮೇಮಂ ಭಗವನ್ ಭಾರಂ ವ್ಯಪನೇತುಂ ತ್ವಮರ್ಹಸಿ ।
ಶರಣಾಗತಾಸ್ಮಿ ತೇ ದೇವ ಪ್ರಸಾದಂ ಕುರು ಮೇ ವಿಭೋ ॥೪೨॥

ಭಗವಂತನೇ, ನನ್ನ ಈ ಭಾರವನ್ನು ನೀನು ಪರಿಹರಿಸಬೇಕು. ದೇವನೇ, ನಾನು ನಿನಗೆ ಶರಣಾಗತಳಾಗಿದ್ದೇನೆ. ವಿಭುವೇ, ನನಗೆ ಅನುಗ್ರಹವನ್ನು ಮಾಡು.

ತಸ್ಯಾಸ್ತದ್ವಚನಂ ಶ್ರುತ್ವಾ ಭಗವಾನಕ್ಷರಃ ಪ್ರಭುಃ ।
ಪ್ರೋವಾಚ ವಚನಂ ಹೃಷ್ಟಃ ಶ್ರವ್ಯಾಕ್ಷರಸಮೀರಿತಮ್ ॥೪೩॥

ಅವಳ ಆ ಮಾತುಗಳನ್ನು ಕೇಳಿ ಅಕ್ಷರನಾದ ಪ್ರಭುವಾದ ನಾರಾಯಣನು ಸಂತೋಷದಿಂದ ಮಧುರಾಕ್ಷರಗಳಿಂದ ಕೂಡಿದ ಮಾತುಗಳನ್ನು ಆಡಿದನು.

ನ ತೇ ಮಹಿ ಭಯಂ ಕಾರ್ಯಂ ಭಾರಾರ್ತೇ ವಸುಧಾರಿಣಿ ।
ಅಹಮೇವಂ ತಥಾ ಕುರ್ಮಿ ಯಥಾ ಲಘ್ವೀ ಭವಿಷ್ಯಸಿ ॥೪೪॥

ಭಾರಾಕ್ರಾಂತಳಾದ ವಸುಧಾರಿಣಿಯಾದ ಭೂಮಿಯೇ ನೀನು ಭಯಪಡುವ ಕಾರಣವಿಲ್ಲ. ನಿನಗೆ ಹಗುರವಾಗುವಂತೆ ನಾನು ಮಾಡುವೆನು.

ಲೋಮಶಃ

ಸ ತಾಂ ವಿಸರ್ಜಯಿತ್ವಾ ತು ವಸುಧಾಂ ಶೈಲಕುಂಡಲಾಮ್ ।
ತತೋ ವರಾಹಃ ಸಂವೃತ್ತ ಏಕಶೃಂಗೋ ಮಹಾದ್ಯುತಿಃ ॥೪೫॥

ಲೋಮಶ– ಪರ್ವತಕುಂಡಲಳಾದ ಭೂಮಿಯನ್ನು ಕಳುಹಿಸಿಕೊಟ್ಟು ಮಹಾದ್ಯುತಿಯುಳ್ಳ ನಾರಾಯಣನು ಏಕಶೃಂಗವುಳ್ಳ ವರಾಹರೂಪನಾದನು.

ರಕ್ತಾಭ್ಯಾಂ ನಯನಾಭ್ಯಾಂ ತು ಭಯಮುತ್ಪಾದಯನ್ನಿವ ।
ಧೂಮಂ ಚ ಜ್ವಲಯಂಲ್ಲಕ್ಷ್ಮ್ಯಾ ತತ್ರ ದೇಶೇ ವ್ಯವರ್ಧತ ॥೪೬॥

ತನ್ನ ಕೆಂಪಾದಕಣ್ಣುಗಳ ಕಾಂತಿಯಿಂದ ಭಯವನ್ನು ಸೃಷ್ಟಿಮಾಡುವವನಂತೆ ತನ್ನ ಶರೀರ ಕಾಂತಿಯಿಂದ ಧೂಮವನ್ನೂ ಬೆಳಗುತ್ತಾ ಅವನು ಆ ಪ್ರದೇಶದಲ್ಲಿ ಬೆಳೆದನು.

ಸ ಗೃಹೀತ್ವಾ ವಸುಮತೀಂ ಶೃಂಗೇಣೈಕೇನ ಭಾಸ್ವತಾ ।
ಯೋಜನಾನಾಂ ಶತಂ ವೀರ ಸಮುದ್ಧರತಿ ಸೋಽಕ್ಷರಃ ॥೪೭॥

ಎಲೈ ವೀರನೇ, ಅವನು ನೀರಿನಲ್ಲಿ ಮುಳುಗಿ ಪ್ರಕಾಶಮಾನವಾದ ತನ್ನ ಒಂದು ಶೃಂಗದ ಮೇಲೆ ಭೂಮಿಯನ್ನು ಇಟ್ಟುಕೊಂಡು ಅವಳನ್ನು ನೂರುಯೋಜನ ಮೇಲಕ್ಕೆ ತಂದನು.

ತಸ್ಯಾಂ ಚೋದ್ಧಾರ್ಯಮಾಣಾಯಾಂ ಸಂಕ್ಷೋಭಃ ಸಮಜಾಯತ ।
ದೇವಾಃ ಸಂಕ್ಷುಭಿತಾಃ ಸರ್ವೇ ಋಷಯಶ್ಚ ತಪೋಧನಾಃ ॥೪೮॥

ಭೂಮಿಯನ್ನು ಹಾಗೆ ಮೇಲಕ್ಕೆ ಎತ್ತುತ್ತಿರುವಾಗ ಎಲ್ಲ ಕಡೆಯಲ್ಲಿಯೂ ಕ್ಷೋಭೆ ಉಂಟಾಯಿತು. ದೇವತೆಗಳು ಮತ್ತು ತಪೋಧನರಾದ ಋಷಿಗಳು ಬಹಳ ಕ್ಷೋಭೆಗೆ ಒಳಗಾದರು.

ಹಾಹಾಭೂತಮಭೂತ್ ಸರ್ವಂ ತ್ರಿದಿವಂ ವ್ಯೋಮ ಭೂಸ್ತಥಾ ।
ನ ಪರ್ಯವಸ್ಥಿತಃ ಕಶ್ಚಿದ್ ದೇವೋ ವಾ ಮಾನುಷೋಽಪಿ ವಾ ॥೪೯॥

ಸ್ವರ್ಗದಲ್ಲಿಯೂ, ಅಂತರಿಕ್ಷದಲ್ಲಿಯೂ ಮತ್ತು ಭೂಮಿಯಲ್ಲಿಯೂ ಎಲ್ಲೆಡೆಯಲ್ಲಿ ಹಾಹಾಕಾರವುಂಟಾಯಿತು. ಯಾವೊಬ್ಬ ದೇವತೆಯಾಗಲೀ, ಮನುಷ್ಯನಾಗಲೀ ಸಮಾಧಾನವನ್ನು ಹೊಂದಲಿಲ್ಲ.

ತತೋ ಬ್ರಹ್ಮಾಣಮಾಸೀನಂ ಜ್ವಲಮಾನಮಿವ ಶ್ರಿಯಾ ।
ದೇವಾಃ ಸರ್ಷಿಗಣಾಶ್ಚೈವ ಉಪತಸ್ಥುರನೇಕಶಃ ॥೫೦॥

ಆಗ ದೇವತೆಗಳು ತನ್ನ ಕಾಂತಿಯಿಂದ ಬೆಳಗುತ್ತಾ ಕುಳಿತಿದ್ದ ಬ್ರಹ್ಮದೇವರನ್ನು ಅನೇಕ ಋಷಿಗಣಗಳ ಜೊತೆಯಲ್ಲಿ ಸಮೀಪಿಸಿ ಸ್ತೋತ್ರವನ್ನು ಮಾಡಿದರು.

ಉಪಸರ್ಪ್ಯ ಚ ದೇವೇಶಂ ಬ್ರಹ್ಮಾಣಂ ಲೋಕಸಾಕ್ಷಿಕಮ್ ।
ಭೂತ್ವಾ ಪ್ರಾಂಜಲಯಃ ಸರ್ವೇ ವಾಕ್ಯಮುಚ್ಚಾರ್ತಯಂಸ್ತದಾ ॥೫೧॥

ಅವರು ಲೋಕಸಾಕ್ಷಿಯೂ, ದೇವತೆಗಳ ಪ್ರಭುವೂ ಆದ ಬ್ರಹ್ಮದೇವರನ್ನು ಸಮೀಪಿಸಿ ಕೈಗಳನ್ನು ಮುಗಿದು ಹೀಗೆ ಮಾತನಾಡಿದರು.

ಲೋಕಾಃ ಸಂಕ್ಷುಭಿತಾಃ ಸರ್ವೇ ವ್ಯಾಕುಲಂ ಚ ಚರಾಚರಮ್ ।
ಸಮುದ್ರಾಣಾಂ ಚ ಸಂಕ್ಷೋಭಸ್ತ್ರಿದಶೇಶ ಪ್ರಕಾಶತೇ ॥೫೨॥

ಎಲೈ ದೇವೇಶನೇ, ಎಲ್ಲ ಲೋಕಗಳು ಬಹಳ ಕ್ಷೋಭೆಗೆ ಒಳಗಾಗಿವೆ. ಚರಾಚರವಾದ ಸಮಸ್ತವಾದ ಜಗತ್ತು ಅಸ್ತವ್ಯಸ್ತವಾಗಿದೆ. ಸಮುದ್ರಗಳ ಕ್ಷೋಭೆಯೂ ಸಹ ಕಾಣಬರುತ್ತಿದೆ.

ಸೈಷಾ ವಸುಮತೀ ಕೃತ್ಸ್ನಾ ಯೋಜನಾನಾಂ ಶತಂ ಗತಾ ।
ಕಿಮೇತದ್ ಕಿಂ ಪ್ರಭಾವೇಣ ಯೇನೇದಂ ವ್ಯಾಕುಲಂ ಜಗತ್ ।
ಆಖ್ಯಾತು ನೋ ಭವಾನ್‌ಶೀಘ್ರಂ ವಿಸಂಜ್ಞಾಃ ಸ್ಮೇಹ ಸರ್ವಶಃ ॥೫೩॥

ಈ ಸಮಗ್ರವಾದ ಭೂಮಿಯು ನೂರುಯೋಜನ ಕೆಳಗೆ ಹೋಗಿದೆ. ಇದು ಯಾರ ಪ್ರಭಾವದಿಂದ ಹೇಗೆ ಉಂಟಾಗಿದೆ? ಅದರಿಂದ ಜಗತ್ತು ಹೀಗೆ ವ್ಯಾಕುಲಗೊಂಡಿದೆ. ಪೂಜ್ಯರಾದ ತಾವು ಇದನ್ನು ತಿಳಿಸಬೇಕು. ನಾವೆಲ್ಲರೂ ವಿಸಂಜ್ಞರಾಗಿದ್ದೇವೆ.

ಬ್ರಹ್ಮಾ

ಅಸುರೇಭ್ಯೋ ಭಯಂ ನಾಸ್ತಿ ಯುಷ್ಮಾಕಂ ಕುತ್ರಚಿತ್ ಕ್ವಚಿತ್ ।
ಶ್ರೂಯತಾಂ ಯತ್ಕೃತೇ ತ್ವೇಷ ಸಂಕ್ಷೋಭೋ ಜಾಯತೇಽಮರಾಃ ॥೫೪॥

ಬ್ರಹ್ಮ– ಎಲೈ ದೇವತೆಗಳೇ, ನಿಮಗೆ ಅಸುರರಿಂದ ಎಲ್ಲಿಯೂ ಯಾವ ಭಯವೂ ಉಂಟಾಗಿಲ್ಲ. ಯಾವುದರ ಸಲುವಾಗಿ ಈ ಕ್ಷೋಭೆ ಉಂಟಾಗಿದೆ ಎಂಬುದನ್ನು ಕೇಳಿ.

ಯೋಽಸೌ ಸರ್ವತ್ರಗಃ ಶ್ರೀಮಾನಕ್ಷರಾತ್ಮಾ ವ್ಯವಸ್ಥಿತಃ ।
ತಸ್ಯ ಪ್ರಭಾವಾತ್ ಸಂಕ್ಷೋಭಸ್ತ್ರಿದಿವಸ್ಯ ಪ್ರಕಾಶತೇ ॥೫೫॥

ಯಾವ ಸರ್ವತ್ರವ್ಯಾಪ್ತನಾದ ಲಕ್ಷ್ಮೀಪತಿಯಾದ ಅಕ್ಷರನಾದ ನಾರಾಯಣನಿದ್ದಾನೆಯೋ ಅವನ ಪ್ರಭಾವದಿಂದ ಸ್ವರ್ಗಲೋಕದಲ್ಲಿ ಈ ಕ್ಷೋಭೆಯು ಕಂಡುಬರುತ್ತಿದೆ.

ಯೈಷಾ ವಸುಮತೀ ಕೃತ್ಸ್ನಾ ಯೋಜನಾನಾಂ ಶತಂ ಗತಾ ।
ಸಮುದ್ಭ್ರತಾ ಪುನಸ್ತೇನ ವಿಷ್ಣುನಾ ಪರಮಾತ್ಮನಾ ॥೫೬॥

ನೂರುಯೋಜನ ಕೆಳಗೆ ಹೋದ ಈ ಸಮಗ್ರವಾದ ಭೂಮಿಯನ್ನು ಪರಮಾತ್ಮನಾದ ವಿಷ್ಣುವು ಪುನಃ ಮೇಲಕ್ಕೆತ್ತಿದ್ದಾನೆ.

ತಸ್ಯಾಮುದ್ದಾರ್ಯಮಾಣಾಯಾಂ ಸಂಕ್ಷೋಭಃ ಸಮಜಾಯತ ।
ಏವಂ ಭವಂತೋ ಜಾನಂತು ಛಿದ್ಯತಾಂ ಸಂಶಯಶ್ಚ ವಃ ॥೫೭॥

ಹೀಗೆ ಭೂಮಿಯನ್ನು ಮೇಲಕ್ಕೆತ್ತುತ್ತಿದ್ದಾಗ ಈ ಕ್ಷೋಭೆ ಉಂಟಾಗಿದೆ. ಇದನ್ನು ಹೀಗೆ ತಿಳಿಯಿರಿ. ಮತ್ತು ಮನಸ್ಸಿನ ಸಂಶಯವನ್ನು ದೂರಮಾಡಿಕೊಳ್ಳಿ.

ದೇವಾಃ

ಕ್ವ ತದ್ಭೂತಂ ವಸುಮತೀಂ ಸಮುದ್ಧರತಿ ಹೃಷ್ಟವತ್ ।
ತಂ ದೇಶಂ ಭಗವನ್ ಬ್ರೂಹಿ ತತ್ರ ಯಾಸ್ಯಾಮಹೇ ವಯಮ್ ॥೫೮॥

ಅಂತಹ ಮಹದ್ಭೂತವು ಎಲ್ಲಿ ಭೂಮಿಯನ್ನು ಸಂತೋಷದಿಂದ ಮೇಲಕ್ಕೆತ್ತುತ್ತಿದೆ? ಪೂಜ್ಯರೇ, ನಮಗೆ ಆ ಪ್ರದೇಶವನ್ನು ತಿಳಿಸಿ. ನಾವು ಅಲ್ಲಿಗೆ ಹೋಗುವೆವು.

ಬ್ರಹ್ಮಾ

ಹಂತ ಗಚ್ಛತ ಭದ್ರಂ ವೋ ನಂದನೇ ಪಶ್ಯತ ಸ್ಥಿತಮ್ ।
ಏಷೋಽತ್ರ ಭಗವಾನ್‌ಶ್ರೀಮಾನ್ ಸುಪರ್ಣಃ ಸಂಪ್ರಕಾಶತೇ ॥೫೯॥

ಬ್ರಹ್ಮಾ– ಸಂತೋಷ. ನಿಮಗೆ ಮಂಗಳವಾಗಲಿ. ಈಗ ಅದು ಇಂದ್ರನ ನಂದನವನದಲ್ಲಿದೆ. ನೀವು ಹೋಗಿ ಅಲ್ಲಿನೋಡಿ. ಪೂರ್ಣಾನಂದರೂಪನಾದ ಭಗವಂತನಾದ ಶ್ರೀಮಾನ್ ನಾರಾಯಣನು ಅಲ್ಲಿ ಕಂಗೊಳಿಸುತ್ತಿದ್ದಾನೆ.

ವಾರಾಹೇಣೈವ ರೂಪೇಣ ಭಗವಾಂಲ್ಲೋಕಭಾವನಃ ।
ಕಾಲಾನಲ ಇವಾಭಾತಿ ಪೃಥಿವೀತಳಮುದ್ಧರನ್ ॥೬೦॥

ಲೋಕಭಾವನನಾದ ಆ ಭಗವಂತನು ವರಾಹರೂಪದಿಂದಲೇ ಭೂಮಿಯನ್ನು ಮೇಲಕ್ಕೆತ್ತುತ್ತಾ ಕಾಲಾನಲದಂತೆ (ಪ್ರಳಯಕಾಲದ ಅಗ್ನಿಯಂತೆ) ಶೋಭಿಸುತ್ತಿದ್ದಾನೆ.

ಏತಸ್ಯೋರಸಿ ಸುವ್ಯಕ್ತಂ ಶ್ರೀವತ್ಸಮಧಿರಾಜತೇ ।
ಪಶ್ಯಧ್ವಂ ವಿಬುಧಾಃ ಸರ್ವೇ ಭೂತಮೇತದನಾಮಯಮ್ ॥೬೧॥

ಎಲೈ ದೇವತೆಗಳೇ, ಅವನ ವಕ್ಷಸ್ಥಲದಲ್ಲಿ ಶ್ರೀವತ್ಸವು ಸ್ಪಷ್ಟವಾಗಿ ರಾರಾಜಿಸುತ್ತಿದೆ. ನೀವೆಲ್ಲರೂ ದೋಷಗಂಧವಿಧುರನಾದ ಆ ಮಹದ್ಭೂತವನ್ನು ಹೋಗಿ ನೋಡಿ.

ಲೋಮಶಃ

ತತೋ ದೃಷ್ಟ್ವಾ ಮಹಾತ್ಮಾನಂ ಶ್ರುತ್ವಾ ಚಾಮಂತ್ರ್ಯ ಚಾಮರಾಃ ।
ಪಿತಾಮಹಂ ಪುರಸ್ಕೃತ್ಯ ಜಗ್ಮುರ್ದೇವಾ ಯಥಾಗತಮ್ ॥೬೨॥

ಲೋಮಶ– ಆಗ ದೇವತೆಗಳು ಮಹಾತ್ಮನಾದ ಬ್ರಹ್ಮದೇವರನ್ನು ನೋಡಿ ಅವರ ಅನುಮತಿಯನ್ನು ಪಡೆದು ಅವರನ್ನು ಮುಂದ ಮಾಡಿಕೊಂಡು ಬಂದದಾರಿಯಲ್ಲಿಯೇ ಹಿಂದಿರುಗಿದರು.

ವೈಶಂಪಾಯನಃ

ಶ್ರುತ್ವಾ ತು ತಾಂ ಕಥಾಂ ಸರ್ವೇ ಪಾಂಡವಾ ಜನಮೇಜಯ ।
ಲೋಮಶಾದೇಶತೇನಾಶು ಪಥಾ ಜಗ್ಮುಃ ಪ್ರಹೃಷ್ಟವತ್ ॥೬೩॥

ವೈಶಂಪಾಯನ– ಎಲೈ ಜನಮೇಜಯನೇ, ಲೋಮಶರ ಉಪದೇಶದಿಂದ ಆ ಕಥೆಯನ್ನು ಕೇಳಿದ ಪಾಂಡವರೆಲ್ಲರೂ ಸಂತೋಷಭರಿತರಾಗಿ ತಮ್ಮ ಮಾರ್ಗದಲ್ಲಿ ಮುಂದೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ವಂಚನವಿತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ನಲವತ್ತನೆಯ ಅಧ್ಯಾಯ

ಗಂಧಮಾದನ ಪರ್ವತಕ್ಕೆ ಹೊರಟ ಪಾಂಡವರಿಗೆ ಮಾರ್ಗಮಧ್ಯದಲ್ಲಿ ಮಳೆ. ಮಳೆಯು ನಿಂತ ನಂತರ ಪುನಃ ಅವರ ಪ್ರಯಾಣ.

ವೈಶಂಪಾಯನಃ

ತೇ ಶೂರಾಸ್ತತಧನ್ವಾನಸ್ತೂಣವಂತಃ ಸಮಾರ್ಗಣಾಃ ।
ಬದ್ಧಗೋಧಾಂಗುಲಿತ್ರಾಣಾಃ ಖಡ್ಗವಂತೋऽಮಿತೌಜಸಃ ॥೧॥

ಪರಿಗೃಹ್ಯ ದ್ವಿಜಶ್ರೇಷ್ಠಾನ್ ಜ್ಯೇಷ್ಠಾ ಸರ್ವಧನುಷ್ಮತಾಮ್ ।
ಪಾಂಚಾಲೀಸಹಿತಾ ರಾಜನ್ ಪ್ರಯಯುರ್ಗಂಧಮಾದನಮ್ ॥೨॥

ವೈಶಂಪಾಯನ- ಎಲೈ ರಾಜನೇ, ಅಮಿತವರಾಕ್ರಮಿಗಳೂ, ಸರ್ವಧನ್ವಿಗಳಲ್ಲಿ ಶ್ರೇಷ್ಠರೂ, ಶೂರರೂ ಆದ ಅವರು ವಿಸ್ತಾರವಾದ ಬಿಲ್ಲುಗಳನ್ನು ಹೊಂದಿ ಬಾಣಗಳಿಂದ ತುಂಬಿದ ಬತ್ತಳಿಕೆಗಳನ್ನು ಧರಿಸಿ ಹಸ್ತಗಳಿಗೆ ಚರ್ಮದ ರಕ್ಷೆಗಳನ್ನು ಹಾಕಿಕೊಂಡು ಖಡ್ಗವನ್ನು ಧರಿಸಿ ದ್ವಿಜಶ್ರೇಷ್ಠರನ್ನು ಜೊತೆಯಲ್ಲಿ ಕರೆದುಕೊಂಡು ಪಾಂಚಾಲೀ ಸಹಿತರಾಗಿ ಗಂಧಮಾದನ ಪರ್ವತಕ್ಕೆ ಹೊರಟರು.

ಸರಾಂಸಿ ಸರಿತಶ್ಚೈವ ಪರ್ವತಾಂಶ್ಚ ವನಾನಿ ಚ ।
ವೃಕ್ಷಾಂಶ್ಚ ಬಹುಲಚ್ಛಾಯಾನ್ ದದೃಶುರ್ಗಿರಿಮೂರ್ಧನಿ ॥೩॥

ಅವರು ಪರ್ವತ ದಾರಿಯಲ್ಲಿ ಅನೇಕ ಸರೋವರಗಳನ್ನು, ನದಿಗಳನ್ನು, ಕಾಡುಗಳನ್ನು ಮತ್ತು ಪರ್ವತಗಳನ್ನು ನೋಡಿದರು. ಪರ್ವತ ಶಿಖರಗಳಲ್ಲಿ ಬಹಳ ನೆರಳಿನಿಂದ ಕೂಡಿದ ಮರಗಳನ್ನೂ ನೋಡಿದರು.

ನಿತ್ಯಪುಷ್ಪಫಲಾನ್ ದೇಶಾನ್ ದೇವರ್ಷಿಗಣಸೇವಿತಾನ್ ।
ಆತ್ಮನ್ಯಾತ್ಮಾನಮಾಧಾಯ ವೀರಾ ಮೂಲಫಲಾಶಿನಃ ॥೪॥

ಚೀರುರುಚ್ಚಾವಚಾಕಾರಾನ್ ದೇಶಾನ್ ವಿಷಮಸಂಕಟಾನ್ ।
ಪಶ್ಯಂತೋ ಮೃಗಜಾತಾನಿ ಬಹೂನಿ ವಿವಿಧಾನಿ ಚ ॥೫॥

ಕಂದಫಲಾಹಾರರಾದ ವೀರರಾದ ಅವರು ಮನಸ್ಸನ್ನು ನಿಯಂತ್ರಣ ಮಾಡಿಕೊಂಡು, ನಿತ್ಯಪುಷ್ಪಫಲೋಪೇತವಾದ, ದೇವರ್ಷಿಗಣಸೇವಿತವಾದ ಪ್ರದೇಶಗಳನ್ನೂ ಬೇರೆ ಬೇರೆ ಆಕಾರದ ಸಮವಿಷಮ ಪ್ರದೇಶಗಳನ್ನೂ, ಬಹುವಿಧವಾದ ಅನೇಕ ಮೃಗಸಮೂಹಗಳನ್ನೂ ನೋಡುತ್ತಾ ಮುಂದೆ ಸಾಗಿದರು.

ಋಷಿಸಿದ್ಧಾಮರಯುತಂ ಗಂಧರ್ವಾಪ್ಸರಸಾಂ ಪ್ರಿಯಮ್ ।
ವಿವಿಶುಸ್ತೇ ಮಹಾತ್ಮಾನಃ ಕಿನ್ನರಾಚರಿತಂ ಗಿರಿಮ್ ॥೬॥

ಮಹಾನುಭಾವರಾದ ಅವರು ಋಷಿಗಳು, ಸಿದ್ಧರು ಮತ್ತು ದೇವತೆಗಳಿಂದ ಕೂಡಿದ, ಕಿನ್ನರರು ಸಂಚರಿಸುವ, ಗಂಧರ್ವರು ಮತ್ತು ಅಪ್ಸರೆಯರಿಗೆ ಪ್ರಿಯವಾದ ಆ ಪರ್ವತವನ್ನು ಪ್ರವೇಶಿಸಿದರು.

ಪ್ರವಿಶತ್ಸ್ವಥ ವೀರೇಷು ಪರ್ವತಂ ಗಂಧಮಾದನಮ್ ।
ಚಂಡವಾತಂ ಮಹದ್ವರ್ಷಂ ಪ್ರಾದುರಾಸೀತ್ ವಿಶಾಂಪತೇ ॥೭॥

ಎಲೈ ರಾಜನೇ, ಆ ವೀರರು ಗಂಧಮಾದನ ಪರ್ವತವನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿ ಚಂಡವಾತವು ಮತ್ತು ಮಹಾವರ್ಷವು ಉಂಟಾಯಿತು.

ತತೋ ರೇಣುಃ ಸಮುದ್ಭೂತಃ ಸಪತ್ರಬಹುಲೋ ಮಹಾನ್ ।
ಪೃಥಿವೀಂ ಚಾಂತರಿಕ್ಷಂ ಚ ದ್ಯಾಂ ಚೈವ ಸಹಸಾऽऽವೃಣೋತ್ ॥೮॥

ಆಗ ಉಂಟಾದ ಚಂಡವಾಯುವು ಧೂಳಿನ ಕಣಗಳನ್ನು ಮತ್ತು ಎಲೆಗಳನ್ನು ಎತ್ತಿಕೊಂಡು ಬೀಸುತ್ತಾ ಭೂಮಿಯನ್ನು, ಅಂತರಿಕ್ಷವನ್ನು ಮತ್ತು ಮೇಲಿನ ಸ್ವರ್ಗ ಲೋಕವನ್ನು ಇದ್ದಕ್ಕಿದ್ದಂತೆಯೇ ಆವರಿಸಿತು.

ನ ಸ್ಮ ಪ್ರಜ್ಞಾಯತೇ ಕಿಂಚಿದಾವೃತೇ ವ್ಯೋಮ್ನಿ ರೇಣುನಾ ।
ನ ಚಾಪಿ ಶೇಕುಸ್ತತ್ಕರ್ಮಮನ್ಯೋನ್ಯಸ್ಯಾಭಿಭಾಷಣಮ್ ॥೯॥

ಆಕಾಶವು ಧೂಳಿನಿಂದ ತುಂಬಿಹೋಗುತ್ತಿರಲು ಯಾವುದೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಆ ವಾತ ರಭಸದಲ್ಲಿ ಒಬ್ಬರ ಜೊತೆಯಲ್ಲಿ ಇನ್ನೊಬ್ಬರು ಮಾತನಾಡಲೂ ಸಾಧ್ಯವಾಗಲಿಲ್ಲ.

ನ ಚಾಪಶ್ಯಂಸ್ತತೋಽನ್ಯೋನ್ಯಂ ತಮಸಾಽಽವೃತಚಕ್ಷುಷಃ ।
ಆಕೃಷ್ಯಮಾಣಾ ವಾತೇನ ಸಾಶ್ಮಚೂರ್ಣೇನ ಭಾರತ ॥೧೦॥

ಎಲೈ ಭಾರತನೇ, ಧೂಳು ಮತ್ತು ಕಲ್ಲಿನ ಕಣಗಳಿಂದ ಅವರು ನಷ್ಟದೃಷ್ಟಿ ಉಳ್ಳವರಾಗಿ ಚಂಡವಾತದಿಂದ ಎಳೆದಾಡಲ್ಪಟ್ಟವರಾಗಿ ಪರಸ್ಪರವಾಗಿ ಒಬ್ಬರನ್ನೊಬ್ಬರು ನೋಡಲೂ ಸಾಧ್ಯವಾಗಲಿಲ್ಲ.

ದ್ರುಮಾಣಾಂ ವಾತಭಗ್ನಾನಾಂ ಪತತಾಂ ಭೂತಳೇಽನಿಶಮ್ ।
ಅನ್ಯೇಷಾಂ ಚ ಮಹೀಜಾನಾಂ ಶಬ್ದಃ ಸುಮಹವನ್ಮಹಾನ್ ॥೧೧॥

ಸತತವಾಗಿ ಚಂಡವಾತದಿಂದ ಮುರಿದುಬೀಳುವ ಮರಗಳಿಂದ ಮತ್ತು ಇತರ ಮರಗಳಿಂದ ದೊಡ್ಡ ಶಬ್ದವು ಉಂಟಾಯಿತು.

ದ್ಯೌಃ ಸ್ವಿತ್ ಪತತಿ ಕಿಂ ಭೂಮಿರ್ದೀರ್ಯತೇ ಪರ್ವತೋ ನು ಕಿಮ್।
ಇತಿ ತೇ ಮೇನಿರೇ ಸರ್ವೇ ಪವನೇನಾಪಿ ಮೋಹಿತಾಃ ॥೧೨॥

ಆ ವಾತದಿಂದ ಮೋಹಿತರಾಗಿ ಅವರು ಇದೇನು ಆಕಾಶವೇ ಬೀಳುತ್ತಿದೆಯೋ ಅಥವಾ ಭೂಮಿಯು, ಪರ್ವತವು ಬಿರಿಯುತ್ತಿದೆಯೋ ಎಂದು ತಿಳಿದರು.

ತೇ ಪಥಾನಂತರಾನ್ ವೃಕ್ಷಾನ್ ವಲ್ಮೀಕಾನ್ ವಿಷಮಾಣಿ ಚ ।
ಪಾಣಿಭಃ ಪರಿಮಾರ್ಗಂತೋ ಭೀತಾ ವಾಯೋರ್ನಿಲಿಲ್ಯಿರೇ ॥೧೩॥

ಅವರು ತಮ್ಮ ಮಾರ್ಗಕ್ಕೆ ಸಮೀಪದಲ್ಲಿ ಇರುವ ಮರಗಳನ್ನು, ಹುತ್ತಗಳನ್ನು, ಉಬ್ಬುತಗ್ಗಿನ ಪ್ರದೇಶಗಳನ್ನು ಕೈಯಿಂದ ತಡಕಿ ಹುಡುಕುತ್ತಾ ವಾಯುವಿನಿಂದ ಭೀತರಾಗಿ ಅಡಗಿಕೊಂಡರು.

ತತಃ ಕಾರ್ಷ್ಣಿಮಾದಾಯ ಭೀಮಸೇನೋ ಮಹಾಬಲಃ ।
ಕೃಷ್ಣಾಮಾದಾಯ ಸಂಗಮ್ಯ ತಸ್ಥಾವಾಶ್ರಿತ್ಯ ಪಾದಪಮ್ ॥
ಧರ್ಮರಾಜಶ್ಚ ಧೌಮ್ಯಶ್ಚ ನಿಲಿಲ್ಯಾತೇ ಮಹಾವನೇ ॥೧೪॥

ಆಗ ಮಹಾಬಲನಾದ ಭೀಮಸೇನನು ಬಲ್ಲನ್ನು ತೆಗೆದುಕೊಂಡು ದ್ರೌಪದಿಯನ್ನು ಸಮೀಪಿಸಿ ಅವಳನ್ನು ಕರೆದುಕೊಂಡು ಒಂದು ವೃಕ್ಷವನ್ನು ಆಶ್ರಯಿಸಿ ನಿಂತನು. ಧರ್ಮರಾಜ ಮತ್ತು ಧೌಮ್ಯರೂ ಸಹ ಆ ಕಾಡಿನಲ್ಲಿ ಅಡಗಿಕೊಂಡರು.

ಅಗ್ನಿಹೋತ್ರಾಣ್ಯುಪಾದಾಯ ಸಹದೇವಸ್ತು ಪರ್ವತೇ ।
ನಕುಲೋ ಬ್ರಾಹ್ಮಣಾಶ್ಚಾನ್ಯೇ ಲೋಮಶಶ್ಚ ಮಹಾತಪಾಃ ॥೧೫॥

ವೃಕ್ಷಾನಾಸಾದ್ಯ ಸಂತ್ರಸ್ತಾಸ್ತತ್ರ ತತ್ರ ನಿಲಿಲ್ಯಿರೇ ॥೧೬॥

ಸಹದೇವನು ಆ ಪರ್ವತದಲ್ಲಿ ಅಗ್ನಿಹೋತ್ರವನ್ನು ಕೈಯಲ್ಲಿ ಹಿಡಿದು ಅಡಗಿಕೊಂಡನು. ಅದರಂತೆ ನಕುಲನು, ಉಳಿದ ಬ್ರಾಹ್ಮಣರು, ಮಹಾತಪಸ್ವಿಗಳಾದ ಲೋಮಶರು ಹೆದರಿ ದೊಡ್ಡ ವೃಕ್ಷಗಳನ್ನು ಸೇರಿ ಅಲ್ಲಿ ಅಡಗಿಕೊಂಡರು.

ಮಂದೀಭೂತೇ ತು ಪವನೇ ತಸ್ಮಿನ್ ರಜಸಿ ಶಾಮ್ಯತಿ ।
ಮಹದ್ಭಿರ್ಪೃಷತೈಃ ಓಘೈರ್ವರ್ಷಮಭ್ಯಾಜಗಾಮ ಹ ॥೧೭॥

ವಾಯುವಿನ ವೇಗವು ಕಡಿಮೆಯಾಗಿ ಧೂಳೆಲ್ಲವೂ ಶಾಂತವಾಗುತ್ತಿರಲು, ದೊಡ್ಡ ಆಲಿಕಲ್ಲುಗಳಿಂದ ಕೂಡಿದ ಪ್ರವಾಹದಂತಿರುವ ಮಳೆಯು ಉಂಟಾಯಿತು.

ಭೃಶಂ ಚಟಚಟಾಶಬ್ದೋ ವಜ್ರಾಣಾಂ ಕ್ಷಿಪ್ಯತಾಮಿವ ।
ತತಸ್ತಾಶ್ಚಂಚಲಾಭಾಸಶ್ಚೇರುರಭ್ರೇಷು ವಿದ್ಯುತಃ ॥೧೭.೧॥

ಆಗ ವಜ್ರಾಯುಧವನ್ನು ಎಸೆದಂತೆ ದೊಡ್ಡ ಚಟಚಟ ಶಬ್ದವು ಮತ್ತು ಆಕಾಶದಲ್ಲಿ ಚಂಚಲವಾದ ಮಿಂಚುಗಳು ತೋರಿಬಂದವು.

ತತೋಽಶ್ಮಸಹಿತಾ ಧಾರಾಃ ಸಂವೃಣ್ವಂತ್ಯಃ ಸಮಂತತಃ ।
ಪ್ರಪೇತುರನಿಶಂ ತತ್ರ ಶೀಘ್ರವಾತಸಮೀರಿತಾಃ ॥೧೮॥

ಅನಂತರ ಆಲಿಕಲ್ಲುಗಳಿಂದ ಸಹಿತವಾದ ಮಳೆಯು ಶೀಘ್ರವಾತದಿಂದ ಪ್ರೇರಿತವಾಗಿ ಎಲ್ಲಕಡೆಯಲ್ಲಿಯೂ ಎಲ್ಲವನ್ನೂ ಆವರಿಸುತ್ತಾ ಸತತವಾಗಿ ಬೀಳಲು ಪ್ರಾರಂಭಿಸಿತು.

ತತ್ರ ಸಾಗರಗಾ ಹ್ಯಾಪಃ ಕೀರ್ಯಮಾಣಾಃ ಸಮಂತತಃ ।
ಪ್ರಾದುರಾಸನ್ ಸಕಲುಷಾಃ ಫೇನವತ್ಯೋ ವಿಶಾಂಪತೇ ॥೧೯॥

ಎಲೈ ರಾಜನೇ, ಆ ಚಂಡವಾತದಿಂದ ಸಾಗರದ ನೀರುಗಳು ಹಾರಿಸಲ್ಪಟ್ಟು ಎಲ್ಲಕಡೆಯಲ್ಲಿಯೂ ನೊರೆಯಿಂದ ಕೂಡಿದ ಕಲುಷವಾದ ಆ ನೀರು ಕಾಣಬಂದಿತು.

ವಹಂತ್ಯೋ ವಾರಿ ಬಹುಲಂ ಫೇನೋಡುಪಪರಿಪ್ಲುತಮ್ ।
ಪರಿಸಸ್ರುರ್ಮಹಾಶಬ್ದಾಃ ಪ್ರಕರ್ಷಂತ್ಯೋ ಮಹೀರುಹಾನ್ ॥೨೦॥

ಆ ನೀರುಗಳು ಪ್ರವಾಹರೂಪವನ್ನು ಪಡೆದು ಮರಗಳನ್ನು ಎಳೆದುಕೊಂಡು ದೊಡ್ಡ ನೊರೆಗಳೆಂಬ ದೋಣಿಗಳಿಂದ ಆವೃತವಾಗಿ ಮಹಾಶಬ್ದವನ್ನು ಮಾಡುತ್ತಾ ಹರಿಯಲು ಆರಂಭಿಸಿದವು.

ತಸ್ಮಿನ್ನುಪರತೇ ಶಬ್ದೇ ವಾತೇ ಚ ಸಮತಾಂ ಗತೇ ।
ಗತೇ ಹ್ಯಂಭಸಿ ನಿಮ್ನಾನಿ ಪ್ರಾದುರ್ಭೂತೇ ದಿವಾಕರೇ ॥
ನಿರ್ಜಗ್ಮುಸ್ತೇ ಶನೈಃ ಸರ್ವೇ ಸಮಾಜಗ್ಮುಶ್ಚ ಭಾರತ ।
ಪ್ರತಿಸ್ಥಿರೇ ಪುನರ್ವೀರಾಃ ಪರ್ವತಂ ಗಂಧಮಾದನಮ್ ॥೨೧॥

ಆ ಶಬ್ದವು ಶಾಂತವಾಗಿ ವಾಯುವು ನಿಧಾನವಾಗಿ ಬೀಸುತ್ತಾ ನೀರೆಲ್ಲವೂ ಹರಿದು ಹೋಗಿ ಸೂರ್ಯನು ಉದಯಿಸಿದ ಮೇಲೆ ಅವರೆಲ್ಲರೂ ನಿಧಾನವಾಗಿ ತಮ್ಮ ಸ್ಥಳಗಳಿಂದ ಹೊರಗೆ ಬಂದರು. ಎಲೈ ಭಾರತನೇ, ಆ ವೀರರು ಪುನಃ ಗಂಧಮಾದನ ಪರ್ವತವನ್ನು ಕುರಿತು ತಮ್ಮ ಪ್ರಯಾಣವನ್ನು ಮುಂದುವರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಷಣ್ಣವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಅತಿತ್ಯ ಶರ್ವಶ್ಚಪುರಂ ಗಿರಿಂ ತೇ
ಸುವರ್ಣಕೂಟಂ ನಿಷಧಂ ಗಿರಿಂ ಚ ।
ಮೇರೋಃ ಪ್ರಾಚ್ಯಾಂ ಗಂಧಮಾದೇ ಗಿರೌ ಚ
ಪ್ರಾಪುರ್ಬದರ್ಯಾಶ್ರಮಮುತ್ತಮಂ ಭುವಿ ॥೨೩೬॥

ಸುವರ್ಣಕೂಟ ನಿಷಧ ಪರ್ವತಗಳನ್ನೂ ದಾಟಿ ಮೇರುವಿಗೆ ಪೂರ್ವದಲ್ಲಿ ಗಂಧಮಾದನ ಪರ್ವತದಲ್ಲಿ ಇರುವ, ಭೂಲೋಕದಲ್ಲಿಯೇ ಉತ್ತಮವಾದ ಇನ್ನೊಂದು ಬದರಿಕಾಶ್ರಮವನ್ನು ಸೇರಿದರು.

ತಸ್ಮಿನ್ ಮುನೀಂದ್ರೈರಭಿಪೂಜ್ಯಮಾನಾ
ನಾರಾಯಣಂ ಪೂಜಯಂತಃ ಸದೈವ ।
ಚಕ್ರುಸ್ತಪೋ ಜ್ಞಾನಸಮಾಧಿಯುಕ್ತಂ
ಸುತತ್ತ್ವವಿದ್ಯಾಂ ಪ್ರತಿಪಾದಯಂತಃ ॥೨೩೭॥

ಆ ಬದರಿಕಾಶ್ರಮದಲ್ಲಿ ಪಾಂಡವರು ಮುನೀಂದ್ರರಿಂದ ಸತ್ಕೃತರಾಗಿ ನರ ಸೋದರನಾದ ನಾರಾಯಣನನ್ನು ಪೂಜಿಸುತ್ತ ಸದಾ ಅಪರೋಕ್ಷಜ್ಞಾನಧ್ಯಾನಗಳಿಂದ ಯುಕ್ತವಾದ ತಪಸ್ಸನ್ನಾಚರಿಸಿದರು. ಶಿಷ್ಯರಿಗೆ ಬ್ರಹ್ಮಸೂತ್ರಾದಿ ಉತ್ತಮ ತತ್ವಜ್ಞಾನವನ್ನೂ ಉಪದೇಶಿಸಿದರು.

★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

ಗಂಧಮಾದನಪರ್ವತಮಾರ್ಗದಲ್ಲಿ ಸುಕುಮಾರಿಯಾದ ದ್ರೌಪದಿಯ ಪತನ. ಪಾಂಡವರಿಂದ ಆಶ್ವಾಸನ. ಧರ್ಮರಾಜನ ವಿಲಾಪ ಮತ್ತು ಭೀಮಸೇನನ ಪ್ರೋತ್ಸಾಹನ.

ವೈಶಂಪಾಯನಃ

ಕ್ರೋಶಮಾತ್ರಂ ಪ್ರಯಾತೇಷು ಪಾಂಡವೇಷು ಮಹಾತ್ಮಸು ।
ಪದ್ಭ್ಯಾಮನುಚಿತಾ ಗಂತುಂ ದ್ರೌಪದೀ ಸಮುಪಾವಿಶತ್ ॥೧॥

ವೈಶಂಪಾಯನ– ಮಹಾತ್ಮರಾದ ಪಾಂಡವರು ಕೇವಲ ಒಂದು ಕ್ರೋಶಮಾರ್ಗವನ್ನು ನಡೆದುಹೋಗುತ್ತಿರಲು, ಬರಿಗಾಲಿನಲ್ಲಿ ನಡೆಯಲು ಅನರ್ಹಳಾದ ದ್ರೌಪದಿಯು ಒಂದೆಡೆ ನೆಲದ ಮೇಲೆ ಕುಳಿತಳು.

ಶ್ರಾಂತಾ ದುಃಖಪರೀತಾ ಚ ವಾತವರ್ಷೇಣ ತೇನ ಚ ।
ಸೌಕುಮಾರ್ಯಾಚ್ಚ ಪಾಂಚಾಲೀ ಸಂಮುಮೋಹ ತಪಸ್ವಿನೀ ॥೨॥

ದಣಿದು ವಾತವರ್ಷಗಳಿಂದ ಬಳಲಿ ದುಃಖಭರಿತಳಾಗಿದ್ದ ಸುಕುಮಾರಿಯಾದ ತಪಸ್ವಿನಿಯಾದ ಪಾಂಚಾಲಿಯು ಮೂರ್ಛಾಕ್ರಾಂತಳಾದಳು.

ಸಾ ಕಂಪಮಾನಾ ಮೋಹೇನ ಬಾಹುಭ್ಯಾಮಿತೇಕ್ಷಣಾ ।
ವೃತ್ತಾಭ್ಯಾಮನುರೂಪಾಭ್ಯಾಮೂರೂ ಸಮವಲಂಬತ ॥೩॥

ಕೃಷ್ಣನೇತ್ರೆಯಾದ ಅವಳು ಮೋಹದಿಂದ ನಡುಗುತ್ತಾ ತನ್ನ ವೃತ್ತವಾದ ತೊಡೆಗಳ ಮೇಲೆ ಕೈಯನ್ನಿಟ್ಟು ಸ್ವಲ್ಪ ಆಶ್ರಯವನ್ನು ಪಡೆದಳು.

ಆಲಂಬಮಾನಾ ಸಹಿತಾವೂರೂ ಗಜಕರೋಪಮೌ ।
ಪಪಾತ ಸಹಸಾ ಭೂಮೌ ವೇಪಂತೀ ಕದಲೀ ಯಥಾ ॥೪॥

ಆನೆಯ ಸೊಂಡಿಲಿನಂತಿದ್ದ ತನ್ನ ತೊಡೆಯನ್ನು ಆಶ್ರಯಿಸಿದರೂ ಕದಲೀ ವೃಕ್ಷದಂತೆ ನಡುಗುತ್ತಾ ತಕ್ಷಣವೇ ಭೂಮಿಯ ಮೇಲೆ ಬಿದ್ದಳು.

ತಾಂ ಪತಂತೀಂ ವರಾರೋಹಾಂ ಭಜ್ಯಮಾನಾಂ ಲತಾಮಿವ ।
ನಕುಲಃ ಸಮಭಿದ್ರುತ್ಯ ಪರಿಜಗ್ರಾಹ ವೀರ್ಯವಾನ್ ॥೫॥

ಮುರಿದುಹೋದ ಲತೆಯಂತೆ ಭೂಮಿಯ ಮೇಲೆ ಬೀಳುತ್ತಿದ್ದ ಆ ಸುಂದರಿಯನ್ನು ಪರಾಕ್ರಮಶಾಲಿಯಾದ ನಕುಲನು ಓಡಿಬಂದು ಹಿಡಿದುಕೊಂಡನು.

ನಕುಲಃ

ರಾಜನ್ ಪಾಂಚಾಲರಾಜಸ್ಯ ಸುತೇಯಮಸಿತೇಕ್ಷಣಾ ।
ಶ್ರಾಂತಾ ನಿಪತಿತಾ ಭೂಮೌ ತಾಮವೇಕ್ಷಸ್ವ ಭಾರತ ॥೬॥

ನಕುಲ– ಎಲೈ ರಾಜನೇ, ಭಾರತನೇ, ಈ ಅಸಿತೇಕ್ಷಣೆಯಾದ ಸುಂದರಿಯು ಪಾಂಚಾಲರಾಜನ ಮಗಳು. ಅವಳು ದಣಿದು ಭೂಮಿಯ ಮೇಲೆ ಬಿದ್ದಿದ್ದಾಳೆ. ಅವಳನ್ನು ನೋಡು.

ಅದುಃಖಾರ್ಹಾ ಪರಂ ದುಃಖಂ ಪ್ರಾಪ್ತೇಯಂ ಮೃದುಗಾಮಿನೀ ।
ಆಶ್ವಾಸಯ ಮಹಾರಾಜ ತಾಮಿಮಾಂ ಶ್ರಮಕರ್ಶಿತಾಮ್ ॥೭॥

ದುಃಖಕ್ಕೆ ಯೋಗ್ಯಳಲ್ಲದವಳೂ, ಮೃದುಗಾಮಿನಿಯೂ ಆದ ಇವಳು ಇಂತಹ ದುಃಖವನ್ನು ಹೊಂದಿದ್ದಾಳೆ. ಮಹಾರಾಜನೇ ಶ್ರಮದಿಂದ ಬಳಲಿದ ಇವಳನ್ನು ಸಮಾಧಾನಪಡಿಸು.

ವೈಶಂಪಾಯನಃ

ರಾಜಾ ತು ವಚನಾತ್ ತಸ್ಯ ಭೃಶಂ ದುಃಖಸಮನ್ವಿತಃ ।
ಭೀಮಶ್ಚ ಸಹದೇವಶ್ಚ ಸಹಸಾ ಸಮುಪಾದ್ರವನ್ ॥೮॥

ವೈಶಂಪಾಯನ– ರಾಜನಾದರೂ ನಕುಲನ ಮಾತುಗಳಿಂದ ಬಹಳ ದುಃಖದಿಂದ ಕೂಡಿದವನಾದನು. ಭೀಮ ಮತ್ತು ಸಹದೇವರು ಬೇಗ ಓಡಿಬಂದರು.

ತಾಮವೇಕ್ಷ್ಯ ತು ಕೌಂತೇಯೋ ವಿವರ್ಣವದನಾಂ ಕೃಶಾಮ್ ।
ಅಂಕಮಾನೀಯ ಧರ್ಮಾತ್ಮಾ ಪರ್ಯದೇವಯದಾತುರಃ ॥೯॥

ಕೌಂತೇಯನಾದ ಧರ್ಮಾತ್ಮನಾದ ಯುಧಿಷ್ಠಿರನು ಅವಳನ್ನು ನೋಡಿ ಕಾಂತಿಹೀನಳೂ, ಕೃಶಳೂ ಆದ ಅವಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಆತುರನಾಗಿ ಗೋಳಾಡಿದನು.

ಯುಧಿಷ್ಠಿರಃ

ಕಥಂ ವೇಶ್ಮಸು ಗುಪ್ತೇಷು ಸ್ಪಾಸ್ತೀರ್ಣಶಯನೋಚಿತಾ ।
ಭೂಮೌ ನಿಪತಿತಾ ಶೇತೇ ಸುಖಾರ್ಹಾ ವರವರ್ಣಿನೀ ॥೧೦॥

ಯುಧಿಷ್ಠಿರ– ಸೈನಿಕರಿಂದ ರಕ್ಷಿತಳಾದ ಗೃಹಗಳಲ್ಲಿ ಒಳ್ಳೆಯ ಆಸ್ತರ್ಣಗಳನ್ನು ಹೊಂದಿದ ಹಾಸಿಗೆಯ ಮೇಲೆ ಮಲಗಿ ಸುಖವನ್ನು ಪಡಬೇಕಾದ ಈ ಸುಂದರಿಯು ಹೇಗೆ ಭೂಮಿಯ ಮೇಲೆ ಬಿದ್ದಿದ್ದಾಳೆ!

ಸುಕುಮಾರೌ ಕಥಂ ಪಾದೌ ಮುಖಂ ಚ ಕಮಲಪ್ರಭಮ್ ।
ಮತ್ಕೃತೇऽದ್ಯ ವರಾರ್ಹಾಯಾಃ ಶ್ಯಾಮತಾಂ ಸಮುಪಾಗತಮ್ ॥೧೧॥

ಅವಳ ಪಾದಗಳು ಎಷ್ಟು ಕೋಮಲವಾಗಿವೆ? ಕಮಲದಂತಿರುವ ಈ ಸುಂದರಿಯ ಮುಖವು ನನ್ನ ನಿಮಿತ್ತದಿಂದಾಗಿ ಈ ದಿನ ಕಪ್ಪಾಗಿಹೋಗಿದೆ.

ಕಿಮಿದಂ ದ್ಯೂತಕಾಮೇನ ಮಯಾ ಕೃತಮಬುದ್ಧಿನಾ ।
ಆದಾಯ ಕೃಷ್ಣಾಂ ಚರತಾ ವನೇ ಮೃಗಗಣಾಯುತೇ ॥೧೨॥

ದ್ರೌಪದಿಯನ್ನು ಕರೆದುಕೊಂಡು ಮೃಗಗಣಗಳಿಂದ ಕೂಡಿದ ಕಾಡಿನಲ್ಲಿ ಸಂಚರಿಸುವ ನಾನು ದ್ಯೂತಕಾಮನಾಗಿ ಬುದ್ಧಿಯಿಲ್ಲದೆ ಎಂತಹ ಕೆಲಸವನ್ನು ಮಾಡಿದೆ!

ಸುಖಂ ಪ್ರಾಪ್ಸ್ಯಸಿ ಕಲ್ಯಾಣಿ ಪಾಂಡವಾನ್ ಪ್ರಾಪ್ಯ ವೈ ಪತೀನ್ ।
ಇತಿ ದ್ರುಪದರಾಜೇನ ಪಿತ್ರಾ ದತ್ತಾऽऽಯತೇಕ್ಷಣಾ ॥೧೩॥

ಕಲ್ಯಾಣಿಯೇ, ನೀನು ಪಾಂಡವರನ್ನು ಪತಿಗಳನ್ನಾಗಿ ಪಡೆದು ಸುಖವನ್ನು ಅನುಭವಿಸುವಿ ಎಂದು ಹೇಳಿ ತಂದೆಯಾದ ದ್ರುಪದರಾಜನು ಈ ಸುಂದರಿಯನ್ನು ನಮಗೆ ಕೊಟ್ಟನು.

ತತ್ಸರ್ವಮನವಾಪ್ಯೇಯಂ ಶ್ರಮಶೋಕಾರ್ದಿತಾರ್ತಿತಾ ।
ಶೇತೇ ನಿಪತಿತಾ ಭೂಮೌ ಪಾಪಸ್ಯ ಮಮ ಕರ್ಮಭಿಃ ॥೧೪॥

ಅಂತಹ ಯಾವ ಸುಖವನ್ನೂ ಕಾಣದೆ ಈ ಸುಂದರಿಯು ಶ್ರಮದಿಂದಲೂ, ಶೋಕದಿಂದಲೂ ಮತ್ತು ಮಾರ್ಗದಿಂದಲೂ ಕರ್ಶಿತಳಾಗಿ ಪಾಪಿಯಾದ ನನ್ನ ದುಷ್ಕರ್ಮಗಳಿಂದ ಭೂಮಿಯ ಮೇಲೆ ಬಿದ್ದು ಮಲಗಿದ್ದಾಳೆ.

ವೈಶಂಪಾಯನಃ

ತಥಾ ಲಾಲಪ್ಯಮಾನೇ ತು ಧರ್ಮರಾಜೇ ಯುಧಿಷ್ಠಿರೇ ।
ಧೌಮ್ಯಪ್ರಭೃತಯಃ ಸರ್ವೇ ತತ್ರಾಜಗ್ಮುರ್ದ್ವಿಜೋತ್ತಮಾಃ ॥೧೫॥

ವೈಶಂಪಾಯನ– ಧರ್ಮರಾಜನಾದ ಯುಧಿಷ್ಠಿರನು ಹೀಗೆ ವಿಲಾಪವನ್ನು ಮಾಡುತ್ತಿರಲು ಧೌಮ್ಯ ಮೊದಲಾದ ಬ್ರಾಹ್ಮಣಶ್ರೇಷ್ಠರೆಲ್ಲರೂ ಅಲ್ಲಿಗೆ ಬಂದರು.

ತೇ ಸಮಾಶ್ವಾಸಯಾಮಾಸುರಾಶೀರ್ಭಿಶ್ಚಾಪ್ಯಪೂಜಯನ್ ।
ರಕ್ಷೋಘ್ನಾಂಶ್ಚ ತಥಾ ಮಂತ್ರಾನ್ ಜೇಪುಶ್ಚಕ್ರುಶ್ಚ ತೇ ಕ್ರಿಯಾಃ ॥೧೬॥

ಅವರು ದ್ರೌಪದಿಯನ್ನು ಸಮಾಧಾನಪಡಿಸಿ ತಮ್ಮ ಆಶೀರ್ವಾದಗಳಿಂದ ಅವಳನ್ನು ಸತ್ಕರಿಸಿದರು. ಅವರು ರಕ್ಷೋಘ್ನಮಂತ್ರಗಳನ್ನು ಜಪಿಸಿ ಅವಳಿಗೆ ಉಚಿತವಾದ ಕ್ರಿಯೆಗಳನ್ನು ಮಾಡಿದರು.

ಪಶ್ಯಮಾನೇಷು ಮಂತ್ರೇಷು ಶಾಂತ್ಯರ್ಥಂ ಪರಮರ್ಷಿಭಿಃ ।
ಸ್ಪೃಶ್ಯಮಾನಾ ಕರೈಃ ಶೀತೈಃ ಪಾಂಡವೈಶ್ಚ ಮುಹುರ್ಮುಹುಃ ॥೧೭॥

ಸೇವ್ಯಮಾನಾ ಚ ಶೀತೇನ ಜಲಮಿಶ್ರೇಣ ವಾಯುನಾ ।
ಪಾಂಚಾಲೀ ಸುಖಮಾಸಾದ್ಯ ಲೇಭೇ ಚೇತಃ ಶನೈಃ ಶನೈಃ ॥೧೮॥

ಆ ಶ್ರೇಷ್ಠರಾದ ಋಷಿಗಳು ಶಾಂತಿಮಂತ್ರಗಳನ್ನು ಜಪಿಸುತ್ತಿರಲು ಮತ್ತು ಪಾಂಡವರು ತಮ್ಮ ಶೀತಲವಾದ ಹಸ್ತಗಳಿಂದ ಅವಳನ್ನು ಮತ್ತೆ ಮತ್ತೆ ನೇವರಿಸುತ್ತಿರಲು ಮತ್ತು ಜಲಮಿಶ್ರಿತವಾಯುವು ನಿಧಾನವಾಗಿ ಬೀಸುತ್ತಿರಲು ಪಾಂಚಾಲಿಯು ಮೆಲ್ಲಮೆಲ್ಲನೆ ಸ್ವಲ್ಪ ಸುಖವನ್ನು ಹೊಂದಿ ಮರಳಿ ಸಂಜ್ಞೆಯನ್ನು ಪಡೆದಳು.

ಪರಿಗೃಹ್ಯ ಚ ತಾಂ ದೀನಾಂ ಕೃಷ್ಣಾಮಜಿನಸಂಸ್ತರೇ ।
ಪಾರ್ಥಾ ವಿಶ್ರಾಮಯಾಮಾಸುರ್ಲಬ್ಧಸಂಜ್ಞಾಂ ತಪಸ್ವಿನೀಮ್ ॥೧೯॥

ಶೋಚನೀಯಳಾದ, ದೀನಳಾದ ದ್ರೌಪದಿಯು ಮರಳಿ ಸಂಜ್ಞೆಯನ್ನು ಪಡೆಯುತ್ತಿರಲು, ಪಾಂಡವರು ಒಂದು ಕೃಷ್ಣಾಜಿನ ಚಾಪೆಯ ಮೇಲೆ ಅವಳನ್ನು ಮಲಗಿಸಿದರು.

ತಸ್ಯಾ ಯಮೌ ರಕ್ತತಳೌ ಪಾದೌ ಪೂಜಿತಲಕ್ಷಣೌ ।
ಕರಾಭ್ಯಾಂ ಕೃಣಜಾತಾಭ್ಯಾಂ ಶನಕೈಃ ಸಂವವಾಹತುಃ ॥೨೦॥

ನಕುಲಸಹದೇವರು ಜಡ್ಡುಕಟ್ಟಿದ ತಮ್ಮಕೈಗಳಿಂದ ಅವಳ ರಕ್ತತಳಗಳುಳ್ಳ ಲಕ್ಷಣೋಪೇತವಾದ ಸುಕೋಮಲವಾದ ಪಾದಗಳನ್ನು ಮೆಲ್ಲನೆ ಒತ್ತಿದರು.

ಪರ್ಯಾಶ್ವಾಸಯದಪ್ಯೇನಾಂ ಧರ್ಮರಾಜೋ ಯುಧಿಷ್ಠಿರಃ ।
ಉವಾಚ ಚ ಕುರುಶ್ರೇಷ್ಠೋ ಭೀಮಸೇನಮಿದಂ ವಚಃ ॥೨೧॥

ಧರ್ಮರಾಜನಾದ ಯುಧಿಷ್ಠಿರನು ಅವಳನ್ನು ಸಮಾಧಾನಪಡಿಸಿದನು. ಕುರುಶ್ರೇಷ್ಠನಾದ ಅವನು ಭೀಮಸೇನನನ್ನು ಕುರಿತು ಹೀಗೆ ಮಾತನಾಡಿದನು.

ಬಹವಃ ಪರ್ವತಾ ಭೀಮ ವಿಷಮಾ ಹಿಮದುರ್ಗಮಾಃ ।
ತೇಷು ಕೃಷ್ಣಾ ಮಹಾಬಾಹೋ ಕಥಂ ನು ವಿಚರಿಷ್ಯತಿ ॥೨೨॥

ಭೀಮನೇ, ಅನೇಕ ಪರ್ವತಗಳು ವಿಷಮವಾಗಿದ್ದು, ಹಿಮಪಾತದಿಂದ ದುರ್ಗಮಗಳಾಗಿವೆ. ಮಹಾಬಾಹುವೇ, ದ್ರೌಪದಿಯು ಅಲ್ಲಿ ಹೇಗೆ ನಡೆಯುತ್ತಾಳೆ?

ತ್ವಾಂ ರಾಜನ್ ರಾಜಪುತ್ರೀಂ ಚ ಯಮೌ ಚ ಪುರುಷರ್ಷಭ ।
ಸ್ವಯಂ ನೇಷ್ಯಾಮಿ ರಾಜೇಂದ್ರ ಮಾ ವಿಷಾದೇ ಮನಃ ಕೃಥಾಃ ॥೨೩॥

ಹೈಡಿಂಬಶ್ಚ ಮಹಾವೀರ್ಯೋ ವಿಹಗೋ ಮದ್ವಧೋಪಮಃ ।
ವಹೇದನಘ ಸರ್ವಾನ್ ನೋ ವಚನಾತ್ ತೇ ಘಟೋತ್ಕಚಃ ॥೨೪॥

ಭೀಮಸೇನ– ಎಲೈ ರಾಜನೇ, ಪುರುಷಶ್ರೇಷ್ಠನೇ, ನಾನು ನಿನ್ನನ್ನೂ, ಈ ರಾಜಕುಮಾರಿಯನ್ನೂ, ನಕುಲಸಹದೇವರನ್ನೂ ಒಬ್ಬನೇ ಎತ್ತಿಕೊಂಡು ಹೋಗುವೆನು.

ರಾಜೇಂದ್ರನೇ, ಮನಸ್ಸಿಗೆ ವಿಷಾದವನ್ನು ತಂದುಕೊಳ್ಳಬೇಡ. ಹಿಡಿಂಬೆಯ ಮಗನಾದ ಘಟೋತ್ಕಚನು ನನಗೆ ಸಮನಾದ ಬಲವುಳ್ಳವನು. ಅವನು ಮಹಾವೀರ್ಯನೂ, ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿದವನೂ ಆಗಿದ್ದಾನೆ. ಎಲೈ ಅನಘನೇ, ಅವನು ನಿನ್ನ ಆದೇಶದಂತೆ ನಮ್ಮೆಲ್ಲರನ್ನೂ ಎತ್ತಿಕೊಂಡು ಹೋಗಲು ಸಮರ್ಥನಾಗಿದ್ದಾನೆ.

ಏತಚ್ಛ್ರುತ್ವಾ ತು ವಚನಂ ಭೀಮಸೇನಸ್ಯ ಧರ್ಮರಾಟ್ ।
ಭೀಮಂ ಸಂಪೂಜಯಂಸ್ತುಷ್ಟ ಏವಮಸ್ತ್ವಿತ್ಯಭಾಷತ ॥೨೪.೧॥

ಭೀಮಸೇನನ ಈ ಮಾತುಗಳನ್ನು ಕೇಳಿದ ಧರ್ಮರಾಜನು ಸಂತೋಷದಿಂದ ಭೀಮನನ್ನು ಪೂಜಿಸುತ್ತಾ ಹಾಗೆಯೇ ಆಗಲಿ ಎಂದು ಹೇಳಿದನು.

ಸೋನುಜ್ಞಾತೋ ಧರ್ಮರಾಜ್ಞಾ ಪುತ್ರಂ ಸಸ್ಮಾರ ರಾಕ್ಷಸಮ್ ।
ಘಟೋತ್ಕಚಶ್ಚ ಧರ್ಮಾತ್ಮಾ ಸ್ಮೃತಮಾತ್ರಃ ಪಿತೄನ್‌ತದಾ ॥೨೪.೨॥

ಕೃತಾಂಜಲಿರುಪಾತಿಷ್ಠದಭಿವಾದ್ಯ ಚ ಪಾಂಡವಾನ್ ।
ಬ್ರಾಹ್ಮಣಾಂಶ್ಚ ಮಹಾಬಾಹುಃ ಸರ್ವಂ ಕರ್ತಾಸ್ಮ್ಯಸಂಶಯಃ ।
ತಚ್ಛ್ರುತ್ವಾ ಭೀಮಸೇನಸ್ತು ರಾಕ್ಷಸಂ ಪರಿಷಸ್ವಜೇ ॥೨೪.೩॥

ಧರ್ಮರಾಜನ ಅನುಮತಿಯನ್ನು ಪಡೆದು ಭೀಮಸೇನನು ತನ್ನ ರಾಕ್ಷಸಪುತ್ರನನ್ನು ಸ್ಮರಿಸಿದನು. ಹಾಗೆ ಸ್ಮರಿಸಿದ ತಕ್ಷಣವೇ ಮಹಾಬಾಹುವಾದ ಧರ್ಮಾತ್ಮನಾದ ಘಟೋತ್ಕಚನು ಬಂದು ಪಿತೃಗಳಾದ ಪಾಂಡವರಿಗೂ ಮತ್ತು ಬ್ರಾಹ್ಮಣರಿಗೂ ಕೈಗಳನ್ನು ಮುಗಿದು ನಮಸ್ಕರಿಸಿ ನೀವು ಹೇಳಿದುದೆಲ್ಲವನ್ನೂ ನಿಸ್ಸಂಶಯವಾಗಿ ಮಾಡುವೆನು ಎಂದು ಹೇಳಿದನು. ಆ ಮಾತನ್ನು ಕೇಳಿದ ಭೀಮಸೇನನು ಪುತ್ರನಾದ ಘಟೋತ್ಕಚನನ್ನು ಆಲಿಂಗಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಸಪ್ತನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಕ್ರಮೇಣ ಪಾರ್ಥಾ ಅಪಿ ಶೈಶಿರಂ ಗಿರಿಂ
ಸಮಾಸದಂಸ್ತತ್ರ ಕೃಷ್ಣಾಂ ಸುದುರ್ಗೇ ।
ವಿಷಜ್ಜಂತೀಮೀಕ್ಷ್ಯ ತೈಃ ಸಂಸ್ಮೃತೋಽಥ
ಹೈಡಿಂಬ ಆಯಾತ್ ಸಹಿತೋ ನಿಶಾಚರೈಃ ॥೨೬೫॥

ಪಾಂಡವರು ಕ್ರಮವಾಗಿ ಹಿಮಾಲಯ ಪರ್ವತವನ್ನು ಸೇರಿದರು. ಅಲ್ಲಿ ಬಹಳ ದುರ್ಗಮವಾದ ದಾರಿಯಲ್ಲಿ ದ್ರೌಪದಿ ಅಶಕ್ತಿಯಿಂದ ಬಳಲಿದಂತೆ ತೋರಿಕೊಂಡಳು. ಅದನ್ನು ಕಂಡು ಪಾಂಡವರು ಘಟೋತ್ಕಚನನ್ನು ಸ್ಮರಿಸಿದರು. ಒಡನೆ ಅವನು ರಾಕ್ಷಸರ ಸಮೇತ ಬಂದ.

ಉವಾಹ ಕೃಷ್ಣಾಂ ಸ ತು ತಸ್ಯ ಭೃತ್ಯಾ ಊಹುಃ
ಪಾರ್ಥಾಸ್ತೇ ಬದರ್ಯಾಶ್ರಮಂ ಚ ।
ಪ್ರಾಪ್ಯಾತ್ರ ನಾರಾಯಣಪೂಜಯಾ
ಕೃತಸ್ವಕೀಯಕಾರ್ಯಾ ಯಯುರುತ್ತರಾಂ ದಿಶಮ್ ॥೨೬೬॥

ಘಟೋತ್ಕಚ ದ್ರೌಪದಿಯನ್ನು ಹೊತ್ತುಕೊಂಡ. ಅವನ ಭೃತ್ಯರು ಪಾಂಡವರನ್ನು ಹೊತ್ತರು. ಅವರು ಬದರಿಕಾಶ್ರಮವನ್ನು ಸೇರಿ ನಾರಾಯಣನ ಆರಾಧನಾ ರೂಪವಾಗಿ ತಮಗೆ ವಿಹಿತವಾದ ಪಿತೃಶ್ರಾದ್ಧಾದಿ ಕರ್ಮಗಳನ್ನು ಮಾಡಿ ಹಿಮಾಲಯವನ್ನೂ ದಾಟಿ ಇನ್ನೂ ಉತ್ತರದಿಕ್ಕಿಗೆ ಹೋದರು.

★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

ಭೀಮಸೇನನು ಸ್ಮರಣೆಮಾಡಿದ ತಕ್ಷಣ ಘಟೋತ್ಕಚನ ಆಗಮನ. ಆವನಿಂದ ಮತ್ತು ರಾಕ್ಷಸರಿಂದ ದ್ರೌಪದಿಯ ಮತ್ತು ಏಪ್ರರ ವಹನ. ನರನಾರಾಯಣಾಶ್ರಮ ಪ್ರಾಪ್ತಿ.

ಯುಧಿಷ್ಠಿರ

ಧರ್ಮಜ್ಞೋ ಬಲವಾನ್ ಶೂರಃ ಸತ್ಯೋ ರಾಕ್ಷಸಪುಂಗವಃ ।
ಭಕ್ತೋಽಸ್ಮಾಸೌರಸಃ ಪುತ್ರೌ ನೇತುಮರ್ಹತಿ ಮಾತರಮ್ ॥೧॥

ತವ ಭೀಮ ಸುತೇನಾಹಂ ನೀತೋ ಭೀಮಪರಾಕ್ರಮ ।
ಅಕ್ಷತಃ ಸಹ ಪಾಂಚಾಲ್ಯಾ ಗಚ್ಛೇಯಂ ಗಂಧಮಾದನಮ್ ॥೨॥

ಎಲೈ ಭೀಮಸೇನನೇ, ಧರ್ಮಜ್ಞನೂ ಬಲಿಷ್ಠನೂ, ಶೂರನೂ, ಸತ್ಯವಂತನೂ, ನಮ್ಮಲ್ಲಿ ಭಕ್ತಿಯುಳ್ಳವನೂ ಆದ ನಿನ್ನ ಔರಸಪುತ್ರನಾದ, ರಾಕ್ಷಸಶ್ರೇಷ್ಠನಾದ ಘಟೋತ್ಕಚನು ತಾಯಿಯಾದ ದ್ರೌಪದಿಯನ್ನು ಎತ್ತಿಕೊಂಡು ಹೋಗಲು ಸಮರ್ಥನಾಗಿದ್ದಾನೆ. ಎಲೈ ಭಯಂಕರ ಪರಾಕ್ರಮಶಾಲಿಯೇ, ನಾನು ನಿನ್ನ ಮಗನಿಂದ ಕರೆದೊಯ್ಯಲ್ಪಟ್ಟು ಯಾವ ಘಾಸಿಯನ್ನೂ ಹೊಂದದೆ ಪಾಂಚಾಲಿಯ ಜೊತೆಯಲ್ಲಿ ಗಂಧಮಾದನವನ್ನು ಸೇರುವೆನು.

ವೈಶಂಪಾಯನಃ

ಭ್ರಾತುರ್ವಚನಮಾಜ್ಞಾಯ ಭೀಮಸೇನೋ ಘಟೋತ್ಕಚಮ್ ।
ಚಿಂತಯಾಮಾಸ ಬಲವಾನ್ ಮಹಾಬಲಪರಾಕ್ರಮಮ್ ॥೩॥

ವೈಶಂಪಾಯನ– ಮಹಾಬಲಿಷ್ಠನಾದ ಭೀಮಸೇನನು ಅಣ್ಣನ ಮಾತುಗಳನ್ನು ತಿಳಿದು ಮಹಾಬಲಪರಾಕ್ರಮವುಳ್ಳ ಘಟೋತ್ಕಚನನ್ನು ಸ್ಮರಿಸಿದನು.

ಘಟೋತ್ಕಚಶ್ಚ ಧರ್ಮಾತ್ಮಾ ಸ್ಮೃತಮಾತ್ರಃ ಪಿತುಸ್ತದಾ ।
ಕೃತಾಂಜಲಿರುಪಾತಿಷ್ಠದಭಿವಾದ್ಯಾಥ ಪಾಂಡವಾನ್ ॥೪॥

ಧರ್ಮಾತ್ಮನಾದ ಘಟೋತ್ಕಚನಾದರೂ ತಂದೆಯು ಸ್ಮರಣೆ ಮಾಡಿದ ತಕ್ಷಣವೇ ಎದುರಿಗೆ ಬಂದು ಪಾಂಡವರಿಗೆ ಅಭಿವಂದಿಸಿ ನಿಂತುಕೊಂಡನು.

ಉವಾಚ ಭೀಮಸೇನಂ ಸ ಪಿತರಂ ಸತ್ಯವಿಕ್ರಮಃ ।
ಆಜ್ಞಾಪಯ ಮಹಾಬಾಹೋ ಸರ್ವಂ ಕರ್ತಾಸ್ಮ್ಯಸಂಶಯಮ್ ॥೫॥

ಸತ್ಯವಿಕ್ರಮನಾದ ಅವನು ತಂದೆಯಾದ ಭೀಮಸೇನನನ್ನು ಕುರಿತು ಮಹಾಬಾಹುವೇ ಆಪತ್ಕಾಲವನ್ನು ಮಾಡು. ನಾನು ನಿನ್ನ ಆಪತ್ಕಾಲವನ್ನು ನಿಸ್ಸಂಶಯವಾಗಿ ನೆರವೇರಿಸುವೆನು ಎಂದು ಹೇಳಿದನು.

ವೈಶಂಪಾಯನಃ

ತಚ್ಛ್ರುತ್ವಾ ಭೀಮಸೇನಸ್ತು ರಾಕ್ಷಸಂ ಪರಿಷಸ್ವಜೇ ।
ಚಿಂತಯಾ ಸಮನುಪ್ರಾಪ್ತಮಿತ್ಯುವಾಚ ವೃಕೋದರಃ ॥೬॥

ವೈಶಂಪಾಯನ– ಅದನ್ನು ಕೇಳಿದ ಭೀಮಸೇನನಾದರೂ ಘಟೋತ್ಕಚನನ್ನು ಆಲಂಗಿಸಿದನು. ತಾನು ಚಿಂತಿಸಿದ ತಕ್ಷಣವೇ ಸಂಪ್ರಾಪ್ತನಾದ ಅವನನ್ನು ಕುರಿತು ವೃಕೋದರನು ಹೀಗೆ ಹೇಳಿದನು;

ಹೈಡಿಂಬೇಯ ಪರಿಶ್ರಾಂತಾ ತವ ಮಾತಾऽಪರಾಜಿತ ।
ತ್ವಂ ಚ ಕಾಮಗಮಸ್ತಾತ ಬಲವಾನ್ ವಹ ತಾಂ ಖಗ ॥೭॥

ಹಿಂಡಿಬಾ ಪುತ್ರನೇ, ಅಪರಾಜಿತಳಾದ ನಿನ್ನ ತಾಯಿಯು ತುಂಬಾ ದಣದಿದ್ದಾಳೆ. ನೀನಾದರೋ ಇಚ್ಛಾಸಂಚಾರಿಯಾಗಿ ಆಕಾಶದಲ್ಲಿಯೂ ಹೋಗುವವನಾಗಿ ಬಲಿಷ್ಠನಾಗಿದ್ದೀಯೆ. ಅವಳನ್ನು ಎತ್ತಿಕೊಂಡು ಬಾ.

ಸ್ಕಂಧಮಾರೋಪ್ಯ ಭದ್ರಂ ತೇ ಮದ್ಧ್ಯೇऽಸ್ಮಾಕಂ ವಿಹಾಯಸಾ ।
ಗಚ್ಛ ನೀಚಕಯಾ ಗತ್ಯಾ ಯಥಾ ಚೈನಾಂ ನ ಪೀಡಯೇಃ ॥೮॥

ನಿನಗೆ ಮಂಗಳವಾಗಲಿ. ಅವಳನ್ನು ನಿನ್ನ ಹೆಗಲಿನ ಮೇಲೆ ಕೂಡಿಸಿಕೊಂಡು ನಮ್ಮ ಮಧ್ಯದಲ್ಲಿ ಅವಳಿಗೆ ತೊಂದರೆಯಾಗದಂತೆ ಆಕಾಶದಲ್ಲಿ ಕೆಳಗಿನ ಮಟ್ಟದಲ್ಲಿಯೇ ಎತ್ತಿಕೊಂಡು ನಿಧಾನವಾಗಿ ಹೋಗು.

ಘಟೋತ್ಕಚಃ

ಧರ್ಮರಾಜಂ ಚ ಧೌಮ್ಯಂ ಚ ಕೃಷ್ಣಾಂ ಚ ಯಮಜೌ ತಥಾ ।
ಏಕೋऽಪ್ಯಹಮಲಂ ವೋढುಂ ಕಿಮುತಾದ್ಯ ಸಹಾಯವಾನ್ ।
ಮಂದಂಮಂದಂ ಗಮಿಷ್ಯಾಮಿ ವಹನ್ ದ್ರುಪದನಂದಿನೀಮ್ ॥೯॥

ಘಟೋತ್ಕಚ– ನಾನೊಬ್ಬನೇ ಧರ್ಮರಾಜನನ್ನು, ಧೌಮ್ಯರನ್ನು, ದ್ರೌಪದಿಯನ್ನು ಮತ್ತು ನಕುಲ-ಸಹದೇವರನ್ನು ಎತ್ತಿಕೊಂಡು ಹೋಗಲು ಸಮರ್ಥನಾಗಿದ್ದೇನೆ. ಇನ್ನು ಈ ದಿನ ಪರಿವಾರದ ಜೊತೆಯಲ್ಲಿ ಬಂದಿರುವ ನನಗೆ ಹೇಳತಕ್ಕದ್ದೇನಿದೆ? ದ್ರುಪದನಂದಿನಿಯನ್ನು ಎತ್ತಿಕೊಂಡು ನಿಧಾನಗತಿಯಿಂದ ಚಲಿಸುವೆನು.

ಅನ್ಯೇ ಚ ಶತಶಃ ಶೂರಾ ವಿಹಂಗಾಃ ಕಾಮರೂಪಿಣಃ ।
ಸರ್ವಾನ್ವೋ ಬ್ರಾಹ್ಮಣೈಃ ಸಾರ್ಧಂ ವಕ್ಷ್ಯಂತಿ ಸಹಿತಾನಥ ॥೯.೧॥

ನನ್ನ ಜೊತೆಯಲ್ಲಿ ಇರುವ ಶೂರರೂ, ಕಾಮರೂಪಿಗಳೂ, ಆಕಾಶಸಂಚಲನಾ ಶೀಲರೂ ಆದ ನೂರಾರು ರಾಕ್ಷಸರು ಬ್ರಾಹ್ಮಣರನ್ನೂ ಮತ್ತು ನಿಮ್ಮೆಲ್ಲರನ್ನೂ ಎತ್ತಿಕೊಂಡು ಹೋಗುವರು.

ವೈಶಂಪಾಯನಃ

ಏವಮುಕ್ತ್ವಾ ತತಃ ಕೃಷ್ಣಾಮುವಾಹ ಸ ಘಟೋತ್ಕಚಃ ।
ಪಾಂಡೂನಾಂ ಮಧ್ಯಗೋ ವೀರಃ ಪಾಂಡವಾನಪಿ ಚಾಪರೇ ॥೧೦॥

ವೈಶಂಪಾಯನ– ಹೀಗೆ ಹೇಳಿ ಘಟೋತ್ಕಚನು ಆಗ ದ್ರೌಪದಿಯನ್ನು ಎತ್ತಿಕೊಂಡು ಪಾಂಡವರ ಮಧ್ಯದಲ್ಲಿ (ಆಕಾಶದಲ್ಲಿ) ಹೊರಟನು. ಉಳಿದ ರಾಕ್ಷಸರು ಪಾಂಡವರನ್ನು ಎತ್ತಿಕೊಂಡರು.

ರೋಮಶಃ ಸಿದ್ಧಮಾರ್ಗೇಣ ಜಗಾಮಾನುಪಮದ್ಯುತಿಃ ।
ಸ್ವೇನೈವ ಸ ಪ್ರಭಾವೇಣ ದ್ವಿತೀಯ ಇವ ಭಾಸ್ಕರಃ ॥೧೧॥

ಅನುಪಮಕಾಂತಿಯುಕ್ತರಾದ ರೋಮಶರು ತಮ್ಮ ಪ್ರಭಾವದಿಂದಲೇ ಎರಡನೆಯ ಸೂರ್ಯನಂತೆ ಸಿದ್ಧಮಾರ್ಗದಲ್ಲಿ (ಆಕಾಶದಲ್ಲಿ) ಹೊರಟರು.

ಬ್ರಾಹ್ಮಣಾಂಶ್ಚಾಪಿ ತಾನ್ ಸರ್ವಾನ್ ಸಮುಪಾದಾಯ ರಾಕ್ಷಸಾಃ ।
ನಿಯೋಗಾದ್ ರಾಕ್ಷಸೇಂದ್ರಸ್ಯ ಜಗ್ಮುರ್ಭೀಮಪರಾಕ್ರಮಾಃ ॥೧೨॥

ಭೀಮಪರಾಕ್ರಮವುಳ್ಳ ಆ ರಾಕ್ಷಸರೆಲ್ಲರೂ ಘಟೋತ್ಕಚನ ಆಜ್ಞೆಯಂತೆ ಆ ಬ್ರಾಹ್ಮಣರೆಲ್ಲರನ್ನೂ ಎತ್ತಿಕೊಂಡು ಹೊರಟರು.

ಏವಂ ಸುರಮಣೀಯಾನಿ ವನಾನ್ಯುಪವನಾನಿ ಚ ।
ಆಲೋಕಯಂತಸ್ತೇ ದಗ್ಧುರ್ವಿಶಾಲಾಂ ಬದರೀಂ ಪ್ರತಿ ॥೧೩॥

ಹೀಗೆ ಅವರು ಅತ್ಯಂತ ಮನೋಹರವಾದ ವನಗಳನ್ನು ಮತ್ತು ಉಪವನಗಳನ್ನು ನೋಡುತ್ತಾ ವಿಶಾಲಾ ಬದರಿಯನ್ನು ತಲುಪಿದರು.

ತೇ ತ್ವಾಶುಗತಿಭಿರ್ವೀರಾ ರಾಕ್ಷಸೈಸ್ತೈರ್ಮಹಾಜವೈಃ ।
ಉಹ್ಯಮಾನಾ ಯಯುಃ ಶೀಘ್ರಂ ದೀರ್ಘಮಧ್ವಾನಮಲ್ಪವತ್ ॥೧೪॥

ಮಹಾವೇಗವುಳ್ಳ ಮತ್ತು ಶೀಘ್ರಗಮನವುಳ್ಳ ರಾಕ್ಷಸರಿಂದ ಒಯ್ಯಲ್ಪಟ್ಟವರಾಗಿ ಆ ವೀರರೆಲ್ಲರೂ ದೀರ್ಘವಾದ ಮಾರ್ಗವನ್ನು ಅಲ್ಪಮಾರ್ಗವೆಂಬಂತೆ ಶೀಘ್ರವಾಗಿ ದಾಟಿದರು.

ದೇಶಾನ್ ಮ್ಲೇಚ್ಛಜನಾಕೀರ್ಣಾನ್ ನಾನಾರತ್ನಾಕರಾಯುತಾನ್ ।
ದದೃಶುರ್ಗಿರಿಪಾದಾಂಶ್ಚ ನಾನಾಧಾತುಸಮಾಚಿತಾನ್ ॥೧೫॥

ಅವರು ಹೀಗೆ ಹೋಗುತ್ತಾ ಮ್ಲೇಚ್ಛಜನರಿಂದ ತುಂಬಿದ ದೇಶಗಳನ್ನೂ, ನಾನಾ ರತ್ನಾಕರಗಳಿಂದ ಕೂಡಿದ ನಾನಾಧಾತುಗಳಿಂದ ವಿಚಿತ್ರವಾದ ಪರ್ವತದ ತಪ್ಪಲು ಪ್ರದೇಶಗಳನ್ನೂ ನೋಡಿದರು.

ಆಸೇವಿತಾನ್ ಕಿಂಪುರುಷೈರ್ಗಂಧರ್ವೈಶ್ಚ ಸಮಂತತಃ ।
ವಿದ್ಯಾಧರಸಮಾಕೀರ್ಣಾನ್ ಯುತಾನ್ ವಾನರಕಿನ್ನರೈಃ ॥೧೬॥

ಎಲ್ಲಕಡೆಗಳಲ್ಲಿಯೂ ಕಿಂಪುರುಷರಿಂದಲೂ, ಗಂಧರ್ವರಿಂದಲೂ, ವಿದ್ಯಾಧರರಿಂದಲೂ, ವಾನರಕಿನ್ನರರಿಂದಲೂ ತುಂಬಿದ ಪರ್ವತಗಳನ್ನು ಅವರು ನೋಡಿದರು.

ಮಯೂರೈಶ್ಚಮರೈಶ್ಚೈವ ವಾನರೈ ರುರುಭಿಸ್ತಥಾ ।
ವರಾಹೈರ್ಗವಯೈಶ್ಚೈವ ಮಹಿಷೈಶ್ಚ ಸಮಾವೃತಾನ್ ॥೧೭॥

ನದೀಜಲಸಮಾಕೀರ್ಣಾನ್ ನಾನಾಪಕ್ಷಿಯುತಾನ್ ಬಹೂನ್ ।
ನಾನಾವಿಧಮೃಗೈರ್ಜುಷ್ಟಾನ್ ವಾನರೈಶ್ಚೋಪಶೋಭಿತಾನ್ ॥೧೮॥

ಸಮದೈಶ್ಚಾಪಿ ವಿಹಗೈಃ ಪಾದಪೈರನ್ವಿತಾಂಸ್ತಥಾ ।

ಅವರು ಮಯೂರಗಳಿಂದಲೂ, ಚಮರಿಮೃಗಗಳಿಂದಲೂ, ವಾನರರಿಂದಲೂ, ರುರು, ವರಾಹ, ಗವಯ, ಮಹಿಷಗಳಿಂದ ತುಂಬಿದ ಪರ್ವತಪ್ರದೇಶಗಳನ್ನೂ ನದಿಯ ಜಲಸಮೂಹಗಳಿಂದ ತುಂಬಿದ ನಾನಾ ಪಕ್ಷಿಗಳಿಂದ ಯುತವಾದ ನಾನಾವಿಧವಾದ ಮೃಗಗಳಿಂದಲೂ ಮತ್ತು ವಾನರಗಳಿಂದಲೂ ಶೋಭಿತವಾದ ಮದಿಸಿದ ಪಕ್ಷಿಗಳಿಂದಲೂ ಮತ್ತು ಅನೇಕ ವೃಕ್ಷಗಳಿಂದಲೂ ಯುತವಾದ ಪರ್ವತ ಪ್ರದೇಶಗಳನ್ನೂ ನೋಡಿದರು.

ತೇಽವತೀರ್ಯ ಬಹೂನ್ ದೇಶಾನುತ್ತರಾಂಶ್ಚ ಕುರೂನಪಿ ॥೧೯॥

ದದೃಶುರ್ವಿವಿಧಾಶ್ಚರ್ಯಂ ಕೈಲಾಸಂ ಪರ್ವತೋತ್ತಮಮ್ ॥೨೦॥

ಅವರು ಅನೇಕ ದೇಶಗಳನ್ನೂ, ಉತ್ತರಕುರು ಖಂಡವನ್ನೂ ದಾಟಿ ಅನೇಕ ಆಶ್ಚರ್ಯಗಳಿಂದ ಕೂಡಿರುವ ಕೈಲಾಸಪರ್ವತಶ್ರೇಷ್ಠವನ್ನು ನೋಡಿದರು.

ತಸ್ಯಾಭ್ಯಾಶೇ ತು ದದೃಶುರ್ನರನಾರಾಯಣಾಶ್ರಮಮ್ ।
ಉಪೇತಂ ಪಾದಪೈರ್ದಿವ್ಯೈಃ ಸದಾಪುಷ್ಪಫಲೋಪಗೈಃ ॥೨೧॥

ಅದರ ಸಮೀಪದಲ್ಲಿ ಸದಾಪುಷ್ಪಫಲಭರಿತವಾದ ದಿವ್ಯವೃಕ್ಷಗಳಿಂದ ಕೂಡಿದ ನರನಾರಾಯಣಾಶ್ರಮವನ್ನು ನೋಡಿದರು.

ದದೃಶುಸ್ತಾಂ ಚ ಬದರೀಂ ವೃತ್ತಸ್ಕಂಧಾಂ ಮನೋರಮಾಮ್ ।
ಸ್ನಿಗ್ಧಾಮವಿರಳಚ್ಛಾಯಾಂ ಶ್ರಿಯಾ ಪರಮಯಾ ಯುತಾಮ್ ॥೨೨॥

ಅವರು ಮನೋಹರವಾದ ಒಳ್ಳೆಯ ದುಂಡಾದ ಶಾಖೆಗಳಿಂದ ಕೂಡಿದ ಸ್ನಿಗ್ಧವಾದ ಮತ್ತು ನಿಬಿಡವಾದ ಛಾಯೆಯನ್ನು ಕೊಡುವ ಪರಮಕಾಂತಿಯುತವಾದ ಆ ಪ್ರಸಿದ್ಧವಾದ ಬದರೀವೃಕ್ಷವನ್ನೂ ನೋಡಿದರು.

ಪತ್ರೈಃ ಸ್ನಿಗ್ಧೈರವಿರಳೈರುಪೇತಾಂ ಮೃದುಭಿಃ ಶುಭಾಮ್ ।
ವಿಶಾಲಶಾಖಾಂ ವಿಸ್ತೀರ್ಣಾಮತಿದ್ಯುತಿಸಮನ್ವಿತಾಮ್ ॥೨೩॥

ಫಲೈರುಪಚಿತೈರ್ದಿವ್ಯೈರಾಚಿತಾಂ ಸ್ವಾದುಭಿರ್ಭೃಶಮ್ ।
ಮಧುಸ್ರವೈಃ ಸದಾ ದಿವ್ಯಾಂ ಮಹರ್ಷಿಗಣಸೇವಿತಾಮ್ ॥೨೪॥

ಅದು ನಿಬಿಡವಾದ ಮತ್ತು ಮೃದುವಾದ ಎಲೆಗಳಿಂದಲೂ, ವಿಶಾಲವಾದ ಶಾಖೆಗಳಿಂದಲೂ ಕೂಡಿ ವಿಸ್ತೀರ್ಣವು, ಶುಭಪ್ರದವೂ ಆಗಿದ್ದು ಬಹಳ ಕಾಂತಿಯಿಂದ ಕೂಡಿದ್ದಿತು. ಅದರಲ್ಲಿ ಸ್ವಾದುರಸದಿಂದ ಕೂಡಿದ ದಿವ್ಯವಾದ ಅನೇಕ ಫಲಗಳು ಬಹಳವಾಗಿ ತುಂಬಿಕೊಂಡಿದ್ದವು. ಆ ಫಲಗಳು ಯಾವಾಗಲೂ ಮಧುವನ್ನು ಸುರಿಸುತ್ತಿದ್ದವು. ಮಹರ್ಷಿಗಣಸೇವಿತವಾದ ಆ ದಿವ್ಯವೃಕ್ಷವನ್ನು ಅವರು ನೋಡಿದರು.

ಮದಪ್ರಮುದಿತೈರ್ನಿತ್ಯಂ ನಾನಾದ್ವಿಜಗಣೈರ್ಯುತಾಮ್ ।
ಅದಂಶಮಶಕೇ ದೇಶೇ ಬಹುಮೂಲಫಲೋದಕೇ ॥೨೫॥

ಆ ವೃಕ್ಷವು ಮದಿಸಿದ ಅನೇಕ ಪಕ್ಷಿಗಣಗಳಿಂದ ಕೂಡಿದ್ದಿತು. ಅದು ಅನೇಕ ಮೂಲಗಳು, ಫಲಗಳು ಮತ್ತು ಉದಕವು ಇರುವ ನೊಣ, ಸೊಳ್ಳೆ ಮೊದಲಾದ ಕ್ರಿಮಿಗಳಿಂದ ರಹಿತವಾದ ದೇಶದಲ್ಲಿ ಬೆಳೆದಿದ್ದಿತು.

ನೀಲಶಾದ್ವಲಸಂಛನ್ನೇ ದೇವಗಂಧರ್ವಸೇವಿತೇ ।
ಸುಸಮೀಕೃತಭೂಭಾಗೇ ಸ್ವಭಾವವಿಹಿತೇ ಶುಭೇ ॥೨೬॥

ಜಾತಾಂ ಹಿಮಮೃದುಸ್ಪರ್ಶೇ ದೇಶೇऽಪಹತಕಂಟಕೇ ।
ತಾಮುಪೇತ್ಯ ಮಹಾತ್ಮಾನಃ ಸಹ ತೈರ್ಬ್ರಾಹ್ಮಣರ್ಷಭೈಃ ।
ಅವತೇರುಸ್ತತಃ ಸರ್ವೇ ರಾಕ್ಷಸಸ್ಕಂಧತಃ ಶನೈಃ ॥೨೭॥

ದೇವಗಂಧರ್ವಸೇವಿತವಾದ ಕಪ್ಪಾದ ಶೀತಲಪ್ರದೇಶವನ್ನು ಹೊಂದಿದ ಸಮತಟ್ಟಾದ ಸ್ವಾಭಾವಿಕವಾದ ಭೂಪ್ರದೇಶದಲ್ಲಿ ಅದು ಬೆಳೆದಿದ್ದಿತು. ಮುಳ್ಳುಗಳಿಲ್ಲದಿರುವ ಮೃದುಸ್ಪರ್ಶವುಳ್ಳ ಶೀತಲ ಪ್ರದೇಶದಲ್ಲಿ ಬೆಳೆದಿದ್ದ ಆ ವೃಕ್ಷವನ್ನು ಬ್ರಾಹ್ಮಣರ ಜೊತೆಯಲ್ಲಿ ತಲುಪಿದ ಆ ಮಹಾತ್ಮರೆಲ್ಲರೂ ನಿಧಾನವಾಗಿ ರಾಕ್ಷಸರ ಹೆಗಲುಗಳಿಂದ ಇಳಿದರು.

ತತಸ್ತಮಾಶ್ರಮಂ ರಮ್ಯಂ ನರನಾರಾಯಣಾಶ್ರಿತಮ್ ।
ದದೃಶುಃ ಪಾಂಡವಾ ರಾಜನ್ ಸಹಿತಾ ದ್ವಿಜಪುಂಗವೈಃ ॥೨೮॥

ಎಲೈ ರಾಜನೇ, ಆನಂತರ ಬ್ರಾಹ್ಮಣಶ್ರೇಷ್ಠರ ಜೊತೆಯಲ್ಲಿ ಪ್ರೀತರಾದ ಪಾಂಡವರು ನರನಾರಾಯಣರಿಂದ ಆಶ್ರಿತವಾದ ಆ ಮನೋಹರವಾದ ಆಶ್ರಮವನ್ನು ನೋಡಿದರು.

ತಮಸಾ ರಹಿತಂ ಪುಣ್ಯಮನಾಮೃಷ್ಟಂ ರವೇಃ ಕರೈಃ ।
ಕ್ಷುತ್ಶೀತೋಷ್ಣದೋಷೈಶ್ಚ ವರ್ಜಿತಂ ಶೋಕನಾಶನಮ್ ॥೨೯॥

ಮಹರ್ಷಿಗಣಸಂಬಾಧಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮನ್ವಿತಮ್ ।
ದುಷ್ಕೃವೇಶಂ ಮಹಾರಾಜ ನರೈರ್ಧರ್ಮಬಹಿಷ್ಕೃತೈಃ ॥೩೦॥

ಅದು ಪವಿತ್ರವೂ, ತಾಮಸಗುಣಗಳಿಂದ ರಹಿತವೂ, ಹಸಿವು ನೀರಡಿಕೆ, ಶೀತೋಷ್ಣ ಮೊದಲಾದ ದೋಷಗಳಿಂದ ರಹಿತವೂ, ಶೋಕನಾಶನವೂ, ಸೂರ್ಯಕಿರಣ ಸ್ಪರ್ಶ ರಹಿತವೂ ಆಗಿದ್ದಿತು. ಮಹರ್ಷಿಗಳ ಸಮೂಹದಿಂದ ನಿಬಿಡವಾಗಿ ಬ್ರಹ್ಮಕಾಂತಿಯಿಂದ ಶೋಭಿಸುತ್ತಿತ್ತು. ಎಲೈ ಮಹಾರಾಜನೇ, ಧರ್ಮಶೂನ್ಯರಾದ ಮನುಷ್ಯರು ಅಲ್ಲಿ ಪ್ರವೇಶ ಮಾಡುವುದು ಅಸಾಧ್ಯವಾಗಿದ್ದಿತು.

ಬಲಿಹೋಮಾರ್ಚಿತಂ ದಿವ್ಯಂ ಸುಸಂಮೃಷ್ಟಾನುಲೇಪನಮ್ ।
ದಿವ್ಯಪುಷ್ಪೋಪಹಾರೈಶ್ಚ ಸರ್ವತೋಽಭಿವಿರಾಜಿತಮ್ ॥೩೧॥

ವಿಶಾಲೈರಗ್ನಿಶರಣೈಃ ಸ್ರುಗ್ಭಾಂಡೈರಾಚಿತಂ ಶುಭೈಃ ।
ಮಹದ್ಭಿಸ್ತೋಯಕಲಶೈಃ ಕಠಿನೈಶ್ಚೋಪಶೋಭಿತಮ್ ॥೩೨॥

ಎಲ್ಲಕಡೆಯಲ್ಲಿಯೂ ಸಾರಿಸಿ ರಂಗೋಲಿಗಳನ್ನು ಇಟ್ಟು ಬಲಿಹೋಮಗಳಿಂದ ಪೂಜಿತವಾಗಿ ದಿವ್ಯವಾಗಿದ್ದಿತು. ದಿವ್ಯವಾದ ಪುಷ್ಪಗಳಿಂದ ಮಾಡಿದ ಪೂಜೆಗಳಿಂದ ಎಲ್ಲಕಡೆಗಳಲ್ಲಿಯೂ ಶೋಭಿಸುತ್ತಿತ್ತು. ಶುಭವಾದ ದ್ರವ್ಯಗಳಿಂದಲೂ ಮತ್ತು ಪಾತ್ರೆಗಳಿಂದಲೂ ತುಂಬಿದ ವಿಶಾಲವಾದ ಅಗ್ನಿಶಾಲೆಗಳಿಂದಲೂ, ದೊಡ್ಡದಾದ ನೀರಿನ ಕಲಶಗಳಿಂದಲೂ ಮತ್ತು ಬುಟ್ಟಿಗಳಿಂದಲೂ ಶೋಭಿಸುತ್ತಿತ್ತು.

ಶರಣ್ಯಂ ಸರ್ವಭೂತಾನಾಂ ಬ್ರಹ್ಮಘೋಷನಿನಾದಿತಮ್ ।
ದಿವ್ಯಮಾಶ್ರಯಣೀಯಂ ತಮಾಶ್ರಮಂ ಶ್ರಮನಾಶನಮ್ ॥೩೩॥

ಶ್ರಿಯಾ ಯುತಮನಿರ್ದೇಶ್ಯಂ ದೇವಚರ್ಯೋಪಶೋಭಿತಮ್ ।

ಎಲ್ಲ ಪ್ರಾಣಿಗಳಿಗೂ ಆಶ್ರಯವನ್ನು ನೀಡುವಂತಹದಾಗಿದ್ದಿತು. ವೇದಘೋಷದಿಂದ ಪ್ರತಿಧ್ವನಿಸುತ್ತಿತ್ತು. ದಿವ್ಯವಾಗಿ ಆಶ್ರಯಣೀಯವಾದ ಶ್ರಮನಾಶಕವಾದ ಆ ಆಶ್ರಮವನ್ನು ನೋಡಿದರು.

ಫಲಮೂಲಾಶನೈರ್ದಾಂತೈಶ್ಚಾರುಕೃಷ್ಣಾಜಿನಾಂಬರೈಃ ॥೩೪॥

ಸೂರ್ಯವೈಶ್ವಾನರಸಮೈಸ್ತಪಸಾ ಭಾವಿತಾತ್ಮಭಿಃ ।
ಮಹರ್ಷಿಭಿರ್ಮೋಕ್ಷಪರೈರ್ಯತಿಭಿರ್ನಿಯತೇಂದ್ರಿಯೈಃ ॥೩೫॥

ಬ್ರಹ್ಮಭೂತೈರ್ಮಹಾಭಾಗೈರುಪೇತಂ ಬ್ರಹ್ಮವಾದಿಭಿಃ ॥೩೬॥

ಕಂದಮೂಲ ಆಶನಲಾದ, ಇಂದ್ರಿಯನಿಗ್ರಹವುಳ್ಳ, ಮನೋಹರವಾದ ಕೃಷ್ಣಾಜಿನ ವಸ್ತ್ರವನ್ನು ಧರಿಸಿದ, ಅಗ್ನಿಸೂರ್ಯರಿಗೆ ಸಮಾನರಾದ, ತಪಸ್ಸಿನಿಂದ ಪರಿಶುದ್ಧವಾದ ಮನಸ್ಸುಳ್ಳ ಮುಮುಕ್ಷುಗಳಾದ ಮಹರ್ಷಿಗಳಿಂದಲೂ, ಇಂದ್ರಿಯಜಯವುಳ್ಳ ಯತಿಗಳಿಂದಲೂ, ಯಾವಾಗಲೂ ಬ್ರಹ್ಮನನ್ನೇ ಧ್ಯಾನಿಸುವ ಮಹಾನುಭಾವರಾದ ಬ್ರಹ್ಮವಾದಿಗಳಿಂದಲೂ ಅದು ಕೂಡಿದ್ದಿತು.

ಸೋಽಭ್ಯಗಚ್ಛನ್ಮಹಾತೇಜಾಸ್ತಾನೃಷೀನ್ ಪ್ರಯತಃ ಶುಚಿಃ ।
ಭ್ರಾತೃಭಿಃ ಸಹಿತೋ ಧೀಮಾನ್ ಧರ್ಮಪುತ್ರೋ ಯುಧಿಷ್ಠಿರಃ ॥೩೭॥

ಧರ್ಮಪುತ್ರನಾದ ಮಹಾತೇಜಸ್ವಿಯಾದ ಯುಧಿಷ್ಠಿರನು ತಮ್ಮಂದಿರಿಂದ ಒಡಗೂಡಿ ನಿಯಮದಿಂದ ಕೂಡಿದವನಾಗಿ ಶುಚಿಯಾಗಿ ಆ ಋಷಿಗಳನ್ನು ಸಮೀಪಿಸಿದನು.

ದಿವ್ಯಜ್ಞಾನೋಪಪನ್ನಾಸ್ತೇ ದೃಷ್ಟ್ವಾ ಪ್ರಾಪ್ತಂ ಯುಧಿಷ್ಠಿರಮ್ ।
ಅಭ್ಯಗಚ್ಛಂತ ಸುಪ್ರೀತಾಃ ಸರ್ವ ಏವ ಮಹರ್ಷಯಃ ॥೩೮॥

ದಿವ್ಯಜ್ಞಾನದಿಂದ ಕೂಡಿದ ಆ ಎಲ್ಲ ಮಹರ್ಷಿಗಳು ಅಲ್ಲಿಗೆ ಪ್ರಾಪ್ತನಾದ ಯುಧಿಷ್ಠಿರನನ್ನು ನೋಡಿ ಸಂತೋಷದಿಂದ ಅವನೆಡೆಗೆ ತಾವೇ ಬಂದರು.

ಆಶೀರ್ವಾದಾನ್ ಪ್ರಯುಂಜಾನಾಃ ಸಾಧ್ಯಾಯನಿರತಾ ಭೃಶಮ್ ।
ಪ್ರೀತಾಸ್ತೇ ತಸ್ಯ ಸತ್ಕಾರಂ ವಿಧಿನಾ ಪಾವಕೋಪಮಾಃ ।
ಉಪಾಜಹ್ರುಶ್ಚ ಸಲಿಲಂ ಪುಷ್ಪಮೂಲಫಲಂ ಶುಚ ॥೩೯॥

ಸಾದ್ಯಾಯನಿರತರಾದ, ಅಗ್ನಿಸದೃಶರಾದ ಅವರು ಅವನಿಗೆ ಒಳ್ಳೆಯ ಆಶೀರ್ವಾದಗಳನ್ನು ಮಾಡಿ ವಿಧಿಪೂರ್ವಕವಾಗಿ ಸಂತೋಷದಿಂದ ಸತ್ಕಾರವನ್ನು ಮಾಡಿದರು. ಅವನಿಗೆ ನೀರನ್ನೂ, ಶುಚಿಯಾದ ಪುಷ್ಪಫಲಗಳನ್ನೂ ಅರ್ಪಿಸಿದರು.

ಸ ತೈಃ ಪ್ರೀತ್ಯಾऽಥ ಸತ್ಕಾರಮುಪನೀತಂ ಮಹರ್ಷಿಭಿಃ ।
ಪ್ರಯತಃ ಪ್ರತಿಗೃಹ್ಯಾಥ ಧರ್ಮಪುತ್ರೋ ಯುಧಿಷ್ಠಿರಃ ॥೪೦॥

ಧರ್ಮರಾಜನಾದ ಯುಧಿಷ್ಠಿರನು ಆ ಮಹರ್ಷಿಗಳು ಪ್ರೀತಿಯಿಂದ ಮಾಡಿದ ಸತ್ಕಾರವನ್ನು ವಿನಯದಿಂದ ಸ್ವೀಕರಿಸಿದನು.

ತಂ ಶಕ್ರಸದನಪ್ರಖ್ಯಂ ದಿವ್ಯಗಂಧಂ ಮನೋರಮಮ್ ।
ಪ್ರೀತಃ ಸ್ವರ್ಗೋಪಮಂ ಪುಣ್ಯಂ ಪಾಂಡವಃ ಸಹ ಕೃಷ್ಣಯಾ ॥೪೧॥

ವಿವೇಶ ಶೋಭಯಾ ಯುಕ್ತಂ ಭ್ರಾತೃಭಿಶ್ಚ ಸಹಾನಘ ।
ಬ್ರಾಹ್ಮಣೈರ್ವೇದವೇದಾಂಗಪಾರಗೈಶ್ಚ ಸಹಸ್ರಶಃ ॥೪೨॥

ಅನಂತರ ಸಂತೋಷಗೊಂಡ ಆ ಪಾಂಡವನು ದ್ರೌಪದಿಯ ಮತ್ತು ತಮ್ಮಂದಿರ ಜೊತೆಯಲ್ಲಿ ಮತ್ತು ವೇದವೇದಾಂತ ಪಾರಂಗತರಾದ ಸಹಸ್ರಾರು ಬ್ರಾಹ್ಮಣರ ಜೊತೆಯಲ್ಲಿ ಇಂದ್ರನ ಸದನಕ್ಕೆ ಸಮಾನವಾದ ದಿವ್ಯಗಂಧದಿಂದ ಕೂಡಿದ್ದ ಸ್ವರ್ಗದಂತಿದ್ದ ಪವಿತ್ರವಾದ, ಮನೋಹರವಾದ, ಕಾಂತಿಯುಕ್ತವಾದ ಆ ಆಶ್ರಮವನ್ನು ಪ್ರವೇಶಿಸಿದನು.

ತತ್ರಾಪಶ್ಯತ ಧರ್ಮಾತ್ಮಾ ದೇವದೇವರ್ಷಿಪೂಜಿತಮ್ ।
ನರನಾರಾಯಣಸ್ಥಾನಂ ಭಾಗೀರಥ್ಯೋಪಶೋಭಿತಮ್ ॥೪೩॥

ಧರ್ಮಾತ್ಮನಾದ ಅವನು ಅಲ್ಲಿ ಭಾಗೀರಥಿಯಿಂದ ಶೋಭಿತವಾದ ದೇವತೆಗಳಿಂದಲೂ ಮತ್ತು ದೇವರ್ಷಿಗಳಿಂದ ಪೂಜಿತವಾದ ನರನಾರಾಯಣ ಸ್ಥಾನವನ್ನು ನೋಡಿದನು.

ಮಧುಸ್ರವಫಲಂ ದಿವ್ಯಂ ಬ್ರಹ್ಮರ್ಷಿಗಣಸೇವಿತಮ್ ।
ತದುಪೇತ್ಯ ಮಹಾತ್ಮಾನಸ್ತೇऽವಸನ್ ಬ್ರಾಹ್ಮಣೈಃ ಸಹ ॥೪೪॥

ಜೇನನ್ನು ಸುರಿಸುವಂತಹ ಫಲಗಳಿಂದ ಕೂಡಿದ ಬ್ರಹ್ಮರ್ಷಿಗಣಸೇವಿತವಾದ ದಿವ್ಯವಾದ ಆ ಆಶ್ರಮವನ್ನು ಆ ಮಹಾತ್ಮರಾದ ಪಾಂಡವರು ಪ್ರವೇಶಿಸಿ ಬ್ರಾಹ್ಮಣರ ಜೊತೆಯಲ್ಲಿ ಅಲ್ಲಿ ವಾಸಮಾಡಿದರು.

ಮುದಾ ಯುಕ್ತಾ ಮಹಾತ್ಮಾನೋ ರೇಮಿರೇ ತತ್ರ ತೇ ತದಾ ।
ಆಲೋಕಯಂತೋ ಮೈನಾಕಂ ನಾನಾದ್ವಿಜಗಣಾಯುತಮ್ ॥೪೫॥

ಹಿರಣ್ಯಶಿಖರಂ ಚೈವ ತಚ್ಚ ಬಿಂದುಸರಃ ಶಿವಮ್ ।
ಭಾಗೀರಥೀಂ ಸುತೀರ್ಥಂ ಚ ಶೀತಾಮಲಜಲಾಂ ಶಿವಾಮ್ ॥೪೬॥

ಸಂತೋಷದಿಂದ ಕೂಡಿದ ಆ ಮಹಾನುಭಾವರು ಅಲ್ಲಿ ಅನೇಕ ಪಕ್ಷಿಗಣಗಳಿಂದ ಕೂಡಿದ, ಸುವರ್ಣಶೃಂಗಗಳಿಂದ ಕೂಡಿದ, ಮೈನಾಕ ಪರ್ವತವನ್ನೂ, ಮಂಗಳವಾದ ಬಿಂದು ಸರೋವರವನ್ನೂ, ಶೀತ ಮತ್ತು ಸ್ವಚ್ಛ ಜಲದಿಂದ ಕೂಡಿದ ಮಂಗಳಕರವಾದ ಭಾಗೀರಥಿ ತೀರ್ಥವನ್ನೂ ನೋಡುತ್ತಾ ಸಂತೋಷಪಟ್ಟರು.

ದಿವ್ಯಪುಷ್ಪಸಮಾಕೀರ್ಣಾಂ ಮನಃಪ್ರೀತಿವಿವರ್ಧನೀಮ್ ॥೪೭॥

ವೀಕ್ಷಮಾಣಾ ಮಹಾತ್ಮಾನೋ ವಿಶಾಲಾಂ ಬದರೀಮನು ॥೪೮॥

ತಸ್ಮಿನ್ ದೇವರ್ಷಿಚರಿತೇ ದೇಶೇ ಪರಮದುರ್ಗಮೇ ।
ಭಾಗೀರಥೀಪುಣ್ಯಜಲೇ ತರ್ಪಯಾಂಚಕ್ರಿರೇ ತದಾ ॥೪೯॥

ದೇವಾನೃಷೀಂಶ್ಚ ಕೌಂತೇಯಾಃ ಪರಮಂ ಶೌಚಮಾಸ್ಥಿತಾಃ ।

ದಿವ್ಯಪುಷ್ಪಗಳಿಂದ ಕೂಡಿದಂತಹ, ಮನಸ್ಸಂತೋಷಜನಕವಾದ, ಬದರೀ ವಿಶಾಲಾ ಕ್ಷೇತ್ರವನ್ನು ಆ ಮಹಾನುಭಾವರು ನೋಡುತ್ತಾ ದೇವರ್ಷಿಗಳ ಸಂಚಾರದಿಂದ ಕೂಡಿದ ಆ ಪರಮದುರ್ಗಮವಾದ ಪುಣ್ಯದೇಶದಲ್ಲಿ ಭಾಗೀರಥಿಯ ಪವಿತ್ರವಾದ ಜಲದಿಂದ ದೇವತೆಗಳಿಗೂ ಮತ್ತು ಋಷಿಗಳಿಗೂ ಆ ಕೌಂತೇಯರು ಪರಮ ಶೌಚವನ್ನು ಹೊಂದಿದವರಾಗಿ ತರ್ಪಣವನ್ನು ನೀಡಿದರು.

ತತ್ರ ತೇ ತರ್ಪಯಂತಶ್ಚ ಜಪಂತಶ್ಚ ಕುರೂದ್ವಹಾಃ ।
ಬ್ರಾಹ್ಮಣೈಃ ಸಹಿತಾ ವೀರಾ ಹ್ಯವಸನ್ ಪುರುಷರ್ಷಭಾಃ ॥೫೦॥

ಕುರುಕುಲಶ್ರೇಷ್ಠರಾದ ವೀರರಾದ ಆ ಪುರುಷವೃಷಭರು ಹೀಗೆ ತರ್ಪಣವನ್ನು ಕೊಡುತ್ತಾ ಮತ್ತು ಜಪವನ್ನು ಮಾಡುತ್ತಾ ಅಲ್ಲಿ ಬ್ರಾಹ್ಮಣರ ಜೊತೆಯಲ್ಲಿ ವಾಸಮಾಡಿದರು.

ಕೃಷ್ಣಾಯಾಸ್ತತ್ರ ಪಶ್ಯಂತಃ ಕ್ರೀಡಿತಾನ್ಯಮರಪ್ರಭಾಃ ।
ವಿಚಿತ್ರಾಣಿ ನರವ್ಯಾಘ್ರಾ ರೇಮಿರೇ ತತ್ರ ಪಾಂಡವಾಃ ॥೫೧॥

ದೇವತೆಗಳ ಕಾಂತಿಯನ್ನು ಹೊಂದಿದ್ದ ಪುರುಷವ್ಯಾಘ್ರರಾದ ಆ ಪಾಂಡವರು ಅಲ್ಲಿದ್ರೌಪದಿಯ ವಿಲಾಸಗಳನ್ನು ನೋಡುತ್ತಾ ಸಂತೋಷಪಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಚತ್ವಾರಿಂಶದಧಿಕಶತತಮೋऽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಅಷ್ಟನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಏವಂ ಬದರ್ಯಾ ವಿಹರತ್ಸು ತೇಷು
ಕ್ವಚಿದ್ ರಹಃ ಕೃಷ್ಣಯಾ ವಾಯುಸೂನೌ ।
ಸ್ಥಿತೇ ಗರುತ್ಮಾನುರಗಂ ಜಹಾರ
ಮಹಾಹ್ವದಾದ್ ವಾಸುದೇವಾಸನಾಗ್ರ್ಯಃ ॥೨೬೯॥

ಹೀಗೆ ಪಾಂಡವರು ಬದರಿಕಾಶ್ರಮದಲ್ಲಿ ವಿಹರಿಸುತ್ತಿದ್ದಾಗ, ಒಂದುಕಡೆ ಏಕಾಂತ ಸ್ಥಳದಲ್ಲಿ ದ್ರೌಪದಿಯೊಡನೆ ಭೀಮನಿದ್ದಾಗ ಶ್ರೀಹರಿಯ ಉತ್ತಮ ಆಸನವೆನಿಸಿದ ಗರುಡ ಒಂದು ದೊಡ್ಡ ಸರೋವರದಿಂದ ಹಾವನ್ನು ಒಯ್ದ.

ತತಕ್ಷಪಾತೇನ ವಿಚಾಲಿತೇ ತು
ತಸ್ಮಿನ್ ಗಿರೌ ಕಮಲಂ ಹೈಮಮಗ್ರ್ಯಮ್ ।
ಪಪಾತ ಕೃಷ್ಣಾಭೀಮಯೋಃ ಸನ್ನಿಧಾನೇ
ಉದ್ಯದ್ಭಾನೋರ್ಮಂಡಲಾಭಂ ಸುಗಂಧಮ್ ॥೨೭೦॥

ಗರುಡನ ರೆಕ್ಕೆಗಳ ಗಾಳಿಯಿಂದ ಆ ಗಂಧಮಾದನ ಪರ್ವತ ನಡುಗುತ್ತಿದ್ದಾಗ ಬಂಗಾರದ ಶ್ರೇಷ್ಠವಾದ ಒಂದು ಕಮಲ ದ್ರೌಪದೀ ಭೀಮರ ಬಳಿಯಲ್ಲಿ ಬಿದ್ದಿತು. ಅದು ಉದಿಸುವ ಸೂರ್ಯಮಂಡಲದಂತೆ ಹೊಳೆಯುತ್ತಿತ್ತು. ಸುಗಂಧಭರಿತವಾಗಿತ್ತು.

ದೃಷ್ಟ್ವಾತಿಗಂಧಂ ವರಹೇಮಕಂಜಂ
ಕುತೂಹಲಾದ್ ದ್ರೌಪದೀ ಭೀಮಸೇನಮ್ ।
ಬಹೂನ್ಯಯಾಚತ್ ತಾದೃಶಾನ್ಯಾನುಭಾವ-
ಮವಿಷಹ್ಯಂ ಜಾನತೀ ದೇವದೈತ್ಯೈಃ ॥೨೭೧॥

ಅತಿ ಸುಗಂಧಯುಕ್ತವಾದ ಉತ್ತಮವಾದ ಆ ಬಂಗಾರದ ಕಮಲವನ್ನು ಕಂಡು ದ್ರೌಪದಿ ಕುತೂಹಲದಿಂದ ಅಂಥ ಅನೇಕ ಹೂಗಳನ್ನು ನನಗೆ ತಾ ಎಂದು ಬೇಡಿದಳು. ದೇವತೆಗಳಿಗಾಗಲಿ ದೈತ್ಯರಿಗಾಗಲಿ ಸಹಿಸಲಸಾಧ್ಯವಾದ ಬಲ ಭೀಮನದೆಂದು ಅವಳು ಬಲ್ಲವಳಾಗಿದ್ದಳು.

ತಯಾಽರ್ಥಿತಃ ಸಗದಸ್ತುಂಭಮೇನಂ ಗಿರಿಂ
ವೇಗಾದಾರುಹದ್ ವಾಯುಸೂನುಃ ।
ಪ್ರಶಸ್ಯಮಾನಃ ಸುರಸಿದ್ಧಸಂಘೈಃ ಮೃತ್ತನ್
ದೈತ್ಯಾನ್ ಸಿಂಹಶಾರ್ದೂಲರೂಪಾನ್ ॥೨೭೨॥

ಆಸೇದಿವಾಂಸ್ತತ್ರ ಹನೂಮದಾಖ್ಯಂ ನಿಜಂ
ರೂಪಂ ಪ್ರೋದ್ಯದಾದಿತ್ಯಭಾಸಮ್ ।
ಜಾನನ್ನಪ್ಯೇನಂ ಸ್ವೀಯರೂಪಂ ಸ ಭೀಮ-
ಶ್ಚಕ್ರೀಡ ಏತೇನ ಯಥಾ ಪರೇಣ ॥೨೭೩॥

ಅವಳು ಬೇಡಿದಳೆಂದು ಭೀಮ ಗದಾಪಾಣಿಯಾಗಿ ವೇಗದಿಂದ ಆ ಉನ್ನತ ಪರ್ವತವನ್ನು ಏರಿದ. ಭೀಮ ಸಿಂಹ ಹುಲಿಗಳ ರೂಪದಿಂದ ಇದಿರಾದ ದೈತ್ಯರನ್ನು ಮರ್ದಿಸುತ್ತ, ದೇವತೆಗಳಿಂದಲೂ ಸಿದ್ಧರಿಂದಲೂ ಸ್ತುತಿಸಿಕೊಳ್ಳುತ್ತ ತನ್ನದೇ ಆದ ಉದಿಸುವ ಸೂರ್ಯನಂತೆ ಹೊಳೆವ ಹನುಮಂತನೆಂಬ ಹೆಸರಿನ ಇನ್ನೊಂದು ರೂಪವನ್ನು ಸೇರಿದ. ಭೀಮ ಹನುಮಂತನನ್ನು ತನ್ನ ರೂಪವೇ ಎಂದು ತಿಳಿದಿದ್ದರೂ ಬೇರೆಯವನೆಂಬಂತೆ ಅವನೊಡನೆ ಆಟವಾಡಿದ.

★ ★ ★ ★

ನೂರ ನಲವತ್ಮೂರನೆಯ ಅಧ್ಯಾಯ

ಭೀಮನ ಸಮೀಪದಲ್ಲಿ ದ್ರೌಪದಿಯ ಮುಂದೆ ವಾಯುವಿನಿಂದ ಬೀಳಿಸಲ್ಪಟ್ಟ ಸೌಗಂಧಿಕ ಪುಷ್ಪದ ದರ್ಶನ. ಇನ್ನೂ ಅನೇಕ ಪುಷ್ಪಗಳನ್ನು ತರುವಂತೆ ಅವಳ ಪ್ರಾರ್ಥನೆ. ಅಲ್ಲಿಂದ ಹೊರಟ ಭೀಮಸೇನನಿಗೆ ಕದಳೀ ವನದಲ್ಲಿ ಹನುಮಂತನ ದರ್ಶನ ಮತ್ತು ಅವರ ಸಂವಾದ.

ವೈಶಂಪಾಯನಃ

ತತ್ರ ತೇ ಪುರುಷವ್ಯಾಘ್ರಾಃ ಪರಮಂ ಶೌಚಮಾಸ್ಥಿತಾಃ ।
ಷಡ್ರಾತ್ರಮವಸನ್ ವೀರಾ ಧನಂಜಯದಿದೃಕ್ಷವಃ ॥೧॥

ವೈಶಂಪಾಯನ– ಪುರುಷವ್ಯಾಘ್ರರಾದ ವೀರರಾದ ಆ ಪಾಂಡವರು ಪರಮ ಶೌಚವನ್ನು ಹೊಂದಿದವರಾಗಿ ಧನಂಜಯನನ್ನು ನೋಡುವ ಆಸೆಯಿಂದ ಅಲ್ಲಿ ಆರು ರಾತ್ರಿಗಳನ್ನು ಕಳೆದರು.

ತಸ್ಮಿನ್ ವಿಹರಮಾಣಾಶ್ಚ ರಮಮಾಣಾಶ್ಚ ಪಾಂಡವಾಃ ।
ಮನೋಜ್ಞೇ ಕಾನನವರೇ ಸರ್ವಭೂತಮನೋರಮೇ ॥೨॥

ಫಾದಪೈಃ ಪುಷ್ಪವಿಕಚೈಃ ಫಲಭಾರಾವನಾಮಿತೈಃ ।
ಶೋಭಿತಂ ಸರ್ವತೋ ರಮ್ಯಂ ಪುಂಸ್ಕೋಕಿಲವಿರಾಜಿತಮ್ ।
ಸ್ನಿಗ್ಧಪತ್ತೈರವಿರಳೈಃ ಶೀತಚ್ಛಾಯೈರ್ಮನೋರಮೈಃ ॥೩॥

ಆ ಮನೋಜ್ಞವಾದ ಎಲ್ಲಪ್ರಾಣಗಳಿಗೂ ಸುಖಕರವಾದ, ಹೂವು ಹಣ್ಣುಗಳಿಂದ ಬಾಗಿದ ಮರಗಳನ್ನುಳ್ಳ, ಎಲ್ಲಕಡೆಗಳಲ್ಲಿಯೂ ಕೋಕಿಲ ಧ್ವನಿಗಳಿಂದ ಶೋಭಿತವಾದ ನಿಬಿಡವಾದ ಪತ್ರಗಳಿಂದ ಶೀತಲವಾದ ಛಾಯೆಯನ್ನು ಕೊಡುವ ಮನೋಹರವಾದ ವೃಕ್ಷಗಳಿಂದ ಕೂಡಿದ ಆ ಶ್ರೇಷ್ಠವಾದ ಕಾನನದಲ್ಲಿ ಪಾಂಡವರು ವಿಹರಿಸಿದರು.

ಸರಾಂಸಿ ಚ ವಿಚಿತ್ರಾಣಿ ಪ್ರಸನ್ನಸಲಿಲಾನಿ ಚ ।
ಕಮಲೈಃ ಸೋತ್ಪಲೈಸ್ತತ್ರ ಛ್ರಾಜಮಾನಾನಿ ಸರ್ವಶಃ ॥೪॥

ಪಶ್ಯಂತಶ್ಚಾರುರೂಪಾಣಿ ರೇಮಿರೇ ತತ್ರ ಪಾಂಡವಾಃ ॥೫॥

ಅಲ್ಲಿ ಪಾಂಡವರು ಪ್ರಸನ್ನಜಲದಿಂದ ಕೂಡಿದ, ಕಮಲ ಮತ್ತು ಉತ್ಪಲಪುಷ್ಪಗಳಿಂದ ಶೋಭಿತವಾದ ಮನೋಹರವಾದ ಸರೋವರಗಳನ್ನು ಎಲ್ಲ ಕಡೆಗಳಲ್ಲಿಯೂ ನೋಡುತ್ತಾ ಸಂತೋಷಪಟ್ಟರು.

ಪುಣ್ಯಗಂಧಃ ಸುಖಿಸ್ಪರ್ಶೋ ವವೌ ತತ್ರ ಸಮೀರಣಃ ।
ಹ್ಲಾದಯನ್ ಪಾಂಡವಾನ್ ಸರ್ವಾನ್ ಸಕೃಷ್ಣಾನ್ ಸದ್ವಿಜರ್ಷಭಾನ್ ॥

ವಾಯುವು ಪುಣ್ಯಗಂಧದಿಂದ ಕೂಡಿ ಸುಖಿಸ್ಪರ್ಶವುಳ್ಳದ್ದಾಗಿ ಬ್ರಾಹ್ಮಣಶ್ರೇಷ್ಠರಿಂದ ಮತ್ತು ದ್ರೌಪದಿಯಿಂದ ಸಹಿತರಾದ ಎಲ್ಲ ಪಾಂಡವರಿಗೂ ಮುದವನ್ನು ಕೊಡುತ್ತಾ ಬೀಸುತ್ತಿತ್ತು.

ತತಃ ಪೂರ್ವೋತ್ತರೇ ವಾಯುಃ ಪ್ಲವಮಾನೋ ಯದೃಚ್ಛಯಾ ।
ಸಹಸ್ರಪತ್ರಮರ್ಕಾಭಂ ದಿವ್ಯಂ ಪದ್ಮಮುಪಾಹರತ್ ॥೭॥

ಅಲ್ಲಿ ಈಶಾನ್ಯದಿಕ್ಕಿನಲ್ಲಿ ಒಮ್ಮೆ ವಾಯುವು ಬೀಸುತ್ತಾ ಸಹಸ್ರದಳಗಳುಳ್ಳ ಸೂರ್ಯನಂತೆ ಕಂಗೊಳಿಸುವ ದಿವ್ಯವಾದ ಒಂದು ಪದ್ಮವನ್ನು ತಂದು ಹಾಕಿತು.

ತದವೈಕ್ಷತ ಪಾಂಚಾಲೀ ದಿವ್ಯಗಂಧಂ ಮನೋರಮಮ್ ।
ಅನಿಲೇನಾಹೃತಂ ಭೂಮೌ ಪತಿತಂ ಜಲಜಂ ಶುಚಿ ॥೮॥

ವಾಯುವಿನಿಂದ ತರಲ್ಪಟ್ಟು ಭೂಮಿಯ ಮೇಲೆ ಬಿದ್ದಿದ್ದ ಆ ಶುದ್ಧವಾದ ದಿವ್ಯಗಂಧದಿಂದ ಕೂಡಿದ್ದ ಮನೋಹರವಾದ ಕಮಲವನ್ನು ದ್ರೌಪದಿಯು ನೋಡಿದಳು.

ತಚ್ಚುಭಾ ಶುಭಮಾಸಾದ್ಯ ಸೌಗಂಧಿಕಮನುತ್ತಮಮ್ ।
ಅತೀವ ಮುದಿತಾ ರಾಜನ್ ಭೀಮಸೇನಮಥಾಬ್ರವೀತ್ ॥೯॥

ಎಲೈ ರಾಜನೇ, ಶುಭಳಾದ ದ್ರೌಪದಿಯು ಶ್ರೇಷ್ಠವಾದ ಆ ಸೌಗಂಧಿಕ ಪುಷ್ಪದ ಸಮೀಪಕ್ಕೆ ಬಂದು ಬಹಳ ಸಂತುಷ್ಟಳಾಗಿ ಭೀಮಸೇನನನ್ನು ಕುರಿತು ಹೀಗೆ ಹೇಳಿದಳು;

ಪಶ್ಯ ದಿವ್ಯಂ ಸುರುಚಿರಂ ಭೀಮ ಪುಷ್ಪಮನುತ್ತಮಮ್ ।
ಗಂಧಸಂಸ್ಥಾನಸಂಪನ್ನಂ ಮನಸೋ ಮಮ ನಂದನಮ್ ॥೧೦॥

ಭೀಮಸೇನನೇ, ಈ ಶ್ರೇಷ್ಠವಾದ ಮನೋಹರವಾದ ದಿವ್ಯಪುಷ್ಪವನ್ನು ನೋಡು. ಇದರ ಗಂಧವಿಶೇಷವು ನನ್ನ ಮನಸ್ಸಿಗೆ ಬಹಳ ಸಂತೋಷವನ್ನು ಕೊಡುತ್ತಿದೆ.

ಇದಂ ಚ ಧರ್ಮರಾಜಾಯ ಪ್ರದಾಸ್ಯಾಮಿ ಪರಂತಪ ।
ಹರೇದಂ ಮಮ ಕಾಮಾಯ ಕಾಮ್ಯಕೇ ಪುನರಾಶ್ರಮೇ ।
ಗೃಹ್ಯಾಪರಾಣಿ ಪುಷ್ಪಾಣಿ ಬಹೂನಿ ಪುರುಷರ್ಷಭ ॥೧೧॥

ಪರಂತಪನೇ, ನಾನು ಈ ಪುಷ್ಪವನ್ನು ಧರ್ಮರಾಜನಿಗೆ ಕೊಡುವೆನು. ಪುರುಷರ್ಷಭನೇ, ಪುನಃ ಕಾಮ್ಯಕವನದ ಆಶ್ರಮಕ್ಕೆ ತೆಗೆದುಕೊಂಡು ಹೋಗುವ ನನ್ನ ಆಸೆಯನ್ನು ಈಡೇರಿಸಲು ಇಂತಹ ಅನೇಕ ಪುಷ್ಪಗಳನ್ನು ತೆಗೆದುಕೊಂಡು ಬಾ.

ಯದಿ ತೇಽಹಂ ಪ್ರಿಯಾ ಪಾರ್ಥ ಬಹೂನೀಮಾನ್ಯುಪಾಹರ ।
ತಾನ್ಯಹಂ ನೇತುಮಿಚ್ಛಾಮಿ ಕಾಮ್ಯಕಂ ಪುನರಾಶ್ರಮಮ್ ॥೧೨॥

ಎಲೈ ಪಾರ್ಥನೇ, ನನ್ನ ಮೇಲೆ ನಿನಗೆ ಪ್ರೀತಿಯಿದ್ದರೆ ಇಂತಹ ಅನೇಕ ಪುಷ್ಪಗಳನ್ನು ತೆಗೆದುಕೊಂಡು ಬಾ. ನಾನು ಪುನಃ ಅವುಗಳನ್ನು ಕಾಮ್ಯಕವನದ ಆಶ್ರಮಕ್ಕೆ ತೆಗೆದುಕೊಂಡು ಹೋಗಲು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತ್ವಾ ಶುಭಾಪಾಂಗೀ ಭೀಮಸೇನಮನಿಂದಿತಾ ।
ಜಗಾಮ ಪುಷ್ಪಮಾದಾಯ ಧರ್ಮರಾಜಾಯ ತತ್ ತದಾ ॥೧೩॥

ವೈಶಂಪಾಯನ– ಶುಭಾಂಗಿಯೂ, ಪರಿಶುದ್ಧಳೂ ಆದ ದ್ರೌಪದಿಯು ಭೀಮಸೇನನನ್ನು ಕುರಿತು ಹೀಗೆ ಹೇಳಿ ಧರ್ಮರಾಜನಿಗೆ ಆ ಪುಷ್ಪವನ್ನು ಕೊಡಲು ಅದನ್ನು ತೆಗೆದುಕೊಂಡು ಹೋದಳು.

ಅಭಿಪ್ರಾಯಂ ತು ವಿಜ್ಞಾಯ ಮಹಿಷ್ಯಾಃ ಪುರುಷರ್ಷಭಃ ।
ಪ್ರಿಯಾಯಾಃ ಪ್ರಿಯಕಾಮಃ ಸ ಪ್ರಾಯಾದ್ ಭೀಮೋ ಮಹಾಬಲಃ ॥

ಪುರುಷರ್ಷಭನೂ, ಮಹಾಬಲನೂ ಆದ ಭೀಮಸೇನನು ತನ್ನ ರಾಣಿಯ ಅಭಿಪ್ರಾಯವನ್ನು ತಿಳಿದವನಾಗಿ ಪ್ರಿಯೆಯಾದ ಅವಳಿಗೆ ಸಂತೋಷವನ್ನು ಉಂಟುಮಾಡಲು ಅಲ್ಲಿಂದ ಹೊರಟನು.

ವಾತಂ ತಮೇವಾಭಿಮುಖೋ ಯತಸ್ತತ್ಪುಷ್ಪಮಾಗತಮ್ ।
ಆಜಿಹೀರ್ಷುರ್ಜಗಾಮಾಶು ಸ ಪುಷ್ಪಾಣ್ಯಪರಾಣ್ಯಪಿ ॥೧೫॥

ಯಾವ ದಿಕ್ಕಿನಿಂದ ವಾಯುವು ಪುಷ್ಪವನ್ನು ತಂದಿದ್ದಿತೋ, ಅದೇ ದಿಕ್ಕಿಗೆ ಅಭಿಮುಖವಾಗಿ ಇನ್ನೂ ಹೆಚ್ಚು ಪುಷ್ಪಗಳನ್ನು ತರಲು ಶೀಘ್ರವಾಗಿ ಹೊರಟನು.

ರುಕ್ಮಪೃಷ್ಠಂ ಧನುರ್ಗೃಹ್ಯ ಶರಾಂಶ್ಚಾಶೀವಿಷೋಪಮಾನ್ ।
ಮೃಗರಾಡಿವ ಸಂಕ್ರುದ್ಧಃ ಪ್ರಭಿನ್ನ ಇವ ಕುಂಜರಃ ॥೧೬॥

ಚಿನ್ನದ ಹಿಡಿಯಿರುವ ಧನುಸ್ಸನ್ನೂ, ಸರ್ಪದಂತಿರುವ ಬಾಣಗಳನ್ನೂ ತೆಗೆದುಕೊಂಡು ಕ್ರೋಧಗೊಂಡ ಸಿಂಹದಂತೆ ಮದಿಸಿದ ಆನೆಯಂತೆ ಹೊರಟನು.

ವ್ಯನದತ್ ಸ ಮಹಾನಾದಂ ಭೀಮಸೇನೋ ಮಹಾಬಲಃ ।
ದದೃಶುಃ ಸರ್ವಭೂತಾನಿ ಮಹಾಬಾಣಧನುರ್ಧರಮ್ ।
ನ ಗ್ಲಾನಿರ್ನ ಚ ವೈಕ್ಲವ್ಯಂ ನ ಭಯಂ ನ ಚ ಸಂಭ್ರಮಃ ।
ಕದಾಚಿದ್ಭವತೇ ಪಾರ್ಥಮಾತ್ಮಜಂ ಮಾತರಿಶ್ವನಃ ॥೧೬.೧॥

ಮಹಾಬಲನಾದ ಆ ಭೀಮಸೇನನು ಮಹಾನಾದವನ್ನು ಮಾಡಿದನು. ಎಲ್ಲ ಪ್ರಾಣಿಗಳೂ, ಮಹಾಬಾಣಗಳನ್ನು ಮತ್ತು ಧನುಸ್ಸನ್ನು ಹೊಂದಿದ್ದ ಅವನನ್ನು ನೋಡಿದವು. ವಾಯುದೇವನ ಪುತ್ರನಾದ ಆ ಪಾರ್ಥನಿಗೆ ಎಂದೂ ಆಯಾಸವಾಗಲೀ, ಮನೋವಿಷಾದವಾಗಲೀ, ಭಯವಾಗಲೀ, ಗಾಬರಿಯಾಗಲೀ ಹತ್ತಿರ ಸುಳಿಯುವುದಿಲ್ಲ.

ದ್ರೌಪದ್ಯಾಃ ಪ್ರಿಯಮನ್ವಿಚ್ಛನ್ ಸ ಬಾಹುಬಲಮಾಶ್ರಿತಃ ।
ವ್ಯಪೇತಭಯಸಮ್ಮೋಹಃ ಶೈಲಮಭ್ಯಪತದ್ ಬಲೀ ॥೧೭॥

ಬಲಿಷ್ಠನಾದ ಭೀಮಸೇನನು ತನ್ನ ಬಾಹುಬಲವನ್ನು ಆಶ್ರಯಿಸಿದವನಾಗಿ, ಭಯವನ್ನಾಗಲೀ, ಮೋಹವನ್ನಾಗಲೀ ಹೊಂದದೆ ದ್ರೌಪದಿಗೆ ಪ್ರಿಯವನ್ನು ಉಂಟುಮಾಡಲು ಆ ಪರ್ವತಕಾನನವನ್ನು ಪ್ರವೇಶಿಸಿದನು.

ಲತಾಗುಲ್ಮತೃಣಚ್ಛನ್ನಮ್ ಇಂದ್ರನೀಲಿಲತಳಮ್ ।
ಗಿರಿಂ ಚಚಾರಾರಿಹರಃ ಕಿನ್ನರಾಚರಿತಂ ಶುಭಮ್ ॥೧೮॥

ಶತ್ರುಸಂಹಾರಕನಾದ ಅವನು ಇಂದ್ರನೀಲದಂತಹ ಶಿಲೆಗಳಿಂದ ಕೂಡಿದ್ದ, ಲತಾಗುಲ್ಮಗಳಿಂದಲೂ ಮತ್ತು ತೃಣಗಳಿಂದಲೂ ಆಚ್ಛಾದಿತವಾದ, ಕಿನ್ನರರು ಸಂಚರಿಸುವ ಆ ಶುಭವಾದ ಪರ್ವತದಲ್ಲಿ ಸಂಚರಿಸಿದನು.

ನಾನಾವರ್ಣಧರೈಶ್ಚಿತ್ರಂ ಧಾತುದ್ರುಮಮೃಗಾಂಡಜೈಃ ।
ಸರ್ವಭೂಷಣಸಂಪೂರ್ಣಂ ಭೂಮೇರ್ಭುಜಮಿವೋಚ್ಛ್ರಿತಮ್ ॥೧೯॥

ಸರ್ವತ್ರ ರಮಣೀಯೇಷು ಗಂಧಮಾದನಸಾನುಷು ।
ಸಕೃಚ್ಚಕ್ಷುರಭಿಪ್ರಾಯಾನ್ ಹೃದಯೇನಾನುಚಿಂತಯನ್ ॥೨೦॥

ಅನೇಕ ಬಣ್ಣಗಳಿಂದ ಕೂಡಿದ ವಿಚಿತ್ರವಾದ ಧಾತುಗಳಿಂದಲೂ, ವೃಕ್ಷಗಳಿಂದಲೂ, ಮೃಗಗಳಿಂದಲೂ, ಪುಷ್ಪಗಳಿಂದಲೂ ಸರ್ವರೀತಿಯಲ್ಲಿ ಅಲಂಕೃತವಾದ, ಭೂಮಿಯ ಭುಜದಂತೆ ಉನ್ನತವಾದ ಆ ಗಂಧಮಾದನ ಪರ್ವತದ ಮನೋಹರವಾದ ಎಲ್ಲಾ ಶಿಖರಪ್ರದೇಶಗಳಲ್ಲಿ ನೆಟ್ಟದೃಷ್ಟಿಯುಳ್ಳವನಾಗಿ, ದ್ರೌಪದಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಯೇ ಸ್ಮರಿಸುತ್ತಾ ಅವನು ಸಂಚರಿಸಿದನು.

ಪುಂಸ್ಕೋಕಿಲನಿನಾದೇಷು ಷಟ್‌ಪದಾಚರಿತೇಷು ಚ ।
ಬದ್ಧಶ್ರೋತ್ರಮನಶ್ಚಕ್ಷುರ್ಜಗಾಮಾಮಿತವಿಕ್ರಮಃ ॥೨೧॥

ಗಂಡುಕೋಗಿಲೆಗಳ ನಿನಾದದಿಂದ ಕೂಡಿದ, ದುಂಬಿಗಳ ಝೇಂಕಾರದಿಂದ ಕೂಡಿದ ಆ ಕಾಡಿನಲ್ಲಿ ಅಮಿತವಿಕ್ರಮನಾದ ಅವನು ತನ್ನ ಶ್ರೋತ್ರ ಮನಸ್ಸು ಮತ್ತು ಚಕ್ಷುಸ್ಸುಗಳನ್ನು ಅವಧಾನದಿಂದ ನೆಟ್ಟು ಮುಂದೆ ಸಾಗಿದನು.

ಆಜಿಘ್ರನ್ ಸ ಮಹಾತೇಜಾಃ ಸರ್ವರ್ತುಕುಸುಮೋದ್ಭವಮ್ ।
ಗಂಧಮುದ್ಧತಮುದ್ದಾಮೋ ವನೇ ಮತ್ತ ಇವ ದ್ವಿಪಃ ॥೨೨॥

ಹೀಗೆ ಮದಗಜದಂತೆ ಮುಂದೆ ಸಾಗುತ್ತಿದ್ದ ಉದ್ದಾಮನೂ, ಮಹಾತೇಜಸ್ವಿಯೂ ಆದ ಅವನು ಎಲ್ಲ ಋತುಗಳಲ್ಲಿಯೂ ಅರಳುವ ಪುಷ್ಪಗಳಿಂದ ಉಂಟಾದ ಶ್ರೇಷ್ಠವಾದ ಗಂಧವನ್ನು ಆಘ್ರಾಣಿಸಿದನು.

ಪಿತುಃ ಸಂಸ್ಪರ್ಶಶೀತೇನ ಗಂಧಮಾದನವಾಯುನಾ ।
ಹ್ರಿಯಮಾಣಶ್ರಮಃ ಪಿತ್ರಾ ಸಂಪ್ರಹೃಷ್ಟತನೂರುಹಃ ॥೨೩॥

ಸ ಯಕ್ಷಗಂಧರ್ವಸುರಬ್ರಹ್ಮರ್ಷಿಗಣಸೇವಿತಮ್ ।
ವಿಲೋಕಯಾಮಾಸ ತದಾ ಪುಷ್ಪಹೇತೋರರಿಂದಮಃ ॥೨೪॥

ತನ್ನ ತಂದೆಯಾದ ವಾಯುವಿನ ಶೀತಲ ಸ್ಪರ್ಶದಿಂದ ಆ ಗಂಧಮಾದನ ಪರ್ವತದಲ್ಲಿ ತನ್ನ ಶ್ರಮವನ್ನು ಕಳೆದುಕೊಂಡು ರೋಮಾಂಚಗೊಂಡ ಆ ಅರಿಂದಮನಾದ ಭೀಮಸೇನನು, ಯಕ್ಷರಿಂದಲೂ, ಗಂಧರ್ವರಿಂದಲೂ, ದೇವತೆಗಳಿಂದಲೂ, ಬ್ರಹ್ಮರ್ಷಿಗಣಗಳಿಂದಲೂ ಸೇವಿತವಾದ ಆ ಪರ್ವತವನ್ನು ಪುಷ್ಪದ ಸಲುವಾಗಿ ನೋಡಿದನು.

ವಿಷಮಧದೈರಚಿತ್ಯೈರನುಲಿಪ್ತ ಇವಾಂಗುಲೈಃ ।
ವಲಿಭಿರ್ಧಾತುವಿಚ್ಛೇದೈಃ ಕಾಂಚನಾಂಜನರಾಜತೈಃ ॥೨೫॥

ಸಪಕ್ಷಮಿವ ನೃತ್ಯಂತಂ ಪಾರ್ಶ್ವಲಗ್ನೈಃ ಪಯೋಧರೈಃ ।
ಮುಕ್ತಾಹಾರೈರಿವ ಚಿತಂ ಚ್ಯುತೈಃ ಪ್ರಸ್ರವಣೋದಕೈಃ ॥೨೬॥

ಆ ಪರ್ವತವು ಅನೇಕ ಬಣ್ಣದ ಎಲೆಗಳಿಂದ ಕೂಡಿ, ಸುವರ್ಣವರ್ಣದ, ಅಂಜನವರ್ಣದ ಮತ್ತು ರಜತವರ್ಣದ ಅನೇಕ ವಿಧವಾದ ಧಾತುವಿಶೇಷಗಳಿಂದಲೂ ಮತ್ತು ಬಲಿಹಾರಗಳಿಂದಲೂ ಕೂಡಿ ಬಣ್ಣದಿಂದ ಅನುಲೇಪನಗೊಂಡಂತೆ ಇದ್ದಿತು. ಪಾರ್ಶ್ವಲಗ್ನಗಳಾದ ಮೋಡಗಳಿಂದ ಅದು ರೆಕ್ಕೆಗಳನ್ನು ಹೊಂದಿ ನರ್ತನ ಮಾಡುವಂತೆ ತೋರುತ್ತಿತ್ತು. ಮೇಲಿನಿಂದ ಹರಿಯುವ ಝರಿಗಳ ನೀರಿನಿಂದ ಅದು ಮುತ್ತಿನ ಹಾರಗಳಿಂದ ಅಲಂಕೃತವಾದಂತೆ ತೋರುತ್ತಿತ್ತು.

ಅಭಿರಾಮದರೀಕುಂಜನಿರ್ಝರೋದಕಕಂದರಮ್ ।
ಅಪ್ಸರೋನೂಪುರರವೈಃ ಪ್ರನೃತ್ತವರಬರ್ಹಿಣಮ್ ॥೨೭॥

ಮನೋಹರವಾದ ಗುಹೆಗಳು, ಲತಾಕುಂಜಗಳು, ಝರಿಗಳ ನೀರು ಮತ್ತು ಕಣಿವೆಗಳಿಂದ ಶೋಭಿತವಾಗಿದ್ದಿತು. ಅಪ್ಸರೆಯರ ನೂಪುರ ಶಬ್ದಗಳನ್ನು ಕೇಳಿ ಶ್ರೇಷ್ಠವಾದ ನವಿಲುಗಳು ನರ್ತನ ಮಾಡುತ್ತಿದ್ದವು.

ದಿಗ್ವಾರಣವಿಷಾಣಾಗ್ರೈರ್ಭಗ್ನಪ್ರಾಪಲಶಿಲಾತಳಮ್ ।
ಸ್ರಸ್ತಾಂಶುಕಮಿವಾಕ್ಷೋಭ್ಯ ನಿರ್ಮುಗ್ನಾನಿಪೃತೈರ್ದಲೈಃ ॥೨೮॥

ದಿಗ್ಗಜಗಳ ದಂತದ ತುದಿಗಳಿಂದ ಅಲ್ಲಿದ್ದ ಶಿಲಾತಲೆಗಳು ಘರ್ಷಣೆಯನ್ನು ಹೊಂದಿದ್ದವು. ನದಿಗಳಿಂದ ಹರಿಯುವ ಅಕ್ಷೋಭ್ಯವಾದ ಜಲಗಳು ಆ ಪರ್ವತದಿಂದ ಜಾರಿದ ವಸ್ತ್ರಗಳಂತೆ ತೋರುತ್ತಿದ್ದವು.

ಸಶಷ್ಪಕವಲೈಃ ಸ್ವಸ್ಥೈರದೂರಪರಿವರ್ತಿಭಿಃ ।
ಭಯಾನಭಿಜ್ಞೈರ್ಹರಿಭಿಃ ಕೌತೂಹಲನಿರೀಕ್ಷಿತಃ ॥೨೯॥

ಬಾಯಲ್ಲಿ ಎಳೆಯ ಹುಲ್ಲಿನ ಗರಿಕೆಗಳನ್ನು ಧರಿಸಿದ ಭಯವನ್ನೇ ತಿಳಿಯದ, ಸಮಾಧಾನದಿಂದ ಹತ್ತಿರದಲ್ಲೇ ಇರುವ ಜಿಂಕೆಗಳಿಂದ ಅವನು ಕುತೂಹಲದಿಂದ ನೋಡಲ್ಪಟ್ಟನು.

ಚಾಲಯಾನಃ ಸ್ವ (ಯನ್ನುರು)ವೇಗೇನ ಲತಾಜಾಲಾನ್ಯನೇಕಶಃ ।
ಆಕ್ರೀಡಮಾನೋ ಹೃಷ್ಟಾತ್ಮಾ ಶ್ರೀಮಾನ್ ವಾಯುಸುತೋ ಯಯೌ ॥

ತನ್ನ ತೊಡೆಗಳ ವೇಗದಿಂದ ಲತಾಜಾಲಗಳನ್ನು ಭೇದಿಸುತ್ತಾ ಮನಸ್ಸಿನಲ್ಲೇ ಸಂತೋಷಗೊಂಡ ಕಾಂತಿಯುಕ್ತನಾದ ವಾಯುಸುತನಾದ ಆ ಭೀಮಸೇನನು ಹೀಗೆ ಆಟವಾಡುತ್ತಾ ಮುಂದೆ ಸಾಗಿದನು.

ಪ್ರಿಯಾಮನೋರಥಂ ಕರ್ತುಮುದ್ಯತಶ್ಚಾರುಲೋಚನಃ ।
ಪ್ರಾಂಶುಃ ಕನಕವರ್ಣಾಭಃ ಸಿಂಹಸಂಹನನೋ ಯುವಾ ॥೩೧॥

ಎತ್ತರವಾದವನೂ, ಸುವರ್ಣವರ್ಣವುಳ್ಳವನೂ, ಸಿಂಹದ ಮೈಕಟ್ಟುಳ್ಳವನೂ, ಯುವಕನೂ, ಚಾರುನೇತ್ರನೂ ಆದ ಅವನು ಪ್ರಿಯೆಯಾದ ದ್ರೌಪದಿಯ ಮನೋರಥವನ್ನು ಪೂರೈಸಲು ಉದ್ಯುಕ್ತನಾಗಿದ್ದನು.

ಮತ್ತವಾರಣವಿಕ್ರಾಂತೋ ಮತ್ತವಾರಣವೇಗವಾನ್ ।
ಮತ್ತವಾರಣತಾಮ್ರಾಕ್ಷೋ ಮತ್ತವಾರಣವಾರಣಃ ॥೩೨॥

ಅವನು ಮದಿಸಿದ ಆನೆಯ ಪರಾಕ್ರಮವನ್ನು ವೇಗವನ್ನು ಹೊಂದಿದ್ದನು. ಮದಿಸಿದ ಆನೆಯಂತೆ ಕೆಂಪಾದ ಕಣ್ಣುಳ್ಳವನಾಗಿ, ಮದ್ದಾನೆಯನ್ನು ತಡೆದು ಓಡಿಸುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದನು.

ಪ್ರಿಯಪಾರ್ಶ್ವೋಪವಿಶ್ಯಾಭಿರ್ವ್ಯಾವೃತ್ತಾಭಿರ್ವಿಚೇಷ್ಟಿತೈಃ ।
ಯಕ್ಷಗಂಧರ್ವಯೋಷಾಭಿರದೃಶ್ಯಾಭಿರ್ನಿರೀಕ್ಷಿತಃ ॥೩೩॥

ಪ್ರಿಯರ ಪಕ್ಕದಲ್ಲಿ ಕುಳಿತು ಇನ್ನೊಬ್ಬರಿಗೆ ಕಾಣದಂತೆ ರಹಸ್ಯಚೇಷ್ಟೆಗಳಲ್ಲಿ ತೊಡಗಿದ್ದ ಯಕ್ಷಗಂಧರ್ವ ವನಿತೆಯರಿಂದ ಅವನು ನೋಡಲ್ಪಟ್ಟನು.

ನವಾವತಾರೋ ರೂಪಸ್ಯ ವಿಕ್ರೀಡನ್ನಿವ ಪಾಂಡವಃ ।
ಚಚಾರ ರಮಣೀಯೇಷು ಗಂಧಮಾದನಸಾನುಷು ॥೩೪॥

ಸೌಂದರ್ಯದ ಹೊಸ ಅವತಾರದಂತಿದ್ದ ಪಾಂಡವನಾದ ಭೀಮಸೇನನು ಆಟವಾಡುವವನಂತೆ ಮನೋಹರವಾದ ಗಂಧಮಾದನ ಪರ್ವತದ ತಪ್ಪಲುಗಳಲ್ಲಿ ಸಂಚರಿಸಿದನು.

ಸಂಸ್ಮರನ್ ವಿವಿಧಾನ್ ಕ್ಲೇಶಾನ್ ದುರ್ಯೋಧನಕೃತಾನ್ ಬಹೂನ್ ।
ದ್ರೌಪದ್ಯಾ ವನವಾಸಿನ್ಯಾಃ ಪ್ರಿಯಂ ಕರ್ತುಂ ಸಮುದ್ಯತಃ ॥೩೫॥

ಅವನು ದುರ್ಯೋಧನನು ಒಡ್ಡಿದ ವಿವಿಧ ಕ್ಲೇಶಗಳನ್ನು ಸ್ಮರಿಸುತ್ತಾ ವನವಾಸಿನಿಯಾದ ದ್ರೌಪದಿಗೆ ಹಿತವನ್ನು ಮಾಡಲು ಬಯಸಿದನು.

ಸೋಽಚಿಂತಯದ್ ಗತೇ ಸ್ವರ್ಗಮರ್ಜುನೇ ಮಯಿ ಚಾಗತೇ ।
ಪುಷ್ಪಹೇತೋಃ ಕಥಂ ತ್ವಾರ್ಯಃ ಕರಿಷ್ಯತಿ ಯುಧಿಷ್ಠಿರಃ ॥೩೬॥

ಒಂದುಕಡೆ ಅರ್ಜುನನು ಸ್ವರ್ಗಕ್ಕೆ ಹೋಗಿರಲು, ಇನ್ನೊಂದು ಕಡೆ ಪುಷ್ಪದ ಸಲುವಾಗಿ ನಾನು ಇಲ್ಲಿಗೆ ಬಂದಿರಲು ಪೂಜ್ಯನಾದ ಯುಧಿಷ್ಠಿರನು ಹೇಗೆ ನಿರ್ವಹಿಸುವನು ಎಂದು ಚಿಂತಿಸಿದನು.

ಸ್ನೇಹಾನ್ ನರವರೋ ನೂನಮವಿಶ್ವಾಸಾದ್ ಬಲಸ್ಯ ಚ ।
ನಕುಲಂ ಸಹದೇವಂ ಚ ನ ಮೋಕ್ಷ್ಯತಿ ಯುಧಿಷ್ಠಿರಃ ॥೩೭॥

ನರಶ್ರೇಷ್ಠನಾದ ಯುಧಿಷ್ಠಿರನು ನಕುಲಸಹದೇವರ ಮೇಲೆ ಇರುವ ಸ್ನೇಹದಿಂದಲೂ ಮತ್ತು ಅವರ ಬಲದಲ್ಲಿ ವಿಶ್ವಾಸವಿಲ್ಲದಿರುವುದರಿಂದಲೂ ಅವರನ್ನು ಬಿಟ್ಟುಕೊಡುವುದಿಲ್ಲ.

ಕಥಂ ನು ಕುಸುಮಾವಾಪ್ತಿಃ ಸ್ಯಾಚ್ಚೀಘ್ರಮಿತಿ ಚಿಂತಯನ್ ।
ಪ್ರತಸ್ಥೇ ನರಶಾರ್ದೂಲಃ ಪಕ್ಷಿರಾಡಿವ ವೇಗಿತಃ ॥೩೮॥

ಪುಷ್ಪದ ಪ್ರಾಪ್ತಿಯು ಹೇಗೆ ಶೀಘ್ರವಾಗಿ ಉಂಟಾಗುತ್ತದೆ ಎಂದು ಚಿಂತಿಸುತ್ತಾ ನರಶಾರ್ದೂಲನಾದ ಭೀಮಸೇನನು ವೇಗವುಳ್ಳ ಪಕ್ಷಿರಾಜ ಗರುಡನಂತೆ ಹೊರಟನು.

ಸಜ್ಜಮಾನಮನೋದೃಷ್ಟಿಃ ಪುಲ್ಲೇಷು ಗಿರಿಸಾನುಷು ।
ದ್ರೌಪದೀವಾಕ್ಯಪಾಥೇಯೋ ಭೀಮಃ ಶೀಘ್ರತರಂ ಯಯೌ ॥೩೯॥

ಅರಳಿನಿಂತ ಪರ್ವತ ತಪ್ಪಲುಗಳಲ್ಲಿ ತನ್ನ ಮನಸ್ಸು ಮತ್ತು ದೃಷ್ಟಿಯನ್ನು ನೆಟ್ಟವನಾಗಿ ದ್ರೌಪದಿಯ ವಚನವನ್ನೇ ಪಾಥೇಯವನ್ನಾಗಿ ಹೊಂದಿ ಭೀಮನು ವೇಗವಾಗಿ ನಡೆದನು.

ಕಂಪಯನ್ ಮೇದಿನೀಂ ಪದ್ಭ್ಯಾಂ ನಿರ್ಘಾತ ಇವ ಪರ್ವಸು ।
ತ್ರಾಸಯನ್ ಗಜಯೂಥಾನಿ ವಾತರಂಹಾ ವೃಕೋದರಃ ॥೪೦॥

ಆ ವೃಕೋದರನು ತನ್ನ ಪದಾಘಾತಗಳಿಂದ ಭೂಮಿಯನ್ನು ಪರ್ವಕಾಲದ ಸಿಡಿಲಿನಂತೆ ಕಂಪಿಸುತ್ತಾ ಗಜಸಮೂಹಗಳಿಗೆ ಭಯವನ್ನು ಉಂಟುಮಾಡುತ್ತಾ ವಾಯುವೇಗದಿಂದ ನಡೆದನು.

ಸಿಂಹವ್ಯಾಘ್ರಮೃಗಾಂಶ್ಚೈವ ಮರ್ದಯಾನೋ ಮಹಾಬಲಃ ।
ಉನ್ಮೂಲಯನ್ ಮಹಾವೃಕ್ಷಾನ್‌ಪೋಥಯಂಸ್ತರಸಾ ಬಲೀ ॥೪೦.೧॥

ಮಹಾಬಲನಾದ ಅವನು ಸಿಂಹವ್ಯಾಘ್ರಮೃಗಗಳನ್ನು ಮರ್ದಿಸುತ್ತಾ ತನ್ನ ಮಾರ್ಗದಲ್ಲಿ ಸಿಕ್ಕಿದ ಮರಗಳನ್ನು ಗುದ್ದಿ ಉರುಳಿಸುತ್ತಾ ನಡೆದನು.

ಲತಾವಲ್ಲೀಶ್ಚ ವೇಗೇನ ವಿಕರ್ಷನ್ ಪಾಂಡುನಂದನಃ ।
ಉಪರ್ಯುಪರಿ ಶೈಲಾಗ್ರಮಾರುರುಕ್ಷುರಿವ ದ್ವಿಪಃ ॥೪೧॥

ಪಾಂಡುನಂದನನು ಪರ್ವತದ ಶಿಖರವನ್ನು ಏರುವ ಒಂದು ಆನೆಯಂತೆ ತನ್ನ ವೇಗದಿಂದ, ತನ್ನ ಕಾಲುಗಳಿಗೆ ಸಿಕ್ಕಿದ ಲತಾಬಳ್ಳಿಗಳನ್ನು ಎಳೆದುಕೊಂಡು ಹೊರಟನು.

ಜಲಾವಲಂಬೋ(ವಿನರ್ದಮಾನೋ)ಽತಿಭೃಶಂ ಸವಿದ್ಯುದಿವ ತೋಯದಃ ।
ವ್ಯನದತ್ ಸುಮಹಾನಾದಂ ಭೀಮಸೇನೋ ಮಹಾಬಲಃ ॥೪೨॥

ಮಹಾಬಲನಾದ ಭೀಮಸೇನನು ಜಲಾಶ್ರಯವಾದ ಮತ್ತು ಮಿಂಚುಗಳಿಂದ ಕೂಡಿದ ಮೇಘದಂತೆ ಮಹಾನಾದವನ್ನು ಮಾಡಿದನು.

ತೇನ ಶಬ್ದೇನ ಮಹತಾ ಭೀಮಸ್ಯ ಪ್ರತಿಬೋಧಿತಾಃ ।
ಗುಹಾಃ ಸಂತತ್ಯಜುರ್ವ್ಯಾಘ್ರಾ ನಿಲಿಲ್ಯುರ್ಬಿಲವಾಸಿನಃ ॥೪೩॥

ಭೀಮಸೇನನ ಆ ದೊಡ್ಡ ಶಬ್ದದಿಂದ ಎಚ್ಚರಗೊಂಡ ವ್ಯಾಘ್ರಗಳು ತಮ್ಮ ಗುಹೆಗಳನ್ನು ತ್ಯಜಿಸಿದವು. ಬಿಲವಾಸಿಗಳಾದ ಪ್ರಾಣಿಗಳು ಅಲ್ಲಿಯೇ ಅಡಗಿಕೊಂಡವು.

ಸಮುತ್ಪೇತುಃ ಖಗಾಸ್ತ್ರಸ್ತಾ ಮೃಗಯೂಥಾನಿ ದುದ್ರುವುಃ ।
ಋಕ್ಷಾಸ್ಚೋತ್ಸಸೃಜುರ್ವೃಕ್ಷಾಂಸ್ತತ್ಯಜುರ್ಹರಯೋ ಗುಹಾಮ್ ॥೪೪॥

ವ್ಯಜೃಂಭಂತ ಮಹಾಸಿಂಹಾ ಮಹಿಷಾಶ್ಚಾವಲೋಕಯನ್ ॥೪೫॥

ಪಕ್ಷಿಗಳು ಭಯಗೊಂಡು ಆಕಾಶಕ್ಕೆ ಹಾರಿದವು. ಜಿಂಕೆಯ ಸಮೂಹಗಳು ಓಡಿಹೋದವು. ಕರಡಿಗಳು ತಮ್ಮ ಆವಾಸವೃಕ್ಷಗಳನ್ನು ತ್ಯಜಿಸಿದವು. ಸಿಂಹಗಳು ತಮ್ಮ ಗುಹೆಗಳನ್ನು ತ್ಯಜಿಸಿದವು. ಮಹಾಸಿಂಹಗಳು ಮೈಮುರಿದವು. ಕಾಡುಕೋಣಗಳು ಸುತ್ತಲೂ ನೋಡಿದವು.

ತೇನ ವಿತ್ರಾಸಿತಾ ನಾಗಾಃ ಕರೇಣುಪರಿವಾರಿತಾಃ ।
ತದ್ವನಂ ತೇ ಪರಿತ್ಯಜ್ಯ ಜಗ್ಮುರನ್ಯನ್ಮಹಾವನಮ್ ॥೪೬॥

ಭೀಮನಾದದಿಂದ ಹೆದರಿದ ಹೆಣ್ಣಾನೆಗಳಿಂದ ಪರಿವೃತವಾದ ಗಂಡಾನೆಗಳು ಆ ವನವನ್ನು ತ್ಯಜಿಸಿ ಇನ್ನೊಂದು ಮಹಾವನಕ್ಕೆ ಹೋದವು.

ವರಾಹಮೃಗಸಂಘಾಶ್ಚ ಮಹಿಷಾಶ್ಚ ವನೇಚರಾಃ ।
ವ್ಯಾಘ್ರಗೋಮಾಯುಸಂಘಾಶ್ಚ ಪ್ರಣೇದುರ್ಗವಯೈಃ ಸಹ ॥೪೭॥

ವರಾಹಮೃಗಸಮೂಹಗಳು, ಕಾಡಿನಲ್ಲಿ ಸಂಚರಿಸುವ ಕಾಡುಕೋಣಗಳು, ವ್ಯಾಘ್ರ ಮತ್ತು ನರಿಗಳ ಸಮೂಹಗಳು ಮತ್ತು ಗವಯಗಳೂ ಸಹ ಗರ್ಜಿಸಿದವು.

ರಥಾಂಗಸಾಹ್ವದಾತ್ಯೂಹಾ ಹಂಸಕಾರಂಡವಪ್ಲವಾಃ ।
ಶುಕಾಃ ಪುಂಸ್ಕೋಕಿಲಾಃ ಕ್ರೌಂಚಾ ವಿಸಂಜ್ಞಾ ಭೇಜಿರೇ ದಿಶಃ ॥೪೮॥

ರಥಾಂಗ, ಸಾಹ್ವ, ದಾತ್ಯೂಹ, ಹಂಸ, ಕಾರಂಡವ, ಪ್ಲವ, ಶುಕ, ಪುಂಸ್ಕೋಕಿಲ, ಕ್ರೌಂಚ ಮೊದಲಾದ ಪಕ್ಷಿಗಳು ಪ್ರಜ್ಞಾಹೀನಗಳಾಗಿ ಬೇರೆ ದಿಕ್ಕನ್ನು ಆಶ್ರಯಿಸಿದವು.

ತಥಾನ್ಯೇ ದರ್ಪಿತಾ ನಾಗಾಃ ಕರೇಣುಶರಪೀಡಿತಾಃ ।
ಸಿಂಹವ್ಯಾಘ್ರಾಶ್ಚ ಸಂಕ್ರುದ್ಧಾ ಭೀಮಸೇನಮಥಾದ್ರವನ್ ।
ಶಕೃನ್ಮೂತ್ರಂ ಚ ಮುಂಚಾನಾ ಭಯವಿಭ್ರಾಂತಮಾನಸಾಃ ।
ವ್ಯಾದಿತಾಸ್ಯಾ ಮಹಾರೌದ್ರಾ ವ್ಯನದನ್ ಭೀಷಣಾನ್ ರವಾನ್ ॥೪೯॥

ಅದರಂತೆ ಹೆಣ್ಣಾನೆಗಳ ಪ್ರೋತ್ಸಾಹನದಿಂದ ದರ್ಪವನ್ನು ಹೊಂದಿದ ಇನ್ನೂ ಕೆಲವು ಗಂಡಾನೆಗಳು ಮತ್ತು ಸಿಂಹವ್ಯಾಘ್ರಗಳು ಭೀಮಸೇನನ ಕಡೆಗೆ ಸಿಟ್ಟಿನಿಂದ ಓಡಿ ಬಂದವು. ಮಹಾಭಯಂಕರವಾದ ಆ ಪ್ರಾಣಿಗಳು ಮನಸ್ಸಿನಲ್ಲಿ ಭಯದಿಂದ ತುಂಬ ಮಲಮೂತ್ರಗಳ ವಿಸರ್ಜನೆಯನ್ನು ಮಾಡುತ್ತಾ ಬಾಯಿಗಳನ್ನು ತೆಗೆದು ಮಹಾಭಯಂಕರವಾಗಿ ಶಬ್ದಗಳನ್ನು ಮಾಡಿದವು.

ತತೋ ವಾಯುಸುತಃ ಕ್ರೋಧಾತ್ ಸ್ವಬಾಹುಬಲಮಾಶ್ರಿತಃ ।
ಗಜೇನಾನ್ಯಾನ್ ಗಜಾಂಶ್ಚೀಮಾನ್ ಸಿಂಹಂ ಸಿಂಹೇನ ವಾ ವಿಭುಃ ॥

ತಳಪ್ರಹಾರೈರನ್ಯಾಂಶ್ಚ ವ್ಯಹನತ್ ಪಾಂಡವೋ ಬಲೀ ॥೫೦॥

ಆಗ ಬಲಿಷ್ಠನಾದ ವಾಯುಸುತನಾದ ಭೀಮಸೇನನು ಕ್ರೋಧಗೊಂಡು ತನ್ನ ಬಾಹುಬಲವನ್ನೇ ಆಶ್ರಯಿಸಿ ಆನೆಯಿಂದ ಆನೆಗಳನ್ನೂ ಸಿಂಹದಿಂದ ಸಿಂಹಗಳನ್ನೂ ಹಸ್ತತಳಪ್ರಹಾರದಿಂದಲೇ ಬೇರೆ ಪ್ರಾಣಿಗಳನ್ನೂ ಸಂಹಾರ ಮಾಡಿದನು.

ತೇ ವಧ್ಯಮಾನಾ ಭೀಮೇನ ಸಿಂಹವ್ಯಾಘ್ರತರಕ್ಷವಃ ।
ಭಯಾದ್ ವಿಸಸೃಪುಃ ಸರ್ವೇ ಶಕೃನ್ಮೂತ್ರಂ ಸ ಸುಸ್ರುವುಃ ॥೫೨॥

ಭೀಮಸೇನನಿಂದ ಹೀಗೆ ಪ್ರಹಾರಕ್ಕೆ ಒಳಗಾದ ಸಿಂಹ, ವ್ಯಾಘ್ರ, ಚಿರತೆ ಮೊದಲಾದ ಪ್ರಾಣಿಗಳು ಭಯದಿಂದ ಸಂಚರಿಸಿದವು ಮತ್ತು ಮಲಮೂತ್ರಗಳನ್ನು ವಿಸರ್ಜಿಸಿದವು.

ಪ್ರವಿವೇಶ ತತಃ ಕ್ಷಿಪ್ರಂ ತಾನಪಾಸ್ಯ ಮಹಾಬಲಃ ।
ವನಂ ಪಾಂಡುಸುತಃ ಶ್ರೀಮಾನ್ ಶಬ್ದೇನಾಪೂರಯನ್ ದಿಶಃ ॥೫೩॥

ಮಹಾಬಲನಾದ ಆ ಪಾಂಡುಸುತನು ಆ ಮೃಗಗಳನ್ನು ಅಲ್ಲಿಯೇ ಬಿಟ್ಟು ತನ್ನ ಸಿಂಹನಾದಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬುತ್ತಾ ಇನ್ನೊಂದು ವನವನ್ನು ಪ್ರವೇಶಿಸಿದನು.

ಅಥಾಪಶ್ಯನ್ಮಹಾಬಾಹುರ್ಗಂಧಮಾದನಸಾನುಷು ।
ಸುರಮ್ಯಂ ಕದಳೀಷಂಡಂ ಬಹುಯೋಜನನಿಸ್ಥಿತಮ್ ॥೫೪॥

ಅನಂತರ ಆ ಮಹಾಬಾಹುವು ಗಂಧಮಾದನಪರ್ವತದ ಇಳಿಜಾರು ಪ್ರದೇಶಗಳಲ್ಲಿ ಅತ್ಯಂತ ಮನೋಹರವಾದ ಮತ್ತು ಅನೇಕ ಯೋಜನ ವಿಸ್ತಾರವದ ಕದಳೀ ವನವನ್ನು ನೋಡಿದನು.

ತಮಭ್ಯಾಗಚ್ಛದ್ ವೇಗೇನ ಕ್ಷೋಭಯಿಷ್ಯನ್ ಮಹಾಬಲಃ ।
ಮಹಾಗಜ ಇವಾಸ್ಫಾಲೀ ಪ್ರಭಂಜನ್ ವಿವಿಧಾನ್ ದ್ರುಮಾನ್ ॥೫೫॥

ಮಹಾಬಲನಾದ ಅವನು ಮದವನ್ನು ಸುರಿಸುವ ಮಹಾಗಜದಂತೆ ಅನೇಕ ಮರಗಳನ್ನು ಮುರಿಯುತ್ತಾ ಆ ವನವನ್ನು ಅಲ್ಲೋಲಕಲ್ಲೋಲ ಮಾಡುತ್ತಾ ಆ ಕದಳೀ ವನದ ಕಡೆಗೆ ಬಂದನು.

ಉತ್ಪಾಟ್ಯ ಕದಲೀಸ್ತಂಭಾನ್ ಬಹುತಾಳಸಮುಚ್ಛ್ರಯಾನ್ ।
ಚಿಕ್ಷೇಪ ತರಸಾ ಭೀಮಃ ಸಮಂತಾದ್ ಬಲಿನಾಂ ವರಃ ॥೫೬॥

ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮಸೇನನು ಅನೇಕ ತಾಳವೃಕ್ಷಗಳಷ್ಟು ಎತ್ತರವಾಗಿದ್ದ ಕದಲೀಸ್ತಂಭಗಳನ್ನು ಶೀಘ್ರವಾಗಿ ಕಿತ್ತು ಎಲ್ಲ ದಿಕ್ಕುಗಳಲ್ಲೂ ಎಸೆದನು.

ಮಹಾಂತಮಕರೋತ್ ತತ್ರ ಕುರೂಣಾಮೃಷಭೋ ಬಲೀ ।
ವಿಮರ್ದಂ ಸುಮಹಾತೇಜಾ ನೃಸಿಂಹ ಇವ ದರ್ಪಿತಃ ॥೫೭॥

ಕುರುಶ್ರೇಷ್ಠನಾದ, ಬಲಿಷ್ಠನಾದ ಅವನು ದರ್ಪದಿಂದಲೂ, ಮಹಾತೇಜಸ್ಸಿನಿಂದಲೂ ಕೂಡಿದವನಾಗಿ ನರಸಿಂಹನಂತೆ ಆ ವನದಲ್ಲಿ ದೊಡ್ಡ ವಿಮರ್ದವನ್ನು ಮಾಡಿದನು.

ತತಃ ಸಂನ್ಯಪತಂಸ್ತತ್ರ ಸುಹೂನಿ ಸುಮಹಾಂತಿ ಚ ।
ರುರುವಾನಭಸಿಂಹಾಂಶ್ಚ ಮಹಿಷಾಂಶ್ಚ ಜಲಾಶ್ರಯಾಃ ॥೫೮॥

ಆಗ ಅನೇಕ ಬೃಹದ್ಗಾತ್ರದ ರುರು, ಗಜ, ಸಿಂಹಗಳು ನೀರನ್ನು ಆಶ್ರಯಿಸಿಕೊಂಡಿದ್ದ ಮಹಿಷಗಳು ಅಲ್ಲಿನೆಲದ ಮೇಲೆ ಉರುಳಿದವು.

ಪ್ರವಿವೇಶ ತತಃ ಕ್ಷಿಪ್ರಂ ತಾನಪಾಸ್ಯ ಮಹಾಬಲಃ ।
ವನಂ ಪಾಂಡುಸುತಃ ಶ್ರೀಮಾನ್ ನಾದೇನಾಪೂರಯನ್ ದಿಶಃ ॥೫೯॥

ಮಹಾಬಲನಾದ ಪಾಂಡುಸುತನಾದ, ಕಾಂತಿಯುಕ್ತನಾದ ಭೀಮಸೇನನು ಆ ಪ್ರಾಣಿಗಳನ್ನು ಅಲ್ಲಿಯೇ ಬಿಟ್ಟು ತನ್ನ ನಾದದಿಂದ ಎಲ್ಲ ದಿಕ್ಕುಗಳನ್ನೂ ತುಂಬುತ್ತಾ ಮುಂದೆ ಇನ್ನೊಂದು ವನವನ್ನು ಪ್ರವೇಶಿಸಿದನು.

ತೇನ ಶಬ್ದೇನ ಚೈವಾಥ ಭೀಮಸೇನರವೇಣ ಚ ।
ವಾನಾಂತರಗತಾಶ್ಚಾಪಿ ವಿತ್ರೇಸುರ್ಮೃಗಪಕ್ಷಿಣಃ ॥೬೦॥

ಭೀಮಸೇನನ ನಾದದಿಂದಲೂ ಮತ್ತು ಬೇರೆ ಪ್ರಾಣಿಗಳ ಭಯಮೂಲವಾದ ಗರ್ಜನದಿಂದಲೂ ಸಹ ಬೇರೆ ವನದಲ್ಲಿದ್ದ ಮೃಗಪಕ್ಷಿಗಳೆಲ್ಲವೂ ಹೆದರಿ ಹೋದವು.

ತಂ ಶಬ್ದಂ ಸಹಸಾ ಶ್ರುತ್ವಾ ಮೃಗಪಕ್ಷಸಮೀರಿತಮ್ ।
ಜಲಾರ್ದ್ರಪಕ್ಷಾ ವಿಹಗಾಃ ಸಮುತ್ಪೇತುಃ ಸಹಸ್ರಶಃ ॥೬೧॥

ಮೃಗಗಳೂ, ಪಕ್ಷಿಗಳೂ ಉಂಟುಮಾಡಿದ ಆ ಆರ್ತನಾದವನ್ನು ಇದ್ದಕ್ಕಿದ್ದಂತೆಯೇ ಕೇಳಿದ ಜಲಪಕ್ಷಿಗಳು ಒದ್ದೆಯಾದ ತಮ್ಮ ರೆಕ್ಕೆಗಳಿಂದಲೇ ಸಾವಿರ ಸಂಖ್ಯೆಯಲ್ಲಿ ಹಾರಿ ಹೋದವು.

ತಾನೌದಕಾನ್ ಪಕ್ಷಿಗಣಾನ್ ನಿರೀಕ್ಷ್ಯ ಭರತರ್ಷಭಃ ।
ತಾನೇವಾನುಸರನ್ ರಮ್ಯಂ ದದರ್ಶ ಸುಮಹತ್ಸರಃ ॥೬೨॥

ಆ ಭರತರ್ಷಭನು ಆ ಜಲಪಕ್ಷಿಗಳನ್ನು ನಿರೀಕ್ಷಿಸಿ ಅವುಗಳನ್ನೇ ಅನುಸರಿಸಿಕೊಂಡು ಹೋಗಿ ದೊಡ್ಡ ಸರೋವರವನ್ನು ನೋಡಿದನು.

ಕಾಂಚನೈಃ ಕದಲೀಷಂಡೈರ್ಮಂದಮಾರುತಕಂಪಿತೈಃ ।
ವೀಜ್ಯಮಾನಮಿವಾಕ್ಷೋಭ್ಯಂ ತೀರಾತ್ತೀರವಿಸರ್ಪಿಭಿಃ ॥೬೩॥

ಮಂದಮಾರುತದಿಂದ ತಂಪಿತವಾದ ಒಂದು ತೀರದಿಂದ ಇನ್ನೊಂದು ತೀರದ ಕಡೆಗೆ ಬಾಗುವ ಸುವರ್ಣಮಯವಾದ ಕದಲೀಸ್ತಂಭಗಳಿಂದ ಗಾಳಿಯನ್ನು ಬೀಸಿದಂತೆ ತೋರುತ್ತಿರುವ ಅಕ್ಷೋಭ್ಯವಾದ ಆ ಸರೋವರವನ್ನು ನೋಡಿದನು.

ತತ್ಸರೋಽಥಾವತೀರ್ಯೈವ ಪ್ರಭೂತನಳಿನೋತ್ಪಲಮ್ ।
ಮಹಾಗಜ ಇವೋದ್ದಾಮಶ್ಚಿಕ್ರೀಡ ಬಲವದ್ ಬಲೀ ॥೬೪॥

ಅನೇಕ ಕಮಲಗಳು ಮತ್ತು ನೈದಿಲೆಗಳು ಇದ್ದ ಆ ಸರೋವರಕ್ಕೆ ಬಲಿಷ್ಠನಾದ ಆ ಭೀಮಸೇನನು ಇಳಿದು ಶ್ರೇಷ್ಠನಾದ ಮಹಾಗಜದಂತೆ ಆಟವಾಡಿದನು.

ವಿಕ್ರೀಡ್ಯ ತಸ್ಮಿನ್ ಸುಚಿರಮುತ್ತತಾರಾಮಿತದ್ಯುತಿಃ ।
ಕ್ಷೋಭಯನ್ ಸಲಿಲಂ ಭೀಮಃ ಪ್ರಭಿನ್ನ ಇವ ವಾರಣಃ ॥೬೫॥

ಅಮಿತದ್ಯುತಿಯಾದ ಆ ಭೀಮಸೇನನು ಬಹಳ ಸಮಯದವರೆಗೆ ಆ ಸರೋವರದಲ್ಲಿ ಆಡಿ ಮದ್ದಾನೆಯಂತೆ ನೀರನ್ನು ಕ್ಷೋಭೆಗೊಳಿಸುತ್ತಾ ನೀರಿನಿಂದ ಮೇಲೆದ್ದನು.

ತತೋ ಜಗಾಹೇ ವೇಗೇನ ತದ್ವನಂ ಬಹುಪಾದಪಮ್ ।
ದಧ್ಮೌ ಚ ಶಂಖಂ ಸ್ವನವತ್ ಸರ್ವಪ್ರಾಣೇನ ಪಾಂಡವಃ ॥೬೬॥

ಆಸ್ಫೋಟಯಚ್ಚ ಬಲವಾನ್ ಭೀಮಃ ಸಂನಾದಯನ್ ದಿಶಃ ।

ಅನಂತರ ತನ್ನ ಎಲ್ಲಾ ಪ್ರಾಣಬಲದಿಂದ ಶಂಖವನ್ನು ಊದುತ್ತಾ ಆ ಪಾಂಡವನು ಅನೇಕ ವೃಕ್ಷಗಳಿಂದ ಆ ವನವನ್ನು ಪ್ರವೇಶಿಸಿದನು. ಬಲಿಷ್ಠನಾದ ಭೀಮನು ತನ್ನ ಭುಜಗಳನ್ನು ತಟ್ಟಿ ಆ ನಾದದಿಂದ ಎಲ್ಲ ದಿಕ್ಕುಗಳನ್ನೂ ತುಂಬಿದನು.

ತಸ್ಯ ಶಂಖಸ್ಯ ಶಬ್ದೇನ ಭೀಮಸೇನವರೇಣ ಚ ।
ಬಾಹುಶಬ್ದೇನ ಚೋಗ್ರೇಣ ನಂದತೀವ ಗಿರೇರ್ಗುಹಾಃ ॥೬೭॥

ಅವನ ಶಂಖಧ್ವನಿಯಿಂದಲೂ ಮತ್ತು ಗರ್ಜನಗಳಿಂದಲೂ ಮತ್ತು ಭಯಂಕರವಾದ ಭುಜದ ತಟ್ಟುವಿಕೆಯಿಂದಲೂ ಆ ಪರ್ವತದ ಗುಹೆಗಳು ಗರ್ಜಿಸುವಂತೆ ತೋರುತ್ತಿದ್ದವು.

ತತಃ ಶಂಖಿಸ್ವನಂ ಶ್ರುತ್ವಾ ನರ್ದಿತಂ ಚ ಮುಹುರ್ಮುಹುಃ
ವೃಕ್ಷಾಣಾಂ ಭಜ್ಯಮಾನಾನಾಂ ಶಬ್ದಂ ಶ್ರುತ್ವಾ ತದಾ ಗಿರೌ ।
ಗಂಧಮಾದನಪಾರ್ಶ್ವಸ್ಥೋ ರಾಮಸ್ಯಾಭಿಮತಃ ಸದಾ ।
ಹನೂಮಾನ್ನಾಮ ಸ ಕಪಿರ್ಲಾಂಗೂಲಮಧುನೋತ್ತತಃ ।

ಆಗ ಆ ಶಂಖಿಸ್ವನವನ್ನು, ಮತ್ತೆ ಮತ್ತೆ ಉಂಟಾಗುತ್ತಿದ್ದ ಗರ್ಜನೆಯನ್ನು, ಮುರಿಯುತ್ತಿರುವ ವೃಕ್ಷಗಳ ಶಬ್ದವನ್ನು ಕೇಳಿ ಗಂಧಮಾದನ ಪರ್ವತದ ಪಾರ್ಶ್ವದಲ್ಲಿದ್ದ ರಾಮನಿಗೆ ಅಭಿಮತವಾದ ಮತ್ತು ಸ್ನೇಹಿತನಾದ ಹನುಮಾನ್ ಎಂಬ ಕಪಿಯು ತನ್ನ ಬಾಲವನ್ನು ಅಲ್ಲಾಡಿಸಿದನು.

ತಸ್ಯ ದೋಧೂಯಮಾನಸ್ಯ ಲಾಂಗೂಲಂ ಲೀಲಯಾ ಮುಹುಃ ।
ತೇನ ಲಾಂಗೂಲಶಬ್ದೇನ ಸ್ವನಂತೀವ ದಿಶೋ ದಶ ।
ತತಃ ಪೃಥ್ವೀ ಚ ಶೈಲಾಶ್ಚ ಪ್ರಕಂಪಿತಮಿವಾಭವತ್ ॥

ಅವನು ತನ್ನ ಬಾಲವನ್ನು ಹಾಗೆ ಲೀಲೆಯಿಂದ ಅಲ್ಲಾಡಿಸುತ್ತಿರಲು ಆ ಶಬ್ದದಿಂದ ಹತ್ತು ದಿಕ್ಕುಗಳು ಪ್ರತಿಧ್ವನಿಸುವಂತೆ ತೋರಿದವು. ಮತ್ತು ಭೂಮಿಯು ಮತ್ತು ಪರ್ವತಗಳು ಅಲುಗಾಡುವಂತೆ ತೋರಿದವು.

ತಂ ವಜ್ರನಿಷ್ಪೇಷಸಮಮಾಸ್ಫೋಟಮಹಾರವಮ್ ।
ಶ್ರುತ್ವಾ ಶೈಲಗುಹಾಸುಪ್ತೈಃ ಸಿಂಹೈರ್ಮುಕ್ತೋ ಮಹಾಸ್ವನಃ ॥೬೮॥

ವಜ್ರನಿರ್ಘಾತಕ್ಕೆ ಸಮನಾದ ಭುಜಶಬ್ದಗಳನ್ನು ಮತ್ತು ಗರ್ಜನೆಗಳನ್ನು ಕೇಳಿದ ಪರ್ವತದ ಗುಹೆಗಳಲ್ಲಿ ಮಲಗಿದ ಸಿಂಹಗಳು ತಾವೂ ದೊಡ್ಡ ಪ್ರತಿಗರ್ಜನೆಯನ್ನು ಮಾಡಿದವು.

ಸಿಂಹನಾದಭಯತ್ರಸ್ತೈಃ ಕುಂಜರೈರಪಿ ಭಾರತ ।
ಮುಕ್ತೋ ವಿರಾವಃ ಸುಮಹಾನ್ ಪರ್ವತೋ ಯೇನ ಪೂರಿತಃ ॥೬೯॥

ಎಲೈ ಭಾರತನೇ, ಈ ಸಿಂಹಗರ್ಜನೆಗಳಿಂದ ಉಂಟಾದ ಭಯದಿಂದ ಆನೆಗಳು ಗೀಳಿಟ್ಟವು. ಆ ದೊಡ್ಡ ಪರ್ವತವೆಲ್ಲವೂ ಆನೆಗಳ ಬೃಮಣ ಸ್ವರದಿಂದ ತುಂಬಿಹೋಯಿತು.

ತಂ ತು ನಾದಂ ತತಃ ಶ್ರುತ್ವಾ ಮುಕ್ತಂ ವಾನರಪುಂಗವಃ ।
ಪ್ರಾಜೃಂಭತ ಮಹಾಕಾಯೋ ಹನೂಮಾನ್ನಾಮ ವಾನರಃ ॥೭೦॥

ಈ ಹೊರಹೊಮ್ಮಿದ ಗರ್ಜನೆಗಳನ್ನು ಕೇಳಿದ ಹನುಮಂತನೆಂಬ ಮಹಾಕಾಯನಾದ ಕಪಿಶ್ರೇಷ್ಠನು ಮೈಮುರಿದನು.

ದಿವಂಗಮಂ ರುರೋಧಾಥ ಮಾರ್ಗಂ ಭೀಮಸ್ಯ ಕಾರಣಾತ್ ।
ಅನೇನ ಹಿ ಪಥಾ ಮಾ ವೈ ಗಚ್ಛೇದಿತಿ ವಿಚಾರ್ಯ ಸಃ ।
ಆಸ್ತ ವಿಕಾಯನೇ ಮಾರ್ಗೇ ಕದಲೀಷಂಡಮಂಡಿತೇ ॥
ಭ್ರಾತುರ್ಭೀಮಸ್ಯ ರಕ್ಷಾರ್ಥಂ ತಂ ಮಾರ್ಗಮವರುಧ್ಯ ವೈ ।
ಮಾತ್ರ ಪ್ರಾಪ್ಸ್ಯತಿ ಶಾಪಂ ವಾ ಧರ್ಷಣಾಂ ವೇತಿ ಪಾಂಡವಃ ।

ಹನುಮಂತನು ಭೀಮನು ಈ ಮಾರ್ಗದಿಂದ ಮುಂದೆ ಹೋಗಬಾರದು ಎಂದು ವಿಚಾರ ಮಾಡಿ ತಮ್ಮನಾದ ಭೀಮನ ರಕ್ಷಣೆಗೋಸ್ಕರ ಮಾರ್ಗವನ್ನು ತಡೆದು ಕದಲೀಷಂಡದ ಮಧ್ಯದಲ್ಲಿ ಒಬ್ಬರೇ ನಡೆದು ಹೋಗುವ ಹಾದಿಯನ್ನು (ಕಾಲುದಾರಿಯನ್ನು) ತಡೆದನು. ಭೀಮನಿಗೆ ಇಲ್ಲಿಯಾವ ಶಾಪವಾಗಲೀ ಅಥವಾ ಅವಮಾನವಾಗಲೀ ಉಂಟಾಗದಿರಲಿ ಎಂದು ಅವನು ದಾರಿಯನ್ನು ತಡೆದನು.

ಕದಲೀಷಂಡಮಧ್ಯಸ್ಥೋ ಹ್ಯೇವಂ ಸಂಚಿಂತ್ಯ ವಾನರಃ ।
ಭ್ರಾತರಂ ಭೀಮಸೇನಂ ತು ವಿಜ್ಞಾಯ ಹನುಮಾನ್ ಕಪಿಃ ॥೭೧॥

ಜೃಂಭಮಾಣಃ ಸುವಿಪುಲಂ ಶಕ್ರಧ್ವಜಮಿವೋಚ್ಛ್ರಿತಮ್ ।
ಆಸ್ಫೋಟಯಚ್ಚ ಲಾಂಗೂಲಮಿಂದ್ರಾಶನಸಮಸ್ವನಮ್ ॥೭೨॥

ಕದಲೀಷಂಡಮಧ್ಯದಲ್ಲಿದ್ದ ಕಪಿಯಾದ ಹನುಮಂತನು ತನ್ನ ತಮ್ಮನಾದ ಭೀಮಸೇನನನ್ನು ತಿಳಿದು ಈ ರೀತಿಯಲ್ಲಿ ವಿಚಾರವನ್ನು ಮಾಡಿ ತನ್ನ ಮೈಯನ್ನು ಮುರಿಯುತ್ತಾ ಚಕ್ರಧ್ವಜದಂತೆ ಎತ್ತರವಾದ ತನ್ನ ಬಾಲವನ್ನು ಇಂದ್ರಾಯುಧವಾದ ವಜ್ರಕ್ಕೆ ಸಮಾನವಾದ ಕಠೋರ ಶಬ್ದವನ್ನು ಮಾಡುವಂತೆ ನೆಲಕ್ಕೆ ಅಪ್ಪಳಿಸಿದನು.

ತಸ್ಯ ಲಾಂಗೂಲನಿನದಂ ಪರ್ವತಃ ಸುಗುಹಾಮುಖೈಃ ।
ಹುಂಕಾರಮಿವ ಗೌರ್ನರ್ದನ್ನುತ್ಸರ್ಜ ಸಮಂತತಃ ॥೭೩॥

ಆ ಬಾಲದ ಶಬ್ದವನ್ನು ಪರ್ವತವು ವೃಷಭದ ಉದ್ಗಾರದಂತೆ ತನ್ನ ಗುಹಾಮುಖಗಳಿಂದ ಎಲ್ಲ ಕಡೆಯಲ್ಲಿಯೂ ಹೊರಚೆಲ್ಲಿತು.

ಸ ಲಾಂಗೂಲರವಸ್ಯ ಮತ್ತವಾರಣನಿಸ್ವನಮ್ ।
ಆಂತರ್ಧಾಯ ವಿಚಿತ್ರೇಷು ಚಚಾರ ಗಿರಿಸಾನುಷು ॥೭೪॥

ಮದಿಸಿದ ಆನೆಯ ಗರ್ಜನೆಯಂತಿದ್ದ ಆ ಲಾಂಗೂಲಶಬ್ದವು ಆ ವಿಚಿತ್ರವಾದ ಪರ್ವತದ ತಪ್ಪಲುಗಳಲ್ಲಿ ಎಲ್ಲ ಕಡೆಯಲ್ಲಿಯೂ ಸಂಚರಿಸಿತು.

ತಸ್ಯ ಶ್ರುತ್ವಾ ತು ನಿನದಂ ಮಹಾಮೇಘರವಸ್ವನಮ್ ।
ಪ್ರತಿನೇದುರ್ಗಜಾಃ ಸಿಂಹಾ ವಿತ್ರೇಸುಶ್ಚ ಮೃಗದ್ವಿಜಾಃ ॥೭೪.೫॥

ಸ ಭೀಮಸೇನಸ್ತಚ್ಛ್ರುತ್ವಾ ಸಂಪ್ರಹೃಷ್ಟತನೂರುಹಃ ।
ಶಬ್ದಪ್ರಭವಮನ್ವಿಚ್ಛಂಶ್ಚಚಾರ ಕದಳೀವನಮ್ ॥೭೫॥

ಮಹಾಮೇಘ ಗರ್ಜನೆಯಂತಿದ್ದ ಆ ನಾದವನ್ನು ಕೇಳಿ ಆನೆಗಳು ಮತ್ತು ಸಿಂಹಗಳು ಪ್ರತಿಯಾಗಿ ಗರ್ಜಿಸಿದುವು. ಜಿಂಕೆಗಳು ಮತ್ತು ಪಕ್ಷಿಗಳು ಹೆದರಿ ಹೋದವು. ಭೀಮಸೇನನಾದರೂ ಆ ಶಬ್ದವನ್ನು ಕೇಳಿ ರೋಮಾಂಚಿತನಾಗಿ ಶಬ್ದದ ಉತ್ಪತ್ತಿ ಸ್ಥಾನವನ್ನು ಹುಡುಕುತ್ತಾ ಕದಳೀ ವನದಲ್ಲಿ ಸಂಚರಿಸಿದನು.

ಲಾಂಗೂಲಾಸ್ಫೋಟಶಬ್ದಾಚ್ಚ ಚಲಿತಃ ಸ ಮಹಾಗಿರಿಃ ।
ವಿಘೂರ್ಣಮಾನಃ ಸಹಸಾ ಸಮಂತಾಚ್ಚ ವ್ಯಶೀರ್ಯತ ॥೭೬॥

ಆ ಲಾಂಗೂಲಶಬ್ದದಿಂದ ಆ ಪರ್ವತವು ಕಂಪಿಸಿ ಇದ್ದಕ್ಕಿದ್ದಂತೆಯೇ ಎಲ್ಲ ಕಡೆಯಲ್ಲಿಯೂ ಬಿರಿಯಿತು.

ಕದಲೀವನಮಧ್ಯಸ್ಥವಿಪಿನೇ ಸ ಶಿಲಾತಳೇ ।
ದದರ್ಶ ಸುಮಹಾಬಾಹುರ್ವಾನರಾಧಿಪತಿಂ ತದಾ ॥೭೭॥

ಆಗ ಮಹಾಬಾಹುವಾದ ಭೀಮಸೇನನು ಕದಳೀವನದ ಮಧ್ಯದಲ್ಲಿ ಒಂದು ಎತ್ತರವಾದ ಶಿಲಾತಳದಲ್ಲಿ ಕುಳಿತಿದ್ದ ವಾನರಾಧಿಪತಿಯಾದ ಹನುಮಂತನನ್ನು ನೋಡಿದನು.

ವಿದ್ಯುತ್ಪಾತನಿನದಂ ವಿದ್ಯುತ್ಪಾತಚಂಚಲಮ್ ॥೭೮॥

ಬಾಹುಸ್ಪಿಕವಿನ್ಯಸ್ತಪೀನಹ್ರಸ್ವಸ್ಥಿರೋಧರಮ್ ।
ಸ್ಕಂಧಭೂಯಿಷ್ಠಕಾಯತ್ವಾತ್ ತನುಮಧ್ಯಕಟೀತಟಮ್ ॥೭೯॥

ವಿದ್ಯುತ್ತಿನ ಪ್ರಹಾರದಂತೆ ನಾದವುಳ್ಳ, ವಿದ್ಯುತ್ತಿನಂತೆ ಚಂಚಲವಾದ, ಕಟ್ಟದ ಬಾಹುಗಳ ಮೇಲೆ ಇರಿಸಲ್ಪಟ್ಟ ವೃತ್ತವಾದ ಮತ್ತು ಹ್ರಸ್ವವಾದ ಕತ್ತುಳ್ಳ, ಬಲಿಷ್ಠವಾದ ಭುಜಗಳಿಂದ ಕೂಡಿದ ಕಾರಣದಿಂದ ಅಲ್ಪವಾದ ಉದರ ಮತ್ತು ಕಟಪ್ರದೇಶವುಳ್ಳ, ಹನುಮಂತನನ್ನು ನೋಡಿದನು.

ಕಿಂಚಿಚ್ಚಾಭುಗ್ನಪೀರ್ಷೇಣ ದೀರ್ಘರೋಮಾಂಚಿತೇನ ಚ ।
ಲಾಂಗೂಲೇನೋರ್ದ್ವಗತಿನಾ ಧ್ವಜೇನೇವ ವಿರಾಜಿತಮ್ ॥೮೦॥

ಹ್ರಸ್ವೌಷ್ಠಂ ತಾಮ್ರಜಿಹ್ವಾಸ್ಯಂ ರಕ್ತಕರ್ಣಂ ಚಲದ್ಭ್ರುವಮ್ ।
ಅಪಶ್ಯದ್ ವದನಂ ತಸ್ಯ ರಶ್ಮಿವಂತಮಿವೋಡುಪಮ್ ॥೮೧॥

ತಗ್ಗಿಸಿದ ತಲೆಯನ್ನು ಉಳ್ಳವನಾಗಿದ್ದಂತಹ, ಉದ್ದವಾದ ರೋಮಗಳಿಂದ ಕೂಡಿದಂತಹ ಮೇಲ್ಮುಖವಾಗಿ ನಿಂತ ಇಂದ್ರಧ್ವಜದಂತೆ ಶೋಭಿಸುವ ಬಾಲದಿಂದ ವಿರಾಜಿತನಾದಂತಹ, ಸಣ್ಣ ತುಟಿಗಳನ್ನು ಉಳ್ಳಂತಹ, ಕೆಂಪಾದ ನಾಲಿಗೆ, ಮುಖ ಮತ್ತು ಕರ್ಣಗಳನ್ನು ಉಳ್ಳಂತಹ, ಚಲಿಸುವ ಹುಬ್ಬುಗಳನ್ನು ಉಳ್ಳಂತಹ ಮತ್ತು ಕಿರಣಗಳಿಂದ ಕೂಡಿದ ಚಂದ್ರನಂತೆ ಶೋಭಿಸುವ ಮುಖವನ್ನು ಉಳ್ಳಂತಹ ಹನುಮಂತನನ್ನು ನೋಡಿದನು.

ವದನಾಭ್ಯಂತರಗತೈಃ ಶುಕ್ಲೈರ್ದಂತೈರಲಂಕೃತಮ್ ।
ಕೇಸರೋತ್ಕರಸಮ್ಮಿಶ್ರಮಶೋಕಾನಾಮಿವೋತ್ಕರಮ್ ॥೮೨॥

ಹಿರಣ್ಮಯೀನಾಂ ಮಧ್ಯಸ್ಥಂ ಕದಲೀನಾಂ ಮಹಾದ್ಯುತಿಮ್ ।
ದೀಪ್ಯಮಾನೇನ ವಪುಷಾ ಸ್ವರ್ಚಿಷ್ಮಂತಮಿವಾನಲಮ್ ॥೮೩॥

ನಿರೀಕ್ಷಂತಮಮಿತ್ರಘ್ನಂ ಲೋಚನೈರ್ಮಧುಪಿಂಗಲೈಃ ॥೮೪॥

ತಂ ವಾನರವರಂ ಧೀಮಾನತಿಕಾಯಂ ಮಹಾಬಲಮ್ ॥೮೫॥

ವದನದೊಳಗೆ ತೋರಿಬರುತ್ತಿದ್ದ ಶುಕ್ಲದಂತಗಳಿಂದ ಅಲಂಕೃತನಾಗಿದ್ದಂತಹ, ಅಶೋಕ ಪುಷ್ಪದ ಕೇಸರಗಳಂತೆ ಶೋಭಿಸುವ ಕೇಸರಗಳಿಂದ ಕೂಡಿದ್ದಂತಹ, ಸುವರ್ಣಮಯವಾದ ಕದಲೀವೃಕ್ಷಗಳ ಮಧ್ಯದಲ್ಲಿದ್ದಂತಹ, ಮಹಾಕಾಂತಿಯುಳ್ಳಂತಹ ಹೊಳೆಯುವ ತನ್ನ ದೇಹದಿಂದ ಕಿಡಿಗಳಿಂದ ಕೂಡಿದ ಅಗ್ನಿಯಂತಿದ್ದಂತಹ, ತನ್ನ ಕಂದು ಕೆಂಪು ಬಣ್ಣಗಳಿಂದ ಕಣ್ಣುಗಳಿಂದ ನೋಡುತ್ತಿದ್ದಂತಹ, ಶತ್ರುಸಂಹಾರಕನಾಗಿದ್ದಂತಹ, ಮಹಾಬಲಿಷ್ಠನಾಗಿದ್ದಂತಹ, ದೊಡ್ಡ ಶರೀರವನ್ನು ಹೊಂದಿದ್ದಂತಹ, ಸ್ವರ್ಗದ ಮಾರ್ಗವನ್ನು ಆವರಿಸಿ ಕುಮಾರಪರ್ವತದಂತೆ ಇದ್ದಂತಹ ಆ ಕಪಿಶ್ರೇಷ್ಠನನ್ನು ಮೇಧಾವಿಯಾದ ಭೀಮಸೇನನು ನೋಡಿದನು.

ಭೀಮೋ ಭೀಮಬಲಸ್ತತ್ರ ಪ್ರವಿಷ್ಟಃ ಕದಲೀವನಮ್ ।
ಅಪಶ್ಯದ್ ವಾನರಂ ಸುಪ್ತಮೇಕಾಯನಗತೇ ಪಥಿ ।
ತಸ್ಯ ಪ್ರಬೋಧನಾರ್ಥಾಯ ಸಿಂಹನಾದಮಥಾಕರೋತ್ ॥೮೬॥

ಅಥೋಪಸೃತ್ಯ ತರಸಾ ವಿಭಿರ್ಭೀಮಸ್ತತೋ ಬಲೀ ।
ಸಿಂಹನಾದಂ ಚಕಾರೋಗ್ರಂ ವಜ್ರಾಶನಿಸಮಂ ಬಲೀ ।
ತೇನ ಶಬ್ದೇನ ಭೀಮಸ್ಯ ವಿತ್ರೇಸುರ್ಮೃಗಪಕ್ಷಿಣಃ ॥೮೭॥

ಮಹಾಬಲಶಾಲಿಯಾದ ಭೀಮನು ಕದಲೀವನವನ್ನು ಪ್ರವೇಶಿಸಿ ಒಬ್ಬರು ಮಾತ್ರ ನಡೆಯಬಹುದಾದ ಕಾಲುದಾರಿಯಲ್ಲಿ ನಿದ್ರಿಸುತ್ತಿದ್ದ ಹನುಮಂತನನ್ನು ನೋಡಿದನು. ಅನಂತರ ಬಲಿಷ್ಠನಾದ ಭೀಮಸೇನನು ಯಾವ ಭಯವೂ ಇಲ್ಲದೆ ಶೀಘ್ರವಾಗಿ ಅವನನ್ನು ಸಮೀಪಿಸಿ ವಜ್ರದಂತೆ ಸಿಡಿಲಿನಂತೆ ಕಠೋರವಾದ ಮತ್ತು ಭಯಂಕರವಾದ

ಸಿಂಹನಾದವನ್ನು ಮಾಡಿದನು. ಭೀಮನ ಆ ಸಿಂಹನಾದಕ್ಕೆ ಮೃಗಪಕ್ಷಿಗಳು ಹೆದರಿ ಹೋದವು.

ಹನೂಮಾಂಶ್ಚ ಮಹಾಸತ್ತ್ವ ಈಷದುನ್ಮೀಲ್ಯ ಲೋಚನೇ ।
ದೃಷ್ಟ್ವಾ ತಮಥ ಸಾವಜ್ಞಂ ಲೋಚನೈರ್ಮಧುಪಿಂಗಲೈಃ ॥೮೮॥

ತತಃ ಪವನಜಃ ಶ್ರೀಮಾನಂತಿಕಸ್ಥಂ ಮಹೌಜಸಮ್ ।
ಸ್ಮಿತೇನ ಚೈನಮಾಸಾದ್ಯ ಹನೂಮಾನಿದಮಬ್ರವೀತ್ ॥೮೯.೧॥

ಮಹಾಬಲಶಾಲಿಯಾದ ಹನುಮಂತನಾದರೂ ತನ್ನ ಕಣ್ಣುಗಳನ್ನು ಸ್ವಲ್ಪ ತೆರೆದು ತನ್ನ ಕಪ್ಪುಮಿಶ್ರಿತವಾದ ಕೆಂಪುಕಣ್ಣುಗಳಿಂದ ಭೀಮನನ್ನು ತಿರಸ್ಕಾರಪೂರ್ವಕವಾಗಿ (ಲೀಲೆಯಿಂದ) ನೋಡಿ ಹತ್ತಿರದಲ್ಲಿದ್ದ ಕಾಂತಿಯುಕ್ತನಾದ ಆ ಬಲಶಾಲಿಯನ್ನು ಗಮನಿಸಿ ಮುಗುಳ್ನಗೆಯಿಂದ ಅವನನ್ನು ಸ್ವೀಕರಿಸಿ ಪವನಸುತನಾದ ಹನುಮಂತನು ಹೀಗೆ ಮಾತನಾಡಿದನು.

ಕಿಮರ್ಥಂ ಸರುಜಸ್ತೇಽಹಂ ಸುಖಿಸುಪ್ತಃ ಪ್ರಬೋಧಿತಃ ।
ನನು ನಾಮ ತ್ವಯಾ ಕಾರ್ಯಾ ದಯಾ ಭೂತೇಷು ಜಾನತಾ ॥೮೯॥

ರೋಗಗ್ರಸ್ತನಾಗಿ ಸುಖವಾಗಿ ಮಲಗಿದ್ದ ನನ್ನನ್ನು ಏಕೆ ಎಬ್ಬಿಸಿದೆ? ತಿಳಿದವನಾದ ನೀನು ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನು ಮಾಡಬೇಕಷ್ಟೆ?

ವಯಂ ಧರ್ಮಂ ನ ಜಾನೀಮಸ್ತಿರ್ಯಗ್ಯೋನಿಮುಪಾಶ್ರಿತಾಃ ।
ನರಾಸ್ತು ಬುದ್ಧಿಸಂಪನ್ನಾ ದಯಾಂ ಕುರ್ವಂತಿ ಜಂತುಷು ॥೯೦॥

ನಾವು ನೀಚಯೋನಿಯಲ್ಲಿ ಜನಿಸಿ ಧರ್ಮಜ್ಞಾನಶೂನ್ಯರಾಗಿದ್ದೇವೆ. ಆದರೆ ಬುದ್ಧಿಸಂಪನ್ನರಾದ ಮನುಷ್ಯರು ಮಾತ್ರ ಎಲ್ಲ ಜಂತುಗಳಲ್ಲಿಯೂ ದಯೆಯನ್ನು ತೋರಿಸುತ್ತಾರೆ.

ಕ್ರೂರೇಷು ಕರ್ಮಸು ಕಥಂ ದೇಹವಾಕ್ಚಿತ್ತದೂಷಿಷು ।
ಧರ್ಮಘಾತಿಷು ಸಜ್ಜಂತೇ ಬುದ್ಧಿಮಂತೋ ಭವದ್ವಿಧಾಃ ॥೯೧॥

ನಿನ್ನಂತಹ ಬುದ್ಧಿವಂತರು ದೇಹವಾಕ್ಕಿತ್ತಗಳನ್ನು ಕೆಡಿಸುವ ಧರ್ಮನಾಶಕವಾದ ಕ್ರೂರ ಕರ್ಮಗಳಲ್ಲಿ ಹೇಗೆ ತೊಡಗುತ್ತಾರೆ?

ನ ತ್ವಂ ಧರ್ಮಂ ವಿಜಾನಾಸಿ ಬುಧಾ ನೋಪಾಸಿತಾಸ್ತ್ವಯಾ ।
ಅಲ್ಪಬುದ್ಧಿತಯಾ ಬಾಲ್ಯಾದುತ್ಪಾದಯಸಿ ಯನ್ಪ್ರಜಾಗಾನ್ ॥೯೨॥

ನೀನು ಧರ್ಮವನ್ನು ತಿಳಿದಿಲ್ಲ ಮತ್ತು ಜ್ಞಾನಿಗಳ ಸೇವೆಯನ್ನು ಮಾಡಿಲ್ಲ. ಏಕೆಂದರೆ ಅಲ್ಪಬುದ್ಧಿಯುಳ್ಳವನಾಗಿ ಹುಡುಗಾಟದಿಂದ ಎಲ್ಲಾ ಪ್ರಾಣಿಗಳನ್ನೂ ನಾಶಮಾಡುತ್ತಿದ್ದೀಯೆ.

ಬ್ರೂಹಿ ಕಸ್ತ್ವಂ ಕಿಮರ್ಥಂ ವಾ ಕಿಮಿದಂ ವನಮಾಗತಃ ।
ವರ್ಜಿತಂ ಮಾನುಷೈರ್ಭಾವೈಸ್ತಥೈವ ಪುರುಷೈರಪಿ ॥೯೩॥

ನೀನು ಯಾರು, ಮತ್ತು ಮಾನುಷಭಾವದಿಂದಲೂ ಮತ್ತು ಮನುಷ್ಯರಿಂದಲೂ ರಹಿತವಾದ ಈ ವನಕ್ಕೆ ಏತಕ್ಕೆ ಬಂದೆ ಎಂದು ಹೇಳು.

ಕ್ವ ಚ ತ್ವಯಾದ್ಯ ಗಂತವ್ಯಂ ಪ್ರಬ್ರೂಹಿ ಪುರುಷರ್ಷಭ ।
ಅತಃ ಪರಮಗಮ್ಯೋಽಯಂ ಪರ್ವತಃ ಸುದುರಾರುಹಃ ॥೯೪॥

ಎಲೈ ಪುರುಷಶ್ರೇಷ್ಠನೇ, ಈ ದಿನ ನೀನು ಎಲ್ಲಿಗೆ ಹೋಗಲು ಉದ್ದೇಶಿಸಿದ್ದೀಯೆ ಎಂದು ಹೇಳು. ಇಲ್ಲಿಂದ ಮುಂದೆ ಈ ಪರ್ವತವು ಅಗಮ್ಯವಾದುದು ಮತ್ತು ಬಹಳ ಕಷ್ಟದಿಂದ ಮಾತ್ರ ಏರಲು ಸಾಧ್ಯವಾದುದು.

ವಿನಾ ಸಿದ್ಧಗತಿಂ ವೀರ ಗತಿರತ್ರ ನ ವಿದ್ಯತೇ ।
ದೇವಲೋಕಸ್ಯ ಮಾರ್ಗೋಽಯಮಗಮ್ಯೋ ಮಾನುಷೈಃ ಸದಾ ।
ಕಾರುಣ್ಯಾತ್ ತ್ವಾಮಹಂ ವೀರ ವಾರಯಾಮಿ ನಿಬೋಧ ಮೇ ॥೯೫॥

ಇಲ್ಲಿ ಸಿದ್ಧರಿಗೆ ಮಾತ್ರ ಒಂದು ಮಾರ್ಗವಿದೆ. ಬೇರೆಯವರಿಗೆ ಮಾರ್ಗವಿಲ್ಲ. ಎಲೈ ವೀರನೇ, ನಿನ್ನ ಮೇಲಿನ ಕರುಣೆಯಿಂದ ನಾನು ನಿನ್ನನ್ನು ತಡೆಯುತ್ತಿದ್ದೇನೆ. ಇದನ್ನು ನನ್ನಿಂದ ತಿಳಿ.

ನಾತಃ ಪರಂ ತ್ವಯಾ ಶಕ್ಯಂ ಗಂತುಮಾಶ್ವಸಿಹಿ ಪ್ರಭೋ ।
ಸ್ವಾಗತಂ ಸರ್ವಥೈವೇಹ ತವಾದ್ಯ ಮನುಜರ್ಷಭ ॥೯೬॥

ಪ್ರಭುವೇ, ಇಲ್ಲಿಂದ ಮುಂದೆ ನೀನು ಹೋಗಲು ಸಾಧ್ಯವಿಲ್ಲ. ಇಲ್ಲಿಯೇ ವಿಶ್ರಮಿಸು. ಎಲೈ ಪುರುಷಶ್ರೇಷ್ಠನೇ, ನಾನು ಈ ದಿನ ನಿನಗೆ ಇಲ್ಲಿ ಸರ್ವರೀತಿಯಿಂದಲೂ ಸ್ವಾಗತವನ್ನು ಕೋರುತ್ತೇನೆ.

ಇಮಾನ್ಯಮೃತಕಲ್ಪಾನಿ ಮೂಲಾನಿ ಚ ಫಲಾನಿ ಚ
ಭಕ್ಷಯಿತ್ವಾ ನಿವರ್ತಸ್ವ ಮಾ ವೃಥಾ ಪ್ರಾಪ್ಸ್ಯಸೇ ವಧಮ್ ॥೯೭॥

ಗ್ರಾಹ್ಯಂ ಯದಿ ವಚೋ ಮಹ್ಯಂ ಹಿತಂ ಮನುಜಪುಂಗವ ।

ನೀನು ನನ್ನ ಹಿತವಾದ ಮಾತನ್ನು ಕೇಳುವುದಾದರೆ ಅಮೃತಕ್ಕೆ ಸಮಾನವಾದ ಈ ಮೂಲಗಳನ್ನು ಮತ್ತು ಫಲಗಳನ್ನು ಸ್ವೀಕರಿಸಿ ಇಲ್ಲಿಂದ ಹಿಂದಿರುಗು. ವ್ಯರ್ಥವಾಗಿ ಮರಣವನ್ನು ಹೊಂದಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಏಕೋನಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಧರ್ಮೋ ದೇವಾನಾಂ ಪರಮೋ ಮಾನುಷತ್ವೇ
ಸ್ವೀಯೇ ರೂಪೇಽಪ್ಯನ್ಯವದೇವ ವೃತ್ತಿಃ ।
ಅನಾದಾನಂ ದಿವ್ಯಶಕ್ತೇರ್ವಿಶೇಷಾ-
ನ್ನರಸ್ವಭಾವೇ ಸರ್ವದಾ ಚೈವ ವೃತ್ತಿಃ ।
ತಸ್ಮಾದ್ ಭೀಮೋ ಹನುಮಾಂಶ್ಚೈಕ ಏವ
ಜ್ಯಾಯಃಕನೀಯೋವೃತ್ತಿಮಾತ್ರಾಭಿಭೇದೇ ॥೨೭೪॥

ಮನುಷ್ಯರಾಗಿ ಅವತರಿಸಿದಾಗ ತಮ್ಮ ರೂಪದೊಡನೆಯೂ ಪರಕೀಯವೆಂಬಂತೆ ವರ್ತಿಸುವುದು, ವಿಶೇಷ ಬಲದಿಂದ ಮೂಲರೂಪದ ದಿವ್ಯಶಕ್ತಿಯನ್ನು ಅವತಾರರೂಪದಲ್ಲಿ ಸ್ವೀಕರಿಸದಿರುವುದು, ಮನುಷ್ಯ ಸ್ವಭಾವಾನುಸಾರವಾಗಿಯೇ ಸದಾ

ವರ್ತಿಸುವುದು ದೇವತೆಗಳಿಗೆ ಮುಖ್ಯ ಧರ್ಮವಾಗಿರುತ್ತದೆ. ಆದರಿಂದ ಹನುಮಭೀಮರೊಬ್ಬರೇ ಆದರೂ ಹಿರಿಯ ಕಿರಿಯರಂತೆ ವರ್ತನೆ ತೋರಿದರು.

ಸರ್ವೇ ಗುಣಾ ಆವೃತ್ತಾ ಮಾನುಷತ್ವೇ
ಯುಗಾನುಸಾರಾನ್‌ಮೂಲರೂಪಾನುಸಾರಾತ್ ।
ಕ್ರಮಾತ್ ಸುರಾಣಾಂ ಭಾಗತೋऽವ್ಯಕ್ತರೂಪಾ
ಆದಾನತೋ ವ್ಯಕ್ತಿಮಾಯಾಂತ್ಯರೂಣಾಮ್ ॥೨೬೫॥

ದೇವತೆಗಳು ಮನುಷ್ಯರಾಗಿ ಹುಟ್ಟಿದಾಗ ಅವರ ಎಲ್ಲ ಗುಣಗಳೂ ಯುಗಾನುಸಾರವಾಗಿ ಆವೃತವಾಗಿರುತ್ತವೆ. ಮೂಲರೂಪಾನುಸಾರ ಕ್ರಮದಿಂದ ಭಾಗಶಃ ವ್ಯಕ್ತವಾಗುತ್ತದೆ. ಉತ್ತಮ ದೇವತೆಗಳಿಗೆ ಮೂಲರೂಪದ ಗುಣಗಳು ಆದಾನ ಮಾಡುವುದರಿಂದಲೂ ವ್ಯಕ್ತವಾಗುತ್ತದೆ.

ನೈವಾವ್ಯಕ್ತಿಃ ಕಾಚಿದಸ್ತೀಹ ವಿಷ್ಣೋಃ ಪ್ರಾದುರ್ಭಾವೇಷ್ವತಿಸುವ್ಯಕ್ತಶಕ್ತೇಃ ।
ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯ ತದನ್ಯೇಷಾಂ ವ್ಯಕ್ತತಾ ಕಾರಣೇನ ॥

ಅವತಾರಗಳಲ್ಲಿಯೂ ಬಲು ಚೆನ್ನಾಗಿ ವ್ಯಕ್ತವೇ ಆದ ಗುಣಗಳುಳ್ಳವ ಶ್ರೀಹರಿ. ಆದರಿಂದ ಅವನ ಗುಣಗಳಿಗೆ ಸ್ವಲ್ಪವೂ ಅವ್ಯಕ್ತತೆ ಎಂಬುದಿಲ್ಲ. ವಾಯುದೇವನಿಗೆ ಅವತಾರಗಳಲ್ಲಿ ಗುಣಗಳು ಪ್ರಾಯ ಇಚ್ಛೆಯಿಂದ ವ್ಯಕ್ತವಾಗುತ್ತವೆ. ಬೇರೆ ದೇವತೆಗಳಿಗೆ ಅವತಾರಗಳಲ್ಲಿ ಗುಣಗಳು ವಿಶೇಷ ಕಾರಣವಿದ್ದಾಗ ವ್ಯಕ್ತವಾಗುತ್ತವೆ.

ತಸ್ಮಾದ್ ಭೀಮೋ ಧರ್ಮವೃದ್‌ಅರ್ಥಮೇವ
ಸ್ವೀಯೇ ರೂಪೇऽಪ್ಯನ್ಯವದ್ ವೃತ್ತಿಮೇವ ।
ಪ್ರದರ್ಶಯಾಮಾಸ ತಥಾऽಸುರಾಣಾಂ
ಮೋಹಾಯೈವಾಶಕ್ತವಚ್ಛಕ್ತರೂಪಃ ॥೨೬೭॥

ಅದರಿಂದ ಭೀಮ ಪುಣ್ಯವೃದ್ಧಿಗಾಗಿಯೇ ತನ್ನ ರೂಪದೊಡನೆ ಪರಕೀಯವೆನ್ನುವಂತೆ ವರ್ತನೆಯನ್ನು ಪ್ರದರ್ಶಿಸಿದ. ಅಸುರರಿಗೆ ಮೋಹ ಉಂಟು ಮಾಡುವುದಕ್ಕಾಗಿಯೂ ಶಕ್ತಿಸ್ವರೂಪನಾದ ಆತ ಅಶಕ್ತನಂತೆ ವರ್ತನೆಯನ್ನು ಪ್ರದರ್ಶಿಸಿದ.

ತದ್ರೂಪವೃದ್ಧಿಂ ಭೀಮಸೇನೋಽಥ ದೃಷ್ಟ್ವಾ
ಶ್ರುತ್ವಾ ಹನೂಮನ್‌ಮುಖತಃ ಕಥಾಶ್ಚ ।
ರಾಮಸ್ಯ ತಚ್ಚಾತುರಾತ್ಮ್ಯಂ ಚ ದಿವ್ಯಂ
ಚಾತುರ್ಯುಗಂ ಧರ್ಮಮಪ್ಯಗ್ರ್ಯಮೇವ ॥೨೭೮॥

ಧ್ವಜಾದ್ ಬೀಭತ್ಸೋರ್ಗರ್ಜನೇನೈವ
ಶತ್ರುಪರಾಭವೇ ತೇನ ದತ್ತೇऽರ್ಜುನಸ್ಯ ।
ಯಯೌ ಪ್ರಣಮ್ಯೈನಮಾಶ್ವೇವ ಭೀಮಃ
ಸೌಗಂಧಿಕಂ ವನಮತ್ಯುಗ್ರರೂಪಮ್ ॥೨೭೯॥

ಹನುಮಂತನ ಆಕಾರ ಬೆಳೆದುದನ್ನು ಭೀಮಸೇನ ನೋಡಿ ಹನುಮಂತನ ಮುಖದಿಂದ ರಾಮನ ಕಥೆಗಳನ್ನೂ ರಾಮನ ಚಾತುರ್ಯವನ್ನೂ ನಾಲ್ಕು ಯುಗಗಳ ಉತ್ತಮ ಧರ್ಮವನ್ನೂ ಕೇಳಿ, ಅರ್ಜುನನ ಧ್ವಜದಲ್ಲಿ ಕುಳಿತು ಗರ್ಜನೆಯಿಂದಲೇ ಅವನ ಶತ್ರುಗಳ ಪರಾಭವ ಉಂಟುಮಾಡುವ ವರವನ್ನು ಹನುಮಂತ ಕೊಟ್ಟ ಬಳಿಕ ಅವನನ್ನು ನಮಿಸಿ ಬೇಗನೆ ಸುಂದರಾಕಾರದ ಸೌಗಂಧಿಕವನಕ್ಕೆ ನಡೆದ.

★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

ಹನುಮಂತನಿಂದ ತನ್ನ ಅಶಕ್ತಿಕಥನದ ವಿಡಂಬನೆ. ಹನುಮಂತನ ಮತ್ತು ಭೀಮಸೇನನ ಸಂವಾದ.

ವೈಶಂಪಾಯನಃ

ಏತತ್‌ಶ್ರುತ್ವಾ ವಚಸ್ತಸ್ಯ ವಾನರೇಂದ್ರಸ್ಯ ಧೀಮತಃ ।
ಭೀಮಸೇನಸ್ತದಾ ವೀರಃ ಪ್ರೋವಾಚಾಮಿತ್ರಕರ್ಷಣಃ ॥೧॥

ವೈಶಂಪಾಯನ– ಮೇಧಾವಿಯಾದ ವಾನರೇಂದ್ರನ ಈ ಮಾತುಗಳನ್ನು ಕೇಳಿ, ವೀರನೂ ಶತ್ರುಸೂದನನೂ ಆದ ಭೀಮಸೇನನು ಆಗ ಮಾತನಾಡಿದನು.

ಕೋ ಭವಾನ್ ಕಿನ್ನಿಮಿತ್ತಂ ವಾ ವಾನರಂ ವಪುರಾಸ್ಥಿತಃ ।
ಬ್ರಾಹ್ಮಣಾನಂತರೋ ವರ್ಣಃ ಕ್ಷತ್ರಿಯಸ್ತ್ವಂ ತು ಪೃಚ್ಛತಿ ॥೨॥

ಕೌರವಃ ಸೋಮವಂಶೀಯಃ ಕುಂತ್ಯಾ ಗರ್ಭೇಣ ಧಾರಿತಃ ।
ಪಾಂಡವೋ ವಾಯುತನಯೋ ಭೀಮಸೇನ ಇತಿ ಶ್ರುತಃ ॥೩॥

ನೀನು ಯಾರು? ಏಕೆ ವಾನರ ರೂಪವನ್ನು ಧರಿಸಿದ್ದೀಯೆ? ಸೋಮವಂಶದಲ್ಲಿ ಕುರುಕುಲದಲ್ಲಿ ಕುಂತಿಯು ಗರ್ಭದಲ್ಲಿ ಧರಿಸಿದ ಪಾಂಡವನಾದ ವಾಯುದೇವರ ಮಗನಾದ ಭೀಮಸೇನನಾದ ನಾನು ಬ್ರಾಹ್ಮಣವರ್ಣದ ನಂತರದ ಕ್ಷತ್ರಿಯ ವರ್ಣಕ್ಕೆ ಸೇರಿದವನಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ವೈಶಂಪಾಯನಃ

ಸ ವಾಕ್ಯಂ ಕುರುವೀರಸ್ಯ ಸ್ಮಿತೇನ ಪ್ರತಿಗೃಹ್ಯ ತತ್ ।
ಹನೂಮಾನ್ ವಾಯುತನಯೋ ವಾಯುಪುತ್ರಮಭಾಷತ ॥೪॥

ವೈಶಂಪಾಯನ– ವಾಯುತನಯನಾದ ಹನುಮಂತನು ಕುರುವೀರನ ಈ ಮಾತುಗಳನ್ನು ಮುಗುಳ್ನಗೆಯಿಂದ ಸ್ವೀಕರಿಸಿ ವಾಯುತನಯನಾದ ಭೀಮಸೇನನನ್ನು ಕುರಿತು ಮಾತನಾಡಿದನು.

ವಾನರೋಽಹಂ ನ ತೇ ಮಾರ್ಗಂ ಪ್ರದಾಸ್ಯಾಮಿ ಯಥೇಪ್ಸಿತಮ್ ।
ಸಾಧು ಗಚ್ಛ ನಿವರ್ತಸ್ವ ಮಾ ತ್ವಂ ಪ್ರಾಪ್ಸ್ಯಸಿ ವೈಶಸಮ್ ॥೫॥

ನಾನು ಒಬ್ಬ ಕಪಿ. ನೀನು ಮನಸ್ಸಿಗೆ ಬಂದಂತೆ ಹೋಗಲು ಮಾರ್ಗವನ್ನು ಬಿಡುವುದಿಲ್ಲ. ತೊಂದರೆ ಮಾಡಿಕೊಳ್ಳದೆ ಹಿಂದಿರುಗು. ಹಿಂಸೆಗೆ ಒಳಗಾಗಬೇಡ.

ಭೀಮಸೇನಃ

ವೈಶಸಂ ವಾಽಸ್ತು ಯದ್ವಾಽನ್ಯನ್ನ ತ್ವಾಂ ಪೃಚ್ಛಾಮಿ ವಾನರ ।
ಪ್ರಯಚ್ಛ ಮಾರ್ಗಮುತ್ತಿಷ್ಠ ಮಾ ಮತ್ತಃ ಪ್ರಾಪ್ಸ್ಯಸೇ ವ್ಯಥಾಮ್ ॥೬॥

ಭೀಮಸೇನ– ಎಲೈ ವಾನರನೇ, ಹಿಂಸೆಯಾಗಲೀ ಅಥವಾ ಇನ್ನೊಂದಾಗಲೀ ಅದನ್ನು ನಾನು ನಿನ್ನನ್ನು ಕೇಳುತ್ತಿಲ್ಲ. ನೀನು ಎದ್ದುನನಗೆ ದಾರಿಯನ್ನು ಬಿಡು. ನನ್ನಿಂದ ಪೀಡೆಗೆ ಒಳಗಾಗಬೇಡ.

ಹನೂಮಾನ್

ನಾಸ್ತಿ ಶಕ್ತಿರ್ಮಮೋತ್ಥಾತುಂ ವ್ಯಾಧಿನಾ ಕ್ಲೇಶಿತೋ ಹ್ಯಹಮ್ ।
ಯದ್ಯವಶ್ಯಂ ಪ್ರಯಾತವ್ಯಂ ಲಂಘಯಿತ್ವಾ ಪ್ರಯಾಹಿ ಮಾಮ್ ॥೭॥

ಹನುಮಾನ್- ನಾನು ರೋಗದಿಂದ ಬಳಲುತ್ತಿದ್ದೇನೆ. ನನಗೆ ಏಳಲು ಶಕ್ತಿಯಿಲ್ಲ. ನೀನು ಅವಶ್ಯವಾಗಿ ಹೋಗಲೇಬೇಕಾದರೆ ನನ್ನನ್ನು ದಾಟಿಕೊಂಡು ಹೋಗು.

ಭೀಮಃ

ನಿರ್ಗುಣಃ ಪರಮಾತ್ಮಾ ತು ದೇಹಂ ವ್ಯಾಪ್ಯಾವತಿಷ್ಠತೇ ।
ತಮಹಂ ಜ್ಞಾನವಿಜ್ಞೇಯಂ ನಾವಮನ್ಯೇ ನ ಲಂಘಯೇ ॥೮॥

ಭೀಮ– ನಿರ್ಗುಣನಾದ ಪರಮಾತ್ಮನು ಎಲ್ಲ ದೇಹಗಳಲ್ಲಿಯೂ ವ್ಯಾಪಿಸಿಕೊಂಡು ನೆಲೆಸಿದ್ದಾನೆ. ಜ್ಞಾನವಿಜ್ಞೇಯನಾದ ಅವನಿಗೆ ನಾನು ಅವಮಾನವನ್ನು ಮಾಡುವುದಿಲ್ಲ. ಆದ್ದರಿಂದ ನಿನ್ನನ್ನು ದಾಟುವುದಿಲ್ಲ.

ಯದ್ಯಾಗಮೈರ್ನ ವಿದ್ಯಾಂ ಚ ತಮಹಂ ಭೂತಭಾವನಮ್ ।
ಕ್ರಮೇಯಂ ತ್ವಾಂ ಗಿರಿಂ ಚೈವ ಹನೂಮಾನಿವ ಸಾಗರಮ್ ॥೯॥

ಜಗತ್ಸೃಷ್ಟಿಕರ್ತನಾದ ಅವನನ್ನು ವೇದಗಳಿಂದ ತಿಳಿಯದಿದ್ದರೆ ನಾನು ಹನುಮಂತನು ಸಾಗರವನ್ನು ದಾಟಿದಂತೆ ನಿನ್ನನ್ನೂ ಈ ಪರ್ವತವನ್ನೂ ದಾಟುತ್ತಿದ್ದೆ.

ಹನೂಮಾನ್

ಕ ಏಷ ಹನುಮಾನ್ನಾಮ ಸಾಗರೋ ಯೇನ ಲಂಘಿತಃ ।
ಪೃಚ್ಛಾಮಿ ತ್ವಾಂ ನರಶ್ರೇಷ್ಠ ಕಥ್ಯತಾಂ ಯದಿ ಶಕ್ಯತೇ ॥೧೦॥

ಹನುಮಾನ್- ಎಲೈ ನರಶ್ರೇಷ್ಠನೇ, ಸಾಗರವನ್ನು ದಾಟಿದ ಈ ಹನುಮಂತನೆಂಬುವನು ಯಾರು? ನಾನು ನಿನ್ನನ್ನು ಕೇಳುತ್ತಿದ್ದೇನೆ. ಸಾಧ್ಯವಾದರೆ ಉತ್ತರವನ್ನು ಹೇಳು.

ಭೀಮಃ

ಭ್ರಾತಾ ಮಮ ಗುಣಶ್ಲಾಘ್ಯೋ ಬುದ್ಧಿಸತ್ತ್ವಬಲಾನ್ವಿತಃ ।
ರಾಮಾಯಣೇಽತಿವಿಖ್ಯಾತಃ ಶ್ರೀಮಾನ್ ವಾನರಪುಂಗವಃ ॥೧೧॥

ಭೀಮ– ಅವನು ನನ್ನ ಅಣ್ಣನಾದ, ಕಾಂತಿಯುಕ್ತನಾದ ವಾನರಶ್ರೇಷ್ಠನಾದವನು. ಅವನು ಗುಣಗಳಿಂದ ಯಾವಾಗಲೂ ಶ್ಲಾಘಿಸಲ್ಪಡುವವನು. ಬುದ್ಧಿ ಸದ್ಗುಣಗಳು ಮತ್ತು ಬಲಗಳಿಂದ ಕೂಡಿದವನು. ರಾಮಾಯಣದಲ್ಲಿ ಬಹಳ ಪ್ರಖ್ಯಾತನಾದವನು.

ರಾಮಪತ್ನೀಕೃತೇ ಯೇನ ಶತಯೋಜನನಿವಿಸ್ತೃತಃ ।
ಸಾಗರಃ ಪ್ಲವಗೇಂದ್ರೇಣ ಕ್ರಮೇಣೈಕೇನ ಲಂಘಿತಃ ॥೧೨॥

ರಾಮಪತ್ನಿಯ ಸಲುವಾಗಿ ಕಪಿಶ್ರೇಷ್ಠನಾದ ಅವನು ಶತಯೋಜನವಿಸ್ತಾರವಾದ ಸಾಗರವನ್ನು ಒಂದೇ ದಾಪಿನಲ್ಲಿ ದಾಟಿದನು.

ಸ ಮೇ ಭ್ರಾತಾ ಮಹಾವೀರ್ಯಸ್ತುಲ್ಯೋಽಹಂ ತಸ್ಯ ತೇಜಸಾ ।
ಬಲೇ ಪರಾಕ್ರಮೇ ಯುದ್ಧೇ ಶಕ್ತೋಽಹಂ ತವ ನಿಗ್ರಹೇ ॥೧೩॥

ಅವನು ನನ್ನ ಅಣ್ಣ. ಮಹಾಬಲಶಾಲಿಯಾದವನು. ನಾನು ತೇಜಸ್ಸಿನಲ್ಲಿಯೂ, ಬಲದಲ್ಲಿಯೂ, ಪರಾಕ್ರಮದಲ್ಲಿಯೂ ಮತ್ತು ಯುದ್ಧದಲ್ಲಿಯೂ ಅವನಿಗೆ ಸಮಾನನಾದವನು. ನಾನು ನಿನ್ನ ನಿಗ್ರಹವನ್ನು ಮಾಡಲು ಶಕ್ತನಾಗಿದ್ದೇನೆ.

ಇಮಂ ದೇಶಮನುಪ್ರಾಪ್ತಃ ಕಾರಣೇನಾಸ್ಮಿ ಕೇನಚಿತ್ ।
ಉತ್ತಿಷ್ಠ ದೇಹಿ ಮೇ ಮಾರ್ಗಂ ಪಶ್ಯ ಮೇ ಚಾದ್ಯ ಪೌರುಷಮ್ ।
ಮಚ್ಛಾಸನಮಕುರ್ವಾಣಂ ತ್ವಾಂ ವಾ ನೇಷ್ಯೇ ಯಮಕ್ಷಯಮ್ ॥೧೪॥

ಯಾವುದೋ ಒಂದು ಕಾರಣದಿಂದ ಈ ದೇಶಕ್ಕೆ ಬಂದಿದ್ದೇನೆ. ನೀನು ಎದ್ದು ನನಗೆ ಮಾರ್ಗವನ್ನು ಬಿಡು. ಇಲ್ಲದಿದ್ದರೆ ನನ್ನ ಪರಾಕ್ರಮವನ್ನು ಈ ದಿನ ನೋಡು. ನನ್ನ ಆದೇಶವನ್ನು ನಿರಾಕರಿಸಿದ್ದ ನಿನ್ನನ್ನು ಬೇಕಾದರೂ ನಾನು ಯಮಲೋಕಕ್ಕೆ ಕಳುಹಿಸುವೆನು.

ವೈಶಂಪಾಯನಃ

ವಿಜ್ಞಾಯ ತಂ ಬಲೋನ್ಮತ್ತಂ ಬಾಹುವೀರ್ಯೇಣ ದರ್ಪಿತಮ್ ।
ಹೃದಯೇನಾವಹಸ್ಯೈನಂ ಹನೂಮಾನ್ ವಾಕ್ಯಮಬ್ರವೀತ್ ॥೧೫॥

ವೈಶಂಪಾಯನ– ಅವನು ಬಲೋನ್ಮತ್ತನೆಂದೂ ಬಾಹುಬಲದಿಂದ ದರ್ಪ ಉಳ್ಳವನೆಂದೂ ತಿಳಿದು ಹನುಮಂತನು ಮನಸ್ಸಿನಲ್ಲಿಯೇ ಅವನನ್ನು ಅಪಹಾಸ ಮಾಡಿ ಅವನನ್ನು ಕುರಿತು ಈ ಮಾತನ್ನು ಆಡಿದನು.

ಪ್ರಸೀದ ನಾಸ್ತಿ ಮೇ ಶಕ್ತಿರುತ್ಥಾತುಂ ಜರಯಾऽನಘ ।
ಮಮಾನುಕಂಪನಯಾ ತ್ವೇತತ್ ಪುಚ್ಛಮುತ್ಸಾರ್ಯ ಗಮ್ಯತಾಮ್॥೧೬॥

ಅನಘನೇ, ನನ್ನ ಮೇಲೆ ಪ್ರಸನ್ನನಾಗು. ಮುಪ್ಪಿನಿಂದ ಕೂಡಿದ ನನಗೆ ಮೇಲೆ ಏಳಲು ಶಕ್ತಿಯಿಲ್ಲ. ನನ್ನ ಮೇಲಿನ ಅನುಕಂಪದಿಂದ ಈ ಬಾಲವನ್ನು ಸ್ವಲ್ಪ ಸರಿಸಿ ಮುಂದಕ್ಕೆ ಹೋಗು.

ವೈಶಂಪಾಯನಃ

ವಿವಮುಕ್ಷನ್ತು ಬಲವಾನ್ ಭೀಮೋ ಭೀಮಪರಾಕ್ರಮಃ ।
ಸಾವಜ್ಞಮಥ ವಾಮೇನ ಸ್ಥಯನ್ ಜಗ್ರಾಹ ಹಾಣಿನಾ ॥೧೭॥

ನ ಚಾಶಕಚ್ಚಾಲಯಿತುಂ ಭೀಮಃ ಪುಚ್ಛಂ ಮಹಾಕಪೇಃ ॥೧೮॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಮಹಾವರಾಕ್ರಮಶಾಲಿಯಾದ ಭೀಮನು ತಿರಸ್ಕಾರದಿಂದ ನಗುತ್ತಾ ತನ್ನ ಎಡಗೈಯಿಂದ ಆ ಬಾಲವನ್ನು ಎತ್ತಲು ಹೋದನು. ಆದರೆ ಭೀಮನಿಗೆ ಆ ಮಹಾಕಪಿಯ ಬಾಲವನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ.

ಉಚ್ಚಿಕ್ಷೇಪ ಪುನರ್ದೋರ್ಭ್ಯಾಮಿಂದ್ರಾಯುಧಮಿವೋಚ್ಛ್ರಿತಮ್ ।
ನೋದ್ಧರ್ತುಮಶಕದ್ ಭೀಮೋ ದೋರ್ಭ್ಯಾಮಪಿ ಬಹಾಬಲಃ ॥೧೯॥

ಮಹಾಬಲನಾದ ಭೀಮಸೇನನು ಇಂದ್ರಾಯುಧದಂತೆ ಉನ್ನತವಾಗಿದ್ದ ಆ ಬಾಲವನ್ನು ಎರಡು ಬಾಹುಗಳಿಂದಲೂ ಹಿಡಿದು ಮೇಲಕ್ಕೆ ಎತ್ತಲು ಪ್ರಯತ್ನಪಟ್ಟನು. ಆದರೆ ಎತ್ತಲು ಸಾಧ್ಯವಾಗಲಿಲ್ಲ.

ಉತ್ಕ್ಷಿಪ್ತಭ್ರೂರ್ವಿವೃತ್ತಾಕ್ಷಃ ಸಂಹತಭ್ರುಕುಟೀಮುಖಃ ।
ವ್ರೀಡಗಾತ್ರೋऽಭವದ್ ಭೀಮೋ ನ ಚೋದ್ಧರ್ತುಂ ಶಶಾಕ ತಮ್ ॥

ಅವನು ಹುಬ್ಬುಗಳನ್ನು ಮೇಲಕ್ಕೆತ್ತಿ, ಕಣ್ಣುಗಳನ್ನು ಅರಳಿಸಿ, ಹುಬ್ಬುಗಳನ್ನು ಗಂಟುಕಟ್ಟಿ ಮೈಯೆಲ್ಲಾ ಬೆವರಿ ಪ್ರಯತ್ನಪಟ್ಟನು. ಆದರೆ ಬಾಲವನ್ನು ಎತ್ತಲು ಸಾಧ್ಯವಾಗಲಿಲ್ಲ

ಯತ್ನವಾನಪಿ ತು ಶ್ರೀಮಾಂಲ್ಲಾಂಗೂಲೋದ್ಧರಣೇ ತತಃ(ಣೋದ್ಧರಃ)।
ಕಪೇಃ ಪಾರ್ಶ್ವಗತೋ ಭೀಮಸ್ತಸ್ಥೌ ವ್ರೀಡಾನತಾನನಃ ।
ಪ್ರಣಿಪತ್ಯ ಚ ಕೌಂತೇಯಃ ಪ್ರಾಂಜಲಿರ್ವಾಕ್ಯಮಬ್ರವೀತ್ ॥೨೧॥

ಕಾಂತಿಯುಕ್ತನಾದ ಭೀಮಸೇನನು ಎಷ್ಟು ಪ್ರಯತ್ನಪಟ್ಟರೂ ಬಾಲವನ್ನು ಎತ್ತಲು ಸಾಧ್ಯವಾಗದಿರಲು ಅವನು ನಾಚಿಕೆಯಿಂದ ಮುಖವನ್ನು ತಗ್ಗಿಸಿ ಕಪಿಯ ಪಾರ್ಶ್ವದಲ್ಲಿ ಬಂದು ನಿಂತನು. ಅವನಿಗೆ ನಮಸ್ಕಾರವನ್ನು ಮಾಡಿ ಕೌಂತೇಯನು ಕೈಗಳನ್ನು ಮುಗಿದು ಈ ಮಾತನ್ನು ಆಡಿದನು.

ಪ್ರಸೀದ ಕಪಿಶಾರ್ದೂಲ ದುರುಕ್ತಂ ಕ್ಷಮ್ಯತಾಂ ಮಮ ॥೨೨॥

ಸಿದ್ಧೋ ವಾ ಯದಿ ವಾ ದೇವೋ ಗಂಧರ್ವೋ ವಾऽಥ ಗುಹ್ಯಕಃ ।
ಪೃಷ್ಟಃ ಸನ್ ಕಾಮ್ಯಯಾ ಬ್ರೂಹಿ ಕಸ್ತ್ವಂ ವಾನರರೂಪಧೃಕ್ ॥೨೩॥

ಶಿಷ್ಯವತ್ತ್ವಾಂ ತು ಪೃಚ್ಛಾಮಿ ಉಪಪನ್ನೋऽಸ್ಮಿ ತೇऽನಘ ।

ಕಪಿಶಾರ್ದೂಲನೇ, ನನಗೆ ಅನುಗ್ರಹವನ್ನು ಮಾಡು. ನಾನು ಆಡಿದ ಕೆಟ್ಟ ಮಾತುಗಳನ್ನು ಕ್ಷಮಿಸು. ವಾನರ ರೂಪವನ್ನು ಧರಿಸಿದ ನೀನು ಸಿದ್ಧನೇ? ದೇವತೆಯೇ? ಗಂಧರ್ವನೇ? ಅಥವಾ ಗುಹ್ಯಕನೇ? ಎಂದು ಕೇಳುತ್ತಿದ್ದೇನೆ. ಸರಿಯಾದ ಉತ್ತರವನ್ನು ಹೇಳು. ಅನಘನೇ, ನಾನು ನಿನಗೆ ಶರಣಾಗತನಾಗಿದ್ದೇನೆ. ಶಿಷ್ಯನಂತೆ ನಿನ್ನನ್ನು ಕೇಳುತ್ತಿದ್ದೇನೆ.

ಹನುಮಾನ್

ಗಂಧರ್ವೋ ಗುಹ್ಯಕೋ ವಾ ತ್ವಂ ಕಥಯಸ್ವ ಮಮಾನಘ ।
ಕಾಮೇನ ಪೃಚ್ಛತೋ ಬ್ರೂಹಿ ಕಸ್ತ್ವಂ ವಾನರರೂಪ ಧೃಕ್ ॥
ನ ಚೇದ್ಗುಹ್ಯಂ ಮಹಾಭಾಗ ಶ್ರೋತವ್ಯಂ ಸ್ಯಾನ್ಮಯಾ ಯದಿ ।
ಯತ್ ತೇ ಮಮ ಪರಿಜ್ಞಾನೇ ಕೌತೂಹಲಮರಿಂದಮ ।
ತತ್ಸರ್ವಮಖಿಲೇನ ತ್ವಂ ಶ್ರುಣು ಪಾಂಡವನಂದನ ॥೨೪॥

ಹನುಮಾನ್- ಎಲೈ ಅರಿಂದಮನೇ, ಎಲೈ ಪಾಂಡವನಂದನನೇ, ನನ್ನನ್ನು ತಿಳಿಯಲು ನಿನಗೆ ಕುತೂಹಲವಿರುವುದರಿಂದ ಎಲ್ಲವನ್ನೂ ಸಂಪೂರ್ಣವಾಗಿ ಕೇಳು.

ಅಹಂ ಕೇಸರಿಣಃ ಕ್ಷೇತ್ರೇ ವಾಯುನಾ ಜಗದಾಯುಷಾ ।
ಜಾತಃ ಕಮಲಪತ್ರಾಕ್ಷ ಹನೂಮಾನ್ನಾಮ ವಾನರಃ ॥೨೫॥

ಎಲೈ ಕಮಲಪತ್ರಾಕ್ಷನೇ, ನಾನು ಕೇಸರಿಯ ಪತ್ನಿಯಲ್ಲಿ ಜಗತ್ತಿಗೆ ಆಯುಸ್ಸನ್ನು ಕೊಡುವ ವಾಯುದೇವರಿಂದ ಜನಿಸಿದ ಹನುಮಂತನೆಂಬ ಕಪಿ.

ಸೂರ್ಯಪುತ್ರಂ ಚ ಸುಗ್ರೀವಂ ಶಕ್ರಪುತ್ರಂ ಚ ವಾಲಿನಮ್ ।
ಸರ್ವೇ ವಾನರರಾಜಾನಸ್ತಥಾ ವಾನರಯೂಥಪಾಃ ॥೨೬॥

ಉಪತಸ್ಥುರ್ಮಹಾಶಏವೀರ್ಯಾ ಮಮ ಚಾಮಿತ್ರಕರ್ಷಣ ।
ಸುಗ್ರೀವೇಣಾಭವತ್ ಪ್ರೀತಿರನಿಲಸ್ಯಾಗ್ನಿನಾ ಯಥಾ ॥೨೭॥

ಸೂರ್ಯಪುತ್ರನಾದ ಸುಗ್ರೀವನನ್ನು, ಇಂದ್ರಪುತ್ರನಾದ ವಾಲಿಯನ್ನು ಎಲ್ಲ ಮಹಾಬಲರಾದ ವಾನರ ರಾಜರು ಮತ್ತು ವಾನರ ಮುಖ್ಯರು ಆಶ್ರಯಿಸಿದರು. ಎಲೈ ಶತ್ರುಕರ್ಷಣನೇ, ನನಗೆ ವಾಯುವಿಗೆ ಅಗ್ನಿಯಲ್ಲಿರುವಂತೆ ಸುಗ್ರೀವನಲ್ಲಿ ಪ್ರೀತಿ ಉಂಟಾಯಿತು.

ನಿಕೃತಃ ಸ ತತೋ ಭ್ರಾತ್ರಾ ಕಸ್ಮಿಂಶ್ಚಿತ್ ಕಾರಣಾಂತರೇ ।
ಋಷ್ಯಮೂಕೇ ಮಯಾ ಸಾರ್ಧಂ ಸುಗ್ರೀವೋ ನ್ಯವಸಚ್ಚಿರಮ್ ॥೨೮॥

ಆ ಸುಗ್ರೀವನಾದರೂ, ಯಾವುದೋ ಒಂದು ಕಾರಣದಿಂದ ತನ್ನ ಅಣ್ಣನಾದ ವಾಲಿಯಿಂದ ಅವಮಾನಿತನಾಗಿ ಋಷ್ಯಮೂಕ ಪರ್ವತದಲ್ಲಿ ನನ್ನ ಜೊತೆಯಲ್ಲಿ ಬಹುಕಾಲ ವಾಸವಾಗಿದ್ದನು.

ಅಥ ದಾಶರಥಿರ್ವೀರೋ ರಾಮೋ ನಾಮ ಮಹಾಬಲಃ ।
ವಿಷ್ಣುರ್ಮಾನುಷರೂಪೇಣ ಚಚಾರ ವಸುಧಾತಳಮ್ ॥೨೯॥

ಆಗ ವಿಷ್ಣುವು ಮನುಷ್ಯರೂಪವನ್ನು ಧರಿಸಿ ದಶರಥನ ಮಗನಾಗಿ ಮಹಾಬಲಿಷ್ಠನಾಗಿ ರಾಮನೆಂಬ ಹೆಸರಿನಿಂದ ಭೂತಳವನ್ನು ಸಂಚಾರ ಮಾಡುತ್ತಿದ್ದನು.

ಸ ಪಿತುಃ ಪ್ರಿಯಮನ್ವಿಚ್ಛನ್ ಸಹಭಾರ್ಯಃ ಸಹಾನುಜಃ ।
ಸಧನುರ್ಧನ್ವಿನಾಂ ಶ್ರೇಷ್ಠೋ ದಂಡಕಾರಣ್ಯಮಾಶ್ರಿತಃ ॥೩೦॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅವನು ತಂದೆಗೆ ಪ್ರಿಯವನ್ನು ಉಂಟುಮಾಡುವುದಕ್ಕೋಸ್ಕರ ಧನುಸ್ಸನ್ನು ತೆಗೆದುಕೊಂಡು ಪತ್ನಿ ಮತ್ತು ತಮ್ಮನ ಜೊತೆಯಲ್ಲಿ ದಂಡಕಾರಣ್ಯವನ್ನು ಆಶ್ರಯಿಸಿದನು.

ತಸ್ಯ ಭಾರ್ಯಾ ಜನಸ್ಥಾನಾಚ್ಛಲೇನಾಪಹೃತಾ ಬಲಾತ್ ।
ವಂಚಯಿತ್ವಾ ನರವ್ಯಾಘ್ರಂ ಮಾರೀಚೇನ ತದಾऽನಘ ॥೩೧॥

ರಾಕ್ಷಸೇಂದ್ರೇಣ ಬಲಿನಾ ರಾವಣೇನ ದುರಾತ್ಮನಾ ।
ಸುವರ್ಣರತ್ನಚಿತ್ರೇಣ ಮೃಗರೂಪೇಣ ರಕ್ಷಸಾ ॥೩೨॥

ಎಲೈ ಅನಘನೇ, ಸುವರ್ಣರತ್ನಚಿತ್ರವಾದ ಮೃಗರೂಪವನ್ನು ಧರಿಸಿದ ರಾಕ್ಷಸನಾದ ಮಾರೀಚನಿಂದ ಆ ನರವ್ಯಾಘ್ರನು ವಂಚಿಸಲ್ಪಡುತ್ತಿರಲು ಆಗ ಬಲಿಷ್ಠನೂ, ದುರಾತ್ಮನೂ, ರಾಕ್ಷಸೇಂದ್ರನೂ ಆದ ರಾವಣನು ರಾಮಪತ್ನಿಯಾದ ಸೀತೆಯನ್ನು ಅಪಹರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಶ್ಚತ್ವಾರಿಂಶದಧಿಕಶತತಮೋऽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ನಲವತ್ತೈದನೆಯ ಅಧ್ಯಾಯ

ಹನುಮಂತನಿಂದ ಅವಶಿಷ್ಟ ರಾಮಚರಿತೆಯ ಕಥನ.

ಹನೂಮಾನ್

ಹೃತದಾರಃ ಸಹ ಭ್ರಾತ್ರಾ ಪತ್ನೀಂ ಮಾರ್ಗನ್ ಸ ರಾಘವಃ ।
ದೃಷ್ಟವಾನ್ ಶೈಲಶಿಖರೇ ಸುಗ್ರೀವಂ ವಾನರರ್ಷಭಮ್ ॥೧॥

ಹನುಮಾನ್- ಪತ್ನಿಯನ್ನು ಕಳೆದುಕೊಂಡ ರಾಮನು ತಮ್ಮನ ಜೊತೆಯಲ್ಲಿ ಪತ್ನಿಯನ್ನು ಹುಡುಕುತ್ತಾ ಋಷ್ಯಮೂಕ ಪರ್ವತದ ಶಿಖರದಲ್ಲಿ ವಾನರಶ್ರೇಷ್ಠನಾದ ಸುಗ್ರೀವನನ್ನು ನೋಡಿದನು.

ತೇನ ತಸ್ಯಾಭವತ್ ಸಖ್ಯಂ ರಾಘವಸ್ಯ ಮಹಾತ್ಮನಃ ।
ಸ ಹತ್ವಾ ವಾಲಿನಂ ರಾಜ್ಯೇ ಸುಗ್ರೀವಮಭಿಷಿಕ್ತವಾನ್ ॥೨॥

ಮಹಾತ್ಮನಾದ ರಾಘವನಿಗೂ ಮತ್ತು ಸುಗ್ರೀವನಿಗೂ ಸಖ್ಯವುಂಟಾಯಿತು. ರಾಮನು ವಾಲಿಯನ್ನು ಸಂಹರಿಸಿ ರಾಜ್ಯದಲ್ಲಿ ಸುಗ್ರೀವನಿಗೆ ಅಭಿಷೇಕವನ್ನು ಮಾಡಿದನು.

ಸ ರಾಜ್ಯಂ ಪ್ರಾಪ್ಯ ಸುಗ್ರೀವಃ ಸೀತಾಯಾಃ ಪರಿಮಾರ್ಗಣೇ ।
ವಾನರಾನ್ ಪ್ರೇಷಯಾಮಾಸ ಶತಶೋಽಥ ಸಹಸ್ರಶಃ ॥೩॥

ರಾಜ್ಯವನ್ನು ಪಡೆದ ಸುಗ್ರೀವನು ಸೀತೆಯನ್ನು ಹುಡುಕಲು ನೂರರಗಟ್ಟಲೆ ಮತ್ತು ಸಾವಿರಗಟ್ಟಲೆ ಕಪಿಗಳನ್ನು ಎಲ್ಲಕಡೆಗಳಿಗೂ ಕಳುಹಿಸಿದನು.

ತತೋ ವಾನರಕೋಟೀಭಿಃ ಸಹಿತೋಽಹಂ ನರರ್ಷಭ ।
ಸೀತಾಂ ಮಾರ್ಗನ್ ಮಹಾಬಾಹೋ ಪ್ರಯಾತೋ ದಕ್ಷಿಣಾಂ ದಿಶಮ್ ॥

ಎಲೈ ನರಶ್ರೇಷ್ಠನೇ, ಎಲೈ ಮಹಾಬಾಹುವೇ, ಆಗ ನಾನು ಕೋಟಿವಾನರರಿಂದ ಸಹಿತನಾಗಿ ಸೀತೆಯನ್ನು ಹುಡುಕಲು ದಕ್ಷಿಣದಿಕ್ಕಿಗೆ ಹೊರಟೆನು.

ತತ್ರ ಪ್ರವೃತ್ತಿಃ ಸೀತಾಯಾ ಗೃಧ್ರೇಣೈವ ಮಹಾತ್ಮನಾ ।
ಸಂಪಾತಿನಾ ಸಮಾಖ್ಯಾತಾ ರಾವಣಸ್ಯ ನಿವೇಶನೇ ॥೫॥

ಅಲ್ಲಿ ಮಹಾತ್ಮನಾದ ಗೃಧ್ರನಾದ ಸಂಪಾತಿಯು ರಾವಣನ ಮನೆಯಲ್ಲಿ ಸೀತೆಯಿದ್ದಾಳೆಂಬ ವಾರ್ತೆಯನ್ನು ತಿಳಿಸಿದನು.

ತತೋಽಹಂ ಕಾರ್ಯಸಿದ್ಧ್ಯರ್ಥಂ ರಾಮಸ್ಯಾಕ್ಲಿಷ್ಟಕರ್ಮಣಃ ।
ಶತಯೋಜನವಿಸ್ತೀರ್ಣಮರ್ಣವಂ ಸಹಸಾऽऽಪ್ಲುತಃ ।
ಸಂಪಾತಿಗೃಧ್ರಾಧಿಗತಪ್ರವೃತ್ತಿಃ ಪಾಂಡುನಂದನ ॥೬॥

ಅಹಂ ಸ್ವವೀರ್ಯಾದುತ್ತೀರ್ಯ ಸಾಗರಂ ಮಕರಾಲಯಮ್ ।
ಸುತಾಂ ಜನಕರಾಜಸ್ಯ ಸೀತಾಂ ಸುರಸುತೋಪಮಾಮ್ ॥೭॥

ದೃಷ್ಟವಾನ್ ಭರತಶ್ರೇಷ್ಠ ರಾವಣಸ್ಯ ನಿವೇಶನೇ ॥೮॥

ಅನಂತರ ನಾನು ಅಕ್ಲಿಷ್ಟಕಾರಿಯಾದ ರಾಮನ ಕಾರ್ಯಸಿದ್ಧಿಗಾಗಿ ಸಂಪಾತಿಯಿಂದ ಸೀತೆಯ ವೃತ್ತಾಂತವನ್ನು ತಿಳಿದವನಾಗಿ ಎಲೈ ಪಾಂಡುನಂದನನೇ, ನನ್ನ ಪರಾಕ್ರಮದಿಂದಲೇ ಮಕರಾಲಯವಾದ ಸಾಗರವನ್ನು ದಾಟಿ, ಎಲೈ ಭರತಶ್ರೇಷ್ಠನೇ, ರಾವಣನ ನಿವೇಶನದಲ್ಲಿ ದೇವಕುಮಾರಿಯಂತಿದ್ದ ಜನಕರಾಜನ ಮಗಳಾದ ಸೀತೆಯನ್ನು ನೋಡಿದೆನು.

ಸಮೇತ್ಯ ತಾಮಹಂ ದೇವೀಂ ವೈದೇಹೀಂ ರಾಘವಪ್ರಿಯಾಮ್ ।
ದಗ್ಧ್ವಾ ಲಂಕಾಮಶೇಷೇಣ ಸಾಟ್ಟಪ್ರಾಕಾರತೋರಣಾಮ್ ।
ಪ್ರತ್ಯಾಗತಃ ಪುನಶ್ಚಾಪಿ ನಾಮ ತತ್ರ ಪ್ರಕಾಶ್ಯ ವೈ ॥೯॥

ನಾನು ರಾಘವಪ್ರಿಯೆಯಾದ ವಿದೇಹರಾಜಕುಮಾರಿಯಾದ ಆ ದೇವಿಯ ಜೊತೆಯಲ್ಲಿ ಸಂವಾದವನ್ನು ಮಾಡಿ ಕೋಟೆ ಕೊತ್ತಲಗಳಿಂದ ಕೂಡಿದ್ದ ಲಂಕಾ ಪಟ್ಟಣವನ್ನು ಸಂಪೂರ್ಣವಾಗಿ ಭಸ್ಮವಾಗಿ ಮಾಡಿ ನನ್ನ ಹೆಸರನ್ನು ಅಲ್ಲಿ ಸ್ಥಾಪಿಸಿ ಪುನಃ ಹಿಂದಿರುಗಿದೆನು.

ಮದ್ವಾಕ್ಯಂ ಚಾವಧಾರ್ಯಾಶು ರಾಮೋ ರಾಜೀವಲೋಚನಃ ॥೧೦॥

ಆಬದ್ಧಪೂರ್ವಮನ್ಯೈಶ್ಚ ಬದ್ಧ್ವಾ ಸೇತುಂ ಮಹೋದಧೌ ।
ವೃತೋ ವಾನರಕೋಟೀಭಿಃ ಸಮುತ್ತೀರ್ಣೋ ಮಹಾರ್ಣವಮ್ ॥೧೧॥

ರಾಜೀವಲೋಚನನಾದ ರಾಮನು ನನ್ನ ವಚನವನ್ನು ಸ್ವೀಕರಿಸಿ ಅಲ್ಲಿಯವರೆಗೆ ಇನ್ನೊಬ್ಬರೂ ಕಟ್ಟದಿದ್ದ ಸೇತುವೆಯನ್ನು ಸಮುದ್ರಕ್ಕೆ ಕಟ್ಟಕೋಟಿವಾನರರ ಜೊತೆಯಲ್ಲಿ ಸಮುದ್ರವನ್ನು ದಾಟಿದನು.

ರಣೇ ಸ ರಾಕ್ಷಸಗಣಾಂ ರಾವಣಂ ಲೋಕರಾವಣಮ್ ।
ನಿಶಾಚರೇಂದ್ರಂ ಹತ್ವಾ ತು ಸಭ್ರಾತೃಸುತಬಾಂಧವಮ್ ॥೧೨॥

ರಾಜ್ಯೇಽಭಿಷಿಚ್ಯ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ ।
ಧಾರ್ಮಿಕಂ ಭಕ್ತಿಮಂತಂ ಚ ಭಕ್ತಾನುಗತವತ್ಸಲಮ್ ॥೧೩॥

ಪ್ರತ್ಯಾಹೃತ್ಯ ತತಃ ಸೀತಾಂ ನಷ್ಟಾಂ ವೇದಶ್ರುತೀಮಿವ ।
ತಯೈವ ಸಹಿತಃ ಸಾಧ್ವ್ಯಾ ಪತ್ನ್ಯಾ ರಾಮೋ ಮಹಾಯಶಾಃ ॥೧೪॥

ಗತ್ವಾ ತತೋಽತಿತ್ವರಿತಃ ಸ್ವಾಂ ಪುರೀಂ ರಘುನಂದನಃ ।
ಅಧ್ಯಾವಸತ್ ತತೋಽಯೋಧ್ಯಾಮಯೋಧ್ಯಾಂ ದ್ವಿಷತಾಂ ಪ್ರಭುಃ ॥

ಅವನು ಯುದ್ಧದಲ್ಲಿ ನಿಶಾಚರೇಂದ್ರನಾದ, ಲೋಕಕಂಟಕನಾದ ರಾವಣನನ್ನು ಅವನ ತಮ್ಮ, ಪುತ್ರರು ಮತ್ತು ಬಾಂಧವರು ಮತ್ತು ರಾಕ್ಷಸಗಣಗಳ ಜೊತೆಯಲ್ಲಿ ಸಂಹಾರ ಮಾಡಿ ಧಾರ್ಮಿಕನೂ, ಭಕ್ತಿವಂತನೂ ಶರಣಾಗತವತ್ಸಲನೂ, ಆದ ರಾಕ್ಷಸೇಂದ್ರನಾದ ವಿಭೀಷಣನಿಗೆ ಲಂಕೆಯಲ್ಲಿ ರಾಜ್ಯಾಭಿಷೇಕವನ್ನು ಮಾಡಿ ನಷ್ಟವಾದ ವೇದಗಳನ್ನು ಹಿಂದೆ ತಂದಂತೆ ಸೀತೆಯನ್ನು ಮರಳಿ ಪಡೆದು ಮಹಾಯಶಸ್ವಿಯಾದ ರಘುನಂದನನಾದ ರಾಮನು ಆ ಪತಿವ್ರತೆಯಾದ ಪತ್ನಿಯಿಂದ ಸಹಿತನಾಗಿ ಬೇಗ ಹಿಂದಿರುಗಿ ಬಂದು ಶತ್ರುಗಳಿಂದ ಮುತ್ತಿಗೆ ಹಾಕಲು ಸಾಧ್ಯವಿಲ್ಲದ ಅಯೋಧ್ಯಾಪಟ್ಟಣದಲ್ಲಿ ಶತ್ರುದಮನವನ್ನು ಮಾಡುತ್ತಾ ವಾಸವನ್ನು ಮಾಡಿದನು.

ತತಃ ಪ್ರತಿಷ್ಠಿತೋ ರಾಜ್ಯೇ ರಾಮೋ ನೃಪತಿಸತ್ತಮಃ ।
ವರಂ ಮಯಾ ಯಾಚತೋಸೌ ರಾಮೋ ರಾಜೀವಲೋಚನಃ ॥೧೬॥

ರಾಮನು ರಾಜ್ಯದಲ್ಲಿ ಪ್ರತಿಷ್ಠಿತನಾಗುತ್ತಿರಲು ಆ ನೃಪತಿಶ್ರೇಷ್ಠನಾದ ರಾಜೀವ ಲೋಚನನಾದ ರಾಮನನ್ನು ನಾನು ವರವನ್ನು ಬೇಡಿದೆನು.

ಯಾವದ್ರಾಮಕಥೇಯಂ ತೇ ಭವೇಲ್ಲೋಕೇಷು ಶತ್ರುಹನ್ ।
ತಾವಜ್ಜೀವೇಯಮಿತ್ಯೇವಂ ತಥಾಸ್ತ್ವಿತಿ ಚ ಸೋಽಬ್ರವೀತ್ ॥೧೭॥

ಎಲೈ ಶತ್ರುಸೂದನನೇ, ಎಲ್ಲಿಯವರೆಗೆ ಲೋಕಗಳಲ್ಲಿ ರಾಮಕಥೆಯು ಪ್ರಚಲಿತವಾಗಿರುತ್ತದೆಯೋ ಅಲ್ಲಿಯವರೆಗೆ ನಾನು ಜೀವಿಸಿರುವೆನು ಎಂದು ಬೇಡಿದನು. ಅವನು ಹಾಗೆಯೇ ಆಗಲಿ ಎಂದು ಹೇಳಿದನು.

ಸೀತಾಪ್ರಸಾದಾಚ್ಚ ಸದಾ ಮಾಮಿಹಸ್ಥಮರಿಂದಮ ।
ಉಪತಿಷ್ಠಂತಿ ದಿವ್ಯಾ ಹಿ ಭೋಗಾ ಭೀಮ ಯಥೇಪ್ಸಿತಾಃ ॥೧೮॥

ಎಲೈ ಅರಿಂದಮನೇ, ಸೀತೆಯ ಅನುಗ್ರಹದಿಂದ ನನಗೆ ಯಾವಾಗಲೂ ಇಷ್ಟವಾದ ದಿವ್ಯಭೋಗಗಳೆಲ್ಲವೂ ಇಲ್ಲಿಯೇ ಒದಗುತ್ತವೆ.

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ರಾಜ್ಯಂ ಕಾರಿತವಾನ್ ರಾಮಸ್ತತಃ ಸ್ವಭವನಂ ಗತಃ ॥೧೯॥

ರಾಮನು ಹನ್ನೊಂದುಸಾವಿರ ವರ್ಷಗಳ ಕಾಲ ರಾಜ್ಯವನ್ನು ಆಳಿ ಅನಂತರ ತನ್ನ ಭವನವಾದ ವೈಕುಂಠಕ್ಕೆ ಹಿಂದಿರುಗಿದನು.

ತದಿಹಾಪ್ಸರಸಸ್ತಾತ ಗಂಧರ್ವಾಶ್ಚ ಸದಾನಘ ।
ತಸ್ಯ ವೀರಸ್ಯ ಚರಿತಂ ಗಾಯಂತೋ ರಮಯಂತಿ ಮಾಮ್ ॥೨೦॥

ಎಲೈ ಪ್ರೀತಿಪಾತ್ರನೇ, ಎಲೈ ಅನಘನೇ, ಇಲ್ಲಿ ಗಂಧರ್ವರು ಮತ್ತು ಅಪ್ಸರೆಯರು ಆ ರಾಮನ ಚರಿತ್ರೆಯನ್ನು ಗಾನಮಾಡುತ್ತಾ ನನ್ನನ್ನು ಸಂತೋಷಪಡಿಸುತ್ತಾರೆ.

ಅಯಂ ಚ ಮಾರ್ಗೋ ಮರ್ತ್ಯಾನಾಮಗಮ್ಯಃ ಕುರುನಂದನ ।
ತತೋಽಹಂ ರುದ್ಧವಾನ್ ಮಾರ್ಗಂ ತವೇಮಂ ದೇವಸೇವಿತಮ್ ॥

ಎಲೈ ಕುರುನಂದನನೇ, ಈ ಮಾರ್ಗವು ಮನುಷ್ಯರಿಂದ ಅಗಮ್ಯವಾದುದು. ಆದ್ದರಿಂದ ದೇವತೆಗಳಿಂದ ಸೇವಿತವಾದ ಈ ಮಾರ್ಗವನ್ನು ನಾನು ನಿನಗೆ ತಡೆದೆ.

ತ್ವಾಮನೇನ ತಥಾ ಯಾಂತಂ ಯಕ್ಷೋ ವಾ ರಾಕ್ಷಸೋಽಪಿ ವಾ ।
ಧರ್ಷಯೇದ್ವಾ ಶಪೇದ್ವಾಪಿ ಮಾ ಕಶ್ಚಿದಿತಿ ಭಾರತ ॥೨೨॥

ಎಲೈ ಭಾರತನೇ, ನೀನು ಈ ಮಾರ್ಗದಲ್ಲಿ ಹೋಗುವಾಗ ಯಾವುದಾದರೂ ಯಕ್ಷನಿಂದಾಗಲೀ, ರಾಕ್ಷಸನಿಂದಾಗಲೀ ಅವಮಾನವು ಅಥವಾ ಶಾಪವು ಆಗದಿರಲಿ ಎಂದು ನಾನು ನಿನ್ನನ್ನು ತಡೆದೆ.

ದಿವ್ಯೋ ದೇವಪಥೋ ಹ್ಯೇಷ ನಾತ್ರ ಗಚ್ಛಂತಿ ಮಾನುಷಾಃ ।
ಯದರ್ಥಮಾಗತಶ್ಚಾಪಿ ಅತ ಏವ ಸರಶ್ಚ ತತ್ ॥೨೩॥

ನೀನು ಯಾವ ಉದ್ದೇಶದಿಂದ ಬಂದಿದ್ದೀಯೋ ಆ ಸರೋವರವು ಇಲ್ಲಿಯೇ ಸಮೀಪದಲ್ಲಿದೆ. ಇದು ದಿವ್ಯವಾದ ದೇವಮಾರ್ಗ. ಮನುಷ್ಯರು ಈ ಮಾರ್ಗದಲ್ಲಿ ಹೋಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಏಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ನಲವತ್ತಾರನೆಯ ಅಧ್ಯಾಯ

ಭೀಮಸೇನನಿಂದ ಹನುಮಂತನ ಸಮುದ್ರಲಂಘನ ರೂಪದ ಪ್ರದರ್ಶನದ ಪ್ರಾರ್ಥನೆ. ಹನುಮಂತನಿಂದ ಯುಗಧರ್ಮಗಳ ಉಪದೇಶ.

ವೈಶಂಪಾಯನಃ

ಏಮುಕ್ತೋ ಮಹಾಬಾಹುರ್ಭೀಮಸೇನಃ ಪ್ರತಾಪವಾನ್ ।
ಪ್ರಣಿಪತ್ಯ ತತಃ ಪ್ರೀತ್ಯಾ ಭ್ರಾತರಂ ಹೃಷ್ಟಮಾನಸಃ ।
ಉವಾಚ ಶ್ಲಕ್ಷ್ಣಯಾ ವಾಚಾ ಹನೂಮಂತಂ ಕಪೀಶ್ವರಮ್ ॥೧॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಪ್ರತಾಪಶಾಲಿಯಾದ ಭೀಮಸೇನನು ಸಂತೋಷಗೊಂಡ ಮನಸ್ಸುಳ್ಳವನಾಗಿ ಅಣ್ಣನಾದ ಹನುಮಂತನಿಗೆ ನಮಸ್ಕರಿಸಿ ಕಪೀಶ್ವರನಾದ ಹನುಮಂತನನ್ನು ಕುರಿತು ಪ್ರೀತಿಯಿಂದ ಮಧುರವಾದ ಮಾತುಗಳನ್ನು ಆಡಿದನು.

ಮಯಾ ಧನ್ಯತರೋ ನಾಸ್ತಿ ಯದಾರ್ಯಂ ದೃಷ್ಟವಾನಹಮ್ ।
ಅನುಗ್ರಹೋ ಮೇ ಸುಮಹಾಂಸ್ತ್ವಪ್ತಿಸ್ತ್ವ ತವ ದರ್ಶನಾತ್ ॥೨॥

ನಾನು ಪೂಜ್ಯನಾದ ನಿನ್ನನ್ನು ನೋಡಿದ ಕಾರಣದಿಂದ ನನಗಿಂತ ಧನ್ಯರಾದವರು ಯಾರೂ ಇಲ್ಲವೆಂದು ಭಾವಿಸುತ್ತೇನೆ. ನೀನು ನನಗೆ ಮಾಡಿದ ಅನುಗ್ರಹವು ಬಹಳ ದೊಡ್ಡದು. ನಿನ್ನ ದರ್ಶನದಿಂದ ನನಗೆ ತೃಪ್ತಿ ಉಂಟಾಗಿದೆ.

ಏಕಂ ತು ಕೃತಮೀಚ್ಛಾಮಿ ತ್ವಯಾऽದ್ಯ ಪ್ರಿಯಮಾತ್ಮನಃ ।
ಯತ್ತೇ ತದಾऽऽಪೀತ್ ಪ್ಲವತಃ ಸಾಗರಂ ಮಕರಾಲಯಮ್ ॥೩॥

ರೂಪಮಪ್ರತಿಮಂ ವೀರ ತದಿಚ್ಛಾಮಿ ನಿರೀಕ್ಷಿತುಮ್ ।
ಏವಂ ತುಷ್ಟೋ ಭವಿಷ್ಯಾಮಿ ಶ್ರದ್ಧಾಸ್ಯಾಮಿ ಚ ತೇ ವಚಃ ॥೪॥

ನನಗೆ ಪ್ರಿಯವಾದ ಇದೊಂದು ಕೆಲಸವನ್ನು ಈ ದಿನ ನೀನು ಮಾಡಬೇಕೆಂದು ನಾನು ಬಯಸುತ್ತೇನೆ. ಮಕರಾಲಯವಾದ ಸಮುದ್ರವನ್ನು ದಾಟುವಾಗ ನಿನ್ನ ಆಸದೃಶವಾದ ಯಾವ ರೂಪವಿದ್ದಿತೋ ಅದನ್ನು ನೋಡಲು ಬಯಸುತ್ತೇನೆ. ಎಲೈ ವೀರನೇ, ಹಾಗೆ ಮಾಡಿದರೆ ನಾನು ಸಂತುಷ್ಟನಾಗುವೆನು ಮತ್ತು ನಿನ್ನ ಮಾತುಗಳನ್ನು ನಂಬುವೆನು.

ವೈಶಂಪಾಯನಃ

ಏವಮುಕ್ತಃ ಸ ತೇಜಸ್ವೀ ಪ್ರಹಸ್ಯ ಹರಿರಬ್ರವೀತ್ ॥೫॥

ನ ತಚ್ಶಕ್ಯಂ ತ್ವಯಾ ದ್ರಷ್ಟುಂ ರೂಪಂ ನ್ಯಾಯೇನ ಕೇನಚಿತ್ ।
ಕಾಲಾವಸ್ಥಾ ತದಾ ಹ್ಯನ್ಯಾ ವರ್ತತೇ ಸಾ ನ ಸಾಂಪ್ರತಮ್ ।
ತತೋऽದ್ಯ ದುಷ್ಕರಂ ದ್ರಷ್ಟುಂ ಮಮ ರೂಪಂ ನರೋತ್ತಮ ॥೬॥

ಹೀಗೆ ಹೇಳಲ್ಪಟ್ಟ ತೇಜಸ್ವಿಯಾದ ಆ ಕಪಿಯಾದ ಹನುಮಂತನು, ನಗುತ್ತಾ ಹೇಳಿದನು. ನೀನಾಗಲೀ ಅಥವಾ ಇನ್ನೊಬ್ಬನಾಗಲೀ ಆ ರೂಪವನ್ನು ನೋಡಲು ಸಾಧ್ಯವಿಲ್ಲ. ಆಗ ಇದ್ದ ಕಾಲಸ್ಥಿತಿಯೇ ಬೇರೆ. ಅದು ಈಗ ಇಲ್ಲ. ಆದ್ದರಿಂದ ಎಲೈ ನರೋತ್ತಮನೇ, ಆ ರೂಪವನ್ನು ಈ ದಿನ ನೀನು ನೋಡಲು ಸಾಧ್ಯವಿಲ್ಲ.

ಅನ್ಯಃ ಕೃತಯುಗೇ ಕಾಲಸ್ತ್ರೇತಾಯಾಂ ದ್ವಾಪರೇ ಪರಃ ।
ಅಯಂ ಪ್ರಧ್ವಂಸನಃ ಕಾಲೋ ನಾದ್ಯ ತದ್ರೂಪಮಸ್ತಿ ಮೇ ॥೭॥

ಕೃತಯುಗದ ಕಾಲವು ಬೇರೆ. ತ್ರೇತಾಯುಗದ ಕಾಲವು ಬೇರೆ. ಇದು (ದ್ವಾಪರ ಯುಗವು) ಎಲ್ಲವೂ ನಾಶವನ್ನು ಹೊಂದುವ ಕಾಲ. ಈಗ ನನಗೆ ಆ ರೂಪವಿಲ್ಲ.

ಭೂಮಿರ್ನದ್ಯೋ ನಗಾಃ ಶೈಲಾಃ ಸಿದ್ಧಾ ದೇವಾ ಮಹರ್ಷಯಃ ।
ಕಾಲಂ ಸಮನುವರ್ತಂತೇ ಯಥಾ ಭಾವಾ ಯುಗೇ ಯುಗೇ ॥೮॥

ಬೇರೆ ಬೇರೆ ಪದಾರ್ಥಗಳು ಯುಗಯುಗಗಳಲ್ಲಿ ಕಾಲವನ್ನು ಅನುಸರಿಸುವಂತೆ ಭೂಮಿ, ನದಿಗಳು, ವೃಕ್ಷಗಳು, ಪರ್ವತಗಳು, ಸಿದ್ಧರು, ದೇವತೆಗಳು, ಮಹರ್ಷಿಗಳು ಎಲ್ಲರೂ ಕಾಲವನ್ನು ಅನುಸರಿಸುತ್ತಾರೆ.

ಕಾಲಂ ಕಾಲಂ ಸಮಾಸಾದ್ಯ ನರಾಣಾಂ ನರಪುಂಗವ ।
ಬಲವರ್ಷ್ಮಪ್ರಭಾವಾ ಹಿ ಪ್ರಹೀಯಂತ್ಯುದ್ಭವಂತಿ ಚ ॥೯॥

ಎಲೈ ನರಶ್ರೇಷ್ಠನೇ, ಆಯಾ ಕಾಲವನ್ನು ಅನುಸರಿಸಿ ಮನುಷ್ಯರಿಗೆ ಶರೀರ, ಬಲ, ಸಾಮರ್ಥ್ಯಗಳು ಹೆಚ್ಚಾಗುತ್ತವೆ ಮತ್ತು ಕಡಿಮೆಯಾಗುತ್ತವೆ.

ತದಲಂ ಬತ ತದ್ರೂಪಂ ದ್ರಷ್ಟುಂ ಕುರುಕುಲೋದ್ವಹ ।
ಯುಗಂ ಸಮನುವರ್ತಾಮಿ ಕಾಲೋ ಹಿ ದುರತಿಕ್ರಮಃ ॥೧೦॥

ಎಲೈ ಕುರುಕುಲೋದ್ವಹನೇ, ಆದ್ದರಿಂದ ಆ ರೂಪವನ್ನು ನೋಡುವ ಆಸೆಯನ್ನು ಬಿಡು. ನಾನು ಯುಗವನ್ನು ಅನುಸರಿಸುತ್ತೇನೆ. ಕಾಲವನ್ನು ಮೀರಲು ಸಾಧ್ಯವಿಲ್ಲವಷ್ಟೆ?

ಭೀಮಃ

ಯುಸಂಖ್ಯಾಂ ಸಮಾಚಕ್ಷ್ವ ಆಚಾರಂ ಚ ಯುಗೇ ಯುಗೇ ।
ಧರ್ಮಕಾಮಾರ್ಥಭಾವಾಂಶ್ಚ ಕರ್ಮಚೇರ್ಯೇ ಭವಾಭವೌ ॥೧೧॥

ಭೀಮ– ಯುಗಸಂಖ್ಯೆಯನ್ನು ಮತ್ತು ಪ್ರತಿಯುಗದಲ್ಲಿ ಉಂಟಾಗುವ ಆಚಾರವನ್ನು ಧರ್ಮ, ಕಾಮ, ಅರ್ಥ ಮತ್ತು ಉಳಿದ ಪದಾರ್ಥಗಳನ್ನು ಶುಭಾಶುಭ ಕರ್ಮಗಳನ್ನು, ಕಾರ್ಯಕಾರಣ ಶಕ್ತಿಯನ್ನು, ಮಂಗಳಾಮಂಗಳಗಳನ್ನು ನನಗೆ ತಿಳಿಸು.

ಹನೂಮಾನ್

ಕೃತಂ ನಾಮ ಯುಗಂ ತಾತ ಯತ್ರ ಧರ್ಮಃ ಸನಾತನಃ ।
ಕೃತಮೇವ ನ ಕರ್ತವ್ಯಂ ತಸ್ಮಿನ್ ಕಾಲೇ ಯುಗೋತ್ತಮೇ ॥೧೨॥

ಹನುಮಾನ್- ಪ್ರೀತಿಪಾತ್ರನೇ, ಹಿಂದೆ ಕೃತಯುಗವಿದ್ದಿತು. ಅಲ್ಲಿ ಸನಾತನ ಧರ್ಮವು ನಡೆಯುತ್ತಿದ್ದಿತು. ಆ ಶ್ರೇಷ್ಠವಾದ ಯುಗದಲ್ಲಿ ಎಲ್ಲರೂ ಕೃತಕೃತ್ಯರಾಗಿದ್ದರು. ಯಾರಿಗೂ ಮಾಡಬೇಕಾಗಿ ಉಳಿದ ಒಂದು ಕಾರ್ಯವು ಇರಲಿಲ್ಲ.

ನ ತತ್ರ ಧರ್ಮಾಃ ಸೀದಂತಿ ಕ್ಷೀಯಂತೇ ನ ಚ ವೈ ಪ್ರಜಾಃ ।
ತತಃ ಕೃತಯುಗಂ ನಾಮ ಕಾಲೇನ ಗುಣತಾಂ ಗತಮ್ ॥೧೩॥

ಆಗ ಧರ್ಮಗಳು ಅವಸಾನವನ್ನು ಹೊಂದುತ್ತಿರಲಿಲ್ಲ. ಪ್ರಜೆಗಳು ಲಯವನ್ನು ಹೊಂದುತ್ತಿರಲಿಲ್ಲ. ಆದ್ದರಿಂದ ಕೃತಯುಗ ಎಂಬ ಹೆಸರು ಬಂದು ಕಾಲದಲ್ಲಿ ಶ್ರೇಷ್ಠವಾದ ಕಾಲ ಎನಿಸಿತು.

ದೇವದಾನವಗಂಧರ್ವಯಕ್ಷರಾಕ್ಷಸಪನ್ನಗಾಃ ।
ನಾಸನ್ ಕೃತಯುಗೇ ತಾತ ತದಾ ನ ಕ್ರಯವಿಕ್ರಯಃ ॥೧೪॥

ಎಲೈ ಪ್ರೀತಿಪಾತ್ರನೇ, ಆಗ ದೇವದಾನವಗಂಧರ್ವಯಕ್ಷರಾಕ್ಷಸ ಸರ್ಪಗಳು ಇರಲಿಲ್ಲ. ಕ್ರಯವಿಕ್ರಯಗಳು ನಡೆಯುತ್ತಿರಲಿಲ್ಲ.

ನ ಸಾಮಋಗ್ಯಜುರ್ವರ್ಣಾಃ ಕ್ರಿಯಾ ನಾಸೀಚ್ಚ ಮಾನವೀ ।
ಅಭಿಧ್ಯಾಯ ಫಲಂ ತತ್ರ ಧರ್ಮಃ ಸನ್ಯಾಸ ಏವ ಚ ॥೧೫॥

ಧರ್ಮದ ಸಲುವಾಗಿ ಋಗಾದಿ ವೇದಗಳನ್ನು ಬಳಸುತ್ತಿರಲಿಲ್ಲ. ಎಲ್ಲವೂ ಸಂಕಲ್ಪದಿಂದಲೇ ಸಿದ್ಧವಾಗುತ್ತಿದ್ದರಿಂದ ಮನುಷ್ಯರಿಗೆ ಕೃಷಿ ಮೊದಲಾದ ಕ್ರಿಯೆಗಳೂ ಇರಲಿಲ್ಲ. ಫಲವನ್ನು ಉದ್ದೇಶಿಸಿ ಯಾರೂ ಧರ್ಮಾಚರಣೆಯನ್ನು ಮಾಡುತ್ತಿರಲಿಲ್ಲ. ಅಥವಾ ಸಂನ್ಯಾಸವನ್ನು ಸ್ವೀಕರಿಸುತ್ತಿರಲಿಲ್ಲ.

ನ ತಸ್ಮಿನ್ ಯುಗಸಂಸರ್ಗೇ ವ್ಯಾಧಯೋ ನೇಂದ್ರಿಯಕ್ಷಯಃ ।
ನಾಸೂಯಾ ನಾಪಿ ರುದಿತಂ ನ ದರ್ಪೋ ನಾಪಿ ವೈಕೃತಮ್ ॥೧೬॥

ಆ ಯುಗದ ಕಾಲದಲ್ಲಿ ವ್ಯಾಧಿಗಳಾಗಲೀ ಇಂದ್ರಿಯಕ್ಷಯವಾಗಲೀ ಇರಲಿಲ್ಲ. ಅಸೂಯೆಯಾಗಲೀ ರೋಧನವಾಗಲೀ, ದರ್ಪವಾಗಲೀ, ವಂಚನೆಯಾಗಲೀ ಇರಲಿಲ್ಲ.

ನ ವಿಗ್ರಹಃ ಕೃತಸ್ತಂದ್ರೀ ನ ದ್ವೇಷೋ ನ ಚ ಪೈಶುನಮ್ ।
ನ ಭಯಂ ನಾಪಿ ಸಂತಾಪೋ ನ ಚೇರ್ಷ್ಯಾ ನ ಚ ಮತ್ಸರಃ ॥೧೭॥

ಕಲಹಗಳು ಇರಲಿಲ್ಲ. ಆಗ ಆಲಸ್ಯ ಎಲ್ಲಿಂದ ಬರಬೇಕು? ಆಗ ದ್ವೇಷವಾಗಲೀ, ಚಾಡಿಯ ಮಾತುಗಳಾಗಲೀ ಇರಲಿಲ್ಲ. ಆಗ ಭಯವಾಗಲೀ, ಸಂತಾಪವಾಗಲೀ, ಹೊಟ್ಟೇಕಿಚ್ಚಾಗಲೀ ಅಥವಾ ಮಾತ್ಸರ್ಯವಾಗಲೀ ಇರಲಿಲ್ಲ.

ತತಃ ಪರಮಕಂ ಬ್ರಹ್ಮ ಸಾ ಗತಿರ್ಯೋಗಿನಾಂ ಪರಾ ।
ಆತ್ಮಾ ಚ ಸರ್ವಭೂತಾನಾಂ ಶುಕ್ಲೋ ನಾರಾಯಣಸ್ತದಾ ॥೧೮॥

ಆಗ ಯೋಗಿಗಳಿಗೆ ಪರಮಗತಿಯಾದ ನಾರಾಯಣನೇ ಸರ್ವೋತ್ತಮನೆಂದು, ಸರ್ವಜೀವರ ಅಂತರ್ಯಾಮಿ ಎಂದು ಪೂಜಿಸಲ್ಪಡುತ್ತಿದ್ದನು. ಅವನಿಗೆ ಆಗ ಶುಕ್ಲ ವರ್ಣವಿದ್ದಿತು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ಕೃತಲಕ್ಷಣಾಃ ।
ಕೃತೇ ಯುಗೇ ಸಮಭವನ್ ಸ್ವಕರ್ಮನಿರತಾಃ ಪ್ರಜಾಃ ॥೧೯॥

ಸಮಾಶ್ರಯಂ ಸಮಾಚಾರಂ ಸಮಜ್ಞಾನಂ ಚ ಕೇವಲಮ್ ।
ತದಾ ಹಿ ಸಮಕರ್ಮಾಣೋ ವರ್ಣಾ ಧರ್ಮವಪ್ಲವನ್ ॥೨೦॥

ಏಕದೇವಸದಾಯುಕ್ತಾ ಏಕಮಂತ್ರವಿಧಿಕ್ರಿಯಾಃ ।
ಪೃಥಗ್ಧರ್ಮಾಸ್ತ್ವೇಕವೇದಾ ಧರ್ಮಮೇಕಮನುವ್ರತಾಃ ॥೨೧॥

ಕೃತಯುಗದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪ್ರಜೆಗಳೆಲ್ಲರೂ ಶಂಖ ಚಕ್ರಾದಿ ಚಿಹ್ನೆಗಳನ್ನು ಧರಿಸಿ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿದ್ದರು. ಎಲ್ಲ ವರ್ಣದವರೂ ಸಮಾನವಾದ ಆಶ್ರಯವನ್ನು ಹೊಂದಿ ಸಮಾನವಾದ ಆಚಾರವನ್ನು, ಸಮಾನವಾದ ಜ್ಞಾನವನ್ನು ಹೊಂದಿ ಸಮಾನವಾದ ಕರ್ಮಗಳನ್ನು ಮಾಡಿ ಧರ್ಮವನ್ನು ಸಂಪಾದಿಸುತ್ತಿದ್ದರು. ಆಗ ಸರ್ವೋತ್ತಮನಾದ ಒಬ್ಬ ದೇವನನ್ನೇ ಯಾವಾಗಲೂ

ಪೂಜಿಸುತ್ತಿದ್ದರು. ಒಂದೇ ಮಂತ್ರ ಒಂದೇ ವಿಧಿ ಅವನನ್ನು ಪೂಜಿಸುವ ಒಂದೇ ಕ್ರಿಯೆಗಳು ಇದ್ದವು. ಬೇರೆ ಬೇರೆ ಧರ್ಮಗಳು ಇದ್ದರೂ ಅವಿಭಕ್ತವಾದ ಒಂದೇ ವೇದವಿದ್ದಿತು. ಎಲ್ಲರೂ ಒಂದೇ ವೈಷ್ಣವ ಧರ್ಮವನ್ನು ಅನುಸರಿಸುತ್ತಿದ್ದರು.

ಚಾತುರಾಶ್ರಮ್ಯಯುಕ್ತೇನ ಕರ್ಮಣಾ ಕಾಲಯೋಗಿನಾ ।
ಅಕಾಮಫಲಸಂಯೋಗಾತ್ ಪ್ರಾಪ್ನುವಂತಿ ಪರಾಂ ಗತಿಮ್ ॥೨೨॥

ನಾಲ್ಕು ಆಶ್ರಯಗಳಿಗೆ ಯೋಗ್ಯವಾದ ಆ ಕಾಲಕ್ಕೆ ಉಚಿತವಾದ ಕರ್ಮಗಳನ್ನು ನಿಷ್ಕಾಮವಾಗಿ ಫಲೋದ್ದೇಶರಹಿತವಾಗಿ ಆಚರಿಸಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಿದ್ದರು.

ಏತತ್‌ಕೃತಯುಗಂ ನಾಮ ತ್ರೈಗುಣ್ಯಪರಿವರ್ಜಿತಮ್ ॥೨೪॥

ಇದಕ್ಕೆ ಕೃತಯುಗ ಎಂದು ಹೆಸರು. ಅದು ಮೂರುಗುಣಗಳಿಂದ ರಹಿತವಾಗಿದ್ದಿತು (ಸತ್ವಗುಣವೇ ಪ್ರಧಾನವಾಗಿದ್ದಿತು. ರಜೋಗುಣ ಮತ್ತು ತಮೋಗುಣಗಳು ಅಲ್ಪವಾಗಿದ್ದವು).

ಆತ್ಮಯೋಗಸಮಾಯುಕ್ತೋ ಧರ್ಮೋಽಯಂ ಕೃತಲಕ್ಷಣಃ ।
ಕೃತೇ ಯುಗೇ ಚತುಷ್ಪಾದಶ್ಚಾತುರ್ವರ್ಣ್ಯಸ್ಯ ಶಾಶ್ವತಃ ॥೨೫॥

ಕೃತಯುಗದಲ್ಲಿ ಎಲ್ಲರೂ ಆತ್ಮಯೋಗದಲ್ಲಿ ನಿರತರಾಗಿದ್ದರು. ಚಾತುರ್ವರ್ಣ್ಯಕ್ಕೆ ಸಂಬಂಧಿಸಿದ ಶಾಶ್ವತವಾದ ಧರ್ಮವು (ಧರ್ಮ, ಶೌಚ, ದಯಾ, ಸತ್ಯವೆಂಬ) ನಾಲ್ಕು ಪಾದಗಳ ಮೇಲೆ ಭದ್ರವಾಗಿ ನೆಲೆಸಿದ್ದಿತು.

ತ್ರೇತಾಮಪಿ ನಿಬೋಧ ತ್ವಂ ಯಸ್ಮಿನ್ ಸತ್ರಂ ಪ್ರವರ್ತತೇ ।
ಪಾದೇನ ಹ್ರಸತೇ ಧರ್ಮೋ ರಕ್ತತಾಂ ಯಾತಿ ಚಾಚ್ಯುತಃ ॥೨೫॥

ತ್ರೇತಾಯುಗವನ್ನು ಹೇಳುತ್ತೇನೆ ಕೇಳು. ಅಲ್ಲಿ ಸತ್ರ ಮೊದಲಾದ ಯಾಗಗಳು ಜರುಗುತ್ತವೆ. ಧರ್ಮವು ಒಂದು ಪಾದದಿಂದ ಊನವಾಗುತ್ತವೆ. ಅಚ್ಯುತನು ರಕ್ತವರ್ಣೋಪೇತನಾಗುತ್ತಾನೆ.

ಸತ್ಯಪ್ರವೃತ್ತಾಶ್ಚ ನರಾಃ ಕ್ರಿಯಾಧರ್ಮಪರಾಯಣಾಃ ।
ತತೋ ಯಜ್ಞಾಃ ಪ್ರವರ್ತಂತೇ ಧರ್ಮಾಶ್ಚ ವಿವಿಧಾಃ ಕ್ರಿಯಾಃ ॥೨೬॥

ಮನುಷ್ಯರು ಸತ್ಯಪ್ರವೃತ್ತರಾಗಿ ಕ್ರಿಯಾಪರಾಯಣರೂ, ಧರ್ಮಪರಾಯಣರೂ ಆಗುತ್ತಾರೆ. ಯಜ್ಞಗಳು ಜರುಗುತ್ತವೆ. ಧರ್ಮಗಳು ಮತ್ತು ವಿವಿಧವಾದ ಕ್ರಿಯೆಗಳು ಆಚರಿಸಲ್ಪಡುತ್ತವೆ.

ತ್ರೇತಾಯಾಂ ಭಾವಸಂಕಲ್ಪಾಃ ಕ್ರಿಯಾದಾನಫಲೋಪಗಾಃ ।
ಸದ್ಧರ್ಮಸ್ಥಾಃ ಕ್ರಿಯಾವಂತೋ ನರಾಸ್ತ್ರೇತಾಯುಗೇऽಭವನ್ ॥೨೭॥

ತ್ರೇತಾಯುಗದಲ್ಲಿ ಫಲವನ್ನು ಸಂಕಲ್ಪಿಸಿ ಅಂತಹ ಫಲವನ್ನು ಕೊಡುವ ಕ್ರಿಯಾ ಮತ್ತು ದಾನಗಳನ್ನು ಮಾಡುತ್ತಾರೆ. ತಪೋದಾನ ಪರಾಯಣರಾದವರು ಧರ್ಮ ಮಾರ್ಗವನ್ನು ಬಿಟ್ಟು ಚಲಿಸುವುದಿಲ್ಲ. ತ್ರೇತಾಯುಗದಲ್ಲಿ ಮನುಷ್ಯರು ತಮ್ಮ ತಮ್ಮ ಧರ್ಮಗಳನ್ನು ಮತ್ತು ತಮಗೆ ಉಚಿತವಾದ ಕ್ರಿಯೆಗಳನ್ನು ಆಚರಿಸುವವರಾಗುತ್ತಾರೆ.

ದ್ವಾಪರೇ ಚ ಯುಗೇ ಧರ್ಮೋ ದ್ವಿಭಾಗೋನಃ ಪ್ರವರ್ತತೇ ।
ವಿಷ್ಣುರ್ವೈ ಪೀತತಾಂ ಯಾತಿ ಚತುರ್ಧಾ ವೇದ ಏವ ಚ ॥೨೮॥

ದ್ವಾಪರಯುಗದಲ್ಲಿ ಧರ್ಮವು ಎರಡು ಪಾದಗಳಿಂದ ಕಡಿಮೆಯಾಗುತ್ತದೆ. ವಿಷ್ಣುವು ಪೀತರೂಪವುಳ್ಳವನಾಗುತ್ತಾನೆ. ವೇದವು ನಾಲ್ಕುವೇದಗಳಾಗಿ ವಿಭಾಗವನ್ನು ಹೊಂದುತ್ತವೆ.

ತತೋऽನ್ಯೇ ಚ ಚತುರ್ವೇದಾಸ್ತ್ರಿವೇದಾಶ್ಚ ತಥಾಪರೇ ।
ದ್ವಿವೇದಾಶ್ಚೈಕವೇದಾಶ್ಚಾಪ್ಯನೃಚಶ್ಚ ತಥಾಪರೇ ॥೨೯॥

ಕೆಲವರು ನಾಲ್ಕು ವೇದಗಳನ್ನು, ಕೆಲವರು ಮೂರುವೇದಗಳನ್ನು, ಕೆಲವರು ಎರಡು ವೇದಗಳನ್ನು, ಕೆಲವರು ಒಂದು ವೇದವನ್ನು ಅಧ್ಯಯನ ಮಾಡುತ್ತಾರೆ. ಇನ್ನು ಕೆಲವರು ಯಾವ ವೇದವನ್ನಾಗಲೀ ಅಥವಾ ಮಂತ್ರವನ್ನಾಗಲೀ ಅಧ್ಯಯನ ಮಾಡುವುದಿಲ್ಲ.

ಏವಂ ಶಾಸ್ತ್ರೇಷು ಭಿನ್ನೇಷು ಬಹುಧಾ ನೀಯತೇ ಕ್ರಿಯಾ ।
ತಪೋದಾನಪ್ರವೃತ್ತಾ ಚ ರಾಜಸೀ ಭವತಿ ಪ್ರಜಾ ॥೩೦॥

ಹೀಗೆ ಶಾಸ್ತ್ರಗಳು ವಿಭಾಗವನ್ನು ಹೊಂದುತ್ತಿರಲು, ಕ್ರಿಯೆಗಳು ಅನೇಕ ರೂಪವನ್ನು ತಾಳುತ್ತವೆ. ತಪೋದಾನಗಳಲ್ಲಿ ಪ್ರವೃತ್ತರಾದ ಪ್ರಜೆಗಳು ರಾಜಸದೃಷ್ಟಿಯಿಂದಲೇ (ಎಂದರೆ ಫಲೋದ್ದೇಶದಿಂದಲೇ) ಪ್ರವೃತ್ತರಾಗುತ್ತಾರೆ.

ಏಕವೇದಸ್ಯ ಚಾಜ್ಞಾನಾದ್ ವೇದಾಸ್ತೇ ಬಹವಃ ಕೃತಾಃ ।
ಸತ್ತ್ವಸ್ಯ ಚೇಹ ವಿಭ್ರಂಶಾತ್ ಸತ್ಯೇ ಕಶ್ಚಿತದವಸ್ಥಿತಃ ॥೩೧॥

ಒಂದು ವೇದವು (ವೇದಪ್ರತಿಪಾದ್ಯವಾದ ಒಂದು ವಿಷಯವನ್ನು) ತಿಳಿಯದಿರುವುದರಿಂದ ಅನೇಕ ವೇದಗಳಾಗುತ್ತವೆ. ಸತ್ತ್ವವು ಇಲ್ಲಿ ನಾಶವನ್ನು ಹೊಂದುವುದರಿಂದ ಯಾರೋ ಒಬ್ಬರು ಸತ್ಯಶೀಲರಾಗಿರುತ್ತಾರೆ.

ಸತ್ಯಾತ್ ಪ್ರಚ್ಯವಮಾನಾನಾಂ ವ್ಯಾಧಯೋ ಬಹವೋಽಭವನ್ ।
ಕಾಮಾಶ್ಚೋಪದ್ರವಾಶ್ಚೈವ ತದಾ ವೈ ದೈವಕಾರಿತಾಃ ॥೩೨॥

ಪ್ರಜೆಗಳು ಸತ್ಯದಿಂದ ಚ್ಯುತರಾಗುವುದರಿಂದ ಅನೇಕ ವ್ಯಾಧಿಗಳು ಉಂಟಾಗುತ್ತವೆ. ಅವರಿಗೆ ಅನೇಕ ಕಾಮಗಳು (ದುರಾಸೆಗಳು) ಮತ್ತು ದೈವಕೃತವಾದ ಉಪದ್ರವಗಳು ಉಂಟಾಗುತ್ತವೆ.

ಯೈರ್ದ್ಯಮಾನಾಃ ಸುಭೃಶಂ ತಪಸ್ತಪ್ಸ್ಯಂತಿ ಮಾನವಾಃ ।
ಕಾಮಕಾಮಾಃ ಸ್ವರ್ಗಕಾಮಾ ಯಜ್ಞಾಂಸ್ತನ್ವಂತಿ ಚಾಪರೇ ॥೩೩॥

ಅಂತಹ ದೇವಕೃತವಾದ ಅತಿವೃಷ್ಟ್ಯಾದಿಗಳಿಂದ ಚೆನ್ನಾಗಿ ಪೀಡಿತರಾದ ಮಾನವರು ಐಹಿಕ ಕಾಮ್ಯಗಳ ಕಾಮನೆಯಿಂದ ಮತ್ತು ಸ್ವರ್ಗದ ಕಾಮನೆಯಿಂದ ತಪಸ್ಸನ್ನು ಆಚರಿಸುತ್ತಾರೆ. ಇನ್ನು ಕೆಲವರು ಯಜ್ಞಗಳನ್ನು ಆಚರಿಸುತ್ತಾರೆ.

ಏವಂ ದ್ವಾಪರಮಾಸಾದ್ಯ ಪ್ರಜಾಃ ಕ್ಷೀಯಂತ್ಯಧರ್ಮತಃ ।
ಪಾದೇನೈಕೇನ ಕೌಂತೇಯ ಧರ್ಮಃ ಕಲಿಯುಗೇ ಸ್ಥಿತಃ ॥೩೪॥

ತಾಮಸಂ ಯುಗಮಾಸಾದ್ಯ ಕೃಷ್ಣೋ ಭವತಿ ಕೇಶವಃ ॥೩೫॥

ಹೀಗೆ ದ್ವಾಪರದಲ್ಲಿ ಪ್ರಜೆಗಳು ಅಧರ್ಮದಿಂದ ನಾಶವನ್ನು ಹೊಂದುತ್ತಾರೆ. ಕಲಿಯುಗದಲ್ಲಿ ಧರ್ಮವು ಸತ್ಯವೆಂಬ ಒಂದೇ ಪಾದದಿಂದ ನಿಲ್ಲುತ್ತದೆ. ಎಲೈ ಕೌಂತೇಯನೇ, ಆ ತಾಮಸ ಯುಗದಲ್ಲಿ ಕೇಶವನು ಕೃಷ್ಣವರ್ಣೋಪೇತನಾಗುತ್ತಾನೆ.

ವೇದಾಚಾರಾಃ ಪ್ರಶಾಮ್ಯಂತಿ ಧರ್ಮಯಜ್ಞಕ್ರಿಯಾಸ್ತಥಾ ।
ಈತಯೋ ವ್ಯಾಧಯಸ್ತಂದ್ರೀ ದೋಷಾಃ ಕ್ರೋಧಾದಯಸ್ತಥಾ ।
ಉಪದ್ರವಾ ಪ್ರವರ್ತಂತೇ ಆಧಯಃ ಕ್ಷುದ್ಭಯಂ ತಥಾ ॥೩೬॥

ವೇದಾಚಾರಗಳು, ಧರ್ಮಯಜ್ಞಾದಿ ಕ್ರಿಯೆಗಳು ನಾಶವನ್ನು ಹೊಂದುತ್ತವೆ. ಅತಿವೃಷ್ಟಾದಿ ಈತಿಗಳು, ದೇಹದ ರೋಗಗಳು, ಆಲಸ್ಯಾದಿಗಳು, ಕ್ರೋಧಗಳು ಉಂಟಾಗುತ್ತವೆ. ಅನೇಕ ರೀತಿಯ ಉಪದ್ರವಗಳು, ಮಾನಸ ವ್ಯಥೆಗಳು ಮತ್ತು ಹಸಿವಿನ ಭಯವು ಉಂಟಾಗುತ್ತದೆ.

ಯುಗೇಷ್ವಾವರ್ತಮಾನೇಷು ಧರ್ಮೋ ವ್ಯಾವರ್ತತೇ ಪುನಃ ।
ಧರ್ಮೇ ವ್ಯಾವರ್ತಮಾನೇ ತು ಲೋಕೋ ವ್ಯಾವರ್ತತೇ ಪುನಃ ॥೩೭॥

ಯುಗಗಳು ಹೀಗೆ ಚಕ್ರದಂತೆ ತಿರುಗುವಾಗ ಧರ್ಮವೂ ತಿರುಗುತ್ತದೆ. ಧರ್ಮವು ತಿರುಗುವಂತೆ ಪ್ರಜೆಗಳು ತಿರುಗುತ್ತಾರೆ (ಯುಗಗಳು ಹೀಗೆ ತಿರುಗುತ್ತಾ ಕಲಿಯುಗವು ಬಂದಾಗ ಧರ್ಮವು ನಾಶವಾಗುತ್ತದೆ. ಧರ್ಮವು ನಾಶವಾಗುತ್ತಿರಲು ಪ್ರಜೆಗಳು ನಾಶವನ್ನು ಹೊಂದುತ್ತಾರೆ).

ಲೋಕೇ ಕ್ಷೀಣೇ ಕ್ಷಯಂ ಯಾಂತಿ ಭಾವಾ ಲೋಕಪ್ರವರ್ತಕಾಃ ।
ಯುಗಕ್ಷಯಕೃತಾ ಧರ್ಮಾಃ ಪ್ರಾರ್ಥನಾನಿ ವಿಕುರ್ವತೇ ॥೩೮॥

ಲೋಕವು ಮತ್ತು ಪ್ರಜೆಗಳು ನಾಶಹೊಂದುತ್ತಿರಲು ಲೋಕಪ್ರವರ್ತಕವಾದ ಧರ್ಮಜ್ಞಾನಾದಿ ಭಾವಗಳು ನಾಶವನ್ನು ಹೊಂದುತ್ತವೆ. ಯುಗಕ್ಷಯದ ನಿಮಿತ್ತದಿಂದಾಗಿ ಧರ್ಮಗಳು ಮತ್ತು ಪ್ರಾರ್ಥನೆಗಳು ವ್ಯರ್ಥವಾಗುತ್ತವೆ (ಅಥವಾ ವಿರುದ್ಧವಾದ ಫಲಗಳನ್ನು ಕೊಡುತ್ತದೆ).

ಏತತ್ ಕಲಿಯುಗಂ ನಾಮ ಅಚಿರಾದ್ಯತ್ ಪ್ರವರ್ತತೇ ।
ಯುಗಾನುವರ್ತನಂ ತ್ವೇತತ್ ಕುರ್ವಂತಿ ಚಿರಜೀವಿನಃ ॥೩೯॥

ಅಂತಹ ಈ ಕಲಿಯುಗವು ಸದ್ಯದಲ್ಲಿಯೇ ಬರಲಿದೆ. ಚಿರಜೀವಿಗಳಾದವರು ಆಯಾ ಯುಗದ ಧರ್ಮಗಳನ್ನು ಅನುಸರಿಸುತ್ತಾರೆ.

ಯಚ್ಚ ತೇ ಮತ್ತರಿಜ್ಞಾನೇ ಕೌತೂಹಲಮರಿಂದಮ ।
ಅನರ್ಥಕೇಷು ಕೋ ಭಾವಃ ಪುರುಷಸ್ಯ ವಿಜಾನತಃ ॥೪೦॥

ಎಲೈ ಅರಿಂದಮನೇ, ನನ್ನನ್ನು ತಿಳಿದುಕೊಳ್ಳಲು ನಿನಗೆ ಕುತೂಹಲವಿದೆಯಷ್ಟೆ? ನಿಷ್ಪಯೋಜನವಾದ ವಿಷಯಗಳಲ್ಲಿ ವಿವೇಕಿಯಾದವನು ಹಠವನ್ನು ಮಾಡಬಾರದು.

ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಯುಗಸಾಂಖ್ಯಾಂ ಮಹಾಬಾಹೋ ಸ್ಪಷ್ಟಾ ಪ್ರಾಪ್ಸುಹಿ ಗಮ್ಯತಾಮ್ ॥೪೧॥

ಮಹಾಬಾಹುವೇ, ನೀನು ಕೇಳಿದ ವಿಷಯಗಳೆಲ್ಲವನ್ನೂ ಮತ್ತು ಯುಗಗಳ ಸಂಖ್ಯೆಯನ್ನೂ ಹೇಳಿದ್ದೇನೆ. ನಿನಗೆ ಮಂಗಳವಾಗಲಿ, ಇಲ್ಲಿಂದ ಹೊರಟುಹೋಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ದ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ನಲವತ್ತೇಳನೆಯ ಅಧ್ಯಾಯ

ಭೀಮಸೇನನೆದುರಿಗೆ ಹನುಮಂತನ ಸಮುದ್ರಲಂಘನ ಮಾಡಿದ ರೂಪದ ಆವಿಷ್ಕಾರ ಮತ್ತು ಚಾತುರ್ವರ್ಣ್ಯ ಧರ್ಮೋಪದೇಶ.

ಭೀಮಸೇನಃ

ಪೂರ್ವರೂಪಮದೃಷ್ಟ್ವಾ ತೇ ನ ಯಾಸ್ಯಾಮಿ ಕಥಂಚನ ।
ಯದಿ ತೇಽಹಮನುಗ್ರಾಹ್ಯೋ ದರ್ಶಯಾತ್ಮಾನಮಾತ್ಮನಾ ॥೧॥

ಭೀಮಸೇನ– ನಿನ್ನ ಹಿಂದಿನ ಆ ರೂಪವನ್ನು ನೋಡದೆ ನಾನು ಏನಾದರೂ ಇಲ್ಲಿಂದ ಹೋಗುವುದಿಲ್ಲ. ನನ್ನ ಮೇಲೆ ಅನುಗ್ರಹವಿರುವುದಾದರೆ ಆ ನಿನ್ನ ರೂಪವನ್ನು ನೀನೇ ತೋರಿಸು.

ವೈಶಂಪಾಯನಃ

ಏವಮುಕ್ತಸ್ತು ಭೀಮೇನ ಸ್ಮಿತಂ ಕೃತ್ವಾ ಪ್ಲವಂಗಮಃ ।
ತದ್ರೂಪಂ ದರ್ಶಯಾಮಾಸ ಯದ್ವೈ ಸಾಗರಲಂಘನೇ ॥೨॥

ವೈಶಂಪಾಯನ– ಹೀಗೆ ಭೀಮನಿಂದ ಹೇಳಲ್ಪಟ್ಟ ಕಪೀಶ್ವರನಾದ ಹನುಮಂತನು ಮುಗುಳ್ನಗೆಯನ್ನು ನಕ್ಕು ಸಾಗರವನ್ನು ದಾಟುವಾಗ ತೆಗೆದುಕೊಂಡ ರೂಪವನ್ನು ತೋರಿಸಿದನು.

ಭ್ರಾತುಃ ಪ್ರಿಯಮಭೀಪ್ಸನ್ ವೈ ಚಕಾರ ಸುಮಹದ್ವಪುಃ ।
ತದ್ರೂಪಂ ಯತ್ ಪುರಾ ತಸ್ಯ ಬಭೂವೋದಧಿಲಂಘನೇ ॥೩॥

ಉದದಿಲಂಘನ ಸಮಯದಲ್ಲಿ ಯಾವ ರೂಪವಿದ್ದಿತೋ ಅಂತಹ ದೊಡ್ಡ ರೂಪವನ್ನು ತನ್ನ ತಮ್ಮನಾದ ಭೀಮನಿಗೆ ಪ್ರಿಯವನ್ನು ಉಂಟುಮಾಡುವ ಸಲುವಾಗಿ ಹನುಮಂತನು ತೆಗೆದುಕೊಂಡನು.

ದೇಹಸ್ಯ ತತೋऽತೀವ ವರ್ಧತ್ಯಾಯಾಮವಿಸ್ತರೈಃ ।
ಸದ್ರುಮಂ ಕದಲೀಷಂಡಂ ಛಾದಯನ್ನಮಿತದ್ಯುತಿಃ ॥೪॥

ಅಮಿತಕಾಂತಿಯುಳ್ಳ ಅವನ ದೇಹವು ವೃಕ್ಷಗಳನ್ನು ಮತ್ತು ಕದಲೀವನವನ್ನು ಆವರಿಸುತ್ತಾ ಎತ್ತರ ಮತ್ತು ಗಾತ್ರದಲ್ಲಿ ಬೆಳೆಯಿತು.

ಗಿರೇಶ್ಚೋಚ್ಚ್ರಯಮಾಕ್ರಮ್ಯ ತಸ್ಥೌ ತತ್ರ ಚ ವಾನರಃ ।
ಸಮುಚ್ಛ್ರಿತಮಹಾಕಾಯೋ ದ್ವಿತೀಯ ಇವ ಪರ್ವತಃ ॥೫॥

ಪರ್ವತದಷ್ಟು ಎತ್ತರವಾದ ಆಕಾರವನ್ನು ಧರಿಸಿ ಉನ್ನತ ಮತ್ತು ಸ್ಥೂಲವಾದ ಮಹಾಕಾಯವುಳ್ಳವನಾಗಿ ಎರಡನೇ ಪರ್ವತದಂತೆ ಆ ವಾನರನು ನಿಂತನು.

ತಾಮ್ರೇಕ್ಷಣಸ್ತೀಕ್ಷ್ಣದಂಷ್ಟ್ರೋ ಭ್ರುಕುಟೀಕುಟಿಲಾನನಃ ।
ದೀರ್ಘಲಾಂಗೂಲಮಾವಿಧ್ಯ ದಿಶೋ ವ್ಯಾಪ್ಯ ಸ್ಥಿತಃ ಕಪಿಃ ॥೬॥

ಕೆಂಪಾದ ಕಣ್ಣುಳ್ಳವನೂ, ತೀಕ್ಷ್ಣವಾದ ಕೋರೆದಾಡೆಯುಳ್ಳವನೂ, ಹುಬ್ಬುಗಂಟಿಕ್ಕಿದ ಮುಖವುಳ್ಳವನೂ ಆದ ಆ ಕಪಿಯು ತನ್ನ ದೀರ್ಘವಾದ ಬಾಲವನ್ನು ಬಡಿದು ದಿಕ್ಕುಗಳನ್ನು ವ್ಯಾಪಿಸಿ ನಿಂತನು.

ತದ್ರೂಪಂ ಮಹದಾಲಕ್ಷ್ಯ ಭ್ರಾತುಃ ಕೌರವನಂದನಃ ।
ವಿಸಿಸ್ಮಿಯೇ ತದಾ ಭೀಮೋ ಜಹೃಷೇ ಚ ಪುನಃ ಪುನಃ ॥೭॥

ಕೌರವನಂದನನಾದ ಭೀಮಸೇನನು ತನ್ನ ಅಣ್ಣನ ಆ ಬೃಹದ್ರೂಪವನ್ನು ನೋಡಿ ವಿಸ್ಮಯವನ್ನು ಹೊಂದಿದನು ಮತ್ತು ಪುನಃಪುನಃ ಸಂತೋಷಪಟ್ಟನು.

ತಮರ್ಕಮಿವ ತೇಜೋಭಿಃ ಸೌವರ್ಣಮಿವ ಪರ್ವತಮ್ ।
ಪ್ರದೀಪ್ತಮಿವ ಚಾಕಾಶಂ ದೃಷ್ಟ್ವಾ ಭೀಮೋ ನ್ಯಮೀಲಯತ್ ॥೮॥

ತೇಜಸ್ಸಿನಿಂದ ಉರಿಯುತ್ತಿರುವ ಸೂರ್ಯನಂತೆ ಸುವರ್ಣಮಯವಾದ ಪರ್ವತದಂತೆ, ಉರಿಯುತ್ತಿರುವ ಆಕಾಶದಂತೆ ನಿಂತ ಹನುಮಂತನನ್ನು ನೋಡಿ ಭೀಮಸೇನನು ಕಣ್ಣುಮುಚ್ಚಿದನು.

ಆಬಭಾಷೇ ಚ ಹನೂಮಾನ್ ಭೀಮಸೇನಂ ಸ್ಮಯನ್ನಿವ ।
ವಿತಾವದಿಹ ಶಕ್ತಸ್ತ್ವಂ ದ್ರಷ್ಟುಂ ರೂಪಂ ಮಮಾನಘ ॥೯॥

ಆಗ ಹನುಮಂತನು ಭೀಮಸೇನನನ್ನು ಕುರಿತು ಮುಗುಳ್ನಗುತ್ತಾ ಮಾತನಾಡಿದನು. ಎಲೈ ಅನಘನೇ, ನೀನು ನನ್ನ ರೂಪವನ್ನು ಇಷ್ಟುಮಾತ್ರ ನೋಡಲು ಸಾಧ್ಯ .

ವರ್ಧೇಽಹಂ ಚಾಪ್ಯತೋ ಭೂಯೋ ಯಾವನ್ಮೇ ಮನಸಿ ಸ್ಥಿತಮ್ ।
ಭೀಮ ಶತ್ರುಷು ಚಾತ್ಯರ್ಥಂ ವರ್ಧತೇ ಮೂರ್ತಿರೋಜಸಾ ॥೧೦॥

ನಾನು ಇದಕ್ಕಿಂತಲೂ ನನ್ನ ಮನಸ್ಸಿಗೆ ಬಂದಷ್ಟು ಎತ್ತರವಾಗಿ ಬೆಳೆಯಬಲ್ಲೆ. ಭೀಮಸೇನನೇ, ಶತ್ರುಗಳ ಸಮ್ಮುಖದಲ್ಲಿ ನನ್ನ ಶರೀರವು ಆಕಾರ ಮತ್ತು ಶಕ್ತಿಗಳಿಂದ ಬಹಳವಾಗಿ ಬೆಳೆಯುತ್ತದೆ.

ವೈಶಂಪಾಯನಃ

ತದದ್ಭುತಂ ಮಹಾರೌದ್ರಂ ವಿಂಧ್ಯಪರ್ವತಸನ್ನಿಭಮ್ ।
ದೃಷ್ಟ್ವಾ ಹನೂಮತೋ ವರ್ಷ್ಮ ಸಂಭ್ರಾಂತಃ ಪವನಾತ್ಮಜಃ ॥೧೧॥

ವೈಶಂಪಾಯನ– ಪವನಾತ್ಮಜನಾದ ಭೀಮಸೇನನು ಅದ್ಭುತವಾದ ಮಹಾ ಭಯಂಕರವಾದ ವಿಂದ್ಯಪರ್ವತ ಸದೃಶವಾದ ಹನುಮಂತನ ಶರೀರವನ್ನು ನೋಡಿ ದಿಗ್ಭ್ರಾಂತನಾದನು.

ಪ್ರತ್ಯುವಾಚ ತತೋ ಭೀಮಃ ಸಂಪ್ರಹೃಷ್ಟತನೂರುಹಃ ।
ಕೃತಾಂಜಲಿರದೀನಾತ್ಮಾ ಹನೂಮಂತಮವಸ್ಥಿತಮ್ ॥೧೨॥

ರೋಮಾಂಚಗೊಂಡ ಧೈರ್ಯಶಾಲಿಯಾದ ಭೀಮಸೇನನು ಆಗ ಕೈಗಳನ್ನು ಮುಗಿದು ಮುಂದೆ ನಿಂತಿದ್ದ ಹನುಮಂತನನ್ನು ಕುರಿತು ಮಾತನಾಡಿದನು.

ದೃಷ್ಟಂ ಪ್ರಮಾಣಂ ವಿಪುಲಂ ಶರೀರಸ್ಯಾಸ್ಯ ತೇ ವಿಭೋ ।
ಸಂಹರಸ್ವ ಮಹಾವೀರ್ಯ ಸ್ವಯಮಾತ್ಮಾನಮಾತ್ಮನಾ ॥೧೩॥

ಎಲೈ ವಿಭುವೇ, ಈ ನಿನ್ನ ಶರೀರದ ವಿಪುಲಪ್ರಮಾಣವನ್ನು ನೋಡಿದೆನು. ಮಹಾಪರಾಕ್ರಮಿಯೇ, ನಿನ್ನ ರೂಪವನ್ನು ನೀನೇ ಸಂಕೋಚಗೊಳಿಸು.

ನ ಹಿ ಶಕ್ನೋಮಿ ತ್ವಾಂ ದ್ರಷ್ಟುಂ ದಿವಾಕರಮಿವೋದಿತಮ್ ।
ಅಪ್ರಮೇಯಮನಾಧೃಷ್ಯಂ ಮೈನಾಕಮಿವ ಪರ್ವತಮ್ ॥೧೪॥

ಉದಯಿಸಿದ ಸೂರ್ಯನಂತೆ ಅಪ್ರಮೇಯನಾದ ಎಂದೂ ಸೋಲನ್ನು ಅನುಭವಿಸದ, ಮೈನಾಕಪರ್ವತದಂತಿರುವ ಈ ನಿನ್ನ ರೂಪವನ್ನು ನೋಡಲು ನನಗೆ ಸಾಧ್ಯವಾಗುತ್ತಿಲ್ಲ.

ವಿಸ್ಮಯಶ್ಚೈವ ಮೇ ವೀರ ಸುಮಹಾನ್ ಮನಸೋಽದ್ಯ ವೈ ।
ಯದ್ ರಾಮಸ್ತ್ವಯಿ ಪಾರ್ಶ್ವಸ್ಥೇ ಸ್ವಯಂ ರಾವಣಮಭ್ಯಗಾತ್ ॥೧೫॥

ಎಲೈ ವೀರ್ಯನೇ, ನಿನ್ನಂತಹವನು ಪಾರ್ಶ್ವದಲ್ಲಿರುವಾಗ ರಾವಣನನ್ನು ಯುದ್ಧದಲ್ಲಿ ಎದುರಿಸಲು ಸ್ವತಃ ರಾಮನೇ ಹೋದನೆಂಬ ವಿಷಯವು ನನ್ನ ಮನಸ್ಸಿಗೆ ಬಹಳ ವಿಸ್ಮಯವನ್ನು ಉಂಟುಮಾಡುತ್ತಿದೆ.

ತ್ವಮೇವ ಶಕ್ತಸ್ತಾಂ ಲಂಕಾಂ ಸಯೋಧಾಂ ಸಹವಾಹನಾಮ್ ।
ಸ್ವಬಾಹುಬಲಮಾಶ್ರಿತ್ಯ ವಿನಾಶಯಿತುಮಂಜಸಾ ॥೧೬॥

ನೀನೇ ನಿನ್ನ ಬಾಹುಬಲವನ್ನು ಆಶ್ರಯಿಸಿ ಸೈನಿಕರಿಂದಲೂ ಮತ್ತು ವಾಹನದಿಂದಲೂ ತುಂಬಿದ ಆ ಲಂಕೆಯನ್ನು ಪೂರ್ಣವಾಗಿ ನಾಶಮಾಡಲು ಸಮರ್ಥನಾಗಿದ್ದಿ.

ನ ಹಿ ತೇ ಕಿಂಚಿದಪ್ರಾಪ್ಯಂ ಮಾರುತಾತ್ಮಜ ವಿದ್ಯತೇ ।
ತವ ನೈಕಸ್ಯ ಪರ್ಯಾಪ್ತೋ ರಾವಣಃ ಸಗಣೋ ಯುಧಿ ॥೧೭॥

ಮಾರುತಾತ್ಮಜನೇ, ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ರಾವಣ ಮತ್ತು ಅವನ ಗಣಗಳು ಯುದ್ಧದಲ್ಲಿ ನಿನಗೊಬ್ಬನಿಗೆ ಸಾಕಾಗುತ್ತಿರಲಿಲ್ಲ.

ವೈಶಂಪಾಯನಃ

ಏವಮುಕ್ತಸ್ತು ಭೀಮೇನ ಹನೂಮಾನ್ ಪ್ಲವಗೋತ್ತಮಃ ।
ಪ್ರತ್ಯುವಾಚ ತತೋ ವಾಕ್ಯಂ ಸ್ನಿಗ್ಧಗಂಭೀರಯಾ ಗಿರಾ ॥೧೮॥

ವೈಶಂಪಾಯನ– ಹೀಗೆ ಭೀಮನಿಂದ ಹೇಳಲ್ಪಟ್ಟ ಕಪಿಶ್ರೇಷ್ಠನಾದ ಹನುಮಂತನು ಸ್ನಿಗ್ಧಗಂಭೀರವಾದ ವಾಣಿಯಿಂದ ಮಾತನ್ನಾಡಿ ಉತ್ತರವನ್ನು ಕೊಟ್ಟನು.

ಏವಮೇತನ್ ಮಹಾಬಾಹೋ ಯಥಾ ವದಸಿ ಭಾರತ ।
ಭೀಮಸೇನ ನ ಪರ್ಯಾಪ್ತೋ ಮಮಾಸೌ ರಾಕ್ಷಸಾಧಮಃ ॥೧೯॥

ಎಲೈ ಭಾರತನೇ, ಮಹಾಬಾಹುವೇ, ನೀನು ಹೇಳಿದುದು ಹಾಗೆಯೇ ಸತ್ಯವಾದುದು. ಭೀಮಸೇನನೇ, ಆ ರಾಕ್ಷಸಾಧಮನಾದ ರಾವಣನು ನನಗೊಬ್ಬನಿಗೇ ಈಡಾಗುತ್ತಿರಲಿಲ್ಲ.

ಮಯಾ ತು ನಿಹತೇ ತಸ್ಮಿನ್ ರಾವಣೇ ಲೋಕಕಂಟಕೇ ।
ಕೀರ್ತಿರ್ನಶ್ಯೇದ್ ರಾಘವಸ್ಯ ತತ ಏತದುಪೇಕ್ಷಿತಮ್ ॥೨೦॥

ನಾನೇ ಲೋಕಕಂಟಕನಾದ ಆ ರಾವಣನನ್ನು ಕೊಂದರೆ ರಾಮನ ಕೀರ್ತಿಯು ನಾಶವಾಗುತ್ತಿತ್ತು. ಆದ್ದರಿಂದ ಈ ವಿಷಯದಲ್ಲಿ ನಾನು ಉದಾಸೀನ ಮಾಡಿದೆ.

ತೇನ ವೀರೇಣ ತಂ ಹತ್ವಾ ಸಗಣಂ ರಾಕ್ಷಸಾಧಮಮ್ ।
ಆನೀತಾ ಸ್ವಪುರಂ ಸೀತಾ ಕೀರ್ತಿಶ್ಚಾಖ್ಯಾಪಿತಾ ನೃಷು ॥೨೧॥

ಆ ವೀರನಾದ ರಾಮನು ಪರಿವಾರ ಸಹಿತನಾದ ಆ ರಾಕ್ಷಸಾಧಮನನ್ನು ಕೊಂದು ಸೀತೆಯನ್ನು ಮರಳಿ ಕರೆದುಕೊಂಡು ಬಂದು ಎಲ್ಲ ಮನುಷ್ಯರಲ್ಲಿಯೂ ತನ್ನ ಕೀರ್ತಿಯನ್ನು ಪ್ರಸಿದ್ಧಿಪಡಿಸಿದನು.

ತದ್ ಗಚ್ಛ ವಿಪುಲಪ್ರಜ್ಞ ಭ್ರಾತುಃ ಪ್ರಿಯಹಿತೇ ರತಃ ।
ಅರಿಷ್ಟಂ ಕ್ಷೇಮಮಧ್ವಾನಂ ವಾಯುನಾ ಪರಿರಕ್ಷಿತಃ ॥೨೨॥

ಆದ್ದರಿಂದ ವಿಪುಲ ಬುದ್ಧಿಯುಳ್ಳ ಭೀಮಸೇನನೇ, ನೀನು ಅಣ್ಣನ ಪ್ರಿಯದಲ್ಲಿಯೂ ಹಿತದಲ್ಲಿಯೂ ರತನಾಗಿ ವಾಯುದೇವರಿಂದ ರಕ್ಷಿತನಾಗಿ ನಿರ್ವಿಘ್ನವಾಗಿ ಕ್ಷೇಮದಿಂದ ಈ ದಾರಿಯಲ್ಲಿ ಹೊರಡು.

ಏಷ ಪಂಥಾಃ ಕುರುಶ್ರೇಷ್ಠ ಸೌಗಂಧಿಕವನಾಯ ತೇ ।
ದ್ರಕ್ಷ್ಯಸೇ ಧನದೋದ್ಯಾನಂ ರಕ್ಷಿತಂ ಯಕ್ಷರಾಕ್ಷಸೈಃ ॥೨೩॥

ಕುರುಶ್ರೇಷ್ಠನೇ, ಇದು ಸೌಗಂಧಿಕವನಕ್ಕೆ ಹೋಗುವ ಮಾರ್ಗ. ಅಲ್ಲಿ ನೀನು ಯಕ್ಷರಾಕ್ಷಸರಿಂದ ಪಾಲಿತವಾದ ಕುಬೇರನ ಉದ್ಯಾನವನವನ್ನು ನೋಡುವಿ.

ನ ಚ ತೇ ತರಸಾ ಕಾರ್ಯಃ ಕುಸುಮಾವಚಯಃ ಸ್ವಯಮ್ ।
ದೈವತಾನಿ ಹಿ ಮಾನ್ಯಾನಿ ಪುರುಷೇಣ ವಿಶೇಷತಃ ॥೨೪॥

ಅಲ್ಲಿ ನೀನು ತಕ್ಷಣದಲ್ಲಿ ಕುಸುಮಗಳನ್ನು ಬಿಡಿಸಬಾರದು. ಮನುಷ್ಯನಾದವನು ವಿಶೇಷವಾಗಿ ದೇವತೆಗಳಿಗೆ ಮರ್ಯಾದೆಯನ್ನು ಕೊಡಬೇಕು.

ಬಲಿಹೋಮನಮಸ್ಕಾರೈರ್ಮಂತ್ರೈಶ್ಚ ಭರತರ್ಷಭ ।
ದೈವತಾನಿ ಪ್ರಸಾದಂ ಹಿ ಭಕ್ತ್ಯಾ ಕುರ್ವಂತಿ ಭಾರತ ॥೨೫॥

ಎಲೈ ಭಾರತನೇ, ಭರತರ್ಷಭನೇ, ಭಕ್ತಿಯಿಂದ ಮಾಡಿದ ಬಲಿ ಹೋಮ ನಮಸ್ಕಾರಗಳಿಂದ ಮತ್ತು ಮಂತ್ರಪಾಠಗಳಿಂದ ದೇವತೆಗಳು ಅನುಗ್ರಹವನ್ನು ಮಾಡುತ್ತಾರೆ.

ಮಾ ತಾತ ಸಾಹಸಂ ಕಾರ್ಷೀಃ ಸ್ವಧರ್ಮಂ ಪರಿಪಾಲಯ ।
ಸ್ವಧರ್ಮಸ್ಥಃ ಪರಂ ಧರ್ಮಂ ಬುಧ್ಯಸ್ವ ಗಮಯಸ್ವ ಚ ॥೨೬॥

ಪ್ರೀತಿಪಾತ್ರನೇ, ಸಾಹಸವನ್ನು ಮಾಡಬೇಡ. ನಿನ್ನ ಧರ್ಮವನ್ನು ಪರಿಪಾಲಿಸು. ನಿನ್ನ ಧರ್ಮವನ್ನು ಪರಿಪಾಲಿಸುವವನಾಗಿ ಪರಧರ್ಮವನ್ನೂ ತಿಳಿ. ಪರಧರ್ಮಾಚರಣೆಗೆ ಅನುಕೂಲವಾಗುವಂತೆ ನಡೆದುಕೋ.

ನ ಹಿ ಧರ್ಮಮವಿಜ್ಞಾಯ ವೃದ್ಧಾನನುಪಸೇವ್ಯ ಚ ।
ಧರ್ಮಾರ್ಥೌ ವಿ(ವೇ)ದಿತುಂ ಶಕ್ಯೌ ಬೃಹಸ್ಪತಿಸಮೈರಪಿ ॥೨೭॥

ಧರ್ಮವನ್ನು ತಿಳಿಯದೆ ಹಿರಿಯರ ಸೇವೆಯನ್ನು ಮಾಡದೆ ಬೃಹಸ್ಪತಿಗೆ ಸಮಾನರಾದವರಿಂದಲೂ ಧರ್ಮಾರ್ಥಗಳನ್ನು ಸಂಪಾದಿಸುವುದು ಅಸಾಧ್ಯವಾಗುತ್ತದೆ.

ಅಧರ್ಮೋ ಯತ್ರ ಧರ್ಮಾಖ್ಯೋ ಧರ್ಮಶ್ಚಾಧರ್ಮಸಂಜ್ಞಿತಃ ।
ಸ ವಿಜ್ಞೇಯೋ ವಿಭಾಗೇನ ಯತ್ರ ಮುಹ್ಯಂತ್ಯಬುದ್ಧಯಃ ॥೨೮॥

ಎಲ್ಲಿ ಅಧರ್ಮವು ಧರ್ಮದ ಹೆಸರನ್ನು ಪಡೆಯುತ್ತದೆಯೋ, ಎಲ್ಲಿ ಧರ್ಮವು ಅಧರ್ಮದ ಹೆಸರನ್ನು ಪಡೆಯುತ್ತದೆಯೋ ಅಂತಹ ಸ್ಥಳಗಳನ್ನು ವಿವೇಕದಿಂದ ವಿಭಾಗ ಮಾಡಿ ತಿಳಿಯಬೇಕು. ಬುದ್ಧಿಶೂನ್ಯರಾದವರು ಅಂತಹ ಸ್ಥಳದಲ್ಲಿ ಭ್ರಾಂತಿಗೆ ಒಳಗಾಗುತ್ತಾರೆ (ಹಿಂಸೆಯು ಅಧರ್ಮವಾದರೂ ಅಸುರರ ವಧೆಯು ಧರ್ಮವಾಗುತ್ತದೆ. ಮಿಥ್ಯಾವಚನವು ಅಧರ್ಮವಾದರೂ ಸಜ್ಜನರ ಹಿತಕ್ಕಾಗಿ ಹಾಗೆ ಮಾಡಿದರೆ ಅದು ಧರ್ಮವಾಗುತ್ತದೆ).

ಆಚಾರಸಂಭವೋ ಧರ್ಮೋ ಧರ್ಮೇ ವೇದಾಃ ಪ್ರತಿಷ್ಠಿತಾಃ ।
ವೇದೈರ್ಯಜ್ಞಾಃ ಸಮುತ್ಪನ್ನಾ ಯಜ್ಞೈರ್ದೇವಾಃ ಪ್ರತಿಷ್ಠಿತಾಃ ॥೨೯॥

ಸದಾಚಾರದಿಂದ ಧರ್ಮವು ಉಂಟಾಗುತ್ತದೆ. ಧರ್ಮದಲ್ಲಿ ವೇದಗಳು ಪ್ರತಿಷ್ಠಿತವಾಗಿವೆ. ವೇದಗಳಿಂದ ಯಜ್ಞಗಳು ಉಂಟಾಗುತ್ತದೆ. ಮತ್ತು ಯಜ್ಞಗಳಿಂದ ದೇವತೆಗಳು ಪ್ರತಿಷ್ಠಿತರಾಗುತ್ತಾರೆ.

ವೇದಾಚಾರವಿಧಾನೋಕ್ತೈರ್ಯಜ್ಞೈರ್ಧಾರ್ಯಂತಿ ದೇವತಾಃ ।
ಬೃಹಸ್ಪತ್ಯುಶನಃಪ್ರೋಕ್ತೈರ್ನಯೈರ್ಧಾರ್ಯಂತಿ ಮಾನವಾಃ ॥೩೦॥

ವೇದದಲ್ಲಿ ಹೇಳಿದ ಆಚಾರ ಮತ್ತು ವಿಧಾನಕ್ಕೆ ಅನುಗುಣವಾದ ಯಜ್ಞಗಳಿಂದ ದೇವತೆಗಳು ಜೀವಿಸುತ್ತಾರೆ (ಬಲಿಷ್ಠರಾಗುತ್ತಾರೆ). ಶುಕ್ರಾಚಾರ್ಯರು ಮತ್ತು ಬೃಹಸ್ಪತ್ಯಾಚಾರ್ಯರು ಹೇಳಿದ ನೀತಿಗಳಿಂದ ಮನುಷ್ಯರು ಜೀವಿಸುತ್ತಾರೆ.

ಪಣ್ಯಾಕರವಣಿಜ್ಯಾಭಿಃ ಕೃಷ್ಯಾಗೋಜಾವಿಪೋಷಣೈಃ ।
ವಿದ್ಯಯಾ ಧಾರ್ಯತೇ ಸರ್ವಂ ಧರ್ಮೈರೇತೈರ್ದ್ವಿಜಾತಿಭಿಃ ॥೩೧॥

ಕಪ್ಪ (ಸುಂಕ) ವಾಣಿಜ್ಯಗಳಿಂದಲೂ ಕೃಷಿಗವಾದಿ ಪಶುರಕ್ಷಣ ಪೋಷಣೆಗಳಿಂದಲೂ ಮತ್ತು ವಿದ್ಯೆಯಿಂದಲೂ ದ್ವಿಜರು ಧರ್ಮದಿಂದ ಈ ಜಗತ್ತನ್ನು ಧರಿಸುತ್ತಾರೆ.

ತ್ರಯೀ ವಾರ್ತಾ ದಂಡನೀತಿಸ್ತ್ರಯೋ ವಿದ್ಯಾ ವಿಜಾನತಾಮ್ ।
ತಾಭಿಃ ಸಮ್ಯಕ್‌ಪ್ರಯುಕ್ತಾಭಿರ್ಲೋಕಯಾತ್ರಾ ವಿಧೀಯತೇ ॥೩೨॥

ವೇದವಿದ್ಯಾ ವ್ಯಾಪಾರ ಮತ್ತು ದಂಡನೀತಿ ಇವು ಮೂರು ಜ್ಞಾನಿಗಳ ದೃಷ್ಟಿಯಲ್ಲಿ ಇರುವ ವಿದ್ಯೆಗಳು. ಈ ಮೂರನ್ನು ಸರಿಯಾಗಿ ಪ್ರಯೋಗಿಸಿದರೆ ಲೋಕ ಯಾತ್ರೆಯು ಉಂಟಾಗುತ್ತದೆ.

ಸಾ ಚೇದ್ ಧರ್ಮಕೃತಾ ನ ಸ್ಯಾತ್ ತ್ರಯೀಧರ್ಮಮೃತೇ ಭುವಿ ।
ದಂಡನೀತಿಮೃತೇ ಚಾಪಿ ನಿರ್ಮರ್ಯಾದಮಿದಂ ಭವೇತ್ ॥೩೩॥

ವೇದಧರ್ಮಗಳಿಲ್ಲದೆ, ದಂಡನೀತಿಯಿಲ್ಲದೆ ಲೋಕಯಾತ್ರೆಯು ಧರ್ಮವಿಲ್ಲದೆ ನಡೆಯುವುದಾದರೆ ಈ ಜಗತ್ತು ಮರ್ಯಾದಾ ರಹಿತವಾಗುತ್ತದೆ.

ವಾರ್ತಾಧರ್ಮೇ ಹ್ಯವರ್ತಿನ್ಯೋ ವಿನಶ್ಯೇಯುರಿಮಾಃ ಪ್ರಜಾಃ ।
ಸುಪ್ರವೃತ್ತೈಸ್ತ್ರಿಭಿರ್ಹ್ಯೇತೈರ್ಧರ್ಮಂ ಸಂಯಂತಿ ವೈ ಪ್ರಜಾಃ ॥೩೪॥

ವಾರ್ತಾ ಧರ್ಮದಲ್ಲಿ (ವ್ಯಾಪಾರ ಧರ್ಮದಲ್ಲಿ) ಸರಿಯಾಗಿ ನಡೆದುಕೊಳ್ಳದಿದ್ದರೆ ಈ ಪ್ರಜೆಗಳು ನಾಶವನ್ನು ಹೊಂದುವರು. ಈ ಮೂರುಧರ್ಮಗಳನ್ನು ಸರಿಯಾಗಿ ಆಚರಿಸಿದರೆ ಪ್ರಜೆಗಳು ಅದರಿಂದ ಧರ್ಮವನ್ನು ಪಡೆಯುತ್ತಾರೆ.

ದ್ವಿಜಾನಾಮಮೃತಂ ಧರ್ಮೋ ಹ್ಯೇಕಶ್ಚೈವೈಕವರ್ಣಕಃ ।
ಯಜ್ಞಾಧ್ಯಯನದಾನಾನಿ ತ್ರಯಃ ಸಾಧಾರಣಾಃ ಸ್ಮೃತಾಃ ॥೩೫॥

ಬ್ರಾಹ್ಮಣರಿಗೆ ಅಯಾಚಿತವೃತ್ತಿಯು ಮುಖ್ಯವಾದ ಧರ್ಮ. ಇದು ಬ್ರಾಹ್ಮಣ ವರ್ಣಕ್ಕೆ ಮಾತ್ರ ಸಂಬಂಧಿಸಿದೆ. ಯಜ್ಞ, ಅಧ್ಯಯನ ಮತ್ತು ದಾನ ಈ ಮೂರು ಧರ್ಮಗಳು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂವರಿಗೂ ಸಮಾನವಾಗಿದೆ.

ಯಾಜನಾಧ್ಯಾಪನಂ ವಿಪ್ರೇ ಧರ್ಮಶ್ಚೈವ ಪ್ರತಿಗ್ರಹಃ ।
ಪಾಲನಂ ಕ್ಷತ್ರಿಯಾಣಾಂ ವೈ ವೈಶ್ಯಧರ್ಮಶ್ಚ ಪೋಷಣಮ್ ॥೩೬॥

ಬ್ರಾಹ್ಮಣನಿಗೆ ಯಾಜನ, ಅಧ್ಯಾಪನ ಮತ್ತು ಪ್ರತಿಗ್ರಹವು ಧರ್ಮವಾಗುತ್ತದೆ. ಕ್ಷತ್ರಿಯರಿಗೆ ರಕ್ಷಣೆಯೂ, ವೈಶ್ಯರಿಗೆ ಪೋಷಣೆಯೂ ಧರ್ಮವಾಗುತ್ತದೆ.

ಶುಶ್ರೂಷಾ ಚ ದ್ವಿಜಾತೀನಾಂ ಶೂದ್ರಾಣಾಂ ಧರ್ಮ ಉಚ್ಯತೇ ।
ಭೈಕ್ಷ್ಯಹೋಮವ್ರತೈರ್ಹೀನಾಸ್ತಥೈವ ಗುರುವಾಸಿತಾಃ ॥೩೭॥

ಶೂದ್ರರಿಗೆ ದ್ವಿಜರ ಸೇವೆಯೇ ಧರ್ಮವೆಂದು ಹೇಳಲ್ಪಡುತ್ತದೆ. ಅವರಿಗೆ ಭಿಕ್ಷೆಯಾಗಲೀ, ಹೋಮವಾಗಲೀ, ವ್ರತಗಳಾಗಲೀ, ಗುರುಕುಲವಾಸವಾಗಲೀ ಇರುವುದಿಲ್ಲ.

ಕ್ಷತ್ರಧರ್ಮೋಽತ್ರ ಕೌಂತೇಯ ತವ ಧರ್ಮೋಽತ್ರ ರಕ್ಷಣಮ್ ।
ಸ್ವಧರ್ಮಂ ಪ್ರತಿಪದ್ಯಸ್ವ ವಿನೀತೋ ನಿಯತೇಂದ್ರಿಯಃ ॥೩೮॥

ಎಲೈ ಕೌಂತೇಯನೇ, ನೀನು ಕ್ಷತ್ರಿಯನಾದವನು. ಕ್ಷತ್ರಿಯನಾದ ನಿನ್ನ ಧರ್ಮವು ರಕ್ಷಣೆ ಮಾಡುವುದು. ನೀನು ವಿನಯದಿಂದಲೂ, ಇಂದ್ರಿಯಜಯದಿಂದಲೂ ಕೂಡಿದವನಾಗಿ ನಿನ್ನ ಧರ್ಮವನ್ನು ಆಚರಿಸು.

ವೃದ್ಧೈಃ ಸಂಮಂತ್ರ್ಯ ಸದ್ಬಿಶ್ಚ ಬುದ್ಧಿಮದ್ಭಿಃ ಶ್ರುತಾನ್ವಿತೈಃ ।
ಆಸ್ಥಿತಃ ಶಾಸ್ತಿ ದಂಡೇನ ವೈಸನೇ ಪರಿಭೂಯತೇ ॥೩೯॥

ಬುದ್ಧಿವಂತರಾದ, ವಿದ್ಯಾವಂತರಾದ, ವೃದ್ಧರಾದ ಸಜ್ಜನರ ಜೊತೆಯಲ್ಲಿ ಮಂತ್ರಾಲೋಚನೆಯನ್ನುಮಾಡಿ ದಂಡನೀತಿಯನ್ನು ಆಚರಿಸಬೇಕು. ಯಾವುದಾದರೂ ಚಟವುಳ್ಳ ಕ್ಷತ್ರಿಯನು ಸೋಲನ್ನು (ವಿನಾಶವನ್ನು) ಹೊಂದುತ್ತಾನೆ.

ನಿಗ್ರಹಾನುಗ್ರಹೈಃ ಸಮ್ಯಗ್ ಯದಾ ರಾಜಾ ಪ್ರವರ್ತತೇ ।
ತದಾಭವಂತಿ ಲೋಕಸ್ಯ ಮರ್ಯಾದಾಃ ಸುವ್ಯವಸ್ಥಿತಾಃ ॥೪೦॥

ರಾಜನಾದವನು ಸಜ್ಜನರಿಗೆ ಅನುಗ್ರಹವನ್ನು ಮತ್ತು ದುರ್ಜನರಿಗೆ ನಿಗ್ರಹವನ್ನು ಮಾಡಿ ಶಾಸನದಲ್ಲಿ ಪ್ರವೃತ್ತನಾಗಬೇಕು. ಆಗ ಲೋಕಮರ್ಯಾದೆಗಳು ಸುವ್ಯವಸ್ಥಿತವಾಗುತ್ತವೆ.

ತಸ್ಮಾದ್ ದೇಶೇ ಚ ದುರ್ಗೇ ಚ ಶತ್ರುಮಿತ್ರಬಲೇಷು ಚ ।
ನಿತ್ಯಂ ಚಾರೇಣ ಬೋದ್ಧವ್ಯಂ ಸ್ಥಾನಂ ವೃದ್ಧಿಃ ಕ್ಷಯಸ್ತಥಾ ॥೪೧॥

ಆದ್ದರಿಂದ ಪಟ್ಟಣಗಳಲ್ಲಿಯೂ, ಕೋಟೆಗಳಲ್ಲಿಯೂ, ಶತ್ರುಸೈನ್ಯ ಮತ್ತು ಮಿತ್ರ ಸೈನ್ಯಗಳಲ್ಲಿಯೂ ನಡೆಯುವ ಸಮಾಚಾರಗಳನ್ನು ಚಾರರಿಂದ ತಿಳಿಯಬೇಕು. ಹಾಗೆಯೇ ಶತ್ರು-ಮಿತ್ರ ಬಲಗಳ ವೃದ್ಧಿಕ್ಷಯಗಳನ್ನು ಮತ್ತು ಸಂರಕ್ಷಣೆಗಳನ್ನು ತಿಳಿಯಬೇಕು.

ರಾಜ್ಞಾಮುಪಾಯಶ್ಚಾರಶ್ಚ ಬುದ್ಧಿಮಂತ್ರಪರಾಕ್ರಮಃ ।
ನಿಗ್ರಹಪ್ರಗ್ರಹೌ ಚೈವ ದಾಕ್ಷ್ಯಂ ವೈ ಕಾರ್ಯಸಾಧಕಮ್ ॥೪೨॥

ರಾಜನಿಗೆ ಇರುವ ಸಾಧನಗಳಿಂದಲೇ ಚಾರರು, ಬುದ್ಧಿ, ಮಂತ್ರಾಲೋಚನೆ, ಪರಾಕ್ರಮ, ನಿಗ್ರಹಾನುಗ್ರಹಗಳು ಮತ್ತು ದಕ್ಷತೆ. ಇವು ಕಾರ್ಯವನ್ನು ಸಾಧಿಸುತ್ತವೆ.

ಸಾಮ್ನಾ ದಾನೇನ ಭೇದೇನ ದಂಡೇನೋಪೇಕ್ಷಣೇನ ಚ ।
ಸಾಧನೀಯಾನಿ ಕರ್ಮಾಣಿ ಸಮಾಸವ್ಯಾಸಯೋಗತಃ ॥೪೩॥

ಸಾಮ, ದಾನ, ಭೇದ, ದಂಡ ಮತ್ತು ಉಪೇಕ್ಷೆ ಇವುಗಳಿಂದ ಕಾರ್ಯಗಳನ್ನು ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ಸಾಧಿಸಬೇಕು.

ಮಂತ್ರಮೂಲಾ ನಯಾಃ ಸರ್ವೇ ಚಾರಾಶ್ಚ ಭರತರ್ಷಭ ।
ಸುಮಂತ್ರಿತೇನ ಯಾ ಸಿದ್ಧಿಸ್ತಾಂ ದ್ವಿಜೈಃ ಸಹ ಮಂತ್ರಯೇತ್ ॥೪೪॥

ಎಲೈ ಭರತರ್ಷಭನೇ, ರಾಜನೀತಿಯು ಮಂತ್ರಾಲೋಚನೆ ಮತ್ತು ಚಾರರನ್ನು ಅವಲಂಬಿಸಿದೆ. ಒಳ್ಳೆಯ ಮಂತ್ರಾಲೋಚನೆಯಿಂದ ಎಲ್ಲಿ

ಕಾರ್ಯಸಿದ್ಧಿಯಾಗುತ್ತದೆಯೋ ಅಲ್ಲಿ ದ್ವಿಜರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಬೇಕು.

ಸ್ತ್ರಿಯಾ ಮೂಢೇನ ಬಾಲೇನ ಲುಬ್ಧೇನ ಲಘುನಾಪಿ ವಾ ।
ನ ಮಂತ್ರಯೀತ ಗುಹ್ಯಾನಿ ಯೇಷು ಚೋನ್ಮಾದಲಕ್ಷಣಮ್ ॥೪೫॥

ಸ್ತ್ರೀಯರ ಜೊತೆಯಲ್ಲಿ, ಮೂಢರ ಜೊತೆಯಲ್ಲಿ, ಬಾಲಕರ ಜೊತೆಯಲ್ಲಿ, ಲೋಭಿಯ ಜೊತೆಯಲ್ಲಿ, ಅಲ್ಪಮನುಷ್ಯನ ಜೊತೆಯಲ್ಲಿ ಅಥವಾ ಉನ್ಮಾದಲಕ್ಷಣವಿರುವವರ ಜೊತೆಯಲ್ಲಿರಹಸ್ಯ ವಿಷಯಗಳ ಮಂತ್ರಾಲೋಚನೆಯನ್ನು ಮಾಡಬಾರದು.

ಮಂತ್ರಯೇತ್ ಸಹ ವಿದ್ವದ್ಭಿಃ ಶಕ್ತೈಃ ಕರ್ಮಾಣಿ ಕಾರಯೇತ್ ।
ಸ್ನಿಗ್ಧೈಶ್ಚ ನೀತಿವಿನ್ಯಾಸಾನ್ ಮೂರ್ಖಾನ್ ಸರ್ವತ್ರ ವರ್ಜಯೇತ್ ॥

ವಿದ್ವಾಂಸರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಬೇಕು. ಸಮರ್ಥರಾದವರಿಂದ ಕಾರ್ಯಗಳನ್ನು ಮಾಡಿಸಬೇಕು. ಸ್ನೇಹವುಳ್ಳವರಿಂದ ನೀತಿಯನ್ನು ಅನುಷ್ಠಾನ ಮಾಡಿಸಬೇಕು. ಮೂರ್ಖರನ್ನು ಸರ್ವತ್ರ ದೂರವಿಡಬೇಕು.

ಧಾರ್ಮಿಕಾನ್ ಧರ್ಮಕಾರ್ಯೇಷು ಅರ್ಥಕಾರ್ಯೇಷು ಪಂಡಿತಾನ್ ।
ಸ್ತ್ರೀಷು ಕ್ಲೀಬಾನ್ ನಿಯುಂಜೀತ ಕ್ರೂರಾನ್ ಕ್ರೂರೇಷು ಕರ್ಮಸು ॥

ಧರ್ಮಕಾರ್ಯಗಳಲ್ಲಿ ಧಾರ್ಮಿಕರನ್ನೂ, ಅರ್ಥಕಾರ್ಯಗಳಲ್ಲಿ ಪಂಡಿತರನ್ನೂ, ಸ್ತ್ರೀಯರಲ್ಲಿ ನಪುಂಸಕರನ್ನೂ, ಕ್ರೂರಕರ್ಮಗಳಲ್ಲಿ ಕ್ರೂರರನ್ನೂ ನಿಯೋಜಿಸಬೇಕು.

ಸ್ವೇಭ್ಯಶ್ಚೈವ ಪರೇಭ್ಯಶ್ಚ ಕಾರ್ಯಾಕಾರ್ಯಸಮುದ್ಭವಾ ।
ಬುದ್ಧಿಃ ಕರ್ಮಸು ವಿಜ್ಞೇಯಾ ರಿಪೂಣಾಂ ಚ ಬಲಾಬಲಮ್ ॥೪೮॥

ಮಾಡುತ್ತಿರುವ ಕಾರ್ಯಗಳಲ್ಲಿ ಮಾಡಬೇಕಾದ ಮತ್ತು ಮಾಡಬಾರದ ಅಂಶಗಳನ್ನು ತನ್ನವರಿಂದ ಮತ್ತು ಪರರಿಂದ ತಿಳಿಯಬೇಕು. ಅದರಂತೆ ಶತ್ರುಗಳ ಬಲಾಬಲಗಳನ್ನು ತಿಳಿಯಬೇಕು.

ಬುದ್ಧ್ಯಾ ಸ್ವಪ್ರತಿಪನ್ನೇಷು ಕುರ್ಯಾತ್ ಸಾಧುಷ್ವನುಗ್ರಹಮ್ ।
ನಿಗ್ರಹಂ ಚಾಪ್ಯಶಿಷ್ಟೇಷು ನಿರ್ಮರ್ಯಾದೇಷು ಕಾರಯೇತ್ ॥೪೯॥

ಮನಃಪೂರ್ವಕವಾಗಿ ತನ್ನನ್ನು ಆಶ್ರಯಿಸಿದ ಸಜ್ಜನರಿಗೆ ಅನುಗ್ರಹವನ್ನು ಮಾಡಬೇಕು. ಮರ್ಯಾದಾಶೂನ್ಯರಾಗಿ ದುರಾಚಾರರಿಂದ ಕೂಡಿದವರಿಗೆ ತನ್ನ ದೂತರಿಂದ ನಿಗ್ರಹವನ್ನೂ ಮಾಡಿಸಬೇಕು.

ನಿಗ್ರಹೇ ಪ್ರಗ್ರಹೇ ಸಮ್ಯಗ್ಯದಾ ರಾಜಾ ಪ್ರವರ್ತತೇ ।
ತದಾ ಭವತಿ ಲೋಕಸ್ಯ ಮರ್ಯಾದಾ ಸುವ್ಯವಸ್ಥಿತಾ ॥೫೦॥

ರಾಜನು ನಿಗ್ರಹಾನುಗ್ರಹಗಳಲ್ಲಿ ಸರಿಯಾಗಿ ಪ್ರವೃತ್ತನಾದರೆ ಆಗ ಲೋಕಮರ್ಯಾದೆಯು ಸುವ್ಯವಸ್ಥಿತವಾಗುತ್ತದೆ.

ಏಷ ತೇऽಭಿಹಿತಃ ಪಾರ್ಥ ಘೋರೋ ಧರ್ಮೋ ದುರನ್ವಯಃ ।
ತಂ ಸ್ವಧರ್ಮಂ ವಿಭಾಗೇನ ವಿನಯಸ್ಥೋऽನುಪಾಲಯ ॥೫೧॥

ಪಾರ್ಥನೇ, ನಿನಗೆ ಅನುಷ್ಠಾನಾಚರಣೆಯಲು ಕಷ್ಟವಾದ ಕ್ರೂರವಾದ ಈ ರಾಜಧರ್ಮವನ್ನು ಹೇಳಿದ್ದೇನೆ. ಅಂತಹ ನಿನ್ನ ಸ್ವಧರ್ಮವನ್ನು ವಿಭಾಗ ಮಾಡಿ ವಿನಯದಿಂದ ಪಾಲಿಸು.

ಸಾಮ್ನಾ ಮಿತ್ರಾಣಿ ದಾನೇನ ಬ್ರಾಹ್ಮಣಂ ಕೃತ್ರಿಮಾನಿ ಚ ।
ಭೇದೇನಾರೀನ್ ಪ್ರದಮಯೇತ್ ಕುಂಡೇನ ಸಾಧಯೇತ್ಪ್ರಜಾಃ ॥

ತಪೋಧರ್ಮದಮೈರ್ಯಾಭಿರ್ವಿಪ್ರಾ ಯಾಂತಿ ಯಥಾ ದಿವಮ್ ।
ಕ್ಷತ್ರಿಯಾ ಹಿ ತಥಾ ಸ್ವರ್ಗಂ ಭುವಿ ಬಂಧನಪಾಲನೈಃ ॥೫೨॥

ಬ್ರಾಹ್ಮಣರು ತಪಸ್ಸು, ಧರ್ಮ, ಇಂದ್ರಿಯ ನಿಗ್ರಹ ಮತ್ತು ಪೂಜೆಗಳಿಂದ ಸ್ವರ್ಗವನ್ನು ಹೇಗೆ ಸಂಪಾದಿಸುತ್ತಾರೆಯೋ ಹಾಗೆ ಕ್ಷತ್ರಿಯರು ಭೂಮಿಯಲ್ಲಿ ನಿಗ್ರಹಾನುಗ್ರಹಗಳನ್ನು ಮಾಡುವುದರಿಂದ ಸ್ವರ್ಗವನ್ನು ಸಂಪಾದಿಸುತ್ತಾರೆ.

ದಾನಾತಿಥ್ಯಕ್ರಿಯಾಧರ್ಮೈರ್ಯಾಂತಿ ವೈಶ್ಯಾಶ್ಚ ಸದ್ಗತಿಮ್ ।
ದ್ವಿಜಶುಶ್ರೂಷಯಾ ಶೂದ್ರಾ ಲಭಂತೇ ಗತಿಮುತ್ತಮಾಮ್ ॥೫೩॥

ವೈಶ್ಯರು ದಾನ, ಅತಿಥಿಪೂಜೆ ಮತ್ತು ಧರ್ಮಾಚರಣೆಗಳಿಂದ ಸದ್ಗತಿಯನ್ನು ಹೊಂದುತ್ತಾರೆ. ಶೂದ್ರರು ದ್ವಿಜಶುಶ್ರೂಷೆಯಿಂದ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ಸಮ್ಯಕ್‌ಪ್ರಣೀತದಂಡಾ ಹಿ ಕಾಮದ್ವೇಷವಿವರ್ಜಿತಾಃ ।
ಆಲುಬ್ಧಾ ವಿಗತಕ್ರೋಧಾಃ ಸತಾಂ ಯಾಂತಿ ಸಲೋಕತಾಮ್ ॥೫೪॥

ಕಾಮ, ಕ್ರೋಧ, ದ್ವೇಷಗಳಿಂದ ವರ್ಜಿತರಾಗಿ ಲೋಭರಹಿತರಾಗಿ ಸರಿಯಾಗಿ ದಂಡನೀತಿಯನ್ನು ಪ್ರಯೋಗಿಸುವ ಕ್ಷತ್ರಿಯರು ಸಜ್ಜನರು ಹೋಗುವ ಲೋಕಕ್ಕೇ ಹೋಗುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ತ್ರ್ಯುತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ನಲವತ್ತೆಂಟನೆಯ ಅಧ್ಯಾಯ

ಹನುಮಂತನಿಂದ ಪೂರ್ವರೂಪವನ್ನು ಉಪಸಂಹಾರ ಮಾಡಿ ಭೀಮಸೇನನ ಆಲಿಂಗನ ಮತ್ತು ವರದಾನ. ಭೀಮಸೇನನ ಸೌಗಂಧಿಕ ಸರೋವರ ದರ್ಶನ.

ವೈಶಂಪಾಯನಃ

ತತಃ ಸಂಹೃತ್ಯ ವಿಪುಲಂ ತದ್ವಪುಃ ಕಾಮತಃ ಕೃತಮ್ ।
ಭೀಮಸೇನಂ ಪುನರ್ದೋರ್ಭ್ಯಾಂ ಪರ್ಯಷ್ವಜತ ವಾನರಃ ॥೧॥

ಆಗ ಆ ಕಪಿಯು ತನ್ನ ಇಚ್ಛೆಯಿಂದ ತೆಗೆದುಕೊಂಡಿದ್ದ ಆ ಬೃಹತ್ತಾದ ಶರೀರವನ್ನು ಉಪಸಂಹಾರ ಮಾಡಿ ಪುನಃ ಭೀಮಸೇನನನ್ನು ಆಲಿಂಗಿಸಿದನು.

ಪರಿಷ್ವಕ್ತಸ್ಯ ತಸ್ಯಾಶು ಭ್ರಾತ್ರಾ ಭೀಮಸ್ಯ ಭಾರತ ।
ಶ್ರಮೋ ನಾಶಮುಪಾಗಚ್ಛತ್ ಸರ್ವಂ ಚಾಸೀತ್ ಪ್ರದಕ್ಷಿಣಮ್ ॥೨॥

ಭಾರತನೇ, ಹನುಮಂತನು ಆಲಿಂಗಿಸಿದ ತಕ್ಷಣವೇ ಭೀಮಸೇನನಿಗೆ ಎಲ್ಲಾ ಶ್ರಮವೂ ನಾಶವಾಯಿತು ಮತ್ತು ಎಲ್ಲವೂ ಅನುಕೂಲವಾಯಿತು.

ತತಃ ಪುನರಥೋವಾಚ ಪರ್ಯಶ್ರುನಯನೋ ಹರಿಃ ।
ಭೀಮಮಾಭಾಷ್ಯ ಸೌಹಾರ್ದಾದ್ ಬಾಷ್ಪಗದ್ಗದಯಾ ಗಿರಾ ॥೩॥

ಆಗ ಪುನಃ ಆ ಕಪೀಶ್ವರನು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಬಾಷ್ಪಗದ್ಗದವಾದ ಮಾತುಗಳಿಂದ ಪ್ರೀತಿಯಿಂದ ಭೀಮಸೇನನನ್ನು ಉದ್ದೇಶಿಸಿ ಮಾತನಾಡಿದನು.

ಗಚ್ಛ ವೀರ ಸ್ವಮಾವಾಸಂ ಸ್ಮರ್ತವ್ಯೋಽಸ್ಮಿ ಕಥಾಂತರೇ ।
ಇಹಸ್ಥಶ್ಚ ಕುರುಶ್ರೇಷ್ಠ ನ ನಿವೇದ್ಯೋಽಸ್ಮಿ ಕರ್ಹಿಚಿತ್ ॥೪॥

ವೀರನೇ, ನಿನ್ನ ಆವಾಸಸ್ಥಾನಕ್ಕೆ ಹಿಂದಿರುಗು. ಬೇರೆ ಬೇರೆ ಕಾರ್ಯದಲ್ಲಿ ನನ್ನನ್ನು ಸ್ಮರಿಸಿಕೋ. ಕುರುಶ್ರೇಷ್ಠನೇ, ನಾನು ಇಲ್ಲಿದ್ದೇನೆಂದು ಯಾವ ಕಾರಣದಿಂದಲೂ ಯಾರಿಗೂ ತಿಳಿಸಬಾರದು.

ಶೀಘ್ರಂ ತು ಕಾರ್ಯಸಿದ್ಧ್ಯರ್ಥಂ ಗಚ್ಛ ತ್ವಂ ಪಾಂಡುನಂದನ ।
ಸ್ಮರ್ತವ್ಯೋಽಸ್ಮಿ ತ್ವಯಾ ವೀರ ಕಥಾಸ್ವಮಿತಾವಿಕ್ರಮ ॥
ಧನದಸ್ಯಾಲಯಾಚ್ಚಾಪಿ ವಿಸೃಷ್ಟಾನಾಂ ಮಹಾಬಲ ।
ದೇಶಕಾಲ ಇಹಾಯಾತುಂ ದೇವಗಂಧರ್ವಯೋಷಿತಾಮ್ ॥೫॥

ಪಾಂಡುನಂದನನೇ, ನಿನ್ನ ಕಾರ್ಯಸಿದ್ಧಿಗಾಗಿ ಶೀಘ್ರವಾಗಿ ಇಲ್ಲಿಂದ ಹೊರಡು. ಅಮಿತವಿಕ್ರಮನಾದ ವೀರನೇ, ನೀನು ಬೇರೆ ಬೇರೆ ಮಾತುಕಥೆಗಳಲ್ಲಿ ನನ್ನನ್ನು ಸ್ಮರಿಸು. ಎಲೈ ಮಹಾಬಲನೇ, ಈಗ ಕುಬೇರನ ಮನೆಯಿಂದ ಬೀಳ್ಕೊಡಲ್ಪಟ್ಟು ಹೊರಟ ದೇವಗಂಧರ್ವವನಿತೆಯರು ಇಲ್ಲಿಗೆ ಬರುವ ಸಮಯವಾಗಿದೆ.

ಮಮಾಪಿ ಸಫಲಂ ಚಕ್ಷುಃ ಸ್ಮಾರಿತಶ್ಚಾಸ್ಮಿ ರಾಘವಮ್ ।
ರಾಮಾಭಿಧಾನಂ ವಿಷ್ಣುಂ ಹಿ ಜಗದ್ಭ್ರುದಯನಂದನಮ್ ।
ಸೀತಾವಕ್ತ್ರಾರವಿಂದರ್ಕಂ ದಶಾಸ್ಯಧ್ವಾಂತಭಾಸ್ಕರಮ್ ।
ಮಾನುಷಂ ಗಾತ್ರಸಂಸ್ಪರ್ಶಂ ಗತ್ವಾ ಭೀಮ ತ್ವಯಾ ಸಹ ॥೬॥

ನಿನ್ನನ್ನು ನೋಡಿ ನನ್ನ ಕಣ್ಣುಗಳೂ ಸಫಲವಾಗಿವೆ. ಎಲೈ ಭೀಮನೇ, ಮನುಷ್ಯನಾದ ನಿನ್ನ ಶರೀರವನ್ನು ಆಲಿಂಗಿಸಿ ನಾನು ಜಗತ್ತಿನ ಮನೋನಂದನನೂ, ಸೀತಾ ಮುಖಾರವಿಂದಕ್ಕೆ ಸೂರ್ಯನೂ, ದಶಾಸ್ಯವೆಂಬ ಕತ್ತಲಿಗೆ ಭಾಸ್ಕರನೂ ಆದ ರಘುಕುಲದಲ್ಲಿ ಅವತಾರ ಮಾಡಿದ ರಾಮಾಭಿದಾನವುಳ್ಳ ವಿಷ್ಣುವನ್ನು ಸ್ಮರಣೆ ಮಾಡಿಸಿದೆ.

ತದಸ್ಮದ್ದರ್ಶನಂ ವೀರ ಕೌಂತೇಯಾಮೋಘಮಸ್ತು ತೇ ।
ಭ್ರಾತೃತ್ವಂ ತ್ವಂ ಪುರಸ್ಕೃತ್ಯ ವರಂ ವರಯ ಭಾರತ ॥೭॥

ಎಲೈ ವೀರನಾದ ಕೌಂತೇಯನೇ, ನನ್ನ ದರ್ಶನವು ನಿನಗೆ ವ್ಯರ್ಥವಾಗದಿರಲಿ. ಭಾರತನೇ, ನನ್ನ ತಮ್ಮನಾದುದರಿಂದ ಅದನ್ನು ಮುಂದೆ ಮಾಡಿಕೊಂಡು ವರವನ್ನು ಕೇಳು.

ಯದಿ ತಾವನ್ಮಯಾ ಕ್ಷುದ್ರಾ ಗತ್ವಾ ವಾರಣಸಾಹ್ವಯಮ್ ।
ಧಾರ್ತರಾಷ್ಟ್ರಾ ನಿಹಂತವ್ಯಾ ಯಾವದೇತತ್ ಕರೋಮ್ಯಹಮ್ ॥೮॥

ನಾನು ಹಸ್ತಿನಪುರಕ್ಕೆ ಹೋಗಿ ಆ ಕ್ಷುದ್ರರಾದ ಧೃತರಾಷ್ಟ್ರಪುತ್ರರನ್ನು ಕೊಲ್ಲಬೇಕಾದರೆ ಹೇಳು, ಆದನ್ನು ಈಗ ಮಾಡುತ್ತೇನೆ.

ಶಿಲಯಾ ನಗರಂ ವಾಪಿ ಮರ್ದಿತವ್ಯಂ ಮಯಾ ಯದಿ ।
ಬದ್ವಾ ದುರ್ಯೋಧನಂ ಚಾದ್ಯ ಆನಯಾಮಿ ತವಾಂತಿಕಮ್ ।
ಯಾವದೇತತ್ ಕರೋಮ್ಯದ್ಯ ಕಾಮಂ ತವ ಮಹಾಬಲ ॥೯॥

ಅಥವಾ ಶಿಲೆಯಿಂದ ಹಸ್ತಿನಪುರವನ್ನು ಮರ್ದಿಸಿ ದುರ್ಯೋಧನನನ್ನು ಬಂಧಿಸಿ ನಿನ್ನ ಬಳಿಗೆ ತರಬೇಕಾದರೆ ಹೇಳು. ಎಲೈ ಮಹಾಬಲನೇ, ನಿನ್ನ ಕಾಮವನ್ನು ಈ ದಿನ ಈಗ ನೆರವೇರಿಸುವೆನು.

ವೈಶಂಪಾಯನಃ

ಭೀಮಸೇನಸ್ತು ತದ್ವಾಕ್ಯಂ ಶ್ರುತ್ವಾ ತಸ್ಯ ಮಹಾತ್ಮನಃ ।
ಪ್ರತ್ಯುವಾಚ ಹನೂಮಂತಂ ಪ್ರಹೃಷ್ಟೇನಾಂತರಾತ್ಮನಾ ॥೧೦॥

ವೈಶಂಪಾಯನ– ಭೀಮಸೇನನಾದರೋ ಮಹಾತ್ಮನಾದ ಹನುಮಂತನ ಮಾತುಗಳನ್ನು ಕೇಳಿ ಮನಸ್ಸಿನಲ್ಲಿ ಸಂತೋಷಭರಿತನಾಗಿ ಅವನಿಗೆ ಉತ್ತರವನ್ನು ಕೊಟ್ಟನು.

ಕೃತಮೇವ ತ್ವಯಾ ಸರ್ವಂ ಮಮ ವಾನರಪುಂಗವ ।
ಸ್ಪೃಷ್ಟ ತೇಽಸ್ತು ಮಹಾಬಾಹೋ ಕಾಮಯೇ ತ್ವಾಂ ಪ್ರಸೀದ ಮೇ ॥೧೧॥

ವಾನರಶ್ರೇಷ್ಠನೇ, ನೀನು ನನಗೆ ಹೇಳಿದುದೆಲ್ಲವನ್ನೂ ಮಾಡಿದಂತೆಯೇ ಆಗಿದೆ. ಮಹಾಬಾಹುವೇ, ನಿನಗೆ ಮಂಗಳವಾಗಲಿ. ನಾನು ಯಾವಾಗಲೂ ನಿನ್ನನ್ನು ಬಯಸುತ್ತೇನೆ. ನನ್ನನ್ನು ಅನುಗ್ರಹಿಸು.

ಸನಾಥಾಃ ಪಾಂಡವಾಃ ಸರ್ವೇ ತ್ವಯಾ ನಾಥೇನ ವೀರ್ಯವನ್ ।
ತವೈವ ತೇಜಸಾ ಸರ್ವಾನ್ ವಿಜೇಷ್ಯಾಮೋ ವಯಂ ಪರಾನ್ ॥೧೨॥

ಎಲೈ ಪರಾಕ್ರಮಶಾಲಿಯೇ, ನಿನ್ನಂಥ ಸ್ವಾಮಿಯನ್ನು ಪಡೆದ ಪಾಂಡವರಾದ ನಾವೆಲ್ಲರೂ ಸನಾಥರು ಮತ್ತು ಧನ್ಯರು. ನಿನ್ನ ಬಲದಿಂದಲೇ ನಾವು ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವೆವು.

ವೈಶಂಪಾಯನಃ

ಏವಮುಕ್ತಸ್ತು ಹನುಮಾನ್ ಭೀಮಸೇನಮಭಾಷತ ।
ಭ್ರಾತೃತ್ವಾತ್ ಸೌಹೃದಾಚ್ಚೈವ ಕರಿಷ್ಯಾಮಿ ಪ್ರಿಯಂ ತವ ॥೧೩॥

ವೈಶಂಪಾಯನ– ಹೀಗೆ ಭೀಮಸೇನನಿಂದ ಹೇಳಲ್ಪಟ್ಟ ಹನುಮಂತನು ಭೀಮಸೇನನನ್ನು ಕುರಿತು ನೀನು ನನಗೆ ತಮ್ಮನೂ ಮತ್ತು ಪ್ರಿಯನೂ ಆಗಿರುವುದರಿಂದ ನಿನಗೆ ಹಿತವನ್ನು ಮಾಡುವೆನು ಎಂದು ಹೇಳಿದನು.

ಚಮೂಂ ವಿಗಾಹ್ಯ ಶತ್ರೂಣಾಂ ಶರಶಕ್ತಿಸಮಾಕುಲಾಮ್ ।
ಯದಾ ಸಿಂಹರವಂ ವೀರ ಕರಿಷ್ಯಸಿ ಮಹಾಬಲ ॥೧೪॥

ತದಾಹಂ ಬೃಂಹಯಿಷ್ಯಾಮಿ ಸ್ವರವೇಣ ರವಂ ತವ ।
ಯಂ ಶ್ರುತ್ವೈವ ಭವಿಷ್ಯಂತಿ ವ್ಯಸವಸ್ತೇಽರಯೋ ರಣೇ ॥೧೫॥

ಎಲೈ ಮಹಾಬಲನಾದ ವೀರನೇ, ನೀನು ಶರಶಕ್ತಿಗಳಿಂದ ತುಂಬಿದ ಶತ್ರುಗಳ ಸೈನ್ಯವನ್ನು ಪ್ರವೇಶಿಸಿ ಸಿಂಹನಾದವನ್ನು ಮಾಡುವಾಗ ನನ್ನ ಸ್ವರವನ್ನು ನಿನ್ನ ಸ್ವರದ ಜೊತೆಯಲ್ಲಿ ಸೇರಿಸಿ ದೊಡ್ಡದನ್ನಾಗಿ ಮಾಡುವೆನು. ಆ ಸ್ವರವನ್ನು ಕೇಳಿ ಯುದ್ಧದಲ್ಲಿ ನಿನ್ನ ಶತ್ರುಗಳು ಮರಣವನ್ನು ಹೊಂದುವರು.

ವಿಜಯಸ್ಯ ಧ್ವಜಸ್ಥಶ್ಚ ನಾದಾನ್ ಮೋಕ್ಷ್ಯಾಮಿ ದಾರುಣಾನ್ ।
ಶತ್ರೂಣಾಂ ಯೇ ಪ್ರಾಣಹರಾಃ ಸುಖಂ ಯೇನ ಹನಿಷ್ಯಥ ॥೧೬॥

ಅರ್ಜುನನ ರಥದ ಧ್ವಜದಲ್ಲಿ ಕುಳಿತು ಭಯಂಕರವಾದ ನಾದವನ್ನು ಮಾಡುವೆನು. ಆ ನಾದಗಳು ಶತ್ರುಗಳ ಪ್ರಾಣಹಾರಕವಾಗುವವು. ಆಗ ನೀವು ಅನಾಯಾಸವಾಗಿ ಶತ್ರುಗಳನ್ನು ಸಂಹಾರ ಮಾಡುವಿರಿ.

ಏವಮಾಭಾಷ್ಯ ಹನೂಮಾಂಸ್ತದಾ ಪಾಂಡವನಂದನಮ್ ।
ಮಾರ್ಗಮಾಖ್ಯಾಯ ಭೀಮಾಯ ತತ್ರೈವಾಂತರಧೀಯತ ॥೧೭॥

ಹೀಗೆ ಹನುಮಂತನು ಪಾಂಡವನಂದನನಾದ ಭೀಮಸೇನನನಿಗೆ ಹೇಳಿ ಅವನಿಗೆ ಮುಂದಿನ ಮಾರ್ಗವನ್ನು ತೋರಿಸಿ ಅಲ್ಲಿಯೇ ಅದೃಶ್ಯನಾದನು.

ವೈಶಂಪಾಯನಃ

ಗತೇ ತಸ್ಮಿನ್ ಹರಿವರೇ ಭೀಮೋಽಪಿ ಬಲಿನಾಂ ವರಃ ।
ತೇನ ಮಾರ್ಗೇಣ ವಿಪುಲಂ ವ್ಯಚರದ್ ಗಂಧಮಾದನಮ್ ।

ಅನುಸ್ಮರನ್ ವಪುಸ್ತಸ್ಯ ಶ್ರಿಯಂ ಚಾಪ್ರತಿಮಾಂ ಭುವಿ ।
ಮಾಹಾತ್ಮ್ಯಮನುಭಾವಂ ಚ ಸ್ಮರನ್ ದಾಶರಥೇರ್ಯಯೌ ॥೧೮॥

ಆ ಹರೀಶ್ವರನು ಅಂತರ್ಧಾನವನ್ನು ಹೊಂದಿದಮೇಲೆ, ಬಲಿಷ್ಠರಲ್ಲಿ ಅಗ್ರಗಣ್ಯನಾದ ಭೀಮಸೇನನು ಹನುಮಂತನು ತೋರಿಸಿದ ಮಾರ್ಗದಲ್ಲಿಯೇ ಗಂಧಮಾದನ ಪರ್ವತದಲ್ಲಿ ಸಂಚರಿಸಿದನು. ಹನುಮಂತನ ಆ ಶರೀರವನ್ನು, ಅದರ ಅಪ್ರತಿಮ ಕಾಂತಿಯನ್ನು ಭೂಮಿಯಲ್ಲಿ ದಶರಥ ರಾಮನ ಮಹಿಮೆಯನ್ನು ಮತ್ತು ಸಾಮರ್ಥ್ಯವನ್ನು ಸ್ಮರಿಸುತ್ತಾ ಮುಂದೆ ಸಾಗಿದನು.

ಸ ತಾನಿ ರಮಣೀಯಾನಿ ವನಾನ್ಯುಪವನಾನಿ ಚ ।
ವಿಲೋಕಯಾಮಾಸ ತದಾ ಸೌಗಂಧಿಕವನೇಪ್ಸಯಾ ॥೧೯॥

ಅವನು ಸೌಗಂಧಿಕವನವನ್ನು ಕಾಣುವ ಸಲುವಾಗಿ ಸುತ್ತಲೂ ಇದ್ದ ಮನೋಹರವಾದ ವನಗಳನ್ನು ಮತ್ತು ಉಪವನಗಳನ್ನು ನೋಡಿದನು.

ಪುಲ್ಲದ್ರುಮವಿಚಿತ್ರಾಣಿ ಸರಾಂಸಿ ಸರಿತಸ್ತಥಾ ।
ನಾನಾಕುಸುಮಚಿತ್ರಾಣಿ ಪುಷ್ಪಿತಾನಿ ವನಾನಿ ಚ ।
ನಾನಾವಿಹಗಜುಷ್ಟಾನಿ ಪಶ್ಯತಿ ಸ್ಮ ಸಮಂತತಃ ॥೨೦॥

ತೀರದಲ್ಲಿ ಅರಳಿದ ಮರಗಳಿಂದ, ವಿಚಿತ್ರವಾದ ಅನೇಕ ಪಕ್ಷಿಗಳಿಂದ, ಸೇವಿತವಾದ ಸರೋವರಗಳನ್ನು ಮತ್ತು ನದಿಗಳನ್ನು ಅಂತಹ ವೃಕ್ಷಗಳಿಂದ ವಿಚಿತ್ರವಾದ ಅನೇಕ ವನಗಳನ್ನು ಎಲ್ಲಕಡೆಯಲ್ಲಿಯೂ ನೋಡಿದನು.

ಮತ್ತವಾರಣಯೂಥಾನಿ ಪಂಕಕ್ಲಿನ್ನಾನಿ ಭಾರತ ।
ವರ್ಷತಾಮಿವ ಮೇಘಾನಾಂ ವೃಂದಾನಿ ದದೃಶೇ ತದಾ ॥೨೧॥

ಎಲೈ ಭಾರತನೇ, ಮಳೆಯನ್ನು ಸುರಿಸುವ ಮೇಘಸಮೂಹದಂತೆ ಕಾಣುತ್ತಿದ್ದ ಕೆಸರಿನಿಂದ ಎದ್ದುಬಂದ ಮದ್ದಾನೆಗಳ ಸಮೂಹಗಳನ್ನು ಆಗ ಅಲ್ಲಿನೋಡಿದನು.

ಹರಿಕೈಶ್ಚಪಲಾಪಾಂಗೈರ್ಹರಿಣೀಸಹಿತೈರ್ವನಮ್ ।
ಸಶಷ್ಪಕವಲೈಃ ಶ್ರೀಮಾನ್ ಪಥಿ ದೃಷ್ಟ್ವಾ ದ್ರುತಂ ಯಯೌ ॥೨೨॥

ಹೆಣ್ಣು ಜಿಂಕೆಗಳಿಂದ ಕೂಡಿದ, ಬಾಯಿಯಲ್ಲಿ ಎಳೆಯ ಹುಲ್ಲಿನ ಕವಳವನ್ನು ಹೊಂದಿದ್ದಂತಹ ಚಂಚಲದೃಷ್ಟಿಯುಳ್ಳ, ಜಿಂಕೆಗಳಿಂದ ನಿರೀಕ್ಷಿಸಲ್ಪಟ್ಟವನಾಗಿ ಕಾಂತಿಯುಕ್ತನಾದ ಅವನು ಬೇಗ ಸಾಗಿದನು.

ಮಹಿಷೈಶ್ಚ ವರಾಹೈಶ್ಚ ಶಾರ್ದೂಲೈಶ್ಚ ನಿಷೇವಿತಮ್ ।
ವ್ಯಪೇತಭೀರ್ಗಿರಿಂ ಶೌರ್ಯಾದ್ ಭೀಮಸೇನೋ ವ್ಯಗಾಹತ ॥೨೩॥

ಮಹಿಷಗಳಿಂದಲೂ, ವರಾಹಗಳಿಂದಲೂ ಮತ್ತು ವ್ಯಾಘ್ರಗಳಿಂದಲೂ ಸೇವಿತವಾದ ಆ ಪರ್ವತವನ್ನು ನಿರ್ಭಯನಾದ ಭೀಮಸೇನನು ತನ್ನ ಶೌರ್ಯದಿಂದ ಪ್ರವೇಶಿಸಿದನು.

ಕುಸುಮಾನಂತಗಂಧೈಶ್ಚ ತಾಮ್ರಪಲ್ಲವಕೋಮಲೈಃ ।
ಯಾಚ್ಯಮಾನ ಇವಾರಣ್ಯೇ ದ್ರುಮೈರ್ಮಾರುತಕಂಪಿತೈಃ ॥೨೪॥

ಕೃತಪದ್ಮಾಂಜಲಿಪುಟಾ ಮತ್ತಷಟ್‌ಪದಸೇವಿತಾಃ ।
ಪ್ರಿಯತೀರ್ಥವನಾ ಮಾರ್ಗೇ ಪದ್ಮಿನೀಃ ಸಮತಿಕ್ರಮನ್ ॥೨೫॥

ತಮ್ಮ ಕುಸುಮಗಳ ಅನೇಕ ಪರಿಮಳಗಳಿಂದ ಮತ್ತು ಕೋಮಲವಾದ ಚಿಗುರುಗಳ ತಾಮ್ರಹಸ್ತಗಳಿಂದ ವಾಯುವಿನಿಂದ ಅಲ್ಲಾಡುವ ವೃಕ್ಷಗಳಿಂದ ಯಾಚಿಸಲ್ಪಟ್ಟವನಂತೆ ಅವನು ಅರಣ್ಯದಲ್ಲಿ ಮುಂದೆ ಸಾಗಿ ಮದಿಸಿದ ಭೃಂಗಗಳಿಂದ ಸೇವಿತವಾದ ಪದ್ಮಗಳೆಂಬ ಅಂಜಲಿಪುಟಗಳಿಂದ ಪ್ರಾರ್ಥಿಸುವಂತಿದ್ದ ಮನೋಹರವಾದ ತೀರ್ಥಗಳನ್ನು ಮತ್ತು ವನಗಳನ್ನು ಹೊಂದಿದ್ದ ಪದ್ಮಸರೋವರಗಳನ್ನು ಮಾರ್ಗದಲ್ಲಿ ದಾಟಿ ಮುಂದೆ ನಡೆದನು.

ಸಜ್ಜಮಾನಮನೋದೃಷ್ಟಿಃ ಪುಲ್ಲೇಷು ಗಿರಿಸಾನುಷು ।
ದ್ರೌಪದೀವಾಕ್ಯಪಾಥೇಯೋ ಭೀಮಃ ಶೀಘ್ರತರಂ ಯಯೌ ॥೨೬॥

ಅರಳಿದ ಮರಗಳುಳ್ಳ ಪರ್ವತದ ಶಿಖರಗಳಲ್ಲಿ ಮನಸ್ಸು ಮತ್ತು ದೃಷ್ಟಿಯನ್ನು ನೆಟ್ಟವನಾಗಿ ದ್ರೌಪದಿಯ ವಚನವನ್ನೇ ಪಾಥೇಯವನ್ನಾಗಿ ಹೊಂದಿ ಭೀಮಸೇನನು ಶೀಘ್ರವಾಗಿ ಮುಂದೆ ನಡೆದನು.

ಪರಿವೃತ್ತೇಽಹನಿ ತತಃ ಪ್ರಕೀರ್ಣಹರಿಣೇ ವನೇ ।
ಕಾಂಚನೈರ್ವಿಮಲೈಃ ಪದ್ಮೈರ್ದದರ್ಶ ವಿಪುಲಾಂ ನದೀಮ್ ॥೨೭॥

ಹಗಲಿನಲ್ಲಿ ಸೂರ್ಯನು, ಪಶ್ಚಿಮಾಭಿಮುಖವಾಗಿ ತಿರುಗುತ್ತಿರಲು ಮತ್ತು ಕಾಡಿನಲ್ಲಿ ಜಿಂಕೆಗಳು ಅಲ್ಲಲ್ಲಿ ಚದುರಿರಲು ಸುವರ್ಣಮಯವಾದ ಸ್ವಚ್ಛ ಪದ್ಮಗಳಿಂದ ತುಂಬಿದ ಒಂದು ವಿಸ್ತಾರವಾದ ನದಿಯನ್ನು ಅವನು ನೋಡಿದನು.

ಹಂಸಕಾರಂಡವಯುತಾಂ ಚಕ್ರವಾಕೋಪಶೋಭಿತಾಮ್ ।
ರಚಿತಾಮಿವ ತಸ್ಯಾದ್ರೇರ್ಮಾಲಾಂ ವಿಮಲಪಂಕಜಾಮ್ ॥೨೮॥

ಆ ನದಿಯು ಹಂಸಕಾರಂಡವ ಚಕ್ರವಾಕ ಮೊದಲಾದ ಜಲಪಕ್ಷಿಗಳಿಂದ ಶೋಭಿತವಾಗಿದ್ದು, ಆ ಪರ್ವತಕ್ಕೆ ಪರಿಶುದ್ಧವಾದ ಪದ್ಮಗಳಿಂದ ಮಾಡಿದ ಮಾಲೆಯಂತಿದ್ದಿತು.

ತಸ್ಯಾಂ ನದ್ಯಾಂ ಮಹಾಸತ್ತ್ವಃ ಸೌಗಂಧಿಕವನಂ ಮಹತ್ ।
ಅಪಶ್ಯತ್ ಪ್ರೀತಿಜನನಂ ಬಾಲಾರ್ಕಸದೃಶದ್ಯುತಿ ॥೨೯॥

ಮಹಾಸತ್ತ್ವನಾದ ಅವನು ಆ ನದಿಯಲ್ಲಿ ಬಾಲಸೂರ್ಯನಂತೆ ಕಾಂತಿಯುಳ್ಳ, ಸಂತೋಷಜನಕವಾದ ವಿಸ್ತಾರವಾದ ಸೌಗಂಧಿಕವನವನ್ನು (ಸೌಗಂಧಿಕ ಪುಷ್ಪವಿದ್ದ ಸರೋವರವನ್ನು) ನೋಡಿದನು.

ತದ್ ದೃಷ್ಟ್ವಾ ಲಬ್ಧಕಾಮಃ ಸ ಮನಸಾ ಪಾಂಡುನಂದನಃ ।
ವನವಾಸಪರಿಕ್ಲಿಷ್ಟಾಂ ಜಗಾಮ ಮನಸಾ ಪ್ರಿಯಾಮ್ ॥೩೦॥

ಆ ಪಾಂಡುನಂದನನು ಆ ಸರೋವರವನ್ನು ನೋಡಿ ಮನಸ್ಸಿನಲ್ಲಿ ತನ್ನ ಆಸೆಯು ಪೂರ್ಣವಾಗಿರಲು ವನವಾಸದ ಕ್ಲೇಶವನ್ನು ಅನುಭವಿಸುತ್ತಿದ್ದ ತನ್ನ ಪ್ರಿಯಯಾದ ದ್ರೌಪದಿಯನ್ನು ಮನಸ್ಸಿನಲ್ಲಿ ಸ್ಮರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಚತುರಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨

ನರಾಗಮ್ಯಂ ನಲಿನೀಮೇತ್ಯ ತತ್ರ
ದೃಷ್ಟ್ವಾ ಪದ್ಮಾನ್ಯದ್ಭುತಾಕಾರವಂತಿ ।
ಹೈಮಾನಿ ದಿವ್ಯಾನ್ಯತಿಗಂಧವಂತಿ ಸಮಾಸದದ್
ವಾರ್ಯಮಾಣೋ ನರಾಶ್ಯೈಃ ॥೨೮೦॥

ಭೀಮಸೇನ ಮಾನವರಿಗೆ ಅಗಮ್ಯವಾದ ಕಮಲವನಕ್ಕೆ ಹೋಗಿ ಆದರಲ್ಲಿ ಅದ್ಭುತ ರೂಪದ ದಿವ್ಯ ಸುಗಂಧಭರಿತ ಬಂಗಾರದ ಕಮಲಗಳನ್ನು ಕಂಡು ರಾಕ್ಷಸರು ತಡೆಯುತ್ತಿದ್ದಂತೆಯೇ ಪ್ರವೇಶಿಸಿದ.

ತೇ ಭೀಮಮತಾತ್ಯುಧಮುಗ್ರರೂಪಂ
ಮಹಾಬಲಂ ರೂಪನವಾವತಾರಮ್ ।
ನ್ಯವಾರಯನ್ ಕ್ರೋಧವಶಾಃ ಸಮೇತಾಃ ಶತಂ
ಸಹಸ್ರಾಣ್ಯಯುತಾನಿ ಸಂಖ್ಯೇ ॥೨೮೧॥

ಆ ಕ್ರೋಧವಶ ರಾಕ್ಷಸರು ಎಲ್ಲರೂ ಸೇರಿ ಅನುಪಮ ಅತಿ ಸುಂದರಾಕಾರದ ಮಹಾಬಲನಾದ, ಉಗ್ರರೂಪನಾಗಿ ಆಯುಧ ಹಿಡಿದಿರುವ ಭೀಮನನ್ನು ತಡೆದರು. ಅವರು ಸಂಖ್ಯೆಯಲ್ಲಿ ನೂರು ಕೋಟಿ ಇದ್ದರು.

★ ★ ★ ★

ನೂರ ನಲವತ್ತೊಂಬತ್ತನೆಯ ಅಧ್ಯಾಯ

ಸೌಗಂಧಿಕ ಸರೋವರವನ್ನು ಪ್ರವೇಶಿಸಲಿರುವ ಭೀಮಸೇನನಿಗೆ ಕಾವಲುಗಾರರ ಪ್ರಶ್ನೆ.

ವೈಶಂಪಾಯನಃ

ಸ ಗತ್ವಾ ನಳಿನೀಂ ರಮ್ಯಾಂ ರಾಕ್ಷಸೈರಭಿರಕ್ಷಿತಾಮ್ ।
ಕೈಲಾಸಶಿಖರಾಭ್ಯಾಶೇ ದದರ್ಶ ಶುಭಕಾನನಾಮ್ ॥೧॥
ನೀಲಶಾದ್ವಲಪರ್ಯಂತಾಂ ಚಿತ್ರದ್ರುಮಪರಿಚ್ಛದಾಮ್ ।

ವೈಶಂಪಾಯನ– ಭೀಮಸೇನನು ಮುಂದೆ ಹೋಗಿ ಕೈಲಾಸ ಪರ್ವತದ ಶಿಖರದ ಸಮೀಪದಲ್ಲಿ ಶುಭಕಾನನದಿಂದ ಸುತ್ತುವರಿಯಲ್ಪಟ್ಟದ್ದ ಹಸಿರುಬಣ್ಣದ ಶೀತವಾದ ತೀರಗಳಿಂದ ಸುತ್ತುವರಿಯಲ್ಪಟ್ಟದ್ದಂತಹ ವಿಚಿತ್ರವಾದ ಮರಗಳಿಂದ ಆವೃತವಾದಂತಹ ಮನೋಹರವಾದ ಸರೋವರವನ್ನು ನೋಡಿದನು.

ಕುಬೇರಭವನಾಭ್ಯಾಶೇ ಜಾತಾಂ ಪರ್ವತನಿರ್ಝರೈಃ ।
ಸುರಮ್ಯಾಂ ವಿಪುಲಚ್ಛಾಯಾಂ ನಾನಾದ್ರುಮಲತಾಕುಲಮ್ ॥೨॥

ಆ ಸರೋವರವು ಕುಬೇರನ ಭವನದ ಸಮೀಪದಲ್ಲಿ ಪರ್ವತದ ಝರಿಗಳಿಂದ ಮಾಡಲ್ಪಟ್ಟು ವಿಪುಲ ಛಾಯೆಯನ್ನು ಕೊಡುವ ಅನೇಕ ವೃಕ್ಷಗಳು ಮತ್ತು ಲತೆಗಳಿಂದ ನಿಬಿಡವಾಗಿದ್ದು ಮನೋಹರವಾಗಿದ್ದಿತು.

ಹರಿತಾಂಬುಜಸಂಚ್ಛನ್ನಾಂ ದಿವ್ಯಾಂ ಕನಕಪುಷ್ಕರಾಮ್ ।
ವಿಚಿತ್ರಭೂತಾಂ ಲೋಕಸ್ಯ ಶುಭಾಮದ್ಭುತದರ್ಶನಾಮ್ ॥೩॥

ನಾನಾಪಕ್ಷಿಗಣಾಕೀರ್ಣಾಂ ಸೂಪತೀರ್ಥಾಮಕರ್ದಮಾಮ್ ।
ಅತೀವ ರಮ್ಯಾಂ ಸುಜಲಾಂ ಜಾತಾಂ ಪರ್ವತಸಾನುಷು ।

ಆ ಸರೋವರವು ಹರಿದ್ವರ್ಣದ ಕಮಲಗಳಿಂದಲೂ, ಸುವರ್ಣವರ್ಣದ ಕಮಲಗಳಿಂದಲೂ ತುಂಬಿಹೋಗಿ ಅದ್ಭುತವಾದ ದೃಶ್ಯವನ್ನು ಕೊಡುವುದಾಗಿ ಲೋಕಕ್ಕೆ ವಿಚಿತ್ರವೂ ಮತ್ತು ಶುಭಪ್ರದವೂ ಆಗಿದ್ದಿತು. ಆ ಸರೋವರವು ಅನೇಕ ಪಕ್ಷಿಗಣಗಳಿಂದ

ತುಂಬಿದ್ದು ತೀರದ ಸಮೀಪದಲ್ಲಿ ಕೆಸರಿಲ್ಲದ ಪ್ರದೇಶಗಳಿಂದ ಕೂಡಿದ್ದು ಶುದ್ಧವಾದ ನೀರಿನಿಂದ ಪರ್ವತಶಿಖರದಲ್ಲಿ ಬಹಳ ಮನೋಹರವಾಗಿದ್ದಿತು.

ತತ್ರಾಮೃತರಸಂ ಶೀತಂ ಲಘು ಕುಂತೀಸುತಃ ಶುಭಮ್ ।
ದದರ್ಶ ವಿಮಲಂ ತೋಯಂ ಪಿಬಂಶ್ಚ ಬಹು ಪಾಂಡವಃ ॥೪॥

ಪಾಂಡವನಾದ ಕುಂತೀಪುತ್ರನಾದ ಭೀಮಸೇನನು ಆ ಸರೋವರದ ಅಮೃತರಸತುಲ್ಯವಾದ ತಂಪಾದ ಮತ್ತು ಹಗುರವಾದ ಶುಭಜಲವನ್ನು ನೋಡಿ ಅದನ್ನು ಬಹಳವಾಗಿ ಪಾನಮಾಡಿದನು.

ತಾಂ ತು ಪುಷ್ಕರಿಣೀಂ ರಮ್ಯಾಂ ದಿವ್ಯಸೌಗಂಧಿಕಾವೃತಾಮ್ ।
ಜಾತರೂಪಮಯೈಃ ಪದ್ಮೈಶ್ಚನ್ನಾಂ ಪರಮಗಂಧಿಭಃ ॥೫॥

ವೈಡೂರ್ಯವರನಾಳೈಶ್ಚ ಬಹುಚಿತ್ರೈರ್ಮನೋರಮೈಃ ।
ಹಂಸಕಾರಂಡವೋದ್ಧೂತೈಃ ಸೃಜದ್ಭಿರಮಲಂ ರಜಃ ॥೬॥

ಆ ಮನೋಹರವಾದ ಪುಷ್ಕರಿಣಿಯಾದರೂ ದಿವ್ಯಸೌಗಂಧಿಕಪುಷ್ಪಗಳಿಂದಲೂ, ಅತ್ಯಂತ ಸುಗಂಧಯುಕ್ತವಾದ ಸುವರ್ಣಮಯವಾದ ಪದ್ಮಗಳಿಂದಲೂ ತುಂಬಿಹೋಗಿದ್ದಿತು. ಆ ಪದ್ಮಪುಷ್ಪಗಳಿಗೆ ವೈಡೂರ್ಯವರ್ಣದ ನಾಳಗಳಿದ್ದವು. ಅವು ವಿಚಿತ್ರವಾಗಿಯೂ ಮತ್ತು ಮನೋಹರವಾಗಿಯೂ ಕಾಣುತ್ತಿದ್ದವು. ಹಂಸಕಾರಂಡವ ಮೊದಲಾದ ಜಲಪಕ್ಷಿಗಳ ಸಂಚಾರದಿಂದ ಪುಷ್ಪಗಳ ಕೇಸರದ ರಜವು ಮೇಲೆದ್ದು ಬರುತ್ತಿತ್ತು.

ಆಕ್ರೀಡಂ ರಾಜರಾಜಸ್ಯ ಕುಬೇರಸ್ಯ ಮಹಾತ್ಮನಃ ।
ಗಂಧರ್ವೈರಪ್ಸರೋಭಿಶ್ಚ ದೇವೈಶ್ಚ ಪರಮಾರ್ಚಿತಾಮ್ ॥೭॥

ಆ ಸರೋವರವು ಮಹಾತ್ಮನಾದ ರಾಜರಾಜನಾದ ಕುಬೇರನ ವಿಹಾರ ಸ್ಥಾನವಾಗಿದ್ದಿತು. ಗಂಧರ್ವರಿಂದಲೂ ಅಪ್ಸರೆಯರಿಂದಲೂ ಮತ್ತು ದೇವತೆಗಳಿಂದಲೂ ಪೂಜಿತವಾಗಿದ್ದಿತು.

ಸೇವಿತಾಮೃಷಿಭಿರ್ದಿವ್ಯೈರ್ಯಕ್ಷೈಃ ಕಿಂಪುರುಷೈಸ್ತಥಾ ।
ರಾಕ್ಷಸೈಃ ಕಿನ್ನರೈಶ್ಚಾಪಿ ಗುಪ್ತಾಂ ವೈಶ್ರವಣೇನ ಚ ॥೮॥

ಅದು ದೇವಋಷಿಗಳಿಂದಲೂ, ಯಕ್ಷರಿಂದಲೂ, ಕಿಂಪುರುಷರಿಂದಲೂ ಸೇವಿತವಾಗಿದ್ದಿತು. ಮತ್ತು ರಾಕ್ಷಸರಿಂದಲೂ, ಕಿನ್ನರರಿಂದಲೂ ಮತ್ತು ಸ್ವತಃ ಕುಬೇರನಿಂದಲೂ ರಕ್ಷಿತವಾಗಿದ್ದಿತು.

ತಾಂ ಚ ದೃಷ್ಟ್ವೈವ ಕೌಂತೇಯೋ ಭೀಮಸೇನೋ ಮಹಾಬಲಃ ।
ಬಭೂವ ಪರಮಪ್ರೀತೋ ದಿವ್ಯಂ ಸಂಪ್ರೇಕ್ಷ್ಯ ತತ್ಸರಃ ॥೯॥

ಆ ದಿವ್ಯಸರೋವರವನ್ನು ನೋಡಿದ ಕೂಡಲೇ ಕುಂತೀಪುತ್ರನಾದ ಮಹಾಬಲನಾದ ಭೀಮಸೇನನಿಗೆ ಬಹಳ ಸಂತೋಷವುಂಟಾಯಿತು.

ತಚ್ಚ ಕ್ರೋಧವಶಾ ನಾಮ ರಾಕ್ಷಸಾ ರಾಜಶಾಸನಾತ್ ।
ರಕ್ಷಂತಿ ಶತಸಹಸ್ರಾಣ್ಯಾಯುಧಪರಿಚ್ಛದಾಃ ॥೧೦॥

ಆ ಸರೋವರವನ್ನು ಶತಸಹಸ್ರಸಂಖ್ಯೆಯಲ್ಲಿದ್ದ ಕ್ರೋಧವಶ ನಾಮಕರಾದ ರಾಕ್ಷಸರು ಕೈಯಲ್ಲಿ ಆಯುಧವನ್ನು ಹಿಡಿದು ರಾಜನಾದ ಕುಬೇರನ ಶಾಸನದಂತೆ ರಕ್ಷಿಸುತ್ತಿದ್ದರು.

ತೇ ತು ದೃಷ್ಟ್ವೈವ ಕೌಂತೇಯಮಜಿನೈಃ ಪ್ರತಿವಾಸಿತಮ್ ।
ರುಗ್ಮಾಂಗದಧರಂ ವೀರಂಭೀಮಂ ಭೀಮಪರಾಕ್ರಮಮ್ ॥೧೧॥

ಸಾಯುಧಂ ಬದ್ಧನಿಸ್ತ್ರಿಂಶಮಶಂಕಿತಮರಿಂದಮಮ್ ।
ಪುಷ್ಕರೇಷ್ವಮುಪಾಯಾಂತಮನ್ಯೋನ್ಯಮಭಿಚುಕ್ರುಶುಃ ॥೧೨॥

ಅವರಾದರೂ ಕೃಷ್ಣಾಜಿನವನ್ನು ಧರಿಸಿದ, ಸುವರ್ಣಮಯವಾದ ಅಂಗದವನ್ನು ಧರಿಸಿದ, ಸೊಂಟದಲ್ಲಿ ಕತ್ತಿಯನ್ನು ಕಟ್ಟಿದ, ಕೈಯಲ್ಲಿ ಆಯುಧವನ್ನು ಹಿಡಿದ ಅರಿಂದಮನಾದ ಮಹಾಪರಾಕ್ರಮಿಯಾದ ಕೌಂತೇಯನಾದ ಭೀಮನು ಕಮಲ ಪುಷ್ಪಗಳನ್ನು ತೆಗೆದುಕೊಳ್ಳಲು ಸರೋವರದ ಕಡೆಗೆ ನಿರ್ಭಯವಾಗಿ ಬರುತ್ತಿರುವುದನ್ನು ನೋಡಿ ಪರಸ್ಪರವಾಗಿ ಗಟ್ಟಿಯಾದ ಸ್ವರದಲ್ಲಿ ಮಾತನಾಡಿಕೊಂಡರು.

ಅಯಂ ಪುರುಷಶಾರ್ದೂಲಃ ಸಾಯುಧೋಽಜಿನಸಂವೃತಃ ।
ಯಚ್ಚಿಕೀರ್ಷುರಿಹ ಪ್ರಾಪ್ತಸ್ತತ್ ಸಂಪ್ರಷ್ಟುಮಿಹಾರ್ಹತ ॥೧೩॥

ಕೃಷ್ಣಾಜಿನವನ್ನು ಧರಿಸಿ ಕೈಯಲ್ಲಿ ಆಯುಧವನ್ನು ಹಿಡಿದು ಇಲ್ಲಿಗೆ ಬರುತ್ತಿರುವ ಈ ಪುರುಷಶಾರ್ದೂಲನು ಏನು ಮಾಡಲು ಇಲ್ಲಿಗೆ ಬರುತ್ತಿದ್ದಾನೆ ಎಂದು ಅವನನ್ನು ಎಲ್ಲರೂ ಪ್ರಶ್ನೆಮಾಡಬೇಕು (ಎಂದು ಮಾತನಾಡಿಕೊಂಡರು).

ತತಃ ಸರ್ವೇ ಮಹಾಬಾಹುಂ ಸಮಾಸಾದ್ಯ ವೃಕೋದರಮ್ ।
ತೇಜೋಯುಕ್ತಮಪೃಚ್ಛಂತ ಕಸ್ತ್ವಮಾಖ್ಯಾತುಮರ್ಹಸಿ ॥೧೪॥

ಮುನಿವೇಷಧರಶ್ಚೈವ ಸಾಯುಧಶ್ಚೈವ ಲಕ್ಷ್ಯತೇ ।
ಯದರ್ಥಮಭಿಸಂಪ್ರಾಪ್ತಸ್ತದಾಚಕ್ಷ್ವ ಮಹಾಮತೇ ॥೧೫॥

ಅನಂತರ ಅವರೆಲ್ಲರೂ ಮಹಾಬಾಹುವು, ತೇಜಸ್ವಿಯೂ ಆದ ವೃಕೋದರನನ್ನು ಸಮೀಪಿಸಿ, ಎಲೈ ಮಹಾಮತಿಯೇ, ನೀನು ಯಾರು ಎಂದು ಹೇಳು? ಮುನಿವೇಷವನ್ನು ಧರಿಸಿ ಕೈಯಲ್ಲಿ ಆಯುಧವನ್ನು ಹಿಡಿದು ಬರುವುದು ಕಾಣುತ್ತಿದೆ. ಯಾವ ಉದ್ದೇಶದಿಂದ ಇಲ್ಲಿಗೆ ಬರುತ್ತಿದ್ದೀಯೆ ಎಂದು ಹೇಳು ಎಂದು ಪ್ರಶ್ನೆ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಪಂಚಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಐವತ್ತನೆಯ ಅಧ್ಯಾಯ

ಭೀಮನಿಂದ ಸೌಗಂಧಿಕ ಸರೋವರ ಪ್ರವೇಶ. ರಾಕ್ಷಸರ ವಿರೋಧ ಮತ್ತು ಯುದ್ಧ. ಕುಬೇರನಿಂದ ಭೀಮಸೇನನ ಕಾರ್ಯದ ಅನುಮೋದನೆ.

ಭೀಮಃ

ಪಾಂಡವೋ ಭೀಮಸೇನೋಽಹಂ ಧರ್ಮರಾಜಾದನಂತರಃ ।
ವಿಶಾಲಾಂ ಬದರೀಂ ಪ್ರಾಪ್ತೋ ಭ್ರಾತೃಭಿಃ ಸಹ ರಾಕ್ಷಸಾಃ ॥೧॥

ಭೀಮ– ಎಲೈ ರಾಕ್ಷಸರೇ, ನಾನು ಪಾಂಡುಪುತ್ರನಾದ ಭೀಮಸೇನ. ಧರ್ಮರಾಜನ ತಮ್ಮ. ಅಣ್ಣತಮ್ಮಂದಿರ ಜೊತೆಯಲ್ಲಿ ಬದರೀಕ್ಷೇತ್ರಕ್ಕೆ ಬಂದಿದ್ದೇನೆ.

ಅಪಶ್ಯತ್ ತತ್ರ ಪಾಂಚಾಲೀ ಸೌಗಂಧಿಕಮನುತ್ತಮಮ್ ।
ಅನಿಲೋಢಮಿತೋ ನೂನಂ ಸಾ ಬಹೂನಿ ಪರೀಪ್ಸತಿ ॥೨॥

ದ್ರೌಪದಿಯು ಪ್ರಾಯಶಃ ಇಲ್ಲಿಂದ ಗಾಳಿಯು ಹೊಡೆದುಕೊಂಡು ಬಂದು ಬಿದ್ದ ಶ್ರೇಷ್ಠವಾದ ಸೌಗಂಧಿಕಪುಷ್ಪವನ್ನು ನೋಡಿದಳು. ಅವಳು ಅಂತಹ ಅನೇಕ ಪುಷ್ಪಗಳನ್ನು ಹೊಂದಲು ಬಯಸುತ್ತಾಳೆ.

ತಸ್ಯ ಮಾಮನವದ್ಯಾಂಗ್ಯಾ ಧರ್ಮಪತ್ನ್ಯಾಃ ಪ್ರಿಯೇ ಸ್ಥಿತಮ್ ।
ಪುಷ್ಪಾಪಹರಮಿಹ ಪ್ರಾಪ್ತಂ ನಿಬೋಧತ ನಿಶಾಚರಾಃ ॥೩॥

ಎಲೈ ರಾಕ್ಷಸರೇ, ಆ ಅನವದ್ಯಾಂಗಿಯು ನನ್ನ ಧರ್ಮಪತ್ನಿ. ಅವಳ ಹಿತದಲ್ಲಿ ರತನಾದ ನಾನು ಅವಳಿಗೋಸ್ಕರ ಸೌಗಂಧಿಕಪುಷ್ಪವನ್ನು ತೆಗೆದುಕೊಂಡು ಹೋಗಲು ಇಲ್ಲಿಗೆ ಬಂದಿರುವೆನೆಂದು ತಿಳಿಯಿರಿ.

ರಾಕ್ಷಸಾಃ

ಆಕ್ರೀಡೋಽಯಂ ಕುಬೇರಸ್ಯ ದಯಿತಃ ಪುರುಷರ್ಷಭ ।
ನೇಹ ಶಕ್ಯಂ ಮನುಷ್ಯೇಣ ವಿಹರ್ತುಂ ಮರ್ತ್ಯಧರ್ಮಿಣಾ ॥೪॥

ರಾಕ್ಷಸ– ಎಲೈ ಪುರುಷರ್ಷಭನೇ, ಇದು ಕುಬೇರನಿಗೆ ಪ್ರಿಯವಾದ ವಿಹಾರಸ್ಥಾನ. ಮರಣಧರ್ಮವುಳ್ಳ ಮನುಷ್ಯನು ಇಲ್ಲಿ ವಿಹಾರ ಮಾಡಲು ಸಾಧ್ಯವಿಲ್ಲ.

ದೇವರ್ಷಯಸ್ತಥಾ ಯಕ್ಷಾ ದೇವಾಶ್ಚಾತ್ರ ವೃಕೋದರ ।
ಆಮಂತ್ರ್ಯ ಯಕ್ಷಪ್ರವರಂ ಪಿಬಂತಿ ರಮಯಂತಿ ಚ ॥೫॥

ವೃಕೋದರನೇ, ಇಲ್ಲಿ ದೇವರ್ಷಿಗಳು ಯಕ್ಷರು ಮತ್ತು ದೇವತೆಗಳೂ ಸಹ ಯಕ್ಷಾಧಿಪತಿಯಾದ ಕುಬೇರನ ಅನುಮತಿಯನ್ನು ಪಡೆದು ನೀರನ್ನು ಕುಡಿಯುತ್ತಾರೆ ಮತ್ತು ವಿಹರಿಸುತ್ತಾರೆ.

ಗಂಧರ್ವಾಪ್ಸರಸಶ್ಚೈವ ವಿಹರಂತ್ಯತ್ರ ಪಾಂಡವ ।
ಯಕ್ಷಾಧಿಪಸ್ಯಾನುಮತೇ ಕುಬೇರಸ್ಯ ಮಹಾತ್ಮನಃ ॥೬॥

ಎಲೈ ಪಾಂಡವನೇ, ಗಂಧರ್ವರು ಮತ್ತು ಅಪ್ಸರೆಯರು ಸಹ ಇಲ್ಲಿ ಯಕ್ಷರಾಜನಾದ ಮಹಾತ್ಮನಾದ ಕುಬೇರನ ಅನುಮತಿಯನ್ನು ಪಡೆದು ವಿಹರಿಸುತ್ತಾರೆ.

ಅನ್ಯಾಯೇನೇಹ ಯಃ ಕಶ್ಚಿದವಮನ್ಯ ಧನೇಶ್ವರಮ್ ।
ವಿಹರ್ತುಮಿಚ್ಛೇದ್ ದುರ್ವೃತ್ತಃ ಸ ವಿನಶ್ಯೇನ್ನ ಸಂಶಯಃ ॥೭॥

ಯಾವನಾದರೂ ದುರ್ನಡತೆಯುಳ್ಳವನು ಅನ್ಯಾಯದಿಂದ ಇಲ್ಲಿಗೆ ಬಂದು ಧನೇಶ್ವರನಾದ ಕುಬೇರನಿಗೆ ಅವಮಾನವನ್ನು ಮಾಡಿ ವಿಹಾರವನ್ನು ಮಾಡಲು ಬಯಸಿದರೆ ಅವನು ನಿಸ್ಸಂಶಯವಾಗಿ ವಿನಾಶವನ್ನು ಹೊಂದುವನು.

ತಮನಾದೃತ್ಯ ಪದ್ಮಾನಿ ಜಿಹೀರ್ಷಸಿ ಬಲಾದ್ಧತಃ (ಬಲಾದಿಹ) ।
ಧರ್ಮರಾಜಸ್ಯ ಚಾತ್ಮಾನಂ ಬ್ರವೀಷಿ ಭ್ರಾತರಂ ಕಥಮ್ ॥೮॥

ಆಮಂತ್ರ್ಯ ಯಕ್ಷರಾಜಂ ವೈ ತತಃ ಪಿಬ ಹರಸ್ವ ಚ ।
ನಾತೋಽನ್ಯಥಾ ತ್ವಯಾ ಶಕ್ಯಂ ಕಿಂಚಿತ್ಪುಷ್ಕರಮೀಕ್ಷಿತಮ್ ।

ನೀನಾದರೋ ನಿನ್ನ ಬಲದಿಂದ ದರ್ಪಿತನಾಗಿ ಆ ಕುಬೇರನಿಗೆ ಅವಮಾನವನ್ನು ಮಾಡಿ ಪದ್ಮಗಳನ್ನು ತೆಗೆದುಕೊಂಡು ಹೋಗಲು ಬಯಸುತ್ತಿದ್ದೀಯೆ. ನೀನು ಹೇಗೆ ನಿನ್ನನ್ನು ಧರ್ಮರಾಜನ ತಮ್ಮ ಎಂದು ಹೇಳಿಕೊಳ್ಳುತ್ತೀಯೆ? ಯಕ್ಷರಾಜನ ಅನುಮತಿಯನ್ನು ಪಡೆದು ಆನಂತರ ನೀರನ್ನು ಕುಡಿ ಮತ್ತು ಪುಷ್ಪಗಳನ್ನು ತೆಗೆದುಕೊಂಡು ಹೋಗು. ಹಾಗೆ ಮಾಡದಿದ್ದರೆ ನೀನು ಈ ಪುಷ್ಪಗಳನ್ನು ನೋಡಲೂ ಸಹ ಸಾಧ್ಯವಿಲ್ಲ.

ಭೀಮಸೇನಃ

ರಾಕ್ಷಸಾಸ್ತಂ ನ ಪಶ್ಯಾಮಿ ಧನೇಶ್ವರಮಿಹಾಂತಿಕೇ ।
ದೃಷ್ಟ್ವಾಪಿ ಚ ಮಹಾರಾಜಂ ನಾಹಂ ಯಾಚಿತುಮುತ್ಸಹೇ ॥೯॥

ಭೀಮಸೇನ– ಎಲೈ ರಾಕ್ಷಸರೇ, ಆ ಧನೇಶ್ವರನನ್ನು ನಾನು ಇಲ್ಲಿಲ್ಲಿಯೂ ಕಾಣುತ್ತಿಲ್ಲ. ಅಥವಾ ಒಂದುಪಕ್ಷ ಆ ಮಹಾರಾಜನನ್ನು ನೋಡಿದರೂ ನಾನು ಅವನನ್ನು ಯಾಚಿಸುವವನಲ್ಲ.

ನ ಹಿ ಯಾಚಂತಿ ರಾಜಾನ ಏಷ ಧರ್ಮಃ ಸನಾತನಃ ।
ನ ಚಾಹಂ ಹಾತುಮಿಚ್ಛಾಮಿ ಕ್ಷಾತ್ರಧರ್ಮಂ ಕಥಂಚನ ॥೧೦॥

ರಾಜರು ಯಾಚಿಸುವುದಿಲ್ಲ. ಇದು ಸನಾತನವಾದ ಧರ್ಮ. ನಾನಾದರೂ ಯಾವ ಕಾರಣದಿಂದಲೂ ಕ್ಷತ್ರಿಯಧರ್ಮವನ್ನು ತ್ಯಜಿಸುವುದಿಲ್ಲ.

ಇಯಂ ಚ ನಳಿನೀ ರಮ್ಯಾ ಜಾತಾ ಪರ್ವತನಿರ್ಝರೇ ।
ನೇಯಂ ಭವನಮಾಸಾದ್ಯ ಕುಬೇರಸ್ಯ ಮಹಾತ್ಮನಃ ॥೧೧॥

ಈ ಮನೋಹರವಾದ ಸರೋವರವಾದರೂ ಪರ್ವತದ ಝರಿಗಳಿಂದ ನಿರ್ಮಿಸಲ್ಪಟ್ಟದೆ. ಇದು ಮಹಾತ್ಮನಾದ ಕುಬೇರನ ಅರಮನೆಯ ಬಳಿ ಇಲ್ಲ.

ತುಲ್ಯಾ ಹಿ ಸರ್ವಭೂತಾನಾಮಿಯಂ ವೈಶ್ರವಣಸ್ಯ ಚ ।
ಏವಂ ಗತೇಷು ದ್ರವ್ಯೇಷು ಕಃ ಕಂ ಯಾಚಿತುಮರ್ಹತಿ ॥೧೨॥

ಆದ್ದರಿಂದ ಈ ಸರೋವರವು ಎಲ್ಲ ಪ್ರಾಣಿಗಳಿಗೂ ಹಾಗೆಯೇ ಕುಬೇರನಿಗೂ ಸಹ ಸೇರಿದುದು. ವಸ್ತುವಿನ ಪರಿಸ್ಥಿತಿಯು ಹೀಗಿರುವಾಗ ಯಾರು ಯಾರನ್ನು ಯಾಚಿಸಬೇಕು?

ವೈಶಂಪಾಯನಃ

ಇತ್ಯುಕ್ತ್ವಾ ರಾಕ್ಷಸಾನ್ ಸರ್ವಾನ್ ಭೀಮಸೇನೋ ಹ್ಯಮರ್ಷಣಃ ।
ತಾಂ ತು ಪುಷ್ಕರಿಣೀಂ ವೀರಃ ಪ್ರಭಿನ್ನ ಇವ ಕುಂಜರಃ ॥೧೩॥

ವ್ಯಗಾಹತ ಮಹಾಬಾಹುರ್ನಳಿನೀಂ ತಾಂ ಮಹಾಬಲಃ ।

ವೈಶಂಪಾಯನ– ಕ್ರೋಧ ಪರವಶನಾದ ಭೀಮಸೇನನು ಆ ಎಲ್ಲಾ ರಾಕ್ಷಸರನ್ನು ಕುರಿತು ಈ ರೀತಿ ಮಾತನಾಡಿ ವೀರನಾದ ಮಹಾಬಾಹುವೂ, ಮಹಾಬಲನೂ ಆದ ಅವನು ಮದಿಸಿದ ಆನೆಯಂತೆ ಆ ಪುಷ್ಕರಿಣಿಯನ್ನು ಪ್ರವೇಶಿಸಿದನು.

ತತಃ ಸ ರಾಕ್ಷಸೈರ್ವಾಚಾ ಪ್ರತಿಷಿದ್ಧಃ ಪ್ರತಾಪವಾನ್ ।
ಮಾ ಮೈವಮಿತಿ ಸರ್ವೋದ್ಭೈರ್ಭರ್ತ್ಸಯದ್ಭಿಃ ಸಮಂತತಃ ॥೧೪॥

ಕದರ್ಥೀಕೃತ್ಯ ತು ಸ ತಾನ್ ರಾಕ್ಷಸಾನ್ ಭೀಮವಿಕ್ರಮಃ ।
ವ್ಯಗಾಹತ ಮಹಾತೇಜಾಸ್ತೇ ತಂ ಸರ್ವೇ ನ್ಯವಾರಯನ್ ॥೧೫॥

ಆಗ ಪ್ರತಾಪಶಾಲಿಯಾದ ಭೀಮನು ಸಿಟ್ಟುಗೊಂಡ ರಾಕ್ಷಸರಿಂದ ಎಲ್ಲ ಕಡೆಗಳಿಂದಲೂ ಹೀಗೆ ಮಾಡಬೇಡ ಎಂದು ನಿಷೇಧಿಸಲ್ಪಡುತ್ತಿದ್ದರೂ ಆ ರಾಕ್ಷಸರನ್ನು ತುಚ್ಛೀಕರಿಸಿ ಭೀಮವಿಕ್ರಮನೂ, ಮಹಾತೇಜಸ್ವಿಯೂ ಆದ ಅವನು ಜಲವನ್ನು ಪ್ರವೇಶಿಸಿದನು. ರಾಕ್ಷಸರೆಲ್ಲರೂ ಅವನನ್ನು ತಡೆದರು.

ಬಲವಜ್ಜಗ್ರಾಹ ಪದ್ಮಾನಿ ರಕ್ಷಸಾಂ ಪಶ್ಯತಾಂ ತದಾ ।
ತೇ ತಂ ನ ಮಮೃಷುರ್ವೀರಾ ಗೃಹ್ಣಂತಂ ಕಮಲೋತ್ತಮಾನ್ ॥

ಅಗಣಯ್ಯ ಸ ತಾನ್ ಸರ್ವಾನ್ ಭೀಮಸೇನಃ ಪ್ರತಾಪವಾನ್ ।
ಪದ್ಮಾನ್ಯಗೃಹ್ಣಾತ್ ಸಹಸಾ ಪೌರುಷೇ ಸ್ವೇ ವ್ಯವಸ್ಥಿತಃ ॥೧೫.೨॥

ಅವನು ಆ ರಾಕ್ಷಸರು ನೋಡುತ್ತಿರುವಂತೆ ತನ್ನ ಬಲದಿಂದ ಪದ್ಮಗಳನ್ನು ಕಿತ್ತುಕೊಂಡನು. ಶ್ರೇಷ್ಠವಾದ ಕಮಲಗಳನ್ನು ಕೀಳುತ್ತಿರುವುದನ್ನು ನೋಡಿ ಆ ರಾಕ್ಷಸರು ಸಹಿಸಲಿಲ್ಲ. ಪ್ರತಾಪಶಾಲಿಯಾದ ಭೀಮಸೇನನು ತನ್ನ ಪೌರುಷದಲ್ಲಿ ತಾನು ವ್ಯವಸ್ಥಿತನಾಗಿ ಆ ರಾಕ್ಷಸರನ್ನು ಲೆಕ್ಕಿಸದೆ ಪದ್ಮಗಳನ್ನು ತೆಗೆದುಕೊಂಡನು.

ಗೃಹ್ಣೀತ ಬಧ್ನೀತ ಪ್ರ(ವಿ)ಕರ್ತತೇಮಂ
ಪಚಾಮ ಖಾದಾಮ ಚ ಭೀಮಸೇನಮ್ ।
ಕ್ರುದ್ಧಾ ಬ್ರುವಂತೋऽಭಿಯಯುರ್ದ್ರುತಂ ತೇ
ಶಸ್ತ್ರಾಣಿ ಚೋದ್ಯಮ್ಯ ವಿವೃತ್ತನೇತ್ರಾಃ ॥೧೬॥

ಈ ಭೀಮಸೇನನನ್ನು ಹಿಡಿಯಿರಿ, ಕಟ್ಟಿ, ಕತ್ತರಿಸಿ. ಅವನನ್ನು ಬೇಯಿಸಿ ತಿನ್ನೋಣ ಎಂದು ಕ್ರೋಧದಿಂದ ಹೇಳುತ್ತಾ ಅವರು ಕಣ್ಣುಗಳನ್ನು ಅರಳಿಸಿ ಕೈಗಳಲ್ಲಿ ಆಯುಧಗಳನ್ನು ಎತ್ತಿ ಬೇಗ ಭೀಮಸೇನನ ಕಡೆಗೆ ಬಂದರು.

ತತಃ ಸ ಗುರ್ವೀಂ ಯಮದಂಡಕಲ್ಪಾಂ
ಮಹಾಗದಾಂ ಕಾಂಚನಪಟ್ಟನದ್ಧಾಮ್ ।
ಪ್ರಗೃಹ್ಯ ತಾನಭ್ಯಪತತ್ ತರಸ್ವೀ
ತತೋಽಬ್ರವೀತ್ ತಿಷ್ಠತ ತಿಷ್ಠತೇತಿ ॥೧೭॥

ಆಗ ವೇಗಶಾಲಿಯೂ ಕ್ಷಿಪ್ರಕಾರಿಯೂ ಆದ ಭೀಮಸೇನನು ಸುವರ್ಣಪಟ್ಟಿಯಿಂದ ಕೂಡಿದ್ದಂತಹ ಯಮದಂಡದಂತೆ ಇದ್ದಂತಹ ದೊಡ್ಡ ಗದೆಯನ್ನು ತೆಗೆದುಕೊಂಡು ಅವರ ಮೇಲೆ ಎರಗಿ ನಿಲ್ಲಿನಿಲ್ಲಿ ಎಂದು ಹೇಳಿದನು.

ತೇ ತಂ ತದಾ ತೋಮರಪಟ್ಟಶಾದ್ಯೈ
ರ್ವ್ಯಾವಿದ್ಧಶಸ್ತ್ರೈಃ ಸಹಸಾ ನಿಪೇತುಃ ।
ಜಿಘಾಂಸವಃ ಕ್ರೋಧವಶಾಃ ಸುಭೀಮಾ
ಭೀಮಂ ಸಮಂತಾತ್ ಪರಿವವ್ರುಗ್ರಾಃ ॥೧೮॥

ಆ ಕ್ರೋಧವಶ ರಾಕ್ಷಸರು ಕೈಗಳಲ್ಲಿ ತೋಮರ ಪಟ್ಟಸ ಮೊದಲಾದ ಆಯುಧಗಳನ್ನು ಹಿಡಿದು ಭೀಮನನ್ನು ಕೊಲ್ಲುವ ಉದ್ದೇಶದಿಂದ ಭಯಂಕರರೂ, ಕ್ರೋಧವಶರೂ ಆದ ಅವರೆಲ್ಲರೂ ಭೀಮನ ಮೇಲೆ ಎರಗಿ ಅವನನ್ನು ಸುತ್ತುವರಿದರು.

ವಾತೇನ ಕುಂತ್ಯಾಂ ಬಲವಾನ್ ಸುಜಾತಃ
ಶೂರಸ್ತರಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ
ಪರಾಕ್ರಮೇ ಶತ್ರುಭರಪ್ರಧೃಷ್ಯಃ ॥೧೯॥

ಭೀಮನಾದರೂ ಕುಂತಿಯಲ್ಲಿ ವಾಯುದೇವರಿಂದ ಒಳ್ಳೆಯ ಜನ್ಮವನ್ನು ಪಡೆದವನು. ಬಲಿಷ್ಠ, ಶೂರ, ವೇಗವುಳ್ಳವನು, ಶತ್ರುಸಂಹಾರಕನಾದವನು, ಯಾವಾಗಲೂ ಸತ್ಯದಲ್ಲಿಯೂ ಮತ್ತು ಧರ್ಮದಲ್ಲಿಯೂ ರತನಾದವನು ಮತ್ತು ತನ್ನ ಪರಾಕ್ರಮದಲ್ಲಿ ಎಂದೂ ಸೋಲದವನು.

ತೇಷಾಂ ಸ ಮಾರ್ಗಾನ್ ವಿವಿಧಾನ್ ಮಹಾತ್ಮಾ
ವಿಹತ್ಯ ಶಸ್ತ್ರಾಣಿ ಚ ಶಾತ್ರವಾಣಾಮ್ ।
ಯಥಾ ಪ್ರವೀರಾನ್ ನಿಜಘಾನ ಭೀಮಃ
ಪರಂ ಶತಂ ಪುಷ್ಕರಿಣೀಸಮೀಪೇ ॥೨೦॥

ಆ ಮಹಾತ್ಮನಾದ ಭೀಮಸೇನನು ಶತ್ರುಗಳ ಶಸ್ತ್ರಗಳನ್ನು ಮತ್ತು ಯುದ್ಧಮಾರ್ಗಗಳನ್ನು ತಡೆದು ಪುಷ್ಕರಿಣಿಯ ಸಮೀಪದಲ್ಲಿ ಅವರಲ್ಲಿ ನೂರಕ್ಕಿಂತಲೂ ಹೆಚ್ಚು ರಾಕ್ಷಸರನ್ನು ಸಂಹರಿಸಿದನು.

ತೇ ತಸ್ಯ ವೀರ್ಯಂ ಚ ಬಲಂ ಚ ದೃಷ್ಟ್ವಾ
ವಿದ್ಯಾಬಲಂ ಬಾಹುಬಲಂ ತಥೈವ ।
ಆಶಕ್ನುವಂತಃ ಸಹಿತಂ ಸಮಂತಾದ್
ದ್ರುತಂ ಪ್ರವೀರಾಃ ಸಹಸಾ ನಿವೃತ್ತಾಃ ॥೨೧॥

ಆ ವೀರರಾದ ರಾಕ್ಷಸರು ಅವನ ವೀರ್ಯವನ್ನು, ಬಲವನ್ನು, ವಿದ್ಯಾಬಲವನ್ನು ಮತ್ತು ಬಾಹುಬಲಗಳನ್ನು ನೋಡಿ ಎಲ್ಲರೂ ಸೇರಿ ತಡೆಯಲು ಸಾಧ್ಯವಾಗದೆ ಬೇಗ ಹಿಂದಕ್ಕೆ ಹೊರಟುಹೋದರು.

ವಿದೀರ್ಯಮಾಣಾಸ್ತತ ಏವ ತೂರ್ಣ-
ಮಾಕಾಶಮಾಸ್ಥಾಯ ವಿಮೂಢಸಂಜ್ಞಾಃ ।
ಕೈಲಾಸಶೃಂಗಾಣ್ಯಭಿದುದ್ರುವುಸ್ತೇ
ಭೀಮಾರ್ದಿತಾಃ ಕ್ರೋಧವಶಾಃ ಪ್ರಭಗ್ನಾಃ ॥೨೨॥

ಭೀಮನಿಂದ ಪೀಡಿತರಾಗಿ ಭಗ್ನರಾದ ಕ್ರೋಧವಶರಾಕ್ಷಸರು ತಮ್ಮ ಸಂಜ್ಞೆಯನ್ನು ಕಳೆದುಕೊಂಡು ಚದುರಿಹೋಗಿ ಬೇಗ ಆಕಾಶಮಾರ್ಗವನ್ನು ಸೇರಿ ಕೈಲಾಸ ಶಿಖರಗಳ ಕಡೆಗೆ ಓಡಿಹೋದರು.

ಸ ಶಕ್ರವದ್ ದಾನವದೈತ್ಯಸಂಘಾನ್
ವಿಕ್ರಮ್ಯ ಜಿತ್ವಾ ಚ ರಣೇಽರಿಸಂಘಾನ್ ।
ವಿಗಾಹ್ಯ ತಾಂ ಪುಷ್ಕರಿಣೀಂ ಜಿತಾರಿಃ
ಕಾಮಾಯ ಜಗ್ರಾಹ ತತೋಽಂಬುಜಾನಿ ॥೨೩॥

ಆ ಭೀಮಸೇನನು ಇಂದ್ರನಂತೆ ದೇವದಾನವ ಸಂಘದ ಮೇಲೆ ತನ್ನ ಪರಾಕ್ರಮವನ್ನು ತೋರಿಸಿ ಯುದ್ಧದಲ್ಲಿ ಆ ಶತ್ರುಗಳ ಸಮೂಹವನ್ನು ಗೆದ್ದು ಆ ಪುಷ್ಕರಿಣಿಯನ್ನು ಪ್ರವೇಶಿಸಿ ಶತ್ರುವಿರೋಧವಿಲ್ಲದೆ ತನ್ನ ಮನಸ್ಸಿಗೆ ಬಂದಷ್ಟು ಅಂಬುಜಗಳನ್ನು ಕಿತ್ತುಕೊಂಡನು.

ತತಃ ಸ ಪೀತ್ವಾऽಮೃತಕಲ್ಪಮಂಭೋ
ಭೂಯೋ ಬಭೂವೋತ್ತಮವೀರ್ಯತೇಜಾಃ ।
ಉತ್ಪಾಟ್ಯ ದಗ್ರಾಹ ಚ ಸೋऽಂಬುಜಾನಿ
ಸೌಗಂಧಿಕಾನ್ಯುತ್ತಮಗಂಧವಂತಿ ॥೨೪॥

ಆನಂತರ ಅವನು ಅಮೃತಕಲ್ಪವಾದ ಆ ಸರೋವರದ ನೀರನ್ನು ಕುಡಿದು ಮತ್ತೂ ಉತ್ತಮವಾದ ತೇಜಸ್ಸನ್ನು ಮತ್ತು ವೀರ್ಯವನ್ನು ಹೊಂದಿದನು. ಅವನು ಉತ್ತಮ ಗಂಧವುಳ್ಳ ಸೌಗಂಧಿಕ ಕಮಲಗಳನ್ನು ಕಿತ್ತು ಕೈಯಲ್ಲಿ ತೆಗೆದುಕೊಂಡನು.

ತತಸ್ತು ತೇ ಕ್ರೋಧವಶಾಃ ಸಮೇತ್ಯ
ಧನೇಶ್ವರಂ ಭೀಮಬಲಪ್ರಣುನ್ನಾಃ ।
ಭೀಮಸ್ಯ ವೀರ್ಯಂ ಚ ಬಲಂ ಸ ಸಂಖೇ
ಯಥಾವದಾಚಖ್ಯುರತೀವ ಭೀತಾಃ ।
ತೇಷಾಂ ವಚಸ್ತತ್ ತು ನಿಶಮ್ಯ ದೇವಃ
ಪ್ರಹಸ್ಯ ರಕ್ಷಾಂಸಿ ತತೋऽಭ್ಯುವಾಚ ॥೨೫॥

ಆನಂತರ ಆ ಕ್ರೋಧವಶದೈತ್ಯರು ಭೀಮಬಲದಿಂದ ಪೀಡಿತರಾಗಿ ಧನೇಶ್ವರನಾದ ಕುಬೇರನ ಬಳಿಗೆ ಹೋಗಿ ಬಹಳ ಭಯದಿಂದ ಯುದ್ಧದಲ್ಲಿ ಅವನ ಪರಾಕ್ರಮವನ್ನೂ ಮತ್ತು ಬಲವನ್ನೂ ಯಥಾವತ್ತಾಗಿ ವರ್ಣಿಸಿದರು. ಅವರ ಮಾತುಗಳನ್ನು ಕೇಳಿದ ಕುಬೇರನು ನಕ್ಕು ಆ ರಾಕ್ಷಸರನ್ನು ಕುರಿತು ಹೀಗೆ ಮಾತನಾಡಿದನು.

ಗೃಹ್ಣಾತು ಭೀಮೋ ಜಲಜಾನಿ ಕಾಮಾತ್
ಕೃಷ್ಣಾನಿಮಿತ್ತಂ ವಿದಿತಂ ಮಮೈತತ್ ॥೨೬॥

ಭೀಮನು ದ್ರೌಪದಿಯ ಸಲುವಾಗಿ ಅವನ ಮನಸ್ಸಿಗೆ ಬಂದಪ್ಪು ಕಮಲಗಳನ್ನು ತೆಗೆದುಕೊಳ್ಳಲಿ. ನಾನು ಇದನ್ನು ಮೊದಲೇ ತಿಳಿದಿದ್ದೇನೆ.

ತತೋऽಭ್ಯನುಜ್ಞಾಪ್ಯ ಧನೇಶ್ವರಂ ತೇ
ಜಗ್ಮುಃ ಕುರೂಣಾಂ ಪ್ರವರಂ ವಿರೋಷಾಃ ।
ಭೀಮಂ ಚ ತಸ್ಯಾಂ ದದೃಶುರ್ನಳಿನ್ಯಾಂ
ಯಥೋಪಜೋಷಂ ವಿಹರಂತಮೇಕಮ್ ॥೨೭॥

ಆಗ ಅವರು ಕುಬೇರನ ಅನುಮತಿಯನ್ನು ಪಡೆದು ತಮ್ಮ ಕ್ರೋಧವನ್ನು ಕಳೆದುಕೊಂಡು ಕುರುಪ್ರವೀರನಾದ ಭೀಮನ ಬಳಿಗೆ ಬಂದು ಆ ಸರೋವರದಲ್ಲಿ ತನಗೆ ಇಷ್ಟವಾದಂತೆ ಒಬ್ಬನೇ ವಿಹರಿಸುತ್ತಿದ್ದ ಭೀಮಸೇನನನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಷಡಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ವರಾಚ್ಛಿವಸ್ಯೈವ ಪರೈರಜೇಯಾಃ
ಶಸ್ತ್ರವೃಷ್ಟಿಂ ಮುಮುಚುಃ ಸುಭೀಮಾಮ್ ।
ಭೀಮೇऽಖಿಲಜ್ಞೇ ತಪಸಾಂ ನಿಧಾನೇ
ಬಲೋದಧೌ ಶೈವಶಾಸ್ತ್ರಂ ವದಂತಃ ॥೨೮॥

ಶಿವನ ವರದಿಂದ ಶತ್ರುಗಳಿಗೆ ಅಜೇಯರಾಗಿದ್ದ ಕ್ರೋಧವಶ ರಾಕ್ಷಸರು ಶಿವಶಾಸ್ತ್ರವನ್ನು ಹೇಳುತ್ತ ತಪಸ್ಸಿನ ಖನಿ ಸರ್ವಜ್ಞ ಬಲಸಾಗರನಾದ ಭೀಮನ ಮೇಲೆ ಬಲು ಭಯಂಕರವಾದ ಶಸ್ತ್ರಾಸ್ತ್ರಗಳ ಮಳೆಗರೆದರು.

ತಾನ್ ವೈಷ್ಣವೈರೇವ ಶಾಸ್ತ್ರೈಃ ಸ ಭೀಮೋ
ವಿಜಿತ್ಯ ಪೂರ್ವ ವಾಜ್ಞಯೇ ಸಂಘರೇ ತು ।

ಶಸ್ತ್ರಾಸ್ತ್ರವರ್ಷಸ್ಯ ಕುರ್ವನ್ ಪ್ರತೀಪಂ
ಜಘ್ನೇऽಖಿಲಾನ್ ಗದಯಾ ತೇಷು ವೀರಾನ್ ॥೨೮೩॥

ಭೀಮ ಆ ರಾಕ್ಷಸರನ್ನು ಮೊದಲಿಗೆ ವಾಙ್ಮಯ ಯುದ್ಧದಲ್ಲಿ ವೈಷ್ಣವ ಶಾಸ್ತ್ರಗಳಿಂದ ಪರಾಭವಗೊಳಿಸಿ ಅವರ ಶಸ್ತ್ರಾಸ್ತ್ರಗಳ ಮಳೆಯನ್ನು ತಡೆಯುತ್ತ ಅವರಲ್ಲಿ ವೀರರಾದ ಎಲ್ಲರನ್ನೂ ಗದೆಯಿಂದ ಸಂಹರಿಸಿದ.

ವಾತೇನ ಕುಂತ್ಯಾಂ ಬಲವಾನ್ ಸ ಜಾತಃ
ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ
ಪರಾಕ್ರಮೇ ಶತ್ರುಭಿರಪ್ರಧೃಷ್ಯಃ ॥೨೮೪॥

ವಾಯುದೇವನಿಂದ ಕುಂತಿಯಲ್ಲಿ ಜನಿಸಿದ ಭೀಮ ಬಲಿಷ್ಠ ಶೂರ ತಪಸ್ವಿ ಶತ್ರುನಾಶಕ ಸತ್ಯಧರ್ಮಗಳಲ್ಲಿ ಸದಾ ನಿರತ. ಪರಾಕ್ರಮದಲ್ಲಿ ಶತ್ರುಗಳಿಗೆ ಎಂದೂ ಮಣಿಯದವ.

ತತ್ಪಾಪರಾಂಶ್ಚೈವ ಬಹೂನಸತ್ಯಂ
ನಿರೀಶ್ವರಂ ಚಾಪ್ರತಿಷ್ಠಂ ಚ ಲೋಕಮ್ ।
ಸಿದ್ಧೋऽಹಮೀಶೋऽಹಮಿತಿ ಬ್ರುವಾಣಾನ್
ಗುಣಾನ್ ವಿಷ್ಣೋಃ ಖ್ಯಾಪಯನ್ ವಾದತೋऽಜೈತ್ ॥೨೮೫॥

ಅಲ್ಲಿ ಪ್ರಪಂಚ ಅಸತ್ಯ , ಭಗವಂತನಿಂದ ನಿರ್ಮಿತವಲ್ಲ, ಜ್ಞಾನಬಾಧ್ಯ ಎಂದೂ ನಾನು ಮುಕ್ತ ನಾನು ಭಗವಂತ ಎಂದೂ ಹೇಳುವ ಬೇರೆ ಬಹುಮಂದಿ ರಾಕ್ಷಸರನ್ನೂ ಭೀಮ ವಿಷ್ಣುವಿನ ಗುಣಗಳನ್ನು ಸಾಧಿಸುವ ಮೂಲಕ ವಾದದಲ್ಲಿ ಗೆದ್ದ.

ಭಿನ್ನಂ ವಿಷ್ಣುಮಧಿಕಂ ಸರ್ವತಶ್ಚ
ಬ್ರುವನ್ ಪ್ರವೀರಾನ್ ಲಕ್ಷಮೇಷಾಂ ನಿಜಘ್ನೇ ।
ತೇ ತಸ್ಯ ವೀರ್ಯಂ ಚ ಬಲಂ ದೃಷ್ಟ್ವಾ
ವಿದ್ಯಾಬಲಂ ಬಾಹುಬಲಂ ತಥೈವ ।
ಅಶಕ್ನುವಂತಃ ಸಹಿತಾಃ ಸಮಸ್ತಾ
ಹತಪ್ರವೀರಾಃ ಸಹಸಾ ನಿವೃತ್ತಾಃ ॥೨೮೬॥

ವಿಷ್ಣುವನ್ನು ಸರ್ವವಿಲಕ್ಷಣ ಸರ್ವೋತ್ತಮನೆಂದು ಸಾಧಿಸಿ ಕ್ರೋಧವಶರಲ್ಲಿ ಒಂದು ಲಕ್ಷ ಮಹಾವೀರರನ್ನು ಸಂಹರಿಸಿದ, ಭೀಮಸೇನ. ಆಗ ಭೀಮನ ವೀರ್ಯವನ್ನೂ ವಿದ್ಯಾಬಲ ಬಾಹುಬಲಗಳೆಂಬ ಎರಡು ಬಗೆಯ ಬಲಗಳನ್ನೂ ನೋಡಿ ಅವರು ಎಲ್ಲರೂ ಜೊತಗೂಡಿದರೂ ಅವನನ್ನು ಇದಿರಿಸಲು ಶಕ್ತರಾಗದೆ. ತಮ್ಮ ಕಡೆಯ ಮಹಾವೀರರು ಹತರಾದಾಗ ಬೇಗನೆ ಪಲಾಯನ ಮಾಡತೊಡಗಿದರು.

ವಿಕ್ರಮ್ಯ ತಾನ್ ಗದಯಾऽಸೌ ನಿಹತ್ಯ
ವಿದ್ರಾವ್ಯ ಸರ್ವಾನ್ ನಲಿನೀಂ ಪ್ರವಿಶ್ಯ ।
ಪೀತ್ವಾऽಮೃತಾಂಭಶ್ಚ ತತೋऽಂಬುಜಾನಿ
ದಿವ್ಯಾನಿ ಜಗ್ರಾಹ ಕುರುಪ್ರವೀರಃ ॥೨೮೭॥

ಕುರುಕುಲ ಶ್ರೇಷ್ಠನಾದ ಭೀಮ ತನ್ನ ಪರಾಕ್ರಮವನ್ನು ಮೆರೆದು, ಪಲಾಯನಕ್ಕೆ ತೊಡಗಿದ್ದ ಎಲ್ಲ ಕ್ರೋಧವಶರನ್ನೂ ಗದೆಯಿಂದ ಹೊಡೆದು ಓಡಿಸಿ ಕಮಲವನವನ್ನು ಹೊಕ್ಕು ಅಮೃತದಂಥ ನೀರನ್ನು ಕುಡಿದ. ಅಲ್ಲಿಯ ದಿವ್ಯ ಕಮಲಗಳನ್ನು ಎತ್ತಿಕೊಂಡ.

ಅಥೋ ಕಲಹಶಂಸೀನಿ ನಿಮಿತ್ತಾನಿ ಯುಧಿಷ್ಠಿರಃ ।
ದೃಷ್ಟ್ವಾ ಕೃಷ್ಣಾಮಪೃಚ್ಛತ್ಸ ಭೀಮ ಇತಿ ದೀನಧೀಃ ॥೨೮೮॥

ಯುದ್ಧ ಸೂಚಕವಾದ ಉತ್ಪಾತಗಳನ್ನು ಕಂಡು ಯುಧಿಷ್ಠಿರ ಕಳವಳಗೊಂಡು ದ್ರೌಪದಿಯನ್ನು ಕೇಳಿದ, 'ಎಲ್ಲಿ ಭೀಮ?'

ಸೌಗಂಧಿಕಾರ್ಥಂ ಯಾತಂ ತಂ ಶ್ರುತ್ವಾ ಕೃಷ್ಣಾಮುಖಾನ್ನೃಪಃ ।
ಆರುಹ್ಯ ರಾಕ್ಷಸಶ್ರೇಷ್ಠಾನ್ ಕೃಷ್ಣಯಾ ಭ್ರಾತೃಭಿಃ ಸಹ ॥೨೮೯॥

ಯಯೌ ವೃಕೋದರೋ ಯತ್ರ ದೃಷ್ಟ್ವಾ ಚೈನಮವಸ್ಥಿತಮ್ ।
ಉವಾಚ ಮೈವಮಿತ್ಯೇನಂ ಭೀತೋ ಗಿರಿಶಕೋಪತಃ ॥೨೯೦॥

ಸೌಗಂಧಿಕ ಕಮಲಕ್ಕಾಗಿ ಭೀಮ ಹೋದುದನ್ನು ದ್ರೌಪದಿಯ ಮುಖದಿಂದ ಕೇಳಿ ರಾಜಾ ಯುಧಿಷ್ಠಿರ ರಾಕ್ಷಸ ಶ್ರೇಷ್ಠರ ಹೆಗಲೇರಿ ದ್ರೌಪದಿ ಮತ್ತು ಸೋದರರೊಂದಿಗೆ ಭೀಮನಿದ್ದಲ್ಲಿಗೆ ಹೋದ. ಅಲ್ಲಿ ಭೀಮನಿದ್ದುದನ್ನು ನೋಡಿ ಶಿವನ ಕೋಪಕ್ಕೆ ಅಂಜಿ 'ಹೀಗೆ ಮಾಡಬೇಡ' ಎಂದು ಭೀಮನಿಗೆ ಹೇಳಿದ.

ದೇವೇಭ್ಯೋಃ ಮರಣಾದ್ ಭೀತಾ ರಾಕ್ಷಸಾ ವಿತ್ತಪಾಜ್ಞಯಾ ।
ತದೀಯಾಂ ನಲಿನೀಂ ತೇ ಹಿ ರಕ್ಷಂತ್ಯಸ್ಯಾಽಶ್ರಯೋ ಹರಃ ।
ಜಾನನ್ ವಿತ್ತೇಶ್ವರೋ ಭೀಮಮಾಹಾತ್ಮ್ಯಂ ನ ಚುಕೋಪ ಹ ॥೨೯೧॥

ದೇವತೆಗಳಿಂದ ತಮಗೆ ಮರಣ ಬಂದೀತೆಂದು ಹೆದರಿ ಈ ರಾಕ್ಷಸರು ಕುಬೇರನ ಅನುಮತಿಯಿಂದ ಅವನ ಕಮಲವನ್ನು ರಕ್ಷಿಸುತ್ತಿದ್ದರು. ಕುಬೇರನಿಗೆ ಆಶ್ರಯದಾತ ರುದ್ರ. ಆದರಿಂದ ಧರ್ಮರಾಜನಿಗೆ ರುದ್ರನ ಭಯ. ಆದರೆ ಕುಬೇರ ಭೀಮನ ಮಹಾತ್ಮೆಯನ್ನು ಬಲ್ಲವನಾದ್ದರಿಂದ ಕೋಪಮಾಡಲಿಲ್ಲ.

★ ★ ★ ★

ನೂರ ಐವತ್ತೊಂದನೆಯ ಅಧ್ಯಾಯ

ಅಪಶಕುನಗಳನ್ನು ನೋಡಿದ ಧರ್ಮರಾಜನ ದ್ರೌಪದಿಯ ಮಾತಿನಂತೆ ಭೀಮಸೇನನ ಅನ್ವೇಷಣ. ಸೌಗಂಧಿಕ ವನಕ್ಕೆ ಬಂದು ಅವನ ಸಾಂತ್ವನ ಅಲ್ಲಿಯೇ ಸ್ವಲ್ಪ ಸಮಯ ಎಲ್ಲರ ವಿಹಾರ.

ವೈಶಂಪಾಯನಃ

ತತಸ್ತಾನಿ ಮಹಾರ್ಹಾಣಿ ದಿವ್ಯಾನಿ ಭರತರ್ಷಭ ।
ಬಹೂನಿ ಬಹುರೂಪಾಣಿ ವಿರಜಾಂಸಿ ಸಮಾದದೇ ॥೧॥

ವೈಶಂಪಾಯನ– ಎಲೈ ಭರತರ್ಷಭನೇ, ಅನಂತರ ಭೀಮಸೇನನು ಶುದ್ಧವಾದ ಅನೇಕ ಬಣ್ಣಗಳಿಂದ ಕೂಡಿದ ಅನರ್ಘ್ಯವಾದ ದಿವ್ಯವಾದ ಅನೇಕ ಕಮಲಗಳನ್ನು ತೆಗೆದುಕೊಂಡನು.

ವಿತಸ್ಥಿನ್ನಂತರೇ ರಾಜನ್ ಯುಧಿಷ್ಠಿರಸಮೀಪತಃ ।
ತತೋ ವಾಯುರ್ಮಹಾನ್ ಶೀಘ್ರೋ ನೀಚೈಃ ಶರ್ಕರಕರ್ಷಣಃ ।
ಪ್ರಾದುರಾಸೀತ್ ಖರಸ್ಪರ್ಶಃ ಸಂಗ್ರಾಮಮಭಿಚೋದಯನ್ ॥೨॥

ಎಲೈ ರಾಜನೇ, ಆ ಸಮಯಕ್ಕೆ ಸರಿಯಾಗಿ ಯುಧಿಷ್ಠಿರನ ಸಮೀಪದಲ್ಲಿ ವಾಯುವು ನೆಲವನ್ನು ಹಿಡಿದು ಧೂಳಿನ ಕಣಗಳನ್ನು ಎತ್ತಿಕೊಂಡು ಒರಟಾದ ಸ್ಪರ್ಶವನ್ನು ಉಂಟು ಮಾಡಿ ಬೀಸುತ್ತಾ ಯುದ್ಧದ ಲಕ್ಷಣಗಳನ್ನು ತೋರಿಸುತ್ತಾ ಅಭಿವ್ಯಕ್ತವಾಯಿತು.

ಪಪಾತ ಮಹತೀ ಚೋಲ್ಕಾ ಸನಿರ್ಘಾತಾ ಮಹಾಭಯಾ ।
ನಿಷ್ಪ್ರಭಶ್ಚಾಭವತ್ ಸೂರ್ಯಶ್ಚನ್ನರಶ್ಮಿಸ್ತಮೋವೃತಃ ॥೩॥

ಮಹಾಭಯವನ್ನು ಉಂಟುಮಾಡುವ, ಸಿಡಿಲಿನಿಂದ ಕೂಡಿದ ದೊಡ್ಡ ಉಲ್ಕಾಪಾತವಾಯಿತು. ಸೂರ್ಯನು ಕತ್ತಲಿನಿಂದ ಕಿರಣಗಳು ಮುಚ್ಚಲ್ಪಟ್ಟು ನಿಷ್ಪ್ರಭನಾದನು.

ನಿರ್ಘಾತಶ್ಚಾಭವದ್ ಭೀಮೋ ಭೀಮೇ ವಿಕ್ರಮಮಾಸ್ಥಿತೇ ।
ಚಚಾಲ ಪೃಥಿವೀ ಚಾಪಿ ಪಾಂಸುವರ್ಷಂ ಪಪಾತ ಚ ॥೪॥

ಭೀಮನು ವಿಕ್ರಮವನ್ನು ಆಶ್ರಯಿಸಿರಲು ನಿರ್ಘಾತವುಂಟಾಯಿತು. ಭೂಮಿಯು ಕಂಪಿಸಿತು ಮತ್ತು ಧೂಳಿನ ಮಳೆಯು ಬಿದ್ದಿತು.

ಸಲೋಹಿತಾ ದಿಶಶ್ಚಾಸನ್ ಖರವಾಚೋ ಮೃಗದ್ವಿಜಾಃ ।
ತಮೋವೃತಮಭೂತ್ ಸರ್ವಂ ನ ಪ್ರಾಜ್ಞಾಯತ ಕಿಂಚನ ॥೫॥

ಅನ್ಯೇ ಚ ಬಹವೋ ಭೀಮಾ ಉತ್ಪಾತಾಸ್ತತ್ರ ಜಜ್ಞಿರೇ ।

ದಿಕ್ಕುಗಳು ಕೆಂಪಾದವು. ಪಶುಗಳು ಮತ್ತು ಪಕ್ಷಿಗಳು ಕರ್ಕಶವಾದ ಧ್ವನಿಯನ್ನು ಮಾಡಿದವು. ಆ ಪ್ರದೇಶವೆಲ್ಲಾ ಕತ್ತಲಿನಿಂದ ಆವರಿಸಲ್ಪಟ್ಟು ಏನೂ ಕಾಣಿಸಲಿಲ್ಲ. ಇನ್ನೂ ಅನೇಕ ಭಯಂಕರವಾದ ಅಪಶಕುನಗಳು ಅಲ್ಲಿ ಉಂಟಾದವು.

ತದದ್ಭುತಮಭಿಪ್ರೇಕ್ಷ್ಯ ಧರ್ಮಪುತ್ರೋ ಯುಧಿಷ್ಠಿರಃ ।
ಉವಾಚ ವದತಾಂ ಶ್ರೇಷ್ಠಃ ಕೋಽಸ್ಮಾನಭಿಭವಿಷ್ಯತಿ ॥೬॥

ಧರ್ಮಪುತ್ರನಾದ ಮಾತಾಡುವವರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಈ ಅಪೂರ್ವವಾದ ಅಪಶಕುನಗಳನ್ನು ನೋಡಿ ನಮ್ಮನ್ನು ಯಾರು ಪರಾಭವಗೊಳಿಸುವವರು ಎಂದು ಕೇಳಿದನು.

ಸಜ್ಜೀಭವತ ಭದ್ರಂ ವಃ ಪಾಂಡವಃ ಯುದ್ಧದುರ್ಮದಾಃ ।
ಯಥಾರೂಪಾಣಿ ಪಶ್ಯಾಮಿ ಸ್ವಭ್ಯಗ್ರೋ ನಃ ಪರಾಕ್ರಮಃ ॥೭॥

ಯುದ್ಧದುರ್ಮದರಾದ ಪಾಂಡವರಾದ ನೀವೆಲ್ಲರೂ ಸನ್ನದ್ಧರಾಗಿ. ನಿಮಗೆ ಮಂಗಳವಾಗಲಿ. ಈ ಸೂಚನೆಗಳನ್ನು ನೋಡುತ್ತಿರುವಂತೆ ಸದ್ಯದಲ್ಲಿಯೇ ನಮ್ಮ ಪರಾಕ್ರಮದ ಅವಶ್ಯಕತೆಯು ತೋರುತ್ತದೆ.

ವಿವಮುಕ್ತ್ವಾ ತತೋ ರಾಜಾ ವೀಕ್ಷಾಂಚಕ್ರೇ ಸಮಂತತಃ ।
ಅಪಶ್ಯಮಾನೋ ಭೀಮಂ ತು ಧರ್ಮಪುತ್ರೋ ಯುಧಿಷ್ಠಿರಃ ॥೮॥

ತತಃ ಕೃಷ್ಣಾಂ ಯಮೌ ಚಾಪಿ ಸಮೀಪಸ್ಥಾವರಿಂದಮಃ ।
ಪಪ್ರಚ್ಛ ಭ್ರಾತರಂ ಭೀಮಂ ಭೀಮಕರ್ಮಾಣಮಾಹವೇ ॥೯॥

ಹೀಗೆ ಹೇಳಿ ರಾಜನು ಸುತ್ತಲೂ ನೋಡಿದನು. ಧರ್ಮಪುತ್ರನೂ, ಅರಿಂದಮನೂ ಆದ ಯುಧಿಷ್ಠಿರನು ಅಲ್ಲಿ ಭೀಮಸೇನನನ್ನು ಕಾಣದೆ ಆಗ ಸಮೀಪದಲ್ಲಿದ್ದ ನಕುಲ ಸಹದೇವರನ್ನು ಮತ್ತು ದ್ರೌಪದಿಯನ್ನು ಕುರಿತು ಯುದ್ಧದಲ್ಲಿ ಭಯಂಕರ ಕರ್ಮವನ್ನು ಮಾಡುವ ತಮ್ಮನಾದ ಭೀಮನ ಬಗ್ಗೆ ಪ್ರಶ್ನೆ ಮಾಡಿದನು.

ಕಚ್ಚಿತ್ ಕ್ವ ಭೀಮಃ ಪಾಂಚಾಲಿ ಕಿಂಚಿತ್ಕೃತ್ಯಂ ಚಿಕೀರ್ಷತಿ ।
ಕೃತವಾನಪಿ ವಾ ವೀರಃ ಸಾಹಸಂ ಸಾಹಸಪ್ರಿಯಃ ॥೧೦॥

ದ್ರೌಪದಿಯೇ, ಭೀಮನು ಎಲ್ಲಿದ್ದಾನೆ? ಯಾವುದಾದರೂ ಸಾಹಸ ಕಾರ್ಯವನ್ನು ಮಾಡಲು ಹೊರಟಿದ್ದಾನೆಯೇ? ಅಥವಾ ಆಗಲೇ ಮಾಡಿದ್ದಾನೆಯೇ? ಆ ವೀರನು ಯಾವಾಗಲೂ ಸಾಹಸಪ್ರಿಯನಾದವನು.

ಇಮೇ ಹ್ಯಕಸ್ಮಾದುತ್ಪಾತಾ ಮಹಾಸಮರದರ್ಶನಾಃ ।
ದರ್ಶಯಂತೋ ಭಯಂ ತೀವ್ರಂ ಪ್ರಾದುರ್ಭೂತಾ ಸಮಂತತಃ ॥೧೧॥

ಈ ದೊಡ್ಡ ಅಪಶಕುನಗಳು ನಮ್ಮ ಸುತ್ತಲೂ ಕಾಣಿಸಿಕೊಂಡು ದೊಡ್ಡ ಯುದ್ಧವನ್ನು ಮತ್ತು ತೀವ್ರವಾದ ಭಯವನ್ನು ಸೂಚಿಸುತ್ತಿವೆ.

ವೈಶಂಪಾಯನಃ

ತಂ ತಥಾವಾದಿನಂ ಕೃಷ್ಣಾ ಪ್ರತ್ಯುವಾಚ ಮನಸ್ವಿನೀ ।
ಪ್ರಿಯಾ ಪ್ರಿಯಂ ಚಿಕೀರ್ಷಂತೀ ಮಹಿಷೀ ಚಾರುಹಾಸಿನೀ ॥೧೨॥

ವೈಶಂಪಾಯನ– ಹಾಗೆ ಮಾತನಾಡುತ್ತಿದ್ದ ಧರ್ಮರಾಜನನ್ನು ಕುರಿತು ಚಾರುಹಾಸಿನಿಯೂ, ಧೈರ್ಯಶಾಲಿನಿಯೂ, ರಾಣಿಯೂ ಆದ ದ್ರೌಪದಿಯು ಧರ್ಮರಾಜನಿಗೆ ಪ್ರಿಯವನ್ನು ಉಂಟುಮಾಡಲು ಬಯಸಿ ಮಾತನಾಡಿದಳು.

ಯತ್ತತ್ ಸೌಗಂಧಿಕಂ ರಾಜನ್ನಾಹೃತಂ ಮಾತರಿಶ್ವನಾ ।
ತನ್ಮಯಾ ಭೀಮಸೇನಸ್ಯ ಪ್ರೀತಯಾऽದ್ಯೋಪಪಾದಿತಮ್ ॥೧೩॥

ಎಲೈ ರಾಜನೇ, ಗಾಳಿಯು ಹೊಡದುಕೊಂಡು ಬಂದಿದ್ದ ಆ ಸೌಗಂಧಿಕ ಪುಷ್ಪವನ್ನು ನೋಡಿ ಸಂತೋಷಗೊಂಡು ನಾನು ಅದನ್ನು ಭೀಮನಿಗೆ ಕೊಟ್ಟೆ.

ಅಪಿ ಚೋಕ್ತೋ ಮಯಾ ವೀರೋ ಯದಿ ಪಶ್ಯೇರ್ಬಹೂನ್ಯಪಿ ।
ತಾನಿ ಸರ್ವಾಣ್ಯುಪಾದಾಯ ಶೀಘ್ರಮಾಗಮ್ಯತಾಮಿತಿ ॥೧೪॥

ಮತ್ತು ಇಂತಹ ಹೆಚ್ಚು ಪುಷ್ಪಗಳನ್ನು ನೋಡಿದರೆ ಅವೆಲ್ಲವನ್ನೂ ತೆಗೆದುಕೊಂಡು ಬೇಗ ಹಿಂದಿರುಗು ಎಂದೂ ಆ ವೀರನಿಗೆ ಹೇಳಿದೆ.

ಸ ತು ನೂನಂ ಮಹಾಬಾಹುಃ ಪ್ರಿಯಾರ್ಥಂ ಮಮ ಪಾಂಡವಃ ।
ಪ್ರಾಗುದೀಚೀಂ ದಿಶಂ ರಾಜಂಸ್ತಾನ್ಯಾಹರ್ತುಮಿತೋ ಗತಃ ॥೧೫॥

ರಾಜನೇ, ಆ ಮಹಾಬಾಹುವಾದ ಪಾಂಡವನು ನನಗೆ ಪ್ರಿಯವನ್ನು ಉಂಟು ಮಾಡಲು ಆ ಪುಷ್ಪವನ್ನು ತರಲು ಈಶಾನ್ಯದಿಕ್ಕಿಗೆ ಹೋಗಿದ್ದಾನೆ.

ವೈಶಂಪಾಯನಃ

ಉಕ್ತಸ್ತ್ವೇವಂ ತಯಾ ರಾಜಾ ಯಮಾವಿದಮಥಾಬ್ರವೀತ್ ।
ಗಚ್ಛಾಮ ಸಹಿತಾಸ್ತೂರ್ಣಂ ಯೇನ ಯಾತೋ ವೃಕೋದರಃ ॥೧೬॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ರಾಜನು ನಕುಲ ಸಹದೇವರನ್ನು ಕುರಿತು ಭೀಮಸೇನನು ಹೋದ ಮಾರ್ಗದಲ್ಲಿಯೇ ನಾವು ಶೀಘ್ರವಾಗಿ ಹೋಗೋಣ ಎಂದು ಹೇಳಿದನು.

ವಹಂತು ರಾಕ್ಷಸಾ ವಿಪ್ರಾನ್ ಯಥಾಶ್ರಾಂತಾನ್ ಯಥಾಕೃಶಾನ್ ।
ತ್ವಮಪ್ಯಮರಸಂಕಾಶ ವಹ ಕೃಷ್ಣಾಂ ಘಟೋತ್ಕಚ ॥೧೭॥

ರಾಕ್ಷಸರು, ಚೆನ್ನಾಗಿ ದಣಿದ ಮತ್ತು ಕೃಶರಾದ ಬ್ರಾಹ್ಮಣರನ್ನು ಎತ್ತಿಕೊಳ್ಳಲಿ. ದೇವಕಾಂತಿಯುಳ್ಳ ಘಟೋತ್ಕಚನೇ ನೀನು ದ್ರೌಪದಿಯನ್ನು ಎತ್ತಿಕೋ.

ವ್ಯಕ್ತಂ ದೂರಮಿತೋ ಭೀಮಃ ಪ್ರವಿಷ್ಟ ಇತಿ ಮೇ ಮತಿಃ ।
ಚಿರಂ ಚ ತಸ್ಯ ಕಾಲೋಽಯಂ ಸ ಚ ವಾಯುಸಮೋ ಜವೇ ॥೧೮॥

ಭೀಮನು ಇಲ್ಲಿಂದ ಬಹಳ ದೂರಹೋಗಿದ್ದಾನೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಅವನು ವೇಗದಲ್ಲಿ ವಾಯುಸಮನಾದವನು ಮತ್ತು ಹೋಗಿ ಬಹಳ ಸಮಯವಾಯಿತು.

ತರಸ್ವೀ ವೈನತೇಯಸ್ಯ ಸದೃಶೋ ಭುವಿ ಲಂಘನೇ ।
ಉತ್ಪತೇದಪಿ ವಾ(ಚಾ)ಕಾಶಂ ನಿಪತೇಚ್ಚ ಯಥೇಚ್ಛಕಮ್ ॥೧೯॥

ಅವನು ವೇಗಶಾಲಿಯಾದವನು. ಭೂಮಿಯನ್ನು ಹಾರುವ ವಿಷಯದಲ್ಲಿ ಗರುಡನಿಗೆ ಸಮಾನನಾದವನು. ಅವನು ತನ್ನ ಇಚ್ಛೆ ಬಂದಂತೆ ಆಕಾಶಕ್ಕೆ ಹಾರಿ ಕೆಳಗೆ ಇಳಿಯಲು ಸಮರ್ಥನಾದವನು.

ತಮನ್ವಿಯಾಮ ಭವತಾಂ ಪ್ರಭಾವಾದ್ ರಜನೀಚರಾಃ ।
ಪುರಾಽಸೌ ನಾಪರಾಧ್ನೋತಿ ಸಿದ್ಧಾನಾಂ ಬ್ರಹ್ಮವಾದಿನಾಮ್ ॥೨೦॥

ಎಲೈ ರಾಕ್ಷಸರೇ, ಅವನು ಸಿದ್ಧರಿಗೂ ಮತ್ತು ಬ್ರಹ್ಮವಾದಿಗಳಿಗೂ ಅಪರಾಧವನ್ನು ಮಾಡುವುದಕ್ಕಿಂತ ಮುಂಚೆಯೇ ನಿಮ್ಮ ಸಹಾಯದಿಂದ ನಾವು ಅವನ ಬಳಿಗೆ ಹೋಗೋಣ.

ವೈಶಂಪಾಯನಃ

ತಥೇತ್ಯುಕ್ತ್ವಾ ತು ತೇ ಸರ್ವೇ ಹೈಡಿಂಬಪ್ರಮುಖಾಸ್ತದಾ ।
ಉದ್ವೇಶಜ್ಞಾಃ ಕುಬೇರಸ್ಯ ನಳಿನ್ಯಾ ಭರತರ್ಷಭ ॥೨೧॥

ಆದಾಯ ಪಾಂಡವಾಂಶ್ಚೈವ ತಾಂಶ್ಚ ವಿಪ್ರಾನನೇಕಶಃ ।
ಲೋಮಶೇನೈವ ಸಹಿತಾಃ ಪ್ರಯಯುಃ ಪ್ರೀತಮಾನಸಾಃ ॥೨೨॥

ವೈಶಂಪಾಯನ– ಎಲೈ ಭರತರ್ಷಭನೇ, ಕುಬೇರನ ಸರೋವರದ ಮೇಲ್ಭಾಗದ ಪ್ರದೇಶವನ್ನೆಲ್ಲಾ ತಿಳಿದ ಆ ಘಟೋತ್ಕಚ ಮೊದಲಾದವರೆಲ್ಲರೂ ಹಾಗೆಯೇ ಆಗಲಿ ಎಂದು ಹೇಳಿ ಪಾಂಡವರನ್ನೂ, ಆ ಬ್ರಾಹ್ಮಣರನ್ನೂ ಎತ್ತಿಕೊಂಡು ಲೋಮಶರಿಂದ ಒಡಗೂಡಿ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಹೊರಟರು.

ತೇ ಸರ್ವೇ ತ್ವರಿತಾ ಗತ್ವಾ ದದೃಶುಃ ಶುಭಕಾನನಾಮ್ ।
ಪದ್ಮಸೌಗಂಧಿಕವತೀಂ ನಳಿನೀಂ ಸುಮನೋರಮಾಮ್ ॥೨೩॥

ತಂ ಚ ಭೀಮಂ ಮಹಾತ್ಮಾನಂ ತಸ್ಥಿವೀರೇ ಮನಸ್ವಿನಮ್ ।
ದದೃಶುರ್ನಿಹತಾಂಶ್ಚೈವ ಯಕ್ಷಾಂಶ್ಚ ವಿಪುಲೇಕ್ಷಣಾನ್ ॥೨೪॥

ಅವರೆಲ್ಲರೂ ಶೀಘ್ರವಾಗಿ ಹೋಗಿ ಆ ಶುಭವಾದ ವನವನ್ನೂ ಸೌಗಂಧಿಕ ಪುಷ್ಪಗಳಿರುವ ಮನೋಹರವಾದ ಆ ಪದ್ಮಸರೋವರವನ್ನೂ ಅದರ ತೀರದಲ್ಲಿ ಧೈರ್ಯಶಾಲಿಯಾಗಿ ನಿಂತಿದ್ದ ಮಹಾತ್ಮನಾದ ಭೀಮನನ್ನೂ ಮತ್ತು ಅಲ್ಲಿ ಸಂಹಾರ ಮಾಡಲ್ಪಟ್ಟ ವಿಶಾಲನೇತ್ರರಾದ ಯಕ್ಷರನ್ನೂ ನೋಡಿದರು.

ಭಿನ್ನಕಾಯಾಕ್ಷಿಬಾಹೂರೂನ್ ಸಂಚೂರ್ಣಿತಶಿರೋಧರಾನ್ ।
ತಂ ಚ ಭೀಮಂ ಮಹಾತ್ಮಾನಂ ತಸ್ಥಿವೀರೇ ವ್ಯವಸ್ಥಿತಮ್ ॥೨೫॥

ಸಕ್ರೋಧಂ ಸ್ತಬ್ಧನಯನಂ ಸಂದಷ್ಟದಶನಚ್ಛದಮ್ ।
ಉದ್ಯಮ್ಯ ಚ ಗದಾಂ ದೋರ್ಭ್ಯಾಂ ನದೀತೀರೇಷ್ವವಸ್ಥಿತಮ್ ॥
ಪ್ರಜಾಸಂಕ್ಷೇಪಸಮಯೇ ದಂಡಹಸ್ತಮಿವಾಂತಕಮ್ ॥೨೫.೧॥

ಶರೀರ, ನೇತ್ರಬಾಹುಗಳನ್ನು ಕಳೆದುಕೊಂಡು ಸಂಚೂರ್ಣಿತವಾದ ಕತ್ತುಗಳನ್ನು ಹೊಂದಿ ಹತರಾದ ಯಕ್ಷರನ್ನೂ, ಗದೆಯನ್ನು ಎತ್ತಿಹಿಡಿದು ನದೀತೀರದಲ್ಲಿ ಪ್ರಜಾ ಸಂಹಾರದ ಸಮಯದಲ್ಲಿ ದಂಡಹಸ್ತನಾದ ಯಮನಂತೆ ಹಲ್ಲುಮುಡಿಯನ್ನು ಕಚ್ಚಿ ಕ್ರೋಧದಿಂದ ಸ್ತಬ್ಧಾಕ್ಷನಾಗಿ ನಿಂತಿದ್ದ ಭೀಮನನ್ನೂ ನೋಡಿದರು.

ತಂ ದೃಷ್ಟ್ವಾ ಧರ್ಮರಾಜಸ್ತು ಪರಿಷ್ವಜ್ಯ ಪುನಃ ಪುನಃ ।
ಉವಾಚ ಶ್ಲಕ್ಷ್ಣಯಾ ವಾಚಾ ಕೌಂತೇಯ ಕಿಮಿದಂ ಕೃತಮ್ ॥೨೬॥

ಸಾಹಸಂ ಬತ ಭದ್ರಂ ತೇ ದೇವಾನಾಮಥ ಚಾಪ್ರಿಯಮ್ ।
ಪುನರೇವಂ ನ ಕರ್ತವ್ಯಂ ಮಮ ಚೇದಿಚ್ಛಸಿ ಪ್ರಿಯಮ್ ॥೨೭॥

ಧರ್ಮರಾಜನು ಅವನನ್ನು ನೋಡಿ ಪುನಃ ಪುನಃ ಆಲಿಂಗಿಸಿ ಮಧುರವಾದ ಮಾತುಗಳಿಂದ ಕೌಂತೇಯನೇ, ಇದೇನು ಸಾಹಸ ಕಾರ್ಯವನ್ನು ಮಾಡಿದ್ದೀಯೆ? ನಿನಗೆ ಮಂಗಳವಾಗಲಿ. ಇದು ದೇವತೆಗಳಿಗೆ ಅಪ್ರಿಯವಾದುದು. ನನಗೆ ನೀನು ಪ್ರಿಯವನ್ನು ಬಯಸುವುದಾದರೆ ಪುನಃ ಇಂತಹ ಕಾರ್ಯವನ್ನು ಮಾಡಬಾರದು ಎಂದು ಹೇಳಿದನು.

ಅನುಶಿಷ್ಯ ತು ಕೌಂತೇಯಂ ಪದ್ಮಾನಿ ಪರಿಗೃಹ್ಯ ಚ ।
ತಸ್ಯಾಮೇವ ನಳಿನ್ಯಾಂ ತು ವಿಜಹ್ರುರಮರೋಪಮಾಃ ॥೨೮॥

ಧರ್ಮರಾಜನು ಭೀಮಸೇನನಿಗೆ ಹೀಗೆ ಅನುಶಾಸನವನ್ನು ಮಾಡಿದ ಮೇಲೆ ದೇವತಾ ಕಾಂತಿಯುಳ್ಳ ಆ ಪಾಂಡವರು ಪದ್ಮಗಳನ್ನು ತೆಗೆದುಕೊಂಡು ಅದೇ ಸರೋವರದಲ್ಲಿ ವಿಹಾರವನ್ನು ಮಾಡಿದರು.

ಏತಸ್ಮಿನ್ನೇವ ಕಾಲೇ ತು ಪ್ರಗೃಹೀತಶಿಲಾಯುಧಾಃ ।
ಪ್ರಾದುರಾಸನ್ ಮಹಾಕಾಯಾಸ್ತಸ್ಯೋದ್ಯಾನಸ್ಯ ರಕ್ಷಿಣಃ ॥೨೯॥

ಆ ಸಮಯಕ್ಕೆ ಸರಿಯಾಗಿ ಮಹಾಕಾಯರಾದ ಉದ್ಯಾನದ ಕಾವಲುಗಾರರು ಕೈಯಲ್ಲಿ ಶಿಲಾಯುಧಗಳನ್ನು ಹಿಡಿದು ಅಲ್ಲಿಗೆ ಬಂದರು.

ತೇ ದೃಷ್ಟ್ವಾ ಧರ್ಮರಾಜಾನಂ ಮಹರ್ಷಿಂ ಚಾಪಿ ಲೋಮಶಮ್ ।
ನಕುಲಂ ಸಹದೇವಂ ಚ ತಥಾನ್ಯಾನ್ ಬ್ರಾಹ್ಮಣರ್ಷಭಾನ್ ॥೩೦॥

ವಿನಯೇನ ನತಾಃ ಸರ್ವೇ ಪ್ರಣಿಪೇತುಶ್ಚ ಭಾರತ ।
ಸಾಂತ್ವಿತಾ ಧರ್ಮರಾಜೇನ ಪ್ರಸೇದುಃ ಕ್ಷಣದಾಚರಾಃ ॥೩೧॥

ಅವರು ಧರ್ಮರಾಜನನ್ನೂ, ಲೋಮಶಮಹರ್ಷಿಗಳನ್ನೂ, ನಕುಲ ಸಹದೇವರನ್ನೂ ಮತ್ತು ಬೇರೆ ಬ್ರಾಹ್ಮಣಶ್ರೇಷ್ಠರನ್ನೂ ನೋಡಿ ವಿನಯದಿಂದ ತಲೆಯನ್ನು ಬಗ್ಗಿಸಿ ಎಲ್ಲರಿಗೂ ನಮಸ್ಕಾರವನ್ನು ಮಾಡಿದರು. ಎಲೈ ಭಾರತನೇ, ಧರ್ಮರಾಜನಿಂದ ಸಮಾಧಾನಗೊಳಿಸಲ್ಪಟ್ಟ ಆ ರಾತ್ರಿಚರರಾದ ರಾಕ್ಷಸರು ಪ್ರಸನ್ನರಾದರು.

ವಿದಿತಾಶ್ಚ ಕುಬೇರಸ್ಯ ತತ್ರ ತೇ ಕುರುಪುಂಗವಾಃ ।
ಊಷುರ್ನಾತಿಚಿರಂ ಕಾಲಂ ರಮಮಾಣಾಃ ಕುರೂದ್ವಹಾಃ ॥
ಪ್ರತೀಕ್ಷಮಾಣಾ ಬೀಭತ್ಸುಂ ಗಂಧಮಾದನಸಾನುಷು ॥೩೨॥

ಆ ಕುರುಪುಂಗವರು ಕುಬೇರನಿಗೆ ತಿಳಿದೇ ಅಲ್ಲಿ ಸ್ವಲ್ಪಕಾಲ ಸಂತೋಷದಿಂದ ವಿಹಾರವನ್ನು ಮಾಡಿ ಗಂಧಮಾದನಪರ್ವತ ಶಿಖರದಲ್ಲಿ ಅರ್ಜುನನನ್ನು ನಿರೀಕ್ಷೆ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಸಪ್ತಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಐವತ್ತೆರಡನೆಯ ಅಧ್ಯಾಯ

ಗಂಧಮಾದನ ಪರ್ವತದಿಂದ ಉತ್ತರದಿಕ್ಕಿಗೆ ಹೋಗಲು ಧರ್ಮರಾಜನ ಪ್ರಯತ್ನ. ಆಕಾಶವಾಣಿಯಿಂದ ನಿಷೇಧ ಮತ್ತು ಪುನಃ ನರನಾರಾಯಣಾಶ್ರಮಕ್ಕೆ ಪ್ರತಿನಿವೃತ್ತಿ.

ವೈಶಂಪಾಯನಃ

ತಸ್ಮಿನ್ ನಿವಸಮಾನೋಽಥ ಧರ್ಮರಾಜೋ ಯುಧಿಷ್ಠಿರಃ ।
ಕೃಷ್ಣಯಾ ಸಹಿತಾನ್ ಭ್ರಾತೄನಿತ್ಯುವಾಚ ಸಹದ್ವಿಜಾನ್ ॥೧॥

ವೈಶಂಪಾಯನ– ಧರ್ಮರಾಜನಾದ ಯುಧಿಷ್ಠಿರನು ಅಲ್ಲಿವಾಸವನ್ನು ಮಾಡುತ್ತಾ ದ್ರೌಪದಿಯಿಂದ ಮತ್ತು ಬ್ರಾಹ್ಮಣರಿಂದ ಒಡಗೂಡಿದ ತನ್ನ ತಮ್ಮಂದಿರನ್ನು ಕುರಿತು ಹೀಗೆ ಹೇಳಿದನು.

ದೃಷ್ಟಾನಿ ತೀರ್ಥಾನ್ಯಸ್ಮಾಭಿಃ ಪುಣ್ಯಾನಿ ಚ ಶಿವಾನಿ ಚ ।
ಮನಸೋ ಹ್ಲಾದನೀಯಾನಿ ವನಾನಿ ಚ ಪೃಥಕ್‌ಪೃಥಕ್ ॥೨॥

ದೇವೈಃ ಪೂರ್ವಂ ವಿಚೀರ್ಣಾನಿ ಮುನಿಭಿಶ್ಚ ಮಹಾತ್ಮಭಿಃ ।
ಯಥಾಕ್ರಮಂ ವಿಶೇಷೇಣ ದ್ವಿಜೈಃ ಸಂಪೂಜಿತಾನಿ ಚ ॥೩॥

ನಾವು ಪುಣ್ಯವಾದ, ಮಂಗಳಪ್ರದವಾದ ತೀರ್ಥಗಳನ್ನೂ ಮನಸ್ಸಿಗೆ ಸಂತೋಷವನ್ನು ಕೊಡುವ ಬೇರೆ ಬೇರೆ ವನಗಳನ್ನೂ ನೋಡಿದ್ದೇವೆ. ಮಹಾತ್ಮರಾದ ಮುನಿಗಳಿಂದಲೂ ದೇವತೆಗಳಿಂದಲೂ ಹಿಂದೆ ಸಂಚರಿಸಲ್ಪಟ್ಟಂತಹ ಮತ್ತು ಬ್ರಾಹ್ಮಣರಿಂದ ವಿಶೇಷವಾಗಿ ಪೂಜಿಸಲ್ಪಟ್ಟಂತಹ ಪ್ರದೇಶಗಳನ್ನು ಕ್ರಮವಾಗಿ ನೋಡಿದ್ದೇವೆ.

ಋಷೀಣಾಂ ಪೂರ್ವಚರಿತಂ ತಥಾ ಕರ್ಮ ವಿಚೇಷ್ಟಿತಮ್ ।
ರಾಜರ್ಷೀಣಾಂ ಚ ಚರಿತಂ ಕಥಾಶ್ಚ ವಿವಿಧಾಃ ಶುಭಾಃ ॥೪॥

ಶೃಣ್ವಾನಾಸ್ತತ್ರ ತತ್ರ ಸ್ಮ ಆಶ್ರಮೇಷು ಶಿವೇಷು ಚ ।
ಆಭಿಷೇಕಂ ದ್ವಿಜೈಃ ಸಾರ್ಧಂ ಕೃತವಂತೋ ವಿಶೇಷತಃ ॥೫॥

ಹಿಂದಿನ ಋಷಿಗಳ ಚರಿತ್ರೆಯನ್ನೂ, ಅವರು ಮಾಡಿದ ಕರ್ಮಗಳನ್ನೂ ಮತ್ತು ವಿಶೇಷವಾದ ಚೇಷ್ಟೆಗಳನ್ನೂ ಅದರಂತೆಯೇ ರಾಜರ್ಷಿಗಳ ಅನೇಕ ವಿಧವಾದ ಶುಭವಾದ ಚರಿತ್ರೆಯನ್ನೂ ಅಲ್ಲಲ್ಲಿ ಕೇಳುತ್ತಾ ಮಂಗಳಪ್ರದವಾದ ಆಶ್ರಮಗಳಲ್ಲಿ ಬ್ರಾಹ್ಮಣರ ಜೊತೆಯಲ್ಲಿ ವಿಶೇಷವಾಗಿ ಸ್ನಾನವನ್ನು ಮಾಡಿದ್ದೇವೆ.

ಅರ್ಚಿತಃ ಸತತಂ ದೇವಾಃ ಪುಷ್ಪೈರದ್ಭಿಃ ಸದಾ ಚ ವಃ ।
ಯಥಾಲಬ್ಧೈರ್ಮೂಲಫಲೈಃ ಪಿತರಶ್ಚಾಪಿ ತರ್ಪಿತಾಃ ॥೬॥

ದೇವತೆಗಳನ್ನು ಪುಷ್ಪಗಳಿಂದಲೂ, ನೀರಿನಿಂದಲೂ ನೀವು ಸತತವಾಗಿ ಪೂಜಿಸಿದ್ದೀರಿ. ಅಲ್ಲಲ್ಲಿ ದೊರಕಿದ ಮೂಲಫಲಗಳಿಂದ ಪಿತೃಗಳೂ ತೃಪ್ತಿಗೊಳಿಸಲ್ಪಟ್ಟಿದ್ದಾರೆ.

ಯಥಾಕ್ರಮಂ ವಿಶೇಷೇಣ ಲೋಮಶೇನ ಪ್ರಭಾಷಿತಮ್ ।
ಪರ್ವತೇಷು ಚ ರಮ್ಯೇಷು ಸರ್ವೇಷು ಚ ಸರಸ್ಸು ಚ ।
ಉದಧೌ ಚ ಮಹಾಪುಣ್ಯೇ ಸೂಪಸ್ಪೃಷ್ಟಂ ಮಹಾತ್ಮಭಿಃ ॥೭॥

ವಿಶೇಷವಾಗಿ ಲೋಮಶರು ಸುಂದರವಾದ ಪರ್ವತ, ಸರೋವರ ಎಲ್ಲಕಡೆಗಳಲ್ಲಿಯೂ ಅಲ್ಲಿಯ ಮಹಿಮೆಗಳನ್ನು ಹೇಳಿದ್ದಾರೆ. ಮಹಾತ್ಮರಾದ ನೀವೆಲ್ಲರೂ ಮಹಾಪುಣ್ಯಪ್ರದವಾದ ಸಮುದ್ರದಲ್ಲಿ ಸ್ನಾನವನ್ನು ಮಾಡಿದ್ದೀರಿ.

ಇಲಾ ಸರಸ್ವತೀ ಸಿಂಧುರ್ಯಮುನಾ ನರ್ಮದಾ ತಥಾ ।
ನಾನಾತೀರ್ಥೇಷು ರಮ್ಯೇಷು ಸೂಪಸ್ಪೃಷ್ಟಂ ಸಹ ದ್ವಿಜೈಃ ॥೮॥

ಇಳಾ, ಸರಸ್ವತೀ, ಸಿಂಧು, ಯಮುನಾ, ನರ್ಮದಾ ಮೊದಲಾದ ಮನೋಹರವಾದ ನಾನಾ ತೀರ್ಥಗಳಲ್ಲಿ ಬ್ರಾಹ್ಮಣರ ಜೊತೆಯಲ್ಲಿ ಚೆನ್ನಾಗಿ ಸ್ನಾನವನ್ನು ಮಾಡಿದ್ದೀರಿ.

ಗಂಗಾದ್ವಾರಮತಿಕ್ರಮ್ಯ ಬಹವಃ ಪರ್ವತಾಃ ಶುಭಾಃ ।
ಹಿಮವಾನ್ ಪರ್ವತಶ್ಚೈವ ನಾನಾದ್ವಿಜಗಣಾಯುತಃ ॥೯॥

ವಿಶಾಲಾ ಬದರೀ ದೃಷ್ಟಾ ನರನಾರಾಯಣಾಶ್ರಮಃ ।
ದಿವ್ಯಾ ಪುಷ್ಕರಿಣೀ ದೃಷ್ಟಾ ಸಿದ್ಧದೇವರ್ಷಿಪೂಜಿತಾ ॥೧೦॥

ಗಂಗಾದ್ವಾರವನ್ನು ದಾಟಿ ಶುಭವಾದ ಅನೇಕ ಪರ್ವತಗಳನ್ನೂ, ಅನೇಕ ಪಕ್ಷಿ ಸಂಕುಲದಿಂದ ಕೂಡಿದ ಹಿಮಾಲಯ ಪರ್ವತವನ್ನೂ, ವಿಶಾಲ ಬದರೀಕ್ಷೇತ್ರವನ್ನೂ, ನರನಾರಾಯಣಾಶ್ರಮವನ್ನೂ, ಸಿದ್ಧರಿಂದಲೂ ದೇವರ್ಷಿಗಳಿಂದಲೂ ಪೂಜಿತವಾದ ದಿವ್ಯವಾದ ಪುಷ್ಕರಿಣಿಯನ್ನೂ ನೋಡಿದ್ದೀರಿ.

ಯಥಾಕ್ರಮವಿಶೇಷೇಣ ಸರ್ವಾಣ್ಯಾಯತನಾನಿ ಚ ।
ದರ್ಶಿತಾನಿ ದ್ವಿಜಶ್ರೇಷ್ಠಾ ಲೋಮಶೇನ ಮಹಾತ್ಮನಾ ॥೧೧॥

ಎಲೈ ಬ್ರಾಹ್ಮಣಶ್ರೇಷ್ಠರೇ, ಮಹಾತ್ಮರಾದ ಲೋಮಶರು ಕ್ರಮವಾಗಿ ವಿಶೇಷವಾಗಿ ಎಲ್ಲಾಕ್ಷೇತ್ರಗಳನ್ನೂ ತೋರಿಸಿದ್ದಾರೆ.

ಇಮಂ ವೈಶ್ರವಣಾವಾಸಂ ಪುಣ್ಯಂ ಸಿದ್ಧನಿಷೇವಿತಮ್ ।
ಕಥಂ ಭೀಮ ಗಮಿಷ್ಯಾಮೋ ಗತಿರತ್ರ ವಿಧೀಯತಾಮ್ ॥೧೨॥

ಭೀಮಸೇನನೇ, ನಾವು ಇಲ್ಲಿಂದ ಸಿದ್ಧಸೇವಿತವಾದ ಪುಣ್ಯಪ್ರದವಾದ ಕುಬೇರನ ಆವಾಸಸ್ಥಾನಕ್ಕೆ ಯಾವ ಮಾರ್ಗದಿಂದ ಹೋಗುವೆವು ಎಂದು ವಿಚಾರ ಮಾಡು.

ವೈಶಂಪಾಯನಃ

ಏವಂ ಬ್ರುವತಿ ರಾಜೇಂದ್ರೇ ವಾಗುವಾಚಾಶರೀರಿಣೀ ।
ನ ಶಕ್ಯೋ ದುರ್ಗಮೋ ಗಂತುಮಿತೋ ವೈಶ್ರವಣಾಶ್ರಮಃ ॥೧೩॥

ವೈಶಂಪಾಯನ– ರಾಜೇಂದ್ರನು ಹೀಗೆ ಹೇಳುತ್ತಿರಲು ಅಶರೀರವಾಣಿಯಾಯಿತು. ದುರ್ಗಮವಾದ ಕುಬೇರನ ಆಶ್ರಮಕ್ಕೆ ಈ ಮಾರ್ಗದಿಂದ ಹೋಗಲು ಸಾಧ್ಯವಿಲ್ಲ.

ಅನೇನೈವ ಪಥಾ ರಾಜನ್ ಪ್ರತಿಗಚ್ಛ ಯಥಾಗತಮ್ ।
ನರನಾರಾಯಣಸ್ಥಾನಂ ಬದರೀತ್ಯಭಿವಿಶ್ರುತಮ್ ॥೧೪॥

ಎಲೈ ರಾಜನೇ, ನೀನು ಬಂದ ಈ ಮಾರ್ಗದಿಂದಲೇ ಬದರಿ ಎಂದು ವಿಖ್ಯಾತವಾದ ನರನಾರಾಯಣಸ್ಥಾನಕ್ಕೆ ಹಿಂದಿರುಗು.

ತಸ್ಮಾದ್ ಯಾಸ್ಯಸಿ ಕೌಂತೇಯ ಸಿದ್ಧಚಾರಣಸೇವಿತಮ್ ।
ಬಹುಪುಷ್ಪಫಲಂ ರಮ್ಯಮಾಶ್ರಮಂ ವೃಷಪರ್ವಣಃ ॥೧೫॥

ಕೌಂತೇಯನೇ, ನೀನು ಅಲ್ಲಿಂದ ಮುಂದಕ್ಕೆ ಸಿದ್ಧಚಾರಣಸೇವಿತವಾದ ಬಹಳವಾದ ಪುಷ್ಪಫಲಗಳನ್ನು ಹೊಂದಿರುವ ವೃಷಪರ್ವನ ಮನೋಹರವಾದ ಆಶ್ರಮಕ್ಕೆ ಹೋಗುವಿ.

ಅತಿಕ್ರಮ್ಯ ಚ ತಂ ಪಾರ್ಥ ಚಾರ್ಷಿಷೇಣಾಶ್ರಮೇ ವಸೇಃ ।
ತತೋ ದ್ರಕ್ಷ್ಯಸಿ ಕೌಂತೇಯ ನಿವೇಶಂ ಧನದಸ್ಯ ಚ ॥೧೬॥

ಎಲೈ ಪಾರ್ಥನೇ, ಅದನ್ನು ದಾಟ ಮುಂದೆ ಹೋಗಿ ನೀನು ಅರ್ಷಿಷೇಣನ ಆಶ್ರಮದಲ್ಲಿ ವಾಸಮಾಡು. ಕೌಂತೇಯನೇ, ಅಲ್ಲಿಂದ ನೀನು ಕುಬೇರನ ವಾಸಸ್ಥಾನವನ್ನು ನೋಡುವಿ.

ಏತಸ್ಮಿನ್ನಂತರೇ ವಾಯುರ್ದಿವ್ಯಗಂಧವಹಃ ಶುಚಿಃ ।
ಸುಖಿಪ್ರಹ್ಲಾದನಃ ಶೀತಃ ಪುಷ್ಪವರ್ಷಂ ವವರ್ಷ ಚ ॥೧೭॥

ಆ ಸಮಯಕ್ಕೆ ಸರಿಯಾಗಿ ಶುದ್ಧವಾದ ವಾಯುವು ಸುಖವನ್ನು ಕೊಡುವಂತೆ ಶೀತಸ್ಪರ್ಶದಿಂದ ಬೀಸಿತು. ಪುಷ್ಪವರ್ಷವೂ ಉಂಟಾಯಿತು.

ಶ್ರುತ್ವಾ ತು ದಿವ್ಯಮಾಕಾಶಾದ್ ವಾಚಂ ಸರ್ವೇ ವಿಸಿಸ್ಮಯುಃ ।
ಋಷೀಣಾಂ ಬ್ರಾಹ್ಮಣಾನಾಂ ಚ ಪಾರ್ಥಿವಾನಾಂ ವಿಶೇಷತಃ ॥೧೮॥

ಶ್ರುತ್ವಾ ತನ್ಮಹದಾಶ್ಚರ್ಯಂ ದ್ವಿಜೋ ಧೌಮ್ಯೋಽಬ್ರವೀತ್ ತದಾ ।
ನ ಶಕ್ಯಮುತ್ತರಂ ವಕ್ತುಮೇವಂ ಭವತು ಭಾರತ ॥೧೯॥

ಆ ದಿವ್ಯವಾದ ಅಶರೀರವಾಣಿಯನ್ನು ಕೇಳಿ ಎಲ್ಲರಿಗೂ ವಿಸ್ಮಯ ಉಂಟಾಯಿತು. ಋಷಿಗಳಿಗೆ, ಬ್ರಾಹ್ಮಣರಿಗೆ ಮತ್ತು ರಾಜರಿಗೆ ವಿಶೇಷವಾಗಿ ವಿಸ್ಮಯ ಉಂಟಾಯಿತು. ಮಹದಾಶ್ಚರ್ಯಕರವಾದ ಆ ಮಾತುಗಳನ್ನು ಕೇಳಿ ಆಗ ಧೌಮ್ಯರು ಭಾರತನೇ, ಈ ಮಾತಿಗೆ ಪ್ರತ್ಯುತ್ತರವನ್ನು ಹೇಳಲು ಸಾಧ್ಯವಿಲ್ಲ. ಹಾಗೆಯೇ ಆಗಲಿ ಎಂದು ಹೇಳಿದರು.

ತತೋ ಯುಧಿಷ್ಠಿರೋ ರಾಜಾ ಪ್ರತಿಜಗ್ರಾಹ ತದ್ವಚಃ ।
ಪ್ರತ್ಯಾಗಮ್ಯ ಪುನಸ್ತಂ ತು ನರನಾರಾಯಣಾಶ್ರಮಮ್ ॥೨೦॥

ಭೀಮಸೇನಾದಿಭಿಃ ಸರ್ವೈರ್ಭ್ರಾತೃಭಿಃ ಪರಿವಾರಿತಃ ।
ಪಾಂಚಾಲ್ಯಾ ಬ್ರಾಹ್ಮಣೈಶ್ಚೈವ ನ್ಯವಸಂತ ಸುಖಂ ತದಾ ॥೨೧॥

ಆಗ ರಾಜನಾದ ಯುಧಿಷ್ಠಿರನು ಆ ಮಾತನ್ನು ಸ್ವೀಕರಿಸಿದನು. ಅವನು ಭೀಮಸೇನಾದಿ ಎಲ್ಲ ಸಹೋದರರಿಂದ ಪರಿವಾರಿತನಾಗಿ ದ್ರೌಪದಿಯ ಜೊತೆಯಲ್ಲಿ ನರನಾರಾಯಣಾಶ್ರಮಕ್ಕೆ ಪುನಃ ಹಿಂದಿರುಗಿದನು. ಜೊತೆಯಲ್ಲಿ ಬಂದ ಬ್ರಾಹ್ಮಣರೂ ಸಹ ಅಲ್ಲಿ ಸುಖವಾಗಿ ವಾಸಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ತೀರ್ಥಯಾತ್ರಾಪರ್ವಣಿ ಅಷ್ಟಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

ಜಟಾಸುರವಧಪರ್ವ

ನೂರ ಐವತ್ಮೂರನೆಯ ಅಧ್ಯಾಯ

ಬ್ರಾಹ್ಮಣ ವೇಷದಿಂದ ಪಾಂಡವರಿದ್ದಲ್ಲಿ ಜಟಾಸುರನ ಪ್ರವೇಶ.
ವಂಚನೆಯಿಂದ ಪಾಂಡವ, ಮತ್ತು ದ್ರೌಪದಿಯ ಹರಣ.
ಮಾರ್ಗಮಧ್ಯದಲ್ಲಿ ಭೀಮಸೇನನಿಂದ ಅವನ ವಧೆ.

ವೈಶಂಪಾಯನಃ

ತತಸ್ತಾನ್ ಪರಿವಿಶ್ವಸ್ತಾನ್ ವಸತಸ್ತತ್ರ ಪಾಂಡವಾನ್ ।
ಗತೇಷು ತೇಷು ರಕ್ಷಃಸು ಭೀಮಸೇನಾತ್ಮಜೇಽಪಿ ಚ ॥೧॥

ಪರ್ವತೇಂದ್ರೇ ದಿದೃಕ್ಷೋಃ ಸಾರ್ಧಂ ಪಾರ್ಥಾಗಮನಕಾಂಕ್ಷಯಾ ।
ಆಜಗಾಮ ತದಾ ರಕ್ಷೋ ನಾಮ್ನಾ ಖ್ಯಾತೋ ಜಟಾಸುರಃ ॥೧.೧॥

ವೈಶಂಪಾಯನ– ಅನಂತರ ಭೀಮಸೇನ ಪುತ್ರನಾದ ಘಟೋತ್ಕಚನೂ, ಅವನ ಅನುಚರರಾದ ರಾಕ್ಷಸರೂ ಅಲ್ಲಿಂದ ಹೊರಟು ಹೋಗಿ ಪಾಂಡವರು ವಿಶ್ವಾಸದಿಂದ ಆ ಪರ್ವತದಲ್ಲಿ ಅರ್ಜುನನ ನಿರೀಕ್ಷೆಯಲ್ಲಿ ವಾಸಮಾಡುತ್ತಿರಲು ಜಟಾಸುರನೆಂಬ ಹೆಸರಿನ ರಾಕ್ಷಸನು ಅಲ್ಲಿಗೆ ಬಂದನು.

ರಹಿತಾನ್ ಭೀಮಸೇನೇನ ಕದಾಚಿತ್ತಾನ್ ಯದೃಚ್ಛಯಾ ।
ಜಹಾರ ಧರ್ಮರಾಜಾನಂ ಯಮೌ ಕೃಷ್ಣಾಂ ಚ ರಾಕ್ಷಸಃ ॥೨॥

ಒಮ್ಮೆ ಆಕಸ್ಮಿಕವಾಗಿ ಭೀಮಸೇನನು ಹೊರಗೆ ಹೋಗಿರುವಾಗ ಆ ರಾಕ್ಷಸನು ನಕುಲಸಹದೇವರನ್ನೂ, ಧರ್ಮರಾಜನನ್ನೂ ಮತ್ತು ದ್ರೌಪದಿಯನ್ನೂ ಅಪಹರಿಸಿದನು.

ಜನಮೇಜಯಃ

ಬ್ರಹ್ಮನ್ ಕಥಂ ಧರ್ಮರಾಜಂ ಯಮೌ ಕೃಷ್ಣಾಂ ಚ ರಾಕ್ಷಸಃ ।
ಜಹಾರ ಕುತ್ರ ಭೀಮಶ್ಚ ಗತೋ ರಾಕ್ಷಸಕಂಟಕಃ ।
ವಕ್ತುಮರ್ಹಸಿ ವಿಪ್ರಾಗ್ಯ ವೃತ್ತಮೇತನ್ಮಮಾನಘ ॥೨.೧.॥

ಜನಮೇಜಯ– ಬ್ರಾಹ್ಮಣರೇ, ರಾಕ್ಷಸನು ಹೇಗೆ ಧರ್ಮರಾಜ, ನಕುಲ ಸಹದೇವರು ಮತ್ತು ದ್ರೌಪದಿಯನ್ನು ಹೇಗೆ ಅಪಹರಿಸಿದನು? ರಾಕ್ಷಸ ಕಂಟಕನಾದ ಭೀಮಸೇನನು ಎಲ್ಲಿಗೆ ಹೋಗಿದ್ದನು? ಅನಘರಾದ ಬ್ರಾಹ್ಮಣಶ್ರೇಷ್ಠರೇ, ಈ ವೃತ್ತಾಂತವನ್ನು ನನಗೆ ಹೇಳಬೇಕು.

ವೈಶಂಪಾಯನಃ

ಬ್ರಾಹ್ಮಣೋ ಮಂತ್ರಕುಶಲಃ ಸರ್ವಶಾಸ್ತ್ರವಿದುತ್ತಮಃ ।
ಇತಿ ಬ್ರುವನ್ ಪಾಂಡವೇಯಾನ್ ಪರ್ಯುಪಾಸ್ತೇ ಸ್ಮ ನಿತ್ಯದಾ ॥೩॥
ಜಾಮದಗ್ನ್ಯಸ್ಯ ಶಿಷ್ಯೋಽಹಂ ರಾಮಸ್ಯಾಕ್ಲಿಷ್ಟಕರ್ಮಣಃ ।

ಆ ರಾಕ್ಷಸನು ನಾನು ಬ್ರಾಹ್ಮಣ, ಮಂತ್ರಕುಶಲನಾದವನು, ಸರ್ವಶಾಸ್ತ್ರವನ್ನೂ ತಿಳಿದಿದ್ದೇನೆ. ಅಕ್ಲಿಷ್ಟಕಾರಿಯಾದ ಪರಶುರಾಮನ ಶಿಷ್ಯ ಎಂದು ಹೇಳಿಕೊಂಡು ಪಾಂಡವರ ಜೊತೆಯಲ್ಲಿ ಇರುತ್ತಿದ್ದನು.

ಪರೀಪ್ಸಮಾನಃ ಪಾರ್ಥಾನಾಂ ಕಲಾಪಾಶ್ಚ(ನಿ) ಧನೂಂಷಿ ಚ ।
ಅಂತರಂ ಸಂಪರಿಪ್ರೇಪ್ಸುರ್ದ್ರೌಪದ್ಯಾ ಹರಣಂ ಪ್ರತಿ ॥೪॥

ಅವನು ಪಾಂಡವರ ಶಸ್ತ್ರಗಳನ್ನೂ, ಧನುಸ್ಸುಗಳನ್ನೂ ಪರೀಕ್ಷೆ ಮಾಡಿಕೊಂಡು ದ್ರೌಪದಿಯನ್ನು ಅಪಹರಿಸಲು ಸಮಯವನ್ನು ಕಾಯುತ್ತಿದ್ದನು.

ಪೋಷಣಂ ತಸ್ಯ ರಾಜೇಂದ್ರ ಚಕ್ರೇ ಪಾಂಡವನಂದನಃ ।
ಬುಬುಧೇ ನ ಚ ತಂ ಪಾಪಂ ಭಸ್ಮಚ್ಛನ್ನಮಿವಾನಲಮ್ ॥೪.೧॥

ರಾಜೇಂದ್ರನೇ, ಧರ್ಮರಾಜನು ಭಸ್ಮಮುಚ್ಚಿದ ಕೆಂಡದಂತಿದ್ದ ಆ ಪಾಪಿಷ್ಠನನ್ನು ತಿಳಿಯಲಿಲ್ಲ. ಅವನ ಪೋಷಣೆಯನ್ನು ಮಾಡಿದನು.

ಸ ಭೀಮಸೇನೇ ನಿಷ್ಕ್ರಾಂತೇ ಮೃಗಯಾರ್ಥಮರಿಂದಮ ।
ಅನ್ಯದ್ ರೂಪಂ ಸಮಾಸ್ಥಾಯ ವಿಕೃತಂ ಭೈರವಂ ಮಹತ್ ॥೫॥

ಘಟೋತ್ಕಚಂ ಸಾನುಚರಂ ದೃಷ್ಟ್ವಾ ವಿಪ್ರದ್ರುತಂ ದಿಶಃ
ಲೋಮಶಪ್ರಭೃತೀಂಸ್ತಾಂಸ್ತು ಮಹರ್ಷೀಂಶ್ಚ ಸಮಾಹಿತಾನ್ ।
ಸ್ನಾತುಂ ವಿನಿರ್ಗತಾನ್ ದೃಷ್ಟ್ವಾ ಪುಷ್ಪಾರ್ಥಂ ಚ ತಪೋಧನಾನ್ ॥೮॥

ಗೃಹೀತ್ವಾ ಸರ್ವಶಸ್ತ್ರಾಣಿ ದ್ರೌಪದೀಂ ಪರಿಗೃಹ್ಯ ಚ ।
ಪ್ರಾತಿಷ್ಠತ ಸ ದುಷ್ಟಾತ್ಮಾ ತ್ರೀನ್ ಗೃಹೀತ್ವಾ ಚ ಪಾಂಡವಾನ್ ॥೯॥

ಎಲೈ ಅರಿಂದಮನೇ, ಒಮ್ಮೆ ಭೀಮಸೇನನು ಬೇಟೆಯಾಡಲು ಹೊರಗೆ ಹೋಗಿರುವಾಗ ಘಟೋತ್ಕಚ ಮತ್ತು ಅವನ ಅನುಚರರೆಲ್ಲರೂ ಹೊರಟು ಹೋಗಿದ್ದಾರೆ ಎಂಬುದನ್ನು ಗಮನಿಸಿ ಲೋಮಶ ಮೊದಲಾದ ತಪೋಧನರಾದ ಮಹರ್ಷಿಗಳು ಸ್ನಾನವನ್ನು ಮಾಡಿ ಪುಷ್ಪಾದಿಗಳನ್ನು ತರಲು ಹೊರಗೆ ಹೋಗಿರುವುದನ್ನು ಗಮನಿಸಿ, ಆ ರಾಕ್ಷಸನು ಭಯಂಕರವಾದ ಒಂದು ದೊಡ್ಡ ವಿಕೃತರೂಪವನ್ನು ಧರಿಸಿ ದುಷ್ಟಾತ್ಮನಾದ ಅವನು ಪಾಂಡವರ ಎಲ್ಲಾ ಶಸ್ತ್ರಗಳನ್ನೂ, ಧರ್ಮರಾಜ, ನಕುಲಸಹದೇವ, ದ್ರೌಪದಿಯನ್ನೂ ಎತ್ತಿಕೊಂಡು ಓಡಲು ಪ್ರಾರಂಭಿಸಿದನು.

ಸಹದೇವಸ್ತು ಯತ್ನೇನ ತತೋಽಪಕ್ರಮ್ಯ ಪಾಂಡವ ।
ಆಕ್ರಂದದ್ ಭೀಮಸೇನಂ ವೈ ಯೇನ ಯಾತೋ ಮಹಾಬಲಃ ।
ವಿಕ್ರಮ್ಯ ಕೌಶಿಕಂ ಖಡ್ಗಂ ಮೋಕ್ಷಯಿತ್ವಾ ಗ್ರಹಂ ರಿಪೋಃ ।
ತಮಬ್ರವೀದ್ ಧರ್ಮರಾಜೋ ಹ್ರಿಯಮಾಣೋ ಯುಧಿಷ್ಠಿರಃ ॥೭॥

ಸಹದೇವನಾದರೂ ತನ್ನ ಒರೆಯಿಂದ ಕತ್ತಿಯನ್ನು ಹಿರಿದು ಆ ಶತ್ರುವಿನ ಹಿಡಿತದಿಂದ ತಪ್ಪಿಸಿಕೊಂಡು ಅಲ್ಲಿಂದ ಹೊರಟುಬಂದು ಮಹಾಬಲನಾದ ಭೀಮಸೇನನು ಹೋದ ಮಾರ್ಗದಲ್ಲಿನಿಂತು ಭೀಮಸೇನ ಎಂದು ಗಟ್ಟಿಯಾಗಿ ಕಿರುಚಿದನು. ಯುಧಿಷ್ಠಿರನು ಅಪಹರಿಸಿಕೊಂಡು ಹೋಗುತ್ತಿದ್ದ ಜಟಾಸುರನನ್ನು ಕುರಿತು ಹೀಗೆ ಮಾತನಾಡಿದನು.

ಧರ್ಮಸ್ತೇ ಹೀಯತೇ ಮೂಢ ನ ತತ್ತ್ವಂ ಸಮವೇಕ್ಷಸೇ ।
ಯೇಽನ್ಯೇ ಕ್ವಚನ್ಮನುಷ್ಯೇಷು ತಿರ್ಯಗ್ಯೋನಿಗತಾಶ್ಚ ಯೇ ॥೮॥

ಗಂಧರ್ವೋರಗರಕ್ಷಾಂಸಿ ವಯಾಂಸಿ ಪಶವಸ್ತಥಾ ।
ಮನುಷ್ಯಾನುಪಜೀವಂತಿ ತತಸ್ತ್ವಮಪಿ ಜೀವಸಿ ॥೯॥

ಮೂಢನೇ, ನೀನು ತತ್ತ್ವವನ್ನು ಗಮನಿಸುತ್ತಿಲ್ಲ. ನಿನ್ನ ಧರ್ಮವು ನಾಶವನ್ನು ಹೊಂದುತ್ತದೆ. ಬೇರೆ ಮನುಷ್ಯರು ಹೀನ ಯೋನಿಗತ ಪ್ರಾಣಿಗಳು, ಗಂಧರ್ವೋರಗ ರಾಕ್ಷಸರು ಮತ್ತು ಪಶುಪಕ್ಷಿಗಳು ಮನುಷ್ಯರನ್ನು ಉಪಜೀವಿಸುತ್ತವೆ. ಆದ್ದರಿಂದಲೇ ನೀನು ಬದುಕಿದ್ದೀಯೆ.

ಧರ್ಮಂ ತೇ ಸಮವೇಕ್ಷಂತೇ ರಕ್ಷಾಂಸಿ ಚ ವಿಶೇಷತಃ ।
ಧರ್ಮಸ್ಯ ರಾಕ್ಷಸಾ ಮೂಲಂ ಧರ್ಮಂ ತೇ ವಿದುರುತ್ತಮಮ್ ॥
ಏತತ್‌ಪರೀಕ್ಷ್ಯ ಸರ್ವಂ ತ್ವಂ ಸಮೀಪೇ ಸ್ಥಾತುಮರ್ಹಸಿ ॥೯.೧॥

ರಾಕ್ಷಸರೂ ಸಹ ವಿಶೇಷವಾಗಿ ಧರ್ಮವನ್ನು ಗಮನಿಸುತ್ತಾರೆ. ಧರ್ಮಕ್ಕೆ ರಾಕ್ಷಸರೇ ಮೂಲ. ಅವರು ಧರ್ಮವನ್ನು ಚೆನ್ನಾಗಿ ತಿಳಿದಿರುತ್ತಾರೆ. ಇವೆಲ್ಲವನ್ನೂ ಗಮನಿಸಿ ನಮ್ಮ ಸಮೀಪದಲ್ಲಿ ಸುಮ್ಮನೆ ವಾಸಮಾಡು.

ಸಮೃದ್ಧ್ಯಾ ಹ್ಯಸ್ಯ ಲೋಕಸ್ಯ ಲೋಕೋ ಯುಷ್ಮಾಕಮೃದ್ಧ್ಯತಿ ।
ಇಮಂ ತು (ಚ) ಲೋಕೇ ಶೋಚಂತಮನುಶೋಚಂತಿ ದೇವತಾಃ ॥

ಪೂಜ್ಯಮಾನಾಶ್ಚ ವರ್ಧಂತೇ ಹವ್ಯಕವ್ಯೈರ್ಯಥಾವಿಧಿ ॥೧೧॥

ಈ ಲೋಕವು ಸಮೃದ್ಧವಾಗಿದ್ದರೆ ನಿಮ್ಮ ಲೋಕವೂ ಸಮೃದ್ಧವಾಗಿರುತ್ತದೆ. ಈ ಲೋಕವು ಶೋಕಪಟ್ಟರೆ ದೇವತೆಗಳೂ ಶೋಕಪಡುತ್ತಾರೆ. ಹವ್ಯಕವ್ಯಗಳಿಂದ, ಶಾಸ್ತ್ರೋಕ್ತವಿಧಾನದಿಂದ ಪೂಜಿಸಿದರೆ ದೇವತೆಗಳು ಅಭಿವೃದ್ಧಿಯನ್ನು ಹೊಂದುತ್ತಾರೆ.

ವಯಂ ರಾಷ್ಟ್ರಸ್ಯ ಗೋಪ್ತಾರೋ ರಕ್ಷಿತಾರಶ್ಚ ರಾಕ್ಷಸ ।
ರಾಷ್ಟ್ರಸ್ಯಾರಕ್ಷ್ಯಮಾಣಸ್ಯ ಕುತೋ ಭೂತಿಃ ಕುತಃ ಸುಖಮ್ ॥೧೨॥

ರಾಕ್ಷಸನೇ ನಾವು ರಾಷ್ಟ್ರವನ್ನು ಕಾಪಾಡುವವರು. ರಾಷ್ಟ್ರವನ್ನು ಪಾಲಿಸದಿದ್ದರೆ ಐಶ್ವರ್ಯವಾಗಲೀ, ಸುಖವಾಗಲೀ ಎಲ್ಲಿಂದ ಬರಬೇಕು?

ನ ಚ ರಾಜಾऽವಮಂತವ್ಯೋ ರಕ್ಷಸಾ ಜಾತ್ವನಾಗಸಿ ।
ಅಣುರಪ್ಯಪಚಾರಶ್ಚ ನಾಸ್ಮಾಕಂ ನರಾಶನ ॥೧೩॥

ಅಪರಾಧ ಮಾಡದಿರುವ ರಾಜನಿಗೆ ರಾಕ್ಷಸರು ಎಂದೂ ಅವಮಾನವನ್ನು ಮಾಡಬಾರದು. ಎಲೈ ನರಾಶನನೇ, ನಾವು ನಿನಗೆ ಅಣುವಿನಷ್ಟು ಅಪಚಾರವನ್ನೂ ಮಾಡಿಲ್ಲ.

ವಿಘಸಾಶಾನ್ ಯಥಾಶಕ್ತಿ ಕುರ್ಮಹೇ ದೇವತಾದಿಷು ।
ಗುರೂಂಶ್ಚ ಬ್ರಾಹ್ಮಣಾಂಶ್ಚೈವ ಪ್ರಾಣಾಮಪ್ರವಣಾಃ ಸದಾ ॥೧೩.೧॥

ನಾವು ದೇವತೆಗಳಿಗೆ ಯೋಗ್ಯವಾದ ಅನ್ನವನ್ನು ಸಮರ್ಪಿಸಿ ಯಾವಾಗಲೂ ಗುರುಗಳು ಮತ್ತು ಬ್ರಾಹ್ಮಣರಿಗೆ ನಮಸ್ಕಾರ ಮಾಡಿ ಪ್ರವಣರಾಗಿ ಇದ್ದೇವೆ.

ದ್ರೋಗ್ಧವ್ಯಂ ನ ಚ ಮಿತ್ರೇಷು ನ ವಿಶ್ವಸ್ತೇಷು ಕರ್ಹಿಚಿತ್ ।
ಯೇಷಾಂ ಚಾನ್ನಾನಿ ಭುಂಜೀತ ಯತ್ರ ಚ ಸ್ಯಾತ್ ಪ್ರತಿಶ್ರಯಃ ॥೧೪॥

ಮಿತ್ರರಿಗೆ, ವಿಶ್ವಾಸಪಾತ್ರರಿಗೆ, ಯಾರ ಅನ್ನವನ್ನು ಊಟಮಾಡುತ್ತಿರುವೆಯೋ ಅವರಿಗೆ ಮತ್ತು ಯಾರು ಆಶ್ರಯವನ್ನು ಕೊಡುತ್ತಾರೋ ಅವರಿಗೆ, ಎಂದೂ ದ್ರೋಹವನ್ನು ಮಾಡಬಾರದು.

ಸ ತ್ವಂ ಪ್ರತಿಶ್ರಯೇऽಸ್ಮಾಕಂ ಪೂಜ್ಯಮಾನಃ ಸುಖೋಷಿತಃ ।
ಭುಕ್ತ್ವಾ ಚಾನ್ನಾನಿ ದುಷ್ಪಜ್ಞ ಕಥಮಸ್ಮಾನ್ ಜಿಹೀರ್ಷಸಿ ॥೧೫॥

ಎಲೈ ದುಷ್ಪಜ್ಞನೇ, ನೀನು ನಮ್ಮ ಆಶ್ರಯದಲ್ಲಿ ಸುಖವಾಗಿ ವಾಸಮಾಡಿದ್ದು, ನಮ್ಮಿಂದ ಸತ್ಕರಿಸಲ್ಪಟ್ಟು, ನಮ್ಮ ಅನ್ನವನ್ನೇ ತಿಂದು ಹೇಗೆ ನಮ್ಮನ್ನೇ ಅಪಹರಿಸುತ್ತಿರುವಿ?

ಏವಮೇವ ವೃಥಾಚಾರೋ ವೃಥಾವೃದ್ಧೋ ವೃಥಾಮತಿಃ ।
ವೃಥಾಮರಣಮರ್ಹಶ್ಚ ವೃಥಾऽದ್ಯ ನ ಭವಿಷ್ಯಸಿ ॥೧೬॥

ಇದರಂತೆಯೇ ವ್ಯರ್ಥವಾದ ಆಚಾರವುಳ್ಳವನ್ನಾಗಿ, ವ್ಯರ್ಥವಾದ ವಯಸ್ಸುಳ್ಳವನಾಗಿ, ವ್ಯರ್ಥವಾದ ಬುದ್ಧಿಯುಳ್ಳ ನೀನು, ವ್ಯರ್ಥವಾದ ಮರಣಕ್ಕೆ ಯೋಗ್ಯನಾಗಿದ್ದೀಯೆ. ಈ ದಿನ ನೀನು ವ್ಯರ್ಥವಾಗಿ ಜೀವಿಸುವುದಿಲ್ಲ.

ಅಥ ಚೇದ್ ದುಷ್ಪಬುದ್ಧಿಸ್ತ್ವಂ ಸರ್ವೈರ್ಧರ್ಮೈರ್ವಿವರ್ಜಿತಃ ।
ಪ್ರದಾಯ ಶಸ್ತ್ರಾಣ್ಯಸ್ಮಾಕಂ ಯುದ್ಧೇನ ದ್ರೌಪದೀಂ ಹರ ॥೧೭॥

ಅಥವಾ ದುಷ್ಟಬುದ್ಧಿಯುಳ್ಳ ನೀನು ಎಲ್ಲ ಧರ್ಮಗಳನ್ನೂ ತ್ಯಜಿಸಿದ್ದರೆ ನಮ್ಮ ಶಸ್ತ್ರಗಳನ್ನು ನಮಗೆ ಕೊಟ್ಟು ಯುದ್ಧವನ್ನು ಮಾಡಿ ದ್ರೌಪದಿಯನ್ನು ಕರೆದುಕೊಂಡು ಹೋಗು.

ಅಥ ಚೇತ್ ತ್ವಮವಿಜ್ಞಾನಾದಿದಂ ಕರ್ಮ ಕರಿಷ್ಯಸಿ ।
ಅಧರ್ಮಂ ಚಾಪ್ಯಕೀರ್ತಿಂ ಚ ಲೋಕೇ ಪ್ರಾಪ್ಸ್ಯಸಿ ಕೇವಲಮ್ ॥೧೮॥

ಅಥವಾ ನೀನು ಅಜ್ಞಾನದಿಂದ ಈ ಕರ್ಮವನ್ನು ಮಾಡುವುದಾದರೆ ಲೋಕದಲ್ಲಿ ನೀನು ಕೇವಲ ಅಧರ್ಮವನ್ನೂ, ಅಪಕೀರ್ತಿಯನ್ನೂ ಸಂಪಾದಿಸುವಿ.

ವಿತಾಮದ್ಯ ಪರಾಮೃಶ್ಯ ಸ್ತ್ರಿಯಂ ರಾಕ್ಷಸ ಮಾನುಷೀಮ್ ।
ವಿಷಮೇತತ್ ಸಮಾಲೋಢ್ಯ ಕುಂಭೇನ ಪ್ರಾಪಿತಂ ತ್ವಯಾ ॥೧೯॥

ಎಲೈ ರಾಕ್ಷಸನೇ, ಈ ಮನುಷ್ಯವನಿತೆಯನ್ನು ಇಂದು ನೀನು ಮುಟ್ಟಿ ಒಂದು ಕೊಡದಲ್ಲಿ ವಿಷವನ್ನು ಕದರಿ ಕುಡಿದಿದ್ದೀಯೆ.

ವೈಶಂಪಾಯನಃ

ತತೋ ಯುಧಿಷ್ಠಿರಸ್ತಸ್ಯ ಭಾರಿಕಃ ಸಮಪದ್ಯತ ।
ಸ ತು ಭಾರಾಭಿಭೂತಾತ್ಮಾ ನ ತಥಾ ಶೀಘ್ರಗೋऽಭವತ್ ।
ಅಥಾಬ್ರವೀದ್ ದ್ರೌಪದೀಂ ಚ ನಕುಲಂ ಚ ಯುಧಿಷ್ಠಿರಃ ॥೨೦॥

ವೈಶಂಪಾಯನ– ಆಗ ಯುಧಿಷ್ಠಿರನು ಅವನಿಗೆ ಹೆಚ್ಚು ಭಾರವನ್ನು ಕೊಡುವವನಾದನು. ಇದಕ್ಕಿದ್ದಂತೆಯೇ ಹೆಚ್ಚು ಭಾರವನ್ನು ಅನುಭವಿಸಿದ ಆ ರಾಕ್ಷಸನಿಗೆ ಶೀಘ್ರವಾಗಿ ಹೋಗಲು ಸಾಧ್ಯವಾಗಲಿಲ್ಲ. ಆಗ ಯುಧಿಷ್ಠಿರನು ನಕುಲನನ್ನು ಮತ್ತು ದ್ರೌಪದಿಯನ್ನು ಕುರಿತು ಹೇಳಿದನು.

ಮಾ ಭೈಷ್ಟ ರಾಕ್ಷಸಾನ್‌ಮೂಢಾದ್ ಗತಿರಸ್ಯ ಮಯಾ ಹೃತಾ ॥೨೧॥
ನಾತಿದೂರೇ ಮಹಾಬಾಹುರ್ಭವಿತಾ ಪವನಾತ್ಮಜಃ ।
ಅಸ್ಮಿನ್ ಮುಹೂರ್ತೇ ಸಂಪ್ರಾಪ್ತೇ ನ ಭವಿಷ್ಯತಿ ರಾಕ್ಷಸಃ ॥೨೨॥

ಈ ಮೂಢರಾಕ್ಷಸನಿಗೆ ಹೆದರಬೇಡಿ. ನಾನು ಅವನ ಗಮನವನ್ನು ತಡೆದಿದ್ದೇನೆ. ಪವನಾತ್ಮಜನಾದ ಮಹಾಬಾಹುವಾದ ಭೀಮಸೇನನು ಇಲ್ಲಿಗೆ ಹತ್ತಿರದಲ್ಲಿಯೇ ಇರುವನು. ಈ ಮುಹೂರ್ತದಲ್ಲಿ ಭೀಮಸೇನನು ಪ್ರಾಪ್ತನಾದರೆ ರಾಕ್ಷಸನು ಜೀವಿಸಿರುವುದಿಲ್ಲ.

ಸಹದೇವಸ್ತು ತಂ ದೃಷ್ಟ್ವಾ ರಾಕ್ಷಸಂ ಮೂಢಚೇತಸ(ನ)ಮ್ ।
ಉವಾಚ ವಚನಂ ರಾಜನ್ ಕುಂತೀಪುತ್ರಂ ಯುಧಿಷ್ಠಿರಮ್ ॥೨೩॥

ಎಲೈ ರಾಜನೇ, ಸಹದೇವನಾದರೂ ಆ ಮೂಢಚೇತನನಾದ ರಾಕ್ಷಸನನ್ನು ನೋಡಿ ಕುಂತೀಪುತ್ರನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದನು.

ರಾಜನ್ ಕಿನ್ನಾಮ ಸತ್ಕೃತ್ಯಂ ಕ್ಷತ್ರಿಯಸ್ಯಾನೃತೋऽಧಿಕಮ್ ।
ಯದ್ ಯುದ್ಧೇऽಭಿಮುಖಃ ಪ್ರಾಣಾಂಸ್ತ್ಯಜೇಚ್ಛತ್ರುಂ ಜಯೇತ ವಾ ॥

ರಾಜನೇ, ಕ್ಷತ್ರಿಯನಾದವನಿಗೆ ಯುದ್ಧದಲ್ಲಿ ಶತ್ರುವಿಗೆ ಅಭಿಮುಖವಾಗಿ ಪ್ರಾಣವನ್ನು ಬಿಡುವುದು ಅಥವಾ ಶತ್ರುವನ್ನು ಜಯಿಸುವುದನ್ನು ಬಿಟ್ಟು ಆದಕ್ಕಿಂತ ದೊಡ್ಡದಾದ ಸತ್ಕಾರವು ಯಾವುದಿದೆ?

ಏಷ ಚಾಸ್ಮಾನ್ ವಯಂ ಚೈನಂ ಯುದ್ಧ್ಯಮಾನಾಃ ಪರಂತಪ ।
ಸೂದಯೇಮ ಮಹಾಬಾಹೋ ದೇಶಕಾಲೋ ಹ್ಯಯಂ ನೃಪ ॥೨೫॥

ಎಲೈ ಪರಂತಪನಾದ ರಾಜನೇ, ನಾವು ಆವನ ಜೊತೆಯಲ್ಲಿ ಮತ್ತು ಆವನು ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಸಂಹರಿಸೋಣ. ಮಹಾಬಾಹುವೇ, ಅದಕ್ಕೆ ಸೂಕ್ತವಾದ ದೇಶಕಾಲಗಳು ಈಗ ಬಂದೊದಗಿವೆ.

ಕ್ಷತ್ರಧರ್ಮಸ್ಯ ಸಂಪ್ರಾಪ್ತಃ ಕಾಲಃ ಸತ್ಯಪರಾಕ್ರಮ ।
ಜಯಂತೋ ಹನ್ಯಮಾನಾ ವಾ ಪ್ರಾಪ್ನುಮಾರ್ಹಾಮ ಸದ್ಗತಿಮ್ ॥೨೬॥

ಇದರಂತೆಯೇ ವ್ಯರ್ಥವಾದ ಆಚಾರವುಳ್ಳವನ್ನಾಗಿ, ವ್ಯರ್ಥವಾದ ವಯಸ್ಸುಳ್ಳವನಾಗಿ, ವ್ಯರ್ಥವಾದ ಬುದ್ಧಿಯುಳ್ಳ ನೀನು, ವ್ಯರ್ಥವಾದ ಮರಣಕ್ಕೆ ಯೋಗ್ಯನಾಗಿದ್ದೀಯೆ. ಈ ದಿನ ನೀನು ವ್ಯರ್ಥವಾಗಿ ಜೀವಿಸುವುದಿಲ್ಲ.

ಅಥ ಚೇದ್ ದುಷ್ಪಬುದ್ಧಿಸ್ತ್ವಂ ಸರ್ವೈರ್ಧರ್ಮೈರ್ವಿವರ್ಜಿತಃ ।
ಪ್ರದಾಯ ಶಸ್ತ್ರಾಣ್ಯಸ್ಮಾಕಂ ಯುದ್ಧೇನ ದ್ರೌಪದೀಂ ಹರ ॥೧೭॥

ಅಥವಾ ದುಷ್ಪಬುದ್ಧಿಯುಳ್ಳ ನೀನು ಎಲ್ಲ ಧರ್ಮಗಳನ್ನೂ ತ್ಯಜಿಸಿದ್ದರೆ ನಮ್ಮ ಶಸ್ತ್ರಗಳನ್ನು ನಮಗೆ ಕೊಟ್ಟು ಯುದ್ಧವನ್ನು ಮಾಡಿ ದ್ರೌಪದಿಯನ್ನು ಕರೆದುಕೊಂಡು ಹೋಗು.

ಅಥ ಚೇತ್ ತ್ವಮವಿಜ್ಞಾನಾದಿದಂ ಕರ್ಮ ಕರಿಷ್ಯಸಿ ।
ಅಧರ್ಮಂ ಚಾಪ್ಯಕೀರ್ತಿಂ ಚ ಲೋಕೇ ಪ್ರಾಪ್ಸ್ಯಸಿ ಕೇವಲಮ್ ॥೧೮॥

ಅಥವಾ ನೀನು ಅಜ್ಞಾನದಿಂದ ಈ ಕರ್ಮವನ್ನು ಮಾಡುವುದಾದರೆ ಲೋಕದಲ್ಲಿ ನೀನು ಕೇವಲ ಅಧರ್ಮವನ್ನೂ, ಅಪಕೀರ್ತಿಯನ್ನೂ ಸಂಪಾದಿಸುವಿ.

ಏತಾಮದ್ಯ ಪರಾಮೃಶ್ಯ ಸ್ತ್ರಿಯಂ ರಾಕ್ಷಸ ಮಾನುಷೀಮ್ ।
ವಿಷಮೇತತ್ ಸಮಾಲೋಡ್ಯ ಕುಂಭೇನ ಪ್ರಾಪಿತಂ ತ್ವಯಾ ॥೧೯॥

ಎಲೈ ರಾಕ್ಷಸನೇ, ಈ ಮನುಷ್ಯವನಿತೆಯನ್ನು ಇಂದು ನೀನು ಮುಟ್ಟಿ ಒಂದು ಕೊಡದಲ್ಲಿ ವಿಷವನ್ನು ಕದರಿ ಕುಡಿದಿದ್ದೀಯೆ.

ವೈಶಂಪಾಯನಃ

ತತೋ ಯುಧಿಷ್ಠಿರಸ್ತಸ್ಯ ಭಾರಿಕಃ ಸಮಪದ್ಯತ ।
ಸ ತು ಭಾರಾಭಿಭೂತಾತ್ಮಾ ನ ತಥಾ ಶೀಘ್ರಗೋಽಭವತ್ ।
ಅಥಾಬ್ರವೀದ್ ದ್ರೌಪದೀಂ ಚ ನಕುಲಂ ಚ ಯುಧಿಷ್ಠಿರಃ ॥೨೦॥

ವೈಶಂಪಾಯನ– ಆಗ ಯುಧಿಷ್ಠಿರನು ಅವನಿಗೆ ಹೆಚ್ಚು ಭಾರವನ್ನು ಕೊಡುವವನಾದನು. ಇದಕ್ಕಿದ್ದಂತೆಯೇ ಹೆಚ್ಚು ಭಾರವನ್ನು ಅನುಭವಿಸಿದ ಆ ರಾಕ್ಷಸನಿಗೆ ಶೀಘ್ರವಾಗಿ ಹೋಗಲು ಸಾಧ್ಯವಾಗಲಿಲ್ಲ. ಆಗ ಯುಧಿಷ್ಠಿರನು ನಕುಲನನ್ನು ಮತ್ತು ದ್ರೌಪದಿಯನ್ನು ಕುರಿತು ಹೇಳಿದನು.

ಮಾ ಭೈಷ್ಟ ರಾಕ್ಷಸಾನ್‌ಮೂಢಾದ್ ಗತಿರಸ್ಯ ಮಯಾ ಹೃತಾ ॥೨೧॥
ನಾತಿದೂರೇ ಮಹಾಬಾಹುರ್ಭವಿತಾ ಪವನಾತ್ಮಜಃ ।
ಅಸ್ಮಿನ್ ಮುಹೂರ್ತೇ ಸಂಪ್ರಾಪ್ತೇ ನ ಭವಿಷ್ಯತಿ ರಾಕ್ಷಸಃ ॥೨೨॥

ಈ ಮೂಢರಾಕ್ಷಸನಿಗೆ ಹೆದರಬೇಡಿ. ನಾನು ಅವನ ಗಮನವನ್ನು ತಡೆದಿದ್ದೇನೆ. ಪವನಾತ್ಮಜನಾದ ಮಹಾಬಾಹುವಾದ ಭೀಮಸೇನನು ಇಲ್ಲಿಗೆ ಹತ್ತಿರದಲ್ಲಿಯೇ ಇರುವನು. ಈ ಮುಹೂರ್ತದಲ್ಲಿ ಭೀಮಸೇನನು ಪ್ರಾಪ್ತನಾದರೆ ರಾಕ್ಷಸನು ಜೀವಿಸಿರುವುದಿಲ್ಲ.

ಸಹದೇವಸ್ತು ತಂ ದೃಷ್ಟ್ವಾ ರಾಕ್ಷಸಂ ಮೂಢಚೇತಸ(ನ)ಮ್ ।
ಉವಾಚ ವಚನಂ ರಾಜನ್ ಕುಂತೀಪುತ್ರಂ ಯುಧಿಷ್ಠಿರಮ್ ॥೨೩॥

ಎಲೈ ರಾಜನೇ, ಸಹದೇವನಾದರೂ ಆ ಮೂಢಚೇತನನಾದ ರಾಕ್ಷಸನನ್ನು ನೋಡಿ ಕುಂತೀಪುತ್ರನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದನು.

ರಾಜನ್ ಕಿನ್ನಾಮ ಸತ್ಯಂ ಕ್ಷತ್ರಿಯಸ್ಯಾಸ್ಯತೋಽಧಿಕಮ್ ।
ಯದ್ ಯುದ್ಧೇಽಭಿಮುಖಃ ಪ್ರಾಣಾಂಸ್ಯಜೇಚ್ಛತ್ರುಂ ಜಯೇತ ವಾ ॥

ರಾಜನೇ, ಕ್ಷತ್ರಿಯನಾದವನಿಗೆ ಯುದ್ಧದಲ್ಲಿ ಶತ್ರುವಿಗೆ ಅಭಿಮುಖವಾಗಿ ಪ್ರಾಣವನ್ನು ಬಿಡುವುದು ಅಥವಾ ಶತ್ರುವನ್ನು ಜಯಿಸುವುದನ್ನು ಬಿಟ್ಟು ಅದಕ್ಕಿಂತ ದೊಡ್ಡದಾದ ಸತ್ಕಾರವು ಯಾವುದಿದೆ?

ಏಷ ಚಾಸ್ಮಾನ್ ವಯಂ ಚೈನಂ ಯುದ್ಧ್ಯಮಾನಾಃ ಪರಂತಪ ।
ಸೂದಯೇಮ ಮಹಾಬಾಹೋ ದೇಶಕಾಲೋ ಹ್ಯಯಂ ನೃಪ ॥೨೫॥

ಎಲೈ ಪರಂತಪನಾದ ರಾಜನೇ, ನಾವು ಅವನ ಜೊತೆಯಲ್ಲಿ ಮತ್ತು ಅವನು ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಸಂಹರಿಸೋಣ. ಮಹಾಬಾಹುವೇ, ಅದಕ್ಕೆ ಸೂಕ್ತವಾದ ದೇಶಕಾಲಗಳು ಈಗ ಬಂದೊದಗಿವೆ.

ಕ್ಷತ್ರಧರ್ಮಸ್ಯ ಸಂಪ್ರಾಪ್ತಃ ಕಾಲಃ ಸತ್ಯಪರಾಕ್ರಮ ।
ಜಯಂತೋ ಹನ್ಯಮಾನಾ ವಾ ಪ್ರಾಪ್ನುಮರ್ಹಾಮ ಸದ್ಗತಿಮ್ ॥೨೬॥

ಎಲೈ ಸತ್ಯಪರಾಕ್ರಮನೇ, ಕ್ಷತ್ರಿಯ ಧರ್ಮವನ್ನು ಅನುಷ್ಠಾನ ಮಾಡುವ ಕಾಲವು ಬಂದೊದಗಿದೆ. ನಾವು ಅವನನ್ನು ಜಯಿಸಿ ಅಥವಾ ಅವನಿಂದ ಕೊಲ್ಲಲ್ಪಟ್ಟು ಸದ್ಗತಿಯನ್ನು ಪಡೆಯುವುದು ಉಚಿತವಾಗಿದೆ.

ರಾಕ್ಷಸೇ ಜೀವಮಾನೇऽದ್ಯ ರವಿರಸ್ತಮಿಯಾದ್ ಯದಿ ।
ನಾಹಂ ಬ್ರೂಯಾಂ ಪುನರ್ಜಾತು ಕ್ಷತ್ರಿಯೋऽಸ್ಮೀತಿ ಭಾರತ ॥೨೬॥

ಎಲೈ ಭಾರತನೇ, ಈ ರಾಕ್ಷಸನು ಬದುಕಿರುವಂತೆಯೇ ಈ ದಿನ ರವಿಯು ಅಸ್ತಂಗತವಾಗುವುದಾದರೆ ಇನ್ನೆಂದೂ ನಾನು ಕ್ಷತ್ರಿಯನೆಂದು ಹೇಳಿಕೊಳ್ಳುವುದಿಲ್ಲ.

ಭೋ ಭೋ ರಾಕ್ಷಸ ತಿಷ್ಠಸ್ವ ಸಹದೇವೋऽಸ್ಮಿ ಪಾಂಡವಃ ।
ಹತ್ವಾ ವಾ ಮಾಂ ನಯಸ್ವೈನಾಂ ಹತೋ ವಾऽದ್ಯೇಹ ಸ್ವಪ್ಸ್ಯಸಿ ॥೨೮॥

ಎಲೈ ರಾಕ್ಷಸನೇ, ನಿಲ್ಲು. ನಾನು ಪಾಂಡುಪುತ್ರನಾದ ಸಹದೇವನಾಗಿದ್ದೇನೆ. ನನ್ನನ್ನು ಕೊಂದು ದ್ರೌಪದಿಯನ್ನು ಕರೆದುಕೊಂಡು ಹೋಗು. ಅಥವಾ ನನ್ನಿಂದ ಹತನಾಗಿ ಇಲ್ಲಿ ಮಲಗು.

ವೈಶಂಪಾಯನಃ

ತಥಾ ಬ್ರುವತಿ ಮಾದ್ರೇಯೇ ಭೀಮಸೇನೋ ಯದೃಚ್ಛಯಾ ।
ಪ್ರತ್ಯದೃಶ್ಯದ್ ಗದಾಹಸ್ತಃ ಸವಜ್ರ ಇವ ವಾಸವಃ ॥೨೯॥

ವೈಶಂಪಾಯನ– ಮಾದ್ರಿಯ ಮಗನಾದ ಸಹದೇವನು ಹಾಗೆ ಮಾತನಾಡುತ್ತಿರಲು ಆಕಸ್ಮಿಕವಾಗಿ ಭೀಮಸೇನನು ವಜ್ರಾಯುಧವನ್ನು ಹಿಡಿದ ಇಂದ್ರನಂತೆ ಗದಾಪಾಣಿಯಾಗಿ ಕಣ್ಣಿಗೆ ಬಿದ್ದನು.

ಸೋऽಪಶ್ಯದ್ ಭ್ರಾತರೌ ತತ್ರ ದ್ರೌಪದೀಂ ಚ ಯಶಸ್ವಿನೀಮ್ ।
ಕ್ಷಿತಿಸ್ಥಂ ಸಹದೇವಂ ಚ ಕ್ಷಿಪಂತಂ ರಾಕ್ಷಸಂ ತದಾ ॥೩೦॥

ಅವನು ತನ್ನ ಸಹೋದರರನ್ನೂ, ಯಶಸ್ವಿನಿಯಾದ ದ್ರೌಪದಿಯನ್ನೂ ಮತ್ತು ಭೂಮಿಯಲ್ಲಿನಿಂತು ರಾಕ್ಷಸನನ್ನು ನಿಂದಿಸುತ್ತಿದ್ದ ಸಹದೇವನನ್ನೂ ನೋಡಿದನು.

ಮಾರ್ಗಾಚ್ಚ ರಾಕ್ಷಸಂ ಮೂಢಂ ಕಾಲೋಪಹತಚೇತಸಮ್ ।
ಭ್ರಮಂತಂ ತತ್ರತತ್ರೈವ ದೈವೇನ ವಿನಿವಾರಿತಮ್ ॥೩೧॥

ಕಾಲೋಪಹತಚೇತನವುಳ್ಳವನಾಗಿ ದೇವತೆಗಳಿಂದ ತಡೆಯಲ್ಪಟ್ಟು, ಮಾರ್ಗವನ್ನು ತಿಳಿಯದೆ ಅಲ್ಲಲ್ಲಿಯೇ ತಿರುಗಾಡುತ್ತಿದ್ದ ರಾಕ್ಷಸನ ಬಳಿಗೆ ಹೋದನು.

ಭ್ರಾತೄಂಸ್ತಾನ್ ಹ್ರಿಯತೋ ದೃಷ್ಟ್ವಾ ದ್ರೌಪದೀಂ ಚ ಮಹಾಬಲಃ ।
ಕ್ರೋಧಮಾಹಾರಯದ್ ಭೀಮೋ ರಾಕ್ಷಸಂ ಚೇದಮಬ್ರವೀತ್ ॥೩೨॥

ಮಹಾಬಲನಾದ ಭೀಮಸೇನನು ತನ್ನ ಮೂವರು ಸಹೋದರರು ಮತ್ತು ದ್ರೌಪದಿಯು ಅವನಿಂದ ಅಪಹರಿಸಲ್ಪಡುತ್ತಿರುವುದನ್ನು ನೋಡಿ ಕ್ರೋಧವನ್ನು ತಂದುಕೊಂಡು ರಾಕ್ಷಸನನ್ನು ಕುರಿತು ಹೀಗೆ ಹೇಳಿದನು.

ವಿಜ್ಞಾತೋಽಸಿ ಮಯಾ ಪೂರ್ವಂ ಪಾಪ ಶಸ್ತ್ರಪರೀಕ್ಷಕೇ
ಆಸ್ಥಾನಂ ತ್ವಯಿ ಮೇ ನಾಸ್ತಿ ಯತೋಽಸಿ ನ ಹತಸ್ತದಾ ॥೩೩॥

ಎಲೈ ಪಾಪಿಯೇ, ನೀನು ಹಿಂದೆ ನಮ್ಮ ಶಸ್ತ್ರವನ್ನು ಪರೀಕ್ಷೆ ಮಾಡುವ ಸಮಯದಲ್ಲಿಯೇ ನಿನ್ನ ಸ್ವರೂಪವನ್ನು ನಾನು ತಿಳಿದಿದ್ದೆ. ನಿನ್ನಲ್ಲಿ ನನಗೆ ವಿಶ್ವಾಸವಿಲ್ಲ. ಆದರೂ ಆ ಕಾರಣದಿಂದ ನಿನ್ನನ್ನು ನಾನು ಕೊಲ್ಲಲಿಲ್ಲ

ಬ್ರಹ್ಮರೂಪಪ್ರತಿಚ್ಛನ್ನೋ ನ ನೋ ವದಸಿ ಚಾಪ್ರಿಯಮ್ ।
ಪ್ರಿಯೇಷು ರಮಮಾಣಂ ತ್ವಾಂ ನ ಚೈವಾಪ್ರಿಯಕಾರಿಣಮ್ ॥೩೪॥

ಏಕೆಂದರೆ ನೀನು ಬ್ರಾಹ್ಮಣರೂಪವನ್ನು ಧರಿಸಿ ನಮಗೆ ಯಾವ ಅಪ್ರಿಯವನ್ನೂ ಮಾತನಾಡುತ್ತಿರಲಿಲ್ಲ. ನಮಗೆ ಪ್ರಿಯವಾದುದರಲ್ಲಿ ನೀನು ಸಂತೋಷವನ್ನು ಪಡುತ್ತಿದ್ದೆ ಮತ್ತು ನಮಗೆ ಯಾವ ಅಪ್ರಿಯವನ್ನೂ ಮಾಡುತ್ತಿರಲಿಲ್ಲ.

ಅತಿಥಿಂ ಬ್ರಹ್ಮರೂಪಂ ಚ ಕಥಂ ಹನ್ಯಾಮನಾಗಸಮ್ ।
ರಾಕ್ಷಸಂ ಜಾನಮಾನೋಽಪಿ ಯೋ ಹನ್ಯಾನ್ನರಕಂ ವ್ರಜೇತ್ ।
ಅಪಕ್ವಸ್ಯ ಚ ಕಾಲೇನ ವಧಸ್ತವ ನ ವಿದ್ಯತೇ ॥೩೫॥

ಎಲೈ ಸತ್ಯಪರಾಕ್ರಮನೇ, ಕ್ಷತ್ರಿಯ ಧರ್ಮವನ್ನು ಅನುಷ್ಠಾನ ಮಾಡುವ ಕಾಲವು ಬಂದೊದಗಿದೆ. ನಾವು ಅವನನ್ನು ಜಯಿಸಿ ಅಥವಾ ಅವನಿಂದ ಕೊಲ್ಲಲ್ಪಟ್ಟು ಸದ್ಗತಿಯನ್ನು ಪಡೆಯುವುದು ಉಚಿತವಾಗಿದೆ.

ರಾಕ್ಷಸೇ ಜೀವಮಾನೇऽದ್ಯ ರವಿರಸ್ತಮಿಯಾದ್ ಯದಿ ।
ನಾಹಂ ಬ್ರೂಯಾಂ ಪುನರ್ಜಾತು ಕ್ಷತ್ರಿಯೋऽಸ್ಮೀತಿ ಭಾರತ ॥೨೭॥

ಎಲೈ ಭಾರತನೇ, ಈ ರಾಕ್ಷಸನು ಬದುಕಿರುವಂತೆಯೇ ಈ ದಿನ ರವಿಯು ಅಸ್ತಂಗತವಾಗುವುದಾದರೆ ಇನ್ನೆಂದೂ ನಾನು ಕ್ಷತ್ರಿಯನೆಂದು ಹೇಳಿಕೊಳ್ಳುವುದಿಲ್ಲ.

ಭೋ ಭೋ ರಾಕ್ಷಸ ತಿಷ್ಠಸ್ವ ಸಹದೇವೋऽಸ್ಮಿ ಪಾಂಡವಃ ।
ಹತ್ವಾ ವಾ ಮಾಂ ನಯಸ್ವೈನಾಂ ಹತೋ ವಾऽದ್ಯೇಹ ಸ್ವಪ್ಸ್ಯಸಿ ॥೨೮॥

ಎಲೈ ರಾಕ್ಷಸನೇ, ನಿಲ್ಲು. ನಾನು ಪಾಂಡುಪುತ್ರನಾದ ಸಹದೇವನಾಗಿದ್ದೇನೆ. ನನ್ನನ್ನು ಕೊಂದು ದ್ರೌಪದಿಯನ್ನು ಕರೆದುಕೊಂಡು ಹೋಗು. ಅಥವಾ ನನ್ನಿಂದ ಹತನಾಗಿ ಇಲ್ಲಿ ಮಲಗು.

ವೈಶಂಪಾಯನಃ

ತಥಾ ಬ್ರುವತಿ ಮಾದ್ರೇಯೇ ಭೀಮಸೇನೋ ಯದೃಚ್ಛಯಾ ।
ಪ್ರತ್ಯದೃಶ್ಯದ್ ಗದಾಹಸ್ತಃ ಸವಜ್ರ ಇವ ವಾಸವಃ ॥೨೯॥

ವೈಶಂಪಾಯನ– ಮಾದ್ರಿಯ ಮಗನಾದ ಸಹದೇವನು ಹಾಗೆ ಮಾತನಾಡುತ್ತಿರಲು ಆಕಸ್ಮಿಕವಾಗಿ ಭೀಮಸೇನನು ವಜ್ರಾಯುಧವನ್ನು ಹಿಡಿದ ಇಂದ್ರನಂತೆ ಗದಾಪಾಣಿಯಾಗಿ ಕಣ್ಣಿಗೆ ಬಿದ್ದನು.

ಸೋऽಪಶ್ಯದ್ ಭ್ರಾತರೌ ತತ್ರ ದ್ರೌಪದೀಂ ಚ ಯಶಸ್ವಿನೀಮ್ ।
ಕ್ಷಿತಿಸ್ಥಂ ಸಹದೇವಂ ಚ ಕ್ಷಿಪಂತಂ ರಾಕ್ಷಸಂ ತದಾ ॥೩೦॥

ಅವನು ತನ್ನ ಸಹೋದರರನ್ನೂ, ಯಶಸ್ವಿನಿಯಾದ ದ್ರೌಪದಿಯನ್ನೂ ಮತ್ತು ಭೂಮಿಯಲ್ಲಿ ನಿಂತು ರಾಕ್ಷಸನನ್ನು ನಿಂದಿಸುತ್ತಿದ್ದ ಸಹದೇವನನ್ನೂ ನೋಡಿದನು.

ಮಾರ್ಗಾಚ್ಚ ರಾಕ್ಷಸಂ ಮೂಢಂ ಕಾಲೋಪಹತಚೇತಸಮ್ ।
ಭ್ರಮಂತಂ ತತ್ರತತ್ರೈವ ದೈವೇನ ವಿನಿವಾರಿತಮ್ ॥೩೧॥

ಕಾಲೋಪಹತಚೇತನವುಳ್ಳವನಾಗಿ ದೇವತೆಗಳಿಂದ ತಡೆಯಲ್ಪಟ್ಟು, ಮಾರ್ಗವನ್ನು ತಿಳಿಯದೆ ಅಲ್ಲಲ್ಲಿಯೇ ತಿರುಗಾಡುತ್ತಿದ್ದ ರಾಕ್ಷಸನ ಬಳಿಗೆ ಹೋದನು.

ಭ್ರಾತೄಂಸ್ತಾನ್ ಹ್ರಿಯತೋ ದೃಷ್ಟ್ವಾ ದ್ರೌಪದೀಂ ಚ ಮಹಾಬಲಃ ।
ಕ್ರೋಧಮಾಹಾರಯದ್ ಭೀಮೋ ರಾಕ್ಷಸಂ ಚೇದಮಬ್ರವೀತ್ ॥೩೨॥

ಮಹಾಬಲನಾದ ಭೀಮಸೇನನು ತನ್ನ ಮೂವರು ಸಹೋದರರು ಮತ್ತು ದ್ರೌಪದಿಯು ಅವನಿಂದ ಅಪಹರಿಸಲ್ಪಡುತ್ತಿರುವುದನ್ನು ನೋಡಿ ಕ್ರೋಧವನ್ನು ತಂದುಕೊಂಡು ರಾಕ್ಷಸನನ್ನು ಕುರಿತು ಹೀಗೆ ಹೇಳಿದನು.

ವಿಜ್ಞಾತೋಽಸಿ ಮಯಾ ಪೂರ್ವಂ ಪಾಪ ಶಸ್ತ್ರಪರೀಕ್ಷಣೇ
ಆಸ್ಥಾನಂ ತ್ವಯಿ ಮೇ ನಾಸ್ತಿ ಯತೋಽಸಿ ನ ಹತಸ್ತದಾ ॥೩೩॥

ಎಲೈ ಪಾಪಿಯೇ, ನೀನು ಹಿಂದೆ ನಮ್ಮ ಶಸ್ತ್ರವನ್ನು ಪರೀಕ್ಷೆ ಮಾಡುವ ಸಮಯದಲ್ಲಿಯೇ ನಿನ್ನ ಸ್ವರೂಪವನ್ನು ನಾನು ತಿಳಿದಿದ್ದೆ. ನಿನ್ನಲ್ಲಿ ನನಗೆ ವಿಶ್ವಾಸವಿಲ್ಲ. ಆದರೂ ಆ ಕಾರಣದಿಂದ ನಿನ್ನನ್ನು ನಾನು ಕೊಲ್ಲಲಿಲ್ಲ

ಬ್ರಹ್ಮರೂಪಪ್ರತಿಚ್ಛನ್ನೋ ನ ನೋ ವದಸಿ ಚಾಪ್ರಿಯಮ್ ।
ಪ್ರಿಯೇಷು ರಮಮಾಣಂ ತ್ವಾಂ ನ ಚ್ಛಿಂದಾಪ್ರಿಯಕಾರಿಣಮ್ ॥೩೪॥

ಏಕೆಂದರೆ ನೀನು ಬ್ರಾಹ್ಮಣರೂಪವನ್ನು ಧರಿಸಿ ನಮಗೆ ಯಾವ ಅಪ್ರಿಯವನ್ನೂ ಮಾತನಾಡುತ್ತಿರಲಿಲ್ಲ. ನಮಗೆ ಪ್ರಿಯವಾದುದರಲ್ಲಿ ನೀನು ಸಂತೋಷವನ್ನು ಪಡುತ್ತಿದ್ದೆ ಮತ್ತು ನಮಗೆ ಯಾವ ಅಪ್ರಿಯವನ್ನೂ ಮಾಡುತ್ತಿರಲಿಲ್ಲ.

ಅತಿಥಿಂ ಬ್ರಹ್ಮರೂಪಂ ಚ ಕಥಂ ಹನ್ಯಾಮನಾಗಸಮ್ ।
ರಾಕ್ಷಸಂ ಜಾನಮಾನೋಽಪಿ ಯೋ ಹನ್ಯಾನ್ನರಕಂ ವ್ರಜೇತ್ ।
ಅಪಕ್ವಸ್ಯ ಚ ಕಾಲೇನ ವಧಸ್ತವ ನ ವಿದ್ಯತೇ ॥೩೫॥

ನೀನು ರಾಕ್ಷಸನೆಂದು ತಿಳಿದಿದ್ದರೂ, ನೀನು ಅತಿಥಿಯಾಗಿಯೂ ಬ್ರಾಹ್ಮಣ ರೂಪವನ್ನು ಧರಿಸಿದವನಾಗಿಯೂ ಆಗಿ, ನಮಗೆ ಯಾವ ಅಪ್ರಿಯವನ್ನೂ ಮಾಡದೇ, ಯಾವ ಅಪರಾಧವನ್ನೂ ಮಾಡದಿದ್ದಾಗ ನಾನು ಹೇಗೆ ಕೊಲ್ಲಲಿ? ಕಾಲವು ಪಕ್ವವಾಗಿರಲಿಲ್ಲವಾದ್ದರಿಂದ ನಿನ್ನ ವಧೆಯು ಪ್ರಾಪ್ತವಾಗಿರಲಿಲ್ಲ.

ಬ್ರಹ್ಮರೂಪೇಣ ವಿಹಿತಂ ನೈವ ವಾಣ್ಯಾಮನಾಗಸಮ್ ।
ನೂನಮದ್ಯಾಪಿ ಸಂಪಕ್ವೋ ಯಥಾ ತೇ ಮತಿರೀದೃಶೀ ॥೩೬॥

ದತ್ತಾ ಕೃಷ್ಣಾಪಹರಣೇ ಕಾಲೇನಾದ್ಭುತಕರ್ಮಣಾ ।
ಸೋಽಪಿ ಕಾಲಂ ಸಮಾಸಾದ್ಯ ತದಾದ್ಯ ನ ಭವಿಷ್ಯತಿ ॥೩೭॥

ಬ್ರಾಹ್ಮಣರೂಪವನ್ನು ಧರಿಸಿ ಮಾತಿನಿಂದ ಅಪರಾಧವನ್ನು ಮಾಡದಿದ್ದ ನಿನಗೆ ಈ ದಿನ ಚೆನ್ನಾಗಿ ಪಕ್ವವಾದ ಕಾಲವು ಪ್ರಾಪ್ತವಾಗಿದೆ. ಏಕೆಂದರೆ ಅದ್ಭುತ ಪರಾಕ್ರಮವುಳ್ಳ ಕಾಲವು ನಿನಗೆ ದ್ರೌಪದಿಯನ್ನು ಅಪಹರಿಸಬೇಕೆಂಬ ಇಂತಹ ಬುದ್ಧಿಯನ್ನು ನೀಡಿದೆ. ಅಂತಹ ಪಕ್ವವಾದ ಕಾಲವು ಒದಗಿರುವಾಗ ನೀನು ಈ ದಿನ ಬದುಕುವುದಿಲ್ಲ.

ಬಡಿಶೋಽಯಂ ತ್ವಯಾ ಗ್ರಸ್ತಃ ಕಾಲಸೂತ್ರೇಣ ಲಂಬಿತಃ ।
ಮತ್ಸ್ಯೋಽಂಭಸೀವ ಸ್ಯೂತಾಸ್ಯಃ ಕಥಮದ್ಯ ಭವಿಷ್ಯಸಿ ॥೩೮॥

ನೂಲಿದಿಂದ ಇಳಿಬಿದ್ದಿರುವ ಗಾಣವನ್ನು ನುಂಗಿದ ಮೀನು ನೀರಿನಲ್ಲಿ ಹೇಗೆ ಬದುಕುವುದಿಲ್ಲವೋ ಅದರಂತೆ ಕಾಲದಿಂದ ದುರ್ಬುದ್ಧಿಯನ್ನು ಕೊಡಲ್ಪಟ್ಟಿರುವ ನೀನು ಈ ದಿನ ಬದುಕುವುದಿಲ್ಲ.

ಯಂ ಚಾಸಿ ಪ್ರಸ್ಥಿತೋ ದೇಶಂ ಮನಃಪೂರ್ವಂ ಗತಂ ಚ ತೇ ।
ನ ತಂ ಗಂತಾಸಿ ಗಂತಾಸಿ ಮಾರ್ಗಂ ಬಕಹಿಡಿಂಬಯೋಃ ॥೩೯॥

ನೀನು ಯಾವ ಪ್ರದೇಶಕ್ಕೆ ಹೋಗಬೇಕೆಂದು ಮನಸ್ಸಿನಲ್ಲಿ ಮೊದಲು ಬಯಸಿದ್ದೆಯೋ ಅಲ್ಲಿಗೆ ಹೋಗುವುದಿಲ್ಲ. ಅದರ ಬದಲು ಬಕಹಿಡಿಂಬರು ಹೋದ ಮಾರ್ಗಕ್ಕೆ ಹೋಗುವಿ.

ವೈಶಂಪಾಯನಃ

ಏವಮುಕ್ತಸ್ತು ಭೀಮೇನ ರಾಕ್ಷಸಃ ಕಾಲಚೋದಿತಃ ।
ಭೀತ ಉತ್ಸೃಜ್ಯ ತಾನ್ ಸರ್ವಾನ್ ಯುದ್ಧಾಯ ಸಮುಪಸ್ಥಿತಃ ।
ಅಬ್ರವೀಚ್ಚ ಪುನರ್ಭೀಮಂ ರೋಷಾತ್ ಪ್ರಸ್ಫುರಿತಾಧರಃ ॥೪೦॥

ವೈಶಂಪಾಯನ– ಭೀಮನಿಂದ ಹೀಗೆ ಹೇಳಲ್ಪಟ್ಟ ಆ ಕಾಲಚೋದಿತನಾದ ರಾಕ್ಷಸನು ಭೀತನಾಗಿ ಅವರೆಲ್ಲರನ್ನೂ ಬಿಟ್ಟು ಯುದ್ಧಕ್ಕೆ ಸನ್ನದ್ಧನಾದನು ಮತ್ತು ರೋಷದಿಂದ ತುಟಿಗಳು ಅದುರುತ್ತಾ ಭೀಮಸೇನನನ್ನು ಕುರಿತು ಕೋಪದಿಂದ ಹೀಗೆ ಮಾತನಾಡಿದನು.

ನ ಮೇ ಮೂಢಾ ದಿಶಃ ಪಾಪ ತ್ವದರ್ಥಂ ಮೇ ವಿಲಂಬಿತಮ್ ॥೪೧॥

ಶ್ರುತಾ ಮೇ ರಾಕ್ಷಸಾ ಯೇ ಯೇ ತ್ವಯಾ ವಿನಿಹತಾ ರಣೇ ।
ತೇಷಾಮದ್ಯ ಕರಿಷ್ಯಾಮಿ ತವಾಸ್ರೇಣೋದಕಕ್ರಿಯಾಮ್ ॥೪೨॥

ಎಲೈ ಪಾಪಿಯೇ, ನಾನು ದಿಕ್ಕುಗಳನ್ನೇನೂ ತಪ್ಪಿಸಿಕೊಂಡಿಲ್ಲ. ನಿನ್ನ ಸಲುವಾಗಿ ನಾನು ವಿಳಂಬವನ್ನು ಮಾಡಿದೆ. ನೀನು ಯುದ್ಧದಲ್ಲಿ ಯಾವ ಯಾವ ರಾಕ್ಷಸರನ್ನು ಕೊಂದಿದ್ದೀಯೆ ಎಂದು ನಾನು ಕೇಳಿದ್ದೇನೆ. ನಾನು ಅವರೆಲ್ಲರಿಗೆ ಈ ದಿನ ನಿನ್ನ ರಕ್ತದಿಂದ ತರ್ಪಣವನ್ನು ಕೊಡುವೆನು.

ವೈಶಂಪಾಯನಃ

ಏವಮುಕ್ತ್ವಾ ತದಾ ಭೀಮಂ ರಾಕ್ಷಸೋ ಯೋದ್ಧುಮಾಯಯೌ ।
ಸ್ಮಯಮಾನ ಇವ ಕ್ರೋಧಾತ್ ಸಾಕ್ಷಾತ್ ಕಾಲಾಂತಕೋಪಮಃ ॥೪೩॥

ವೈಶಂಪಾಯನ– ಭೀಮಸೇನನನ್ನು ಕುರಿತು ಹೀಗೆ ಹೇಳಿ ಆ ರಾಕ್ಷಸನು ನಗುತ್ತಾ ಕಾಲಾಂತಕ ಯಮನಂತೆ ಕೋಪವನ್ನು ತಂದುಕೊಂಡು ಯುದ್ಧಮಾಡಲು ಮುಂದಾದನು.

ಬ್ರುವನ್ನೈವ ತಿಷ್ಠ ತಿಷ್ಠೇತಿ ಕ್ರೋಧಸಂರಕ್ತಲೋಚನಃ ।
ಬಾಹುಸಂರಂಭಮೇವೇಚ್ಛನ್ನಭಿದುದ್ರಾವ ರಾಕ್ಷಸಮ್ ॥೪೪॥

ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಭೀಮಸೇನನು ನಿಲ್ಲು, ನಿಲ್ಲು ಎಂದು ಹೇಳುತ್ತಾ ಬಾಹುಯುದ್ಧವನ್ನೇ ಬಯಸುವವನಾಗಿ ರಾಕ್ಷಸನ ಕಡೆಗೆ ಓಡಿದನು.

ರಾಕ್ಷಸೋಽಪಿ ತದಾ ಭೀಮಂ ಯುದ್ಧಾರ್ಥಿನಮವಸ್ಥಿತಮ್ ।
ಅಭಿದುದ್ರಾವ ಸಂರಬ್ಧೋ ಬಲಿರ್ವಜ್ರಧರಂ ಯಥಾ ॥೪೫॥

ಮುಹುರ್ಮುಹುರ್ವ್ಯಾದದಾನಃ ಸೃಕ್ಕಿಣೇ ಪರಿಸಂಲಿಹನ್ ।

ಆ ರಾಕ್ಷಸನಾದರೂ ಮತ್ತೆ ಮತ್ತೆ ಆಕಳಿಸುತ್ತಾ ತನ್ನ ಕಟಬಾಯಿಯನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ ಯುದ್ಧದಲ್ಲಿ ಎದುರಿಗೆ ನಿಂತ ಭೀಮಸೇನನ ಕಡೆಗೆ ಬಲಿಯು ಇಂದ್ರನ ಕಡೆಗೆ ಓಡಿಬಂದಂತೆ ಸಿಟ್ಟಿನಿಂದ ಓಡಿಬಂದನು.

ಭೀಮಸೇನೋಽಪ್ಯವಷ್ಟಬ್ಧೋ ನಿಯುದ್ಧಾಯಾಭವತ್ ಸ್ಥಿತಃ ।
ರಾಕ್ಷಸೋಽಪಿ ಚ ವಿಸ್ರಬ್ಧೋ ಬಾಹುಯುದ್ಧಮಕಾಂಕ್ಷತ ॥೪೬॥

ಭೀಮಸೇನನೂ ಸಹ ನಿಂತಲ್ಲಿಯೇ ನಿಂತು ಬಾಹುಯುದ್ಧಕ್ಕೇ ಸಿದ್ಧನಾದನು. ರಾಕ್ಷಸನೂ ಸಹ ತನ್ನ ಮೇಲಿನ ಭರವಸೆಯಿಂದ ಬಾಹುಯುದ್ಧವನ್ನೇ ಬಯಸಿದನು.

ವರ್ತಮಾನೇ ತದಾ ತಾಭ್ಯಾಂ ಬಾಹುಯುದ್ಧೇ ಸಂದಾರುಣೇ ।
ಮಾದ್ರೀಪುತ್ರಾವತಿಕ್ರುದ್ಧಾವುಭಾವಪ್ಯಭ್ಯಧಾವತಾಮ್ ॥೪೭॥

ಅವರಿಬ್ಬರಿಗೂ ಭಯಂಕರವಾದ ಬಾಹುಯುದ್ಧವು ನಡೆಯುತ್ತಿರುವಾಗ ಬಹಳ ಸಿಟ್ಟಿನಿಂದ ಕೂಡಿದ ಮಾದ್ರೀಪುತ್ರರಿಬ್ಬರೂ ಭೀಮಸೇನನ ಕಡೆಗೆ ಓಡಿಬಂದರು.

ನ್ಯವಾರಯತ್ ತೌ ಪ್ರಹಸನ್ ಕುಂತೀಪುತ್ರೋ ವೃಕೋದರಃ ।
ಶಕ್ತೋಽಹಂ ರಾಕ್ಷಸ್ಯೇತಿ ಪ್ರೇಕ್ಷದ್ಧ್ವಮಿತಿ ಚಾಬ್ರವೀತ್ ॥೪೮॥

ಕುಂತೀಪುತ್ರನಾದ ವೃಕೋದರನು ಅವರಿಬ್ಬರನ್ನೂ ನಿವಾರಿಸಿದನು. ಈ ರಾಕ್ಷಸನನ ಜೊತೆಯಲ್ಲಿಯುದ್ಧಮಾಡಲು ನಾನು ಸಮರ್ಥನಾಗಿದ್ದೇನೆ; ನೀವು ಸುಮ್ಮನೆ ನೋಡಿ ಎಂದು ಹೇಳಿದನು.

ಆತ್ಮನಾ ಭ್ರಾತೃಭಿಶ್ಚೈವ ಧರ್ಮೇಣ ಸುಕೃತೇನ ಚ ।
ಇಷ್ಟೇನ ಚ ಶಪೇ ರಾಜನ್ ಸೂದಯಿಷ್ಯಾಮಿ ರಾಕ್ಷಸಮ್ ॥೪೯॥

ಭೀಮಸೇನನು ಧರ್ಮರಾಜನನ್ನು ಕುರಿತು ರಾಜನೇ, ನನ್ನ ಮೇಲೆ, ಸಹೋದರರಾದ ನಿಮ್ಮ ಮೇಲೆ, ಧರ್ಮದ ಮೇಲೆ, ನನ್ನ ಪುಣ್ಯದ ಮೇಲೆ ಮತ್ತು ನಾನು ಮಾಡಿದ ದಾನದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಈ ದಿನ ರಾಕ್ಷಸನನ್ನು ಕೊಲ್ಲುವೆನು.

ವೈಶಂಪಾಯನಃ

ಇತ್ಯೇವಮುಕ್ತ್ವಾ ತೌ ವೀರೌ ಸ್ಪರ್ಧಮಾನೌ ಪರಸ್ಪರಮ್ ।
ಬಾಹುಭ್ಯಾಂ ಸಮಸಜ್ಜೇತಾಮುಭೌ ರಕ್ಷೋವೃಕೋದರೌ ॥೫೦॥

ತಯೋರಾಸೀತ್ ಸಂಪ್ರಹಾರಃ ಕ್ರುದ್ಧಯೋರ್ಭೀಮರಕ್ಷಸೋಃ ।
ಅಮೃಷ್ಯಮಾಣಯೋಃ ಸಂಖೇ ದೇವದಾನವಯೋರಿವ ॥೫೧॥

ವೈಶಂಪಾಯನ– ಹೀಗೆ ಹೇಳಿ ವೀರರಾದ ಆ ರಾಕ್ಷಸ ಮತ್ತು ವೃಕೋದರರಿಬ್ಬರೂ ಪರಸ್ಪರವಾಗಿ ಸ್ಪರ್ಧಿಸುತ್ತಾ ಬಾಹುಗಳಿಂದ ಒಬ್ಬರನ್ನೊಬ್ಬರು ತಡವಿದರು. ಕ್ರುದ್ಧರಾದ ಭೀಮರಾಕ್ಷಸರು ಒಬ್ಬರನ್ನೊಬ್ಬರು ಸಹಿಸದೇ ಮಾಡುವ ಆ ಪ್ರಹಾರಗಳು ದೇವ ದಾನವ ಯುದ್ಧದಲ್ಲಿನ ಪ್ರಹಾರದಂತಿದ್ದವು.

ಆರುಜ್ಯಾರುಜ್ಯ ತೌ ವೃಕ್ಷಾನನ್ಯೋನ್ಯಮಭಿಜಘ್ನತುಃ ।
ಜೀಮೂತಾವಿವ ಗರ್ಜಂತೌ ನಿನದಂತೌ ಮಹಾಬಲೌ ॥೫೨॥

ಮಹಾಬಲರಾದ ಅವರಿಬ್ಬರು ವೃಕ್ಷಗಳನ್ನು ಕಿತ್ತುಕಿತ್ತು ಗುಡುಗುವ ಮೋಡಗಳಂತೆ ಗರ್ಜಿಸುತ್ತಾ ಪರಸ್ಪರವಾಗಿ ಹೊಡೆದಾಡಿದರು.

ಬಭಂಜತುರ್ಮಹಾವೃಕ್ಷಾನೂರುಭಿರ್ಬಲಿನಾಂ ವರೌ ।
ಅನ್ಯೋನ್ಯೇನಾಭಿಸಂರಬ್ಧೌ ಪರಸ್ಪರವಧೈಷಿಣೌ ॥೫೩॥

ಪರಸ್ಪರವಾಗಿ ಸಿಟ್ಟಿನಿಂದ ಕೂಡಿದವರಾಗಿ ಪರಸ್ಪರ ವಧೆಯನ್ನು ಅಪೇಕ್ಷಿಸುತ್ತಾ ಬಲಿಷ್ಠರಲ್ಲಿ ಶ್ರೇಷ್ಠರಾದ ಅವರಿಬ್ಬರೂ ತಮ್ಮ ತೊಡೆಗಳ ವೇಗದಿಂದ ದೊಡ್ಡ ಮರಗಳನ್ನು ಮುರಿದರು.

ತದ್‌ವೃಕ್ಷಯುದ್ಧಮಭವನ್ಮಹೀರುಹವಿನಾಶನಮ್ ।
ವಾಲಿಸುಗ್ರೀವಯೋರ್ಭ್ರಾತ್ರೋಃ ಪುರಾ ಸ್ತ್ರೀಕಾಂಕ್ಷಿಣೋರ್ಯಥಾ ॥೫೪॥

ಹಿಂದೆ ಸಹೋದರರಾದ ವಾಲಿಸುಗ್ರೀವರಿಗೆ ಸ್ತ್ರೀ ವಿಷಯದಲ್ಲಿ (ಸುಗ್ರೀವ ಪತ್ನಿಯಾದ ರುಮೆಯ ವಿಷಯದಲ್ಲಿ) ಹೇಗೆ ನಡೆಯಿತೋ ಅದರಂತೆ ವೃಕ್ಷ ನಾಶಕವಾದ, ವೃಕ್ಷ ಯುದ್ಧವು ಅವರಿಬ್ಬರಿಗೆ ನಡೆಯಿತು.

ಆವಿದ್ಯಾವಿಧ್ಯ ತೌ ವೃಕ್ಷಾನ್ಮುಹೂರ್ತಮಿತರೇತರಮ್ ।
ತಾಡಯಾಮಾಸತುರುಭೌ ವಿನದಂತೌ ಮುಹುರ್ಮುಹುಃ ॥೫೫॥

ಆವರಿಬ್ಬರೂ ವೃಕ್ಷಗಳನ್ನು ಕಿತ್ತು ಕಿತ್ತು ಮತ್ತೆ ಮತ್ತೆ ಗರ್ಜಿಸುತ್ತಾ ಪರಸ್ಪರವಾಗಿ ಒಂದು ಮುಹೂರ್ತದವರೆಗೆ ಹೊಡೆದಾಡಿದರು.

ತಸ್ಮಿನ್ ದೇಶೇ ಯದಾ ವೃಕ್ಷಾಃ ಸರ್ವ ಏವ ನಿಪಾತಿತಾಃ ।
ಪುಂಜೀಕೃತಾಶ್ಚ ಶತಶಃ ಪರಸ್ಪರವಧೇಪ್ಸಯಾ ॥೫೬॥

ತತಃ ಶಿಲಾಃ ಸಮಾದಾಯ ಮುಹೂರ್ತಮಿವ ಭಾರತ ।
ಮಹಾಭ್ರೈರಿವ ಶೈಲೇಂದ್ರೌ ಯುಯುಧಾತೇ ಮಹಾಬಲೌ ॥೫೭॥

ಎಲೈ ಭಾರತನೇ, ಅಲ್ಲಿದ್ದ ಮರಗಳೆಲ್ಲವೂ ನೂರರ ಗಟ್ಟಲೆಯಲ್ಲಿ ಸಮೂಹದಿಂದಲೇ ಪರಸ್ಪರ ವಧೆಯ ಇಚ್ಛೆಯಿಂದ ಕೀಳಲ್ಪಡುತ್ತಿರಲು ಮಹಾಬಲರಾದ ಅವರಿಬ್ಬರೂ ದೊಡ್ಡದೊಡ್ಡ ಬಂಡೆಗಳನ್ನು ತೆಗೆದುಕೊಂಡು ಎರಡು ಪರ್ವತಗಳು ಮಹಾಮೇಘಗಳಿಂದ ಹೊಡೆದಾಡಿದಂತೆ ಹೊಡೆದಾಡಿದರು.

ಶಿಲಾಭಿರುಗ್ರರೂಪಾಭಿರ್ಬಹತೀಭಿಃ ಪರಸ್ಪರಮ್ ।
ವಜ್ರೈರಿವ ಮಹಾವೇಗೈರಾಜಘ್ನತುರಮರ್ಷಣೌ ॥೫೮॥

ಸಿಟ್ಟಿನಿಂದ ಕೂಡಿದ ಅವರು ಭಯಂಕರವಾದ ಆಕಾರವುಳ್ಳ ದೊಡ್ಡದೊಡ್ಡ ಬಂಡೆಗಳಿಂದ ಮಹಾವೇಗವುಳ್ಳ ವಜ್ರಾಯುಧದಿಂದೆಂಬಂತೆ ಹೊಡೆದಾಡಿದರು.

ಅಭಿದ್ರುತ್ಯ ತು(ಚ) ಭೂಯಸ್ತಾವನ್ಯೋನ್ಯಂ ಬಲದರ್ಪಿತೌ ।
ಭುಜಾಭ್ಯಾಂ ಪರಿಗೃಹ್ಯಾಥ ಚಕರ್ಷಾತೇ ಗಜಾವಿವ ॥೫೯॥

ಬಲದರ್ಪಿತರಾದ ಅವರು ಸ್ವಲ್ಪದೂರದಲ್ಲಿ ನಿಂತು ಪರಸ್ಪರವಾಗಿ ಓಡಿಬಂದು ಒಬ್ಬರ ಭುಜಗಳನ್ನು ಇನ್ನೊಬ್ಬರು ಹಿಡಿದು ಗಜಗಳಂತೆ ಎಳೆದಾಡಿದರು.

ಮುಷ್ಟಿಭಿಶ್ಚ ಮಹಾಘೋರೈರನ್ಯೋನ್ಯಮಭಿಜಘ್ನತುಃ ।
ತತಃ ಕಟಕಟಾಶಬ್ದೋ ಬಭೂವ ಸುಮಹಾತ್ಮನೋಃ ॥೬೦॥

ಅವರು ತಮ್ಮ ಘೋರವಾದ ಮುಷ್ಟಿಗಳಿಂದ ಪರಸ್ಪರವಾಗಿ ಹೊಡೆದಾಡಿದರು. ಮಹಾಬಲಶಾಲಿಗಳಾದ ಅವರು ಹಾಗೆ ಹೊಡೆದಾಡುವಾಗ ದೊಡ್ಡ ಕಟಕಟ ಶಬ್ದ ಉಂಟಾಯಿತು.

ತತಃ ಸಂಹತ್ಯ ಮುಷ್ಟಿಂ ತು ಪಂಚಶೀರ್ಷಮಿವೋರಗಮ್ ।
ವೇಗೇನಾಭ್ಯಹನದ್ ಭೀಮೋ ರಾಕ್ಷಸಸ್ಯ ಶಿರೋಧರಮ್ ॥೬೧॥

ಆಗ ಭೀಮಸೇನನು ಐದು ಹೆಡೆಯ ಸರ್ಪದಂತಿರುವ ತನ್ನ ಹಸ್ತವನ್ನು ಮುಚ್ಚಿ ಮುಷ್ಟಿಯನ್ನು ಬಿಗಿದು ವೇಗವಾಗಿ ರಾಕ್ಷಸನ ಕತ್ತಿಗೆ ಹೊಡೆದನು.

ತತಃ ಶ್ರಾಂತಂ ತು ತದ್ರಕ್ಷೋ ಭೀಮಸೇನಭುಜಾಹತಮ್ ।
ಸುಪರಿಶ್ರಾಂತಮಾಲಕ್ಷ್ಯ ಭೀಮಸೇನೋऽಭ್ಯವರ್ತತ ॥೬೨॥

ತನ್ನ ಭುಜದ ಹೊಡೆತಕ್ಕೆ ಸಿಕ್ಕಿ ಆ ರಾಕ್ಷಸನು ಬಹಳ ಬಳಲುತ್ತಿರುವುದನ್ನು ಕಂಡು ಭೀಮಸೇನನ ಬಲವು ಅಭ್ಯುದ್ಧಿಯನ್ನು ಹೊಂದಿತು.

ತತ ಏನಂ ಮಹಾಬಾಹುರ್ಬಾಹುಭ್ಯಾಮಮರೋಪಮಃ ।
ಸಮುತ್ಕ್ಷಿಪ್ಯ ಬಲಾತ್ ಭೀಮೋ ವಿನಿಷ್ಪಿಷ್ಯ ಮಹೀತಳೇ ॥೬೩॥

ತತಃ ಸಂಪೀಡ್ಯ ಬಲವದ್ ಭುಜಾಭ್ಯಾಂ ಕ್ರೋಧಮೂರ್ಚ್ಛಿತಃ ।
ತಸ್ಯ ಗಾತ್ರಾಣಿ ಸರ್ವಾಣಿ ಚೂರ್ಣಯಾಮಾಸ ಪಾಂಡವಃ ॥೬೪॥

ಆಗ ದೇವತೆಯಂತಿದ್ದ, ಕ್ರೋಧಮೂರ್ಚ್ಛಿತನಾದ ಮಹಾಬಾಹುವಾದ ಭೀಮಸೇನನು ತನ್ನ ಬಾಹುಗಳಿಂದ ಅವನನ್ನು ಎಸೆದು ಭೂಮಿಯ ಮೇಲೆ ಕೆಡವಿ ಅವನನ್ನು ಭೂಮಿಯ ಮೇಲೆ ಅರೆದು ತನ್ನ ಭುಜಗಳಿಂದ ಪೀಡಿಸಿ ಅವನ ಶರೀರವನ್ನೆಲ್ಲಾ ಮುರಿಯುವಂತೆ ಘಾಸಿಗೊಳಿಸಿದನು.

ಅರತ್ನಿನಾ ಚಾಭಿಹತ್ಯ ಶಿರಃ ಕಾಯಾದಪಾಹರತ್ ।
ಸಂದಷ್ಟೌಷ್ಠಂ ವಿವೃತಾಕ್ಷಂ ಫಲಂ ವೃಕ್ಷಾದಿವ ಚ್ಯುತಮ್ ॥೬೫॥

ಮತ್ತು ತನ್ನ ಮೊಣಕೈಯಿಂದ ಹೊಡೆದು ಹಲ್ಲುಡಿಯನ್ನು ಕಚ್ಚಿ ಕಣ್ಣುಗಳನ್ನು ಅಗಲವಾಗಿ ತೆಗೆದಿದ್ದ ಆ ರಾಕ್ಷಸನ ಶಿರಸ್ಸನ್ನು ಮರದಿಂದ ಹಣ್ಣನ್ನು ಕೀಳುವಂತೆ ಅವನ ಶರೀರದಿಂದ ಬೇರ್ಪಡಿಸಿದನು.

ಜಟಾಸುರಸ್ಯ ತು ಶಿರೋ ಭೀಮಸೇನಬಲಾದ್ಧತಮ್ ।
ಪಪಾತ ರುಧಿರಾದಿಗ್ಧಂ ಸಂದಷ್ಟದಶನಚ್ಛದಮ್ ॥೬೬॥

ಭೀಮಸೇನನ ಬಲದಿಂದ ಹತನಾದ ಹಲ್ಲುಮುಡಿಯನ್ನು ಕಚ್ಚಿದ ಆ ಜಟಾಸುರನ ಶಿರಸ್ಸು ರಕ್ತಸಿಕ್ತವಾಗಿ ಭೂಮಿಯ ಮೇಲೆ ಬಿದ್ದಿತು.

ತಂ ನಿಹತ್ಯ ಮಹೇಷ್ವಾಸೋ ಯುಧಿಷ್ಠಿರಮುಪಾಗಮತ್ ।
ಸ್ತೂಯಮಾನೋ ದ್ವಿಜಾಗ್ರ್ಯೈಸ್ತು ಮರುದ್ಭಿರಿವ ವಾಸವಃ ।
ಬಭೂವ ಪುರುಷವ್ಯಾಘ್ರಃ ಪ್ರಹೃಷ್ಟ ಇವ ಪಾಂಡವಃ ॥೬೭॥

ಮಹಾಧನುರ್ಧಾರಿಯಾದ ಭೀಮಸೇನನು ಮರುದ್ಗಣದಿಂದ ಹೊಗಳಲ್ಪಡುವ ಇಂದ್ರನಂತೆ ಬ್ರಾಹ್ಮಣಶ್ರೇಷ್ಠರಿಂದ ಪ್ರಶಂಸಿಸಲ್ಪಟ್ಟವನಾಗಿ ಯುಧಿಷ್ಠಿರನ ಬಳಿಗೆ ಬಂದನು. ಪುರುಷವ್ಯಾಘ್ರನಾದ ಪಾಂಡುಪುತ್ರನಾದ ಭೀಮಸೇನನು ಬಹಳ ಸಂತುಷ್ಟನಾದನು.

ತತೋ ಯುಧಿಷ್ಠಿರೋ ರಾಜಾ ಧೌಮ್ಯಃ ಕೃಷ್ಣಾ ಯಮೌ ತಥಾ ।
ಭೀಮಸೇನಮುಪಾಯಾಂತಂ ದದೃಶುಸ್ತೇ ಚ ಪಾಂಡವಮ್ ॥೬೮॥

ಆಗ ಯುಧಿಷ್ಠಿರನೂ, ನಕುಲಸಹದೇವರೂ, ಧೌಮ್ಯರೂ ಮತ್ತು ದ್ರೌಪದಿಯೂ ಪಾಂಡುಪುತ್ರನಾದ ಭೀಮಸೇನನು ತಮ್ಮ ಬಳಿಗೆ ಬರುವುದನ್ನು ನೋಡಿದರು.

ಉಪಸಂಗತ್ಯ ಧೌಮ್ಯಂ ಚ ಪಾಂಡವಂ ಚ ಯುಧಿಷ್ಠಿರಮ್ ।
ಪರ್ಯಷ್ವಜತ ದುರ್ಧರ್ಷೋ ಯಮೌ ಚಾಪಿ ವೃಕೋದರಃ ॥೬೯॥

ದುರ್ಧರ್ಷನಾದ ವೃಕೋದರನು ಧೌಮ್ಯರನ್ನೂ, ಮತ್ತು ಯುಧಿಷ್ಠಿರನನ್ನೂ ಸಮೀಪಿಸಿ (ನಮಸ್ಕರಿಸಿ) ನಕುಲಸಹದೇವರನ್ನು ಆಲಿಂಗಿಸಿದನು.

ಹತಂ ಜಾಟಸುರಂ ದೃಷ್ಟ್ವಾ ಪಾಂಚಾಲೀ ಚ ವೃಕೋದರಂ ।
ಮುದಿತಂ ಪೂಜಯಾಮಾಸ ಪೌಲೋಮೀವ ಪುರಂದರಮ್ ॥೭೦॥

ಜಟಾಸುರನನ್ನು ಸಂಹರಿಸಿ ಹಿಂದಿರುಗಿ ಬಂದ ಭೀಮಸೇನನನ್ನು ನೋಡಿ ದ್ರೌಪದಿಯು ಶಚಿಯು ಇಂದ್ರನನ್ನು ಅರ್ಚಿಸಿದಂತೆ ಅವನನ್ನು ಅರ್ಚಿಸಿದಳು.

ಸಂಪೂಜಿತಃ ಸ ಸದ್ಬ್ರಾಹ್ಮಣಾನಭಿವಾದ್ಯ ಚ ।
ಜಿತಾರಿರ್ಮುದಿತೋ ಭೀಮೊ ಬಭೂವ ಭರತರ್ಷಭಃ ॥೭೧॥

ಹೀಗೆ ಸಜ್ಜನರಿಂದ ಸತ್ಕರಿಸಲ್ಪಟ್ಟ ಭರತಶ್ರೇಷ್ಠನಾದ ಭೀಮಸೇನನು ಬ್ರಾಹ್ಮಣರಿಗೆ ನಮಸ್ಕರಿಸಿ ಶತ್ರುಗಳನ್ನು ಜಯಿಸಿದವನಾಗಿ ಸಂತೋಷದಿಂದ ಇದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಪಂಚಾಶದಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ಮೂರನೆಯ
ಅಧ್ಯಾಯ ಮುಗಿಯಿತು.

॥ ಇತಿ ಜಟಾಸುರವಧಪರ್ವ ಸಮಾಪ್ತಂ ॥

★ ★ ★ ★

ದಮಯಂತೀ

ಅಯಮರ್ಥೋ ನ ಸಂವೇದ್ಯಃ ಪಿತ್ರೇ ಮಾತಃ ಕಥಂಚನ ।
ತ್ವನ್ನಿಧೌ ಸಮಾದೇಶ್ಯೋ ಸುದೇವಂ ದ್ವಿಜಸತ್ತಮಮ್ ॥೧೫॥

ತಾಯಿಯೇ ಈ ವಿಷಯವನ್ನು ರಾಜನಿಗೆ ಹೇಳಬಾರದು ನಿನ್ನ ಸನ್ನಿಧಿಯಲ್ಲಿ ದ್ವಿಜಶ್ರೇಷ್ಠನಾದ ಸುದೇವನಿಗೆ ನಾನು ಒಂದು ಆದೇಶವನ್ನು ನೀಡುವೆನು.

ಯಥಾ ನ ನೃಪತಿರ್ಭೀಮಃ ಪ್ರತಿಪದ್ಯೇತ ಮೇ ಮತಮ್ ।
ತಥಾ ತ್ವಯಾ ಚ ಕರ್ತವ್ಯಂ ಮಮ ಚೇದಿಚ್ಛಸಿ ಪ್ರಿಯಮ್ ॥೧೬॥

ನನಗೆ ನೀನು ಪ್ರಿಯವಾದುದನ್ನು ಬಯಸುವುದಾದರೆ ನನ್ನ ಈ ಸೂಚನೆಯನ್ನು ರಾಜನಾದ ಭೀಮನು ತಿಳಿಯದಂತೆ ನೀನು ಮಾಡಬೇಕು.

ಯಥಾ ಚಾಹಂ ಸಮಾನೀತಾ ಸುದೇವೇನೇಹ ಬಾಂಧವಾನ್ ।
ತೇನೈವ ಮಂಗಲೇನ ಶ್ವಃ ಸುದೇವೋ ಯಾತು ಮಾಚಿರಮ್ ॥೧೭॥

ಸಮಾನೇತುಂ ನಳಂ ಮಾತರಯೋಧ್ಯಾಂ ನಗರೀಂ ಪ್ರತಿ ।
ಋತುಪರ್ಣಸ್ಯ ಭವನೇ ನಿವಸಂತಮರಿಂದಮಮ್ ॥೧೮॥

ಯಾವ ರೀತಿಯಲ್ಲಿ ನಾನು ಸುದೇವನಿಂದ ಬಾಂಧವರ ಬಳಿಗೆ ಇಲ್ಲಿಗೆ ಕರೆತರಲ್ಪಟ್ಟೆನೋ ಅದೇ ಮಂಗಳದಿಂದ ಸುದೇವನು ಶೀಘ್ರವಾಗಿ ಋತುಪರ್ಣನ ಮನೆಯಲ್ಲಿ ವಾಸಿಸುತ್ತಿರುವ ಅರಿಂದಮನಾದ ನಳನನ್ನು ಕರೆತರಲು ಅಯೋಧ್ಯಾನಗರಕ್ಕೆ ಹೋಗಲಿ.

ವಿಶ್ರಾಂತಂ ತು ತತಃ ಪಶ್ಚಾತ್ ಪರ್ಣಾದಂ ದ್ವಿಜಸತ್ತಮಮ್ ।
ಅರ್ಚಯಾಮಾಸ ವೈದರ್ಭೀ ಧನೇನಾತೀವ ಭಾಮಿನೀ ॥೧೯॥

ಅನಂತರ ದ್ವಿಜಶ್ರೇಷ್ಠನಾದ ಪರ್ಣಾದನು ವಿಶ್ರಾಂತಿಯನ್ನು ಪಡೆದಮೇಲೆ ಭಾಮಿನಿಯಾದ ದಮಯಂತಿಯು ಅವನನ್ನು ಬಹಳ ಧನಗಳಿಂದ ಸತ್ಕರಿಸಿದಳು.

ನಳೇ ಚೇಹಾಗತೇ ವಿಪ್ರ ಭೂಯೋ ದಾಸ್ಯಾಮಿ ತೇ ವಸು ।
ತ್ವಯಾ ಹಿ ಮೇ ಬಹುಕೃತಂ ಯಥಾ ನಾನ್ಯಃ ಕರಿಷ್ಯತಿ ॥೨೦॥

ಯದ್ಧರ್ತ್ಯಾऽಹಂ ಸಮೇಷ್ಯಾಮಿ ಶೀಘ್ರಮೇವ ದ್ವಿಜೋತ್ತಮ ॥೨೧॥

ಬ್ರಾಹ್ಮಣರೇ, ನಳನು ಇಲ್ಲಿಗೆ ಬಂದಮೇಲೆ ಪುನಃ ನಿಮಗೆ ಇನ್ನೂ ಹೆಚ್ಚು ಧನವನ್ನು ಕೊಡುವೆನು. ಯಾರೂಮಾಡದಿದ್ದ ಉಪಕಾರವನ್ನು ನೀವು ನನಗೆ ಮಾಡಿದ್ದೀರಿ. ದ್ವಿಜೋತ್ತಮರೇ, ನಿಮ್ಮ ಅನುಗ್ರಹದಿಂದ ನಾನು ಶೀಘ್ರವಾಗಿ ನನ್ನ ಪತಿಯ ಜೊತೆಯಲ್ಲಿ ಸಮಾಗಮವನ್ನು ಹೊಂದುವೆನು.

ಸ ಏವಮುಕ್ತಶ್ಚಾಶ್ವಾಸ್ಯ ಹ್ಯಾಶೀರ್ವಾದೈಃ ಸಮಂಗಳೈಃ ।
ಗೃಹಾನಥ ಯಯೌ ಸೋऽಪಿ ಕೃತಾರ್ಥಶ್ಚ ಮಹಾಮನಾಃ ॥೨೨॥

ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಪರ್ಣಾದನು ಅವಳನ್ನು ಅನೇಕ ಮಂಗಳ ಆಶೀರ್ವಾದಗಳಿಂದ ಸಮಾಧಾನಪಡಿಸಿ ಕೃತಾರ್ಥನಾಗಿ ಸಂತೋಷದಿಂದ ತನ್ನ ಮನೆಗೆ ಹಿಂದಿರುಗಿದನು.

ತತಃ ಸುದೇವಮಾನಾಯ್ಯ ದಮಯಂತೀ ಯುಧಿಷ್ಠಿರ ।
ಅಬ್ರವೀತ್ ಸನ್ನಿಧೌ ಮಾತುರ್ದುಃಖಿಶೋಕಸಮನ್ವಿತಾ ॥೨೩॥

ಎಲೈ ಯುಧಿಷ್ಠಿರನೇ, ಅನಂತರ ದಮಯಂತಿಯು ಸುದೇವನನ್ನು ಕರೆಸಿ ತಾಯಿಯ ಸನ್ನಿಧಿಯಲ್ಲಿ ದುಃಖಿಶೋಕಸಮನ್ವಿತಳಾಗಿ ಈ ಮಾತನ್ನು ಆಡಿದಳು.

ಗತ್ವಾ ಸುದೇವ ನಗರೀಮಯೋಧ್ಯಾವಾಸಿನಂ ನೃಪಮ್ ।
ಋತುಪರ್ಣಂ ವಚೋ ಬ್ರೂಹಿ ಪತಿಮನ್ಯಂ ಚಿಕೀರ್ಷತೀ ॥೨೪॥

ಆಸ್ಥಾಸ್ಯತಿ ಪುನರ್ಭೈಮೀ ದಮಯಂತೀ ಸ್ವಯಂವರಮ್ ।
ತತ್ರ ಗಚ್ಛಂತಿ ರಾಜಾನೋ ರಾಜಪುತ್ರಾಶ್ಚ ಸರ್ವಶಃ ॥೨೫॥

ಎಲೈ ಸುದೇವನೇ, ಅಯೊಧ್ಯಾನಗರಿಗೆ ಹೋಗಿ ಅಲ್ಲಿವಾಸಿಸುವ ಋತುಪರ್ಣರಾಜನಿಗೆ ಹೀಗೆ ಹೇಳು. ದಮಯಂತಿಯು ಇನ್ನೊಬ್ಬ ಪತಿಯನ್ನು ಹೊಂದಲು ಬಯಸುತ್ತಿದ್ದಾಳೆ. ಆ ಕಾರಣದಿಂದ ಪುನಃ ದಮಯಂತಿಯು ಸ್ವಯಂವರವನ್ನು ಮಾಡಿಕೊಳ್ಳುತ್ತಿದ್ದಾಳೆ. ಅಲ್ಲಿಗೆ ಎಲ್ಲಾ ರಾಜರೂ ಮತ್ತು ರಾಜಕುಮಾರರೂ ಬರುತ್ತಿದ್ದಾರೆ.

ತಥಾ ಚ ಗಣಿತಃ ಕಾಲಃ ಶ್ವೋಭೂತೇ ಸ ಭವಿಷ್ಯತಿ ।
ಯದಿ ಸಂಭಾವನೀಯೂ ತೇ ಗಚ್ಛ ಶೀಘ್ರಮರಿಂದಮ ॥೨೬॥

ಸ್ವಯಂವರಕ್ಕಾಗಿ ನಿರ್ದಿಷ್ಟವಾದ ಕಾಲವು ನಾಳೆಯ ಪ್ರಾತಃಕಾಲದಲ್ಲಿ ಇದೆ. ಅರಿಂದಮನೆ ನಿನಗೆ ಅವಳ ಮೇಲೆ ಏನಾದರೂ ಆಸೆಯಿದ್ದರೆ ನೀನು ಶೀಘ್ರವಾಗಿ ಹೋಗು.

ಸೂರ್ಯೋದಯೇ ದ್ವಿತೀಯಂ ಸಾ ಭರ್ತಾರಂ ವರಯಿಷ್ಯತಿ ।
ನ ಹಿ ಸ ಜ್ಞಾಯತೇ ವೀರೋ ನಳೋ ಜೀವನ್ಮೃತೋಽಪಿ ವಾ ॥೨೭॥

ನಾಳೆ ಸೂರ್ಯೋದಯಕ್ಕೆ ಸರಿಯಾಗಿ ಅವಳು ಇನ್ನೊಬ್ಬ ಪತಿಯನ್ನು ವರಿಸುವಳು. ವೀರನಾದ ನಳನು ಜೀವಿಸಿದ್ದಾನೆಯೋ ಇಲ್ಲವೋ ಎಂದು ತಿಳಿಯುವುದಿಲ್ಲ.

ಏವಂ ತಯಾ ಯಥೋಕ್ತಂ ವೈ ಗತ್ವಾ ರಾಜಾನಮಬ್ರವೀತ್ ।
ಋತುಪರ್ಣಂ ಮಹಾರಾಜ ಸುದೇವೋ ಬ್ರಾಹ್ಮಣಸ್ತದಾ ॥೨೮॥

ಎಲೈ ಮಹಾರಾಜನೇ ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಆ ಬ್ರಾಹ್ಮಣನು ಋತುಪರ್ಣನ ಸಮೀಪಕ್ಕೆ ಹೋಗಿ ರಾಜನನ್ನು ಕುರಿತು ಎಲ್ಲವನ್ನೂ ಹಾಗೆಯೇ ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಕ್ತೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೈದನೆಯ ಅಧ್ಯಾಯ

(ಸುದೇವನ ಮಾತುಗಳನ್ನು ಕೇಳಿ ನಳಸಾರಥ್ಯದಲ್ಲಿ ಋತುಪರ್ಣನಿಂದ ವಿದರ್ಭದೇಶಕ್ಕೆ ಆಗಮನ.)

ಬೃಹದಶ್ವ:

ಶ್ರುತ್ವಾ ವಚಃ ಸುದೇವಸ್ಯ ಋತುಪರ್ಣೋ ಜನಾಧಿಪಃ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಬಾಹುಕಂ ಪ್ರತ್ಯಭಾಷತ ॥೧॥

ಸುದೇವನ ಮಾತುಗಳನ್ನು ಕೇಳಿ ರಾಜನಾದ ಋತುಪರ್ಣನು ಮಧುರವಾದ ಮಾತುಗಳಿಂದ ಬಾಹುಕನನ್ನು ಸಮಾಧಾನಪಡಿಸುತ್ತಾ ಅವನನ್ನು ಕುರಿತು ಮಾತನಾಡಿದನು.

ವಿದರ್ಭಾನ್ ಯಾತುಮಿಚ್ಛಾಮಿ ದಮಯಂತ್ಯಾಃ ಸ್ವಯಂವರಮ್ ।
ಏಕಾಹ್ನಾ ಹಯತತ್ತ್ವಜ್ಞ ಮನ್ಯಸೇ ಯದಿ ಬಾಹುಕ ॥೨॥

ಅಶ್ವವಿದ್ಯೆಯನ್ನು ಹೊಂದಿದ ಎಲೈ ಬಾಹುಕನೇ ನಿನ್ನ ಸಹಾಯವಿದ್ದರೆ ನಾನು ದಮಯಂತಿಯ ಸ್ವಯಂವರಕ್ಕಾಗಿ ಒಂದೇ ದಿನದಲ್ಲಿ ವಿದರ್ಭದೇಶಕ್ಕೆ ಹೋಗಲು ಬಯಸುತ್ತೇನೆ.

ಏವಮುಕ್ತಸ್ಯ ಕೌಂತೇಯ ತೇನ ರಾಜ್ಞಾ ನಳಸ್ಯ ಹ ।
ವ್ಯದೀರ್ಯತ ಮನೋ ದುಃಖಾತ್ ಪ್ರದಧ್ಮೌ ಚ ಮಹಾಯಶಾಃ ॥೩॥

ಎಲೈ ಕೌಂತೇಯನೇ ರಾಜನಿಂದ ಹೀಗೆ ಹೇಳಲ್ಪಟ್ಟ ನಳನ ಹೃದಯವು ದುಃಖದಿಂದ ಬರಿಯಿತು. ಮಹಾಕೀರ್ತಿಶಾಲಿಯಾದ ಅವನು ಚಿಂತಿಸಿದನು.

ನಳಃ

ದಮಯಂತೀ ಭವೇದೇತತ್ ಕುರ್ಯಾದ್ ದುಃಖೇನ ಮೋಹಿತಾ ।
ಅಸ್ಮದರ್ಥಂ ಭವೇದ್ವಾಽಯಮುಪಾಯಶ್ಚಿಂತಿತೋ ಮಹಾನ್ ॥೪॥

ಇದೇನು? ದುಃಖದಿಂದ ಮೋಹಿತಳಾಗಿ ದಮಯಂತಿಯು ಇಂತಹ ಕಾರ್ಯವನ್ನು ಮಾಡುತ್ತಾಳೆಯೇ? ಅಥವಾ ನನ್ನನ್ನು ಹೊಂದಲು ಅವಳು ಮಾಡಿದ ದೊಡ್ಡ ಉಪಾಯವಿರಬಹುದೆ?

ನೃಶಂಸಂ ಸಾ ತು ವೈದರ್ಭೀ ಕರ್ತುಕಾಮಾ ಯಶಸ್ವಿನೀ ।
ಮಯಾ ಕ್ಷುದ್ರೇಣ ನಿಕೃತಾ ಪಾಪೇನಾಕೃತಬುದ್ಧಿನಾ ।
ಸ್ತ್ರೀಸ್ವಭಾವಶ್ಚಲೋ ಲೋಕೇ ಮಮ ದೋಷಶ್ಚ ದಾರುಣಃ ॥೫॥

ಕೀರ್ತಿಶಾಲಿನಿಯಾದ ವಿದರ್ಭರಾಜಕುಮಾರಿಯಾದ ದಮಯಂತಿಯು ಕ್ಷುದ್ರನಾದ ಪಾಪಿಯಾದ ಮತ್ತು ಬುದ್ಧಿಹೀನನಾದ ನನ್ನಿಂದ ವಂಚನೆಗೆ ಒಳಗಾಗಿ ಇಂತಹ ಕ್ರೂರವಾದ ಕರ್ಮವನ್ನು ಮಾಡುತ್ತಾಳೆಯೇ? ಲೋಕದಲ್ಲಿ ಸ್ತ್ರೀಯರ ಸ್ವಭಾವವು ಚಂಚಲವಾದುದು ಮತ್ತು ನನ್ನ ಅಪರಾಧವು ಘೋರವಾದುದು.

ಸ್ಯಾದೇವಮಪಿ ಕುರ್ಯಾತ್ ಸಾ ವಿವಶಾ ಗತಸೌಹೃದಾ ।
ಮಮ ದೋಷೇಣ ಸಂವಿಗ್ನಾ ನೈರಾಶ್ಯಾತ್ ತನುಮಧ್ಯಮಾ ॥೬॥

ನ ಚೈವಂ ಕರ್ಹಿಚಿತ್ ಕುರ್ಯಾತ್ ಸಾಪತ್ಯಾ ಚ ವಿಶೇಷತಃ ॥೭॥

ಇರಬಹುದು. ನನ್ನ ಅಪರಾಧದಿಂದ ಸಂವಿಗ್ನಳಾದ ಆ ಸುಂದರಿಯು ನಿರಾಶೆಯನ್ನು ಹೊಂದಿದವಳಾಗಿ ನನ್ನಲ್ಲಿ ಸ್ನೇಹವನ್ನು ಕಳೆದುಕೊಂಡು ವಿವಶಳಾಗಿ ಹೀಗೆಯೂ ಮಾಡಬಹುದು. ಆದರೆ ಮಕ್ಕಳನ್ನು ಹೊಂದಿದವಳು ವಿಶೇಷವಾಗಿ ಈ ರೀತಿಯಿಂದ ಯಾವ ಕಾರಣದಿಂದಲೂ ಮಾಡದೆಯೂ ಇರಬಹುದು.

ಯದತ್ರ ತಥ್ಯಂ ಚ ಪುನರ್ಗತ್ವಾ ವೇತ್ಸ್ಯಾಮಿ ನಿಶ್ಚಯಮ್ ।
ಋತುಪರ್ಣಸ್ಯ ವೈ ಕಾಮಮಾತ್ಮಾರ್ಥಂ ಚ ಕರೋಮ್ಯಹಮ್ ॥೮॥

ಇವೆರಡರಲ್ಲಿ ಯಾವುದು ನಿಜವೆಂದು ಅಲ್ಲಿಗೆ ಹೋಗಿಯೇ ನಿಶ್ಚಯವನ್ನು ಮಾಡುವೆನು. ನನ್ನ ಸ್ವಾರ್ಥದ ಸಲುವಾಗಿ ಋತುಪರ್ಣನ ಈ ಆಸೆಯನ್ನು ಈಡೇರಿಸುತ್ತೇನೆ.

ಇತಿ ನಿಶ್ಚಿತ್ಯ ಮನಸಾ ಬಾಹುಕೋ ದೀನಮಾನಸಃ ।
ಕೃತಾಂಜಲಿರುವಾಚೇದಮೃತುಪರ್ಣಂ ನರಾಧಿಪಮ್ ॥೯॥

ಹೀಗೆ ಮನಸ್ಸಿನಲ್ಲಿ ನಿಶ್ಚಯಿಸಿ ದೀನಮನಸ್ಸಿನಿಂದ ಕೂಡಿದ ಬಾಹುಕನು ಕೈಗಳನ್ನು ಮುಗಿದು ಋತುಪರ್ಣರಾಜನನ್ನು ಕುರಿತು ಹೀಗೆ ಮಾತನಾಡಿದನು.

ಪ್ರತಿಜಾನಾಮಿ ತೇ ಸತ್ಯಂ ಗಮಿಷ್ಯಸಿ ನರಾಧಿಪ ।
ಏಕಾಹ್ನಾ ಪುರುಷವ್ಯಾಘ್ರ ವಿದರ್ಭನಗರೀಂ ಧ್ರುವಮ್ ॥೧೦॥

ಎಲೈ ರಾಜನೇ, ನೀನು ಒಂದೇದಿನದಲ್ಲಿ ವಿದರ್ಭನಗರಕ್ಕೆ ಖಂಡಿತವಾಗಿ ಹೋಗುವಿ. ಪುರುಷವ್ಯಾಘ್ರನೇ, ಇದನ್ನು ನಾನು ಪ್ರಮಾಣಮಾಡಿ ಹೇಳುತ್ತಿದೇನೆ.

ಏವಮುಕ್ತೋಽಬ್ರವೀದ್ ರಾಜಾ ಬಾಹುಕಂ ಹೃಷ್ಟಮಾನಸಃ ।
ಯದ್ಯೇವಂ ಭವಿತಾ ತ್ವೋ ವೈ ಕಂ ತೇ ಕಾಮಂ ಕರೋಮ್ಯಹಮ್ ।
ಪ್ರತಿಗೃಹ್ಣಾಮಿ ತೇ ವಾಕ್ಯಂ ಸರ್ವಂ ಕಾಮಂ ಕರೋಮ್ಯಹಮ್ ॥೧೧॥

ಹೀಗೆ ಹೇಳಲ್ಪಟ್ಟರಾಜನು ಮನಸ್ಸಿನಲ್ಲಿ ಸಂತೋಷವನ್ನು ಹೊಂದಿದವನಾಗಿ ಬಾಹುಕನನ್ನು ಕುರಿತು ನೀನು ಹೇಳಿದಂತೆಯೇ ನಾಳೆ ನಡೆಯುವುದಾದರೆ ನಿನ್ನ ಯಾವ ಇಚ್ಛೆಯನ್ನು ನಾನು ಪೂರೈಸಲಿ? ನಿನ್ನ ಮಾತನ್ನು ನಾನು ಸ್ವೀಕರಿಸುತ್ತೇನೆ (ನಂಬುತ್ತೇನೆ) ನಿನಗೆ ಅಪೇಕ್ಷಿತವಾದುದೆಲ್ಲವನ್ನೂ ಕೊಡುತ್ತೇನೆ ಎಂದು ಹೇಳಿದನು.

ತತಃ ಪರೀಕ್ಷಾ ಮಶ್ವಾನಾಂ ಚಕ್ರೇ ರಾಜ್ಞಃ ಸ ಬಾಹುಕಃ ।
ಅಶ್ವಶಾಲಾಮುಪಾಗಮ್ಯ ಭಾರ್ಗವಸ್ತರಿನೃಪಾಜ್ಞಯಾ ॥೧೨॥

ಆಗ ಋತುಪರ್ಣನ ಆಜ್ಞೆಯಿಂದ ಬಾಹುಕನು ಅಶ್ವಶಾಲೆಗೆ ಹೋಗಿ ರಾಜನ ಅಶ್ವಗಳ ಪರೀಕ್ಷೆಯನ್ನು ಮಾಡಿದನು.

ಸ ತ್ವರ್ಯಮಾಣೋ ಬಹುಶ ಋತುಪರ್ಣೇನ ಬಾಹುಕಃ ।
ಅಧ್ಯಗಚ್ಛತ್ ಕೃಶಾನಶ್ವಾನ್ ಸುವೇಗಾನಧ್ವನಿ ಕ್ಷಮಾನ್ ॥೧೩॥

ಅನೇಕಬಾರಿ ಋತುಪರ್ಣನಿಂದ ತ್ವರೆಮಾಡಲ್ಪಡುತ್ತಿದ್ದ ಆ ಬಾಹುಕನು ಆಲ್ಲಿದ್ದ ಕೃಶವಾದ ಅಶ್ವಗಳನ್ನು ಒಳ್ಳೆಯವೇಗವುಳ್ಳವುಗಳೆಂದೂ ದೂರದಾರಿಯನ್ನು ಹೋಗುವ ಸಾಮರ್ಥ್ಯವುಳ್ಳವುಗಳೆಂದೂ ನಿಶ್ಚಯಿಸಿದನು.

ತೇಜೋಬಲಸಮಾಯುಕ್ತಾನ್ ಕುಲಶೀಲಸಮನ್ವಿತಾನ್ ।
ವರ್ಜಿತಾಂಲ್ಲಕ್ಷಣೈರ್ಹೀನೈಃ ಪೃಥುಪ್ರೋಥಾನ್ ಮಹಾಹನೂನ್ ॥೧೪॥

ಶುದ್ಧಾನ್ ದಶಭಿರಾವರ್ತ್ಯೈಃ ಸಿಂಧುಜಾನ್ ವಾತರಂಹಸಃ ।
ದೃಶ್ಯಮಾನಾನ್ ಕೃತಾನಂಗೈರ್ಜವೇನಾಪ್ರತಿಮಾನ್ ಪಥಿ ॥೧೫॥

ತೇಜೋಬಲಸಮಾಯುಕ್ತವಾದ ಕುಲಶೀಲಗಳಿಂದ ಕೂಡಿದ ಹೀನಲಕ್ಷಣಗಳಿಂದ ರಹಿತವಾದ ವಿಸ್ತಾರವಾದ ಕಟಿಯನ್ನು ಮತ್ತು ದೊಡ್ಡ ಹನುವನ್ನು ಹೊಂದಿದ ಹತ್ತು ಸುಳಿಗಳಿಂದಕೂಡಿದ ಸಿಂಧುದೇಶದ ವಾತವೇಗವುಳ್ಳ ಶುದ್ಧವಾದ ಅಂಗಗಳು ಕೃಶವಾದರೂ ವೇಗದಲ್ಲಿಯೂ ಮತ್ತು ಮಾರ್ಗದಲ್ಲಿಯೂ ಅಸದೃಶವಾದ ಕುದುರೆಗಳನ್ನು ಆರಿಸಿದನು.

ದೃಷ್ಟ್ವಾ ತಾನಬ್ರವೀದ್ ರಾಜಾ ಕಿಂಚಿತ್ ಕೋಪಸಮಾನ್ವಿತಃ ।
ಕಿಮಿದಂ ಪ್ರಾರ್ಥಿತಂ ಕರ್ತುಂ ಪ್ರಲಬ್ಧವ್ಯಾ ಹಿ ತೇ ವಯಮ್ ॥೧೬॥

ಕಥಮಲ್ಪಬಲಪ್ರಾಣಾ ವಕ್ಷ್ಯಂತೀಮೇ ಹಯಾ ರಥಮ್ ।
ಮಹಾಂತಮಪಿ ಚಾಧ್ವಾನಂ ಗಂತವ್ಯಂ ಕಥಮೀದೃಶೈಃ ॥೧೭॥

ಅವುಗಳನ್ನು ನೋಡಿದ ರಾಜನು ಸ್ವಲ್ಪಕೋಪದಿಂದ ಕೂಡಿದವನಾಗಿ ನೀನು ಏನು ಮಾಡಲು ಹೊರಟಿರುವೆ? ನನಗೆ ಮೋಸಮಾಡಲು ಉದ್ಯುಕ್ತನಾಗಿಲ್ಲವಷ್ಟೇ? ಅಲ್ಪಬಲಪ್ರಾಣವುಳ್ಳ ಈ ಕುದುರೆಗಳು ಬಹಳ ದೂರ ಹೇಗೆ ರಥವನ್ನು ಹೊರುತ್ತವೆ? ಇಂತಹ ಕುದುರೆಗಳು ದೀರ್ಘವಾದ ಮಾರ್ಗವನ್ನು ಹೇಗೆ ಪ್ರಯಾಣಮಾಡುತ್ತವೆ? ಎಂದು ಕೇಳಿದನು.

ಬಾಹುಕಃ

ಏತೇ ಹಯಾ ಗಮಿಷ್ಯಂತಿ ವಿದರ್ಭಾನ್ ನಾತ್ರ ಸಂಶಯಃ ।
ಅಶ್ವಾನ್‌ಯಾನ್ ಮನ್ಯಸೇ ರಾಜನ್ ಬ್ರೂಹಿ ತಾನ್ ಯೋಜಯಾಮಿ ತೇ ॥

ಈ ಅಶ್ವಗಳು ವಿದರ್ಭವನ್ನು ತಲುಪುತ್ತವೆ ಇದರಲ್ಲಿ ಸಂಶಯವಿಲ್ಲ. ರಾಜನೇ ಇಲ್ಲದಿದ್ದರೆ ಯಾವ ಅಶ್ವಗಳು ನಿನಗೆ ಸರಿಯಾಗಿ ತೋರುತ್ತವೆ ಎಂದು ಹೇಳು ಅವುಗಳನ್ನೇ ರಥಕ್ಕೆ ಹೂಡುತ್ತೇನೆ.

ತ್ವಮೇವ ಹಯತತ್ತ್ವಜ್ಞಃ ಕುಶಲಶ್ಚಾಸಿ ಬಾಹುಕ ।
ಯಾನ್ ಮನ್ಯಸೇ ಸಮರ್ಥಾನ್ ತ್ವಂ ಕ್ಷಿಪ್ರಂ ತಾನೇವ ಯೋಜಯ ॥

ನೀನೇ ಹಯತತ್ತ್ವವನ್ನು ತಿಳಿದವನೂ ಕುಶಲನೂ ಆಗಿದ್ದೀಯೆ. ಬಾಹುಕನೇ, ಯಾವ ಅಶ್ವಗಳು ಸಮರ್ಥವಾಗಿವೆಯೆಂದು ನೀನು ಭಾವಿಸುವಿಯೋ ಅವುಗಳನ್ನು ಬೇಗ ರಥಕ್ಕೆ ಹೂಡು ಎಂದು ಋತುಪರ್ಣನು ಹೇಳಿದನು.

ತತಸ್ತದಶ್ವಾಂತ್ತತುರಃ ಕುಲಶೀಲಸಮನ್ವಿತಾನ್ ।
ಯೋಜಯಾಮಾಸ ಕುಶಲೋ ಜವಯುಕ್ತಾನ್ ರಥೇ ನಳಃ ॥೨೦॥

ಆಗ ಕುಶಲನಾದ ನಳನು ಕುಲಶೀಲಸಮನ್ವಿತವಾದ ವೇಗಯುಕ್ತವಾದ ನಾಲ್ಕುದುರೆಗಳನ್ನು ರಥದಲ್ಲಿ ಹೂಡಿದನು.

ತತೋ ಯುಕ್ತಂ ರಥಂ ರಾಜಾ ಸಮಾರೋಹತ್ ತ್ವರಾನ್ವಿತಃ ।
ಅತಃ ಪರ್ಯಪತನ್ ರಾಜನ್ ಜಾನುಭಿಸ್ತೇ ಹಯೋತ್ತಮಾಃ ॥೨೧॥

ಆಗ ರಾಜನು ತ್ವರೆಯಿಂದ ಹೂಡಿದ ರಥವನ್ನು ಏರಿದನು. ರಾಜನೇ ಆ ಶ್ರೇಷ್ಠವಾದ ಅಶ್ವಗಳು ತಮ್ಮ ಮಂಡಿಯಿಂದ ಭೂಮಿಯನ್ನು ಮುಟ್ಟುತ್ತಾ ನೆಗೆದವು.

ತತೋ ನರವರಃಶ್ರೀಮಾನ್ ನಳೋ ರಾಜಾ ವಿಶಾಂಪತೇ ।
ಸಾಂತ್ವಯಾಮಾಸ ತಾನಶ್ವಾನ್ ತೇಜೋಬಲಸಮನ್ವಿತಾನ್ ॥೨೨॥

ಎಲೈ ರಾಜನೇ, ಆಗ ಪುರುಷಶ್ರೇಷ್ಠನೂ ಶ್ರೀಮಂತನೂ ರಾಜನೂ ಆದ ನಳನು ತೇಜೋಬಲಸಮನ್ವಿತವಾದ ಆ ಕುದುರೆಗಳನ್ನು ಸಮಾಧಾನ ಪಡಿಸಿದನು.

ರಶ್ಮಿಭಿಶ್ಚ ಸಮುದ್ಯಮ್ಯ ನಳೋ ಯಾತುಮಿಯೇಷ ಸಃ ।
ಸೂತಮಾರೋಪ್ಯ ವಾರ್ಷ್ಣೇಯಂ ಜವಮಾಸ್ಥಾಯ ವೈ ಪರಮ್ ॥೨೩॥

ನಳನು ಕಡಿವಾಣಗಳನ್ನು ಹಿಡಿದು ವೃಷ್ಣಿಕುಲದಲ್ಲಿ ಜನಿಸಿದ ಇನ್ನೊಬ್ಬ ಮನುಷ್ಯನನ್ನು (ವಾರ್ಷ್ಣೇಯನನ್ನು) ಸೂತನನ್ನಾಗಿ ಮಾಡಿಕೊಂಡು ಶ್ರೇಷ್ಠವಾದ ಜವವನ್ನುಹೊಂದಿ ರಥವನ್ನು ನಡೆಸಲು ಉದ್ಯುಕ್ತನಾದನು.

ತೇ ಚೋದ್ಯಮಾನಾ ಬಹುಧಾ ಬಾಹುಕೇನ ಹಯೋತ್ತಮಾಃ ।
ಸಮುತ್ಪೇತುರಿವಾಕಾಶಂ ರಥಿನಂ ಮೋಹಯಂತಿ ಚ ॥೨೪॥

ಬಾಹುಕನಿಂದ ಅನೇಕರೀತಿಯಿಂದ ಪ್ರೇರಿಸಲ್ಪಟ್ಟ ಆ ಶ್ರೇಷ್ಠವಾದ ಅಶ್ವಗಳು ರಥಿಕನಾದ ಋತುಪರ್ಣನಿಗೆ ಮೋಹವನ್ನು ಉಂಟುಮಾಡುತ್ತಾ ಆಕಾಶದಲ್ಲಿನೆಗದಂತೆ ಓಡಿದವು.

ತಥಾ ತು ದೃಷ್ಟ್ವಾ ತಾನಶ್ವಾನ್ ವಹತೋ ವಾತರಂಹಸಃ ।
ಅಯೋಧ್ಯಾಧಿಪತಿಃ ಶ್ರೀಮಾನ್ ವಿಸ್ಮಯಂ ಪರಮಂ ಯಯೌ ॥೨೫॥

ಅಯೋಧ್ಯಾಧಿಪತಿಯಾದ ಶ್ರೀಮಂತನಾದ ಋತುಪರ್ಣನು ವಾಯುವೇಗದಿಂದ ಹಾಗೆ ರಥವನ್ನು ಎಳೆಯುವ ಆ ಅಶ್ವಗಳನ್ನು ನೋಡಿ ಬಹಳ ವಿಸ್ಮಯವನ್ನು ಹೊಂದಿದನು.

ರಥಘೋಷಂ ಚ ತಂ ಶ್ರುತ್ವಾ ಹಯಾನಾಂ ಗ್ರಹಣಂ ಚ ತತ್ ।
ವಾರ್ಷ್ಣೇಯಶ್ಚಿಂತಯಾಮಾಸ ಬಾಹುಕಸ್ಯ ಹಯಜ್ಞತಾಮ್ ॥೨೬॥

ರಥಘೋಷವನ್ನು ಕೇಳಿ ಮತ್ತು ಅಶ್ವಗಳ ಕಡಿವಾಣಗಳನ್ನು ಹಿಡಿಯುವ ಸಾಮಾರ್ಥ್ಯವನ್ನು ನೋಡಿ ವಾರ್ಷ್ಣೇಯನಾದ ಸೂತನು ಬಾಹುಕನ ಅಶ್ವವಿದ್ಯಾಪರಿಣತಿಯನ್ನು ಕುರಿತು ಚಿಂತಿಸಿದನು.

ಕಿಂ ನು ಸ್ಯಾನ್ಮಾತಲಿರಯಂ ದೇವರಾಜಸ್ಯ ಸಾರಥಿಃ ।
ತಥಾ ಹಿ ಲಕ್ಷಣಂ ವೀರೇ ಬಾಹುಕೇ ದೃಶ್ಯತೇ ಮಹತ್ ॥೨೭॥

ಇವನೇನು ದೇವರಾಜನಾದ ಇಂದ್ರನ ಮಾತಲಿಯೇ? ವೀರನಾದ ಈ ಬಾಹುಕನಲ್ಲಿ ಅಂತಹ ಲಕ್ಷಣವು ಕಂಡುಬರುತ್ತಿದೆ.

ಶಾಲಿಹೋತ್ರೋಽಪಿ ಕಿಂನು ಸ್ಯಾದ್ಧಯಾನಾಂ ಕುಲತತ್ತ್ವವಿತ್ ।
ಮಾನುಷಂ ಪರಮಂ ಪ್ರಾಪ್ತೋ ವಪುಃ ಪರಮಶೋಭನಮ್ ॥೨೮॥

ಅಥವಾ ಹಯಗಳ ಕುಲಗಳ ವಿಷಯದಲ್ಲಿ ಪರಿಣತನಾದ ಪರಮ ಶೋಭನವಾದ ಮನುಷ್ಯದೇಹವನ್ನು ಧರಿಸಿದ ಶಾಲಿಹೋತ್ರ ಋಷಿಯಿರಬಹುದೆ?

ಉತಾಹೋಸ್ವಿದ್ ಭವೇದ್‌ರಾಜಾ ನಳಃ ಪರಪುರಂಜಯಃ ।
ಸೋಽಯಂ ನೃಪತಿರಾಯಾತ ಇತ್ಯೇವಂ ಸಮಚಿಂತಯತ್ ॥೨೯॥

ಅಥವಾ ಇವನು ಪರಪುರಂಜಯನಾದ ನಳನಾಗಿ ಇಲ್ಲಿಗೆ ಬಂದಿರಬಹುದೆ ಎಂದೂ ಈ ರೀತಿಯಾಗಿ ಆಲೋಚಿಸಿದನು.

ಅಥವಾऽಯಂ ನಳಾದ್ ವೇದ ವಿದ್ಯಾಂ ತಾಮೇವ ಬಾಹುಕಃ ।
ತುಲ್ಯಂ ಹಿ ಲಕ್ಷಯೇ ಜ್ಞಾನಂ ಬಾಹುಕಸ್ಯ ನಳಸ್ಯ ಚ ॥೩೦॥

ಅಥವಾ ಈ ಬಾಹುಕನು ನಳನಿಂದ ಅವನು ತಿಳಿದಿರುವ ಅಶ್ವವಿದ್ಯೆಯನ್ನೇ ಸಂಪಾದಿಸಿದ್ದಾನೆಯೇ? ಬಾಹುಕ ಮತ್ತು ನಳ ಇವರಿಬ್ಬರ ಅಶ್ವಜ್ಞಾನವು ಸಮಾನವೆಂದು ತೋರುತ್ತಿದೆ.

ಅಪಿ ಚೇದಂ ವಚಸ್ತುಲ್ಯಮಸ್ಯ ಮನ್ಯೇ ನಳಸ್ಯ ಚ ।
ನಾಯಂ ನಳೋ ಮಹಾವೀರ್ಯಃ ತದ್ವಿದ್ಧ್ಯಶ್ವ ಭವಿಷ್ಯತಿ ॥೩೧॥

ಪ್ರಚ್ಛನ್ನಾ ಹಿ ಮಹಾತ್ಮಾನಃ ಚರಂತಿ ಪೃಥಿವೀಮಿಮಾಮ್ ।
ದೈವೇನ ವಿಧಿನಾ ಯುಕ್ತಾಃ ಶಕ್ತಾಶ್ಚೈವ ವಿರೂಪಿಣಃ ॥೩೨॥

ಮತ್ತು ಬಾಹುಕನು ಆಡುವ ಮಾತುಗಳೂ ಸಹ ನಳನಮಾತುಗಳಿಗೆ ಸಮಾನವಾಗಿವೆ. ಇವನು ಮಹಾಪರಾಕ್ರಮಿಯಾದ ನಳನಲ್ಲ. ಆದರೆ ನಳನ ವಿದ್ಯೆಯನ್ನು ಮಾತ್ರ ಹೊಂದಿದ್ದಾನೆ. ಮಹಾತ್ಮರು ದೈವವಿಧಿಗೆ ವಶರಾಗಿ ಶಕ್ತರಾಗಿದ್ದರೂ ಸಹ ವಿರೂಪವನ್ನು ಧರಿಸಿ ಈ ಭೂಮಿಯಲ್ಲಿ ಪ್ರಚ್ಛನ್ನರಾಗಿ ಸಂಚರಿಸುತ್ತಾರೆ.

ಭವೇತ್ತು ಮತಿಭೇದೋ ಮೇ ಗಾತ್ರವೈರೂಪ್ಯಕಂ ಪ್ರತಿ ।
ಪ್ರಮಾಣಾತ್ ಪರಿಹೀನಸ್ತು ಭವೇದಿತಿ ಹಿ ಮೇ ಮತಿಃ ॥೩೩॥

ವಯಃಪ್ರಮಾಣಂ ತತ್ತುಲ್ಯಂ ರೂಪೇಣ ತು ವಿಪರ್ಯಯಃ ।
ನಳಂ ಸರ್ವಗುಣೈರ್ಯುಕ್ತಂ ಮನ್ಯೇ ಬಾಹುಕಮಂತತಃ ॥೩೪॥

ಏವಂ ವಿಚಾರ್ಯ ಬಹುಶೋ ವಾರ್ಷ್ಣೇಯಃ ಪರ್ಯಚಿಂತಯತ್ ।
ಹೃದಯೇನ ಮಹಾರಾಜ ಪುಣ್ಯಶ್ಲೋಕಸ್ಯ ಸಾರಥಿಃ ॥೩೫॥

ಈ ಶರೀರದ ವ್ಯತ್ಯಾಸವನ್ನು ನೋಡಿ ನನಗೆ ಏನಾದರೂ ಬುದ್ಧಿಭೇದ ಉಂಟಾಗಿರಬಹುದು. ಇವನು ಪ್ರಮಾಣದಿಂದ ಹೀನನಾದ (ಎತ್ತರದಲ್ಲಿ

ಕಡಿಮೆಯಾದ) ನಳನೇ ಇರಬಹುದು ಎಂದು ನನ್ನ ಬುದ್ಧಿ. ವಯಸ್ಸಿನ ಪ್ರಮಾಣವು ನಳನ ವಯಸ್ಸಿಗೆ ಸಮಾನವಾಗಿದೆ. ರೂಪವು ಮಾತ್ರ ವಿಪರೀತವಾಗಿದೆ. ಎಷ್ಟು ಯೋಚಿಸಿದರೂ ಈ ಬಾಹುಕನನ್ನು ಸರ್ವಗುಣಯುಕ್ತನಾದ ನಳನೆಂದೇ ನಾನು ಭಾವಿಸುತ್ತೇನೆ. ಹೀಗೆ ಎಲೈ ಮಹಾರಾಜನೇ! ಪುಣ್ಯಶ್ಲೋಕನಾದ ಋತುಪರ್ಣನ ಸಾರಥಿಯಾದ ವಾರ್ಷ್ಣೇಯನು ಮನಸ್ಸಿನಲ್ಲಿಯೇ ಹೀಗೆ ಅನೇಕಬಾರಿ ವಿಚಾರಮಾಡಿದನು.

ಋತುಪರ್ಣಸ್ತು ದೃಷ್ಟ್ವೈವ ಬಾಹುಕಸ್ಯ ಹಯಜ್ಞತಾಮ್ ।
ಚಿಂತಯನ್ ಮುಮುದೇ ವೀರಃ ಸಹವಾರ್ಷ್ಣೇಯಸಾರಥಿಃ ॥೩೬॥

ವೀರನಾದ ಋತುಪರ್ಣನಾದರೋ ಬಾಹುಕನ ಅಶ್ವಕೌಶಲವನ್ನು ನೋಡಿಯೇ ಅವನ ವಿದ್ಯೆಯನ್ನು ಚಿಂತಿಸುತ್ತಾ ಆ ಸೂತ ಮತ್ತು ಸಾರಥಿಯ ಜೊತೆಯಲ್ಲಿ ಸಂತೋಷಪಟ್ಟನು.

ಬಲಂ ಶೌರ್ಯಂ ತಥೋತ್ಸಾಹಂ ಹಯಾನಾಂ ಗ್ರಹಣಂ ಚ ತತ್ ।
ಪರಂ ಯತ್ನಂ ಚ ಸಂಪ್ರೇಕ್ಷ್ಯ ಪರಾಂ ಮುದಮವಾಪ ಸಃ ॥೩೭॥

ಅವನು ಬಾಹುಕನ ಬಲವನ್ನೂ ಶೌರ್ಯವನ್ನೂ ಉತ್ಸಾಹವನ್ನೂ ಅಶ್ವಗಳನ್ನು ಹಿಡಿಯುವ ಶ್ರೇಷ್ಠವಾದ ಪ್ರಯತ್ನವನ್ನೂ ನೋಡಿ ಬಹಳ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತಾರನೆಯ ಅಧ್ಯಾಯ

(ಬಾಹುಕನ ಸಾರಥ್ಯ. ಋತುಪರ್ಣನಿಂದ ಅಶ್ವಹೃದಯಪ್ರಾಪ್ತಿ. ನಳದೇಹದಿಂದ ಕಲಿಯ ನಿರ್ಗಮನ ನಳನ ಪ್ರಕೃತಿಸ್ಥಿತಿ.)

ಬೃಹದಶ್ವಃ

ಸ ನದೀಃ ಪರ್ವತಾಂಶ್ಚೈವ ವನಾನಿ ಚ ಸರಾಂಸಿ ಚ ।
ಅತಿಚಕ್ರಾಮ ವೇಗೇನ ಖೇಚರಃ ಖೇ ಚರನ್ನಿವ ॥೧॥

ಗಗನಚರನಾದವನು ಗಗನದಲ್ಲಿ ಸಂಚರಿಸುವಂತೆ ಬಾಹುಕನು ನದಿಗಳನ್ನು ಪರ್ವತಗಳನ್ನು ವನಗಳನ್ನು ಮತ್ತು ಸರೋವರಗಳನ್ನು ದಾಟಿ ಸಾಗಿದನು.

ತಥಾ ಪ್ರಯಾತೇ ತು ರಥೇ ತದಾ ಭಾರ್ಗವಸ್ತದಿರ್ನೃಪಃ ।
ಉತ್ತರೀಯಮಥಾಪಶ್ಯದ್ ಭ್ರಷ್ಟಂ ಪರಪುರಂಜಯಃ ॥೨॥

ತತಃ ಸ ತ್ವರಮಾಣಸ್ತು ಪಟೇ ನಿಪತಿತೇ ತದಾ ।
ಗ್ರಹೀಷ್ಯಾಮೀತಿ ತಂ ರಾಜನ್ ನಳಮಾಹ ಮಹಾಮನಾಃ ॥೩॥

ರಥವು ಹಾಗೆ ಸಾಗುತ್ತಿರಲು ಆಗ ಪರಪುರಂಜಯನಾದ ಋತುಪರ್ಣರಾಜನು ತನ್ನ ಉತ್ತರೀಯವು ಬಿದ್ದುಹೋದುದನ್ನು ಗಮನಿಸಿದನು. ಮಹಾಮನನಾದ ಅವನು ಉತ್ತರೀಯವು ಬಿದ್ದು ಹೋಗುತ್ತಿರಲು ಅದನ್ನು ತೆಗೆದುಕೊಳ್ಳುವೆನೆಂದು ತ್ವರೆಯಿಂದ ನಳನನ್ನು ಕುರಿತು ಹೇಳಿದನು.

ನಿಗೃಹ್ಣೀಷ್ವ ಮಹಾಬುದ್ಧೇ ಹಯಾನೇತಾನ್ ಮಹಾಜವಾನ್ ।
ವಾರ್ಷ್ಣೇಯೋ ಯಾವದೇತನ್ಮೇ ಪಟಮಾನಯತಾಮಿತಿ ॥೪॥

ಎಲೈ ಮಹಾಬುದ್ಧಿಯುಳ್ಳವನೇ, ಈ ಮಹಾವೇಗವನ್ನು ಹೊಂದಿರುವ ಅಶ್ವಗಳನ್ನು ನಿಲ್ಲಿಸು ಅಷ್ಟರಲ್ಲಿ ವಾರ್ಷ್ಣೇಯನು ನನ್ನ ಉತ್ತರೀಯವನ್ನು ತರಲಿ.

ನಳಸ್ತಂ ಪ್ರತ್ಯುವಾಚಾಥ ದೂರೇ ಭ್ರಷ್ಟಃ ಪಟಸ್ತವ ।
ಯೋಜನಂ ಸಮತಿಕ್ರಾಂತೋ ನ ಚ ಶಕ್ಯಸ್ತ್ವಯಾ ಪುನಃ ॥೫॥

ನಳನು ಅವನನ್ನು ಕುರಿತು ನಿನ್ನ ಉತ್ತರೀಯವು ಬಹಳ ದೂರದಲ್ಲಿ ಬಿದ್ದುಹೋಯಿತು. ನಾವು ಅದನ್ನು ದಾಟ ಒಂದುಯೋಜನ ಬಂದಿದ್ದೇವೆ. ನೀನು ಅದನ್ನು ಪುನಃತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಉತ್ತರವನ್ನು ಕೊಟ್ಟನು.

ಏವಮುಕ್ತೋ ನಳೋನಾಥ ತಥಾ ಭಾರ್ಗವಸ್ತದಾರ್ನ್ನಪಃ ।
ಆಸಸಾದ ವನೇ ರಾಜನ್ ಫಲವಂತಂ ವಿಭೀತಕಮ್ ॥೬॥

ನಳನಿಂದ ಹೀಗೆ ಹೇಳಲ್ಪಟ್ಟ ಋತುಪರ್ಣರಾಜನು ಮುಂದೆ ಹಣ್ಣುಗಳನ್ನು ಬಿಟ್ಟಿರುವ ಒಂದು ತಾರಿಯ ಮರವನ್ನು ಸಮೀಪಿಸಿದನು.

ತಂ ದೃಷ್ಟ್ವಾ ಬಾಹುಕಂ ರಾಜಾ ತ್ವರಮಾಣೋಽಭ್ಯಭಾಷತ ।
ಮಮಾಪಿ ಸೂತ ಪಶ್ಯ ತ್ವಂ ಸಂಖ್ಯಾನೇ ಪರಮಂ ಬಲಮ್ ॥೭॥

ಅದನ್ನು ನೋಡಿ ಆ ರಾಜನು ಶೀಘ್ರವಾಗಿ ಬಾಹುಕನನ್ನು ಕುರಿತು ಸೂತನೇ ಎಣಿಸುವುದರಲ್ಲಿನನ್ನ ಶ್ರೇಷ್ಠಸಾಮರ್ಥ್ಯವನ್ನು ನೋಡು ಎಂದು ಹೇಳಿದನು.

ಸರ್ವಃ ಸರ್ವಂ ನ ಜಾನಾತಿ ಸರ್ವಜ್ಞೋ ನಾಸ್ತಿ ಕಶ್ಚನ ।
ನೈಕತ್ರ ಪರಿನಿಷ್ಠಾಽಸ್ತಿ ಜ್ಞಾನಸ್ಯ ಪುರುಷೇ ಕ್ವಚಿತ್ ॥೮॥

ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ. ಯಾವನೂ ಸರ್ವಜ್ಞನಲ್ಲ. ಜ್ಞಾನವು ಯಾವುದೇ ಪುರುಷನಲ್ಲಿ ಪರಿಪೂರ್ಣವಾಗಿರುವುದಿಲ್ಲ.

ವೃಕ್ಷೇಽಸ್ಮಿನ್ ಯಾನಿ ಪರ್ಣಾನಿ ಫಲಾನ್ಯಪಿ ಚ ಬಾಹುಕ ।
ಪತಿತಾನಿ ಚ ಯಾನ್ಯತ್ರ ತತ್ಶೈಕಮಧಿಕಂ ಕೃತಮ್ ॥೯॥

ಏಕಪತ್ರಾಧಿಕಂ ಪತ್ರಂ ಫಲಮೇಕಂ ಚ ಬಾಹುಕ ।
ಪಂಚಕೋಟ್ಯೋಥ ಪತ್ರಾಣಾಂ ದ್ವಯೋರಪಿ ಚ ಶಾಖಿಯೋಃ ॥೧೦॥

ಬಾಹುಕನೇ, ಈ ವೃಕ್ಷದಲ್ಲಿ ಎಷ್ಟು ಎಲೆಗಳು ಮತ್ತು ಫಲಗಳಿವೆಯೋ ಮತ್ತು ವೃಕ್ಷದಿಂದ ನೆಲದ ಮೇಲೆ ಎಷ್ಟು ಎಲೆಗಳು ಮತ್ತು ಫಲಗಳು ಬಿದ್ದಿವೆಯೋ ಅದರಲ್ಲಿ ನೆಲದಮೇಲೆ ಬಿದ್ದಿರುವುದಕ್ಕಿಂತ ವೃಕ್ಷದಲ್ಲಿ ಒಂದು ಪತ್ರವು ಮತ್ತು ಒಂದು ಫಲವೂ ಅಧಿಕವಾಗಿದೆ. ಈ ಎರಡು ಕೊಂಬೆಗಳಲ್ಲಿ ಒಟ್ಟು (ಐದುಕೋಟಿ ಪತ್ರಗಳಿವೆ)

ಪ್ರಚಿನುಹ್ಯಸ್ಯ ಶಾಖೇ ದ್ವೇ ಯಾಶ್ಚಾನ್ಯಾಃ ಪ್ರತಿಶಾಖಿಕಾಃ ।
ಆಭ್ಯಾಂ ಫಲಸಹಸ್ರೇ ದ್ವೇ ಪಂಚಾನಾಂ ಶತಮೇವ ಚ ।
ತತೋ ರಥಾದವಪ್ಲುತ್ಯ ರಾಜಾನಂ ಬಾಹುಕೋಽಬ್ರವೀತ್ ॥೧೧॥

ಈ ಎರಡು ಶಾಖೆಗಳಲ್ಲಿ ಮತ್ತು ಅವುಗಳಿಗೆ ಇರುವ ರೆಂಬೆಗಳಲ್ಲಿ ಇರುವ ಫಲಗಳನ್ನು ಕಿತ್ತುಕೋ ಅವು ಒಟ್ಟು ಎರಡುಸಾವಿರದ ಐದುನೂರು ಫಲಗಳಾಗುತ್ತವೆ. (ಎಂದು ಹೇಳಿದನು.)

ಪರೋಕ್ಷಮಿವ ಮೇ ರಾಜನ್ ಕತ್ಥಸೇ ಶತ್ರುಕರ್ಶನ ।
ಅಥ ತೇ ಗಣಿತೇ ರಾಜನ್ ವಿಜಾನಾಮ್ಯಪರೋಕ್ಷತಾಮ್ ॥೧೨॥

ಆಗ ಬಾಹುಕನು ರಥದಿಂದ ಕೆಳಗೆ ಹಾರಿ ರಾಜನನ್ನು ಕುರಿತು ಹೇಳಿದನು ಶತ್ರುಕರ್ಶನನಾದ ರಾಜನೇ ನನಗೆ ಏನೂ ತಿಳಿಯುವುದಿಲ್ಲವೆಂಬಂತೆ ಮಾತನಾಡುತ್ತಿದ್ದೀಯೆ, ಈಗ ನಾನು ಆ ಫಲಗಳನ್ನು ಎಣಿಸಿ ಪ್ರತ್ಯಕ್ಷವಾಗಿ ತಿಳಿಯುತ್ತೇನೆ.

ಪ್ರತ್ಯಕ್ಷಂ ತೇ ಮಹಾರಾಜ ಗಣಯಿಷ್ಯೇ ವಿಭೀತಕಮ್ ।
ಅಹಂ ಹಿ ನಾಭಿಜಾನಾಮಿ ಭವೇದೇವಂ ನವೇತಿ ಚ ॥೧೩॥

ಮಹಾರಾಜನೇ ನೀನು ಹೇಳಿದುದು ಸರಿಯೋ ಅಲ್ಲವೋ ಎಂದು ನನಗೆ ತಿಳಿದಿಲ್ಲ. ನಿನ್ನ ಎದುರಿಗೆ ಆ ತಾರಿಯ ಫಲಗಳನ್ನು ಎಣಿಸುವೆನು.

ಸಂಖ್ಯಾಸ್ಯಾಮಿ ಫಲಾನ್ಯಸ್ಯ ಪಶ್ಯತಸ್ತೇ ಜನಾಧಿಪ ।
ಮುಹೂರ್ತಮಿವ ವಾರ್ಷ್ಣೇಯೋ ರಶ್ಮೀನ್ ಯಚ್ಛತು ವಾಜಿನಾಮ್ ॥

ಎಲೈ ಜನಾಧಿಪನೇ, ನೀನು ನೋಡುತ್ತಿರುವಂತೆಯೇ ಈ ಕೊಂಬೆಯ ಫಲಗಳನ್ನು ಎಣಿಸುತ್ತೇನೆ. ಈ ವಾರ್ಷ್ಣೆಯನು ಒಂದು ಮುಹೂರ್ತಕಾಲ ಕುದುರೆಗಳ ಕಡಿವಾಣವನ್ನು ಹಿಡಿದುಕೊಂಡಿರಲಿ.

ತಮಬ್ರವೀನ್ನೃಪಃ ಸೂತಂ ನಾಯಂ ಕಾಲೋ ವಿಲಂಬಿತುಮ್ ।
ಬಾಹುಕತ್ತ ಬ್ರವೀದೇನಂ ಪರಂ ಯತ್ನಂ ಸಮಾಸ್ಥಿತಃ ॥೧೫॥

ಪ್ರತೀಕ್ಷಸ್ವ ಮುಹೂರ್ತಂ ತ್ವಮಥವಾ ತ್ವರತೇ ಭವಾನ್ ।
ಏಷ ಯಾತಿ ಶಿವಃ ಪಂಥಾ ಯಾಹಿ ವಾರ್ಷ್ಣೇಯಸಾರಥಿಃ ॥೧೬॥

ಆವನನ್ನು ಕುರಿತು ರಾಜನು ಇದು ವಿಳಂಬಮಾಡುವುದಕ್ಕೆ ಸಮಯವಲ್ಲ ಎಂದು ಹೇಳಿದನು. ಬಾಹುಕನಾದರೋ ಅವನನ್ನು ಕುರಿತು ಮಹಾಪ್ರಯತ್ನವನ್ನು ಮಾಡುತ್ತಲೇ ಒಂದು ಮುಹೂರ್ತನಿರೀಕ್ಷಿಸು. ಇಲ್ಲದಿದ್ದರೆ ನೀನು ತ್ವರೆಮಾಡುತ್ತಿದ್ದೀಯೆ, ಈ ಮಂಗಳವಾದ ಮಾರ್ಗವು ಮುಂದೆ ಹೋಗುತ್ತದೆ. ವಾರ್ಷ್ಣೇಯನನ್ನು ಸಾರಥಿಯನ್ನಾಗಿ ಮಾಡಿಕೊಂಡು ಮುಂದೆಹೋಗು ಎಂದು ಹೇಳಿದನು.

ಬೃಹದಶ್ವಃ

ಅಬ್ರವೀದೃತುಪರ್ಣಸ್ತಂ ಸಾಂತ್ವಯನ್ ಕುರುನಂದನ ॥೧೭॥

ತ್ವಮೇವ ಯಂತಾ ನಾನ್ಯೋಽಸ್ತಿ ಪೃಥಿವ್ಯಾಮಪಿ ಬಾಹುಕ ।
ತತ್ಪತೇ ಯಾತುಮಿಚ್ಛಾಮಿ ವಿದರ್ಭಾನ್ ಹಯಕೋವಿದ ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ನ ವಿಘ್ನಂ ಕರ್ತುಮರ್ಹಸಿ ॥೧೮॥

ಕುರುನಂದನನೇ, ಆಗ ಋತುಪರ್ಣನು ಆವನನ್ನು ಸಮಾಧಾನಪಡಿಸುತ್ತಾ ಬಾಹುಕನೇ ನೀನೇ ಶ್ರೇಷ್ಠನಾದ ಸಾರಥಿ. ನಿನ್ನಂತಹ ಇನ್ನೊಬ್ಬ ಸಾರಥಿಯು ಭೂಮಿಯಲ್ಲಿಲ್ಲ. ಅಶ್ವಕೋವಿದನೇ ನಿನ್ನ ನಿಮಿತ್ತದಿಂದ ನಾನು ವಿದರ್ಭವನ್ನು ಸೇರಲು ಬಯಸುತ್ತೇನೆ. ನಿನಗೆ ಶರಣಾಗತನಾಗಿದ್ದೇನೆ. ನನಗೆ ವಿಘ್ನವನ್ನು ಮಾಡಬೇಡ ಎಂದು ಹೇಳಿದನು.

ಕಾಮಂ ಚ ತೇ ಕರಿಷ್ಯಾಮಿ ಯನ್ಮಾಂ ವಕ್ಷ್ಯಸಿ ಬಾಹುಕ ।
ವಿದರ್ಭಾನ್ ಯದಿ ಯಾತ್ವಾದ್ಯ ಸೂರ್ಯಂ ದರ್ಶಯಿತಾಸಿ ಮೇ ॥

ಬಾಹುಕನೇ, ನೀನು ಈ ದಿನ ಪ್ರಯಾಣವನ್ನುಮಾಡಿ ವಿದರ್ಭದೇಶದಲ್ಲಿ ನನಗೆ ಸೂರ್ಯಾಸ್ತದ ವೇಳೆಯಲ್ಲಿ ಸೂರ್ಯನನ್ನು ತೋರಿಸಿದರೆ ನೀನು ಕೇಳಿದ ಕಾಮವನ್ನು ನಿನಗೆ ಪೂರೈಸುವೆನು ಎಂದು ಹೇಳಿದನು.

ಅಥಾಬ್ರವೀದ್‌ಬಾಹುಕಸ್ತಂ ಸಂಖ್ಯಾಯೇಮಂ ವಿಭೀತಕಮ್ ।
ತತೋ ವಿದರ್ಭಾನ್ ಯಾಸ್ಯಾಮಿ ನತೇ ವಿಘ್ನೋ ಭವಿಷ್ಯತಿ ॥೨೦॥

ಅಕಾಮ ಇವ ತಂ ರಾಜಾ ಗಣಯಸ್ವೇತ್ಯುವಾಚ ಹ ॥೨೧॥

ಸೋಽವತೀರ್ಯ ರಥಾತ್ ತೂರ್ಣಂ ಗಣಯಾಮಾಸ ವೈ ದ್ರುತಮ್ ।
ತತಃ ಸ ವಿಸ್ಮಯಾವಿಷ್ಟೋ ರಾಜಾನಮಿದಮಬ್ರವೀತ್ ॥೨೨॥

ಗಣಯಿತ್ವಾ ಯಥೋಕ್ತಾನಿ ತಾವಂತ್ಯೇವ ಫಲಾನಿ ತು ।
ಅತ್ಯದ್ಭುತಮಿದಂ ರಾಜನ್ ದೃಷ್ಟವಾನಸ್ಮಿ ತೇ ಬಲಮ್ ।
ಶ್ರೋತುಮಿಚ್ಛಾಮಿ ತಾಂ ವಿದ್ಯಾಂ ಯಯೈತಜ್ಜ್ಞಾಯತೇ ನೃಪ ॥೨೩॥

ಆಗ ಬಾಹುಕನು ಅವನನ್ನು ಕುರಿತು ಈ ತಾರಿಯಫಲಗಳನ್ನು ಎಣಿಸಿ ಅನಂತರ ವಿದರ್ಭವನ್ನು ತಲುಪುವೆನು ನಿನಗೆ ವಿಘ್ನವುಂಟಾಗುವುದಿಲ್ಲ ಎಂದು ಹೇಳಿದನು. ರಾಜನು ಇಷ್ಟವಿಲ್ಲದೆಯೇ ಎಣಿಸು ಎಂದು ಹೇಳಿದನು. ಬಾಹುಕನು ಬೇಗ ರಥದಿಂದ ಇಳಿದು ಶೀಘ್ರವಾಗಿ ಎಣಿಸಿದನು. ಅನಂತರ ವಿಸ್ಮಯಾವಿಷ್ಟನಾದ ಆಬಾಹುಕನು ರಾಜನನ್ನು ಕುರಿತು ಹೀಗೆ ಹೇಳಿದನು. ಎಲೈ ರಾಜನೇ ನಾನು ಫಲಗಳನ್ನು ಎಣಿಸಿ ನೀನು ಹೇಳಿದಷ್ಟೇ ಇವೆ ಎಂದು ನೋಡಿ ಈ ನಿನ್ನ ಆತ್ಯದ್ಭುತವಾದ ಸಾಮರ್ಥ್ಯವನ್ನು ನೋಡುತ್ತಿದ್ದೇನೆ. ರಾಜನೇ ಯಾವ ವಿದ್ಯೆಯಿಂದ ಇದು ತಿಳಿಯುತ್ತದೆಯೋ ಅಂತಹ ವಿದ್ಯೆಯನ್ನು ನಿನ್ನಿಂದ ಉಪದೇಶಪಡೆಯಲು ಬಯಸುತ್ತೇನೆ.

ತಮುವಾಚ ತತೋ ರಾಜಾ ತ್ವರಿತೋ ಗಮನೇ ತದಾ ।
ವಿದ್ಧ್ಯಕ್ಷಹೃದಯಜ್ಞಂ ಮಾಂ ಸಂಖ್ಯಾನೇ ಚ ವಿಶಾರದಮ್ ॥೨೪॥

ಆಗ ರಾಜನು ಅವನಿಗೆ ತ್ವರೆಮಾಡುತ್ತಾ ನನ್ನನ್ನು ಅಕ್ಷವಿದ್ಯಾವಿಶಾರದನೆಂದೂ ಮತ್ತು ಸಂಖ್ಯಾವಿದ್ಯಾವಿಶಾರದನೆಂದೂ ತಿಳಿ ಎಂದು ಹೇಳಿದನು.

ಬಾಹುಕಸ್ತಮುವಾಚಾಥ ದೇಹಿ ವಿದ್ಯಾಮಿಮಾಂ ಮಮ ।
ಮತ್ತೋಽಪಿ ಚಾಶ್ವಹೃದಯಂ ಗೃಹಾಣ ಪುರುಷರ್ಷಭ ॥೨೫॥

ಋತುಪರ್ಣಸ್ತತೋ ರಾಜಾ ಬಾಹುಕಂ ಕಾರ್ಯಗೌರವಾತ್ ।
ಹಯಜ್ಞಾನಸ್ಯ ಲೋಭಾಚ್ಚ ತಂ ತಥೇತ್ಯಬ್ರವೀದ್ ವಚಃ ॥೨೬॥

ಆಗ ಬಾಹುಕನು ಅವನನ್ನು ಕುರಿತು ಎಲೈ ಪುರುಷರ್ಷಭನೇ ಈ ವಿದ್ಯೆಯನ್ನು ನನಗೆ ಕೊಡು ಮತ್ತು ನನ್ನಿಂದ ಅಶ್ವವಿದ್ಯೆಯನ್ನು ಸ್ವೀಕರಿಸು ಎಂದು ಹೇಳಿದನು. ಆಗ

ಋತುಪರ್ಣನು ಕಾರ್ಯಗೌರವದಿಂದಲೂ ಮತ್ತು ಅಶ್ವವಿದ್ಯೆಯ ಮೇಲಿನ ಮಹದಾಸೆಯಿಂದಲೂ ಬಾಹುಕನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

ಯಥೋಕ್ತಂ ವೈ ಗೃಹಾಣೇದಮಕ್ಷಾಣಾಂ ಹೃದಯಂ ಪರಮ್ ।
ನಿಕ್ಷೇಪೋ ಮೇಽಶ್ವಹೃದಯಂ ತ್ವಯಿ ತಿಷ್ಠತು ಬಾಹುಕ ॥೨೭॥

ದದಾಮ್ಯೇಕಮನಾ ಭೂಯಾಃ ಶುಚಿಃ ಪುರುಷಸತ್ತಮ ।
ಏವಮುಕ್ತ್ವಾ ದದೌ ವಿದ್ಯಾಮ್ ಋತುಪರ್ಣೋ ನಳಾಯ ವೈ ॥

ತಸ್ಯಾಕ್ಷಹೃದಯಜ್ಞಸ್ಯ ಶರೀರಾನ್ನಿಃಸೃತಃ ಕಲಿಃ ।
ಕರ್ಕೋಟಕವಿಷಂ ತೀಕ್ಷ್ಣಂ ಮುಖಾತ್ ಸ ತು ಸಮುದ್ವಮನ್ ॥೨೯॥

ಬಾಹುಕನೇ ನಾನು ಹೇಳಿದಂತೆ ಈ ಶ್ರೇಷ್ಠವಾದ ಅಕ್ಷಹೃದಯವನ್ನು ನನ್ನಿಂದ ಸ್ವೀಕರಿಸು. ಅಶ್ವಹೃದಯವು (ನನಗೆ ಕೊಡಬೇಕಾದ ಅಶ್ವವಿದ್ಯೆಯು) ಸದ್ಯಕ್ಕೆ ನಿನ್ನಲ್ಲಿ ನಿಕ್ಷೇಪವಾಗಿರಲಿ. ಪುರುಷಶ್ರೇಷ್ಠನೇ ಶುಚಿಯಾಗಿ ಏಕಾಗ್ರ ಮನಸ್ಸಳ್ಳವನಾಗು. ನಿನಗೆ ವಿದ್ಯೆಯನ್ನು ಉಪದೇಶಿಸುತ್ತೇನೆ ಎಂದು ಹೇಳಿ ಋತುಪರ್ಣನು ನಳನಿಗೆ ಅಕ್ಷವಿದ್ಯೆಯನ್ನು (ಮತ್ತು ಸಂಖ್ಯಾವಿದ್ಯೆಯನ್ನು) ನೀಡಿದನು. ಬಾಹುಕನು ಅಕ್ಷವಿದ್ಯೆಯನ್ನು ಸ್ವೀಕರಿಸಿದ ತಕ್ಷಣ ಅವನ ಶರೀರದಿಂದ ಕಲಿಯು ಹೊರಗೆಬಂದನು. ಮತ್ತು ಬಾಹುಕನು ತನ್ನ ಮುಖದಿಂದ ತೀಕ್ಷ್ಣವಾದ ಕಾರ್ಕೋಟಕ ವಿಷವನ್ನು ವಮನ ಮಾಡಿದನು.

ಕಲೇಸ್ತತಸ್ತದಾರ್ತಸ್ಯ ಶಾಪಾಗ್ನಿಃಸ ವಿನಿಃಸೃತಃ ।
ಸ ತೇನ ಕರ್ಶಿತೋ ರಾಜಾ ದೀರ್ಘಕಾಲಮನಾತ್ಮವಾನ್ ॥೩೦॥

ಆಗ ಆರ್ತನಾದ ಕಲಿಯಿಂದ ಆ ಶಾಪಾಗ್ನಿಯು ಹೊರಬಂದಿತು. ದುಷ್ಟನಾದ ಅವನು ನಳಶರೀರದಲ್ಲಿ ಇದ್ದು ದೀರ್ಘಕಾಲದವರೆಗೆ ಆ ವಿಷದ ಬಾಧೆಯಿಂದ ದುಃಖಿತನಾಗಿದ್ದನು.

ತತೋ ವಿಷಾದ್ವಿಮುಕ್ತಾತ್ಮಾ ಸ್ವಂ ರೂಪಮಕರೋತ್ ಕಲಿಃ ।
ತಂ ಶಪ್ತುಮೈಚ್ಛತ್ ಕುಪಿತೋ ನಿಷಧಾಧಿಪತಿರ್ನಳಃ ॥೩೧॥

ಅನಂತರ ವಿಷದಿಂದ ವಿಮೋಚನೆಗೊಂಡ ಕಲಿಯು ತನ್ನ ನಿಜವಾದ ರೂಪವನ್ನು ಧರಿಸಿದನು. ನಿಷಧಾಧಿಪತಿಯಾದ ನಳನು ಕೋಪಗೊಂಡು ಅವನಿಗೆ ಶಾಪವನ್ನು ಕೊಡಲು ಬಯಸಿದನು.

ತಮುವಾಚ ಕಲಿರ್ಭೀತೋ ವೇಪಮಾನಃ ಕೃತಾಂಜಲಿಃ ।
ಕೋಪಂ ಸಂಯಚ್ಛ ನೃಪತೇ ಪ್ರತಿದಾಸ್ಯಾಮಿ ತೇ ವರಮ್ ॥೩೨॥

ಆ ಕಲಿಯು ಭಯದಿಂದ ನಡುಗುತ್ತಾ ಕೈಗಳನ್ನು ಮುಗಿದು ಎಲೈರಾಜನೇ ನಿನ್ನ ಕೋಪವನ್ನು ಶಮನಮಾಡಿಕೋ. ನಾನು ನಿನಗೆ ಪ್ರತಿಯಾಗಿ ವರವನ್ನು ಕೊಡುವೆನು ಎಂದು ಹೇಳಿದನು.

ಇಂದ್ರಸೇನಸ್ಯ ಜನನೀ ಕುಪಿತಾ ಮಾಽಶಪತ್ ಪುರಾ ।
ಯದಾ ತ್ವಯಾ ಪರಿತ್ಯಕ್ತಾ ತೇನಾಹಂ ಭೃಶಪೀಡಿತಃ ॥೩೩॥

ಇಂದ್ರಸೇನನ ತಾಯಿಯಾದ ದಮಯಂತಿಯು ನೀನು ಅವಳನ್ನು ಪರಿತ್ಯಜಿಸಿದಾಗ ಹಿಂದೆ ನನಗೆ ಕೋಪದಿಂದ ಶಾಪವನ್ನು ಕೊಟ್ಟಳು ಆ ಶಾಪದಿಂದ ನಾನು ಬಹಳ ಪೀಡಿತನಾಗಿದ್ದೆ.

ಅವಸಂ ತ್ವಯಿ ರಾಜೇಂದ್ರ ಸುದುಃಖಮಪರಾಜಿತ ।
ವಿಷೇಣ ನಾಗರಾಜಸ್ಯ ದಹ್ಯಮಾನೋ ದಿವಾನಿಶಮ್ ॥೩೪॥

ಎಲೈ ರಾಜೇಂದ್ರನೇ ಎಲೈ ಅಪರಾಜಿತನೇ ಆ ಸರ್ಪರಾಜನ ವಿಷದ ಬಾಧೆಯಿಂದ ಹಗಲೂ ರಾತ್ರಿಯು ಉರಿಯುತ್ತಾ ಮತ್ತು ದುಃಖವನ್ನು ಅನುಭವಿಸುತ್ತಾ ನಾನು ನಿನ್ನಲ್ಲಿ ವಾಸವಾಗಿದ್ದೆನು.

ಯೇ ಚ ತ್ವಾಂ ಮನುಜಾ ಲೋಕೇ ಕೀರ್ತಯಿಷ್ಯಂತ್ಯತಂದ್ರಿತಾಃ ।
ಮತ್ಪೂತಂ ಭಯಂ ತೇಷಾಂ ನ ಕದಾಚಿದ್ ಭವಿಷ್ಯತಿ ॥೩೫॥

ನ ಚೈಷಾಂ ಮಾನಸಂ ಕಿಂಚಿತ್ ಶಾರೀರಂ ವಾ ನೃಪೋತ್ತಮ ।
ಭವಿಷ್ಯತಿ ನೃಣಾಂ ರಾಜನ್ ಕೀರ್ತಯಿಷ್ಯಂತಿ ಯೇ ನಳಮ್ ।
ಭಯಾರ್ತಂ ಶರಣಂ ಯಾತಂ ಯದಿ ಮಾಂ ತ್ವಂ ನ ಶಪ್ಸ್ಯಸೇ ॥೩೬॥

ಯಾವ ಮನುಷ್ಯರು ಲೋಕದಲ್ಲಿ ಆಲಸ್ಯವಿಲ್ಲದೆ ನಿನ್ನ ಹೆಸರನ್ನು ಕೀರ್ತಿಸುತ್ತಾರೋ ಅವರಿಗೆ ನನ್ನಿಂದ ಉಂಟಾಗುವ ಯಾವ ಭಯವೂ ಇರುವುದಿಲ್ಲ. ಎಲೈ ರಾಜಶ್ರೇಷ್ಠನೇ ಭಯಾರ್ತನಾಗಿ ಶರಣಾಗತನಾದ ನನಗೆ ನೀನು ಶಾಪವನ್ನು ಕೊಡದಿದ್ದರೆ ರಾಜನೇ ನೃಪೋತ್ತಮನೇ ಯಾರು ನಳನನ್ನು ಕೀರ್ತಿಸುವರೋ ಅವರಿಗೆ ಶಾರೀರಕವಾದ ಅಥವಾ ಮಾನಸಿಕವಾದ ಪೀಡೆಯು ಉಂಟಾಗದಿರಲಿ. (ಎಂದು ವರವನ್ನು ಕೊಡುತ್ತೇನೆ.)

ವಿವಮುಕ್ತೋ ನಳೋ ರಾಜಾ ನೃಯಚ್ಛತ್ ಕ್ರೋಧಮಾತ್ಮನಃ ।
ತತೋ ಭೀತಃ ಕಲಿಃ ಕ್ಷಿಪ್ರಂ ಪ್ರವಿವೇಶ ವಿಭೀತಕಮ್ ॥೩೭॥

ಕಲಿಸ್ತತ್ರೈಷ ಸೋಽದೃಶ್ಯಃ ಕಥಯನ್ ನೈಷಧೇನ ವೈ ॥೩೮॥

ಹೀಗೆ ಹೇಳಲ್ಪಟ್ಟ ನಳರಾಜನು ತನ್ನ ಕೋಪವನ್ನು ತಡೆದುಕೊಂಡನು. ಕಲಿಯು ನೈಷಧನಜೊತೆಯಲ್ಲಿ ಮಾತನಾಡುತ್ತಲೇ ಅದೃಶ್ಯನಾಗಿ ಅಲ್ಲಿಯೇ ಭಯದಿಂದ ಶೀಘ್ರವಾಗಿ ಆ ತಾರಿಯಮರವನ್ನು ಪ್ರವೇಶಿಸಿದನು.

ತತೋ ಗತಜ್ವರೋ ರಾಜಾ ನೈಷಧಃ ಪರವೀರಹಾ ।
ಸಂಪ್ರನಷ್ಟೇ ಕಲೌ ರಾಜಾ ಸಂಖ್ಯಾಯಾಥ ಫಲಾನ್ಯುತ ॥೩೯॥

ಮುದಾ ಪರಮಯಾ ಯುಕ್ತಃ ತೇಜಸಾಽಥ ಬಲೇನ ಚ ।
ರಥಮಾರುಹ್ಯ ತೇಜಸ್ವೀ ಪ್ರಯಯೌ ಜವನೈರ್ಹಯೈಃ ।
ವಿಭೀತಕಶ್ಚಾಪ್ಪಶಸ್ತಃ ಸಂವೃತ್ತಃ ಕಲಿಸಂಶ್ರಯಾತ್ ॥೪೦॥

ಆಗ ಕಲಿಯು ನಾಶವನ್ನು ಹೊಂದುತ್ತಿರಲು ಪರವೀರಘಾತಕನಾದ ನಳಮಹಾರಾಜನು ಸ್ವಸ್ಥಮನಸ್ಸಿನಿಂದ ಕೂಡಿದವನಾದನು. ರಾಜನು ಆ ಹಣ್ಣುಗಳನ್ನು ಎಣಿಸಿ ಬಹಳ ಸಂತೋಷದಿಂದ ಕೂಡಿದವನಾಗಿ ತನ್ನ ಸಾಮರ್ಥ್ಯದಿಂದಲೂ ಮತ್ತು ಬಲದಿಂದಲೂ ಬೆಳಗುತ್ತಿದ್ದ ಅವನು ರಥವನ್ನು ಏರಿ ವೇಗಯುಕ್ತವಾದ ಹಯಗಳಿಂದ ಹೊರಟನು. ಮತ್ತು ವಿಭೀತಕ ವೃಕ್ಷವಾದರೂ (ತಾರಿಮರ) ಕಲಿಯ ಪ್ರವೇಶದಿಂದಾಗಿ ಅಮಂಗಳವಾಯಿತು.

ಹಯೋತ್ತಮಾನುತ್ಪತತೋ ದ್ವಿಜಾನಿವ ಪುನಃಪುನಃ ।
ನಳಃ ಸಂಚೋದಯಾಮಾಸ ಪ್ರಹೃಷ್ಟೇನಾಂತರಾತ್ಮನಾ ॥೪೧॥

ಪಕ್ಷಿಗಳಂತೆ ಪುನಃಪುನಃ ಹಾರುತ್ತಿದ್ದ ಆ ಶ್ರೇಷ್ಠವಾದ ಅಶ್ವಗಳನ್ನು ನಳನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಮುಂದೆ ನಡೆಸಿದನು.

ವಿದರ್ಭಾಭಿಮುಖೋ ರಾಜಾ ಪ್ರಯಯೌ ಸ ಮಹಾಮನಾಃ ।
ನಳೇ ತು ಸಮತಿಕ್ರಾಂತೇ ಕಲಿರಪ್ಯಗಮದ್ ಗೃಹಾನ್ ॥೪೨॥

ಮಹಾಮನನಾದ ಆ ರಾಜನು ವಿದರ್ಭಾಭಿಮುಖವಾಗಿ ಹೊರಟನು ನಳನು ಮುಂದೆ ಹೋದ ಮೇಲೆ ಕಲಿಯು ಸಹ ತನ್ನ ಮನೆಗೆ ಹೋದನು.

ತತೋ ಗತಜ್ವರೋ ರಾಜಾ ನಳೋ ವೈ ಪೃಥಿವೀಪತಿಃ ।
ವಿಮುಕ್ತಃ ಕಲಿನಾ ರಾಜನ್ ರೂಪಮಾತ್ರವಿಯೋಜಿತಃ ॥೪೩॥

ರಾಜನೇ ಅನಂತರ ಪೃಥ್ವಿಯಪತಿಯಾದ ನಳನು ಕಲಿಯಿಂದ ವಿಮುಕ್ತನಾಗಿಸ್ವಸ್ಥ ಚಿತ್ತನಾದನು. ನಳನ ಮೊದಲಿನ ರೂಪವು ಮಾತ್ರ ಇನ್ನೂ ಉಂಟಾಗಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೇಳನೆಯ ಅಧ್ಯಾಯ

(ಋತುಪರ್ಣನ ಕುಂಡಿನ ಪ್ರವೇಶ. ನಳರಥಘೋಷದಂತೆ ಇದ್ದ ರಥಘೋಷವನ್ನು ಕೇಳಿ ದಮಯಂತಿಯ ಊಹೆ.)

ಬೃಹದಶ್ವಃ

ತತೋ ವಿದರ್ಭಾನ್ ಸಂಪ್ರಾಪ್ತಂ ಸಾಯಾಹ್ನೇ ಸತ್ಯವಿಕ್ರಮ ।
ಋತುಪರ್ಣಂ ಜನಾ ರಾಜನ್ ಭೀಮಾಯ ಪ್ರತ್ಯವೇದಯನ್ ॥೧॥

ಎಲೈ ಸತ್ಯವಿಕ್ರಮನಾದ ರಾಜನೇ ಅನಂತರ ಸಾಯಾಂಕಾಲದ ಸಮಯಕ್ಕೆ ವಿದರ್ಭಕ್ಕೆ ಆಗಮಿಸಿದ ಋತುಪರ್ಣನನ್ನು ರಾಜಭಟರು ಭೀಮನಿಗೆ ನಿವೇದಿಸಿದರು.

ಸ ಭೀಮವಚನಾದ್ ರಾಜಾ ಕುಂಡಿನಂ ಪ್ರಾವಿಶತ್ ಪುರೀಮ್ ।
ನಾದಯನ್ ರಥಘೋಷೇಣ ಸರ್ವಾಶ್ಚಾಪಿ ದಿಶೋ ದಶ ॥೨॥

ಋತುಪರ್ಣರಾಜನು ಭೀಮನ ಅನುಮತಿಯಿಂದ ತನ್ನ ರಥಘೋಷದಿಂದ ಎಲ್ಲ ದಿಕ್ಕುಗಳನ್ನು ಪ್ರತಿಧ್ವನಿಸುತ್ತಾ ಕುಂಡಿನ ಪುರವನ್ನು ಪ್ರವೇಶಮಾಡಿದನು.

ತತಸ್ತಂ ರಥನಿರ್ಘೋಷಂ ನಳಾಶ್ವಾಸ್ತತ್ರ ಶುಶ್ರುವುಃ ।
ಶ್ರುತ್ವಾ ಚ ಸಮಹೃಷ್ಯಂತ ಪುರೇವ ನಳಸನ್ನಿಧೌ ॥೩॥

ಆಗ ಅಲ್ಲಿದ್ದ ನಳನ ಅಶ್ವಗಳು ಆ ರಥಘೋಷವನ್ನು ಕೇಳಿದವು ಮತ್ತು ಕೇಳಿ ಹಿಂದೆ ನಳನ ಸನ್ನಿಧಿಯಲ್ಲಿ ಸಂತೋಷಪಟ್ಟಂತೆ ಸಂತೋಷಪಟ್ಟವು.

ದಮಯಂತೀ ಚ ಶುಶ್ರಾವ ರಥಘೋಷಂ ನಳಸ್ಯ ವೈ ।
ಯಥಾ ಮೇಘಸ್ಯ ನದತೋ ಗಂಭೀರಂ ಜಲದಾಗಮೇ ॥೪॥

ದಮಯಂತಿಯೂ ಕೂಡ ಮಳೆಗಾಲದಲ್ಲಿ ಮೇಘಗಳ ನಾದದಂತೆ ಗಂಭೀರವಾಗಿದ್ದ ನಳನ ಆ ರಥಘೋಷವನ್ನು ಕೇಳಿದಳು.

ಪರಂ ವಿಸ್ಮಯಮಾಪನ್ನಾ ಶ್ರುತ್ವಾ ನಾದಂ ಮಹಾಸ್ವನಮ್ ।
ನಳೇನ ಸಂಗೃಹೀತೇಷು ಪುರೇವ ನಳವಾಜಿಷು ।
ಸದೃಶಂ ರಥನಿರ್ಘೋಷಂ ಮೇನೇ ಭೈಮೀ ತಥಾ ಹಯಾಃ ॥೫॥

ಪ್ರಾಸಾದಸ್ಥಾಶ್ಚ ಶಿಖಿನಃ ಶಾಲಾಸ್ಥಾಶ್ಚೈವ ವಾರಣಾಃ ।
ಹಯಾಶ್ಚ ಶುಶ್ರುವುಸ್ತಸ್ಯ ರಥಘೋಷಂ ಮಹೀಪತೇಃ ॥೬॥

ಹಿಂದೆ ನಳನು ತನ್ನ ಅಶ್ವಗಳನ್ನು ಹಿಡಿದಾಗ ಉಂಟಾಗುವ ರಥನಿರ್ಘೋಷಕ್ಕೆ ಸದೃಶವಾದ ಆ ಮಹಾಶಬ್ದವನ್ನು ಕೇಳಿ ದಮಯಂತಿಯ ಮತ್ತು ಅಶ್ವಗಳೂ ನಳನ ನಿರ್ಘೋಷವೆಂದೇ ತಿಳಿದರು. ಉಪ್ಪರಿಗೆಯಲ್ಲಿದ್ದ ನವಿಲುಗಳು ಗಜಶಾಲೆಯಲ್ಲಿದ್ದ ಗಜಗಳು ಮತ್ತು ಅಶ್ವಶಾಲೆಯಲ್ಲಿದ್ದ ಅಶ್ವಗಳು ಆ ರಾಜನ ರಥಘೋಷವನ್ನು ಕೇಳಿದವು.

ತಚ್ಛ್ರುತ್ವಾ ರಥನಿರ್ಘೋಷಂ ವಾರಣಾಃ ಶಿಖಿನೋ ಹಯಾಃ ।
ಪ್ರಣೇದುರುನ್ಮುಖಾ ರಾಜನ್ ಮೇಘನಾದಮವೇಕ್ಷ್ಯ ವಾ ॥೭॥

ರಾಜನೇ ರಥನಿರ್ಘೋಷವನ್ನು ಕೇಳಿ ಗಜಗಳು ಅಶ್ವಗಳು ಮತ್ತು ನವಿಲುಗಳು ಗುಡುಗಿನ ಶಬ್ದವನ್ನು ಕೇಳಿದಂತೆ ಮುಖವನ್ನು ಮೇಲಕ್ಕೆ ಎತ್ತಿ ನಾದವನ್ನುಮಾಡಿದವು.

ದಮಯಂತೀ

ತಥೈವ ರಥನಿರ್ಘೋಷಂ ಪೂರಯನ್ನಿವ ಮೇದಿನೀಮ್ ।
ಮಮಾಹ್ಲಾದಯತೇ ಚೇತೋ ನಳ ವಿಷ ಮಹೀಪತಿಃ ॥೮॥

ಈ ನಳಮಹಾರಾಜನು ಭೂಮಿಯನ್ನೆಲ್ಲಾ ತುಂಬುವಂತೆ ಮೊದಲಿನಂತೆಯೇ ರಥನಿರ್ಘೋಷವನ್ನು ಮಾಡಿ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿದ್ದಾನೆ.

ಅಥ ಚಂದ್ರಾಭವಕ್ತ್ರಂ ತಂ ನ ಪಶ್ಯಾಮಿ ನಳಂ ಯದಿ ।
ಅಸಂಖ್ಯೇಯಗುಣಂ ವೀರಂ ವಿನಶ್ಯಾಮಿ ನಸಂಶಯಃ ॥೯॥

ಇನ್ನು ಆ ಚಂದ್ರವದನನಾದ ಅಪರಿಮಿತವಾದ ಗುಣಗಳನ್ನು ಹೊಂದಿರುವ ವೀರನಾದ ನಳನನ್ನು ನಾನು ನೋಡದಿದ್ದರೆ ನಾನು ಖಂಡಿತವಾಗಿ ನಾಶವನ್ನು ಹೊಂದುವೆನು.

ಯದಿ ವೈ ತಸ್ಯ ವೀರಸ್ಯ ಬಾಹ್ವೋರ್ನಾದ್ಯಾಹಮಂತರಮ್ ।
ಪ್ರವಿಶಾಮಿ ಸುಖಸ್ಪರ್ಶಂ ವಿನಶಿಷ್ಯಾಮ್ಯಸಂಶಯಮ್ ॥೧೦॥

ಈ ದಿನ ಆ ವೀರನಾದ ನಳನ ಸುಖಸ್ಪರ್ಶವುಳ್ಳ ಬಾಹುಗಳ ಮಧ್ಯವನ್ನು ಸೇರದಿದ್ದರೆ ನಿಸ್ಸಂಶಯವಾಗಿ ನಾಶವನ್ನು ಹೊಂದುವೆನು.

ಯದಿ ಮಾಂ ಮೇಘನಿರ್ಘೋಷೋ ನೋಪಗಚ್ಛತಿ ನೈಷಧ ಃ ।
ಅದ್ಯ ಚಾಮೀಕರಪ್ರಖ್ಯೋ ಪ್ರವೇಕ್ಷ್ಯಾಮಿ ಹುತಾಶನಮ್ ॥೧೧॥

ಮೇಘಗಂಭೀರಸ್ವರವುಳ್ಳ ಸುವರ್ಣವರ್ಣನಾದ ನೈಷಧನು ಈ ದಿನ ನನ್ನ ಬಳಿಗೆ ಬರದಿದ್ದರೆ ನಾನು ಅಗ್ನಿಯನ್ನು ಪ್ರವೇಶಿಸುವೆನು.

ಯದಿ ಮಾಂ ಸಿಂಹವಿಕ್ರಾಂತೋ ಮತ್ತವಾರಣವಾರಣಃ ।
ನಾಭಿಗಚ್ಛತಿ ರಾಜೇಂದ್ರೋ ವಿನಶಿಷ್ಯಾಮ್ಯಸಂಶಯಮ್ ॥೧೨॥

ಸಿಂಹವಿಕ್ರಮನಾಗಿ ಮದಗಜವನ್ನು ತಡೆಯುವ ಸಾಮರ್ಥ್ಯವುಳ್ಳ ಆ ರಾಜೇಂದ್ರನು ನನ್ನ ಎದುರಿಗೆ ಬರದಿದ್ದರೆ ನಿಸ್ಸಂಶಯವಾಗಿ ನಾಶವನ್ನು ಹೊಂದುವೆನು.

ನ ಸ್ಮರಾಮ್ಯನೃತಂ ಕಿಂಚಿನ್ನ ಸ್ಮರಾಮ್ಯನುಪಾಕೃತಮ್ ।
ನ ಚ ಪರ್ಯುಷಿತಂ ವಾಕ್ಯಂ ಸ್ವೈರೇಷ್ವಪಿ ಮಹಾತ್ಮನಃ ॥೧೩॥

ಆ ಮಹಾತ್ಮನು ವಿನೋದದಲ್ಲಿಯೂ ಕೂಡ ಒಂದು ಸುಳ್ಳುಮಾತನ್ನಾಗಲೀ ಅಥವಾ ಅಸಂಗತವಾದ ಮಾತನ್ನಾಗಲೀ ಅಥವಾ ವ್ಯರ್ಥವಾದ ಮಾತನ್ನಾಗಲೀ ಆಡಿದುದು ನನ್ನ ಸ್ಮರಣೆಯಲ್ಲಿಲ್ಲ.

ಪ್ರಭುಃ ಕ್ಷಮಾವಾನ್ ವೀರಶ್ಚ ಮೃದುರ್ದಾಂತೋ ಜಿತೇಂದ್ರಿಯಃ ।
ಅಹೋ ನೀಚಾನುವರ್ತೀ ಚ ಕ್ಲೀಬವನ್ಮಮ ನೈಷಧಃ ॥೧೪॥

ನೈಷಧನು ಪ್ರಭು, ಕ್ಷಮೆಯುಳ್ಳವನು, ವೀರ, ಮೃದು, ಆತ್ಮಸಂಯಮವುಳ್ಳವನು, ಜಿತೇಂದ್ರಿಯನಾದವನು, ನನ್ನ ಬಳಿಯಂತೂ ನಪುಂಸಕನಂತೆ ನನ್ನನ್ನು ಅನುಸರಿಸುವವನು.

ಗುಣಾಂಸ್ತಸ್ಯ ಸ್ಮರಂತ್ಯಾ ಮೇ ತತ್ಪರಾಯಾ ದಿವಾನಿಶಮ್ ।
ಹೃದಯಂ ದೀರ್ಯತ ಇದಂ ಶೋಕಾತ್ ಪ್ರಿಯವಿನಾಕೃತಮ್ ॥೧೫॥

ಹಗಲೂ ರಾತ್ರಿಯೂ ಅವನಲ್ಲೇ ಮನೋನಿಷ್ಠೆಯುಳ್ಳವಳಾಗಿ ಅವನ ಗುಣಗಳನ್ನು ಸ್ಮರಿಸುವ ನನಗೆ ಪ್ರಿಯನಾದ ಅವನ ವಿಯೋಗದಿಂದ ಈ ನನ್ನ ಹೃದಯವು ಶೋಕದಿಂದ ಬರಿಯುತ್ತಿದೆ.

ಏವಂ ವಿಲಪಮಾನಾ ಸಾ ನಷ್ಟಸಂಜ್ಞೇವ ಭಾರತ ।
ಆರುರೋಹ ಮಹದ್ದೇಶ್ಮ ಪುಣ್ಯಶ್ಲೋಕದಿದೃಕ್ಷಯಾ ॥೧೬॥

ಭಾರತನೇ ಹೀಗೆ ಪ್ರಜ್ಞೆಯಿಲ್ಲದವಳಂತೆ ವಿಲಾಪವನ್ನು ಮಾಡುತ್ತಾ ಅವಳು ಪುಣ್ಯಶ್ಲೋಕನಾದ ನಳನನ್ನು ನೋಡುವ ಆಸೆಯಿಂದ ಆ ದೊಡ್ಡಮನೆಯ ಉಪ್ಪರಿಗೆಯನ್ನು ಏರಿದಳು.

ಆಲೋಕಯಂತೀ ದದೃಶೇ ಭೈಮೀ ರಾಜನ್ ಮನಸ್ವಿನೀ ।
ತತೋ ಮಧ್ಯಮಕಕ್ಷ್ಯಾಯಾಂ ದದರ್ಶ ರಥಮಾಸ್ಥಿತಮ್ ।
ಋತುಪರ್ಣಂ ಮಹೀಪಾಲಂ ಸವಾರ್ಷ್ಣೇಯಂ ಸಬಾಹುಕಮ್ ॥೧೭॥

ರಾಜನೇ ಆ ಧೈರ್ಯಶಾಲಿನಿಯಾದ ದಮಯಂತಿಯು ಎಲ್ಲಕಡೆಯೂ ನೋಡುತ್ತಾ ಆಗ ಮಧ್ಯಪ್ರಾಕಾರದಲ್ಲಿ ನಿಂತ ರಥವನ್ನೂ ಬಾಹುಕ ಮತ್ತು ಸೂತರಿಂದ ಸಹಿತನಾದ ಋತುಪರ್ಣರಾಜನನ್ನೂ ನೋಡಿದಳು.

ತತೋಽವತೀರ್ಯ ವಾರ್ಷ್ಣೇಯೋ ಬಾಹುಕಶ್ಚ ರಥೋತ್ತಮಾತ್।
ಹಯಾಂಸ್ತಾನವಮುಚ್ಯಾಥ ಸ್ಥಾಪಯಾಮಾಸ ತಂ ರಥಮ್ ॥೧೮॥

ಅನಂತರ ಸೂತ ಮತ್ತು ವಾರ್ಷ್ಣೇಯರು ಆ ಶ್ರೇಷ್ಠವಾದ ರಥದಿಂದ ಇಳಿದು ಕುದುರೆಗಳನ್ನು ಬಿಚ್ಚಿ ಆ ರಥವನ್ನು ನಿಲ್ಲಿಸಿದರು.

ಸೋಽವತೀರ್ಯ ರಥೋಪಸ್ಥಾದ್ ಋತುಪರ್ಣೋ ನರಾಧಿಪಃ।
ಉಪತಸ್ಥೇ ಮಹಾರಾಜಂ ಭೀಮಂ ಭೀಮಪರಾಕ್ರಮಮ್ ॥೧೯॥

ಆ ಋತುಪರ್ಣರಾಜನು ರಥದ ಪೀಠದಿಂದ ಇಳಿದು ಮಹಾಪರಾಕ್ರಮವುಳ್ಳ ಭೀಮಮಹಾರಾಜನನ್ನು ಸಮೀಪಿಸಿದನು.

ತಂ ಭೀಮಃ ಪ್ರತಿಜಗ್ರಾಹ ಪೂಜಯಾ ಪರಯಾ ತತಃ ।
ಅಕಸ್ಮಾತ್ ಸಹಸಾ ಪ್ರಾಪ್ತಂ ಸ್ತ್ರೀಮಂತ್ರಂ ನಾಭ್ಯವಿಂದತ ॥೨೦॥

ಆ ಭೀಮಮಹಾರಾಜನು ಏನೂ ಕಾರಣವಿಲ್ಲದೆ ಇದ್ದಕ್ಕಿದ್ದಂತೆಯೇ ಬಂದ ಆ ಋತುಪರ್ಣನನ್ನು ಶ್ರೇಷ್ಠವಾದ ಪೂಜೆಯಿಂದ ಸ್ವೀಕರಿಸಿದನು. ಸ್ತ್ರೀಯರು ಮಾಡಿದ ಮಂತ್ರಾಲೋಚನೆಯು ಅವನಿಗೆ ತಿಳಿದಿರಲಿಲ್ಲ.

ಕಿಂ ಕಾರ್ಯಂ ಸ್ವಾಗತಂ ತೇಽಸ್ತು ರಾಜ್ಞಾ ಪೃಷ್ಟಶ್ಚ ಭಾರತ ।
ನಾಭಿಜಜ್ಞೇ ಸ ನೃಪತಿರ್ದುಹಿತೃಹೇ ಸಮಾಗತಮ್ ॥೨೧॥

ಎಲೈ ಭಾರತನೇ ನಿನಗೆ ಸ್ವಾಗತ, ಯಾವ ಉದ್ದೇಶದಿಂದ ಬಂದಿದ್ದೀಯೆ ಎಂದು ಕೇಳಿದನು. ತನ್ನ ಮಗಳಸಲುವಾಗಿ ಅವನು ಬಂದಿದ್ದಾನೆಂದು ಭೀಮನಿಗೆ ತಿಳಿಯಲಿಲ್ಲ.

ಋತುಪರ್ಣೋಽಪಿ ರಾಜಾ ಸ ಧೀಮಾನ್ ಸತ್ಯಪರಾಕ್ರಮಃ ।
ರಾಜಾನಂ ರಾಜಪುತ್ರಂ ವಾ ನ ಸ್ಮ ಪಶ್ಯತಿ ಕಂಚನ ॥೨೨॥

ಮೇಧಾವಿಯೂ ಸತ್ಯಪರಾಕ್ರಮನೂ ಆದ ಋತುಪರ್ಣರಾಜನೂ ಸಹ ಅಲ್ಲಿ ಬೇರೆಯಾವ ರಾಜನನ್ನಾಗಲೀ ಅಥವಾ ರಾಜಪುತ್ರನನ್ನಾಗಲೀ ಕಾಣಲಿಲ್ಲ.

ನೈವ ಸ್ವಯಂವರಕಥಾಂ ನ ಚ ವಿಪ್ರಸಮಾಗಮಮ್ ।
ನ ಚಾನ್ಯಂ ಕಂಚಿದಾರಂಭಂ ಸ್ವಯಂವರವಿಧಿಂ ಪ್ರತಿ ॥೨೩॥

ಅಲ್ಲಿ ಸ್ವಯಂವರವಾರ್ತೆಯನ್ನಾಗಲೀ ಬ್ರಾಹ್ಮಣರ ಸಮಾಗಮವನ್ನಾಗಲೀ ಅಥವಾ ಸ್ವಯಂವರದ ವಿಧಾನವನ್ನು ಕುರಿತು ಯಾವುದೇ ಸಿದ್ಧತೆಯನ್ನಾಗಲೀ ಅಲ್ಲಿ ಅವನು ಕಾಣಲಿಲ್ಲ.

ತತೋ ವಿಗಣಯನ್ ರಾಜಾ ಮನಸಾ ಕೋಸಲಾಧಿಪಃ ।
ಆಗತೋಽಸ್ಮೀತ್ಯುವಾಚೈನಂ ಭವಂತಮಭಿವಾದಕಃ ॥೨೪॥

ಆಗ ಕೋಸಲಾಧಿಪತಿಯಾದ ಋತುಪರ್ಣನು ಮನಸ್ಸಿನಲ್ಲಿ ಅದಾವುದನ್ನೂ ಚಿಂತಿಸದೆ ನಿನಗೆ ನಮಸ್ಕಾರವನ್ನುಮಾಡಲು ಬಂದಿದ್ದೇನೆ ಎಂದು ಭೀಮರಾಜನನ್ನು ಕುರಿತು ಹೇಳಿದನು.

ರಾಜಾಪಿ ಚ ಸ್ವಯಂ ಭೀಮೋ ಮನಸಾ ಸಮಚಿಂತಯತ್ ।
ಅಧಿಕಂ ಯೋಜನಶತಂ ತಸ್ಯಾಗಮನಕಾರಣಮ್ ।
ಗ್ರಾಮಾನ್ ಬಹೂನತಿಕ್ರಮ್ಯ ನಾಧ್ಯಗಚ್ಛದ್ಯಥಾತಥಮ್ ॥೨೫॥

ಭೀಮರಾಜನೂ ಸಹ ಮನಸ್ಸಿನಲ್ಲಿಯೇ ಅವನ ಆಗಮನದ ಕಾರಣವನ್ನು ಚಿಂತಿಸಿದನು. ಅನೇಕ ಗ್ರಾಮಗಳನ್ನು ದಾಟಿ ನೂರುಯೋಜನಗಳಿಗಿಂತಲೂ ಹೆಚ್ಚು ಪ್ರಯಾಣಮಾಡಿ ಬರುವುದಕ್ಕೆ ಸರಿಯಾದ ಕಾರಣವನ್ನು ಅವನು ತಿಳಿಯಲಿಲ್ಲ.

ಅಲ್ಪಕಾರ್ಯಂ ವಿನಿರ್ದಿಷ್ಟಂ ತಸ್ಯಾಗಮನಕಾರಣಮ್ ।
ನೈತದೇವಂ ಸಂಭವತಿ ತಂ ಸತ್ಕೃತ್ಯ ವ್ಯಸರ್ಜಯತ್ ॥೨೬॥

ವಿಶ್ರಾಮ್ಯತಾಮಿತಿ ತದಾ ಶ್ರಾಂತೋಽಸೀತಿ ಪುನಃಪುನಃ ।

ಅವನು ತಾನು ಇಲ್ಲಿಗೆ ಬಂದ ಉದ್ದೇಶವನ್ನು ತಿಳಿಸಲು ಒಂದು ಸಣ್ಣ ಕಾರ್ಯವನ್ನು ಹೇಳಿದ್ದಾನೆ. ಅದು ಹೀಗಿರಲು ಸಾಧ್ಯವಿಲ್ಲ. ಎಂದು ಯೋಚಿಸಿ ಅವನನ್ನು ಸತ್ಕರಿಸಿ ಮತ್ತೆಮತ್ತೆ ಬಹಳದಿನದಿದ್ದೀರಿ ವಿಶ್ರಮಿಸಿಕೊಳ್ಳಿ ಎಂದು ಹೇಳಿ ಅವನನ್ನು ಬೀಳ್ಕೊಟ್ಟನು.

ಸ ಸತೃತಃ ಪ್ರಹೃಷ್ಟಾತ್ಮಾ ಪ್ರೀತಃ ಪ್ರೀತೇನ ಪಾರ್ಥಿವಃ ।
ರಾಜಪ್ರೇಷ್ಯೈರನುಗತೋ ದಿಷ್ಟಂ ವೇಶ್ಮ ಸಮಾವಿಶತ್ ॥೨೭॥

ತನ್ನ ಆಗಮನದಿಂದ ಸಂತೋಷಗೊಂಡ ಭೀಮನಿಂದ ಸತ್ಕೃತನಾಗಿ ಸಂತೋಷಗೊಂಡ ಋತುಪರ್ಣನು ರಾಜಸೇವಕರಿಂದ ಹಿಂಬಾಲಿಸಲ್ಪಟ್ಟು ತನ್ನ ನಿರ್ದಿಷ್ಟವಾದ ವಾಸಸ್ಥಾನಕ್ಕೆ ಹೋದನು.

ಋತುಪರ್ಣೋ ಗತೋ ರಾಜಾ ವಾರ್ಷ್ಣೇಯಸಹಿತಸ್ತದಾ ।
ಬಾಹುಕೋ ರಥಮಾದಾಯ ರಥಶಾಲಾಮುಪಾಗಮತ್ ॥೨೮॥

ಋತುಪರ್ಣರಾಜನು ವಾರ್ಷ್ಣೇಯನ ಜೊತೆಯಲ್ಲಿ ಹೋದಮೇಲೆ ಬಾಹುಕನು ರಥವನ್ನು ರಥಶಾಲೆಯ ಸಮೀಪಕ್ಕೆ ತೆಗೆದುಕೊಂಡು ಬಂದನು.

ಸ ಮೋಕ್ಷಯಿತ್ವಾ ತಾನಶ್ವಾನ್ ಪರಿಚರ್ಯ ಯಥಾವಿಧಿ ।
ಸ್ವಯಂ ಚೈತಾನ್ ಸಮಾಶ್ವಾಸ್ಯ ರಥೋಪಸ್ಥ ಉಪಾವಿಶತ್ ॥೨೯॥

ಅವನು ಆ ಕುದುರೆಗಳನ್ನು ಬಿಚ್ಚಿ ಶಾಸ್ತ್ರವಿಧಾನದಂತೆ ಅವುಗಳನ್ನು ಉಪಚರಿಸಿ ತಾನೇ ಸ್ವತಃ ಅವುಗಳಿಗೆ ಸಮಾಧಾನವನ್ನು ಮಾಡಿ ರಥಪೀಠದಲ್ಲಿ ಕುಳಿತನು.

ದಮಯಂತೀ ತು ಶೋಕಾರ್ತಾ ದೃಷ್ಟ್ವಾ ಭಾರ್ಗವಸ್ತದಾ ನೃಪ ।
ಸೂತಪುತ್ರಂ ಚ ವಾರ್ಷ್ಣೇ ರ್ಯಂ ಬಾಹುಕಂ ಚ ತಥಾವಿಧಮ್ ॥೩೦॥

ಚಿಂತಯಾಮಾಸ ವೈದರ್ಭೀ ಕಸ್ಯೈಷ ರಥನಿಸ್ವನಃ ।
ನಳಸ್ಯೇವ ಮಹಾನಾಸೀನ್ನ ಪಶ್ಯಾಮಿ ಚ ನೈಷಧಮ್ ॥೩೧॥

ಶೋಕಾರ್ತಳಾದ ದಮಯಂತಿಯು ಋತುಪರ್ಣರಾಜನನ್ನೂ ಸೂತಪುತ್ರನಾದ ವಾರ್ಷ್ಣೇಯನನ್ನೂ ಮತ್ತು ಅಂತಹ ವೇಶದಲ್ಲಿದ್ದ ಬಾಹುಕನನ್ನೂ ನೋಡಿ ನಳನ ರಥದ

ಘೋಷದಂತೆ ಇದ್ದ ಈ ರಥಘೋಷವು ಯಾರದು? ನಳನ ರಥಘೋಷದಂತೆ ಇದ್ದಿತು. ಆದರೆ ನಾನು ನಳನನ್ನು ಕಾಣುತ್ತಿಲ್ಲ. ಎಂದು ಚಿಂತಿಸಿದಳು.

ವಾರ್ಷ್ಣೇಯೇನ ಭವೇನ್ನೂನಂ ವಿದ್ಯಾ ಸೈವೋಪಪಾದಿತಾ ।
ತೇನಾಸ್ಯ ರಥನಿರ್ಘೋಷೋ ನಳಸ್ಯೇವ ಮಹಾನಭೂತ್ ॥೩೨॥

ಬಹುಶಃ ವಾರ್ಷ್ಣೇಯನು ಆ ನಳನ ವಿದ್ಯೆಯನ್ನೇ ಸಂಪಾದಿಸಿರಬಹುದು. ಆದ್ದರಿಂದ ಈ ರಥದ ನಿರ್ಘೋಷವು ನಳರಥದ ನಿರ್ಘೋಷದಂತೆಯೇ ದೊಡ್ಡದಾಗಿದ್ದಿತು.

ಆಹೋಸ್ವಿದ್ ಋತುಪರ್ಣೋಽಪಿ ಯಥಾ ರಾಜಾ ನಳಸ್ತಥಾ ।
ತಥಾಽಯಂ ರಥನಿರ್ಘೋಷೋ ನೈಷಧಸ್ಯೇವ ಲಕ್ಷ್ಯತೇ ॥೩೩॥

ಅಥವಾ ಋತುಪರ್ಣನು ಸಹ ನಳನಂತೆಯೇ ಆ ವಿದ್ಯೆಯನ್ನುಕಲಿತಿರಬಹುದು. ಆದ್ದರಿಂದ ಈ ರಥನಿರ್ಘೋಷವು ನಳನ ರಥನಿರ್ಘೋಷದಂತೆಯೇ ಇದೆ.

ಏವಂ ಚ ತರ್ಕಯಿತ್ವಾ ತು ದಮಯಂತೀ ವಿಶಾಂಪತೇ ।
ದೂತೀಂ ಪ್ರಸ್ಥಾಪಯಾಮಾಸ ನೈಷಧಾನ್ವೇಷಣೇ ನೃಪ ॥೩೪॥

ಹೀಗೆ ಊಹಿಸಿ ಎಲೈ ರಾಜನೇ ದಮಯಂತಿಯು ತನ್ನ ದೂತಿಯನ್ನು ನಳನನ್ನು ಹುಡುಕುವ ಉದ್ದೇಶದಿಂದ ಬಾಹುಕನ ಎಡೆಗೆ ಕಳುಹಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಯೋಽಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಆರವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೆಂಟನೆಯ ಅಧ್ಯಾಯ

(ಕೇಶಿನಿ ಬಾಹುಕರ ಸಂವಾದ)

ದಮಯಂತೀ

ಗಚ್ಛ ಕೇಶಿನಿ ಜಾನೀಹಿ ಕ ಏಷ ರಥಸಾರಥಿಃ ।
ಉಪವಿಷ್ಟೋ ರಥೋಪಸ್ಥೇ ವಿಕೃತೋ ಹ್ರಸ್ವ ಬಾಹುಕಃ ॥೧॥

ಅಭ್ಯೇತ್ಯ ಕುಶಲಂ ಭದ್ರೇ ಮೃದುಪೂರ್ವಂ ಸಮಾಹಿತಾ ।
ಪೃಚ್ಛೇಥಾಃ ಪುರುಷಂ ಹ್ಯೇನಂ ಯಥಾತತ್ತ್ವಮನಿಂದಿತೇ ॥೨॥

ಎಲೌ ಕೇಶಿನಿಯೇ, ಈ ವಿಕೃತ ಶರೀರವುಳ್ಳವನೂ ಹ್ರಸ್ವಬಾಹುವುಳ್ಳವನೂ ಆದ ರಥಸಾರಥಿಯು ರಥಪೀಠದಲ್ಲಿ ಕುಳಿತಿದ್ದಾನಷ್ಟೇ. ಶುಭಳೇ, ನೀನು ಅವನ ಬಳಿಗೆ ಹೋಗಿ ಸಮಾಧಾನದಿಂದ ಮೃದುವಾಗಿ ಮಾತನಾಡಿ ಎಲೌ ಅವನು ಯಾರೆಂದು ಸರಿಯಾಗಿ ಕೇಳಿ ತಿಳಿ.

ಅತ್ರ ಮೇ ಮಹತೀ ಶಂಕಾ ಭವೇದೇಷ ನಳೋ ನೃಪಃ ।
ತಥಾ ಮನಸಿ ಮೇತುಷ್ಟಿರ್ಹೃದಯಸ್ಯ ಚ ನಿರ್ವೃತಿಃ ॥೩॥

ಇವನು ನಳನಿರಬಹುದೆಂದು ನನಗೆ ದೊಡ್ಡ ಶಂಕೆಯಿದೆ. ಹಾಗೆ ಮನಸ್ಸಿನಲ್ಲಿ ತೃಪ್ತಿಯೂ ಮತ್ತು ಹೃದಯದಲ್ಲಿ ಆನಂದವೂ ಉಂಟಾಗುತ್ತಿದೆ.

ಬ್ರೂಯಾಶ್ಚೈನಂ ಕಥಾಂತೇ ತ್ವಂ ಪರ್ಣಾದವಚನಂ ಯಥಾ ।
ಪ್ರತಿವಾಕ್ಯಂ ಚ ಸುಶ್ರೋಣಿ ಬುದ್ಧ್ಯೇಥಾಸ್ತ್ವಮನಿಂದಿತೇ ॥೪॥

ಎಲೌ ಸುಶ್ರೋಣಿಯೇ, ಸ್ವಲ್ಪಮಾತನಾಡಿದ ಮೇಲೆ ನೀನು ಪರ್ಣಾದವಚನಗಳನ್ನು ಅವನ ಎದುರಿಗೆ ಹೇಳು ಅನಿಂದಿತೆಯೇ ಪ್ರತಿವಾಕ್ಯದಲ್ಲಿಯೂ ಅವನ ಪ್ರತಿಕ್ರಿಯೆಯನ್ನು ಗಮನಿಸು.

ಏವಂ ಸಮಾಹಿತಾ ಗತ್ವಾ ದೂತೀ ವಾಕ್ಯಮಥಾಬ್ರವೀತ್ ।
ದಮಯಂತ್ಯಪಿ ಕಲ್ಯಾಣೀ ಪ್ರಾಸಾದಸ್ಥಾನ್ವವೈಕ್ಷತ ॥೫॥

ಹೀಗೆ ಸಮಾಧಾನ ಪಡಿಸಸ್ಟ್ಟ ದೂತಿಯು ಬಾಹುಕನ ಬಳಿಗೆ ಹೋಗಿ ಅವನನ್ನು ಮಾತನಾಡಿಸಿದಳು. ಕಲ್ಯಾಣಿಯಾದ ದಮಯಂತಿಯೂ ಸಹ ಉಪ್ಪರಿಗೆಯನ್ನು ಏರಿ ಅವರನ್ನು ನೋಡಿದಳು.

ಸ್ವಾಗತಂ ತೇ ಮನುಷ್ಯೇಂದ್ರ ಕುಶಲಂ ತೇ ಬ್ರವೀಮ್ಯಹಮ್ ।
ದಮಯಂತ್ಯಾ ವಚಃ ಸೌಮ್ಯ ನಿಬೋಧ ಭರತರ್ಷಭ ॥೬॥

ಮನುಷ್ಯೇಂದ್ರನೇ, ನಿನಗೆ ಸ್ವಾಗತ. ನಿನಗೆ ನಾನು ಕುಶಲವನ್ನು ಕೋರುತ್ತಿದ್ದೇನೆ. ಭರತರ್ಷಭನೇ ಸಜ್ಜನನೇ ದಮಯಂತಿಯ ಮಾತುಗಳನ್ನು ಕೇಳು.

ಕದಾ ವೈ ಪ್ರಸ್ಥಿತಾ ಯೂಯಂ ಕಿಮರ್ಥಮಿಹ ಚಾಗತಾಃ ।
ತತ್ತ್ವಂ ಬ್ರೂಹಿ ಯಥಾನ್ಯಾಯಂ ವೈದರ್ಭೀ ಶ್ರೋತುಮಿಚ್ಛತಿ ॥೭॥

ನೀವು ಯಾವಾಗ ಹೊರಟಿರಿ ಏತಕ್ಕಾಗಿ ಇಲ್ಲಿಗೆ ಬಂದಿರಿ? ನಿಜವನ್ನು ಹೇಳು. ದಮಯಂತಿಯು ಕೇಳಲು ಬಯಸುತ್ತಾಳೆ.(ಎಂದು ಹೇಳಿದಳು.)

ಶ್ರುತಃ ಸ್ವಯಂವರೋ ರಾಜ್ಞಾ ಕೌಸಲೇನ ಯಶಸ್ವಿನಾ ।
ದ್ವಿತೀಯೋ ದಮಯಂತ್ಯಾ ವೈ ಶ್ವೋಭೂತ ಇತಿ ಭಾಮಿನಿ ॥೮॥

ಶ್ರುತ್ವಾ ತಂ ಪ್ರಸ್ಥಿತೋ ರಾಜಾ ಶತಯೋಜನಯಾಯಿಭಿಃ ।
ಹಯೈರ್ವಾತಜವೈರ್ಮಾಮ್ಯೈರಹಮಸ್ಯ ಚ ಸಾರಥಿಃ ॥೯॥

ಕೀರ್ತಿಶಾಲಿಯಾದ ಕೋಸಲಾಧಿಪತಿಯಾದ ಋತುಪರ್ಣನು ನಾಳೆಯ ದಿವಸ ದಮಯಂತಿಯ ಎರಡನೆಯ ಸ್ವಯಂವರವೆಂಬ ವಾರ್ತೆಯನ್ನು ಕೇಳಿದನು. ಎಲೌ ಭಾಮಿನಿಯೇ ಅದನ್ನು ಕೇಳಿ ರಾಜನು ನೂರು ಯೋಜನ ಹೋಗಬಲ್ಲ ವಾಯುವೇಗವುಳ್ಳ ಅಶ್ವಗಳನ್ನು ಹೂಡಿದ ರಥದಲ್ಲಿ ಇಲ್ಲಿಗೆ ಬಂದಿದ್ದಾನೆ. ನಾನು ಅವನ ಸಾರಥಿ(ಎಂದು ಬಾಹುಕನು ಹೇಳಿದನು.)

ಕೇಶಿನೀ

ಅಥ ಯೋಽಸೌ ತೃತೀಯೋ ವಃ ಸ ಕೃತಃ ಕಸ್ಯ ವಾ ಪುನಃ ।
ತ್ವಂ ಚ ಕಸ್ಯ ಕುತಶ್ಚೇದಂ ತ್ವಯಿ ಕರ್ಮ ಸಮಾಹಿತಮ್ ॥೧೦॥

ನಿಮ್ಮ ಜೊತೆಯಲ್ಲಿದ್ದ ಮೂರನೆಯನಾದ ವ್ಯಕ್ತಿಯು ಎಲ್ಲಿಂದ ಬಂದಿದ್ದಾನೆ ಮತ್ತು ಅವನು ಯಾರ ಪುತ್ರ ನೀನು ಸಹಯಾರ ಪುತ್ರ ಎಲ್ಲಿಂದ ಬಂದಿದ್ದೀಯ? ನೀನು ಏಕೆ ಈ ಸಾರಥ್ಯವನ್ನು ಮಾಡುತ್ತಿದ್ದೀಯೆ?

ಬಾಹುಕಃ

ಪುಣ್ಯಶ್ಲೋಕಸ್ಯ ವೈ ಸೂತೋ ವಾಷ್ಣೇ ರ್ಯಾಯ ಇತಿ ವಿಶ್ರುತಃ ।
ಸ ನಳೇ ವಿದ್ಧಿತೇ ಭದ್ರೇ ಭಾರ್ಗವಸ್ಯಾಶ್ರಮಾದಿತಃ ॥೧೧॥

ಮೂರನೆಯ ವ್ಯಕ್ತಿಯು ಪುಣ್ಯಶ್ಲೋಕನಾದ ನಳನ ಸೂತ. ಅವನು ವಾರ್ಷ್ಣೇಯನೆಂದು ಪ್ರಖ್ಯಾತನಾದ್ದಾನೆ. ಭದ್ರೆಯೇ ನಳನು ಓಡಿಹೋದಮೇಲೆ ಅವನು ಋತುಪರ್ಣನನ್ನು ಆಶ್ರಯಿಸಿದ್ದಾನೆ.

ಅಹಮಪ್ಯನ್ನಕುಶಲಃ ಸೂತತ್ವೇ ಚ ವಿನಿಷ್ಠಿತಃ ।
ಋತುಪರ್ಣೇನ ಸಾರಥ್ಯೇ ಭೋಜನೇ ಚ ವೃತಃ ಸ್ವಯಮ್ ॥೧೨॥

ನಾನು ಸಹ ಪಾಕವನ್ನು ಮಾಡುವುದರಲ್ಲಿಯೂ ಮತ್ತು ಸೂತಕಾರ್ಯದಲ್ಲಿಯೂ ಪರಿಣತನಾದವನು. ಋತುಪರ್ಣನು ತಾನಾಗಿಯೇ ನನ್ನನ್ನು ತನ್ನ ಸಾರಥ್ಯದಲ್ಲಿಯೂ ಮತ್ತು ಭೋಜನದಲ್ಲಿಯೂ ನಿಯೋಜಿಸಿದ್ದಾನೆ.

ಕೇಶಿನೀ

ಅಥ ಜಾನಾತಿ ವಾಷ್ಣೇ ರ್ಯಾಯಃ ಕ್ವನು ರಾಜಾ ಗತೋ ನಳಃ ।
ಕಥಂ ಚ ತ್ವಯಿ ವೈ ತೇನ ಕಥಿತಂ ಸ್ಯಾತ್ ತು ಬಾಹುಕ ॥೧೩॥

ಆ ವಾರ್ಷ್ಣೇಯನಿಗಾದರೂ ನಳಮಹಾರಾಜನು ಎಲ್ಲಿಗೆ ಹೋದನೆಂದು ತಿಳಿದಿದಿಯೇ? ಬಾಹುಕನೇ ನಿನಗಾದರೂ ಆ ವಾರ್ಷ್ಣೇಯನು ಈ ವಿಷಯವನ್ನು ಹೇಗೆ ತಿಳಿಸಿದ್ದಾನೆ?

ಬಾಹುಕಃ

ಇಹೈವ ಪುತ್ರೌ ನಿಕ್ಷಿಪ್ಯ ನಳಸ್ಯ ಶುಭಕರ್ಮಣಃ ।
ಗತಸ್ತತೋ ಯಥಾಕಾಮಂ ನೈಷ ಜಾನಾತಿ ನೈಷಧಮ್ ॥೧೪॥

ಶುಭಕರ್ಮನಾದ ನಳನ ಇಬ್ಬರು ಮಕ್ಕಳನ್ನು ಇಲ್ಲಿಯೇ ಬಿಟ್ಟು ವಾರ್ಷ್ಣೇಯನು ತನಗೆ ಇಷ್ಟ ಬಂದಂತೆ ಹೊರಟುಹೋದನು. ಅವನಿಗೆ ನಳನ ಪರಿಸ್ಥಿತಿಯು ತಿಳಿದಿಲ್ಲ.

ನ ಚಾನ್ಯಃ ಪುರುಷಃ ಕಶ್ಚಿತ್ ನಳಂ ವೇತ್ತಿ ಯಶಸ್ವಿನಿ ।
ಗೂಢಶ್ಚರತಿ ಲೋಕೇಶಸ್ಮಿನ್ ನಷ್ಟರೂಪೋ ಮಹೀಪತಿಃ ॥೧೫॥

ಯಶಸ್ವಿನಿಯೇ ಬೇರೆ ಯಾವ ಪುರುಷನೂ ಈ ನಳನನ್ನು ತಿಳಿದಿಲ್ಲ. ಆ ರಾಜನು ತನ್ನ ರೂಪವನ್ನು ಕಳೆದುಕೊಂಡು ಈ ಲೋಕದಲ್ಲಿ ಯಾರಿಗೂ ತಿಳಿಯದಂತೆ ಸಂಚರಿಸುತ್ತಿದ್ದಾನೆ.

ಆತ್ಮೈವ ತು ನಳಂ ವೇತ್ತಿ ಯಾ ಚ ಸಾ ತದನಂತರಾ ।
ನ ಚೈವ ತಾನಿ ಲಿಂಗಾನಿ ನಳಂ ಶಂಸಂತಿ ಕರ್ಹಿಚಿತ್ ॥೧೬॥

ನಳನು ತಾನೇ ತನ್ನನ್ನು ತಿಳಿದಿದ್ದಾನೆ. ನಳನ ಆಂತರಿಕವಾದ ಬುದ್ಧಿಯು ನಳನನ್ನು ತಿಳಿದಿದೆ. ನಳನ ಚಿಹ್ನೆಗಳು ಅವನು ನಳನೆಂದು ಯಾವ ರೀತಿಯಿಂದಲೂ ತೋರಿಸಿಕೊಡುವುದಿಲ್ಲ.

ಕೇಶಿನೀ

ಯೋಽಸಾವಯೋಧ್ಯಾಂ ಗತವಾನ್ ಪ್ರಥಮಂ ಬ್ರಾಹ್ಮಣಸ್ತದಾ ।
ಇಮಾನಿ ನಾರೀವಾಕ್ಯಾನಿ ಕಥಯಾನಃ ಪುನಃ ಪುನಃ ॥೧೭॥

ಮೊದಲು ಅಯೋಧ್ಯೆಗೆ ಬಂದ ಬ್ರಾಹ್ಮಣನು ಈ ನಾರೀ ವಾಕ್ಯಗಳನ್ನು ಪುನಃಪುನಃ ಹೇಳುತ್ತಿದ್ದನಪ್ಪೆ.

ಕ್ವನು ತ್ವಂ ಕಿತವಚ್ಛಿತ್ತ್ವಾ ವಸ್ತ್ರಾರ್ಧಂ ಪ್ರಸ್ಥಿತೋ ಮಮ ।
ಉತ್ಸೃಜ್ಯ ವಿಪಿನೇ ಸುಪ್ತಾಮನುರಕ್ತಾಂ ಪ್ರಿಯಾಂ ಪ್ರಿಯ ॥೧೮॥

ಎಲೈ ಪ್ರಿಯನೇ ವಂಚಕನೇ ನನ್ನ ಅರ್ಧವಸ್ತ್ರವನ್ನು ಹರಿದುಕೊಂಡು ನಿನ್ನಲ್ಲಿ ಅನುರಕ್ತಳಾದ ನಿದ್ರಿಸುತ್ತಿದ್ದ ನನ್ನನ್ನು ಕಾಡಿನಲ್ಲಿ ಬಿಟ್ಟು ಎಲ್ಲಿಗೆ ಹೋದೆ?

ಸಾ ವೈ ಯಥಾ ಸಮಾದಿಷ್ಟಾ ತತ್ಸಾಽಸ್ತೇ ತತ್ಪ್ರಿಯೈಷಿಣೀ ।
ದಹ್ಯಮಾನಾ ದಿವಾರಾತ್ರಂ ವಸ್ತ್ರಾರ್ಧೇನಾಭಿಸಂವೃತಾ ॥೧೯॥

ಅವಳಾದರೋ ನಿನ್ನ ಆದೇಶದಂತೆ ನಿನ್ನ ಪ್ರಿಯವನ್ನೇ ಬಯಸುತ್ತಾ ಅರ್ಧವಸ್ತ್ರದಿಂದ ಆವೃತಳಾಗಿ ಹಗಲೂ ರಾತ್ರಿಯೂ ದುಃಖದಿಂದ ಬೇಯುತ್ತಾ ನೀನು ಹೇಳಿದ ಕಡೆಯಲ್ಲಿಯೇ ಇದ್ದಾಳೆ.

ತಸ್ಯಾ ರುದಂತ್ಯಾಃ ಸತತಂ ತೇನ ದುಃಖೇನ ಪಾರ್ಥಿವ ।
ಪ್ರಸಾದಂ ಕುರು ವೈ ವೀರ ಪ್ರತಿವಾಕ್ಯಂ ಪ್ರಯಚ್ಛ ಚ ॥೨೦॥

ಎಲೈ ರಾಜನೇ ಯಾವಾಗಲೂ ದುಃಖದಿಂದ ಅಳುತ್ತಿರುವ ಅವಳಿಗೆ ಅನುಗ್ರಹವನ್ನುಮಾಡು. ಎಲೈ ವೀರನೇ ಉತ್ತರವನ್ನು ನೀಡು.

ತಸ್ಯಾಸ್ತತ್ಪ್ರಿಯಮಾಖ್ಯಾನಂ ಪ್ರಬ್ರವೀಹಿ ಮಹಾಮತೇ ।
ತದೇವ ವಾಕ್ಯಂ ವೈದರ್ಭೀ ಶ್ರೋತುಮಿಚ್ಛತ್ಯನಿಂದಿತಾ ॥೨೧॥

ಮಹಾಮೇಧಾವಿಯೇ ಅವಳಿಗೆ ಪ್ರಿಯವಾದ ಆ ಮಾತುಗಳನ್ನು ಹೇಳು. ಅನಿಂದಿತಳಾದ ವೈದರ್ಭಿಯು ಆ ಮಾತುಗಳನ್ನೇ ಕೇಳಲು ಇಷ್ಟಪಡುತ್ತಾಳೆ.

ಏತಚ್ಛ್ರುತ್ವಾ ಪ್ರತಿವಚಸ್ತಸ್ಯ ದತ್ತಂ ತ್ವಯಾ ಕಿಲ ।
ಯತ್ಪುರಾ ತತ್ಪುನಸ್ತ್ವತ್ತೋ ವೈದರ್ಭೀ ಶ್ರೋತುಮಿಚ್ಛತಿ ॥೨೨॥

ಎಲೈ ಬಾಹುಕನೇ ಈ ನಾರೀವಾಕ್ಯಗಳನ್ನು ಕೇಳಿ ನೀನು ಉತ್ತರವನ್ನು ಕೊಟ್ಟಿಯಷ್ಟೆ? ಆ ಉತ್ತರವನ್ನು ದಮಯಂತಿಯು ಇನ್ನೊಮ್ಮೆ ನಿನ್ನಿಂದ ಕೇಳಲು ಬಯಸುತ್ತಾಳ.

ಬೃಹದಶ್ವಃ

ಏವಮುಕ್ತಸ್ಯ ಕೇಶಿನ್ಯಾ ನಳಸ್ಯ ಕುರುನಂದನ ।
ಹೃದಯಂ ವ್ಯಥಿತಂ ಚಾಸೀದ್ ಅಶ್ರುಪೂರ್ಣೇ ಚ ಲೋಚನೇ ॥೨೩॥

ಎಲೈ ಕುರುನಂದನನೇ ಕೇಶಿನಿಯಿಂದ ಹೀಗೆ ಹೇಳಲ್ಪಟ್ಟ ನಳನ ಹೃದಯವು ದುಃಖದಿಂದ ತುಂಬಿತು. ಅವನ ಕಣ್ಣುಗಳು ಕಣ್ಣೀರಿನಿಂದ ತುಂಬಿದವು.

ಸ ನಿಗೃಹ್ಯಾತ್ಮನೋ ದುಃಖಂ ದಹ್ಯಮಾನೋ ಮಹೀಪತಿಃ ।
ಬಾಷ್ಪಸಂದಿಗ್ಧಯಾ ವಾಚಾ ಪುನರೇವೇದಮಬ್ರವೀತ್ ॥೨೪॥

ಆ ರಾಜನು ತನ್ನ ದುಃಖವನ್ನು ನಿಗ್ರಹಿಸಿಕೊಂಡು ಮನಸ್ಸಿನಲ್ಲಿಯೇ ದುಃಖದಿಂದ ಬೇಯುತ್ತಾ ಬಾಷ್ಪಸಂದಿಗ್ಧವಾದ ಮಾತುಗಳಿಂದ ಪುನಃ ಹೀಗೆ ಮಾತನಾಡಿದನು.

ಬಾಹುಕಃ

ವೈಷಮ್ಯಮಪಿ ಸಂಪ್ರಾಪ್ತಾ ಗೋಪಯಂತಿ ಕುಲಸ್ತ್ರಿಯಃ ।
ಆತ್ಮಾನಮಾತ್ಮನಾ ಸತ್ಯೋ ಜಿತಃ ಸ್ವರ್ಗೋ ನ ಸಂಶಯಃ ॥೨೫॥

ಕುಲಸ್ತ್ರೀಯರಾದ ಸಾದ್ವಿಯರು ಸಂಕಟದಲ್ಲಿ ಸಿಲುಕಿದರೂ ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಾರೆ. ಅವರು ಸ್ವರ್ಗವನ್ನು ಜಯಸಿದ್ದಾರೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ರಹಿತಾ ಭರ್ತೃಭಿಶ್ಚಾಪಿ ನ ಕುಧ್ಯಂತಿ ಕದಾಚನ ।
ಪ್ರಾಕಾಂಶ್ಚಾರಿತ್ರಕವಚಾ ಧಾರಯಂತೀಹ ಸತ್‌ಸ್ತ್ರಿಯಃ ॥೨೬॥

ಅವರು ತಮ್ಮ ಪತಿಗಳಿಂದ ವಿಯೋಗವನ್ನು ಪಡೆದರೂ ಎಂದೂ ಸಿಟ್ಟುಮಾಡುವುದಿಲ್ಲ. ಸಾಧ್ವಿಸ್ತ್ರೀಯರು ತಮ್ಮ ಶೀಲದಿಂದಲೇ ರಕ್ಷಿತರಾಗಿ ಇಲ್ಲಿ ಪ್ರಾಣವನ್ನು ಧರಿಸಿರುತ್ತಾರೆ.

ವಿಷಮಸ್ಥೇನ ಮೂಢೇನ ಪರಿಭ್ರಷ್ಟಸುಖೇನ ಚ ।
ಯತ್ ಸಾ ತೇನ ಪರಿತ್ಯಕ್ತಾ ತತ್ರ ನ ಕ್ರೋದ್ಧುಮರ್ಹತಿ ॥೨೭॥

ಸಂಕಟಕ್ಕೆ ಸಿಲುಕಿದವನೂ ಮೂಢನೂ ಸುಖಭ್ರಷ್ಟನೂ ಆದ ಅವನಿಂದ ಪರಿತ್ಯಕ್ತಳಾದ ಅವಳು ಆ ವಿಷಯದಲ್ಲಿ ಕೋಪವನ್ನು ಮಾಡಬಾರದು.

ಪ್ರಾಣಯಾತ್ರಾಂ ಪರಿಪ್ರೇಪ್ಸೋಃ ಶಕುನೈರ್ಹೃತವಾಸಸಃ ।
ಆಧಿಭಿರ್ದಹ್ಯಮಾನಸ್ಯ ಶ್ಯಾಮಾ ನ ಕ್ರೋದ್ಧುಮರ್ಹತಿ ॥೨೮॥

ಶರೀರಯಾತ್ರೆಯನ್ನು ಪರಿರಕ್ಷಿಸಲು ಪ್ರಯತ್ನಪಟ್ಟು ಹೊಂದಿದ್ದ ವಸ್ತ್ರವನ್ನು ಪಕ್ಷಿಗಳಿಂದ ಕಳೆದುಕೊಂಡು ಮನೋವ್ಯಥೆಯಿಂದ ಬೆಂದುಹೋಗುತ್ತಿರುವ ಅವನ ಮೇಲೆ ಮಧ್ಯವಯಸ್ಸಿನ ಯುವತಿಯಾದ ಅವಳು ಕ್ರೋಧವನ್ನು ಮಾಡಬಾರದು.

ಸತೃತಾऽಸತೃತಾ ವಾऽಪಿ ಪತಿಂ ದೃಷ್ಟ್ವಾ ತಥಾಗತಮ್ ।
ಭ್ರಷ್ಟರಾಜ್ಯಂ ಶ್ರಿಯಾ ಹೀನಂ ಕ್ಷುಧಿತಂ ವ್ಯಸನಾಪ್ಲುತಮ್ ॥೨೯॥

ಸತೃತಳಾಗಲಿ ಅಥವಾ ಇಲ್ಲದಿರಲಿ, ರಾಜ್ಯವನ್ನು ಕಳೆದುಕೊಂಡು ಸಂಪತ್ತಿನಿಂದ ಹೀನನಾಗಿ ಹಸಿವಿನಿಂದ ಬಳಲಿ ವ್ಯಸನದಲ್ಲಿ ಮುಳುಗಿಹೋದ ಅಂತಹ ಪತಿಯನ್ನು ನೋಡಿ ಎಂದೂ ಕ್ರೋಧವನ್ನು ಮಾಡಬಾರದು.

ಏವಂ ಬ್ರುವಾಣಸ್ತದ್ದಾಕ್ಯಂ ನಳಃ ಪರಮದುಃಖಿತಃ ।
ನ ಬಾಷ್ಪಮಶಕತ್ ಸೋಢುಂ ಪ್ರರುರೋದ ಚ ಭಾರತ ॥೩೦॥

ಎಲೈ ಭಾರತನೇ ಪರಮದುಃಖಿತನಾದ ನಳನು ಹೀಗೆ ಮಾತನಾಡುತ್ತಾ ತನ್ನ ಕಣ್ಣೀರನ್ನು ತಡೆಯಲು ಶಕ್ತನಾಗದೆ ಗಟ್ಟಿಯಾಗಿ ಅತ್ತನು.

ತತಃ ಸಾ ಕೇಶಿನೀ ಗತ್ವಾ ದಮಯಂತ್ಯೈ ನ್ಯವೇದಯತ್ ।
ತತ್ ಸರ್ವಂ ಕಥಿತಂ ಚೈವ ವಿಕಾರಂ ಚೈವ ಭಾಮಿನೀ ॥೩೧॥

ಅನಂತರ ಆ ಭಾಮಿನಿಯಾದ ಕೇಶಿನಿಯು ಹೋಗಿ ದಮಯಂತಿಗೆ ನಡೆದ ಎಲ್ಲಾ ವಿಷಯವನ್ನು ಮತ್ತು ಬಾಹುಕನ ಪ್ರತಿಕ್ರಿಯೆಯನ್ನು (ವಿಕಾರವನ್ನು) ತಿಳಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಅರವತ್ತೊಂಬತ್ತನೆಯ ಅಧ್ಯಾಯ

(ದಮಯಂತಿಯಿಂದ ಕೇಶಿನಿಯ ಮೂಲಕ ಬಾಹುಕನ ಪರೀಕ್ಷೆ)

ಬೃಹದಶ್ವಃ

ದಮಯಂತೀ ತು ತಚ್ಛ್ರುತ್ವಾ ಭೃಶಂ ಶೋಕಪರಾಯಣಾ ।
ಶಂಕಮಾನಾ ನಳಂ ತಂ ವೈ ಕೇಶಿನೀಮಿದಮಬ್ರವೀತ್ ॥೧॥

ದಮಯಂತಿಯು ಆ ಮಾತುಗಳನ್ನು ಕೇಳಿ ಬಹಳ ಶೋಕದಿಂದ ಕೂಡಿದವಳಾಗಿ ಬಾಹುಕನು ನಳನೆಂದು ಶಂಕಿಸಿತ್ತಾ ಪುನಃ ಕೇಶಿನಿಯನ್ನು ಕುರಿತು ಹೀಗೆ ಮಾತಮಾಡಿದಳು.

ಗಚ್ಛ ಕೇಶಿನಿ ಭೂಯಸ್ತ್ವಂ ಪರೀಕ್ಷಾಂ ಕುರು ಬಾಹುಕೇ ।
ಅಬ್ರುವಾಣಾ ಸಮೀಪಸ್ಥಾ ಚರಿತಾನ್ಯಸ್ಯ ಲಕ್ಷಯ ॥೨॥

ಕೇಶಿನಿಯೆ ನೀನು ಮತ್ತೆ ಹೋಗಿ ಬಾಹುಕನ ಸಮೀಪದಲ್ಲಿ ಇದ್ದು ಏನೂ ಮಾತನ್ನಾಡದೆ ಅವನ ಚೇಷ್ಟೆಗಳನ್ನು ಗಮನಿಸಿ ಅವನನ್ನು ಗಮನಿಸು.

ಯದಾ ಚ ಕಿಂಚಿತ್ ಕುರ್ಯಾತ್ ಸ ಕಾರಣಂ ತತ್ರ ಭಾಮಿನಿ ।
ತತ್ರ ಸಂಚೇಷ್ಟಮಾನಸ್ಯ ಸಂಲಕ್ಷ್ಯಂ ತೇ ಹಿ ಚೇಷ್ಟಿತಮ್ ॥೩॥

ಎಲೌ ಭಾಮಿನಿಯೇ, ಅವನು ಏನು ಮಾಡಿದರೂ ಅದಕ್ಕೆ ಕಾರಣವನ್ನು ತಿಳಿ. ಮತ್ತು ಅವನು ಏನೇನು ಮಾಡುತ್ತಾನೆಂದು ಎಲ್ಲವನ್ನೂ ಗಮನಿಸು.

ನ ಚಾಸ್ಯ ಪ್ರತಿಬಂಧೇನ ದೇಯೋಽಗ್ನಿರಪಿ ಭಾಮಿನಿ ।
ಯಾಚತೇ ನ ಜಲಂ ದೇಯಂ ಸತ್ಯಮತ್ತದ್ಧಮಾಣಯಾ ॥೪॥

ಭಾಮಿನಿಯೇ ಅವನು ಒತ್ತಾಯಮಾಡಿದರೂ ಅವನಿಗೆ ಅಗ್ನಿಯನ್ನು ಕೊಡಬಾರದು. ಮತ್ತು ಅವನು ಜಲವನ್ನು ಯಾಚಿಸಿದರೂ ಶೀಘ್ರವಾಗಿ ಅವನಿಗೆ ಜಲವನ್ನು ಕೊಡಬಾರದು.

ಏತತ್ ಸರ್ವಂ ಸಮೀಕ್ಷ್ಯ ತ್ವಂ ಚರಿತಂ ಮೇ ನಿವೇದಯ ।
ಯಚ್ಚಾನ್ಯದಪಿ ಪಶ್ಯೇಥಾಃ ತಚ್ಚಾಖ್ಯೇಯಂ ತ್ವಯಾ ಮಮ ॥೫॥

ಇವೆಲ್ಲವನ್ನೂ ಗಮನಿಸಿ ನನಗೆ ಅವನಚೇಷ್ಟೆಗಳನ್ನು ನಿವೇದಿಸು ಮತ್ತು ಬೇರೆ ಏನನ್ನು ನೋಡುತ್ತೀಯೋ ಅದನ್ನು ನನಗೆ ತಿಳಿಸಬೇಕು.

ದಮಯಂತ್ಯೈವಮುಕ್ತಾ ಸಾ ಜಗಾಮಾಥಾಶು ಕೇಶಿನೀ ।
ನಿಶಾಮ್ಯ ಚ ಹಯಜ್ಞಸ್ಯ ಲಿಂಗಾನಿ ಪುನರಾಗಮತ್ ॥೬॥

ದಮಯಂತಿಯಿಂದ ಹೀಗೆ ಹೇಳಲ್ಪಟ್ಟ ಆ ಕೇಶಿನಿಯು ಅವನಬಳಿಗೆ ಹೋಗಿ ಅಶ್ವವಿದ್ಯೆಯನ್ನು ಬಲ್ಲ ಅವನ ಚೇಷ್ಟೆಗಳನ್ನು ಗಮನಿಸಿ ಪುನಃ ದಮಯಂತಿಯ ಬಳಿಗೆ ಬಂದಳು.

ಸಾ ತತ್ ಸರ್ವಂ ಯಥಾವೃತ್ತಂ ದಮಯಂತ್ಯೈ ನ್ಯವೇದಯತ್ ।
ನಿಮಿತ್ತಂ ಯತ್ತದಾದಿಷ್ಟಂ ಬಾಹುಕೇ ದಿವ್ಯಮಾನುಷಮ್ ॥೭॥

ಅವಳು ತನಗೆ ಕೊಟ್ಟ ಆದೇಶಕ್ಕೆ ಅನುಗುಣವಾಗಿ ಬಾಹುಕನಲ್ಲಿ ದಿವ್ಯ ಮತ್ತು ಮಾನುಷ ಚೇಷ್ಟೆಗಳನ್ನು ಗಮನಿಸಿ ದಮಯಂತಿಗೆ ನಡೆದುದೆಲ್ಲವನ್ನೂ ಯಥಾರ್ಥವಾಗಿ ಹೇಳಿದಳು.

ದೃಢಂ ಶುಚ್ಯುಪಚಾರೋಽಸೌ ನ ಮಯಾ ಮಾನುಷಃ ಕ್ವಚಿತ್ ।
ದೃಷ್ಟಪೂರ್ವಃ ಶ್ರುತೋ ವಾಽಪಿ ದಮಯಂತಿ ತಥಾವಿಧಃ ॥೮॥

ಅವನು ದಿವ್ಯವಾದ ಸಲಕರಣೆಗಳಿಂದ ಕೂಡಿದವನು. ದಮಯಂತಿಯೇ ನಾನು ಅಂತಹ ಮನುಷ್ಯನನ್ನು ಹಿಂದೆ ನೋಡಲೂ ಇಲ್ಲ ಅಥವಾ ಕೇಳಲೂ ಇಲ್ಲ.

ಹ್ರಸ್ವಮಾಸಾದ್ಯ ಸಂಚಾರಂ ನಾಸೌ ವಿನಮತೇ ಕ್ವಚಿತ್ ।
ತಂ ತು ದೃಷ್ಟ್ವಾ ಯಥಾಸಂಗಮುತ್ಪರ್ಪತಿ ಯಥಾಸುಖಮ್ ।
ಸಂಕಟೇಽಪ್ಯಸ್ಯ ಸುಮಹದ್ ವಿವರಂ ಕುರುತೇಽಧಿಕಮ್ ॥೯॥

ಅವನು ಸಣ್ಣಬಾಗಿಲಿನ ಬಳಿಗೆ ಹೋದರೂ ಬಗ್ಗುವುದಿಲ್ಲ. ಅವನು ಹತ್ತಿರಕ್ಕೆ ಬಂದತಕ್ಷಣ ಅವನು ಸುಖವಾಗಿ ಪ್ರವೇಶಿಸುವಂತೆ ಬಾಗಿಲಿನ ಮೇಲ್ಭಾಗವೇ ಮೇಲಕ್ಕೆ ಹೊಗಿ ಅವನು ಪ್ರವೇಶಿಸುವುದಕ್ಕೆ ಬೇಕಾದಷ್ಟು ದೊಡ್ಡ ವಿವರವನ್ನು ಕೊಡುತ್ತದ.

ಋತುಪರ್ಣಸ್ಯ ಚಾರ್ಥಾಯ ಭೋಜನೀಯಮನೇಕಶಃ ।
ಪ್ರೇಷಿತಂ ತತ್ರ ಚಾಜ್ಞಾಯ ಮಾಂಸಂ ಸುಬಹು ಪಾಶವಮ್ ॥೧೦॥

ಋತುವರ್ಣನಿಗೆ ಅನೇಕ ವಿಧವಾದ ಭೋಜನವನ್ನು ತಯಾರಿಸಲು ಆಜ್ಞಾಪಿಸಲ್ಪಟ್ಟು ಅವನಿಗೆ ಅನೇಕ ವಿಧವಾದ ಪಶುಗಳಮಾಂಸವು ಕಳುಹಿಸಲ್ಪಟ್ಟಿತು.

ತಸ್ಯ ಪ್ರಕ್ಷಾಲನಾರ್ಥಾಯ ಕುಂಭಸ್ತತ್ರೋಪಕಲ್ಪಿತಃ ।
ಸ ತೇನಾವೇಕ್ಷಿತಃ ಕುಂಭಃ ಪೂರ್ಣ ಏವಾಭವತ್ ತದಾ ॥೧೦॥

ಅವನಿಗೆ ಅಲ್ಲಿ ಮಾಂಸವನ್ನು ತೊಳೆಯಲು ಒಂದು ಕುಂಭವು ಇಡಲ್ಪಟ್ಟಿತ್ತು. ಅವನು ನೋಡಿದ ತಕ್ಷಣವೇ ಆಕುಂಭವು ಜಲದಿಂದ ಪೂರ್ಣವಾಯಿತು.

ತತಃ ಪ್ರಕ್ಷಾಲನಂ ಕೃತ್ವಾ ಸಮಧಿಶ್ರಿತ್ಯ ಬಾಹುಕಃ ।
ತೃಣಮುಷ್ಟಿಂ ಸಮಾದಾಯ ಆವಿದ್ಧ್ಯೇನಂ ಸಮಾದಧತ್ ॥೧೨॥

ಅನಂತರ ಮಾಂಸವನ್ನು ತೊಳೆದು ಬಾಹುಕನು ಅದನ್ನು ಪಾತ್ರೆಯಲ್ಲಿ ಒಲೆಯಮೇಲೆ ಇಟ್ಟು ಒಂದು ಹಿಡಿಹುಲ್ಲನ್ನು ತೆಗೆದುಕೊಂಡು ಅವನ್ನು ಕೊಡವಿ ಒಲೆಯಲ್ಲಿಟ್ಟನು.

ಅಥ ಪ್ರಜ್ವಲಿತಸ್ತತ್ರ ಸಹಸಾ ಹವ್ಯವಾಹನಃ ।
ವಿತಾನ್ಯದ್ಭುತಲಿಂಗಾನಿ ದೃಷ್ಟ್ವಾಽಹಂ ಭೃಶವಿಸ್ಮಿತಾ ॥೧೩॥

ಆಗ ತಕ್ಷಣ ಅಲ್ಲಿ ಅಗ್ನಿಯು ಪ್ರಜ್ವಲಿಸಿದನು. ಇಂತಹ ಅದ್ಭುತ ಚಿಹ್ನೆಗಳನ್ನು ನೋಡಿ ನಾನು ಬಹಳ ಆಶ್ಚರ್ಯಗೊಂಡೆನು.

ಚೇಷ್ಟಿತಾನಿ ವಿಶಾಲಾಕ್ಷಿ ಬಾಹುಕಸ್ಯ ವಿಶೇಷತಃ ।
ತಮದ್ಭುತತಮಂ ದೃಷ್ಟ್ವಾ ವಿಸ್ಮಿತಾऽಹಮಿಹಾಗತಾ ॥೧೪॥

ಎಲೌ ವಿಶಾಲಾಕ್ಷಿಯೇ ಆ ಬಾಹುಕನ ವಿಶೇಷವಾದ ಅತ್ಯದ್ಭುತವಾದ ಚೇಷ್ಟೆಗಳನ್ನೂ ಅವನನ್ನೂ ಗಮನಿಸಿ ವಿಸ್ಮಯಗೊಂಡು ನಾನು ಇಲ್ಲಿಗೆ ಬಂದೆನು.

ಅನ್ಯಚ್ಚ ತಸ್ಮಿನ್ ಸುಮಹದಾಶ್ಚರ್ಯಂ ಲಕ್ಷಿತಂ ಮಯಾ ।
ಯದಗ್ನಿಮಪಿ ಸಂಸ್ಪೃಶ್ಯ ನೈವ ದಹ್ಯತ್ಯಸೌ ಶುಭೇ ॥೧೫॥

ಅವನಲ್ಲಿ ಇನ್ನೊಂದು ಮಹಾಶ್ಚರ್ಯವನ್ನು ಗಮನಿಸಿದೆನು. ಎಲೌ ಶುಭಳಾದವಳೇ ಅವನು ಕೈಯಿಂದ ಅಗ್ನಿಯನ್ನು ಮುಟ್ಟಿದರೂ ಅಗ್ನಿಯು ಅವನನ್ನು ಸುಡುವುದಿಲ್ಲ.

ಛಂದೇನ ಚೋದಕಂ ತಸ್ಯ ಭವತ್ಯಾವರ್ಜಿತಂ ಧ್ರುವಮ್ ।
ಅತೀವ ಚಾನ್ಯತ್ ಸುಮಹದಾಶ್ಚರ್ಯಂ ದೃಷ್ಟವತ್ಯಹಮ್ ॥೧೬॥

ಒಂದು ಹನಿಯೂ ನೀರಿಲ್ಲದ ಪಾತ್ರೆಯು ಅವನ ಸಂಕಲ್ಪದಿಂದಲೇ ನೀರಿನಿಂದ ಪೂರ್ಣವಾಗುತ್ತದೆ. ನಾನು ಇನ್ನೂ ಒಂದು ಮಹದಾಶ್ಚರ್ಯವನ್ನು ನೋಡಿದೆ.

ಯತ್ ಸ ಪುಷ್ಪಾಣ್ಯುಪಾದಾಯ ಹಸ್ತಾಭ್ಯಾಂ ಮಮ್ಯದೇ ಶನೈಃ ।
ಮೃದ್ಯಮಾನಾನಿ ಪುಷ್ಪಾಣಿ ಪಾಣಿಭ್ಯಾಂ ತೇನ ಭಾಮಿನಿ ॥೧೭॥

ಭೂಯ ಏವ ಸುಗಂಧೀನಿ ಹೃಷಿತಾನಿ ಭವಂತಿ ಚ ॥೧೮॥

ಅವನು ಪುಷ್ಪಗಳನ್ನು ತೆಗೆದುಕೊಂಡು ಎರಡು ಕೈಗಳಿಂದಲೂ ನಿಧಾನವಾಗಿ ಉಜ್ಜಿದರೂ ಸಹ ಎಲೌ ಭಾಮಿನಿಯೇ, ಅವನು ಕೈಗಳಿಂದ ಉಜ್ಜಿದ ಪುಷ್ಪಗಳು ಇನ್ನೂ ಹೆಚ್ಚು ಸುಗಂಧಯುಕ್ತವಾಗುತ್ತವೆ. ಮತ್ತು ಅರಳುತ್ತವೆ.

ದಮಯಂತೀ ತು ತಚ್ಛ್ರುತ್ವಾ ಪುಣ್ಯಶ್ಲೋಕಸ್ಯ ಚೇಷ್ಟಿತಮ್ ।
ಅಮನ್ಯತ ನಳಂ ಪ್ರಾಪ್ತಂ ಕರ್ಮಚೇಷ್ಟಾಭಿಸೂಚಿತಮ್ ॥೧೯॥

ದಮಯಂತಿಯಾದರೋ ಆ ಪುಣ್ಯಶ್ಲೋಕನ ಚೇಷ್ಟೆಗಳನ್ನು ಕೇಳಿ ಆ ಕರ್ಮಗಳಿಂದ ಮತ್ತು ಚೇಷ್ಟೆಗಳಿಂದ ಸೂಚಿತವಾದಂತೆ ನಳನೇ ಬಂದಿದ್ದಾನೆ ಎಂದು ಭಾವಿಸಿದಳು.

ಸಾ ಶಂಕಮಾನಾ ಭರ್ತಾರಂ ನಳಂ ಬಾಹುಕರೂಪಿಣಮ್ ।
ಕೇಶಿನೀಂ ಶಕ್ಷ್ಣುಯಾ ವಾಚಾ ರುದಂತೀ ಪುನರಬ್ರವೀತ್ ॥೨೦॥

ಅವಳು ತನ್ನ ಪತಿಯಾದ ನಳನೇ ಬಾಹುಕರೂಪದಲ್ಲಿ ಬಂದಿದ್ದಾನೆಂದು ಶಂಕಿಸುತ್ತಾ ಕೇಶಿನಿಯನ್ನು ಕುರಿತು ಅಳುತ್ತಾ ಮಧುರವಾದ ಮಾತುಗಳಿಂದ ಪುನಃ ಹೀಗೆ ಮಾತನಾಡಿದಳು.

ಪುನರ್ಗಚ್ಛ ಪ್ರಮತ್ತಸ್ಯ ಬಾಹುಕಸ್ಯ ಸುಸಂಸ್ಕೃತಮ್ ।
ಮಹಾನಸಾಚ್ಛ್ರುತಂ ಮಾಂಸಂ ಸಮಾದಾಯೈಹಿ ಭಾಮಿನಿ ॥೨೧॥

ಎಲೌ ಭಾಮಿನಿಯೇ ಪುನಃ ಹೋಗಿ ಬಾಹುಕನು ಅಡುಗೆಯ ಮನೆಯಲ್ಲಿ ಬೇಯಿಸಿರುವ ಮಾಂಸವನ್ನು ಅವನಿಗೆ ತಿಳಿಯದಂತೆ ತೆಗೆದುಕೊಂಡು ಇಲ್ಲಿಗೆ ಬಾ.

ಸಾ ಗತ್ವಾ ಬಾಹುಕೇ ವ್ಯಗ್ರೇ ತನ್ಮಾಂಸಮಪಕೃಷ್ಯ ಚ ।
ಅತ್ಯುಷ್ಣಮೇವ ತ್ವರಿತಾ ತತ್‌ಕ್ಷಣಂ ಪ್ರಿಯಕಾರಿಣೀ ।
ದಮಯಂತ್ಯೈ ತತಃ ಪ್ರಾದಾತ್ ಕೇಶಿನೀ ಕುರುನಂದನ ॥೨೨॥

ಎಲೈ ಕುರುನಂದನನೇ, ಕೇಶಿನಿಯಾದರೋ ಅಡುಗೆ ಮನೆಗೆ ಹೋಗಿ ಬಾಹುಕನು ಅನ್ಯಮನಸ್ಕನಾಗಿದ್ದಾಗ ಬಿಸಿಯಾದ ಆ ಮಾಂಸದ ಸ್ವಲ್ಪಭಾಗವನ್ನು ತೆಗೆದುಕೊಂಡು ಶೀಘ್ರವಾಗಿ ದಮಯಂತಿಗೆ ಪ್ರಿಯವನ್ನು ಮಾಡುವವಳಾಗಿ ತಕ್ಷಣದಲ್ಲಿಯೇ ಬಂದು ದಮಯಂತಿಗೆ ಕೊಟ್ಟಳು.

ಸೋಚಿತಾ ನಳಸಿದ್ಧಸ್ಯ ಮಾಂಸಸ್ಯ ಬಹುಶಃ ಪುರಾ ।
ಪ್ರಾಶ್ಯ ಮತ್ವಾ ನಳ ಸೂತಂ ಪ್ರಾಕ್ರೋಶದ್ ಭೃಶದುಃಖಿತಾ ॥೨೩॥

ನಳನು ಮಾಡಿದ ಪಾಕವನ್ನು ಹಿಂದೆ ಅನೇಕ ಬಾರಿ ಸವಿದಿದ್ದ ಅವಳು ಆ ಮಾಂಸವನ್ನು ತಿಂದು ಆ ಬಾಹುಕನೇ ನಳನೆಂದು ನಿಶ್ಚಯಿಸಿ ದುಃಖದಿಂದ ವಿಲಾಪವನ್ನು ಮಾಡಿದಳು.

ವೈಕ್ಲಬ್ಯಂ ಪರಮಂ ಗತ್ವಾ ಪ್ರಕ್ಷಾಲ್ಯ ಚ ಮುಖಂ ತತಃ ।
ಮಿಥುನಂ ಪ್ರೇಷಯಾಮಾಸ ಕೇಶಿನ್ಯಾ ಸಹ ಭಾರತ ॥೨೪॥

ಎಲೈ ಭಾರತನೇ ಬಹಳ ಸಂಕಟವನ್ನು ಹೊಂದಿ ಅನಂತರ ಮುಖವನ್ನು ತೊಳೆದುಕೊಂಡು ಕೇಶಿನಿಯ ಜೊತೆಯಲ್ಲಿ ತನ್ನ ಅವಳ ಮಕ್ಕಳನ್ನು ಬಾಹುಕನ ಬಳಿಗೆ ಕಳುಹಿಸಿದಳು.

ಇಂದ್ರಸೇನಾಂ ಸಹ ಭ್ರಾತ್ರಾ ಸಮಭಿಜ್ಞಾಯ ಬಾಹುಕಃ ।
ಅಭಿದ್ರುತ್ಯ ತತೋ ರಾಜಾ ಪರಿಷ್ವಜ್ಯಾಂಕಮಾನಯತ್ ॥೨೫॥

ಬಾಹುಕನು ಇಂದ್ರಸೇನನನ್ನು ಮತ್ತು ಇಂದ್ರಸೇನೆಯನ್ನು ಗುರುತಿಸಿ ಓಡಿಬಂದು ಅವರನ್ನು ಆಲಿಂಗಿಸಿ ತನ್ನ ತೊಡೆಯಮೇಲೆ ಕೂಡಿಸಿಕೊಂಡನು.

ಬಾಹುಕಸ್ತು ಸಮಾಸಾದ್ಯ ಸುತೌ ಸುರಸುತೋಪಮೌ ।
ಭೃಶಂ ದುಃಖಪರೀತಾತ್ಮಾ ಸುಸ್ವರಂ ಪ್ರರುರೋದ ಹ ॥೨೬॥

ಬಾಹುಕನು ದೇವತೆಯ ಮಕ್ಕಳಂತೆ ಇದ್ದ ಆ ಮಕ್ಕಳನ್ನು ಹೊಂದಿ ಬಹಳ ದುಃಖದಿಂದ ಪೀಡಿತನಾಗಿ ಸುಸ್ವರದಿಂದ ಅತ್ತನು.

ನೈಷಧೋ ದರ್ಶಯಿತ್ವಾ ತು ವಿಕಾರಮಸಕೃತ್ ತದಾ ।
ಉತ್ಸೃಜ್ಯ ಸಹಸಾ ಪುತ್ರೌ ಕೇಶಿನೀಮಿದಮಬ್ರವೀತ್ ॥೨೬॥

ನಳನು ಹೀಗೆ ತನ್ನ ವಿಕಾರಗಳನ್ನು ಅನೇಕವಾರಿ ತೋರಿಸಿ ತನ್ನು ಮಕ್ಕಳನ್ನು ತಕ್ಷಣ ದೂರನಿಲ್ಲಿಸಿ ಕೇಶಿನಿಯನ್ನು ಕುರಿತು ಹೀಗೆ ಹೇಳಿದನು.

ಇದಂ ಸುಸದೃಶಂ ಭದ್ರೇ ಮಿಥುನಂ ಮಮ ಪುತ್ರಯೋಃ ।
ತತೋ ದೃಷ್ಟ್ವೈವ ಸಹಸಾ ಬಾಷ್ಪಮುತ್ಸೃಷ್ಟವಾನಹಮ್ ॥೨೮॥

ಭದ್ರೆಯೇ ಈ ಅವಳಿ ಮಕ್ಕಳು ನನ್ನ ಮಕ್ಕಳನ್ನು ಬಹುವಾಗಿ ಹೋಲುತ್ತಾರೆ. ಆದ್ದರಿಂದ ಅವರನ್ನು ನೋಡಿದ ತಕ್ಷಣ ನಾನು ಬಾಷ್ಪವನ್ನು ಸುರಿಸಿದೆ.

ಬಹುಶಃ ಸಂಪತಂತೀಂ ತ್ವಾಂ ಜನಃ ಶಂಕೇತ ದೋಷತಃ ।
ವಯಂ ಚ ದೇಶಾತಿಥಯೋ ಗಚ್ಛ ಭದ್ರೇ ಯಥಾಸುಖಮ್ ॥೨೯॥

ನೀನು ಪುನಃಪುನಃ ನನ್ನ ಬಳಿಗೆ ಬರುತ್ತಿದ್ದೀಯೆ. ಜನರು ನಮ್ಮಲ್ಲಿ ದೋಷ ಶಂಕೆಯನ್ನು ಮಾಡಬಹುದು. ನಾವು ದೇಶಾತಿಥಿಗಳಾಗಿ ಬಂದವರು. ಆದ್ದರಿಂದ ಇಲ್ಲಿರಬೇಡ ಹೊರಟು ಹೋಗು. (ಎಂದು ಹೇಳಿದನು.)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತನೆಯ ಅಧ್ಯಾಯ

(ದಮಯಂತಿಯ ಮರ್ಮವಚನಗಳು, ಬಾಹುಕ ದಮಯಂತಿ ಸಮಾಗಮ.)

ಬೃಹದಶ್ವ:

ಸರ್ವಂ ವಿಕಾರಂ ದೃಷ್ಟ್ವಾ ತು ಪುಣ್ಯಶ್ಲೋಕಸ್ಯ ಧೀಮತಃ ।
ಆಗತ್ಯ ಕೇಶಿನೀ ಕ್ಷಿಪ್ರಂ ದಮಯಂತ್ಯೈ ನ್ಯವೇದಯತ್ ॥೧॥

ಕೇಶಿನಿಯು ಪುಣ್ಯಶ್ಲೋಕನೂ ಮತ್ತು ಮೇಧಾವಿಯೂ ಆದ ಬಾಹುಕನ ಆ ಎಲ್ಲಾ ವಿಕಾರಗಳನ್ನೂ ನೋಡಿ ಬೇಗ ಹಿಂದಿರುಗಿ ಬಂದು ದಮಯಂತಿಗೆ ಎಲ್ಲವನ್ನೂ ತಿಳಿಸಿದಳು.

ದಮಯಂತೀ ತತೋ ಭೂಯಃ ಪ್ರೇಷಯಾಮಾಸ ಕೇಶಿನೀಮ್ ।
ಮಾತುಃ ಸಕಾಶಂ ದುಃಖಾರ್ತಾ ನಳಶಂಕಾಸಮುತ್ಸುಕಾ ॥೨॥

ಆನಂತರ ದಮಯಂತಿಯು ನಳನೆಂಬ ಆಶಂಕೆಯಿಂದ ಸಮುತ್ಸುಕಳಾಗಿ ದುಃಖದಿಂದ ಕೂಡಿದವಳಾಗಿ ಕೇಶಿನಿಯನ್ನು ತನ್ನ ತಾಯಿಯಬಳಿಗೆ ಕಳುಹಿಸಿದಳು.

ಪರೀಕ್ಷಿತೋ ಮೇ ಬಹುಶೋ ಬಾಹುಕೋ ನಳಶಂಕಯಾ ।
ರೂಪೇಮೇ ಸಂಶಯಸ್ತ್ವೇಕಃ ಸ್ವಯಮಿಚ್ಛಾಮಿ ವೇದಿತುಮ್ ॥೩॥

ಬಾಹುಕನು ನಳನೆಂಬ ಶಂಕೆಯಿಂದ ನಾನು ಅನೇಕ ರೀತಿಯಿಂದ ಪರೀಕ್ಷೆಮಾಡಿದೆ. ನನಗೆ ರೂಪದ ವಿಷಯದಲ್ಲಿ ಮಾತ್ರ ಸಂಶಯವಿದೆ. ನಾನೇ ಹೋಗಿ ತಿಳಿದುಕೊಳ್ಳಲು ಬಯಸುತ್ತೇನೆ.

ಸ ವಾ ಪ್ರವೇಶ್ಯತಾಂ ಮಾತರ್ಮಾಂ ವಾಽನುಜ್ಞಾತುಮರ್ಹಸಿ ।
ವಿದಿತಂ ವಾಽಥವಾಽಜ್ಞಾತಂ ಪಿತುರ್ಮೇ ಸಂವಿಧೀಯತಾಮ್ ॥೪॥

ತಾಯಿಯೇ ಅವನಾದರೂ ನನ್ನ ಬಳಿಗೆ ಬರುವಂತೆಮಾಡು ಅಥವಾ ನನಗಾದರೂ ಅವನ ಬಳಿಗೆ ಹೋಗುವಂತೆ ಅನುಮತಿಯನ್ನು ಕೊಡು. ಇದು ನನ್ನ ತಂದೆಗೆ ತಿಳಿಯದಂತೆ ಅಥವಾ ತಿಳಿಯುವಂತೆ ಬೇಕಾದರೂ ಇದರ ವ್ಯವಸ್ಥೆಯನ್ನು ಮಾಡು.

ಏವಮುಕ್ತಾ ತು ವೈದರ್ಭ್ಯಾ ಸಾ ದೇವೀ ಭೀಮಮಬ್ರವೀತ್ ।
ದುಹಿತುಸ್ತಮಭಿಪ್ರಾಯಮನ್ವಜಾನಾಚ್ಚ ಪಾರ್ಥಿವಃ ॥೫॥

ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಆವಳ ತಾಯಿಯು ಭೀಮರಾಜನಿಗೆ ತಮ್ಮ ಮಗಳ ಅಭಿಪ್ರಾಯವನ್ನು ತಿಳಿಸಿದಳು. ರಾಜನು ಅದಕ್ಕೆ ತಮ್ಮ ಅನುಮತಿಯನ್ನು ನೀಡಿದನು.

ಸಾ ವೈ ಪಿತ್ರಾಽಭ್ಯನುಜ್ಞಾತಾ ಮಾತ್ರಾ ಚ ಕುರುನಂದನ ।
ನಳಂ ಪ್ರವೇಶಯಾಮಾಸ ಯತ್ರ ತಸ್ಯಾಃ ಪ್ರತಿಶ್ರಯಃ ॥೬॥

ಕುರುನಂದನನೇ ತಂದೆಯಿಂದಲೂ ಮತ್ತು ತಾಯಿಯಿಂದಲೂ ಅನುಮತಿಯನ್ನು ಪಡೆದ ದಮಯಂತಿಯು ತಾನು ಇರುವ ಸ್ಥಳಕ್ಕೆ ನಳನು ಪ್ರವೇಶಿಸುವಂತೆ ಮಾಡಿದಳು.

ತಾಂ ಚ ದೃಷ್ಟ್ವೈವ ಸಹಸಾ ದಮಯಂತೀಂ ನಳೋ ನೃಪಃ ।
ಆವಿಷ್ಟೋ ದುಃಖಶೋಕಾಭ್ಯಾಂ ಬಭೂವಾಶ್ರುಪರಿಪ್ಲುತಃ ॥೭॥

ದಮಯಂತಿಯನ್ನು ನೋಡಿದ ತಕ್ಷಣವೇ ನಳಮಹಾರಾಜನು ಒಮ್ಮೆಯೇ ದುಃಖಶೋಕಗಳಿಂದ ಕೂಡಿದವನಾಗಿ ಅಶ್ರುಗಳಿಂದ ತುಂಬಿದ ಕಣ್ಣುಗಳುಳ್ಳವನಾದನು.

ತತಃ ಕಾಷಾಯವಸನಾ ಜಟಿಲಾ ಮಲಪಂಕಿನೀ ।
ದಮಯಂತೀ ಮಹಾರಾಜ ಬಾಹುಕಂ ವಾಕ್ಯಮಬ್ರವೀತ್ ॥೮॥

ಎಲೈ ಮಹಾರಾಜನೇ ಆಗ ಕಾಷಾಯವನ್ನು ಧರಿಸಿದ ಜಟಿಲಳಾದ ಕಶ್ಮಲಸಹಿತ ಶರೀರದಿಂದ ಕೂಡಿದ್ದ ದಮಯಂತಿಯು ಬಾಹುಕನನ್ನು ಕುರಿತು ಮಾತನಾಡಿದಳು.

ದೃಷ್ಟಪೂರ್ವಸ್ತ್ವಯಾ ಕಶ್ಚಿದ್ ಧರ್ಮಜ್ಞೋ ನಾಮ ಬಾಹುಕ ।
ಸುಪ್ತಾಮುತ್ಸೃಜ್ಯ ವಿಪಿನೇ ಗತೋ ಯಃ ಪುರುಷಃ ಸ್ತ್ರಿಯಮ್ ॥೯॥

ಎಲೈ ಬಾಹುಕನೇ ನೀನು ಕಾಡಿನಲ್ಲಿ ಮಲಗಿದ ತನ್ನ ಹೆಂಡತಿಯನ್ನು ತೊರೆದು ಹೊರಟ ಧರ್ಮಜ್ಞನೆಂಬ ಪುರುಷನನ್ನು ಹಿಂದೆ ಎಂದಾದರೂ ನೋಡಿರುವೆಯಾ?

ಅನಾಗಸೀಂ ಪ್ರಿಯಾಂ ಭಾರ್ಯಾಂ ವಿಪಿನೇ ಶೋಕಕರ್ಶಿತಾಮ್ ।
ಅಪಹಾಯ ತು ಕೋ ಗಚ್ಛೇತ್ ಪುಣ್ಯಶ್ಲೋಕಾದೃತೇ ನಳಾತ್ ॥೧೦॥

ನಿರಪರಾಧಿನಿಯಾದ ಪ್ರಿಯಳಾದ ಶೋಕಕರ್ಶಿತಳಾದ ಪತ್ನಿಯನ್ನು ಕಾಡಿನಲ್ಲಿ ಬಿಟ್ಟು ಪುಣ್ಯಶೋಕನಾದ ನಳನಲ್ಲದೆ ಬೇರೆ ಯಾರು ಹೋಗಬಹುದು?

ಕಂನು ತಸ್ಯ ಮಯಾ ಬಾಲ್ಯಾದಪರಾದ್ಧಂ ಮಹೀಪತೇಃ ।
ಯೋ ಮಾಮುತ್ಸೃಜ್ಯ ವಿಪಿನೇ ಗತವಾನ್ ನಿದ್ರಯಾ ಹೃತಾಮ್ ॥೧೧॥

ನಿದ್ದೆ ಮಾಡುತ್ತಿದ್ದ ನನ್ನನ್ನು ಕಾಡಿನಲ್ಲಿ ತೊರೆದು ಹೋದ ಆ ರಾಜನಿಗೆ ನಾನು ಬಾಲ್ಯದಿಂದಲಾದರೂ ಏನು ಅಪರಾಧವನ್ನು ಮಾಡಿದ್ದೆ?

ಸಾಕ್ಷಾದ್ ದೇವಾನಪಾಹಾಯ ವೃತೋ ಯಃ ಸ ಮಯಾ ಕಿಲ ।
ಅನುವ್ರತಾಂ ಪತಿಪ್ರಾಣಾಂ ಪುತ್ರಿಣೀಂ ತ್ಯಕ್ತವಾನ್ ಕಥಮ್ ॥೧೨॥

ಸಾಕ್ಷಾದ್ ದೇವತೆಗಳನ್ನು ತಿರಸ್ಕರಿಸಿ ನಾನು ಅವನನ್ನು ವರಿಸಿದನಷ್ಟೇ. ಅನುವ್ರತಳಾಗಿದ್ದ ಅವನಲ್ಲಿಯೇ ಪ್ರಾಣಗಳನ್ನು ಇಟ್ಟುಕೊಂಡಿದ್ದ ಅವನಿಂದ ಮಕ್ಕಳನ್ನು ಪಡೆದ ನನ್ನನ್ನು ಅವನು ಹೇಗೆ ತ್ಯಜಿಸಿದನು?

ಅಗ್ನೌ ಪಾಣಿಗೃಹೀತಾಂ ಚ ಹಂಸಾನಾಂ ವಚನೇ ಸ್ಥಿತಾಮ್ ।
ಭರಿಷ್ಯಾಮೀತಿ ಸತ್ಯಂ ಚ ಪ್ರತಿಶ್ರುತ್ಯ ಕ್ವ ತದ್ಗತಮ್ ॥೧೩॥

ಹಂಸಗಳ ವಚನದಂತೆ ಅಗ್ನಿಯ ಸನ್ನಿಧಿಯಲ್ಲಿ ಪಾಣಿಗ್ರಹಣವನ್ನು ಮಾಡಿ ನಿನ್ನನ್ನು ಬಿಡುವುದಿಲ್ಲವೆಂದು ಸತ್ಯಪ್ರತಿಜ್ಞೆಯನ್ನು ಮಾಡಿದ ಆ ಅವನು ಎಲ್ಲಿಗೆ ಹೋದನು?

ಬೃಹದಶ್ವಃ

ದಮಯಂತ್ಯಾ ಬ್ರುವಂತ್ಯಾಸ್ತು ಸರ್ವಮೇತದರಿಂದಮ ।
ಶೋಕಜಂ ವಾರಿ ನೇತ್ರಾಭ್ಯಾಮತ್ಯುಷ್ಣಂ ಪ್ರಾಸ್ರವದ್‌ಬಹು ॥೧೪॥

ಎಲೈ ಅರಿಂದಮನೇ, ದಮಯಂತಿಯು ಹೀಗೆಲ್ಲಾ ಮಾತನಾಡುತ್ತಿರಲು ಬಾಹುಕನ ಕಣ್ಣಿಂದ ಶೋಕದಿಂದ ಉತ್ಪನ್ನವಾದ ಉಷ್ಣವಾದ ಕಣ್ಣೀರು ಬಹುವಾಗಿ ಸುರಿಯಿತು.

ಅತೀವ ಕೃಷ್ಣತಾರಾಭ್ಯಾಂ ರಕ್ತಾಭ್ಯಾಂ ಸಲಿಲಂ ತು ತತ್ ।
ಪರಿಸ್ರವನ್ನಳೋ ದೃಷ್ಟ್ವಾ ಶೋಕಾರ್ತ ಇದಮಬ್ರವೀತ್ ॥೧೫॥

ತನ್ನ ಕಪ್ಪಾದ ಮತ್ತು ತುದಿಯಲ್ಲಿ ಕೆಂಪಾದ ಕಣ್ಣುಗಳಿಂದ ಬಹಳವಾಗಿ ಸುರಿಯುತ್ತಿದ್ದ ಆ ಕಣ್ಣೀರನ್ನು ಗಮನಿಸಿ ಶೋಕಾರ್ತನಾದ ನಳನು ಹೀಗೆ ಮಾತನಾಡಿದನು.

ನಳಃ

ಮಮ ರಾಜ್ಯಂ ಪ್ರನಷ್ಟಂ ಯನ್ನಾಹಂ ತತ್ ಕೃತವಾನ್ ಸ್ವಯಮ್ ।
ಕಲಿನಾऽಪ ಕೃತಂ ಭೀರು ಯಚ್ಚ ತ್ವಾಮಹಮತ್ಯಜಮ್ ॥೧೬॥

ನನ್ನ ರಾಜ್ಯವು ನಷ್ಟವಾಯಿತು. ಅದನ್ನು ನಾನು ಸ್ವತಃ ಮಾಡಲಿಲ್ಲ. ಎಲೌ ಭೀರುವೇ ಅದು ಕಲಿಯಿಂದ ಮಾಡಲ್ಪಟ್ಟಿತು. ನಾನು ನಿನ್ನನ್ನು ತೊರೆದುದು ಸಹ ಕಲಿಯ ಪ್ರಭಾವದಿಂದಲೇ.

ತ್ವಯಾ ತು ಧರ್ಮಕೃಚ್ಛ್ರೇ ತು ಶಾಪೇನಾಭಿಹತಃ ಪುರಾ ।
ವನಸ್ಥಯಾ ದುಃಖಿತಯಾ ಶೋಚಂತ್ಯಾ ಮಾಂ ವಿವಾಸಿತಮ್ ॥೧೭॥

ನೀನು ಧರ್ಮಸಂಕಟಕ್ಕೆ ಸಿಲುಕಿದಾಗ ಕಾಡಿನಲ್ಲಿ ದಿಗಂಬರನಾದ ನನ್ನನ್ನು ನೋಡುತ್ತಾ ದುಃಖದಿಂದ ಹಿಂದೆ ಅವನಿಗೆ ಶಾಪವನ್ನು ಕೊಟ್ಟಿಯಷ್ಟೇ?

ಸ ಮಚ್ಛರೀರೇ ತ್ವದ್ಭಾಪಾದ್ ದಹ್ಯಮಾನೋऽವಸತ್ ಕಲಿಃ ।
ತ್ವದ್ಭಾಪದಗ್ನಃ ಸತತಮಗ್ನಾವಿವ ಸಮಾಹಿತಃ ॥೧೮॥

ಅವನು ನಿನ್ನ ಶಾಪದಿಂದ ಬೆಂದು ಹೋಗುತ್ತಾ ನನ್ನ ಶರೀರದಲ್ಲಿ ವಾಸವಾಗಿದ್ದನು. ಅಗ್ನಿಯಲ್ಲಿ ಹಾಕಿದ ವಸ್ತುವು ಸುಡುವಂತೆ ಸತತವಾಗಿ ಅವನು ಶಾಪದ ದಾಹವನ್ನು ಅನುಭವಿಸುತ್ತಿದ್ದನು.

ಮಮ ಚ ವ್ಯವಸಾಯೇನ ತಪಸಾ ಚೈವ ನಿರ್ಜಿತಃ ।
ದುಃಖಸ್ಯಾಂತೇನ ಚಾನೇನ ಭವಿತವ್ಯಂ ಹಿ ಶೋಭನೇ ॥೧೯॥

ನನ್ನ ದೃಢನಿಶ್ಚಯದಿಂದಲೂ ಮತ್ತು ತಪಸ್ಸಿನಿಂದಲೂ ಅವನು ನಿರ್ಜಿತನಾಗಿದ್ದಾನೆ. ಎಲೌ ಶೋಭನೆಯೇ ಈ ದುಃಖಕ್ಕೆ ಖಂಡಿತವಾಗಿಯೂ ಒಂದು ಅಂತ್ಯವು ಉಂಟಾಗಬೇಕು.

ವಿಮುಚ್ಯ ಮಾಂ ಗತಃ ಪಾಪಃ ತತೋऽಹಮಿಹ ಚಾಗತಃ ।
ತ್ವದರ್ಥಂ ವಿಪುಲಶ್ರೋಣಿ ನ ಹಿ ಮೇऽನ್ಯತ್ ಪ್ರಯೋಜನಮ್ ॥೨೦॥

ಆ ಪಾಪಿಯಾದ ಕಲಿಯು ನನ್ನನ್ನು ಬಿಟ್ಟು ಹೋದನು. ಎಲೌ ವಿಪುಲಶ್ರೋಣಿಯೇ ನಾನು ನಿನ್ನ ಸಲುವಾಗಿ ಆ ಕಾರಣದಿಂದ ಇಲ್ಲಿಗೆ ಬಂದಿದ್ದೇನೆ. ಇದನ್ನು ಬಿಟ್ಟು ನನಗೆ ಬೇರೆ ಪ್ರಯೋಜನವಿಲ್ಲ.

ಕಥಂ ನು ನಾರೀ ಭರ್ತಾರಮನುರಕ್ತಮನುವ್ರತಮ್ ।
ಉತ್ಸೃಜ್ಯ ವರಯೇದನ್ಯಂ ಯಥಾ ತ್ವಂ ಭೀರು ಕರ್ಹಿಚಿತ್ ॥೨೧॥

ಎಲೌ ಭೀರುವೇ, ತನ್ನಲ್ಲೇ ಅನುರಕ್ತನಾದ ಮತ್ತು ತನ್ನನ್ನು ಅನುಸರಿಸುವ ಪತಿಯನ್ನು ಬಿಟ್ಟು ನಿನ್ನಂತೆ ಯಾವ ನಾರಿಯು ಯಾವ ಕಾರಣದಿಂದಲಾದರೂ ಇನ್ನೊಬ್ಬ ಪತಿಯನ್ನು ಹೇಗೆ ವರಿಸುತ್ತಾಳೆ?

ದೂತಾಶ್ಚರಂತಿ ಪೃಥಿವೀಂ ಕೃತ್ಸ್ನಾಂ ನೃಪತಿಶಾಸನಾತ್ ।
ಭೈಮೀ ಕಿಲಾದ್ಯ ಭರ್ತಾರಂ ದ್ವಿತೀಯಂ ವರಯಿಷ್ಯತಿ ॥೨೨॥

ದಮಯಂತಿಯು ಎರಡನೆಯ ಸ್ವಯಂವರವನ್ನು ಮಾಡಿಕೊಳ್ಳುತ್ತಿದ್ದಾಳೆ ಎಂದು ಹೇಳುತ್ತಾ ರಾಜಶಾಸನಕ್ಕೆ ಅನುಗುಣವಾಗಿ ದೂತರು ಭೂಮಿಯಲ್ಲೆಲ್ಲಾ ಸಂಚರಿಸುತ್ತಿದ್ದಾರೆ.

ಸ್ವೈರವೃತ್ಯಾ ಯಥಾಕಾಮಮನುರೂಪಮಿವಾತ್ಮನಃ ।
ಶ್ರುತ್ವೈವ ಚೈವಂ ತ್ವರಿತೋ ಭಾರ್ಗವಸ್ತ್ವರಿರುಪಸ್ಥಿತಃ ॥೨೩॥

ಋತುಪರ್ಣನು ತನ್ನ ಸ್ವಚ್ಛಂದವೃತ್ತಿಗೆ ಅನುಗುಣವಾಗಿ ನಿನ್ನನ್ನು ತನಗೆ ಅನುರೂಪಳೆಂದು ಭಾವಿಸಿ ಈ ವಾರ್ತೆಯನ್ನು ಕೇಳಿದ ತಕ್ಷಣ ಇಲ್ಲಿಗೆ ಬಂದಿದ್ದಾನೆ.

ದಮಯಂತೀ ತು ತಚ್ಛ್ರುತ್ವಾ ನಳಸ್ಯ ಪರಿದೇವಿತಮ್ ।
ಪ್ರಾಂಜಲಿರ್ವೇಪಮಾನಾ ಚ ಭೀತಾ ವಚನಮಬ್ರವೀತ್ ॥೨೪॥

ದಮಯಂತಿಯು ಆ ನಳನ ಶೋಕವನ್ನು ಕೇಳಿ ಕೈಗಳನ್ನು ಮುಗಿದು ನಡುಗುತ್ತಾ ಭಯದಿಂದ ಮಾತನಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಡ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

(ನಳದಯಮಯಂತಿಯರ ಸಮಾಗಮ)

ದಮಯಂತೀ

ನ ಮಾಮರ್ಹಸಿ ಕಲ್ಯಾಣ ಪಾಪೇನ ಪರಿಶಂಕಿತುಮ್ ।
ಮಯಾ ಹಿ ದೇವಾನುತ್ಸೃಜ್ಯ ವೃತಸ್ತ್ವಂ ನಿಷಧಾಧಿಪ ॥೦॥

ಎಲೌ ಕಲ್ಯಾಣನೇ ನಾನು ಪಾಪವನ್ನು ಮಾಡುವೆನೆಂದು ನನ್ನನ್ನು ಶಂಕಿಸಬೇಡ. ಎಲೈ ನಿಷಧಾಧಿಪನೇ ನಾನು ದೇವತೆಗಳನ್ನು ತಿರಸ್ಕರಿಸಿ ನಿನ್ನನ್ನು ವರಿಸಿದೆ.

ತವಾಭಿಗಮನಾರ್ಥಾಯ ಸರ್ವತೋ ಬ್ರಾಹ್ಮಣಾ ಗತಾಃ ।
ವಾಕ್ಯಾನಿ ಮಮ ಗಾಥಾಭಿರ್ಗಾಯಮಾನಾ ದಿಶೋ ದಶ ॥೨॥

ನಿನ್ನನ್ನು ತಿಳಿಯುವುದಕೋಸ್ಕರ ನಾನು ರಚಿಸಿದ ಗೀತೆಗಳನ್ನು ಹಾಡುವಂತೆ ಹೇಳಿ ಎಲ್ಲ ಹತ್ತುದಿಕ್ಕುಗಳಿಗೂ ಬ್ರಾಹ್ಮಣರನ್ನು ಕಳುಹಿಸಿದೆ.

ತತಸ್ತ್ವಂ ಬ್ರಾಹ್ಮಣೋ ವಿದ್ವಾನ್ ಪರ್ಣಾದೋ ನಾಮ ಪಾರ್ಥಿವ ।
ಅಭ್ಯಗಚ್ಛತ್ ಕೋಸಲಾಯಾಮೃತುಪರ್ಣನಿವೇಶನೇ ॥೩॥

ಎಲೈ ಪಾರ್ಥಿವನೇ ಅನಂತರ ಪರ್ಣಾದನೆಂಬ ಮೇಧಾವಿಯಾದ ಬ್ರಾಹ್ಮಣನು ಕೋಸಲದೇಶದಲ್ಲಿ ಋತುವರ್ಣನ ಮನೆಯಲ್ಲಿ ನಿನ್ನನ್ನು ಗುರುತಿಸಿದನು.

ತೇನ ವಾಕ್ಯೇ ಹೃತೇ ಸಮ್ಯಕ್ ಪ್ರತಿವಾಕ್ಯೇ ತು ವ್ಯಾಹೃತೇ ।
ಉಪಾಯೋಽಯಂ ಮಯಾ ದೃಷ್ಟೋ ನೈಷಧಾನಯನೇ ತವ ॥೪॥

ಅವನು ನನ್ನ ವಾಕ್ಯವನ್ನು ಸರಿಯಾಗಿ ನಿನ್ನ ಮುಂದೆ ಹೇಳಿ ನಿನ್ನ ಉತ್ತರವನ್ನು ನನಗೆ ತಲುಪಿಸಿದ ಮೇಲೆ ಎಲೈ ನೈಷಧನೇ, ಇದೇ ನಿನ್ನನ್ನು ಕರೆತರಲು ಉಪಾಯವೆಂದು ನಾನು ಭಾವಿಸಿದೆ.

ತದ್ಗತೇ ನ ಹಿ ಲೋಕೇಽನ್ಯ ಏಕಾಹ್ನಾ ಪೃಥಿವೀಪತೇ ।
ಸಮರ್ಥೋ ಯೋಜನಶತಂ ಗಂತುಮಶ್ವೈರ್ನರಾಧಿಪ ॥೫॥

ಎಲೈ ನರಾಧಿಪನೇ, ನಿನ್ನನ್ನು ಬಿಟ್ಟು ಈ ಲೋಕದಲ್ಲಿ ಬೇರೆ ಯಾವನೂ ಒಂದು ಹಗಲಿನಲ್ಲಿ ನೂರುಯೋಜನ ದೂರವನ್ನು ಅಶ್ವಹೂಡಿದ ರಥದಲ್ಲಿ ಕ್ರಮಿಸಲು ಸಮರ್ಥನಲ್ಲ.

ಸ್ಪೃಶೇಯಂ ತೇನ ಸತ್ಯೇನ ಪಾದಾವೇತೌ ಮಹೀಪತೇ ।
ಯಥಾ ನಾಸತ್ಕೃತಂ ಕಿಂಚಿನ್ ಮನಸಾऽಪಿ ಚರಾಮ್ಯಹಮ್ ॥೬॥

ಎಲೈ ಮಹೀಪತಿಯೇ, ನಿನ್ನ ಈ ಪಾದವನ್ನು ಮುಟ್ಟಿ ನಾನು ಪ್ರಮಾಣಮಾಡಿ ಹೇಳುತ್ತೇನೆ. ನಾನು ಮನಸ್ಸಿನಿಂದಲೂ ಸಹ ಸ್ವಲ್ಪವಾದರೂ ಅಸತ್ಕಾರ್ಯವನ್ನು ಮಾಡಿಲ್ಲ.

ಅಯಂ ಚರತಿ ಲೋಕೇऽಸ್ಮಿನ್ ಭೂತಸಾಕ್ಷೀ ಸದಾಗತಿಃ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಈ ಸರ್ವಜೀವ ಸಾಕ್ಷಿಯಾದ ವಾಯುವು ಈ ಲೋಕದಲ್ಲಿ ಎಲ್ಲ ಕಡೆಯಲ್ಲಿಯೂ ಸಂಚರಿಸುತ್ತಿದ್ದಾನೆ. ನಾನೇನಾದರೂ ಪಾಪವನ್ನು ಮಾಡಿದ್ದರೆ ವಾಯುವು ನನಗೆ ಪ್ರಾಣವಿಯೋಗವನ್ನು ಉಂಟುಮಾಡಲಿ.

ತಥಾ ಚರತಿ ತಿಗ್ಮಾಂಶುಃ ಕರೇಣ ಭುವನಂ ಸದಾ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಈ ಚಂಡಕಿರಣನಾದ ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಪವಿತ್ರೀಕರಿಸುತ್ತಾ ಯಾವಾಗಲೂ ತಿರುಗುತ್ತಿದ್ದಾನೆ. ನಾನೇನಾದರೂ ಅನ್ಯಾಯವನ್ನು ಮಾಡಿದ್ದರೆ ನನಗೆ ಅವನು ಪ್ರಾಣವಿಯೋಗವನ್ನು ಉಂಟುಮಾಡಲಿ.

ಚಂದ್ರಮಾಃ ಸರ್ವಭೂತಾನಾಮಂತಶ್ಚರತಿ ಸಾಕ್ಷಿವತ್ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಎಲ್ಲ ಜೀವರೊಳಗೆ ಚಂದ್ರನು ಸಾಕ್ಷಿಯಂತೆ ತಿರುಗುತ್ತಿದ್ದಾನೆ. ನಾನೇನಾದರೂ ಪಾಪವನ್ನು ಮಾಡಿದ್ದರೆ ಅವನು ನನಗೆ ಪ್ರಾಣವಿಯೋಗವನ್ನು ಉಂಟುಮಾಡಲಿ.

ಏತೇ ದೇವಾಸ್ತ್ರಯಃ ಕೃತ್ಸ್ನಂ ತ್ರೈಲೋಕ್ಯಂ ಧಾರಯಂತಿ ವೈ ।
ವಿಬ್ರುವಂತು ಯಥಾ ಸತ್ಯಮೇತದ್ದೇವಾಸ್ತ್ರಜಂತು ಮಾಂ ॥೧೦॥

ಈ ಮೂರುದೇವತೆಗಳು ಸಮಸ್ತವಾದ ಈ ಮೂರು ಲೋಕಗಳನ್ನು ಧರಿಸಿದ್ದಾರೆ. ಈ ದೇವತೆಗಳು ನಾನು ಹೇಳಿದುದು ಸತ್ಯವೇ ಅಲ್ಲವೇ ಎಂದು ಹೇಳಲಿ. ನಾನು ಸುಳ್ಳನ್ನು ಮಾತನಾಡಿದ್ದರೆ ಆ ದೇವತೆಗಳು ನನ್ನನ್ನು ತ್ಯಜಿಸಲಿ.

ಬೃಹದಶ್ವಃ

ಏವಮುಕ್ತೇ ತತೋ ವಾಯುರಂತರಿಕ್ಷಾದಭಾಷತ ॥೧೧॥

ನೈಷಾ ಕೃತವತೀ ಪಾಪಂ ನಳ ಸತ್ಯಂ ಬ್ರವೀಮಿ ತೇ ।
ರಾಜನ್‌ಶೀಲನಿಧಿಃ ಸ್ಫೀತೋ ದಮಯಂತ್ಯಾ ಸುರಕ್ಷಿತಃ ॥೧೨॥

ದಮಯಂತಿಯು ಹೀಗೆ ಹೇಳುತ್ತಿರಲು ಆಗ ವಾಯುವು ಅಂತರಿಕ್ಷದಿಂದ ಹೀಗೆ ಮಾತನಾಡಿದನು. ಎಲೈ ನಳನೇ ನಾನು ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ಇವಳು ಯಾವ ಪಾಪವನ್ನೂ ಮಾಡಿಲ್ಲ. ರಾಜನೇ ದಮಯಂತಿಯ ಪರಿಶುದ್ಧವಾದ ಶೀಲನಿಧಿಯು ಚೆನ್ನಾಗಿ ರಕ್ಷಿಸಲ್ಪಟ್ಟಿದೆ.

ಸಾಕ್ಷಿಣೋ ರಕ್ಷಣಶ್ಚಾಸ್ಯಾ ವಯಂ ತ್ರೀನ್ ಪರಿವತ್ಸರಾನ್ ।
ಉಪಾಯೋ ವಿಹಿತಶ್ಚಾಯಂ ತ್ವದರ್ಥಮತುಲೋಽನಯಾ ॥೧೩॥

ಈ ಮೂರುವರ್ಷಗಳಕಾಲದಲ್ಲಿ ನಾವು ಅವಳ ಶೀಲಕ್ಕೆ ರಕ್ಷಕರೂ ಮತ್ತು ಸಾಕ್ಷಿಗಳೂ ಆಗಿದ್ದೇವೆ. ನಿನ್ನನ್ನು ಪಡೆಯುವ ಸಲುವಾಗಿ ಅವಳು ಈ ಅಸದೃಶವಾದ ಉಪಾಯವನ್ನು ಚಿಂತಿಸಿದಳು.

ನ ಹ್ಯೇಕಾಹ್ನಾ ಶತಂ ಗಂತಾ ತ್ವದೃತೇಽನ್ಯಃ ಪುಮಾನಿಹ ।
ಉಪಪನ್ನಾ ತ್ವಯಾ ಭೈಮೀ ತ್ವಂ ಚ ಭೈಮ್ಯಾ ಮಹೀಪತೇ ।
ನಾತ್ರ ಶಂಕಾ ತ್ವಯಾ ಕಾರ್ಯಾ ಸಂಗಚ್ಛ ಸಹ ಭಾರ್ಯಯಾ ॥೧೪॥

ಒಂದೇ ಒಂದು ಹಗಲಿನಲ್ಲಿ ನಿನ್ನನ್ನು ಬಿಟ್ಟುಯಾರೂ ಈ ಭೂಮಿಯಲ್ಲಿ ನೂರು ಯೋಜನಗಳನ್ನು ಪ್ರಯಾಣವನ್ನು ಮಾಡಲಾರರು. ಮಹೀಪತಿಯೇ ದಮಯಂತಿಯು

ನಿನ್ನ ಜೊತೆಯಲ್ಲಿ ಸೇರಿದ್ದಾಳೆ. ನೀನೂ ಸಹ ದಮಯಂತಿಯ ಜೊತೆಯಲ್ಲಿ ಸೇರಿದ್ದೀಯೇ. ನೀನು ಅವಳನ್ನು ಶಂಕಿಸಬಾರದು. ನಿನ್ನ ಪತ್ನಿಯ ಜೊತೆಯಲ್ಲಿ ಸಮಾಗಮವನ್ನು ಹೊಂದು.

ತಥಾ ಬ್ರುವತಿ ವಾಯೌ ತು ಪುಷ್ಪವೃಷ್ಟಿಃ ಪಪಾತ ಹ ।
ದೇವದುಂದುಭಯೋ ನೇದುರ್ವವೌ ಚ ಪವನಃ ಶುಭಃ ॥೧೫॥

ವಾಯುವು ಹಾಗೆ ಮಾತನಾಡುತ್ತಿರಲು ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದವು. ಸುಖಸ್ಪರ್ಶವುಳ್ಳ ವಾಯುವು ಮಂದವಾಗಿ ಬೀಸಿತು.

ತದದ್ಭುತತಮಂ ದೃಷ್ಟ್ವಾ ನಳೋ ರಾಜಾऽಥ ಭಾರತ ।
ದಮಯಂತ್ಯಾಂ ವಿಶಂಕಾಂ ತಾಂ ವ್ಯಪಾಕರ್ಷದರಿಂದಮಃ ॥೧೬॥

ಎಲೈ ಭಾರತನೇ ಈ ಅತ್ಯದ್ಭುತವಾದ ಘಟನೆಯನ್ನು ನೋಡಿ ಅರಿಂದಮನಾದ ನಳಮಹಾರಾಜನು ಆಗ ತನಗೆ ದಮಯಂತಿಯಲ್ಲಿದ್ದ ಶಂಕೆಯನ್ನು ತೊರೆದನು.

ತತಸ್ತದ್ವಸ್ತ್ರಮರಜಃ ಪ್ರಾವೃಣೋದ್ವಸುಧಾಧಿಪಃ ।
ಸಂಸ್ಮೃತ್ಯ ನಾಗರಾಜಾನಂ ತತೋ ಲೇಭೇ ಪರಃ ಸ್ವಕಮ್ ॥೧೭॥

ಆಗ ಆ ರಾಜನು ನಾಗರಾಜನಾದ ಕಾರ್ಕೋಟಕನನ್ನು ಸ್ಮರಿಸಿ ಅವನು ಕೊಟ್ಟಿದ್ದ ಶುಭ್ರವಾದ ವಸ್ತ್ರವನ್ನು ಹೊದ್ದುಕೊಂಡನು. ತಕ್ಷಣ ನಳನ ಹಿಂದಿನ ರೂಪವು ಅವನಿಗೆ ಮರಳಿಬಂದಿತು.

ಸ್ವರೂಪೇಣ ತು ಭರ್ತಾರಂ ದೃಷ್ಟ್ವಾ ಭೀಮಸುತಾ ತತಃ ।
ಪ್ರಾಕ್ರೋಶದುಚ್ಚೈರಾಲಿಂಗ್ಯ ಪುಣ್ಯಶ್ಲೋಕಮನಿಂದಿತಾ ॥೧೮॥

ಹಿಂದಿನ ರೂಪದಲ್ಲಿಯೇ ಇದ್ದ ತನ್ನ ಪತಿಯನ್ನು ನೋಡಿದ ಅನಿಂದಿತಳಾದ ದಮಯಂತಿಯು ಆ ಪುಣ್ಯಶ್ಲೋಕನನ್ನು ಆಲಿಂಗಿಸಿ ಗಟ್ಟಿಯಾಗಿ ಕಿರುಚಿದಳು.

ಪ್ರೈಮೀಮಪಿ ನಳೋ ರಾಜಾ ಭ್ರಾಜಮಾನೋ ಯಥಾ ರವಿಃ ।
ಸಸ್ವಜೇ ಸ್ವಸುತೌ ಚಾಪಿ ಯಥಾವತ್ ಪ್ರತ್ಯನಂದತ ॥೧೯॥

ನಳಮಹಾರಾಜನೂ ಸಹ ಸೂರ್ಯನಂತೆ ಕಂಗೊಳಿಸುತ್ತಾ ದಮಯಂತಿಯನ್ನು ಮತ್ತು ತನ್ನ ಎರಡು ಮಕ್ಕಳನ್ನು ಆಲಿಂಗಿಸಿದನು. ಯಥಾಯೋಗ್ಯವಾಗಿ ಅವರನ್ನು ಅಭಿನಂದಿಸಿದನು.

ತತಃ ಸ್ಮೋರಸಿ ವಿನ್ಯಸ್ಯ ವಕ್ತ್ರಂ ತಸ್ಯ ಶುಭಾನನಾ ।
ಪರಿಶ್ರಾಂತೇವ ದುಃಖೇನ ನಿಶಶ್ವಾಸಾಯತೇಕ್ಷಣಾ ॥೨೦॥

ಅನಂತರ ಆ ವಿಶಾಲನೇತ್ರೆಯೂ ಸುಂದರಮುಖಿಯೂ ಆದ ದಮಯಂತಿಯು ತನ್ನ ಎದೆಯಲ್ಲಿ ನಳನ ಮುಖವನ್ನು ಇಟ್ಟುಕೊಂಡು ಬಹಳ ದಣಿದವಳಂತೆ ದುಃಖದಿಂದ ನಿಟ್ಟುಸಿರನ್ನು ಬಿಟ್ಟಳು.

ತಥೈವ ಮಲದಿಗ್ಧಾಂಗೀ ಪರಿಷ್ವಜ್ಯ ಶುಚಿಸ್ಮಿತಾ ।
ಸುಚಿರಂ ಪುರುಷವ್ಯಾಘ್ರಂ ತಸ್ಥೌ ಶೋಕಪರಿಪ್ಲುತಾ ॥೨೧॥

ಆ ಶುಚಿಸ್ಮಿತೆಯಾದ ದಮಯಂತಿಯು ಅಸಂಸ್ಕೃತ ದೇಹದಿಂದ ಶೋಕಪೂರ್ಣಳಾಗಿ ಪುರುಷವ್ಯಾಘ್ರನಾದ ನಳನನ್ನು ಆಲಿಂಗಿಸಿ ಬಹಳ ಸಮಯ ಹಾಗೆಯೇ ಇದ್ದಳು.

ತತಸ್ತ್ವರ್ಂ ಯಥಾವೃತ್ತಂ ದಮಯಂತ್ಯಾ ನಳಸ್ಯ ಚ ।
ಭೀಮಾಯಾಕಥಯತ್ ಪ್ರೀತ್ಯಾ ವೈದರ್ಭ್ಯಾ ಜನನೀ ನೃಪ ॥೨೨॥

ಆಗ ಎಲೈ ರಾಜನೇ ದಮಯಂತಿಯ ತಾಯಿಯು ದಮಯಂತಿಗೂ ಮತ್ತು ನಳನಿಗೂ ನಡೆದ ಎಲ್ಲಾವೃತ್ತಾಂತವನ್ನೂ ಸಂತೋಷದಿಂದ ಭೀಮರಾಜನಿಗೆ ತಿಳಿಸಿದಳು.

ತತೋಽಬ್ರವೀನ್ಮಹಾರಾಜಃ ಕೃತಶೌಚಮಹಂ ನಳಮ್ ।
ದಮಯಂತ್ಯಾ ಸಹೋಪೇತಂ ಕಾಲ್ಯಂ ದ್ರಷ್ಟಾ ಸುಖೋಷಿತಮ್ ॥೨೩॥

ಆಗ ಮಹಾರಾಜನಾದ ಭೀಮನು ಶುಭ್ರನಾಗಿ ಈ ರಾತ್ರಿ ಸುಖವಾಗಿ ಕಾಲವನ್ನು ಕಳೆದ ನಳನನ್ನು ನಾಳೆಯ ಪ್ರಾತಃಕಾಲ ದಮಯಂತಿಯ ಜೊತೆಯಲ್ಲಿ ನಾನು ನೋಡುವೆನು ಎಂದು ಹೇಳಿದನು.

ತತಸ್ತೌ ಸಹಿತೌ ರಾತ್ರಿಂ ಕಥಯಂತೌ ಪುರಾತನಮ್ ।
ವನೇ ವಿಚರಿತಂ ಸರ್ವಮೂಷತುರ್ಮುದಿತೌ ನೃಪ ॥೨೪॥

ಎಲೈ ರಾಜನೇ ಅನಂತರ ನಳದಮಯಂತಿಯರು ಒಂದಾಗಿ ರಾತ್ರಿಯಲ್ಲಿ ಹಿಂದೆ ಕಾಡಿನಲ್ಲಿ ನಡೆದ ಘಟನೆಗಳನ್ನೆಲ್ಲಾ ಪರಸ್ಪರವಾಗಿ ಹೇಳುತ್ತಾ ಸುಖದಿಂದ ಕಳೆದರು.

ಸ ಚತುರ್ಥೇ ತತೋ ವರ್ಷೇ ಸಂಗಮ್ಯ ಸಹ ಭಾರ್ಯಯಾ ।
ಸರ್ವಕಾಮಸಮೃದ್ಧಾರ್ಥೋ ಲಬ್ಧವಾನ್ ಪರಮಾಂ ಮುದಮ್ ॥

ನಳನು ವಿಯೋಗವಾದ ನಾಲ್ಕನೆಯ ವರ್ಷದಲ್ಲಿ ತನ್ನ ಪತ್ನಿಯ ಸಮಾಗಮವನ್ನು ಹೊಂದಿ ಸರ್ವಕಾಮಪೂರ್ಣನಾಗಿ ಶ್ರೇಷ್ಠವಾದ ಆನಂದವನ್ನು ಹೊಂದಿದನು.

ದಮಯಂತ್ಯಪಿ ಭರ್ತಾರಮವಾಪ್ಯಾಪ್ಯಾಯಿತಾ ಭೃಶಮ್ ।
ಅರ್ಧಸಂಜಾತಸಸ್ಯೇವ ತೋಯಂ ಪ್ರಾಪ್ಯ ವಸುಂಧರಾ ॥೨೬॥

ದಮಯಂತಿಯೂ ಕೂಡ ಅರ್ಧಸಸ್ಯವು ಬೆಳೆದ ಭೂಮಿಯು ಮಳೆಯನ್ನು ಪಡೆದು ಸಂತೋಷಪಡುವಂತೆ ಪತಿಯನ್ನು ಪಡೆದು ಬಹಳ ಸಂತೋಷಗೊಂಡಳು.

ಸಾ ತಂ ಸಮೇತ್ಯ ವ್ಯಪನೀತನಿದ್ರಾ
ಶಾಂತಜ್ವರಾ ಹರ್ಷವಿವೃದ್ಧಸತ್ತ್ವಾ ।
ರರಾಜ ಭೈಮೀ ಸುಸಮಾಪ್ತಕಾಮಾ
ಶೀತಾಂಶುನಾ ರಾತ್ರಿರಿವೋದಿತೇನ ॥೨೭॥

ಅವಳು ಅವನನ್ನು ಹೊಂದಿ ನಿದ್ರೆಯನ್ನು ತೊರೆದು ಮನಸ್ಸಿನ ಆತಂಕಗಳನ್ನೆಲ್ಲಾ ನಾಶಮಾಡಿ ಸಂತೋಷದಿಂದ ಹೆಚ್ಚಾದ ಸತ್ವಗುಣವುಳ್ಳವಳಾಗಿ ತನ್ನ ಎಲ್ಲಾ ಕಾಮಗಳನ್ನೂ ಪಡೆದು ರಾತ್ರಿಯು ಉದಯಿಸಿದ ಚಂದ್ರನ ಜೊತೆಯಲ್ಲಿ ವಿರಾಜಿಸುವಂತೆ ನಳನ ಜೊತೆಯಲ್ಲಿ ವಿರಾಜಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತದಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ತೆರಡನೆಯ ಅಧ್ಯಾಯ

(ಭೀಮನಿಂದ ನಳನಿಗೆ ಸತ್ಕಾರ. ಪ್ರೀತಿಯ ಮಾತುಗಳನ್ನಾಡಿ ಋತುಪರ್ಣನ ಪ್ರಯಾಣ.)

ಬೃಹದಶ್ವಃ

ಅಥ ರಾತ್ರ್ಯಾಂ ವ್ಯತೀತಾಯಾಂ ನಳೋ ರಾಜಾ ವಿಶಾಂಪತೇ ।
ವೈದರ್ಭ್ಯಾ ಸಹಿತಃ ಕಾಲ್ಯಂ ದದರ್ಶ ವಸುಧಾಧಿಪಮ್ ॥೧॥

ತತೋಽಭಿವಾದಯಾಮಾಸ ಪ್ರಯತಃ ಶ್ವಶುರಂ ನಳಃ ।
ತಸ್ಯಾನು ದಮಯಂತೀ ಚ ವವಂದೇ ಪಿತರಂ ಶುಭಾ ॥೨॥

ಎಲೈ ರಾಜನೇ ಆ ರಾತ್ರಿಯು ಕಳೆಯುತ್ತಿರಲು ನಳರಾಜನು ದಮಯಂತಿಯ ಜೊತೆಯಲ್ಲಿ ಪ್ರಾತಃಕಾಲದಲ್ಲಿ ಭೀಮರಾಜನನ್ನು ನೋಡಿದನು. ಆನಂತರ ನಳನು ವಿನಯದಿಂದ ಮಾವನಿಗೆ ನಮಸ್ಕಾರವನ್ನು ಮಾಡಿದನು. ಅವನ ಅನಂತರ ಶುಭಳಾದ ದಮಯಂತಿಯೂ ಸಹ ತಂದೆಯನ್ನು ನಮಸ್ಕರಿಸಿದಳು.

ತಂ ಭೀಮಃ ಪ್ರತಿಜಗ್ರಾಹ ಪುತ್ರವತ್ ಪರಯಾ ಮುದಾ ।
ಯಥಾರ್ಹಂ ಪೂಜಯಿತ್ವಾ ತಂ ಸಮಾಶ್ವಾಸಯತ ಪ್ರಭುಮ್ ॥೩॥

ಭೀಮನು ನಳನನ್ನು ತನ್ನ ಮಗನಂತೆ ಬಹಳ ಸಂತೋಷದಿಂದ ಸ್ವೀಕರಿಸಿದನು. ಯಥಾಯೋಗ್ಯವಾಗಿ ಅವನನ್ನು ಸತ್ಕರಿಸಿ ಪ್ರಭುವಾದ ಅವನಿಗೆ ಸಮಾಧಾನವನ್ನು ಮಾಡಿದನು.

ನಳೇನ ಸಹಿತಾಂ ತತ್ರ ದಮಯಂತೀಂ ಪತಿವ್ರತಾಮ್ ।
ಅನುಜಗ್ರಾಹ ಮಹತಾ ಸತ್ಕಾರೇಣ ಕ್ಷಿತೀಶ್ವರಃ ॥೪॥

ಆ ಕ್ಷಿತೀಶ್ವರನು ಪತಿಯ ಜೊತೆಯಲ್ಲಿದ್ದ ಪತಿವ್ರತೆಯಾದ ದಮಯಂತಿಗೂ ಬಹಳ ಸತ್ಕಾರವನ್ನು ಮಾಡಿ ಅನುಗ್ರಹಿಸಿದನು.

ತಾಮರ್ಹಣಾಂ ನಳೋ ರಾಜಾ ಪ್ರತಿಗೃಹ್ಯ ಯಥಾವಿಧಿ ।
ಪರಿಚರ್ಯಾಂ ಸ್ವಕಾಂ ತಸ್ಮೈ ಯಥಾವತ್ ಪ್ರತ್ಯವೇದಯತ್ ॥೫॥

ನಳರಾಜನು ಮಾವನು ತನಗೆ ಕೊಟ್ಟ ಸತ್ಕಾರವನ್ನು ವಿಧಿವತ್ತಾಗಿ ಸ್ವೀಕರಿಸಿ ಅವನಿಗೆ ತಾನು ಮಾಡಬೇಕಾದ ಪರಿಚರ್ಯೆಯನ್ನು ವಿಧಿಪೂರ್ವಕವಾಗಿ ಮಾಡಿದನು.

ತತೋ ಬಭೂವ ನಗರೇ ಸುಮಹಾನ್ ಹರ್ಷನಿಸ್ವನಃ ।
ಜನಸ್ಯ ಸಂಪ್ರಹೃಷ್ಟಸ್ಯ ನಳಂ ದೃಷ್ಟ್ವಾ ತಥಾಽಗತಮ್ ॥೬॥

ಅನಂತರ ಹಾಗೆ ಹಿಂದಿರುಗಿ ಬಂದ ನಳನನ್ನು ನೋಡಿ ಸಂತೋಷಗೊಂಡ ಪ್ರಜೆಗಳು ನಗರದಲ್ಲಿ ದೊಡ್ಡ ಹರ್ಷೋದ್ಗಾರಗಳನ್ನು ಮಾಡಿದರು.

ಅಶೋಭಯಚ್ಚ ನಗರೀಂ ಪತಾಕಾಧ್ವಜಮಾಲಿನೀಮ್ ।
ಸಿಕ್ತಾಃ ಸುಮೃಷ್ಟಪುಷ್ಪಾಢ್ಯಾ ರಾಜಮಾರ್ಗಾಸ್ತಥಾಕೃತಾಃ ॥೭॥

ದ್ವಾರಿದ್ವಾರಿ ಚ ಪೌರಾಣಾಂ ಪುಷ್ಪಭಂಗಃ ಪ್ರಕಲ್ಪಿತಃ ।
ಅರ್ಚಿತಾನಿ ಚ ವೇಶ್ಮಾನಿ ದೈವತಾಯತನಾನಿ ಚ ॥೮॥

ಆ ನಗರವನ್ನೆಲ್ಲಾ ಪತಾಕೆಗಳಿಂದಲೂ ಧ್ವಜಗಳಿಂದಲೂ ಮತ್ತು ಪುಷ್ಪಮಾಲೆಗಳಿಂದಲೂ ಅಲಂಕರಿಸಿದರು. ರಾಜಮಾರ್ಗಗಳೆಲ್ಲವೂ ಸುಗಂಧಯುಕ್ತವಾದ ಜಲದಿಂದ ಸಿಂಪಡಿಸಲ್ಪಟ್ಟು ಪುಷ್ಪಗಳು ಹರಡಿ ಸುಂದರವಾಗಿ ಮಾಡಲ್ಪಟ್ಟವು. ಪೌರರ ಪ್ರತಿಯೊಂದು ಮನೆಯಬಾಗಿಲುಗಳಲ್ಲಿ ಪುಷ್ಪವಿನ್ಯಾಸಗಳು ಮಾಡಲ್ಪಟ್ಟವು. ಮನೆಗಳು ಮತ್ತು ದೇವಾಲಯಗಳು ಅಲಂಕರಿಸಲ್ಪಟ್ಟವು.

ಋತುಪರ್ಣೋಽಪಿ ಶುಶ್ರಾವ ಬಾಹುಕಚ್ಛದ್ಮಿನಂ ನಳಮ್ ।
ದಮಯಂತ್ಯಾ ಸಮಾಯುಕ್ತಂ ಜಹೃಷೇ ಚ ಪರಂತಪಃ ॥೯॥

ಪರಂತಪನಾದ ಋತುಪರ್ಣನೂ ಕೂಡ ಬಾಹುಕನ ಛದ್ಮವೇಷದಲ್ಲಿದ್ದ ನಳನು ದಮಯಂತಿಯ ಸಮಾಗಮವನ್ನು ಹೊಂದಿದನೆಂದು ಕೇಳಿ ಸಂತೋಷಪಟ್ಟನು.

ತಮಾನಾಯ್ಯ ನಳಂ ರಾಜಾ ಕ್ಷಮಯಾಮಾಸ ಪಾರ್ಥಿವಮ್ ।
ಸ ಚ ತಂ ಕ್ಷಮಯಾಮಾಸ ಹೇತುಭಿರ್ಬುದ್ಧಿಸಮ್ಮತೈಃ ॥೧೦॥

ಋತುಪರ್ಣರಾಜನು ನಳನನ್ನು ಕರೆಸಿ ಅವನ ಕ್ಷಮೆಯನ್ನು ಕೇಳಿದನು. ನಳನೂ ಸಹ ಬುದ್ಧಿಗೆ ಒಪ್ಪುವಕಾರಣಗಳನ್ನು ಹೇಳಿ ಅವನನ್ನು ಕ್ಷಮಿಸಿದನು.

ಸ ಸತ್ಕೃತೋ ಮಹೀಪಾಲೋ ನೈಷಧಂ ವಿಸ್ಮಿತಾನನಃ ।
ದಿಷ್ಟ್ಯಾ ಸಮೇತೋ ದಾರೈಸ್ತ್ವಮಿತ್ಯುವಾಚ ನಳಂ ನೃಪಃ ॥೧೧॥

ಹೀಗೆ ಸತ್ಕೃತನಾದ ಆ ಋತುಪರ್ಣರಾಜನು ವಿಸ್ಮಯದಿಂದ ಕೂಡಿದ ಮುಖವುಳ್ಳವನಾಗಿ ನೈಷಧರಾಜನಾದ ನಳನನ್ನು ಕುರಿತು ದೇವರ ದಯೆಯಿಂದ ನೀನು ನಿನ್ನ ಪತ್ನಿಯನ್ನು ಸೇರಿದೆ ಎಂದು ಹೇಳಿದನು.

ಕಚ್ಚಿನ್ನ ನಾಪರಾಧಂ ತೇ ಕೃತವಾನಸ್ಮಿ ನೈಷಧ ।
ಅಜ್ಞಾತವಾಸಂ ವಸತೋ ಮದ್ಗೃಹೇ ನಿಷಧಾಧಿಪ ॥೧೨॥

ಎಲೈ ನೈಷಧನೇ, ನೀನು ನನ್ನ ಮನೆಯಲ್ಲಿ ಅಜ್ಞಾತವಾಸವನ್ನು ಮಾಡುವಾಗ ನಾನು ನಿನಗೆ ಯಾವ ಅಪರಾಧವನ್ನೂ ಮಾಡಿಲ್ಲವಷ್ಟೇ?

ಯದಿ ವಾऽಬುದ್ಧಿಪೂರ್ವಾಣಿ ಯದಿ ಬುದ್ಧ್ಯಾऽಪಿ ಕರ್ಹಿಚಿತ್।
ಮಯಾ ಕೃತಾನ್ಯಕಾರ್ಯಾಣಿ ತಾನಿ ತ್ವಂ ಕ್ಷಂತುಮರ್ಹಸಿ ॥೧೩॥

ನಾನು ತಿಳಿದಾಗಲೀ ಅಥವಾ ತಿಳಿಯದೇ ಆಗಲೀ ಏನಾದರೂ ಅಪರಾಧವನ್ನು ಮಾಡಿದ್ದರೆ ನೀನು ಆ ಅಪರಾಧಗಳನ್ನು ಕ್ಷಮಿಸಬೇಕು ಎಂದು ಹೇಳಿದನು.

ನಳಃ

ನ ಮೇऽಪರಾಧಂ ಕೃತವಾನ್ ತ್ವಂ ಸ್ವಲ್ಪಮಪಿ ಪಾರ್ಥಿವ ।
ಕೃತೇऽಪಿ ಚ ನ ಮೇ ಕೋಪಃ ಕ್ಷಂತವ್ಯಂ ಹಿ ಮಯಾ ತವ ॥೧೪॥

ಎಲೈ ರಾಜನೇ ನೀನು ನನಗೆ ಅಲ್ಪವಾದ ಅಪರಾಧವನ್ನೂ ಮಾಡಿಲ್ಲ ಮಾಡಿದ್ದರೂ ಸಹ ನನಗೆ ಕೋಪವು ಬರುತ್ತಿರಲಿಲ್ಲ. ನೀನು ಯಾವಾಗಲೂ ನನ್ನಿಂದ ಕ್ಷಮಿಸಲ್ಪಡಬೇಕಾದವನು.

ಪೂರ್ವಂ ಹ್ಯಪಿ ಸಖಾ ಚಾಸಿ ಸಂಬಂಧೀ ಚ ನರಾಧಿಪ ।
ಅತ ಊರ್ಧ್ವಂ ಚ ಭೂಯಸ್ತ್ವಂ ಪ್ರೀತಿಮಾಹರ್ತುಮರ್ಹಸಿ ॥೧೫॥

ಎಲೈ ರಾಜನೇ ನೀನು ಮೊದಲೇ ನನ್ನ ಸ್ನೇಹಿತನೂ ಮತ್ತು ಬಂಧುವೂ ಆಗಿದ್ದಿ. ಇನ್ನು ಮುಂದೆ ನೀನು ನನ್ನ ಮೇಲೆ ಮೊದಲಿಗಿಂತಲೂ ಹೆಚ್ಚು ಪ್ರೀತಿಯನ್ನು ಮಾಡಬೇಕು.

ಸರ್ವಕಾಮೈಃ ಸುವಿಹಿತಃ ಸುಖಮಸ್ಮ್ಯುಷಿತಸ್ತ್ವಯಿ ।
ನ ತಥಾ ಸ್ವಗೃಹೇ ರಾಜನ್ ಯಥಾ ತವ ಗೃಹೇ ಸದಾ ॥೧೬॥

ನಾನು ನಿನ್ನ ಮನೆಯಲ್ಲಿ ಎಲ್ಲ ಕಾಮಗಳಿಂದಲೂ ಪೂರ್ಣನಾಗಿ ಸುಖವಾಗಿ ವಾಸಮಾಡಿದೆ. ಎಲೈ ರಾಜನೇ ನಿನ್ನ ಮನೆಯಲ್ಲಿ ಎಷ್ಟು ಸೌಖ್ಯವನ್ನು ನೀಡಿದೆಯೋ ಅಷ್ಟು ನನ್ನ ಮನೆಯಲ್ಲಿಯೇ ಇಲ್ಲ.

ಇದಂ ಚೈವ ಹಯಜ್ಞಾನಂ ತ್ವದೀಯಂ ಮಮ ತಿಷ್ಠತಿ ।
ತದುಪಾಕರ್ತುಮಿಚ್ಛಾಮಿ ಮನ್ಯಸೇ ಯದಿ ಪಾರ್ಥಿವ ॥೧೭॥

ನೀನು ನನ್ನಲ್ಲಿ ನ್ಯಾಸವಾಗಿ ಇಟ್ಟದ್ದ ಅಶ್ವವಿದ್ಯೆಯು ನನ್ನಲ್ಲಿಯೇ ಇದೆ. ಎಲೈ ರಾಜನೇ ನೀನು ಇಚ್ಛಿಸುವುದಾದರೆ ಅದನ್ನು ನಿನಗೆ ಹಿಂದಿರುಗಿಸಲು ಬಯಸುತ್ತೇನೆ.

ಏವಮುಕ್ತ್ವಾ ದದೌ ವಿದ್ಯಾಮೃತುಪರ್ಣಾಯ ನೈಷಧಃ ।
ಸ ಚ ತಾಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ ॥೧೮॥

ಹೀಗೆ ಹೇಳಿ ನಳನು ಋತುಪರ್ಣನಿಗೆ ಅಶ್ವವಿದ್ಯೆಯನ್ನು ಉಪದೇಶಿಸಿದನು. ಆ ಋತುಪರ್ಣನಾದರೂ ವಿಧಿಪೂರ್ವಕವಾಗಿ ಕರ್ಮವನ್ನು ಮಾಡಿ ಆ ವಿದ್ಯೆಯನ್ನು ಸ್ವೀಕರಿಸಿದನು.

ತತೋ ಗೃಹ್ಯಾಶ್ವಹೃದಯಂ ಪ್ರೀತೋ ಭಾರ್ಗವನಂದನ ।
ಸೂತಮನ್ಯಮುಪಾದಾಯ ಪ್ರಯಯೌ ಸ್ವಾಂ ಪುರೀಂ ಪ್ರತಿ ॥೧೯॥

ಎಲೈ ರಾಜನೇ ಅಶ್ವಹೃದಯವನ್ನು ಸ್ವೀಕರಿಸಿ ಸಂತೋಷಗೊಂಡ ಋತುಪರ್ಣನು ಇನ್ನೊಬ್ಬ ಸೂತನನ್ನು ಕರೆದುಕೊಂಡು ತನ್ನ ಪಟ್ಟಣಕ್ಕೆ ಪ್ರಯಾಣಮಾಡಿದನು.

ಋತುಪರ್ಣೇ ಪ್ರತಿಗತೇ ನಳೋ ರಾಜಾ ವಿಶಾಂಪತೇ ।
ನಗರೇ ಕುಂಡಿನೇ ಕಾಲಂ ನಾತಿದೀರ್ಘಮಿವಾವಸತ್ ॥೨೦॥

ಎಲೈ ರಾಜನೇ ಋತುಪರ್ಣನು ಹಿಂದಿರುಗಿದ ಮೇಲೆ ನಳಮಹಾರಾಜನು ಕುಂಡಿನಿ ನಗರದಲ್ಲಿ ಸ್ವಲ್ಪಕಾಲದವರೆಗೆ ವಾಸಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ಮೂರನೆಯ ಅಧ್ಯಾಯ

(ತನ್ನ ಪಟ್ಟಣಕ್ಕೆ ಹಿಂದಿರುಗಿ ಪುಷ್ಕರನನ್ನು ದ್ಯೂತದಲ್ಲಿ
ಸೋಲಿಸಿ ಅವನಿಗೆ ನಳನಿಂದ ಪ್ರಾಣದಾನ.)

ಬೃಹದಶ್ವಃ

ಸ ಮಾಸಮುಷ್ಯ ಕೌಂತೇಯ ಭೀಮಮಾಮಂತ್ರ್ಯ ನೈಷಧಃ ।
ಪುರಾದಲ್ಪಪರೀವಾರೋ ಜಗಾಮ ನಿಷಧಾನ್ ಪ್ರತಿ ॥೧॥

ಎಲೈ ಕೌಂತೇಯನೇ, ನೈಷಧನು ಒಂದುತಿಂಗಳಕಾಲ ವಿದರ್ಭದೇಶದಲ್ಲಿ ವಾಸಮಾಡಿ ಭೀಮರಾಜನ ಅನುಮತಿಯನ್ನು ಪಡೆದು ಅಲ್ಪಪರಿವಾರ ಸಹಿತನಾಗಿ ಅಲ್ಲಿಂದ ನಿಷಧ ದೇಶಕ್ಕೆ ಬಂದನು.

ರಥೇನೈಕೇನ ಶುಭ್ರೇಣ ದಂತಿಭಿಃ ಪರಿಷೋಡಶೈಃ ।
ಪಂಚಾಶದ್ಭಿರ್ಹಯೈಶ್ಚಾಪಿ ಷಟ್‌ಶತೈಶ್ಚ ಪದಾತಿಭಿಃ ॥೨॥

ಸ ಕಂಪಯನ್ನಿವ ಮಹೀಂ ತ್ವರಮಾಣೋ ಮಹೀಪತಿಃ ।
ಪ್ರವಿವೇಶಾತಿಸಂರಬ್ಧಪ್ರರಸೈವ ಮಹಾಮನಾಃ ॥೩॥

ಒಂದು ಶುಭ್ರವಾದ ರಥ ಹದಿನಾರು ಆನೆಗಳು ಐವತ್ತು ಕುದುರೆಗಳು ಮತ್ತು ಆರುನೂರು ಪದಾತಿಗಳೊಡನೆ ಮಹಾಮನನಾದ ಆ ಮಹೀಪತಿಯು ಭೂಮಿಯನ್ನು ನಡುಗಿಸುತ್ತಾ ಶೀಘ್ರವಾಗಿ ಬಹಳ ಕೋಪದಿಂದಲೇ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ತತಃ ಪುಷ್ಕರಮಾಸಾದ್ಯ ವೀರಸೇನಸುತೋ ಬಲೀ ।
ಉವಾಚ ದೀವ್ಯಾವ ಪುನರ್ಬಹುವಿತ್ತಂ ಮಯಾऽರ್ಜಿತಮ್ ॥೪॥

ಆನಂತರ ಬಲಿಷ್ಠನೂ ವೀರಸೇನಸುತನೂ ಆದ ಅವನು ಪುಷ್ಕರನನ್ನು ಸಮೀಪಿಸಿ ನಾನು ಬಹಳ ಧನವನ್ನು ಗಳಿಸಿದ್ದೇನೆ ಪುನಃ ದ್ಯೂತವನ್ನು ಆಡೋಣ ಎಂದು ಹೇಳಿದನು.

ದಮಯಂತೀ ಚ ಯಚ್ಚಾನ್ಯನ್ ಮಯಾ ವಸು ಸಮಾರ್ಜಿತಮ್ ।
ಏಷ ವೈ ಮಮ ಸಂನ್ಯಾಸಸ್ತವ ರಾಜ್ಯಂ ತು ಪುಷ್ಕರ ॥೫॥

ಪುಷ್ಕರನೇ ದಮಯಂತಿ ಮತ್ತು ನಾನು ಸಂಪಾದಿಸಿದ ಧನ ಇದು ನಾನು ಪಣಕ್ಕಿಡುವ ವಸ್ತು. ನೀನು ರಾಜ್ಯವನ್ನು ಪಣಕ್ಕಿಡಬೇಕು.

ಪುನಃ ಪ್ರವರ್ತತಾಂ ದ್ಯೂತಮಿತಿ ಮೇ ನಿಶ್ಚಿತಾ ಮತಿಃ ।
ಏಕಪಾಣೇನ ಭದ್ರಂ ತೇ ಪಣಯೋಶ್ಚ ಪಣಾವಹೇ ॥೬॥

ಪುನಃ ದ್ಯೂತವನ್ನು ಆಡಬೇಕೆಂದು ನನ್ನ ನಿಶ್ಚಿತವಾದ ಅಭಿಪ್ರಾಯ. ನಿನಗೆ ಮಂಗಳವಾಗಲಿ ಈ ಪಣಗಳನ್ನು ಇಟ್ಟು ಒಂದೇ ಬಾರಿಗೆ ದ್ಯೂತವಾಡೋಣ.

ಜಿತ್ವಾ ಪರಸ್ವಮಾಹೃತ್ಯ ರಾಜ್ಯಂ ವಾ ಯದಿ ವಾ ವಸು ।
ಪ್ರತಿಪಾಣಃ ಪ್ರದಾತವ್ಯಃ ವರಂ ಹಿ ಧನಮುಚ್ಯತೇ ॥೭॥

ಗೆದ್ದವರು ಇನ್ನೊಬ್ಬರ ಪಣವನ್ನು ಸ್ವೀಕರಿಸುತ್ತಾರೆ. ರಾಜ್ಯವಾಗಲೀ ಅಥವಾ ಧನವಾಗಲೀ ಪಣವಷ್ಟೇ. ಪಣಕ್ಕೆ ಇಟ್ಟ ವಸ್ತುಗಳನ್ನು ಕೊಡಲೇಬೇಕು. ಆದರಲ್ಲಿ ಧನವೇ ಶ್ರೇಷ್ಠವೆಂದು ಹೇಳಲ್ಪಡುತ್ತದೆ.

ನ ಚೇದ್ಧಂಧಸಿ ತದ್ದ್ಯೂತಂ ಯುದ್ಧದ್ಯೂತಂ ಪ್ರವರ್ತತಾಮ್।
ದ್ವೈರಥೇನಾಪಿ ವೈ ಶಾಂತಿಸ್ತವ ವಾ ಮಮ ವಾ ನೃಪ ॥೮॥

ಈ ಅಕ್ಷದ್ಯೂತವನ್ನು ನೀನು ಬಯಸದಿದ್ದರೆ ಯುದ್ಧದ್ಯೂತವೇ ನಡೆಯಲಿ. ಎಲೈ ರಾಜನೇ, ದ್ವೈರಥಯುದ್ಧದಲ್ಲಿ (ಇಬ್ಬರು ರಥದಲ್ಲಿ ಕುಳಿತು ಯುದ್ಧಮಾಡುವುದು) ನಿನ್ನ ಅಥವಾ ನನ್ನ ಅವಸಾನವಾಗಲಿ.

ವಂಶಭೋಜ್ಯಮಿದಂ ರಾಜ್ಯಮಾರ್ಜಿತವ್ಯಂ ಯಥಾಗತಮ್ ।
ಯೇನ ಕೇನಾಪ್ಯುಪಾಯೇನ ವೃದ್ಧಾನಾಮಿತಿ ಶಾಸನಮ್ ॥೯॥

ನಮ್ಮ ವಂಶದವರಿಂದ ಭೋಗಿಸಲ್ಪಡಬೇಕಾದ ಈ ರಾಜ್ಯವನ್ನು ಯಾವುದಾದರೂ ಉಪಾಯದಿಂದ ಚೆನ್ನಾಗಿ ಸಂಪಾದಿಸಬೇಕೆಂಬುದು ದೊಡ್ಡವರ ಅನುಶಾಸನ.

ದ್ವಯೋರೇಕತರೇ ಬುದ್ಧಿಃ ಕ್ರಿಯತಾಮದ್ಯ ಪುಷ್ಕರ ।
ಕೈತವೇನಾಕ್ಷವತ್ಯಾಂ ವಾ ಯುದ್ಧೇ ವಾ ನಮ್ಯತಾಂ ಧನುಃ ॥೧೦॥

ಪುಷ್ಕರನೇ ಈ ದಿನ ಈ ಎರಡರಲ್ಲಿ ಒಂದನ್ನು ನಿಶ್ಚಯಿಸು. ಪಣವನ್ನು ಒಡ್ಡಿ ದ್ಯೂತವನ್ನು ಆಡು. ಅಥವಾ ಯುದ್ಧದಲ್ಲಿ ಬಿಲ್ಲನ್ನು ಬಗ್ಗಿಸು.

ನೈಷಧೇನೈವಮುಕ್ತಸ್ತು ಪುಷ್ಕರಃ ಪ್ರಹಸನ್ನಿವ ।
ಧ್ರುವಮಾತ್ಮಜಯಂ ಮತ್ವಾ ಪ್ರತ್ಯಾಹ ಪೃಥಿವೀಪತಿಮ್ ॥೧೧॥

ದಿಷ್ಟ್ಯಾ ತ್ವಯಾऽऽರ್ಜಿತಂ ದ್ರವ್ಯಂ ಪ್ರತಿಪಾಣಾಯ ನೈಷಧ ।
ದಿಷ್ಟ್ಯಾ ಚ ದುಷ್ಕೃತಂ ಕರ್ಮ ದಮಯಂತ್ಯಾಃ ಕ್ಷಯಂ ಗತಮ್ ॥೧೨॥

ನಳನಿಂದ ಹೀಗೆ ಹೇಳಲ್ಪಟ್ಟ ಪುಷ್ಕರನು ನಗುತ್ತಾ ತನ್ನ ಜಯವು ನಿಶ್ಚಯವೆಂದು ತಿಳಿದು ರಾಜನನ್ನು ಕುರಿತು ಹೇಳಿದನು. ನೈಷಧನೇ ಅದೃಷ್ಟವಶಾತ್ ನೀನು ಪಣವನ್ನು ಇಡುವುದಕ್ಕಾಗಿ ಧನವನ್ನುಗಳಿಸಿದ್ದೀಯೆ. ಅದೃಷ್ಟವಶದಿಂದಲೇ ದಮಯಂತಿಯ ಪಾಪಕರ್ಮವು (ದುರವಸ್ಥೆಯು) ನಾಶವನ್ನು ಹೊಂದಿದೆ.

ದಿಷ್ಟ್ಯಾ ವೈ ಪ್ರೀಯಸೇ ರಾಜನ್ ಸದಾರೋऽರಿನಿಬರ್ಹಣ ।
ಪುನರ್ದ್ಯೂತೇ ಚ ತೇ ಬುದ್ಧಿರ್ದಿಷ್ಟ್ಯಾ ಪುರುಷಸತ್ತಮ ॥೧೩॥

ರಾಜನೇ ಅದೃಷ್ಟವಶದಿಂದಲೇ ನೀನು ಪತ್ನಿಯ ಜೊತೆಯಲ್ಲಿ ಸುಖವಾಗಿದ್ದೀಯೆ ಶತ್ರುಸಂಹಾರಕನಾದ ಪುರುಷಶ್ರೇಷ್ಠನೇ ಅದೃಷ್ಟವಶವಾಗಿಯೇ ನಿನಗೆ ಪುನಃ ದ್ಯೂತವನ್ನು ಆಡುವ ಬುದ್ಧಿಯುಂಟಾಗಿದೆ.

ಜಿತೇನಾನೇನ ವೈದರ್ಭೀ ಧನೇನ ಸಮಲಂಕೃತಾ ।
ಮಾಮುಪಸ್ಥಾಸ್ಯತಿ ವ್ಯಕ್ತಂ ದಿವಿ ಶಕ್ರಂ ಶಚೀ ಯಥಾ ॥೧೪॥

ನಿತ್ಯಶೋ ಹಿ ಸ್ಮರಾಮಿ ತ್ವಾಂ ಪ್ರತೀಕ್ಷಾಮಿ ಚ ನೈಷಧ ।
ದೇವನೇ ಚ ಮಮ ಪ್ರೀತಿರ್ನ ಭವತ್ಯಸುಹೃದ್ಗಣೈಃ ॥೧೫॥

ನಾನು ಈ ದ್ಯೂತವನ್ನು ಗೆದ್ದರೆ ನೀನು ಗಳಿಸಿದ ಧನದಿಂದ ಚೆನ್ನಾಗಿ ಅಲಂಕೃತಳಾದ ದಮಯಂತಿಯು ಸ್ವರ್ಗದಲ್ಲಿ ಶಚಿಯು ಇಂದ್ರನನ್ನು ಒಲೈಸಿದಂತೆ ಸ್ಪಷ್ಟವಾಗಿ ನನ್ನನ್ನು ಒಲೈಸುತ್ತಾಳೆ. ನೈಷಧನೇ ನಾನು ಯಾವಾಗಲೂ ನಿನ್ನನ್ನೇ ಸ್ಮರಿಸುತ್ತಾ ನಿರೀಕ್ಷಿಸುತ್ತಿದ್ದೇನೆ. ನನಗೆ ಅಕ್ಷದ್ಯೂತದಲ್ಲಿಯೇ ಪ್ರೀತಿ. ಶತ್ರುಗಳ ಜೊತೆಯಲ್ಲಿ ಯುದ್ಧಮಾಡುವುದರಲ್ಲಿ ಪ್ರೀತಿಯಿಲ್ಲ.

ಜಿತ್ವಾಽದ್ಯೈವ ವರಾರೋಹಾಂ ದಮಯಂತೀಮನಿಂದಿತಾಮ್ ।
ಕೃತಕೃತ್ಯೋ ಭವಿಷ್ಯಾಮಿ ಸಾ ಹಿ ಮೇ ನಿತ್ಯಶೋ ಹೃದಿ ॥೧೬॥

ಈ ದಿನವೇ ಅನಿಂದಿತಳಾದ ಸುಂದರಿಯಾದ ದಮಯಂತಿಯನ್ನು ಗೆದ್ದುನಾನು ಕೃತಕೃತ್ಯನಾಗುವೆನು. ಅವಳೇ ಯಾವಾಗಲೂ ನನ್ನ ಮನಸ್ಸಿನಲ್ಲಿ ಇದ್ದಾಳಷ್ಟೆ?

ಶ್ರುತ್ವಾ ತು ತಸ್ಯ ತಾಂ ವಾಚಂ ಬಹ್ವಬದ್ಧಪ್ರಲಾಪಿನಃ ।
ಇಯೇಷ ಸ ಶಿರಶ್ಚೇತ್ತುಂ ಖಡ್ಗೇನ ಕುಪಿತೋ ನಳಃ ॥೧೭॥

ಹೀಗೆ ಬಹಳ ಅಬದ್ಧವಾಗಿ ಬಡಬಡಿಸುತ್ತಿದ್ದ ಅವನ ಆ ಮಾತುಗಳನ್ನು ಕೇಳಿ ಕೋಪಗೊಂಡ ನಳನು ಅವನ ಶಿರಸ್ಸನ್ನು ಖಡ್ಗದಿಂದ ಕತ್ತರಿಸಲು ಬಯಸಿದನು.

ಸ್ಥಯಂಸ್ತು ಕ್ರೋಧತಾಮ್ರಾಕ್ಷಸ್ತಮುವಾಚ ನಳೋ ನೃಪಃ ।
ಪಣಾವಃ ಕಿಂ ವ್ಯಾಹರಸೇ ಜಿತೋ ನ ವ್ಯಾಹರಿಷ್ಯಸಿ ॥೧೮॥

ಕೋಪಗೊಂಡ ನಳಮಹಾರಾಜನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ಅವನನ್ನು ಕುರಿತು ನಗುತ್ತಲೇ ದ್ಯೂತವನ್ನು ಆಡೋಣ ಏಕೆ ಮಾತನಾಡುತ್ತಿದ್ದೀಯೆ? ನೀನು ಪರಾಜಿತನಾಗುವಿ. ಅನಂತರ ಮಾತನಾಡುವುದಿಲ್ಲ ಎಂದು ಹೇಳಿದನು.

ತತಃ ಪ್ರಾವರ್ತತ ದ್ಯೂತಂ ಪುಷ್ಕರಸ್ಯ ನಳಸ್ಯ ಚ ।
ಏಕಪಾಣೇನ ಭದ್ರಂ ತೇ ನಳೇನ ಸ ಪರಾಜಿತಃ ॥೧೯॥

ಆನಂತರ ಪುಷ್ಕರನಿಗೂ ಮತ್ತು ನಳನಿಗೂ ದ್ಯೂತವು ಜರುಗಿತು. ಧರ್ಮರಾಜನೇ ನಿನಗೆ ಮಂಗಳವಾಗಲಿ ಒಂದೇ ಆಟದಲ್ಲಿ ಪುಷ್ಕರನು ನಳನಿಗೆ ಎಲ್ಲವನ್ನೂ ಸೋತನು.

ಸರತ್ನಕೋಶನಿಚಯಂ ಸಹ ಪ್ರಾಣೇನ ನೈಷಧಃ ।
ಜಿತ್ವಾ ಚ ಪುಷ್ಕರಂ ರಾಜಾ ಪ್ರಹಸನ್ನಿದಮಬ್ರವೀತ್ ॥೨೦॥

ನಳನು ಪುಷ್ಕರನನ್ನು ಅವನ ರಾಜ್ಯ ರತ್ನಕೋಶಗಳು ಮತ್ತು ಪ್ರಾಣಗಳ ಜೊತೆಯಲ್ಲಿ ಗೆದ್ದು ನಗುತ್ತಾ ಹೀಗೆ ಮಾತನಾಡಿದನು.

ಜಿತಂ ಸರ್ವಮಿದಂ ರಾಜ್ಯಮವ್ಯಗ್ರಂ ಹತಕಂಟಕಮ್ ।
ವೈದರ್ಭೀ ನ ತ್ವಯಾ ಶಕ್ಯಾ ರಾಜಾಪಶದ ವೀಕ್ಷಿತುಮ್ ।
ತಸ್ಯಾಸ್ತ್ವಂ ಸಪರೀವಾರೋ ಮೂಢ ದಾಸತ್ವಮಾಗತಃ ॥೨೧॥

ಈ ನಿನ್ನ ರಾಜ್ಯವು ನಿರಾತಂಕವಾಗಿ ಶತ್ರುರಹಿತರಾಗಿರುವಂತೆ ನನ್ನಿಂದ ಗೆಲ್ಲಲ್ಪಟ್ಟಿದೆ. ರಾಜಾಧಮನೇ ನೀನು ದಮಯಂತಿಯನ್ನು ಕಣ್ಣಿನಿಂದಲೂ ನೋಡಲು ಶಕ್ತನಲ್ಲ. ಮೂಢನೇ ನೀನು ನಿನ್ನ ಪರಿವಾರದ ಜೊತೆಯಲ್ಲಿ ಅವಳಿಗೆ ದಾಸನಾಗಿದ್ದೀಯೆ.

ನ ತತ್ ತ್ವಯಾ ಕೃತಂ ಕರ್ಮ ಯೇನಾಹಂ ವಿಜಿತಸ್ತ್ವಯಾ ।
ಕಲಿನಾ ತತ್ ಕೃತಂ ಕರ್ಮ ತ್ವಂ ತು ಮೂಢ ನ ಬುಧ್ಯಸೇ ॥೨೨॥

ನೀನು ನನ್ನನ್ನು ದ್ಯೂತದಲ್ಲಿ ಜಯಿಸಿದುದು ನಿನ್ನ ಸಾಧನೆಯಲ್ಲ. ಕಲಿಯು ಆ ಕಾರ್ಯವನ್ನು ಮಾಡಿದನು. ಮೂಢನೇ, ನಿನಗೆ ಆದರ ಜ್ಞಾನವಿಲ್ಲ.

ನಾಹಂ ಪರಕೃತಂ ದೋಷಂ ತ್ವಯ್ಯಾಧಾಸ್ಯೇ ಕಥಂಚನ ।
ಯಥಾಸುಖಂ ವೈ ತ್ವಂ ಜೀವ ಪ್ರಾಣಾನವಸೃಜಾಮಿ ತೇ ॥೨೩॥

ಇನ್ನೊಬ್ಬರಿಂದ ಉಂಟಾದ ದೋಷವನ್ನು ನಾನು ಯಾವ ಕಾರಣದಿಂದಲೂ ನಿನ್ನ ಮೇಲೆ ಹೇರುವುದಿಲ್ಲ. ನಿನ್ನ ಪ್ರಾಣಗಳನ್ನು ಬಿಟ್ಟು ಕೊಟ್ಟಿದ್ದೇನೆ. ನೀನು ಸುಖವಾಗಿ ಜೀವನವನ್ನು ಮಾಡು.

ತಥೈವ ಚ ಮಮ ಪ್ರೀತಿಃ ತ್ವಯಿ ವೀರ ನ ಸಂಶಯಃ ।
ಸೌಭ್ರಾತ್ರಂ ಚೈವ ಮೇ ತ್ವತ್ತೋ ನ ಕದಾಚಿತ್ ಪ್ರಹಾಸ್ಯತಿ ॥೨೪॥

ಪುಷ್ಕರ ತ್ವಂ ಹಿ ಮೇ ಭ್ರಾತಾ ಸಂಜೀವ ಶರದಃ ಶತಂ ॥೨೫॥

ಎಲೈ ವೀರನೇ, ನಿನಗೆ ನಾಶವಿಲ್ಲದ ಕೀರ್ತಿಯು ಇರಲಿ. ನನಗೆ ನಿನ್ನಲ್ಲಿ ಮೊದಲಿದ್ದಂತೆ ಪ್ರೀತಿಯಿರುತ್ತದೆ. ಇದರಲ್ಲಿ ಸಂಶಯವಿಲ್ಲ. ನಿನ್ನ ಜೊತೆಯಲ್ಲಿರುವ ಒಳ್ಳೆಯ ಸೋದರಸಂಬಂಧವು ಎಂದೂ ನಾಶವನ್ನು ಹೊಂದುವುದಿಲ್ಲ. ಪುಷ್ಕರನೇ, ನೀನು ನನ್ನ ತಮ್ಮ. ನೂರುವರ್ಷಗಳಕಾಲ ಬಾಳು.

ಏವಂ ನಳಃ ಸಾಂತ್ವಯಿತ್ವಾ ಭ್ರಾತರಂ ಸತ್ಯವಿಕ್ರಮಃ ।
ಪುಷ್ಕರಂ ಕ್ಷಮಯಾಮಾಸ ಸಾಂತ್ವಯಿತ್ವಾ ಪುನಃ ಪುನಃ ॥೨೬॥

ಹೀಗೆ ಸತ್ಯವಿಕ್ರಮನಾದ ನಳನು ತನ್ನ ತಮ್ಮನನ್ನು ಪುನಃಪುನಃ ಸಮಾಧಾನಪಡಿಸಿ ಆವನನ್ನು ಕ್ಷಮಿಸಿದನು.

ಸಾಂತ್ವಿತೋ ನೈಷಧೇನೈವಂ ಪುಷ್ಕರಃ ಪ್ರತ್ಯುವಾಚ ಹ ।
ಪುಣ್ಯಶ್ಲೋಕಂ ತದಾ ರಾಜನ್ನಭಿವಾದ್ಯ ಕೃತಾಂಜಲಿಃ ॥೨೭॥

ಎಲೈ ರಾಜನೇ ಹೀಗೆ ನೈಷಧನಿಂದ ಕ್ಷಮಿಸಿ ಸಮಾಧಾನಗೊಳಿಸಲ್ಪಟ್ಟ ಪುಷ್ಕರನು ಆ ಪುಣ್ಯಶ್ಲೋಕನನ್ನು ನಮಸ್ಕರಿಸಿ ಕೈಗಳನ್ನು ಮುಗಿದು ಮಾತನಾಡಿದನು.

ಕೀರ್ತಿರಸ್ತು ತವಾಕ್ಷಯ್ಯಾ ಜೀವ ವರ್ಷಾಯುತಂ ಸುಖೀ ।
ಯೋ ಮೇ ವಿತರಸಿ ಪ್ರಾಣಾನ್ ಅಧಿಷ್ಠಾನಂ ಚ ಪಾರ್ಥಿವ ॥೨೮॥

ಎಲೈ ರಾಜನೇ ನನಗೆ ಪ್ರಾಣಗಳನ್ನು ಮತ್ತು ವಾಸಸ್ಥಾನವನ್ನು ದಾನಮಾಡಿದ ನೀನು ಹತ್ತು ಸಾವಿರವರ್ಷ ಸುಖವಾಗಿ ಬದುಕು.

ಸ ತಥಾ ಸಾಂತ್ವಿತೋ ರಾಜ್ಞಾ ಮಾಸಮುಷ್ಯ ತದಾ ನೃಪಃ ।
ಪ್ರಯಯೌ ಸ್ವಪುರೀಂ ಹೃಷ್ಟಃ ವಿನೀತೈಃ ಪರಿಚಾರಕೈಃ ।
ಭ್ರಾಜಮಾನ ಇವಾದಿತ್ಯೋ ವಪುಷಾ ಕುರುನಂದನ ॥೨೯॥

ಎಲೈ ಕುರುನಂದನನೇ ನಳನಿಂದ ಹೀಗೆ ಸಮಾಧಾನಮಾಡಲ್ಪಟ್ಟ ಪುಷ್ಕರನು ನಳನ ಜೊತೆಯಲ್ಲಿ ಒಂದು ತಿಂಗಳುವಾಸಮಾಡಿ ಸಂತೋಷದಿಂದ ತನ್ನ ಜನಗಳಿಂದ ಕೂಡಿಕೊಂಡು ದೊಡ್ಡ ಸೇನೆಯಿಂದಲೂ ವಿನಯಶಾಲಿಗಳಾದ ಪರಿಚಾರಕರಿಂದಲೂ ಕೂಡಿಕೊಂಡು ಸೂರ್ಯನಂತೆ ತನ್ನ ದೇಹಕಾಂತಿಯಿಂದ ಬೆಳಗುತ್ತಾ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

ಪ್ರಸ್ಥಾಪ್ಯ ಪುಷ್ಕರಂ ರಾಜನ್ ವಿತ್ತವಂತಮನಾಮಯಮ್ ।
ಪ್ರವಿವೇಶ ಪುರಂ ರಮ್ಯಮತ್ಯರ್ಥಮುಪಶೋಭಿತಮ್ ॥೩೦॥

ರಾಜನೇ ಪುಷ್ಕರನನ್ನು ಅವನ ಧನದ ಜೊತೆಯಲ್ಲಿ ಏನೂ ಅಪಾಯವಾಗದಂತೆ ಹಿಂದಕ್ಕೆ ಕಳುಹಿಸಿ ನಳನು ಬಹಳವಾಗಿ ಅಲಂಕರಿಸಿಲ್ಪಟ್ಟದ್ದ ತನ್ನ ಸುಂದರವಾದ ಪಟ್ಟಣವನ್ನು ಪ್ರವೇಶಿಸಿದನು.

ಪ್ರವಿಶ್ಯ ಸಾಂತ್ವಯಾಮಾಸ ಪೌರಾನ್ ಸ ನಿಷಧಾಧಿಪಃ ।
ಹಿತೇಷು ಚೈಷಾಂ ಸತತಂ ಪಿತೇವಾವಹಿತೋಽಭವತ್ ॥೩೧॥

ಆ ನಿಷಧಾಧಿಪನು ತನ್ನ ಪಟ್ಟಣವನ್ನು ಪ್ರವೇಶಿಸಿ ಪೌರರನ್ನು ಸಮಾಧಾನಗೊಳಿಸಿದನು. ಮತ್ತು ತಂದೆಯಂತೆ ಸತತವಾಗಿ ಅವರ ಹಿತದಲ್ಲಿ ಆಸಕ್ತನಾಗಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಎಪ್ಪತ್ನಾಲ್ಕನೆಯ ಅಧ್ಯಾಯ

(ನಳಚರಿತೆಸಮಾಪ್ತಿ. ಯುಧಿಷ್ಠಿರನನ್ನು ಸಮಾಧಾನಪಡಿಸಿ ಬೃಹದಶ್ವಗಮನ. ಯುಧಿಷ್ಠಿರನಿಗೆ ಅರ್ಜುನನನ್ನು ನೋಡಿವ ತವಕ.)

ಬೃಹದಶ್ವಃ

ಪ್ರಯಾತೇ ಪುಷ್ಕರೇ ಹೃಷ್ಟೇ ವಸನ್ ಹೃಷ್ಟಮಹೋತ್ಸವೇ ।
ಮಹತ್ಯಾ ಸೇನಯಾ ರಾಜಾ ಧನೇನ ಚ ಸುತೈಃ ಸಹ ॥೧॥

ಸುತಾಂ ಪ್ರಸ್ಥಾಪಯಾಮಾಸ ಪುಣ್ಯಶ್ಲೋಕಾಯ ಧೀಮತೇ ।

ಪುಷ್ಕರನು ಪ್ರಯಾಣಮಾಡಿದ ಮೇಲೆ ಪುಷ್ಟವಾದ ನಗರದಲ್ಲಿ ನಳನು ಮಹೋತ್ಸವಗಳ ಜೊತೆಯಲ್ಲಿವಾಸಮಾಡುತ್ತಿರಲು, ಮಹೋತ್ಸವಗಳ ಜೊತೆ ವಾಸ ಮಾಡುವವನು ಯಾರು? ಭೀಮರಾಜನು ಮೇಧಾವಿಯಾದ ಪುಣ್ಯಶ್ಲೋಕನಾದ ನಳನಿಗೆ ದೊಡ್ಡಸೈನ್ಯದ ಜೊತೆಯಲ್ಲಿತನ್ನ ಮಕ್ಕಳನ್ನು ಜೊತೆಮಾಡಿ ದಮಯಂತಿಯನ್ನು ಕಳುಹಿಸಿಕೊಟ್ಟನು.

ದಮಯಂತೀಮಪಿ ಪಿತಾ ಸತ್ಕೃತ್ಯ ಪರವೀರಹಾ ।
ಪ್ರಾಸ್ಥಾಪಯದಮೇಯಾತ್ಮಾ ಭೀಮೋ ಭೀಮಪರಾಕ್ರಮಃ ॥೨॥

ಶತ್ರುಸಂಹಾರಕನೂ ಭಯಂಕರ ಪರಾಕ್ರಮವುಳ್ಳವನೂ ಅಮೇಯಾತ್ಮನೂ ಆದ ತಂದೆಯಾದ ಭೀಮನು ಮಗಳಾದ ದಮಯಂತಿಯನ್ನು ಸತ್ಕರಿಸಿ ಕಳುಹಿಸಿಕೊಟ್ಟನು.

ಆಗತಾಯಾಂ ತು ವೈದರ್ಭ್ಯಾಂ ಸಪುತ್ರಾಯಾಂ ನಳೋ ನೃಪಃ ।
ವರ್ತಯಾಮಾಸ ಮುದಿತೋ ದೇವರಾಡಿವ ನಂದನೇ ॥೩॥

ದಮಯಂತಿಯು ಮಕ್ಕಳಜೊತೆಯಲ್ಲಿಹಿಂದಿರುಗಿದ ಮೇಲೆ ನಳಮಹಾರಾಜನು ನಂದನವನದಲ್ಲಿಇಂದ್ರನಂತೆ ಸಂತೋಷದಿಂದ ಇದ್ದನು.

ತಥಾ ಪ್ರಕಾಶತಾಂ ಯಾತೋ ಜಂಬೂದ್ವೀಪೇ ಚ ರಾಜಸು ।
ಪುನಃ ಸ್ವೈ ನ್ಯವಸದ್ರಾಜ್ಯೇ ಪ್ರತ್ಯಾಹೃತ್ಯ ಮಹಾಯಶಾಃ ॥೪॥

ಜಂಬೂದ್ವೀಪದ ರಾಜರುಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಮಹಾಕೀರ್ತಿಶಾಲಿಯಾದ ಅವನು ತನ್ನ ರಾಜ್ಯದಲ್ಲಿ ಪುನಃವಾಸಮಾಡಿದನು.

ಈಜೇ ಚ ವಿವಿಧೈರ್ಯಜ್ಞೈರ್ವಿಧಿವತ್ ಸ್ಫಾಪ್ತದಕ್ಷಿಣೈಃ ।
ತಥಾ ತ್ವಮಪಿ ರಾಜೇಂದ್ರ ಸಸುಹೃದ್‌ದ್ರಕ್ಷ್ಯಸೇಽಚಿರಾತ್ ॥೫॥

ಬಹಳ ದಕ್ಷಿಣೆಗಳನ್ನುಕೊಟ್ಟು ವಿಧಿಪೂರ್ವಕವಾಗಿ ಅನೇಕ ಯಜ್ಞಗಳನ್ನು ಆಚರಿಸಿದನು. ರಾಜೇಂದ್ರನಾದ ಯುಧಿಷ್ಠಿರನೇ ನೀನೂ ಸಹ ಅಲ್ಪಸಮಯದಲ್ಲಿಯೇ ನಿನ್ನ ಆಪ್ತರ ಜೊತೆಯಲ್ಲಿ ಅರ್ಜುನನನ್ನು ನೋಡುವಿ.

ದುಃಖಮೇತಾದೃಶಂ ಪ್ರಾಪ್ತೋ ನಳಃ ಪರಪುರಂಜಯಃ ।
ದೇವನೇನ ನರಶ್ರೇಷ್ಠ ಸಭಾರ್ಯೋ ಭರತರ್ಷಭ ॥೬॥

ಭರತರ್ಷಭನೇ ನರಶ್ರೇಷ್ಠನೂ ಪರಪುರಂಜಯನೂ ಆದ ನಳನು ದ್ಯೂತವನ್ನು ಆಡಿ ತನ್ನ ಪತ್ನಿಯ ಜೊತೆಯಲ್ಲಿ ಇಂತಹ ದುಃಖಕ್ಕೆ ಈಡಾದನು.

ಏಕಾಕಿನೈವ ಸುಮಹನ್ನಳೇನ ಪೃಥಿವೀಪತೇ ।
ದುಃಖಮಾಸಾದಿತಂ ಘೋರಂ ಪ್ರಾಪ್ತಶ್ಚಾಭ್ಯುದಯಃ ಪುನಃ ॥೭॥

ಪೃಥ್ವೀಪತಿಯೇ ನಳನು ಏಕಾಕಿಯಾಗಿಯೇ ಇಂತಹ ಘೋರವಾದ ಮತ್ತು ದೊಡ್ಡದಾದ ದುಃಖವನ್ನು ಹೊಂದಿ ಪುನಃ ಅಭ್ಯುದಯವನ್ನು ಪಡೆದನು.

ತ್ವಂ ಪುನರ್ಭ್ರಾತೃಸಹಿತಃ ಕೃಷ್ಣಯಾ ಚೈವ ಪಾಂಡವ ।
ರಮಸೇಽಸ್ಮಿನ್ ಮಹಾರಣ್ಯೇ ಧರ್ಮಮೇವಾನುಚಿಂತಯನ್ ॥೮॥

ಎಲೈ ಪಾಂಡವನೇ ನೀನಾದರೂ ಈ ದೊಡ್ಡ ಅರಣ್ಯದಲ್ಲಿ ಸಹೋದರರಿಂದ ಸಹಿತನಾಗಿ ದ್ರೌಪದಿಯಿಂದ ಸಹಿತನಾಗಿ ಧರ್ಮವನ್ನೇ ಆಚರಿಸುವುದನ್ನು ಮಾತ್ರವೇ ಚಿಂತಿಸುತ್ತಾ ಸುಖದಿಂದ ಇದ್ದೀಯೆ.

ಬ್ರಾಹ್ಮಣೈಶ್ಚ ಮಹಾಭಾಗೈರ್ವೇದವೇದಾಂಗಪಾರಗೈಃ ।
ನಿತ್ಯಮನ್ವಾಸ್ಯಸೇ ರಾಜನ್ ತತ್ರ ಕಾ ಪರಿದೇವನಾ ।
ಇತಿಹಾಸಮಿಮಂ ಚಾಪಿ ಕಲಿನಾಶನಮುಚ್ಯತೇ ॥೯॥

ಎಲೈ ರಾಜನೇ, ವೇದವೇದಾಂಗಪಾರಂಗತರಾದ ಮಹಾನುಭಾವರಾದ ಬ್ರಾಹ್ಮಣರು ನಿತ್ಯವೂ ನಿನ್ನನ್ನು ಸೇವಿಸುತ್ತಿದ್ದಾರೆ. ನೀನು ಸಂತಾಪಪಡುವುದಕ್ಕೆ ಏನು ಕಾರಣವಿದೆ? ಈ ನಳನ ಇತಿಹಾಸವನ್ನು ಕಲಿನಾಶನವೆಂದು ಹೇಳುತ್ತಾರೆ.

ಶಕ್ಯ ಮಾಶ್ವಸಿತುಂ ಶ್ರುತ್ವಾ ತ್ವದ್ವಿಧೇನ ವಿಶಾಂಪತೇ ।
ಅಸ್ಥಿರತ್ವಂ ಚ ಸಂಚಿಂತ್ಯ ಪುರುಷಾರ್ಥಸ್ಯ ನಿತ್ಯದಾ ॥೧೦॥

ತಸ್ಯಾಪಾಯೇ ವ್ಯಯೇ ಚೈವ ತದಾಶ್ವಾಸಿತುಮರ್ಹಸಿ ।

ಎಲೈ ರಾಜನೇ, ಈ ಕಥೆಯನ್ನು ಕೇಳಿ ನಿನ್ನಂತಹವನು ಸಮಾಧಾನವನ್ನು ತಂದುಕೊಳ್ಳಬೇಕು. ಸಂಪತ್ತು ಯಾವಾಗಲೂ ಅಸ್ಥಿರವೆಂದೂ ಅದು ನಾಶವಾದರೂ ಅಥವಾ ಹ್ರಾಸವಾದರೂ ಸಂತಾಪಕಾರಕವೆಂದೂ ತಿಳಿದು ಸಮಾಧಾನವನ್ನು ತಂದುಕೊಳ್ಳಬೇಕು.

ಯೇ ಚೈತತ್ ಕಥಯಿಷ್ಯಂತಿ ನಳಸ್ಯ ಚರಿತಂ ಮಹತ್ ।
ಶ್ರೋಷ್ಯಂತಿ ಚಾಪ್ಯಭೀಕ್ಷ್ಣಂ ಯೇ ನಾಲಕ್ಷ್ಮೀಸ್ತಾನ್ ಭಜಿಷ್ಯತಿ ।
ಆರ್ಥಾಶ್ಚಾಸ್ಯೋಪಪದ್ಯಂತೇ ಧನ್ಯತಾಂ ಚ ಗಮಿಷ್ಯತಿ ॥೧೧॥

ಯಾರು ಈ ನಳನ ದೊಡ್ಡ ಚರಿತ್ರೆಯನ್ನು ಹೇಳುವರೋ ಮತ್ತು ಯಾರು ಸತತವಾಗಿ ಕೇಳುವರೋ ಅವರಿಗೆ ಅಲಕ್ಷ್ಮಿಯು ಬಂದು ಸೇರುವುದಿಲ್ಲ. ಧನವು ಬಂದು ಅವರನ್ನು ಸೇರುತ್ತದೆ. ಅವರು ಧನ್ಯರಾಗುವರು.

ಕಾರ್ಕೋಟಕಸ್ಯ ನಾಗಸ್ಯ ದಮಯಂತ್ಯಾ ನಳಸ್ಯ ಚ ।
ಋತುಪರ್ಣಸ್ಯ ರಾಜರ್ಷೇಃ ಕೀರ್ತನಂ ಕಲಿನಾಶನಮ್ ॥೧೨॥

ಕಾರ್ಕೋಟಕನಾಗನ ದಮಯಂತಿಯ ನಳನ ಮತು ರಾಜರ್ಷಿಯಾದ ಋತುಪರ್ಣನ ಕೀರ್ತನೆಯು ಕಲಿನಾಶನವಾದುದು.

ಇತಿಹಾಸಮಿಮಂ ಶ್ರುತ್ವಾ ಪುರಾಣಂ ಶಶ್ವದುತ್ತಮಮ್ ।
ಪುತ್ರಾನ್ ಪೌತ್ರಾನ್ ಪಶೂಂಶ್ಚಾಪಿ ವೇತ್ಸ್ಯತೇ ನೃಷು ಚಾಗ್ರ್ಯತಾಮ್ ॥
ಅರೋಗಾಃ ಪ್ರೀತಿಮಂತಶ್ಚ ಭವಿಷ್ಯಂತಿ ನ ಸಂಶಯಃ ॥೧೪॥

ಈ ಶ್ರೇಷ್ಠವಾದ ಪ್ರಾಚೀನವಾದ ಇತಿಹಾಸವನ್ನು ಯಾವಾಗಲೂ ಕೇಳಿದರೆ ಪುತ್ರರನ್ನೂ ಪೌತ್ರರನ್ನೂ ಪಶುಗಳನ್ನೂ ಮನುಷ್ಯರಲ್ಲಿ ಶ್ರೇಷ್ಠತ್ವವನ್ನೂ ಪಡೆಯುವನು. ಕೇಳುವವರು ರೋಗರಹಿತರೂ ಸಂತೋಷಯುಕ್ತರೂ ಆಗುವರು. ಇದರಲ್ಲಿ ಸಂಶಯವಿಲ್ಲ.

ಭಯಂ ಪಶ್ಯಸಿ ಯಚ್ಚ ತ್ವಮಾಹ್ವಯಿಷ್ಯಂತಿ ಮಾಂ ಪುನಃ ।
ಅಕ್ಷಜ್ಞ ಇತಿ ತತ್ತೇಽಹಂ ನಾಶಯಿಷ್ಯಾಮಿ ಪಾರ್ಥಿವ ॥೧೫॥

ಎಲೈ ರಾಜನೇ, ನೀನು ಅಕ್ಷಜ್ಞನಾದ ಶಕುನಿಯು ಪುನಃ ನನ್ನನ್ನು ದ್ಯೂತಕ್ಕೆ ಕರೆಯುವನು ಎಂದು ಯಾವ ಭಯವನ್ನು ಪಡುತ್ತಿದ್ದೀಯೊ ಅದನ್ನು ನಾನು ನಾಶಮಾಡುವೆನು.

ವೇದಾಕ್ಷಹೃದಯಂಕೃತ್ಸ್ನಮಹಂ ಸತ್ಯಪರಾಕ್ರಮ ।
ಉಪಪದ್ಯಸ್ವ ಕೌಂತೇಯ ಪ್ರಸನ್ನೋಽಹಂ ವದಾನಿ ತೇ ॥೧೬॥

ಎಲೈ ಸತ್ಯಪರಾಕ್ರಮನೇ, ನಾನು ಸಮಗ್ರವಾದ ಅಕ್ಷಹೃದಯವನ್ನು ತಿಳಿದಿದ್ದೇನೆ ಕೌಂತೇಯನೇ ಸಿದ್ಧನಾಗು ನಾನು ಪ್ರಸನ್ನನಾಗಿ ನಿನಗೆ ಅದನ್ನು ಉಪದೇಶಿಸುತ್ತೇನೆ.

ವೈಶಂಪಾಯನಃ

ತತೋ ಹೃಷ್ಟಮನಾ ರಾಜಾ ಬೃಹದಶ್ವಮುವಾಚ ಹ ।
ಭಗವನ್ನಕ್ಷಹೃದಯಂ ಜ್ಞಾತುಮಿಚ್ಛಾಮಿ ತತ್ತ್ವತಃ ॥೧೭॥

ಆಗ ಮನಸ್ಸಂತೋಷವನ್ನು ಹೊಂದಿದ ಯುಧಿಷ್ಠಿರನು ಬೃಹದಶ್ವರನ್ನು ಕುರಿತು ಪೂಜ್ಯರೇ ಅಕ್ಷಹೃದಯವನ್ನು ನಾನು ಚೆನ್ನಾಗಿ ತಿಳಿಯಲು ಇಷ್ಟಪಡುತ್ತೇನೆ ಎಂದು ಹೇಳಿದನು.

ತದಾಽಕ್ಷಹೃದಯಂ ಪ್ರಾದಾತ್ ಪಾಂಡವಾಯ ಮಹಾತ್ಮನೇ ।
ಲಬ್ಧ್ವಾ ಚ ಪಾಂಡವೋ ರಾಜಾ ವಿಶೋಕಃ ಸಮಪದ್ಯತ ॥೧೮॥

ಆಗ ಮಹಾತ್ಮನಾದ ಪಾಂಡವನಿಗೆ ಬೃಹದಶ್ವನು ಅಕ್ಷಹೃದಯವನ್ನು ಉಪದೇಶಿಸಿದನು. ಆ ಉಪದೇಶವನ್ನು ಪಡೆದ ಪಾಂಡವನಾದ ಧರ್ಮರಾಜನು ಶೋಕರಹಿತನಾದನು.

ಕಥಾಮೇವಂ ತಥಾ ಕೃತ್ವಾ ನಳಸ್ಯ ಚರಿತಾಶ್ರಯಾಮ್ ।
ಆಮಂತ್ರ್ಯ ಪಾಂಡವಾನ್ ಸರ್ವಾನ್ ಬೃಹದಶ್ವೋ ಜಗಾಮ ಹ ॥

ನಳನಿಗೆ ಸಂಬಂಧಿಸಿದ ಈ ಚರಿತ್ರೆಯನ್ನು ಈ ರೀತಿಯಲ್ಲಿ ಹೇಳಿ ಬೃಹದಶ್ವರು ಎಲ್ಲಾ ಪಾಂಡವರ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟರು.

ಬೃಹದಶ್ವೇ ಗತೇ ಪಾರ್ಥಮಶ್ರೌಷೀತ್ ಸವ್ಯಸಾಚಿನಮ್ ।
ವರ್ತಮಾನಂ ತಪಸ್ಯುಗ್ರೇ ವಾಯುಭಕ್ಷಂ ಮನೀಷಿಣಮ್ ॥೨೦॥

ಬ್ರಾಹ್ಮಣೇಭ್ಯಸ್ತಪಸ್ವಿಭ್ಯಃ ಸಂಪತದ್ಭ್ಯಸ್ತತಸ್ತತಃ ।
ತೀರ್ಥಶೈಲವರೇಭ್ಯಶ್ಚ ಸಮೇತೇಭ್ಯೋ ದೃಢವ್ರತಃ ॥೨೧॥

ಬೃಹದಶ್ವರು ಹೊರಟು ಹೋದಮೇಲೆ ದೃಢವ್ರತನಾದ ಧರ್ಮರಾಜನು ಅಲ್ಲಲ್ಲಿ ಸಂಚರಿಸುವ ತೀರ್ಥ ಮತ್ತು ಪರ್ವತಗಳಲ್ಲಿ ಒಂದುಗೂಡುವ ತಪಸ್ವಿಗಳಾದ ಬ್ರಾಹ್ಮಣರಿಂದ ಮೇಧಾವಿಯಾದ ಅರ್ಜುನನು ಉಗ್ರವಾದ ತಪಸ್ಸಿನಲ್ಲಿ ನಿರತನಾಗಿದ್ದಾನೆ ಎಂದೂ ವಾಯುಭಕ್ಷನಾಗಿದ್ದಾನೆ ಎಂದೂ ಕೇಳಿ ತಿಳಿದನು.

ಇತಿ ಪಾರ್ಥೋ ಮಹಾಬಾಹುರುದಾರಂ ತಪ ಆಸ್ಥಿತಃ ।
ತಥಾ ನ ದೃಷ್ಟಪೂರ್ವೋನ್ಯಃ ಕಶ್ಚಿದುಗ್ರತಪಾ ಇತಿ ॥೨೨॥

ಮಹಾಬಾಹುವಾದ ಪಾರ್ಥನು ಹಿಂದೆ ಬೇರೆ ಯಾರೂ ಮಾಡದಿದ್ದಂತೆ ಉಗ್ರವಾದ ಮತ್ತು ಉತ್ಕೃಷ್ಟವಾದ ತಪಸ್ಸನ್ನು ಮಾಡುತ್ತಿದ್ದಾನೆ ಎಂದು ಕೇಳಿದನು.

ಯಥಾ ಧನಂಜಯಃ ಪಾರ್ಥಃ ತಪಸ್ವೀ ನಿಯತವ್ರತಃ ।
ಮುನಿವೇಷಧರಃ ಶ್ರೀಮಾನ್ ಧರ್ಮೋ ವಿಗ್ರಹವಾನಿವ ॥೨೩॥

ಹಾಗೆಯೇ ಧನಂಜಯನಾದ ಪಾರ್ಥನು ನಿಯತವ್ರತನಾಗಿ ತಪಸ್ವಿಯಾಗಿ ಕಾಂತಿಯುಕ್ತನಾಗಿ ಮುನಿವೇಷವನ್ನು ಧರಿಸಿ ಶರೀರವನ್ನು ಧರಿಸಿದ ಧರ್ಮದಂತೆಯೇ ಕಾಣುತ್ತಿದ್ದಾನೆ ಎಂದೂ ಕೇಳಿದನು.

ತಂ ಶ್ರುತ್ವಾ ಪಾಂಡವೋ ರಾಜನ್ ತಪ್ಯಮಾನಂ ಮಹಾವನೇ ।
ಅನ್ವಶೋಚತ ಕೌಂತೇಯಃ ಪ್ರಿಯಂ ವೈ ಭ್ರಾತರಂ ಜಯಮ್ ॥೨೪॥

ಎಲೈ ಜನಮೇಜಯನೇ ಮಹಾರಣ್ಯದಲ್ಲಿ ತಪಸ್ಸಿನಲ್ಲಿ ನಿರತನಾಗಿದ್ದ ಅರ್ಜುನನನ್ನು ಕೇಳಿ ಕುಂತೀಪುತ್ರನಾದ ಧರ್ಮರಾಜನು ತನ್ನ ಪ್ರಿಯ ಸಹೋದರನಾದ ಅರ್ಜುನನನ್ನು ಕುರಿತು ಚಿಂತಿಸಿ ಶೋಕಪಟ್ಟನು.

ದಹ್ಯಮಾನೇನ ತು ಹೃದಾ ಶರಣಾರ್ಥೀ ಮಹಾವನೇ ।
ಬ್ರಾಹ್ಮಣಾನ್ ವಿವಿಧಜ್ಞಾನಾನ್ ಪರ್ಯಪೃಚ್ಛದ್ಯುಧಿಷ್ಠಿರಃ ॥೨೫॥

ಮಹಾರಣ್ಯದಲ್ಲಿ ಶರಣಾರ್ಥಿಯಾದ ಧರ್ಮರಾಜನು ಭ್ರಾತೃಶೋಕದಿಂದ ದುಃಖಪಡುತ್ತಿದ್ದ ಮನಸ್ಸಿನಿಂದ ಕೂಡಿದವನಾಗಿ ಬಹುವಿಧಜ್ಞಾನವುಳ್ಳ ಬ್ರಾಹ್ಮಣರಲ್ಲಿ ಅರ್ಜುನನ ಕ್ಷೇಮವನ್ನು ವಿಚಾರಿಸಿದನು.

ಪ್ರತಿಗೃಹ್ಯಾಕ್ಷಹೃದಯಂ ಕುಂತೀಪುತ್ರೋ ಯುಧಿಷ್ಠಿರಃ ।
ಆಪೀದ್ಯೂಷ್ಮಣಾ ರಾಜಾ ಭೀಮಸೇನಾದಿಭಿರ್ಯುತಃ ॥೨೬॥

ಕುಂತೀಪುತ್ರನಾದ ಯುಧಿಷ್ಠಿರರಾಜನು ಅಕ್ಷಹೃದಯವನ್ನು ಸ್ವೀಕರಿಸಿ ಭೀಮಸೇನಾದಿಗಳ ಜೊತೆಯಲ್ಲಿ ಸಂತೋಷದಿಂದ ಇದ್ದನು.

ಸ್ವಭ್ರಾತೄನ್ ಸಹಿತಾನ್ ಪಶ್ಯನ್ ಕುಂತೀಪುತ್ರೋ ಯುಧಿಷ್ಠಿರಃ ।
ಅಪಶ್ಯನ್ನರ್ಜುನಂ ತತ್ರ ಬಭೂವಾಶ್ರುಪರಿಪ್ಲುತಃ ।
ಸಂತಪ್ಯಮಾನಃ ಕೌಂತೇಯೋ ಭೀಮಸೇನಮುವಾಚ ಹ ॥೨೭॥

ಕುಂತೀಪುತ್ರನಾದ ಯುಧಿಷ್ಠಿರನು ತನ್ನ ಉಳಿದ ತಮ್ಮಂದಿರನ್ನು ತನ್ನ ಜೊತೆಯಲ್ಲಿ ನೋಡಿ ಅರ್ಜುನನನ್ನು ಕಾಣದೆ ಅಶ್ರುಪೂರ್ಣನಯನನಾದನು. ಕೌಂತೇಯನಾದ ಧರ್ಮರಾಜನು ಸಂತಾಪವನ್ನು ಪಡುತ್ತಾ ಭೀಮಸೇನನನ್ನು ಕುರಿತು ಮಾತನಾಡಿದನು.

ಕದಾ ದ್ರಕ್ಷ್ಯಾಮಿ ವೈ ಭೀಮ ಕುಂತೀಪುತ್ರಂ ಧನಂಜಯಮ್ ।
ಮತೃತೇ ಹಿ ಕುರುಶ್ರೇಷ್ಠಃ ತಪ್ಯತೇ ದುಶ್ಚರಂ ತಪಃ ॥೨೮॥

ಎಲೈ ಭೀಮನೇ ಕುಂತೀಪುತ್ರನಾದ ಧನಂಜಯನನ್ನು ನಾನು ಯಾವಾಗ ನೋಡುವೆನು? ಕುರುಶ್ರೇಷ್ಠನಾದ ಅವನು ನನ್ನ ಸಲುವಾಗಿ ದುಶ್ಚರವಾದ ತಪಸ್ಸನ್ನು ಆಚರಿಸುತ್ತಿದ್ದಾನೆ.

ತಸ್ಯಾಕ್ಷಹೃದಯಜ್ಞಾನಮಾಖ್ಯಾಸ್ಯಾಮಿ ಕದಾ ನ್ವಹಮ್ ।
ಸ ಹಿ ಶ್ರುತ್ವಾಽಕ್ಷಹೃದಯಂ ಸಮುಪಾತ್ತಂ ಮಯಾ ಪ್ರಭುಃ ।
ಪ್ರಹೃಷ್ಟಃ ಪುರುಷವ್ಯಾಘ್ರೋ ಭವಿಷ್ಯತಿ ನ ಸಂಶಯಃ ॥೨೯॥

ನಾನು ಅಕ್ಷಹೃದಯವನ್ನು ಯಾವಾಗ ಅವನಿಗೆ ಹೇಳುವೆನು? ಪ್ರಭುವೂ ಪುರುಷವ್ಯಾಘ್ರನೂ ಆದ ಅವನು ಅಕ್ಷಹೃದಯವನ್ನು ನನ್ನಿಂದ ಕೇಳಿ ಚೆನ್ನಾಗಿಸ್ವೀಕರಿಸಿ ಸಂತೋಷಯುಕ್ತನಾಗುವನು ಎಂಬ ವಿಷಯದಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★